Registered No. 488-M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಶೇರಿ ರೂ. 2—1—0.

ಪುಸ್ತಕ VIII | ಮಂಗಳೂರು ತಾ. 8ನೇ ಆಗೋಸ್ತು ಶುಕ್ರವಾರ 1914. | ಸಂಚಿಕೆ 32

ಆಬಾಲವೃದ್ಧರು ಓದುವುದಕ್ಕೆ ತಕ್ಕವಾಗಿಯೂ ಬಹು ಮನೋಹರಗಳಾಗಿಯೂ ಇರುವ ಕನ್ನಡ ಗ್ರಂಥಗಳು.

(ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ। ರಾ। ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ. ಯವರಿಂದ ಕನ್ನಡಿಸಲ್ಪಟ್ಟವು)

೧. ಸತ್ಯರಾಜಾ ಪೂರ್ವದೇಶ ಯಾತ್ರೆಗಳು—ಭಾಗ ೧— ಸ್ತ್ರೀಮಲೆಯಾಳವೆಂಬ ಸಂಪೂರ್ಣ ಕಥೆ. ರಾವ್ ಬಹದ್ದೂರ್ ವಿರೇಶ ಲಿಂಗಂಪಂತರೆಂಬ ಆಂಧ್ರ ಲೇಖಕ ಶಿರೋಮಣಿಗಳಿಂದ ತೆಲುಗಿನಲ್ಲಿ ಬರೆಯಲ್ಪಟ್ಟ ಬಹು ರಸಭರಿತವಾದ ಕಲ್ಪನಾಕಥೆ ಶುದ್ಧವೂ ಲಲಿತವೂ ಆದ ಕನ್ನಡದಲ್ಲಿ ಪರಿವರ್ತಿತವಾಗಿದೆ. ಮೈಸೂರು ಗವರ್ನಮೆಂಟಿನವರಿಂದಲೂ ಕರ್ನಾಟ ಮಹಾಜನರುಗಳಿಂದಲೂ ವಿಶೇಷವಾದ ಪ್ರೋತ್ಸಾಹವನ್ನು ಹೊಂದಿದೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ. **ಬೆಲೆ ೮ ಆಣೆ.**

೨. ಕೃಷ್ಣಾಕುಮಾರಿ—ಈ ಅದ್ಭುತವಾದ ವಚನ ನಾಟಕವು ಮೂಲ ಬಂಗಾಳಾ ಭಾಷೆಯಲ್ಲಿ ಕವಿಶ್ರೇಷ್ಠ ಮಧುಸೂದನ ದತ್ತರಿಂದ ಬರೆಯಲ್ಪಟ್ಟು ನೂತನವಾಗಿ ಕನ್ನಡಿಸಲ್ಪಟ್ಟದೆ. ಆರ್ಯ ಕುಲಾಂಗನೆಯರಿಗೆ ಆದರ್ಶ ಸ್ವರೂಪಳಾದ ಈ ರಜಪೂತ ಕುಮಾರಿಯ ಜಾಜ್ವಲ್ಯವಾದ ಸ್ವದೇಶ ಭಕ್ತಿಯು ವಾಚಕರನ್ನು ಕ್ಷಣಮಾತ್ರದಲ್ಲಿ ತಲ್ಲೀನರನ್ನಾಗಿ ಮಾಡುತ್ತಿದೆ. ಇಂಥ ಉತ್ಕೃಷ್ಟವಾದ ನಾಟಕವು ಕನ್ನಡದಲ್ಲಿ ಬೇರೊಂದು ಇರುವುದು ಸಂದೇಹವು. ಉತ್ತಮವಾದ "ಗ್ಲೇಜ್" ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಅಚ್ಚಾಗಿದೆ. **ಬೆಲೆ ೧೦ ಆಣೆ.**

೩. ಸದಾಹಾರ ವಿವೇಚನ—ಚಿರಸ್ಮರಣೀಯರೂ ಪರಮ ಪೂಜ್ಯರೂ ಆದ ಬ್ರಹ್ಮೀಭೂತ ಶ್ರೀಮದ್ವಿವೇಕಾನಂದ ಸ್ವಾಮಿಯವರ "ಪೂರ್ವ ಮತ್ತು ಪಶ್ಚಿಮ"ವೆಂಬ ದಿವ್ಯವಾದ ಲೇಖನದಿಂದ ಆಹಾರ ವಿಷಯಕವಾದ ಭಾಗಗಳನ್ನು ಮಾತ್ರ ಸಂಗ್ರಹಿಸಿ ಕನ್ನಡಿಸಲಾದ ಈ ಚಿಕ್ಕ ಪುಸ್ತಕದೊಳಗೆ ಅಂತರ್ಗತವಾದ ದಿವ್ಯಾಭಿಪ್ರಾಯಗಳನ್ನು ಆರ್ಯಧರ್ಮಾಭಿಮಾನಿಗಳಾದ ಸಮಸ್ತರೂ ಅಗತ್ಯವಾಗಿ ತಿಳಿದುಕೊಳ್ಳಬೇಕೆಂದು ಸೂಚಿಸುವೆವು. **ಬೆಲೆ ೨ ಆಣೆ.**

ನಿತ್ಯ ಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯೋಗವಾದ ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನಂ 0—3—0, ದೇವಪೂಜಾ ಪದ್ಧತಿ 0—3—0, ಋಗ್ವೇದಿ ಬ್ರಹ್ಮಯಜ್ಞವೈಶ್ವದೇವ 0—3—0, ವಾಯುಸ್ತುತಿ 0—2—0, ದ್ವಾದಶಸ್ತೋತ್ರ 0—2—0, ವಿಷ್ಣುಸಹಸ್ರನಾಮಸ್ತೋತ್ರ 0—2—0, ಪ್ರಾತರಾಹ್ನಿಕ ಪದ್ಧತಿ 0—3—0, ಶ್ರೀಸೂಕ್ತ ಪುರುಷಸೂಕ್ತ 0—1—0, ಗೋಪಿಕಾಗೀತೆ 0—1—0, ಪುರಂದರ ದಾಸರ ಕೀರ್ತನೆಗಳು 0—6—0, ಉದಯ ರಾಗ 0—4—0, ಲಕ್ಷ್ಮೀ ಶೋಭಾನೆ ಹಾಡು 0—2—0, ಹರಿಭಕ್ತಿಸಾರ 0—1—0, ಸ್ವಪ್ನ ಪದ ಮಧ್ವನಾಮ 0—1—6, ತುಲಸೀ ಸಂಕೀರ್ತನೆಗಳು 0—2—0, ಕುಮುದಾ 0—8—0, ಈಗ 0—6—0, ಮಹಾರಾಣಿ ಗೃಹಶೀಲೆ 0—3—0, ಪೇಶ್ವೆನಾರಾಯಣರಾವ್ 0—3—0, ಬಾಲಿಕಾನೀತಿಮಾಲಿಕೆ 0—2—0, ರಾಜಭಕ್ತಿಸ್ಸಾರ 0—2—0. ಹನುಮದ್ರಾಮಾಯಣ ರೂ. 2—1—0, ಚಂದ್ರಾವಲೀ ವಿಲಾಸ 8 ಆಣೆ, ಆಚಾರ ದರ್ಪಣ 4 ಆಣೆ. ಚಂದ್ರಹಾಸಾಭ್ಯುದಯ 4 ಆಣೆ.

ಈಗಲೇ ಬಂದಿವೆ!

ಗೃಹಕೃತ್ಯದ ಉಪಯೋಗಕ್ಕೂ ವೈದ್ಯರಿಗೂ ಅಗತ್ಯವಾಗಿರುವಂಥಾ ಮತ್ತು ಜ್ವರವನ್ನು ನಿಧಾನಿಸಿಕೊಳ್ಳಲು ಅತ್ಯುಪಯುಕ್ತಗಳಾದಂಥಾ

ಥರ್ಮೊಮಿಟರ್‌ಗಳು.

ಅರ್ಧ ಮಿನಿಟಿನಲ್ಲಿ ಜ್ವರ ಎಷ್ಟುಂಟೆಂದು ತಿಳಿಸುವವುಗಳಿಗೆ ಒಂದಕ್ಕೆ ಕ್ರಯ ರೂಪಾಯಿ 2-12-0. ಯೋಗ್ಯವಾದವುಗಳೆಂತ ಪರೀಕ್ಷಿಸಲ್ಪಟ್ಟು ಸರ್ಟಿಫಿಕೇಟು ಉಳ್ಳವುಗಳಿಗೆ ರೂ. 3, ಗಡಿಯಾರಿನ ಸರಪಣಿಯಂತೆ ಸರಪಣಿ ಇದ್ದು ಅಂಗಿ ಕಿಸೆಯಲ್ಲಿ ಭದ್ರವಾಗಿಡಲಿಕ್ಕೆ ಆಗುವಂಥವುಗಳಿಗೆ ರೂ. 3—4—0.

ಸೆಂಟರೊಡ್ಸ್‌ಗಳು: ಕ್ರಯ 3 ಆಣೆ.

ಪರಿಮಳ ದ್ರವಗಳಂತೆ ದ್ರವಿಸಿ ಹೋಗುವಂಥವುಗಳಲ್ಲ ಮತ್ತು ಸೆಂಟೆಡ್ ಕಾರ್ಡುಗಳಂತೆ ಬೇಗನೆ ಚಿಂದಿಯಾಗಿ ಹೋಗುವಂಥವುಗಳಲ್ಲ. ಪರಿಮಳ ಸಾರವನ್ನು ಘನಪದಾರ್ಥರೂಪದಲ್ಲಿ ಸಂಗ್ರಹಿಸಿರುವ ಕಡ್ಡಿಗಳು.

ಡೊಪಾನ್!

ಮಳೆಗಾಲದಲ್ಲಿ ಸ್ಯಾಕಲುಗಳಿಗೆ ನೀರು ತಾಗಿ ಮಣ್ಣು ಹಿಡಿಯುವುದರಿಂದ ಸ್ಯಾಕಲುಗಳನ್ನು ಉಪಯೋಗಿಸುವುದು ಸಾಧ್ಯವಲ್ಲ. ಆದರೆ ಸ್ಯಾಕಲುಗಳಿಗೆ 'ಡೊಪಾನ'ನ್ನು ಹಚ್ಚಿಬಿಟ್ಟರೆ ಇವುಗಳನ್ನು ನೀರಿನಲ್ಲಿ ಅದ್ದಿದರೂ ಮಣ್ಣು ಹಿಡಿಯದು. ಇದರ ಬಾಟ್ಲಿ ಒಂದಕ್ಕೆ ರೂ. 1—12—0.

ಶೆಖೆ ಕಾಲದ ರಜೆಯು ತೀರಿ ಶಾಲೆಗಳು ತೆರಿಯೋಣಾಗಿವೆ.

ವಿದ್ಯಾರ್ಥಿಗಳೆಲ್ಲವರಿಗೆ ಅನುಕೂಲವಾದ ದರದ ಫೌಂಟನ್ ಪೇನುಗಳು ಈಗಲೇ ಬಂದಿವೆ. ಕ್ರಯ—1ಕ್ಕೆ ರೂ. 1—14—0ರಿಂದ ರೂ. 7—[illegible]—0ರ ವರೆಗಿರುವುದು. ನೆಪ್ಚುನ್, ಬ್ಲೆಕ್‌ಬರ್ಡ್, ಅಲೆಕ್ಸಾಂದ್ರಾ, ವೊಟರ್‌ಮೇನ್, ಸ್ವಾನ್, ಸೀತಾ, ಶಾಂತಾ, ಆನಂದ ಈ ಎಲ್ಲಾ ಜಾತಿ ಪೇನುಗಳಿರುವವು.

ವಿಳಾಸ:—

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ರಥಬೀದಿ ಮಂಗಳೂರು.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಒಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	\ ಅರಗಜ	ತೊಲೆ 1ಕ್ಕೆ		2-0-0
ಅಂಬರ್ ಬತ್ತಿ	,, ,,	6-0-0	B ಅರಗಜ	,,	,,	1-0 0
ಕಸ್ತೂರಿ ಬತ್ತಿ	,, ,,	3 0 0	ಕಸ್ತೂರಿ ಬಿಲ್ಲೆ	,	,,	2 0 0
ಜವಾಜೆ ಬತ್ತಿ	,, ,,	2-0-0	ಜವಾಜೆ ಬಿಲ್ಲೆ	,,	,,	1 0 0
ಘಣಗಿನ ಬತ್ತಿ	,, ,	1-8 0	ಕೇಸರಿ ಬಿಲ್ಲೆ	,	,,	0 8 0
ಪನ್ನೀರ್ ಬತ್ತಿ	,, ,,	0 12 0	ತಾಂಬೂಲ ರತ್ನ ಸೀಸೆ 1ಕ್ಕೆ			0 4 0
ಮಸಾಲಾ ಬತ್ತಿ	,, ,,	0 6-0	ದಶಾಂಗ ಹುಡಿ 1ಕ್ಕೆ			0 4 0

ಮೇನೇಜರ್, «ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನಾಯಕ್, ಬುಕ್‌ಸೆಲ್ಲರ್ ಪುತ್ತೂರು. ದಕ್ಷಿಣ ಕನ್ನಡ

THE BOMBAY LIFE ASSURANCE CO. LTD.

(Established 1908)

HEAD OFFICE BOMBAY

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA

Extract from the Actuary's Report —

"There can be no doubt that the Policy Contracts are well secured"

Chairman —The Hon'able Mr Lalubhai Samaldas, Justice of the Peace, Director of the Bank of India Ltd, The Tata Hydro Electric Co Ltd, The Tata Mills Co Ltd, Managing Agent of Messrs Marsland Price & Co Ltd, and fellow of the Bombay University

Actuary —George King Esq F I A, F I A, London)

Medical Referee Dr R Row, M D D Sc London)

Managing Director —Primrose R Joshi, Justice of the Peace, The Honorary Presidency Magistrate & etc

Wanted Agents on very liberal commission

Apply for full particulars to—**Kochikar Bros**, Udipi, Chief Agents for South Canara Malabar, Travancore and Cochin

ಮುಂಬಯಿ ಲೈಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು)

ಪ್ರಧಾನ ಆಫೀಸು ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಪ್ರಾಮಿಸರಿ ಪತ್ರಗಳ ಠೇವಣಾತಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡಲ್ಪಟ್ಟಿರುವುದು

"ವಿಮೆ ದಾರರ ಬಾಧ್ಯತೆಗಳ ಒಗ್ಗೆ ಪೂರ್ಣ ಪತ್ರ ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು

ಅಧ್ಯಕ್ಷರು:— ಹುಮಾನಪಟ್ಟ ಲಲ್ಲುಬಾಯಿ ಸಾಮಲದಾಸ್, ಜಸ್ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೊಲಿಕ್ ಪೋರ್ಸ್ ಲೆಂಡ್ ಪ್ರ್ಯಾಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಪೆಲ್ಲೊಗಳವರು

ಎಕ್ಚುಯುಯರಿ:—ಮೆ। ಜೋರ್ಜ಼ಕಿಂಗ್ ಎಫ್. ಎನ್ ಎ ಎಫ್ ಐ ಎ.(ಲಂಡನ್)

ಮೆಡಿಕಲ್‌ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ ಡಿ ಎಸ್. ಸಿ. (ಲಂಡನ್).

ಮೆನೇಜಿಂಗ್ ಡ್ಯಾರೆಕ್ಟರ್:—ರಾ। ಪ್ರೆಮ್‌ರೋಜ್ ಆರ್. ಜೋಶಿ ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು.

ಏಜಂಟರು ಬೇಕಾಗಿರುವರು, ಧಾರಾಳವಾದ ಕಮಿಶನ್ ಕೊಡೋಣಾಗುವದು, ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚಿಕಾರ್ ಬ್ರದರ್ಸ್,
ಪ್ರಮುಖ್ಯ ಏಜಂಟರು, ಉಡುಪಿ.

ಯುವನ್ ವಿ. ಶಾಸ್ತ್ರಿಗಳ. ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವೋ ರಕ್ತಮಿತಿ ಸ್ಥಿತಿಃ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಶ್ವಾಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಆದಿ ಅಂಗ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಆವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಜತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನೂ ಗೃಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮ ರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ತಕೊಳ್ಳುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ 1—8—0 ವಿ ಪಿ ಚಾರ್ಜು ಪ್ರತ್ಯೇಕ

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು

ವಿಳಾಸ — ಯುವನ್ ವಿ ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಮೈಸೂರು ಊದಬತ್ತಿಗಳು.

ಇಂದಿಯಾ ದೇಶದಲ್ಲಿ ನಡದಿರುವ ಯಗ್ಝಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಸಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯಾವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0-0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0 **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0-4-0, ಇದಲ್ಲದೆ ಇನ್ನು **ಅನೇಕ ತರಹ ಸೆಂಟು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ ಮತ್ತು ವರ್ಷಕ್ಕೆ ಎರಡು ವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,

ಸುಗಂಧಕಾರಿ, ಮೈಸೂರು.

ಮುಳಿಯಿಲ್‌ರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಪ್ಪಿ 1ಕ್ಕೆ ಕ್ರಯ 10 ಆಣೆ. ಇದು ಎಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ.

.... ಮಸ್ತಕಾಮೃತ ತೈಲವನ್ನು ಕಳೆದ ಐದು ವರುಷಗಳಿಂದ ಉಪಯೋಗಿಸಿಕೊಳ್ಳುತ್ತಿರುವದರಿಂದ ನನ್ನ ಮಿದುಳು ಯೌವ್ವನ ಪ್ರಾಯದಲ್ಲಿರುವದು. ಈ ದಿವ್ಯ ತೈಲ ಕ್ಕಾಗಿ ನಾನು ... ; ನನ್ನ ನೇತ್ರೇಂದ್ರಿಯಗಳು ವಿಶ್ವಾಸವು.

ರೆವೆರೆಂಡ್ ಇ ಸೋನ್ಸ್,

ತಾ. 15—4—13. ಮುಲ್ಕಿ.

ಮುಳಿಯಿಲ್ಸ್ ಹೇರ್ ಓಯ್ಲ್—ಕ್ರಯ 12 ಆಣೆ. ಕೂದಲಿಗೆ ಅಮೃತದಂತಿರುವ ನಿಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನೊಂದು ಕುಪ್ಪಿ ವಿ. ಪಿ. ಮೂಲಕ ಕಳಾಸಿರಿ.

ಮಿಸಿಸ್. ವೈ. ಕುರಿಯಾನ್,

ತಾ. 23—5—13. ಗ್ರೀನ್ ವಿಲ್ಲಾ, ಕಲ್ಲಿಕೋಟೆ.

.... ಮುಳಿಯಿಲ್ಸ್ ಹೇರ್ ಓಯ್ಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು. ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ. ಇನ್ನೊಂದು ಡಜನ್ ಕುಪ್ಪಿಗಳನ್ನು ಆದಷ್ಟು ತ್ವರ್ಯದಲ್ಲಿ ಕಳಾಸಿರಿ.

ಮಿಸ್. ಎಸ್. ಸೋನ್ಸ್,

21ನೇ ಒಕ್ಟೋಬರ 1913. ಸ್ಕೂಲು ಮಿಸ್ಟ್ರೆಸ್, ಮಂಗಳೂರು

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ. ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ.

ಚತುರ್ಥಿ ಮಾತ್ರೆಯನ್ನು ತಕ್ಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ. ಇದು ಒಳ್ಳೇ ಗುಣಕರವೆಂಬದಾಗಿ ಹೇಳುವರೆ ಅನುಮಾನವಿಲ್ಲ.

ಎ. ಪೊಕ್ರು ಹೆಗ್ಗಡೆ,

ತಾ. 13—6—13. ಕುಕ್ಕುಛೆ, ಕಾರ್ಕಳ

ವಯೊಲೆಟ್ ಹೇರ್ ಓಯ್ಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ತಲೆವೇದನೆಯು ಗುಣಪಡುವದು. ಕಾಯಂ ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ. ಅತಿ ಘೋರವಾದ ತಲೆನೋವಿನಿಂದ ಶ್ರಮೆಪಡುತ್ತಿದ್ದ ನನ್ನ ಮೊಮ್ಮಗಳಿಗೆ ತಮ್ಮಿಂದ ತಕ್ಕೊಂಡ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಿಲ್ಲದೆ ಅವಳು ಇರಲಾರಳು. ಹೆಚ್ಚಿನ ರೋಗಿಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲೆಂಬದು ನನ್ನ ಪ್ರಾರ್ಥನೆಯಾಗಿದೆ.

M. JACOBI,

4—7—13 *Hd. Clerk*, CALICUT.

ವಿಳಾಸ:— ಮುಳಿಯಿಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ತಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ದ್ರಿಟೊಬಿಲ್ಡಿಂಗ್

2. ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರು.

MUSICAL MART
Kavi & Sons,

MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೋನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. ಹೇಂಡ್ ಹಾರಮೊನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫೋಲ್ಡಿಂಗ್ ರೂ. 70, 75, 105.

ಕವಿ ಎಂಡ್ ಸನ್ಸ್,

ಮ್ಯೂಜಿಕಲ್ ಮಾರ್ಟ್, ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವದು ಮತ್ತಾವದೂ ಅಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರಿಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ, ಮಧ್ಯಮಗ್ರಹಸಾಧನೆ, ಗ್ರಹಸ್ಪಷ್ಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ, ಸೂರ್ಯ ಚಂದ್ರ ಗ್ರಹಣನಿರ್ಣಯ, ಆಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರ, ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೨೬ ವಿಷಯಗಳ ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು. ಇದರ ಕ್ರಯ ೧ಕ್ಕೆ ೧—೮—೦. ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾ ಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳುವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೭೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು. ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು, ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,

ಕರ್ಣಾಟಕ ಬುಕ್ ಡಿಪೊ ಏಜಂಟ್, ಬಳ್ಳಾರಿ.

ವಿವಾಹ ಮಂಟಪ.

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡದಿದೆ. ಕನ್ನಾನೂರ, ಮೈಸೂರು, ನಾಗಪುರ, ವಿಶಾಕಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ !

ಸ್ಟೀವನ್ಸ್ ಎಂಡ್ ಸನ್ಸ್

ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ,

ಹಂಪನಕಟ್ಟಾ, ಮಂಗಳೂರು.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ತೆಗೆಯಲ್ಪಟ್ಟದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ರಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಕ್ತ ಕೊಡಲೀವರ್ ಎಣ್ಣೆಯೂ ಇದರಿಂದ ತೆಗೆಯಲ್ಪಟ್ಟಿದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಿರುವುದರಿಂದ ಅವನ್ನು ಸೇವಿಸುವವರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಬಾಧಿಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಬಿರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುಲಭವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ಮಾರಲ್ಪಡುವದು ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟಲಿಗೆ 1—12—0.

ದಿ. ಊಲನ್ ಮಾರ್ಟ್ ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕಟಿಂಬ ಸಂಜೀವನಿ—ಎಲ್ಲಾ ರೋಗಗಳನ್ನು ತ್ವರಿತವಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨ ರಕ್ತವರ್ಧಕ ಅಮೃತಸಂಜೀವನಿ—ಈ ಟೊನಿಕ್ ದ್ರಾವಕವು ನಿತ್ರಾಣಿಗಳಿಗೆ ಚೈತನ್ಯ ಉಂಟುಮಾಡಿ ಆಯುಷ್ಯವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರನ್ನಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳೆಸುತ್ತದೆ. ಬಾಟ್ಲಿ 1ಕ್ಕೆ 0—12—0

೪ ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಔಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸ್ಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಕಲ್ಪ—ಇದು ಸರ್ಪ ಹುಚ್ಚುನಾಯಿ, ಚೇಳು ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2—0—0

೭. ಆನಂದವನವಿಲಾಸ—ಇದು ಡ್ಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ವೈದ್ಯಕೀಯ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ ಕ್ರಯವಿಲ್ಲದ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ ... ಬೇಕು ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

S. U. N. & CO.,
BENARES CITY, U. P.

ದೊಡ್ಡ ಕಂಪೆನಿ! ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಖಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮವಾಗಿ ಕಳುಹಿಸಲಾದೀತು.

ಥಮ್ಮ ವಿಳಾಸ:— ಯಸ್. ಯು. ಯನ್. ಮತ್ತು ಕಂಪೆನಿ, ಕಾಶಿ

ಆರೋಗ್ಯವೇ ಭಾಗ್ಯ!

ಹವೆಯ ಬದಲಾವಣೆಯಿಂದ ಉಂಟಾಗುವ ಮ ಇತರ ತಲೆಶೂಲೆ, ಕಣ್ಣುಬೇನೆ, ತಲೆಭಾರ, ನೆಗಡಿ, ಕಫ, ಕಾಸ, ಜ್ವರ, ಛಳಿಜ್ವರ, ಚಳಿವಾತ, ವಾಂತಿಭೇದಿ, ಉಷ್ಣಭೇದಿ, ಮೇಹ ಇತ್ಯಾದಿ ನೂರಾರು ಬಾಧ್ಯಗಳೂ ಮನೆಮನೆಯಲ್ಲೂ ಪ್ರತ್ಯಕ್ಷವಾಗಿ ತೋರುತ್ತಿರುವ ಈ ಕಾಲದಲ್ಲಿ

ದಿವ್ಯ ಸಂಜೀವಿನೀ
ಯುಕೆಲಿಪ್ಟಸ್ ತೈಲ

ಎಂಬ ಅತ್ಯಪೂರ್ವಫಲಕಾರಿಯಾದ ಈ ಎಣ್ಣೆಯ ಸೀಸೆಯೊಂದನ್ನು ಗೃಹಸ್ಥರು ಸಂಗ್ರಹಿಸಿಕೊಳ್ಳಿ! ಈ ಎಣ್ಣೆ ಇಷ್ಟಲ್ಲಿ ಆದ ರೋಗದ ಸುಳಿವೂ ತೋರದು, ಎಂತಹ ರೋಗವನ್ನೂ ಇದು ತಡೆಗಟ್ಟಿ, ನಿರ್ಮೂಲಿಸಿ ಬಿಡುವುದು" ಉಪಯೋಗಿಸಿದವರ ಅನುಭವಕ್ಕಿಂತಲೂ ಹೆಚ್ಚಿನ ವಿಸ್ತಾರವಾದ ವಿಜ್ಞಾಪನೆಯು ನಮ್ಮೊಡನೆ ಇಲ್ಲ.

ಪ್ರಾಣದಾನ ಮಾಡಿಯದೆ.

ಕಂಡೂರಿನ ಮೆ| ಉಮ್ಮರ್ ಸಾಹೇಬರು ಈ ರೀತಿ ಬರೆಯುವರು—"ಪ್ರಿಯರೇ ತಮ್ಮಲ್ಲಿಂದ ನಾನು ಸ್ವಲ್ಪ ದಿವಸದ ಕೆಳಗೆ ಒಂದು ಡಜನ್ ನೀಲಗಿರಿ ಯುಕಲಿಪ್ಟಸ್ ತೈಲ ತರಿಸಿಕೊಂಡಿದ್ದೆನು. ಅದನ್ನು ಕೆಲವರಿಗೆ ಕೊಟ್ಟದ್ದರಿಂದ ಪ್ರಾಣದಾನ ಕೊಟ್ಟ ಹಾಗಿದೆ. ಇದನ್ನು ಕೇಳಿ ಎಲ್ಲರೂ ಬಾಟ್ಲಿಗಳನ್ನು ಕೊಂಡುಹೋದುದಲ್ಲದೆ ಈಗ ಅನೇಕರು ಪ್ರತಿ ದಿವಸ ಬರುತ್ತಾ ಇದ್ದಾರೆ. ನನಗೆ ಸಹಾ ಒಂದು ಬಾಟ್ಲಿ ಉಳಿಯಲಿಲ್ಲ. ಆದ್ದರಿಂದ ಈ ಕಾಗದ ಕಂಡ ಕೂಡಲೇ ಒಂದು ಡಜನ್ ಬಾಟ್ಲಿಗಳನ್ನು ವಿ. ಪಿ ಮೂಲಕ ಕಳುಹಿಸಿರಿ." ಔನ್ಸ್ ಸೀಸೆ 1ಕ್ಕೆ 0—5—0. ವಿ. ಪಿ. ಬೇರೆ ಡಜನ್ ಬಾಟ್ಲಿಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ. 3 ವಿ ಪಿ ಬೇರೆ.

1914ನೇ ಇಸವಿ ಕೆಲೆಂಡರು ಸಹಿತವಾದ ಪರಿಮಳದ ಕಾರ್ಡುಗಳು. ಡಜನ್ ಕಾರ್ಡುಗಳಿಗೆ 0—12—0. ಗ್ರೋಸ್ ಕಾರ್ಡುಗಳಿಗೆ ರೂ. 6. ವಿ. ಪಿ ಬೇರೆ

ಸ್ನಿಗ್ಧಶೀತಲ ಮಸ್ತಿಕ ತಾಪಹಾರಿಣಿ ತೈಲ:—ಮೆದುಳು ರೋಗಗಳಿಗೆ ಅತ್ಯುಪಯೋಗವಾದ ತೈಲ. ಸೀಸೆ 1ಕ್ಕೆ 0—12—0. ಡಜನ್ ಸೀಸೆಗಳಿಗೆ ರೂ 9 ವಿ ಪಿ ಬೇರೆ

ಫೊಟೊ ಎನ್‌ಲಾರ್ಜ್‌ಮೆಂಟುಗಳು, ರಬ್ಬರ್ ಮೊಹರುಗಳು ಅಗ್ಗ ದರದಲ್ಲಿ ತಯಾರಿಸಿ ಕೊಡೋಣಾದೀತು.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಕಂಕನಾಡಿ ಪೋಸ್ಟು, ದ. ಕ.

ವಾಚಕರೇ!

ಕಾಲಕ್ಕೆ ತಕ್ಕ ಜೀವನೋಪಾಯ ಇದಲ್ಲವೆ?

ಈ ನಮ್ಮ ಮೈಸೂರು ದೇಶದಲ್ಲಿ ಆಂಗ್ಲೇಯ ಪ್ರಭುಗಳಿಂದಲೂ ನಮ್ಮನ್ನಾಳುವ ಶ್ರೀಮನ್ಮಹಾರಾಜ ಸರಕಾರದವರಿಂದಲೂ ಸಹ ಪ್ರೋತ್ಸಾಹಿಸಿ ದ್ರವ್ಯಸಹಾಯಮಾಡುತ್ತಿರುವ ವಿದ್ಯಾವ್ಯಾಸಂಗಕ್ಕೆ ಅನುಕೂಲವಾಗಿ ಈಗಿನ ಕಾಲದಲ್ಲಿ ಗೌರವವು ಮತ್ತು ಪ್ರಸಿದ್ಧಿಯುಂ ಪಡದಿರುವ ಕುಶಲ ವಿದ್ಯಾವಂತರಿಂದ ನವೀನವಾಗಿ ರಚಿಸಲ್ಪಟ್ಟು ಕನ್ನಡ ಮತ್ತು ಇಂಗ್ಲಿಷ್ ಸ್ಕೂಲುಗಳ ಎಲ್ಲಾ ತರಗತಿಗಳ ಬಾಲಕರು ಮತ್ತು ಬಾಲಕಿಯರಿಗೆ ವಾರಕ್ಕೆ ಸಿದ್ಧವಾಗಿರುವ ಕನ್ನಡ ಇಂಗ್ಲಿಷ್ ಪುಸ್ತಕಗಳು ಮತ್ತು ಸಂಸ್ಕೃತ ತೆಲಗು ವೈದ್ಯ ವೇದಾಂತ ಜ್ಯೋತಿಷ್ಯ ಕನ್ನಡ ಗ್ರಂಥಗಳು ಅಲ್ಲದೆ ಉತ್ತಮ ಕಾದಂಬರಿಗಳು ಸ್ಟೇಶನರಿ ಸಾಮಾನುಗಳು ಅತ್ಯುತ್ತಮವಾದ ಕಾಗದ ಅಕ್ಷರಗಳಿಂದ ತಯಾರಿಸಲ್ಪಟ್ಟು ಸುಲಭ ಕ್ರಯಕ್ಕೆ ಸಿದ್ಧವಾಗಿರುತ್ತೆ.

ಅಪೂರ್ವ ಪುಸ್ತಕಗಳು.

ಇದು ಸರ್ವರಲ್ಲಿಯೂ ಇರಬೇಕಾದ್ದು. ಜಮಾ ಖರ್ಚಿನ ಪದ್ಧತಿ 0—12—0. ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

ಆಂಗ್ಲಭಾಷಾ ಪ್ರಕಾಶಿಕ—(ಸ್ವತಃ ಇಂಗ್ಲಿಷ್ ಕಲಿಯುವ ದೊಡ್ಡ ಪುಸ್ತಕ. ಇದನ್ನು ಗುರುವಿನಂತೆ ಭಾವಿಸಿ. ಬೆಲೆ 1—8—0. ವೈದ್ಯಸಾರಸಂಗ್ರಹ (ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ಬೆಲೆ 3—0—0.

ಆರ್ಯಕೀರ್ತಿ ...	0—10—0	ಚಂದ್ರಕಳ	0—4—0
ಹನುಮದ್ವಿಲಾಸಂ ...	0—8—0	ಕಲಾನಾಥ	0—6—0
ಶಾಕುಂತಲ ನಾಟಕ	0—8—0	ಶಿವಾನಂದಲಹರಿ... ...	0—6—0
ಸ್ತ್ರೀಧರ್ಮನೀತಿ ...	0—8—0	ಪ್ರಶ್ನೋತ್ತರ ಲೇಖ್ಯಬೋಧಿನಿ	1—4—0
ಶೋಭನೆ	0—8—0	ಚಿತ್ರವಿಚಿತ್ರಾವಳಿ ...	0—8—0
		ವಿಷವೃಕ್ಷ	1—4—0

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್,
ಮೆನೇಜರ್ ವಿದ್ಯಾಸಾಗರ ಬುಕ್ ಡಿಪೋ,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಸ್ವದೇಶಾಭಿಮಾನಿ.

ಮಂಗಳೂರು, ಶನಿವಾರ ತಾರೀಕು 8ನೇ ಅಗೋಸ್ತು 1914.

ಯೂರೋಪಖಂಡದಲ್ಲಿಯ ಭೀಕರವಾದ ಯುದ್ಧವು.

ಈ ಸಂಚಿಕೆಯಲ್ಲಿ ಅತಿ ವಿಸ್ತಾರವಾಗಿ ಪ್ರಕಟಿಸಲ್ಪಟ್ಟಿರುವ ಯುದ್ಧ ಸಮಾಚಾರದಿಂದ ಯುರೋಪಖಂಡದಲ್ಲಿ ತಲೆದೋರಿರುವ ಯುದ್ಧ ಜ್ವಾಲಾಮುಖಿಯ ಕಿಡಿಗಳು ಪ್ರಪಂಚವನ್ನೆಲ್ಲಾ ಹೇಗೆ ಅಲ್ಲೋಲಕಲ್ಲೋಲಗೊಳಿಸುತ್ತಿರುವವೆಂತ ವಾಚಕರಿಗೆ ವ್ಯಕ್ತವಾಗಬಹುದು. ವಾಯು ಮಂಡಲ, ಭೂಮಂಡಲ, ಸಮುದ್ರ ಮಂಡಲ ಈ ರೀತಿ ಮಂಡಲತ್ರಯಗಳಲ್ಲಿಯೂ ಸಹ ಪ್ರಕೃತ ನಡಿಯುತ್ತಿರುವ ಈ ಯುದ್ಧಕ್ಕೆ ಸಮಾನವಾದ ಮತ್ತೊಂದು ಯುದ್ಧವು ಭೂಲೋಕದ ಇಷ್ಟರ ವರೆಗಿನ ಇತಿಹಾಸಗಳಲ್ಲಿ ಕಾಣಸಿಕ್ಕದು. ಪೂರ್ವಕಾಲದ ಭಾರತ ಯುದ್ಧಕ್ಕೆ ಇದು ಸಮಾನವಾಗಿರುವುದೆಂದು ಹೇಳಿದರೆ ಅತಿಶಯೋಕ್ತಿಯಾಗದು.

ಯುದ್ಧವೆಂದರೆ ಕಷ್ಟ ನಷ್ಟ ಮಾತ್ರವಲ್ಲ, ಪಾಶ್ಚಾತ್ಯ ಜನಾಂಗಗಳಿಗೆ ಇದು ಸರ್ವನಾಶವಾಗಿರುವುದು. ಬ್ರಿಟಿಷ ಸಾಮ್ರಾಜ್ಯದ ಅತಿಶಯವಾದ ಬಾಹುಬಲದ ರಕ್ಷಣೆಯಲ್ಲಿ ನಾವು ಇರುವುದರಿಂದ ಈ ಯುದ್ಧದ ಭೀಕರ ಪರಿಣಾಮಗಳು ನಮ್ಮನ್ನು ತಟ್ಟವು. ಆದರೆ ಯುರೋಪ ಖಂಡಕ್ಕೆ ಈ ಯುದ್ಧದಿಂದ ಬಹಳ ನಷ್ಟವು ಉಂಟಾಗದಿರದು. ಸಮಾಜರಚನೆಗೆ ಧರ್ಮಮೂಲವಾಗುಳ್ಳ ಭಾರತೀಯರಿಗೆ ರಾಜಕೀಯ ಸೂತ್ರಗಳ ಆಧಾರದ ಮೇಲಿರುವ ಪಾಶ್ಚಾತ್ಯ ಸಮಾಜ ರಚನೆಯು ಹೇಗೆ ಈ ಯುದ್ಧಗಳಿಂದ ಕುಸಿದು ಬೀಳುವುದೆಂಬುದು ಥಕ್ಕನೆ ತಿಳಿದುಬರಲಿಕ್ಕಿಲ್ಲ. ರಾಜಕೀಯ ಸೂತ್ರಗಳ ಮೇಲೆ ಪಾಶ್ಚಾತ್ಯ ಸಮಾಜವು ಇರುವುದರಿಂದ ರಾಜಕೀಯ ಸ್ವತಂತ್ರಕ್ಕೆ ಅಥವಾ ಈ ಸ್ವತಂತ್ರವನ್ನು ಬಲಪಡಿಸಲಿಕ್ಕೆ ಇವರು ತಮ್ಮ ಸರ್ವಸ್ವನ್ನೊಡ್ಡಿ ಕಾದಾಡುತ್ತಿರುವರು. ಆದ್ದರಿಂದ ಪಾಶ್ಚಾತ್ಯ ಯುದ್ಧಗಳೆಂದರೆ ಅಷ್ಟು ಭೀಕರವಾಗಿವೆ ಪೌರ್ವಾತ್ಯ ಮತ್ತು ಪಾಶ್ಚಾತ್ಯ ಜನಾಂಗಗಳ ಸಮಾಜರಚನಾಭೇದವು ಹೇಗಿದ್ದರೂ ಪ್ರಕೃತ [illegible]ವೆಲ್ಲವ ಪರಸ್ಪರ ಸ[illegible]ಗಿದೆ. ಆದ್ದರಿಂದ ಒಂದು ಕಡೆಯಲ್ಲಿ ಈ ಯುದ್ಧ ಮೂಲಕ ಉಂಟಾದ ಹಾನಿಯು ಮೊತ್ತಲವು ಸರ್ವತ್ರ ಏರಿ ಎಲ್ಲಾ ಕಡೆಗಳಲ್ಲಿಯೂ ಅನಾವಶ್ಯಕವಾಗಿ ನಷ್ಟವನ್ನುಂಟುಮಾಡುವುದು. ಪ್ರಪಂಚದ ಅಭಿವೃದ್ಧಿ ಸಾಧನೆಯನ್ನು ಒಮ್ಮೆಗೆ ಇದರಿಂದ ಮುರಿದುಬಿಟ್ಟಂತಾಯಿತು.

ಪ್ರಪಂಚಕ್ಕೆಲ್ಲಾ ಈ ರೀತಿ ನಷ್ಟವನ್ನುಂಟುಮಾಡಲು ಜರ್ಮನರು ಮುಖ್ಯ ಕಾರಣಭೂತರಾಗಿರುವರೆಂಬುದು ಈ ಯುದ್ಧ ಸಮಾಚಾರದಿಂದ ಸರ್ವರೂ ತಿಳಿದುಕೊಳ್ಳಬಹುದು. ಯಾಕಂದರೆ ಒಸ್ಟ್ರಿಯಾ ದೇಶದ ಯುವರಾಜರನ್ನು ಕೊಂದ ನಷ್ಟ ಮತ್ತು ಕೋಪ ಶಮನಾರ್ಥವಾಗಿ ಒಸ್ಟ್ರಿಯಾದವರು ದಂಡೆತ್ತಿ ಹೋಗುವಾಗ ರುಶ್ಯದೇಶವು ಸರ್ವಿಯದ ಬೆಂಬಲಕ್ಕೆ ಬಂದರೆ ಜರ್ಮನಿಯು ಒಸ್ಟ್ರಿಯಾದವರಿಗೆ ಸಹಾಯಮಾಡಿ ಯುದ್ಧವು ಇತರ ಕಡೆಗಳಿಗೆ ಪ್ರಸರದಂತೆ ಮಾಡಬಹುದಿತ್ತು. ಇದರ ಬದಲಿಗೆ ನಿಷ್ಕಾರಣವಾಗಿ, ಯುರೋಪಿಯ ಜನಾಂಗಗಳ ಒಪ್ಪಂದಗಳ ಶರ್ತಗಳನ್ನುಲ್ಲಂಘಿಸಿ ಯುದ್ಧಯೋಚನೆಯಲ್ಲಿಲ್ಲದ ಫ್ರಾನ್ಸನ್ನು ಒಳನುಗ್ಗಿರುವುದು ಎಲ್ಲರಿಗೂ ಮಧ್ಯಸ್ಥಳವಾಗಿದ್ದು ಯಾರಿಂದಲೂ ಕೈವಶಮಾಡಕೂಡದೆಂದಿರುವ ಫ್ರಾನ್ಸಿಗೆ ಸಮೀಪವಿರುವ ಲುಕ್ಸೆಂಬರ್ಗನ್ನು ಒಳನುಗ್ಗಿ ಅದನ್ನು ತನ್ನ ಕೈವಶಮಾಡಿಕೊಂಡು ನ್ಯಾಯವಿರುದ್ಧವಾದ ಸಂಚಿಕೆಗೆ ಕೈಹಾಕಿದೆ. ಇಷ್ಟೇ ಅಲ್ಲ ಯಾವ ಪಕ್ಷವನ್ನೂ ಸೇರದೆ ಯೂರೋಪಖಂಡದ ಶಾಂತತೆಯನ್ನು ತನ್ನ ತಟಸ್ಥಭಾವದಿಂದ ಇರಗೊಡಿಸಲು ಪ್ರಯತ್ನಿಸಿದ ಬೆಲ್ಜಿಯಮ್ ದೇಶವನ್ನು ಸಹ ಜರ್ಮನಿಯು ಬಲಾತ್ಕಾರದಿಂದ ರಣರಂಗಕ್ಕೆ ಸೆಳದಿದೆ ಇಟ್ಯಾಲಿ, ಜರ್ಮನಿ ಮತ್ತು ಒಸ್ಟ್ರಿಯಾ ದೇಶಗಳೊಳಗಾದ ಕರಾರು ಪ್ರಕಾರ ಇಟ್ಯಾಲಿಯು ಜರ್ಮನರ ಪರವಾಗಿ ಯುದ್ಧಸನ್ನಾಹವನ್ನು ಮಾಡಬೇಕಿತ್ತಾದರೂ ಇಂಥಾ ಅನ್ಯಾಯದ ವರ್ತನೆಯ ಜರ್ಮನಿಯ ಕೈಯನ್ನು ಇಟ್ಯಾಲಿಯು ಬಿಟ್ಟುಬಿಟ್ಟದ್ದು ನ್ಯಾಯವಾಗಿರುವುದು. ಈ ಬಲತ್ಕಾರಸಾಧನೆಯ ಜರ್ಮನರ ದರ್ಪವನ್ನು ಸಕಾಲದಲ್ಲಿ ಮುರಿಯದಿದ್ದರೆ ಇವರು ಲೋಕಕಂಟಕರಾಗುವರೆಂಬುದಕ್ಕೆ ಅನುಮಾನವಿಲ್ಲ. ಆದ್ದರಿಂದಲೇ ನಮ್ಮ ಅಣ್ಣರಾದ ಬ್ರಿಟಿಷರು ರಣಭೇರಿಯನ್ನು ಹೊಡೆದು ಜರ್ಮನಿಯ ಮೇಲೆ ಯುದ್ಧವನ್ನು ಸಾರಿರುತ್ತಾರೆ ಭಾರತೀಯ ಪ್ರಜಾವರ್ಗದ ಮಾತ್ರವಲ್ಲ, ಲೋಕದ ಸಹಾನುಭೂತಿಯು ಬ್ರಿಟಿಷರ ಪರವಾಗಿರುವುದು ಸರ್ವರೂ ಬ್ರಿಟಿಷರ ಪಕ್ಷವು ಜಯಹೊಂದಲೆಂದು ಹರಸುತ್ತಿರುವರು

ಪಾನು 11 Bಯಿಂದ ಮುಂದರಿಸಿದ್ದು

ಸೇನೆಯೆಲ್ಲವೂ ಜೊತೆಗೊಳ್ಳುವಂತೆ ಬ್ರಿಟಿಷ ಸರಕಾರದವರು ಆಜ್ಞಾಪಿಸಿರುತ್ತಾರೆ.

ಒಸ್ಟ್ರಿಯಾದವರಿಗೂ ಸರ್ವಿಯಾದವರಿಗೂ ಡ್ರಿನ್ ಎಂಬ ನದಿಯಲ್ಲಿ ಕದನ ನಡೆಯಿತು

ಜರ್ಮನಿಯ ಯುದ್ಧ ಸಾಧನೆಗಳಿಗೆ ಸಹಾಯವಾಗುವಂತೆ ಬೆಲ್ಜಿಯಮ್ ಸರಕಾರದವರು ಜರ್ಮನರೊಡನೆ ಒಂದು ಸ್ನೇಹಭಾವದ ಒಪ್ಪಂದವನ್ನು ಮಾಡಬೇಕಾಗಿ ಜರ್ಮನ್ ಸರಕಾರದವರು ಬೆಲ್ಜಿಯಮ್ ಸರಕಾರದವರಿಗೆ ಹೇಳಿಕಳುಹಿಸಿರುವರು ಜರ್ಮನರ ಈ ಸಂದೇಶವು ಬೆಲ್ಜಿಯಮ್‌ನಲ್ಲಿ ತಿರಸ್ಕರಿಸಲ್ಪಟ್ಟಿರುವದು. ಅಲ್ಲಿ ಸಹ ಯುದ್ಧ ಸನ್ನಾಹಗಳು ಆಗುತ್ತಿವೆ. ಸೇನೆಯನ್ನು ಜತೆಗೊಳಿಸುತ್ತಿರುತ್ತಾರೆ

ಬ್ರಿಟಿಷಪಾರ್ಲಿಮೆಂಟ ಸಭೆಯಲ್ಲಿ ತಾ. 3ರಲ್ಲಿ ವಿದೇಶಾಂಗ ಮಂತ್ರಿಗಳಾದ ಸರ್ ಎಡ್ವರ್ಡ್ ಗ್ರೇಯವರು ಬ್ರಿಟಿಷರು ಈ ಯುದ್ಧ ಸಂದರ್ಭದಲ್ಲಿ ಮಾಡತಕ್ಕದ್ದೇನು ಎಂಬುವ ವಿಷಯ ಗಂಭೀರವಾದ ಒಂದು ಭಾಷಣವನ್ನು ಮಾಡಿದರು. ಫ್ರೆಂಚರ ನೌಕಾಸೈನ್ಯವು ಭೂಮಧ್ಯ ಸಮುದ್ರದಲ್ಲಿದ್ದು ಫ್ರಾನ್ಸಿನ ಉತ್ತರ ದಿಕ್ಕನ್ನು ರಕ್ಷಿಸುವರೆ ಫ್ರೆಂಚರು ನಿರುಪಾಯರಾಗಿರುವರು. ಜರ್ಮನಿಯ ನೌಕಾಸೇನೆಯು ಇಂಗ್ಲಿಷ ಕೆನಲ್ ಅಥವಾ ನೊರ್ತಸಿಯಲ್ಲಿ ಫ್ರಾನ್ಸನ್ನು ಕೆಡವಿಬಿಡಲು ಸಾಧಿಸಿದರೆ ಈ ಸಾಧನೆಯನ್ನು ಎದುರಾಡಲು ಫ್ರಾನ್ಸಿಗೆ ಅನುಕೂಲವಿಲ್ಲ. ಆದ್ದರಿಂದ ಅಗತ್ಯವಿದ್ದಲ್ಲಿ ಆಂಗ್ಲೇಯ ನೌಕಾಸೇನೆಯು ಈ ಭಾಗದಲ್ಲಿ ಫ್ರೆಂಚರಿಗೆ ಬೇಕಾದ ಸಹಾಯವನ್ನು ಮಾಡುವುದೆಂಬುದಾಗಿ ಫ್ರೆಂಚ ರಾಯಭಾರಿಗೆ ಭರವಸೆ ಕೊಟ್ಟಿರುವೆನೆಂದು ಸರ್ ಎಡ್ವರ್ಡ್ ಗ್ರೇಯವರು ಹೇಳಿದರು ಬ್ರಿಟಿಷರು ಯುದ್ಧವನ್ನು ಪ್ರವೇಶಿಸದೆ ಸುಮ್ಮನಿದ್ದರೆ ಜರ್ಮನರು ಫ್ರಾನ್ಸಿನ ಉತ್ತರ ಕರಾವಳಿಗೆ ಮುತ್ತಿಗೆಯನ್ನು ಹಾಕುವದಿಲ್ಲವೆಂತ ಸೂಚಿಸುವರು ಆದರೆ ಯುದ್ಧದಲ್ಲಿ ಉದ್ಯುಕ್ತರಾದ ಫ್ರೆಂಚರು ಮತ್ತು ಜರ್ಮನರು ಯುದ್ಧವನ್ನು ನಿರಾಕರಿಸುವ ಬೆಲ್ಜಿಯಮ್ ದೇಶದ ಗೋಜಿಗೆ ಹೋಗೆವೆಂದು ಭರವಸ ಹೇಳುವುದು ಆಂಗ್ಲಾಳಕ್ಕೆ ಅಗತ್ಯವಾಗಿದೆ. ಫ್ರೆಂಚರು ಬೆಲ್ಜಿಯಮಿನ ಗೋಜಿಗೆ ಹೋಗವೆಂದು ಮಾತುಕೊಟ್ಟಿರುವರು. ಆದರೆ ಜರ್ಮನರು ಈ ಪರವಾಗಿ ಏನೂ ಹೇಳಲಾರರು. ಬೆಲ್ಜಿಯಮಿನ ರಾಜರವರು ತಮ್ಮ ಸ್ವತಂತ್ರವನ್ನು ಕಾಪಾಡಿಸಬೇಕೆಂದು ಬ್ರಿಟಿಷ ಚಕ್ರವರ್ತಿಯನ್ನು ವಿಜ್ಞಾಪಿಸಿಕೊಂಡಿರುವರು. ಬೆಲ್ಜಿಯಮಿನ ಸ್ವತಂತ್ರವು ಹೋಗಿಬಿಟ್ಟರೆ ಅದಕ್ಕೆ ತಾಗಿರುವ ಹೊಲ್ಲೆಂಡಿನ ಸ್ವತಂತ್ರವು ಉಳಿಯದು ಬ್ರಿಟಿಷರ ನೆರೆಯಲ್ಲಿರುವ ಈ ಎರಡು ದೇಶಗಳು ಸ್ವತಂತ್ರವನ್ನು ಕಳಕೊಳ್ಳುವುದರಿಂದ ಬ್ರಿಟಿಷ ದ್ವೀಪಗಳ ಕ್ಷೇಮಸಾಧನೆಗೆ ಉಚಿತವಲ್ಲ. ಆದ್ದರಿಂದ ಬೆಲ್ಜಿಯಮನ್ನು ರಕ್ಷಿಸುವ ಕಾಲವು ಬಂದೊದಗಿದ್ದಲ್ಲಿ ಆ ಕಾಲಕ್ಕೆ ನಾವು ಸಿದ್ಧರಾಗಿರಬೇಕೆಂದು ಸರ್ ಎಡ್ವರ್ಡ್ ಗ್ರೇಯವರು ಪಾರ್ಲಿಮೆಂಟು ಸಭೆಯನ್ನು ವಿಜ್ಞಾಪಿಸಿಕೊಂಡರು ಕೆಲವು ಜನ ಮೆಂಬರರ ಹೊರತು ಮಿಕ್ಕ ಸಭಿಕರೆಲ್ಲರೂ ಪಕ್ಷಭೇದವನ್ನು ಲೆಕ್ಕಿಸದೆ ಗ್ರೇಯವರ ಈ ವಿಜ್ಞಾಪನೆಯನ್ನು ಸ್ವೀಕರಿಸಿದರು.

ಐರ್ಲೆಂಡಿನ ಪ್ರಜಾ ಮುಂದಾಳುಗಳಾದ ಮಿ। ರೆಡಮೆಂಡ್‌ರವರು ಐರ್ಲೆಂಡಿನಲ್ಲಿರುವ ಸೇನೆಯನ್ನು ಹಿಂದಕ್ಕೆ ಕರೆಯಬಹುದೆಂದೂ ಐರ್ಲೆಂಡಿನ ಎರಡು ಪಕ್ಷದವರೂ ಒಂದಾಗಿ ಸೇರಿ ಐರ್ಲೆಂಡನ್ನು ರಕ್ಷಿಸುವರೆಂದೂ ಹೇಳಿದೊಡನೆ ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಆನಂದವೂ ಆಸಕ್ತಿಯೂ ಉಕ್ಕಿದವು ಬ್ರಿಟಿಷ ವ್ಯಾಪಾರವು ಯಾವ ರೀತಿಯಲ್ಲಿಯೂ ಕೆಡದಂತೆ ತಕ್ಕ ಏರ್ಪಾಡು ಮಾಡೋಣಾಗುವುದಾಗಿ ಮಂತ್ರಿಗಳವರು ಸೂಚಿಸಿರುತ್ತಾರೆ.

ಜರ್ಮನರು ಡಚ್ಚರ ಲಿಂಬರ್ಗನ್ನು ಒಳನುಗ್ಗಿರುವರೆಂತ ವಾರ್ತೆಯಿರುವುದು.

ಬೆಲ್ಜಿಯಮ್ ದೇಶದವರನ್ನು ತಟಸ್ತರಾಗಿರಗೊಡಿಸಬೇಕೆಂಬ ಬ್ರಿಟಿಷ ಸಂದೇಶಕ್ಕೆ ಜರ್ಮನರು ಒಪ್ಪದ್ದರಿಂದ ಬ್ರಿಟಿಷರು ಜರ್ಮನಿಯ ಮೇಲೆ ಯುದ್ಧವನ್ನು ಸಾರಿರುವರು ಬ್ರಿಟಿಷ ಬಹುಪಕ್ಷನವರ ಈ ಯುದ್ಧ ಆಲೋಚನೆಯನ್ನು ಮೋರ್ಲೆ ಪ್ರಭುಗಳೂ ಮಿ। ಜೊನ್ ಬರ್ನ್ಸರವರೂ ಸ್ವೀಕರಿಸದ್ದರಿಂದ ಅವರು ತಮ್ಮ ಮಂತ್ರಿ ಪದವಿಗೆ ರಾಜಿನಾಮೆ ಕೊಡುವರೆಂಬ ವರ್ತಮಾನವಿದೆ ಕಿಚ್ನೆರ್ ಪ್ರಭುಗಳನ್ನು ಟೆಲಿಗ್ರಾಫು ಮೂಲಕ ಹಿಂದಕ್ಕೆ ಕರೆಸಿರುವರು. ಇವರನ್ನು ಯುದ್ಧ ಮಂತ್ರಿಗಳಾಗಿ ನೇಮಿಸುವರೆಂಬ ವಾರ್ತೆ ಇರುವುದು.

ಕರಾಚಿ, ಮುಂಬಯಿ, ಕಲ್ಕತ್ತೆಯ ವ್ಯಾಪಾರಸ್ಥರಲ್ಲಿ ಬಹಳ ಗಲಿಬಿಲಿಯು ಉಂಟಾಗಿರುವುದು ಕಲ್ಕತ್ತೆಯ ಕರೆನ್ಸಿ ಆಫೀಸಿನಲ್ಲಿ ನೋಟುಗಳ ಬದಲಾಗಿ ಚಿನ್ನದ ನಾಣ್ಯಗಳನ್ನು ಪಡಿಯುವರೆ ಜನರು ರಾಶಿರಾಶಿಯಾಗಿ ಕೂಡುತ್ತಿರುವರು 10,000 ಪವನುಗಳಿಗಿಂತ ಕಡಮೆಯಾದ ಮೊಬಲಗು ಕರೆನ್ಸಿ ಆಫೀಸಿನಿಂದ ಸಿಕ್ಕಲಿಕ್ಕಿಲ್ಲವೆಂಬ ನೋಟೀಸನ್ನು ಕಂಡು ಅಲ್ಲಿಯ ಮಾರವಾಡಿಗಳು 10,000 ಪವನುಗಳನ್ನು ಪಡಕೊಂಡು ಪವನು ಒಂದಕ್ಕೆ ರೂ. 16ರ ಪ್ರಕಾರ ಮಾರುತ್ತಿರುವರು.

ಯುದ್ಧವು ಸಾರಲ್ಪಡುವ ಮೊದಲು ಬ್ರಿಟಿಷ ಮತ್ತು ಜರ್ಮನರೊಳಗೆ ನಡದ ಪ್ರಸ್ತಾಪಗಳೆಲ್ಲವು ತಾ. ೬ನೇ ಪತ್ರಗಳಲ್ಲಿ ಪ್ರಕಟಿಸಲ್ಪಟ್ಟಿವೆ ಬೆಲ್ಜಿಯಮ್ ಮತ್ತು ಜರ್ಮನಿ ಇವರ ಪರಸ್ಪರ ಸಂದೇಶಗಳು ಸಹ ಪ್ರಕಟಿಸಲ್ಪಟ್ಟಿರುವವು ಈ ಪ್ರಕಟಣೆಗಳ ಪ್ರಕಾರ ಬೆಲ್ಜಿಯಮನ್ನು ಒಳನುಗ್ಗದೆ ಸುಮ್ಮನೆ ಇರಗೊಡಿಸುವ ಇಷ್ಟವು ಜರ್ಮನರಿಗೆ ಖಂಡಿತವಾಗಿರಲಿಲ್ಲವೆಂದು ತೋರುವುದು ಬೆಲ್ಜಿಯಮ್ ದೇಶವು ಜರ್ಮನಿಯ ಇಷ್ಟ ಪ್ರಕಾರ ನಡೆಯಲಾರದ್ದರಿಂದ ಬಲತ್ಕಾರದಿಂದ ಈ ದೇಶವನ್ನು ಹಾದುಕೊಂಡು ಜರ್ಮನರು ತಮ್ಮ ಸೇನೆಯನ್ನು ಫ್ರಾನ್ಸು ಪ್ರಾಂತ್ಯಗಳಿಗೆ ಒಯ್ಯುವರು. ಬೆಲ್ಜಿಯಮ್ ದೇಶವು ಯುದ್ಧ ಸನ್ನಾಹಗಳನ್ನು ಮಾಡುತ್ತಿರುವುದು.

ಟರ್ಕಿಯು ತನ್ನ ಸೇನೆಯನ್ನು ಜತೆಗೊಳಿಸುತ್ತಲಿದೆ. ಜರ್ಮನಿಯ ಲಿಂಡರ್ಸ್ ಸೆಂಡರ್ಸರೆಂಬವರು ಟರ್ಕಿಯ ದಳದ ಸೇನಾನಾಯಕರಾಗಿರುವರು.

ಇಟಾಲಿಯವರು ತಮ್ಮ ತಟಸ್ಥಭಾವವನ್ನು ಬಿಟ್ಟು ಜರ್ಮನಿಗೆ ಸಹಾಯಮಾಡಬೇಕೆಂದು ಜರ್ಮನರು ಮಾಡಿದ ವಿಜ್ಞಾಪನೆಯು ಇಟಾಲಿಯವರಿಂದ ನಿರಾಕರಿಸಲ್ಪಟ್ಟಿರುವುದು.

ಸರ್. ಜೆ ಜೆಲ್ಲಿಕೊರವರು ಬ್ರಿಟಿಷ ನೌಕಾಸೇನೆಯ ಸರ್ವಾಧಿಪತ್ಯವನ್ನು ವಹಿಸಿಕೊಂಡಿರುವರು.

ರುಶ್ಯ ದೇಶದಲ್ಲಿ ಸೇನೆಯನ್ನು ಜತೆಗೊಳಿಸುವ ಕೆಲಸವು ಬಹಳ ನಿಧಾನವಾಗಿ ನಡಿಯುತ್ತಿರುವುದರಿಂದ ಜರ್ಮನ್ ಬೆಲ್ಜಿಯಮ್ ಮತ್ತು ಲುಕ್ಸೆಂಬರ್ಗ್ ಮಾರ್ಗವಾಗಿ, ಫ್ರಾನ್ಸನ್ನು ಒಳನುಗ್ಗಲು ಆಸ್ಪದ ದೊರಕಿರುವುದು. ರುಶ್ಯದ ಸೇನೆಯು ದಂಡೆತ್ತಿ ಬರಲು ಇನ್ನು ಕೆಲವು ಹಪ್ತೆಗಳ ಸಮಯವು ಬೇಕಾಗಿರುವುದಂತೆ.

ಮುಂಬಯಿ ಗವರ್ನರರವರು ಪುನೆಯಿಂದ ಮುಂಬಯಿಗೆ ಬರುತ್ತಿರುವರು. ಹಿಂದೂಸ್ಥಾನದ ಮುಖ್ಯ ಪಟ್ಟಣಗಳೆಲ್ಲೆಲ್ಲಾ ಸಾಮ್ರಾಜ್ಯ ಸರಕಾರದವರಿಗೆ ಈ ಸಂದರ್ಭದಲ್ಲಿ ಯಾವ ಸಹಾಯವನ್ನು ಮಾಡಬಹುದೆಂಬ ವಿಷಯವನ್ನು ಪರ್ಯಾಲೋಚಿಸುವರೆ ಪ್ರಜಾ ಜನರು ಸಭೆ ಸೇರುತ್ತಿರುವರು. ಅವಶ್ಯವಿರುವ ಸಂದರ್ಭದಲ್ಲಿ ಹಿಂದೂಸ್ಥಾನವು ಬ್ರಿಟಿಷ ಗವರ್ನಮೆಂಟಿಗೆ ಸಹಾಯಮಾಡುವುದಕ್ಕೆ ಸಿದ್ಧವಾಗಿದೆ ಎಂದು ನಮ್ಮ ವೈಸರಾಯ ಪ್ರಭುಗಳು ಸಾಮ್ರಾಜ್ಯ ಸರಕಾರಕ್ಕೆ ಮಾಡಿದ ವಿಜ್ಞಾಪನೆಯನ್ನು ಪ್ರಜೆಗಳು ಎಲ್ಲಾ ಕಡೆಗಳಿಂದಲೂ ಆದರಿಸುತ್ತಿರುವರು.

ಈ ವಸ್ತುಶಾಲೆಯು ಕಿನ್ನಿಕಂಬಳ, ಲೋಕಲ್ ಫಂಡ್ ಹಾಯರ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರ ವಶದಲ್ಲಿದ್ದು ಪ್ರತ್ಯಹವೂ ಬೈಗೆ ೪ರಿಂದ ೬ ಗಂಟೇ ತನಕ ಶಾಲಾ ದಿನಗಳಲ್ಲಿ ತೆರೆದಿರುವದು

Rama Sarma Baglodi
Secretary.
Kinni Kambla Teacher's Association,
Bajpe Post, South Canara.

ಸ್ವಾಮೀ ಪತ್ರಕರ್ತರೇ,

ನಿಮ್ಮ ಅಮೌಲ್ಯವಾದ ಸ್ವದೇಶಾಭಿಮಾನಿಯ ಕಳೆದ ಸಂಚಿಕೆಯಲ್ಲಿ "ಮಾಜಿ ಗುಲಾಮ"ನ ಬಾತ್ಮಿಯನ್ನು ಓದಿ ತುಂಬಾ ವಿಸ್ಮಯ ಪಟ್ಟೆನು. ಕಾಪಿ ಹೋಟೇಲುಗಳಿಗೆ ಹೋಗುವುದು ಸ್ವಾತಂತ್ರ್ಯದಿಂದಲ್ಲ. ಅದೃಶ್ಯವಾದ ಅನೇಕ ಶಕ್ತಿಗಳ ಪ್ರೇರೇಪಣೆಯಿಂದ ಇಂತು ವಿಚಾರಬುದ್ಧಿಯನ್ನುಪಯೋಗಿಸದೆ ನಾಲಗೆಯ ರುಚಿಗೆ ಅನುಕೂಲನಾಗಿದ್ದು, ಕಾಫಿ ಹೋಟೇಲುಗಳಿಗೆ ಹೋಗುವಾತನು ಗುಲಾಮನು. ಆದರಲ್ಲಿ ಹೇಯಭಾವವನ್ನು ಕಳೆದು ಅದನ್ನು ತೀರಾ ಬಿಟ್ಟಿರುವವನು ಮಾಜಿ ಗುಲಾಮನು, ಸರಿಸರಿ! ಈತನಂತೆ ನಮಗೂ ಚಿತ್ತಸ್ಥೈರ್ಯವಿದ್ದರೆ!

ಹೋಟೇಲುಗಳು ಲೋಕಕ್ಕೆ ಹಿತವನ್ನುಂಟುಮಾಡುವುವೆಂದು ನಾನು ಹೇಳುವುದಿಲ್ಲ. ಆದರೆ ಅವುಗಳ ಇರೋಣಕ್ಕೆ ತಕ್ಕ ಕಾರಣವಿರುವುದೆಂದು ಹೇಳಬಹುದು. ಪರನಾಡಿನಿಂದ ಬಂದ ಜನರುಗಳ ಸೌಕಾರ್ಯವನ್ನೊದಗಿಸುವುದಕ್ಕಾಗಿ ಈ ಹೋಟೇಲುಗಳಿವೆ ಅಲ್ಲದೆ ಪರವೂರಿನಿಂದ ಶಾಲೆಗೆ ಹೋಗುವ ಸಲುವಾಗಿ ಬಂದ ಹುಡುಗರು ಹೆಚ್ಚಾಗಿ ಊಟದ ಹೋಟೇಲುಗಳಲ್ಲಿರಬೇಕಾಗುವುದರಿಂದ ಅವರು ತಮ್ಮ ಮನೆಗಳಲ್ಲಿದ್ದ ಹಾಗೆಯೇ ಭೋಗಿಸುವಂತೆ ಈ ಹೋಟೇಲುಗಳಿವೆಯೆಂದು ಹೇಳಬಹುದು ಅಕಾಲದಲ್ಲಿ ಮುಂದಿನ ಆಲೋಚನೆಯಿಲ್ಲದೆ ಕಂಡ ಸ್ನೇಹಿತರನ್ನು ಕರೆದುಕೊಂಡು ಮಿತಿವಿಾರಿ ತಿನ್ನುವ ಹುಡುಗರನ್ನು ದೂರಬೇಕಲ್ಲದೆ ಜನರುಗಳಿಗೆ ಹಿತವನ್ನು ಮಾಡಲೆಳಸುವ ಹೋಟೇಲುಗಳನ್ನು ದೂರುವುದು ಅನುಚಿತವು ಹೋಟೇಲುಗಳಿಂದ ಉಪಕಾರವುಂಟಾಗಿ ಆದರೆ ಪ್ರತಿ ಹೆಜ್ಜೆಗೂ ಒಂದೊಂದು ಹೋಟೇಲಿದ್ದರೆ ಹಾನಿಕರವೆಂಬುದರಲ್ಲಿ ಭಿನ್ನಾಭಿಪ್ರಾಯಗಳಿರಲಾರವು

ಹೋಟೇಲುಗಳಲ್ಲಿ ಸಜ್ಜಿಗೊಳಿಸುವ ಸಾಮಗ್ರಿಗಳು ನೋಡುವುದಕ್ಕೆ ಚೆನ್ನಾಗಿವೆಯಾದರೂ ಅವುಗಳನ್ನು ಮಾಡುವಾಗ ನೋಡಿದರೆ ಅವುಗಳಲ್ಲಿ ವಿಮನಸ್ಕರಾಗುವೆವೆಂದು "ಮಾಜಿ ಗುಲಾಮ"ನು ಅಭಿಪ್ರಾಯಪಟ್ಟಂತಿದೆ. ಪರ್ಯಾಲೋಚಿಸಿ ನೋಡಿದರೆ ಎಲ್ಲವೂ ಹೀಗೆ. ಉಪ್ಪಿನ ಹೆಂಟೆಯನ್ನು ಮಾಡುವಾಗ ಮುಂದಿದ್ದು ನೋಡಿದರೆ ಉಪ್ಪನ್ನು ಬಿಡಬೇಕಾಗಬಹುದು ಕಬ್ಬನ್ನು ಗಾಣಕ್ಕಿಕ್ಕಿ ಬೆಲ್ಲವನ್ನು ಮಾಡುವಾಗ ನೋಡಿದರೆ "ಮಾಜಿ ಗುಲಾಮ"ನು ಬೆಲ್ಲವನ್ನು ಬಿಡಬಹುದು. ನಾವೀಗ ಬರೆಯಲುಪಯೋಗಿಸಿದ ಕಾಗದವು ಬಲು ಸೊಗಸಾಗಿದೆ ಅದನ್ನು ಕೊಳೆತು ನಾರುವ ಬಟ್ಟೇ ತುಣುಕುಗಳಿಂದ ಮಾಡಿದ್ದಾರೆ ನಾವು ಪ್ರತಿದಿನವೂ ಉಣ್ಣುವ ಕುಸಲಕ್ಕಿಯನ್ನು ಹೇಗೆ ಮಾಡುವರೆಂದು "ಮಾಜಿ ಗುಲಾಮ"ನಿಗೆ ತಿಳಿದಿರಬಹುದು. ಒಟ್ಟಿನ ಮೇಲೆ ಆದ್ಯಂತವಾಗಿ ಆಲೋಚಿಸಿದ್ದಲ್ಲಿ ಉಪವಾಸವೇ ಗತಿ

ಕಪ್ಪನ್ನು ತುಟಿಗೆ ತಾಗಿಸಿ ಕಾಪಿ ಕುಡಿಯುವುದು ಹಾನಿಕರವೆಂಬುದು ನಿಜ ಈ ದುರಭ್ಯಾಸವನ್ನು ಬಿಡುವುದೇ ಉತ್ತಮ. ಆದರೆ ಕ್ಷಯ, ಫರಂಗಿ, ಮದಕರಿ, ಇತ್ಯಾದಿ ರೋಗಗಳು ಇದರಿಂದುಂಟಾಗುವವೆಂಬುದು ಅತಿಶಯೋಕ್ತಿಯೆಂದೆನ್ನಬೇಕು ಇವುಗಳು ಅನಾಚಾರ ದುರಾಚಾರಗಳಿಂದ ಉಂಟಾಗುವವಲ್ಲದೆ ಬೇರೆಯಲ್ಲ. ಕಪ್ಪುಗಳನ್ನು ಬೂದಿಯಿಂದಲ್ಲವಾದರೂ ಸ್ವಚ್ಛವಾದ ನೀರಿನಿಂದ ತೊಳೆಯುವ ಕ್ರಮವು ಸರ್ವಸಾಧಾರಣವಾಗಿ ಎಲ್ಲಾ ಹೋಟೇಲುಗಳಲ್ಲುಂಟು.

ಮಾಜಿ ಗುಲಾಮನು ಗಿರಾಕಿಯಾಗಿದ್ದ ಹೋಟೇಲಿನವರು ತರುಣರಾಗಿದ್ದು ರೋಗದಿಂದ ಪೀಡಿತರಾಗಿದ್ದರೆ ಎಲ್ಲಾ ಹೋಟೇಲಿನವರು ಹೀಗೆಯೇ ಎಂದು ಹೇಳಲಾಗುವುದಿಲ್ಲ.

ಸ್ವಾರ್ಥಪರರಾಗಿ ಹೆಂಡತಿ ಮಕ್ಕಳ ಆಲೋಚನೆಯಿಲ್ಲದೆ ಹೋಟೇಲುಗಳಿಗೆ ಹೋಗಿ ತಿನ್ನುವವರು ಪಶುಪ್ರಾಯರೇ ಸರಿ. ಆದರೆ ನಿಜವಾಗಿಯೂ ಹೀಗಿರುವವರು ಇದ್ದಾರೆಯೆ? ನನ್ನ ಅಭಿಪ್ರಾಯದಲ್ಲಿಲ್ಲ. ಒಂದು ವೇಳೆ ಇದ್ದರೆ ಅಂಥವರು ಬಹಳ ಕಡಿಮೆ. ಕೋರ್ಟು ಕಚ್ಚೇರಿಗಳಲ್ಲಿ ಕೆಲಸ ಮಾಡುವ ಉದ್ಯೋಗಸ್ಥರು ಆ ದಿನದ ಕೆಲಸದಿಂದ ಶ್ರಮಪಟ್ಟಾಗ ದೂರವಿರುವ ತಮ್ಮ ಮನೆಗಳಿಗೆ ಹೋಗುವುದು ಪ್ರಯಾಸಕರವೆಂದು ಹತ್ತಿರವೇ ಇರುವ ಹೋಟೇಲುಗಳಿಗೆ ಹೋಗುವುದುಂಟು ಮನೆ ಸಮೀಪದಲ್ಲಿಯೇ ಇರುವವರು ತಮ್ಮ ಮನೆಗಳಿಗೇನೇ ಹೋಗಿ ಉಪಚರಿಸಿಕೊಳ್ಳುವರು. ಹೀಗೆ ನಿರ್ವಾಹವಿಲ್ಲದ ಸಂಗತಿಗಳಲ್ಲಿ ಹೆಂಡತಿ ಮಕ್ಕಳನ್ನು ಬಿಟ್ಟು ಒಬ್ಬಂಟಿಗನಾಗಿ ಟೀ ಕುಡಿಯುವವನು ಸ್ವಾರ್ಥಿಯೆಂದೆನ್ನಲಾಗದು.

ಹೋಟೇಲುಗಳೂ ಶೇಂದಿ ಅಂಗಡಿಗಳೂ ಒಂದೇ ತೆರವಾಗಿವೆ, ಇವೆರಡಕ್ಕೂ ಹೋಗುವವರು ಜಾತಿಯಲ್ಲಿ ಬೇರೆಯಲ್ಲದೆ ಬುದ್ಧಿಯಲ್ಲಿ ಬೇರೆಯಲ್ಲ. ಆದರೆ ಇವುಗಳಲ್ಲಿ ಸಿಕ್ಕುವ ಪಾನಗಳಲ್ಲಿ ಭೇದವು ಹೆಚ್ಚಿರುವುದು. ಶೇಂದಿಯು ಅಮಲಕರವು, ತಲೆಗೇರಿ ತತ್ಕಾಲಕ್ಕೆ ಬುದ್ಧಿಭ್ರಮಣೆಯನ್ನು ಮಾಡುವುದು ಕಾಪಿಯಲ್ಲಿ ಮನುಷ್ಯರಿಗೆ ಬೇಕಾಗುವಷ್ಟೇ ಅಮಲಿದ್ದು ದಣಿದು ಬಂದವರಿಗೆ ಉಪಶಮನ ಮಾಡುವುದು.

ಒಂದೇ ಮಾತಿನಲ್ಲಿ ಕಾಫಿ ಹೋಟೇಲುಗಳು ಜನರ ಉಪಕಾರಕ್ಕಾಗಿಯೇ ಇರುವುವು ಅವುಗಳ ಗುಣವನ್ನು ಬಿಟ್ಟು "ಮಾಜಿ ಗುಲಾಮ"ನು ಅವಗುಣಗಳನ್ನು ಬೆಟ್ಟಕ್ಕೆ ಉರ್ಜಿ ಈ ಸಂಸ್ಥೆಗಳನ್ನೇ ಅಹಿತಕರವೆಂದು ಹೇಳುವುದು ಅನುಚಿತವು

ಮಂಗಳೂರು
29 – 7 – 14 ಇತಿ ಗುಣಗ್ರಾಹಿ.

ಅಯ್ಯಾ.

ನಾನು ಶಾಲೆಯಿಂದ ಮಧ್ಯಾಹ್ನ ೫ಗಂಟೆ ಸಮಯಕ್ಕೆ ಮನೆಗೆ ಬರುವಾಗ ಚಿಲ್ಲಾರುದೇವರಡ್ಕ ಎಂಬ ಸ್ಥಳದ ಸಮೀಪ ಮಾರ್ಗದಲ್ಲಿ ಎರಡು ಪಟ್ಟಾತ ಹುಲಿಗಳು ಬರುವುದನ್ನು ಕಂಡು ಬಣ್ಣದ ಕರುಗಳು ಬರುತ್ತವೆ ಎಂದು ನೆನಸಿದೆ, ಸ್ವಲ್ಪ ಹತ್ತಿರ ಬಂದಾಗ ಹುಲಿಗಳೋ ಎಂದು ಅನುಮಾನವುಂಟಾಗಿ ಮೈಯಲ್ಲಿ ರೋಮಾಂಚನವಾಯಿತು ಹುಲಿಗಳ ಸವಾರಿ ಬರುತ್ತಾ ಇತ್ತು. ಸಮೀಪಕ್ಕೆ ಹುಲಿಗಳು ಬಂದಾಗ ಅವುಗಳು ನನ್ನನ್ನು ನೋಡುತ್ತಾ ಉಭಯ ಪಾರ್ಶ್ವಗಳಿಗೆ ಸರಿದು ಚದರಿ ಓಡಿಹೋದವು. ನನಗಾದರೋ ಮೈಯೆಲ್ಲಾ ನಡುಕ ಉಂಟಾಗಿ ಪೂರ್ಣ ಧೈರ್ಯಗೆಟ್ಟು ಓಟ ಕಿತ್ತೆನು ಏನಾಶ್ಚರ್ಯ! ಕಾಡುಗಳಿಂದ ಹುಲಿಗಳು ನಿರ್ಭಯವಾಗಿ ಮಾರ್ಗದಲ್ಲಿ ಸವಾರಿಮಾಡುವದಾದರೆ ಇನ್ನು ಮುಂದೆ ದನಕರುಗಳು ಜೀವನ ಕಳೆಯುವದು ಕಷ್ಟವಾಗಿದೆಂಬದು ವಾಚಕರೇ ನೆನಸಿರಿ. ಇಂಥಾ ದುಷ್ಟ ಜಂತುಗಳನ್ನು ಕೊಲ್ಲಲು ಗ್ರಾಮದವರು ತಕ್ಕ ವಿಲೆವಾರಿ ಮಾಡದಿದ್ದರೆ ದನಕರುಗಳ ಪಾಡನ್ನು ಹೇಳತೀರದು.

ಮುಡ್ನೂರು, ತಾ 26 – 7 – 14. ಎಮ್. ಪುಟ್ಟಣ್ಣ.

ಉತ್ತರ ಹಿಂದೂಸ್ಥಾನ.

ಈಗ ಹಿಂದೂಸ್ಥಾನದ ಕೆಲವು ಮದ್ಯಪಾಯಿಗಳಾದ ಜನರಲ್ಲಿವ ಅಂತಹ ಕೆಲವು ಸ್ಥಳಗಳಲ್ಲಿ ಮದುಪಾನ ನಿವಾರಣಾ ಸಂಘಗಳಿಂದ ಹೆಚ್ಚಿನ ಪ್ರಯೋಜನಗಳಾಗುತ್ತಿವೆ. ಮುಂಬಾಯಿ ಸೊಸೈಟಿಯ ವಗದಿಯಲ್ಲಿ ಇಂತಹ ಹಲವು ದೃಷ್ಟಾಂತಗಳು ತೋರುತ್ತವೆ. ರಾವಲ್‌ಪಿಂಡಿ ಡಿಸ್ಟ್ರಿಕ್ಟ್‌ನಲ್ಲಿ ಸ್ವಾಮೀ ಹರದಾಸಾಜಿಯವರು ಈ ಸಂಬಂಧ ನಡಿಸಿದ ಭಾಷಣಗಳಿಂದ ಉತ್ತಮ ಫಲ ತೋರಿಬಂದಿರುವುದು. ಸ್ವಾಮಿಯವರ ಹಿಂಬಾಲಕರು ಅಲ್ಲಿಯ ಎಲ್ಲಾ ಸಾರಾಯಿ ಅಂಗಡಿಗಳಲ್ಲಿರುವ ಸಾರಾಯಿಯನ್ನು ಕೊಂಡುಕೊಂಡು ನದಿಗೆ ಬಿಸಾಡಿ ಸರಕಾರಕ್ಕೆ ಸಲ್ಲತಕ್ಕ ಬಾಕಿ ಹಣವನ್ನು ಪಾವತಿಮಾಡಿ ಮುಂದಿನ ವರ್ಷಕ್ಕೆ ಲೈಸನ್ಸ್ ಕೊಡದಂತೆ ಕಮಿಷನರಿಗೆ ಮನವಿಮಾಡಿಕೊಂಡರು.

ಕಲ್ಕತ್ತೆಯ ಆಟದ ಮೈದಾನದಲ್ಲಿ ಕಳೆದ ಮಂಗಳವಾರ ಎರಡು ಭಾರತೀಯ ಆಟದ ಪಂಗಡದವರಿಗೆ ಫೂಟ್‌ಬೋಲ್ ಮೇಚ್ ಎಂಬ ಕಾಲಿನಿಂದ ಒದೆಯುವ ಚೆಂಡಾಟದ ಪಂದ್ಯವು ಜರುಗಿತು. ಆಟದ ಮಧ್ಯೆ ಈ ಚೆಂಡು ಸಚ್ಚಿದಾನಂದ ಗೋಸ್ವಾಮಿ ಎಂಬ ೧೮ ವರ್ಷ ವಯಸ್ಸಿನ ಯುವಕನ ಎದೆಗೆ ತಗಲಿತು. ಕೂಡಲೇ ಇವನನ್ನು ಕೆಲವು ಸ್ನೇಹಿತರು ಆಟದ ಸ್ಥಳದಿಂದ ಕೊಂಡುಹೋಗಿ ಸತ್ಕರಿಸಿದರು. ಪರಂತು, ಚೇತರಿಸುವ ಹಾಗೆ ಕಾಣದ್ದರಿಂದ ಆಸ್ಪತ್ರಿಗೆ ಕೊಂಡುಹೋದರು. ಅಲ್ಲಿ ತನಗೆ ಬಾಯಾರಿಕೆ ಆಗುತ್ತದೆಂದು ಹೇಳಿದನು. ಅನಂತರ ಡಾಕ್ಟ್ರರು ಪರೀಕ್ಷೆಮಾಡುತ್ತಿರುವಾಗಲೇ ಮೃತಪಟ್ಟನು.

ಮೃತರಾದ ಲೇಡಿಹಾರ್ಡಿಂಜರ ಭಾವಚಿತ್ರವೊಂದನ್ನು ಮಾಡಿ ಲೇಡಿಹಾರ್ಡಿಂಜ ಮೆಮೋರಿಯಲ್ ಫಂಡಿನವರು ಒಂದು ಸಾವಿರ ಗಿನಿಯನ್ನು ಕೊಡಿಸಬೇಕೆಂದಿದ್ದಾರೆ.

ಬರ್ಮಾದಲ್ಲಿ ಮಕ್ಕಳ ಮರಣದ ಸಂಖ್ಯೆಯು ಹೆಚ್ಚಾಗುತ್ತಿದೆಂಬ ವಿಷಯವನ್ನು ಅಲ್ಲಿಯ ಯುರೋಪಿಯ ಮತ್ತು ಬರ್ಮಾ ಹೆಂಗಸರು ಸರಕಾರದವರ ಚಿತ್ತಕ್ಕೆ ತಂದು ಈಗ ಬರ್ಮಾದ ೨೧ ಸ್ಥಳಗಳ ಆಸ್ಪತ್ರಿಗಳಲ್ಲಿ ಲೇಡಿ ಡಾಕ್ತರರುಗಳನ್ನು ನೇಮಿಸಬೇಕೆಂದು ವಿಜ್ಞಾಪಿಸಿಕೊಂಡಿರುವರು

ಜೋರ್ಜಸಾರ್ವಭೌಮರವರ ಜನನ ದಿವಸದ ಬಹುಮಾನಾರ್ಥವಾಗಿ ಬಿರುದುಗಳನ್ನು ದಯಪಾಲಿಸುವಕಾಲ ಮಾನ್ಯ ಗೋಖಲೆಯವರಿಗೆ ಕೆ. ಸಿ. ಐ. ಇ. ಎಂಬ ಬಿರುದನ್ನು ಕೊಡಬೇಕೆಂಬದಾಗಿ ವೈಸರಾಯ ಪ್ರಭುಗಳವರು ಶಿಫಾರಸುಮಾಡಿದ್ದರು. ಸ್ಟೇಟ್ ಸೆಕ್ರಟರಿಯಾದ ಕ್ರ್ಯೂ ಪ್ರಭುಗಳವರೂ ಇದಕ್ಕೆ ಸಮ್ಮತಿಸಿ ಸಾರ್ವಭೌಮರಿಗೆ ತಿಳಿಸಿದರು. ತನ್ನಕ್ಕೆ ಈ ವಿಷಯವನ್ನು ಕ್ರ್ಯೂಪ್ರಭುಗಳ

ವರು ಮಾನ್ಯ ಗೋಖಲೆಯವರಿಗೆ ತಿಳಿಸಿದ್ದಲ್ಲಿ ಸಾರ್ವಭೌಮರು ಈ ಬಿರುದನ್ನು ತನಗೆ ದಯಪಾಲಿಸಬೇಕೆಂದಿರುವುದಕ್ಕೆ ತಾನು ಕುಂಬಾ ಕೃತಜ್ಞನಾಗಿದ್ದೇನಾದರೂ ತಾನು ಜನ ಹಿತೈಷಿಯಾಗಿ ನಡೆಯುವ ಮನುಷ್ಯನಾದುದರಿಂದ ಈ ಬಿರುದನ್ನು ಸರಕಾರದವರಿಂದ ಪಡೆಕೊಂಡರೆ ತನ್ನ ಕೆಲಸಗಳನ್ನು ಮಾಡಲು ತುಸ ಭಂಗಬರಬಹುದಾದುದರಿಂದ ಆ ಬಿರುದು ತನಗೆ ಬೇಡವೆಂತ ಹೇಳಿ ಅರಸರ ಕ್ಷಮಾಪಣೆ ಕೇಳಿಕೊಂಡದ್ದರಿಂದ ಅರಸರು ಮಾನ್ಯ ಗೋಖಲೆಯವರ ಹೆಸರನ್ನು ಪಟ್ಟಿಯಿಂದ ಹಿಂದೆಗೆದರೆಂತ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ

ದೇವಸ್ಥಾನಗಳು ಮತ್ತು ಇತರ ಮತ ಸಂಸ್ಥೆಗಳ ಆಡಳಿತೆಗಳಲ್ಲಾಗುವ ಅನರ್ಥಗಳನ್ನು ಹೇಗೆ ಹೋಗಗೊಳಿಸಬಹುದೆಂಬುವನ್ನು ಪರ್ಯಾಲೋಚಿಸಲು ಪ್ರಜಾ ಜನರ ಮತ್ತು ಸರಕಾರದ ಉದ್ಯೋಗಸ್ಥರ ಸಭೆಯೊಂದು ಡಿಲ್ಲಿಯಲ್ಲಿ ಕೆಲವು ಕಾಲದ ಹಿಂದೆ ಕೂಡಿದ್ದ ವೃತಾಂತವು ವಾಚಕರಿಗೆ ಗೊತ್ತಿರಬಹುದು. ಇಂಡಿಯಾ ಗವರ್ನಮೆಂಟಿನವರು ಒಂದು ಕಾನೂನು ಮಸೂದೆಯನ್ನು ಮಾಡಿ ಅದನ್ನು ಸ್ಟೇಟ್ ಸೆಕ್ರೆಟರಿಯವರ ಪರ್ಯಾಲೋಚನೆ ಬಗ್ಗೆ ಕಳುಹಿಸಿ ಕೊಟ್ಟಿರುವರೆಂಬದಾಗಿ ತಿಳಿದು ಬರುತ್ತದೆ

ಮುಂಬಾಯಿ ಪ್ರಾಂತಿಕ ಕೊಂಗ್ರೆಸು ಕಮಿಟಿಯವರು ಮದರಾಸ್‌ನಲ್ಲಿ ಕೂಡುವ ಕೊಂಗ್ರೆಸು ಸಭೆಗೆ ಭೂಪೇಂದ್ರನಾಥ ಬಾಸುರವರನ್ನು ಅಧ್ಯಕ್ಷರನ್ನಾಗಿ ಆರಿಸಬೇಕೆಂದು ಸೂಚಿಸಿರುತ್ತಾರೆ ಯುನೈಟೆಡ್ ಪ್ರೊವಿನ್ಸ್‌ಗಳ ಕೊಂಗ್ರೆಸು ಕಮಿಟಿಯವರು ಲಾಲಾ ಲಾಜಪತ ರೈಯವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂಬ ತಮ್ಮ ನಿರ್ಣಯವನ್ನು ಸೆಂಟ್ರಲ್ ಕೊಂಗ್ರೆಸ್ ಕಮಿಟಿಯವರಿಗೆ ಸೂಚಿಸಿರುವರು

ಇಬ್ಬರು ಹೆಂಡರನ್ನು ವಿವಾಹ ಮಾಡಿ ಕೊಂಡಿದ್ದರಿಂದ ಉಂಟಾದ ದುಷ್ಪರಿಣಾಮವು ಡಕ್ಕಾದಲ್ಲಿಯ ಹೆರಲ್ಡ್ ಎಂಬ ಪತ್ರಿಕೆಯಲ್ಲಿ ಈರೀತಿ ಪ್ರಕಟಿಸಲ್ಪಟ್ಟಿರುವುದು ಸೆನ್ಹತ್ ಎಂಬಲ್ಲಿಯ ವೈದ್ಯ ಗ್ರಹಸ್ಥನೊಬ್ಬನಿಗೆ ಇಬ್ಬರು ಹೆಂಡರಿದ್ದರು ಈತನು ಎರಡನೇ ಹೆಂಡತಿಯನ್ನು ಹೆಚ್ಚಾಗಿ ಪ್ರೀತಿಸುತ್ತಲಿದ್ದು ಮೊದಲನೇಯವಳನ್ನು ಪೂರ್ಣ ಅಭಾವದಿಂದಲೇ ಕಾಣುತ್ತಿದ್ದನು ಗಂಡನ ಈ ವರ್ತನೆಯಿಂದ ಮೊದಲನೆಯವಳು ಬಹಳ ಸಂಕಟಪಟ್ಟು ಪತಿ ವಿಯೋಗವನ್ನು ತಾಳಲಾರದೆ ಅಗ್ನಿ ಪ್ರವೇಶದಿಂದ ಆತ್ಮಹತ್ಯವನ್ನು ಮಾಡಿಕೊಂಡಳು ತಾನು ಸಾಯುವ ಮೊದಲು ಈ ಪ್ರಥಮ ಪತ್ನಿಯು ಒಂದು ಪತ್ರ ಮತ್ತು ಪದ್ಯವನ್ನು ತನ್ನ ಪತಿಗೆ ಬರೆದಿಟ್ಟಿದ್ದಳು ಈ ಪತ್ರವನ್ನೂ ಪದ್ಯವನ್ನೂ ಓದಿಕೊಂಡು ಆ ವೈದ್ಯ ಗ್ರಹಸ್ಥನು ಬಹಳ ಪಶ್ಚಾತಾಪ ಪಟ್ಟು ತಾನು ಸಹ ಸ್ವಘಾತವನ್ನು ಮಾಡಿಕೊಂಡನು

ಜಲಂಧರ ಜಿಲ್ಲೆಯ ರಾಹೋನ್ ಎಂಬಲ್ಲಿ ಒಂದು ಸುಂದರವಾದ ಹಳೇ ಕಟ್ಟೋಣದಲ್ಲಿ ಸುಮಾರು ೧೦೦೦ ಸ್ತ್ರೀಯರು ಉತ್ಸವಾರ್ಥ ಕೂಡಿದ್ದರು ಕಟ್ಟೋಣದ ಒಂದು ಪಾರ್ಶ್ವದ ಗೋಡೆಯು ಮುರಿದು ಇದರಡಿ ೧೦೦ ಸ್ತ್ರೀಯರು ಬಿದ್ದು ಹೋದರು. ಈ ಗೋಡೆಯು ಬೀಳುತ್ತಿದ್ದಾಗ ಮತ್ತೊಂದು ಗೋಡೆಗೆ ತಾಗಿ ಅದು ಸಹ ಕುಸಿದು ಬಿದ್ದು ೫೦ ಜನ ಸ್ತ್ರೀಯರು ಈ ಗೋಡೆ ಅಡಿಯಲ್ಲಿ ಹೂಳಲ್ಪಟ್ಟಿರುವರು ಪೋಲೀಸಿನವರೂ ಗ್ರಾಮಸ್ಥರೂ ಹೋಗಿ ಈ ಸ್ತ್ರೀಯರನ್ನು ರಕ್ಷಿಸಲು ಪ್ರಯತ್ನಿಸಿದರು. ೪೦ ಸ್ತ್ರೀಯರು ಸತ್ತು ಹೋಗಿರುವರು ೩೦ ಸ್ತ್ರೀಯರು ವಿಶೇಷ ಘಾಯ ಪಡೆದಿರುತ್ತಾರೆ

ಕರಾಚಿ ಜಿಲ್ಲೆಯಲ್ಲಿ ಸಿಂಧು ನದಿಯ ನೆರೆಯಿಂದ ಬಹಳ ಹಾವಳಿಯು ಉಂಟಾಗಿರುವುದು ಚೋರಬಾರಿ ಮತ್ತು ಟಾಟಾ ತಾಲೂಕುಗಳಲ್ಲಿ ಕಳೆದ ೧೦ ವರುಷಗಳಿಂದ ರೈತರು ಮತ್ತು ಸರಕಾರದವರು ಮಾಡಿರುವ ಕಷ್ಟ ಕೃತಗಳು ಪೂರ್ಣ ನಷ್ಟವಾಗಿ ಹೋಗುವ ಹಾಗಿವೆ. ಬರುವ ದಶಂಬರ ತಿಂಗಳಲ್ಲಿ ಜನರು ಪುನಹ ಸಾಗುವಳಿ ಕೆಲಸಗಳನ್ನು ಪ್ರಾರಂಭಿಸುವಾಗ ಬಿತ್ತನೆ ಕೆಲಸಗಳ ಬಗ್ಗೆ ಬೀಜ ಮೊದಲಾದ್ದು ಇಲ್ಲದೆ ವಿಪರೀತ ಸಂಕಟಪಡುವ ಸಂಭವವು ಇರುವುದು. ನೆರೆಯಿಂದ ಉಂಟಾದ ಆಪತ್ತಿನ ನಿವಾರಣಾರ್ಥವಾಗಿ ಕರಾಚಿ ಕಲೆಕ್ಟರರವರು ಒಂದು ಫಂಡನ್ನು ಏರ್ಪಡಿಸಿರುವರು.

ದಕ್ಷಿಣ ಹಿಂದೂಸ್ಥಾನ.

೧೯೧೩ ಮೇ ತಿಂಗಳ ಸರಕಾರದವರ ಹುಕುಂ ಪ್ರಕಾರ ಅಕ್ಕಸಾಲಿಗರು ಜಾತಿ ಹೆಸರು ಆಚಾರಿ ಇದ್ದದ್ದನ್ನು ಆಸಾರಿಯಾಗಿ ಮಾಡಿದ್ದು ವಾಚಕರು ಈ ಮೊದಲೇ ತಿಳಿದಿರುವರು. ಹೀಗೆ ಮಾಡಿದ್ದರಿಂದ ತಮಗೆ ಬಹಳ ಅಪಮಾನ ಉಂಟಾಗುವದರಿಂದ ಆಸಾರಿ ಹೆಸರನ್ನು ಮೊದಲಿನಂತೆಯೇ ಆಚಾರಿ ಎಂತ ಮಾಡಬೇಕಾಗಿ ಮುಸಿರಿ ತಾಲೂಕಿನ ಎರಾತುಡಿ ವಿಶ್ವ ಬ್ರಹ್ಮ ಸಭೆಯವರು ಸರಕಾರದವರಿಗೆ ಮನವಿ ಮಾಡಿಕೊಂಡಿರುವರು.

ಮದ್ರಾಸು ಪ್ರಾಂತ್ಯದಿಂದ ಎ ಎಮ್ ಎಸ್ ಎಂಬ ವೈದ್ಯ ಇಲಾಖೆಯ ಶ್ರೇಷ್ಠ ಪರೀಕ್ಷೆಯನ್ನು ಇಂಗ್ಲಾಂಡಿನಲ್ಲಿ ತೇರಲು ಹೋದ ಡಾಕ್ಟರ್ ಎಸ್ ಬಿ ವೇಣುಗೋಪಾಲ ಮತ್ತು ಡಾಕ್ಟರ್ ಶಂಕರ ಶಾಸ್ತ್ರಿ ಎಂಬವರು ತಮ್ಮ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರೆಂಬುದಾಗಿ ತಿಳಿಯುತ್ತೇವೆ

ತಿರುಪತಿಯ ಮಹಂತರವರ ಪೋಷಣೆಯಲ್ಲಿದ್ದ ಸಂಸ್ಕೃತ ಕಾಲೇಜಿಗೆ ತಿರುಪತಿ ದೇವಸ್ಥಾನದಿಂದ ದೂರೆಯುತ್ತಿದ್ದ ದ್ರವ್ಯ ಸಹಾಯವು ಇನ್ನು ಮುಂದೆ ಈ ಕೊಲೇಜಿಗೆ ದೊರಕಲಾರದ್ದರಿಂದ ಈ ಕೊಲೇಜಿನ ಪೋಷಣಾರ್ಥವಾಗಿ ಬೇಕಾದ ದ್ರವ್ಯಸಹಾಯವನ್ನು ಸಂಗ್ರಹಿಸಲು ಒಂದು ಕಮಿಟಿಯು ಏರ್ಪಡಿಸಲ್ಪಟ್ಟಿರುವುದು ಹೈಕೋರ್ಟ ಜಡ್ಜರಾದ ಬಿರ್ ಮಾನಪಟ್ಟ ಜಸ್ಟೀಸ್ ಶೇಷಗಿರಿ ಅಯ್ಯರರವರ ಈ ಕಮಿಟಿಯ ಅಧ್ಯಕ್ಷರಾಗಿರುವರು ಮದರಾಸಿನ ಶೆರೀಫರಾಗಿರುವ ದಿವಾನ್ ಬಹದ್ದೂರ್ ಗೋವಿಂದ ದಾಸ ಚತುರ್ಭುಜದಾಸರವರು ಈ ಕಮಿಟಿಯ ಕೋಶಾಧಿಕಾರಿಗಳಾಗಿರುತ್ತಾರೆ ದೇಶದ ಎಲ್ಲಾ ಕಡೆಗಳಿಂದಲೂ ಈ ಕೊಲೇಜಿನ ಬಗ್ಗೆ ದ್ರವ್ಯ ಸಹಾಯವನ್ನಪೇಕ್ಷಿಸಿ ವಿಜ್ಞಾಪನಾ ಪತ್ರಗಳು ಪ್ರಕಟಿಸಲ್ಪಡುವವು

ಮದರಾಸಿನ ಕೊಂಗ್ರೆಸು ಕಮಿಟಿಯವರು ಲಾಲಾ ಲಾಜಪತ ರೈಯವರು ಈ ವರುಷದ ರಾಷ್ಟ್ರೀಯ ಸಭೆಗೆ ಅಧ್ಯಕ್ಷರಾಗಬೇಕೆಂದು ನಿರ್ಣಯಿಸಿರುತ್ತಾರೆ

ಮದರಾಸು ಬೇಂಕಿನ ಪಾಲು ಮ್ಹಾಲಿಕರ ವರುಷಾವಧಿ ಸಭೆಯು ಈ ತಿಂಗಳ ತಾ ೩ರಲ್ಲಿ ಮದರಾಸಿನಲ್ಲಿ ಜರುಗಿತು ಈ ಬೇಂಕಿನ ಡಿರೆಕ್ಟರರುಗಳ ಪೈಕಿ ಒಬ್ಬರಾದರೂ ದೇಶೀಯರಾಗಿರಬೇಕೆಂದು ಹೈಕೋರ್ಟ ವಕೀಲ್ ಸಿ ಪಿ ರಾಮಸ್ವಾಮಿ ಅಯ್ಯರರವರು ಸೂಚಿಸಿದ ನಿರ್ಣಯವು ಈ ಸಭೆಯಲ್ಲಿ ಮಂಜೂರಾಗಲಿಲ್ಲ

ಕರ್ನೂಲಿನಲ್ಲಿ ೭ ಜನ ಕೋಮಟಿ ಸಾಹುಕಾರರ ಮತ್ತು ಇಬ್ಬರು ಮಾಸ್ತರ ಮೇಲೆ ಇಂಡಿಯನ್ ಪೆನಲ್ ಕೋಡಿನ ೪೫೦ ಸೆಕ್ಷನು ಪ್ರಕಾರ ದಾಖಲಾದ ಒಂದು ಕ್ರಿಮಿನಲ್ ಮೊಕದ್ದಮೆಯ ತನಖಿಯು ಸಬ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ನಡೆಯುತ್ತಿರುವುದು ಮುದ್ದೈಕಡೆ ಹೇಳಿಕೆಯು ಈ ರೀತಿಯಾಗಿರುವುದು ರಾಮಯ್ಯ ಎಂಬ ಗಾಣಿಗನೊಬ್ಬನು ಮುದ್ದೈಯಾಲಿ ಸಾಹುಕಾರರ ಪೈಕಿ ಕೆಲವರಿಂದ ರೂ. ೧೦೦೦ವನ್ನು ಸಾಲವಾಗಿ ಪಡೆದಿದ್ದನು ಈ ರಾಮಯ್ಯನ ಅಳಿಯ ನಾಗಯ್ಯನೆಂಬವನು ತನ್ನ ಮಾವನ ವೃತ್ತಿಯನ್ನನುಸರಿಸಿಕೊಂಡು ಬೇರೊಂದ ಮನೆಯಲ್ಲಿದ್ದನು ಕಳೆದ ಜೂನು ತಿಂಗಳಲ್ಲಿ ಮುದ್ದೈಯಾಲಿಗಳು ಕೋರ್ಟಿನ ಜಪ್ತಿ ಹುಕುಂ ಉಂಟೆಂದು ಹೇಳಿ ರಾಮಯ್ಯನ ಮನೆಯಲ್ಲಿದ್ದ ಎಣ್ಣೆ ಗಾಣ ಮೊದಲಾದವುಗಳನ್ನೂ ಆತನ ಪೆಟ್ಟಿಗೆಯಲ್ಲಿದ್ದ ರೂ ೧೭ನ್ನೂ ಇತರ ಚರಜಂದಿಗೆಗಳನ್ನೂ ಬಲಾತ್ಕಾರದಿಂದ ಒಯ್ದಿರುವರು. ರಾಮಯ್ಯನ ವಸ್ತು ಒಡವೆಗಳನ್ನು ಈ ರೀತಿ ತಕ್ಕೊಂಡುಹೋದ ಬಳಿಕ ನಾಗಯ್ಯನ ಮನೆಗೆ ಹೋಗಿ ಆತನ ಗಾಣ ಮೊದಲಾದ ಸಾಮಗ್ರಿಗಳನ್ನು ಸಹ ಕೊಂಡೊಯ್ದರು. ಇದಾದ ಬಳಿಕ ಸುಜಾಮಲ್‌ಮಲ್ಕ ಎಂಬ ಮಹಮ್ಮದೀಯನೊಬ್ಬನು ತಾನು ಪೋಲಿಸು ಇನ್ಸಪೆಕ್ಟರನಾಗಿರುವನೆಂತಲೂ ಪೋಲಿಸು ಸ್ಟೇಶನಿಗೆ ತನ್ನೊಡನೆ ಬಂದು ಮುದ್ದೈಯಾಲಿಗಳ ಮೇಲೆ ಫಿರ್ಯಾದು ದಾಖಲು ಮಾಡಬಹುದೆಂಬುದಾಗಿ ಹೇಳಿ ರಾಮಯ್ಯನನ್ನು ಮುದ್ದೈಯಾಲಿಗಳಿರುವ ಅಂಗಡಿಗೆ ಕರಕೊಂಡು ಹೋದನು. ಅಲ್ಲಿ ಸಾಹುಕಾರರು ತಕ್ಕೊಂಡು ಹೋಗಿರುವ ಚರಜಂದಿಗೆಗಳು ತನ್ನ ಸಾಲದ ಬಗ್ಗೆ ಅವರಿಗೆ ಒಪ್ಪಿಸಿಕೊಡೋಣಾಗಿವೆ ಎಂತ ಬರದಿಟ್ಟ ಪತ್ರ ಒಂದಕ್ಕೆ ರಾಮಯ್ಯನ ದಸ್ಕತು ಮಾಡಿಸೋಣಾಯಿತು. ರಾಮಯ್ಯನ ಅಳಿಯ ನಾಗಯ್ಯನು ಕಳವಿನ ಫಿರ್ಯಾದನ್ನು ದಾಖಲು ಮಾಡಿದ್ದರಿಂದ ಈ ಮೊಕದ್ದಮೆಯು ಕ್ರಮ ಪ್ರಕಾರ ಪೋಲಿಸಿನವರಿಂದ ತನಖಿ ಮಾಡಲ್ಪಟ್ಟು ಇದರ ಮುಂದಣ ತನಖಿಯು ಪ್ರಕೃತ ಮೇಜಿಸ್ಟ್ರೇಟ ಕೋರ್ಟಿನಲ್ಲಿ ನಡಿಯುತ್ತಿರುವುದು.

"ಮದ್ರಾಸು ಲೊಡಿನ್ಸರ್" ಎಂಬ ಸಂಸ್ಥಾನದ ಎಲ್ಲಾ ಕಡೆಗಳಲ್ಲಿರುವ ವಕೀಲರು, ಎಡ್ವೊಕೇಟ್ ಮತ್ತು ಬ್ಯಾರಿಸ್ಟರ್ ಮೊದಲಾದವರು ಒಟ್ಟುಗೂಡಿ ಮಾಡೋಣಾಗುವ ಔತಣವು ಈ ವರುಷ ಇದೇ ತಿಂಗಳ ತಾ. ೨೩ರಲ್ಲಿ ಮದ್ರಾಸಿನಲ್ಲಿ ಜರುಗುವುದು. ಈ ಔತಣದ ಏರ್ಪಾಡು ಕಳೆದ ವರುಷದಿಂದ ನಡಿಯುತ್ತಲಿದೆ. ಔತಣಕ್ಕೆ ಹೋಗಲಪೇಕ್ಷಿಸುವ ಎಲ್ಲಾ ಜಾತಿ ವರ್ಗದವರಿಗೆ ಯುಕ್ತವಾದ ಏರ್ಪಾಡು ಇರುವುದು. ಹೈಕೋರ್ಟ ಜಡ್ಜರುಗಳು ಈ ಔತಣಕ್ಕೆ ಆಮಂತ್ರಿಸಲ್ಪಡುವರು. ಎಡ್ವೊಕೇಟ್ ಜನರಲರವರು ಈ ಔತಣ ಸಂದರ್ಭದಲ್ಲಿ ಕೂಡುವ ಸಭೆಯ ಅಧ್ಯಕ್ಷರಾಗಿರುವರು.

ಮದ್ರಾಸು ಸಂಸ್ಥಾನದ ಸರಕಾರದವರು ಸಂಸ್ಥಾನದ ಗ್ರಾಮಗಳೆಲ್ಲೆಲ್ಲಾ ಶುದ್ಧವಾದ ಕುಡಿಯುವ ನೀರಿನ ಸರಬರಾಯಿಯು ಜನರಿಗೆ ದೊರಕುವಂತೆ ಬಾವಿಗಳನ್ನು ಆಯಾ ಕಡೆಗಳಲ್ಲಿ ತೋಡಿಸಲಿಕ್ಕೆ ಲೋಕಲ್ ಬೋರ್ಡುಗಳಿಗೆ ವಿಶೇಷ ದ್ರವ್ಯ ಸಹಾಯವನ್ನು ಕೊಡುತ್ತಿರುವರು. ಬಾವಿಗಳನ್ನು ತೋಡಿಸುವ ಈ ಕೆಲಸವು ಶೀಘ್ರವಾಗಿ ನಡಿಯುವಂತೆ ತಾಲೂಕು ಬೋರ್ಡ ಮೆಂಬರುಗಳ ಮತ್ತು ಆಯಾ ಗ್ರಾಮಸ್ಥರ ಸಹಕಾರವನ್ನು ಕೈಕೊಳ್ಳುವುದು ಅಗತ್ಯವೆಂತ ಸರಕಾರದವರು ಸೂಚಿಸಿರುತ್ತಾರೆ ಗ್ರಾಮಗಳಲ್ಲಿ ತೋಡಿಸೋಣಾಗುವ ಬಾವಿ ಕೆಲಸವನ್ನು ಈ ಬಗ್ಗೆ ಆಯಾ ಗ್ರಾಮಸ್ಥರಿಗೆ ಸಂದರ್ಭಾನುಸಾರ ಕೊಡಬಹುದೆಂತಲೂ ಮತ್ತು ಇಂಥಾ ಕೆಲಸಗಳ ಮೇಲ್ವಿಚಾರವನ್ನು ತಾಲೂಕು ಬೋರ್ಡ ಮೆಂಬರರು ತಾವು ಸ್ವತಹ ಮಾಡುವಂತೆ ಮೆಂಬರರನ್ನು ಪ್ರೋತ್ಸಾಹಿಸಬೇಕೆಂತಲೂ ಸರಕಾರದವರು ಸೂಚಿಸಿರುತ್ತಾರೆ.

ಮೈಸೂರು ಸಂಸ್ಥಾನದ ಸರಕಾರದವರು ತಮ್ಮ ಪ್ರಜಾ ವರ್ಗಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸದ ಪ್ರಸರಣೆ ಬಗ್ಗೆ ಬೇಕಾಗುವ ಏರ್ಪಾಡುಗಳನ್ನು ಬಹಳ ಆಸಕ್ತಿಯಿಂದ ಮಾಡುತ್ತಿರುವರು. ಹೊಸ ಪ್ರಾಥಮಿಕ ಶಾಲೆಗಳನ್ನು ತಾವಾಗಿ ಸ್ಥಾಪಿಸುವುದರ ಹೊರತು ಗ್ರಾಮಗಳಲ್ಲಿ ಶಾಲೆಗಳ ಸ್ಥಾಪನೆಯನ್ನು ಪ್ರಜಾ ವರ್ಗಗಳು ಸಹ ಕೈಕೊಳ್ಳುವಂತೆ ಸರಕಾರದ ಯೈಡೆಡ್ ಸಹಾಯ ಹೊಂದುವ ಖಾಸಗಿ ಶಾಲೆಗಳ ಅಭಿವೃದ್ಧಿಯನ್ನು ಸಹ ಮೈಸೂರು ಸರಕಾರದವರು ಸಾಧಿಸುತ್ತಲಿದ್ದಾರೆ. ಯೈಡೆಡ್ ಶಾಲೆಗಳಲ್ಲಿ ಶಾಲಾ ಉಪಾಧ್ಯಾಯರಿಗೆ ಸರಕಾರದ ದ್ರವ್ಯಸಹಾಯ ಕೂಡಿ ರೂ. ೧೦ಕ್ಕೆ ಕಡಮೆಯಾಗದ ಸಂಬಳವು ದೊರಕುವಂತೆ ಗ್ರಾಮಸ್ಥರು ಸಹಾಯ ಮಾಡಬೇಕೆಂತಲೂ, ಇಂಥಾ ಗ್ರಾಮ ಶಾಲೆಗಳನ್ನು ನಡಿಸುವ ಭಾರವನ್ನು ಗ್ರಾಮಸ್ಥರು ವಹಿಸಿಕೊಳ್ಳಬೇಕೆಂತಲೂ ಮೈಸೂರು ಸರಕಾರದವರು ಆಜ್ಞಾಪಿಸಿರುವರು. ಸರಕಾರದ ಇಂಥಾ ಆಜ್ಞೆಯಿಂದ ಮತ್ತು ಇವರಿಂದ ಕೊಡೋಣಾಗುವ ದ್ರವ್ಯ ಸಹಾಯದಿಂದ ವಿದ್ಯಾಸಕ್ತಿಯುಳ್ಳ ಪ್ರಜಾ ಜನರಿಗೆ ವಿದ್ಯಾಭಿವೃದ್ಧಿಯ ಪ್ರಯತ್ನಗಳನ್ನು ಕೈಕೊಳ್ಳಲು ಆಸ್ಪದ ದೊರಕುವುದು. ಹೀಗೆ ಸ್ಥಾಪಿಸೋಣಾಗುವ ಶಾಲೆಗಳಿಗೆ ತರಬೇತು ಹೊಂದಿದ ಉಪಾಧ್ಯಾಯರು ಸಿಕ್ಕುವುದು ದುರ್ಲಭವಾದ್ದರಿಂದ ಕೋಲಾರ ಮತ್ತು ಶಿವಮೊಗ್ಗದಲ್ಲಿರುವ ನೊರ್ಮಲ್ ಶಾಲೆಗಳಲ್ಲಿ ಹೆಚ್ಚಿನ ಉಮೇದ್ವಾರರು ತರಬೇತು ಹೊಂದುವ ಏರ್ಪಾಡು ಮಾಡೋಣಾಗಿರುವುದು. ಮೈಸೂರಿನಲ್ಲಿರುವ ಟ್ರೈನಿಂಗ್ ಶಾಲೆಯನ್ನು ಕೊಲೇಜಾಗಿ ಮಾಡುವರು. ತುಮ್ಕೂರಿನಲ್ಲಿ ಮತ್ತೊಂದು ಟ್ರೈನಿಂಗ್ ಶಾಲೆಯು ತೆರಿಯೋಣಾಗುವುದು. ಈ ರೀತಿ ಮೊದಲು ೨೫೪ ಮಂದಿ ಉಪಾಧ್ಯಾಯರುಗಳಿಗೆ ತರಬೇತು ಹೊಂದಲು ಆಸ್ಪದವಿದ್ದಲ್ಲಿ ಇನ್ನು ಮುಂದೆ ವರುಷ ಒಂದಕ್ಕೆ ೪೪೦ ಜನ ಉಪಾಧ್ಯಾಯರುಗಳಿಗೆ ತರಬೇತು ಹೊಂದಲು ಆಸ್ಪದ ದೊರಕುವುದು.

ಕೊಡಗು. ಕೊಡಗಿನಲ್ಲಿ ಇನ್ನೊಂದು ಭಾರೀ ದರೋಡೆ ಖೂನಿ ನಂಬ್ರವು ವಿಚಾರಣೆಯಲ್ಲಿದ್ದದ್ದು ಕಳೆದ ವಾರದಲ್ಲು ತಾ. ೨೪ರಲ್ಲು ಮಡಿಕೇರಿ ಸೆಶ್ಶನ್ಸ್ ಕೋರ್ಟಿನಲ್ಲಿ ವಿಚಾರದಿಂದ ೯ ಜನರ ಪೈಕಿ ೩ ಜನರು ನಿರಪರಾಧಿಗಳೆಂದು ಬಿಡುಗಡೆ ಆಗಿ ಬಾಕಿ ೬ ಜನರಿಗೆ ೭ ವರುಷಗಳ ಕಠಿಣ ಸಜೆ ವಿಧಿಸಿದ್ದಲ್ಲದೆ ಉಳಿದ ನಾಲ್ಕು ಜನರಿಗೆ ಬಂಕೋಲಿ ಟಾಪು ವಿಧಿಸಲಾಯಿತು.

ಕೊಡಗಿನಲ್ಲು ಈ ವರುಷ ಜುಲೈ ತಿಂಗಳಿಂದ ಈಚೆಗೆ ಸುಮಾರು ೧೫೦ ಇಂಚು ಮಳೆಯಿಂದ ಮೇಲಾಯಿತು. ಕಳೆದ ವರುಷಕ್ಕಿಂತ ⅓ ಅಂಶವು ಹೆಚ್ಚಾಗಿರುತ್ತೆ ಆದರೆ ಈ ಮಳೆ ಕಾಲಕ್ಕೆ ಸರಿಯಾಗಿ ಬೀಳದೆ ಕಾಫಿ ಯಾಲಕ್ಕಿ ಕೃಷಿಗಾರರಿಗೆ ಬಹಳ ನಷ್ಟ ಸಂಭವಿಸಿಯದೆ. ಕಳೆದ ವರುಷದ ನಾಲ್ಕನೇ ೧ ಅಂಶ ಫಲ ಸಿಕ್ಕುವುದು ಕಷ್ಟವಾಗಿರುತ್ತೆ. ಇದರಿಂದ ಕೊಡಗು ನಿವಾಸಿಕರು ಬಹಳ ವ್ಯಸನದಲ್ಲಿ ಇದ್ದಾರೆ.

ಮಂಗಳೂರು ಮೋಟರ್ ಕಂಪನಿಯೆಂಬದು ತಯಾರಾಗಿ ಮಡಿಕೇರಿಗೆ ಬರುವ ಸಪ್ಟಂಬರ ತಿಂಗಳ ಲಾಗಾಯತು ನಡಿಸುತ್ತಾರಾಗಿ ನಾವು ಕೇಳುತ್ತೇವೆ. ಇದರಿಂದ ನಮಗೆ ಅನೇಕ ತರದ ಅನುಕೂಲಗಳು ದೊರೆಕುವದರಿಂದ ಕಂಪೆನಿಗೆ ಬಹಳ ಪ್ರಯೋಜನ ಸಿಕ್ಕುವದೆಂದು ನಂಬಿದ್ದೇವೆ. ಕೊಡಗು ನಿವಾಸಿಕರು ಸಂತೋಷದಿಂದ [illegible] ಎದುರು ನೋಡುತ್ತಾರೆ.

ಯೂರೋಪ್ ಖಂಡದ ಯುದ್ಧ ಕೋಲಾಹಲವು.

ಜರ್ಮನರು ರುಶ್ಯಯಾನರ ಮೇಲೆ ಯುದ್ಧ ಸಾರಿರುವರು
ಜರ್ಮನರು ಫ್ರಾನ್ಸ್ ದೇಶದ ಸರಹದ್ದುಗಳನ್ನು ಒಳನುಗ್ಗಿರುವರು.
ರುಶ್ಯಯಾನರು ಜರ್ಮನಿಯ ಸರಹದ್ದುಗಳನ್ನು ಒಳನುಗ್ಗಿರುತ್ತಾರೆ.
ಸರ್ ಎಡ್ವರ್ಡ್ ಗ್ರೇರವರ ಭಾಷಣ ಸಾರಾಂಶ
ಜರ್ಮನಿ ಮತ್ತು ಗ್ರೇಟ್‌ಬ್ರಿಟನರೊಳಗೆ ಯುದ್ಧವು ಈ ತಿಂಗಳ
ತಾ. 4ನೇ ರಾತ್ರಿ ಸಾರಲ್ಪಟ್ಟಿದೆ.

ಕಳದ ತಿಂಗಳ ತಾ. ೨೮ನೇ ಬೆಳಿಗ್ಗೆ ಸರ್ವಿಯಾ ಮತ್ತು ಒಸ್ಟ್ರಿಯಾ ದೇಶಗಳೊಳಗೆ ಯುದ್ಧವು ಪ್ರಾರಂಭವಾಯಿತು. ಒಸ್ಟ್ರೀಯದ ಸೇನೆಯು ಸರ್ವಿಯಾ ರಾಜಧಾನಿಯ ಮೇಲೆ ಫಿರಂಗಿಗಳನ್ನು ಹಾರಿಸಿ ಆ ಪಟ್ಟಣದಲ್ಲಿದ್ದ ಸೇನೆಯನ್ನೆಲ್ಲಾ ಹೊರಕ್ಕೆ ಹೊರಡಿಸಲು ಒಲತ್ಕರಿಸಿತು. ಸರ್ವಿಯದವರ ಆಯುಧ ಮದ್ದು ಗುಂಡುಗಳನ್ನು ಒಯ್ಯುತ್ತಿದ್ದ ಎರಡು ಹಡಗುಗಳನ್ನು ಒಸ್ಟ್ರೀಯದ ಸೇನೆಯು ಹಿಡಿದಿರುವದು.

ಒಸ್ಟ್ರೀಯದ ಆರ್ಚ್‌ಡ್ಯುಕ್ ಫ್ರಾನ್ಜ್ ಫರ್ಡಿನೆಂಡ್ ಮತ್ತು ಅವರ ಪತ್ನಿಯ ಕೊಲೆಯಲ್ಲಿ ಸರ್ವಿಯಾ ದೇಶದವರು ನಡಿಸಿರುವ ಒಳಸಂಚು "ಜ್ಹೊನ್‌ಬುಲ್" ಎಂಬ ಆಂಗ್ಲ ಪತ್ರದಲ್ಲಿ ಪ್ರಕಟಿಸಲ್ಪಟ್ಟಿರುವುದು. ಕಳದ ಎಂಟು ತಿಂಗಳುಗಳಿಂದ ಒಸ್ಟ್ರಿಯಾ ಸಾಮ್ರಾಜಕ್ಕೆ ಏನಾದರೂ ಹಾನಿ ತರಬೇಕೆಂಬುವ ಉದ್ದೇಶದಿಂದ ಸರ್ವಿಯಾದವರು ಒಂದು ಗುಪ್ತ ಸಮಿತಿಯನ್ನು ಲಂಡನಿನಲ್ಲಿ ಸರ್ವಿಯಾದ ರಾಜದೂತರು ಇರುವ ಸ್ಥಳದಲ್ಲಿ ಏರ್ಪಡಿಸಿದ್ದರು ಸರ್ವಿಯಾ ದೇಶದ ಪೂರ್ವ ದಿಕ್ಕಿನ ಸರಹದ್ದುಗಳನ್ನು ಒಸ್ಟ್ರೀರಿಯದ ಸೇನೆ ಮುಖಾಂತರ ಉಲ್ಲಂಘಿಸುವ ಉದ್ದೇಶದಿಂದ ಒಸ್ಟ್ರಿಯಾದವರು ಬಲ್ಗೇರಿಯಾದವರಿಗೆ ಯುದ್ಧ ಸಾಮಾಗ್ರಿಗಳನ್ನೂ ಹಣವನ್ನೂ ಸಂಗ್ರಹಿಸಿಕೊಡುತ್ತಿದ್ದರೆಂಬದನ್ನು ಸರ್ವಿಯಾ ದೇಶವು ತಿಳಿದಿತ್ತು. ಇದೇ ಕಾಲದಲ್ಲಿ ಸರ್ವಿಯಾ ದೇಶದ ಅನೇಕ ಏಜಂಟರುಗಳನ್ನು ಒಸ್ಟ್ರಿಯಾದ ಅಧಿಕಾರಿಗಳು ಹಿಡಿದು ಕೈದಿನಲ್ಲಿಟ್ಟಿದ್ದರೆಂಬುದು ಸರ್ವಿಯಕ್ಕೆ ಗೊತ್ತಿತ್ತು. ಕಳದ ಫೆಬ್ರವರಿ ತಿಂಗಳಲ್ಲಿ ಸರ್ವಿಯಾದವರು ಸೆರೆಯಲ್ಲಿಟ್ಟಿದ್ದ ಒಸ್ಟ್ರಿಯಾದ ಏಜಂಟರನ್ನು ಯಾರಿಗೂ ತಿಳಿಯದಂತೆ ಕೊಲ್ಲುವುದೆಂತ ನಿರ್ಣಯಿಸಿದರು. ಈ ನಿರ್ಣಯವು ಒಸ್ಟ್ರಿಯದ ರಾಜಬಾರಿಗೆ ತಿಳಿದ್ದರಿಂದ ಈ ರಾಜಬಾರಿಯು ಈ ನಿರ್ಣಯವನ್ನು ಒಸ್ಟ್ರಿಯಾದ ಗುಪ್ತ ಫೌಜಿನ ಸೇನಾನಾಯಕರಿಗೆ ತಿಳಿಸಿದರು. ಸರ್ವಿಯಾ ಮತ್ತು ಒಸ್ಟ್ರಿಯಾ ದೇಶಗಳೊಳಗಣ ವಿದ್ಯಮಾನಗಳು ಹೀಗಿರುತ್ತಾ ಸರ್ವಿಯದ ಗುಪ್ತ ಸಮಿತಿಯವರು ಒಸ್ಟ್ರಿಯ ದೇಶದ ಯುವರಾಜನನ್ನು ಕೊಲ್ಲಲೆತ್ನಿಸಬೇಕೆಂದು ನಿಶ್ಚಯಿಸಿ ಈ ಬಗ್ಯೆ ಬೇಕಾದ ಸಂಚಿಕೆಯನ್ನು ಗುಪ್ತವಾಗಿ ನಡಿಸ ಹತ್ತಿದರು ಒಸ್ಟ್ರಿಯಾದ ಯುವರಾಜನನ್ನು ಕೊಂದವನಿಗೆ ೨೦೦೦ ಪವನುಗಳ ಇನಾಮು ಮತ್ತು ಈ ಭಯಂಕರ ಕೃತ್ಯಕ್ಕೆ ಬೇಕಾದ ಖರ್ಚು ಸಹ ಕೊಡೋಣಾಗುವುದೆಂದು ಈ ಗುಪ್ತ ಸಮಿತಿಯವರಿಂದ ನಿರ್ಣಸಲ್ಪಟ್ಟಿತ್ತು. ಒಸ್ಟ್ರಿಯಾದ ಯುವರಾಜ ಮತ್ತು ಅವರ ಪತ್ನಿಯವರು ಕೊಲ್ಲಲ್ಪಟ್ಟ ವಿವರವು ವಾಚಕರಿಗೆ ಈ ಮೊದಲೇ ತಿಳಿದಿರುವುದು. ಈ ಕೊಲೆಯು ಮೇಲೆ ಹೇಳಿದ ರೀತಿ ಸರ್ವಿಯಾ ದೇಶದವರಿಂದ ಸಾಧಿಸಲ್ಪಟ್ಟಿತೆಂಬುದು "ಜೋನ್‌ಬುಲ್" ಪತ್ರಿಕೆಗೆ ಸಿಕ್ಕಿದ ಒಂದು ದಾಖಲೆಯಿಂದ ಖಚಿತವಾಗುತ್ತದೆಂದು ಈ ಪತ್ರಿಕೆಯಲ್ಲಿ ಬರಿಯೋಣಾಗಿಯದೆ. ಲಂಡನಿನಲ್ಲಿ ಸರ್ವಿಯಾ ದೇಶದ ರಾಜದೂತರಿರುವ ಆಪೀಸನ್ನು ಕಳದ ಎಪ್ರಿಲ್ ತಿಂಗಳಲ್ಲಿ ಬೆಲ್‌ಗ್ರೇಡ್ ಮೆನಶನ್ ಹೊಟೇಲಿನಿಂದ ಕ್ವೀನ್ಸ್‌ಗೇಟ್ ಎಂಬಲ್ಲಿಗೆ ಒಯುತ್ತಿದ್ದಾಗ ಆ ಆಪೀಸಿನಲ್ಲಿದ್ದ ಕೆಲವು ಪತ್ರಗಳನ್ನು ಹರಿದು ಸುಟ್ಟುಹಾಕಿದರು. ಹೀಗೆ ಸುಟ್ಟುಹಾಕೋಣಾದ ಪತ್ರಗಳಲ್ಲ ಅರೆವಾಸಿ ಸುಟ್ಟುಹೋದ ಪತ್ರದಿಂದ ಸರ್ವಿಯದವರ ಒಳ ಸಂಚು ಸ್ಪಷ್ಟವಾಗಿ ಕಂಡುಬರುವುದೆಂತ ಜ್ಹೊನ್‌ಬುಲ್ ಪತ್ರದಲ್ಲಿ ಹೇಳೋಣಾಗಿದೆ ಈ ರೀತಿ ಘಾತುಕಿಯಾದ ಸರ್ವಿಯಾ ದೇಶದ ಇರವನ್ನೇ ನಾಶಗೊಳಿಸಬೇಕೆಂದು ಜ್ಹೋನ್‌ಬುಲ್ ಪತ್ರವು ಸೂಚಿಸಿರುವುದು

ಜುಲೈ ತಾ ೨೮ರಲ್ಲು ರುಷ್ಯಾ ದೇಶದ ಚಕ್ರವರ್ತಿಯವರು ತಮ್ಮ ದೇಶವಲ್ಲ ಅಲ್ಲಲ್ಲಿ ದಳವೆತ್ತಲು ಆಜ್ಞಾಪಿಸಿರುತ್ತಾರೆ ಜರ್ಮನಿಯವರು ತಮ್ಮ ದೇಶದಲ್ಲಿ ದಂಡು ಕಟ್ಟಲು ಆಜ್ಞಾಪಿಸುವ ಪಕ್ಷದಲ್ಲಿ ರುಷ್ಯಾ ದೇಶದಲ್ಲಿ ಪೂರ್ಣವಾಗಿ ದಳವೆತ್ತಲು ಆಜ್ಞಾಪಿಸುವೆವೆಂಬ ವರದಿಯನ್ನು ರುಷ್ಯಾ ದೇಶದವರು ಜರ್ಮನಿಯವರಿಗೆ ತಿಳಿಸಿರುವರು

ಒಸ್ಟ್ರಿಯಾ ಸರಕಾರದವರ ಸಂದೇಶಕ್ಕೆ ಸರ್ವಿಯಾ ಸರಕಾರದವರು ಕೊಟ್ಟ ಉತ್ತರವು ಅಸಮಾಧಾನಕರವಾಗಿರುವದೆಂತ ಒಸ್ಟ್ರಿಯಾ ಸರಕಾರದವರು ತಿಳಿಸಿರುತ್ತಾರೆ ಸರಜೇವೊದಲ್ಲಿ ನಡದ ಯುವರಾಜರ ಕೊಲೆಯಲ್ಲಿ ಸರ್ವಿಯಾ ಸರಕಾರದವರು ತಾವಾಗಿಯೇ ತನಖಿ ನಡಿಸಬೇಕಾಗಿತ್ತೆಂದು ಒಸ್ಟ್ರಿಯಾ ಸರಕಾರದವರು ಆಕ್ಷೇಪ ಹೇಳಿರುವರು

ಲಂಡನಿನಲ್ಲಿರುವ ಆಯಾ ದೇಶಗಳ ರಾಯಭಾರಿಗಳ ಸಭೆಯನ್ನು ಕೂಡಿಸಿ ಒಸ್ಟ್ರಿಯಾ ಮತ್ತು ಸರ್ವಿಯಾ ದೇಶಗಳೊಳಗಣ ವಾದಗಳನ್ನು ತೀರಿಸುವುದುತ್ತಮ ಎಂಬ ಸರ್ ಎಡ್ವರ್ಡ್ ಗ್ರೇರವರ ಸೂಚನೆಯನ್ನು ಇಟಲಿ ಫ್ರಾನ್ಸ್ ಮತ್ತು ರುಶ್ಯ ದೇಶದವರು ಸ್ವೀಕರಿಸಿದರು ಆದರೆ ಇದಕ್ಕೆ ಜರ್ಮನರ ಮತ್ತು ಒಸ್ಟ್ರಿಯಾ ದೇಶದವರ ಸಮ್ಮತಿಯಿಲ್ಲದ್ದರಿಂದ ಇದು ಬಿದ್ದು ಹೋಯಿತು.

ಒಸ್ಟ್ರಿಯಾ ದೇಶದ ಯುವರಾಜರ ಕೊಲೆಯನ್ನು ಗೈದ ಸರ್ವಿಯಾ ದೇಶಕ್ಕೆ ದಂಡೆತ್ತಿ ಬಂದು ಒಸ್ಟ್ರಿಯಾ ದೇಶದವರು ಸರ್ವಿಯಾದವರನ್ನು ಶಿಕ್ಷಿಸಲು ಒಂದು ವೇಳೆ ರುಶ್ಯ ದೇಶದವರ ಆಕ್ಷೇಪವಿರದಾದರೂ ಸರ್ವಿಯಾ ದೇಶದ ರಾಜಧಾನಿಯಾದ ಬೆಲ್‌ಗ್ರೇಡ್‌ನ್ನು ಕೈವಶಮಾಡಿಕೊಂಡು ಬಳಿಕ ಒಸ್ಟ್ರಿಯಾ ದೇಶದವರಿಗೆ ಸರ್ವಿಯಾವನ್ನು ತಮ್ಮ ಸಾಮ್ರಾಜ್ಯಕ್ಕೆ ಕೂಡಿಸಿಕೊಳ್ಳುವ ಆಲೋಚನೆಯುಂಟಾಗುವ ಸಂಭವವಿರುವುದರಿಂದ ರುಶ್ಯ ದೇಶದವರು ಸರ್ವಿಯಾ ದೇಶವು ಒಸ್ಟ್ರಿಯಾದವರ ಕೈವಶವಾಗದಂತೆ ತಕ್ಕ ಸಹಾಯವನ್ನು ಮಾಡಲು ಯುದ್ಧ ಸನ್ನಹವನ್ನು ಮಾಡಿದರು.

ಜರ್ಮನಿಯಲ್ಲಿ ನೌಕಾ ಫೌಜನ್ನು ಯುದ್ಧಕ್ಕೆ ಸಿದ್ಧಗೊಳಿಸುತ್ತಿರುವರು.

ಒಸ್ಟ್ರಿಯಾ ದೇಶವು ಸರ್ವಿಯಾ ದೇಶದೊಡನೆ ಯುದ್ಧವನ್ನು ಸಾರಿರುವುದು.

ಈ ಯುದ್ಧ ಕೋಲಾಹಲದಿಂದ ವ್ಯಾಪಾರವು ಮಂದವಾಗಿ ಬರುತ್ತಿರುವುದು. ಜರ್ಮನಿಯ ಸೇವಿಂಗ್ಸ್ ಬೇಂಕಿನಿಂದ ಹಲವರು ತಮ್ಮ ಹಣವನ್ನು ವಾಪಸು ಪಡಕೊಳ್ಳುತ್ತಿರುವರು.

ಒಸ್ಟ್ರಿಯಾ ಮತ್ತು ಸರ್ವಿಯಾ ದೇಶಗಳೊಳಗೆ ಯುದ್ಧ ಉಂಟಾದ್ದನ್ನು ಕೇಳಿ ಗವರ್ನಮೆಂಟ ಸೆಕ್ಯೂರಿಟಿಗಳೆಂಬ ಸರಕಾರದ ಭದ್ರತಾ ಪತ್ರಗಳ ಮೌಲ್ಯವು ಅಲ್ಪಸ್ವಲ್ಪ ಕಡಮೆಯಾಗಿರುವುದು ಹುಂಡಿಗಳನ್ನು ವಟಾಯಿಸುವ ದರವು ಬಹಳ ಹೆಚ್ಚಿರುವುದು ಯೂರೋಪಿಗೆ ವಯ್ಯೋಣಾಗುವ ಸಾಮಗ್ರಿಗಳ ವಿಮೇ ದರವು ಅದಿಕವಾಗಿ ವ್ಯಾಪಾಟವು ನಿಂತು ಹೋಗಿರುವುದು

ಅಮೇರಿಕದ ಸಂಯುಕ್ತ ಸಂಸ್ಥಾನದ ನ್ಯೂಯೋರ್ಕ ಪಟ್ಟಣದಲ್ಲಿ ಈ ಯುದ್ಧದ ದೆಸೆಯಿಂದ ಗೋಧಿ ಧಾರಣೆಯು ಶೇಕಡಾ ೧೦ರಂತೆ ಏರಿರುವುದು ಕಾಪಿ ಮತ್ತು ಅರಳೆ ಧಾರಣೆಯು ತಗ್ಗಿರುವುದು ನ್ಯೂಯೋರ್ಕನಲ್ಲಿ ಒಂದೇ ಒಂದು ದಿವಸದಲ್ಲಿ ೧೨ ಮಿಲಿಯ ಬಶ್ಶಲುಗಳಷ್ಟು ಗೋಧಿಯು ವಿಕ್ರಯಿಸಲ್ಪಟ್ಟಿತು.

ಯುರೋಪ ಖಂಡದ ಎಲ್ಲಾ ರಾಜ್ಯಗಳಲ್ಲಿಯೂ ಯುದ್ಧ ಸನ್ನಾಹವನ್ನು ಮಾಡುತ್ತಿರುವರು

ಯುದ್ಧವು ಆಗಕೂಡದೆಂಬದಾಗಿ ಜರ್ಮನಿಯ ಬರ್ಲಿನ್ ಪಟ್ಟಣದಲ್ಲಿ ಸಮಾಜ ಹಿತೇಚ್ಛುಗಳ ೨೯ ಸಭೆಗಳು ಕೂಡಿದವು. ಆದರೆ ಈ ಸಭೆಗಳಲ್ಲಿ ಭಾಷಣಗಳು ಕೇಳಬಾರದಂತೆ ಯುದ್ಧ ಹಾಡುಗಳ ವಿಶೇಷ ಗದ್ದಲವಿತ್ತು

ಇಟ್ಯಾಲಿಯಲ್ಲಿ ಈ ಯುದ್ಧದ ವಿಷಯ ಮಂತ್ರಿಗಳಲ್ಲಿ ಅಭಿಪ್ರಾಯ ಭೇದವು ಉಂಟಾಗಿರುವುದು ಯುದ್ಧವನ್ನು ತಾವು ಸೇರದೆ ಸುಮ್ಮನಿರಬೇಕೆಂದು ಅಲ್ಲಿಯ ಮುಖ್ಯ ಮಂತ್ರಿಯವರು ಹಟವಿಡಿದಿರುವರು.

ಒಸ್ಟ್ರಿಯದ ರಾಜಧಾನಿಯಲ್ಲಿ ದವಸುಗಳ ಕ್ರಯವು ಶೇಕಡಾ ೫೦ರಂತೆ ಹೆಚ್ಚಿದೆ.

ಇಂಥಾ ಯುರೋಪಿಯ ಜನಾಂಗಗಳ ಯುದ್ಧ ಸಂದರ್ಭದಲ್ಲಿ ಬ್ರಿಟಿಷರು ತಮ್ಮ ರಾಜ್ಯದಲ್ಲಿರುವ ರಾಜಕೀಯ ರಕ್ಷಭೇದಗಳನ್ನು ಕೂಡಲೇ ಅಳಿಸಿಕೊಂಡು ಏಕೀಭವಿಸಿ ಈ ಅಪೂರ್ವ ಸಂದರ್ಭದಲ್ಲಿ ಎದುರಾಡಲು ಸಿದ್ಧರಾಗಿರಬೇಕೆಂದು ಲಂಡನ್ ಟ್ಯಾಮ್ಸ ಪತ್ರಿಕೆಯು ಸೂಚಿಸಿರುವುದು

ಜುಲೈ ತಾ. ೩೦ರಲ್ಲು ಜರ್ಮನಿಯ ಸರಕಾರದ ಬೇಂಕಿನಲ್ಲಿ ಜನರು ಕರೆನ್ಸಿ ನೋಟುಗಳನ್ನು ಚಿನ್ನದ ನಾಣ್ಯಗಳನ್ನು ಪಡಿಯುತ್ತಿರುವರು. ಇತರ ಸಾಧಾರಣ ಬೇಂಕುಗಳು ಜರ್ಮನಿಯಲ್ಲಿ ನೋಟುಗಳನ್ನು ವಟಾಯಿಸಲು ನಿರಾಕರಿಸಿರುತ್ತವೆ.

ಲಂಡನಿನಲ್ಲಿ ಕೊನಸೊಲ್ಸ ಎಂಬ ಸರಕಾರದ ಸಾಲ ಪತ್ರಗಳ ಮೌಲ್ಯವು ೬೯||ಗೆ ತಗ್ಗಿರುವುದು. ಕೊನಸೊಲ್ ಸಾಲ ಪತ್ರಗಳನ್ನು ೭೦|| ದರದಲ್ಲಿ ಸರಕಾರದವರು

[illegible]ರುವರು. ಲಂಡನಿನಲ್ಲಿ ಮತ್ತು ಗ್ಲೆಸ್‌ಗೌನಲ್ಲಿ [illegible] ಏಳು ವ್ಯಾಪಾರ ಸಂಸ್ಥೆಗಳು ದಿವಾಳಿ [illegible]ವವು. ಕೊನ್ಸೊಲ್‌ಗಳ ಕ್ರಯವು [illegible] [illegible]ು. ಬೇಂಕುಗಳಲ್ಲಿ ಬಡ್ಡಿ ದರವು ಹೆಚ್ಚಿಸ[illegible] [illegible]ಂತ ನಿರೀಕ್ಷಿಸಲ್ಪಟ್ಟಿದೆ. ಗೋಧಿಯ ಕ್ರಯ [illegible] [illegible] ಪ್ರಕಾರವೂ ಇತರ ದವಸುಗಳ ಕ್ರಯವು ಒಂದು [illegible]ಪ್ರಕಾರವೂ ಹೆಚ್ಚಿರುವುದು ಯುರೋಪು ಖಂ[illegible] [illegible]ಗುತ್ತದ ಪರವಾಗಿ ಬೇಂಕುಗಳಿಂದ ಹಿಂದ [illegible] ಚಿನ್ನವು ೯,೧೧೦೦೦ ಪವನುಗಳಷ್ಟಾಗಿರು[illegible] [illegible] ಎಕ್ಸ್‌ಚೇಂಜ್ ಬೇಂಕುಗಳ ವಹಿವಾಟ [illegible]ೋಗಿ [illegible]ದು. ಇಂಥಾ ಸ್ಥಿತಿಯು ಈ ವರೆ [illegible] ಹೇಳುತ್ತಾರೆ.

[illegible] ಮತ್ತು ರುಷ್ಯಾದೇಶದ ಸರಹದ್ದುಗಳಲ್ಲಿ [illegible]ಶನುಗಳನ್ನು ಸೇನೆಯವರ ವಶ ಕೊಟ್ಟಿರು[illegible]

[illegible]ಬ್ರಿಟಿಷ ಮಂತ್ರಿಗಳ ಸಭೆಯು ಕೂಡಿ ಈ ಸಂದರ್ಭ[illegible]ಲ್ಲಿ ತಮ್ಮ ಸರಕಾರದವರು ಮಾಡತಕ್ಕದ್ದೇನೆಂಬುದನ್ನು ಪರ್ಯಾಲೋಚಿಸುತ್ತಾರೆ.

ಸರ್ವಿಯದವರಿಗೆ ಅವರ ನೆರೆ ರಾಜ್ಯದವರಾದ ಮೊಂಟೆನಿಗ್ರೊದವರು ಒಂದುದೊಡ್ಡ ಸೇನೆಯನ್ನು ಕೂಡಿಸಿಕೊಂಡು ಪ್ರಿಬೊಗ್ ಎಂಬಲ್ಲಿ ಸರ್ವಿಯಾದವರಿಗೆ ಸಹಾಯವನ್ನು ಮಾಡುತ್ತಿರುವರು.

ಸರ್ವಿಯಾ ದೇಶದ ರಾಜಧಾನಿಯಾದ ಬೆಲ್‌ಗ್ರೇಡಿನಲ್ಲಿಯೂ ಒಸ್ಟ್ರಿಯಾದ ರಾಜಧಾನಿಯಾದ ವಿಯಾನ್ನಾದಲ್ಲಿಯೂ ಉಂಟಾಗುವ ಎಂಥಾ ಪ್ರಸ್ತಾಪವಾದರೂ ಹೊರಗೆ ಹೋಗದಂತೆ ಟೆಲಿಗ್ರಾಫ್ ಆಫೀಸುಗಳನ್ನು ನಿರ್ಬಂಧಿಸಿರುವರು ಆಸ್ಟ್ರಿಯದವರು ಬೆಲ್‌ಗ್ರೇಡಿಗೆ ಸಮೀಪ ವಿರುವ ಸಂಕವನ್ನು ಮುರಿದು ಬಿಟ್ಟು ಬೆಲಗ್ರೇಡಿನಲ್ಲಿರುವ ಸರ್ವಿಯರ ಸೇನೆಯನ್ನು ಹಿಮ್ಮೆಟ್ಟಿಸಿಬಿಟ್ಟರು ಬೆಲಗ್ರೇಡಿಗೆ ಬೆಂಕಿ ಬಿದ್ದಿರುವದೆಂದೂ ಅಲ್ಲಿರುವ ಅರಮನೆಯು ಹಾಳು ಮಾಡಲ್ಪಟ್ಟಿತೆಂದೂ ವಿಯನ್ನಾದಿಂದ ವರ್ತಮಾನ ಬಂದಿರುವುದು.

ರುಷ್ಯನರು ಒಸ್ಟ್ರಿಯಾ ದೇಶಕ್ಕೆ ತಾಗಿರುವ ತಮ್ಮ ಸರಹದ್ದುಗಳಲ್ಲಿ ಸೇನೆಯನ್ನು ಒಟ್ಟು ಕೂಡಿಸುತ್ತಿರುವರು ಜರ್ಮನರು ರುಷ್ಯನರನ್ನು ಅನುಸರಿಸುತ್ತಿರುವರು. ರುಷ್ಯ ಮತ್ತು ಜರ್ಮನ ದೇಶಗಳೊಳಗೆ ನಡಿಯುತ್ತಿರುವ ಸಂಧಾನ ಪ್ರಯತ್ನಗಳು ಬಿದ್ದುಹೋದವು.

ಭೂಮಧ್ಯ ಸಾಗರದಲ್ಲಿ ಮಾಲ್ಟಾ ದ್ವೀಪದಲ್ಲಿರುವ ಬ್ರಿಟಿಷ್ ನೌಕಾ ಸೈನ್ಯಕ್ಕೆ ಸೇನೆಯನ್ನು ಒಟ್ಟು ಕೂಡಿಸಿ ಮುಂಜಾಗ್ರತೆಯಾಗಿರಬೇಕೆಂದು ಆಜ್ಞೆ ಕೊಡೋಣಾಗಿದೆ. ಸೇನೆಯವರಲ್ಲಿ ರಜೆಪಡದವರಿದ್ದರೆ ಅಂಥವರ ರಜೆಯು ವಜಾಮಾಡಲ್ಪಟ್ಟು ಕೆಲಸಕ್ಕೆ ಬರಬೇಕೆಂದು ವಿಧಿಸೋಣಾಗಿರುವುದು. ಅಮೇರಿಕದ ಬ್ರಿಟಿಷ ಕೆನಡಾ ದೇಶದಲ್ಲಿ [illegible] ಇತರ ಬ್ರಿಟಿಷ ರಾಜ್ಯಗಳಲ್ಲಿಯೂ ಭೂಸೇನೆಯೂ ನೌಕಾಸೇನೆಯೂ ತಕ್ಕ ಜಾಗರೂಕತೆಯಲ್ಲಿರುವುದು. ಭೂಮಧ್ಯ ಸಾಗರದಲ್ಲಿರುವ ನೌಕಾ ಸೈನ್ಯವೆಲ್ಲವನ್ನು ಮೆಲ್ಟಾದಲ್ಲಿ ಒಟ್ಟು ಕೂಡಿಸಿರುತ್ತಾರೆ. ವೇಲ್ಸ ದ್ವೀಪದ ಕಲ್ಲಿದ್ದಲನ್ನು ಇತರರಿಗೆ ಕೊಡದೆ ತಮಗೇನೇ ಕೂಡಿಡಬೇಕಾಗಿ ತಾಕೀತುಮಾಡೋಣಾಗಿರುವುದು.

ಯುದ್ಧವು ಯೂರೋಪ ಖಂಡದಲ್ಲೆಲ್ಲಾ ಪ್ರಸರಿಸದೆ ಒಸ್ಟ್ರಿಯಾ ಮತ್ತು ಸರ್ವಿಯಾ ದೇಶಗಳೊಳಗೆ ಮಾತ್ರವಿರುವದೆಂಬ ಆಶೆಯು ಲಂಡನಿನಲ್ಲಿ ನಿರಾಶೆಯಾಗಿ ಹೋಯಿತು. ಇಂಗ್ಲಾಂಡು ಬೇಂಕಿನ ದರವು ಸೇಕಡಾ ೪ಕ್ಕೆ ಏರಿರುವುದು.

ಒಸ್ಟ್ರಿಯಾ ದೇಶದ ಸೇನೆಯು ಬೆಲಗ್ರೇಡಿನಲ್ಲಿ ಸರ್ವಿಯಾದವರೊಡನೆ ಕಾದಾಡಿದ ನಂತರ ಡೆನ್ಯುಬ ನದಿಯನ್ನು ದಾಟಿ ಸರ್ವಿಯಾದಲ್ಲಿ ಮುಂದೊತ್ತಿ ಹೋಗುತ್ತಿರುವರೆಂತ ತಿಳಿದುಬರುತ್ತದೆ.

ರುಶ್ಯ ದೇಶದವರು ಬಹಳ ಹೆಚ್ಚೆಚ್ಚಾಗಿ ಸೇನೆಯನ್ನು ಒಟ್ಟು ಕೂಡಿಸುತ್ತಿರುವರೆಂತ ಲಂಡನಿನಲ್ಲಿ ತಿಳಿದು ಬಂದಿದೆ. ರುಶ್ಯ ದೇಶಕ್ಕೆ ಪಶ್ಚಿಮ ಉತ್ತರ ಕರಾವಳಿಯಲ್ಲಿರುವ ಸಮುದ್ರ ದೀಪಸ್ತಂಭಗಳಲ್ಲಿ ರಾತ್ರೆಕಾಲ ದೀಪ ಉರಿಸಕೂಡದೆಂಬ ಆಜ್ಞೆಯಾಗಿದೆ ಅಂಗ್ಲೇಯರು ಶಾಂತತೆಯನ್ನುಂಟುಮಾಡಲು ಇನ್ನೂ ಪ್ರಯತ್ನಿಸುತ್ತಿರುತ್ತಾರೆ

ರುಶ್ಯದ ಸರಕಾರವು ಯಾಕೆ ಸೇನೆಯನ್ನು ಕೂಡಿಸುತ್ತಿರುವುದೆಂಬುದಕ್ಕೆ ಸಮರ್ಪಕವಾದ ಉತ್ತರವನ್ನು ಕೊಡಬೇಕೆಂದು ಜರ್ಮನರು ರುಶ್ಯ ದೇಶದ ಸರಕಾರವನ್ನು ಕೇಳಿರುವರು ಬ್ರಿಟಿಷರ ನೌಕಾ ಸೈನ್ಯವು ಪೋರ್ಟಲೆಂಡಿನಿಂದ ಹೊರಟದ್ದನ್ನು ಕೇಳಿ ಮತ್ತು ಪೂರ್ವ ಸಮುದ್ರದಲ್ಲಿ ಜಪಾನೀಯರ ಸಹಾಯದ ಭರವಸೆಯನ್ನು ತಿಳಿದು ರುಷ್ಯ ದೇಶದವರು ಕಾಳಗವನ್ನೇ ಅಪೇಕ್ಷಿಸಿರುವರು ಜರ್ಮನಿಯಲ್ಲಿ ರಾಜಧಾನಿಯಾದ ಬರ್ಲಿನ್ ನಗರದಿಂದ ಅಲ್ಲಿಯ ಸನ್ನಾಹಗಳ ವಾರ್ತೆಯು ಹೊರಗೆ ಹೋಗದಂತೆ ತಂತೀ ಟಪ್ಪಾಲು ಆಫೀಸುಗಳಲ್ಲಿ ಕಾವಲು ಇಟ್ಟಿರುತ್ತಾರೆ

ಅಂಗ್ಲಾಳವನ್ನು ಕಾಡಿಸುತ್ತಿದ್ದ ಹೋಮ್‌ರೂಲ್ ತಿದ್ದುಪಡಿ ಮಸೂದೆ ವಾದವನ್ನು ಮುಂದರಿಸಿಡುವರೆ ಬ್ರಿಟಿಷ ಪಾರ್ಲಿಮೆಂಟಿನಲ್ಲಿ ಎಲ್ಲಾ ಪಂಗಡದವರು ಒಪ್ಪಿಕೊಂಡಿರುವರು.

ಯುರೋಪ ಖಂಡದಲ್ಲಿ ಭಯಂಕರವಾದ ಈ ಯುದ್ಧವು ತಲೆದೋರಿದ್ದರಿಂದ ಯೂರೋಪ ರಾಜ್ಯಗಳಿಗೆ ಹೊರಟಿರುವ ಹಡಗುಗಳು ಅಲ್ಲಲ್ಲಿ ನಿಂತಿವೆ ಭೂಲೋಕದ ಎಲ್ಲಾ ಪ್ರಾಂತ್ಯಗಳ ಹಡಗುಗಳ ಮೂಲಕ ನಡೆಯುವ ವಹಿವಾಟವು ಅವ್ಯವಸ್ಥೆಯಲ್ಲಿ ಬಿದ್ದದೆ. ಜರ್ಮನ ದೇಶದಿಂದ ದವಸಧಾನ್ಯಗಳು ರವಾನಗೆ ಕೂಡದೆಂದು ಆ ದೇಶದ ಸರಕಾರದವರು ಆಜ್ಞಾಪಿಸಿರುವರು. ಜರ್ಮನಿಯಲ್ಲಿ ಯುದ್ಧಕಾಲಿಕ ಶಾಸನದ ಜ್ಯಾರಿಯು ನಡಿಯುತ್ತಿರುವುದು ಈ ಶಾಸನದ ಪ್ರಕಾರ ರೈಲ್ವೆ ಪೋಸ್ಟು ಮತ್ತು ಟೆಲಿಗ್ರಾಫು ಇಲಾಖೆಗಳು ಪೂರ್ಣವಾಗಿ ಸೇನೆಯವರ ಅಧಿಕಾರದಲ್ಲಿರುವವು

ಲಂಡನಿನಲ್ಲಿ ಇಂಗ್ಲಾಂಡು ಬೇಂಕಿನ ಡಿಸ್‌ಕೌಂಟ ದರವು ಸೇಕಡಾ ಲಕ್ಕೆ ಏರಿರುವುದು. ಕರೆನ್ಸಿ ನೋಟುಗಳನ್ನು ಕೊಟ್ಟು ಸಾವಿರಾರು ಜನರು ಚಿನ್ನದ ನಾಣ್ಯಗಳನ್ನು ಪಡಿಯುತ್ತಿರುವರು.

ಮುಂಬಾಯಿ, ಕಲ್ಕತ್ತಾ, ಮದ್ರಾಸು ಪಟ್ಟಣಗಳಲ್ಲಿರುವ ಪ್ರೆಸಿಡೆನ್ಸಿ ಬೇಂಕುಗಳಲ್ಲಿಯೂ ಇಂಡಿಯಾ ಸರಕಾರದವರ ಕೊಡೆಯೂ ಸಹ ಹಣ ಠೇವಣಾತಿಯು ವಿಶೇಷವಿರುವುದರಿಂದ ಯುರೋಪ ಖಂಡದ ಯುದ್ಧದಿಂದ ಹಣದ ಡಚಣೆಯು ಹಿಂದೂಸ್ಥಾನದಲ್ಲಿ ಉಂಟಾಗದೆಂದು ತಿಳಿಯುತ್ತೇವೆ. ಈ ಕಾರಣದಿಂದ ಇಂಗ್ಲಾಂಡು ಬೇಂಕಿನ ಡಿಸ್‌ಕೌಂಟು ದರವು ಹೆಚ್ಚಿದರೂ ಪ್ರೆಸಿಡೆನ್ಸಿ ಬೇಂಕುಗಳಲ್ಲಿ ಈ ದರವು ಹೆಚ್ಚಿರುವದಿಲ್ಲ. ಹೀಗಿದ್ದರೂ ಯುದ್ಧದಿಂದ ಜನರಲ್ಲಿ ಉಂಟಾದ ಗಲಿಬಿಲಿಯಿಂದ ಸರಕಾರದ ಭದ್ರತಾಪತ್ರಗಳ ಮೌಲ್ಯವು ಅಲ್ಪಸ್ವಲ್ಪ ತಗ್ಗುತ್ತಾ ಇದೆ. ಯುರೋಪ ಖಂಡದ ಹುಂಡಿಗಳನ್ನು ಚಲಾಯಿಸುವುದು ಕಡಮೆಯಾಗಿದೆ. ಪರರಾಜ್ಯಗಳಿಗೆ ಹೋಗುವ ಹಡಗುಗಳ ವಿಮೇದರವು ಸೇಕಡಾ ೩ ಮತ್ತು ೪ಕ್ಕೆ ಏರಿರುವಾಗ ಅಂಗ್ಲಾಳಕ್ಕೆ ಹೋಗುವ ಹಡಗಗಳ ವಿಮೇದರವು ಸೇಕಡಾ ೧೧ರಂತಿರುವುದು

ರುಶ್ಯನರು ಒಸ್ಟ್ರಿಯಾ ದೇಶದ ರೈಲ್ವೆ ಸಂಕವೊಂದನ್ನು ಮುರಿದು ಬಿಟ್ಟಿರುವರೆಂತ ಬರ್ಲಿನ್ ನಗರದಿಂದ ತಿಳಿದು ಬರುವುದು.

ಹೊಲ್ಲೆಂಡ್ ಮತ್ತು ಬೆಲ್ಜಿಯಮ್ ದೇಶಗಳಲ್ಲಿ ಸಹ ಸೇನೆಗಳನ್ನು ಒಟ್ಟುಕೂಡಿಸುತ್ತಿರುವರು.

ಅಂಗ್ಲಾಳದ ಸಫ್ರೆಜೆಟ್ ಸ್ತ್ರೀಯರುಗಳು ತಮ್ಮ ಚಳವಳಗಳನ್ನು ನಿಲ್ಲಿಸಿ ಬಿಟ್ಟಿರುತ್ತಾರೆ.

ಬ್ರಿಟಿಷ್ ಕೆನಡಾ ಮೊದಲಾದ ಬ್ರಿಟಿಷ್ ಸ್ವಾಸ್ಥ್ಯಗಳು ಸಾಮ್ರಾಜ್ಯಕ್ಕೆ ಬೇಕಾದ ಸಹಾಯವನ್ನು ಕೊಡಲು ಸಿದ್ಧವಿರುವೆವೆಂತ ವಿಜ್ಞಾಪಿಸಿಕೊಂಡಿರುವರು.

ಇಟೇಲಿ ದೇಶದವರು ಮಾಡತಕ್ಕದ್ದೇನೆಂಬುದನ್ನು ಆ ದೇಶದ ಮಂತ್ರಿಗಳು ಇನ್ನು ನಿಶ್ಚಯಿಸಿರುವದಿಲ್ಲ.

ಹಿಂದೂಸ್ಥಾನದಲ್ಲಿ ಸೇನಾ ಆಫೀಸರರಿಗೆ ಕೊಡೋಣಾದ ರಜೆಯು ವಜಾ ಮಾಡಲ್ಪಟ್ಟಿದೆ ಮುಂಬಾಯಿ ರೇವಿನ ಗೇಟುಗಳನ್ನು ರಾತ್ರೆ ಹಗಲು ಕಾಯುವ ಏರ್ಪಾಡು ಮಾಡೋಣಾಗಿದೆ ಮುಂಬಾಯಿಯಲ್ಲಿದ್ದ ೧೧೦ ಜನ ಜರ್ಮನರಲ್ಲಿ ಸೇನೆಯಲ್ಲಿ ಸೇವೆ ಮಾಡದೆ ಇದ್ದ ೧೫ ಜನರು ಜರ್ಮನಿಗೆ ಹೊರಡಬೇಕೆಂಬ ಆಜ್ಞೆ ಬಂದಿದೆ. ಮುಂಬಾಯಿ ಬಂದರದಲ್ಲಿರುವ ಕಲ್ಲಿದ್ದಲೆಲ್ಲವನ್ನು ಸರಕಾರದವರು ತಕ್ಕೊಳ್ಳುತ್ತಿರುವರು ಲಂಡನ್ ಮತ್ತು ಒರಿಸ್ಸಾ ನಡುವೆ ಇರುವ ತಂತಿಗಳು ಕಡಿಯಲ್ಪಟ್ಟಿರುವುದರಿಂದಲೂ ಗ್ರೇಟ್ ನೋರ್ತನ್ ಕಂಪೆನಿಯ ತಂತಿಗಳಲ್ಲಿ ಟೆಲಿಗ್ರಾಮುಗಳು ಬಹಳ ವಿಪರೀತವಾಗಿ ಹೆಚ್ಚಿರುವುದರಿಂದಲೂ ಹಿಂದೂಸ್ಥಾನದಿಂದ ಸುವೇಜ್ ಮಾರ್ಗವಾಗಿ ಕಳುಹಿಸಬೇಕಾಗುವ ತಂತೀ ವರ್ತಮಾನಗಳನ್ನು ವರ್ತಮಾನಗಳ ಮಾಲಿಕರ ಜವಾಬ್ದಾರಿ ಮೇಲೆ ಕಳುಹಿಸೋಣಾಗುವವಲ್ಲದೆ ವರ್ತಮಾನಗಳು ಮುಟ್ಟುವರೆ ವಿಳಂಬವಾದ್ದಲ್ಲಿ ಟೆಲಿಗ್ರಾಫ್ ಇಲಾಖೆಯವರು ಜವಾಬ್ದಾರರಲ್ಲವೆಂಬ ನೋಟೀಸು ಪ್ರಕಟಿಸಲ್ಪಟ್ಟಿರುವುದು.

ಮದ್ರಾಸಿನಲ್ಲಿ ಸಹ ಸರ್ವಿಯಾ ಮತ್ತು ಒಸ್ಟ್ರಿಯಾ ದೇಶಗಳ ಯುದ್ಧದಿಂದ ವ್ಯಾಪಾರ ವೈವಾಟಗಳಲ್ಲಿ ಗಲಿಬಿಲಿ ಉಂಟಾಗಿದೆ. ಪರದೇಶಗಳ ಹುಂಡಿಗಳನ್ನು ಚಲಾಯಿಸುವುದು, ಪರದೇಶಗಳಿಗೆ ಹಣಗಳನ್ನು ಕಳುಹಿಸುವ ಮೊದಲಾದ ಬೇಂಕುಗಳ ವೈವಾಟವು ನಿಂತುಹೋಗಿದೆ. ಮದರಾಸಿನ ಸೈಂಟ್ ಜೋರ್ಜ ಕೋಟೆಯ ಒಂದು ಬಾಗಿಲ ಹೊರತು ಬಾಕಿ ಎಲ್ಲಾ ಬಾಗಿಲುಗಳು ಮುಚ್ಚಲ್ಪಟ್ಟಿವೆ. ಕೋಟೆಗೆ ಬಂದು ಹೋಗುವ ಜನರೆಲ್ಲರನ್ನು ನೋಡುತ್ತಿರುವ ಹಾಗೆ ಕೋಟೆಯ ಬಾಗಿಲಲ್ಲಿ ಪಾರ ಹಾಕಿರುವರು. ಮದರಾಸು ಬಂದರವನ್ನು ಹಾದುಹೋಗುತ್ತಿರುವ ಅಥವಾ ಮದರಾಸು ಬಂದರಕ್ಕೆ ಬರುತ್ತಿರುವ ಹಡಗುಗಳನ್ನು ಕಾದು ನೋಡುವ ಏರ್ಪಾಡು ಮಾಡೋಣಾಗಿರುವುದು.

ಆಗೋಸ್ತು ತಾ. ೧:—ಬ್ರಿಟಾನ ಮತ್ತು ರುಷ್ಯ ದೇಶಗಳೊಳಗೆ ಹಡಗುಗಳ ವೈವಾಟವು ನಿಂತುಹೋಗಿರುವುದು. ಅಂಗ್ಲಾಳವು ಮಾಡಿದ ಸಂಧಾನದ ಪ್ರಯತ್ನಗಳು

(ಪುಟ 11ನೇ A. ನೋಡಿ.)

(ಪಾನು ೯ರಿಂದ ಮುಂದರಿಸಿದ್ದು).

ದಕ್ಷಿಣ ಕನ್ನಡ.

ಬಂಗ್ರಮಂಜೇಶ್ವರ. ಇದೇ ತಾ. ೩ರಲ್ಲು ಇಲ್ಲಿ ಒಂದು ಅದ್ಭುತವಾದ ಅವಗಢವು ಸಂಭವಿಸಿತು. ಪಶ್ಚಿಮ ಕಡೆಯಲ್ಲಿ ಸಮುದ್ರ ಕಿನಾರೆಯಲ್ಲಿ ಆಕಾಶದಿಂದ ಒಂದು ಮೋಡವು ಹೊಗೆಯ ಆಕಾರದಿಂದ ಗುಜು ಗುಜು ಶಬ್ದದೊಡನೆ ಕೆಳಗಿಳಿದು ಅಲ್ಲಿಂದ ಸುಮಾರು ೩೦ ಮಾರು ಅಗಲದಿಂದ ಪೂರ್ವಕ್ಕೆ ಪ್ರಬಲವಾಗಿ ಬೀಸಲು ಪ್ರಾರಂಭಿಸಿತು. ಹೊಗೆಯು ನೀರೂ ಕೂಡಾ ಹಾರುತ್ತಾ ಎದುರಿಗೆ ಸಿಕ್ಕಿದ ಮನೆಗಳನ್ನೂ, ಮರ ಮಟ್ಟುಗಳನ್ನೂ ಕೆಡಹಿ ವನಕರುಗಳು ಗುಡ್ಡೆಗೆ ಹೋಗುವ ರೈಲ್ವೇ ದಾರಿಯ ಅಡಿ ಸಂಕದಿಂದ ದಾಟಿ ಕಡಂಬಾರು ಅತ್ತಕಡೆಗೆ ಕೆಲವು ಮನೆ ಮಾಡುಗಳನ್ನು ಕೆಡಹಿ ಎದುರಿಗೆ ಸಿಕ್ಕಿದ ಒಬ್ಬ ಸಣ್ಣ ಹುಡುಗನನ್ನು ಕೂಡಾ ಮೇಲಕ್ಕೆ ಹಾರಿಸಿ ಮರದ ಗೆಲ್ಲು ಸೊಪ್ಪುಗಳೊಂದೊಡಗೂಡಿ ಬಾಯಾರು ಅತ್ತಕಡೆ ಹಳ್ಳಿಗಳಿಗೆ ಹೋಗಿ ಹೀಗೆಯೇ ಅವಘಡವನ್ನು ಸಂಭವಿಸಿರುತ್ತದೆ. ಬಜಾರಿನಲ್ಲಿ ಏನೊಂದೂ ಅಪಾಯ ಸಂಭವಿಸದ್ದು ಶ್ರೀದೇವರ ಅನುಗ್ರಹವೇ'

~~~~~~

ಕುಂಬಳೆ—ಇಲ್ಲಿ ಪರಸ್ಪರ ಸಹಾಯಕ ಸಂಘವನ್ನು ಏರ್ಪಡಿಸುವದಾಗಿ ಈ ಮೊದಲು ಕೂಡಿದ ಸಭೆಯಲ್ಲಿ ತೀರ್ಮಾನಿಸಿ ಸಂಘದ ಮೇಲಾಧಿಸರರಿಗೆ ಬರಕೊಂಡಿದ್ದರೂ ಇದರ ಫಲಿತಾಂಶವೇನೆಂತ ಈವರೇಗೆ ತಿಳಿದು ಬಾರದ್ದರಿಂದ ಅಂದಿನ ಸಭಾ ನಾಯಕರು ಇದನ್ನು ಪುನರಾಲೋಚಿಸುವರೆಂತ ನಂಬುತ್ತೇವೆ.

ಇಲ್ಲಿಯ ಮಾರ್ಕೆಟು ರಸ್ತೆಯಲ್ಲಿ ಅಂಗಡಿಗಳನ್ನು ಕಟ್ಟಿಸುವರೆ ಸ್ಥಳ ದರ್ಖಾಸ್ತುಗಳನ್ನಪೇಕ್ಷಿಸಿ ವ್ಯಾಪಾರಸ್ಥರು ಈ ಮೊದಲು ಮಾನ್ಯ ಕಲೆಕ್ಟರ್ ದೊರೆಗಳವರಿಗೆ ಬರಕೊಂಡದ್ದಕ್ಕೆ ಪೆರ್ಡಾಲ ರಸ್ತೆಯುಲ್ಲಿ ಕೇಳಬಹುದಾಗಿ ಹುಕುಂ ಆದ್ದರಿಂದ ಈಗ ಬಡ ವ್ಯಾಪಾರಸ್ಥರನೇಕರು ಪೆರ್ಡಾಲ ರಸ್ತೆಯಲ್ಲಿ ಸ್ಥಳಗಳನ್ನು ಕೊಡಿಸುವಂತೆ ಮಹಾರಾಜಶ್ರೀ ತಾಲೂಕು ತಹಸಿಲ್‌ದಾರರವರ ಮೂಲಕ ಮನವಿಗಳನ್ನು ಮಾಡಿಕೊಂಡಿರುತ್ತಾರೆ ಇದರಿಂದ ಶಹಾರು ದೊಡ್ಡದಾಗಿ ಅಂಗಡಿಗಳ ಅನಾನುಕೂಲತೆಯೂ ವಿಪರೀತ ಬಾಡಿಗೆಯ ಕಷ್ಟವೂ ಪರಿಹಾರವಾಗುವಲ್ಲಿ ಸಂದೇಹವಿಲ್ಲಾ

ನಮ್ಮ ನೆರೆ ಗ್ರಾಮದ ಜವಿಾನದಾರ ಮ ರಾ ರಾ ಕಂಬಾರ ಕುಂಞಾಲಿಬ್ಯಾರಿ ಸಾಹೇಬರವರು ಪುತ್ತೂರು ತಾಲೂಕು ಬೋರ್ಡು ಸಭೆಯ ಮೆಂಬರರಾಗಿ ನೇಮಕವಾದ್ದು ಶ್ಲಾಘನೀಯವಾಗಿದೆ.

~~~~~~

ಮಂಗಳೂರು

ಇದೇ ಬರುವ ತಾ. ೧೪ನೇ ಶುಕ್ರವಾರ ಇಲ್ಲಿಯ ಸ್ಟುಡೆಂಟ್ಸ್ ಬ್ರದರ್‌ಹೂಡ್‌ರವರಿಂದ ಗಣಪತಿ ಶಾಲೆಯಲ್ಲಿ ಏರ್ಪಡಿಸುವ ಕೃಷ್ಣಜಯಂತೀ ಉತ್ಸವದ ಸಂದರ್ಭದಲ್ಲಿ ಘಂಟೆ ೫-೧೫ಕ್ಕೆ ರಾ| ಅತ್ತಾವರ ಬಾಲಕೃಷ್ಣಶೆಟ್ರವರು 'ಸುಶೀಲ'ದ ವಿಷಯ ಒಂದು ಉಪನ್ಯಾಸವನ್ನು ಕೊಡುವರು ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫರಾದ ರಾ| ಎಸ್. ವೆಂಕಟಸುಬ್ಬರಾವ್‌ರವರು ಈ ಸಂದರ್ಭದಲ್ಲಿ ಅಧ್ಯಕ್ಷಸ್ಥಾನವನ್ನು ವಹಿಸಿಕೊಳ್ಳುವರು.

ಗವರ್ನರ ದೊರೆಗಳವರು ಈ ಜಿಲ್ಲೆಗೆ ಅಕ್ಟೋಬರ ತಿಂಗಳ ತಾ. ೨೫ರಲ್ಲಿ ಬರುವ ಸಂಭವವಿಲ್ಲವೆಂತಲೂ ನವಂಬರ ತಿಂಗಳ ಪ್ರಥಮ ಹಪ್ತೆಯಲ್ಲಿ ಇಲ್ಲಿಗೆ ಬರುವರೆಂಬದಾಗಿಯೂ ವರ್ತಮಾನ ವಿರುವುದು

ಕಾಫಿ ಕಳವಿನ ಮೊಕದಮೆಯಲ್ಲಿ ರಾ| ಪಸಾರಿ ವಿಟ್ಟಪ್ಪ ಪ್ರಭುಗಳನ್ನು ಹ್ಯಾಕೋರ್ಟಿನಲ್ಲಿ ಜಾಮಿಾನಿನ ಮೇಲೆ ಬಿಡಬೇಕೆಂಬದಾಗಿ ಅಪ್ಪಣೆಯಾಗಿದೆಂತ ತಿಳಿಯುತ್ತೇವೆ. ಬೊಳಂತೂರು ಸರ್ವೋತ್ತಮಪ್ರಭುಗಳನ್ನೂ ಅವರ ಪಾಲುಗಾರರನ್ನೂ ಸಹ ಜಾಮಿಾನಿನ ಮೇಲೆ ಬಿಟ್ಟಿರುವರು

ಕುಂದಾಪುರ ಡಿವಿಜನಲ್ ಆಪೀಸರರ ಸರ್ಕೀಟು:— ತಾ. ೯-ಹಿರಿಯಡ್ಕ ತಾ. ೧೦-ಹಿರಿಯಡ್ಕ, ತಾ. ೧೧-೧೬ ಕಾರ್ಕಳ ತಾ ೧೮-ಉಡುಪಿ

ಕಾರ್ಕಳ ತಾಲೂಕು ದುರ್ಗ ಗ್ರಾಮದಲ್ಲಿರುವ ಮಲಿಬೆಟ್ಟು ವೆಂಕಟೇಶಸೀತಾರಾಮ ಭಟ್ಟರಿಗೆ ರಾತ್ರೆ ಅವರ ಮನೆ ಚಾವಡಿಯಲ್ಲಿ ಇದೇ ಕಳದ ತಾ. ೨೯ನೇ ರಾತ್ರೆ ಯಾರೋ ಕೋವಿಯಿಂದ ಗುಂಡು ಹೊಡೆದು ಕೊಲ್ಲಲು ಪ್ರಯತ್ನಿಸಿದರೆಂತ ಒಬ್ಬ ಬಾತ್ಮೀದಾರರು ಬರೆದಿರುವರು.

ಇಲ್ಲಿ ಅಸಿಸ್ಟಾಂಟ ಕಲೆಕ್ಟರಾಗಿದ್ದ ಮೇ. ಬ್ರಿಸ್ಲಿ ದೊರೆಗಳವರಿಗೆ ಇಲ್ಲಿಂದ ಮದುರಾ ಜಿಲ್ಲೆಗೆ ವರ್ಗವಾಗಿರುವುದು.

ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯ ವಿಷಯ ಅದರ ಪಾಲು ಮಾಲೀಕರಲ್ಲೊಬ್ಬರು ಕೆಲವು ಆಕ್ಷೇಪಗಳನ್ನು ನಮಗೆ ತಿಳಿಸಿರುವರೆಂತ ಹಿಂದಿನ ಒಂದು ಸಂಚಿಕೆಯಲ್ಲಿ ಸೂಚಿಸಿದ್ದೆವು ಈ ಆಕ್ಷೇಪಗಳನ್ನು ವಿಚಾರಿಸಿ ನೋಡಿದ್ದಲ್ಲಿ ಆಧಾರವಿಲ್ಲವುಗಳೆಂದು ತಿಳಿದಿದ್ದೇವೆ ಕೊಯಂಬುತ್ತೂರಿನಿಂದ ಪೊಲ್ಲಾಚಿಗೆ ಹೋಗುವ ಮೋಟರ್ ಗಾಡಿಗಳ ಸರ್ವಿಸನ್ನು ನಾವು ಸ್ವತಃ ಹೋಗಿ ನೋಡಿ ಬಂದದ್ದರಿಂದ ನಮ್ಮ ಜಿಲ್ಲೆಯಲ್ಲಿ ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯವರು ಸ್ಥಾಪಿಸಬೇಕೆಂದು ಕೈಕೊಂಡಿರುವ ಮೋಟರ್ ಸರ್ವೀಸು ಇಲ್ಲಿ ಸಹ ಪೂರ್ಣ ಸಾಧ್ಯವೂ, ಅನುಕೂಲವೂ ಹೇಗೆ ಆಗಿರುವುದೆಂಬುದನ್ನು ಮುಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸುವೆವು. ತನ್ಮಧ್ಯ ಈ ಕಂಪೆನಿಯವರು ಈ ಬಗ್ಗೆ ಮಾಡುವ ಪ್ರಯತ್ನಗಳನ್ನು ಇಲ್ಲಿಯ ಮಹಾ ಜನರು ಪ್ರೋತ್ಸಾಹಿಸಬೇಕೆಂದು ಅಪೇಕ್ಷಿಸುತ್ತೇವೆ

ಕಳದ ಸಂಚಿಕೆಯಲ್ಲಿ 'ಸುದಾಮಯ್ಯ'ನವರು ನಿರಾಶ್ರಿತ ಜನ ಸಹಾಯಕ ಸಂಘಕ್ಕೆ ಏತಕ್ಕೆ ಸಹಾಯ ಮಾಡಬೇಕೆಂದು ಬರದ ಲೇಖನದ ಬಗ್ಗೆ ಇಲ್ಲಿಯ ನಿರಾಶ್ರಿತ ಜನ ಸಹಾಯಕ ಸಂಘದ ಕಾರ್ಯದರ್ಶಿಗಳು 'ಸುದಾಮಯ್ಯ'ನವರನ್ನು ಬಹಳವಾಗಿ ವಂದಿಸಿರುವರು

ಈ ಪತ್ರಿಕೆಯ ಕಳದ ಮೇ ತಿಂಗಳ ತಾ. ೨೨ನೇ ಸಂಚಿಕೆಯಲ್ಲಿ ಹೂ ಮಾರ್ಕೆಟುಗಳ ಎದುರಿರುವ "ಪುತ್ತು ಪ್ರಭುಗಳ ಓಣಿ" ಎಂಬ ರಸ್ತೆಯಲ್ಲಿರುವ ಹೊಲಸು ನಾತ ವಿಷಯ ಬಾತ್ಮೀದಾರರೊಬ್ಬರು ಬರೆದಿದ್ದರಷ್ಟೆ' ಪಟ್ಟಣದಲ್ಲಿ ಬೇರೆ ಅನೇಕ ರಸ್ತೆಗಳ ದುರುಸ್ತಿ ಕೆಲಸವನ್ನು ಮುನಿಸಿಪಾಲಿಟಿಯವರು ನಡಿಸಿದ್ದಾಗ್ಯೂ ಈ ರಸ್ತೆಯ ಗೋಜಿಗೆ ಇನ್ನೂ ಹೋಗದೆ ಇದ್ದದ್ದು ಬಹಳ ಆಶ್ಚರ್ಯವೇ ಸರಿ. ಇನ್ನಾದರೂ ಇದಕ್ಕೆ ನಿಗಾ ಕೊಟ್ಟು ತಕ್ಕ ದುರುಸ್ತಿಯನ್ನು ಮಾಡುವರಾಗಿ ನಂಬುತ್ತೇವೆ.

ಮಂಗಳೂರು ತಾಲೂಕು ಬಾರೆ ಕಚೇರಾರ ಮಾಗಣೆ ಮಣಿನಾಲ್ಕೂರ ಗ್ರಾಮದಲ್ಲಿ ಮ| ರಾ| ರಾ| ಸರಾಫ ನಗರ ದಾಮೋದರ ಶ್ಯಾನುಭಾಗರವರ ಆರವಾರ ಹಕ್ಕಿನ ಭೂಮಿಯಲ್ಲಿ ಒಂದು ಅಡಿಕೆ ಮರಕ್ಕೆ ೮ ಗೆಲ್ಲುಗಳೂ ಮತ್ತೊಂದಕ್ಕೆ ೨ ಗೆಲ್ಲುಗಳೂ ಇರುವುದಾಗಿ ತಿಳಿದುಬಂದಿದೆ.

ಕಳದ ಜುಲೈ ತಿಂಗಳಲ್ಲಿ ಮಂಗಳೂರು ಮುನಿಸಿಪಾಲಿಟಿಯಲ್ಲಿ ೧೫೧ ಜನನಗಳು ಮತ್ತು ೧೩೦ ಮರಣಗಳು ಆದವು.

ಟೌನ್ ಸರ್ವೇಯರ ರಾ ಸಿ. ಕೃಷ್ಣರಾಯರಿಗೆ ಒಂದು ತಿಂಗಳ ರಜೆಕೊಟ್ಟಿರುವುದರಿಂದ ಅವರ ಬದಲಿಗೆ ಉಡುಪಿ ತಾಲೂಕು ಆಫೀಸಿನ ೫ನೇ ಕ್ಲಾರ್ಕರಾಗಿರುವ ರಾ. ಎಚ್ ರಾಮರಾಯರು ಮೊಕತ್ತರಾಗಿರುವರು

ಕಾಪಿ ಕಳವಿನ ಮೊಕದಮೆ—ಕಳವಿನ ಕಾಫಿಯನ್ನು ಪಡಕೊಂಡ ಮಾಪಿಳ್ಳೆರಿಬ್ಬರ ತನ್ಕಿಯು ಕಳದ ಜುಲೈ ತಾ ೩೧ ಮತ್ತು ಆಗೋಸ್ತು ತಾ. ೧ರಲ್ಲಿ ನಡಿಸಲ್ಪಟ್ಟಿತು ಪಸಾರಿ ವಿಟ್ಟಪ್ಪ ಪ್ರಭುಗಳ ತನ್ಕಿಯು ನಡಿಯುತ್ತಲಿದೆ. ಸರ್ವೋತ್ತಮ ಪ್ರಭುರ ತನ್ಕಿಯು ತಾ ೧೭ಕ್ಕೆ ಮುಂದರಿಸಿಟ್ಟಿರುವರು.

ಒಬ್ಬ ಬಾತ್ಮೀದಾರರಿಂದ:—ಅತ್ತಾವರದಲ್ಲಿರುವ ಮುಂಡತ್ತಾಯ ಎಂಬ ದೈವದ ಭಂಡಾರ ಕೊಟ್ಟಿಗೆಯು ಇದೇ ತಿಂಗಳ ತಾ. ೨ನೇ ಆದಿತ್ಯವಾರ ರಾತ್ರೆ ೨ ಘಂಟೆಗೆ ಅಕಸ್ಮಾತ್ ಬೆಂಕಿ ತಾಗಿ ಸುಟ್ಟುಹೋಯಿತು. ಇದರಿಂದ ದೈವದ ಭಂಡಾರಕ್ಕೆ ಸುಮಾರು ಒಂದುವರೆ ಸಾವಿರ ರೂಪಾಯಿ ನಷ್ಟವಾಗಬಹುದು. ಈ ದೈವಸ್ಥಾನಕ್ಕೆ ಯೋಗ್ಯರಾದ ಅನೇಕ ಮೊಕ್ತೇಸರರಿರುವರು. ಹೆಚ್ಚಿನವರು ಮನಸ್ಸು ಕೊಡದೇ ಇದ್ದಾಗ್ಯೂ ಮಹಾರಾಜಶ್ರೀ ಅತ್ತಾವರ ಸಾಂತಾಳ್ವರು ಕಳದ ನಾಲ್ಕು ವರ್ಷಗಳಿಂದ ಇಲ್ಲಿ ನಡಿಯಬೇಕಾದ ಪಂಚಪರ್ವಗಳನ್ನೂ, ನಾದುರುಸ್ತಿಯಲ್ಲಿದ್ದ ಕಟ್ಟಡ ವಗೈರೆಯನ್ನೂ ತನ್ನ ಸ್ವಂತ ಖರ್ಚಿನಿಂದ ದುರುಸ್ತಿ ಮಾಡಿಸಿ ವಂತಿಗೆ ಕೊಡುವ ಬಡವರ ಭಾರವನ್ನು ಕಡಿಮೆ ಮಾಡಿದರು. ಈಗ ಸುಟ್ಟುಹೋಗಿರುವ ಕಟ್ಟೋಣವನ್ನೂ, ಸಾಮಾನುಗಳನ್ನೂ ಹೊಸತಾಗಿ ಮಾಡಿಸಲಿಕ್ಕೆ ಸುಮಾರು ಮೂರು ಸಾವಿರ ರೂಪಾಯಿ ಬೇಕಾಗುವದು. ಈ ಖರ್ಚನ್ನು ಬಡವರಮೇಲೆ ಹೊರಿಸದೆ ಮ. ರಾ ರಾ. ಸಾಂತಾಳ್ವರ ಹಾಗೆ ಇತರ ಮೊಕ್ತೇಸರರೂ ಮನಸ್ಸುಕೊಟ್ಟು ದೈವಸ್ಥಾನದ ಜೀರ್ಣೋದ್ಧಾರ ವಗೈರೆಯ ಕೆಲಸಗಳನ್ನು ಮಾಡುವರಾಗಿ ನಂಬುತ್ತೇವೆ,

~~~~~~

WANTED.

A Supervisor for Co-operative Societies in the Uppinangady Taluk, with head quarters at Puttur. Pay Rs. 20 per mensem (inclusive of travelling charges). A fair knowledge of English and a thorough grasp of Co-operative principles, especially the practical working there of and of accounting and auditing is essential

Applications to reach the undersigned by the end of August 1914.

M. Ananta Rao,
Secretary.
The South Canara
Central Co-operative Bank, L
Puttur, South Canára.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O P 79/1914

ಮಹಾಲಿಂಗಗೌಡ ಕೂಡಾ—ಅರ್ಜಿದಾರರು.

ಮತ್ತು

ಮರಿಯಮ್ಮ—ರ್‍ಸಪಾಂಡೆಂಟಳು

ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನಂದರೆ —

ಆರಿಕಾಡಿ ಗ್ರಾಮದಲ್ಲಿ ಮೃತಪಟ್ಟ ಕುಂಞಾಲಿ ಬ್ಯಾರಿಗೆ 15 – 5 – 05ಲ್ಲು ಕುಂಞಣ್ಣಗೌಡನು ಬರಕೊಟ್ಟ ಅಡವು ದಸ್ತಾವೇಜಿನ ಅಸಲು ಬಡ್ಡಿ ಐವಜನ್ನು ವಸೂಲು ಮಾಡುವರೆ ವಾರಿಸು ಸರ್ಟಿಫಿಕೇಟು ಅಪೇಕ್ಷಿಸಿ ಅರ್ಜಿದಾರರು ಈ ಕೋರ್ಟಿಗೆ ಮನವಿ ಮಾಡಿರುತ್ತಾರೆ ಸದರಿ ಅರ್ಜಿ ತನಿಕೆಯು ತಾ 27 – 8 – 14ಕ್ಕೆ ಆಗಿರುತ್ತದೆ

ಮಂಗಳೂರು.
ತಾ 29 – 7 – 14.

Pangal Subba Rau.
ಅರ್ಜಿದಾರರ ಕಡೆ ವಕೀಲ್.

~~~~~~

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಅವ್ವಲ್ ಮಸ್ಕತಿ ಅಕ್ಕಿ	5 – 6 – 0 – 5 – 11 – 0
ದುಯಂ ,, ,,	5 – 0 – 0 – 5 – 4 – 0
ಸುಗ್ಗಿ ,,	5 – 1 – 0 – 5 – 4 – 0
ಗಾಡಿ ಸುಗ್ಗಿ ,,	4 – 14 – 0 – 4 – 15 – 0
ಗುಡ್ಡು ,,	5 – 1 – 0 – 5 – 4 – 0
ದುಯಂ ಗುಡ್ಡು ,,	4 – 15 – 0 – 5 – 0 – 0
ಅವ್ವಲ್ ಬೆಳ್ತಿಗೆ ,,	5 – 10 – 0 – 5 – 12 – 0
ಗುಡ್ಡು ಬೆಳ್ತಿಗೆ ,,	5 – 2 – 0 – 5 – 4 – 0
ರಂಗೂನು ಬೆಳ್ತಿಗೆ ಬೆಳ್ತಿಗೆ ,,	9 – 2 – 0 9 – 6 – 0
ಗೋದಿ ಗೋಣಿ ೧ರ	12 – 8 – 0
ಹುರುಳಿ ಗೋಣಿ ೧ರ	8 – 0 – 0
ಕಡಲೆ ಗೋಣಿ ೧ರ	10 – 8 – 0
ತೊಗರಿ ಗೋಣಿ ೧ರ	13 – 0 – 0
ತೊಗರಿ ಬೇಳೆ ಗೋಣಿ ೧ರ	12 – 0 – 0 – 15 – 0 – 0
ಉದ್ದು ಗೋಣಿ ೧ರ	10 – 8 – 0
ಊರು ಬೆಲ್ಲ ಖಂಡಿ ೧ರ	55 – 0 – 0
ಉಪ್ಪು ಗೋಣಿ ೧ರ	4 – 0 – 0
ಕೊಬ್ರಿಹಿಂಡಿ ಖಂಡಿ ೧ರ	29 – 0 – 0
ಎಳ್ಳಿಂಡಿ ಖಂಡಿ ೧ರ	30 – 0 – 0 – 35 – [illegible] – 0
ಕೊಬ್ರಿ ಎಣ್ಣೆ ಮಣ ೧ರ	6 – [illegible] – 0
ಎಳ್ಳೆಣ್ಣೆ ಮಣ ೧ರ	7 – [illegible] – 0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	5 – 4 – 0
ಮೋರಿಸ್ ಸಕ್ಕರೆ ಮಣ ೧ರ	3 – 12 – 0
ಕಾಫಿ ಖಂಡಿ ೧ರ	200 – 0 – 0 – 215 – 0 –
ಬೀಗೋಟು ಖಂಡಿ ೧ರ	120 – 0 –
ತಾಂಬ್ರ ತಗಡು ಮಣ ೧ರ	16 – 8 –
,, ಪಾತ್ರೆಗಳು ,,	21 – 0 –
ಚೀನಿ ಬೆಳ್ಳಿ ಸೇರು ೧ರ	20 – 4 –
ಕಬಿಣ ಖಂಡಿ ೧ರ	30 – 0 –

~~~~~~
~~~~~~



ಎಲಂಬಿಕ್ ವೆಜಿಟೆಬಲ್ ಟೋನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ಥಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವದು. ರಕ್ತ ಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲಿಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ನಿವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಬೇಧಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ನುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಅಂಡ್ ಕೊ. **S. VAIDYA & Co.,**
ಪಾರ್ಕ್ ಟೌನು, ಮದ್ರಾಸು. *Park Town, Madras.*

"ಆಯೊನಿಕ್ ಫಾರ್ಮಸಿ"

ಎಂಬ ಔಷಧ ಪರಿಶೋಧನಾ ಗೃಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯುಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್.ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂಧುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) ಬ್ಲಡ್ ಪ್ಯುರಿಫ್ಯಾಯಿಂಗ್ ಸೊಲ್ಯುಷನ್ ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು. ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ಥಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co., **ಎಸ್. ವೈದ್ಯಾ ಅಂಡ್ ಕೊ.**
Park Town, Madras. ಪಾರ್ಕ್ ಟೌನ್ ಮದ್ರಾಸು.

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮುಗ್ರಿಗಳು ಬೇಕಾದರೂ, **ಪಿ. ಡಿ. ನೀಲಕಾಂತ ಎಂಡ್ ಕೊ. ಬೆನಾರಿಸ್ ಸಿಟಿ** ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು. ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉಡುವು ತೊಡುವುಗಳನ್ನು ತರಿಸುತ್ತಿರುವರು. ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮುಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು. ಸೀದಾ ನಮಗೆ ಒರೆದು ಒಡವೆಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಸೇಕಡಾ 25 ರಂತೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಒರ್ಡರುಗಳನ್ನು ವಿ. ಪಿ. ಮೂಲಕ ಕಳುಹಿಸಿಕೊಡುವೆವು. ಸಂದೇಹಪಡಬೇಡಿರಿ (1) ಜರಿತಾರಿನ ರೇಶ್ಮೆ, ನಾನಾ ತರದ ಅರಿವೆಗಳು, ಶೀರೆಗಳು, ರವಕೆ ಕಣಗಳು, ಅಂಗಿ ವಸ್ತ್ರ ಇತ್ಯಾದಿ. (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ. (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರ್ಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮುಗ್ರಿಗಳು. (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳೆಲ್ಲವುಗಳಿಗೂ ಒರೆಯಬಹುದು

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸೋಣಾಗುವುದು.

ನಮ್ಮ ವಿಳಾಸ:— ಪಿ ಡಿ. ನೀಲಕಾಂತ ಎಂಡ್ ಕೊ,
ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್. ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್ ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ್ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ:—
ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರ.

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

II ನೇ ಸ್ಟೆಂಡಾರ್ಡ ಗಣಿತ … … … …	0—3—0
III ನೇ ,, ,, … … …	0—4—0
IV ನೇ ,, ,, … … …	0—6—0
3ನೇ ಪುಸ್ತಕದ ಶಬ್ದಾರ್ಥ ಪ್ರಾಣಿಕೋಟಿ, ವನಸ್ಪತಿಕೋಟಿ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ) … … …	0—2—6
4ನೇ ಪುಸ್ತಕದ ಶಬ್ದಾರ್ಥ … … …	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು … … …	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಭಾಗ … …	0—3—0
3ನೇ ದರ್ಜೆಯ ದಕ್ಷಿಣ ಕನ್ನಡದ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು (ಇದರಲ್ಲಿ ವೃತ್ತಿಗಳೂ, ಕಥೆಗಳೂ, ಅಬಿನಯದ ಹಾಡುಗಳೂ ಇರುತ್ತವೆ) … … …	0—1—6
~~ಗಣಿತಸಾರ ಎಂಬ ಮುಗ್ಗಿ ಕೋಷ್ಟಕಗಳ ಪುಸ್ತಕ … …~~	~~0—1—0~~
ಬಾಲಶಿಕ್ಷೆ … … … … …	(ಅಚ್ಚಿನಲ್ಲಿದೆ)
ಒಂದನೆಯ ಪುಸ್ತಕ	(ತಯ್ಯಾರಿಯಲ್ಲಿವೆ.)
ಎರಡನೆಯ ,,	
ಮೂರನೆಯ ,,	
ನಾಲ್ಕನೆಯ ,,	

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವುವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಶನ್ ಕೊಡಲಾದೀತು.

ಎ. ಲಕ್ಷ್ಮೀನಾರಾಯಣ್,
ಸ್ಕೂಲ್ ಮಾಸ್ತರ್, ಉಡುಪಿ.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!

ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ; ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0. ಗ್ರಾಹಕರುತ್ವರೆಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ.	ಮಂಗಳೂರು.
ಮ॥ ಪಾವಂಜೆ ಗುರುರಾವ್,	ಪಾವಂಜೆ ಗೋಪಾಲಕೃಷ್ಣ
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.	ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೊಓಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಆಸ್ಸಾಮ್, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00. ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ. 2,22,00,000. ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರ್ಥಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್,
ಸೊಸೈಟಿಯ ಏಜಂಟ್.
ಶ್ರೀ ಉಲ್ಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌಡ ಮಹಲ ಓಣಿ,
ಮಂಗಳೂರು.

Canarese Novels Etc.
ಕನ್ನಡ ಪುಸ್ತಕಗಳು.

ಮ। ರಾ। ರಾ। ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು

	ರೂ, ಆ		ರೂ ಆ.
ವಂಗವಿಜೇತ ಹೊಸ ನಾವಿಲ್	1—4	ಕಮಲಾ ಕಾಂತ ದ್ವಿ. ಮು	0—2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1—4	ಲೀಲೆ [ಸಮಾಜ ಚಿತ್ರ]	0—4
ಕಪಾಲ ನಂದಿನಿ ಡಿಟೊ 2ನೇ ಭಾಗ	1—8	ಮಾಲತಿ [ಅತಿ ಮನೋಹರ] ದ್ವಿ ಮು.	0—3
ಸೀತಾರಾಮ (ಇತಿಹಾಸ)	1—8	ರಾಧಾರಾಣಿ [ಕಾದಂಬರಿ] ತೃ ಮು	0—3
ವಿಷವೃಕ್ಷ ದ್ವಿ ಮು	1—4	ಯುಗುಳಾಂಗುರೀಯ ,,	0—3
ದೇವೀ ಚೌಧುರಾಣಿ-ಡಿಟೊ	1—4	ಭ್ರಾಂತಿವಿಲಾಸ ,	0—8
ರಾಜಸಿಂಹ (ಇತಿಹಾಸ)	1—5	ನೊಂದಮಡಿ [ಸ್ತ್ರೀನೀತಿ]	0—2
ಕಪಾಲಕುಂಡಲ	0 13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0—2
ಮೃಣ್ಮಯಿ-ಡಿಟೊ 2ನೇ ಭಾಗ	1—1	ವೈಜ್ಞಾನಿಕ ಪ್ರಹಸನ [ನಕಲಿ]	0—4
ಕೃಷ್ಣಕಾಂತನ ಉಯಿಲು	1—0	ಚಿರತ್ನನಾಟಕರತ್ನ ಡಿಟೊ	0—7
ಮನೋರಮ [ಪತ್ತೇದಾರಿ ಕಥೆ]	1—0	ಚಿತ್ರವಿಚಿತ್ರಾವಳಿ [Tit Bits]	0—8
ಶರಿಮಳ-ಡಿಟೊ ದ್ವಿ ಮು	0-10	ನೀರದೆ [ಹೊಸ ಕಾದಂಬರಿ]	0—8
ಸಾಧನೆ. ಡಿಟೊ	0—8	ಭಾರತಮಹಿಳಾ [ಸ್ತ್ರೀನೀತಿ]	0—8
ಕೋಹಿನೂರು [ಇತಿಹಾಸ]	0 12	ಅಮೃತಪುಳಿನ [ನಾವಿಲ್]	0 11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು	0—3	ಇತ್ಯಾದಿ	

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ1ಕ್ಕೆ 3 ಆಣೆ 12ಕ್ಕೆ 1 ಉಚಿತ ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು

	ರೂ ಆ		ರೂ ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ ಮು.	0—8	ನಿರ್ಭಾಗ್ಯಚಾಣೆಕ್ಯ [ಹೊಸಕಾದಂಬರಿ]	0—6
ಶ್ರೀ ಕವಿಚರಿತೆ [ಪೂರ್ವಭಾಗ]	3—2	ಅನಂಗಸುಂದರಿ ಡಿಟೊ	0—8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0 10	ತಾರಾ ಸುಂದರಿ ಡಿಟೊ	0—8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0—6	ರಾಧಾಮಾಧವಿ ಡಿಟೊ	0—8
ಕೈಲಾಸನಾಥ ಡಿಟೊ	0—8	ಸ್ತ್ರೀಧರ್ಮನೀತಿ [ಅಷ್ಟುಪಯುಕ್ತ]	0—9
ಶೋಭನೆ [ಬಂಗಾಳಿ ನಾವಿಲ್]	0 12	ಪಶುವೈದ್ಯಸಂಗ್ರಹ ಡಿಟೊ ದ್ವಿ ಮು	0—9
ಯಾಮಿನಿ [ಬಂಗಾಳೀ ನಾವಿಲ್]	0—3	ಧರ್ಮಪದವೆಂಬ ಬುದ್ಧಗೀತೆ	0.12
ಪ್ರಿಯಂವದೆ [ಪತಿವ್ರತಾ ಕಥೆ]	0—8	ಜೈಮಿನಿಭಾರತ [ಸಟೀಕಾತಾತ್ಪರ್ಯ]	4—0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0—8	ಹರಿಕಥಾಮೃತಸಾರ ಡಿಟೊ	1—6
ಸನ್ಯಾಸಿ [ಹೊಸ ಕಾದಂಬರಿ]	0—6	ಚದುರಂಗಬೋಧಿನಿ	0—3
ಮೃತ್ಯು ಪರೀಕ್ಷೆ ಡಿಟೊ	0—2	ಸರ್ವೇಮ್ಯಾನ್ಯುಯಲ್	0—5
ಬೃಂದಾವನ ಡಿಟೊ	0—2	ನ್ಯಾಯದರ್ಪಣ [ಲಾ]	1—0
ಸುಮನೋರಮ ಡಿಟೊ	0—2	ವ್ಯವಹಾರ ದೀಪಿಕೆ [ಲಾ]	3—0
ಮಾಲಿನಿ ಡಿಟೊ	0—2	ಶಾಕುಂತಲ ನಾಟಕ ದ್ವಿ ಮು	0—9
ಪ್ರೇಮಪಿಪಾಸೆ ಡಿಟೊ	0—2	ಶೂರಸೇನಚರಿತ್ರೆ ನಾಟಕ ಡಿಟೊ	1—0
ವಿರಕ್ತಳಾದ ಸೌದಾಮಿನಿ ಡಿಟೊ	0—5	ಚಂಡಕೌಶಿಕ ನಾಟಕ ಡಿಟೊ	0.12
ಚಿತ್ರಕಳಾವತಿ ಡಿಟೊ	0—2	ರಾಮವರ್ಮ ಲೀಲಾವತೀ ನಾಟಕ	0—8
ಚಾರುಪರ್ಯವತಿ ಡಿಟೊ	0—2	ಪಾಂಚಾಲೀ ಪರಿಣಯ ನಾಟಕ	0.10
ವಸುಮತಿ ಡಿಟೊ	0—2	ಚಂಡೀಮದಮರ್ದನ ನಾಟಕ	0—5
ವಿಲಕ್ಷಣಶಿಕ್ಷಣ ಡಿಟೊ	0—2	ಪ್ರಬೋಧ ಚಂದ್ರೋದಯ ನಾಟಕ	0.10
ಪದ್ಮಿನಿ ಡಿಟೊ	0—2	ಭರ್ತೃಹರಿ ನಿರ್ವೇದ ನಾಟಕ	0—3
ಭಾನುಮತಿ ಡಿಟೊ	0—2	ನಿರುಪಮಾ [ನಾಟಕ]	0.12
ಸತೀರೋಹಿಣಿ ಡಿಟೊ	0—2	ಧ್ರುವವಿಜಯ [ನಾಟಕ]	0—4
ಸಂತಾಪಕ ಡಿಟೊ	0—4	ಸೀತಾಪರಿಣಯ [ನಾಟಕ]	0—4
ಇಂದುಮತಿ [ಸ್ತ್ರೀನೀತಿ]	0—6	ಸೀತಾಸುವರ್ಣಮೃಗ [ನಾಟಕ]	0—12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—

ಎಸ್. ಟಿ. ಎ. ಬೆಂಗಳೂರು ಸಿಟಿ.

ಪ್ರಸಿದ್ಧ ಕನ್ನಡ ಗ್ರಂಥಗಳು

1. ಜಪಾನರುನ್ನತಿಗೆ ಮೂಲಾಧಾರ:—ನವನಾಗರೀಕ ಜನಾಂಗದವರಂತೆ ಸ್ವಗೌರವವನ್ನಾರ್ಜಿಸಿ ಸುಖಸಂತೋಷಗಳಿಂದ ಬಾಳಬೇಕಾದರೆ ಪ್ರತಿಯೊಬ್ಬನೂ ಆಶ್ಚರ್ಯಕರವಾದೀ ಕಥೆಯನ್ನು ಓದಬೇಕು. ಇಂತಹ ಸುಬೋಧಕವಾದ ಕಣ್ಣಾನಗೆ ಗಾನಂದವನ್ನುಂಟುಮಾಡುವ ಗ್ರಂಥವನ್ನು ಹಿಂದೆ ನೀವು ಯಾವಾಗಲೂ ನೋಡಿಲ್ಲ, ಮೈಸೂರು ಮಹಾರಾಜರಿಗೆ "ಡೆಡಿಕೇಟ್" ಮಾಡಲ್ಪಟ್ಟಿದೆ ಮೈಸೂರು ಮಹಾರಾಜರ, ಯುವರಾಜರ ಮತ್ತು ಕಥೆಯ ಸಂದರ್ಭಗಳಿಗನುಕೂಲಿಸುವಂತೆ, ನೇತ್ರಾನಂದಕರವಾದ 12 "ಹಾಫ್‌ಟೋನ್" ಚಿತ್ರಗಳೂ ಇದರಲ್ಲಿವೆ ಮೈಸೂರು ಚೀಫ್ ಇಂಜಿನಿಯರ್ ಕರ್ಪೂರ ಶ್ರೀನಿವಾಸರಾಯರು ಪ್ರೌಢವಾದ ಉಪೋದ್ಘಾತವನ್ನು ಬರೆದಿರುವರು. ಸ್ವಧರ್ಮ ರಕ್ಷಣೆಗಾಗಿ ರಾಜನೂ, ರಾಣಿಯೂ, ಸೇನಾಪತಿಯೂ, ಸತ್ಯಜೆಯಾದ ಕುರುಬನೂ, ಪುರೋಹಿತನೇ ಮುಂತಾದವರು ಪ್ರಾಣಾರ್ಪಣವಂ ಮಾಡುವ ಸಂದರ್ಭಗಳನ್ನೂ ಮತ್ತು ಅವರುಗಳೆಲ್ಲರೂ ದೇವರುಗಳಿಂದ ಬದುಕಿಸಲ್ಪಟ್ಟ ಬಳಿಕ ರಾಜನಿಗೂ, ಕನ್ಯೆಗೂ ವಿವಾಹ ಪಟ್ಟಾಭಿಷೇಕಗಳು ನಡೆವುದನ್ನೂ, ಅವುಗಳ ಕಣ್ಣೆದುರಿಗೆ ನಡೆದಂತೆ ತೋರಿಸುವ ಫೋಟೋಗ್ರಾಫಿನ ಮೇಲೆ ನಿರ್ಮಿಸಿದ ಸಹಜ ಚಿತ್ರಗಳನ್ನೂ ನೋಡಿ ಯಾರ ಹೃದಯವು ತಾನೇ ಕರಗದೇ ಇರವುದು? ಕ್ರಯ ವಿ ಪಿ ಪ್ಯಾಕಿಂಗ್ ಸಹಿತ —ಚಿನ್ನದ ಗಿಲ್ಟಿನದು ರೂ. 2—4—0, ಅವ್ವಲ್ ಗ್ಲೇಜ್ ರೂ 1—8—0, ದುಯ್ಯಂ 1—4—0

2 ಧರ್ಮಪದ —17 ಕೋಟಿ ಮುಸಲ್ಮಾನರಿಗೆ "ಖೊರಾನೂ" 32 ಕೋಟಿ ಹಿಂದೂಗಳಿಗೆ "ಭಗವದ್ಗೀತೆಯೂ" 40 ಕೋಟಿ ಕ್ರಿಸ್ತರಿಗೆ "ಬೈಬಲೂ" ಹೇಗೆ ಪೂಜ್ಯವಾದ ಗ್ರಂಥಗಳೋ, 55 ಕೋಟಿ ಬೌದ್ಧರಿಗೆ ಈ ಗ್ರಂಥವು ಹಾಗಿದೆ ಸಾವಿರಾರು ಗ್ರಂಥಗಳಿಂದ ಪಡೆವ ಜ್ಞಾನವನ್ನು ಇದೊಂದರಿಂದ ಪಡೆಯಬಹುದು. ಮೈಸೂರು ಮಹಾರಾಜರ, ಗ್ರಂಥಕರ್ತರ, ಲೋಕದಲ್ಲಿ ಅತ್ಯಂತ ದೊಡ್ಡದಾದ ಜಪಾನ್‌ನಲ್ಲಿರುವ ಬುದ್ಧ ವಿಗ್ರಹದ ನೇತ್ರಾನಂದಕರವಾದ ಛಾಯಾಚಿತ್ರಗಳಿವೆ. ಕ್ರಯ ವಿ ಪಿ ಸಹಿತ ರೂ. 1

2 ಬೌದ್ಧಾವತಾರ —ಲೋಕೋದ್ಧಾರಕನಾದ "ಶ್ರೀ ಗೌತಮಬುದ್ಧ ಭಗವಂತನ" ಆಶ್ಚರ್ಯಕರವಾದ ಜನ್ಮ ಚರಿತ್ರೆ. ಕ್ರಯ ವಿ. ಪಿ. ಸಹಿತ 0-6-0.

ವಿಳಾಸ— 1. ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಗಳು,
ಚಾಮರಾಜ ಪೇಟೆ, ಮೈಸೂರು.
2 ಶ್ರೀವಾಣೀವಿಲಾಸ ಬುಕ್ ಡಿಪೋ, ಮೈಸೂರು.
3. ದಿ. ಜನರಲ್ ಏಜನ್ಸಿ, ಮೈಸೂರು

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ಬೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಸೀರೆಗಳು, ವಲ್ಲಿಗಳು, ಧೋತ್ರಗಳು, ಎಲುವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲಾ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅಂಗಡಿಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದ

ತಮ್ಮ ವಿಳಾಸ:—ನರಸಿಂಹ ಲಕ್ಷ್ಮಿನಾರಾಯಣ

ಪೇಟೆ ಬೆಂಗಳೂರು ದ. ಕ.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

—1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000–0–0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000–0–0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	217,400–0–0	ಪ್ರತಿಜ್ಞಾತ ಮೂಲ ಧನವು ,,	217,400—0—0
Paid up Capital	192,400–0–0	ಆಗತ ಮೂಲ ಧನವು ,,	192,400—0—0
Deposits	490,644–4–2	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	490,644—4—2
Reserve Fund	27,590–12–0	ರಕ್ಷಿತ ಧನವು	27,590-12—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits *of Rs. 50/- and above in multiples of* Rs. 5/ received for 3, 6, 12 and 24 months @ 4, 4½, 5 and 5½% respectively. Terms on application.

Short-notice Deposits requiring one weeks notice of withdrawal after one month received @ 2½% per annum.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ "ಬೋನಸ್" ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಗೆ ಬೇಂಕಿನ ಸೆಕ್ರಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾವೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. August 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯುಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ, ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯುಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಒಂದಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೊ, ಬಳ್ಳಾರಿ.

ಒಂದೇ ತಿಂಗಳು! ಮಿಂಚಿ ಹೋದ ಮೇಲೆ ಚಿಂತಿಸ ಬೇಡಿ!!

ಅಲ್ಪ ಬೆಲೆ!!!

ಬೇರೆ ಬೇರೆ ಪುಸ್ತಕಗಳಿಗೆ ವೃಥಾ ಹೆಚ್ಚು ಹಣವನ್ನು ವೆಚ್ಚ ಮಾಡಬೇಡಿ!!

ಸುಳ್ಳಿಗೆ ನೂರಾರು ದಾರಿ! ನಿಜಕ್ಕೆ ಒಂದೇ ದಾರಿ!!

ನಿಮ್ಮ ಪರೀಕ್ಷೆಗಾಗಿ ಮೊದಲು ಒಂದು ಪ್ರತಿ ಮಾತ್ರ ೦-೮-೦ ಗೆ ಟಪ್ಪಾಲು ಖರ್ಚು ಇಲ್ಲದೆ ದೊರೆಯುತ್ತೆ.

೩ ಪುಸ್ತಕಗಳೂ ಒಟ್ಟಾಗಿ ಒಂದರಲ್ಲೇ ಬೈಂಡಾಗಿವೆ.

ಈ ದಿನವೇ ಒಂದು ಕಾರ್ಡು ಬರಿಯಿರಿ! ಬೇಗ ಬೇಗ ಬರಿಯಿರಿ!!

ಬಹುಮಾನ— ಒಟ್ಟಾಗಿ ತರಿಸಿಕೊಳ್ಳುವವರಿಗೆ, ೬ ಪ್ರತಿಗೆ ಒಂದು ಉತ್ತಮವಾದ ಭಗವದ್ಗೀತ [ಟೀಕು, ತಾತ್ಪರ್ಯ ಸಹ ಉಳ್ಳದ್ದು] ೫ ಪ್ರತಿಗೆ ೧ ಪ್ರತಿ ಉಚಿತ. ಅಂಚೆ ವೆಚ್ಚ ಮಾಫಿ

ಆಂಗ್ಲಭಾಷಾ ಪ್ರಕಾಶಕ

೩೦ ಭಾಗಗಳೂ ಒಂದರಲ್ಲೇ ಅಡಗಿವೆ. ಒಂದೇ ತಿಂಗಳು ಟಪ್ಪಾಲ್ ಖರ್ಚಿಲ್ಲ.

(ಸ್ವತಃ ಇಂಗ್ಲೀಷು ಕಲಿಯುವುದಕ್ಕೆ ಅತ್ಯುಪಯೋಗವಾದದ್ದು)

ಇದರಲ್ಲಿ ಇಂಗ್ಲೀಷು ವರ್ಣಮಾಲೆ, ಬರಿಯುವ ಸಾಧನೆಗಳು, ಶಬ್ದಸಂಯೋಜನ, ಸ್ವರಾಕ್ಷರಗಳ ವಿಧ ವಿಧ ಶಬ್ದಾಭ್ಯಾಸ, ಉಚ್ಚಾರಣೆ—ಅರ್ಥ, ವಾಕ್ಯಗಳನ್ನು ಜೋಡಿಸುವ ಕ್ರಮ, ಲೆಖ್ಖಗಳು, ಪಾಠಶಾಲೆಯಲ್ಲಿ ೫ ವರ್ಷ ಕಲಿಯುವಷ್ಟು ವ್ಯಾಕರಣ ವಿಧಿ, ವಿಧಾನಗಳು, ಇವುಗಳಿಗೆ ನೂರಾರು ಸಾಧನೆಗಳು, ನಾನಾ ವಿಧ ವಾಕ್ಯಗಳನ್ನು ಮಾಡುವ ಸುಲಭ ಅಭ್ಯಾಸಗಳು, ಇಂಗ್ಲೀಷು ಸಂಪ್ರದಾಯ ಮತ್ತು ಭಾಷಾ ಶೈಲಿ, ಮತ್ತು ಭಾಷಾಂತರ ಮಾಡುವ ವಿಧಾನಗಳು, ಇವುಗಳಿಗೆ ನೂರಾರು ಸಾದನೆಗಳು, ಭಾಷಾ ಜ್ಞಾನಕ್ಕೆ ಬೇಕಾದ ಅನೇಕ ಚಿಕ್ಕ ಕಥೆಗಳು, ಸಂಭಾಷಣಾ ಕ್ರಮಗಳು, ಸಂಭಾಷಣೆಯಲ್ಲಿ ಪ್ರತಿಯೊಂದು ವಿಷಯಕ್ಕೂ ಬೇಕಾಗುವ ಕನ್ನಡ—ಇಂಗ್ಲೀಷ್, ಇಂಗ್ಲೀಷ್—ಕನ್ನಡ ಶಬ್ದಕೋಶ (ನಾಣ್ಣುಡಿಯ ನಿಘಂಟು) ೬೪ ಪುಟಗಳು; ಪ್ರಶ್ನೋತ್ತರ ರೂಪವಾದ ಸಂಭಾಷಣಾ ವಾಕ್ಯಗಳು ೮೦೦, ಕನ್ನಡ—ಇಂಗ್ಲೀಷು ಗಾದೆಗಳು. ಸಾಂಕೇತಿಕ ಲೇಖನ ಚಿನ್ಹೆಗಳು. ತಂತೀ ವರ್ತಮಾನ, ಕ್ಷೇಮಸಮಾಚಾರ, ಲೇವಾದೇವಿ ಕಾಗದಗಳು, ಅರ್ಜಿಗಳು ಮುಂತಾದುವು ಬರಿಯುವ ಅಭ್ಯಾಸಗಳು, ಇವುಗಳಿಗೆ ನೂರಾರು ಮಾದರಿಗಳು ಅಡಿಗಿವೆ. ಹೆಚ್ಚು ಪ್ರತಿಗಳಿಲ್ಲ. ತ್ವರೆ ಮಾಡಿರಿ. ಕ್ರಯ **1-8-0.**

ನಮ್ಮ ವಿಳಾಸ—

ಎ. ವಿ. ರಾಯಲು,

ಅವಿನ್ಯೂ ರೋಡು,

ಬೆಂಗಳೂರು ಸಿಟಿ.

ಕಳವು, ದರೋಡೆ.

ಡಕಾಯಿತಿ, ಅಕ್ರಮ ಸ್ತ್ರೀಸಂಗಮ, ಆಸ್ತಿಯಾಚೋರಿ, ಘಾನಭಂಗ, ಮಾನನಷ್ಟ, ಮುಂತಾದವುಗಳಿಗೆ ಶಿಕ್ಷೆ ವಿಧಿಸಿರುವ ದಂಡ ನೀತಿಶಾಸ್ತ್ರವು ಪೂರ್ವದಲ್ಲಿ ಶುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮಂಜೂರಾಗಿ ಕಲ್ಕತ್ತಾ, ಮುಂಬೈ, ಮದ್ರಾಸು, ಮೈಸೂರು ಜಿಲ್ಲಾಗಳಲ್ಲಿ "ಕನ್ನಡ ಇಂಡಿಯನ್ ಪೆನಲ್‌ಕೋಡ್" ಎಂಬ ಅಭಿದಾನದಿಂದ ಜಾರೀಲಿ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಟಿಪ್ಪಣಿಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವದು. ಕ್ರಯ: ದಪ್ಪ ಕಾಗದದ್ದು ರೂ. ೨—೦—೦. ಹಸನು ಕಾಗದದ್ದು ರೂ. ೨—೮—೦.

ಕೆಟಲಾಗು ಬೇಕಾದವರು ಈ ವಿಳಾಸಕ್ಕೆ ಬರೆಯಿರಿ.

ವಿಳಾಸ.—ಬಿ ನರಸಿಂಗರಾವ್,

ಎಡಿಟರ್ ಲಾ ಗಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ.

ಭಾರೀ ಕ್ರಯದ ಕನ್ನಡಕಗಳು ಕ್ರಯ ರೂಪಾಯಿ 2—8—0.

ಸ್ಫಟಿಕದ ಕನ್ನಡಕವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ ಅಲ್ಪ ಕ್ರಯದ ಕನ್ನಡಕಗಳು ದೃಷ್ಟಿಯನ್ನು ಹೋಗಲಾಡಿಸಿ ಕ್ರಮೇಣ ವ್ಯಾಧಿಯನ್ನುಂಟುಮಾಡುತ್ತೆ. ಆದಕಾರಣ ಅವುಗಳನ್ನು ಉಪಯೋಗಿಸಬೇಡಿರಿ. ನಮ್ಮಲ್ಲಿ ಸ್ಫಟಿಕದ ಕನ್ನಡಕಗಳು ಕ್ರಯಕ್ಕೆ ದೊರೆಯುತ್ತೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಕನ್ನಡಕಗಳಿರುವ ಭಾರೀ ಕ್ರಯದ ಪೆಟ್ಟಿಗೆ ಒಂದನ್ನು ಉಚಿತವಾಗಿ ಕಳುಹಿಸುತ್ತೇವೆ ಬಾಕೀ ವಿಷಯಗಳು ನಿಮ್ಮ ದರಕಾಸ್ತು ಬಂದನಂತರ ಬರದು ತಿಳಿಸುತ್ತೇವೆ.

ವಿಳಾಸ:—ನಿಲಕರ್ ಅಂಡ್ ಬ್ರದರ್ಸ್, ತಿರುವಲ್ಲಕ್ಕೇಣಿ, ಮದರಾಸು.

ಆನಂದನಾಮ ಸಂವತ್ಸರದ ಕೈಘಡಿಯಾರ. ಅರ್ಧಕ್ರಯ 1—13—0.



ಇದು ಆನಂದನಾಮ ಸಂವತ್ಸರದ ಮಹೋತ್ಸವಕ್ಕಾಗಿ ಈ ಭಾರೀಕ್ರಯದ ಗಡಿಯಾರವನ್ನು ಈ ತಿಂಗಳು ಆಖೈರು ಒಳಕಾಗಿ ತರಿಸಿಕೊಳ್ಳುವವರಿಗೆ ಸುಂದರವಾದ ಪೆಟ್ಟಿಗೆ ಸಹಿತ 1—13—0ಗೆ ಕೊಡಲ್ಪಡುತ್ತೆ.

ವಿಳಾಸ—ರಾಮರಾವ್,

ಜನರಲ್ ಮರ್ಚೆಂಟ್,

18 ಯಸ್. ಯಂ. ಕೋಯಿಲ್ ಸ್ಟ್ರೀಟ್, ತಿರುವಲಕ್ಕೇಣಿ, ಮದರಾಸು

ಮದುರೆ ಜುನ್ನಡಿ ಅಂಚಿನ ಸೀರೆ

ಸುಂದರವಾದ ಸಿಂಗಪೂರ್ ಜೇಟಿ ರವಕೆ ಇನಾಂ ಸಹಿತ ಕ್ರಯ ರೂ. 2-4-0

ಇದು ಉಡುವದಕ್ಕೆ ದಡಂತಿಯಾಗಿಯೂ, ನೋಡುವದಕ್ಕೆ ನಯವಾಗಿಯೂ, ಕೊಳ್ಳಲು ಬೆಲೆ ಸುಲಭವಾಗಿಯೂ, ಇದೆ. ಬಣ್ಣ ಹೋಗದು. ಉದ್ದ 18 ಮೊಳ ಧಾರಾಳವಾಗಿದೆ.

ವಿಳಾಸ:—ಯಸ್, ಯಂ. ಮೂರ್ತಿ ಕಂಪೆನಿ,

ತಿರುವಲ್ಲಕ್ಕೇಣಿ ಮದಾರಾಸು.

ಸ್ವಲ್ಪ ಹೊತ್ತು ನಿಂತುಕೊಳ್ಳಿ!

ಅಗರಬತ್ತಿ ಅಥವಾ ಸುಗಂಧದ ಬತ್ತಿ

ಪ್ರಸಿದ್ಧವಾದ ಅಂಬರು, ಪುನಗು, ಕಸ್ತೂರಿ, ಪನ್ನೀರು, ಜಂತುವಿನಾಸಿನಿ ಬತ್ತಿಗಳು, ಅರಗಜ ಅಥವ ಹಸೀಗಂಧ ಬಿಲ್ಲೆಗಳು, ಪನ್ನೀರು ಅಥವಾ ರೋಸ್ ವಾಟರು, ಹಿಂದೂ ಸೆಂಟುಗಳು, ಸುವ್ವಾಸನೇ ದ್ರವ್ಯಗಳು, ಇವುಗಳೆಲ್ಲಾ ಉತ್ತಮವಾದ ಪದಾರ್ಥಗಳಿಂದ ಮಾಡಲ್ಪಟ್ಟವೆ. ಬಹಳ ಸುಲಭ ಕ್ರಯಕ್ಕೆ ದೊರೆಯುತ್ತೆ. ವ್ಯಾಪಾರಗಾರರಿಗೆ ಕಮಿಷನ್ ಕೊಡಲ್ಪಡುತ್ತೆ. ಯಾವ ವಿಷಯಕ್ಕೂ ಈ ಕೆಳಗೆ ಬರದಿರುವ ಅಡ್ರೆಸ್ಸಿಗೆ ಬರೆದರೆ ಕಳಿಸಲ್ಪಡುತ್ತೆ.

ಮೆನೇಜರ್,

ಸ್ವದೇಶಿ ಪರಫ್ಯೂಮರೀ ವರ್ಕ್ಸ್, ಬೆಂಗಳೂರು ಸಿಟಿ

ಹಾರ್ಮೋನಿಯಂ ಸ್ವಯಂ ಬೋಧಿನೀ.

ಕನ್ನಡದಲ್ಲಿ ಇಂತಹ ಪುಸ್ತಕವು ಇದುವರೆಗೆ ಒಂದಾದರೂ ಪ್ರಚುರವಾಗಿಲ್ಲ. ಉತ್ತರ ಕರ್ನಾಟ, ಮಧ್ಯ ಕರ್ನಾಟ, ಮತ್ತು ದಕ್ಷಿಣ ಕರ್ನಾಟ ಈ ಮೂರು ರಾಜ್ಯಗಳಲ್ಲಿರುವ ಕನ್ನಡಿಗರಿಗೂ ಅನುಕೂಲಿಸುವಂತೆ ಪುರಂದರ ದಾಸರ ಕೀರ್ತನೆಗಳೇ ಮುಂತಾದ ಕನ್ನಡ ಕೀರ್ತನೆಗಳನ್ನು ಮಾತ್ರವೇ ಆರಿಸಿ ಎಲ್ಲರೂ ತಿಳಿದುಕೊಳ್ಳುವಂತೆ ಸುಲಭ ಮಾರ್ಗದಲ್ಲಿ ಬರೆದಿದೆ ಇದರಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಸ್ವರಸ್ಥಾಯಿಗಳೂ ವಿವರವಾಗಿ ಕೊಟ್ಟಿರುವುದರಿಂದ ಯಾವ ವಿಚಾರದಲ್ಲಿಯೂ ಸಂದೇಹಕ್ಕೆ ಆಸ್ಪದನೇ ಇರುವುದಿಲ್ಲ ಹಾರ್ಮೋನಿಯಂ ಬೋಧಕರಿಗೂ ಇದರಿಂದ ಅನೇಕ ವಿಷಯಗಳು ತಿಳಿಯಬರುವವು

ಬೆಲೆ ಆಣೆ ೧—೪—೦ ಅಂಚೆ ವೆಚ್ಚ ಬೇರೆ

ತೊರವೆ ರಾಮಾಯಣ ೧ಕ್ಕೆ	೦ ೧೪—೦
ದುರ್ಗೇಶ ನಂದಿನಿ ,,	೧—೮ ೦
ವ್ರತಚೂಡಾಮಣಿ ,,	೧—೨—೦
೩೨ ವ್ರತವುಳ್ಳ ವ್ರತವಲ್ಲಿ ೧ಕ್ಕೆ	೦—೮—೦
ವ್ಯಾಪಾರ ಧರ್ಮಸೂಚಿಕೆ ,,	೧—೬—೦
ನವೀನ ಭರತಖಂಡ ,,	೦—೫—೦
ಬಸವರಾಜೇಂದ್ರ ವಿಜಯ ,,	೦-೧೨—೦
ಮುಕುಂದ ಮಾಲಾ ಸ್ತೋತ್ರ ,,	೦—೨—೦
ಮಹಿಮ್ನ ಸ್ತೋತ್ರ ,,	೦—೩—೦
ಶುಕಸಪ್ತತಿ	೧—೬—೦

ಮೇಲ್ಕಂಡ ಪುಸ್ತಕಗಳನ್ನು ೧—೦—೦ ಕಮ್ಮಿ ಇಲ್ಲದೆ ತರಿಸಿಕೊಳ್ಳತಕ್ಕವರಿಗೆ 'ತಿಲಕ್' ಚರಿತ್ರೆ ೧, ಪತ್ರವ್ಯವಹಾರದ ಮೂಲಕ ವ್ಯಾಪಾರ ಮಾಡುವ ಪ್ರಯೋಜನ ೧, ಈ ಎರಡು ಪುಸ್ತಕಗಳೂ ಬಹುಮಾನವಾಗಿ ಕೊಡ ವೆವು ಹಾಸಲು ಪ್ರತ್ಯೇಕ

ವಿಳಾಸ:— ಎಚ್ ಎನ್. ರಾವ್ ಆಂಡ್ ಬ್ರದರ್ಸ್,
ಪುಸ್ತಕ ವ್ಯಾಪಾರಸ್ಥರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬರ್ಮೀಸ್ ಬ್ಯುಟಿ ಒಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.

ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳ ತಲೆ, ತಲೆವಾತಿ, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವಷ್ಟು ಚಲೋದಾಗಿರುವುದು ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ

ಯುತೊಡ್ರ್ಯಾನ್.

ಹಲವು ವರುಷಗಳಿಂದ ಯುತೊಡ್ರ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿವಡೆದಿರುವುದು. ನರಸಂಸ್ಥಾಯುವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ.

ಒಟ್ಟೊ ಪೆರೆಡ್ರ್ಯಾಸ್.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟ ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇಷ್ಟಾ ಎಂಥಾ ಬಿರುಸಾದ ಪರಿಮಳಗಳ ಎಡಯಲ್ಲಿಯೂ 'ಒಟ್ಟೊ ಪೆರೆಡ್ರ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಚಿನದಕ್ಕೆ	0—8—0.
ನಡುತರದ್ದಕ್ಕೆ	0-12—0.
ದೊಡ್ಡ ಸ್ಯಾಚಿಗೆ	1-14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್‌ಫ್ಯುಮರಿ ಕಂಪೆನಿ,
ಮುಂಬಯಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಲ್ಯಾತ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬ್ಬ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ರ ಸೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಸೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ.
ಹಂಪನ್‌ಕಟ್ಟಾ ಮಂಗಳೂರು.

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.

ಈ ಮುರಬ್ಬಾವು "ಪಂಜಾಬು ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು. 15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳವರೆಗೆ ಆಣೆ 6.

ನಮ್ಮ ಏಜಂಟರು— ಡಿ ಸಯ್ಯದ್ ಉಸ್ಮಾನ್ ಎಂಡ್ ಕೊ.
ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹದಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ಕೃಷ್ಣವಿಲಾಸ ಟ್ರೇಡಿಂಗ್ ಕಂಪೆನಿ,

ಗಿರಗಾಂ, ಮುಂಬಯಿ.

ಮಾನ್ಯ ಗೃಹಸ್ಥರೇ,

ತಮ್ಮ ಕಡೆಯ ಹಲವು ಮಂದಿ ಗೃಹಸ್ಥರು ವರ್ತಮಾನ ಪತ್ರಗಳಲ್ಲಿ ಕೊಟ್ಟಿರುವ "ಪ್ರಸಿದ್ಧ ಪತ್ರಿಕೆ"ಗಳು ಹೊಗಳಿ ವಿವರಿಸುವ ಸಾಮಾನುಗಳನ್ನು ಇಲ್ಲಿಗೆ ಬರೆದು ತರಿಸಿಕೊಳ್ಳುತ್ತಿರುವಲ್ಲಿ ಆ ವಸ್ತುಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಬರೆದಿರುವಂತೆ ಚನ್ನಾಗಿರುವುದರ ಬದಲಿಗೆ ಬಹಳ ಹಲಕೀ ಸಾಮಾನುಗಳಿದ್ದು ಅವುಗಳಿಗೆ ಕೊಟ್ಟ ಹಣ ದುರ್ವ್ಯಯ ಮಾಡಿದಂತೆ ಆಯಿತಲ್ಲಾ ಎಂದು ವ್ಯಸನಪಡುತ್ತಿರುವದು ನಮ್ಮ ತಿಳುವಳಿಕೆಗೆ ಬಂದದೆ. ನಾವು ಹಲವು ವರ್ಷಗಳಿಂದ ಪರವೂರ ಗೃಹಸ್ಥರಿಗೆ ಇಲ್ಲಿಂದ ಅತ್ಯುತ್ಕೃಷ್ಟವಾದ ವಸ್ತುಗಳನ್ನು ಪೇಟೆಯಿಂದ ಬಹಳ ಚೌಕಶೀಯಿಂದ ಕಡಿಮೆ ಖರೀದಿಗೆ ಕೊಂಡುಕೊಂಡು ರವಾನಿಸುತ್ತಿರುವುದು ಸಮಸ್ತರಿಗೂ ಗೊತ್ತೇ ಇದ್ದ ವಿಷಯವಾಗಿದೆ. ಆದುದರಿಂದ ಎಲ್ಲಾ ಗೃಹಸ್ಥರು ತಮಗೆ ಮುಂಬಯಿಯಿಂದ ಏನೇ ವಸ್ತುಗಳು ಬೇಕಿದ್ದರೂ ನಮಗೆ ಬರೆದಲ್ಲಿ ನಾವು ಅವುಗಳನ್ನು ಪೇಟೆಯಿಂದ ಕಡಿಮೆ ಕಿಮ್ಮತ್ತಿಗೆ ತಕ್ಕೊಂಡು ವಿ. ಪಿ. ಟಪ್ಪಾಲು ಮೂಲಕ ಕಳುಹುವೆವು. ಈ ಸಂಗತಿಯನ್ನು ತಮ್ಮ ಮಿತ್ರಬಾಂಧವರೊಡನೆ ಪ್ರಚಾರಪಡಿಸಬೇಕಾಗಿ ನಾವು ನಮ್ಮ ಎಲ್ಲಾ ಗೃಹಸ್ಥರನ್ನು ಬೇಡುವೆವು.

ವಾಚುಗಳು ನಮ್ಮಲ್ಲಿ ವೆಸ್ಟೆಂಡ್, ಪೇವರ್ ಲೂಬಾ, ಬರ್ನ್ ಮೊದಲಾದ ಕಂಪನಿಯ ವಾಚು ಮತ್ತು ಗಡಿಯಾರಗಳು ಆಯಾಯ ಕಂಪನಿಯಲ್ಲಿ ಮಾರಾಟ ಮಾಡುವದಕ್ಕಿಂತ ಕಡಿಮೆ ಬೆಲೆಗೆ ದೊರೆಯುತ್ತವೆ.

ರೂಪಾಯಿ ಹತ್ತು ಯಾ ಹೆಚ್ಚಿನ ಬೆಲೆಯ ಸಾಮಾನುಗಳಿಗೆ ಬರಿಯುವವರು ರೂಪಾಯಿ ಒಂದನ್ನು ಮುಂಗಡವಾಗಿ ಕಳುಹಿಸಬೇಕು. ಇದನ್ನು ಬುಮಲಾ ಹಣದಿಂದ ಕಳೆಯುವೆವು.

Krishnavilasa Trading Company,
Girgaum, Bombay

ಅಚ್ಚಾಗುತ್ತಲಿದೆ! ಅಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ಪಂಚಾಂಕೀ ಮರಾಠಿನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಅಗೋಸ್ಟು ತಿಂಗಳ ಆಖೈರ ಒಳಗೆ ಪ್ರಕಾಶಿತವಾಗುವದು. ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕ ಜನರು ಈ ಸಂದರ್ಭವನ್ನು ಬಿಡಲಾಗದು. ಬೆಲೆ 10 ಆಣೆ. ಟ. ಹಾ. ಬೇರೆ.

ಜುಲೈ ಆಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡು, ಓರ್ಡರುಗಳನ್ನು ರಿಜಿಸ್ಟರ್ ಮಾಡುವ ಗ್ರಾಹಕರಿಗೆ 8 ಆಣೆ. ಟ. ಹಾ. ಬೇರೆ. ಹಣವನ್ನು ಮುಂಗಡವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅಥವಾ ಮನಿಆರ್ಡರು ದ್ವಾರಾ ಕಳುಹಿಸಬೇಕು.

ತ್ವರೆಮಾಡಿರಿ!!
ಕಲ್ಯಾಣಪುರ ಮಂಗೇಶರಾವ್
ಕಲ್ಯಾಣಪುರ, ದ. ಕನ್ನಡ.

ಕರ್ಣಾಟಕ ವನೌಷಧಾಲಯ ಶಿರಸಿ.

ಔಷಧಗಳ ಗುಣದ ಬಗ್ಗೆ ಡಾಕ್ತಾರ ಮುಂತಾದವರ ಕಡೆಯಿಂದ ಸರ್ಟಿಫಿಕೇಟುಗಳು ಶಿಕ್ಕಿರುತ್ತವೆ.

೧. ರೋಗನಾಶಕ, ರಕ್ತ, ಧಾತು ಶುದ್ಧಿ ವ ವೃದ್ಧಿಕರ ಲೋಹ ಮಿಶ್ರಿತ ಗುಳಿಗೆ ೪೨ ಟ. ಖ. ಸಹ ಕ್ರಯ ರೂ. ... ೨—೪—೦
೨. ಪ್ರವಾಳ ಕೇಶರ ಅಮರಸತ್ವ ಶಿಲಾಜಿತು ವ ವನಸ್ಪತಿ ಮಿಶ್ರಿತ ಧಾತುಪೌಷ್ಟಿಕ ಶಕ್ತಿವರ್ಧಕ ಗುಳಿಗೆ ೪೨ ಕ್ರಯ ರೂ. ೨—೪—೦
೩. ಗರ್ಮಿ ರೋಗನಾಶಕ ಗುಳಿಗೆ. ೭ ದಿವಸದಲ್ಲಿ ಖಚಿತ ಗುಣ ೪೨ ಗುಳಿಗೆ ಡಬ್ಬಿ ೧ಕ್ಕೆ ಕ್ರಯ ರೂ. ... ೩—೪—೦
೪. ಟಾಕಿಚಪ್ಪೆನಾಶಕ ಮಲಮು. ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೫. ವಾತನಾಶಕ ತೈಲ. ಯಾವದೇ ತರದ ವಾತವಿದ್ದರೂ ಗುಣ. ಕುಪ್ಪಿ ೧ಕ್ಕೆ ಕ್ರಯ ರೂ. . . .. ೧—೪—೦
೬. ಭೃಂಗಾಮಲಕಾದ್ಯ ತೈಲ. ಶಿರೋರೋಗ ನೇತ್ರರೋಗ ನಿವಾರಣ ಅಕಾಲದಲ್ಲಿ ಆದ ಹಣ್ಣುಕೂದಲು ಕಪ್ಪಾಗುತ್ತವೆ. ಕುಪ್ಪಿ ೧ಕ್ಕೆ ಕ್ರಯ ರೂ. ... ... ೧—೪—೦
೭. ಜಂಬೀರ ತೈಲ ಮೇಲಿನಂತೆ ಗುಣ. ಕುಪ್ಪಿ ೧ಕ್ಕೆ ಕ್ರ. ರೂ ೧—೨—೦
೮. ಮೂಲವ್ಯಾಧಿ ಹರಚೂರ್ಣ. ಡಬ್ಬಿ ೧ಕ್ಕೆ ಕ್ರಯ ರೂ. ೧—೪—೦
೯. ಕಫದಮ್ಮುಹರ ಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ. ೧—೪—೦
೧೦. ಇಸುಬುರುತ್ತಿ ಮಲಮು ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೧೧. ಅಸಾಧ್ಯಕೆಟ್ಟ ಹುಣ್ಣುಗಳಿಗೆ ಮಲಮು.... ... ೧—೪—೦
೧೨. ಮದನೋದ್ಭವ ಚೂರ್ಣ ಡಬ್ಬಿ ೧ಕ್ಕೆ ರೂ. . ೧-೧೨—೦
೧೩. ಅಮೃತಪಾಕ (ವೃದ್ಧನಾದರೂ ಸಶಕ್ತನಾಗುತ್ತಾನೆ) ಅತ್ಯಂತ ಪೌಷ್ಟಿಕ ಶಕ್ತಿವರ್ಧಕ ೪೦ ತೊಲೆ ಡಬ್ಬಿ ೧ಕ್ಕೆ ... ೩—೮—೦
೧೪. ಅಮೃತಗುಟಿ ಅಗ್ನಿವೃದ್ಧಿಕರ ಪಿತ್ತಕಫನಾಶಕ ಜ್ವರಗಡ್ಡೆ ಅಸ್ಥಿಗತಜ್ವರ ನಾಶವಾಗಿ ಶಕ್ತಿ ಬರುತ್ತದೆ ದಮ್ಮು ಕೆಮ್ಮು ಗುಣವಾಗುತ್ತದೆ. ಗುಳಿಗೆ ೪೨ರ ಕ್ರಯ ರೂ. ... ೨—೦—೦

ಈ ಶಿವಾಯ್ ಇನ್ನೂ ಅನೇಕ ಔಷಧಗಳು ಶಿಕ್ಕುತ್ತವೆ ರೋಗದ ಲಕ್ಷಣ ಪೂರ್ಣವಾಗಿ ತಿಳಿಸಿವರೆ ಯೋಗ್ಯ ಕಿಮ್ಮತಿಗೆ ಉತ್ತಮ ಔಷಧಗಳು ಕಳುಹಿಸಲಾಗುವದು.

ಪತ್ತೆ:—ಆರ್. ಯಸ್. ವಝೆ ಕಸಬೆ, ವೈದ್ಯಭೂಷಣ,
ಪೋಸ್ಟು ಶಿರಸಿ, ಜಿಲ್ಲಾ ಉತ್ತರ ಕಾನಡಾ.

ದಿ ಕೆನರಾ ಸ್ಯಾಕಲ್ ಮಾರ್ಟ, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆನ್ಸನ್, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, *Proprietor*
THE CANARA CYCLE MART,
Udipi, S. Canara.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು.

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

ಧಾತುಪೌಷ್ಟಿಕ ವಜ್ರಾಂಗಪಾಕ.

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ, ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ. ೩—೮—೦, ಒಮ್ಮೇಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦. ಟಪ್ಪಾಲು ಖರ್ಚು ಬೇರೆ.

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗನಾಶಕ ಗುಳಿಗೆ ೪೨ಕ್ಕೆ ಉತ್ತಮ ಗುಣ ಕ್ರಯ ರೂ. ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೨೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೇಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ಬೇರೆ.

ಇನ್ನು ಅನೇಕ ಔಷಧಗಳು ನಮ್ಮ ಕಂಪೆನಿಯಲ್ಲಿ ಶಿಗುತ್ತವೆ. ಅನುಪಾನ ಪತ್ರಿಕೆ ಬಂಗಿಯ ಸಂಗಡ ಕಳುಹಿಸುವೆವು.

ನಮ್ಮ ವಿಳಾಸ:— **ವಿ. ಎಸ್. ಮೋಡಕ,**
ಕರ್ಣಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ.

ಯುನಿವರ್ಸಲ್ ಎಸ್ಯುರನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಶ್ಯೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಶ್ಯೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ. ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

			ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	...	ರೂ.	13,329—0—0	22,549—0—0
,, (ವಿವಾಹ)	...	,,	25,670—0—0	38,933—0—0
ಜುಮ್ಲಾ ಕೇಸುಗಳು	...	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	...	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	..	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	...	,,	10,000—0—0	50,000—0—0
(ಜನರಲ್) ರಕ್ಷಿತ ಧನ	...	,,	37,220—0—0	23,778—3—2

ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ. ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಪ್ ಎಶ್ಯೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಾತಿಯನ್ನಿಟ್ಟಿರುವುದು. 2. ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು 3. ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4. ರೂ. 3,00,000ಗಿಂತಲೂ ಹೆಚ್ಚು ಭಾಧ್ಯತೆಗಳನ್ನು ಕೊಟ್ಟಿದೆ 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9. ಡೈರೆಕ್ಟರು — ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರೆ ಬೊನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

"ಬಂಗಾಳಿ" — 14ನೇ ಜನವರಿ 1914 — ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ. ನಾವು ಅದನ್ನು ಓದಿನೋಡಿ ಅದು 61,482 ಪ್ರೊವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೆಸಸುಗಳನ್ನು ಮಾತ್ರವೇ ಮಾಡಿತ್ತು. ಸುಮಾರು 3 ಲಕ್ಷ ಭಾಧ್ಯಕ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ. ಇದರ ಸಾಮರ್ಥ್ಯವುಳ್ಳ ಒಳ್ಳೇ ಮನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟರುಗಳು ಬೇಕಾಗಿವೆ. ಎಲ್ಲಾ ವಿಧದ ಏಜಂಟ್ಸಿ ಶರ್ತಗಳಿಗೆ—

ವಿಳಾಸ:— **ಲಕ್ಷ್ಮಣ ರಾವ್ ಬ್ರದರ್ಸ್,**

[illegible]

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ನಾಂಛಿಸಲೊಲ್ಲಳು? ಇಂತಹ ಕೇಶ ರಾಶಿ ಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡು ತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿ ಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧ ವಾದರೋ ಮಧುರವೂ ಮೋಹಕವೂ ಆಗಿರುವುದು. ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪ ಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋ ಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ, 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0 7-0 ಬೇರೆ.

ಸೂಚನೆ—ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬೆಲೆಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕ ತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ನೀವು ಹೋಗ ದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಿದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೋಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಚಿಟ್ಟಿಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮು ಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೋ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನೂ, ನಿದ್ರಾನಾಶವನ್ನೂ, ಪಕ್ಷಘಾತಗಳನ್ನೂ, ವಾತೋನ್ಮಾದ ವನ್ನೂ, ಅಪಸ್ಮಾರವನ್ನೂ, ಧಾತು ದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯ ನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವ ದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಷಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿ ರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಅವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗ ಗಳನ್ನು ಇವು ಮರಳಿ ರಚನೆಗೈಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಒಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ ಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವ ದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರ ವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢ ವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗು ತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ದಾಹರೀ, ರಾ. ಪಾರಸಾವನೀ, ತಾ, ರಾಮಟೀಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿ ದ್ದೆನು. ಅವುಗಳಿಂದ ನಾನು ವಿಶ್ವಸನೀಯವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಭಾಯಾ ಇಬ್ರಾಹಿಮ್ ಪಟೇಲ್, ಪನವೇಲ್—"ತಾವು ಕಳು ಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಪುನಃ ರವಾನಿಸಿರಿ."

4 ವಿ. ಆರ್. ಚಾಕ್ರೋ, ಡಿಸ್ಟ್ರಿಕ್ಟ ಕೋರ್ಟ್ ವಕೀಲ, ಕೊಟ್ಟಾಯಮ್, ತ್ರಾವಣಕೋರ್ ರಾಜ್ಯ.—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡಿದ್ದೆ. ಅವುಗಳನ್ನು ಉಪಯೋ ಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾನಾಜೀ ನರಸಿಂಗರಾವ್, ಸಂಸ್ಥಾನ ಪಟವನ.—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಹೆಚ್ಚಾದ ಗುಣವನ್ನು ಹೊಂದಿದ್ದುದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: **ದಿ ಊಲನ್ ಮಾರ್ಟ್, ಮಂಗಳೂರು ದ. ಕನ್ನಡಾ**

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯ ವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಡಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು.—ಕಲ್ಲಿಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರ್ಯೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರೆ.

ವಿಳಾಸ:— ಯು. ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

Estd 1888. — ಸನೆ 1888.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟಮಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇವರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ **ಸಾರ್ಸಾಪರಿಲ್ಲೆ**ಯು. ಕ್ರಯ ಬಾಟ್ಲಿಗಳಿಗೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. ...ಸಾವಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ತಮ್ಮ ವಿಳಾಸ—ಬಿ. ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವಿಷಮ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦. ಶಾಲ್ಮಲೀ ಪಾಕ. ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*

Vepery Post, MADRAS

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ಸೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಚಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ನಟ್ಟುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ: ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1೦ಂದ 12 ಕುಪ್ಪಿ ವರೇಗೆ ಪೋಸ್ಟೇಜು 4 ಆಣೆ.



೨. ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಬಿಟ್ಟಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟಿದ ಕಟ್ಟು ಕೊಡಲನೇ ವೇಳೆಯಲ್ಲೇ, ಗುಣತ ತೋರುತ್ತದೆ. ಸಮಯದಲ್ಲಿ ಬೇಕಾದೀತು! ಒಂದೇ ಒಂದು ಕುಪ್ಪಿಯು ನಿಮ್ಮಲ್ಲಿರಲಿ! ಉಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಮಾಡುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ತಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು.

ಡೋಂಗರೆ
ಇವರ
ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ವೆಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟಿದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ. ಎಲ್. ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು.

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟ್ಲಿ ಒಂದರ ಕಿಮ್ಮತು 0—12—0. ಟಪ್ಪಾಲ ಖರ್ಚು 0—4—0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ

Girgaon, Bombay. ಗಿರಗಾಂವ ಮುಂಬಯಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು.

ಡಬ್ಬಿ 1ಕ್ಕೆ 0—6—0.
3 ಡಬ್ಬಿಗಳಿಗೆ 1—0—0

ದಂತಮಂಜನ.

ಹಲ್ಲುಗಳಿಂದ ಬರುವ ರಕ್ತ ನಿಲ್ಲಿಸುತ್ತದೆ. ಹಲ್ಲುಗಳು ಘಟ್ಟಿಯಾಗುತ್ತವೆ.

ಪೆಕೆಟ್ 1ಕ್ಕೆ 0—2—0.
ಡಜನ್ 1ಕ್ಕೆ 1—2—0

ಮೋಹಿನೀ ತೈಲ.

ಕೂದಲುಗಳು ಕಪ್ಪಾಗಿಯೂ, ನಯವಾಗಿಯೂ, ಉದ್ದವಾಗಿಯೂ ಬೆಳೆಯುವವು. ಇದರಲ್ಲಿ ಸ್ಪಿರಿಟು ವಗೈರೆ ಇಲ್ಲಾ.

ಬಾಟ್ಲಿ 1ಕ್ಕೆ 0—12—0.
ಮೂರು ಬಾಟ್ಲಿಗಳಿಗೆ 2—2—0.

ಅಮೃತಾಂಜನ

ತಲೆನೋವು, ವಾತ, ಸಂಧಿ ವಾತ, ಶಿರೋಭಾರ, ಅರ್ಧಾಂಗವಾಯು, ಶೀತ, ಕೆಮ್ಮು

ಎದೆ ನೋವು, ಸೊಂಟದ ನೋವು, ಕಫ, ಹಲ್ಲುನೋವು, ಘಾಯ, ಉರಿ, ಮೊದಲಾದ

ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧಿ

ಲಕ್ಷಾನುಲಕ್ಷ ಬಾಟ್ಲಿಗಳು ಮಾರಲ್ಪಟ್ಟವು.

ಹಿಂದುಸ್ಥಾನದ ಎಲ್ಲಾ ಔಷಧಾಲಯಗಳಲ್ಲಿಯೂ ಸ್ಟೋರುಗಳಲ್ಲಿಯೂ ಮಾರಾಟಕ್ಕೆ ದೊರಕುವುದು.

ಬಾಟ್ಲಿ ಒಂದರ ಕಿಮ್ಮತ್ತು 0-8-0 ಡಜನ್ ಒಂದಕ್ಕೆ 5-4-0 ವಿ. ಪಿ. ಪ್ರತ್ಯೇಕ

ಮಂಗಳೂರಲ್ಲಿ

ಮರ್ಕೆಂಟಾಯಿಲ್ ಮಿಶನ್ ಬ್ರೆಂಚ್.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್.

ಪರ್ಕ್ ಎಂಡ್ ಸನ್ಸ್.

ಉಡುಪಿ ಮತ್ತು ಕುಂದಾಪುರದಲ್ಲಿ.

ಕೊಚ್ಚಿಕಾರ್ ಬ್ರದರ್ಸ್.

ಕುಮಟೆ ಆರ್. ಪಿ. ಪೈ ಎಂಡ್ ಕಂಪನಿ.

ಅಮೃತಾಂಜನದ ಸೆಂಪಲ್ ಕರಡಿಗೆ ಒಂದಾಣೆಗೆ ಊಲನ್ ಮಾರ್ಕೆಟ್‌ನಲ್ಲಿ ದೊರೆಯುವದು.

ಅಮೃತಾಂಜನ ಡಿಪೋ,

109 ಫೇಯರ್ ರೋಡ,

ಮುಂಬಯಿ.

Printed & Published by V. S. Kamath at the Mangalore Trading Association's Sharada Press, Mangalore

Registered No. 498 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0.

ಪುಸ್ತಕ VIII | ಮಂಗಳೂರು ತಾ. 14ನೇ ಆಗೋಸ್ತು ಶುಕ್ರವಾರ 1914. | ಸಂಚಿಕೆ 33

ಆಬಾಲವೃದ್ಧರು ಓದುವುದಕ್ಕೆ ತಕ್ಕವಾಗಿಯೂ ಬಹು ಮನೋಹರಗಳಾಗಿಯೂ ಇರುವ ಕನ್ನಡ ಗ್ರಂಥಗಳು.

(ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ| ರಾ| ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ. ಯವರಿಂದ ಕನ್ನಡಿಸಲ್ಪಟ್ಟವು)

೧. ಸತ್ಯರಾಜಾ ಪೂರ್ವದೇಶ ಯಾತ್ರೆಗಳು—ಭಾಗ ೧— ಸ್ತ್ರೀಮಲೆಯಾಳವೆಂಬ ಸಂಪೂರ್ಣ ಕಥೆ. ರಾವ್ ಬಹದ್ದೂರ್ ವಿರೇಶ ಲಿಂಗಂಪಂತಲೆಂಬ ಆಂಧ್ರ ಲೇಖಕ ಶಿರೋಮಣಿಗಳಿಂದ ತೆಲುಗಿನಲ್ಲಿ ಬರೆಯಲ್ಪಟ್ಟ ಬಹು ರಸಭರಿತವಾದ ಕಲ್ಪನಾಕಥೆ ಶುದ್ಧವೂ ಲಲಿತವೂ ಆದ ಕನ್ನಡದಲ್ಲಿ ಪರಿವರ್ತಿತವಾಗಿದೆ. ಮೈಸೂರು ಗವರ್ನಮೆಂಟಿನವರಿಂದಲೂ ಕರ್ಣಾಟ ಮಹಾಜನರುಗಳಿಂದಲೂ ವಿಶೇಷವಾದ ಪ್ರೋತ್ಸಾಹವನ್ನು ಹೊಂದಿದೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ **ಬೆಲೆ ೮ ಆಣೆ**

೨. ಕೃಷ್ಣಾಕುಮಾರಿ—ಈ ಅದ್ಭುತವಾದ ವಚನ ನಾಟಕವು ಮೂಲ ಬಂಗಾಳಾ ಭಾಷೆಯಲ್ಲಿ ಕವಿಶ್ರೇಷ್ಠ ಮಧುಸೂದನ ದತ್ತರಿಂದ ಬರೆಯಲ್ಪಟ್ಟು ನೂತನವಾಗಿ ಕನ್ನಡಿಸಲ್ಪಟ್ಟದೆ ಆರ್ಯ ಕುಲಾಂಗನೆಯರಿಗೆ ಆದರ್ಶ ಸ್ವರೂಪಳಾದ ಈ ರಜಪೂತ ಕುಮಾರಿಯ ಜಾಜ್ವಲ್ಯವಾದ ಸ್ವದೇಶ ಭಕ್ತಿಯು ವಾಚಕರನ್ನು ಕ್ಷಣಮಾತ್ರದಲ್ಲಿ ತಲ್ಲೀನರನ್ನಾಗಿ ಮಾಡುತ್ತಿದೆ. ಇಂಥ ಉತ್ಕೃಷ್ಟವಾದ ನಾಟಕವು ಕನ್ನಡದಲ್ಲಿ ಬೇರೊಂದು ಇರುವುದು ಸಂದೇಹವು. ಉತ್ತಮವಾದ "ಗ್ಲೇಜ್" ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಅಚ್ಚಾಗಿದೆ ಬೆಲೆ ೧೦ ಆಣೆ

೩. ಸದಾಹಾರ ವಿವೇಚನೆ—ಚಿರಸ್ಮರಣೀಯರೂ ಪರಮ ಪೂಜ್ಯರೂ ಆದ ಬ್ರಹ್ಮೀಭೂತ ಶ್ರೀಮದ್ವಿವೇಕಾನಂದ ಸ್ವಾಮಿಯವರ "ಪೂರ್ವ ಮತ್ತು ಪಶ್ಚಿಮ"ವೆಂಬ ದಿವ್ಯವಾದ ಲೇಖನದಿಂದ ಆಹಾರ ವಿಷಯಕವಾದ ಭಾಗಗಳನ್ನು ಮಾತ್ರ ಸಂಗ್ರಹಿಸಿ ಕನ್ನಡಿಸಲಾದ ಈ ಚಿಕ್ಕ ಪುಸ್ತಕದೊಳಗೆ ಅಂತರ್ಗತವಾದ ದಿವ್ಯಾಭಿಪ್ರಾಯಗಳನ್ನು ಆರ್ಯಧರ್ಮಾಭಿಮಾನಿಗಳಾದ ಸಮಸ್ತರೂ ಅಗತ್ಯವಾಗಿ ತಿಳಿದುಕೊಳ್ಳಬೇಕೆಂದು ಸೂಚಿಸುವೆವು **ಬೆಲೆ ೨ ಆಣೆ**

ನಿತ್ಯ ಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯೋಗವಾದ ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನಂ 0—3—0, ದೇವಪೂಜಾ ಪದ್ಧತಿ 0—3—0, ಋಗ್ವೇದಿ ಬ್ರಹ್ಮಯಜ್ಞವೈಶ್ವದೇವ 0—3—0, ವಾಯುಸ್ತುತಿ 0—2—0, ದ್ವಾದಶಸ್ತೋತ್ರ 0—2—0, ವಿಷ್ಣುಸಹಸ್ರನಾಮಸ್ತೋತ್ರ 0—2—0, ಪ್ರಾತರಾಹ್ನಿಕ ಪದ್ಧತಿ 0—3—0, ಶ್ರೀಸೂಕ್ತ ಪುರುಷಸೂಕ್ತ 0—1—0, ಗೋಪಿಕಾಗೀತೆ 0—1—0, ಪುರಂದರ ದಾಸರ ಕೀರ್ತನೆಗಳು 0—6—0, ಉದಯ ರಾಗ 0—4—0, ಲಕ್ಷ್ಮೀ ಶೋಭಾನೆ ಹಾಡು 0—2—0, ಹರಿಭಕ್ತಿಸಾರ 0—1—0, ಸ್ವಪ್ನ ಪದ ಮಧ್ವನಾಮ 0—1—6, ತುಲಸೀ ಸಂಕೀರ್ತನೆಗಳು 0—2—0, ಕುಮುದಾ 0—8—0, ಈಗ 0—6—0, ಮಹಾರಾಣಿ ಗೃಹಶೀಲೆ 0—3—0, ಪೇಶ್ವೆನಾರಾಯಣರಾವ್ 0—3—0, ಬಾಲಿಕಾನೀತಿಮಾಲಿಕೆ 0—2—0, ರಾಜಭಕ್ತಿಸಾರ 0—2—0, ಹನುಮದ್ರಾಮಾಯಣ ರೂ. 2—1—0, ಚಂದ್ರಾವಲೀ ವಿಲಾಸ 8 ಆಣೆ, ಆಚಾರ ದರ್ಪಣ 4 ಆಣೆ ಚಂದ್ರಹಾಸಾಭ್ಯುದಯ 4 ಆಣೆ.

ಈಗಲೇ ಬಂದಿವೆ!

ಗೃಹಕೃತ್ಯದ ಉಪಯೋಗಕ್ಕೂ ವೈದ್ಯರಿಗೂ ಅಗತ್ಯವಾಗಿರುವಂಥಾ ಮತ್ತು ಜ್ವರವನ್ನು ನಿಧಾನಿಸಿಕೊಳ್ಳಲು ಅತ್ಯುಪಯುಕ್ತಗಳಾದಂಥಾ

ಥರ್ಮೊಮಿಟರ್‌ಗಳು.

ಅರ್ಧ ಮಿನಿಟಿನಲ್ಲಿ ಜ್ವರ ಎಷ್ಟುಂಟೆಂದು ತಿಳಿಸುವವುಗಳಿಗೆ ಒಂದಕ್ಕೆ ಕ್ರಯ ರೂಪಾಯಿ 2-12-0. ಯೋಗ್ಯವಾದವುಗಳೆಂತ ಪರೀಕ್ಷಿಸಲ್ಪಟ್ಟು ಸರ್ಟಿಫಿಕೇಟು ಉಳ್ಳವುಗಳಿಗೆ ರೂ. 3, ಗಡಿಯಾರಿನ ಸರಪಣಿಯಂತೆ ಸರಪಣಿ ಇದ್ದು ಅಂಗಿ ಕಿಸೆಯಲ್ಲಿ ಭದ್ರವಾಗಿಡಲಿಕ್ಕೆ ಆಗುವಂಥವುಗಳಿಗೆ ರೂ. 3—4—0.

ಸೆಂಟರೊಡ್ಸ್‌ಗಳು: ಕ್ರಯ 3 ಆಣೆ

ಪರಿಮಳ ದ್ರವಗಳಂತೆ ದ್ರವಿಸಿ ಹೋಗುವಂಥವುಗಳಲ್ಲ ಮತ್ತು ಸೆಂಟೆಡ್ ಕಾರ್ಡುಗಳಂತೆ ಬೇಗನೆ ಚಿಂದಿಯಾಗಿ ಹೋಗುವಂಥವುಗಳಲ್ಲ. ಪರಿಮಳ ಸಾರವನ್ನು ಘನಪದಾರ್ಥರೂಪದಲ್ಲಿ ಸಂಗ್ರಹಿಸಿರುವ ಕಡ್ಡಿಗಳು.

ಡೂಪಾನ್!

ಮಳೆಗಾಲದಲ್ಲಿ ಸ್ಪಾಕಲುಗಳಿಗೆ ನೀರು ತಾಗಿ ಮಣ್ಣು ಹಿಡಿಯುವುದರಿಂದ ಸ್ಪಾಕಲುಗಳನ್ನು ಉಪಯೋಗಿಸುವುದು ಸಾಧ್ಯವಲ್ಲ. ಆದರೆ ಸ್ಪಾಕಲುಗಳಿಗೆ 'ಡೂಪಾನ್'ನ್ನು ಹಚ್ಚಿಬಿಟ್ಟರೆ ಇವುಗಳನ್ನು ನೀರಿನಲ್ಲಿ ಅದ್ದಿದರೂ ಮಣ್ಣು ಹಿಡಿಯದು. ಇದರ ಬಾಟ್ಲಿ ಒಂದಕ್ಕೆ ರೂ. 1—12—0.

ಶಿಖೆ ಕಾಲದ ರಜೆಯು ತೀರಿ ಶಾಲೆಗಳು ತೆರಿಯೋಣಾಗಿವೆ.

ವಿದ್ಯಾರ್ಥಿಗಳೆಲ್ಲವರಿಗೆ ಅನುಕೂಲವಾದ ದರದ ಫೌಂಟನ್ ಪೇನುಗಳು ಈಗಲೇ ಬಂದಿವೆ. ಕ್ರಯ—1ಕ್ಕೆ ರೂ. 1—14—0ರಿಂದ ರೂ. 7—14—0ರ ವರೆಗಿರುವುದು. ನೆಪ್ಚುನ್, ಬ್ಲೆಕ್‌ಬರ್ಡ್, ಅಲೆಕ್ಸಾಂಡ್ರಾ, ವೊಟರ್‌ಮೇನ್, ಸ್ವಾನ್, ಸೀತಾ, ಶಾಂತಾ, ಆನಂದ ಈ ಎಲ್ಲಾ ಜಾತಿ ಪೇನುಗಳಿರುವವು.

ವಿಳಾಸ:—

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ರಥಬೀದಿ ಮಂಗಳೂರು.

ಹಾರ್ಮೋನಿಯಂ ಸ್ವಯಂ ಬೋಧಿನೀ.

ಕನ್ನಡದಲ್ಲಿ ಇಂತಹ ಪುಸ್ತಕವು ಇದುವರೆಗೆ ಒಂದಾದರೂ ಪ್ರಚುರವಾಗಿಲ್ಲ. ಉತ್ತರ ಕರ್ನಾಟ, ಮಧ್ಯ ಕರ್ನಾಟ, ಮತ್ತು ದಕ್ಷಿಣ ಕರ್ನಾಟ ಈ ಮೂರು ರಾಜ್ಯಗಳಲ್ಲಿರುವ ಕನ್ನಡಿಗರಿಗೂ ಅನುಕೂಲಿಸುವಂತೆ ಪುರಂದರ ದಾಸರ ಕೀರ್ತನೆಗಳೇ ಮುಂತಾದ ಕನ್ನಡ ಕೀರ್ತನೆಗಳನ್ನು ಮಾತ್ರವೇ ಆರಿಸಿ ಎಲ್ಲರೂ ತಿಳಿದುಕೊಳ್ಳುವಂತೆ ಸುಲಭ ಮಾರ್ಗದಲ್ಲಿ ಬರೆದಿದೆ. ಇದರಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಸ್ವರಸ್ಥಾಯಿಗಳೂ ವಿವರವಾಗಿ ಕೊಟ್ಟಿರುವುದು ದ [illegible] ದಲ್ಲಿಯೂ ಸಂದೇಹಕ್ಕೆ ಅಸ್ಪದವೇ ಇರುವುದಿಲ್ಲ. ಹಾರ್ಮೋನಿ [illegible] ಇದ [illegible] ಅನೇಕ ವಿಷಯಗಳು ತಿಳಿಯಬರುವವು.

ಬೆಲೆ ಆಣೆ ೦—೪—೦ ಅ [illegible] ಬೇರೆ

ಕೂರವೆ [illegible] ಗಕ್ಕೆ	೧೪—
ದುರ್ಗೇಶ ನಂದಿನಿ "	೧—೪—೦
ವ್ರತಚೂಡಾಮಣಿ "	೧—೦—೦
ಇಬಿ ವ್ರತವುಳ್ಳ ವ್ರತವಲ್ಲಿ ಗಕ್ಕೆ	೦—೬—೧
ವ್ಯಾಪಾರ ಧರ್ಮಸೂಚಿಕೆ "	೦—೬—೦
ನವೀನ ಭರತಖಂಡ "	೦—೫—೦
ಬಸವರಾಜೇಂದ್ರ ವಿಜಯ	೦ ೧೨—೦
ಮುಕುಂದ ಮಾಲಾ ಸ್ತೋತ್ರ "	೦—೨—೦
ಮಹಿಮ್ನ ಸ್ತೋತ್ರ	೦—೩—೦
ಶುಕಸಪ್ತತಿ	೧ ೬—೦

ನೇ[illegible] ಪುಸ್ತಕಗಳನ್ನ ೧—೦—೦ ಕಮ್ಮಿ ಇಲ್ಲದೆ ತರಿಸಿಕೊಳ್ಳತಕ್ಕವರಿಗೆ ತಿಲಕ್ [illegible] ಪತ್ರವ್ಯವಹಾರದ ಮೂಲಕ ವ್ಯಾಪಾರ ನಡಸುವ ಪ್ರಯೋಜನ [illegible] ಈ ಎಂತ ಪುಸ್ತಕಗಳೂ ಬಹುಮಾನವಾಗಿ ಕೊಡವೆವು. ವಾಸಲ ಪ್ರತ್ಯೇಕ.

ವಿಳಾಸ — ಎಚ್ ಎನ್ ರಾವ್ ಅಂಡ್ ಬ್ರದರ್ಸ್,
ಪುಸ್ತಕ ವ್ಯಾಪಾರಸ್ಥರು,
[illegible]ಪೇಟೆ, ಬೆಂಗಳೂರು ಸಿಟಿ.

ಒಮ್ಮೆ ಓದಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.



ಬಳ್ಳಾರ ಮಿಶ್ಶನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಶನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಬೆಟ್ಟ ಎಂಬ ಗುರುಸು ಕಲ್ಲು ಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ



ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟ, [illegible] ಮಂಗಳೂರು.

ಬರ್ಮೀಸ್ ಬ್ಯುಟಿ ಒಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.

ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳ ತಲೆ, ತಲೆಬಾಶಿ, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿ ಕೊಡುವುದು ಚಲೋದಾಗಿರುವುದು. ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ದಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು. ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯುವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ ಚಾರ್ಜು ಬೇರೆ

ಒಟ್ಟೊ ಪೆರೆಡ್ಯಾಸ್.

ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧನಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ರಿನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಜಿನದಕ್ಕೆ	0—8—0.
ನಡುತರದ್ದಕ್ಕೆ	0–12—0.
ದೊಡ್ಡ ಸ್ಯಾಜಿಗೆ	1–14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದ ಫ್ಲೋರಲ್ ಪರ್‌ಫ್ಯುಮರಿ ಕಂಪೆನಿ
ಮುಂಬಯಿ.

ಒಂದೇ ತಿಂಗಳು! ಮಿಂಚಿ ಹೋದ ಮೇಲೆ ಚಿಂತಿಸ ಬೇಡಿ!!

ಅಲ್ಪ ಬೆಲೆ!!!

ಬೇರೆ ಬೇರೆ ಪುಸ್ತಕಗಳಿಗೆ ವೃಥಾ ಹೆಚ್ಚು ಹಣವನ್ನು ವೆಚ್ಚ ಮಾಡಬೇಡಿ!!

ಸುಳ್ಳಿಗೆ ನೂರಾರು ದಾರಿ! ನಿಜಕ್ಕೆ ಒಂದೇ ದಾರಿ!!

ನಿಮ್ಮ ಪರೀಕ್ಷೆಗಾಗಿ ಮೊದಲು ಒಂದು ಪ್ರತಿ ಮಾತ್ರ ೧-೮-೧ ಗೆ ಟಪ್ಪಾಲು ಖರ್ಚು ಇಲ್ಲದೆ ದೊರೆಯುತ್ತೆ.

೩ ಪುಸ್ತಕಗಳೂ ಒಟ್ಟಾಗಿ ಒಂದರಲ್ಲೇ ಬೈಂಡಾಗಿವೆ.

ಈ ದಿನವೇ ಒಂದು ಕಾರ್ಡು ಬರಿಯಿರಿ! ಬೇಗ ಬೇಗ ಬರಿಯಿರಿ!!

ಬಹುಮಾನ—

ಒಟ್ಟಾಗಿ ತರಿಸಿಕೊಳ್ಳುವವರಿಗೆ, ೬ ಪ್ರತಿಗೆ ಒಂದು ಉತ್ತಮವಾದ ಭಗವದ್ಗೀತೆ [ಟೀಕು, ತಾತ್ಪರ್ಯ ಸಹ ಉಳ್ಳದ್ದು]. ೫ ಪ್ರತಿಗೆ ೧ ಪ್ರತಿ ಉಚಿತ. ಅಂಚೆ ವೆಚ್ಚ ಮಾಫಿ.

ಆಂಗ್ಲಭಾಷಾ ಪ್ರಕಾಶಕ

೭೦ ಭಾಗಗಳೂ ಒಂದರಲ್ಲೇ ಅಡಗಿವೆ. ಒಂದೇ ತಿಂಗಳು ಟಪ್ಪಾಲ್ ಖರ್ಚಿಲ್ಲ.

(ಸ್ವತಃ ಇಂಗ್ಲೀಷು ಕಲಿಯುವುದಕ್ಕೆ ಅತ್ಯುಪಯೋಗವಾದದ್ದು)

ಇದರಲ್ಲಿ ಇಂಗ್ಲೀಷು ವರ್ಣಮಾಲೆ, ಬರಿಯುವ ಸಾಧನೆಗಳು, ಶಬ್ದಸಂಯೋಜನ, ಸ್ವರಾಕ್ಷರಗಳ ವಿಧ ವಿಧ ಶಬ್ದಾಭ್ಯಾಸ, ಉಚ್ಚಾರಣೆ—ಅರ್ಥ; ವಾಕ್ಯಗಳನ್ನು ಜೋಡಿಸುವ ಕ್ರಮ, ಲೆಖ್ಖಗಳು, ಪಾಠಶಾಲೆಯಲ್ಲಿ ೫ ವರ್ಷ ಕಲಿಯುವಷ್ಟು ವ್ಯಾಕರಣ ವಿಧಿ, ವಿಧಾನಗಳು, ಇವುಗಳಿಗೆ ನೂರಾರು ಸಾಧನೆಗಳು, ನಾನಾವಿಧ ವಾಕ್ಯಗಳನ್ನು ಮಾಡುವ ಸುಲಭ ಅಭ್ಯಾಸಗಳು; ಇಂಗ್ಲೀಷು ಸಂಪ್ರದಾಯ ಮತ್ತು ಭಾಷಾ ಶೈಲಿ, ಮತ್ತು ಭಾಷಾಂತರ ಮಾಡುವ ವಿಧಾನಗಳು, ಇವುಗಳಿಗೆ ನೂರಾರು ಸಾಧನೆಗಳು; ಭಾಷಾ ಜ್ಞಾನಕ್ಕೆ ಬೇಕಾದ ಅನೇಕ ಚಿಕ್ಕ ಕಥೆಗಳು; ಸಂಭಾಷಣಾ ಕ್ರಮಗಳು; ಸಂಭಾಷಣೆಯಲ್ಲಿ ಪ್ರತಿಯೊಂದು ವಿಷಯಕ್ಕೂ ಬೇಕಾಗುವ ಕನ್ನಡ—ಇಂಗ್ಲೀಷ್, ಇಂಗ್ಲೀಷ್—ಕನ್ನಡ ಶಬ್ದಕೋಶ (ನಾಣ್ಣುಡಿಯ ನಿಘಂಟು) ೭೪ ಪುಟಗಳು; ಪ್ರಶ್ನೋತ್ತರ ರೂಪವಾದ ಸಂಭಾಷಣಾ ವಾಕ್ಯಗಳು ೮೦೦, ಕನ್ನಡ—ಇಂಗ್ಲೀಷು ಗಾದೆಗಳು. ಸಾಂಕೇತಿಕ ಲೇಖನ ಚಿನ್ಹೆಗಳು. ತಂತೀ ವರ್ತಮಾನ, ಕ್ಷೇಮಸಮಾಚಾರ, ಲೇವಾದೇವಿ ಕಾಗದಗಳು, ಅರ್ಜಿಗಳು ಮುಂತಾದುವು ಬರಿಯುವ ಅಭ್ಯಾಸಗಳು, ಇವುಗಳಿಗೆ ನೂರಾರು ಮಾದರಿಗಳು ಅಡಿಗಿವೆ. ಹೆಚ್ಚು ಪ್ರತಿಗಳಿಲ್ಲ. ತ್ವರೆ ಮಾಡಿರಿ. ಕ್ರಯ **1-8-0.**

☞ ನಮ್ಮ ವಿಳಾಸ—

ಎ. ವಿ. ರಾಯಲು,
ಅವಿನ್ಯೂ ರೋಡ್ಡು,
ಬೆಂಗಳೂರು ಸಿಟಿ.

ಕಳವು, ದರೋಡೆ.

ಡಕಾಯಿತಿ, ಅಕ್ರಮ ಸ್ತ್ರೀಸಂಗಮ, ಅಸಾಮಿಖಾಡೋರಿ, ಮಾನಭಂಗ, ಮಾನನಷ್ಟ ಮುಂತಾದವುಗಳಿಗೆ ಶಿಕ್ಷೆ ವಿಧಿಸಿರುವ ದಂಡ ನೀತಿಶಾಸ್ತ್ರವು ಪೂರ್ವದಲ್ಲಿ ಶುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮಂಜೂರಾಗಿ ಕಲ್ಕತ್ತಾ, ಮುಂಬೈ, ಮದ್ರಾಸು, ಮೈಸೂರು ಜಿಲ್ಲಾಗಳಲ್ಲಿ "ಕನ್ನಡ ಇಂಡಿಯನ್ ಪೆನಲ್‌ಕೋಡ್" ಎಂಬ ಅಭಿದಾನದಿಂದ ಜಾರೀಲಿ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಟಿಪ್ಪಣಿಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವದು. ಕ್ರಯ: ದಪ್ಪ ಕಾಗದದ್ದು ರೂ. ೨—೦—೦. ಹಸನು ಕಾಗದದ್ದು ರೂ. ೨—೮—೦.

ಕೆಟಲಾಗು ಬೇಕಾದವರು ಈ ವಿಳಾಸಕ್ಕೆ ಬರೆಯಿರಿ.

ವಿಳಾಸ:—ಬಿ ನರಸಿಂಗರಾವ್,
ಎಡಿಟರ್ ಲಾ ಗಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ

ಕಣ್ಣು ಇಲ್ಲದಿದ್ದರೆ ಕಲಿಯುಗವೇ ಇಲ್ಲ.

ಭಾರೀ ಕ್ರಯದ ಕನ್ನಡಕಗಳು ಕ್ರಯ ರೂಪಾಯಿ 2—8—0.

ಸ್ಫಟಿಕದ ಕನ್ನಡಕವನ್ನು ಉಪಯೋಗಿಸಿ ನಿಮ್ಮ ದೃಷ್ಟಿಯನ್ನು ಕಾಪಾಡಿಕೊಳ್ಳಿರಿ ಅಲ್ಪ ಕ್ರಯದ ಕನ್ನಡಕಗಳು ದೃಷ್ಟಿಯನ್ನು ಹೋಗಲಾಡಿಸಿ ಕ್ರಮೇಣ ವ್ಯಾಧಿಯನ್ನುಂಟುಮಾಡುತ್ತೆ. ಆದಕಾರಣ ಅವುಗಳನ್ನು ಉಪಯೋಗಿಸಬೇಡಿರಿ. ನಮ್ಮಲ್ಲಿ ಸ್ಫಟಿಕದ ಕನ್ನಡಕಗಳು ಕ್ರಯಕ್ಕೆ ದೊರೆಯುತ್ತೆ. ಬೇಕಾದವರು ಬರೆದರೆ ಎಲ್ಲಾ ತರಹದ ಮತ್ತು ಎಲ್ಲಾ ನಂಬರಿನ ಕನ್ನಡಕಗಳಿರುವ ಭಾರೀ ಕ್ರಯದ ಪೆಟ್ಟಿಗೆ ಒಂದನ್ನು ಉಚಿತವಾಗಿ ಕಳುಹಿಸುತ್ತೇವೆ. ಬಾಕೀ ವಿಷಯಗಳು ನಿಮ್ಮ ದರಕಾಸ್ತು ಬಂದನಂತರ ಬರದು ತಿಳಿಸುತ್ತೇವೆ.

ವಿಳಾಸ:—ನಿಲಕರ್ ಅಂಡ್ ಬ್ರದರ್ಸ್, ತಿರುವಲ್ಲಕ್ಕೇಣಿ, ಮದರಾಸು.

ಆನಂದನಾಮ ಸಂವತ್ಸರದ ಕೈಘಡಿಯಾರ. ಅರ್ಧಕ್ರಯ 1—13—0 ಗೆ



ಇದು ಆನಂದನಾಮ ಸಂವತ್ಸರದ ಮಹೋತ್ಸವಕ್ಕಾಗಿ ಈ ಭಾರೀಕ್ರಯದ ಗಡಿಯಾರವನ್ನು ಈ ತಿಂಗಳು ಆಖೈರು ಒಳಕಾಗಿ ತರಿಸಿಕೊಳ್ಳುವವರಿಗೆ ಸುಂದರವಾದ ಪೆಟ್ಟಿಗೆ ಸಹಿತ 1—13—0 ಗೆ ಕೊಡಲ್ಪಡುತ್ತೆ.

ವಿಳಾಸ:—ರಾಮರಾವ್,
ಜನರಲ್ ಮರ್ಚೆಂಟ್,
18 ಯಸ್. ಯಂ ಕೋಯಿಲ್ ಸ್ಟ್ರೀಟ್, ತಿರುವಲಕ್ಕೇಣಿ, ಮದರಾಸು.

ಮದುರೆ ಜುನ್ನಡಿ ಅಂಚಿನ ಸೀರೆ

ಸುಂದರವಾದ ಸಿಂಗಪೂರ್ ಚೀಟಿ ರವಕೆ ಇನಾಂ ಸಹಿತ ಕ್ರಯ ರೂ. 2-4-0.

ಇದು ಉಡುವದಕ್ಕೆ ದಡೂತಿಯಾಗಿಯೂ, ನೋಡುವದಕ್ಕೆ ನಯವಾಗಿಯೂ, ಕೊಳ್ಳಲು ಬೆಲೆ ಸುಲಭವಾಗಿಯೂ, ಇದೆ. ಬಣ್ಣ ಹೋಗದ್ದು. ಉದ್ದ 18 ಮೊಳ ಧಾರಾಳವಾಗಿದೆ.

ವಿಳಾಸ:—ಯಸ್. ಯಂ. ಮೂರ್ತಿ ಕಂಪೆನಿ,
ತಿರುವಲ್ಲಕ್ಕೇಣಿ ಮದಾರಾಸು.

ಸ್ವಲ್ಪ ಹೊತ್ತು ನಿಂತುಕೊಳ್ಳಿ!

ಅಗರಬತ್ತಿ ಅಥವಾ ಸುಗಂಧದ ಬತ್ತಿ.

ಪ್ರಸಿದ್ಧವಾದ ಅಂಬರು, ಪುನಗು, ಕಸ್ತೂರಿ, ಪನ್ನೀರು, ಜಂತುವಿನಾಸಿನಿ ಬತ್ತಿಗಳು, ಅರಗಜ ಅಥವ ಹಸೀಗಂಧ ಬಿಲ್ಲೆಗಳು, ಪನ್ನೀರು ಅಥವಾ ರೋಸ್ ವಾಟರು, ಹಿಂದೂ ಸೆಂಟುಗಳು, ಸುವ್ವಾಸನೇ ದ್ರವ್ಯಗಳು, ಇವುಗಳೆಲ್ಲಾ ಉತ್ತಮವಾದ ಪದಾರ್ಥಗಳಿಂದ ಮಾಡಲ್ಪಟ್ಟಿವೆ. ಬಹಳ ಸುಲಭ ಕ್ರಯಕ್ಕೆ ದೊರೆಯುತ್ತೆ. ವ್ಯಾಪಾರಗಾರರಿಗೆ ಕಮಿಷನ್ ಕೊಡಲ್ಪಡುತ್ತೆ. ಯಾವ ವಿಷಯಕ್ಕೂ ಈ ಕೆಳಗೆ ಬರೆದಿರುವ ಅಡ್ರೆಸಿಗೆ ಬರೆದರೆ ಕಳಿಸಲ್ಪಡುತ್ತೆ.

ಮ್ಯಾನೇಜರ್,
ಸುದೇಶಿ ಪರಫ್ಯೂಮರೀ ವರ್ಕ್ಸ್, ಬೆಂಗಳೂರು ಸಿಟಿ.

ಮೇಲೆ ಕಂಡ ವಿವರಣದಿಂದ ಇಂಗ್ಲೆಂಡಿನ ಜಲಸೈನ್ಯವು ಪ್ರಪಂಚದಲ್ಲಿ ಅನುಪಮವಾದುದೆಂದು ವ್ಯಕ್ತವಾಗುತ್ತದೆ. ಆದರೆ ಭೂಸೈನ್ಯದಲ್ಲಿ ಅದನ್ನು ಮೀರಿಸಿದ ರಾಜ್ಯಗಳು ಇರುತ್ತಿವೆ. ಮತ್ತೂ ಈಗಿನ ಕಾಲದಲ್ಲಿ ಆಕಾಶವಿಮಾನಗಳ ಮೂಲಕವಾದ ಯುದ್ಧಸಾದನಗಳು ರೂಢಿಗೆ ಬಂದಿವೆ. ಇಂಥಾ ವಿಮಾನಗಳಲ್ಲಿ ಮದ್ದು ಗುಂಡುಗಳನ್ನಿಟ್ಟುಕೊಂಡು ಕ್ಷಣಕಾಲದಲ್ಲಿ ಪುರಗ್ರಾಮಗಳನ್ನೂ ಸೇನಾವ್ಯೂಹವನ್ನೂ ಸಿಡಿಮದ್ದಿನ ಏಟಿನಿಂದ ಪುಡಿ ಪುಡಿಮಾಡುವ ಸಾಹಸವು ಪ್ರಬಲಿಸಿದೆ. ಇಂಥಾ ಆಕಾಶವಿಮಾನಗಳು, ಜರ್ಮನಿಗೂ ಫ್ರಾನ್ಸಿಗೂ ರುಷ್ಯಾಕ್ಕೂ ಇರುವಷ್ಟು ಇಂಗ್ಲೆಂಡಿಗೆ ಇರುವುದಿಲ್ಲ. ಇವೆಲ್ಲ ವಿದ್ಯಮಾನಗಳನ್ನು ನೋಡಿದರೆ ಪ್ರಬಲ ರಾಷ್ಟ್ರಗಳಲ್ಲಿ ಒಂದರ ಬಲವನ್ನು ಮತ್ತೊಂದು ಬೇರೊಂದು ಬಲದಿಂದ ಮೀರುತ್ತಲಿವೆ. ಆದರೆ ಯುದ್ಧಪ್ರಸಕ್ತಿ ಬಂದಾಗ ಈ ಬಲಾಬಲಗಳನ್ನು ಜಯಾಪಜಯವು ಅನುಸರಿಸುತ್ತದೆಂದು ಹೇಳಲಾಗುವುದಿಲ್ಲ. ದೈವಾನುಗ್ರಹವಿದ್ದ ಕಡೆ ಜಯಲಕ್ಷ್ಮಿಯು ಮಾಲೆಯನ್ನು ಹಾಕುವಳೆಂಬುದು ಹಿಂದಿನ ರಷ್ಯಾ ಜಪಾನ್ ಯುದ್ಧದಲ್ಲಿ ಎಲ್ಲರ ನಿದರ್ಶನಕ್ಕೂ ಬಂದಿರುತ್ತದೆ.

ಗಣೇಶಚತುರ್ಥೀನಿರ್ಣಯವು

"ಮಧ್ಯಾಹ್ನೇ ಪೂಜಯೇನ್ನೃಪ" ಬಾದ್ರಪದ ಶುಕ್ಲ ಚತುರ್ಥೀದಿನ ಮಧ್ಯಾಹ್ನದಲ್ಲಿ ಗಣೇಶನನ್ನು ಪೂಜಿಸಬೇಕೆಂದೂ ಆ ಚತುರ್ಥಿಯು "ಮಧ್ಯಾಹ್ನವ್ಯಾಪಿನೀ ಚೇತ್ ಸ್ಯಾತ್" ಮಧ್ಯಾಹ್ನ ವ್ಯಾಪಿನೀಯಾಗಿರಬೇಕೆಂದೂ ಎಲ್ಲಾ ಸ್ಮೃತಿಗಳ ತಾತ್ಪರ್ಯವು. ಆದರೆ, ಇಲ್ಲಿಯ 'ಮಧ್ಯಾಹ್ನ' ಶಬ್ದಕ್ಕೆ ಅರ್ಥಬೇದವಿರುವದರಿಂದ ಮತಬೇದವಿರುವದು. ಹ್ಯಾಗೆಂದರೆ — "ತ್ರೇಧಾವಿಬಕ್ತದಿನಸ ದ್ವಿಬಾಗ"— ಅಂದರೆ,— ಹಗಲಿನ ಮೂರು ಬಾಗಗಳನ್ನು ಮಾಡಿ ಅದರಲ್ಲಿಯ ಮಧ್ಯಭಾಗವು ೧೦ ಘಳಿಗೆಯನಂತರ ೨೦ ಘಳಿಗೆ ವರೆಗಿನ ಕಾಲಕ್ಕೆ ಮಧ್ಯಾಹ್ನವೆಂತಲೂ, "ಪಂಚಧಾವಿಭಕ್ತದಿನತೃತೀಯ—ಭಾಗಃ" ಹಗಲಿನ ಐದು ಪಾಲು ಮಾಡಿ ೧೨ ಘಳಿಗೆಯನಂತರ ೧೮ ಘಳಿಗೆ ವರೆಗಿನ ಕಾಲಕ್ಕೆ 'ಮಧ್ಯಾಹ್ನ' ಎಂತಲೂ "ಅಹ್ನೋ ಮಧ್ಯಂ ಮಧ್ಯಾಹ್ನಂ" ಸೂರ್ಯನು ನೆಟ್ಟಗೆ ತಲೆಯ ಮೇಲೆ ಬರುವ ಸಮಯಕ್ಕೆ ಮಧ್ಯಾಹ್ನ ಎಂತಲೂ ಅರ್ಥವಾಗುತ್ತದೆ. ಆದರೆ, ೧೦ ಘಳಿಗೆಯ ಮೊದಲು ಮಧ್ಯಾಹ್ನಕಾಲವಾಗುತ್ತದೆಂದು ಎಲ್ಲಿಯೂ ಕಾಣುವದಿಲ್ಲ. ಈ ಮುಂಚೆ ಗಣೇಶಭಕ್ತರ ಪುರೋಹಿತರು ಸೂಚಿಸಿದ ಶ್ಲೋಕದಲ್ಲೂ ಬೇರೆ ಪಂಚಾಂಗಕರ್ತರು ಪ್ರಕಟಿಸಿದ ಶ್ಲೋಕದಲ್ಲೂ ಕೂಡಾ ಮಧ್ಯಾಹ್ನವ್ಯಾಪಿನೀಯಾಗಿರಬೇಕೆಂದು ಮಾತ್ರ ಕಾಣುತ್ತದೆ, ಹೊರತು ಮಧ್ಯಾಹ್ನವು ಎಷ್ಟು ಘಳಿಗೆಯ ನಂತರ ಪ್ರಾರಂಬವೆಂಬ ನಿಷ್ಕರ್ಷವು ಕಾಣುವದಿಲ್ಲ. ಈ ವಿಷಯದಲ್ಲಿ ಮತಬೇದವಿರುವದಾಗಿ ಆಗಾಗ್ಗೆ ನಮ್ಮ ಪಂಚಾಂಗದಲ್ಲಿ ಬರೆಯುತ್ತಿದ್ದೆವು. ಈ ವಿಷಯವು ಅನೇಕ ವಾಚಕರಿಗೆ ನೆನಪಿರಬಹುದು. ಈ ವರುಷವೂ ಕುಜವಾರ ಚತುರ್ಥಿಯು ೧೧। ಘಳಿಗೆ ಇರುತ್ತದೆ. ೧೦ ಘಳಿಗೆಯ ನಂತರ ಮಧ್ಯಾಹ್ನವೆಂಬ ಅರ್ಥವು ಕಂಡು ಬರುವದರಿಂದ ಮಧ್ಯಾಹ್ನವ್ಯಾಪಿನೀಯಾಗಿರುತ್ತದೆ. ಇದು ವಿನಹ,—

> 'ಭಾದ್ರೇ ಶುಕ್ಲಚತುರ್ಥೀ ಯಾ ಭೌಮೇನಾರ್ಕೇಣ ವಾ ಯುತಾ ।
> ಮಹತೀ ಸಾತ್ರ ವಿಘ್ನೇಶಮರ್ಚಿತ್ವೇಷ್ಟಂ ಲಭೇನ್ನರಃ ॥'

ತಾತ್ಪರ್ಯ —'ಬಾದ್ರಪದ ಶುಕ್ಲ ಚತುರ್ಥಿಯು ಕುಜ ಯಾ ರವಿವಾರದಿಂದ ಕೂಡಿದರೆ ಮಹಾಯೋಗವಾಗುತ್ತದೆ. ಇಂತಹ ಚತುರ್ಥೀದಿನ ಗಣೇಶನನ್ನು ಪೂಜಿಸಿದವರಿಗೆ ಸರ್ವಾಬೀಷ್ಟ ಫಲಪ್ರಾಪ್ತವಾಗುವದು' ಎಂದಾಗಿ ವರಾಹಪುರಾಣವಚನವು ಸಹ ಇರುವದು.

ಇದಲ್ಲದೆ, "ಮಾತ್ರವಿದ್ಧಾ ಪ್ರಶಸ್ಯತೆ" ಎಂಬಂತೆಯೇ "ನಾಗವಿದ್ಧಾ ಪ್ರಶಸ್ಯತೆ" ಎಂಬ ವಚನವೂ ಇರುವದು. ಇದಲ್ಲದೆ,—

> "ಅಸಮಾಪ್ತೇ ವ್ರತೇ ಪೂರ್ವೆ ನೈವ ಕುರ್ಯಾದ್ ವ್ರತಾಂತರಮ್ ।"

ಆಚರಿಸೋಣಾದ ಒಂದು ವ್ರತವನ್ನು ಸಮಾಪ್ತಮಾಡದೆ ಇನ್ನೊಂದು ವ್ರತವನ್ನು ಆಚರಿಸುವದು ಅನುಚಿತವು. ಯಾಕಂದರೆ,—ಗೌರೀವ್ರತದವರು ಮಾಡಿದ ಭಕ್ಷ್ಯಭೋಜ್ಯಾದಿ ಸಮಸ್ತ ನೈವೇದ್ಯಪದಾರ್ಥಗಳನ್ನು ಸಮರ್ಪಿಸದೆ ವ್ರತಸಮಾಪ್ತ ಮಾಡಬೇಕಾಗುತ್ತದೆ. ಇದೊಂದು ಅಸಂಪೂರ್ಣತ್ವವು. ಸರ್ವಥಾ ಪರದಿನ ಮಧ್ಯಾಹ್ನವ್ಯಾಪಿನೀ ಇಲ್ಲದೆ ಹೋದರೆ ಮಾತ್ರ,—"ಮಾತ್ರವಿದ್ಧಾ ಪ್ರಶಸ್ಯತೆ" ಎಂದು ಗ್ರಂಥದ ತಾತ್ಪರ್ಯವು. ಆದ್ದರಿಂದ ಗಣೇಶವ್ರತವನ್ನು ಕುಜವಾರವೇ ಆಚರಿಸುವದು ಉತ್ತಮವು.

ಇದಲ್ಲದೆ, ಇದೇ ಕಳೆದ ಎಪ್ರಿಲ್ ತಿಂಗಳಲ್ಲಿ ಒಬ್ಬ 'ಸಾಮಾನ್ಯ' ವೈದಿಕರು ನಮ್ಮ ಪಂಚಾಂಗದಲ್ಲಿನ ಆದಿತ್ಯಉದಯವಿರುವ ಉಪನಯನಲಗ್ನಗಳು ಮಹಾ ದೋಷಕರವಾದವುಗಳೆಂದು ಸಕಾಲದಲ್ಲಿ ಪ್ರಕಟಿಸಿದಿರುವದರಿಂದ ಆ ಕುರಿತು ಸವಿಸ್ತಾರವಾಗಿ ಬರೆಯಲು ಅವಕಾಶವಿಲ್ಲದ ಕಾರಣ ಮುಂದಿನ ನಮ್ಮ ಪಂಚಾಂಗದಲ್ಲಿ ಪ್ರಕಟಿಸುವದಾಗಿ ನಿಶ್ಚೈಸಿತ್ತು. ಆದರೆ, ಪ್ರಸಂಗಾನುಸಾರವಾಗಿ ಅದರ ಪ್ರತ್ಯುತ್ತರವಾಗಿ ಈ ಕೆಳಗೆ ಬರೆದಿರುವ ಒಂದೆರಡು ಶ್ಲೋಕಗಳ ಅವಲೋಕನದಿಂದ ವಾಚಕರ ಮನಸ್ಸಿಗೆ ಸಮಾಧಾನವಾಗದಿರದು.

> "ಸರ್ವಶಾಖಾಧಿಪೋ ಭಾನುಃ ಕೇಚಿದೂಚುರ್ಮಹರ್ಷಯಃ ।
> ತಸ್ಮಾದ್ಲಗ್ನಾಂತರಾಭಾವೆ ಲಗ್ನೇಽರ್ಕಃ ಪ್ರಶಸ್ಯತೆ ॥"

ತಾತ್ಪರ್ಯ —'ಸರ್ವ ಶಾಖಾಧಿಪತಿಯು ಆದಿತ್ಯನಾಗಿರುವದರಿಂದ ಉಪನಯನಕ್ಕೆ ಬೇರೆ ಲಗ್ನಗಳು ಸಿಕ್ಕದಿರುವಲ್ಲಿ ಆದಿತ್ಯನಿರುವ ಲಗ್ನಗಳು ಪ್ರಶಸ್ತವಾಗಿರುವವು' ಎಂದು ಕೆಲವು ಋಷಿಗಳು ಹೇಳುತ್ತಾರೆ. **ಈ ವಚನವು ಆ** 'ಸಾಮಾನ್ಯ' ವೈದಿಕರೂ ಸಹ ನೋಡಬೇಕಾಗಿ ನಮ್ಮ ಕೋರಿಕೆ.

ಆನಂದ ಸಂವತ್ಸರ,
ಶ್ರಾವಣ ಬ॥ ೫ಯು ಕುಜವಾರ } **ಉದ್ಯಾವರ ನಾರಾಯಣಾಚಾರ್ಯ.**

ಪತ್ರವ್ಯವಹಾರ.

ಅಯ್ಯಾ ಪತ್ರಾದಿಪರೇ,

ತಮ್ಮ ತಾ 24-7 14ನೇ ಪತ್ರಿಕೆಯಲ್ಲಿ "ಮಾಜಿ ಗುಲಾಮ" ಎಂಬವರು ಕಾಪಿ ಹೊಟೇಲುಗಳ ವಿಷಯದಲ್ಲಿ ಪ್ರಕಟಿಸಿದ ಸಂಗತಿಗಳು ಯಥಾರ್ಥವಾದುದಾಗಿರುತ್ತದೆ. ಈ ಕಾಪಿ ಹೊಟೇಲುಗಳು ಊರೆಲ್ಲಿ ತುಂಬಿದ ಲಾಗಾಯಿತು ಜನರು ತಮ್ಮ ತನುಮನಧನಗಳಿಂದ ಅಧೋಗತಿಯನ್ನೈದುತ್ತಿರುವರು ಎಂದು ಧಾರಾಳವಾಗಿ ಹೇಳಬಹುದು. ಯಾಕಂದರೆ ಈ ಕಾಪಿ ಹೊಟೇಲುಗಳ ದೆಶೆಯಿಂದ ಜನರ ಕಷ್ಟಾರ್ಜಿತದಿಂದ ದುಡಿದ ಹಣವು ವೃಥಾ ವೆಚ್ಚವಾಗುವದಲ್ಲದೆ ಕಾಫಿ, ಚಾ, ಕೊಕೊ ಎಂಬ ಪಾನಕಗಳಿಂದ ಮನುಷ್ಯರ ರಕ್ತಾಭಿಸರಣವು ದೂಷ್ಯವಾಗಿ ಅಂಗವು ತೇಜೋವಿಹೀನವಾಗುವುದಲ್ಲದೆ ಮೆದುಳಿನ ರೋಗ, ಮೂತ್ರಾಶಯದ ರೋಗ, ನಾನಾ ಪ್ರಕಾರದ ಮೇಹ, ಹೆಚ್ಚಾಗಿ ಮಧು ಮೇಹ, ಧಾತುನಷ್ಟ, ಅಶಕ್ತತೆ ಇತ್ಯಾದಿ ಅನೇಕ ರೋಗಗಳಿಗೆ ಕಾರಣವಾಗಿದೆ ಎಂದು ಪಾಶ್ಚಾತ್ಯದ ಮಹಾ ಪ್ರಸಿದ್ಧರಾದ ಡಾಕ್ಟರುಗಳೇ ಅಭಿಪ್ರಾಯಪಟ್ಟು ಸಿದ್ಧಾಂತ ಪಡಿಸುತ್ತಿರುವರು. ಈ ವಿದೇಶಿ ಪಾನಕಕ್ಕೆ ಮರುಳಾಗಿ ಇದನ್ನು ನಿತ್ಯವೂ ತಾವು ಕುಡಿಯುವದಲ್ಲದೆ, ತಮ್ಮ ಎಳೇ ಕೂಸುಗಳಿಗೆ ಸಹ ಅಭ್ಯಾಸವಾಗುವಂತೆ ಕಲಿಸಿ ಕೊಡುವ ತಾಯಿತಂದೆಗಳ ಸ್ಥಿತಿಯು ಶೋಚನೀಯವಾದುದು. ಚಾ, ಕಾಪಿ ಪಾನಕವನ್ನು ಕುಡಿಯುವದರಿಂದ ಅವುಗಳನ್ನು ಕುಡಿಯದಿರುವ ಜನಕ್ಕಿಂತಲೂ ಹೆಚ್ಚಾಗಿ ಶರೀರದಿಂದ ವಿಸರ್ಜನೆಯು (Waste) ಹೋಗುತ್ತಿರುವದು. ಯಾಕಂದರೆ ಚಾ, ಕಾಪಿ ಇತ್ಯಾದಿ ಕುಡಿಯುವ ಜನರ ಶ್ವಾಸೋಚ್ಛ್ವಾಸದಿಂದ ಕಾರ್ಬೋನಿಕ್ ಎಸಿಡ್ ಎಷ್ಟು ಹೆಚ್ಚಾಗಿ ಹೊರಬೀಳುತ್ತದೋ ಅಷ್ಟು (Waste) ವಿಸರ್ಜನವು ಹೆಚ್ಚು ಹೋಗುತ್ತಿರುವುದು. ಈ ದುಷ್ಪರಿಣಾಮದಿಂದ (Waste) ವಿಸರ್ಜನವು $\frac{1}{4}$ರಿಂದ $\frac{1}{10}$ರ ವರೆಗೂ ಶರೀರದಿಂದ ಹೊರಗೆ ಹೋಗುತ್ತದೆಂದು ಅಮೇರಿಕದ ಡಾಕ್ಟರ್ ಸ್ಮಿತ್ ಎಮ್ ಗಜೀರ ಮತ್ತು ಇತರ ಪಾಶ್ಚಾತ್ಯ ಶರೀರಿಕ ಮತ್ತು ವೈದ್ಯಕ ಪ್ರವೀಣರಾದ ಪಂಡಿತರುಗಳು ಅನೇಕ ಪ್ರಯೋಗಗಳನ್ನು ಮಾಡಿ ಈ ರೀತಿ ಸಿದ್ಧಮಾಡಿರುತ್ತಾರೆ.

8-10 ರೂಪಾಯಿಗಳು ತಿಂಗಳೊಂದರ ವೇತನ ಪಡಿಯುವ ಅಲ್ಪ ನೌಕರರು ಸಹ ತನ್ನ ಮನೆಯ ಕಾಲಕ್ಷೇಪದ ಸ್ಥಿತಿಯನ್ನಾಗಲೀ ತನ್ನ ಸಂಪಾದನೆ ಎನ್ನೆಂಬದನ್ನಾಗಲೀ ವಿಚಾರ ಮಾಡದೆ ಈ ಕಾಫಿ, ಚಾ, ಕುಡಿಯುವ ದುರಾಭ್ಯಾಸಕ್ಕೆ ತುತ್ತಾಗಿ, ತಿಂಗಳೊಂದರ 3-4 ರೂಪಾಯಿಗಳು ಅಂಗಡಿಗಾರನ ಕೂಡೆ ಸಾಲಮಾಡಿಕೊಂಡು, ಒಂದೊಂದು ತಿಂಗಳಲ್ಲಿ ಅಂಗಡಿಗಾರನಿಗೆ ಕೊಡಲಿಕ್ಕೆ ಇರುವ ಸಾಲವನ್ನು ಸಲ್ಲಿಸಲಿಕ್ಕೆ ತನಗಿರುವ ಅನ್ಯ ಅಡಚಣಿಗಳಿಂದ ತಪ್ಪಿದನಾದರೆ ಮಾರ್ಗದಲ್ಲಿ ಹೋಗುವಾಗ ಅಂಗಡಿಗಾರನಿಂದ ಬೈಸಿಕೊಂಡು ನಾಚಿಕೆಯಿಂದ ಎಂಟು ಗೇಣಿನ ದೇಹವನ್ನು ನಾಲ್ಕು ಗೇಣಿನಂತೆ ಮಾಡಿಕೊಂಡು ಹೋಗುತ್ತಿರುವುದನ್ನು ನೋಡಿದರೆ ಯಾರಿಗೆ ತಾನೇ ಕನಿಕರವಾಗದು? ಆದುದರಿಂದ ಪತ್ರಾಧಿಪರೇ—ಚಾ, ಕಾಫಿ, ಕೊಕೊ ವಗೈರೆ ಕುಡಿಯುವ ವಿದೇಶಿ ಪಾನಕಗಳನ್ನು ತಡೆದು ನಿಲ್ಲಿಸಲಿಕ್ಕೆ ಯಾವದೊಂದನ್ನಾದರೂ ಉಪಾಯವನ್ನು ಕಂಡು ಹಿಡಿದು ತಾವಾದರೂ ಈ ದುರಾಭ್ಯಾಸದಿಂದ ಜನರನ್ನು ಬಿಡಿಸನೋಡಬೇಕಾಗಿ ಬೇಡಿಕೊಳ್ಳುತ್ತೇನೆ. ಎಷ್ಟುಮಾತ್ರಕ್ಕೂ ಅಸಾಧ್ಯವೆಂತಾದರೆ ಈ ವಿದೇಶಿ ಪಾನಕಗಳಿಂದುಂಟಾಗುವ ದುಷ್ಪರಿಣಾಮವನ್ನು ಆಗಾಗ್ಗೆ ಜನರ ನಿದರ್ಶನಕ್ಕೆ ತರುವಂತೆ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕಾಗಿ ಅಪೇಕ್ಷಿಸುತ್ತೇನೆ.

ಸಜ್ಜನ ವಿಧೇಯ.

ಕಾಫಿ ಹೊಟೇಲುಗಳು

ಸ್ವಾಮಿಾ,

ಕಳದ ಎಪ್ರಿಲ ತಿಂಗಳಲ್ಲಿ ಒಂದು ದಿನ ನಾನು ಒಂದು ಕಾಫಿ ಹೊಟೇಲಿಗೆ ಹೋದೆನು. ಗೋದಿರೊಟ್ಟಿ ಮತ್ತು ಬಿಸ್ಕುಟು ಅಂದೋಡೆಗಳನ್ನು ತೆಗೆದುಕೊಂಡು ತಿನ್ನುತ್ತಿದ್ದೆನು ಆಗ ಒಬ್ಬ ಹಳ್ಳಿಯವನು ತಲೆಗೆ ಮದ್ರಾಸಿ ಎಲವಸ್ತ್ರವೂ, ಹೆಗಲ ಮೇಲೆ ನೀಲಿ ಮಿತಿಮಿಾರಿದ ಮಡಿಯಾದ ಹುಬ್ಬಳ್ಳಿ ಧೋತ್ರವೂ, ಕಾಲಿಗೆ ೨ ಇಂಚುಗಳಷ್ಟು ದಪ್ಪ ಮೆಟ್ಟುಗಳೂ ಹಾಕಿಕೊಂಡು "ಚಾರುಂ ಬುರುಂ" ಮಾಡುತ್ತಾ ಒಳಗೆ ಬಂದು ನನ್ನೆದುರು ಒಂದು ಬೇಂಚಿನ ಮೇಲೆ ಕೂತುಕೊಂಡನು. ಅರ್ಧ ಬಿಳಿ ಅರ್ದ ಕಪ್ಪು ಬಣ್ಣದ ಗಲ್ಲು ಮಿಾಶೆಗಳೂ, ಇವುಗಳ ಉತ್ತರ ಕೊನೆಗಳಲ್ಲಿ ನಸೆಯ ಗುಪ್ಪೆಗಳೂ, ಇವುಗಳ ನಡುವ ಇರುವ ಖಣಿಯಲ್ಲಿ ಬೆಲ್ಲದ ಬಣ್ಣದ ಕಾಕಂಬಿಯಂತೆ ತೋರುವ ಮೂಗಿನಿಂದ ಇಳಿಯುವ ಒಂದು ವಿವಿಧರಸವೂ ಕರಣೀಕರ ಹೊಟ್ಟೆಯಂತೆ ಹೊಕ್ಕುಳು ತೋರುವ ದೊಡ್ಡ ಹೊಟ್ಟೆಯೂ ಇಷ್ಟೆಲ್ಲ ಆಬ್ಬರದ ಅಲಂಕಾರವಿತ್ತು ಮೈಯಂತೂ ಹಣೆಯಿಂದ ಹೊಕ್ಕುಳಿನ ವರೇಗೆ ಬೆವರುತ್ತಿತ್ತು. ಈ ವೇಶವನ್ನು ನಾನು ನೋಡಿ, ಚಾ ಕುಡಿಯುವುದಕ್ಕೆ ತಲೆಯನ್ನು ಬಗ್ಗಿಸಿದೆನು. ಆ ಕ್ಷಣವೇ ಆಶಾಢ ತಿಂಗಳ ಮಳೆ ಪಿರುಪಾಳಿಯಂತೆ "ಬೂರ್ ಬೂರ್" ಎಂಬ ಶಬ್ದವಾಯಿತು. ಕೂಡಲೇ ಅಡಿಗೆ ಕೋಣೆಯ ಮೆಟ್ಲಿನ ಮೇಲೆ ನಿಂತಿದ್ದ ಒಬ್ಬ ತರುಣನು ತಟ್ಟನೆ ಬಂದು ಶೆಟ್ರ ಕಾಲಡಿಯಲ್ಲಿದ್ದ ಗೋದಿ ಹಿಟ್ಟಿನ ಪಾತ್ರೆಯನ್ನು ಒಳಗೆ ತೆಗೆದುಕೊಂಡು ಹೋಗಿ, ಹಿಟ್ಟಿನ ಮೇಲೆ ಸಿಂಬಳ ಬಿತ್ತೆಂತ ಅವಾಚ್ಯ ಮಾತಿನಿಂದ ಬೈಯಲಿಕ್ಕೆ ಪ್ರಾರಂಭಿಸಿದನು ನಾನು ಕೈ ತೊಳಕೊಳ್ಳುವುದಕ್ಕೆ ನೀರುಬೇಕೆಂತ ಅಡಿಗೆ ಕೋಣೆಗೆ ಹೋದೆನು. "ಅಪ್ಪಾ" ಶೆಟ್ರು ಸಿಂಬಳ ತೆಗೆದ್ದರಿಂದ ನಿಮಗೆ ನಷ್ಟವಿಲ್ಲ ಬೆವರಿನ ಹನಿಗಳು ಸಹ ಹಿಟ್ಟಿನಲ್ಲಿ ಬಿದ್ದಿರುವುದರಿಂದ ನಾಳಯ ರೊಟ್ಟಿಗಳ ಬಗ್ಗೆ ಹಿಟ್ಟಿಗೆ ಉಪ್ಪು, ಹುಳಿ ಮತ್ತು ಖಾರ ಹಾಕುವ ಖರ್ಚು ಉಳಿಯಿತು" ಅಂದೆನು "ಸ್ವಾಮಿಾ," ಹಾಗೆ ಅಪ್ಪಣೆಕೊಡಬೇಡಿ, ಮೇಲಿನ ಹಿಟ್ಟು ಪ್ರತ್ಯೇಕ ತೆಗೆದು ಆವುಗಳಿಂದ ಮಾಡಿದ ರೊಟ್ಟಿಗಳನ್ನು ಶೂದ್ರರಿಗೆ ಕೊಡುವೆವು" ಎಂದು ಹೊಟೇಲುಗಾರನು ಹೇಳಿದನು. "ಸರಿ—ನಾವು ತಿಂದನಂತರ ಒಸಿಯಲ್ಲಿ ಉಳಿದವನ್ನು ಶೂದ್ರರಿಗೆಂತ ಹೇಳಿ ಯಾರ ಯಾರ ಎಂಜಲನ್ನು ನಮಗೆ ತಿನ್ನಿಸುತ್ತೀರಿ ಶೆಟ್ರ ಸಿಂಬಳ ಬೆವರು ನಮ್ಮ ಹೊಟ್ಟೆಯಲ್ಲಿ ಹೊಕ್ಕುವುದಿಲ್ಲವೇ" ಎಂದು ನಾನು ಹೇಳುತ್ತಾಲೆ ಹೊಟೇಲಿನವನು ಸಿಟ್ಟಾದ್ದು ನೋಡಿ, "ಇಂದಿನ ಒಂದು ಆಣೆ ಹತ್ತುಪೈಯನ್ನು ಲಿಖ್ಖಕ್ಕೆ ಬರೆಯಿರಿ" ಎಂತ ಹೇಳಿ ನಾನು ಅಲ್ಲಿಂದ ಕಾಣೆಯಾದೆನು.

ತಾ 8–8–1914 ಗಣಪಯ್ಯ

ದಾರಿಗಳ ಅಡಚಣೆ.

ಸ್ವದೇಶಾಬಿಮಾನಿ ಪತ್ರಕರ್ತರಿಗೆ,

ಈ ಕೆಳಗಿನ ವಿಜ್ಞಾಪನೆಗಳನ್ನು ತಮ್ಮ ಅಮೌಲ್ಯವಾದ ಪತ್ರಿಕೆಯಲ್ಲಿ ಪ್ರಕಟಿಸಿದರೆ ಬಡ ಜನರ ಅನೇಕ ಕಷ್ಟಗಳು ನಿವಾರಣೆ ಆಗುವದರಲ್ಲಿ ಸಂದೇಹವಿಲ್ಲಯೆಂಬ ಭಾವನೆಯಿಂದ ಬರಕೊಂಡಿದ್ದೇನೆ

ದಕ್ಷಿಣ ಕನ್ನಡಾ ಜಿಲ್ಲೆಯಿಂದ ಸಾವಿರಾರು ಕೂಲಿ ಆಳುಗಳು ತಮ್ಮ ಜೀವನೋಪಾಯದ ಕುರಿತು ಗಟ್ಟದ ಮೇಲೆಯಿರುವ ಕಾಫಿ ತೋಟದ ಕೃಷಿ ಬಗ್ಗೆ ವರ್ಷಂಪ್ರತಿ ಬರುವುದು ಎಲ್ಲರಿಗೂ ತಿಳಿದಿರುವ ಸಂಗತಿಯಷ್ಟೆ. ಜೂನು ತಿಂಗಳ ಲಾಗಾಯ್ತು ಈ ಆಳುಗಳು ತಮ್ಮ ಊರುಮನೆ ಬಿಟ್ಟು ಚಾರ್ಮಾಡಿಯ ರಸ್ತೆಯಿಂದಲೂ ಬಂಗಾಡಿಯ ಒಳದಾರಿಯಿಂದಲೂ ಮೇಲಕ್ಕೆ ಹತ್ತುತ್ತಾರೆ ಚಾರ್ಮಾಡಿಯಿಂದ ಮೇಲಕ್ಕೆ ಬರುತ್ತಾ ಸುಮಾರು ೧೫ ಒಳದಾರಿಗಳು ಸಿಕ್ಕುತ್ತವೆ ಭಂಡಿ ರಸ್ತೆಯನ್ನು ಬಿಟ್ಟು ಅನೇಕ ಜನರು ದೂರ ಪಾಶಿತೆಯಾದ ಪ್ರಯುಕ್ತ ಮೇಲ್ಕಂಡ ಒಳದಾರಿಗಳನ್ನು ಉಪಯೋಗಿಸುತ್ತಾರೆ. ಈ ಒಳದಾರಿಗಳಲ್ಲಿ ಮಳೆಗಾಳಿಯಿಂದ ಅನೇಕ ದೊಡ್ಡ ಮರಗಳು ಬಿದ್ದು ದಾರಿಗಳು ಮುಚ್ಚಿಹೋಗಿ ಮೇಲಕ್ಕೆ ಬರತಕ್ಕವರು ತಮ್ಮ ಹೊರೆಗಳನ್ನೂ ಮಕ್ಕಳುಮರಿಗಳನ್ನೂ ಹೊತ್ತುಕೊಂಡು ಬರುವರೇ ಬಹಳ ಪ್ರಯಾಸ ಪಡಬೇಕಾಗಿಯದೆ. ಅದಲ್ಲದೆ ಗಟ್ಟದಲ್ಲಿ ದನಕರುಗಳಿಗೂ ಮನುಷ್ಯರಿಗೂ ಭಾದಿಸುವ ಜಿಗಣೆ ವ ಅಟ್ಟೆ ಎಂಬುವ ಹುಳಗಳು ಈ ಜನರ ವಾಸನೆಯಿಂದ ದಾರಿಯಲ್ಲಿ ಕಾಯುವದಲ್ಲದೆ ದಾರಿಯ ಆಜುಬಾಜು ಒಂದು ಆಳು ಪರಿಮಾಣದ ವರೆಗೆ ಬೆಳದಿರುವ ದರ್ಬೆ ಹುಲ್ಲಿನಲ್ಲಿ ಕಾದು ಇದ್ದು ಮನುಷ್ಯರ ವ ಪ್ರಾಣಿಗಳ ಮೇಲೆ ಹತ್ತಿಕೊಂಡು ರಕ್ತಹೀರಿ ನಿತ್ರಾಣ ಮಾಡುತ್ತವೆ. ಈ ಹುಳಗಳ ಭಾದೆಯು ಕನ್ನಡಾ ಜಿಲ್ಲೆಯಲ್ಲಿ ಇರುವುದಿಲ್ಲ. ಇನ್ನೊಂದು ತರದ ಪಾವರಿ ಎಂಬುವ ಹುಳಗಳು ಮಾತ್ರ ಕೆಲವು ಗದ್ದೆಗಳಲ್ಲಿ ಇದ್ದು ಸಸಿ ನಟ್ಟಿ ಮಾಡುವ ವ ಹೂಡುವ ಜನರಿಗೆ ಮತ್ತು ಎತ್ತು ಕೋಣಗಳಿಗೆ ಭಾದಿಸುತ್ತವೆ. ಆದರೂ ಈ ಜಿಗಣೆ ಎಂಬುವ ಹುಳಗಳಷ್ಟು ಪಾವರಿ ಎಂಬುವ ಹುಳಗಳು ಕನ್ನಡಾ ಜಿಲ್ಲೆಯಲ್ಲಿ ಇರುವುದಿಲ್ಲ. ಈ ಜಿಗಣೆ ಹುಳಗಳು ವಿಶಕರವಾಗಿದ್ದು ಅವುಗಳು ಕಡಿದ ಅಂಗಕ್ಕೆ ಹಾನಿ ಬರುವುದೂ ಉಂಟು.

ಇಂಥಾ ಕಷ್ಟಗಳನ್ನು ಅನುಭವಿಸುವ ಬಡಕೂಲಿ ಆಳುಗಳ ಭಾದಕವನ್ನು ನಿವಾಹರಣೆ ಮಾಡುವರೇ ಸರಕಾರದವರು ಮೇಲ್ಕಂಡ ಒಳದಾರಿಗಳನ್ನು ತಕ್ಕ ಮಟ್ಟಿಗೆ ಜನರ ಅಮದುರಪ್ತಿಗೆ ಯೋಗ್ಯವಾದ ರೀತಿಯಲ್ಲಿ ದುರುಸ್ತಿ ಮಾಡುವ ನಿಗಾ ಕೊಡುವರೆಂತ ಬಾವಿಸುತ್ತೇನೆ ಈ ಒಳದಾರಿಗಳು ದಕ್ಷಿಣ ಕನ್ನಡಾ ಜಿಲ್ಲೆಯ ಚತುರ್ಗಡಿ ಒಳಗೆ ಇರುತ್ತವೆ

ಬಂಗಾಡಿಯ ಒಳದಾರಿಯ ವಿಷಯ ಎಲ್ಲಾ ಕಷ್ಟಗಳನ್ನು ತಪ್ಪಿಸಲಾಗಿ ಬರಿಯುವರೆ ತಮ್ಮ ಪತ್ರಿಕೆಯಲ್ಲಿ ಸ್ಥಳ ದೊರಕಲಾರದೆಂಬುವ ಭಾವನೆಯಿಂದ ಮುಖ್ಯವಾದ ಕೆಲವು ಸಂಗತಿಗಳನ್ನು ಮಾತ್ರ ಸೂಚಿಸುತ್ತೇನೆ—ಬೆಳ್ತಂಗಡಿಯಿಂದ ಪಾಸ್ಕ್ಯಾಡ ವರೆಗೆ ಮಾತ್ರ ಗಾಡಿ ರಸ್ತೆಯು ಸಿಕ್ಕುತ್ತದೆ ಅಲ್ಲಿಂದ ಮುಂದಕ್ಕೆ ಸಾಗಿ ಬರುವಾಗ ಅನೇಕ ದೊಡ್ಡ ಚಿಕ್ಕ ಹಳ್ಳಗಳನ್ನು ದಾಟ ಬೇಕಾಗಿಯದೆ ಅದರ ಪೈಕಿ ಕಿಲ್ಲೂರು ಎಂಬುವ ಹಳ್ಳಕ್ಕೆ ಈಗಿನ ಜನಪ್ರೀಯರಾದ ಬಹುಮಾನಪಟ್ಟ ಜಿಲ್ಲಾ ಕಲೆಕ್ಟರ ದೊರೆಗಳು ಮೈಸೂರು ಕಾಪಿ ಪ್ಲೆಂಟರರ ಎಸೊಸಿಯೇಶನ್ ಮೂಲಕ ಬರಕೊಂಡ ಮನವಿ ಮೇರೆಗೆ ಮರದ ಒಂದು ಸಂಕ ಈ ವರುಷದಲ್ಲಿ ಹಾಕಿಸಿದಕ್ಕೆ ಅದರಲ್ಲಿ ದಾಟಿ ಬರುವ ವಿಶಿಷ್ಟು ಜನರು ಸದರಿ ದೊರೆಗಳಿಗ ತುಂಬಾ ಕೊಂಡಾಡುತ್ತಾರೆಂಬುವದಕ್ಕೆ ಸಂಹೇಹವಿಲ್ಲ ಈ ಕಿಲ್ಲೂರು ಹಳ್ಳ ದಾಟಿ ಮುಂದಕ್ಕೆ ಬರುವಾಗ "ಪರಾರಿ" ಎಂಬುವ ಇನ್ನೊಂದು ದೊಡ್ಡ ಹಳ್ಳವು ಸಿಕ್ಕುತ್ತದೆ ಮಳೆಯು ಜೋರಾಗಿ ಬಂದರೆ ಇದನ್ನು ಜನರು ದಾಟುವರೆ ಗಂಡಾಂತರವಾಗಿರುತ್ತದೆ ಈ ಆಪತ್ತಿನ ಸಮ್ಮಂದ ನಾಲ್ಕಾರು ದಿವಸಗಳ ಪರಿಯಂತರ ಜನರು ಆಚೆಈಚೆ ಕಾಯಬೇಕಾಗಿಯದೆ ನೆರೆಹೊರೆಯಲ್ಲಿ ರಾತ್ರಿಕಾಲ ವಿಶ್ರಾಂತಿಸುವರೆ ಬೇಕಾದ ನಿವೇಶನಗಳು ಸಹಾ ಇರುವದಿಲ್ಲ. ದೂರದಲ್ಲಿ ಇರತಕ್ಕ ಅಂಗಡಿ ವ ಮನೆಗಳಲ್ಲಿ ತಂಗಬೇಕಾದರೆ ರಾತ್ರಿ ಗಕ್ಕೆ ಆಳು ಒಂದರ ಒಂದೆರಡು ಆಣೆ ಮೇರೆಗೆ ಸ್ಥಳ ಬಾಡಿಗೆ ಕೊಡಬೇಕು. ಇಂಥಾ ಬಿಡಾರಗಳಲ್ಲಿ ಉಳಕೊಳ್ಳುವವರು ಜಾತಿಭೇದವನ್ನು ನಿಷೇದಿಸಿ, ಹೆಣ್ಣು ಗಂಡು ಎಂಬುವ ಆಚಾರವನ್ನು ತ್ಯಜಿಸಿ ಕಾಲಕಳದು ಈ ಹಳ್ಳದ ಭಾದಕದಿಂದ ತಪ್ಪಿಸಿ ಮುಂದರಿದು ಬರುವಾಗ ಅಘೋರವಾದ ಕಾಡಿನಲ್ಲಿ ಸಿಕ್ಕುವ ಜಿಗಣೆ ಹುಳಗಳ ಬಾದಕವೂ, ಆ ದಾರಿಗಳಲ್ಲಿ ಅಡ್ಡವಾಗಿ ಬಿದ್ದಿರುವ ಬಿದುರು ಮರಗಳಿಂದ ಜನರು ಪಡುತ್ತಿರುವ ಕಷ್ಟಗಳೂ ವಿವರಿಸುವದು ತುಂಬಾ ಅಸಾಧ್ಯ.

ಬಂಗಾಡಿಯಿಂದ ಗಟ್ಟಕ್ಕೆ ಬರುವದಾದರೆ ಎಳನೀರು, ಅಗ್ಗಲ್ಲು, ಕಡ್ಡಕಲ್ಲು, ಎಂಬುವ ಮೂರು ಒಳದಾರಿಗಳು ಸಿಕ್ಕುತ್ತವೆ ಈ ಎಲ್ಲಾ ಒಳದಾರಿಗಳಲ್ಲಿಯೂ ಇದೇ ತರದ ಕಷ್ಟಗಳು ಅನುಭವಿಸಬೇಕಾಗಿಯದೆ ಕಳದ ಜೂನು ತಿಂಗಳಲ್ಲಿ ಗಟ್ಟದಿಂದ ಕೆಳಗೆ ಹೋಗುವ ಒಂದು ಕೂಲಿ ಹೆಣ್ಣಾಳು ಅರ್ದ ದಾರಿಯಲ್ಲಿ ಬಿದ್ದು ಸತ್ತು ಅವಳ ಶವವು ೧೫ ದಿವಸಗಳ ವರೆಗೆ ಅಲ್ಲಿಯೇ ಕೊಳತು ದಾರಿಯಲ್ಲಿ ಹೋಗುವ ಜನರಿಗೆ ಅದರ ವಾಸನೆಯಿಂದ ಕಷ್ಟವಾಗಿತ್ತು, ನಂತರ ಕೊಳತು ಉಳಿದ ಮೂಳೆಗಳನ್ನು ಸರಕಾರದವರು ದಪನ ಮಾಡಿಸಿದರೆಂತ ವರ್ತಮಾನ ಕೇಳುತ್ತೇನೆ. ಈ ಕಷ್ಟದ ದಾರಿಯಿಂದ ಅವಳ ಸಂಬಂಧಿಕರು ಅವಳನ್ನು ಹೊತ್ತುಕೊಂಡು ಹೋಗುವರೇ ಅಸಾಧ್ಯವಾಗಿ ಬಿದ್ದಲ್ಲಿಯೇ ಬಿಟ್ಟು ಮುಂದಕ್ಕೆ ಪಲಾಯನ ಮಾಡಿದ್ದಾಗಿರುತ್ತದೆ.

ಮೇಲ್ಕಂಡ ದುಃಖ ಸ್ಥಿತಿಯನ್ನು ಈಗಿನ ದಿವ್ಯ ಕಲೆಕ್ಟರ ದೊರೆಗಳವರ ಗಮನಕ್ಕೆ ಯಾರೂ ತರಲಿಲ್ಲವೆಂತ ಭಾವಿಸುತ್ತೇನೆ. ಈಗಲಾದರೂ ತಮ್ಮ ಪತ್ರಿಕೆ ಮೂಲಕ ಪ್ರಕಟಿಸಿದ್ದಲ್ಲಿ ವರ್ಷಂಪ್ರತಿ ಈ ಒಳದಾರಿಗಳಲ್ಲಿ ಅಮದುರಪ್ತು ಆಗುವ ಸುಮಾರು ೨೫—೩೦ ಸಾವಿರ ಜನರ ಕಷ್ಟಗಳನ್ನು ನಿವಾರಿಸುವರೇ ಪರಾಡಿ ಹಳ್ಳಕ್ಕೆ ತತ್ಕಾಲಕ್ಕೆ ಒಂದು ಮರದ ಸಂಕವನ್ನು ಹಾಕಿಸುವದಲ್ಲದೆ ಚಾರ್ಮಾಡಿ ಒಳದಾರಿಗಳನ್ನು ಮತ್ತು ಬಂಗಾಡಿಯ ಈ ಮೂರು ಒಳದಾರಿಗಳನ್ನು ಸಹ ತಮ್ಮ ಚತುರ್ಗಡಿ ವರೆಗೆ ವರ್ಷಂಪ್ರತಿ ತಕ್ಕ ಮಟ್ಟಿಗೆ ದುರುಸ್ತು ಮಾಡುವರೇ ಹುಕುಂ ಮಾಡುವರೆಂತ ನಂಬುತ್ತೇನೆ. ಈ ಜನೋಪಕಾರದ ಕೃತ್ಯಗಳನ್ನು ಮಾಡಿಸಿದಲ್ಲಿ ದೇವರಲ್ಲಿ ಅನೇಕ ಪುಣ್ಯಗಳು ಸಿಕುವದಲ್ಲದೆ ಪ್ರಜೆಗಳಲ್ಲಿಯೂ ತುಂಬಾ ಪ್ರೀತಿ ಹುಟ್ಟುವದರಲ್ಲಿ ಸಂದೇಹವಿಲ್ಲ.

"ಬಡ ಹಿತಚಿಂತಕ"

ಯುದ್ಧ ಸಮಾಚಾರವು.

ಆಗೋಸ್ಟು ತಾ. ೬ — ಫ್ರೆಂಚು ನೌಕಾಸೇನೆಯು ಜರ್ಮನರ ಯುದ್ಧ ನಾವೆಯನ್ನು ಎಲಿಜಿಯರ್ನಿನ ಹತ್ತಿರ ಮುಳುಗಿಸಿ ಬಿಟ್ಟಿರುತ್ತದೆ. ಸರಕು ತುಂಬಿದ ಹಲವು ಜರ್ಮನರ ನಾವೆಗಳನ್ನು ಫ್ರೆಂಚರು ಮತ್ತು ಇಂಗ್ಲೀಷರು ಸೆರೆಹಿಡಿದಿರುತ್ತಾರೆ. ವೇಲ್ಸ್ ದ್ವೀಪದ ಹತ್ತರ ಹಿಡಿದ ಜರ್ಮನ್ ನಾವೆಯಲ್ಲಿ ೫ ಲಕ್ಷ ಪವನುಗಳ ಒಡವೆಗಳಿರುವವು — ಅಲ್‌ಜೀರಿಯಾ ಕರಾವಳಿಯಲ್ಲಿರುವ ಕೆಲವು ಪಟ್ಟಣಗಳನ್ನು ನಾಶಪಡಿಸಿರುವೆವೆಂತ ಜರ್ಮನರು ಹೇಳುತ್ತಿರುವರು

ಬೆಲ್ಜಿಯಮಿನ ಹೆನ್ರಿಚಪೆಲ್, ಡೂಲ್‌ಹೀನ ಮತ್ತು ಜೆಮ್ಮೆನೀಕ್ ಈ ಮೂರು ಕಡೆಗಳಲ್ಲಿ ಜರ್ಮನರು ಒಳನುಗ್ಗಲು ಪ್ರಯತ್ನಿಸುತ್ತಿದ್ದರು ವಿಸೆ ಎಂಬ ಪಟ್ಟಣವನ್ನು ಸೇರಿ ಜರ್ಮನರು ಮ್ಯೂಸೆ ಎಂಬ ನದಿಯನ್ನು ದಾಟಲು ಪ್ರಯತ್ನಿಸಿದರು ಆದರೆ ಬೆಲ್ಜಿಯನವರು ಹೀಗೆ ಈ ನದಿಯನ್ನು ದಾಟಲು ಬಿಡಲಿಲ್ಲ. ಜರ್ಮನ್ ಮತ್ತು ಬೆಲ್ಜಿಯಮಿನ ಕುದುರೆ ಸವಾರರೊಳಗೆ ಕದನ ನಡೆಯಿತು ಲೀಜ್ ಕೋಟೆಗಳನ್ನು ಬೆಲ್ಜಿಯನವರು ಬಿಟ್ಟುಕೊಡಬೇಕೆಂತ ಜರ್ಮನರು ಕೇಳಿದರು. ಬೆಲ್ಜಿಯನವರು ಇದನ್ನು ತಿರಸ್ಕರಿಸಿ, ಲೀಜ ಕೋಟೆಗೆ ಮುತ್ತಿಗೆ ಹಾಕಲು ಬಂದ ಜರ್ಮನರೊಂದಿಗೆ ಬಹಳ ಶೂರತನದಿಂದ ಕಾದಾಡುತ್ತಿರುವರು ವಿಸೆ ಮತ್ತು ಆರ್ಜೆಂಟೂ ಎಂಬ ಬೆಲ್ಜಿಯನ ಪಟ್ಟಣಗಳಿಗೆ ಬೆಂಕಿ ಹತ್ತಿರುವುದು ಜರ್ಮನರ ಒಂದು ಲಕ್ಷ ಸೇನೆಯು ಲೀಜ್ ಕೋಟೆಗೆ ಮುತ್ತಿಗೆಯನ್ನು ಹಾಕುತ್ತಿರುವುದು. ಬೆಲ್ಜಿಯಮಿನವರು ಬಹಳ ಶೂರತನದಿಂದ ಕಾದಾಡುತ್ತಿದ್ದಾರೆ. ವಿಸೆಯಲ್ಲಿರುವ ನಿವಾಸಿಗಳು ಮೆಸ್‌ಟ್ರಿಕ್ಟ್ ಎಂಬಲ್ಲಿಗೆ ಓಡಿ ಹೋಗಿರುವರು ಬೆಲ್ಜಿಯನವರು ಲೀಜ್ ಕೋಟೆಗೆ ಮುತ್ತಿಗೆ ಹಾಕಿದ್ದ ಜರ್ಮನರನ್ನು ಓಡಿಸಿ ಬಿಟ್ಟಿರುವರು ಬೆಲ್ಜಿಯಮಿನ ಹಲವರು ಘಾಯ ಒಡೆದಿರುವರು.— ಬೆಲ್ಜಿಯನ ಸರಹದ್ದಿನಲ್ಲಿ ಕದನವು ಬಹಳ ವಿಶೇಷವಾಗಿ ನಡೆಯುತ್ತಿರುವುದು ಬೆಲ್ಜಿಯಮಿನ ಸರಹದ್ದಿನಲ್ಲಿರುವ ಮೆಸ್ಟ್ರಿಕ್ಟ್ ಪಟ್ಟಣಕ್ಕೆ ರಾತ್ರಿಯಲ್ಲಿ ಓಡಿ ಬಂದ ಜರ್ಮನ್ ಕುದುರೆಗಳನ್ನು ಬೆಲ್ಜಿಯಮಿನವರು ಸೆರೆ ಹಿಡಿದಿರುವರು. ಜರ್ಮನರ ಸೇನೆಯು ಬಹಳ ನಷ್ಟ ಹೊಂದಿದರೂ ಮ್ಯೂಸೆ ನದಿಯನ್ನು ದಾಟಿರುವುದು — ಬೆಲ್ಜಿಯಮಿನ ಬ್ರುಸೆಲ್ಸ್ ಮತ್ತು ಎಂಟವರ್ಪ್ ಪಟ್ಟಣಗಳಲ್ಲಿರುವ ಜರ್ಮನರನ್ನು ಅಟ್ಟಿಬಿಟ್ಟಿರುತ್ತಾರೆ. — ಬೆಲ್ಜಿಯಮಿನ ಒಂದು ಆಕಾಶನಾವೆಯು ಲೀಜ್ ಕೋಟೆಯ ಹತ್ತಿರ ಜರ್ಮನರ ಆಕಾಶನಾವೆಯನ್ನು ನಾಶಪಡಿಸಿರುತ್ತದೆ — ಬೆಲ್ಜಿಯಮಿನ ಸೇನೆಯು ಬಹಳ ಆಸಕ್ತಿಯಿಂದ ಕಾದಾಡಿ ಜರ್ಮನರು ಲೀಜ್ ಕೋಟೆಯನ್ನು ಬಿಟ್ಟುಹೋಗುವಂತೆ ಮಾಡಿರುವರು — ಜರ್ಮನರ ಇನ್ನೊಂದು ಆಕಾಶನಾವೆಯನ್ನು ಬೆಲ್ಜಿಯಮಿನವರು ನಾಶಪಡಿಸಿರುತ್ತಾರೆ — ಲಕ್ಸೆಂಬರ್ಗ್ ಮತ್ತು ಬೆಲ್ಜಿಯಮಿನ ನಡುವೆ ಇರುವ ರೈಲ್ವೆ ಹಾದಿ ಮೊದಲಾದವುಗಳನ್ನು ಬೆಲ್ಜಿಯನರು ಕಡಿದು ಬಿಟ್ಟಿರುವರು. ಜರ್ಮನರ ೮೦೦೦ ಸೈನಿಕರು ಮಡಿದು ಹೋದರಲ್ಲದೆ ಇವರ ಫಿರಂಗಿಗಳು ಬೆಲ್ಜಿಯನರ ಕೈವಶವಾಗಿವೆ.

ಅಂಗ್ಲಾಳದಲ್ಲಿ ಜರ್ಮನಿಯ ಮೇಲೆ ಯುದ್ಧ ಸಾರಿದಂದಿನಿಂದ ಜನರು ವಿಶೇಷ ಯುದ್ಧ ಕುತೂಹಲದಿಂದ ತುಂಬಿರುವರು ಬಕ್ಕಿಂಗ್ಯಾಮ್ ಅರಮನೆಯ ಹತ್ತಿರ ಪ್ರಜಾ ವರ್ಗಗಳು ಗುಂಪು ಗುಂಪಾಗಿ ಬಂದು ಜಯಘೋಷದಿಂದ ಚಕ್ರವರ್ತಿಯರನ್ನು ವಂದಿಸುತ್ತಿರುವರು — ರೈಲ್ವೆಗಳನ್ನು ಮಿಲಿಟರಿಯವರೇ ನಡಿಸುತ್ತಿದ್ದಾರೆ.

ಜರ್ಮನ ಮತ್ತು ಸರ್ವಿಯಾ ದೇಶಗಳಿಗೆ ಸಮೀಪವಿರುವ ಸ್ವಿಜರ್‌ಲೆಂಡ ದೇಶವು ಯಾವ ಪಕ್ಷದವರನ್ನೂ ಸೇರದೆ ತಾನು ತಟಸ್ಥನಾಗಿರುವೆನೆಂತ ಪ್ರಕಟಿಸಿತು — ಜರ್ಮನಿಯವರು ಇವರ ಈ ತಟಸ್ಥಭಾವವನ್ನು ಮನ್ನಿಸದೆ ಅವರ ದೇಶವನ್ನು ಒಳನುಗ್ಗುತ್ತಿರುವರಂತೆ. — ಬಲ್ಕಾನ್ ಸಂಸ್ಥಾನದ ರುಮೇನಿಯಾ ದೇಶದವರು ತಾವು ಯುದ್ಧದಲ್ಲಿ ಕೈಹಾಕವೆಂತ ಪ್ರಕಟಗೊಳಿಸಿರುತ್ತಾರೆ.

ಜರ್ಮನರ ೧೯ ಯುದ್ಧ ನಾವೆಗಳು ಬೋಲ್ಟಿಕ್ ಸಮುದ್ರದಲ್ಲಿ ರುಶ್ಯ ಕರಾವಳಿಗೆ ಸಮೀಪವಿರುವ ಮೆಮೆಲ್ ಮತ್ತು ಲಿಬೊ ಪಟ್ಟಣಗಳ ಹತ್ತಿರ ಇವೆ. ಅಂಗ್ಲಾಳದಲ್ಲಿ ಜನರು ಬಹಳ ಆಸಕ್ತಿಯಿಂದ ಸೇನೆಯನ್ನು ಸೇರುತ್ತಿರುವರು. — ಜಪಾನ್ ಮತ್ತು ಆಂಗ್ಲೇಯರ ಒಪ್ಪಂದದ ಪ್ರಕಾರ ಜಪಾನೀಯ ನೌಕಾಸೇನೆಯು ಯುದ್ಧ ಸನ್ನಾಹಗಳನ್ನು ಮಾಡಿ ಸಿದ್ಧವಿರುವುದು. — ಕಿಚನರ್ ಪ್ರಭುಗಳನ್ನು ಯುದ್ಧ ಮಂತ್ರಿಗಳನ್ನಾಗಿ ನೇಮಿಸಿರುತ್ತಾರೆ. — ಐರಾಳದಲ್ಲಿ ಹೋಮ ರೂಲ್ ಬಿಲ್ಲಿನ ಪರವಾಗಿ ವಿಶೇಷ ಕೋಲಾಹಲ ನಡಿಸಿದ ಎರಡು ತಂಗಡದವರೂ ಒಂದಾಗಿ ಸೇನೆಯನ್ನು ಬಹಳವಾಗಿ ಕೊಡುತ್ತಿರುತ್ತಾರೆ. ಅಂಗ್ಲಾಳದ ಬೇಂಕಿನ ಡಿಸ್ಕೌಂಟಿನ ದರವು ಸೇಕಡಾ ೧೦ಕ್ಕೆ ಏರಿರುವಂಥಾದ್ದು ೬ಕ್ಕೆ ತಗ್ಗಿರುತ್ತದೆ — ಅಂಗ್ಲಾಳದ ಪೂಲ್‌ವಿಚ್ ಪಟ್ಟಣದಲ್ಲಿ ಇಬ್ಬರು ಜರ್ಮನ್ ಗೂಢಾಚಾರರನ್ನು ಹಿಡಿದಿರುತ್ತಾರೆ — ಸಂಶಯಕರವಾದ ರೀತಿಯಲ್ಲಿ ಅಂಗ್ಲಾಳದಲ್ಲಿ ಅಲೆದಾಡುತ್ತಿರುವ ಪರದೇಶಿಯರನ್ನು ಕೈದುಮಾಡಲಿಕ್ಕೆ ಒಂದು ಕಾನೂನು ಮಸೂದೆಯನ್ನು ಏರ್ಪಡಿಸುತ್ತಿರುವರು. — ನಿಷ್ಕಾರಣವಾಗಿ ಆಹಾರ ಜೀನಸುಗಳ ದರವನ್ನು ಏರಿಸದಂತೆ ಬ್ರಿಟಿಷ್ ಮಂತ್ರಿಗಳು ಅಂಗಡಿಗಾರರನ್ನು ಕೇಳಿಕೊಂಡಿರುತ್ತಾರೆ ಬ್ರಿಟಿಷ ದ್ವೀಪಗಳ ವ್ಯಾಪಾರ ವ್ಯವಹಾರಗಳು ಆತಂಕವಿಲ್ಲದೆ ನಡಿಯುವ ಏರ್ಪಾಡನ್ನು ಬ್ರಿಟಿಷ್ ಸರಕಾರದವರ ಮಾಡುತ್ತಿರುತ್ತಾರೆ. — ಅಂಗ್ಲಾಳದಿಂದ ಪರದೇಶಗಳಲ್ಲಿ ತುಂಬಿ ಹೋಗುವ ಸರಕುಗಳಿಗೂ ಹಡಗುಗಳಿಗೂ ಅಪಾಯ ವುಂಟಾಗದಂತೆ ಇನ್ಶೂರು ಮಾಡುವ ಕಂಪೆನಿಗಳಿಗೆ ಸರಕಾರದವರು ಬಹಳವಾಗಿ ಸಹಾಯಮಾಡುವ ಏರ್ಪಾಡು ನಡಿಯುತ್ತಿದೆ ಇನ್ಶೂರು ಮಾಡಿದ ಹಡಗುಗಳಿಗೆ ಅಪಾಯ ಸಂಭವಿಸಿದರೆ ಸೇಕಡಾ ೮೦ರಂತೆ ಸರಕಾರದವರು ಕೊಡುವರು ಬಾಕಿ ೨೦ ಇನ್ಶೂರ ಕಂಪೆನಿಗಳಿಂದ ಕೊಡೋಣಾಗುವುದು — ಪ್ರಿನ್ಸ್ ಒಫ್ ವೇಲ್ಸ್ ಯುವರಾಜರವರು ಯುದ್ಧದಲ್ಲಿ ಸಂಕಟಗೊಳ್ಳುವರ ನಿವಾರಣಾರ್ಥ ಪ್ರಯತ್ನಗಳನ್ನು ನಡಿಸುವರೆ ಬ್ರಿಟಿಷ್ ಜನಾಂಗವನ್ನು ವಿಜ್ಞಾಪಿಸಿಕೊಂಡಿರುತ್ತಾರೆ — ಬ್ರಿಟಿಷ್ ವಸಾಹತುಗಳಾದ ಕೆನಡಾ ಮೊದಲಾದ ದೇಶಗಳಲ್ಲಿ ಮಾತ್ರ ಭೂಮಿಯಾದ ಅಂಗ್ಲಾಳಕ್ಕೆ ಸಹಾಯಮಾಡುವರೆ ಸನ್ನಾಹಗಳು ನಡಿಯುತ್ತಲಿವೆ. ಕೆನಡಾ ದೇಶದವರು ಎರಡು ಸಬ್‌ಮೆರಾಯಿನ್ ಯುದ್ಧನಾವೆಗಳನ್ನು ಕ್ರಯಕ್ಕೆ ಪಡಕೊಂಡಿರುತ್ತಾರೆ

ಒಸ್ಟ್ರಿಯಾದ ಸೇನೆಯನ್ನು ಬಹಳ ಪರಾಕ್ರಮದಿಂದ ಸರ್ವಿಯಾದವರು ಎದರಿಸುತ್ತಿರುವರು — ಸರ್ವಿಯಾದವರು ಪರಾಕ್ರಮದಿಂದ ಸೇವ್ ನದಿಯನ್ನು ದಾಟಿ ಒಸ್ಟ್ರಿಯಾ ದೇಶದ ಈ ನದಿ ದಡದಲ್ಲಿ ತಮ್ಮ ಜಯಧ್ವಜವನ್ನು ನಟ್ಟಿರುತ್ತಾರೆ — ಸಮುದ್ರದಡಿಯಲ್ಲಿ ಯುದ್ಧನಾವೆಗಳನ್ನು ಕೆಡಹಲು ಮಾಯಿನ್‌ಗಳನ್ನು ಇಡುತ್ತಿದ್ದ ಜರ್ಮನ್ ಯುದ್ಧನಾವೆಯನ್ನು ಬ್ರಿಟಿಷರ ಯುದ್ಧನಾವೆಯು ನಾಶಗೊಳಿಸಿರುವುದು.

ಯುದ್ಧನಾವೆಗಳೂ ಸೇನೆಗಳೂ ಯಾವ ಕಡೆ ಎಲ್ಲಿಗೆ ಹೋಗುತ್ತಿರುವವೆಂಬ ವರ್ತಮಾನವನ್ನು ಪ್ರಕಟಿಸಲು ಅಪ್ಪಣೆಯು ಇರದು. ಬ್ರಿಟಿಷ ಚಕ್ರವರ್ತಿಯವರು ನೌಕಾಧ್ವಜವನ್ನು ಸಂದರ್ಶಿಸಿದರು. ಜಯಘೋಷಗಳಿಂದ ಸೈನಿಕರೆಲ್ಲರೂ ಚಕ್ರವರ್ತಿಯರನ್ನು ವಂದಿಸಿದರು

ಅಮೇರಿಕದ ಸಂಯುಕ್ತ ಸಂಸ್ಥಾನಗಳ ಪ್ರೆಸಿಡೆಂಟರು ಸಂಧಾನ ಪ್ರಯತ್ನಗಳನ್ನು ತನ್ನ ಮೂಲಕ ನಡಿಸುವರೆ ಸಿದ್ಧವಿರುವೆನೆಂದು ತಿಳಿಯಗೊಳಿಸಿದ್ದಾರೆ.

ಕಲ್ಕತ್ತೆಯಲ್ಲಿರುವ ಜರ್ಮನ್ ಭಂಡಸಾಲೆಗಳು ಮುಚ್ಚೋಣಾದವು — ಇತರ ವಿದೇಶೀ ಭಂಡಸಾಲೆಗಳು ಸಹ ವ್ಯಾಪಾರಗಳನ್ನು ನಿಲ್ಲಿಸಿ ನೌಕರರನ್ನು ಕೆಲಸದಿಂದ ಬಿಟ್ಟಿರುತ್ತಾರೆ — ಮತ್ತು ಕೆಲವು ನೌಕರರಿಗೆ ಅರ್ಧ ಸಂಬಳವನ್ನು ಕೊಡುತ್ತಿರುವರು — ಬಂಗಾಳದ ಖಾಸಗಿ ಡಾಕ್ಟರರೆಲ್ಲರು ತಮ್ಮಿಂದಾಗುವ ಸಹಾಯವನ್ನು ಸಾಮ್ರಾಜ್ಯ ಸರಕಾರದವರಿಗೆ ಹೇಗೆ ಮಾಡಬೇಕೆಂತ ನಿರ್ಣಯಿಸಲು ಸಭೆ ಕೂಡುತ್ತಿರುವರು.

ನೇಪಾಲ, ಕಾಶ್ಮೀರ, ಮೈಸೂರು, ಭಾವನಗರ, ಮಹಾರಾಜರುಗಳೆಲ್ಲರು ಯುದ್ಧ ಸಂದರ್ಭದಲ್ಲಿ ತಮ್ಮ ಸರ್ವಸ್ವವನ್ನು ಬ್ರಿಟಿಷರಿಗೆ ಒಪ್ಪಿಸಲು ಸಿದ್ಧವಿರುವೆವೆಂಬ ವಿಜ್ಞಾಪನೆಗಳನ್ನು ತಂತೀ ಮೂಲಕ ವೈಸರಾಯಿ ಪ್ರಭುಗಳಿಗೆ ತಿಳಿಸಿರುತ್ತಾರೆ

ರಂಗೂನಿನಲ್ಲಿ ಬಂದರು ರಕ್ಷಣೆಯ ವೊಲಂಟೀಯರ್ ಮಂಡಳಿಗೆ ಅನೇಕ ಜನರು ಸೇರುತ್ತಿರುವರು ರಂಗೂನಿನಲ್ಲಿ ಅಂಗಡಿಗಾರರು ನಿರರ್ಥಕವಾಗಿ ಆಹಾರ ಜೀನಸುಗಳ ಬೆಲೆಯನ್ನು ಏರಿಸುತ್ತಿರುವುದರಿಂದ ಹೀಗೆ ಇವರು ದರಗಳನ್ನು ಹೆಚ್ಚಿಸದಂತೆ ತಕ್ಕ ಏರ್ಪಾಡು ಮಾಡಬೇಕಾಗಿ ರಂಗೂನಿನ ಕಡಮೆ ತಲಬಿನ ನೌಕರರು ಸರಕಾರಕ್ಕೆ ಮನವಿ ಮಾಡಿಕೊಂಡಿರುತ್ತಾರೆ.

ವೈಸರಾಯ ಪ್ರಭುಗಳು ಬರ್ಮ ಮತ್ತು ಅಸ್ಸಾಮು ದೇಶಗಳ ಸಂದರ್ಶನೆಯನ್ನು ಸ್ಥಗಿತಕ್ಕೆ ಮುಂದರಿಸಿಟ್ಟಿರುವರು.

ಕರಾಚಿ, ಮುಂಬಯಿ ಮೊದಲಾದ ಕಡೆಗಳಲ್ಲಿ ತಮ್ಮ ನಿಶ್ಚಲವಾದ ರಾಜಭಕ್ತಿಯನ್ನು ಪ್ರದರ್ಶಿಸಿ ಸಾಮ್ರಾಜ್ಯ ಸರಕಾರದವರಿಗೆ ಬೇಕಾದ ಸಹಾಯವನ್ನು ಮಾಡಲು ಸಿದ್ಧವಿರುವೆವೆಂಬ ನಿರ್ಣಯಗಳನ್ನು ಎಲ್ಲಾ ಜಾತಿ ಮತಸ್ಥರು ಸಭೆ ಕೂಡಿ ಮಾಡುತ್ತಿರುತ್ತಾರೆ. ಕ್ರೈಸ್ತ ದೇವಾಲಯಗಳಲ್ಲಿ ಹಿಂದೂ ದೇವಸ್ಥಾನಗಳಲ್ಲಿಯೂ ಬ್ರಿಟಿಷರಿಗೆ ಜಯವನ್ನಪೇಕ್ಷಿಸಿ ಪ್ರಾರ್ಥನೆಗಳು ಮಾಡೋಣಾಗುತ್ತವೆ. ಮುಂಬಯಿ ಬಜಾರಿನಲ್ಲಿ ಶೇರ ಮಾರ್ಕೆಟಿನಲ್ಲಿ ಉಂಟಾದ ಗಲಿಬಿಲಿಯು ಕಡಿಮೆಯಾಗುತ್ತ ಬರುತ್ತಿದೆ.

ಮದ್ರಾಸಿನಲ್ಲಿ ಬೇಂಕುಗಳಿಂದ ಹಣ ಪಡಕೊಂಡವರು ಅವುಗಳನ್ನು ವಾಯಿದೆಗೆ ಕಟ್ಟಲಾರದೆ ಬಹಳ ಅಡಚಣೆಯನ್ನು ಅನುಭವಿಸುತ್ತಿರುವರು. ಬೇಂಕುಗಳು ತಮಗೆ ಬರಬೇಕಾದ ಹಣಗಳನ್ನು ವಸೂಲುಮಾಡುತ್ತವೆ. ಅಲ್ಲದೆ ಸಾಲಗಳನ್ನು ಕೊಡಲು ನಿರಾಕರಿಸುತ್ತವೆ. ಕರೆನ್ಸಿ ನೋಟುಗಳನ್ನು ಪೇಟೆಯಲ್ಲಿ ಮಟಾಯಿಸುವುದು ಕಷ್ಟಸಾಧ್ಯವಾಗಿ ಬಂದಿದೆ. ಪರದೇಶಗಳಿಗೆ ರಫ್ತಾಗುತ್ತಿರುವ ಚರ್ಮದ ವ್ಯಾಪಾರವು ಪೂರ್ಣ ನಿಂತುಹೋಗಿರುವುದು. ತಾಂಬ್ರ ಹಿತ್ತಾಳಿನ ತಗಡುಗಳ ಕ್ರಯವು ವಿಪರೀತ ಹೆಚ್ಚಿರುವುದು. ಸಕ್ಕರೆಯ ಕ್ರಯವು ರೂ ೨೧ರಿಂದ ೨೮ಕ್ಕೆ ಹೆಚ್ಚಿರುವುದು. ಕಾಗದ ಮೊದಲಾದ ಲಿಖಾವಟಿದ ಸಾಮಗ್ರಿಗಳು, ಗಾಜಿನ ದೀಪಗಳು, ಬೀಗ ಮುಂತಸರಕು ಇತ್ಯಾದಿಗಳಿಗೆಲ್ಲಾ ಕ್ರಯವು ಸೇಕಡಾ ೨೫ರಂತೆ ಹೆಚ್ಚಿರುತ್ತದೆ.

ಆಗೋಸ್ಟು ತಾ. ೬, ೭, ೮,

ಮೋರ್ಲೆ ಪ್ರಭುಗಳು ಮತ್ತು ಮಿ| ಜಾನ್ ಬರ್ನ್ಸ್ ಎಂಬವರು ತಮ್ಮ ಮಂತ್ರಿಪದವಿಗೆ ರಾಜಿನಾಮೆ ಕೊಟ್ಟಿರುವರು. ಮಿ| ಟ್ರೆವಿಲಿಯನ್ ಎಂಬವರು ಸಹ ರಾಜಿನಾಮೆ ಕೊಟ್ಟಿರುತ್ತಾರೆ. ಈ ಮಂತ್ರಿ ಪದವಿಗಳಿಗೆ ಹೊಸ ನೇಮಕಗಳು ಮಾಡೋಣಾದವು. ಬ್ರಿಟಿಷ ಪಾರ್ಲಿಮೆಂಟು ಸಭೆಯಲ್ಲಿ ಹಿಂದೂಸ್ಥಾನದ ಬಜೆಟು ಪ್ರಸ್ತಾಪವನ್ನು ಮುಂದರಿಸಿಟ್ಟಿರುತ್ತಾರೆ — ಬ್ರಿಟಿಷರ ಯುದ್ಧನಾವೆಯು ಆಕಸ್ಮಿತವಾಗಿ ಸಮುದ್ರದಡಿಯಲ್ಲಿ ತಯ್ಯಾರಿಸಿಟ್ಟಿದ್ದ ಮದ್ದಿನ ಸುರಂಗಕ್ಕೆ ತಾಗಿ ಮುಳುಗಿ ಹೋಯಿತು. ಬ್ರಿಟಿಷ ಯುದ್ಧನಾವೆಯನ್ನು ಹಿಂಬಾಲಿಸಿ ಹೋಗುತ್ತಿದ್ದ ಜರ್ಮನಿ ಯುದ್ಧನಾವೆಯನ್ನು ಮುಳುಗಿಸಿ ಬಿಟ್ಟಿರುವರು — ಜರ್ಮನರ ಸರಕು ತುಂಬಿರುವ ಅನೇಕ ಹಡಗುಗಳನ್ನು ಬ್ರಿಟಿಷರು ಹಿಡಿಯುತ್ತಿರುತ್ತಾರೆ. — ಡೆನ್ಮಾರ್ಕಿನ ಸಮೀಪ ಜರ್ಮನಿನ ಟೋರ್ಪೆಡೋ ಬೋಟು ಮುಳುಗಿ ಹೋಗಿ ೩೦ ಜನರು ಮೃತಪಟ್ಟರು — ದಕ್ಷಿಣ ಅಮೇರಿಕದಿಂದ ಬರುತ್ತಿದ್ದ ಜರ್ಮನ್ ಹಡಗನ್ನು ಹಿಡಿದು ಅಂಗ್ಲಾಳದ ಪ್ಲೈಮೌತ್ ಬಂದರಕ್ಕೆ ತಂದಿರುತ್ತಾರೆ. ಅರ್ಧ ಮಿಲಿಯ ಪವನು ಮತ್ತು ಜರ್ಮನಿಯ ಸೇನೆಗೆ ಸೇರಲು ಹೋಗುವವರನೇಕರು ಈ ಹಡಗದಲ್ಲಿದ್ದರು.

ಬೆಲ್ಜಿಯಮಿನಲ್ಲಿ ನಡಿಯುತ್ತಿದ್ದ ಲೀಜ್ ಕೋಟೆಯ ಮುತ್ತಿಗೆಯಲ್ಲಿ ಘಾಯ ಒಡೆದು ರಣರಂಗದಲ್ಲಿ ಬಿದ್ದಿದ್ದ ೧೨೦೦ ಜನರನ್ನು ಹೆಕ್ಕಿ ತೆಗದಿರುವರು. ಬೆಲ್ಜಿಯಮಿನವರು ಇಟ್ಟಿದ್ದ ಮದ್ದಿನ ಸುರಂಗದ ಹತ್ತಿರ ಸಾರಿದ ಜರ್ಮನ್ ಸೇನೆಯ ಸಾಲು ಸಾಲುಗಳು ಸುರಂಗಕ್ಕೆ ಬೆಂಕಿ ಹಾಕಿದ್ದರಿಂದ ನಾಶವಾಗಿ ಹೋದವು. — ೨೫,೦೦೦ ಬಲವುಳ್ಳ ಬೆಲ್ಜಿಯನರ ಸೇನೆಯು ೪೦,೦೦೦ ಬಲವುಳ್ಳ ಜರ್ಮನರ ಸೇನೆಯೊಡನೆ ಕಾದಾಡಿ ಜರ್ಮನರನ್ನು ಸೋಲಿಸಿ ಬಿಟ್ಟಿರುವರು. ಲೀಜು ಕೋಟೆಯಿಂದ ತುಫಾಕಿಯನ್ನು ಹಾರಿಸಿ ಜರ್ಮನರ ಆಕಾಶನಾವೆಯನ್ನು ಕೆಡವಿರುವರು.

ಕೆನಡಾ ದೇಶದಲ್ಲಿ ೨೦,೦೦೦ ಬಲವುಳ್ಳ ಸೇನೆಯು ತಯಾರಾಗಿದೆ — ಒಂದು ಲಕ್ಷ ಜನರು ಸೇನೆಯನ್ನು ಸೇರಲು ಕೆನಡಾ ದೇಶದಲ್ಲಿ ಮುಂದೊತ್ತಿ ಬರುತ್ತಿದ್ದಾರೆ.

ರುಶ್ಯ ದೇಶದಲ್ಲಿ ಸೇನೆ ತಯ್ಯಾರಿಯು ಬಹಳ ಶೀಘ್ರವಾಗಿ ನೆರವೇರುತ್ತಿರುವುದು — ಒಸ್ಟ್ರಿಯಾ ದೇಶವು ರುಶ್ಯದ ಮೇಲೆ ಯುದ್ಧವನ್ನು ಸಾರಿರುವುದು. ಜರ್ಮನರ ಮತ್ತು ರುಶ್ಯಯನರ ಎರಡು ಯುದ್ಧನಾವೆಗಳಿಗೆ ವೆಹ್ಯೆವೆ ಹತ್ತಿರ ಯುದ್ಧ ನಡೆದು ಎರಡು ನಾವೆಗಳೂ ಮುಳುಗಿ ಹೋದವು.

ಬ್ರಿಟಿಷ ಸೇನೆಗೆ ಇನ್ನು ಅರ್ಧ ಮಿಲಿಯ ಸೈನಿಕರನ್ನು ಹೆಚ್ಚಿಸುವ ಏರ್ಪಾಡನ್ನು ಕಿಚ್ನೆನರ ಪ್ರಭುಗಳು ಮಾಡಿರುತ್ತಾರೆ. ಬ್ರಿಟಿಷ ಪಾರ್ಲಿಮೆಂಟು ಸಭೆಯು ಯುದ್ಧ ಸನ್ನಾಹಕ್ಕೆ ಬೇಕಾದ ಖರ್ಚಿನ ಮೊಬಲಗುಗಳನ್ನು ಧಾರಾಳವಾಗಿ ಸೆಂಕ್ಷನು ಮಾಡುತ್ತಲಿದೆ. ಬ್ರಿಟಿಷ್ ಸರಕಾರದ ಮುಖ್ಯ ಮಂತ್ರಿಗಳಾದ ಮಿ| ಅಸ್ಕ್ವಿತರವರು ಸಂಧಾನಕ್ಕೋಸ್ಕರ ಮಾಡಿದ ಪ್ರಯತ್ನಗಳ ವಿವರವನ್ನು ಪಾರ್ಲಿಮೆಂಟ ಸಭೆಗೆ ತಿಳಿಯಹೇಳಿ ಹಿಂದೂಸ್ಥಾನದಿಂದ ದೊರೆಯುವ ಸಹಾಯವನ್ನು ಸಹ ಸಭಿಕರಿಗೆ ಶ್ರುತಪಡಿಸಿರುವರು. ಲೋರ್ಡ್ ರೋಬರ್ಟ್ಸರವರು ಕಿಚ್ನೆನರ್ ಪ್ರಭುಗಳಿಗೆ ಸಹಕಾರಿಗಳಾಗಿ ಈ ಸಂದರ್ಭದಲ್ಲಿ ಕೆಲಸ ಮಾಡುತ್ತಿರುತ್ತಾರೆ.

ಬ್ರಿಟಿಷ ಸರಕಾರದವರ ವರ್ತನೆಯನ್ನು ಈ ಸಂದರ್ಭದಲ್ಲಿ ಶ್ಲಾಘಿಸಿಕೊಂಡು ಇಟಾಲಿಯವರು ಬ್ರಿಟಿಷರನ್ನು ವಂದಿಸುತ್ತಾರೆ.

ಇಟಾಲಿಯ ಆಪ್ತರಾಗಿದ್ದ ಜರ್ಮನಿ ಮತ್ತು ಒಸ್ಟ್ರಿಯಾ ದೇಶಕ್ಕೆ ಇಟಾಲಿಯವರು ಈ ಸಂದರ್ಭದಲ್ಲಿ ಸಹಾಯವನ್ನು ತಿರಸ್ಕರಿಸಿದರೆ ಇಟಾಲಿ ಮೇಲೆ ಸಹ ಯುದ್ಧವನ್ನು ಜರ್ಮನರು ಸಾರುವರೆಂತ ಪಾರೀಸಿನ ಒಂದು ತಂತೀ ವಾರ್ತೆಯಿಂದ ತಿಳಿದುಬರುತ್ತದೆ.

'ನೊರ್ತಸಿ'ಯಲ್ಲಿ ನಡದ ನೌಕಾಯೋಜನ ಕಾಳಗದಲ್ಲಿ ಜರ್ಮನರ ೧೯ ಯುದ್ಧನಾವೆಗಳನ್ನು ನಾಶಪಡಿಸಿರುವರೆಂಬದಾಗಿ ತಿಳಿದುಬರುತ್ತದೆ.

ಬ್ರಿಟಿಷರ ವೇಲ್ಸ್ ದ್ವೀಪದ ಕಲ್ಲಿದ್ದಲಿನ ಗನಿಕೆಲಸದವರು ಒಂದೊಂದು ಗಂಟೆ ಕೆಲಸವನ್ನು ಹೆಚ್ಚಾಗಿ ಮಾಡಲು ಸಮ್ಮತಿಸಿರುತ್ತಾರೆ. ಮಿ| ಕೀಯರ್ ಹಾರ್ಡಿ ಮತ್ತು ರಿಚರ್ಡ್‌ಸನ್‌ರವರು ಸಭೆಕೂಡಿಸಿ ಯುದ್ಧವನ್ನು ವಿರೋಧಿಸಿ ಭಾಷಣಗಳನ್ನು ಮಾಡುವ ಸಂದರ್ಭದಲ್ಲಿ ಕೂಡಿದ ಜನರು ಇವರನ್ನು ಮಾತೆತ್ತಲು ಬಿಡಲಿಲ್ಲ.

ಡೆನ್ಯೂಬನದಿಯನ್ನು ದಾಟಲು ಏಳು ಸಲ ಒಸ್ಟ್ರಿಯದವರು ಮಾಡಿದ ಪ್ರಯತ್ನಗಳನ್ನು ಸರ್ವಿಯದವರು ನಿಷ್ಫಲಗೊಳಿಸಿರುವರು.

ಹಿಂದೂಸ್ಥಾನದಲ್ಲಿ ಸರಕ್ಕಾರದವರಿಂದ ಮಂಜೂರು ಮಾಡಲ್ಪಡದ ಬ್ರಿಟಿಷ ಸೇನೆಯ ಸಾಧನೆ ಪ್ರಯತ್ನಗಳು ಇತ್ಯಾದಿಗಳನ್ನು ಕುರಿತು ವರ್ತಮಾನವನ್ನು ಪ್ರಕಟಿಸಕೂಡದೆಂತ ಸರಕಾರದವರ ಆಜ್ಞೆಯಾಗಿರುವುದು ಸಾಮ್ರಾಜ್ಯ ರಕ್ಷಣೆಯ ಬಗ್ಗೆ ಕೈಕೊಳ್ಳುವ ಏರ್ಪಾಡುಗಳನ್ನು ಗುಪ್ತವಾಗಿಡುವುದು ಅಗತ್ಯವಾದ್ದರಿಂದ ಸರಕಾರದವರ ಈ ಆಜ್ಞೆಯು ಈ ಯುದ್ಧಕಾಲದಲ್ಲಿ ಉಚಿತವಾಗಿರುತ್ತದೆ. ಕಲ್ಕತ್ತೆಯ ಪೋಲೀಸು ಕೋರ್ಟು ವಕೀಲರು ಕಲ್ಕತ್ತೆಯ ಚೀಫ್ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರ ಕೈಕೆಳಗೆ ಒಲಂಟೀಯರರಾಗಿ ಸೇರಿ ಒಂದು ಸೇನಾಂಗವನ್ನು ಏರ್ಪಡಿಸಲು ಅಪ್ಪಣೆ ಕೊಡಬೇಕಾಗಿ ಬಂಗಾಳದ ಸರಕಾರದವರಿಗೆ ವಿಜ್ಞಾಪಿಸಿರುತ್ತಾರೆ ಹಾಸ್ಯಾಸ್ಪದವಾದ ಮಾರ್ವಾಡಿಗಳ ಗಲಿಬಿಲಿ ವೃತ್ತಾಂತವು ಪ್ರಕಟಿಸಲ್ಪಟ್ಟಿರುವುದು. 'ಮಾರ್ಷಲ್ ಲೊ' ಎಂಬ ಯುದ್ಧಕಾಲಿಕ ಶಾಸನವು ಕಲ್ಕತ್ತೆಯಲ್ಲಿ ಸಾರಲ್ಪಡುವುವೆಂಬ ಊಹೆಯ ಮೇಲೆ ತಮ್ಮ ಹತ್ತಿರವಿರುವ ಕರೆನ್ಸಿ ನೋಟುಗಳ ನಾಣ್ಯಗಳನ್ನ ಪಡದು ಹೆಂಡತಿ ಮಕ್ಕಳ ಸಹಿತ ರಾಜಪುತಾನಕ್ಕೆ ಓಡುತ್ತಿರುವರು ಹಿಂದೂಸ್ಥಾನದಿಂದ ಅಂಗ್ಲಾಳಕ್ಕೆ ಹೋಗುತ್ತಿರುವ ಮೈಲ್ ಬೋಟುಗಳು ಇನ್ನು ಮುಂದೆ ಜಿಬ್ರಾಲ್ಟರ್ ಮಾರ್ಗವಾಗಿ ಹೋಗುತ್ತಿರುವುದರಿಂದ ವಿಲಾಯತಿ ಟಪ್ಪಾಲು ಮುಟ್ಟುವಾಗ ಒಂದು ಹಪ್ತೆಯ ಕಾಲವು ಹೆಚ್ಚು ತಗಲುವುದು ಅಯೋಧ್ಯೆಯ ತಾಲೂಕುದಾರರು ತಮ್ಮ ಸಹಾಯವನ್ನು ಸಾಮ್ರಾಜ ಸರಕಾರಕ್ಕೆ ಸೂಚಿಸಿ ವೈಸರಾಯ ಪ್ರಭುಗಳಿಗೆ ವಿಜ್ಞಾಪನೆ ಬರಕೊಂಡಿರುತ್ತಾರೆ ಜರ್ಮನ್ ಹಡಗುಗಳಲ್ಲಿ ಇಷ್ಟರವರೇಗೆ ಹೋಗುತ್ತಿದ್ದ ಟಪ್ಪಾಲಿನ ಬಗ್ಗೆ ಬೇರೆ ಏರ್ಪಾಡು ಮಾಡೋಣಾಗಿದೆ

ಇಡಾರ್, ಸಕೀನ್, ಪಲುಂಧರ, ಕಚ್, ಲಿಂಬ್ಡಿ ಸಂಸ್ಥಾನಗಳು ತಾವು ಪೂರ್ಣ ಸಹಾಯವನ್ನು ಈ ಸಂದರ್ಭದಲ್ಲಿ ಸಾಮ್ರಾಜ್ಯಸರಕಾರದವರಿಗೆ ಕೊಡಲು ಸಿದ್ಧವಿರುವರೆಂಬ ಈ ಸಂಸ್ಥಾನಗಳ ವಿಜ್ಞಾಪನೆಯು ಮುಂಬಯಿ ಸರಕಾರದವರಿಂದ ಪ್ರಕಟಿಸಲ್ಪಟ್ಟಿದೆ ಬಡೋದೆಯ ಗೈಕ್ವಾಡರವರು ತನ್ನ ತನುಮನಧನವನ್ನೂ ಬ್ರಿಟಿಷರ ಸೇವೆಗೆ ಅರ್ಪಿಸುವೆನೆಂತ ವೈಸರಾಯ ಪ್ರಭುಗಳಿಗೆ ತಿಳಿಸಿರುತ್ತಾರೆ

ಮುಂಬಯಿ ಬೇಂಕುಗಳಲ್ಲಿಯೂ ಬಜಾರುಗಳಲ್ಲಿಯೂ ಉಂಟಾದ ಗಲಿಬಿಲಿಯು ಸಮಾಧಾನಗೊಳ್ಳುತ್ತ ಬರುತ್ತಿರುವುದು ಪಂಜಾಬಿನಲ್ಲಿ ಯುದ್ಧ ವಾರ್ತೆಯಿಂದ ಏನೊಂದು ಗಲಿಬಿಲಿಯು ಉಂಟಾಗಿಲ್ಲ ಕರೆನ್ಸಿ ಆಫೀಸಿನಲ್ಲಿ ನಾಣ್ಯಗಳನ್ನು ಹೊರಗೆ ಕೊಡುವ ಬದಲಾಗಿ ಅವನ್ನು ಒಳಗೆ ಪಡೆಯುತ್ತಿದ್ದಾರೆ ಮುಂಬಯಿಯಲ್ಲಿ ಕರೆನ್ಸಿ ಆಫೀಸಿನಲ್ಲಿ ಜನರು ನೋಟುಗಳ ಬದಲಾಗಿ ರೂಪಾಯಿಗಳನ್ನು ಪಡೆಯುತ್ತಿರುವರು ಕಳೆದ ಶುಕ್ರವಾರ ಕರೆನ್ಸಿ ಆಫೀಸಿನಿಂದ ಸುಮಾರು ೭ ಲಕ್ಷ ರೂಪಾಯಿಗಳು ಕೊಡೋಣಾದವು ಗವರ್ನಮೆಂಟು ಪ್ರಾಮಿಸರಿ ನೋಟುಗಳ ಬೆಲೆಯು ಮುಂಬಯಿಯಲ್ಲಿ ಬಿದ್ದುಹೋದದ್ದು ಈಗ ಏರುತ್ತಲಿದೆ ವ್ಯಾಪಾರ ವೈವಾಟಗಳನ್ನು ನಮ್ಮ ಶತ್ರುರಾಜ್ಯಗಳೊಡನೆ ಮಾಡಕೂಡದೆಂದೂ ಶತ್ರುರಾಜ್ಯಗಳಿಗೆ ಸಾಲ ಇತ್ಯಾದಿ ಯಾವ ಸಹಾಯವನ್ನು ಮಾಡಕೂಡದೆಂದೂ, ಮನುಷ್ಯರಿಗೆ ಅಥವಾ ಜಾನುವಾರುಗಳಿಗೆ ಬೇಕಾದ ಆಹಾರಸಾಮಗ್ರಿಗಳನ್ನು ಶತ್ರುಗಳ ರಾಜ್ಯಗಳಿಗೆ ಒಯ್ಯಕೂಡದೆಂದೂ ಸಿಮ್ಲಾದಿಂದ ಶ್ರೇಷ್ಠ ಸರಕಾರದವರ ಹುಕುಂ ಪ್ರಕಟಿಸೋಣಾಗಿದೆ ಬಂಗಾಳದ ಚೇಂಬರ್ಸ್ ಆಫ್ ಕೊಮರ್ಸನವರು ನ್ಯಾಯವಿರುದ್ಧವಾಗಿ ಮತ್ತು ಕಾರಣವಿಲ್ಲದೆ ಜೀನಸುಗಳ ಧಾರಣೆಯನ್ನು ಏರಿಸದಂತೆ ತಕ್ಕ ಏರ್ಪಾಡನ್ನು ಮಾಡಬೇಕಾಗಿ ಬಂಗಾಳದ ಸರಕಾರದವರನ್ನು ಕೇಳಿಕೊಂಡಿರುವರು ರಂಗೂನು ಮುನ್ಸಿಪಾಲಿಟಿಯವರು ದೇಶೀಯ ಸಾಮಗ್ರಿಗಳ ದರ ಹೆಚ್ಚಿಸಿ ಮಾರೋಣಾಗದಂತೆ ತಕ್ಕ ಸಾಧನೆಯನ್ನು ಮಾಡುತ್ತಿರುವರು ಸರಕಾರದವರು ಕೆಲವು ಪ್ರಜೆಗಳ ಕಮಿಟಿಯ ಸಹಾಯದಿಂದ ನಿರ್ಣಯಿಸುವ ದರಗಳಿಗೆ ಮಿಕ್ಕಿದ ಧಾರಣೆಯಲ್ಲಿ ಆಹಾರ ಜೀನಸುಗಳನ್ನು ಮಾರಕೂಡದೆಂಬ ಆಜ್ಞೆಯನ್ನು ಮುಂಬಯಿ ಸರಕಾರದವರು ಪ್ರಕಟಿಸಿರುವರಲ್ಲದೆ ಈ ಆಜ್ಞೆಯನ್ನು ಉಲ್ಲಂಘಿಸಿ ನಡೆಯುವವರೆಲ್ಲರಿಗೆ ಶಿಕ್ಷೆಯಾದೀತೆಂತ ಸಹ ಡಂಗುರಹೊಡೆದು ತಿಳಿಸಿರುತ್ತಾರೆ.

~~~~~

ಅಗೋಸ್ಟು ತಾ ೭, ೮, ಅಂಗ್ಲಾಳ.

ಅಂಗ್ಲಾಳದಲ್ಲಿರುವ ಭಾರತೀಯ ವಿದ್ಯಾರ್ಥಿಗಳು ಯುದ್ಧದಲ್ಲಿ ತಮಗೆ ಯಾವ ಸೇವೆಯನ್ನಾದರೂ ಕೊಡಬೇಕೆಂತ ಸಾಮ್ರಾಜ್ಯ ಸರಕಾರದವರನ್ನು ಕೇಳಿರುತ್ತಾರೆ ಬ್ರಿಟಿಷ ನೌಕಾ ಸೇನೆಯು ಕದನದ ವಿಷಯ ಅಂಗ್ಲಾಳದಲ್ಲಿ ನಾನಾ ಬಗೆಯ ವರ್ತಮಾನಗಳಿದ್ದವು. ಇಂಥಾ ವರ್ತಮಾನಗಳು ಸ್ಪಷ್ಟವಾಗಿ ತಿಳಿಯುವಂತೆ ಚರ್ಚ್‌ಹಿಲ್ಲರವರು ಬ್ರಿಟಿಷ ನೌಕಾಫೌಜಿನಲ್ಲಿ ಒಂದೆರಡು ನಾವೆಗಳು ಹಾಳಾಗಿ ಹೋದದ್ದು ವಿನಹ ಇತರ ಯಾವ ನಷ್ಟವೂ ಸಂಭವಿಸಿರುವುದಿಲ್ಲವೆಂತ ಹೇಳಿರುತ್ತಾರೆ. ಸರಿಯಾದ ವರ್ತಮಾನವು ಜನರಿಗೆ ತಿಳಿಸೋಣಾಗುವಂತೆ ಒಂದು ಮಿಲಿಟರಿ ವರ್ತಮಾನ ಸಂಗ್ರಹ ಆಫೀಸು ಏರ್ಪಡಿಸಲ್ಪಟ್ಟಿರುವುದು. ಪ್ರಿನ್ಸ್ ಒಫ್ ವೇಲ್ಸ ಯುವರಾಜರವರು ನಿನ್ನೆ ದಿನ ತಮ್ಮ ರೆಜಮೆಂಟನ್ನು ಸೇರಿರುವರು. ರಾಜದ್ರೋಹಿಗಳನ್ನು ವಿದೇಶಗಳ ಗೂಢಾಚಾರರನ್ನೂ ಶಿಕ್ಷಿಸುವರೆ ಪಾರ್ಲಿಮೆಂಟುಸಭೆಯು ವಿಶೇಷ ಕಾನೂನನ್ನು ಮಾಡಿರುತ್ತದೆ. ವ್ಯಾಪಾರ ವೈವಾಟಗಳ ಸ್ಥಿತಿಯು ಒಳ್ಳೆದಾಗುತ್ತ ಬರುತ್ತಿರುವುದು ಇಂಗ್ಲಾಂಡು ಬೇಂಕಿನ ಡಿಸ್‌ಕೌಂಟು ದರವು ಸೇಕಡಾ ೫ಕ್ಕೆ ತಗ್ಗಿರುವುದು ಬ್ರಿಟಿಷ ದ್ವೀಪಗಳಿಗೆ ೫ ತಿಂಗಳ ಖರ್ಚಿಗೆ ಬೇಕಾದಷ್ಟು ಗೋಧಿಯು ಬ್ರಿಟಿಷ ದ್ವೀಪಗಳಲ್ಲಿರುವುದೆಂತ ತಿಳಿದು ಬರುತ್ತದೆ ಜನರು ಭೀತಿಯಿಂದ ಚಿನ್ನದ ನಾಣ್ಯಗಳನ್ನು ಕೂಡಹಾಕುವುದನ್ನು ಬಿಟ್ಟು ಬೇಂಕುಗಳಿಗೆ ಅವುಗಳನ್ನು ಹಿಂತಿರುಗಿ ಕೊಡುತ್ತಿರುವರು ಅಗೋಸ್ತು ತಾ. ೭ರಲ್ಲಿ ಒಂದೇ ದಿನದಲ್ಲಿ ೩ ೨೫೦,೦೦೦ ಪವನುಗಳು ಜನರಿಂದ ಬೇಂಕುಗಳಿಗೆ ಕೊಡೋಣಾಗಿವೆ ಅಂಗ್ಲಾಳಕ್ಕೆ ಹೋಗಿರುವವರು ಮತ್ತು ಅಲ್ಲಿಯೇ ವಾಸಿಸಿಕೊಂಡಿರುವ ಭಾರತೀಯ ನಿವಾಸಿಗಳು ತಮ್ಮ ರಾಜ ಭಕ್ತಿಯನ್ನು ವ್ಯಕ್ತಗೊಳಿಸಿ ಕ್ರೂ ಪ್ರಭುಗಳ ಮೂಲಕ ಚಕ್ರವರ್ತಿಯವರಿಗೆ ಮಾನ ಪತ್ರವನ್ನು ಒಪ್ಪಿಸಿರುತ್ತಾರೆ ಶಾಂತತೆಯ ಕಾಲದಲ್ಲಿ ಸರಕಾರದ ಆಡಳಿತೆಯ ಪರವಾಗಿ ಸರಕಾರದವರಿಗೂ ಪ್ರಜೆಗಳಿಗೂ ಎಂಥಾ ಅಭಿಪ್ರಾಯ ಭೇದವಿದ್ದರೂ ಹಿಂದೂಸ್ಥಾನವನ್ನು ಬಹಳವಾಗಿ ಉದ್ಧರಿಸಿರುವ ಬ್ರಿಟಿಷ ರಾಜರಲ್ಲಿರುವ ರಾಜಭಕ್ತಿಯ ನಿಶ್ಚಲವಾದ್ದೆಂದೂ ಸಾಮ್ರಾಜ್ಯದ ಶತ್ರುಗಳನ್ನು ನಾಶಪಡಿಸುವುದರಲ್ಲಿ ಭಾರತೀಯರು ಬ್ರಿಟಿಷರಿಗೆ ಬೇಕಾದ ಸಹಾಯವನ್ನೀಯಲು ಸಿದ್ಧವಿರುವರೆಂದೂ ಈ ಮಾನ ಪತ್ರದಲ್ಲಿ ಹೇಳೋಣಾಗಿರುವುದು ಸರ್ ಕೃಷ್ಣಗುಪ್ತ ಮೆ| ರತನ ಟಾಟಾ, ಲಾಲಾ ಲಾಜಪತರಾಯ್ ಜಸ್ಟಿಸ್ ಅಬ್ದುಲ್ ರಹಿಮ್, ಮತ್ತು ಸ್ವಕೃತ ಅಂಗ್ಲಾಳದಲ್ಲಿರುವ ಕೊಂಗ್ರೆಸು ಕಮಿಟಿಯವರ ಸಹ ತಮ್ಮ ಭಾವನೆಗಳನ್ನು ವ್ಯಕ್ತಗೊಳಿಸಿರುತ್ತಾರೆ ಅಂಗ್ಲಾಳದಲ್ಲಿ ಜನರಲ್ಲಿ ಉಂಟಾದ ಗಲಿಬಿಲಿ ತಗ್ಗಿ ಬಂದಿನಂದೆ ಅಂಗ್ಲಾಳದಿಂದ ಸ್ಟೀಮರುಗಳು ಹಿಂದೂಸ್ಥಾನಕ್ಕೆ ಬರಲು ಹೊರಟವೆ ಲಿವರ್‌ಪೂಲ್‌ನಿಂದ ಕಲ್ಕತ್ತೆಗೆ ವೀರೊಡಾ' ಎಂಬ ಹಡಗು ಹೊರಟಿರುವುದು ಯುವರಾಜರಿಂದ ಏರ್ಪಡಿಸಲ್ಪಟ್ಟ ಜನಾಂಗದ ಕ್ಲೇಶ ನಿವಾರಣಾರ್ಥ ಫಂಡಿಗೆ ೨೫೦,೦೦೦ ಪವನುಗಳ ಚಂದಾ ಮೊಬಲಗು ಜನರಿಂದ ಕೊಡೋಣಾಗಿರುವುದು ಚಕ್ರವರ್ತಿಯವರು ಈ ಫಂಡಿಗೆ ೫೦೦೦ ಪವನುಗಳನ್ನ ಕೊಟ್ಟಿರುವರಲ್ಲದೆ ಮೆ| ಜೊಜ್ ಕೋಟ್ ೫೦,೦೦೦ ಎಷ್ಟಸ್ ಪ್ರಭುಗಳು ೨೫೦೦೦ ರೊತ್‌ಶಿಲ್ಡ್ ೧೦ ೦೦೦ ಸರ್ ಆರ್ಥರ್ ಲಿವರ್ ೫೦೦೦ ಈ ರೀತಿ ಚಂದಾ ಮೊಬಲಗುಗಳ ಕೊಡಿಸೋಣಾಗಿವೆ ಜುಲೈ ತಿಂಗಳ ಅಂಗ್ಲಾಳದ ಆಮದು ಮತ್ತು ರಫ್ತು ವ್ಯಾಪಾರವು ಕಡಮೆಯಾಗಿರುವುದು ಆಫ್ರೀಕದಲ್ಲಿರುವ ಜರ್ಮನ್ ಸ್ವಾಸ್ಥ್ಯವಾದ ಜರ್ಮನ್ ಟೋಗೋಲೆಂಡಿನಲ್ಲಿರುವ ಲೋಮ್ ಪಟ್ಟಣವನ್ನು ಬ್ರಿಟಿಷ ಸೇನೆಯು ಮುತ್ತಿರುವುದು ರೇವು ಸ್ಥಳ ಮತ್ತು ರೈಲ್ವೆ ಟರ್ಮಿನಸ್ ಆಗಿರುವ ಈ ಪಟ್ಟಣವು ಬ್ರಿಟಿಷರ ಕೈವಶವಾಗಿರುವುದು ಯುದ್ಧ ಸಾಮಗ್ರಿಗಳೂ ಸೇನೆ ಕೂಡಲು ಹೋಗುವ ಜನವೂ ಇರುವ ಜರ್ಮನ ಹಡಗಗಳನ್ನು ಬ್ರಿಟಿಷರು ಹಿಡಿಯುತ್ತಿರುವರು ಲೆಂಕೆಷಾಯರಿನ ಹತ್ತಿ ಕಾರ್ಖಾನೆಗಳು ಯುದ್ಧ ಸಮ್ಬಂಧ ತಾವು ಇನ್ನು ಮುಂದೆ ಕೆಲಸವನ್ನು ನಡಿಸಲಾರೆವೆ ಬದಾಗಿ ನೋಟೀಸ ಪ್ರಕಟಿಸಿರುತ್ತಾರೆ.

೩,೦೦೦ ಟನ್ನುಗಳ ಪರಿಮಾಣದ ಒಂದು ಬ್ರಿಟಿಷ್ ಶೀಮೆಎಣ್ಣೆ ತುಂಬಿರುವ ಹಡಗವು ಎಲ್ಬ್ ಎಂಬಲ್ಲಿ ಸಮುದ್ರ ಸುರಂಗಕ್ಕೆ ತಾಗಿ ಮುಳುಗಿ ಹೋಗಿರುವುದು

ಬೆಲ್ಜಿಯಮ್ ಬೆಲ್ಜಿಯುಮಿನಲ್ಲಿ ಕಾದಾಡುತ್ತಿರುವ ಬೆಲ್ಜಿಯನರ ಶೌರ್ಯವನ್ನು ಕಣ್ಣಾರೆ ಕಂಡವರು ಬಹಳ ವಿಸ್ಮಯಪಟ್ಟಿರುವರು. ವಿಲ್ರೆ ಎಂಬಲ್ಲಿ ಜರ್ಮನ ಸೇನಾಂಗ ಒಂದು ಬೆಲ್ಜಿಯನರ ಮರೆಹೊಕ್ಕಿತು ೮೦,೦೦೦ ಜರ್ಮನರ ಸೈನ್ಯವನ್ನು ಬೆಲ್ಜಿಯನರ ೩೦,೦೦೦ದ ಸೇನೆಯು ಸೋಲಿಸಿಬಿಟ್ಟಿರುವುದು ಬೆಲ್ಜಿಯನ್ ಲುಕ್ಸೆಮ್‌ಬರ್ಗಿನಲ್ಲಿ ಜರ್ಮನರ ಅಶ್ವಪಡೆಯನ್ನು ಸೋಲಿಸಿದರು. ಯುದ್ಧಸಾಧನೆಯಲ್ಲಿ ಜರ್ಮನ ತಿಳಿಗೇಡಿತನವು ಬಹಳವಾಗಿ ವ್ಯಕ್ತವಾಗುತ್ತಿರುವುದು ಲೀಜ್‌ಕೋಟೆಯ ಮುತ್ತಿಗೆಯಲ್ಲಿ ತಾವು ಪಡದ ಪರಾಜಯವು ವಿಶೇಷವಲ್ಲವೆಂತ ಜರ್ಮನರು ಹೇಳುತ್ತಿರುವರು ೧೨೫,೦೦೦ ಸೈನಿಕರೊಡನೆ ಬೆಲ್ಜಿಯನ್ ಅರಸರು ಬೆಲ್ಜಿಯಮಿನ ಲುವೈನ್ ಎಂಬಲ್ಲಿರುವರು ಜರ್ಮನರು ಒಳನುಗ್ಗದಂತೆ ಆದಷ್ಟು ದೀರ್ಘಕಾಲ ಅವರನ್ನು ಎದುರಾಡುವುದು ತಮ್ಮ ಧರ್ಮವಾಗಿದೆಂತ ಬೆಲ್ಜಿಯಮ್ ಅರಸರು ತಮ್ಮ ಜನರೆಲ್ಲರಿಗೆ ಸಾರಿರುವರು, ಜರ್ಮನರು ಬೆಲ್ಜಿಯನರ ಕೂಡೆ ಯುದ್ಧವನ್ನು ೨೪ ತಾಸುಗಳ ತನಕ ನಿಲ್ಲಿಸಬೇಕೆಂದು ಕೇಳಿರುವರು, ಫ್ರೆಂಚರ ಅಶ್ವಪಡೆಯು ಲೀಜ್ ಕೋಟೆಯ ಪೂರ್ವದಿಂದ ಮುಂದರಿಸಿ ಬರುತ್ತಿರುವುದು.

ಜರ್ಮನಿ. ಭೂಮಧ್ಯಸಾಗರದಲ್ಲಿರುವ ಸಿಸಿಲಿ ದ್ವೀಪದ ಮೆಸ್ಸಿನಾದಲ್ಲಿರುವ ಜರ್ಮನ್ ಯುದ್ಧನಾವೆಗಳೆರಡು ಅಲ್ಲಿಂದ ಹೊರಟಿರುವವು. ಬ್ರಿಟನ್ ಮತ್ತು ಜರ್ಮನರೊಳಗೆ ಯುದ್ಧವು ಸಾರಲ್ಪಟ್ಟೊಡನೆ ಜರ್ಮನ ರಾಜಧಾನಿಯಲ್ಲಿರುವ ಬ್ರಿಟಿಷ ರಾಯಭಾರಿಯ ವಸತಿಯ ಕಿಟಕಿಗಳನ್ನು ಜರ್ಮನರು ಹೊಡೆದುಬಿಟ್ಟಿರುವರು. ೪೦ ಜನ ಬ್ರಿಟಿಷ ಪ್ರಜೆಗಳನ್ನು ಒಂದು ಕೋಟೆಯಲ್ಲಿಟ್ಟಿರುತ್ತಾರೆ ಜರ್ಮನಿಯಲ್ಲಿ ಗೂಢಾಚಾರರನ್ನು ಹುಡುಕಿ ಹಿಡಿಯುವ ಶೋಧನೆಯ ಹುಚ್ಚು ಅತಿರೇಕವಾಗಿರುವುದು. ಜಗತ್ತಿನ ಎಲ್ಲಾ ಪ್ರಾಂತ್ಯಗಳಿಗೆ ವರ್ತಮಾನಗಳನ್ನು ಸಂಗ್ರಹಿಸಿ ಕೊಡುವ 'ರುಟರ್' ಕಂಪೆನಿಯ ಏಜಂಟರು ಜರ್ಮನಿಯಿಂದ ಬಹಳ ಪೇಚಾಡಿ ತಲೆತಪ್ಪಿಸಿಕೊಂಡು ಬರಬೇಕಾಯಿತು ಜರ್ಮನ್ನ ಚಕ್ರವರ್ತಿಯವರು ತಮ್ಮ ಇನ್ನೊಂದು ಜಾಹೀರುನಾಮೆಯನ್ನು ಪ್ರಕಟಗೊಳಿಸಿರುವರು. ಶಾಂತತೆಯು ಇದ್ದಾಗಲೆ ನಮ್ಮ ಶತ್ರುಗಳು ನಮ್ಮ ಮೇಲೆ ಬಿದ್ದಿರುವರು ನಮ್ಮಲ್ಲಿ ನಮ್ಮ ಜನರ ಮತ್ತು ಅಶ್ವಗಳ ಕಡೆಶ್ವಾಸವು ಇರುವತನಕ ನಮ್ಮ ಶತ್ರುಗಳು ಅಸಂಖ್ಯಾತವಾಗಿದ್ದರೂ ನಾವು ಕಾದಾಡಿಯೇ ಬಿಡುವೆವು ಜರ್ಮನ್ ಮಂತ್ರಿಗಳ ಜಾಹೀರನಾಮೆಯು ಬೇರೊಂದು ವಿಧವಾಗಿದೆ ಭೂಲೋಕವೆಲ್ಲವು ಭೂತಪಿಶಾಚಿಗಳಿಂದ ತುಂಬಿಹೋದರೂ ಸೂರ್ಯಮಂಡಲದಲ್ಲಿಯಾದರೂ ನಮ್ಮ ಇರವನ್ನು ನಾವು ಸ್ಥಾಪಿಸದೆ ಬಿಡೆವು ರುಶ್ಯಕ್ಕೆ ತಾಗಿರುವ ಬೊಲ್ಟಿಕ್ ಸಮುದ್ರದಲ್ಲಿ ಜರ್ಮನರ ನೌಕಾಫೌಜು ಅತಿ ವೇಗದಿಂದ ಸಮರಸನ್ನಾಹಗಳನ್ನು ಮಾಡುತ್ತಲಿದೆ.

ಫ್ರಾನ್ಸು ಫ್ರೆಂಚರು ವಿಕ್ ಮತ್ತು ಮೊಯನ್ ವಿಕ್ ಎಂಬ ಎರಡ ಪಟ್ಟಣಗಳನ್ನು ಕೈವಶಮಾಡಿಕೊಂಡಿವೆ ಇಂಗ್ಲಾಂಡು ಮತ್ತು ಫ್ರಾನ್ಸಿನಲ್ಲಿ ಜರ್ಮನರ ರಾಯಭಾರಿಯನ್ನು ಬಹಳ ಮನ್ನಣೆಯಲ್ಲಿ ನಡಿಸಿದರೂ ಜರ್ಮನರು ಬಹಳ ಅಪಮಾನಕರವಾದ ರೀತಿಯಲ್ಲಿ ಫ್ರೆಂಚ ರಾಯಭಾರಿಯನ್ನು ಜರ್ಮನಿಯಿಂದ ಕಳುಹಿಸಿಕೊಟ್ಟಿರುವರು ಹೊಲೆಂಡ್ ಮತ್ತು ಬೆಲ್ಜಿಯಮ್ ಮಾರ್ಗವಾಗಿ ಇವರನ್ನ ಹೋಗಲಿಕ್ಕೆ ಬಿಡದೆ ಡೆನ್‌ಮಾರ್ಕ ಮಾರ್ಗವಾಗಿ ಇವರಿಗೆ ಕಳುಹಿಸಿ ಹಾದಿಯಲ್ಲಿ ನೀರು ಸಹ ಸಿಕ್ಕದಂತೆ ಜರ್ಮನರು ಪ್ರಯತ್ನಿಸಿದರು ಜರ್ಮನ ಸೈನಿಕರು ಕೋವಿಗಳನ್ನು ಹಿಡಿದು ಈ ಫ್ರೆಂಚ ರಾಯಭಾರಿಯನ್ನು ಬಹಳವಾಗಿ ಬೆದರಿಸಿದರು ಹಣ ಕೊಡದೆ ಟ್ರೈನನ್ನು ಮುಂದರಿಸಲಿಕ್ಕಿಲ್ಲವೆಂತ ಫ್ರೆಂಚ ರಾಯಭಾರಿಯನ್ನು ಬೆದರಿಸಿದ್ದರಿಂದ ರಕ್ಷಕರ ಸಹಾಯದಿಂದ ಹಣ ದೊರಕಿಸಿಕೊಂಡು ತನ್ನ ಪ್ರಯಾಣವನ್ನು ಮುಂದಕ್ಕೆ ಸಾಗಿಸಿದರು

ಅಮೇರಿಕ ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಜರ್ಮನರ ಈ ವರ್ತನೆಯನ್ನು ಪತ್ರಗಳು ಬಹಳವಾಗಿ ಹೀಯಾಳಿಸಿರುತ್ತವೆ ಸಂಯುಕ್ತ ಸಂಸ್ಥಾನಗಳ ತಟಸ್ಥ ಭಾವವನ್ನು ಜರ್ಮನ ವರ್ತಕರು ಅಮೇರಿಕದಲ್ಲಿ ಯಾವರೀತಿಯಲ್ಲಿಯೂ ಉಲ್ಲಂಘಿಸಲು ಪ್ರಯತ್ನಿಸದಂತೆ ಅಮೇರಿಕದ ಸರಕಾರದವರು ತಕ್ಕದಾದ ಏರ್ಪಾಡುಗಳನ್ನು ಮಾಡಿರುವರು

ಇಟಲಿ ಒಸ್ಟ್ರಿಯಾದವರೂ ಜರ್ಮನರೂ ಇಟಲಿಯು ತಮ್ಮನ್ನ ಯುದ್ಧದಲ್ಲಿ ಸೇರಿಕೊಂಡು ಇಂಗ್ಲಾಂಡು ಮತ್ತು ಫ್ರಾನ್ಸ್ ದೇಶಗಳೊಡನೆ ಕಾದಾಡಬೇಕೆಂದು ಬಹಳ ಪ್ರಯತ್ನಪಡಿಸಿದರು ಇಟಲಿಯು ಇವರನ್ನ ಕೂಡಲು ತೀರಾ ತಿರಸ್ಕರಿಸಿರುವುದು ಇಟಲಿಯಲ್ಲಿಯೂ ಅಂಗ್ಲಾಳದಲ್ಲಿಯೂ ಇರುವ ಇಟಾಲಿಯನರು ಹೆಚ್ಚಿನ ಉತ್ಸಾಹದಿಂದ ಸಭೆಕೂಡಿಸುತ್ತ ಜರ್ಮನರ ವರ್ತನೆಯನ್ನು ತುಚ್ಛೀಕರಿಸಿ ಅಂಗ್ಲೇಯರೊಡನೆ ತಮ್ಮ ಸ್ನೇಹಭಾವನೆಗಳನ್ನು ವಿಶೇಷವಾಗಿ ವ್ಯಕ್ತಗೊಳಿಸುತ್ತಿರುವರು

ರುಶ್ಯ ರುಶ್ಯಯನರು ಬಹಳ ನಷ್ಟಹೊಂದಿರುವರು ಜರ್ಮನರ ಅಶ್ವಪಡೆಯು ರುಶ್ಯದ ಕಿಬಾರ್ಟಿ ಪಟ್ಟಣಕ್ಕೆ ಮುತ್ತಿಗೆ ಹಾಕಿದೆ

ಚೀನಾ ಈ ಯುದ್ಧ ಸಂಬಂಧ ಚೀನಾ ದೇಶದಲ್ಲಿ ಏನಾದರೂ ಅನಾಹುತಗಳು ಸಂಭವಿಸದಂತೆ ಜಪಾನೀಯರ ಮತ್ತು ಅಮೇರಿಕದ ಸಂಯುಕ್ತ ಸಂಸ್ಥಾನದವರ ಸಹಾಯವನ್ನು ಕೇಳಿದೆ

ಓಸ್ಟ್ರೇಲಿಯ ಓಸ್ಟ್ರೇಲಿಯದವರು ಬ್ರಿಟಿಷ ಸಾಮ್ರಾಜ್ಯದವರಿಗೆ ಕೊಟ್ಟಿರುವ ೩೦,೦೦೦ ಜನಸಹಾಯವನ್ನು ಸ್ವೀಕರಿಸಿರುತ್ತಾರೆ

ಹಿಂದೂಸ್ಥಾನ ಬೊಬಿಲಿಯ ಮಹಾರಾಜರವರು ಒಂದು ಲಕ್ಷ ರೂಪಾಯಿಗಳ ಸಹಾಯವನ್ನು ಕೊಟ್ಟಿರುವರಲ್ಲದೆ ತಾನೂ ತನ್ನ ಮಗಂದಿಯರೂ ಸಾಮ್ರಾಜ್ಯದ ಸೇವೆಯನ್ನು ಸ್ವತಹ ಮಾಡಲು ಸಿದ್ಧವಿರುವೆವೆಂದು ತಿಳಿಸಿರುವರು ಟೆಲಿಗ್ರಾಮುಗಳನ್ನು ಬ್ರಿಟಿಷ್ ದ್ವೀಪಗಳಿಗೆ ಕಳುಹಿಸುವ ದರವು ಶಬ್ದ ಒಂದಕ್ಕೆ ರೂ. ೫-೯-೦ರಂತೆ ಏರಿರುವುದು. ಬೆಂಗಳೂರಿನಲ್ಲಿರುವ ಒಸ್ಟ್ರಿಯಾ ಮತ್ತು ಜರ್ಮನ ದೇಶದವರೆಲ್ಲರೂ ತಮ್ಮ ಹಾಣ್ಯಗಳನ್ನು ಬ್ರಾಯಿಗೇಡ್ ಆಫೀಸಿಗೆ ಬಂದು ಹೇಳಬೇಕೆಂದು ಆಜ್ಞೆಯಾಗಿದೆ. ಬ್ರಿಟಿಷರ ವಿರೋಧಿಗಳಾಗಿ ತಾವು ಯುದ್ಧಮಾಡೆವೆಂದೂ ಹಿಂದೂಸ್ಥಾನದಿಂದ ಸೇನೆಯ ಯಾವ ವರ್ತಮಾನವನ್ನಾದರೂ ಹೊರಗೆ ಕೊಡಲಾರೆವೆಂದೂ ಪ್ರಮಾಣ ಮುಚ್ಚಳಿಕೆಗೆ ಇವರಿಂದ ಸಹಿಮಾಡಿಸೋಣಾಗಿದೆ. ಬೆಂಗಳೂರು ಸಿಟಿಯಲ್ಲಿ ಮೈಸೂರು ಸಂಸ್ಥಾನದ ಪ್ರಜಾಜನರ ಸಭೆಯನ್ನು ಕೂಡಿಸುವ ಏರ್ಪಾಡು ನಡೆಯುತ್ತಿರುವುದು. ಬೆಂಗಳೂರಿನ ಸಿವಿಲ್ ಮತ್ತು ಮಿಲಿಟರಿ ಸ್ಟೇಶನುಗಳಲ್ಲಿರುವ ನಿವಾಸಿಗಳು ಜೀನಸು ಧಾರಣೆಗಳನ್ನು ಸಾಹುಕಾರರು ನಿಷ್ಕಾರಣವಾಗಿ ಏರಿಸದಂತೆ ಸರಕಾರದವರು ಶೀಘ್ರದಲ್ಲಿ ಬೇಕಾದ ಏರ್ಪಾಡು ಮಾಡುವರೆಂತ ನಿರೀಕ್ಷಿಸು
~~~~~

ತ್ತಿರುವರು. ಗ್ವಾಲಿಯರ್, ಪಟಿಯಾಲಾ, ರೀವಾ, ಭರತಪುರ, ನಭಾ, ಸಿಕಿಂ ಸಂಸ್ಥಾನಗಳ ಮಹಾರಾಜರುಗಳೂ ರಾಮಪುರ, ಮೇಲರ್‌ಕೋಟ್ಲಾ ಮೊದಲಾದ ಕಡೆಯ ನವಾಬರ್ಲೂ ತಮ್ಮ ಸಂಸ್ಥಾನಗಳನ್ನೆಲ್ಲಾ ಬ್ರಿಟಿಷರ ಸೇವೆಗೆ ಅರ್ಪಿಸಿರುತ್ತಾರೆ. 'ಡೊಗ್ಗರ್‌ಬೇಂಕ್' ಹತ್ತಿರದ ಕದನದ ನಂತರ ಜರ್ಮನ ನೌಕಾಘಾಟು ಪಲಾಯನ ಸೂಕ್ತವನ್ನು ಹಿಡಿದಿರುವರೆಂಬ ವಾರ್ತೆಯು ಮೈಸರಾಯ ಪ್ರಭುಗಳಿಗೆ ಬಂದಿರುವುದು ಆಸ್ಯಖಂಡದವರಲ್ಲದ ವಿದೇಶಿಗಳೆಲ್ಲರೂ ತಮ ರಾಣ್ಯಗಳನ್ನು ಸ್ಥಳೀಕ ಅಧಿಕಾರಿಗಳಿಗೆ ಬಂದು ತಿಳಿಸಬೇಕಲ್ಲದೆ ಜರ್ಮನರು ಮತ್ತು ಒಸ್ಟ್ರಿಯದವರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಬೇಕಾದರೆ ಪಾಸುಗಳನ್ನು ಪಡೆಯಬೇಕೆಂಬ ಶ್ರೀಷ್ಮ ಸರಕಾರದವರ ಆಜ್ಞೆಯು ಪ್ರಕಟಿಸಲ್ಪಟ್ಟಿರುವುದು. ಈ ಆಜ್ಞೆಯನ್ನು ಉಲ್ಲಂಘಿಸಿ ನಡದವರನ್ನು ಗಡಿಪಾರು ಮೊದಲಾದ ಶಿಕ್ಷೆಗಳಿಂದ ದಂಡಿಸುವರು. ರಾಜಭಕ್ತಿ ಪುರಸ್ಸರವಾಗಿ ಬ್ರಿಟಿಷರಿಗೆ ಧಾರಾಳವಾದ ಸಹಾಯವನ್ನು ಮಾಡಬೇಕೆಂಬ ಆಜ್ಞೆಯನ್ನು ಆಗಾಖಾನ್‌ರವರು ಮಹಮ್ಮದೀಯರೆಲ್ಲರಿಗೆ ಕೊಡುತ್ತಿರುತ್ತಾರೆ. ಮಡಿಕೇರಿಯಲ್ಲಿ ಕೊಡಗು ಜಿಲ್ಲೆಯ ಪ್ರತಿನಿಧಿಗಳ ಸಭೆಕೂಡಿ ಸಾಮ್ರಾಜ್ಯ ಸೇವೆಗೆ ತಾವು ಸಿದ್ಧವಿರುವೆವೆಂಬ ಟೆಲಿಗ್ರಾಮು ಕೊಡಗು ಕಮಿಶನರಿಗೆ ಬಿಡೋಣಾಗಿದೆ. ಗೂಟಿಯಲ್ಲಿ ಬಹುಮಾನಪಟ್ಟ ಕೇಶವಪಿಳ್ಳೆಯರ ಅಧ್ಯಕ್ಷತೆಯಲ್ಲಿ ಇದೇ ರೀತಿ ಸಭೆಕೂಡಿತು ಈ ಸಭೆಯಲ್ಲಿ ಒಬ್ಬ ಸ್ವಿಜರ್‌ಲೇಂಡಿನ ನಿವಾಸಿಗಳು ಹಾಜರಿದ್ದರು ಕಲ್ಕತ್ತೆಯಲ್ಲಿ ಕೂಡುವ ಸಭಾಧ್ಯಕ್ಷಸ್ಥಾನವನ್ನು ಬರ್ಡ್ವಾನಿನ ಮಹಾರಾಜರವರು ವಹಿಸಿಕೊಳ್ಳುವರು ಕಲ್ಕತ್ತೆಯಲ್ಲಿ ಒಂದು ಸ್ಪೆಶ್ಯಲ್ ಪೋಲೀಸು ಏರ್ಪಡಿಸೋಣಾಗಿದೆ. ಒಂಭತ್ತು ಜನ ಯುರೋಪಿಯ ಪ್ರಮುಖ ನಿವಾಸಿಗಳು ಈ ಫೌಜಿನ ಮೆಂಬರರಾಗಿರುವರು. ಬ್ರಿಟಿಷರಲ್ಲದ ಯುರೋಪಿಯ ನಿವಾಸಿಕರ ಸಂಚರಕೆಯ ವಿವರವನ್ನು ಆಗಿಂದಾಗ್ಗೆ ನಿಶ್ಚಯಿಸಿಕೊಂಡು ಈ ಫೌಜಿನವರು ತಿಳಿಸಬೇಕಾಗಿದೆ. ಬಂಗಾಳದ ಮೆಡಿಕಲ್ ಎಸೋಸಿಯೇಶನಿನವರು ಈ ಯುದ್ಧ ಸಂದರ್ಭದಲ್ಲಿ ತಾವು ಎಂಥಾ ಸೇವೆಯನ್ನಾದರೂ ಮಾಡಲು ಸಿದ್ಧವಿರುವೆವೆಂಬುದನ್ನು ಬಂಗಾಳದ ಗವರ್ನರರಿಗೂ ವೈಸರಾಯ ಪ್ರಭುಗಳಿಗೂ ತಿಳಿಸಿರುತ್ತಾರೆ ಯುರೇಸಿಯನರು ಹಿಂದೂಸ್ಥಾನದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಸ್ವೇಚ್ಛಾಸೇವೆಯ ಒಂದು ಸೇನಾಂಗವನ್ನು ಏರ್ಪಡಿಸುತ್ತಿರುವರು. ಮುಂಬಯಿಯಲ್ಲಿರುವ ಜರ್ಮನರಲ್ಲಿ ಹಲವರು ಗಡಿಪಾರು ಮಾಡಲ್ಪಡುವರೆಂಬುದಾಗಿ ತಾನು ಗ್ರಹಿಸುತ್ತೇನೆಂತ ಮುಂಬಯಿಯಲ್ಲಿರುವ ಅಮೇರಿಕದ ರಾಯಭಾರಿ ಮೆ॥ ಚೇಕರವರು ಹೇಳಿರುವರು

ಮುಂಬಯಿಯಲ್ಲಿ ಗವರ್ನರ ದೊರೆಗಳವರು ತಾನು ಸ್ವತಹ ಬಜಾರುಗಳಿಗೆ ಹೋಗಿ ವ್ಯಾಪಾರಸ್ಥರೆಲ್ಲರಿಗೆ ನಿಷ್ಕಾರಣವಾಗಿ ಆಹಾರ ಜೀನಸುಗಳ ದರಗಳನ್ನು ಹೆಚ್ಚಿಸಕೂಡದೆಂದು ಬೋಧಿಸುತ್ತಿರುವರು

~~~~~

ಆಗೋಸ್ತು ತಾ 8 ಮತ್ತು 9

ಅಂಗ್ಲಾಳ. ಬೆಳ್ಳಿಯ ಕ್ರಯವು ಸ್ವಲ್ಪ ಏರಿರುತ್ತದೆ ಅಂಗ್ಲಾಳದಿಂದ ಹಿಂದೂಸ್ಥಾನಕ್ಕೂ ಇತರ ಕಡೆಗಳಿಗೂ ಇತರ ಕಡೆಗಳಿಂದ ಅಂಗ್ಲಾಳಕ್ಕೂ ಹೋಗಲಿರುವ ಸುಮಾರು ೫೦ ಹಡಗುಗಳು ಜಿಬ್ರಾಲ್ಟರಿನ ಸಮೀಪ ನಿಂತಿರುವವು ಪ್ರಿನ್ಸ್ ಒಫ್ ವೇಲ್ಸರವರ ಜನಾಂಗಕ್ಲೇಶನಿವಾರಣಾ ಫಂಡಿಗೆ ಕೂಡಿರುವ ಹಣವು ೪ ಲಕ್ಷ ಪವನುಗಳಿಗೆ ಮಿಕ್ಕಿರುವುದು. ಸೇನೆಯ ಬಗ್ಗೆ ಒಂದು ಲಕ್ಷ ಜನರನ್ನು ಆದಷ್ಟು ತ್ವರ್ಯದಲ್ಲಿ ಕೂಡಿಸಿಕೊಡಬೇಕೆಂದು ಕಿಚ್ನರ್ ಪ್ರಭುಗಳು ಬ್ರಿಟಿಷ ದ್ವೀಪಗಳ ಆಯಾ ಊರುಗಳ ಮುಖಂಡರನ್ನು ವಿಜ್ಞಾಪಿಸಿಕೊಂಡಿರುವರು. ಜರ್ಮನ್ ಯುದ್ಧನಾವೆಗಳಲ್ಲಿ ಕೆಲವು ಆಂಗ್ಲೇಯರ ಯುದ್ಧನಾವೆಗಳೊಡನೆ ಕಾದಾಡಲು ಪ್ರಾರಂಭಿಸಿದ್ದವು. ಜರ್ಮನ ಯುದ್ಧನಾವೆಯೊಂದು ಮುಳುಗಿಹೋಗಿರುವುದು. ಬ್ರಿಟಿಷರ ಯುದ್ಧನಾವೆಗಳಿಗೆ ಏನೊಂದು ಅಪಾಯವು ಸಂಭವಿಸಿರುವುದಿಲ್ಲ.

ಫ್ರಾನ್ಸು. ಫ್ರೆಂಚರು ಜರ್ಮನಿಯ ಸರಹದ್ದುಗಳನ್ನು ಆಲ್‌ಸೆಸ್ ಎಂಬಲ್ಲಿ ಒಳನುಗ್ಗಿ ಬಹಳ ಕಠಿಣವಾದ ಕಾಳಗವನ್ನು ಮಾಡಿ ಆಲ್ಟ್‌ಕರ್ಕ್ ಎಂಬ ಪಟ್ಟಣವನ್ನು ಪಡಕೊಂಡಿರುವರು. ಓಡಿಹೋಗುತ್ತಿರುವ ಜರ್ಮನರನ್ನು ಹಿಂಬಾಲಿಸಿಕೊಂಡು ಮುಲ್‌ಹೌಸೆನ್ ಎಂಬ ಪಟ್ಟಣವನ್ನು ಸಹ ಒಳನುಗ್ಗಿ ಸ್ವಾಧೀನ ಮಾಡಿಕೊಂಡಿರುತ್ತಾರೆ. ಈ ಪ್ರಾಂತ್ಯಗಳು ಕೆಲವು ವರುಷಗಳ ಹಿಂದೆ ಫ್ರಾನ್ಸದೇಶದ್ದೇ ಆಗಿದ್ದವು. ಇವುಗಳನ್ನು ಜರ್ಮನಿಯವರು ಬಲಾತ್ಕಾರದಿಂದ ತಮ್ಮ ಕೈವಶಮಾಡಿಕೊಂಡಿದ್ದರು. ಫ್ರೆಂಚರು ಇದನ್ನು ಕೈವಶಮಾಡಿಕೊಂಡ ಕೂಡಲೆ ಅಲ್ಲಿಯ ಫ್ರೆಂಚ ಪ್ರಜಾಜನರು ಸಂತೋಷದಿಂದ ಫ್ರೆಂಚ ಸೇನೆಯನ್ನು ಮನ್ನಿಸಿ ಜರ್ಮನರು ಹಾಕಿದ್ದಂಥಾ ಗಡಿಗಳನ್ನು ನಾಶಪಡಿಸಿಬಿಟ್ಟರು. ಫ್ರೆಂಚರು ಹೀಗೆ ಜಯಪ್ರದರಾದ್ದರಿಂದ ಪಾರಿಸು ನಗರದಲ್ಲಿ ಸಂತೋಷಸಂಭ್ರಮಕ್ಕೆ ಮಿತಿಯೇ ಇಲ್ಲ. ಫ್ರೆಂಚರ ಅಶ್ವಪಡೆಯೂ ಇತರ ಸೇನೆಯೂ ವಿಶೇಷ ಧೈರ್ಯದಿಂದ ಜರ್ಮನರನ್ನು ಸೋಲಿಸಿಬಿಟ್ಟು ಓಡಿಸಿದ ವೃತ್ತಾಂತವನ್ನು ವರ್ಣಿಸಿ ಫ್ರೆಂಚ ಸರಕಾರದವರು ಪ್ರಕಟಿಸಿರುತ್ತಾರೆ ಜರ್ಮನರ ಅಫ್ರಿಕದ ವಸಾಹತಿಗಳನ್ನು ಫ್ರೆಂಚರು ಒಳನುಗ್ಗಿ ಕೈವಶಮಾಡಿಕೊಳ್ಳುತ್ತಿರುವರು ಟೋಗೋಲೆಂಡ್ ಎಂಬ ಕೋಲನಿಯ ಉತ್ತರ ಪಾರ್ಶ್ವವನ್ನು ಫ್ರೆಂಚರು ಒಳನುಗ್ಗಿರುತ್ತಾರೆ. ಬ್ರಿಟಿಷ್ ಯುದ್ಧನಾವೆಯ ಸಹಾಯದಿಂದ ಅಫ್ರಿಕದ ಫ್ರೆಂಚ ಸ್ವಾಸ್ಥ್ಯದಲ್ಲಿರುವ ಫ್ರೆಂಚಸೇನೆಯು ಜರ್ಮನರ ಟೋಗೋಲೆಂಡನ್ನು ಸ್ವಾಧೀನಮಾಡಿಕೊಂಡಿರುವುದು.

ಒಸ್ಟ್ರಿಯಾ. ಒಸ್ಟ್ರಿಯಾದೇಶದ ರಾಯಭಾರಿಯು ಲಂಡನಿನಲ್ಲಿರುವನು. ಈ ಯುದ್ಧ ಕಾರಣದಿಂದ ಒಸ್ಟ್ರಿಯಾ ಮತ್ತು ಆಂಗ್ಲಾಳದೊಳಗಿರುವ ಪರಸ್ಪರ ಬಾವನೆಗಳು ಮಾರ್ಪಡದೆ ಎಂದಿನಂತೆಯೇ ಇರುವುದರಿಂದ ಒಸ್ಟ್ರಿಯಾ ದೇಶದ ಕರಾವಳಿಯಲ್ಲಿರುವ ರೇವುಗಳು ತಟಸ್ಥಬಾವದಲ್ಲಿಯೇ ಇರುವವು. ಒಸ್ಟ್ರಿಯಾ ದೇಶದವರನ್ನು ದೂಷಿಸಿ ರುಷ್ಯಾದೇಶದ ಪಾರ್ಲಿಮೆಂಟ ಸಭೆಯಲ್ಲಿ ಅಲ್ಲಿಯ ಮಂತ್ರಿಗಳು ಬಾಷಣಮಾಡಿದರು ರುಶ್ಯಯನರ ಪ್ರಾಬಲ್ಯವು ಬಲ್ಕಾನ್ ಸಂಸ್ಥಾನಗಳಲ್ಲಿ ಬಿದ್ದುಹೋಗುವಂತೆ ಬಲ್ಕಾನ್ ಸಂಸ್ಥಾನಗಳಲ್ಲಿ ಅಂತಃಕಲಹಗಳನ್ನು ಒಸ್ಟ್ರಿಯಾ ದೇಶದವರೇ ಉಂಟುಮಾಡಿದರೆಂತ ಇವರು ಹೇಳಿರುವರು ಫ್ರಾನ್ಸು, ಬೆಲ್ಜಿಯಮ್ ಮತ್ತು ಬ್ರಿಟಿಷ್ ದೇಶಗಳನ್ನು ಶ್ಲಾಘಿಸಿ ಮಾತಾಡುತ್ತಿದ್ದಾಗ ಪಾರ್ಲಿಮೆಂಟ ಸಭೆಯ ಮೆಂಬರರೆಲ್ಲರೂ ಎದ್ದು ನಿಂತು ಜಯಘೋಷಗಳಿಂದಾರ್ಭಟಿಸಿದರು ಫ್ರಾನ್ಸು ಸರಹದ್ದುಗಳಿಗೆ ತಾಗಿರುವ ಒಸ್ಟ್ರಿಯಾ ದೇಶದ ಪ್ರಾಂತ್ಯಗಳಲ್ಲಿ ಸೇನೆಯು ಜತೆಗೊಳ್ಳುವುದನ್ನು ಕಂಡು ಹೀಗೆ ಸೇನೆಯನ್ನು ಜತೆಗೊಳಿಸುತ್ತಿರುವ ಕಾರಣಗಳನ್ನು ಫ್ರಾನ್ಸದೇಶದವರು ಕೇಳಿರುತ್ತಾರೆ ರುಶ್ಯಯನರ ಸೇನೆಯು ಸ್ಟೀರ್ ಎಂಬಲ್ಲಿಂದ ಒಸ್ಟ್ರಿಯಾ ದೇಶವನ್ನು ಒಳನುಗ್ಗಿ ಒಸ್ಟ್ರಿಯನರ ಸೇನೆಯ ಮುಂಭಾಗದವರನ್ನು ಓಡಿಸಿ ಬಿಟ್ಟಿರುತ್ತದೆ.

ಸರ್ವಿಯಾ. ಜರ್ಮನದೇಶದ ರಾಯಭಾರಿಗೆ ಸರ್ವಿಯಾದೇಶವನ್ನು ಬಿಟ್ಟುಹೋಗಲು ಅನುಮತಿ ದೊರಕಿರುವುದು. ಸರ್ವಿಯನರ ಸೇನೆಯು ವಿಸ್ವಗಾರ್ಡ್ ಎಂಬದನ್ನು ಒಸ್ಟ್ರಿಯಾದ ಸೇನೆಯವರಿಂದ ಬಿಡಿಸಿಕೊಂಡಿದೆ. ಸರ್ವಿಯನರಿಂದ ಪರಾಜಯವನ್ನು ಒಸ್ಟ್ರಿಯಾದವರು ಹೊಂದುತ್ತಿರುವರು.

ಅಮೇರಿಕ ಅಮೇರಿಕದ ನ್ಯೂಯೋರ್ಕ್ ಪಟ್ಟಣದಿಂದ ಹೊರಟಿರುವ ಹತ್ತು ಸಾವಿರ ಒಸ್ಟ್ರಿಯಾದವರಿಗೂ ಐದುಸಾವಿರ ಜರ್ಮನರಿಗೂ ನೂರಾರು ಜನ ಡಚ್ಚರಿಗೂ ಯುರೋಪುಖಂಡಕ್ಕೆ ಹೋಗಲಿಕ್ಕೆ ಸ್ಟೀಮರು ಟಿಕೇಟುಗಳು ದೊರಕದ್ದರಿಂದ ನ್ಯೂಯೋರ್ಕ್ ಪಟ್ಟಣದಿಂದ ಇವರೆಲ್ಲರು ತಂತಮ್ಮ ಅಮೇರಿಕದ ಮನೆಗಳಿಗೆ ಹೋಗಬೇಕೆಂಬ ಆಜ್ಞೆಯಾಗಿದೆ.

ಟರ್ಕಿ. ಬಲ್ಗೇರಿಯನ್ ಸಂಸ್ಥಾನದಲ್ಲಿ ಟರ್ಕಿಯು ತನ್ನ ಸೇನೆಯನ್ನು ಒಂದೇ ಕಡೆಯಲ್ಲಿ ಒಟ್ಟು ಸೇರಿಸುತ್ತಿರುವುದು.

ಸ್ವೀಡನ್ ಮತ್ತು ನೊರ್ವೆ, ಈ ರಾಜ್ಯಗಳು ಈ ಯುದ್ಧ ಸಂದರ್ಭದಲ್ಲಿ ಕದನಗಳನ್ನು ತಮ್ಮೊಳಗೆ ಮಾಡಲಾರೆವೆಂಬುದಾಗಿ ಒಬ್ಬರಿಗೊಬ್ಬರು ಭರವಸೆ ಕೊಟ್ಟಿರುತ್ತಾರೆ.

ಬೆಲ್ಜಿಯಮ್. ಲೀಜ್ ಕೋಟೆಗೆ ಜರ್ಮನರು ಮುತ್ತಿಗೆ ಹಾಕುವರೊ ಎಂತ ಕಳದ ೯ನೇ ತಾರೀಕಿನ ರಾತ್ರೆ ೧೨॥ ಗಂಟೆ ತನಕ ಬೆಲ್ಜಿಯನರ ಸೇನೆಯು ಕಾದುಕೊಂಡಿತ್ತು. ಬೆಳಿಗ್ಯೆ ೨ ಘಂಟೆಯ ತನಕ ಮುತ್ತಿಗೆಯನ್ನು ಹಾಕಿರಲಿಲ್ಲ. ನಂತರದಲ್ಲಿ ಲೀಜ್ ಕೋಟೆಗೆ ಜರ್ಮನರು ತಿರಿಗೊಮ್ಮೆ ಮುತ್ತಿಗೆ ಹಾಕಿರುತ್ತಾರೆ. ಬೆಲ್ಜಿಯಮಿನ ಇತರ ಕೋಟೆಗಳನ್ನು ಸಹ ಮುತ್ತಿ ವಿಶೇಷ ನಷ್ಟವನ್ನುಂಟುಮಾಡುವೆವೆಂತ ಜರ್ಮನರು ಬೆಲ್ಜಿಯನರನ್ನು ಗದರಿಸಿರುತ್ತಾರೆ. ಬೆಲ್ಜಿಯನರ ಸೇನೆಯು ಉತ್ಕೃಷ್ಟ ಸ್ಥಿತಿಯಲ್ಲಿರುವುದು. ಬೆಲ್ಜಿಯನರ ರಾಜರು ಲೀಜ್ ಕೋಟೆಯನ್ನು ಕಾಪಾಡುತ್ತಿದ್ದ ಸೇನೆಯನ್ನು ಬಂದು ನೋಡಿ ಹೋಗಿರುವರು. ಫ್ರೆಂಚರು ಮುಂದೊತ್ತಿಬಂದುದರಿಂದ ಜರ್ಮನರು ಲುಕ್ಸೆಂಬರ್ಗನ್ನು ಬಿಟ್ಟುಹೋಗಿರುವರು.

ರುಶ್ಯ: ಯೇಡಟ್‌ಕೂಹೆನ್ ಎಂಬಲ್ಲಿ ರುಶ್ಯಯನರು ಜರ್ಮನರೊಡನೆ ಕಾದಾಡಿ ನೂರಾರು ಜನ ಜರ್ಮನರು ಮಡಿದುಹೋದರು.

ಪೋರ್ಚುಗಲ್. ಪೋರ್ಚುಗಲಿನ ರಾಜಧಾನಿಯಾದ ಲಿಸ್ಬನ್ ಪಟ್ಟಣದಲ್ಲಿ ಕೂಡಿದ ಪೋರ್ಚುಗೀಸ್ ಪಾರ್ಲಿಮೆಂಟ ಸಭೆಯಲ್ಲಿ ಆ ದೇಶದ ಮಂತ್ರಿಗಳು ಬ್ರಿಟಿಷರೊಂದಿಗಿರುವ ಸ್ನೇಹಭಾವದ ಒಪ್ಪಂದವನ್ನು ಎಂದೂ ಮನ್ನಿಸದೆ ಇರಲಾರೆವೆಂತ ಹೇಳಿರುತ್ತಾರೆ.

ಮೊಂಟೆನಿಗ್ರೊ. ಒಸ್ಟ್ರಿಯಾದೇಶದ ಮೇಲೆ ಬಲ್ಕಾನ್ ಸಂಸ್ಥಾನಗಳ ಮೊಂಟೆನಿಗ್ರೊ ಸಂಸ್ಥಾನವು ಯುದ್ಧವನ್ನು ಸಾರಿರುವುದು.

ಹಿಂದೂಸ್ಥಾನ. ರಂಗೂನಿನ ಎಲ್ಲಾ ದೇವಾಲಯಗಳಲ್ಲಿಯೂ ಈ ಯುದ್ಧವು ಶ್ರೀ ದೇವರ ಪ್ರೇರೇಪಣೆಯಿಂದ ಶಾಂತವಾಗಲೆಂದು ಪ್ರಾರ್ಥನೆಗಳು ಮಾಡೋಣಾದವು. ಮಕ್ಕಕ್ಕೆ ಯಾತ್ರಿಕರನ್ನು ಒಯ್ಯುವ ಸ್ಟೀಮರುಗಳ ದರವು ಬಹಳ ಅಧಿಕವಾಗಿರುತ್ತದೆ. ಹಿಂದೂಸ್ಥಾನದಲ್ಲಿ ಫ್ರೆಂಚರ ವಸ್ತಿಯಾಗಿರುವ ಪುದುಚೇರಿಗೆ ಪ್ಯಾರಿಸ್ ನಗರದಿಂದ ಈ ರೀತಿ ವರ್ತಮಾನ ಬಂದಿರುವುದು. ಜರ್ಮನರು ಬೆಲ್ಜಿಯಮನ್ನು ಒಳನುಗ್ಗಲು ಕಳದ ೫-೬ ದಿನಗಳಿಂದ ಪ್ರಯತ್ನಿಸುತ್ತಿರುವರು. ಆದರೆ ಜರ್ಮನರು ಈ ರೀತಿ ಒಳನುಗ್ಗದಂತೆ ಬೆಲ್ಜಿಯನರು ಅವರನ್ನು ಪರಾಕ್ರಮದಿಂದ ತಡೆದಿರುವರು. ಪುದುಚೇರಿಯಲ್ಲಿ ಫ್ರೆಂಚ ಸರಕಾರದವರು ೧೨೦,೦೦೦ ಫ್ರೆಂಕ್ಸಗಳನ್ನು ಯುದ್ಧದ ಖರ್ಚಿಗಾಗಿ ಕೊಡುವ ಏರ್ಪಾಡು ಮಾಡಿರುತ್ತಾರೆ. ೧೫೦೦ ಜನ ಭಾರತೀಯ ಉಮೇದ್ವಾರ ಸೇನೆಯು ಪುದುಚೇರಿಯಿಂದ ಮಲೆಯಾ ಅರ್ಧದ್ವೀಪದಲ್ಲಿರುವ ಸೈಗೊನಿಗೆ ಹೋಗಿ ಸೈಗೊನಿನಲ್ಲಿರುವ ಫ್ರೆಂಚು ಸೇನೆಯನ್ನು ಫ್ರಾನ್ಸಿಗೆ ಕಳುಹಿಸಿಕೊಡುವರು. ಫ್ರೆಂಚ ದೇಶಗಳಲ್ಲಿ ಭಾರತೀಯರನ್ನು ಹುಟ್ಟು ಫ್ರೆಂಚರಂತೆಯೇ ಸೇನೆಗೆ ಕೂಡಿಸಿಕೊಳ್ಳಬೇಕಾದರೆ ಭಾರತೀಯರು ಮಹಮ್ಮದೀಯರ ಅಥವಾ ಹಿಂದೂ ಕಾನೂನುಗಳ ಪ್ರಕಾರ ತಮಗಿರುವ ಹಕ್ಕು ಬಾಧ್ಯತೆಗಳನ್ನು ಬಿಟ್ಟುಬಿಡಬೇಕು ಈ ರೀತಿ ಹಕ್ಕು ಬಾಧ್ಯತೆಗಳನ್ನು ಬಿಟ್ಟುಬಿಟ್ಟವರನ್ನು ಹುಟ್ಟು ಫ್ರೆಂಚರಂತೆಯೇ ಸೇನೆಗೆ ಕೂಡಿಸಿಕೊಳ್ಳುವರು. ಈ ರೀತಿ ಫ್ರೆಂಚ ಯೋಗ್ಯತೆಗೆ ಅರ್ಹರಾದವರನ್ನು ರಿನೊನ್‌ಕೆಂಟ್ಸ್ ಎಂತ ಕರೆಯುತ್ತಾರೆ. ಪ್ರತಿನಿತ್ಯದಲ್ಲಿ ನೂರಾರು ಜನ ಭಾರತೀಯ ಯುವಕರು ರಿನೊನ್‌ಕೆಂಟ್ಸರಾಗುತ್ತಿರುವರು. ಫ್ರೆಂಚ ಬ್ರಿಟಿಷ ಮತ್ತು ರುಶ್ಯರ ಧ್ವಜಗಳನ್ನು ಹಿಡಕೊಂಡು ಪುದುಚೇರಿಯ ನಿವಾಸಿಗಳು ಜಯಧ್ವನಿಯನ್ನು ಮಾಡುತ್ತ ಬೀದಿಗಳನ್ನು ಸುತ್ತುತ್ತಿರುವರು. ಪುದುಚೇರಿಯಲ್ಲಿಯೂ ವ್ಯಾಪಾರ ವೈವಾಟಗಳಿಗೆ ವಿಶೇಷ ಹಾನಿ ಉಂಟಾಗಿದೆ. ನೆಲಕಡಲೆಯ ಕ್ರಯವು ಬಹಳ ತಗ್ಗಿರುವುದು. ಜೀನಸು ಧಾರಣೆಗಳು ಅಧಿಕವಾಗುತ್ತಿರುವವು. ಧಾರಣೆ ವಾಸಿಗಳನ್ನು ಹೆಚ್ಚಿಸಕೂಡದೆಂತ ಫ್ರೆಂಚ ಸರಕಾರದವರು ಡಂಗರು ಹೊಡೆದಿರುವರು.
~~~~~

ದಕ್ಷಿಣ ಆರ್ಕಾಡಿನಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಸಭೆಯು ಅದರ ಅಧ್ಯಕ್ಷರಾದ ಕಲೆಕ್ಟರ್ ಸಾಹೇಬ ಖಾನ್‌ಬಹದ್ದೂರ್ ಎಮ್. ಅಜಿಜುದ್ದೀನ್ ಸಾಹೇಬ ಬಹದ್ದೂರರವರ ಅಧ್ಯಕ್ಷತೆಯಲ್ಲಿ ಕೂಡಿದಾಗ ದಕ್ಷಿಣ ಆರ್ಕಾಡು ಜಿಲ್ಲೆಯ ಸರ್ವಸ್ವವು ಸಾಮ್ರಾಜ್ಯ ಸರಕಾರದವರ ಸೇವೆಗೆ ಸಿದ್ಧವಿರುವುದೆಂಬ ನಿರ್ಣಯವನ್ನು ಸಭಿಕರೆಲ್ಲರೂ ನಿಂತು ಮಂಜೂರು ಮಾಡಿರುವರು. ಈ ಜಿಲ್ಲೆಯ ಡಿಸ್ಟ್ರಿಕ್ಟ್ ಜಡ್ಜರು ಈ ಸಭೆಗೆ ಪ್ರೇಕ್ಷಕರಾಗಿ ಬಂದಿದ್ದರು.

ಸಿಮ್ಲಾ. ಹಿಂದೂಸ್ಥಾನದ ಶ್ರೇಷ್ಠ ಸರಕಾರದವರ ಖಜಾನೆಯಲ್ಲಿ ಚಲಾವಣೆಯ ಬೆಳ್ಳಿ ಮತ್ತು ಚಿನ್ನದ ನಾಣ್ಯಗಳು ಧಾರಾಳವಾಗಿರುವದು ಎಂಬ ಜ್ಯಾಹೀರುನಾಮೆಯನ್ನು ಪ್ರಕಟಗೊಳಿಸಿರುತ್ತಾರೆ ಈ ಜಾಹೀರುನಾಮೆಯ ಪ್ರಕಾರ ೨೧ ಮಿಲಿಯ ಪವನುಗಳು ಸರಕಾರದವರೊಂದಿಗಿರುವವು ಇದರ ಅರೆವಾಸಿಯು ಅಂಗ್ಲಾಳದಲ್ಲಿರುವುದು. ಪೇಪರ ಕರೆನ್ಸಿ ರಿಜರ್ವ ಫಂಡಿನಲ್ಲಿ ಪ್ರಕೃತ ೩೦ ಕೋಟಿ ಬೆಳ್ಳಿ ಮತ್ತು ಚಿನ್ನ ನಾಣ್ಯಗಳಿರುತ್ತವೆ. ಬೆಳ್ಳಿಯ ರೂಪಾಯಿಗಳು ಮೂವತ್ತು ಕೋಟಿ ಸರಕಾರದವರ ನಗದಿ ಸಿಲಿಕಿನಲ್ಲಿರುವುದು. ಆಶ್ರಿತ ರಾಜರೂ ಹಿಂದೂಸ್ಥಾನದ ಪ್ರಜಾ ಜನರೂ ಈ ಸಂದರ್ಭದಲ್ಲಿ ಬ್ರಿಟಿಷ ಸಾಮ್ರಾಜ್ಯ ಪರವಾಗಿ ತೋರಿಸಿದ ರಾಜಭಕ್ತಿ ಶ್ರದ್ಧೆಗಳನ್ನು ಶ್ಲಾಘಿಸಿ ಶ್ರೇಷ್ಠ ಸರಕಾರದವರ ಮತ್ತೊಂದು ಜ್ಯಾಹೀರುನಾಮೆಯು ಪ್ರಕಟಿಸಲ್ಪಟ್ಟಿರುತ್ತದೆ.

ಕಲ್ಕತ್ತಾ. ಕಲ್ಕತ್ತಾದಲ್ಲಿ ಬಿಪಿನಚಂದ್ರಪಾಲರವರು ವಿದ್ಯಾರ್ಥಿಗಳ ದೊಡ್ಡದೊಂದು ಸಭೆಯಲ್ಲಿ ಈಗಿನ ಯುದ್ಧ ಸಂದರ್ಭವನ್ನು ಕುರಿತು ಭಾಷಣ ಮಾಡಿದರು. ಈ ಸಂದರ್ಭದಲ್ಲಿ ಭಾರತೀಯರು ಸಾಮ್ರಾಜ್ಯಕ್ಕೆ ಮಾಡಬೇಕಾದ ಸಹಾಯವನ್ನು ವಿವರಿಸಿ ಹೇಳಿದರು. ಈ ಯುದ್ಧದಿಂದ ಯುರೋಪಿಯ ಶಾಂತತೆಯು ಉಂಟಾಗುವುದು ಮತ್ತು ಜವಾನೀಯರಿಗೆ ಈ ಶಾಂತತೆಯ ಮಂತ್ರಾಲೋಚನೆಯ ಸಭೆಯಲ್ಲಿ ಎಡೆದೊರಕುವುದರಿಂದ ಆಸ್ಯಖಂಡದಲ್ಲಿ ಸಹ ಶಾಂತತೆಯು ಬೀರುವುದೆಂದು ಹೇಳಿರುತ್ತಾರೆ ಒಂದು ವೇಳೆ ಈ ಆಪತ್ಕಾಲದಲ್ಲಿ ಕಲ್ಕತ್ತೆಯ ಕಾರ್ಖಾನೆಗಳನ್ನು ಮುಚ್ಚಿ ಬಿಡುವ ಸಂದರ್ಭವು ಬಂದೊದಗಿದ್ದಲ್ಲಿ ಈ ಕಾರ್ಖಾನೆಯ ಸಾವಿರಾರು ಜನರಿಗೆ ಕೆಲಸವಿಲ್ಲದೆ ಹೋದರೆ ಅಂಥವರಿಗೆ ಬೇಕಾದ ಸಹಾಯವನ್ನು ಒದಗಿಸಿಕೊಡಲು ವಿದ್ಯಾರ್ಥಿಗಳು ಪ್ರಯತ್ನಿಸಬಹುದೆಂದು ಸೂಚಿಸಿರುವರು. ಆಹಾರ ಜೀನಸುಗಳ ಕ್ರಯವನ್ನು ತಗ್ಗಿಸಲು ಎಂಥಾ ಪ್ರಯತ್ನಗಳನ್ನು ಮಾಡಿದರೂ ಕಲ್ಕತ್ತೆಯಲ್ಲಿ ಇವುಗಳ ಧಾರಣೆ ವಾಸಿಯು ಏರುವ ಸಂಭವವು ತೋರುತ್ತಲಿರುವುದು. ಕಲ್ಕತ್ತೆಯಲ್ಲಿ ಹನ್ಸಾಲ್ಯಾನರುಗಳೆಂಬ ಜರ್ಮನ್ ಹಡಗುಗಳಲ್ಲೊಂದನ್ನು ರೇವಿನಲ್ಲಿ ಹಿಡಿದು ಅದರ ಕೆಪ್ಟನನನ್ನೂ ಕಲಾಸಿಗಳನ್ನೂ ದಡಕ್ಕೆ ತಂದಿರುವರು. ಮತ್ತೊಂದು ಹನ್ಸಾ ಹಡಗವು ಕಲ್ಕತ್ತೆಯ ರೇವನ್ನು ಪ್ರವೇಶಿಸಿದೊಡನೆ ಅದನ್ನೂ ಹಿಡಿದಿರುತ್ತಾರೆ. ಈ ಹಡಗುಗಳಲ್ಲಿಯೂ ಮತ್ತು ಗೋವೆಗೆ ಓಡಿಹೋದ ಮತ್ತೆರಡು ಹನ್ಸಾ ಹಡಗುಗಳಲ್ಲಿಯೂ ಅಂಗ್ಲೇಯ ಮತ್ತು ಭಾರತೀಯ ವರ್ತಕರಿಂದ ತರಿಸೋಣಾದ ವಿಶೇಷ ಸಾಮಾಗ್ರಿಗಳಿವೆ. ಈ ಸಾಮಾಗ್ರಿಗಳನ್ನು ಅವುಗಳ ಮಾಲಿಕರಿಗೆ ಕೊಡೋಣಾಗುವ ಏರ್ಪಾಡು ನಡಿಸೋಣಾಗುತ್ತಿರುವುದು.

ಮುಂಬಯಿ. ಮುಂಬಯಿ ಗವರ್ನರರು ಪೇಟೆಗೆ ಬಂದು ಸಾವಕಾರರಿಗೆ ಮಾಡಿದ ಬೋಧೆಯಿಂದ ಆಧಾರವಿಲ್ಲದೆ ಬೆಲೆ ಏರಿದ ಆಹಾರ ಜೀನಸುಗಳ ಕ್ರಯವು ಕಡಮೆಯಾಗಿರುವುದು. ಸಕ್ಕರೆಯ ಕ್ರಯವು ರೂ. ೧೮ರಿಂದ ೧೪ಕ್ಕೆ ಬಂದಿಳಿದಿರುತ್ತದೆ. ಕಳದ ವಾರದಲ್ಲಿ ದರಗಳು ರಖಂ ವ್ಯಾಪಾರಸ್ಥರಿಂದ ಏರಿಸೋಣಾದವೆಂತ ಅಂಗಡಿಗಾರರು ದೂರುತ್ತಿರುವರು.

ಉತ್ತರ ಹಿಂದೂಸ್ಥಾನ

ಪಂಜಾಬು ಮತ್ತು ವಾಯವ್ಯ ಸರಹದ್ದಿನ ಕಾಂಗ್ರೆಸ್ ಕಮಿಟಿಯವರು ಬರುವ ರಾಷ್ಟ್ರೀಯ ಸಭೆಗೆ ರಾ| ಲಾಜಪತ ರಾಯಿ ಮೆ| ಮಜರಲ್ ಹೇಕುರವ್ವರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ನೇಮಿಸಬೇಕೆಂದು ಶಿಫಾರಸು ಮಾಡಿದ್ದಾರೆ.

ಕಲ್ಕತ್ತೆಯ ಬಾಬು ಬ್ರಜೋಲಾಲ ಬೆನರ್ಜಿಯವರು ದಾರಿಯಲ್ಲಿ ಹಾದು ಹೋಗುತ್ತಿರುವಾಗ ಆಲಿ ಹುಸೇನ ಎಂಬವನು ಅವರ ಮೇಲೆ ಒಂದು ಕೋತಿಯನ್ನು ಬಿಸಾಡಿದನು. ಸದರಿ ಗೃಹಸ್ಥರು ಹೆದರಿಕೊಂಡು ಚೇತರಿಸಿಕೊಳ್ಳುತ್ತಿರುವಾಗ ಈ ಪೋಕರಿಯ ಜತೆಗಾರ ಅಬ್ದುಲ್ಲ ಗಾಫೋರು ಎಂಬವನು ಅವರ ಚೀಲದಿಂದ ೯೦ ರೂಪಾಯಿಗಳನ್ನು ಕಸಕೊಂಡನು ಈ ಮೊಕದಮೆಯು ತನಕಿಯಾಗಿ ಮೊದಲನೇ ಆಪಾದಿತನಿಗೆ ೬ ತಿಂಗಳ ಸಜೆಯೂ, ೨ನೆ ಆಪಾದಿತನಿಗೆ ೩ ತಿಂಗಳ ಸಜೆಯೂ ವಿಧಿಸಲ್ಪಟ್ಟಿತು.

ಬಂಗಾಳದ ಯುವತಿಯರಲ್ಲಿ ತಲೆದೋರಿದ್ದ ಆತ್ಮಹತ್ಯದ ಸೊಂಕು ಈಗ ಮುಂಬಾಯಿಯ ಸೂರತಿನಲ್ಲಿ ವ್ಯಾಪಿಸಿರುವುದು. ಸೂರತಿನ ರಾವ್ ಬಹದ್ದೂರ್ ದಾಮೋದರದಾಸ ಬ್ರಿಜಿಬಕ್ ಎಂಬವರ ಪತ್ನಿ ಲಕ್ಷ್ಮಿ ಲಲಿತ ಎಂಬ ಒನಿಯ ಹೆಂಗಸು ಶೀಮೆ ಎಣ್ಣೆ ಹೊಯ್ದುಕೊಂಡು ಸ್ವಘಾತವಮಾಡಿಕೊಂಡಿರುವಳು. ರೋಗ ಬಾಧಿತನಾಗಿದ್ದ ಆಕೆಯ ಗಂಡನು ಬದುಕಿಕೊಳ್ಳುವುದು ನಿಶ್ಚಯವಿಲ್ಲವೆಂಬದಾಗಿ ದಾಕ್ತಾರರು ಹೇಳಿದ್ದೇ ಈ ಸ್ವಘಾತಕ್ಕೆ ಕಾರಣ.

ದಕ್ಷಿಣ ಹಿಂದೂಸ್ಥಾನ.

ಇದೇ ತಾ. ೮ರಲ್ಲು ಮದ್ರಾಸಿನ ಕ್ರಿಸ್ಟಿಯನ್ ಕಾಲೇಜಿಯಲ್ಲಿ ಫಕ್ಕನೇ ಒಂದು ಸಿಡಿತ ಉಂಟಾದ್ದರಿಂದ ಅಲ್ಲಿಯ ಉಪಾಧ್ಯಾಯರುಗಳೂ ವಿದ್ಯಾರ್ಥಿಗಳೂ ಗಾಭರಿಯಿಂದ ಹೊರ ಓಡಿ ಹೋದರು. ಕಾಲೇಜಿಯ ಕೆಳ ಅಂತಸ್ಥಿನಲ್ಲಿದ್ದ ಪ್ರೈಮರಿ ತರಗತಿಯ ಮಕ್ಕಳು ಬೊಬ್ಬಿಟ್ಟರು. ಒಂದೆರಡು ನಿಮಿಷದನಂತರ ಸಿಡಿತವು ಕಾಲೇಜಿಯ ಕೊರಡಿಯಲ್ಲಿ ಕೆಲವು ರಸಾಯನಗಳಿಗೆ ಬೆಂಕಿ ತಗಲಿದ್ದರಿಂದ ಉಂಟಾಯಿತೆಂದು ತಿಳಿದು ಬಂತು. ಪೋಲಿಸಿನವರು ಕೂಡಲೇ ಅಲ್ಲಿಗೆ ಬಂದು ಕಾಲೇಜು ಉಪಾಧ್ಯಾಯರ ಮತ್ತು ವಿಧ್ಯಾರ್ಥಿಗಳ ಸಹಾಯದಿಂದ ಬೆಂಕಿ ಆರಿಸಿದರು ಈ ಬೆಂಕಿಯಿಂದುಂಟಾದ ನಷ್ಟವು ಅಪರಿಮಿತವಾಗಿದೆ.

ದಕ್ಷಿಣ ಕನ್ನಡ.

WANTED.

A Supervisor for Co-operative Societies in the Uppinangady Taluk, with head quarters at Puttur. Pay Rs. 20 per mensem (inclusive of travelling charges). A fair knowledge of English and a thorough grasp of Co-operative principles, especially the practical working there of and of accounting and auditing is essential.

Applications to reach the undersigned by the end of August 1914.

M. Ananta Rao,
Secretary.
The South Canara Central Co-operative Bank, Ltd.
Puttur, South Canara.

WANTED.

A book keeper with a fair knowledge of coresspondence.

Apply:—**Steven & Son;**
HUMPANKATTA
MANGALORE.

NOTICE.

In the Court of the District munsiff of Kundapur.

O. P. No. 66/1914.

Shesha Hebbara—*Petitioner.*

Take notice that the said petitioner Shesha Hebbara son of Subraya Hebbara of Gilyar village, Udipi Taluk has applied for a succession certificate to collect Rs 50—4—0 one to one Baghirathiamma and that his petition is posted for the 20th instant for hearing Intending objectors may file their objections if any, on or before that date.

Kundapur 9—8—1914. } **U. Subbannya.** *Pleader.*

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಒ. ಪಿ. ನಂಬ್ರ 77/1914.

1. ಮಳಲಿ ರಾಮಕೃಷ್ಣ ಶ್ಯಾನುಭಾಗ
2. ಮಳಲಿ ಲಕ್ಷ್ಮಣ ಶ್ಯಾನುಭಾಗ
3. ಮಳಲಿ ವೆಂಕಟ್ರಾಯ ಶ್ಯಾನುಭಾಗ

} **ಅರ್ಜಿದಾರರು.**

ತಾ. 2—9—1913ರಲ್ಲು ಮಂಗಳೂರ ಶಹರಿನಲ್ಲು ಮೃತಪಟ್ಟ ಮಳಲಿ ಅನಂತ ಶ್ಯಾನುಭಾಗರ ಸಾಲಗಳನ್ನು ವಸೂಲು ಮಾಡುವರೆ ಮೇಲಿನ ಅರ್ಜಿದಾರರು 1ನೇ ಅರ್ಜಿದಾರನ ಹೆಸರಿಗೆ ಸರ್ಟಿಫಿಕೇಟು ಶಿಕ್ಕಬೇಕಾಗಿ ಸದರಿ ಕೋರ್ಟಿನಲ್ಲಿ ಮಾಡಿದ ಅರ್ಜಿಯು ತಾ. 27-8-14 ಲ್ಲು ೧೧ ಗಂಟೆಗೆ ಸದರಿ ಕೋರ್ಟಿನಲ್ಲಿ ತನಕೆಗೆ ಇಟ್ಟಿರುತ್ತದೆ. ಆಕ್ಷೇಪಗಳನ್ನು ಆ ತಾರೀಕಿಗೆ ಸದರಿ ಕೋರ್ಟಿನಲ್ಲಿ ಜ್ಯಾಹಿರುಮಾಡತಕ್ಕದ್ದು.

Mangalore. 11—8—1914. } **A Varada Rau.** *Vakil for Petitioner.*

ಯುದ್ಧ ಸಮಾಚಾರವು.

ತಾ. 10—8—14.

ಇಂದಿನಿಂದ ಪ್ರತಿನಿತ್ಯ ಮಧ್ಯಾಹ್ನದಲ್ಲಿ ಯುದ್ಧ ಸಮಾಚಾರವು ಸ್ವದೇಶಾಭಿಮಾನಿಯ ಸ್ಪೆಶಲ್ ಸಪ್ಲಿಮೆಂಟಾಗಿ ಪ್ರಕಟಿಸಲ್ಪಡುವುದು.

ಕ್ರಯ ಪ್ರತಿ ಒಂದಕ್ಕೆ 3 ಪೈ.

ಶಾರದಾ ಛಾಪಖಾನೆಯಲ್ಲಿ ದೊರೆಯುವುದು.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ವೊ. ಪಿ. ನಂಬ್ರ 80/1914.

1. ಅರ್ಕಳ ವೈಕುಂಟ ಶೆಣೈ. }
2. ಅ. ಕೇಶವರಾವ್. } ವೈನರರು.
3. ಅ. ನಾರಾಯಣರಾವ್. } ಕ್ಷೇಮಚಿಂತಕ } ಅರ್ಜಿದಾರರು.
4. ಅ. ಗೋಪಾಲ ಕೃಷ್ಣರಾವ್. } 1ನೇ ಅರ್ಜಿದಾರ
5. ಅ. ವಿಟ್ಠಲ ರಾವ್. }

ತಾ. 24-5-1914ರಲ್ಲಿ ಮಂಗಳೂರ ಶಹರಿನಲ್ಲಿ ಮೃತಪಟ್ಟ ಅರ್ಕಳ ಶ್ರೀನಿವಾಸರಾಯರ ಸಾಲಗಳನ್ನು ವಸೂಲು ಮಾಡುವರೆ ಮೇಲಿನ ಅರ್ಜಿದಾರರು 1ನೇ ಅರ್ಜಿದಾರನ ಹೆಸರಿಗೆ ಸರ್ಟಿಫಿಕೇಟು ಸಿಕ್ಕಬೇಕಾಗಿ ಮಾಡಿದ ಅರ್ಜಿಯು ತಾ. 27-8-1914ನೇಗೆ ಮೇಲ್ಕಂಡ ಕೋರ್ಟಿನಲ್ಲಿ 11 ಘಂಟೆಗೆ ತನಕಿಗೆ ಇಟ್ಟಿರುತ್ತದೆ. ಆಕ್ಷೇಪವಿದ್ದವರು ಅವರವರ ಆಕ್ಷೇಪಗಳನ್ನು ಆ ತಾರೀಕಿಗೆ ಸದರಿ ಕೋರ್ಟಿನಲ್ಲಿ ಜಾಹೀರು ಮಾಡತಕ್ಕದ್ದು.

ಮಂಗಳೂರು 11-8-14. } **A. Varada Rao,** *Vakil for Petitioners.*

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ವೊ. ಪಿ ನಂಬ್ರ 73/1914.

ಶೇವಂತ್ರು ಯಾನೆ ಕಾವೇರಮ್ಮಾ—ಅರ್ಜಿದಾರಳು.

ಮತ್ತು

ಪಂಡರಿ ಅಮ್ಮ—ರೆಸ್ಪಾಂಡೆಂಟಳು.

ಅರ್ಜಿದಾರಳು ಉಡ್ಪಿ ತಾಲೂಕು ಮೂಡುತೋನ್ಸೆ ಮಾಗಣೆ ಕಲ್ಯಾಣಪುರ ಗ್ರಾಮದಲ್ಲಿರುವಂಥವಳು.

ಅರ್ಜಿದಾರಳ ಗಂಡ ತಾರೀಕು ೨೯-೫-೧೯೧೪ರಲ್ಲಿ ಕಲ್ಯಾಣಪುರದ ಗ್ರಾಮದಲ್ಲಿ ಮೃತಪಟ್ಟ ಮಂಜುನಾಥ ಭಟ್ಟರಿಗೆ ಹೊರಗಿನಿಂದ ಬರತಕ್ಕ ರೂಪಾಯಿ ೧೩೩೩-೧-೪ನ್ನು ವಸೂಲ ಮಾಡುವರೆ ಅರ್ಜಿದಾರಳ ಹೆಸರಲ್ಲಿ ಸಕ್ಸೇಶನ್ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರಳು ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ವೊ. ಪಿ. ನಂಬ್ರ 73 1914ನ್ನು ದಾಖಲು ಮಾಡಿರುತ್ತಾಳೆ. ಸದರಿ ಅರ್ಜಿಯು ಇದೇ ಬರುವ ಆಗೋಸ್ತು ತಾರೀಕು ೨೦ನೇ ಗುರುವಾರ ದಿವಸ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ತನಕಿಗೆ ಇಟ್ಟಿರುತ್ತದೆಂತ ಸಮಸ್ತರು ತಿಳಿದಿರುವದು. ಆಕ್ಷೇಪವಿದ್ದವರು ಆ ದಿವಸ ಮೇಲ್ಕಂಡ ಕೋರ್ಟಿಗೆ ಜಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು ತಾ. 7-8-1914. } **Bola Nagesh Rao** *Vakil.*

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

O. P. ನಂಬ್ರ 82/1914.

ಚಿನ್ನಯ್ಯಶೆಟ್ಟಿ ವಗೈರೆರು—ಅರ್ಜಿದಾರರು.

ಮೃತಪಟ್ಟ ಚಿವರ್ಲ ಸೆಟ್ಟಿಯ ಸಾಲಗಳನ್ನು ವಸೂಲುಮಾಡತಕ್ಕ ಬಗ್ಗೆ 1ನೇ ಅರ್ಜಿದಾರ ಚಿನ್ನಯ್ಯ ಶೆಟ್ಟಿಗೆ ಸರ್ಟಿಫಿಕೇಟು ಕೊಡಬೇಕೆಂಬದಾಗಿ ಅಪೇಕ್ಷಿಸಿ ಸದರಿ ಅರ್ಜಿದಾರರು ಕೊಟ್ಟ ಮೇಲ್ಕಂಡ ಅರ್ಜಿಯನ್ನು ಸದರಿ ಕೋರ್ಟಿನಲ್ಲಿ 1914ನೇ ಸಪ್ಟಂಬರ ತಾರೀಕು 17ಕ್ಕೆ ತನಕಿಗೆ ಇಡೋಣಾಗಿದೆ. ಹಕ್ಕುಳ್ಳವರು ತಮ್ಮ ಆಕ್ಷೇಪಣೆಗಳನ್ನು ಮೇಲ್ಕಂಡ ತಾರೀಕಿನ ಒಳಗೆ ಸದರಿ ಕೋರ್ಟ ಮುಂದೆ ಜ್ಯಾಹೀರುಮಾಡತಕ್ಕದೆಂಬದಾಗಿ ಈ ಮೂಲಕ ಪ್ರಕಟಿಸೋಣಾಗುತ್ತದೆ.

ಮಂಗಳೂರು, ತಾ. 7-8-1914. } ಅಂ. ಶ್ರೀನಿವಾಸಪೈ. ಅರ್ಜಿದಾರನ ಕಡೆ ವಕೀಲ

ಪುತ್ತೂರು. ಇಲ್ಲಿಯ ಪೋಲೀಸ್ ಸ್ಟೇಶನಿನ ಎದುರು ಇರುವ ಅಂಗಡಿಯಲ್ಲಿ ಜುಗಾರಾಡುತ್ತಿದ್ದ ಇಲ್ಲಿಯ ಹೋಟೇಲು ಕೀಪರ ಬಲನಾಡ ಶಿವರಾವ್, ಕೆ. ವಿಟ ಮಂಜುನಾಥ ಇವರು ಕೆಲವು ನಗದು ಐವಜು, ಕೆಂಪು ಕಿಟಿಗಳು ಚಿನ್ನದ ನಗಗಳ ಸಮೇತ ಇಲ್ಲಿಯ ಸರ್ಕಲ್ ಇನ್ಸಪೆಕ್ಟರರಿಂದ ಹಿಡಿಯಲ್ಪಟ್ಟಿರುವರು. ಇವರನ್ನು ಜಾಮೀನಿನ ಮೇಲೆ ಬಿಟ್ಟಿರುವರು. ಮೊಕದ್ದಮೆಯು ಇದೇ ತಾರೀಕು ೧೦ಕ್ಕೆ ಇಲ್ಲಿಯ ಮೇಜಿಸ್ಟ್ರೇಟ್ ಕೋರ್ಟಿನಲ್ಲಿ ತನಖೆಗೆ ಇಡಲ್ಪಟ್ಟಿದೆ.

ಇದೇ ಆಗೋಸ್ತು ತಾ. ೧ರಲ್ಲಿ ಇಲ್ಲಿಯ ಅಬ್ಕಾರಿ ಶೇಂದಿ ಗುತ್ತಿಗಳು ಇಲ್ಲಿಯ ಡಿವಿಜನಲ್ ಆಫೀಸರರಿಂದ ಏಲಂ ಮಾಡೋಣಾದವು.

ಇದೇ ಆಗೋಸ್ತು ೧ನೇಗೆ ಅಂತ್ಯವಾಗುವ ವಾರದಲ್ಲಿ ಇಲ್ಲಿ ೯೧ ಇಂಚು ೮೧ ಸೆಂಟ್ಸ್ ಮಳೆ ಬಿದ್ದಿರುವದು.

ಇಲ್ಲಿಯ ಡಿವಿಜನಲ್ ಆಫೀಸರರು ಇದೇ ಆಗೋಸ್ತು ತಿಂಗಳಲ್ಲಿ ತಾ. ೬ರಲ್ಲಿ ಪುತ್ತೂರು ಬೆಳ್ತಂಗಡಿ, ೭ ಬೆಳ್ತಂಗಡಿ, ೮ ಬೆಳ್ತಂಗಡಿ ಮಂಗಳೂರು, ೯-೧೦ ಕಾಸರಗೋಡು, ೧೧-೧೫ ಹೊಸದುರ್ಗ, ೧೬-೧೮ ಪಳ್ಳಿಕೆರೆ, ೧೯-೨೨ ಕಾಸರಗೋಡು ಈ ರೀತಿ ಮೊಕ್ಕಾಂಗಳ ಮೇರೆಗೆ ಸರ್ಕೀಟು ಬೆಳಸುವರು.

ವಿಟ್ಲ ಶರಾಬು ಡಿಪೋ ಕೀಪರ ಜುಜೆ ರಾಡ್ರಿಗ್ಸರು ತನ್ನ ಡಿಪೋವಿನಿಂದ ಕೆಲವು ಐವಜು ಕಳವು ಆದ್ದಾಗಿ ಸುಳ್ಳು ಫಿರ್ಯಾದಿ ಕೊಟ್ಟನೆಂತ ಆಪಾದಿಸಲ್ಪಟ್ಟು ಇಲ್ಲಿಯ ಮೇಜಿಸ್ಟ್ರೇಟ ಕೋರ್ಟಿನಲ್ಲಿ ತನಖಿ ನಡದು ಮುದ್ದೆಯಾಲಿಗೆ ಒಂದು ತಿಂಗಳ ಶಿಕ್ಷೆ ವಿಧಿಸಲ್ಪಟ್ಟದರ ಕುರಿತು ಇಲ್ಲಿಯ ಡಿವಿಜನ ಡಿಪ್ಯುಟಿ ಕಲೆಕ್ಟರವರಲ್ಲಿ ಮಾಡಿದ ಅಪೀಲು ತನಖಿ ನಡದು ಇದೇ ಜುಲೈ ತಾ. ೩೧ರಲ್ಲಿ ಮುದ್ದೆಯಾಲಿ ಮೇಲೆ ತಪ್ಪು ಸಾಬೀತ ಆಗುವದಿಲ್ಲವೆಂತ ಮುದ್ದೆಯಾಲಿಯನ್ನು ಖುಲಾಸು ಪಡಿಸಿರುವರು.

ಇಲ್ಲಿಯ ಲೋಕಲ್ ಫಂಡ್ ಆಸ್ಪತ್ರಿಗೆ ವೈದ್ಯ ಉದ್ಯೋಗಸ್ಥರ ಪರೀಕ್ಷೆ ಬಗ್ಗೆ ತರೋಣಾಗುವ ಹೆಣಗಳನ್ನು ಹುಗಿಯುವ ಬಗ್ಗೆ ಮಡ್ಲುಗಳಲ್ಲಿ ಕಟ್ಟಿ ಬಹಿರಂಗವಾಗಿ ಮಡಿಕೇರಿ ರಸ್ತೆಯಿಂದ ಮಧ್ಯ ಪೇಟೆಗಾಗಿ ದರ್ಬೆ ಗುಡ್ಡೆಗೆ ಒಯ್ಯುತ್ತಿರುವರು. ಈ ರೀತಿ ಶವಗಳನ್ನು ಒಯ್ಯುತ್ತಿರುವಾಗ್ಯೆ ಘ್ರಾಣಿಗೆ ಬರುವ ವಾಸನೆಯನ್ನು ಸಹಿಸಕೂಡದೆ ಪೇಟೆಯವರು, ದಾರಿಗಸ್ತರು, ವ ಶಾಲಾ ಮಕ್ಕಳು ಮೂಗಿಗೆ ಕೈ ಹಿಡಿಯುವರು. ಬಹಿರಂಗವಾಗಿ ಪೇಟೆಯ ಮಾರ್ಗವಾಗಿ ಕೊಳತ ಶವಗಳನ್ನು ಒಯ್ಯುವದು ಬಹಳ ಹೇಸಿಗೆಯಲ್ಲವೇ? ಇಂಥಾ ಹೆಣಗಳು ಮತ್ತು ಈ ಆಸ್ಪತ್ರಿಯಲ್ಲಿ ಸತ್ತವರ ಹೆಣಗಳು ಆಸ್ಪತ್ರಿ ಹಿಂದುಗಡೆ ಇರುವ ನಿರಾಕ್ಷೇಪವಾದ ತೆಂಕಿಲ ಗುಡ್ಡೆಗೆ ಕೊಂಡು ಹೋಗಿ ಯಾಕೆ ಹುಗಿಯಕೂಡದು? ಜನರ ಆರೋಗ್ಯಕ್ಕೆ ಬಾಧಕ ಬಾರದಂತೆ ಇಂಥಾ ಶವಗಳನ್ನು ಆಸ್ಪತ್ರಿ ಹಿಂದಗಡೆ ಇರುವ ತೆಂಕಿಲ ಗುಡ್ಡೆಯಲ್ಲಿ ಹುಗಿಯುವಂತೆ ತಕ್ಕ ಏರ್ಪಾಡು ಮಾಡುವರೆ ಮೇಲಾಧಿಕಾರಿಗಳು ತಕ್ಕ ಗಮನಕೊಡುವರೆಂದು ಕೋರುತ್ತೇವೆ.

ವಿಟ್ಲ:—ಇಲ್ಲಿಯ ಪೋಲೀಸ್ ಹೆಡ್‌ಕನಿಸ್ಟೇಬಲರು ಕಳದ ತಿಂಗಳ ತಾ ೨೨ಕ್ಕೆ ರಾತ್ರೆ ಬೀಟುಮಾಡಿಕೊಂಡು ಇದ್ದಾಗ ಇಲ್ಲಿಯ ಕೆ. ಡಿ. ಗುರುವಪ್ಪನು ಗೋಣಿಯಲ್ಲಿ ಕಟ್ಟಿದ್ದ ಒಂದು ಮುಡಿ ಅಕ್ಕಿಯನ್ನು ಹೊತ್ತುಕೊಂಡು ಹೋಗುವದನ್ನು ಕಂಡು ಗುಮಾನಿನ ಮೇಲೆ ಅವನನ್ನು ಹಿಡಿದು ಕೈದುಮಾಡಿ ನಂತರ ಜಾಮೀನಿನ ಮೇಲೆ ಬಿಟ್ಟಿರುತ್ತಾರೆ. ಈಗ ತನಕಿಯು ನಡಿಯುತ್ತಲಿದೆ. ಈ ಹೆಡ್ ಕನಿಸ್ಟೇಬಲರು ಮೊದಲು ಬಹಳ ಚಮತ್ಕಾರದಿಂದ ಕಳವು ವಗೈರೆಗಳನ್ನು ಪತ್ತೆಮಾಡಿರುತ್ತಾರೆ.

ಕಾಪು:—ಸರಕಾರಿ ಸ್ಥಳದಲ್ಲಿ ಒಬ್ಬ ಪಂಚಮನು ಪಂಚಮ ಶಾಲೆಗೋಸ್ಕರ ಒಂದು ಕಟ್ಟೋಣ ಕಟ್ಟಿಸಿ ಕೊಟ್ಟಿರುತ್ತಾನೆ. ಈ ತನಕವೂ ಅದೇ ಸಣ್ಣ ಕಟ್ಟೋಣದಲ್ಲಿ ಶಾಲೆಯು ನಡೆಯುತ್ತಲಿತ್ತು. ಸರಕಾರದವರ ಅನುಮತಿ ಇಲ್ಲದೆ ಸದರಿ ಕಟ್ಟೋಣ ಕಟ್ಟಿಸಲಿಕ್ಕೆ ಕಾರಣವೇನು? ಆ ಸ್ಥಳದಲ್ಲಿ ಕಟ್ಟೋಣ ಕೃಷಿ ಮುಂತಾದ್ದು ಮಾಡಿದರೆ ಸರಕಾರಕ್ಕೆ ಬಿಟ್ಟುಕೊಡಬೇಕೆಂತ ಲೇಂಡ್ ರಿಕಾರ್ಡು ತಹಸೀಲದಾರರವರಿಂದ ಒಂದು ನೋಟೀಸು ಸದರಿ ಪಂಚಮನಿಗೆ ಬಂದಿದೆಯಾಗಿ ಕೇಳುತ್ತೇವೆ. ಈ ತನಕ ಅದೇ ಕಟ್ಟೋಣದಲ್ಲಿ ಕಲಿಯುತ್ತಿದ್ದ ೩೬ ಪಂಚಮ ವಿದ್ಯಾರ್ಥಿಗಳವರಿಗೆ ಇನ್ನು ಯಾವಲ್ಲಿಗೆ ಕೊಂಡುಹೋಗುವದು ಎಂದು ಪಂಚಮ ಹೆಡ್ ಮಾಸ್ತರನಿಗೆ ಗಲಿಬಿಲಿ ಉಂಟಾಗಿದೆ. ಬೋರ್ಡಿನವರು ಆದಷ್ಟು ಬೇಗ ಇದಕ್ಕೆ ನಿಗಾ ಕೊಟ್ಟು ಮಕ್ಕಳಿಗೆ ಯೋಗ್ಯವಾದ ಸ್ಥಳ ಆರಿಸಿ ಕಟ್ಟೋಣ ಕಟ್ಟಿಸಿ ಕೊಟ್ಟಲ್ಲಿ ಮಹದುಪಕಾರವೆಂದೇ ಹೇಳಬೇಕಾಗಿದೆ.

ಮಂಗಳೂರು.

ಈ ವಾರದಲ್ಲಿ ಕೂಡಿದ ಮಂಗಳೂರು ತಾಲೂಕು ಬೋರ್ಡು ಮೀಟಿಂಗಿನಲ್ಲಿ ಮ| ರಾ| ಕೃಷ್ಣ ಸುಲಾಯರವರು ಡಿಸ್ಟ್ರಿಕ್ಟ ಬೋರ್ಡು ಮೆಂಬರರಾಗಿ ಆರಿಸಲ್ಪಟ್ಟಿರುತ್ತಾರೆ.

ಇಲ್ಲಿಯ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ ಶಿರಸ್ತೆದಾರರಾದ ಮ| ರಾ| ಉಳ್ಳಾಲ ನರಸಿಂಗರಾಯರವರು ರಜೆ ಪಡಕೊಂಡಿರುವುದರಿಂದ ಅವರ ಬದಲಿಗೆ ಮ| ರಾ| ಪಿ. ಎನ್. ಭಂಡಾರಕಾರ್ ಬಿ.ಎ.ಎಲ್. ಎಲ್. ಬಿ. ರವರು ಆಕ್ಟಿಂಗ್ ಸಿರಸ್ತೆದಾರರಾಗಿ ನೇಮಿಸಲ್ಪಟ್ಟಿದ್ದಾರೆ. ರಾ| ಪಿ. ಎನ್ ಭಂಡಾರಕಾರರ ಹೆಡ್ ಕ್ಲಾರ್ಕಸ್ಥಾನಕ್ಕೆ ರಾ| ಪಿ. ಶಂಕರ ನಾರಾಯಣರಾಯರು ನೇಮಿಸಲ್ಪಟ್ಟಿರುವರು.

ರಾ| ಗುಡ್ಡಪ್ಪನವರು ಆಕ್ಟಿಂಗ್ ಟ್ರಾನ್ಸಲೇಟರರಾಗಿ ನೇಮಿಸಲ್ಪಡುವರು.

ಮದ್ರಾಸ್ ಗವರ್ನರ್ರ ದೊರೆಗಳವರು ನವಂಬರ ತಾ. ೩ಕ್ಕೆ ಮಂಗಳೂರನ್ನು ಸಂದರ್ಶಿಸುವರೆಂದು ತಿಳಿದು ಬರುತ್ತದೆ.

ಇಲ್ಲಿಯ ಡಿಸ್ಟ್ರಿಕ್ಟ್ ಸರ್ಜನರಾಗಿರುವ ಕೆಪ್ಟನ್ ಜೆ. ಕರ್ಕಪೂಡರವರು ಮೆಜರರಾಗಿ ಮಾಡಲ್ಪಟ್ಟಿರುವರು.

ಮೆ| ಎಚ್. ಇ. ಜೇನ್ಸ್‌ರವರು ಇಲ್ಲಿಯ ಡ್ಯುಪಿಟಿ ಪೋಸ್ಟ್ ಮಾಸ್ತರರಾಗಿ ಬಂದಿರುವರು.

ಈಸ್ಟರ್ನ್ ಮೆರಿಟೈಮ್ ಲಿಮಿಟೆಡ್ ಎಂಬ ಹಡಗು ಕಂಪನಿಯ ಮೆನೇಜಿಂಗ್ ಏಜಂಟರಾದ ನಿಮಾಜಿ ಮತ್ತು ದೇಶಾಯಿಯವರು ಇಲ್ಲಿಗೆ ಬಂದಿರುವರು.

ಜಪ್ಪು ಮತ್ತು ಶ್ರೀಜ್ಞಾನೋದಯ ಮದುಪಾನ ನಿವಾರಣ ಸಂಘದವರಿಂದ ಕಲೆಕ್ಟರರಿಗೆ ಒಂದು ಮಾನವಿಯು ಕಳುಹಿಸಲ್ಪಟ್ಟಿರುವದು. ಸಲಹೆ ಕೊಡುವ ಒಂದು ಕಮಿಟಿಯನ್ನು ಏರ್ಪಡಿಸಬೇಕು, ಸೇಂದಿ ಸರಾಯಿ ಅಂಗಡಿಗಳ ಸಂಖ್ಯೆಯನ್ನು ತಗ್ಗಿಸಬೇಕು, ಸೂರ್ಯ ಮೂಡಿದಂದಿನಿಂದ ಸೂರ್ಯ ಕಂತುವ ವರೆಗೆ ಮಾತ್ರ ಇಂತಹ ಅಂಗಡಿಗಳನ್ನು ತೆರೆಯಲು ಹುಕುಂ ಕೊಡಬೇಕು. ಹ್ಯೊಗೆ ಬಜಾರಿನ ಸೇಂದಿ ಶರಾಬು ಅಂಗಡಿಗಳನ್ನೂ ಹಂಪನಕಟ್ಟೆಯ ನಂಬ್ರ ೬ನೇ ಸೇಂದಿ ಅಂಗಡಿಯನ್ನೂ ಮುಚ್ಚಿಸಬೇಕು ಎಂಬದೇ ಈ ಮನವಿಯ ಮುಖ್ಯ ತಾತ್ಪರ್ಯವಾಗಿದೆ.

ಬಂದರಿನ ಕೆಲವು ರಸ್ತೆಗಳು ಉತ್ತುಹಾಕಿದ ಗದ್ದೆಗೆ ಸಮಾನವಾಗಿರುವವು. ಮುಖ್ಯವಾಗಿ ಬಂದರದ ರಾ| ತ್ರಾಸಿ ದೇವರಾವ್ ರಾ| ವಾಸುದೇವ ಮಲ್ಯರ ಭಂಡಸಾಲೆಯ ಎದುರುಗಡೆಯಿಂದ ಹಾದು ಹೋಗುವ ರಸ್ತೆಯೂ, ಪೋರ್ಟು ಆಫೀಸಿನಿಂದ ಮುಂದಕ್ಕೆ ಹೋಗುವ ರಸ್ತೆಯೂ ಪೂರ್ಣ ಹಾಳು ಸ್ಥಿತಿಯಲ್ಲಿದ್ದು ನಡಿಯುವಾಗ ಮೊಣಕಾಲುದ್ದ ಕೆಸರು ಹಾರುತ್ತದೆ. ಅದರಲ್ಲಿಯೂ ಈ ಕೆಸರಿನಲ್ಲಿ ಬಿದ್ದಿರುವ ಕಸಕಡ್ಡಿಗಳು ಕೊಳತು ಕೆಲವು ಕಡೆಗಳಲ್ಲಿ ದುರ್ವಾಸನೆಗೆ ಪ್ರಾರಂಭವಾಗಿಯದೆ. ಇದರಿಂದ ಆ ಪ್ರಾಂತ್ಯದ ಜನರ ಆರೋಗ್ಯಸ್ಥೂ ಕೆಡಲಿಕ್ಕೆ ಕಾರಣವಾಗಬಹುದಾದ್ದರಿಂದ ಮುನಿಸಿಪಾಲಿಟಿಯವರು ಈ ವಿಷಯ ತ್ವರ್ಯದಲ್ಲಿ ನಿಗಾ ಕೊಡಬೇಕಾಗಿದೆ.

ಇದೇ ತಾ. ೧೨ರ ವರೇಗೆ ಇಲ್ಲಿ ೯೭-೨೩ ಇಂಚು ಮಳೆ ಬಿದ್ದಿರುವುದು.

ಈ ತಿಂಗಳ ಡಿಸ್ಟ್ರಿಕ್ಟ್‌ಬೋರ್ಡು ಮೀಟಿಂಗು ಇದೇ ತಾ. ೨೭ಕ್ಕೆ ಕೂಡುವುದು.

ಇಲ್ಲಿ ಗೇರುಬೀಜವನ್ನು ವಿದೇಶಗಳಿಗೆ ಕಳುಹಿಸಲು ಕೂಡಿಸಿಟ್ಟ ಸಾಹುಕಾರರು ಮರುಗುತ್ತಿರುವರು. ಮೆಣಸು, ಬೆಲ್ಲ, ಸಕ್ಕರೆ, ಬೆಂಕಿಪೆಟ್ಟಿಗೆ ಸಾಬೂನು ಮೊದಲಾದವುಗಳ ದರವು ಇಲ್ಲಿ ಏರಿ ಹೋಗಿರುವುದು. ಈ ಮೊದಲು ಮಾಡಿದ ಶರ್ತಗಳ ಪ್ರಕಾರ ಮತ್ತು ಈ ಮೊದಲಿನ ದರಗಳಲ್ಲಿ ಕಾಗದವು ಸಿಕ್ಕಲಾರದೆಂದು ಇಂಗ್ಲಿಷ್ ಕಾಗದ ಕಾರ್ಖಾನೆಗಳಿಂದ ಸರ್ಕೀಲಾರುಗಳು ನಮಗೂ ಸಹ ಬಂದು ತಲ್ಪಿವೆ. ಇಲ್ಲಿಯ ಕಲೆಕ್ಟರ ದೊರೆಗಳವರು ಆಹಾರ ಜೀನಸುಗಳ ಕ್ರಯವು ಏರದಂತೆ ಪ್ರಯತ್ನ ನಡಿಸುತ್ತಿರುವರಾಗಿ ತಿಳಿಯುತ್ತೇವೆ. ತಾ. ೧೧ರಲ್ಲಿ ಇಲ್ಲಿಯ ಸಾಹುಕಾರರ ಒಂದು ಸಭೆಯು ಕಲೆಕ್ಟರ ಆಫೀಸಿನಲ್ಲಿ ಕೂಡಿತ್ತು. ಮೆ| ಸ್ವಾಮನ್ ಆಲ್ವರೀಸ್, ರಾ| ಪುರುಷೋತ್ತುಮಸೇಟ್ ಮತ್ತು ರಾ| ಮಣೇಲ ವೆಂಕಟರಾಯನ್ನಾಕರ ಒಂದು ಕಮಿಟಿಯು ಈ ವಿಷಯದಲ್ಲಿ ಬೇಕಾದ ಪರ್ಯಾಲೋಚನೆಯನ್ನು ಮಾಡಿ ತಾ. ೧೨ರಲ್ಲಿ ಶ್ಯಾಮ ಘಂಟೆ ನಾಲ್ಕಕ್ಕೆ ಒಂದು ಸಭೆಕೂಡಿಸಬೇಕೆಂಬದಾಗಿ ನಿರ್ಣಯಿಸಿರುವರು. ನಿನ್ನೆಯ ದಿನ ಪುನಹ ಕಲೆಕ್ಟರರ ಆಫೀಸಿನಲ್ಲಿ ಸಾಹುಕಾರರ ಸಭೆಯು ಕೂಡಿರುವುದು.

ಮುಳಿಯಿಲ್‌ರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಡ್ತೆ 1ಕ್ಕೆ ಕ್ರಯ 10 ಆಣೆ ಇದು ಎಲ್ಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಒಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ

... . . . ಮಸ್ತಕಾಮೃತ ತೈಲವನ್ನು ಕಳೆದ ಐದು ವರುಷಗಳಿಂದ ಉಪಯೋಗಿಸಿಕೊಳ್ಳುತ್ತಿರುವುದರಿಂದ ನನ್ನ ಮುದಿ ಮಿದುಳು ಯೌವ್ವನ ಪ್ರಾಯದಲ್ಲಿರುವದ ಈ ದಿವ್ಯ ತೈಲ ಭ್ರಂಗನೆ ವಿನಹಾ ನಾನು ಕೆಲಸಮಾಡಲಾರನು, ನನ್ನ ನೇತ್ರೇಂದ್ರಿಯಗಳು ವಿಸ್ತರಿಸುವ

ರೆವೆರೆಂಡ್ ಇ ಸ್ಟೋನ್ಸ್,
ಮುಲ್ಕಿ

ತಾ 15—4—13

ಮುಳಿಯಿಲ್ಸ್ ಹೇರ್ ಓಯಿಲ್—ಕ್ರಯ 12 ಆಣೆ ಈ ದಲಿ ಅಮೃತದಂತಿರುವ ನಿಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂಧಿಸುತ್ತೇನೆ. ಇನ್ನೊಂದು ಕುಪ್ಪಿ ವಿ ಪಿ ಮೂಲಕ ರವಾನಿಸಿರಿ.

ಮಿಸಿಸ್ ವೈ ಕುರಿಯಾನ್,
ಗ್ರೀನ್‌ವಿಲ್ಲಾ, ಕಲ್ಲಿಕೋಟೆ

ತಾ. 23—5—13

.. ..ಮುಳಿಯಿಲ್ಸ್ ಹೇರ್ ಓಯ್ಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ ಇನ್ನೊಂದು ಡಜನ್ ಕುಪ್ಪಿಗಳನ್ನು ಆದಷ್ಟು ತ್ವರ್ಯದಲ್ಲಿ ರವಾನಿಸಿರಿ.

ಮಿಸ್. ಎಸ್ ಸ್ಟೋನ್ಸ್,
ಸ್ಕೂಲು ಮಿಸ್ಟ್ರೆಸ್, ಮಂಗಳೂರು

21ನೇ ಒಕ್ಟೋಬರ 1913

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ ಎಲ್ಲಾ ತರದ ಚಳಿಜ್ವರಕ್ಕೆ ರಾಮಬಾಣದಂತಿದೆ.

ಚತುರ್ಥಿ ಮಾತ್ರೆಯನ್ನು ತಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ ಇದು ಒಳ್ಳೇ ಗುಣಕರವೆಂಬದಾಗಿ ಹೇಳುವದರ ಅನುಮಾನವಿಲ್ಲ.

ಎ ಪೊಕ್ರು ಹೆಗ್ಗಡೆ,
ಕುಕ್ಕುಂಜೆ, ಕಾರ್ಕಳ

ತಾ. 13—6—13.

ವಯೊಲೆಟ್ ಹೇರ್ ಓಯ್ಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ತಲೆವೇದನೆಯು ಗುಣಪಡುವದು ಕಾಯಂ ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ ಅತಿ ಘೋರವಾದ ತಲೆನೋವಿನಿಂದ ಶ್ರಮೆಪಡುತ್ತಿದ್ದ ನನ್ನ ಮೊಮ್ಮಗಳಿಗೆ ತಮ್ಮಿಂದ ತಕೊಂಡ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಿಲ್ಲದೆ ಅವಳು ಇರಲಾರಳು ಹೆಚ್ಚಿನ ರೋಗಿಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲೆಂಬದು ನನ್ನ ಪ್ರಾರ್ಥನೆಯಾಗಿದೆ.

M. JACOBI,
Hd Clerk CALICUT

4—7—13

ವಿಳಾಸ:— ಮುಳಿಯಿಲ್ ಎಂಡ್ ಸನ್ಸ್, ಕಾಸರಗೋಡು, ದ. ಕ.

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸು

ನಮ್ಮ ಏಜಂಟರು:— 1 ಮೆಸ್ಸರ್ಸ್, ರಫಯಿಲ್ ಎಂಡ್ ಕೊ, ಬ್ರಿಟೋಬಿಲ್ಡಿಂಗ್
2. ಜುಬಿಲಿ ಸ್ಟೋರ್ ಬಜಾರ್, ಬೆಂಗಳೂರು. ಮಂಗಳೂರು

MUSICAL MART
Kavi & Sons,
MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೋನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಪೇಟಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. **ಹೇಂಡ್ ಹಾರಮೋನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೆಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೆಗೂ, ಫೋಲ್ಡಿಂಗ್ ರೂ. 70, 75, 105.**

ಕವಿ ಎಂಡ್ ಸನ್ಸ್
ಮ್ಯೂಜಿಕಲ್ ಮಾರ್ಟ್, ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವುದು ಮತ್ತಾವುದೂ ಇಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯಾನವೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪುಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರಚ್ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೩೦ ವಿಷಯಗಳು ಅಡಕವಾಗಿವೆ ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು ಇದರ ಕ್ರಯ ೧ಕ್ಕೆ ೧—೮—೦ ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವಧೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು

ಇದರ ಕ್ರಯ ೧ಕ್ಕೆ ೧—೦—೦ ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳುವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರ್ಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೦೮ ವಿಷಯಗಳನ್ನೊಳಗೊಂಡಿದೆ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು, ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ನಾಟಕ ಬುಕ್ ಡಿಪೊ ಏಜಂಟ್, ಬಳ್ಳಾರಿ,

ವಿವಾಹ ಮಂಟಪ

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡದಿದೆ. ಕಣ್ಣಾನೂರು, ಮೈಸೂರು, ನಾಗಪುರ, ವಿಶಾಕಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಬಾರದಾ!

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ
ಹಂಪನಕಟ್ಟಾ, ಮಂಗಳೂರು

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	A ಅರಗಜ	ತೊಲೆ 1ಕ್ಕೆ		2-0-0
ಅಂಬರ್ ಬತ್ತಿ	,,	,, 6-0-0	B ಅರಗಜ	,,	,,	1-0-0
ಕಸ್ತೂರಿ ಬತ್ತಿ	,,	,, 3-0-0	ಕಸ್ತೂರಿ ಬಿಲ್ಲೆ	,,	,,	2-0 0
ಜವಾಜಿ ಬತ್ತಿ	,,	,, 2-0-0	ಜವಾಜಿ ಬಿಲ್ಲೆ	,,	,,	1-0-0
ಶ್ರುಣಗಿನ ಬತ್ತಿ	,,	,, 1-8-0	ಕೇಸರಿ ಬಿಲ್ಲೆ	,,	,,	0-8-0
ಪನ್ನೀರ್ ಬತ್ತಿ	,,	,, 0-12 0	ತಾಂಬೂಲ ರತ್ನ ಸೀಸೆ 1ಕ್ಕೆ			0 4-0
ಮಸಾಲಾ ಬತ್ತಿ	,,	,, 0-6-0	ದಶಾಂಗ ಡಬ್ಬಿ 1ಕ್ಕೆ			0-4 0

ಮೇನೇಜರ್, "ಸುಗಂಧವಿಲಾಸ ಮಂಗಳೂರು

ತಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ

THE BOMBAY LIFE ASSURANCE CO. LTD.

(Estb lished 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

"There can be no doubt that the Policy Contracts are well secured".

Chairman.—The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co Ltd., The Tata Mills Co Ltd, Managing Agent of Messrs. Marsland Price & Co. Ltd., and fellow of the Bombay University.

Actuary:—George King Esq. F. F. A, F. I. A, London)

Medical Referee —Dr R Row, M. D D. Sc. London)

Managing Director —Pramrose R Joshi, Justice of the Peace, The Honorary Presidency Magistrate & etc

Wanted Agents on very liberal commission.

Apply for full particulars to—**Kochikar Bros.**; Udipi, Chief Agents for South Canara, Malabar, Travancore and Cochin

ಮುಂಬಯಿ ಲ್ಯಾಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು)

ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಾತಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು

"ವಿಮೆದಾರರ ಬಾಧ್ಯತೆಗಳ ಒಗ್ಗೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು: — ಹುಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೋಲಿಕ್ ಮಾರ್ಸ್ ಲೆಂಡ್ ಪ್ರೈಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೋಗಳವರು.

ಎಕ್ಚುಯುಯರಿ:—ಮೆ। ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)

ಮೆಡಿಕಲ್ ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ. ಡಿ. ಎಸ್. ಸಿ. (ಲಂಡನ್),

ಮೆನೇಜಿಂಗ್ ಡ್ಯಾರೆಕ್ಟರ್:—ರಾ। ಪ್ರೆಮ್‌ರೋಜ್ ಆರ್. ಜೋಶಿ ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು.

ಏಜಂಟರು ಬೇಕಾಗಿರುವರು, ಧಾರಾಳವಾದ ಕಮೀಶನ್ ಕೊಡೋಣಾಗುವುದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ.—

ಕೊಚ್ಚಿಕಾರ್ ಬ್ರದರ್ಸ್,
ಪ್ರಾಮುಖ್ಯ ಏಜಂಟರು. ಉಡ್ಪಿ.

ಯಮ್ ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬುದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವು ರಕ್ತಮಿತಿ ಸ್ಥಿತಿ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡೆಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಪುಪ್ಪುಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಆದಿಯಾದ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆಯುತ್ತಿಕೊಂಡಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರ್ವಿಘ್ನತವಾಗಿ ನಡೆಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡೆಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಚತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು ಇನ್ನು ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಅದನು ತಕ್ಕೊಳ್ಳುವ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ — ಯಮ್. ವಿ. ಶಾಸ್ತ್ರಿ,
ಆಯುರ್ವೇದ ಭೂಷಣ,
ಮಂಗಳೂರು

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2-8-0, 1-4-0, 1-0-0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್ ಉಪಾಧ್ಯಾಯ,

ಸುಗಂಧಕಾರ, ಮೈಸೂರು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾನಂದ ತೈಲವು. ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಹಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಅಣೆ

೨ ಪ್ರಮೇಹರಿಪು ದಿಂದು ಉರಿಯುನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಂಡಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ೮ ೦

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟುಕೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ

೪ ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗೆಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ ೮ ಅಣೆ.

೬ ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ ೧೦ ತೊಲೆಗೆ ೧೦ ಅಣೆ

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ

ತಮ್ಮ ವಿಳಾಸ — ಬಿ ಎಮ್. ನಾಥ್ ಮತ್ತು ಕಂಪೆನಿ,

ವೆಪರಿ ಪೋಸ್ಟು ಮದರಾಸು

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ವರಿಸೆಯ ಜ್ವರ ಮುಂತಾದ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುಲ್ಮಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು ರಾತಲಿಗೆ ೨ ರೂ

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ದೀಗು, ವಾತಬಾಧೆಗಳನ್ನು ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಅಣೆ ೩ ಬಾಟ್ಲಿಗೆ ೧ ರೂ ೬ ಅಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ಕುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು ಉರಿಯೂ ವವಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಅಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಅಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B. M Nath & Co, *Ayurvedic Chemists*,

Vepery Post, MADRAS

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ರೇಕು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಚಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾವು) ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ಎಡೆಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಹುಕು ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.— 220 ಮಾತ್ರೆಗಳುಳ್ಳ ಕುಪ್ಪಿಗೆ 4 ಅಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಅಣೆ.



೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟದೆ ಕೊಟ್ಟ ಕೂಡಲೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಬೇಕಾದೀತು! ಒಂದೇ ಒಂದು ಬುದ್ದಿಯು ನಿಮ್ಮಲ್ಲಿರಲಿ! ಔಷಧೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1, ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—"ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು.

ಡೋಂಗರೆ ಇವರ ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ ಎಲ್. ಎಲ್. ಬಿ. ಹೆಡ್ ಮಾಸ್ತರ ಹೈಸ್ಕೂಲು ಜುನಾಗಡ ಇವರು ಬರೆದದ್ದು:

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟ್ಲಿ ಒಂದರ ಕಿಮ್ಮತು 0—12—0, ಟಪ್ಪಾಲ ಖರ್ಚು 0—4—0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ

Girgaon Bombay. ಗಿರಗಾಂವ ಮುಂಬಯಿ

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪುಸಕ್ಷಯುಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಆರಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ ಡಾಕ್ಟರರು ಈ ರೀತಿ ಬರೆಯುವರು—ಕಲ್ಲಿಕೋಟೆಯ ಯು. ಬಿ. ದತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd*) ಸಿ. ಡಿ. ಅಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ— ಯು. ಬಿ. ದತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

Estd. 1888. ಸ್ಥಾಪನೆ 1888.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟವಾದಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦—೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಆದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಪ್ಪೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ **ಸಾರ್ಸಾಪರಿಲ್ಲೆಯು**. ಕ್ರಯ ಬಾಟ್ಲಿ ೧ಕ್ಕೆ ರೂ ೧—೪—೦. **ಅಂಚೆ ವೆಚ್ಚ ೪ ಆಣೆ.**

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪೆನಿ, ಗಿರಗಾಂವ ನಂ. ೪ ಮುಂಬಯಿ.



ಎಲಂಬಿಕ್ ವೆಜಿಟೆಬಲ್ ಟೊನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು. **ಆಯುರ್ವೇದ ಗ್ರಂಥಗಳಲ್ಲಿ** ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿಸಿ ಮಾಡಿದ್ದು. ಪಿತ್ತಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಹಿತಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದು ಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಆನೊಡ್ಯಾನ್. ಹೊರಗೆ ಹಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಬೇಧಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡಿತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ಹುಳಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ **ಎಲಂಬಿಕ್ ಕೆಮಿಕಲ್ ವರ್ಕ್ಸ್** ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಅಂಡ್ ಕೊ. ಪಾರ್ಕ್ ಟೌನು, ಮದ್ರಾಸು.

S. VAIDYA & Co., *Park Town, Madras.*

"ಆಯೊನಿಕ್ ಫಾರ್ಮಸಿ"

ಎಂ. ಔಷಧ ಪರಿಶೋಧನಾ ಗೃಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯೂಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂದುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಒಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) ಬ್ಲಡ್ ಪ್ಯೂರಿಫ್ಯಾಯಿಂಗ್ ಸೊಲ್ಯೂಷನ್ ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು. ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ತಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಪಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co., *Park Town, Madras.*

ಎಸ್. ವೈದ್ಯಾ ಅಂಡ್ ಕೊ. ಪಾರ್ಕ್ ಟೌನ್ ಮದ್ರಾಸು.

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮುಗ್ರಿಗಳು ಬೇಕಾದರೂ, ಪಿ. ಡಿ. ನೀಲಕಾಂತ ಎಂಡ್ ಕೊ. ಬೆನಾರಿಸ್ ಸಿಟಿ ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೈಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು. ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉಡುಪು ತೊಡುಪುಗಳನ್ನು ತರಿಸುತ್ತಿರುವರು. ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮುಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು. ಸೀದಾ ನಮಗೆ ಬರೆದು ಒಡವೆಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಸೇಕಡಾ 25ರಂತೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಒರ್ಡರುಗಳನ್ನು ವಿ ಪಿ. ಮೂಲಕ ಕಳುಹಿಸಿಕೊಡುವೆವು ಸಂದೇಹಪಡಬೇಡಿರಿ (1) ಜರಿತಾರಿನ ರೇಶ್ಮೆ, ನಾನಾ ತರದ ಅರಿವೆಗಳು, ಶೀರೆಗಳು, ರವಕೆ ಕಣಗಳು, ಅಂಗಿ ವಸ್ತ್ರ ಇತ್ಯಾದಿ. (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರ್ಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮುಗ್ರಿಗಳು. (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳೆಲ್ಲವುಗಳಿಗೂ ಬರೆಯಬಹುದು.

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸೋಣಾಗುವುದು.

ನಮ್ಮ ವಿಳಾಸ:— ಪಿ ಡಿ. ನೀಲಕಾಂತ ಎಂಡ್ ಕೊ,
ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್ ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್ ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟು ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ —
ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರು.

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

IIನೇ ಸ್ಟೆಂಡಾರ್ಡ್ ಗಣಿತ ...	0—3—0
IIIನೇ ,, ,,	0—1—0
IVನೇ ,, ,, ...	0—6—0
3ನೇ ಪುಸ್ತಕದ ಶಬ್ದಾರ್ಥ ಪ್ರಾಣಿಕೋಟಿ, ವನಸ್ಪತಿಕೋಟಿ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ)	0—2—6
4ನೇ ಪುಸ್ತಕದ ಶಬ್ದಾರ್ಥ ..	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು ..	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಭಾಗ ..	0—3—0
3ನೇ ದರ್ಜೆಯ ದಕ್ಷಿಣ ಕನ್ನಡದ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು (ಇದರಲ್ಲಿ ವೃತ್ತಿಗಳೂ, ಕಥೆಗಳೂ, ಅಭಿನಯದ ಹಾಡುಗಳೂ ಇರುತ್ತವೆ)	0—1—6
ಗಣಿತಸಾರ ಎಂಬ ಮಗ್ಗಿ ಕೋಷ್ಟಕಗಳ ಪುಸ್ತಕ	0—1—0
ಬಾಲಶಿಕ್ಷೆ	(ಅಚ್ಚಿನಲ್ಲಿದೆ)
ಒಂದನೆಯ ಪುಸ್ತಕ ಎರಡನೆಯ ,, ಮೂರನೆಯ ,, ನಾಲ್ಕನೆಯ ,,	(ತಯ್ಯಾರಿಯಲ್ಲಿವೆ.)

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವುವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಶನ್ ಕೊಡಲಾದೀತು.

ವಿ. ಲಕ್ಷ್ಮಣರಾವ್,
ಸ್ಕೂಲ್ ಮಾಸ್ತರ್, ಉಡುಪಿ.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!

ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ, ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0 ಗ್ರಾಹಕರು ತ್ವರೆಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ — ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮತಸ್ಥರಿಗೆ ಉಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತ ಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ.	ಮಂಗಳೂರು.
ಮ॥ ಪಾವಂಜೆ ಗುರುರಾವ್,	ಪಾವಂಜೆ ಗೋಪಾಲಕೃಷ್ಣ
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.	ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೊಓಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00. ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ 2,22,00,000. ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವವಲ್ಲದೆ ಪೋಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು,

ವಿಳಾಸ:— ಕೆ. ಶಂಕರ ನ್ಯಾಕ್,
ಸೊಸೈಟಿಯ ಏಜಂಟ್.
ಶ್ರೀಕುಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌರಿ ಮಠದ ಬಳಿ,
ಮಂಗಳೂರು.

Canarese Novels Etc.

ಕನ್ನಡ ಪುಸ್ತಕಗಳು.

ಮ| ರಾ| ರಾ| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಆ.		ರೂ. ಆ.
ವಂಗವಿಜೇತ ಹೊಸ ನಾವಿಲ್	1–4	ಕಮಲಾ ಕಾಂತ ದ್ವಿ. ಮು.	0–2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1–4	ಲೀಲೆ [ಸಮಾಜ ಚಿತ್ರ]	0–4
ನವಾಬನಂದಿನಿ ಡಿಟೊ 2ನೇ ಭಾಗ	1–8	ಮಾಲತಿ [ಅತಿ ಮನೋಹರ] ದ್ವಿ. ಮು.	0–3
ಸೀತಾರಾಮ (ಇತಿಹಾಸ)	1–8	ರಾಧಾರಾಣಿ [ಕಾದಂಬರಿ] ತೃ. ಮು	0–3
ವಿಷವೃಕ್ಷ ದ್ವಿ. ಮು	1–4	ಯುಗುಳಾಂಗುರೀಯ ,,	0–3
ದೇವೀ ಚೌಧುರಾಣಿ-ಡಿಟೊ	1–4	ಭ್ರಾಂತಿವಿಲಾಸ ,	0–8
ರಾಜಸಿಂಹ-(ಇತಿಹಾಸ)	1–5	ನೊಂದಸುಡಿ [ಸ್ತ್ರೀನೀತಿ]	0–2
ಕಪಾಲಕುಂಡಲ	0.13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0–2
ಮೃಣ್ಮಯಿ-ಡಿಟೊ 2ನೇ ಭಾಗ	1–1	ವೈಜ್ಞಾನಿಕ ಪ್ರಹಸನ [ನಕಲಿ]	0–4
ಕೃಷ್ಣಕಾಂತನ ಉಯಿಲು	1–0	ಚಿರತ್ನನಾಟಕರತ್ನ ಡಿಟೊ	0–7
ಮನೋರಮ [ಪತ್ತೇದಾರಿ ಕಥೆ]	1–0	ಚಿತ್ರವಿಚಿತ್ರಾವಳಿ [Tit Bits]	0–8
ಚರಿಮ ಳ-ಡಿಟೊ-ದ್ವಿ. ಮು	0.10	ನೀರದೆ [ಹೊಸ ಕಾದಂಬರಿ]	0–8
ಸಾಧನೆ. ಡಿಟೊ	0–8	ಭಾರತಮಹಿಳಾ [ಸ್ತ್ರೀನೀತಿ]	0–8
ಕೊಹಿನೂರು [ಇತಿಹಾಸ]	0.12	ಅಮೃತಪುಳಿನ [ನಾವಿಲ್]	0.11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0–3	ಇತ್ಯಾದಿ.	

ಶ್ರೀ ಮಾರುತೀ ಚಿತ್ರಪಠ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ1ಕ್ಕೆ 3 ಆಣೆ 12ಕ್ಕೆ 1 ಉಚಿತ ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು.

	ರೂ. ಆ.		ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ ಮು.	0–8	ನಿರ್ಭಾಗ್ಯಚಾಣಕ್ಯ [ಹೊಸಕಾದಂಬರಿ]	0–6
ಕ. ಕವಿಚರಿತೆ [ಪೂರ್ವಭಾಗ]	3–2	ಅನಂಗಸುಂದರಿ ಡಿಟೊ	0–8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0 10	ತಾರಾ ಸುಂದರಿ ಡಿಟೊ	0–8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0–6	ರಾಧಾಮಾಧವಿ ಡಿಟೊ	0–8
ಕಲಾನಾಥ ಡಿಟೊ	0–8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0–9
ಶೋಭನೆ [ಬಂಗಾಳಿ ನಾವಿಲ್]	0.12	ಪಶುವೈದ್ಯಸಂಗ್ರಹ ಡಿಟೊ ದ್ವಿ ಮು	0–9
ಯಾಮಿನಿ [ಬಂಗಾಳೀ ನಾವಿಲ್]	0–3	ಧರ್ಮಪದವೆಂಬ ಬುದ್ಧಗೀತೆ	0.12
ಪ್ರಿಯಂವದೆ [ಪತಿವ್ರತಾ ಕಥೆ]	0–8	ಜೈಮಿನಿಭಾರತ [ಸಟೀಕಾತಾತ್ಪರ್ಯ]	4–0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0–8	ಹರಿಕಥಾಮೃತಸಾರ ಡಿಟೊ	1–6
ಸನ್ಯಾಸಿ [ಹೊಸ ಕಾದಂಬರಿ]	0–6	ಚದುರಂಗಬೋಧಿನಿ	0–3
ಮೃತ್ಯು ಪರೀಕ್ಷೆ ಡಿಟೊ	0–2	ಸರ್ವೇಮ್ಯಾನ್ಯುಯಲ್	0–5
ಬೃಂದಾವನ ಡಿಟೊ	0–2	ನ್ಯಾಯದರ್ಪಣ [ಲಾ]	1–0
ಸುಮನೋರಮ ಡಿಟೊ	0–2	ವ್ಯವಹಾರ ದೀಪಿಕೆ [ಲಾ]	3–0
ಮಾಲಿನಿ ಡಿಟೊ	0–2	ಶಾಕುಂತಲ ನಾಟಕ ದ್ವಿ ಮು.	0–9
ಪ್ರೇಮಪಿಪಾಸ ಡಿಟೊ	0–2	ಶೂರಸೇನಚರಿತ್ರ ನಾಟಕ ಡಿಟೊ	1–0
ವಿರಕ್ತಳಾದ ಸೌದಾಮಿನಿ ಡಿಟೊ	0–5	ಚಂಡಕೌಶಿಕ ನಾಟಕ ಡಿಟೊ	0.12
ಚಿತ್ರಕಳಾವತಿ ಡಿಟೊ	0–2	ರಾಮವರ್ಮ ಲೀಲಾವತೀ ನಾಟಕ	0–8
ಚಾತುರ್ಯವತಿ ಡಿಟೊ	0–2	ಪಾಂಚಾಲೀ ಪರಿಣಯ ನಾಟಕ	0.10
ವಸುಮತಿ ಡಿಟೊ	0–2	ಚಂಡೀಮದಮರ್ದನ ನಾಟಕ	0–5
ವಿಲಕ್ಷಣಶಿಕ್ಷಣ ಡಿಟೊ	0–2	ಪ್ರಬೋಧ ಚಂದ್ರೋದಯ ನಾಟಕ	0.10
ಪದ್ಮಿನಿ ಡಿಟೊ	0–2	ಭರ್ತೃಹರಿ ನಿರ್ವೇದ ನಾಟಕ	0–3
ಭಾನುಮತಿ ಡಿಟೊ	0–2	ನಿರುಪಮಾ [ನಾಟಕ]	0.12
ಸತೀರೋಹಿಣಿ ಡಿಟೊ	0–2	ಧ್ರುವಂಜಯ [ನಾಟಕ]	0–4
ಸಂತಾಪಕ ಡಿಟೊ	0–4	ಸೀತಾಪರಿಣಯ [ನಾಟಕ]	0–4
ಚಂದ್ರಮತಿ [ಸ್ತ್ರೀನೀತಿ]	0–6	ಸೀತಾಸುವರ್ಣಮೃಗ [ನಾಟಕ]	0–12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—

ಎಸ್. ಟಿ. ಎ., ಬೆಂಗಳೂರು ಸಿಟಿ.

ಆರೋಗ್ಯವೇ-ಭಾಗ್ಯ!

ಹವೆಯ ಬದಲಾವಣೆಯಿಂದ ಉಂಟಾಗುವ ನೆ ಇತರ ತಲೆನೋವು, ಕಣ್ಣುಬೇನೆ, ತಲೆಭಾರ, ನೆಗಡಿ, ಕಫ, ಖಾಸ, ಜ್ವರ, ಛಳಿಜ್ವರ, ಚಳಿವಾತ, ವಾಂತಿಭೇದಿ, ಉಷ್ಣಭೇದಿ, ಮೇಹ ಇತ್ಯಾದಿ ನೂರಾರು ಬಾಧ್ಯಗಳೂ ಮನಮನೆಯಲ್ಲೂ ಪ್ರತ್ಯಕ್ಷವಾಗಿ ತೋರುತ್ತಿರುವ ಈ ಕಾಲದಲ್ಲಿ

ದಿವ್ಯ ಸಂಜೀವಿನೀ

ಯುಕೆಲಿಪ್ಟಸ್ ತೈಲ

ಎಂಬ ಅತ್ಯಪೂರ್ವ ಫಲಕಾರಿಯಾದ ಈ ಎಣ್ಣೆಯ ಸೀಸೆಯೊಂದನ್ನು ಗೃಹಸ್ಥರು ಸಂಗ್ರಹಿಸಿಕೊಳ್ಳಿ! ಈ ಎಣ್ಣೆ ಇದ್ದಲ್ಲಿ ಆವ ರೋಗದ ಸೋಂಕೂ ತೋರದು, ಎಂತಹ ರೋಗವನ್ನೂ ಇದು ತಡೆಗಟ್ಟಿ, ನಿರ್ಮೂಲಿಸಿ ಬಿಡುವುದು'' ಉಪಯೋಗಿಸಿದವರ ಅನುಭವಕ್ಕಿಂತಲೂ ಹೆಚ್ಚಿನ ವಿಸ್ತಾರವಾದ ವಿಜ್ಞಾಪನೆಯು ಮತ್ತೊಂದಿಲ್ಲ.

ಪ್ರಾಣದಾನ ಮಾಡಿಯದೆ.

ಕಂಕನಾಡಿನ ಮೆ| ಉಮ್ಮರ್ ಸಾಹೇಬರು ಈ ರೀತಿ ಬರೆಯುವರು:—''ಪ್ರಿಯರೇ ತಮ್ಮಲ್ಲಿಂದ ನಾನು ಸ್ವಲ್ಪ ದಿವಸದ ಕೆಳಗೆ ಒಂದು ಡಜನ್ ನೀಲಗಿರಿ ಯುಕಲಿಪ್ಟಸ್ ತೈಲ ತರಿಸಿಕೊಂಡಿದ್ದೆನು. ಅದನ್ನು ಕೆಲವರಿಗೆ ಕೊಟ್ಟದ್ದರಿಂದ ಪ್ರಾಣದಾನ ಕೊಟ್ಟ ಹಾಗಿದೆ. ಇದನ್ನು ಕೇಳಿ ಎಲ್ಲರೂ ಬಾಟ್ಲಿಗಳನ್ನು ಕೊಂಡುಹೋದುದಲ್ಲದೆ ಈಗ ಅನೇಕರು ಪ್ರತಿ ದಿವಸ ಬರುತ್ತಾ ಇದ್ದಾರೆ. ನನಗೆ ಸಹಾ ಒಂದು ಬಾಟ್ಲಿ ಉಳಿಯಲಿಲ್ಲ ಆದ್ದರಿಂದ ಈ ಕಾಗದ ಕಂಡ ಕೂಡಲೇ ಒಂದು ಡಜನ್ ಬಾಟ್ಲಿಗಳನ್ನು ವಿ. ಪಿ. ಮಾಡಿ ಕಳುಹಿಸಿರಿ.'' ಟಿನ್ಸ್ ಸೀಸೆ1ಕ್ಕೆ 0–5–0. ವಿ. ಪಿ. ಬೇರೆ ಡಜನ್ ಬಾಟ್ಲಿಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ. 3. ವಿ. ಪಿ ಬೇರೆ.

1914ನೇ ಇಸವಿ ಕೆಲೆಂಡರು ಸಹಿತವಾದ ಪರಿಮಳದ ಕಾರ್ಡುಗಳು. ಡಜನ್ ಕಾರ್ಡುಗಳಿಗೆ 0–12–0. ಗ್ರೋಸ್ ಕಾರ್ಡುಗಳಿಗೆ ರೂ. 6. ವಿ. ಪಿ. ಬೇರೆ.

ಸ್ನೇಹಲತಾ ಮಸ್ತಕ ತಾಪಹಾರಿಣಿ ತೈಲ:—ಮೆದುಳು ರೋಗಗಳಿಗೆ ಅತ್ಯುಪಯೋಗವಾದ ತೈಲ. ಸೀಸೆ 1ಕ್ಕೆ 0–12–0. ಡಜನ್ ಸೀಸೆಗಳಿಗೆ ರೂ 8. ವಿ ಪಿ ಬೇರೆ

ಫೊಟೊ ಎನ್‌ಲಾರ್ಜ್‌ಮೆಂಟುಗಳು, ರಬ್ಬರ್ ಮೊಹರುಗಳು ಅಗ್ಗ ದರದಲ್ಲಿ ತಯಾರಿಸಿ ಕೊಡೋಣಾದೀತು.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಕಂಕನಾಡಿ ಪೋಸ್ಟು, ದ. ಕ.

ವಾಚಕರೇ!

ಕಾಲಕ್ಕೆ ತಕ್ಕ ಜೀವನೋಪಾಯ ಇದಲ್ಲವೆ?

ಈ ನಮ್ಮ ಮೈಸೂರು ದೇಶದಲ್ಲಿ ಆಂಗ್ಲೇಯ ಪ್ರಭುಗಳಿಂದಲೂ ನಮ್ಮನ್ನಾಳುವ ಶ್ರೀಮನ್ಮಹಾರಾಜ ಸರಕಾರದವರಿಂದಲೂ ಸಹ ಪ್ರೋತ್ಸಾಹಿಸಿ ದ್ರವ್ಯಸಹಾಯಮಾಡುತ್ತಿರುವ ವಿದ್ಯಾಭ್ಯಾಸಂಗಕ್ಕೆ ಅನುಕೂಲವಾಗಿ ಈಗಿನ ಕಾಲದಲ್ಲಿ ಗೌರವವು ಮತ್ತು ಪ್ರಸಿದ್ಧಿಯಂ ಪಡದಿರುವ ಕುಶಲ ವಿದ್ಯಾವಂತರಿಂದ ನವೀನವಾಗಿ ರಚಿಸಲ್ಪಟ್ಟು ಕನ್ನಡ ಮತ್ತು ಇಂಗ್ಲಿಷ್ ಸ್ಕೂಲುಗಳ ಎಲ್ಲಾ ತರಗತಿಗಳ ಬಾಲಕರು ಮತ್ತು ಬಾಲಕಿಯರಿಗೆ ವಾರಕ್ಕೆ ಸಿದ್ಧವಾಗಿರುವ ಕನ್ನಡ ಇಂಗ್ಲಿಷ್ ಪುಸ್ತಕಗಳು ಮತ್ತು ಸಂಸ್ಕೃತ ತೆಲಗು ವೈದ್ಯ ವೇದಾಂತ ಜ್ಯೋತಿಷ್ಯ ಕನ್ನಡ ಗ್ರಂಥಗಳು ಅಲ್ಲದೆ ಉತ್ತಮ ಕಾದಂಬರಿಗಳು ಸ್ಟೇಶನರಿ ಸಾಮಾನುಗಳು ಅತ್ಯುತ್ತಮವಾದ ಕಾಗದ ಅಕ್ಷರಗಳಿಂದ ತಯಾರಿಸಲ್ಪಟ್ಟು ಸುಲಭ ಕ್ರಯಕ್ಕೆ ಸಿದ್ಧವಾಗಿರುತ್ತೆ.

ಅಪೂರ್ವ ಪುಸ್ತಕಗಳು.

ಇದು ಸರ್ವರಲ್ಲಿಯೂ ಇರಬೇಕಾದ್ದು. ಜಮಾ ಖರ್ಚಿನ ಪದ್ಧತಿ 0–12–0. ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

ಆಂಗ್ಲಭಾಷಾ ಪ್ರಕಾಶಿಕ—(ಸ್ವತಃ ಇಂಗ್ಲಿಷ್ ಕಲಿಯುವ ದೊಡ್ಡ ಪುಸ್ತಕ. ಇದನ್ನು ಗುರುವಿನಂತೆ ಭಾವಿಸಿ. ಬೆಲೆ 1—8—0. ವೈದ್ಯಸಾರಸಂಗ್ರಹ (ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ಬೆಲೆ 3—0—0.

ಆರ್ಯಕೀರ್ತಿ ...	0–10—0	ಚಂದ್ರಕಳ	0—4—0
ಹನುಮದ್ವಿಲಾಸಂ ...	0—8—0	ಕಲಾನಾಥ	0—6—0
ಶಾಕುಂತಲ ನಾಟಕ	0—8—0	ಶಿವಾನಂದಲಹರಿ... ...	0—6—0
ಸ್ತ್ರೀಧರ್ಮನೀತಿ ...	0—8—0	ಪ್ರಶ್ನೋತ್ತರ ಲೇಖ್ಯಬೋಧಿನಿ	1—4—0
ಶೋಭನೆ ...	0—8—0	ಚಿತ್ರವಿಚಿತ್ರಾವಳಿ ...	0—8—0
		ವಿಷವೃಕ್ಷ	1—4—0

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್,
ಮೆನೇಜರ್ ವಿದ್ಯಾಸಾಗರ ಬುಕ್ ಡಿಪೊ
ಚಿಕ್ಕಪೇಟೆ ಬೆಂಗಳೂರು ಸಿಟಿ.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	217,400—0—0
Paid up Capital	192,400—0—0
Deposits	490,644—4—2
Reserve Fund	27,590—12—0

Besides the uncalled capital of Rs. 25,000/ 25% of the net profits are added annually to the Reserve Fund. Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively. Terms on application.

Short-notice Deposits requiring one weeks notice of withdrawal after one month received @ 2½% per annum.

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4%.

Loans granted on proper securities and pledges

Sealed Parcels for safe custody received on a moderate charge

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು „	225,000—0—0
ಪ್ರತಿಜ್ಞಾತ ಮೂಲ ಧನವು „	217,400—0—0
ಆಗತ ಮೂಲ ಧನವು „	192,400—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	490,644—4—2
ರಕ್ಷಿತ ದನವು	27,590—12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಯೆ ಬೇಂಕಿನ ಸೆಕ್ರಿಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾಯಿತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd ,
Mangalore, 1st. August 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಅತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣೀಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಆಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦.

ತಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೋ, ಬಳ್ಳಾರಿ

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತ್ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಜಗುಳಿ ಬಿದ್ದು ಹೋಗಲಾರವು ; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಬಂಧುಗಳು, ಬಸವನಗಲಿ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ ಪಿ. ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ — ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಬಿಕರಿಯಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವಷ್ಟು ಮುಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇವರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ" ಅಥವಾ ವಿದ್ಯುಚ್ಛಕ್ತಿಯ ವಜ್ರೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ

ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತುದೌರ್ಬಲ್ಯವನ್ನೂ ನಾಶಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಲಾಮವೂ, ಅಕಾಲಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಆವಶ್ಯಕವಾಗಿರುತ್ತವೆ.

ವಾತರೋಗದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ರಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಶಿಥಿಲವಾಗಿ ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಜಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ದಾಹರೀ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ನಾನು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು, ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೀಲ್, ಪನವೇಲ್—"ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಇವನ್ನು ಪುನಃ ರವಾನಿಸಿರಿ."

4 ವಿ. ಆರ್. ಚಾಕ್ಕೊ, ಡಿಸ್ಟ್ರಿಕ್ಟ ಕೋರ್ಟ ವಕೀಲ, ಕೊಟ್ಟಯಮ್, ತ್ರಾವಣಕೋರ್ ರಾಜ್ಯ.—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡೆನಷ್ಟೇ. ಅವುಗಳನ್ನು ಉಪಯೋಗಿಸಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು ಕಳುಹಿಸುವುದು.

5 ಮಾನಜೀ ನರಸಿಂಗರಾವ್, ಸಂಸ್ಥಾನ ಪಟ್ಟಣ.—ಪ್ರೊ. ಜೇಮ್ಸರ ಗುಟಿಕೆಗಳಿಂದ ನಾನು ಹೆಚ್ಚಾದ ಗುಣವನ್ನು ಹೊಂದಿರುವದರಿಂದ, ಅವುಗಳ ಇನ್ನೆರಡು ಸೀಸೆಗಳನ್ನು ರವಾನಿಸಿರಿ.

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: ದಿ. ಊಲನ್ ಮಾರ್ಟ್. ಮಂಗಳೂರು ದ. ಕನ್ನಡಾ.

ಕರ್ಣಾಟಕ ವನೌಷಧಾಲಯ ಶಿರಸಿ.

ಔಷಧಗಳ ಗುಣದ ಬಗ್ಗೆ ಡಾಕ್ತಾರ ಮುಂತಾದವರ ಕಡೆಯಿಂದ ಸರ್ಟಿಫಿಕೇಟುಗಳು ಶಿಕ್ಕಿರುತ್ತವೆ.

೧. ರೋಗನಾಶಕ. ರಕ್ತ, ಧಾತು ಶುದ್ಧಿ ವ ವೃದ್ಧಿಕರ ಲೋಹ ಮಿಶ್ರಿತ ಗುಳಿಗೆ ೪೨ ಟ ೩. ಸಹ ಕ್ರಯ ರೂ ... ೨—೪—೦
೨. ಪ್ರವಾಳ ಕೇಶರ ಅಮರಸತ್ವ ಶಿಲಾಜಿತು ವ ವನಸ್ಪತಿ ಮಿಶ್ರಿತ ಧಾತುಪೌಷ್ಟಿಕ ಶಕ್ತಿವರ್ಧಕ ಗುಳಿಗೆ ೪೨ ಕ್ರಯ ರೂ ೨—೪—೦
೩. ಗರ್ಮಿ ರೋಗನಾಶಕ ಗುಳಿಗೆ. ೭ ದಿವಸದಲ್ಲಿ ಖಚಿತ ಗುಣ ೪೨ ಗುಳಿಗೆ ಡಬ್ಬಿ ೧ಕ್ಕೆ ಕ್ರಯ ರೂ ... ... ೩—೪—೦
೪ ಟಾಕಿಚಟ್ಟೆನಾಶಕ ಮಲಮು. ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೫. ವಾತನಾಶಕ ತೈಲ. ಯಾವದೇ ತೆರದ ವಾತವಿದ್ದರೂ ಗುಣ ಕುಪ್ಪಿ ೧ಕ್ಕೆ ಕ್ರಯ ರೂ . . . ೧—೪—೦
೬. ಭೃಂಗಾಮಲಕಾದ್ಯ ತೈಲ. ಶಿರೋರೋಗ ನೇತ್ರರೋಗ ನಿವಾರಣ ಅಕಾಲದಲ್ಲಿ ಆದ ಹಣ್ಣುಕೂದಲು ಕಪ್ಪಾಗುತ್ತವೆ ಕುಪ್ಪಿ ೧ಕ್ಕೆ ಕ್ರಯ ರೂ . ... ೧—೪—೦
೭ ಜಂಬೀರ ತೈಲ ಮೇಲಿನಂತೆ ಗುಣ ಕುಪ್ಪಿ ೧ಕ್ಕೆ ಕ್ರ ರೂ ೧—೨—೦
೮ ಮೂಲವ್ಯಾಧಿ ಹರಚೂರ್ಣ. ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೯ ಕಫದಮ್ಮುಹರ ಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೧೦. ಇಸುಬುರುತ್ತಿ ಮಲಮು ಡಬ್ಬಿ ೧ಕ್ಕೆ ಕ್ರಯ ರೂ ೧—೪—೦
೧೧. ಅಸಾಧ್ಯಕೆಟ್ಟ ಹುಣ್ಣುಗಳಿಗೆ ಮಲಮು .. ... ೧—೪—೦
೧೨. ಮದನೋದ್ಭವ ಚೂರ್ಣ ಡಬ್ಬಿ ೧ಕ್ಕೆ ರೂ . ೧-೧೨—೦
೧೩ ಅಮೃತಪಾಕ (ವೃದ್ಧನಾದರೂ ಸಶಕ್ತನಾಗುತ್ತಾನೆ) ಅತ್ಯಂತ ಪೌಷ್ಟಿಕ ಶಕ್ತಿವರ್ಧಕ ೪೦ ತೊಲೆ ಡಪಿ ೧ಕ್ಕೆ .. ೩—೮—೦
೧೪. ಅಮೃತಗುಟಿ ಅಗ್ನಿವೃದ್ಧಿಕರ ಪಿತ್ತಕಫನಾಶಕ ಜ್ವರಗಡ್ಡೆ ಅಸ್ಥಿಗತಜ್ವರ ನಾಶವಾಗಿ ಶಕ್ತಿ ಬರುತ್ತದೆ ದಮ್ಮು ಕೆಮ್ಮು ಗುಣವಾಗುತ್ತದೆ ಗುಳಿಗೆ ೪೨ರ ಕ್ರಯ ರೂ ... ೨—೦—೦

ಈ ಶಿವಾ್ಯ ಇನ್ನೂ ಅನೇಕ ಔಷಧಗಳು ಶಿಕ್ಕುತ್ತವೆ ರೋಗದ ಲಕ್ಷಣ ಪೂರ್ಣವಾಗಿ ತಿಳಿಸಿದರೆ ಯೋಗ್ಯ ಕಿಮ್ಮತಿಗೆ ಉತ್ತಮ ಔಷದಗಳು ಕಳುಹಿಸಲಾಗುವದು

ಪತ್ತೆ:—ಆರ್. ಯಸ್. ವಝೆ ಕಸಬೆ, ವೈದ್ಯಭೂಷಣ,
ಪೋಸ್ಟು ಶಿರಸಿ, ಜಿಲ್ಲಾ ಉತ್ತರ ಕಾನಡಾ

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1 ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಬಿ ಎಸ್ ಎ ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆಸ್ಸನ್, ರೊಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ಡ್‌ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ,

K. K. Shanbhog, *Proprietor*
THE CANARA CYCLE MART,
Udipi, S. Canara.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು.

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

ಧಾತುಪೌಷ್ಟಿಕ ವಜ್ರಾಂಗಪಾಕ.

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ, ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ ೩—೮—೦, ಒಮ್ಮೇಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ ೬—೦—೦. ಟಪ್ಪಾಲು ಖರ್ಚು ಬೇರೆ.

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗನಾಶಕ ಗುಳಿಗೆ ೪೨ಕ್ಕೆ ಉತ್ತಮ ಗುಣ ಕ್ರಯ ರೂ ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೨೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೇಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ ೧ ಟಪ್ಪಾಲು ಖರ್ಚು ಬೇರೆ

ಇನ್ನು ಅನೇಕ ಔಷದಗಳು ನಮ್ಮ ಕಂಪೆನಿಯಲ್ಲಿ ಶಿಗುತ್ತವೆ ಅನುಪಾನ ಪತ್ರಿಕೆ ಒಂಗಿಯ ಸಂಗಡ ಕಳುಹಿಸುವೆವು

ನಮ್ಮ ವಿಳಾಸ — **ವಿ. ಎಸ್ ಮೋಡಕ,**
ಕರ್ಣಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ ಶಿರ್ಶಿ, ಜಿಲ್ಲಾ ಕಾನಡಾ

ಯುನಿವರ್ಸಲ್ ಎಸ್ಯೂರನ್ಸ್ ಕೊ, ಲಿಮಿಟೆಡ್.

ಹೆಡ್ ಅಫೀಸು:—191, ಬೌ ಬಜಾರ, ಕಲ್ಕತ್ತಾ

ಸಹಾಯ! **ಉಪಶಾಂತಿ!!** ಸಹತಾಪ!!!

ಒಂದು ಇನ್ಸೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಸೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ. ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ

			ಮೊದಲನೇ ವರ್ಷ	2ನೇ ವರ್ಷ
ಹೊಸಕೇಸ್ (ಜೀವ)	...	ರೂ.	13,329—0—0	22,549—0—0
,, (ವಿವಾಹ)	...	,,	25,670—0—0	38,933—0—0
ಜುಮ್ಲಾ ಕೇಸುಗಳು	...	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	.	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	..	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	...	,,	10,000—0—0	50,000—0—0
(ಜನರಲ್) ರಕ್ಷಿತ ಧನ	..	,,	37,220—0—0	23,778—3—2
ಲಾಭವು ಶೇಕಡಾ 5ರಂತೆ ಹಂಚಿ ಕೊಡಲ್ಪಟ್ಟಿದೆ				ಶೇಕಡಾ 9ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. "ಅದು 1912ನೇ ಲ್ಯಾಫ್ ಎಸ್ಯೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಾತಿಯನ್ನಿಟ್ಟಿರುವುದು 2 ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು, 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು, 4. ರೂ 3,00,000ಗಿಂತಲೂ ಹೆಚ್ಚಿನ ಭಾದ್ಯತೆಗಳನ್ನು ಕೊಟ್ಟಿದೆ 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9. ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರೆ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

"ಬಂಗಾಳಿ"—14ನೇ ಜನವರಿ 1914—ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡೆ ಇದೆ, ನಾವು ಅದನ್ನು ಓದಿನೋಡಿ ಅದು 61,482 ಪ್ರಾವಿಡೆಂಟ್ ಕೇಸುಗಳನ್ನು ಮಾಡಿಯದೆ ಎಂಬದನ್ನು ತಿಳಕೊಂಡೆವು, ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತ್ತು. ಸಮಾರು 3 ಲಕ್ಷ ಭಾದ್ಯತೆ ಹಣವನ್ನು ಕಂಪೆನಿಯು ಕೊಟ್ಟಿರುವುದು. ಒಳ್ಳೇ ರಕ್ಷಿತ ಧನವಿದೆ, ಇದರ ಸಾಮರ್ಥ್ಯವು ಒಳ್ಳೇ ಮೆನೇಜ್‌ಮೆಂಟಿನಲ್ಲಿ ಜನಸಾಮಾನ್ಯರು ಹೆಚ್ಚಿನ ನಂಬಿಕೆ ಇಡಬಹುದು.

ನಮ್ಮ ಕಂಪೆನಿಯ ಪ್ರತಿನಿಧಿಗಳಿಲ್ಲದ ಸ್ಥಳಗಳಲ್ಲಿ ಮಾನ್ಯ ಮತ್ತು ಸಮರ್ಥರಾದ ಏಜಂಟರುಗಳು ಬೇಕಾಗಿವೆ. ಎಲ್ಲಾ ವಿಧದ ತಿಳುವಳಿಕೆಗಳಿಗೆ—

ವಿಳಾಸ:— **ಲಕ್ಷ್ಮಣ ರಾವ್ ಬ್ರದರ್ಸ್,**
[illegible]

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ಮುರಬ್ಬಾ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾಬ್ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾಬ್ ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಮೆದುಳಿಗೆ ಬಲವನ್ನು ಕೊಡುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಪಂಜಾಬ್ ಸಾಲಾಮಿಸ್ರಿ ಮುರಬ್ಬಾವು — ತಾಂಬ್ರ ಮತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.

ಈ ಮುರಬ್ಬಾವು "ಪಂಜಾಬು ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಗಳವರೆಗೆ ಆಣೆ 6.

ನಮ್ಮ ಏಜಂಟರು:— ಡಿ. ಸಯ್ಯದ್ ಉಸ್ಮಾನ್ ಎಂಡ್ ಕೊ.
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ಕೃಷ್ಣವಿಲಾಸ ಟ್ರೇಡಿಂಗ್ ಕಂಪೆನಿ,

ಗಿರಗಾಂ, ಮುಂಬಯಿ.

ಮಾನ್ಯ ಗೃಹಸ್ಥರೇ,

ತಮ್ಮ ಕಡೆಯ ಹಲವು ಮಂದಿ ಗೃಹಸ್ಥರು ವರ್ತಮಾನ ಪತ್ರಗಳಲ್ಲಿ ಕೊಟ್ಟಿರುವ "ಪ್ರಸಿದ್ಧ ಪತ್ರಿಕೆ"ಗಳು ಹೊಗಳಿ ವಿವರಿಸುವ ಸಾಮಾನುಗಳನ್ನು ಇಲ್ಲಿಗೆ ಬರೆದು ತರಿಸಿಕೊಳ್ಳುತ್ತಿರುವಲ್ಲಿ ಆ ವಸ್ತುಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಬರೆದಿರುವಂತೆ ಚನ್ನಾಗಿರುವುದರ ಬದಲಿಗೆ ಬಹಳ ಹಲಕೀ ಸಾಮಾನುಗಳಿದ್ದು ಅವುಗಳಿಗೆ ಕೊಟ್ಟ ಹಣ ದುರ್ವ್ಯಯ ಮಾಡಿದಂತೆ ಆಯಿತಲ್ಲಾ ಎಂದು ವ್ಯಸನಪಡುತ್ತಿರುವದು ನಮ್ಮ ತಿಳುವಳಿಕೆಗೆ ಬಂದದೆ. ನಾವು ಹಲವು ವರ್ಷಗಳಿಂದ ಪರವೂರ ಗೃಹಸ್ಥರಿಗೆ ಇಲ್ಲಿಂದ ಅತ್ಯುತ್ಕೃಷ್ಟವಾದ ವಸ್ತುಗಳನ್ನು ಪೇಟೆಯಿಂದ ಬಹಳ ಚೌಕಶೀಯಿಂದ ಕಡಿಮೆ ಖರೀದಿಗೆ ಕೊಂಡುಕೊಂಡು ರವಾನಿಸುತ್ತಿರುವುದು ಸಮಸ್ತರಿಗೂ ಗೊತ್ತೇ ಇದ್ದ ವಿಷಯವಾಗಿದೆ. ಆದುದರಿಂದ ಎಲ್ಲಾ ಗೃಹಸ್ಥರು ತಮಗೆ ಮುಂಬಯಿಯಿಂದ ಏನೇ ವಸ್ತುಗಳು ಬೇಕಿದ್ದರೂ ನಮಗೆ ಬರೆದಲ್ಲಿ ನಾವು ಅವುಗಳನ್ನು ಪೇಟೆಯಿಂದ ಕಡಿಮೆ ಕಿಮ್ಮತಿಗೆ ತಕ್ಕೊಂಡು ಏ. ಪಿ. ಟಪ್ಪಾಲು ಮೂಲಕ ಕಳುಹುವೆವು. ಈ ಸಂಗತಿಯನ್ನು ತಮ್ಮ ಮಿತ್ರಬಾಂಧವರೊಡನೆ ಪ್ರಚಾರಪಡಿಸಬೇಕಾಗಿ ನಾವು ನಮ್ಮ ಎಲ್ಲಾ ಗೃಹಸ್ಥರನ್ನು ಬೇಡುವೆವು.

ವಾಚುಗಳು. ನಮ್ಮಲ್ಲಿ ವೆಸ್ಟೆಂಡ್, ಫೇವರ್ ಲೂಬಾ, ಬರ್ನ ಮೊದಲಾದ ಕಂಪನಿಯ ವಾಚು ಮತ್ತು ಗಡಿಯಾರಗಳು ಆಯಾಯ ಕಂಪನಿಯಲ್ಲಿ ಮಾರಾಟ ಮಾಡುವದಕ್ಕಿಂತ ಕಡಿಮೆ ಬೆಲೆಗೆ ದೊರೆಯುತ್ತವೆ.

ರೂಪಾಯಿ ಹತ್ತು ಯಾ ಹೆಚ್ಚಿನ ಬೆಲೆಯ ಸಾಮಾನುಗಳಿಗೆ ಬರೆಯುವವರು ರೂಪಾಯಿ ಒಂದನ್ನು ಮುಂಗಡವಾಗಿ ಕಳುಹಿಸಬೇಕು. ಇದನ್ನು ಜುಮಲಾ ಹಣದಿಂದ ಕಳೆಯುವೆವು.

Krishnavilasa Trading Company.

ಅಚ್ಚಾಗುತ್ತಲಿದೆ! ಅಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ಪಂಚಾಂಕೀ ಮರಾಠೀನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಅಗೋಸ್ತು ತಿಂಗಳ ಆಖೈರ ಒಳಗೆ ಪ್ರಕಾಶಿತವಾಗುವದು. ಈ ನಾಟಕದ ಕಥಾನಕವು ಹಳೇದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕ ಜನರು ಈ ಸಂದರ್ಭವನ್ನು ಬಿಡಲಾಗದು. ಬೆಲೆ 10 ಆಣೆ, ಟ. ಹಾ. ಬೇರೆ.

ಜುಲೈ ಆಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರೆದು, ಓರ್ಡರುಗಳನ್ನು ರಿಜಿಸ್ಟರ್ ಮಾಡುವ ಗ್ರಾಹಕರಿಗೆ 8 ಆಣೆ. ಟ. ಹಾ. ಬೇರೆ. ಹಣವನ್ನು ಮುಂಗಡವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅಥವಾ ಮನಿಆರ್ಡರು ದ್ವಾರಾ ಕಳುಹಿಸಬೇಕು.

ತ್ವರೆಮಾಡಿರಿ!!!

ಕಲ್ಯಾಣಪುರ ಮಂಗೇಶರಾವ್,

[illegible], ದ. [illegible]

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ.—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಗಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ ಸಾವಿರಾರು ಡಾಕ್ಟರರು, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲಿ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತು ಆಣೆ ೮ ಡಜನ್ 1ಕ್ಕೆ ರೂ. 5 0 0. ವಿ. ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ — ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಧಾತುಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್‌ಮಾರ್ಕ್ 0—6—0 3 ಡಬ್ಬಿಗಳಿಗೆ 0—15—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ ಇದರಲ್ಲಿ ಹಲವು ನಮೂನೆಯ ಔಷಧಗಳಿವೆ ಒಳ್ಳೇ ಹೊಳೆಕಿನ ಹುಡಿ ಇದು ಡಬ್ಬಿ 1ಕ್ಕೆ 0—2—0. ಡಜನ್ 1ಕ್ಕೆ 1—2—0. ವಿ ಪಿ ಪ್ರತ್ಯೇಕ

ಸುಂದರಿ ಮುಲಾಮು.

ಮುಖದ ಮೊಡ್ವೆಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ. 0—8—0.

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ. ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳಿಯುವವು

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ದರ ರೂ 1—0—0.

ಕೆ. ನಟರಾಜನ್ ಎಡಿಟ್, ಇಂಡಿಯನ್ ಸೋಸಿಯಲ್ ರಿಫೋರ್ಮರ್: — ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸವೆಲ್, ವೈನಾಡ: — ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತವೆ

ಆರ್ ಆರ್ ಗಂಗೋಲಿ: — ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ದಾಂಡೇಕರ್, ಎಲ್. ಎಮ್. ಎಂಡ್ ಎಸ್: — ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೇನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ

ಅಮೃತಾಂಜನ ಡಿಪೊ.

9 ಜಹಂಗೀರ್ ಸ್ಟ್ರೀಟ್, ಜೋರ್ಜ್ ಟೌನ್, ಮದ್ರಾಸು

109 ಫ್ರೇಯರ್ ರೋಡ, ಮುಂಬಯಿ.

Printed & Published by V. S. Kamath at the Mangalore Trading Association's Sharada Press, Mangalore.

Registered No. 496 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0 ಟಪ್ಪಾಲು ಹಾಸಲು ಸೇರಿ ರೂ. 2—1—0

ಪುಸ್ತಕ VIII | ಮಂಗಳೂರು ತಾ 21ನೇ ಅಗೋಸ್ತು ಶುಕ್ರವಾರ 1914. | ಸಂಚಿಕೆ 34

ಅಬಾಲವೃದ್ಧರು ಓದುವುದಕ್ಕೆ ತಕ್ಕವಾಗಿಯೂ ಬಹು ಮನೋಹರಗಳಾಗಿಯೂ ಇರುವ ಕನ್ನಡ ಗ್ರಂಥಗಳು.

(ಮದ್ರಾಸು ಗವರ್ನಮೆಂಟ್ ಕನ್ನಡ ಟ್ರಾನ್ಸ್‌ಲೇಟರ್ ಮ| ರಾ| ಬಿ. ರಾಮರಾವ್ ಎಂ. ಎ. ಎಲ್. ಎಲ್. ಬಿ. ಯವರಿಂದ ಕನ್ನಡಿಸಲ್ಪಟ್ಟವು)

೧. ಸತ್ಯರಾಜಾ ಪೂರ್ವದೇಶ ಯಾತ್ರೆಗಳು—ಭಾಗ ೧— ಸ್ತ್ರೀಮಲೆಯಾಳವೆಂಬ ಸಂಪೂರ್ಣ ಕಥೆ. ರಾವ್ ಬಹದ್ದೂರ್ ವೀರೇಶ ಲಿಂಗಂಪಂತರೆಂಬ ಆಂಧ್ರ ಲೇಖಕ ಶಿರೋಮಣಿಗಳಿಂದ ತೆಲುಗಿನಲ್ಲಿ ಬರೆಯಲ್ಪಟ್ಟ ಬಹು ರಸಭರಿತವಾದ ಕಲ್ಪನಾಕಥೆ ಶುದ್ಧವೂ ಲಲಿತವೂ ಆದ ಕನ್ನಡದಲ್ಲಿ ಪರಿವರ್ತಿತವಾಗಿದೆ. ಮೈಸೂರು ಗವರ್ನಮೆಂಟಿನವರಿಂದಲೂ ಕರ್ಣಾಟ ಮಹಾಜನರುಗಳಿಂದಲೂ ವಿಶೇಷವಾದ ಪ್ರೋತ್ಸಾಹವನ್ನು ಹೊಂದಿದೆ. ಕೆಲವು ಪ್ರತಿಗಳು ಮಾತ್ರ ಉಳಿದಿವೆ. **ಬೆಲೆ ೮ ಆಣೆ**

೨. ಕೃಷ್ಣಾಕುಮಾರಿ—ಈ ಅದ್ಭುತವಾದ ವಚನ ನಾಟಕವು ಮೂಲ ಬಂಗಾಳಿ ಭಾಷೆಯಲ್ಲಿ ಕವಿಶ್ರೇಷ್ಠ ಮ. ಮ. ಸೂದನ ದತ್ತರಿಂದ ಬರೆಯಲ್ಪಟ್ಟು ನೂತನವಾಗಿ ಕನ್ನಡಿಸಲ್ಪಟ್ಟದೆ ಆರ್ಯ ಕುಲಾಂಗನೆಯರಿಗೆ ಆದರ್ಶ ಸ್ವರೂಪಳಾದ ಈ ರಜಪೂತ ಕುಮಾರಿಯ ಜಾಜ್ವಲ್ಯವಾದ ಸ್ವದೇಶ ಭಕ್ತಿಯು ವಾಚಕರನ್ನು ಕ್ಷಣಮಾತ್ರದಲ್ಲಿ ತಲ್ಲೀನರನ್ನಾಗಿ ಮಾಡುತ್ತಿದೆ. ಇಂಥ ಉತ್ಕೃಷ್ಟವಾದ ನಾಟಕವು ಕನ್ನಡದಲ್ಲಿ ಬೇರೊಂದು ಇರುವುದು ಸಂದೇಹವು. ಉತ್ತಮವಾದ "ಗ್ಲೇಜ್" ಕಾಗದದಲ್ಲಿ ಸ್ಫುಟಾಕ್ಷರಗಳಿಂದ ಅಚ್ಚಾಗಿದೆ **ಬೆಲೆ ೧೦ ಆಣೆ.**

೩. ಸದಾಹಾರ ವಿವೇಚನೆ—ಚಿರಸ್ಮರಣೀಯರೂ ಪರಮ ಪೂಜ್ಯರೂ ಆದ ಬ್ರಹ್ಮೀಭೂತ ಶ್ರೀಮದ್ವಿವೇಕಾನಂದ ಸ್ವಾಮಿಯವರ "ಪೂರ್ವ ಮತ್ತು ಪಶ್ಚಿಮ"ವೆಂಬ ದಿವ್ಯವಾದ ಲೇಖನದಿಂದ ಆಹಾರ ವಿಷಯಕವಾದ ಭಾಗಗಳನ್ನು ಮಾತ್ರ ಸಂಗ್ರಹಿಸಿ ಕನ್ನಡಿಸಲಾದ ಈ ಚಿಕ್ಕ ಪುಸ್ತಕದೊಳಗೆ ಅಂತರ್ಗತವಾದ ದಿವ್ಯಾಭಿಪ್ರಾಯಗಳನ್ನು ಆರ್ಯಧರ್ಮಾಭಿಮಾನಿಗಳಾದ ಸಮಸ್ತರೂ ಅಗತ್ಯವಾಗಿ ತಿಳಿದುಕೊಳ್ಳಬೇಕೆಂದು ಸೂಚಿಸುವೆವು. **ಬೆಲೆ ೨ ಆಣೆ.**

ನಿತ್ಯ ಕರ್ಮಾನುಷ್ಠಾನಕ್ಕೆ ಅತ್ಯಂತ ಉಪಯೋಗವಾದ ಕನ್ನಡ ಲಿಪಿಯ ಪುಸ್ತಕಗಳು.

ಋಗ್ವೇದಿ ತ್ರೈಕಾಲಿಕ ಸಂಧ್ಯಾವಂದನಂ 0—3—0, ದೇವಪೂಜಾ ಪದ್ಧತಿ 0—3—0, ಋಗ್ವೇದಿ ಬ್ರಹ್ಮಯಜ್ಞವೈಶ್ವದೇವ 0—3—0, ವಾಯುಸ್ತುತಿ 0—2—0, ದ್ವಾದಶಸ್ತೋತ್ರ 0—2—0, ವಿಷ್ಣುಸಹಸ್ರನಾಮಸ್ತೋತ್ರ 0—2—0, ಪ್ರಾತರಾಹ್ನಿಕ ಪದ್ಧತಿ 0—3—0, ಶ್ರೀಸೂಕ್ತ ಪುರುಷಸೂಕ್ತ 0—1—0, ಗೋಪಿಕಾಗೀತೆ 0—1—0, ಪುರಂದರ ದಾಸರ ಕೀರ್ತನೆಗಳು 0—6—0, ಉದಯ ರಾಗ 0—4—0, ಲಕ್ಷ್ಮೀ ಶೋಭಾನೆ ಹಾಡು 0—2—0, ಹರಿಭಕ್ತಿಸಾರ 0—1—0, ಸ್ವಪ್ನ ಪದ ಮಧ್ವನಾಮ 0—1—6, ತುಲಸೀ ಸಂಕೀರ್ತನೆಗಳು 0—2—0, ಕುಮುದಾ 0—8—0, ಈಗ 0—6—0, ಮಹಾರಾಣಿ ಗೃಹಶೀಲೆ 0—3—0, ಪೇಶ್ವೆನಾರಾಯಣರಾವ್ 0—3—0, ಬಾಲಿಕಾನೀತಿಮಾಲಿಕೆ 0—2—0, ರಾಜಭಕ್ತಿಸಾರ 0—2—0. ಹನುಮದ್ರಾಮಾಯಣ ರೂ. 2—1—0, ಚಂದ್ರಾವಳೀ ವಿಲಾಸ 8 ಆಣೆ, ಆಚಾರ ದರ್ಪಣ 4 ಆಣೆ. ಚಂದ್ರಹಾಸಾಭ್ಯುದಯ 4 ಆಣೆ.

ಈಗಲೇ ಬಂದಿವೆ!

ಗೃಹಕೃತ್ಯದ ಉಪಯೋಗಕ್ಕೂ ವೈದ್ಯರಿಗೂ ಅಗತ್ಯವಾಗಿರುವಂಥಾ ಮತ್ತು ಜ್ವರವನ್ನು ನಿಧಾನಿಸಿಕೊಳ್ಳಲು ಅತ್ಯುಪಯುಕ್ತಗಳಾದಂಥಾ

ಥರ್ಮೊಮಿಟರ್‌ಗಳು.

ಅರ್ಧ ಮಿನಿಟಿನಲ್ಲಿ ಜ್ವರ ಎಷ್ಟುಂಟೆಂದು ತಿಳಿಸುವವುಗಳಿಗೆ ಒಂದಕ್ಕೆ ಕ್ರಯ ರೂಪಾಯಿ 2-12-0. ಯೋಗ್ಯವಾದವುಗಳೆಂತ ಪರೀಕ್ಷಿಸಲ್ಪಟ್ಟು ಸರ್ಟಿಫಿಕೇಟು ಉಳ್ಳವುಗಳಿಗೆ ರೂ. 3, ಗಡಿಯಾರಿನ ಸರಪಣಿಯಂತೆ ಸರಪಣಿ ಇದ್ದು ಅಂಗಿ ಕಿಸೆಯಲ್ಲಿ ಭದ್ರವಾಗಿಡಲಿಕ್ಕೆ ಆಗುವಂಥವುಗಳಿಗೆ ರೂ. 3—4—0.

ಸೆಂಟರೊಡ್ಸ್‌ಗಳು: ಕ್ರಯ 3 ಆಣೆ.

ಪರಿಮಳ ದ್ರವಗಳಂತೆ ದ್ರವಿಸಿ ಹೋಗುವಂಥವುಗಳಲ್ಲ ಮತ್ತು ಸೆಂಟೆಡ್ ಕಾರ್ಡುಗಳಂತೆ ಬೇಗನೆ ಚಿಂದಿಯಾಗಿ ಹೋಗುವಂಥವುಗಳಲ್ಲ. ಪರಿಮಳ-ಸಾರವನ್ನು ಘನಪದಾರ್ಥರೂಪದಲ್ಲಿ ಸಂಗ್ರಹಿಸಿರುವ ಕಡ್ಡಿಗಳು.

ಡೊಪಾನ್!

ಮಳೆಗಾಲದಲ್ಲಿ ಸ್ಲಾಕಲುಗಳಿಗೆ ನೀರು ತಾಗಿ ತುಕ್ಕು ಹಿಡಿಯುವುದರಿಂದ ಸ್ಲಾಕಲುಗಳನ್ನು ಉಪಯೋಗಿಸುವುದು ಸಾಧ್ಯವಲ್ಲ. ಆದರೆ ಸ್ಲಾಕಲುಗಳಿಗೆ 'ಡೊಪಾನ್'ನ್ನು ಹಚ್ಚಿಬಿಟ್ಟರೆ ಇವುಗಳನ್ನು ನೀರಿನಲ್ಲಿ ಅದ್ದಿದರೂ ತುಕ್ಕು ಹಿಡಿಯದು. ಇದರ ಬಾಟ್ಲಿ ಒಂದಕ್ಕೆ ರೂ. 1—12—0.

ರಜೆ ಕಾಲದ ರಜೆಯು ತೀರಿ ಶಾಲೆಗಳು ತೆರೆಯಲ್ಪಟ್ಟಾಗಿವೆ.

ವಿದ್ಯಾರ್ಥಿಗಳೆಲ್ಲವರಿಗೆ ಅನುಕೂಲವಾದ ದರದ ಫೌಂಟನ್ ಪೇನುಗಳು ಈಗಲೇ ಬಂದಿವೆ. ಕ್ರಯ 1ಕ್ಕೆ ರೂ. 1—14—0ರಿಂದ ರೂ. 7—14—0ರ ವರೆಗಿರುವುದು. ನೆಪ್ಚುನ್, ಬ್ಲೆಕ್‌ಬರ್ಡ್, ಅಲೆಕ್ಸಾಂಡ್ರಾ, ವಾಟರ್‌ಮೇನ್, ಸ್ವಾನ್, [illegible], [illegible], ಆನಂದ ಈ ಎಲ್ಲಾ ಜಾತಿ ಪೇನುಗಳಿರುವುವು.

ವಿಳಾಸ:—

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್ ರಥಬೀದಿ ಮಂಗಳೂರು

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ಜಬಾರ್ ಬತ್ತಿ ಸೇರು 1ಕ್ಕೆ	12-0-0	A ಅರಗಜ ತೊಲೆ 1ಕ್ಕೆ	2-0-0
ಅಂಬರ್ ಬತ್ತಿ ,, ,,	6-0-0	B ಅರಗಜ ,, ,,	1-0-0
ಕಸ್ತೂರಿ ಬತ್ತಿ ,, ,,	3-0-0	ಕಸ್ತೂರಿ ಬಿಲ್ಲೆ ,, ,,	2-0 0
ಜವಾಜಿ ಬತ್ತಿ ,, ,,	2-0-0	ಜವಾಜಿ ಬಿಲ್ಲೆ ,, ,,	1-0 0
ಪುನ್ನಾಗಿನ ಬತ್ತಿ ,, ,,	1-8-0	ಕೇಸರಿ ಬಿಲ್ಲೆ ,, ,,	0-8-0
ಪನ್ನೀರ್ ಬತ್ತಿ ,, ,,	0-12 0	ತಾಂಬೂಲ ರತ್ನ ಸೀಸೆ 1ಕ್ಕೆ	0-4-0
ಮಸಾಲಾ ಬತ್ತಿ ,, ,,	0-6-0	ದಶಾಂಗ ಡಬ್ಬಿ 1ಕ್ಕೆ	0-4 0

ಮೇನೇಜರ್, "ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ

THE BOMBAY LIFE ASSURANCE CO. LTD.

(Established 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA

Extract from the Actuary's Report:—

"There can be no doubt that the Policy Contracts are well secured".

Chairman.—The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co Ltd., The Tata Mills Co Ltd., Managing Agent of Messrs Marsland Price & Co Ltd., and fellow of the Bombay University.

Actuary.—George King Esq F F A, F I A, London)

Medical Referee —Dr R. Row, M. D D. Sc. London)

Managing Director —Framrose R Joshi, Justice of the Peace, The Honorary Presidency Magistrate & etc.

Wanted Agents on very liberal commission.

Apply for full particulars to—**Kochikar Bros**, Udipi, Chief Agents for South Canara, Malabar, Travancore and Cochin.

ಮುಂಬಯಿ ಲೈಫ್ ಇನ್ಶುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು)

ಪ್ರಧಾನ ಆಫೀಸು. ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು

"ವಿಮೆದಾರರ ಬಾಧ್ಯತೆಗಳ ಬಗ್ಗೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚ್ಯುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು:— ಹುಮಾನವಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೊಲಿಕ್ ಮಾರ್ಸ್‌ಲೆಂಡ್ ಪ್ರೈಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೋಗಳವರು.

ಎಕ್ಚ್ಯುಯರಿ:—ಮಿ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)

ಮೆಡಿಕಲ್ ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ. ಡಿ. ಎಸ್. ಸಿ. (ಲಂಡನ್).

ಮೆನೇಜಿಂಗ್ ಡೈರೆಕ್ಟರ್:—ರಾ| ಫ್ರೆಮ್‌ರೋಜ್ ಆರ್. ಜೋಶಿ ಒನರೆರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು.

ಏಜಂಟರು ಬೇಕಾಗಿರುವರು. ಧಾರಾಳವಾದ ಕಮಿಶನ್ ಕೊಡೋಣಾಗುವದು. ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್,
ಮುಖ್ಯ ಏಜಂಟರು, ಉಡುಪಿ.

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಬಾಳುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೂಪದಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವವು ರಕ್ತದಲ್ಲಿ ಸ್ಥಿತವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡಿಯುವವು ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಶ್ವಾಸ, ಮೂತ್ರ, ಯಕೃತ್, ಪ್ಲೀಹ, ಹೃದಯ ಆದಿ ಎಂಬ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆದುಕೊಂಡಿರುತ್ತವೆ. ಜೀವ ಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿಯುತ್ತದೋ ಆವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಪ್ಪಂಶವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ನೆಲೆಗೊಳ್ಳುವವು ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಚತನವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನು ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ಚರ್ಮರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಉಪಯೋಗಿಸತಕ್ಕ ಕ್ರಮವು ಇದರೊಂದಿಗೇನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ ಚಾರ್ಜು ಪ್ರತ್ಯೇಕ

ಹೆಚ್ಚಾಗಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು

ವಿಳಾಸ — ಯಮ್. ವಿ ಶಾಸ್ತ್ರಿ.
ಆಯುರ್ವೇದ ಭೂಷಣ,
ಮಂಗಳೂರು

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,

ಸುಗಂಧಕಾರ್, ಮೈಸೂರು.

ಮುಳಿಯಿಲ್‌ರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಪ್ಪಿ 1ಕ್ಕೆ ಕ್ರಯ 10 ಆಣೆ. ಇದು ಎಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ.

. .. . ಮಸ್ತಕಾಮೃತ ತೈಲವನ್ನು ಕಳೆದ ಐದು ವರುಷಗಳಿಂದ ಉಪಯೋಗಿಸಿಕೊಳ್ಳುತ್ತಿರುವುದರಿಂದ ನನ್ನ ಮುದೀ ಮೆದುಳು ಯೌವ್ವನ ಪ್ರಾಯದಲ್ಲಿರುವುದು ಈ ದಿವ್ಯ ತೈಲ ಕ್ಕಿಂಗನೆ ವಿನಹಾ ನಾನು ಕೆಲಸಮಾಡಲಾರೆನು; ನನ್ನ ನೇತ್ರೇಂದ್ರಿಯಗಳು ವಿಶ್ರಾಂತವು

ರೆವೆರೆಂಡ್ ಇ. ಸೋನ್ಸ್,
ತಾ 15—4—13. ಮುಲ್ಕಿ.

ಮುಳಿಯಿಲ್ಸ್ ಹೇರ್ ಓಯ್ಲ್—ಕ್ರಯ 12 ಆಣೆ. ಕೂದಲಿಗೆ ಅಮೃತದಂತಿರುವ ನಿಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನೊಂದು ಕುಪ್ಪಿ ವಿ ಪಿ ಮೂಲಕ ರವಾನಿಸಿರಿ.

ಮಿಸಿಸ್. ವೈ. ಕುರಿಯಾನ್,
ತಾ. 23—5—13. ಗ್ರೀನ್‌ವಿಲ್ಲಾ, ಕಲ್ಲಿಕೋಟೆ.

... .ಮುಳಿಯಿಲ್ಸ್ ಹೇರ್ ಓಯ್ಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ. ಇನ್ನೊಂದು ಡಜನ್ ಕುಪ್ಪಿಗಳನ್ನು ಆದಷ್ಟು ತ್ವರ್ಯದಲ್ಲಿ ರವಾನಿಸಿರಿ.

ಮಿಸ್. ಎಸ್. ಸೋನ್ಸ್,
21ನೇ ಒಕ್ಟೋಬರ 1913. ಸ್ಕೂಲು ಮಿಸ್ಟ್ರೆಸ್, ಮಂಗಳೂರು

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ. ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ

ಚತುರ್ಥಿ ಮಾತ್ರೆಯನ್ನು ತಕ್ಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ ಇದು ಒಳ್ಳೇ ಗುಣಕರವೆಂಬದಾಗಿ ಹೇಳುವಲ್ಲಿ ಅನುಮಾನವಿಲ್ಲ.

ಎ. ಪೊಕ್ರು ಹೆಗ್ಗಡೆ,
ತಾ. 13—6—13. ಕುಕ್ಕಛೆ, ಕಾರ್ಕಳ

ವಯೊಲೆಟ್ ಹೇರ್ ಓಯ್ಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ತಲೆವೇದನೆಯು ಗುಣಪಡುವದು. ಕಾಯಂ ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ. ಅತಿ ಘೋರವಾದ ತಲೆನೋವಿನಿಂದ ಶ್ರಮೆಪಡುತ್ತಿದ್ದ ನನ್ನ ಹೆಂಡ್ತಿಗಳಿಗೆ ತಮ್ಮಿಂದ ತಕ್ಕೊಂಡ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಿಲ್ಲದೆ ಅವಳು ಇರಲಾರಳು ಹೆಚ್ಚಿನ ರೋಗಿಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲೆಂಬದು ನನ್ನ ಪ್ರಾರ್ಥನೆಯಾಗಿದೆ.

M. JACOBI,
4—7—13 *Hd Clerk*, CALICUT.

ವಿಳಾಸ:— **ಮುಳಿಯಿಲ್ ಎಂಡ್ ಸನ್ಸ್**, ಕಾಸರಗೋಡು, ದ. ಕ

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರೆಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಅತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ನಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ, ದ್ವಿಟೊಬಿಲ್ಡಿಂಗ್
2. ಜುಬಿಲಿ ಕೇಶ್ ಬಜಾರ್, ಬೆಂಗಳೂರು. ಮಂಗಳೂರು.

MUSICAL MART

Kavi & Sons,

MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ,. ಒಳ್ಳೇ ಸ್ವರಜ್ಞಾನಿಗಳಾದ **ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೋನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. ಹೇಂಡ್ ಹಾರಮೋನಿಯಮ್ ಸಿಂಗಲ್ ರೀಡ್ ರೂ. 25ರಿಂದ 32ರ ವರೇಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೇಗೂ, ಫೋಲ್ಡಿಂಗ್ ರೂ. 70, 75, 105.**

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ್, ಮಂಗಳೂರು ದ. ಕ.

ಜ್ಯೋತಿಷ್ಯ ಹೊಸ ಗ್ರಂಥಗಳು

ಸಟೀಕಾ ತಾತ್ಪರ್ಯ ಗ್ರಹಲಾಘವ.

ನವೀನವಾಗಿಯೂ ಅತ್ಯುಪಯುಕ್ತವಾಗಿಯೂ ಇರುವ ಪುಸ್ತಕವು. ಗ್ರಹಗಣಿತವನ್ನು ತಿಳಿಯುವುದಕ್ಕೆ "ಸಿದ್ಧಾಂತಶಿರೋಮಣಿ" ಮೊದಲಾದ ಅನೇಕ ಗ್ರಂಥಗಳಿದ್ದರೂ ಗ್ರಹಲಾಘವದಂತಹ ಸುಲಭವಾಗಿಯೂ ವಿಶದವಾಗಿಯೂ ಇರುವದು ಮತ್ತಾವದೂ ಅಲ್ಲವೆಂಬ ವಿಷಯವು ಗ್ರಹಗಣಿತಶಾಸ್ತ್ರ ಪರಿಚಯವುಳ್ಳವರಿಗೆ ವೇದ್ಯವೇ ಇರಬಹುದು. ಈ ಗ್ರಹಲಾಘವಕ್ಕೆ "ಮಲ್ಲಾರೀ ಟೀಕೆ" ಎಂಬ ಸಂಸ್ಕೃತ ವ್ಯಾಖ್ಯೆಯೂ ಜಯರಾಮಶಾಸ್ತ್ರಿ ಕೃತವಾದ ಹಿಂದೀ ಟೀಕೆಯೂ ಕನ್ನಡಿಗರಿಗೆ ಸುಲಭಗ್ರಾಹ್ಯವಲ್ಲವಾದುದರಿಂದ ಕನ್ನಡಿಗರಾದ ವಿದ್ಯಾರ್ಥಿಗಳಿಗೂ ಸುಬೋಧವಾಗುವಂತೆ ಮೇಲ್ಕಂಡ ಟೀಕೆಗಳ ಆಧಾರದೊಡನೆ ಪಂಡಿತರಿಂದ ತಿಳಿಗನ್ನಡದಲ್ಲಿ ಉದಾಹರಣೆಗಳೊಡನೆ ಟೀಕೆಯನ್ನು ಬರೆಯಿಸಿ ದಪ್ಪ ಕಾಗದದಲ್ಲಿ ಸುರೇಖ ಅಕ್ಷರಗಳಿಂದ ಮುದ್ರಿಸಿರುತ್ತದೆ. ಈ ಗ್ರಂಥದಲ್ಲಿ ಮಧ್ಯಮಗ್ರಹಸಾಧನೆ, ಗ್ರಹಸ್ಪುಟ, ಲಂಕೋದಯಾದಿ ನಿರೂಪಣ, ಲಗ್ನಸಾಧನೆ ಸೂರ್ಯ ಚಂದ್ರ ಗ್ರಹಣನಿರ್ಣಯ, ಅಸ್ತೋದಯಾದಿಗಳು, ಗ್ರಹಚ್ಛಾಯೆ, ನಕ್ಷತ್ರಚ್ಛಾಯೆ, ಶೃಂಗೋನ್ನತಿ, ಅಹರ್ಗಣಾನಯನವೇ ಮೊದಲಾದ ೨೬ ವಿಷಯಗಳ ಅಡಕವಾಗಿವೆ. ಈ ಪುಸ್ತಕವನ್ನು ಪರಿಶೀಲಿಸಿದರೆ ಇದರ ಯೋಗ್ಯತೆಯೂ ಉಪಯೋಗವೂ ತೋರಿಬರುವುದು ಇದರ ಕ್ರಯ ೧ಕ್ಕೆ ೧—೮—೦. ಟ. ಖ. ೩ ಆಣೆ.

ಸಟೀಕಾ ತಾತ್ಪರ್ಯ ಮುಹೂರ್ತ ಚಿಂತಾಮಣಿ

ಇದರಲ್ಲಿ ಶುಭಾಶುಭ ಪ್ರಕರಣ, ನಕ್ಷತ್ರ ಪ್ರಕರಣ, ಸಂಕ್ರಾಂತಿ ಪ್ರಕರಣ ಗೋಚರ ಪ್ರಕರಣ, ಸಂಸ್ಕಾರ ಪ್ರಕರಣ, ವಿವಾಹ ಪ್ರಕರಣ, ವದೂಪ್ರವೇಶ ಪ್ರಕರಣ ದ್ವಿರಾಗಮನ ಪ್ರಕರಣ, ಅಗ್ನ್ಯಾಧಾನಪ್ರಕರಣ, ರಾಜಾಭಿಷೇಕಪ್ರಕರಣ, ಯಾತ್ರಾ ಪ್ರಕರಣ, ವಾಸ್ತುಪ್ರಕರಣ, ಗೃಹಪ್ರವೇಶಪ್ರಕರಣ, ಉಪಸಂಹಾರ ಪ್ರಕರಣ, ಈ ಹದಿನಾಲ್ಕು ಪ್ರಕರಣದಲ್ಲಿ ೪೪೩ ವಿಷಯಗಳನ್ನೊಳಗೊಂಡಿದೆ. ಈ ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ, ಸೌಲಭ್ಯವೂ ಗೊತ್ತಾಗುವದು ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಶದವಾಗಿ ತಿಳಿಯುವಂತಿರುವದು

ಇದರ ಕ್ರಯ ೧ಕ್ಕೆ ೧—೦—೦. ಟಪ್ಪಾಲ ಹಾಸಲು ೩ ಆಣೆ.

ಸಟೀಕಾ ತಾತ್ಪರ್ಯ ಸರ್ವ ಜ್ಯೋತಿಷ್ಯರತ್ನ

ಜ್ಯೋತಿಶ್ಶಾಸ್ತ್ರವನ್ನು ತಮ್ಮ ತಿಳಿವಳಿಕೆಗೂ ಅನುಭವಕ್ಕೂ ತೆಗದುಕೊಳ್ಳುವದಕ್ಕೆ ತಕ್ಕ ಜ್ಯೋತಿಷಗ್ರಂಥಗಳು ಕರ್ನಾಟಕ ಭಾಷೆಯಲ್ಲಿ ಬಹಳ ಕಡಿಮೆ. ಒಂದೆರಡು ಇದ್ದರೂ ಕಷ್ಟಸಾಧ್ಯವಾಗಿಯೂ ಅಸಂಪೂರ್ಣವಾಗಿಯೂ ಇರುವವು. ಈ ಕೊರತೆಯನ್ನು ಹೋಗಲಾಡಿಸುವದಕ್ಕಾಗಿ ಮರಾಠಿ, ಹಿಂದಿ, ಮೊದಲಾದ ಭಾಷಾಂತರಗಳಲ್ಲಿದ್ದ ಅನೇಕ ಗ್ರಂಥಗಳನ್ನು ಶೋಧಿಸಿ ಲಗ್ನಭಾಗ, ಮುಹೂರ್ತಭಾಗ, ಕೆಲವು ಗಣಿತಭಾಗಗಳು, ಜಾತಕಭಾಗ, ಪ್ರಶ್ನೆಭಾಗ, ಗ್ರಹಫಲಗಳು, ಶಕುನಭಾಗ, ಹಸ್ತಸಾಮುದ್ರಿಕೆ, ಯಂತ್ರ, ಮಂತ್ರ, ತಂತ್ರ ಮೊದಲಾದ ಅತ್ಯುಪಯುಕ್ತವಾದ ವಿಷಯಗಳನ್ನು ಸ್ಪಷ್ಟವಾಗಿಯೂ ಸುಲಭವಾಗಿಯೂ ತಿಳಿಯುವಂತೆ ಬರೆದಿರುವದಲ್ಲದೆ ಆಯಾ ಪ್ರಕರಣಾನುಗುಣವಾಗಿ ಚಕ್ರ, ಕೋಷ್ಟಕ, ವಿವರಣೆ ಉದಾಹರಣೆ ಮೊದಲಾದವುಗಳನ್ನೂ ಬರೆದು ಸುಂದರವಾದ ಅಕ್ಷರಗಳಿಂದ ಒಳ್ಳೆಯ ಕಾಗದದಲ್ಲಿ ಶುದ್ಧವಾಗಿ ಮುದ್ರಿಸಿದೆ. ಈ ಪುಸ್ತಕವು ೬೨೮ ವಿಷಯಗಳನ್ನೊಳಗೊಂಡಿದೆ. ಪುಸ್ತಕವನ್ನು ಓದಿ ನೋಡಿದರೆ ಇದರ ಉಪಯೋಗವೂ ಸೌಲಭ್ಯವೂ ಗೊತ್ತಾಗುವದು ಜ್ಯೋತಿಷ್ಯರಿಗೆ ಅಲ್ಲದೆ ಸಾಮಾನ್ಯರಿಗೂ ವಿಷದವಾಗಿ ತಿಳಿಯುವಂತಿರುವದು, ಇದರ ಕ್ರಯ ೧ಕ್ಕೆ ರೂ ೨—೦—೦ ಟಪ್ಪಾಲ ಹಾಸಲು ೪ ಆಣೆ.

ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು, ವೀರಶೈವ ಮತಗ್ರಂಥಗಳು, ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರಿಯುತ್ತವೆ ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು, ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ನಾಟಕ ಬುಕ್ ಡಿಪೊ ಏಜಂಟ್, ಬಳ್ಳಾರಿ

ವಿವಾಹ ಮಂಟಪ

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡೆದಿದೆ. ಕಣ್ಣಾನೂರ, ಮೈಸೂರು, ನಾಗಪುರ, ವಿಶಾಕಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ!

ಸ್ಟೀವನ್ಸ್ ಎಂಡ್ ಸನ್ಸ
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ,
ಕಂಪನಗುಡ್ಡೆ, ಮಂಗಳೂರು

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಪಕ್ವಗೈದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಕಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಅದರಿಂದ ಪಕ್ವಗೈದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಅದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇವರ ಉತ್ತರ ಫಲವು ಆಶ್ಚರ್ಯಕರವಾಗಿದೆ ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಫೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ ಈ ಮಿಶ್ರಣವು ಸುರಸವಾಗಿರುತ್ತದೆ ಇದು ಎಲ್ಲಾ ಕಡೆಗಳಲಿ ಮಾರಲ್ಪಡುವದು. ಮತ್ತು ಕನ್ನಡ ಬಲ್ಲವರೆಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟಲಿಗೆ 1—12—0.

ದಿ. ಊಲನ್ ಮಾರ್ಟ್‌ಗ. ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨ ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ನಿತ್ರಾಣಿಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸಶಕ್ತರನ್ನಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳೆಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ —ಈ ಸುವಾಸಿಕ ತೈಲ್ಯವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ ಬಾಟ್ಲಿ 1ಕ್ಕೆ 1—0—0

೫ ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ ಅನುಭವಸಿದ್ಧ 2—0—0

೭ ಆನಂದವನವಿಲಾಸ—ಇದು ಡ್ಯಾಬಿಟೀಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ ವೈದ್ಯರಿಂದ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ್ಯ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ ಸಜ ಟರು ದೇಕು ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಅಚ್ಚಾಗುತ್ತಲಿದೆ! ಅಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ
ಅಥವಾ
ಪಾತಿವ್ರತ್ಯ ವಿಜಯ.

ಎಂಬ ಪಂಚಾಂಕೀ ಮರಾಠಿನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಆಗೋಸ್ತು ತಿಂಗಳ ಆಖೈರ ಒಳಗೆ ಪ್ರಕಾಶಿತವಾಗುವದು. ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕ ಜನರು ಈ ಸಂದರ್ಭವನ್ನು ಬಿಡಲಾಗದು. ಬೆಲೆ 10 ಆಣೆ. ಟ. ಹಾ. ಬೇರೆ.

ಜುಲೈ ಆಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಂಡು, ಓರ್ಡರುಗಳನ್ನು ರಿಜಿಸ್ಟರ್ ಮಾಡುವ ಗ್ರಾಹಕರಿಗೆ 8 ಆಣೆ. ಟ. ಹಾ. ಬೇರೆ. ಹಣವನ್ನು ಮುಂಗಡವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅಥವಾ ಮನಿಆರ್ಡರು ದ್ವಾರಾ ಕಳುಹಿಸ

ತ್ವರೆಮಾಡಿರಿ!!
ಕಲ್ಯಾಣಪುರ ಮಂಗೇಶರಾವ್,
ಕಲ್ಯಾಣಪುರ, ದ. ಕನ್ನಡ.

ನರೆ ಕೂದಲನ್ನಿಟ್ಟುಕೊಂಡು
ಮುದುಕರಾಗಿ ಕಾಣುವದೇಕೆ?

☞ ದರ್ಬಾರ್ ಕೂದಲು ರಂಗು.

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯ ಸಮರ್ಥರಂತೆ ಕಾಣುತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚು ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪತರದ ದಲಿಗೆ ಹಚ್ಚುವ ಬಣ್ಣಗಳ ರಂಗುಗಳು ತುಂಬಾ ಕೀಳುಜಾತಿಯವು ಹಚ್ಚಿದ ಮೇಲೆ ಕೂದಲು ಕೆಂಚಾಗಿ ಅಸಂಪ್ಯವಾಗಿ ಕಾಣುತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷ ಪಡುವಿರಿ.

ಕ್ರಯ ಬುರುಸು ಸಮೇತ ಬಾಟಿ 1ಕ್ಕೆ ರೂ. 1.
ಅಂಚೆ ಹಾಸಲು ಆಣೆ 0—4—0.

ವಿಳಾಸ:— ವಿ. ಎ. ಎಸ್. ಪಾಣಿ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.
V A S PANI,
No. 3, Erulappen Street, Madras.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಏಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವೂ ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅಂದೆಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ತಮ್ಮ ವಿಳಾಸ:—ನರಸಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 21ನೇ ಆಗೋಸ್ತು 1914.

ಯುದ್ಧದ ಉದ್ದೇಶವೇನು?

ಯುರೋಪ ಖಂಡದಲ್ಲಿ ನಡಿಯುತ್ತಿರುವ ಈ ಘೋರವಾದ ಯುದ್ಧದ ಉದ್ದೇಶವನ್ನು ತಿಳಿಯಬೇಕಾದರೆ ಯುದ್ಧದಲ್ಲಿ ಸೇರಿರುವ ದೇಶಗಳು ಯುರೋಪ ಖಂಡದಲ್ಲಿ ಎಲ್ಲೆಲ್ಲಿರುವುವೆಂಬುದನ್ನು ಗೊತ್ತು ಮಾಡಿಕೊಳ್ಳಬೇಕು. ಮತ್ತು ಯುದ್ಧದ ಸ್ವಲ್ಪ ಕಾಲದ ಮೊದಲು ಈ ರಾಜ್ಯಗಳಲ್ಲಿ ಪರಸ್ಪರ ಭಾವನೆಯು ಹೇಗಿತ್ತೆಂಬುದನ್ನು ವಿಚಾರಿಸಿಕೊಳ್ಳಬೇಕಾಗಿರುತ್ತದೆ ರುಶ್ಯ ದೇಶವು ಯುರೋಪ ಖಂಡದ ಪೂರ್ವ ಭಾಗದಲ್ಲಿರುವ ಯುರೋಪಿಯ ಇತರ ದೇಶಗಳಿಗಿಂತ ಅತಿ ವಿಸ್ತಾರವಾದ ದೇಶವಾಗಿರುವುದು ಸಾಧಾರಣವಾಗಿ ಯುರೋಪ ಖಂಡದ ಅರ್ಧಾಂಶವಾಗಿರುವ ಈ ದೇಶವು ಪೂರ್ವದಲ್ಲಿ ಪರ್ವತ ಶ್ರೇಣಿಗಳಿಂದ ಆಸ್ಯ ಖಂಡದಿಂದ ಪ್ರತ್ಯೇಕಿಸಲ್ಪಟ್ಟಿರುವುದು ಉತ್ತರದಲ್ಲಿ ಧೃವಸಾಗರವೇ ಇದರ ಮೇರೆಯಾಗಿರುವುದು ದಕ್ಷಿಣದಲ್ಲಿ "ಬ್ಲೇಕ್‌ಸಿ ಎಂಬ ಕಪ್ಪು ಸಮುದ್ರ ಮತ್ತು ಆಸ್ಯ ಖಂಡದಲ್ಲಿರುವ ಟರ್ಕಿಯಾ ಪ್ರಾಂತ್ಯಗಳೂ ಇರುವವು ಈ ಕಪ್ಪು ಸಮುದ್ರಕ್ಕೆ ತಾಗಿ ದಕ್ಷಿಣದಲ್ಲಿ ಟರ್ಕಿಯ ಆಸ್ಯ ಖಂಡದ ಪ್ರಾಂತ್ಯಗಳೂ ಪಶ್ಚಿಮದಲ್ಲಿ ಬಲ್ಕಾನ್ ಸಂಸ್ಥಾನದ ರುಮೇನಿಯಾ ಬಲ್ಗೇರಿಯಾ ಮತ್ತು ಯುರೋಪಿಯ ಟರ್ಕಿಯ ದೇಶಗಳಿರುವವು ಈ ರೀತಿ ಕಪ್ಪು ಸಮುದ್ರದ ಪಶ್ಚಿಮ ಕರಾವಳಿಯು ರುಶ್ಯ, ರುಮೇನಿಯಾ, ಬಲ್ಗೇರಿಯಾ, ಟರ್ಕಿ ಈ ದೇಶಗಳಿಂದ ಕೂಡಿದ್ದು ಈ ದೇಶಗಳೆಲ್ಲವೂ ರುಶ್ಯದ ದಕ್ಷಿಣ ಪಶ್ಚಿಮದಲ್ಲಿವೆ ರುಶ್ಯಕ್ಕೆ ಪಶ್ಚಿಮದಲ್ಲಿರುವ ಇತರ ಯುರೋಪಿಯ ದೇಶಗಳು ಉತ್ತರದಿಂದ ದಕ್ಷಿಣಕ್ಕೆ ಈ ರೀತಿಯಾಗಿರುವವು—ರುಶ್ಯದ ಉತ್ತರ ಪಶ್ಚಿಮದಲ್ಲಿ ನೊರ್ವೆ ಮತ್ತು ಸ್ವೀಡನ್ ದೇಶಗಳು ಇದಕ್ಕೆ ತಾಗಿರುವವು ನಂತರ 'ಬೋಲ್ಟಿಕ್‌ಸಿ' ಎಂಬ ಸಮುದ್ರ ಶಾಖೆಯು ಮಧ್ಯಕ್ಕೆ ಸೇರಿ ನೊರ್ವೆ ಮತ್ತು ಸ್ವೀಡನ್ ದೇಶಗಳನ್ನು ರುಶ್ಯದಿಂದ ವಿಂಗಡಿಸಿರುವುದು ಈ ಸಮುದ್ರ ಶಾಖೆಯ ದಕ್ಷಿಣದಲ್ಲಿರುವ ಜರ್ಮನಿಯು ರುಶ್ಯದ ಪಶ್ಚಿಮದಲ್ಲಿ ತಾಗಿರುವುದಲ್ಲದೆ ಜರ್ಮನಿಯ ದಕ್ಷಿಣಕ್ಕಿರುವ ಒಸ್ಟ್ರಿಯಾ ದೇಶವೂ, ಒಸ್ಟ್ರಿಯಾ ದೇಶದ ದಕ್ಷಿಣ ಪೂರ್ವದಲ್ಲಿರುವ ಬಲ್ಕಾನ್ ಸಂಸ್ಥಾನದ ರುಮೇನಿಯವೂ ರುಶ್ಯ ದೇಶದ ಪಶ್ಚಿಮದಲ್ಲಿರುವ ದೇಶಗಳಾಗಿವೆ ಈ ರೀತಿ ಜರ್ಮನಿಯ ಉತ್ತರದಲ್ಲಿ 'ಬೋಲ್ಟಿಕ್‌ಸಿ' ಸಮುದ್ರ ಶಾಖೆಯೂ, ಪೂರ್ವದಲ್ಲಿ ರುಶ್ಯ ದೇಶವೂ, ದಕ್ಷಿಣ ಪೂರ್ವದಲ್ಲಿ ಒಸ್ಟ್ರಿಯಾ ದೇಶವೂ ಇರುವವೆಂದು ವ್ಯಕ್ತವಾಗುವುದು ಜರ್ಮನಿಗೆ ಇನ್ನು ದಕ್ಷಿಣದಲ್ಲಿ ಸ್ವೀಜರ್‌ಲೇಂಡ್ ದೇಶವಿರುವುದು ಪಶ್ಚಿಮದಲ್ಲಿ ಹೊಲ್ಲೇಂಡ್, ಬೆಲ್ಜಿಯಮ್, ಫ್ರಾನ್ಸು ದೇಶಗಳಿರುವವು ಸ್ವೀಜರ್‌ಲೇಂಡ್ ಮತ್ತು ಓಸ್ಟ್ರಿಯಾ ದೇಶಗಳಿಗೆ ತಾಗಿ ದಕ್ಷಿಣದಲ್ಲಿ ಇಟೇಲಿ ಅರ್ಧದ್ವೀಪವು ಟರ್ಕಿಯ ದಕ್ಷಿಣದಲ್ಲಿರುವ ಗ್ರೀಸು ಅರ್ಧದ್ವೀಪದ ವರೆಗೆ ಭೂ ಮಧ್ಯಸಾಗರದಲ್ಲಿ ವಿಸ್ತರಿಸಿಯದೆ ಒಸ್ಟ್ರಿಯಾ ದೇಶವನ್ನು ಪಶ್ಚಿಮ ದಕ್ಷಿಣದಲ್ಲಿ 'ಎಡ್ರಿಯಾಟಿಕ್‌ಸಿ' ಎಂಬ ಸಮುದ್ರ ಶಾಖೆಯು ಇಟೇಲಿಯಿಂದ ವಿಂಗಡಿಸಿರುವುದು ಈ ಸಮುದ್ರ ಶಾಖೆಯ ಪೂರ್ವ ಕರಾವಳಿಯಲ್ಲಿ ಒಸ್ಟ್ರಿಯಾ ದೇಶದ ಹೊರತು ಬಲ್ಕಾನ್ ಸಂಸ್ಥಾನದ ಮೊಂಟೆನಿಗ್ರೊ, ಟರ್ಕಿ ಗ್ರೀಸ್ ದೇಶಗಳಿರುವವು. ಸರ್ವಿಯಾ ದೇಶವು ಪೂರ್ವದಲ್ಲಿ ರುಮೇನಿಯಾ ಬಲ್ಗೇರಿಯಾ ದಕ್ಷಿಣದಲ್ಲಿ, ಟರ್ಕಿ ದಕ್ಷಿಣ ಪಶ್ಚಿಮದಲ್ಲಿ ಮೊಂಟೆನಿಗ್ರೊ ಪಶ್ಚಿಮ ಮತ್ತು ಉತ್ತರದಲ್ಲಿ ಒಸ್ಟ್ರಿಯಾ ಈ ದೇಶಗಳ ನಡುವೆ ಇದ್ದು ಸಮುದ್ರ ಸ್ಪರ್ಶವು ಇದಕ್ಕಿರದು. ಫ್ರಾನ್ಸಿನ ಉತ್ತರದಲ್ಲಿರುವ ಇಂಗ್ಲಿಷ್ ಕೆನಲ್ ಎಂಬ ಸಮುದ್ರ ಕಾಲುವೆಯೂ 'ನೊರ್ತಸಿ' ಎಂಬ ಸಮುದ್ರ ಶಾಖೆಯೂ ಫ್ರಾನ್ಸನ್ನು ಅಂಗ್ಲಾಳದಿಂದ ಪ್ರತ್ಯೇಕಿಸಿಯದೆ ನೊರ್ತಸಿ ಸಮುದ್ರ ಶಾಖೆಯ ಪಶ್ಚಿಮ ಕರಾವಳಿಯಲ್ಲಿ ಬ್ರಿಟಿಷ ದ್ವೀಪಗಳೆ ಸ್ಕೋತಾಳ ಅಂಗ್ಲಾಳಗಳಿರುವವಲ್ಲದೆ ಇದರ ಪೂರ್ವ ಕರಾವಳಿಯಲ್ಲಿ ಜರ್ಮನಿ, ಹೊಲ್ಲೇಂಡ್ ಮತ್ತು ಬೆಲ್ಜಿಯಮ್ ದೇಶಗಳಿರುವವು. ಫ್ರಾನ್ಸಿನ ದಕ್ಷಿಣದಲ್ಲಿ ಸ್ಪೈನ್ ಮತ್ತು ಪೋರ್ಚುಗಲ್ ದೇಶಗಳೂ ಭೂ ಮಧ್ಯಸಾಗರವೂ ಇರುವುದೆಂದು ಹೇಳಿದರೆ ಯುರೋಪ ಖಂಡದ ಈ ಯುದ್ಧದಲ್ಲಿ ಕೈಹಾಕಿರುವ ದೇಶಗಳ ಭೂ ಸಂಬಂಧದ ಸಂಕ್ಷೇಪವಾದ ಈ ವೃತ್ತಾಂತವು ಇಲ್ಲಿಗೆ ಮುಗಿಯುವುದು.

ಈ ದೇಶಗಳೊಳಗಿರುವ ಪರಸ್ಪರ ಭಾವವನ್ನು ತಿಳಿದರೆ ಯುದ್ಧ ಉದ್ದೇಶವು ಸುಲಭದಲ್ಲಿ ವ್ಯಕ್ತವಾಗುವುದು. ಕೆಲವು ವರುಷಗಳ ಹಿಂದೆ ಫ್ರಾನ್ಸು ಮತ್ತು ರುಶ್ಯ ದೇಶಗಳು ಬ್ರಿಟಿಷರನ್ನು ವೈರ ಭಾವದಿಂದ ಕಾಣುತ್ತಿದ್ದರೆಂಬುದು ವಾಚಕರ ಸ್ಮರಣೆಯಲ್ಲಿರಬಹುದು ಇಂಥಾ ವೈರಭಾವವನ್ನು ಕಳೆದು ಬಿಟ್ಟು ಭ್ರಾತೃಭಾವದಿಂದ ಈಗ ರಣರಂಗದಲ್ಲಿ ಒಂದಾಗಿ ಇವರು ಹೇಗೆ ಸೇರಿರುವರೆಂಬುದನ್ನು ತಿಳಿಯುವುದು ಅಗತ್ಯವಾಗಿದೆ ಫ್ರಾನ್ಸನ್ನು ವಕ್ರದೃಷ್ಟಿಯಿಂದ ಕಾಣುತ್ತಿದ್ದ ಇಟೇಲಿಯು ತನ್ನ ಆಪ್ತರಾಗಿದ್ದ ಜರ್ಮನಿ ಮತ್ತು ಒಸ್ಟ್ರಿಯಾ ದೇಶಗಳ ಸಹಾಯಕ್ಕೆ ಹೋಗದೆ ಏಕೆ ಸುಮ್ಮನಿರುವುದು; ಸರ್ವಿಯಾ ಮತ್ತು ಒಸ್ಟ್ರಿಯಾ ದೇಶಗಳೊಳಗೆ ದ್ವೇಶಕ್ಕೆ ಕಾರಣವೇನು, ರುಶ್ಯವು ಸರ್ವಿಯಾದ ಬೆಂಬಲಕ್ಕೆ ಏಕೆ ಬರುತ್ತಿರುವುದು—ಈ ಎಲ್ಲಾ ವಿಷಯಗಳನ್ನು ವಿವರವಾಗಿ ತಿಳಿಯಬೇಕಾಗಿದೆ ಇವೆಲ್ಲಾ ವಿಷಯಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಸ್ತಾಪಿಸುವೆವಲ್ಲದೆ ಸಾಧ್ಯವಾದರೆ ಯುರೋಪ ಖಂಡದ ಪಠವನ್ನೂ ಸಹ ಪ್ರಕಟಿಸಲು ಪ್ರಯತ್ನಿಸುವೆವು

ಗಣೇಶಚತುರ್ಥಿ ವೃತವನ್ನು ಸೋಮವಾರವೇ ಆಚರಿಸಬೇಕಾಗಿರುವದು.

ಗಣೇಶ ಚತುರ್ಥಿಯು ಬರುವ ಸೋಮವಾರ ೨೪ನೇ ತಾರೀಕಿನ ದಿನವೇ ಆಚರಿಸಬೇಕೆಂದು ಆಧಾರಗಳನ್ನು ಕೊಟ್ಟು ಸೂಚಿಸಿರುವ ಲೇಖನಗಳನ್ನು ಪತ್ರವ್ಯವಹಾರ ಬಾಗದಲ್ಲಿ ಪ್ರಕಟಿಸಿರುತ್ತೇವೆ ನಾವು ತಿಳಿದಿರುವ ಮಟ್ಟಿಗೆ ಈ ಜಿಲ್ಲೆಯು ಮಾತ್ರವಲ್ಲ, ಈ ದೇಶದ ಹಲವು ಕಡೆಗಳಲ್ಲಿ ಸಹಾ ಈ ವೃತವು ಸೋಮವಾರ ದಿನವೇ ಆಚರಿಸಲ್ಪಡುವುದು ಮಂಗಳೂರಲ್ಲಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಸೋಮವಾರ ದಿನವೇ ಈ ವೃತವು ಆಚರಿಸಲ್ಪಡುವುದೆಂದು ಅಲ್ಲಿ ಈ ಬಗ್ಗೆ ನೆರೆದ ಸಭೆಯಲ್ಲಿ ನಿರ್ಣಯಿಸಲ್ಪಟ್ಟಿರುತ್ತದೆ ಈ ಸಭೆಯಲ್ಲಿ ಹಾಜರಿದ್ದ ಮಂಗಳೂರು ವೇ। ನಾರಾಯಣಾಚಾರ್ಯರು ಮತ್ತು ಉದ್ಯಾವರ ವೇ। ನಾರಾಯಣಾಚಾರ್ಯರ ಪೈಕಿ ವೇ। ಉದ್ಯಾವರ ನಾರಾಯಣಾಚಾರ್ಯರು ಸಭೆಯವರ ಈ ನಿರ್ಣಯಕ್ಕೆ ತಮ್ಮ ಸಮ್ಮತಿಯನ್ನು ಕೊಟ್ಟಿರುವುದಿಲ್ಲ

ಪಂಚಾಂಗ ಕರ್ತರುಗಳು—ಲೌಕಿಕರನ್ನು ಧರ್ಮಮಾರ್ಗಗಳಲ್ಲಿ ನಡಿಸತಕ್ಕ ವೈದಿಕರು-ತಮ್ಮ ಪಂಚಾಂಗಗಳಲ್ಲಿ ಅಬಿಪ್ರಾಯ ಭೇದಗಳನ್ನು ಪ್ರಕಟಿಸಿದ್ದರಿಂದ ವೃತಾಚರಣೆಯಲ್ಲಿ ಜನರಿಗಿರುವ ಶ್ರದ್ಧೆ ಬಕ್ತಿಗಳು ಕಡಮೆಯಾಗುವವು ವೈದಿಕರ ಮೇಲಿರುವ ವಿಶ್ವಾಸವೂ ಸಹ ಕಡಮೆಯಾಗುವುದು ಆದ್ದರಿಂದ ಪಂಚಾಂಗಕರ್ತರು ಪಂಚಾಂಗಗಳು ಪ್ರಕಟಿಸೋಣಾಗುವ ಮೊದಲು ಒಟ್ಟುಕೂಡಿ ಈ ವೃತ ಕಾಲಗಳನ್ನು ಮೊದಲಾಗಿ ನಿರ್ಣಯಿಸುವುದೂ ಉಚಿತವಾಗಿರುತ್ತದೆ ಸರ್ವ ಹಿಂದೂಗಳಿಂದಲೂ ಆಚರಿಸಲ್ಪಡತಕ್ಕ ಬಹುದಾದ ಹಿಂದೂ ಜನಾಂಗ ಐಕ್ಯವನ್ನು ಸೂಚಿಸುವ ಈ ವೃತಕಾಲ ನಿರ್ಣಯದಲ್ಲಿ ವೈದಿಕರು ಈ ಬಗ್ಗೆ ಬೇಕಾದ ಶಾಸ್ತ್ರಾಧಾರಗಳನ್ನು ಪೂರ್ಣ ನೋಡಿಕೊಂಡು ಇವುಗಳಿಗೆ ಅಸಾಧ್ಯ ಅರ್ಥಗಳನ್ನು ಕಲ್ಪಿಸದೆ ಅಭಿಪ್ರಾಯ ಐಕ್ಯವನ್ನು ಸೂಚಿಸಲು ಪ್ರಯತ್ನಿಸಬೇಕು ಐಕ್ಯವನ್ನು ಬಂಗಪಡಿಸುವ ಸಾದನೆಯು ಈ ಕಾಲದಲ್ಲಿ ಸಲ್ಲದು. ಇನ್ನೂ ಹಲವು ಪಂಡಿತರನ್ನೂ ಆಚಾರ್ಯರನ್ನೂ ಈ ವಿಷಯದಲ್ಲಿ ವಿಚಾರಿಸಿ ತಿಳಕೊಂಡಲ್ಲಿ ಗಣೇಶ ಚತುರ್ಥಿಯನ್ನು ಬರುವ ಸೋಮವಾರ ದಿನವೇ ಆಚರಿಸಬೇಕೆಂದು ಸೂಚಿಸಿರುವರು ವೈದಿಕ ವಿದ್ವಜ್ಜನರ ಈ ಅಬಿಪ್ರಾಯವನ್ನು ನಾವು ಮನ್ನಿಸಿರುವೆವು. ಈ ವಿಷಯದಲ್ಲಿ ಇನ್ನು ನಮಗೆ ಕಳುಹಿಸೋಣಾಗುವ ಲೇಖಗಳು ಪ್ರಕಟಿಸೋಣಾಗಲಿಕ್ಕಿಲ್ಲ.

ದಕ್ಷಿಣ ಕನ್ನಡಾ ಜಿಲ್ಲೆಯ ಮೀನು ಒಣಗಿಸುವ ಕೈಗಾರಿಕೆಯು.

ಬಹು ಪೂರ್ವ ಕಾಲದಿಂದಲೂ ಈ ಕೈಗಾರಿಕೆಯಿಂದ ಹೆಚ್ಚಾಗಿ ಮೊಗೇರ ಜಾತಿಯವರು ಜೀವನ ನಡಿಸಿಕೊಂಡು ಬಂದವರಾಗಿರುತ್ತಾರೆ ಸಮುದ್ರ ಮತ್ತು ಹೊಳೆ ಬದಿಗಳಲ್ಲಿ ನಿಸರ್ಗದೇವಿಯು ತಾನಾಗಿ ಉಂಟುಮಾಡುತ್ತಿದ್ದ ಮಣ್ಣುಪ್ಪನ್ನು ಮೊದಲು ಈ ಕೈಗಾರಿಕೆಗೆ ನಿರಾತಂಕವಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಆದರೆ ಮದರಾಸ್ ಸಾಲ್ಟ್ ಆಕ್ಟ್ ಜಾರಿಗೆ ಬಂದ ತರುವಾಯ ಆ ಮಣ್ಣುಪ್ಪಿನ ಉಪಯೋಗವು ಕಾನೂನಿಗೆ ವಿರೋಧವಾಯಿತು. ಇದರಿಂದ ಆ ಕಾಲದಲ್ಲಿ ಬಡವರಿಗೆ ಪೇಟೆ ಉಪ್ಪನ್ನು ಕ್ರಯಕ್ಕೆ ತೆಗೆದು ಮೀನಿಗೆ ಉಪಯೋಗಿಸುವದು ಕಷ್ಟಕರವಾಗಿ ಈ ಕೈಗಾರಿಕೆಯು ಬಹು ಮಟ್ಟಿಗೆ ಕ್ಷೀಣಗತಿಯನ್ನೈದಿತು. ಆಗ ಅನೇಕ ಬಡ ಮೊಗೇರರು ಈ ವೃತ್ತಿಯನ್ನೇ

ಬಿಟ್ಟು ಬಿಟ್ಟು ಮುಂಬಾಯಿ ಮೊದಲಾದ ಪ್ರಾಂತ್ಯಗಳಿಗೆ ಹೋಗಿ ನೌಕರೀ ವೃತ್ತಿಯನ್ನ ವಲಂಬಿಸಿದರು. ಆದರೆ ಸಾಲ್ಟ್ ಆಕ್ಟಿನಿಂದ ತಮ್ಮ ಕಸಬುಗಳಿಗುಂಟಾದ ದುರ್ಗತಿಯನ್ನು ತಾಳಲಾರದೆ ಈ ಜಿಲ್ಲೆಯ ಮೊಗೇರರೆಲ್ಲರೂ ಒಂದಾಗಿ ಕಲೆಕ್ಟರರಿಂದ ತೊಡಗಿ ವೈಸರಾಯ ಪ್ರಭುಗಳ ವರೇಗೂ ಅರ್ಜಿಯ ಮೇಲೆ ಅರ್ಜಿಯನ್ನು ಕಳುಹಿಸಿ ತಮ್ಮ ಸಂಕಷ್ಟವನ್ನು ಸರಕಾರಕ್ಕೆ ವೇದ್ಯವರಿಸಿದರು. ಇದರಿಂದ ಸರಕಾರದವರು ಈ ಬಡ ಜನರಿಗುಂಟಾದ ತೊಂದರೆಯನ್ನು ಲಕ್ಷ್ಯಕ್ಕೆ ತಂದು ಜಿಲ್ಲೆಯ ಮುಖ್ಯ ಮುಖ್ಯ ಸ್ಥಳಗಳಲ್ಲಿ ಮಣ್ಣುಪ್ಪಿನ ಬದಲಿಗೆ ಗವರ್ನಮೆಂಟ ಫಿಶ್‌ಕ್ಯೂರಿಂಗ್ ಯಾರ್ಡುಗಳನ್ನು ಸ್ಥಾಪಿಸಿ, ಶೇರಿಗೆ ೩ ಪೈ ದರದಲ್ಲಿ ಮಧ್ಯಮತರದ ಉಪ್ಪು ಕೊಡುವ ಅಪ್ಪಣೆಯನ್ನು ಮಾಡಿ, ಅದನ್ನು ಕೂಡಲೇ ಜಾರಿಗೆ ಸಹ ತಂದರು. ಆದರೆ ಈ ಯಾರ್ಡುಗಳಲ್ಲಿರುವ ಕ್ರಮಗಳಿಂದ ಏನೂ ಭಂಡವಾಳವಿಲ್ಲದ ಬಡಜನರಿಗೆ ಈ ಉಪ್ಪನ್ನು ಪಡಕೊಳ್ಳಲು ಅನಾನುಕೂಲವಾದ್ದರಿಂದಲೂ ತಮ್ಮ ವಾಸ್ತವ್ಯದ ಬಳಿಯಲ್ಲಿಯೇ, ಹೆಂಗಸರು ಮಕ್ಕಳು ಮನೆ ಕೆಲಸ ಮಾಡಿಕೊಳ್ಳಲೂ, ಮೀನು ಒಣಗಿಸಿಕೊಳ್ಳಲೂ ಅನುಕೂಲವಾದ ಮತ್ತು ಖರ್ಚಿಲ್ಲದೆ ಸಿಕ್ಕುವ ಮಣ್ಣುಪ್ಪಿನಷ್ಟು ಪ್ರಯೋಜನವು ದೊರಕಲಾರದಾದ್ದರಿಂದಲೂ ಮೊಗೇರರ ಬಹು ಪಕ್ಷವು ಈ ಸರಕಾರಿ ಉಪ್ಪನ್ನು ಪಡಕೊಳ್ಳಲು ಹಿಂಜರಿಯಿತು! ಮಾತ್ರವಲ್ಲ; ಈ ಕುರಿತು ಮುಂದೆ ಸರಕಾರಕ್ಕೆ ವಿಜ್ಞಾಪಿಸಿಕೊಳ್ಳುವದೂ ವ್ಯರ್ಥವೆಂದು ಸುಮ್ಮಗಾದರು! ಅನೇಕ ಬಡವರು ನಿರುಪಾಯರಾಗಿ ತಮ್ಮ ಕುಲಕ್ರಮಾಗತವಾದ ಮೀನು ಒಣಗಿಸುವ ವೃತ್ತಿಯನ್ನೇ ಬಿಟ್ಟುಬಿಟ್ಟು ಕೇವಲ ಮೀನು ಹಿಡಿಯುವದರಲ್ಲಿಯೇ ತಮ್ಮ ಪೂರಾ ಕುಟುಂಬದ ಜೀವನ ಭಾರವನ್ನಿಡಬೇಕಾಯಿತು! ಇದರಿಂದ ಬಡ ಮೊಗೇರರ ಗೃಹಕೃತ್ಯ ವೃತ್ತಿಯ ಸಹಾಯಾರ್ಥವಾಗಿ ಸರಕಾರದವರು ಸಾವಿರಾರು ರೂಪಾಯಿ ಖರ್ಚುಮಾಡಿ ಏರ್ಪಡಿಸಿದ ಫಿಶ್‌ಕ್ಯೂರಿಂಗ್ ಯಾರ್ಡುಗಳ ಪ್ರಯೋಜನವು ಭಂಡವಾಳಿಕರಾದ ಸಾಹುಕಾರರಿಗೆ ಮಾತ್ರ ದೊರಕಿ ಅಂಥಾ ಎಲ್ಲಾ ಯಾರ್ಡುಗಳಲ್ಲಿಯೂ ಮೊಗೇರರಲ್ಲದ ಇವರೇ ಹೆಚ್ಚಾಗಿ ಉಪ್ಪು ಪಡಕೊಳ್ಳುವ ಟಿಕೇಟುದಾರರಾದರು. (ಇದಕ್ಕೆ ಆಯಾ ಫಿಶ್‌ಕ್ಯೂರಿಂಗ್ ಯಾರ್ಡು ರಿಜಿಸ್ತರುಗಳೇ ಸಾಕ್ಷಿ ಕೊಡುವುದು).

ಸಾಲ್ಟ್ ಆಕ್ಟ್ ಜಾರಿಗೆ ಬರುವ ಮೊದಲು ಬಡ ಜನರಿಗಿದ್ದ ಅನುಕೂಲತೆಯನ್ನೇ ಫಿಶ್‌ಕ್ಯೂರಿಂಗ್ ಯಾರ್ಡುಗಳ ಮೂಲಕ ಉಂಟುಮಾಡಿಸಿಕೊಡಬೇಕೆಂದಾಲೋಚಿಸಿದ ಸರಕಾರದ ಉದ್ದೇಶವು ಇದರಿಂದ ಭಂಗವಾಗಿ ಹೋಯಿತಲ್ಲದೆ, ಮಣ್ಣುಪ್ಪಿನ ಉಪಯೋಗದಿಂದ ಆಬಾಲವೃದ್ಧರಿಗೆಲ್ಲಾ ವೃತ್ತಿಯು ದೊರಕಿ ಸ್ವತಂತ್ರ ಜೀವನ ನಡಿಸಿಕೊಂಡಿದ್ದ ಮೊಗೇರರ ಎಷ್ಟೋ ಬಡಕುಟುಂಬಗಳು ತಮ್ಮ ಗೃಹಕೃತ್ಯದ ಈ ಮೀನು ಒಣಗಿಸುವ ವೃತ್ತಿಯನ್ನೇ ಬಿಟ್ಟುಬಿಡುವ ಸಂದರ್ಭ ಒದಗಿ ಅವರ ಜೀವನ ಸಂಕಷ್ಟವು ಹೇಗೆ ಹೆಚ್ಚುತ್ತಾ ಬಂದಿರುತ್ತವೆಂಬುವದಕ್ಕೆ ಪ್ರಕೃತ ಅವರಲ್ಲನೇಕ ಜನವೃಂದವು ಹೆಚ್ಚು ಹೆಚ್ಚಾಗಿ ಮೇಲ್ಕಂಡ ಭಂಡವಾಳಿಕರ ಋಣಬಂಧನದ ಕರಾರುಗಳಿಗೊಳಗಾಗುತ್ತಿರುವುದೇ ಸಾಕ್ಷಿ.

ಆದ್ದರಿಂದ ಸರಕಾರದವರು ಸಾಲ್ಟ್ ಆಕ್ಟಿನಲ್ಲಿ ಅಗತ್ಯವಿರುವ ತಬ್ದೀಲಿಗಳನ್ನು ಬೇಗನೇ ಮಾಡದಿದ್ದರೆ ಬಡಜನಸಮೂಹದ ಗೃಹಕೃತ್ಯ ವೃತ್ತಿಯಾದ ಈ ಮೀನು ಒಣಗಿಸುವ ಕೈಗಾರಿಕೆಯು ಪೂರ್ಣವಾಗಿ ಕೂತುಂಬುವ ಭಂಡವಾಳಿಕರ ಕೈಸೇರಿ ಬಡ ಕೂಲಿಗಾರರ ಸಂಖ್ಯೆಯನ್ನೇರಿಸಿದಂತಾಗುವದು. ಮುಂಚೆ ಉಪ್ಪಿನ ಮೇಲಣ ಸುಂಕವು ಜಾಸ್ತಿಯಾಗಿದ್ದ ಕಾಲದಲ್ಲಿ ಮಣ್ಣುಪ್ಪಿನ ಉಪಯೋಗ ಮಾಡುವ ಸ್ವತಂತ್ರವನ್ನು ಮೊಗೇರರಿಗೆ ಇರಗೊಡಿಸಿದರೆ ಅವರು ಅದನ್ನು ಆಹಾರದ ಉಪ್ಪಾಗಿ ಮಾರ್ಪಡಿಸಿ, ಸರಕಾರಕ್ಕೆ ನಷ್ಟ ಉಂಟುಮಾಡ್ಯಾರೆಂಬ ಭಾವನೆಯೇ ಮಣ್ಣುಪ್ಪು ತೆಗಿಯುವುದು ಕಾನೂನಿಗೆ ವಿರೋಧವೆಂಬ ಶಾಸನವು ಜಾರಿಗೆ ಬರಲು ಕಾರಣವಾಯಿತು. ಆದರೆ ಉಪ್ಪಿನ ಸುಂಕವು ಈಗ ಬಹೂ ಕಮ್ಮಿಯಾಗಿ ಪೇಟೆ ಉಪ್ಪು ಅಗ್ಗ ಸಿಕ್ಕುತ್ತಿರುವುದರಿಂದ ಮಣ್ಣುಪ್ಪನ್ನೂ ಆಹಾರದ ಉಪ್ಪಾಗಿ ಮಾರ್ಪಡಿಸುವ ಅಗತ್ಯವೇ ಇಲ್ಲ. ಯಾಕಂದರೆ ಅದನ್ನು ತಯಾರು ಮಾಡುವ ಶ್ರಮವೂ ಖರ್ಚೂ ಎಣಿಸಿದರೆ ಪೇಟೆಯಲ್ಲಿ ಈಗ ಮಾರುವ ಉಪ್ಪಿನ ಕ್ರಯಗಿಂತಲೂ ಜಾಸ್ತಿಯಾಗುವುದು. ಪ್ರಕೃತ ಈ ವಿಷಯವು ಉದಾರ ಸರಕಾರದ ಪುನರಾಲೋಚನೆಗೆ ಯೋಗ್ಯವಾದುದಲ್ಲವೇ?

ಆದ್ದರಿಂದ ಸಾಲ್ಟ್ ಆಕ್ಟಿನ ನಿಜ ಉದ್ದೇಶಕ್ಕೆ ಭಂಗಬಾರದಂತೆ ಕೆಲವು ನಿರ್ಬಂಧಗಳನ್ನೇರ್ಪಡಿಸಿಯಾದರೂ ಮೀನು ಒಣಗಿಸುವ ಉದ್ದೇಶಕ್ಕೆ ಮಾತ್ರ ಆ ಮಣ್ಣುಪ್ಪನ್ನು ಉಪಯೋಗಿಸಿಕೊಳ್ಳುವಂತೆ ದಯಾಳು ಗವರ್ನಮೆಂಟಿನವರು ಅಪ್ಪಣೆ ದಯಪಾಲಿಸಿ ಎಷ್ಟೋ ಬಡಕುಟುಂಬಗಳಿಗೆ ಸ್ವತಂತ್ರ ಜೀವನ ಕಲ್ಪಿಸಬಹುದಾದ ಈ ಕಸಬನ್ನು ಉದ್ಧರಿಸಬೇಕಾಗಿ ಪ್ರಾರ್ಥನೆ.

ಯಾವ ವಿಧದಿಂದಲಾದರೂ ಮಣ್ಣುಪ್ಪನ್ನು ಪಯೋಗಿಸಲು ಸಮ್ಮತಿ ಕೊಡುವದು ಸರಕಾರದವರಿಗೆ ಅನುಚಿತವೆಂದು ತೋರಿದರೆ ಈಗ ಇರುವ ಫಿಶ್‌ಕ್ಯೂರಿಂಗ್ ಯಾರ್ಡ (ಮೀನು ಒಣಗಿಸುವ ಹಾಲು)ಗಳ ಬದಲಿಗೆ ಪ್ರತೀ ಗ್ರಾಮದಲ್ಲಿಯೂ ಒಂದೊಂದು ಸರಕಾರಿ ಉಪ್ಪಿನ ಕೋಠಿಯನ್ನು ಮಾತ್ರ ಸ್ಥಾಪಿಸಿ, ಅಲ್ಲಿ ಕೊಂಡುಹೋಗುವ ಮೀನುಗಳಿಗೆ ಅಗತ್ಯವಿರುವಷ್ಟು ಉಪ್ಪು ಮಾತ್ರ ದೊರಕುವ ಏರ್ಪಾಡು ಮಾಡಿಸಿ, ಸ್ವಲ್ಪವೂ ಭಂಡವಾಳವಿಲ್ಲದ ಎಂಥಾ ಬಡಕುಟುಂಬವಾದರೂ ಅದರ ಪ್ರಯೋಜನ ಹೊಂದುವಷ್ಟು ಅತ್ಯಂತ ಸುಲಭ ನಿಯಮಗಳನ್ನೇರ್ಪಡಿಸುವದು ಒಳ್ಳೇದು.

ಈ ವಿಷಯವು ಬಡಜನರ ಉದ್ಧಾರಕರೆಂದು ಕೀರ್ತಿಗೊಂಡ ಈಗಿನ ನಮ್ಮ ಜಿಲ್ಲಾ ಕಲೆಕ್ಟರರಾದ ನಾಮದಾರ ಕೌಚ್‌ಮನ್ ದೊರೆಗಳವರ ಆಳಿಕೆಯ ಕಾಲದಲ್ಲಿಯೇ ವರಿಷ್ಟ ಸರಕಾರದವರ ಲಕ್ಷಕ್ಕೆ ಸರಿಯಾಗಿ ಬಂದು, ತಮ್ಮ ಸಂಕಷ್ಟವು ಪರಿಹಾರವಾದೀತೆಂಬ ವಿಶ್ವಾಸದಿಂದ, ಸದ್ಯಾ ಇಲ್ಲಿಗೆ ಚಿತ್ತಯಿಸಲಿಕ್ಕಿರುವ ಶ್ರೀ ಬಹುಮಾನಪಟ್ಟ ಗವರ್ನರ್ ಪ್ರಭುಗಳವರಿಗೆ ಜಿಲ್ಲೆಯ ಎಲ್ಲಾ ಮೀನುಗಾರರ ಪರವಾಗಿ ಮೊಗೇರ ಜಾತಿಯ ಕೆಲವು ಪ್ರತಿನಿಧಿಗಳಿಂದ ಒಂದು ಬಿನ್ನಹ ಪತ್ರವು ಕಳುಹಿಸೋಣಾಗಿಯದೆ.

ನಮ್ಮ ಮಾತೃ ಸಮಾನವಾದ ಸರಕಾರವು ಬಡ ಪ್ರಜೆಗಳ ನಿಜ ಸಂಕಷ್ಟವನ್ನು ಪರಿಹರಿಸಲು ಯಾವಾಗಲೂ ಸಿದ್ಧವಿರುವುದು. ಆದರೆ ನಮ್ಮ ಕಷ್ಟವು ಸರಕಾರದ ಲಕ್ಷ್ಯಕ್ಕೆ ಚೆನ್ನಾಗಿ ಬರುವಂತೆ ಮಾಡುವದು ನಮ್ಮ ಕರ್ತವ್ಯವಾಗಿರುತ್ತದೆ. ಆದ್ದರಿಂದ ಮೇಲ್ಕಂಡ ಬಿನ್ನಹ ಪತ್ರದ ಕುರಿತು ಸಂಬಂಧಪಟ್ಟ ಮೇಲಾಫೀಸರರು ತನಖಿ ನಡಿಸುವ ವೇಳೆ ಎಲ್ಲರೂ ತಮ್ಮ ನಿಜ ಸಂಕಷ್ಟವನ್ನು ಹೇಳಿಕೊಳ್ಳುವದರಲ್ಲಿ ಹೆದರಲೂ ಹಿಂಜರಿಯಲೂ ಬಾರದು.

ಬಿ. ಮೋಹನಪ್ಪ ತಿಂಗಲಾಯ

ಕಾರ್ಯದರ್ಶಿ,

ಮೊಗೇರರ ಜ್ಞಾನೋದಯ ಸಮಾಜ, ಮಂಗಳೂರು.

ಜೆಜುವಿತ ಗುರುಸಭೆಯ ಪುನಸ್ಥಾಪನೆ ಶತಕೋತ್ಸವದಾಚರಣೆಯು.

ಜೆಜುವಿತ ಗುರುಸಭೆಯು ಸಂ ೧೮೧೪ನೇ ಇಸವಿ ಆಗೋಸ್ತು ತಾ. ೭ರಲ್ಲು ಪವಿತ್ರ ಪೋಪಸ್ವಾಮಿ ಎಂಟನೇ ಪಿಯುಸರವರುಗಳಿಂದ ಪುನಸ್ಥಾಪಿಸಲ್ಪಟ್ಟು ಇದೇ ಆಗೋಸ್ತು ೭ಕ್ಕೆ ೧೦೦ ವರ್ಷಗಳಾಗುತ್ತವೆ. ಶತಮಾನ ಜುಬಿಲಿಯು ಅತಿರೇಕ ಉಲ್ಲಾಸವನ್ನು ಸೂಚಿಸುತ್ತದೆ. ಮತ್ತು ರೋಮಿಯ ಸಮುದಾಯದಲ್ಲಿ "ಕೊಲೇಜು ರೆಕ್ಟರ್ಸ್‌ಡೇ"ವೆಂಬ ವರ್ಷಾವಧಿ ಉತ್ಸವಗಳು ಸಹ ಬಹಳ ಆಡಂಬರದಿಂದ ನಡಿಸಲ್ಪಡುವಾಗ ಇಡೀ ಜೆಜುವಿತ ಗುರುಸಭೆಯ ಈ ದೊಡ್ಡ ಹಬ್ಬವನ್ನು ಯಾವತ್ತೂ ಗಾಂಭೀರ್ಯವಿಲ್ಲದೆ ಆಚರಿಸಿದ್ದು ಆಶ್ಚರ್ಯಕ್ಕೆ ಕಾರಣ ಕೊಡುತ್ತದೆ.

ಹದಿನಾರನೇ ಶತಮಾನದಲ್ಲಿ ಜರ್ಮನಿಯಲ್ಲಿ ಲುಥೆರನೂ ಇಂಗ್ಲೆಂಡಿನಲ್ಲಿ ಎಂಟನೇ ಹೆನ್ರಿ ರಾಜನೂ, ಫ್ರಾನ್ಸಿನಲ್ಲಿ ಕೆಲ್ವಿನನೂ, ಸ್ವಿಜರ್‌ಲೇಂಡಿನಲ್ಲಿ ಝುಂಗ್ಲಿಯೂ ಕೆಥೋಲಿಕ ಮತಕ್ಕೆ ವಿರೋಧವಾಗಿ ಪ್ರೊತೆಸ್ತಾಂತ ಮತಗಳು ಸ್ಥಾಪಿಸಿ, ಈ ಕೆಥೋಲಿಕ ಮತವು ಪ್ರಥಮದ ತತ್ವಜ್ಞಾನಕ್ಕೆ ವಿರುದ್ಧವಾಗಿರುತ್ತದೆಂಬದಾಗಿ ಬೋಧಿಸಿ, ತಮ್ಮ ತಮ್ಮ ಮತಗಳನ್ನು ಬಹಳ ಅಭಿವೃದ್ಧಿಗೆ ತರುವ ಬಗ್ಗೆ ಪ್ರಯತ್ನಿಸುವಾಗ ಈ ಪ್ರಯತ್ನಗಳನ್ನು ಖಂಡಿಸುವ ಉದ್ದೇಶ ಅರ್ಚ ಇಗ್ನಾಷಿಯಸ್ ಲೊಯೊಲವೆಂಬವರು ಸಂ ೧೫೩೪ನೇ ಇಸವಿಯಲ್ಲಿ ಈ "ಸೊಸೈಟಿ ಒಪ್ ಜೇಜಸ್"ವೆಂಬ ಸಭೆಯನ್ನು ಸ್ಥಾಪಿಸಿ ಸಂ ೧೫೪೦ನೇ ಸಪ್ತಂಬರ ೨೭ಕ್ಕೆ ಪವಿತ್ರ ಮೂರನೇ ಪಾವುಲ್ ಪೋಪ ಗುರುಸ್ವಾಮಿಗಳಿಂದ ಮಂಜೂರುಮಾಡಿಸಿದರು.

ಅರ್ಚ ಇಗ್ನಾಷಿಯಸ್ ಲೊಯೊಲರ ಆಳಿಕೆಯಲ್ಲಿಯೂ ನಂತರವೂ ಈ ಸಭೆಯು ಹೆಚ್ಚಾಗಿ ಮೇಲಣ ವಿದ್ಯಾಭ್ಯಾಸವನ್ನೇ ಕೈಕೊಂಡು ಅನೇಕ ಸಭಿಕರು ನಾನಾ ತತ್ವಜ್ಞಾನಗಳಲ್ಲಿ ವಿದ್ವಾಂಸರೆನಿಸಿ ಲೋಕೋಪಕಾರಿಗಳೆನಿಸಿದರು. ಮತವಿರೋಧಿಗಳನ್ನು ಈ ಸಭೆಯವರು ಬಹಳ ಕಾಠಿಣ್ಯದಿಂದ ಖಂಡಿಸಿ, ವೈರಿಗಳನ್ನು ಬಹಳವಾಗಿ ಪಡೆಯುತ್ತಿದ್ದಲ್ಲಿ ಯಾವದರಲ್ಲಿಯೂ ಶಿಕ್ಕಿಬೀಳದ್ದರಿಂದ ಜೆಜುವಿತವೆಂಬ ಮಾತಿಗೇನೇ ತಂತ್ರವಾದಿ ಕುಯುಕ್ತಿಗಾರವೆಂಬ ಅರ್ಥವು ಕ್ರಮೇಣ ಬಂತು. ಆದರೆ ಈ ಸಭೆಯವರು ತಮ್ಮ ಸ್ವಂತ ಮತದ ಆಶ್ರಯಿಗಳನ್ನು ಸಹ ಅಸಡ್ಡೆಯಿಂದ ನಡಿಸಿ, ತಮ್ಮ ಕೊಲೇಜುಗಳಲ್ಲಿ ಕಲಿಯುವ ಮಕ್ಕಳಿಂದಲೂ "ಪ್ರಸಾದ"ಗಳಿಗೆ ಬರುವ ಹೆಂಗಸರಿಂದಲೂ ಸರ್ವ ಕೆಥೋಲಿಕ ಮತಸ್ಥರನ್ನು ಕೂಡ ತಮ್ಮ ಪೂರ್ಣ ಅಧಿಕಾರಕ್ಕೆ ಬಗ್ಗುವಂತೆ ನಡಿಸುವ ಪ್ರಯತ್ನಗಳ ಉಪಟಳವು ಕಡೆಗೆ ಸಹಿಸಲಾರದಂತಾಯಿತು.

ಕೋರ್ಟುಗಳಲ್ಲಿಯೂ, ಅರಮನೆಗಳಲ್ಲಿಯೂ, ಪ್ರತಿ ಒಂದು ಸಭೆಯಲ್ಲಿಯೂ ಎಲ್ಲಿ ಹೋದರೂ ಜೆಜುವಿತರೇ ಕಾರ್ಯಭಾರದಲ್ಲಿ ಪ್ರಾಮುಖ್ಯರಾಗಿರುವುದರಿಂದಲೂ ಅದಲ್ಲ ಈ ವರ್ತನೆಯು ಅವರು ಧರಿಸುವ ಮಿಶ್ಯನರಿ ವ ಸನ್ಯಾಸಿ ರೂಪಕ್ಕೆ ವಿರುದ್ಧವಾದ್ದರಿಂದಲೂ ಅವರ ಮತಸ್ಥರಲ್ಲಿಯೇ ಅನೇಕರು ಅವರ ಮೇಲೆ ಮುನಿದು ದ್ವೇಷ

ಯರಾಗಿದ್ದರಿಂದಲೂ ಕಡೆಗೆ ಫ್ರಾನ್ಸ್, ಸ್ಪೆಯಿನ್, ಪೋರ್ತುಗಲ್, ಜರ್ಮನಿ, ಒಸ್ಟ್ರಿಯ ಮೊದಲಾದ ಸರ್ವ ರಾಜರಿಂದಲೂ ಪೋಪ ಸ್ವಾಮಿಗಳಿಗೆ ಈ ಸಭೆಯನ್ನೇ ರದ್ದು ಪಡಿಸಬೇಕಾಗಿ ಮನವಿಮಾಡಲ್ಪಟ್ಟು, ಏನೂ ಉಪಾಯವಿಲ್ಲದೆ ಈ ಸಭೆಯು, ಅದರ ಉಪಟಳಕ್ಕಾಗಿ ರದ್ದು ಮಾಡಿಸಿದ್ದೇನೆಂಬದಾಗಿ ಪವಿತ್ರ ಹದಿನೆಂಟನೇ ಕ್ಲೆಮೆಂತ ಪೋಪ ಸ್ವಾಮಿಗಳಿಂದ ಸಂ ೧೭೭೩ನೇ ಇಸವಿಯಲ್ಲಿ ಹುಕುಂ ಕೊಡೋಣಾಯಿತು.

ಈ ಸಭೆಯನ್ನು ರದ್ದು ಪಡಿಸುವಾಗ ಇದರಲ್ಲಿ ೧೨೦೦ ಪೂರ್ಣವಾಗಿ ಕಲಿತ ಗುರುಗಳೂ ೫೦೦೦ ಗುರುತ್ವಕ್ಕೆ ವಿದ್ಯಾಭ್ಯಾಸ ನಡಿಸುವ ನೊವಿಶಿಯೆಟ್ ಗುರುಗಳೂ ಇದ್ದರು. ಇವರೆಲ್ಲರೂ ಸೆಕ್ಯುಲರ್ ಅಂದರೆ ಮಠವಾಸಿಗಳಲ್ಲದ ವೈದಿಕರಾಗಿ ಜೀವಿಸ ಬೇಕಾಯಿತು. ರೋಮನ್ ಕೆಥೋಲಿಕ ಮತದಲ್ಲಿ ಮತಪ್ರಚಾರಕ್ಕಾಗಿ ಸ್ಥಾಪಿಸಿದ ಯಾವತ್ತು ವೈದಿಕ ಸಭೆಗೂ ಇಂಥಾ ಗಂಡಾಂತರ ಬಂದೊದಗಲಿಲ್ಲ. ಈ ಸಭೆಯ ಕೂಟಗಳೆಲ್ಲಾ ಬಿಡಿಸಿಹೋಗಿ ಕೂಡಲೇ ಮಾಯವಾದವು. ರುಶ್ಯದಲ್ಲಿ ಮಾತ್ರ ಅಲ್ಲಿಯ ೪೦೦ ಜೆಜುವಿತ ವೈದಿಕರು ಡೆವಿಡ್ ರ್ಯುತನ್‌ವೆಂಬವರ ಕೈಕೆಳಗೆ ಇಡೀ ಕೂಟವನ್ನು ಸೆಕ್ಯುಲರ್ ವೈದಿಕರಾಗಿ ಉಳಿಸಿದರು.

ಇಷ್ಟು ಬಲಿಷ್ಟರೂ ಪ್ರತಿಷ್ಠೆಯುಳ್ಳವರೂ ಸಭಿಕರಿದ್ದ ಈ ಜೆಜುವಿತ ಸಭೆಯನ್ನೇ ನಾಶಮಾಡಿದರ ಫಲವಾಗಿ ರೋಮನ್ ಮತದಲ್ಲಿ ಅನೇಕ ಅನಾಹುತಗಳು ಸಂಭವಿಸಿದವು. ಇವರ ಗಂಭೀರವಾದ ಅಧಿಕಾರದಲ್ಲಿದ್ದ ಯುವಕರು ವಿಸ್ಮಯಗೊಂಡು ಮತವೂ ದೇವರೂ ಇಲ್ಲವೆಂಬದಾಗಿ ನಿರ್ಣಯಿಸಿ ಒಲ್ಟೆಯರ್‌ವೆಂಬ ಈ ಜೆಜುವಿತ ಗುರುಗಳ ಶಿಷ್ಯನೊಬ್ಬನು ಫ್ರಿಮೇಜನ್‌ವೆಂಬ ಅದ್ವೈತಮತವನ್ನು ಸ್ಥಾಪಿಸಿದನು. ಕೆಥೊಲಿಕ ಮತದ ಪ್ರಥಮ ಮಗಳೆನ್ನಿಸುವ ಫ್ರಾನ್ಸ್ ದೇಶದಲ್ಲಿ "ರೆವೊಲ್ಯುಶ್ಯನ್" ವ ಬದಲಾ ಬದಲು ಶುರು ಆಯಿತು. ಈ ಸಭೆಯು ಮಾಜಿಹೋಗಿದ್ದ ೪೧ ವರ್ಷಗಳ ವರೆಗೆ ಜನರೆಲ್ಲರಲ್ಲಿ ದೇವಭಕ್ತಿಯು ಕಡಿಮೆಯಾಗುತ್ತಾ ಬಂತು.

ಕಡೆಗೆ ನೆಪೋಲಿಯನ್ ಚಕ್ರವರ್ತಿಯನ್ನು ಸೆಂಟ್ ಹೆಲೇನಕ್ಕೆ ಟಾಪು ಕಳುಹಿಸಿದ ಮೇಲೆ ಫ್ರಾನ್ಸಿನಲ್ಲಿರುವ ಆವಿಗ್ನೊನ್ ಪಟ್ಟಣದಲ್ಲಿ ವಾಸಿಸಿದ್ದ ಪವಿತ್ರ ಎಂಟನೇ ಪಿಯಸ್ ಪೋಪ ಮಹಾಸ್ವಾಮಿಗಳು ರೋಮ್ ಪಟ್ಟಣಕ್ಕೆ ಬಂದ ಕೂಡಲೇ ಅವರುಗಳ ಮೊದಲನೇ ಕಾರ್ಯವಾಗಿ ಸಂ ೧೮೧೪ನೇ ಅಗೋಸ್ತು ತಾ. ೭ರಲ್ಲಿ ರೋಮನ್ ಕೆಥೋಲಿಕ ಮತಕ್ಕೆ ಮತದಲ್ಲಿ ಪಟ್ಟಾಮುವೆಂದೆನಿಸುವ ಈ ಜೆಜುವಿತ ಸಭೆಯನ್ನೂ ರುಶ್ಯದಲ್ಲಿ ಸೆಕ್ಯುಲರಾಗಿ ಜೀವಿಸಿದ್ದ ೪೦೦ರಲ್ಲಿ ಉಳಿದ ೭೦ ವೈದಿಕರನ್ನೂ ಈ ಸಭೆಯ ಮೂಲಕೂಟವಾಗಿಟ್ಟು ಪುನಸ್ಸ್ಥಾಪಿಸಿದರು. ರುಶ್ಯದಲ್ಲಿ ಈ ಸಭೆಯ ಪ್ರೋವಿನ್ಶಲ್‌ರಾಗಿದ್ದ ಡೆವಿಡ್ ರ್ಯುತನರನ್ನೂ ರೋಮಕ್ಕೆ ಕರತರಿಸಿ, ಈ ಸಭೆಯ ಮೊದಲನೇ ಜೆನರಲರನ್ನಾಗಿ ಮಾಡಿದರು.

ಈ ಸಂದರ್ಭದ ನೆನಪಿಗಾಗಿ ಇದೇ ಅಗೋಸ್ತು ೭ಕ್ಕೆ ಆದ ಶತಮಾನದ ಜುಬಿಲಿ ಉತ್ಸವವನ್ನು ಬಹಳ ಆಡಂಬರವಾಗಿ ನಡಿಸಬೇಕಿತ್ತು. ಈ ಸಭೆಯನ್ನು ಹೀಗೆ ನಟ್ಟ ಫಲವಾಗಿ ಈಗ ಭೂಲೋಕದಲ್ಲಿ ೧೫೦೦೦ ಜೆಜುವಿತರು ಇರುವರು. ಈ ವೈದಿಕರು ತಮ್ಮ ಮತಪ್ರಸರಣೆಗೆ ಸಂಬಂಧಪಟ್ಟ ಕೆಲಸಗಳಲ್ಲಿಯೇ ನಿವೃತ್ತಿಯಾಗಿರದೆ ತಮಗೆ ಸಂಬಂಧವಿಲ್ಲದ ಸಂಸಾರಿಕ ಕೆಲಸಗಳಲ್ಲಿಯೂ ಕೈಹಾಕುವದರಿಂದ ಇವರುಗಳ ಮೇಲೆ ಹೆಚ್ಚಿನ ನಾಖುಶಿಗೆ ಕಾರಣವಾಗುತ್ತಿದೆ. ಹೆಚ್ಚಾಗಿ ತಮ್ಮ ಸಭೆಯ ಮೆಂಬರುಗಳ ಜೀವನೋಪಾಯಕ್ಕೆ ಜನರಲ್ಲಿ ಭಕ್ತಿರಸವನ್ನು ಹುಟ್ಟಿಸಿ, ದೊಡ್ಡ ದೊಡ್ಡ ಆಸ್ತಿಗಳನ್ನೇ ಈ ಸಭೆಗೆ ಮುಫತ್ತಾಗಿ ದಾನ ಮಾಡುವ ಹಾಗೆ ಮಾಡಿ, ಜೀವನೋಪಾಯದಲ್ಲಿ ತಮ್ಮ ಮತಸ್ಥರ ಕೂಡೆ ಸ್ವಾತಂತ್ರ ಶಿಕ್ಕಿದಲ್ಲಿ ಆ ಮತಸ್ಥರನ್ನು ಅಸಡ್ಡೆಯಿಂದ ನಡಿಸುವದು ವಿಪರೀತವಾದ ದ್ವೇಷಕ್ಕೂ ನಾಖುಶಿಗೂ ಕಾರಣವಾಗುತ್ತದೆ. ಸನ್ಯಾಸಿಗಳಾಗಿ ತೋರುವ ಈ ಜೆಜುವಿತರು ದೊಡ್ಡ ದೊಡ್ಡ ಭೂಮಿಗಳನ್ನು ಹೀಗೆ ವಶಮಾಡಿಕೊಂಡು ಜನರೆಲ್ಲರೂ ಇವರ ವಕ್ಕಲುಗಳಾಗಿ ಜೀವಿಸ ಬೇಕಾಗಿರುವದು ಲೌಕಿಕ ಜನರಿಗೆ ಚಂದಗಾಣಿಸದು. ಹೀಗಾಗಿ ಈ ಪ್ರಕಾರ ಭೂಮಿಗಳನ್ನು ಒಳಗೆ ಹಾಕಿ ರಾಜಕುಮಾರರಂತೆ ಜೀವಿಸುವ ಈ ಜೆಜುವಿತರನ್ನು ನನ್ಸ್ ವ ಮಾದ್ರಿಯವರನ್ನು ಫ್ರಾನ್ಸಿನಿಂದಲೂ ಪೋರ್ತುಗಲ್ ದೇಶದಿಂದಲೂ ಓಡಿಸ ಬೇಕಾಯಿತು. ಈ ಸಭೆಯ ಸ್ಥಾಪಕರಾದ ಅರ್ಚ ಇಗ್ನಾಶಿಯಸ್ ಲೊಯೊಲರ ಮಾದರಿಯನ್ನು ಅನುಸರಿಸಿ ಸನ್ಯಾಸಿಗಳಾಗಿಯೇ ಜೀವಿಸಿ ಲೌಕಿಕ ಸಂಗತಿಗಳಲ್ಲಿ ಏನೂ ಕೈ ಹಾಕದೆ ಶಾಸ್ತ್ರಾಭಿವೃದ್ಧಿಯಲ್ಲಿಯೇ ಇವರೆಲ್ಲರೂ ಮನಃಪೂರ್ವಕವಾಗಿ ಜೀವಿಸಿದರೆ ಯಾವ ತರದ ದ್ವೇಷಕ್ಕೂ ಗುರಿಯಾಗದೆ ಸರ್ವಜನರ ಮಹತ್ತಾದ ಪ್ರಯೋಜನಕ್ಕೆ ಕಾರಣಭೂತರಾಗುವರು.

ಕ್ರಿಸ್ತ ಮಾಹಿತಿ.

ದರಬಾರು ಇನಾಮು ಪರೀಕ್ಷೆ, 1914.

ಅಯ್ಯಾ ಪತ್ರಕರ್ತರೇ,

ಮೇಲೆ ಕಾಣಿಸಿದ ಪರೀಕ್ಷೆಯ ಕುರಿತು ಸ್ವಲ್ಪ ಮಾಹಿತಿಯನ್ನು ಕೊಡುವರೆ ತಮ್ಮ ಅಮೂಲ್ಯವಾದ ಪತ್ರಿಕೆಯಲ್ಲಿ ಎಡೆಕೊಡುವಿರಾಗಿ ನಂಬಿದ್ದೇವೆ. ಈ ಪರೀಕ್ಷೆಯು ಇದೇ ಬರುವ ನವಂಬರ ತಾ. ೧೪ನೇ ಶನಿವಾರ ಪೂರ್ವಾಹ್ನ ೧೦ರಿಂದ ೧, ಅಪರಾಹ್ನ ೨ರಿಂದ ೪ರ ವರೇಗೆ ಪುತ್ತೂರು, ಉಪ್ಪಿನಂಗಡಿ, ಬೆಳ್ಳಾರೆ, ವಿಟ್ಲ, ಸುಳ್ಯ, ಪಂಜ ಮತ್ತು ಬೆಳತಂಗಡಿ—ಇಷ್ಟು ಸ್ಥಳಗಳಲ್ಲಿರುವ ಬೋರ್ಡು ಶಾಲೆಗಳಲ್ಲಿ ಜರಗುವದು. ಈ ತಾಲೂಕಿನಲ್ಲಿರುವ ಶಾಲೆಗಳಲ್ಲಿ ಕಲಿಯುವ ಎಲ್ಲಾ ವಿದ್ಯಾರ್ಥಿಗಳು ಪರೀಕ್ಷೆಗೆ ಸ್ಪರ್ಧಿಸಬಹುದು. ಕಳದ ವರುಷದಂತೆಯೇ ೪ನೇ ದರ್ಜೆಯ ವರೇಗೆ ಪ್ರತ್ಯೇಕ, ೫ನೇ ವರೇಗಿನ ದರ್ಜೆಗಳ ವಿದ್ಯಾರ್ಥಿಗಳಿಗೆ ಪ್ರತ್ಯೇಕ—ಈ ರೀತಿ ೨ ಪರೀಕ್ಷೆಗಳು ನಡಿಯುವವು ಮತ್ತು ಬೇರೆ ಬೇರೆ ಇನಾಮುಗಳು ಹಂಚೋಣಾಗುವವು. ಅರ್ಜಿಗಳು ಇದೇ ಬರುವ ಅಕ್ಟೋಬರ ತಾ. ೧೫ರ ಒಳಗೆ ಸಂಘದ ಆಫೀಸಿಗೆ ಮುಟ್ಟುವಂತೆ ಕಳುಹಿಸತಕ್ಕದ್ದು. ಪರೀಕ್ಷೆಯ ಇತರ ಕ್ರಮಗಳೆಲ್ಲ ಮುಂಚಿನಂತೆಯೇ. ಬೋರ್ಡು ಶಾಲೆಯವರು ಅರ್ಜಿಗಳ ಫೋರ್ಮುಗಳನ್ನು ತಾಲೂಕು ಬೋರ್ಡು ಆಫೀಸಿನಿಂದಲೂ ಇತರರು ಈ ಆಫೀಸಿನಿಂದಲೂ ಪಡಿಯಬಹುದು.

ಪುತ್ತೂರು
ತಾ. 17–8–14.

ಕೇಯೂರು ಸುಬ್ಬರಾವ್,
ಮೊಳಹಳ್ಳಿ ಶಿವರಾವ್,
ಪುತ್ತೂರು ವರ್ಗದಾರರ ಸಂಘದ ಕಾರ್ಯದರ್ಶಿಗಳು.

ಪತ್ರವ್ಯವಹಾರ.

ಗಣೇಶಚತುರ್ಥೀನಿರ್ಣಯ.

ಮಧ್ಯಾಹ್ನದ ಸಿದ್ಧಾಂತವು.

ಅಹ್ನೋಭಾಗಾಃ ಮತಭೇದೇನ ಪಂಚಧಾವಿಕಲ್ಪ್ಯಂತೆ ‖ ದ್ವೇಧಾ ತ್ರೇಧಾ ಚತುರ್ಧಾ ಪಂಚಧಾ ಪಂಚದಶಧಾ ಹರ್ ವಿಭಜ್ಯತೆ ‖ ದಿವಸದ ವಿಭಾಗಗಳು ೫ ಪ್ರಕಾರ ನಿರ್ಣಯಿಸಲ್ಪಟ್ಟಿವೆ. ಎರಡು, ಮೂರು, ನಾಲ್ಕು, ಐದು, ಹದಿನೈದು, ಈ ರೀತಿ ದಿನವು ವಿಭಾಗಿಸಲ್ಪಟ್ಟಿದೆ.–ತಸ್ಯ ಪಂಚಧಾವಿಭಾಗಪಕ್ಷಸ್ಯ ಬಹು ಶ್ರುತಿಸ್ಮೃತಿ ಸಿದ್ಧತ್ವಾತ್ ಪ್ರಾಯೇಣೈತಮೇವ ಪಕ್ಷಮಾಶ್ರಿತ್ಯ ವಿಧಿ ನಿಷೇಧ ಶಾಸ್ತ್ರಾಣಿ ಪ್ರವರ್ತಂತೆ ‖ ಆ ಐದು ಪಕ್ಷದಲ್ಲಿ ಪಂಚಧಾವಿಭಾಗ ಪಕ್ಷವು ವೇದದಲ್ಲೂ ಸ್ಮೃತಿಗಳಲ್ಲೂ ಸಿದ್ಧಾಂತಮಾಡಿದ್ದರಿಂದ ಆ ಪಕ್ಷವೇ ಹಿಡುಕೊಂಡು ವಿಧಿ–ನಿಷೇಧ ಶಾಸ್ತ್ರಗಳು ಪ್ರವರ್ತಿಸಲ್ಪಡಬೇಕಾಗಿರುತ್ತದೆ. **ಪಂಚಧಾವಿಭಾಗವು.** ಪಂಚಧಾ ವಿಭಾಗಂ ವ್ಯಾಸ ಆಹ ‖ ಮುಹೂರ್ತತ್ರಿತಯಂ ಪ್ರಾತ ಸ್ತಾವಾನೇವತು ಸಂಗವಃ ‖ ಮಧ್ಯಾಹ್ನಃ ತ್ರಿಮುಹೂರ್ತಸ್ಯಾ ದಪರಾಹ್ಣೋಪಿ ತಾದೃಶಃ ‖ ಸಾಯಾಹ್ನಃ ತ್ರಿಮುಹೂರ್ತಸ್ತು ಇತಿ ಸ್ಮೃತೇಃ ‖ ಬಹ್ವೃಚಾಃ ‖ ಅಶ್ವಿನಿ ಸೂಕ್ತೆ ಆಮನಂತಿ ‖ ಉತಾಯಾತಂ ಸಂಗವೆ ಪ್ರಾತರಹ್ನೊ ಮಧ್ಯಂದಿನ ಉದಿತಾ ಸೂರ್ಯಸ್ಯ ‖ ತೈತಿರೀಯ ಬ್ರಾಹ್ಮಣೇಪಿ ‖ ಯಥೋಕ್ತ ಭಾಗಾನಾಂ ಪಂಚಾನಾಂ ಸ್ವಸ್ವಾಧಿಷ್ಠಾತೃದೇವತಾಃ ಸಮಾಮ್ನಾತಾಃ ‖ ದೇವಸ್ಯ ಸವಿತುಃ ಪ್ರಾತಃ ‖ ಮಿತ್ರಸ್ಯ ಸಂಗವಃ ‖ ಬೃಹಸ್ಪತೆರ್ಮಧ್ಯಂದಿನಃ ‖ ಭಗಸ್ಯಾಪರಾಹ್ಣಃ ‖ ವರುಣಸ್ಯ ಸಾಯಂ ‖ ಇತಿ ‖ ವಾಜಸನೆಯಿನೊಪ್ಯೆವಮಾಮನಂತಿ ‖ ಆದಿತ್ಯೋವೈ ಸರ್ವರ್ತವಃ ‖ ಸಯದ್ದೇವೊ ದೇತ್ಯಥವಸಂತೊ ಯದಾ ಸಂಗವೊ ಫ್ರೀಷ್ಮೊ ಯದಾ ಮಧ್ಯಂದಿನೋಥ ಶರದ್ಯದಾ ಪರಾಹ್ಣಃ ಸ್ತದಾ ವರ್ಷಾ ಯದಾ ಸ್ತಮೇತ್ಯಥ ಹೇಮಂತಃ ‖ ಈ ರೀತಿ ಪಂಚಧಾವಿಭಾಗವು ವೇದಶಾಸ್ತ್ರಗಳಿಂದ ಅಂಗೀಕರಿಸಲ್ಪಟ್ಟದ್ದರಿಂದ ೧೨ಘಳಿಗೆಯನಂತರ ೧೮ ಘಳಿಗೆ ವರೇಗಿನ ಮಧ್ಯಾಹ್ನವು ಸರ್ವಸಮ್ಮತವಾಗಿರುತ್ತದೆ. ಕಳದ ಸಂಚಿಕೆಯಲ್ಲಿ ಪಂಚಾಂಗಕರ್ತರು ಪ್ರಕಟಿಸಿದಂಥಾ ಗಣೇಶಚತುರ್ಥೀನಿರ್ಣಯದಲ್ಲಿ ವಿವರಿಸಿದ ತ್ರೇಧಾವಿಭಾಗವೆಂಬ ೧೦ ಘಳಿಗೆಯ ನಂತರ ೨೦ ಘಳಿಗೆವರೇಗಿನ ಮಧ್ಯಾಹ್ನವನ್ನು ಹಿಡಿದಪಕ್ಷಕ್ಕೆ ಅನೇಕ ಸ್ಮೃತಿಕರ್ತರ (ನೊಭಯತ್ರ ಮಧ್ಯಾಹ್ನ ವ್ಯಾಪಿನೀ) ಎರಡು ದಿನದಲ್ಲೂ ಮಧ್ಯಾಹ್ನಕ್ಕೆ ಇಲ್ಲದಿರೋಣವ ಎಂಬ ವಚನಕ್ಕೆ ವಿರೋಧವಾಗುತ್ತದೆ. ಅದು ಹ್ಯಾಗೆಂದರೆ:—ತಿಥಿವೃದ್ಧಿಃ ಪಂಚನಾಡ್ಯಃ ಕ್ಷಯಃ ಷಣ್ಣಾಡಿಕಾಃ ಸ್ಮೃತಾಃ ‖ ಯಾವಾಗಲೂ ತಿಥಿಯು ೫ ಘಳಿಗೆ ವೃದ್ಧಿ, ೬ ಘಳಿಗೆ ಕ್ಷಯವಂತ ವಿಧಿಸಲ್ಪಟ್ಟಿದೆ. ಆದ್ದರಿಂದ ತ್ರೇಧಾವಿಭಾಗದ ಮಧ್ಯಾಹ್ನ ಗ್ರಾಹಿಗಳಿಗೆ ಎರಡು ದಿನದಲ್ಲೂ ಮಧ್ಯಾಹ್ನಕ್ಕೆ ಇಲ್ಲದಿರೋಣವ ಪ್ರಸ್ತಾವ್ಯಾಂಶ್ಯದ ವರೇಗೆ ಅಸಂಧಾನ್ಯವಾಗುತ್ತದೆ.

ಇದಲ್ಲದೆ ಅಸಮಾಪ್ತೆ ವ್ರತೆ [illegible] ವರಣ್ಯಾರ್ದ್ಧ್ಯ [illegible] ‖ ಎಂಬ [illegible] ಅನೇಕ ವಿಷಯದಲ್ಲಿ ಮಾತ್ರ (ಮಾತ್ರವಿದ್ದ [illegible]—[illegible]

ಚೌತಿ ವೃತ ಪ್ರಶಸ್ತವೆಂಬ) ದೇವಪುರೋಹಿತರಾದ ಬೃಹಸ್ಪತ್ಯಾಚಾರ್ಯರ ವಚನಕ್ಕೆ ವಿರೋಧವಾಗುತ್ತದೆ. ಯಾವಾಗಲೂ ಗೌರೀವಿಸರ್ಜನವು ಗಣಪತೀ ವಿಸರ್ಜನ ಕಾಲದಲ್ಲೆ ಆಗುವ ವಾಡಿಕೆ ಇಲ್ಲಿ ಇರುತ್ತದೆ.—ಕಾಲನಿರ್ಣಯದಲ್ಲಿ ಭಾದ್ರಪದ ಶುಕ್ಲ ಚತುರ್ಥಿಯು ಕುಜ ರವಿವಾರ ಯೋಗವತೀಯಾಗಿದ್ದರೆ ಶಿವಚತುರ್ಥಿ ಎಂಬ ವರಾಹ ಪುರಾಣದಲ್ಲಿನ ವೃತವನ್ನು ಹೇಳಿ ಅನಂತರ ಸ್ಕಾಂದಪುರಾಣೋಕ್ತಸಿದ್ಧಿವಿನಾಯಕ ವೃತವು ಹೇಳಲ್ಪಟ್ಟಿದ್ದರಿಂದ ಭಿನ್ನವೃತಗಳಾಗಿ ತೋರುತ್ತವೆ.—ಆದ್ದರಿಂದ ಸಿದ್ಧಾಂತಿಸಲ್ಪಟ್ಟ ೧೫ರಿಂದ ೧೮ರ ವರೇಗಿನ ಮಧ್ಯಾಹ್ನಕ್ಕೆ ಚತುರ್ಥಿಯು ಕುಜವಾರ ಇಲ್ಲದೆ ಸೋಮವಾರ ಇರುವುದರಿಂದ ಮಾತೃವಿದ್ಧ ಪ್ರಶಸ್ತತೆಯಿಂದಲೂ ಸೋಮವಾರಕ್ಕೆನೇ ಮಾಡಬೇಕು.

ಮಂಗಳೂರು, ತಾ. 19—8—14. ಮಂಗಳೂರು ನಾರಾಯಣಾಚಾರ್ಯ.

೨

ಆನಂದ ಸಂ| ಭಾದ್ರಪದ ಶು. ೩ ಚಂದ್ರವಾರ ಘ. ೧೭| ಮತ್ತು ಚತುರ್ಥಿ ಕುಜವಾರ ಘ. ೧೧|| ಹೀಗೆ ಪ್ರಕೃತ ವರ್ಷದಲ್ಲಿ ಪರಿಸ್ಥಿತಿ ಇರಲು, ವಿನಾಯಕ ವ್ರತವನ್ನು ಯಾವ ದಿನ ಆಚರಿಸತಕ್ಕದ್ದು? ಎಂತ ಪ್ರಶ್ನೆ ಬರುತ್ತದೆ. "ಮಧ್ಯಾಹ್ನೇ ಪೂಜಯೇನ್ನೃಪ" ಎಂತ ಮಧ್ಯಾಹ್ನ ಕಾಲದಲ್ಲಿ ಪೂಜೆಯ ವಿಧಾನವಿದ್ದ ಪ್ರಯುಕ್ತ ಚತುರ್ಥಿಯು ಮಧ್ಯಾಹ್ನ ವ್ಯಾಪಿನೀ ತಕ್ಕೊಳ್ಳಬೇಕಾದದ್ದು. ಈ ಮಧ್ಯಾಹ್ನ ಕಾಲವು "ತ್ರೇಧಾವಿಭಕ್ತದಿನ ಮಧ್ಯಭಾಗಃ". ಈ ಮತದಂತೆ ಹನ್ನೊಂದು ಘಳಿಗೆಯಿಂದ ಇಪ್ಪತ್ತು ಘಳಿಗೆಯ ವರೆಗಿನದಾಗುತ್ತದೆ. ೩ ಸೋಮವಾರ ದಿವಸ ಚತುರ್ಥಿಯ ಮಧ್ಯಾಹ್ನ ವ್ಯಾಪ್ತಿಯು ೨||| ಘಳಿಗೆ ಸಿಗುತ್ತದೆ. ಮತ್ತು ಕುಜವಾರ ದಿವಸ ಬರೇ || ಘಳಿಗೆ ಮಾತ್ರ ಸಿಗುತ್ತದೆ. "ಪಂಚಧಾ ವಿಭಕ್ತ" ಇತ್ಯಾದಿ ವಚನದಿಂದ ನೋಡಿದರೂ ಪೂರ್ವದಿವಸದಲ್ಲಿ ಚತುರ್ಥಿಯ ವ್ಯಾಪ್ತಿಯು ||| ಘಳಿಗೆ ಸಿಗುವದಾದರೆ ಪರದಿವಸದಲ್ಲಿ ಅದು ಸುತರಾಂ ಗಗನಕುಸುಮಪ್ರಾಯವಾಗುತ್ತದೆ.! ಮಧ್ಯಾಹ್ನ ಕಾಲ ನಿರ್ಣಾಯಕವಾದ ಈ ಎರಡೂ ಮತಗಳಂತೆ ನೋಡಿದ್ದಲ್ಲಿ ಪೂರ್ವದಿವಸದಲ್ಲಿ ಚತುರ್ಥಿಯು ಅಧಿಕ ವ್ಯಾಪಿನೀಯಾದ ಕಾರಣ "ದಿನದ್ವಯೇ ಸಾಮ್ಯೇನ ವೈಷಮ್ಯೇಣ ವೈಕದೇಶವ್ಯಾಪ್ತಾವಪಿ ಪೂರ್ವೈವ ಈ ಧರ್ಮಸಿಂಧು ವಚನ ಪ್ರಕಾರ ವಿನಾಯಕ ವ್ರತವು ೩ ಸೋಮವಾರವೇ ಎಂತ ಸಿದ್ಧವಾಗುತ್ತದೆ. ಈಗ "ವೈಷಮ್ಯೇಣ ವ್ಯಾಪ್ತ್ಯಾಧಿಕ ವ್ಯಾಪಿನೀ ಚೇತ್ ಪರೇತಿ ಕೇಚಿತ್" ಈ ವಚನವು ಇಲ್ಲಿ ಸರಿಬೀಳುವದಿಲ್ಲ. ಏಕೆಂದರೆ ಉದಾಹರಿಸಿದ ವಚನದೊಳಗಿನ "ಕೇಚಿತ್" ಎಂಬ ಪದದಿಂದ ಗ್ರಂಥಕರ್ತರಿಗೆ ಈ ಮತವು ಸಮ್ಮತವಿಲ್ಲವೆಂಬುವದು ಸಮಂಜಸರಿಗೆ ಸ್ಪಷ್ಟವಾಗುತ್ತದೆ. ಇದಲ್ಲದೆ, ಈ ಕೇಚಿನ್ಮತದಲ್ಲಿ "ಅಧಿಕವ್ಯಾಪಿನೀ" ಎಂಬುವುದು ವಚನಾಂತರ ಸಾಪೇಕ್ಷವಾದದ್ದು. ಎಂದರೆ ಪುರುಷಾರ್ಥ ಚಿಂತಾಮಣಿಯೊಳಗಿನ "ಪೂರ್ವಾಪೇಕ್ಷಯಾ ಅಧಿಕ ಮಧ್ಯಾಹ್ನೈಕದೇಶವ್ಯಾಪ್ತಿರ್ವಾ ತದೈವ ಪರಾ| ಅನ್ಯದಾತು ಪೂರ್ವೈವಗ್ರಾಹ್ಯಾ||" ಈ ವಚನದಂತೆ ಪರದಿನದಲ್ಲಿ ಚತುರ್ಥಿಯು ಅಧಿಕ ವ್ಯಾಪಿನಿಯಾದರೆ ಮಾತ್ರ ಪರದಿವಸ ಮಾಡುವದು ನ್ಯಾಯವಾದದ್ದು. ಆದರೆ ಪ್ರಕೃತ ಪರದಿನ ಅಧಿಕ ವ್ಯಾಪ್ತಿ ಇಲ್ಲೆಂದು ಮೇಲೆ ತೋರಿಸಿಯದೆ. ಇದಲ್ಲದೆ,

"ಚತುರ್ಥೀ ಗಣನಾಥಸ್ಯ ಪೂರ್ವವ್ಯಾಧಿಕ ವ್ಯಾಪಿನೀ! ಗ್ರಾಹ್ಯಾಪರಾತದಾಕಾರ್ಯಾ ಪೂರ್ವೇ-ದ್ಯುರ್ನಭವೇದ್ಯದಾ" || ತಿಥಿ ಕಲ್ಪತರುದೊಳಗಿನ ಈ ವಚನವೂ ಸಂಗತವಾಗುತ್ತದೆ.

"ಅಹ್ನೋ ಮಧ್ಯಂ ಮಧ್ಯಾಹ್ನಂ" ಈ ಪಕ್ಷವು ಉಭಯತರಿಗೂ ಅಪ್ರಯೋಜಕವಾದದ್ದು

"ಭಾದ್ರೇ ಶುಕ್ಲ ಚತುರ್ಥಿಯಾ" ಈ ವಚನವು ನಿರ್ಣಾಯಕವಲ್ಲ; ಆದರೆ ಕುಜಾದಿಯೋಗ ಪ್ರಾಶಸ್ತ್ಯ ಬೋಧಕವು. ಮಾತ್ರವಲ್ಲ, ಇದು ಸಾಮಾನ್ಯ ವಚನವಾದ ಕಾರಣ ಪ್ರಾತಿ ಸ್ವಿಕತಯಾವಿಹಿತವಾದ ಮೇಲೆ ತೋರಿಸಿದ ವಿಶೇಷ ವಚನಗಳಿಂದ "ವಿಶೇಷೇಣ ಸಾಮಾನ್ಯಸ್ಯ ಬಾಧಃ" ಈ ನ್ಯಾಯದಂತೆ ಬಾಧಿತವಾಗುತ್ತದೆ.

"ಆಚರಿಸೋಣಾದ" ಗೌರೀವ್ರತವನ್ನು ಮುಗಿಸದೆ ಅನ್ಯ ವ್ರತವನ್ನು ಯಾರೂ ಎಲ್ಲಿಯೂ ಮಾಡುವದಿಲ್ಲ. ಜನರು ಒಂದನ್ನು ಮುಗಿಸಿ ಇನ್ನೊಂದನ್ನು ಆಚರಿಸುತ್ತಾರೆ. ಹೀಗಿರುವಲ್ಲಿ "ಅಸಮಾಪ್ತೇವ್ರತೇ" ಇತ್ಯಾದಿ ವಚನದ ಅರ್ಥವನ್ನು "ಒಂದು ದಿವಸದಲ್ಲಿ ಕ್ರಮ ಮತ್ತು ಕಾಲಪ್ರಾಪ್ತವಾದ ಎರಡು ವ್ರತಗಳನ್ನು ಮಾಡ ಕೂಡದು" ಎಂತ ಮಾಡಿದರೆ ೩ ಯು ೧೩ ಘಳಿಗೆ, ಮತ್ತು ಮಾರನೇ ದಿನ ೪ ಯು ೭ ಯಾ ೮ ಘಳಿಗೆ ಇದ್ದಾಗ ಚತುರ್ಥಿಯನ್ನು ಯಾವ ದಿನ ಆಚರಿಸಬೇಕಾದೀತು? ಆದಕಾರಣ ಸದರೀ ಅರ್ಥವು ಅನಾದರಣೀಯವಾಗಿರುತ್ತದೆ.

ಸಾರಾಂಶ:— ಬರುವ ಗಣೇಶವ್ರತವು ನಿರ್ವಿವಾದವಾಗಿ ೩ಯು ಸೋಮವಾರವೇ ಆಚರಿಸಲ್ಪಡತಕ್ಕದ್ದು.

ಮಂಗಳೂರು. ಶ್ರಾ| ಬ| ೧೩ ಬುಧವಾರ. } ಆತ್ಮಾರಾಮ ಶಾಸ್ತ್ರೀ ಬಿದ್ದಮನೆ.

೩

ಸ್ವಾಮಿಾ,

ಇದೇ ಆನಂದ ಸಂವತ್ಸರದ ಗಣೇಶಚತುರ್ಥಿಯನ್ನು ಸೋಮವಾರ ಆಚರಿಸಬೇಕೋ ಮಂಗಳವಾರ ಆಚರಿಸತಕ್ಕದ್ದೋ ಎಂಬದರ ಕುರಿತು ಸ್ವದೇಶಾಭಿಮಾನಿಯ ಕಳದ ಕೆಲವು ಸಂಚಿಕೆಗಳಲ್ಲಿ ಪ್ರಸ್ತಾಪಗಳು ನಡಿಯುತ್ತಲೇ ಇವೆಯಷ್ಟೆ. ಮಂಗಳವಾರವೇ ಆಚರಿಸತಕ್ಕದೆಂಬದಕ್ಕೆ ವೇ. ಉದ್ಯಾವರ ನಾರಾಯಣಾಚಾರ್ಯರು ಈ ತಾ. ೧೪ರಲ್ಲು ಬರೆದ ಸಮಾಧಾನವನ್ನು ನೋಡಿ ಆಶ್ಚರ್ಯವಾಗುತ್ತದೆ. ಚತುರ್ಥಿಯು ಮಧ್ಯಾಹ್ನ ವ್ಯಾಪಿನಿಯಾಗಿರಬೇಕೆಂಬದನ್ನು ಇವರೂ ಒಪ್ಪುತ್ತಾರೆ. ಕುಜವಾರ ಚತುರ್ಥಿಯು ೧೧|| ಘಳಿಗೆ ಮಾತ್ರ ಇದ್ದರೂ ಮಧ್ಯಾಹ್ನ ವ್ಯಾಪಿನಿಯಾಗುತ್ತದೆಂತ ಹೇಳುವದು ಮಾತ್ರ ಅಸಂಗತ. ಹ್ಯಾಗಂದರೆ:—ಸೋಮವಾರ ದಿವಸ ಮಧ್ಯಾಹ್ನ ಕಾಲದಲ್ಲಿ ತ್ರೇಧಾವಿಭಾಗರೀತ್ಯಾನೇ ಚತುರ್ಥಿಯು ೨||| ಘಳಿಗೆ ಇರುತ್ತದೆ. ಪರದಿನ ೧|| ಘಳಿಗೆ ಮಾತ್ರ ಇರುವುದು. ಇಲ್ಲಿ ಅಧಿಕ ವ್ಯಾಪ್ತಿ ಪೂರ್ವದಿನದಲ್ಲಿರುವದರಿಂದ "ಚತುರ್ಥೀ ಪರದಿನೇ ಏಕಾಂಶೇನ ಸಾಕಲ್ಯೇನ ವಾ ಮಧ್ಯಾಹ್ನ ವ್ಯಾಪ್ತಿರಭಾವೇ ಸರ್ವ ಪಕ್ಷೇ ಪೂರ್ವಾಗ್ರಾಹ್ಯಾ" ಎಂಬ ನಿರ್ಣಯಸಿಂಧು ವಚನಾನುಸಾರವೂ "ಜಯಾ ಚ ಯದಿ ಸಂಪೂರ್ಣಾ ಚತುರ್ಥೀ ಹ್ರಸತೇಯದಿ| ಜಯಾ ಸ್ವೈವ ಹಿ ಕರ್ತವ್ಯಾ ನಾಗವಿದ್ಧಾಂ ನಕಾರಯೇತ್"|| ಎಂಬ ಕಾಲಮಾಧವಸ್ಮೃತಿ ವಚನದಿಂದಲೂ ನಾಗವಿದ್ಧಕ್ಕಿಂತಲೂ ಮಾತೃವಿದ್ಧವೇ ಪ್ರಶಸ್ತವು. ಅಂದರೆ ಸೋಮವಾರವೇ ಆಚರಿಸತಕ್ಕದ್ದು. ಮತ್ತು "ತಿಥಿಸ್ಸಿದ್ಧಾಂತತೋಗ್ರಾಹ್ಯಾ ಸರ್ವ ಕಾರ್ಯ ವ್ರತಾದಿಷು|| ವಿಷ್ಣುವ್ರತೇಷು ನ ಗ್ರಾಹ್ಯಾ ಸೂರ್ಯಸಿದ್ಧಾಂತ ಮಾರ್ಗತಃ|| ಪಿತ್ರಾದಿ ಕಾರ್ಯಾಣಿ ಚ ಬ್ರಹ್ಮಪಕ್ಷಾತ್ ಸೌರೇಣ ಕುರ್ಯಾದ್ವ್ರತ ಯಜ್ಞದೀಕ್ಷಾ|| ಆರ್ಯೈಶ್ಚ ವಿಷ್ಣುವ್ರತಧರ್ಮಕಾನಿ ಪ್ರೋಕ್ತಾನಿ ದುರ್ವಾಸ ವಸಿಷ್ಠ ಮುಖ್ಯೈಃ|| ಬ್ರಾಹ್ಮೇಣ ಪಿತೃಕಾರ್ಯಾಣಿ ದೇವಕಾರ್ಯಾಣಿ ಸೌರತಃ|| ವಿಷ್ಣುವ್ರತಾನಿ ಚಾರ್ಯೇಣ ನಿಶ್ಚಿತಾನಿ ಮನೀಷಿಭಿಃ|| ಎಂಬಿತ್ಯಾದಿ ಪ್ರಮಾಣಗಳಿಂದ ಗಣೇಶವ್ರತಾದಿಗಳನ್ನು ಸೂರ್ಯಸಿದ್ಧಾಂತ ರೀತ್ಯಾನೇ ಆಚಾರಿಸಬೇಕಲ್ಲದೆ ಆರ್ಯಸಿದ್ಧಾಂತರೀತ್ಯಾ ಆಚಾರಿಸತಕ್ಕದ್ದಲ್ಲ. ಮಂಗಳವಾರ ದಿವಸ ಚತುರ್ಥಿಯು ೧೧|| ಘಳಿಗೆ ಇರುವದು ಆರ್ಯಸಿದ್ಧಾಂತರೀತ್ಯಾ; ಸೂರ್ಯಸಿದ್ಧಾಂತರೀತ್ಯಾ ಆ ದಿವಸ ೯||| ಘಳಿಗೆ ಮಾತ್ರವಿರುವದು. "ಆದ್ದರಿಂದ "ತ್ರೇಧಾವಿಭಕ್ತದಿನ ಮಧ್ಯಭಾಗ" ಎಂಬ ಪ್ರಕಾರವಾದರೂ ಮಂಗಳವಾರ ಚತುರ್ಥಿಯು ಮಧ್ಯಾಹ್ನ ವ್ಯಾಪಿನಿಯಾಗಿಲ್ಲ. (ಈ ಕಾರಣದಿಂದಲೇ ನಾವು ಈ ಆನಂದ ಸಂವತ್ಸರದ ಉಡುಪಿ ಪಂಚಾಂಗದಲ್ಲಿ ಸೂರ್ಯ ಸಿದ್ಧಾಂತ ಪ್ರಕಾರವೂ ತಿಥಿ ನಕ್ಷತ್ರಗಳನ್ನು ಕೊಟ್ಟಿರುವೆವು. ಇನ್ನು ಮುಂದೆಯೂ ದೇವರು ನಡಿಸಿದರೆ ಕೊಡುವದಾಗಿ ನಿಶ್ಚೈಸಿರುವೆವು.) ಇನ್ನು ಭೌಮಾರ್ಕವಾರ ಯೋಗವಿದ್ದರೆ ಚತುರ್ಥಿಯು ಮಧ್ಯಾಹ್ನ ವ್ಯಾಪಿನಿಯಾಗಿದ್ದಳೇನೆ ವಿಶೇಷವಲ್ಲದೆ ಜಯಂತಿ ಯೋಗವಿದ್ದರೂ ನಿಶೀಥದಲ್ಲಿ ಅಷ್ಟಮಿ ಇಲ್ಲದಿದ್ದರೆ ಹ್ಯಾಗೆ ಕೃಷ್ಣಾಷ್ಟಮಿ ಆಚರಣೆ ಇಲ್ಲವೋ, ಹಾಗೆಯೇ ಮಧ್ಯಾಹ್ನ ವ್ಯಾಪಿನಿಯಾಗಿಲ್ಲದೆ ಬರೇ ಭೌಮಾರ್ಕಯೋಗದಿಂದಲೋ ನಾಗವಿದ್ಧದಿಂದಲೋ ವಿಶೇಷವಾಗಲಾರದು. ಅದಲ್ಲದೆ ಇವರು ಉದಾಹರಿಸಿರುವ ಮೂರು ವಿಧದ ಮಧ್ಯಾಹ್ನ ವಿಭಾಗಗಳ ಪೈಕಿ "ಅಹ್ನೋಮಧ್ಯಂ ಮಧ್ಯಾಹ್ನಂ" ಎಂಬದೆ ಪ್ರಶಸ್ತವಾಗಿ ತೋರುತ್ತದೆ. ಹ್ಯಾಗಂದರೆ "ಉದಯ ವ್ಯಾಪಿನೀ ದರ್ಶಾ ಪೌರ್ಣಮಾಯಾತು ಯಾಮಿಕಾ ಮಧ್ಯಾಹ್ನ ವ್ಯಾಪಿನೀಪ್ರೋಕ್ತಾ" ಇಲ್ಲಿ ಮಧ್ಯಾಹ್ನ ಶಬ್ದಕ್ಕೆ ೧೫ ಘಳಿಗೆ ಇರಬೇಕೆಂತ ವಿಷ್ಣು ಪಂಚಕ ಉಪೋಷ್ಯ ವಿಚಾರದಲ್ಲಿಯೂ "ಮಧ್ಯಾಹ್ನಾ ದೂರ್ಧ್ವಮಪ್ಯಣು" ಎಂಬದಾಗಿ ಶ್ರವಣ ದ್ವಾದಶಿ ವಿಚಾರದಲ್ಲಿಯೂ, ಮಧ್ಯಾಹ್ನ ಶಬ್ದಕ್ಕೆ ೧೫ ಘಳಿಗೆ ಪರ್ಯಂತ ಎಂಬದೇ ಅಭಿಪ್ರಾಯ. ಅದೇ ಯುಕ್ತ ತೋರುತ್ತದೆ. ಮತ್ತು "ಅಸಮಾಪ್ತೇವ್ರತೇ ಪೂರ್ವೇ ನೈವ ಕುರ್ಯಾದ್ವ್ರತಾಂತರಂ "ಎಂಬದಾಗಿ ಒಂದು ವ್ರತವು ಸಮಾಪ್ತವಾಗುವ ಮೊದಲು ಇನ್ನೊಂದು ವ್ರತವನ್ನು ಆಚರಿಸಬಾರದೆಂಬ ಅಭಿಪ್ರಾಯವು ಇದಕ್ಕೆ ಲಗಾವಾಗುವದಿಲ್ಲವು. ಆಗುವದಿದ್ದರೆ ಮರುದಿವಸ ಒಂದು ವೇಳೆ ೨—೩ ಘಳಿಗೆ ಚತುರ್ಥಿ ಇದ್ದರೂ, ಪೂರ್ವದಿನ ಆಚರಿಸಲೇಕೂಡದೆಂಬದಾಗಿ ಹೇಳಿದಂತಾಗುತ್ತದೆ. ಈ ಎಲ್ಲಾ ಕಾರಣಗಳಿಂದಲೂ ಈ ವರ್ಷದ ಗಣೇಶಚತುರ್ಥಿಯನ್ನು ಸೋಮವಾರ ದಿವಸವೇ ಆಚರಿಸಬೇಕೆಂಬದು ಸಪ್ರಮಾಣವೂ, ಸಯುಕ್ತಿಕವೂ, ಶಿಷ್ಟಾಚಾರವೂ ಎಂಬದರಲ್ಲಿ ಸಂದೇಹವಿಲ್ಲ. ಅದಲ್ಲದೆ ಇನ್ನೊಂದು ಮಾತು ಏನಂದರೆ, ಯಾರೂ ಸರ್ವಜ್ಞರಾಗಿಲ್ಲ, ಎಂಥವನಿಗಾದರೂ ಪ್ರಮಾದಗಳಿಂದ ಎಷ್ಟೊ ತಪ್ಪುಗಳು ಸಂಭವಿಸಬಹುದು. ಅಂಥಾದ್ದನ್ನು ಶುಷ್ಕ ಪ್ರಮಾಣಗಳಿಂದ ಬಲಪಡಿಸುವದಕ್ಕೆ ಪ್ರಯತ್ನಿಸಿ ತಮ್ಮ ಅಮೌಲ್ಯವಾದ ಪತ್ರದ ಸ್ಥಳವನ್ನು ದುರುಪಯೋಗ ಪಡಿಸುವದಕ್ಕಿಂತ ತಪ್ಪನ್ನು ಒಪ್ಪಿಕೊಳ್ಳುವದೇ ವಿವೇಕವೆಂತ ತೋರುತ್ತದೆ.

ಉಡುಪಿ 17—8—14. ಆತ್ತೂರು ವೆಂಕಟರಾವ ಉಡುಪ

ಯುದ್ಧ ಸಮಾಚಾರವು.

15ನೇ ಆಗೋಸ್ತು.

ಬೆಲ್ಜಿಯಮ್. ಬೆಲ್ಜಿಯಮಿನಲ್ಲಿ ಸೆರೆಹಿಡಿಯಲ್ಪಟ್ಟ ಜರ್ಮನನೊಬ್ಬನ ಹತ್ತರ ಯುದ್ಧಪಠವೊಂದು ದೊರಕಿರುತ್ತದೆ. ಈ ಪಠದಲ್ಲಿ ಸೂಚಿಸಿರುವ ಪ್ರಕಾರ ಜರ್ಮನ ಸೇನೆಯು ಇದೇ ತಿಂಗಳ ತಾರೀಕು ೩ ರಲ್ಲಿ ಜರ್ಮನರು ಬೆಲ್ಜಿಯಮಿನ ಬ್ರುಸೆಲ್ಸ್ ಪಟ್ಟಣಕ್ಕೆ ಮುಟ್ಟಿ ಅಲ್ಲಿಂದ ತಾರೀಕು ೫ ರ ಒಳಗೆ ಫ್ರಾನ್ಸಿನ ಉತ್ತರ ಪೂರ್ವದಿಕ್ಕಿನಲ್ಲಿರುವ ಲಿಲ್ಲೆ ಪಟ್ಟಣವನ್ನು ಒಳನುಗ್ಗಬೇಕೆಂದು ನಿಶ್ಚಯಿಸಿದ್ದರೆಂತ ತೋರಿಬರುತ್ತದೆ. ಆದರೆ ಜರ್ಮನಿಯ ಈ ಸಾಧನೆಯು ನೆರವೇರದೆ ಹೋಯಿತು. ಲೀಜು ಪಟ್ಟಣವನ್ನು ಜರ್ಮನರು ಒಳನುಗ್ಗಿದ ವೃತ್ತಾಂತವು ಫ್ರಾನ್ಸಿನಲ್ಲಿ ಈ ರೀತಿ ಪ್ರಕಟಿಸಲ್ಪಟ್ಟಿರುವುದು. ಕೋಟೆಗಳೆಲ್ಲವು ಸುರಕ್ಷಿತವಾಗಿರುವವು. ರಾತ್ರೆ ಕತ್ತಲೆಯಲ್ಲಿ ಜರ್ಮನ ಸೇನಿಕರಲ್ಲಿ ಕೆಲವರು ಮಾತ್ರ ಲೀಜು ಪಟ್ಟಣವನ್ನು ಒಳನುಗ್ಗಿರುವರು. ಜರ್ಮನರ ಸೇನೆ ರಾಶಿಯು ಪ್ರಕೃತ ಲೀಜು ಮತ್ತು ಲೀಜಿನಿಂದ ದಕ್ಷಿಣ ಪೂರ್ವಕ್ಕಿರುವ ಥಿಯೊನ್ವಿಲ್ಲೆ ರೈಲ್ವೆ ನಿಲ್ದಾಣದ ನಡುವೆ ಚದರಿರುವುದು. ಒಸ್ಟ್ರಿಯನರ ಸೇನೆಯು ಬಂದು ಆಲಸೇಸ್‌ನ್ನು ಒಳನುಗ್ಗಿರುವರೆಂಬದಾಗಿ ತೋರಿ ಬರುವುದು. ಲೀಜು ಕೋಟೆಯು ಇನ್ನೂ ಜರ್ಮನರ ವಶವಾಗಿರುವದಿಲ್ಲ. ಆರು ಸಾವಿರ ಜರ್ಮನರು ಲೀಜಿನಿಂದ ಪಶ್ಚಿಮಕ್ಕೆ ೨೪ ಮೈಲುಗಳ ದೂರದಲ್ಲಿರುವ ಲೆಂಡೆನ್ ಪಟ್ಟಣವನ್ನು ಹಿಡಿದಿರುವರು. ನಂತರದ ವಾರ್ತೆಯು ಈ ಪಟ್ಟಣವನ್ನು ಬೆಲ್ಜಿಯನರು ಕೈವಶ ಮಾಡಿಕೊಂಡಿರುವರೆಂತ ಸೂಚಿಸುತ್ತದೆ. ಬ್ರಿಟಿಷ್ ಸೇನೆಯು ಅಥವಾ ಫ್ರೆಂಚು ಮತ್ತು ಬೆಲ್ಜಿಯಮ್ ಸೇನೆಗಳು ಎಲ್ಲೆಲ್ಲಿರುವರೆಂಬ ವಾರ್ತೆಯನ್ನು ಈಗ ಪ್ರಕಟಿಸುವುದು ಉಚಿತವಲ್ಲದ್ದರಿಂದ ಈ ವಾರ್ತೆಯನ್ನು ಪ್ರಕಟಿಸಲಿಲ್ಲವೆಂಬದಾಗಿ ಲಂಡನಿನಲ್ಲಿ ಸರಕಾರದ ಯುದ್ಧವರ್ತಮಾನ ಸಂಗ್ರಹದ ಆಫೀಸಿನವರು ತಿಳಿಸಿರುವರು. ಜರ್ಮನ್ ಸೇನೆಯು ಮುಂದೊತ್ತಿ ಬರುತ್ತಿದ್ದ ಸೇನಾಂಗವು ಪ್ರಕೃತ ಮುಂದರಿಸಲಾರದೆ ಸೇನೆಯನ್ನು ಸೇರಿರುವುದು. ಇತರ ವಾರ್ತೆಗಳೇನೂ ಇರವು.

ರುಶ್ಯ. ರುಶ್ಯಯನರು ತಮ್ಮ ಸರಹದ್ದುಗಳಲ್ಲಿರುವ ಚಿಕ್ಕ ಕದನಗಳಲ್ಲಿ ಒಸ್ಟ್ರಿಯನರನ್ನು ಸೋಲಿಸಿದ್ದರಿಂದ ಒಸ್ಟ್ರಿಯನರು ಹಿಂದಕ್ಕೆ ಓಡುತ್ತಿರುವರು.

ಲಂಡನ್. ಅಂಗ್ಲಾಳವನ್ನು ಬಿಟ್ಟು ಹೊರಪ್ರಾಂತ್ಯಗಳಲ್ಲಿ ಹೋಗಿ ಕಾದಾಡಲು ಸಿದ್ಧವಿರುವ ಸೇನೆಯನ್ನು ಸೇನಾಂಗಗಳಲ್ಲಿ ಹಲವು ತಮ್ಮ ಸ್ವೇಚ್ಛೆಯಿಂದ ಬಂದು ಸೇರುತ್ತಲಿವೆ. ಬ್ರಿಟಿಷ ದ್ವೀಪಗಳಲ್ಲಿರುವ ಆಯಾ ಪ್ರಾಂತ್ಯಗಳ ಸೇನೆಗಳೆಲ್ಲವು ಅಲ್ಲಲ್ಲಿ ಸಿದ್ಧವಾಗಿರುವವು. ಕಳೆದ ಮೇ ತಿಂಗಳಲ್ಲಿ ಏನೋ ಒಂದು ತಪ್ಪಿನ ಮೇಲೆ ಆರು ತಿಂಗಳ ಸಜೆಹೊಂದಿದ ಕರ್ನೆಲ್ ವಿಟ್ಟಾಕರ್ ಎಂಬವರನ್ನು ಬಿಡುಗಡೆ ಮಾಡಿರುವರು. ಇವರು ಸೇನೆಯನ್ನು ಸೇರಿ ಕಾದಾಡಲು ಸಿದ್ಧವಿರುತ್ತಾರೆ. ಆಫ್ರಿಕದಲ್ಲಿ ಜರ್ಮನರ ಸ್ವಾಸ್ಥ್ಯವಾದ ಟೋಗೋಲೆಂಡನ್ನು ಬ್ರಿಟಿಷ ಸ್ವಾಸ್ಥ್ಯಗಳಿಗೆ ಕೂಡಿಸುವುದರಿಂದ ಬ್ರಿಟಿಷರಿಗೆ ತಂತೀ ಇಲ್ಲದೆ ಟೆಲಿಗ್ರಾಫುಗಳನ್ನು ಬಿಡುವ ಅತಿ ವಿಶಾಲವಾದ ಸ್ಥಾನವು ದೊರಿಯುವುದು. ಈ ಸ್ಥಳದಿಂದ ಸುತ್ತಲೂ ೨೦೦೦ ಮೈಲುಗಳ ವರೆಗೆ ಟೆಲಿಗ್ರಾಫುಗಳ ಚಲಾವಣೆ ನಡಿಸಬಹುದಾಗಿರುವುದು. ಧಾರಣೆ ವಾಸಿಯು ಅಂಗ್ಲಾಳದಲ್ಲಿ ಒಂದಿಷ್ಟಾದರೂ ಏರಿರುವುದಿಲ್ಲ. ನೊರ್ವೆ, ಸ್ವೀಡನ್, ಹೊಲ್ಲೆಂಡ್ ಮೊದಲಾದ ದೇಶಗಳಿಗೆ ಹೋಗೆ ಹಡಗುಗಳಲ್ಲಿ ವ್ಯಾಪಾರ ವ್ಯವಾಟಗಳು ಈಗಲೂ ಒಂದಿಷ್ಟು ಅಪಾಯವಿಲ್ಲದೆ ನಡಿಯುತ್ತಿರುವುದರಿಂದ ಸಮುದ್ರ ಪ್ರಾಂತ್ಯಗಳ ಮೇಲಣ ಬ್ರಿಟಿಷರ ಅಧಿಕಾರಕ್ಕೆ ಯಾವ ತರದ ಕೊರತೆಯಾದರೂ ಉಂಟಾಗಲಿಲ್ಲವೆಂತ ಸ್ಪಷ್ಟವಾಗುತ್ತದೆ. ಈ ತನಕ ಬ್ರಿಟಿಷರ ವ್ಯಾಪಾರ ಹಡಗುಗಳಿಗೆ ಏನೊಂದು ತರದ ಬಲಾತ್ಕಾರದ ಬಾಧೆಯು ಸಂಭವಿಸಿರುವದಿಲ್ಲವೆಂತ ತಿಳಿಯುತ್ತೇವೆ.

ಬಲ್ಕಾನ್. ಜರ್ಮನರ ಯುದ್ಧನಾವೆಗಳೆರಡು ಟರ್ಕಿಯಲ್ಲಿರುವ ಡಾರ್ಡನೆಲ್ಸ್ ಜಲಸಂದನ್ನು ಸೇರಿಕೊಂಡು ಅಲ್ಲಿ ತಮ್ಮ ವಿರೋಧಿಗಳ ಹಡಗುಗಳು ಇರುವವೋ ಎಂತ ಹುಡುಕಾಡುತ್ತಿರುವವು. ಒಸ್ಟ್ರಿಯಾ ದೇಶದ ಸೇನೆಯು ಮೊಂಟೆನಿಗ್ರೊವನ್ನು ಮುತ್ತಲು ಪ್ರಾರಂಭಿಸಿರುವುದು. ಮೊಂಟೆನಿಗ್ರೊದಿಂದ ಜರ್ಮನ್ ರಾಯಭಾರಿಯು ತೆರಳಿ ಹೋಗುವುದರಿಂದ ಈ ದೇಶಗಳೊಳಗೂ ಕಲಹವುಂಟಾಗುವುದು.

ಜರ್ಮನಿ. ಜರ್ಮನಿಯ ರಾಜಧಾನಿಯಾದ ಬರ್ಲಿನ್ ಪಟ್ಟಣದಲ್ಲಿ ಪ್ರಜೆಗಳು ಯುದ್ಧಕ್ಕೆ ಬೇಕಾದ ಖರ್ಚನ್ನು ಸಾಲವಾಗಿ ತೆರಬೇಕೆಂದು ಸರಕಾರದವರು ಪ್ರಕಟಿಸಿರುವುದರಿಂದ ಜನರು ರಕ್ಷಿಸಿಟ್ಟಿರುವ ೧೫೦೦ ಮಿಲಿಯ ಪವನುಗಳು ಸರಕಾರದವರಿಂದ ತಕ್ಕೊಳ್ಳೋಣಾಗುವವು.

ದಕ್ಷಿಣ ಆಫ್ರಿಕ. ಸಾಮ್ರಾಜ್ಯ ಸರಕಾರದವರ ಸೇನೆಯನ್ನು ಅಂಗ್ಲಾಳಕ್ಕೆ ಈ ಯುದ್ಧ ಸಂದರ್ಭ ತಕ್ಕೊಂಡು ಹೋಗಬಹುದೆಂತಲೂ ದಕ್ಷಿಣ ಆಫ್ರಿಕದ ಭದ್ರತೆಯನ್ನು ತಾವೇ ನೋಡಿಕೊಳ್ಳುವೆವೆಂತಲೂ ಯುನಿಯನ್ ಸರಕಾರದವರು ಸಾಮ್ರಾಜ್ಯ ಸರಕಾರಕ್ಕೆ ತಿಳಿಸಿದ್ದರಿಂದ ದಕ್ಷಿಣ ಆಫ್ರಿಕದಿಂದ ಸಾಮ್ರಾಜ್ಯ ಸರಕಾರದ ಸೇನೆಯು ಅಂಗ್ಲಾಳಕ್ಕೆ ಒಯ್ಯೋಣಾಗುವದೆಂತ ತಿಳಿದು ಬರುತ್ತದೆ.

ಜರ್ಮನ ಚಕ್ರವರ್ತಿಯವರ ಜನನಕಾಲದ ಗ್ರಹಗಳು ಸೂಚಿಸುವ ಅಶುಭ ಫಲಗಳು.

ಮೇ| ಡಬ್ಲ್ಯು. ಒಲ್ಡ್ ಎಂಬವರು ೧೮೮೮ರಲ್ಲಿ ಜರ್ಮನ ವಿಲ್ಹೆಹೆಲ್ಮ್ ಚಕ್ರವರ್ತಿಗಳ ಜಾತಕವನ್ನು ತಯ್ಯಾರಿಸಿದ್ದರು. ಚಕ್ರವರ್ತಿಗಳು ೧೮೫೯ನೇ ಇಸವಿ ಜನವರಿ ೨೭ನೇ ತಾರೀಕಿನ ಸಾಯಂಕಾಲ ಘಂಟೆ ೩ಕ್ಕೆ ಪೋಸ್ಟ್‌ಡೇಮ್ ಎಂಬಲ್ಲಿ ಜನ್ಮವೆತ್ತಿದರು. ಜಾತಕ ಫಲಗಳು—ನಿರ್ಬಲನಾದ ಶನಿಯು ಆದಿತ್ಯನ ಇದಿರಿರುವನು. ಮಂಗಳ ಮತ್ತು ಯುರೆನೆಸ್ ಕೇಂದ್ರಸ್ಥಾನದಲ್ಲಿದ್ದು ಆದಿತ್ಯನ ದೃಷ್ಟಿಯಲ್ಲಿರುವರು. ಯುರೆನೆಸ್ ಮಂಗಳ ಮತ್ತು ನೆಪ್ಚುನ್ ವಕ್ರಸ್ಥಾನದಲ್ಲಿ ಉಚ್ಚರಾಗಿದ್ದು ಚಂದ್ರನ ಇದಿರಿರುವರು. ಚಕ್ರವರ್ತಿಗಳ ಜಾತಕವು ಬಹಳ ನಷ್ಟವನ್ನು ಸೂಚಿಸುತ್ತಿರುವುದು. ಚಕ್ರವರ್ತಿಯವರು ಈ ತನಕ ನಿರೀಕ್ಷಿಸಲ್ಪಡದ ರೀತಿಯಲ್ಲಿ ಪರಾಜಯ ಪಡೆಯುವರು. ಇವರ ಗ್ರಹಫಲಗಳ ಪ್ರಕಾರ ಇವರು ರಾಜ್ಯವೆಲ್ಲವನ್ನು ಕಳಕೊಳ್ಳಬೇಕು. ಇವರೆಂದೂ ಜನಪ್ರಿಯರಾಗಲಿಕ್ಕಿಲ್ಲ. ಮಂಗಳನು ಕೇಂದ್ರಸ್ಥಾನದಲ್ಲಿರುವುದರಿಂದ ಇವರು ಯಾವಾಗಲೂ ಕಲಹಪ್ರಿಯರಾಗಿರುತ್ತಾರೆ. ಶನಿಯ ಇದಿರಿಗೆ ಆದಿತ್ಯನಿರುವುದರಿಂದ ಜನಾಂಗಗಳೊಳಗೆ ಇವರು ಬಲಹೀನರಾಗುವರು. ಚಂದ್ರನು ವ್ಯಯಿಸುತ್ತಿರುವ ನೆಪ್ಚುನಿನ ಇದಿರಿರುವುದರಿಂದ ಇವರು ತಮ್ಮ ಪತ್ನಿಯನ್ನು ಕಳಕೊಳ್ಳುವರು. ಇವರ ರಾಜ್ಯವು ಫ್ರೆಂಚರ ಮತ್ತು ರುಶ್ಯಯನರ ಪಾಲಾಗಿ ಹೋಗುವ ಸಂಭವ ತೋರಿಬರುತ್ತದೆ. ಇವರಿಗೆ ಅಕಸ್ಮಿತವಾದ ಮರಣವು ಹೃದ್ಬಾಧೆಯಿಂದ ಪ್ರಾಪ್ತವಾಗಬಹುದು. ಇಷ್ಟು ನೀಚವಾದ ಜಾತಕವು ಪಾಶ್ಚಾತ್ಯ ಅರಸರಲ್ಲಿ ಯಾರಲ್ಲಿಯೂ ಇರದು. ಟರ್ಕಿಯ ಸುಲ್ತಾನರದು ಚಕ್ರವರ್ತಿಯವರ ಜಾತಕಕ್ಕೆ ಸರಿಯಿರುವುದಂತೆ.

ತಾ. 16ನೇ ಆಗೋಸ್ತು.

ಬೆಲ್ಜಿಯಮ್. ಜರ್ಮನ ಸೇನೆಯು ಪ್ರಕೃತ ಲೀಜು ಮತ್ತು ಲುಕ್ಸೆಂಬರ್ಗ್‌ನ ನಡುವೆ ಒಟ್ಟು ಸೇರುತ್ತಿರುವುದು. ಜರ್ಮನರ ಸೇನೆಯು ಕೈಕಿ ೨ ಸೇನಾಂಗಗಳು ಇಲ್ಲಿರುವವು. ಲಕ್ಸೆಂಬರ್ಗ್ ಮತ್ತು ಲೀಜಿನ ಪೂರ್ವ ದಕ್ಷಿಣಕ್ಕೆ ಇರುವ ಜರ್ಮನ ಸರಹದ್ದುಗಳಲ್ಲಿ ಸೇನೆಯು ಇರದೆಂದು ತೋರುತ್ತದೆ. [illegible] ಬೆಲ್ಜಿಯನರು ಜಯವನ್ನು ಹೊಂದಿದ ಯುದ್ಧದಲ್ಲಿ ಉಭಯಪಕ್ಷಗಳಲ್ಲಿಯೂ ಹತ್ತು ಹತ್ತು ಸಾವಿರ ಮಂದಿ ಸೇನಿಕರಿದ್ದರು. ಲೆಂಡೆನಿನಲ್ಲಿ ಜರ್ಮನ ಹಿಂದುಕಡೆಯಲ್ಲಿದ್ದ ರೈಲ್ವೆ ಸಂಕವನ್ನು ಬೆಲ್ಜಿಯನರು ಮುರಿದು ಬಿಸಾಡಿದ್ದರಿಂದ ಜರ್ಮನ ಸೇನೆಯವರಿಗೆ ಆಹಾರ ಸಾಮಗ್ರಿಗಳು ಬರುವರೆ ಬೇರೆ ಮಾರ್ಗವಿರದು.

ಇಂಗ್ಲೆಂಡ್. ಅಂಗ್ಲಾಳದ ಶ್ರೀಮಂತರಲ್ಲಿ ಅನೇಕರು ಸೇನಿಕರಿಗೆ ಯುದ್ಧಕಾಲಗಳಲ್ಲಿ ಆಸ್ಪತ್ರೆಗಳಾಗಿ ಉಪಯೋಗಿಸುವಂತೆ ತಮ್ಮ ಮನೆಗಳನ್ನು ಸರಕಾರದವರಿಗೆ ಬಿಟ್ಟುಕೊಟ್ಟಿರುತ್ತಾರೆ.

ವ್ಯಾಪಾರ ಸಾಮಗ್ರಿಗಳನ್ನು ತುಂಬಿ ಬರುವ ಬ್ರಿಟಿಷ್ ಹಡಗುಗಳಿಗೆ ಸಮುದ್ರಮಾರ್ಗದಲ್ಲಿ ಏನೂ ಆಪತ್ತು ಸಂಭವಿಸದಂತೆ ಸಮುದ್ರ ಮಾರ್ಗಗಳ ಕಾವಲಿಗಾಗಿ ಬ್ರಿಟಿಷರು ಯುದ್ಧನಾವೆಗಳನ್ನಿಟ್ಟಿರುವರು. ಈ ಏರ್ಪಾಡಿನಿಂದ ಬ್ರಿಟಿಷ ವ್ಯಾಪಾರಕ್ಕೆ ಅಪಾಯ ಒದಗುವ ಸಂಭವವಿರದು.

ಹಣ ಚಲಾವಣೆಯಲ್ಲಿ ಏನೊಂದು ಅಡಚಣೆಯು ಪ್ರಾಪ್ತವಾಗದಂತೆ ಸಾಮ್ರಾಜ್ಯ ಸರಕಾರದ ಖಜಾನಾ ಮಂತ್ರಿಗಳಾದ ಮೆ| ಲ್ಲೋಯಿಡ್ ಜೋರ್ಜರವರು ಅಂಗ್ಲಾಳದ ಬೇಂಕಿನೊಂದಿಗೆ ಸಮರ್ಪಕವಾದ ಏರ್ಪಾಡನ್ನು ಮಾಡಿರುತ್ತಾರೆ. ಆಗೋಸ್ತು ತಾರೀಕು ೪ರ ಹಿಂದಣ ಹುಂಡಿಗಳನ್ನು ಸ್ವೀಕರಿಸದ್ದರಿಂದ ಉಂಟಾಗಬಹುದಾದ ನಷ್ಟವನ್ನು ಸರಕಾರದವರು ತೆರುವರೆಂದು ಈ ಬೇಂಕಿನವರಿಗೆ ಹೇಳೋಣಾಗಿದೆ.

ಪ್ರಿನ್ಸ್ ಆಫ್ ವೇಲ್ಸ ಯುವರಾಜರ ಯುದ್ಧ ಫಂಡಿಗೆ ಸಿಂಧ್ಯಾ ಮಹಾರಾಜರವರು ಹತ್ತುಸಾವಿರ ಪವನುಗಳನ್ನು ಕೊಟ್ಟಿರುವರು.

ರುಶ್ಯ. ಎಡ್ವಾಕುಹ್ನೆನ್ ಎಂಬ ರುಶ್ಯರ ಸರಹದ್ದಿನಲ್ಲಿರುವ ಪಟ್ಟಣವನ್ನು ತಿರಿಗಿ ಹಿಡಿಯಲು ಜರ್ಮನರು ಮಾಡಿದ ಪ್ರಯತ್ನವು ನೆರವೇರದೆ ಹೋಯಿತು. ರುಶ್ಯನರು ಜಯಹೊಂದಿರುವರು.

ಹೊಲ್ಲೆಂಡ್. ಬೆಲ್ಜಿಯಮಿನ ಉತ್ತರದಲ್ಲಿರುವ ಹೊಲ್ಲೆಂಡ್ ದೇಶವು ಈ ಯುದ್ಧ ಸಂದರ್ಭದಲ್ಲಿ ತನ್ನ ತಟಸ್ಥಭಾವವನ್ನು ತಿರಿಗೊಮ್ಮೆ ಸಾರಿರುವುದಲ್ಲದೆ, ತನ್ನ ಈ ತಟಸ್ಥಭಾವವನ್ನು ಉಲ್ಲಂಘಿಸಲು ಪ್ರಯತ್ನಿಸಿದವರೊಂದಿಗೆ ಕಾದಾಡುವುದೆಂದು ಪ್ರಕಟಿಸಿರುವುದು.

ಬಾಲ್ಕಾನ್ ಸಂಸ್ಥಾನಗಳು. ಮೊಂಟೆನಿಗ್ರೊದವರು ಒಸ್ಟ್ರಿಯಾವನ್ನು ಒಳನುಗ್ಗಿ ಕೆಟ್ಟಾರೊ ಪಟ್ಟಣಕ್ಕೆ ಮುತ್ತಿಗೆ ಹಾಕಿರುತ್ತಾರೆ.

ತಾ. 17ನೇ ಆಗೋಸ್ತು.

ಬೆಲ್ಜಿಯಮ್. ಬೆಲ್ಜಿಯನರಿಗೂ ಜರ್ಮನರಿಗೂ ಹೇಲನ್ ಎಂಬಲ್ಲಿ ನಡದ ಘೋರವಾದ ಯುದ್ಧದ ವಿವರವು ಪ್ರಕಟಿಸಲ್ಪಟ್ಟಿರುತ್ತದೆ. ತಾರೀಕು ೧೨ರಲ್ಲಿ ಈ ಯುದ್ಧವು ಇಡೀ ದಿನ ನಡೆದಿರುವುದು. ಜರ್ಮನರು ಬೆಲ್ಜಿಯನರ ಎಡಪಾರ್ಶ್ವದಲ್ಲಿ ಸೇನೆಯನ್ನು ಪೂರ್ಣವಾಗಿ ನಾಶಮಾಡಬೇಕೆಂತ ನಿಶ್ಚಯಿಸಿಕೊಂಡು ಹೆಲನ್ ಎಂಬಲ್ಲಿ ಶತ್ರುಗಳ ಮೇಲೆ ಬಿದ್ದಿದ್ದರು. ಜರ್ಮನರ ಕುದುರೆಪಡೆಯು ೮೦೦೦ವಿತ್ತಲ್ಲದೆ ಬೇಗನೆ ಶತ್ರುಗಳನ್ನು ಸುಟ್ಟುಬಿಡುವ ಚಮತ್ಕಾರದ ಕೋವಿಗಳನ್ನು ಮೋಟಾರು ಬಂಡಿಗಳಲ್ಲಿ ಹಿಡಿದು ಕೂತುಕೊಂಡಿರುವವರು ಸಹ ಜರ್ಮನರ ಸೇನೆಯಲ್ಲಿ ಹಲವರಿದ್ದರು. ಸೇನೆಯಲ್ಲಿ ಕಾಲಾಳುಗಳೆಂತೂ ಬಹಳವಿದ್ದರು. ಬೆಲ್ಜಿಯನರ ಸೇನೆಯು ಒಟ್ಟಿಗೆ ೬೦೦೦ಕ್ಕೆ ಮಿಕ್ಕಿರಲಿಲ್ಲ. ಬೆಲ್ಜಿಯನರ ಫಿರಂಗಿ ಹಾರಿಸೋಣವು ಬೆಳಗಿನ ೧೧ ಘಂಟೆಗೆ ಪ್ರಾರಂಭವಾಗಿತ್ತು. ಆದರೆ ಜರ್ಮನರು ಈ ಫಿರಂಗಿಗಳ ಪೆಟ್ಟುಗಳನ್ನು ತಪ್ಪಿಸಿಕೊಳ್ಳದೆ ರಣರಂಗದಲ್ಲಿ ಕಾದಾಡಿದರು. ಕುದುರೆಪಡೆಗಳ ಕಾಳಗವು ಎರಡು ಕಡೆಯವರೂ ಒಟ್ಟುಸೇರಿದ್ದರಿಂದ ಕೈದುಡುಕಿನಿಂದ ನಡೆಯಿತು. ಜರ್ಮನರು ಪರಾಜಯವು ತಮ್ಮ ಪಕ್ಷದವರಲ್ಲಿ ನಾಶವಾಗುವುದನ್ನು ಕಂಡು [illegible]

ಯನ್ನು ಬಿಟ್ಟು ರಾಶಿರಾಶಿಯಲ್ಲಿ ಮುಂದರಿಸಿಕೊಂಡು ಬೆಲ್ಜಿಯನರ ಮೇಲೆ ಬಿದ್ದರು. ಆದರೆ ಹೀಗೆ ಮುಂದರಿಸಿ ಬರುತ್ತಿರುವ ಜರ್ಮನರನ್ನು ನಾಶಪಡಿಸಲು ಬೆಲ್ಜಿಯನರು ವ್ಯೂಹಗಳನ್ನು ರಚಿಸಿದ್ದದ್ದರಿಂದ ಈ ವ್ಯೂಹಗಳಲ್ಲಿ ಬಿದ್ದು ಅನೇಕ ಜರ್ಮನರು ನಾಶವಾಗಿ ಹೋದರು. ಸಾಯಂಕಾಲ ೭ ಘಂಟೆಯೊಳಗೆ ಜರ್ಮನರು ಸೋಲನ್ನು ಒಪ್ಪಿಕೊಂಡು ಹಿಂದಕ್ಕೆ ಓಡಿಹೋಗಬೇಕಾಯಿತು. ಹೀಗೆ ರಣರಂಗದಿಂದ ಓಡಿಹೋಗುವಾಗ ವೆಲ್ಪೆ ಮತ್ತು ಗೆಪ್ಪೆ ನದಿಗಳನ್ನು ಬಹಳ ಸಣ್ಣದಾದ ಸಂಕಗಳಲ್ಲಿ ದಾಟಲಿಕ್ಕಿರುವುದರಿಂದ ಜರ್ಮನರ ಸೇನೆಯು ಪೂರ್ಣ ಭಾಗಭಾಗಗಳಾಗಿ ಸೀಳಿಹೋಗಿ ಬಲಹೀನವಾಗಿಹೋಯಿತು. ಯುದ್ಧರಂಗದಿಂದ ಹೀಗೆ ಓಡಿಹೋದ ಜರ್ಮನರು ತಮ್ಮ ಸ್ವಾಧೀನದಲ್ಲಿರುವ ಟೊಂಗ್ರೆಸ್ಸ್ ಎಂಬುದನ್ನು ಸೇರಿರುತ್ತಾರೆ. ಹೆಲನ್ ಯುದ್ಧವು ನಡಿಯುತ್ತಿದ್ದಾಗ ನಾಮೂರ ಕೋಟೆಯ ಹತ್ತು ಮೈಲು ದೂರದಲ್ಲಿರುವ ಎಗ್ರೆಜೀ ಎಂಬಲ್ಲಿ ಬೆಲ್ಜಿಯನರ ಸೇನೆಯು ಇವರನ್ನು ಸೋಲಿಸಿಬಿಟ್ಟಿರುತ್ತದೆ. ಹೇಲನ್ ರಣಭೂಮಿಯು ಜರ್ಮನ್ ಸೇನಿಕರ ಶವಗಳಿಂದ ತುಂಬಿಹೋಗಿರುವುದು. ಹೆಲನ್ ಪಟ್ಟಣವು ಪೂರ್ಣ ನಾಶವಾಗಿಹೋಗಿರುವುದು. ಮೋಟಾರು ಗಾಡಿಗಳಲ್ಲಿ ಕೂತುಕೊಂಡು ಕೋವಿಗಳನ್ನು ಹೊಡೆಯುತ್ತಿದ್ದವರನ್ನು ಬೆಲ್ಜಿಯನರು ಗಾಡಿಗಳ ಸಹಿತ ಸೆರೆಹಿಡಿದಿರುತ್ತಾರೆ.

ಈ ಸಂದರ್ಭದಲ್ಲಿ ಜರ್ಮನರ ದುರ್ನಡತೆಯು ಪ್ರಕಟಿಸಲ್ಪಟ್ಟಿರುತ್ತದೆ. ಶತ್ರುಗಳ ಗ್ರಾಮಗಳನ್ನು ಒಳನುಗ್ಗಿ ಜರ್ಮನರು ಕಾಡುಮನುಷ್ಯರಂತೆ ಅತ್ಯಾಚಾರಗಳನ್ನು ನಿರಪರಾಧಿಗಳಾದ ಗ್ರಾಮಸ್ಥರ ಮೇಲೆ ನಡಿಸುತ್ತಿರುವರು. ನಿವಾಸಿಗಳನ್ನು ಕೋವಿಗಳಿಂದ ಸದೆಬಡಿಯುವುದು, ಮನೆಗಳನ್ನು ಸುಟ್ಟುಬಿಡುವುದು, ಸೂರೆಗೊಳ್ಳುವುದು ಈ ರೀತಿ ಜರ್ಮನರು ಕಾಡುಗಳಲ್ಲಿರುವ ಹಿಂಸ್ರಜಂತುಗಳಂತೆ ವರ್ತಿಸುತ್ತಿದ್ದಾರೆ. ಪ್ರತಿ ಊರುಗಳಲ್ಲಿರುವ ಟಪ್ಪಾಲು ಆಫೀಸುಗಳನ್ನೂ, ಬೇಂಕುಗಳನ್ನೂ ಒಳನುಗ್ಗಿ ಅಲ್ಲಿರುವ ಹಣವನ್ನು ಬಲತ್ಕಾರದಿಂದ ಜರ್ಮನರು ಸೆಳೆದುಕೊಂಡು ಹೋಗುತ್ತಿರುವರು.

ಫ್ರೆಂಚರಿಗೂ ಜರ್ಮನರಿಗೂ ಒಬ್ರೈನ್ ನದಿಯ ದಡದ ಮೇಲೆ ಕಾಳಗವು ಎರಡು ದಿನಗಳವರೆಗೆ ನಡೆದಿತ್ತು. ಫ್ರೆಂಚರು ಜರ್ಮನರ ಒಂದು ಸೇನಾಂಗವನ್ನು ಪೂರ್ಣ ನಾಶಮಾಡಿರುವರಲ್ಲದೆ ೧೦೦೦ ಜರ್ಮನರನ್ನು ಸೆರೆಹಿಡಿದಿರುತ್ತಾರೆ.

ಬೆಲ್ಜಿಯನರು ತಾವು ಸೆರೆಹಿಡಿದಿರುವ ೨೦೦೦ ಜರ್ಮನ್ ಸೇನಿಕರನ್ನು ಫ್ರಾನ್ಸಿನಲ್ಲಿಡಬೇಕೆಂದು ಕೇಳಿಕೊಂಡಿರುವರು.

ಜರ್ಮನರು ೫ ದಿವಸಗಳ ವರೆಗೆ ಲೀಜು ಕೋಟೆಯ ಮುತ್ತಿಗೆಯನ್ನು ಬಲಕಾಯಿಸುತ್ತಿದ್ದರೂ ಲೀಜು ಕೋಟೆಯು ಇನ್ನೂ ಭದ್ರವಾಗಿರುವುದು.

ಲಂಡನಿನಲ್ಲಿ ಸರಕಾರದ ಯುದ್ಧಸಮಾಚಾರ ಸಂಗ್ರಹದ ಆಫೀಸಿನವರು ಇದೇ ತಾರೀಕು ೧೪ರಲ್ಲಿ ಈ ವಾರ್ತೆಯನ್ನು ಪ್ರಕಟಿಸಿರುತ್ತಾರೆ.—ಬೆಲ್ಜಿಯಾನರು ಶತ್ರುಗಳನ್ನು ಪೂರ್ಣವಾಗಿ ಪೂರ್ವದಿಕ್ಕಿನಲ್ಲಿ ಓಡಿಸಿರುವುದರಿಂದ ಪ್ರಕೃತ ಹೆಸ್ಸೆಲ್ಟ್ ಮತ್ತು ರೆಮಿಲಿಸ್‌ಗಳ ನಡುವೆ ಶತ್ರುಗಳ ಕುದುರೆ ಪಡೆಯು ಸಹಾ ಇರದು. ಲೀಜು ಕೋಟೆಗಳಲ್ಲಿ ಆಹಾರ ಸಾಮಗ್ರಿಗಳು ತುಂಬಾ ಇರುವವು.

ರುಶ್ಯದ ಪೋಲೇಂಡ್ ಸರಹದ್ದಿನಲ್ಲಿರುವ ಕಾಲಿಜ್ ಪಟ್ಟಣವನ್ನು ಜರ್ಮನ್ ಸೇನಿಕರು ಒಳನುಗ್ಗಿಕೊಂಡು ರುಶ್ಯಯನರು ಇನ್ನೂ ಅಲ್ಲಿ ಎದುರಾಡಿದರೆ ನಿವಾಸಿಕರನ್ನು ಕೊಲ್ಲುವೆವೆಂತ ಹೆದರಿಸುವರು.

ರುಶ್ಯದ ಬಂದರುಗಳಲ್ಲಿರುವ ೭೨ ಜರ್ಮನ ಹಡಗುಗಳನ್ನೂ ೧೫ ಒಸ್ಟ್ರಿಯಾದ ಹಡಗುಗಳನ್ನೂ ರುಶ್ಯಯಾನರು ಹಿಡಿದಿರುವರು.

ಒಸ್ಟ್ರಿಯಾದೇಶದ ಗೆಲಿಸಿಯಾ ಪ್ರಾಂತ್ಯವನ್ನು ರುಶ್ಯಯನರು ಒಳನುಗ್ಗಿ ಪ್ರೋಕಾಲ್ ಎಂಬ ಪಟ್ಟಣವನ್ನು ಹಿಡಿದಿರುವರು. ಒಸ್ಟ್ರಿಯಾದ ಸೇನಿಕರನ್ನು ಬಹಳ ನಷ್ಟಗೊಳಿಸಿ ಇಲ್ಲಿಂದ ಓಡಿಸಿಬಿಟ್ಟಿರುತ್ತಾರೆ. ಈ ಪ್ರಾಂತ್ಯಗಳಲ್ಲಿ ರುಶ್ಯಯನರು ಅತಿ ಶೀಘ್ರವಾಗಿ ಮುಂದರಿಸುತ್ತಾ ದೇಶವನ್ನು ಸ್ವಾಧೀನ ಮಾಡಿಕೊಳ್ಳುತ್ತಿರುವರು.

ರುಶ್ಯಯನರ ಯುದ್ಧ ಸನ್ನಾಹಗಳು ಬಹಳ ಬೇಗನೆ ಪೂರ್ಣವಾಗಿ ಬರುತ್ತಿವೆ. ಜರ್ಮನರು ರುಶ್ಯಯನರ ಯುದ್ಧ ಸನ್ನಾಹಗಳು ಈ ರೀತಿ ಬೇಗನೆ ನೆರವೇರುವವೆಂತ ನಿರೀಕ್ಷಿಸದ್ದರಿಂದಲೂ ಜರ್ಮನರು ಬೆಲ್ಜಿಯನರಿಂದ ಪಡದ ಪರಾಜಯದಿಂದಲೂ ಜರ್ಮನರು ಮಾಡಿಟ್ಟಿದ್ದ ಯುದ್ಧದ ಹಂಚಿಕೆಯು ಬಹಳ ಮಟ್ಟಿಗೆ ಗಲಿಬಿಲಿಗೊಳ್ಳುವಂತಿದೆ.

ಬಲ್ಕಾನ್ ಸಂಸ್ಥಾನಗಳಲ್ಲಿ ಬಲ್ಗೇರಿಯವು ತಾನು ತಟಸ್ಥ ವೃತ್ತಿಯನ್ನು ಈ ಯುದ್ಧಕಾಲದಲ್ಲಿ ಕೈಕೊಳ್ಳುವುದೆಂಬ ಭರವಸೆಯನ್ನು ಕೊಟ್ಟಿರುವುದು.

ಟರ್ಕಿಯು ಡಾರ್ಡನೆಲ್ಸ್ ಜಲಸಂಧಿಯನ್ನು ಸೇರಿರುವ ಜರ್ಮನರ ಯುದ್ಧನಾವೆಗಳನ್ನು ಈ ತನಕ ಟರ್ಕಿಯು ನಿರಾಯುಧಪಡಿಸದ್ದಿದ್ದಕ್ಕೆ ಯುರೋಪಿಯ ಪ್ರಭುರಾಜ್ಯಗಳಾದ ಬ್ರಿಟನ್, ಫ್ರಾನ್ಸ್, ರುಶ್ಯ ಮತ್ತು ಇಟೇಲಿ ದೇಶಗಳು ಆಕ್ಷೇಪ ಹೇಳಿರುವದು. ಗ್ರೀಕು ದೇಶವು ಸಹ ಟರ್ಕಿಯ ಈ ವರ್ತನೆಯಿಂದ ಕಳವಳಗೊಂಡಿರುವುದು.

ಟರ್ಕಿಯು ಈ ಯುದ್ಧನಾವೆಗಳನ್ನು ತಾನು ಜರ್ಮನಿಯವರಿಂದ ಕ್ರಯಕ್ಕೆ ಪಡಕೊಂಡಿರುವೆನೆಂತ ಹೇಳಿರುವುದು. ತಾನು ಸಂಪೂರ್ಣವಾದ ತಟಸ್ಥಭಾವವನ್ನು ಈ ಯುದ್ಧ ಸಂದರ್ಭದಲ್ಲಿ ತಾಳಿಕೊಂಡಿರುವೆನೆಂತ ಹೇಳಿರುವುದು.

ಯುದ್ಧವನ್ನು ಕೈಕೊಳ್ಳಕೂಡದೆಂದು ಪ್ರಜೆಗಳಿಗೆ ಸಾರಿ ಸೇನೆಯನ್ನು ಸೇರಲು ನಿರಾಕರಿಸಿದ ಜರ್ಮನ 'ಸೋಶಿಯಲಿಸ್ಟ್' ಸಮಾಜ ಹಿತೇಚ್ಛುಗಳಾಗಿದ್ದ ಲಿ ಬೆಕ್ನೆಟ್ ಎಂಬವರನ್ನು ಗುಂಡುಹಾಕಿ ಕೊಂದಿರುವರೆಂಬ ವರ್ತಮಾನವಿರುವುದು. ಆಹಾರ ಜೀನಸುಗಳ ಅಡಚಣೆಯಿಂದ ಜರ್ಮನ್ ಪ್ರಜೆಗಳು ಗಲಭೆಯನ್ನುಂಟುಮಾಡುತ್ತಿರುವವು. ಯುದ್ಧವು ಸಲ್ಲದೆಂದು ಅಲ್ಲಲ್ಲಿ ಸಭೆಕೂಡಿ ಸಾರುತ್ತಿರುವ ಸೋಶಿಯಲಿಷ್ಟರನ್ನು ಕರೆದು ಸೇನಿಕರಿಂದ ಗುಂಡು ಹೊಡಿಸಿ ಕೊಲ್ಲಿಸುತ್ತಿರುವರು. ಜರ್ಮನಿಯಲ್ಲಿ ನಡಿಯುವ ಈ ವೃತ್ತಾಂತಗಳು ಜರ್ಮನಿಯಲ್ಲಿರುವ ಅಮೇರಿಕದ ರಾಯಭಾರಿಯು ತನ್ನ ಸರಕಾರದವರಿಗೆ ತಿಳಿಸುವ ಮೂಲಕ ಪ್ರಕಟವಾಗುತ್ತಿರುವುದರಿಂದ ಇನ್ನು ಮುಂದೆ ಈ ರಾಯಭಾರಿಗಳು ತನ್ನ ಸರಕಾರದವರೊಂದಿಗೆ ಪತ್ರವ್ಯವಹಾರಗಳನ್ನು ನಡಿಸಕೂಡದೆಂಬ ಜರ್ಮನ್ ಸರಕಾರದ ಆಜ್ಞೆಯು ರಾಯಭಾರಿಗಳಿಗಾಗಿದೆಂತ ತಿಳಿದು ಬರುತ್ತದೆ.

~~~~~

ತಾ. 18ನೇ ಆಗೋಸ್ತು.

ಬೆಲ್ಜಿಯಮ್. ಡೀಸ್ಟ್ ಎಂಬಲ್ಲಿ ಬೆಲ್ಜಿಯನರು ಜರ್ಮನರ ಎರಡು ಆಕಾಶನಾವೆಗಳನ್ನು ತೋಪು ಹಾರಿಸಿ ನಾಶಪಡಿಸಿರುತ್ತಾರೆ. ಮತ್ತೊಂದು ಯುದ್ಧನಾವೆಯು ಬಹಳ ಜಖಂ ಹೊಂದಿರುತ್ತದೆ. ಲೀಜು ಕೋಟೆಗೆ ಜರ್ಮನರು ಮ್ಯೂಸ್ ನದಿಯ ಎಡದಡದಿಂದ ಮುತ್ತಿಗೆಯನ್ನು ಹಾಕುತ್ತಿರುವರು. ಕಳದ ಶುಕ್ರವಾರ ಕಾಳಗಗಳೇನೂ ನಡೆದದ್ದಿಲ್ಲವೆಂತ ಬೆಲ್ಜಿಯನರು ತಿಳಿಸಿರುವರು. ಬೆಲ್ಜಿಯಮಿನಲ್ಲಿ ಹಲವು ಪ್ರಾಂತ್ಯಗಳಲ್ಲಿ ಸುಳಿದಾಡುತ್ತಿದ್ದ ಜರ್ಮನರ ಸೇನಾಂಗಗಳು ಬೆಲ್ಜಿಯನರು ಎಷ್ಟು ಹುಡುಕಿದರೂ ಕಾಣಬರಲಿಲ್ಲ. ಜರ್ಮನರ ಮುಖ್ಯ ಸೇನೆಯು ಇರುವಲ್ಲಿ ಇವುಗಳು ಹೋಗಿ ಸೇರಿಯವೆ ಎಂತ ಬೆಲ್ಜಿಯನರು ನಂಬಿರುವರು. ಬೆಲ್ಜಿನರ ಮತ್ತು ಫ್ರೆಂಚರ ಸೇನೆಗಳು ಎಲ್ಲೆಲ್ಲಿ ಯುದ್ಧಕ್ಕೆ ಸನ್ನದ್ಧರಾಗುತ್ತಿರುವರೆಂಬ ವಿವರವು ಇನ್ನು ಮುಂದೆ ಪ್ರಕಟಿಸಲಾಗದೆಂದು ತಿಳಿಯಪಡಿಸಿರುತ್ತಾರೆ. ಜರ್ಮನರು ಬೆಲ್ಜಿಯಮಿನ ಉತ್ತರದಲ್ಲಿರುವ ಒಂದು ಪ್ರಖ್ಯಾತವುಳ್ಳ ಆಂಟ್‌ವರ್ಪ್ ಪಟ್ಟಣವನ್ನು ಮುತ್ತಿರುವರೆಂಬ ವಾರ್ತೆಯನ್ನು ಬೆಲ್ಜಿಯನರು ಅಲ್ಲಗಳೆಯುತ್ತಾರೆ. ಫ್ರೆಂಚರ ಸೇನೆಯು ಈಗ ಒಂದು ಬೆಲ್ಜಿಯನರ ಸೇನೆಯೊಂದಿಗೆ ಒಟ್ಟು [illegible]

ಲ್ಪಟ್ಟಿರುವುದು. ಜರ್ಮನರು ಮ್ಯೂಜ್ ನದಿಯನ್ನು ವಿಸೆ ಎಂಬಲ್ಲಿ ದಾಟಿ ಹೆಸ್ಸೆಲ್ಟ್ ಮತ್ತು ಸೆಂಟ್‌ಟ್ರೋಂಡ್ ಕಡೆಗೆ ಮುಂದರಿದು ಹೋಗುತ್ತಿರುವರು. ಆದರೆ ವಿಸೆ ಪಟ್ಟಣವು ಬೆಲ್ಜಿಯನರ ಸೇನೆಗಳಿರುವ ಲೀಜುಕೋಟೆಯ ಸಮೀಪ ಉತ್ತರದಿಕ್ಕಿನಲ್ಲಿರುವುದರಿಂದ ಹೀಗೆ ನದಿಯನ್ನು ದಾಟಿಹೋಗುವ ಜರ್ಮನರಿಗೆ ಲೀಜು ಕೋಟೆಯಿಂದ ವಿಶೇಷ ಹಾನಿಯುಂಟಾಗುವ ಸಂಭವವಿರುವುದು. ಫ್ರೆಂಚರ ಮತ್ತು ಬೆಲ್ಜಿಯನರ ಸೇನೆಗಳು ಒಟ್ಟುಕೂಡಿರುವುದರಿಂದ ಹೀಗೆ ಒಟ್ಟುಕೂಡಿರುವ ಸೇನೆಗಳನ್ನು ನಡಿಸಲು ಸೇನಾನಾಯಕರ ಬದಲಾವಣೆಯು ಸೇನುಕಗಳು ಮಾಡೋಣಾಗಿವೆ.

ಲಂಡನಿನ ಸರಕಾರದ ಯುದ್ಧ ಸಮಾಚಾರ ಸಂಗ್ರಹದ ಆಫೀಸಿನವರು ಯುದ್ಧದ ವೃತ್ತಾಂತವನ್ನು ಈ ರೀತಿ ಪ್ರಕಟಿಸಿರುತ್ತಾರೆ.— ಬೆಲ್ಜಿಯನರ ಮತ್ತು ಫ್ರೆಂಚರ ಒಟ್ಟು ಸೇರಿರುವ ಸೇನೆಯ ಎಡಭಾಗದ ಮೇಲೆ ಯುದ್ಧ ನಡಿಸಲು ಜರ್ಮನರು ಪ್ರಯತ್ನಿಸುತ್ತಿರುವರು. ಫ್ರೆಂಚರ ಮತ್ತು ಬೆಲ್ಜಿಯನರ ತೋಪುಗಳು ಜರ್ಮನರ ತೋಪುಗಳಿಗಿಂತ ಉತ್ತಮವಾದವುಗಳೆಂತ ಕಂಡುಬರುವುದು. ಜರ್ಮನರ ಕಾಲಾಳುಗಳು ಶತ್ರುಗಳ ಸನೀನುಗಳ ಪೆಟ್ಟನ್ನು ನಿಶ್ಚಲವಾದ ಮನಸ್ಸಿನಿಂದ ಎದುರಾಡುವದಿಲ್ಲ.

ಜರ್ಮನರ ಸೇನೆಯು ದಕ್ಷಿಣಕ್ಕೆ ಮುಂದರಿಸಿ ಫ್ರಾನ್ಸನ್ನು ಒಳನುಗ್ಗುವ ಸಾಧನೆಯನ್ನು ಬಿಟ್ಟು ಬೆಲ್ಜಿಯಮನ್ನು ಒಳನುಗ್ಗುವ ಸಾಧನೆಯನ್ನು ಮಾಡುತ್ತಿರುವುದೆಂತ ಜರ್ಮನರು ಪ್ರಕೃತ ತಮ್ಮ ಸೇನೆಯನ್ನು ಅಣಿಗೊಳಿಸಿರುವ ರೀತಿಯಿಂದ ಕಂಡುಬರುವುದೆಂದು ಯುದ್ಧಶಾಸ್ತ್ರ ಮಾಹಿತಿದಾರರು ಹೇಳುತ್ತಿರುವರು. ಈ ರೀತಿ ಪಶ್ಚಿಮಕ್ಕೆನೇ ತಮ್ಮ ತುಫಾಕಿಗಳನ್ನು ತಿರುಗಿಸಿ ನಿಂತಿರುವುದರಿಂದ ಲೀಜು ಕೋಟೆಗಿಂತಲೂ ಬಲವಾಗಿರುವ ಬೆಲ್ಜಿಯನರ ನಾಮೂರು ಕೋಟೆಯನ್ನು ಜರ್ಮನರು ಆತಿಕ್ರಮಿಸುವುದು ತುಂಬಾ ಅಸದಳವಾಗಿರುವುದು. ಈ ಕೋಟೆಯು ಮುತ್ತಿಗೆಯನ್ನು ಬಿಟ್ಟು ಮುಂದರಿಸುವುದು ಬಹಳ ಅಪಾಯಕರವಾಗಿರುತ್ತದೆ.

ಆಲ್‌ಸೆಸಿನ ಮೇಲಣ ಪ್ರಾಂತ್ಯದಲ್ಲಿರುವ ಪಾಅಲಿಸ್ ಕಣಿವೆಯನ್ನೂ ಪಟ್ಟಣವನ್ನೂ ಫ್ರೆಂಚರು ಐದು ದಿವಸಗಳ ತನಕ ಜರ್ಮನರೊಡನೆ ಕಾದಾಡಿ ಕೈವಶಮಾಡಿಕೊಂಡದ್ದರಿಂದ ಆಲ್‌ಸೇಸಿನಲ್ಲಿ ಫ್ರೆಂಚರ ಭದ್ರತೆಗೆ ತುಂಬಾ ಅನುಕೂಲವಾಗಿರುವುದು.

ಒಸ್ಟ್ರಿಯನರ ಮತ್ತು ಸರ್ವಿಯವರೊಳಗಣ ಕಾದಾಟವು. ಕಳದ ಗುರುವಾರ ೪ ಲಕ್ಷ ಸೇನಿಕರಿರುವ ಒಸ್ಟ್ರಿಯನರ ಸೇನೆಯು ರಾತ್ರೆ ಕಾಲದಲ್ಲಿ ಸರ್ವಿಯನರ ಎಲ್ಲೆಕಟ್ಟುಗಳನ್ನು ಆಕ್ರಮಿಸಲು ಸಾಧಿಸಿತು ಆದರೆ ಇಷ್ಟು ದೊಡ್ಡ ಒಸ್ಟ್ರಿಯನರ ಫೌಜನ್ನು ಸರ್ವಿಯನರು ಓಡಿಸಿಬಿಟ್ಟಿರುವರು. ಒಸ್ಟ್ರಿಯನರು ಹ್ಯಾಗೂ ಸಾವಾ ಮತ್ತು ಡ್ರಿನಾ ನದಿಗಳನ್ನು ದಾಟಿರುವರು. ಒಸ್ಟ್ರಿಯನರ ಮತ್ತು ಸರ್ವಿಯನರೊಳಗೆ ದೊಡ್ಡ ಕಾಳಗವು ನಡಿಯುವ ಸಂಭವವು ಕಳದ ಶನಿವಾರ ರಾತ್ರೆ ಇತ್ತು.

ರುಶ್ಯ ಮತ್ತು ಒಸ್ಟ್ರಿಯಾ. ಒಸ್ಟ್ರಿಯನರ ಗೆಲಿಸಿಯಾ ಪ್ರಾಂತ್ಯದಲ್ಲಿರುವ ನಿಸ್ಟರ್ ನದಿಯ ದಡಗಳಲ್ಲಿ ನಡದ ಕಾದಾಟದಲ್ಲಿ ರುಶ್ಯಯನರು ಒಸ್ಟ್ರಿಯನನ್ನು ಸೋಲಿಸಿರುತ್ತಾರೆ. ಒಸ್ಟ್ರಿಯನರ ಒಂದು ಕಾಲಾಳುಗಳ ಮತ್ತು ಇನ್ನೊಂದು ಹಡಗುಪಡೆಯ ಸೇನಾಂಗಗಳು ಪೂರ್ಣವಾಗಿ ನಾಶಹೊಂದಿರುವವು.

ಆಫ್ರಿಕ. ಅಫ್ರಿಕದಲ್ಲಿರುವ ನ್ಯಾಸಾ ಸರೋವರದಲ್ಲಿ ಬ್ರಿಟಿಷ್ ಯುದ್ಧನಾವೆಯು ಜರ್ಮನರ ಯುದ್ಧನಾವೆಯನ್ನು ಹಿಡಿದು ಅದರಲ್ಲಿ ಸೇನೆಯನ್ನು ಕೈದಿಗಳನ್ನಾಗಿ ಮಾಡಿರುವುದು.

ಪೋಲೇಂಡ್. ರುಶ್ಯಯನರು ಪೋಲೇಂಡಿಗೆ ಸ್ವರಾಜ್ಯ ರಾಜ್ಯಭಾರಕ್ರಮವನ್ನು ಕೊಟ್ಟಿರುವರು.

~~~~~

ತಾ. 19ನೇ ಅಗೋಸ್ತು.

ಬೆಲ್ಜಿಯಮ್. ಬೆಲ್ಜಿಯಮಿನ ಬ್ರುಸೆಲ್ಸ್ ಪಟ್ಟಣಕ್ಕೆ ಸಮೀಪವಿರುವ ಟಿರ್ಲೆಮೊಂಟ ಪಟ್ಟಣದಲ್ಲಿ ಕಳದ ಶನಿವಾರ ಮಧ್ಯಾಹ್ನದಿಂದ ತುಫಾಕಿಗಳ ಗರ್ಜನೆಯು ಬಹಳವಾಗಿ ಕೇಳಿಸುತ್ತಿರುವುದು. ದೊಡ್ಡ ಕಾಳಗದ ಪ್ರಾರಂಭವು ಆಗಿಯದೆಂತ ಇದರಿಂದ ತಿಳಿದುಬರುವುದು.

ಜರ್ಮನರು ಬೆಲ್ಜಿಯಮಿನ ಬ್ರುಸೆಲ್ಸ್ ಪಟ್ಟಣಕ್ಕೂ ಎಂಟವರ್ಪ ಪಟ್ಟಣಕ್ಕೂ ನಡುವೆ ಇರುವ ಎರ್‌ಸ್ಕೋಟ್ ಪಟ್ಟಣದತ್ತ ಕಡೆ ಮುಂದರಿಸಿ ಬರುತ್ತಿರುವರೆಂದು ಪ್ರಕಟವಾಗಿದೆ.

ಲಿಂಡೆನ್ ಮತ್ತು ಟಿರ್ಲೆಮೊಂಟಗಳ ಹತ್ತಿರ ಮ್ಯೂಜ ನದಿಯ ತೀರದಲ್ಲಿ ಫ್ರೆಂಚರಿಗೂ ಜರ್ಮನರಿಗೂ ಕಾಳಗವು ಪ್ರಾರಂಭವಾಗಿರುವುದು.

ಡಿನೆಂಟ್ ಪಟ್ಟಣದಲ್ಲಿ ಫ್ರೆಂಚರು ಜರ್ಮನರನ್ನು ಓಡಿಸುತ್ತಿದ್ದಾಗ ಮ್ಯೂಜ್ ನದಿಯ ಆಳವಾದ ದಡಗಳಿಂದ ದಾಟಲಾರದೆ ಹಲವರು ಈ ನದಿಯಲ್ಲಿ ಬಿದ್ದು ಮುಳುಗಿ ಸತ್ತರು.

...ರ್ಮನರ ಕುದುರೆಪಡಗಳಲ್ಲಿ ಸೇನೆಗೆ ಸಾಕಷ್ಟು ಕುದುರೆಗಳಿಲ್ಲ. ಸಾವಿರಕಟ್ಟಳೆಯಲ್ಲಿ ಇವರ ಕುದುರೆಗಳು ನಾಶವಾಗಿ ಹೋಗಿಯವೆ. ಕೆಲವನ್ನು ಯುದ್ಧದಲ್ಲಿ ಬೆಲ್ಜಿಯನರು ಹಿಡಿದಿರುವರು. ಕುದುರೆಗಳನ್ನು ಇನ್ನು ತರಿಸಲಿಕ್ಕೂ ಜರ್ಮನರಿಗೆ ಉಪಾಯವಿರದು.

ಎಪ್ರಿಕೋರ್ಟ್ ಮತ್ತು ಸ್ಯಾರಿಯಲ್ಲಿ ಜರ್ಮನರನ್ನು ಸೋಲಿಸಿ ಫ್ರೆಂಚರು ಓಡಿಸಿದ್ದರಿಂದ ಒಸ್‌ಜೆಸ್ ಮತ್ತು ಆಲ್‌ಸೆಸ್ ಪ್ರಾಂತ್ಯಗಳಲ್ಲಿ ಮುಂದರಿ ಥಾಲನ್ ಎಂಬುದನ್ನು ಹಿಡಿಯಲು ಸಾಧ್ಯವಾಯಿತು.

ಫ್ರೆಂಚರ ಆಕಾಶನಾವೆಗಳು ಮೆಟ್ಜ್ ಕೋಟೆಯ ಮೇಲಿನಿಂದ ಹೊರಟು ಜರ್ಮನರ ಆಕಾಶನಾವೆಗಳು ಇಟ್ಟಿರುವ ಹಂದರಗಳ ಮೇಲೆ ಸಿಡಿಮದ್ದಿನ ತೋಟೆಗಳನ್ನು ಎಸೆದು ನಾಶಪಡಿಸಿರುತ್ತವೆ. ಆಕಾಶನಾವೆಗಳನ್ನು ಹೊಡಿಯುವ ಕೋವಿಗಳಿಂದ ಫ್ರೆಂಚರ ಈ ನಾವೆಗಳನ್ನು ಕೆಡವಿ ಬಿಡಲು ಜರ್ಮನರು ಎಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ.

ಫ್ರೆಂಚರು ಜರ್ಮನರ ಬೆವೇರಿಯನ್ ಸೇನಾಂಗವನ್ನು ಸ್ಯಾರಿ ಎಂಬಲ್ಲಿ ಸೋಲಿಸಿ ಅಲ್ಲಿದ್ದ ಜರ್ಮನ್ ಧ್ವಜಗಳನ್ನು ಹಿಡಿದಿರುವರಲ್ಲದೆ ೧೫೦೦ ಜನ ಜರ್ಮನ ಸೇನಿಕರನ್ನು ಕೈದಿಗಳನ್ನಾಗಿ ಮಾಡಿರುವರು

ಇಟಲಿ, ರುಶ್ಯ, ಫ್ರಾನ್ಸ್ ಮತ್ತು ಬ್ರಿಟನ್ ದೇಶಗಳ ವ್ಯಾಪಾರ ಹಡಗುಗಳನ್ನು ಟರ್ಕಿಯು ಬಹಳ ದಿವಸಗಳಿಂದ ಕಾರಣವಿಲ್ಲದೆ ತಡೆದಿರುವುದು. ಜರ್ಮನ ಯುದ್ಧನಾವೆಗಳಲ್ಲಿರುವ ಆಯುಧಗಳನ್ನು ತೆಗದು ಅವನ್ನು ನಿರಾಯುಧಿಗಳನ್ನಾಗಿ ಮಾಡಬೇಕೆಂದು ಫ್ರಾನ್ಸ್, ಬ್ರಿಟನ್ ಮತ್ತು ರುಶ್ಯ ದೇಶದವರು ಟರ್ಕಿಯನ್ನು ಕೇಳುವರೆಂದೂ ಟರ್ಕಿಯು ಈ ರೀತಿ ವರ್ತಿಸಲು ಸಮ್ಮತಿಸುವುದೆಂದೂ ತಿಳಿದು ಬರುವುದು.

ಫ್ರೆಂಚ್ ಮತ್ತು ಆಸ್ಟ್ರಿಯಾ ದೇಶದ ಹಡಗು ಪಡೆಗಳಲ್ಲಿ ಕದನ ನಡೆದು ಫ್ರೆಂಚರು ಒಸ್ಟ್ರಿಯಾದ ಎರಡು ಯುದ್ಧನಾವೆಗಳನ್ನು ಮುಳುಗಿಸಿರುವರಲ್ಲದೆ ಮತ್ತೊಂದನ್ನು ಸುಟ್ಟು ಬಿಟ್ಟಿರುವರು. ಇನ್ನೊಂದು ಒಸ್ಟ್ರಿಯರ ಯುದ್ಧನಾವೆಯು ಓಡಿಹೋಗಿರುವುದು.

ಜಪಾನು. ಜಪಾನು ಸರಕಾರವು ಜರ್ಮನ ಸರಕಾರಕ್ಕೆ ಈ ಸಂದೇಶವನ್ನು ಕಳುಹಿಸಿಕೊಟ್ಟಿರುವುದು. ಬ್ರಿಟಿಷ ಒಪ್ಪಂದದ ಪ್ರಕಾರ ಪೂರ್ವ ಸಮುದ್ರಗಳಲ್ಲಿ ಏನಾದರೂ ಅನಾಹುತಗಳು ನಡಿಯದಂತೆ ನೋಡಿಕೊಳ್ಳುವುದು ಅಗತ್ಯವಾಗಿರುವುದು ಆದ್ದರಿಂದ ಜಪಾನ ಮತ್ತು ಚೀನಾ ಸಮುದ್ರಪ್ರಾಂತ್ಯಗಳಲ್ಲಿರುವ ಜರ್ಮನರ ಯುದ್ಧನಾವೆಗಳು ಈ ಪ್ರಾಂತ್ಯಗಳನ್ನು ಕೂಡಲೇ ಬಿಟ್ಟು ತೆರಳಬೇಕು, ಇಲ್ಲವಾದರೆ ಅವುಗಳನ್ನು ನಿರಾಯುಧಿಗಳನ್ನಾಗಿ ಮಾಡಬೇಕು. ಸಾಮ್ರಾಜ್ಯದ ಕರಾವಳಿಯ ಕಿಯಾಚೌ ಪಟ್ಟಣವನ್ನು ಕ್ರಮೇಣ ಚೀನಿಯರ ಸ್ವಾಧೀನ ಕೊಡುವಂತೆ ಜಪಾನೀಯರಿಗೆ ಈಗಲೇ ಬಿಟ್ಟು ಕೊಡಬೇಕು, ಈ ತಿಂಗಳ ತಾ. ೨೩ರೊಳಗೆ ಜರ್ಮನಿಯು ಜಪಾನೀಯರು ಸೂಚಿಸಿರುವಂತೆ ವರ್ತಿಸದಿದ್ದರೆ ಜಪಾನು ಸರಕಾರದವರು ತಮ್ಮ ಮೇಲಣ ಸೂಚನೆಗಳನ್ನು ತಾವಾಗಿಯೇ ನೆರವೇರಿಸಲು ಸಿದ್ಧವಿರುವುದೆಂಬುದಾಗಿ ಸಹ ಜರ್ಮನರಿಗೆ ಹೇಳಿ ಕಳುಹಿಸಿರುವರು.

ಹಿಂದೂಸ್ಥಾನ. ನಮ್ಮ ಲೋಕಪ್ರಿಯರಾದ ವೈಸರಾಯ ಪ್ರಭುಗಳು ಭಾರತೀಯ ಆಶ್ರಿತ ರಾಜರುಗಳೂ ಪ್ರಜಾವರ್ಗವೂ ಈ ಕಾಲದಲ್ಲಿ ಮಾಡಬೇಕಾದ ಸಹಾಯವನ್ನು ಸೂಚಿಸಿ ದ್ರವ್ಯಸಹಾಯ ಫಂಡನ್ನು ಏರ್ಪಡಿಸುವಂತೆ ಒಂದು ವಿಜ್ಞಾಪನೆಯನ್ನು ಪ್ರಕಟಿಸಿರುವರು. ಬ್ರಿಟಿಷ ಸಾಮ್ರಾಜ್ಯದ ರಕ್ಷಣೆಗಾಗಿ ಹಿಂದೂಸ್ಥಾನದಿಂದ ದೇಶಿಯ ಸೇನಾಂಗಗಳನ್ನೂ ಆಂಗ್ಲೇಯ ಸೇನಾಂಗಗಳನ್ನೂ ಕೂಡಿರುವ ಒಂದು ದೊಡ್ಡ ಸೇನೆಯು ಕಳುಹಿಸೋಣಾಗುವುದರಿಂದ ಹೀಗೆ ಕಳುಹಿಸಲ್ಪಡುವ ಸೇನಿಕರ ಹೆಂಡರ ಮಕ್ಕಳ ಸಹಾಯಾರ್ಥವಾಗಿ ಈ ಫಂಡು ಏರ್ಪಡಿಸಲ್ಪಟ್ಟಿರುತ್ತದೆ.

ಮಂಗಳೂರಿಗೆ ತಂತೀ ಮೂಲಕ ಬಂದಿರುವ ಯುದ್ಧ ಸಮಾಚಾರವು

ತಾ 19

ಫ್ರೆಂಚರು ಲೋರೈನು ಎಲ್ಲಿ ಕಟ್ಟುಗಳಲ್ಲಿ ಮುಂದರಿಸಿ ಹೋಗುತ್ತಿರುವರು ಮ್ಯೂಜ್ ನದಿಯ ಬಲಪಾರ್ಶ್ವದಲ್ಲಿ ಫ್ರೆಂಚರು ಜರ್ಮನರನ್ನು ಸೋಲಿಸಿ ಓಡಿಸಿದರು ಫ್ರೆಂಚರ ಹಡಗುಪಡೆಯು ಒಸ್ಟ್ರಿಯಕ್ಕೂ ಇಟಲಿಗೂ ನಡುವೆ ಇರುವ ಎಡ್ರಿಯೊಟಿಕ್ ಸಮುದ್ರದಲ್ಲಿ ಒಸ್ಟ್ರಿಯದ ದಕ್ಷಿಣ ಕರಾವಳಿಯಲ್ಲಿರುವ ಕೆಟಾರೊ ಕೊಲ್ಲಿಯವರೆಗೂ ಶತ್ರುಗಳ ಹಡಗುಪಡೆಯು ನಿಲ್ಲದಂತೆ ಮಾಡಿರುವುದು ಒಸ್ಟ್ರಿಯಾದವರ ಒಂದು ಯುದ್ಧನಾವೆಯನ್ನು ಸಹ ಮುಳುಗಿಸಿ ಬಿಟ್ಟಿರುತ್ತಾರೆ

ತಾ. 20

ಡೆನ್ಸ್ಟಿಟ್ ಎಂಬಲ್ಲಿ ಫ್ರೆಂಚರ ಸೇನಿಕರು ಜರ್ಮನರನ್ನು ತೋಪುಗಳನ್ನು ಹಾರಿಸಿ ನಾಶಪಡಿಸಿರುವರು

ಫ್ರೆಂಚರು ಆಲ್‌ಸೇಸ್ ಲೊರೈನಿನಲ್ಲಿ ಅನೇಕ ಪಟ್ಟಣಗಳನ್ನು ಸ್ವಾಧೀನಮಾಡಿಕೊಂಡಿರುತ್ತಾರೆ

ಬೆಲ್ಜಿಯನ್ ಮತ್ತು ಜರ್ಮನ್ ಸೇನಿಕರು ಮುತ್ತಿಗೆ ಹಾಕಿರುವ ಜರ್ಮನರನ್ನು ಓಡಿಸಿಬಿಟ್ಟಿರುತ್ತಾರೆ

ರಣರಂಗದಲ್ಲಿ ಜರ್ಮನ್ ಯುವರಾಜರು ಘಾಯವಡೆದಿರುತ್ತಾರೆ.

ಆಸ್ಟ್ರಿಯಾ ದೇಶದ ಟ್ರಿಸ್ಟ್‌ನ್ನು ಶತ್ರುಗಳಿಗೆ ಒಪ್ಪಿಸಿ ಕೊಡಲು ಆಲೋಚಿಸುತ್ತಿರುವರು ಇಲ್ಲಿರುವ ಬೇಂಕುಗಳ ರೇವಣಾತಿ ಮೊದಲಾದವುಗಳನ್ನು ಒಸ್ಟ್ರಿಯದ ಮುಖ್ಯ ಪಟ್ಟಣವಾದ ವಿಯಾನಕ್ಕೆ ಒಯುತ್ತಿದ್ದಾರೆ.

ಶಾಬಾಟ್ಜಿನಲ್ಲಿ ಸರ್ವಿಯನರು ಒಸ್ಟ್ರಿಯನರನ್ನು ಸೋಲಿಸಿ ತೋಪುಗಳಿರುವ ಒಸ್ಟ್ರಿಯನರ ೩ ಸೇನಾಂಗಗಳನ್ನು ನಾಶಪಡಿಸಿ ೧೪ ತೋಪುಗಳನ್ನೂ ಬಹಳ ಮದ್ದನ್ನೂ ಹಿಡಿದಿರುತ್ತಾರೆ.

ಬೆಲ್ಜಿಯನರ ಮತ್ತು ಫ್ರೆಂಚರ ಸಾಹಾಯಾರ್ಥವಾಗಿ ಹೋಗುವ ಬ್ರಿಟಿಷ ಸೇನೆಯು ಫ್ರಾನ್ಸಿಗೆ ಹೋಗಿ ಮುಟ್ಟಿಯದೆ

ಉತ್ತರ ಹಿಂದೂಸ್ಥಾನ

ಇದೇ ಬರುವ ತಿಂಗಳ ತಾ ೨೦ರಲ್ಲು ಇಂಡಿಯಾ ಸರಕಾರ ಆಫೀಸು ಸಿಮ್ಲದಿಂದ ಡಿಲ್ಲಿಗೆ ವೈಯೋಣಾಗುವುದೆಂತ ತಿಳಿದು ಬರುತ್ತದೆ.

ಇಂಡಿಯಾ ಕ್ರೆಡಿಟ್ ಬೇಂಕಿನ ಹಣವನ್ನು ದುರುಪಯೋಗ ಮಾಡಿದ್ದಾರೆಂಬ ತಕ್ಷೀರಿನ ಮೇಲೆ ಆಪಾದಿಸಲ್ಪಟ್ಟ ಬೇಂಕಿನ ಮನೇಜರ್ ಜಾಫರ್ ಜೂಸಬನಿಗೆ ಮುಂಬಯಿ ಹೈಕೋರ್ಟಿನವರು ತಾ. ೧೦ರಲ್ಲು ಮೂರು ವರ್ಷಗಳ ಸಜೆಯನ್ನು ವಿಧಿಸಿ ಲೆಕ್ಕಪರಿಶೋಧಕ ಏಸಿ ಎಂಬವನನ್ನು ಖುಲಾಸುಪಡಿಸಿದರು. ಈ ಬೇಂಕಿನ ಮೊಕದ್ದಮೆಯಲ್ಲಿ ಜಾಫರನಿಗೆ ಈ ಮೊದಲೇ ೭ ವರ್ಷಗಳ ಗಡಿಪಾರು ಶಿಕ್ಷೆ ವಿಧಿಸಲ್ಪಟ್ಟಿರುವುದು.

ಕಾನಪುರ ಡಿಸ್ಟ್ರಿಕ್ಟಿಗೆ ಸೇರಿದ ಮುಖಂಡರಾದ ಹಿಂದೂ ಜಮೀನ್‌ದಾರರು ಸೇರಿ ತಮ್ಮ ಧನಿಗಳ ಮತ್ತು ಶಾಸ್ತ್ರಿಗಳ ಅಭಿಮತವನ್ನು ಪಡೆದು ಇನ್ನು ಮುಂದೆ ಯಾವ ಭಕ್ತರೂ ಶ್ರೀದೇವಿ ಎಂಬ ಆ ಪ್ರಾಂತ್ಯದ ದೊಡ್ಡ ದೇವಸ್ಥಾನದಲ್ಲಿ ಪ್ರಾಣಿಗಳನ್ನು ಬಲಿ ಕೊಡಲೇ ಕೂಡದೆಂದೂ, ಹೂವು, ಹಣ್ಣು, ಹಂಪಲುಗಳನ್ನು ಮಾತ್ರ ಅರ್ಪಿಸಬೇಕೆಂದೂ ಆಡು, ಕುರಿ, ಕೋಣಗಳನ್ನು ಕೊಂದು ರಕ್ತ ಹಾರಿಸುವುದು ಮಹಾ ಪಾತಕವೆಂದೂ ನಿಶ್ಚಯಮಾಡಿಕೊಂಡು ಆ ಪ್ರಾಂತ್ಯದ ಹಿಂದೂ ಭಕ್ತ ಜನರಿಗೆಲ್ಲಾ ತಿಳಿಸಿದ್ದಾರೆ.

... ನಾನಿಟಾಲಿನ ಬಳಿ ಕಾಡಿನಲ್ಲಿ ಒಂದು ಕೋತಿಯ ಹೆಣ್ಣು ಮಗು ಸಿಕ್ಕಿ ಅದನ್ನು ಆಸ್ಪತ್ರಿಯಲ್ಲಿ ಇಟ್ಟಿದ್ದಾರೆ. ಸಾವಿರಾರು ಪ್ರಜೆಗಳು ಅದನ್ನು ಹೋಗಿ ನೋಡುತ್ತಿರುತ್ತಿರುವರು. ಈ ಮಗುವು ಕ್ಷಾಮದ ಮಗುವಿನಂತೆ ಕಾಣುತ್ತದೆ. ಅದರ ದೇಹದ ಚರ್ಮವು ಬಹಳ ದಪ್ಪನಾಗಿರುವುದು. ತೋಳು, ಕಾಲು ಶರೀರದ ಮೇಲೆ ಉದ್ದವಾಗಿ ಕೂದಲು ಬೆಳೆದಿದೆ. ಉಗುರು ಉದ್ದವಾಗಿರುತ್ತದೆ. ಮೊದಲು ಅದಕ್ಕೆ ಹಾಲು ಮುಂತಾದನ್ನು ಹಾಕುತ್ತಿದ್ದರು. ಈಗ ಹಸಿಯ ಮಾಂಸವನ್ನು ತಿನ್ನುವದು. ಹಣ್ಣುಗಳನ್ನು ತಿನ್ನುವದಿಲ್ಲ. ಈಗ ಚೆನ್ನಾಗಿ ಬೆಳೆಯುತ್ತದೆ.

ಉತ್ತರ ದೇಶದಲ್ಲಿ ಪ್ರಕಟವಾಗುವ ಬಿಹಾರಿ ಎಂಬ ಪತ್ರಿಕೆಗೆ ಮೊಜಾ ಎಕಿಬ ಊರಿನಿಂದ ಒಬ್ಬ ಬಾತ್ಮೀದಾರನು ಹೀಗೆ ಬರೆಯುವನು: — ಸರಾನ್ ತಾಲೂಕಿಗೆ ಸೇರಿದ ಪರ್ಶಾಟಿ ಎಂಬ ಗ್ರಾಮದಲ್ಲಿ ಒಬ್ಬನಿಗೆ ಇಬ್ಬರು ಹೆಂಡತಿಯರು. ಪ್ರತಿ ಒಬ್ಬ ಹೆಂಡತಿಯಲ್ಲೂ ಒಂದೊಂದು ಗಂಡು ಕೂಸು ಹುಟ್ಟಿವೆ. ಮೊದಲನೇ ಹೆಂಡತಿ ಸತ್ತು ಹೋದಳು. ಎರಡನೇ ಹೆಂಡತಿಯು ತನ್ನ ಮಲ ಮಗನನ್ನು ಕತ್ತರಿಸಿ ಅಡಿಗೆ ಮಾಡಿ ಗಂಡನಿಗೆ ಬಳಸಿದಳು. ಊಟವಾದ ಮೇಲೆ ಆ ಎರಡನೇ ಹೆಂಡತಿಯ ಮಗು ತಂದೆಯ ಕಡೆ ತನ್ನ ತಾಯಿ ಆ ಮಗನನ್ನು ಕೊಂದು ಹಾಕಿದಳೆಂದೂ ಅಡಿಗೆಮಾಡಿಟ್ಟಳೆಂದೂ ಹೇಳಿ ಬಿಟ್ಟನು. ಗಂಡನಿಗೆ ಸಿಟ್ಟು ಬಂದು ಹೆಂಡತಿಯನ್ನು ಕ್ರೂರವಾಗಿ ಹೊಡೆದು ಮನೆಯಲ್ಲಿ ಬೆರಣಿ ಒಟ್ಟಿಗೆ ಸುಟ್ಟು ಬಿಟ್ಟನು ಈಗ ಪೋಲಿಸಿನವರು ಅವನನ್ನು ಹಿಡಿದುಕೊಂಡಿದ್ದಾರೆ.

ದಕ್ಷಿಣ ಕನ್ನಡ.

ನೋಟೀಸು.

ಕೊಡಗು ವಿದ್ಯಾ ಇಲಾಖೆಯ ಗವರ್ನಮೆಂಟ ಸ್ತ್ರೀ ಪಾಠಶಾಲೆಗಳಲ್ಲಿ ಮಾಹೆಯಾನ ರೂ ೨೫ ರಿಂದ ೩೦ ಮತ್ತು ೩೫ ರೂಪಾಯಿ ತಲಬಿನ ಇಬ್ಬರು ತರ್ಬೀತಾದ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ ಲೋವರ್ ಸೆಕಂಡರಿ ಅಥವಾ ಮೇಲಿನ ಪರೀಕ್ಷೆಗಳನ್ನು ಪಾಸಾದವರು ಕೆಳಗಿನ ವಿಳಾಸಕ್ಕೆ ಅರ್ಜಿಮಾಡುವದು

A. Rama Rau.
Asst Inspector of schools,
Coorg, Mercara.

ನೋಟೀಸು.

ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಓ. ಪಿ. ನಂಬ್ರ $\frac{78}{1914}$.

ಲಕ್ಷ್ಮಮ್ಮ-ಮೈನರ, ರಕ್ಷಕ-ತಂದೆ ಅಪ್ಪಣ್ಣಭಟ್ಟ. ಅರ್ಜಿದಾರ
ಮದಂಗಲ ನಾರಾಯಣ ಭಟ್ಟ. ರೆಸ್‌ಪೊಂಡೆಂಟ.

ಅರ್ಜಿದಾರಳ ಗಂಡ ಮೃತಪಟ್ಟ ಗೋವಿಂದಭಟ್ಟನ ಸಾಲ ವಸೂಲಿ ಕುರಿತು ಅರ್ಜಿದಾರಳು ಕೊಟ್ಟ ಸದರಿ ಅರ್ಜಿಯು ಇದೇ ತಿಂಗಳ ತಾ 27ನೆ ಗುರುವಾರ ತನಕಿಗೆ ಇಟ್ಟಿರುವುದರಿಂದ ಈ ಕುರಿತು ಆಕ್ಷೇಪ ಇದ್ದವರು ಈ ತಾರೀಕಿನ 11 ಘಂಟೆಗೆ ಸದರಿ ಕೋರ್ಟ ಮುಂದೆ ಹಾಜರಾಗತಕ್ಕದೆಂತ ಈ ಮೂಲಕ ಪ್ರಕಟಿಸೋಣಾಗುತ್ತದೆ.

ತಾ 7 – 8 – 1914 M. Rangappa Bhandary.
Pleader for Petitioners.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಪ್ರೋ. ಪಿ ನಂಬ್ರ $\frac{83}{1914}$.

1 ರಾಜೀವಿ.
2. ಸುಲೋಚನಿ.
3. ಕಾವೇರಿ.
} ಮೈನರು. ಇವರ ಗಾರ್ಡಿಯನ್ ಶೇಷಪ್ಪೈ—ಅರ್ಜಿದಾರ.

1913ನೇ ಇಸವಿ ಅಕ್ಟೋಬರ ತಿಂಗಳಲ್ಲಿ ಬ್ರಹ್ಮಾವರದಲ್ಲಿ ಮೃತಪಟ್ಟ ಆನಂದಿ ಯವಿನೆ ಪದ್ಮಾವತಿಗೆ ಹೊರಗಿನಿಂದ ಬರತಕ್ಕ ಸಾಲಗಳನ್ನು ವಸೂಲು ಮಾಡುವರೆ ಮೇಲಿನ ಅರ್ಜಿದಾರನು ಮೈನರ ಗೋಸ್ಕರ ತನ್ನ ಹೆಸರಿನಲ್ಲಿ ಸರ್ಟಿಫಿಕೇಟು ಸಿಕ್ಕಬೇಕಾಗಿ ಸದರಿ ಕೋರ್ಟಿನಲ್ಲಿ ಮಾಡಿದ ಅರ್ಜಿಯು ತಾ. 27 – 8 – 14ರಲ್ಲು 11 ಘಂಟೆಗೆ ಸದರಿ ಕೋರ್ಟಿನಲ್ಲಿ ತನಿಕೆಗೆ ಇಟ್ಟಿರುತ್ತದೆ. ಆಕ್ಷೇಪಗಳನ್ನು ಈ ತಾರೀಕಿಗೆ ಸದರಿ ಕೋರ್ಟಿನಲ್ಲಿ ಹಾಜರುಮಾಡತಕ್ಕದ್ದು.

ಮಂಗಳೂರು 14 – 8 – 1914 } G. Krishna Rau.
Pleader for Petitioner.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಕೋರ್ಟಿನಲ್ಲಿ.

O. P. ನಂಬ್ರ $\frac{65}{1914}$.

ಪಿಯದಾದೆ ರೆಬೆಲ್ಲೊ ಕೂಡಾ ೩ ಜನರು—ಅರ್ಜೀದಾರರು

ದಕ್ಷಿಣ ಕನ್ನಡಾ ಉಡುಪಿ ಕಸಬೆಯಲ್ಲಿ ಕಳೆದ 1913ನೇ ಇಸವಿ ಫೆಬ್ರವರಿ ತಾ. 8ರಲ್ಲು ಮೃತಪಟ್ಟ ಯಜಬೆಲ್ಲ ಬೆನೆಡಿಕ್ಟ ರೆಬೆಲ್ಲೊಬಾಯಿಯ ಆಸ್ತಿಯನ್ನು ಪರಿಪಾಲನೆ ಮಾಡುವ ಬಗ್ಗೆ ೧ನೇ ಅರ್ಜದಾರನಾದ ಮೃತಳ ಗಂಡ ಪಿಯದಾದೆ ರೆಬೆಲ್ಲೊ ಹೆಸರಿಗೆ ಲೆಟರ್ಸ್ ಅಪ್ ಯೆಡ್ಮಿನಿಸ್ಟ್ರೇಶನ ಕೊಡಬೇಕಾಗಿ ಅಪೇಕ್ಷಿಸಿ ಅರ್ಜದಾರರು ಬರಕೊಂಡ ಸದರಿ ಅರ್ಜ ಇದೇ ತಿಂಗಳ ತಾ. ೨೫ಕ್ಕೆ ಪೂರ್ವಾಹ್ನ 11 ಗಂಟೆಗೆ ತನಖೆಗೆ ಇಟ್ಟಿರುವದರಿಂದ ಆಕ್ಷೇಪಣೆ ಇದ್ದವರು ಅವರ ಆಕ್ಷೇಪಣೆಗಳನ್ನು ಸದರಿ ಕೋರ್ಟಿನಲ್ಲಿ ಸದರಿ ತಾರೀಕಿಗೆ ಜಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು
ತಾ. 10—8—14

P. D'Souza,
Pleader for Petitioner.

~~~~~~

ಉಡುಪಿ:—ಇಲ್ಲಿಯ ಮ. ಸಿ. ಪ್ರ. ಸಂಸ್ಕೃತ ಪಾಠಶಾಲೆಯ ಹತ್ತನೆಯ ವರ್ಷ ವರ್ಧಂತಿಯನ್ನು ಇದೇ ತಾ. ೮ನೆ ಶನಿವಾರ ದಿವಸ ಬಹು ಸಂಭ್ರಮದಿಂದ ಆಚರಿಸಿದರು. ಸದ್ವಿದ್ಯಾದಾನದಲ್ಲಿ ಅತ್ಯಂತ ಪ್ರೀತಿ ವಿಶ್ವಾಸವಿರುವ ಶ್ರೀ ಪುತ್ತಿಗೆ ಶ್ರೀಪಾದಂಗಳವರು ಈ ವರ್ಷವೂ ಯಥಾ ಪ್ರಕಾರ ತಮ್ಮ ಔದಾರ್ಯವನ್ನು ಪ್ರದರ್ಶಿಸದೆ ಇರಲಿಲ್ಲ. ಆ ದಿವಸ ಪಾಠಶಾಲೆಯ ವಿದ್ಯಾರ್ಥಿಗಳಿಗೂ, ಉಪಾಧ್ಯಾಯರಿಗೂ, ಕ್ಷೇತ್ರವಾಸಿಗಳಿಗೂ ಮೃಷ್ಟಾನ್ನ ಭೋಜನ ಮಾಡಿಸಿದರು. ವ್ಯಾಸಪೂಜೆ ಮಾಡಿಸಿ ಎಲ್ಲಾ ವಿದ್ಯಾರ್ಥಿಗಳಿಗೂ ವಸ್ತ್ರ ದಾನವನ್ನೂ ಉತ್ತೀರ್ಣರಾದವರಲ್ಲಿ ಮುಖ್ಯರಾದವರಿಗೆ ಪುಸ್ತಕ ದಾನವನ್ನೂ ಮಾಡಿಸಿದರು. ಕೆಲವು ವರ್ಷಗಳಿಂದ ಈ ಪಾಠಶಾಲೆಯ ವಿದ್ಯಾರ್ಥಿಗಳಿಗೂ ಕೊಡುತ್ತಿದ್ದ ದಕ್ಷಿಣೆಗೆ ಮ. ಸಿ. ಸಂವರ್ಧಿನಿ ಸಭೆಯವರು ಈ ವರ್ಷ ಸೊನ್ನೆ ಹಾಕಿದ್ದರೂ ಶ್ರೀ ಪುತ್ತಿಗೆ ಶ್ರೀಪಾದಂಗಳವರು ಎರಡೆರಡು ಅಂಗ ವಸ್ತ್ರಗಳನ್ನಾದರೂ ಕೊಡಿಸಿದ್ದು ಬಡ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಯಿತು.

ಈ ಪಾಠಶಾಲೆಯ ಮುಖ್ಯ ಉಪಾಧ್ಯಾಯರಾಗಿದ್ದ ಸ. ಮ. ಸಂ. ರಾಮಕೃಷ್ಣಾಚಾರ್ಯರೂ, ಸಹಾಯಕರಾಗಿದ್ದ ಕೆ. ವೆಂಕಟರಾಮಾಚಾರ್ಯರವರೂ ರಾಜೀನಾಮೆ ಕೊಟ್ಟದ್ದು ತುಂಬ ವ್ಯಸನಕರವು. ಇವರಿಬ್ಬರು ಈ ಪಾಠಶಾಲೆಗೆ ಎರಡು ಕಣ್ಣಿನಂತಿದ್ದವರು. ಇವರ ಅಗಲಿಕೆಯಿಂದ ವ್ಯಾಕರಣ, ಸಾಹಿತ್ಯ, ನಾಟಕ ಪಾಠಗಳು ಸರಿಯಾಗಿ ನಡಿಯುವದು ಅಸಾಧ್ಯವಾಗಿ ತೋರುತ್ತೆ.

ಯುದ್ಧವಾರ್ತೆಯಿಂದ ಜನರ ಮನಸ್ಸೆಲ್ಲ ತಪಿಸುತ್ತಿದೆ. ಗೋಧಿ, ಸಕ್ಕರೆ ಮೊದಲಾದ ಕೆಲವು ಆಹಾರ ಪದಾರ್ಥಗಳ ಬೆಲೆಯು ಚಡಾವಾಗ ಹತ್ತಿಯದೆ.

ಋಗುಪಾಕರ್ಮವನ್ನು ಚಾಂದ್ರಮಾನರೀತ್ಯಾ ಶ್ರಾವಣ ಮಾಸದ ಶ್ರವಣ ನಕ್ಷತ್ರದಲ್ಲಿ ಆಚರಿಸಬೇಕಾದದ್ದಷ್ಟೆ. ಹಾಗೆ ಆಚರಿಸುವುದಕ್ಕೆ ಈ ವರ್ಷ ಆಕ್ಷೇಪಗಳೇನೂ ತೋರಲಿಲ್ಲಾ. ಆದರೂ ಕೆಲವರು ಶ್ರಾವಣ ಶು. ೫ ದಿವಸ ಆಚರಿಸಿದರಾಗಿ ತಿಳಿದುಬರುತ್ತೆ. ಇದರ ಕಾರಣವನ್ನು ಈ ಪತ್ರಿಕೆಯ ಮೂಲಕ ಹಾಗೆ ಆಚರಿಸಿದವರಲ್ಲಿ ಯಾರಾದರೂ ತಿಳಿಸುತ್ತಿದ್ದರೆ ಉಪಕಾರವಾಗುತ್ತಿತ್ತು.

~~~~~~

ಕಾಪು:—ಯೂರೋಪದಲ್ಲಿ ನಡಿಯುವ ಮಹಾ ಯುದ್ಧದ ಗಲಿಬಿಲಿಯಿಂದ ಊರ ಹಳ್ಳಿ ಪಳ್ಳಿಗಳ ಅಂಗಡಿಗಾರರು ಎಲ್ಲಾ ಸಾಮಾನುಗಳ ದರ ಏರಿಸಿರುತ್ತಾರೆ. ಇದರಿಂದ ಎಲ್ಲಾ ಜನರಲ್ಲಿ ಪ್ರತಿ ಒಬ್ಬನಿಗೂ ಯುದ್ಧದ ವಾರ್ತೆ ತಿಳಿದು ಬಂದ ಹಾಗಾಯಿತ್ತೆನ್ನಬೇಕಾಗಿದೆ. ಅಂತೂ ಬಡ ಜನರು ವ ಅಲ್ಪ ಸಂಬಳದ ನೌಕರರ ಜೀವನಕ್ಕೆ ತೊಡಕು ಬಂದದ್ದು ಸೂಚಿಸಲು ವಿಷಾದವಾಗಿದೆ.

~~~~~~

ಹೊಸದುರ್ಗ:—ಇಲ್ಲಿಯ ರೈಲ್ವೆ ಆಫೀಸಿಗೆ ಸಮ್ಮಂದಪಟ್ಟ ಅನೇಕ ರೈಲ್ವೆ ಪಾರ್ಸೆಲುಗಳು ಮೈಸೂರ 'ಹೊಸದುರ್ಗ'ಕ್ಕೆ ಗೈರವಲೆ ಆಗುವ ಕಾರಣದಿಂದ ಈ ಹೊಸದುರ್ಗ ರೈಲ್ವೆ ಸ್ಟೇಶನಗೆ 'ಕಾಂಞಂಗಾಡ್' ಸ್ಟೇಶನ್ ಎಂತ ಹೆಸರು ಬದಲಾಯಿಸೋಣಾಗಿಯದೆ.

ಅನೇಕ ಜನಸ್ತೋಮ, ಶಾಲಾ ಹುಡುಗರು ವ ದನಕರುಗಳು ಆಮದು ರಫ್ತಾಗುವ ಪೇಟೆಯ ರಾಜ ಬೀದಿಯಲ್ಲಿ ಲಗಾಮು ವಗೈರೆ ಇಲ್ಲದೆ ಕುದುರೆ ಸವಾರಿ ಮಾಡುವುದು ಇತ್ತಲಾಗೆ ದಿನಾಕ್ಕೆ ಹೆಚ್ಚುತ್ತಾ ಬರುತ್ತದೆ. ಇಂಥಾ ಗಂಡಾಂತರ ಬರುವಂಥಾದನ್ನು ಅಪಾಯ ಬರುವ ಮುಂಚಿತವಾಗಿ ನಿಲ್ಲಿಸುವರೆ ಪ್ರಯತ್ನವಿಡುವುದು ನ್ಯಾಯವಲ್ಲವೇ? ಆದ್ದರಿಂದ ಸರಕಾರದವರು ಇದಕ್ಕೆ ತ್ವರ್ಯದಲ್ಲಿ ನಿಗಾ ಕೊಡಬೇಕಾಗಿ ಕೋರುತ್ತೇವೆ.

ಈ ಬಜಾರಿನಲ್ಲಿ ಧಾನ್ಯದವಸ ಇತ್ಯಾದಿಗಳಿಗೆ ಅನಾವಶ್ಯಕ ಕ್ರಯ ಹೆಚ್ಚಿಸಬಾರದಾಗಿ ಇಲ್ಲಿಯ ಸಾಹುಕಾರರಿಗೆ ಡಿಪ್ಯುಟಿ ತಹಸಿಲದಾರರು ಬುದ್ಧಿ ವಾದ ಹೇಳಿರುತ್ತಾರೆ.

ಇಲ್ಲಿ ತರಿಸುವ ಸಾಮಾನುಗಳ ಪೈಕಿ ಹೆಚ್ಚಾಗಿ ಅಕ್ಕಿಯನ್ನು ಮಂಗಳೂರು, ಪಾಣೆಮಂಗಳೂರು ಅತ್ತಕಡೆಯಿಂದ ತರಿಸುವ ವಾಡಿಕೆ ಇರುತ್ತದೆ. ಆದರೆ ಸಾಧಾರಣವಾಗಿ ಯಾವ ಅಕ್ಕಿಮುಡಿಯಲ್ಲಿ ಇರಬೇಕಾದ ಅಳತೆ ಸರಿ ಇಲ್ಲದೆ ಇದ್ದದಕ್ಕೆ ತಕ್ಕ ಸಬಬು ಈ ವರೆಗೂ ಗೊತ್ತಾಗಲಿಲ್ಲವಾಗಿತ್ತು. ಆದರೆ ರೈಲ್ವೆ ಸ್ಟೇಶನಿನಿಂದ ಪೇಟೆಗೆ ಗಾಡಿಯಲ್ಲಿ ಅಕ್ಕಿ ತರುವಾಗ ಗಾಡಿಯವನೊಬ್ಬನು ದಾರಿಯಿಂದ ಗಾಡಿಯಲ್ಲಿ ಒಂದೊಂದು ಮುಡಿಯಿಂದ ಅಲ್ಪಸ್ವಲ್ಪ ಅಕ್ಕಿ ಜಾರಿಸಿ ನಡಿಸಿದ ಕಳವನ್ನು ಅಂಗಡಿಗಾರರೊಬ್ಬರು ಪತ್ತೆಮಾಡಿ ಕೂಡಲೇ ನ್ಯಾಯಸ್ಥಾನದಲ್ಲಿ ವರದಿ ಕೊಟ್ಟು ಅಪಾದಿತನನ್ನು ವಿಚಾರಣೆಗೆ ಗುರಿಮಾಡಿದ್ದಾರೆ. ಬಹುಶ್ಯಾ ಅಕ್ಕಿಯ ಅಳತೆಯಲ್ಲಿ ಕಮ್ಮಿ ಬರುವರೆ ಈ ನಮೂನೆಯ ಕಾರಣಗಳಿಲ್ಲದೆ ಬೇರೆ ಯಾವದೂ ತೋರುವದಿಲ್ಲ.

~~~~~~

ಸುಳ್ಯ:—ಇಲ್ಲಿಯ ಅಬ್ಕಾರಿ ಸಬ್ ಇನ್ಸಪೆಕ್ಟರ ರಾ| ಕೆ. ಎಸ್. ಪೊಣ್ಣಪ್ಪನವರಿಗೆ ಮಲಬಾರು ಜಿಲ್ಲೆಯ ಕುಡಾಳಿ ರೇಂಜಿಗೆ ವರ್ಗವಾಗಿ ಇಲ್ಲಿಗೆ ರಾ| ಜೆ. ಎಮ್. ಲೊಬೊ ಎಂಬವರು ಬಂದಿರುತ್ತಾರೆ.

ಇಲ್ಲಿಯ ಪೋಸ್ಟು ಆಫೀಸಿನಲ್ಲಿ ಪೋಸ್ಟ ಮಾಸ್ತರರೇ ಕಾಗದ ಬಟ್ವಾಡೆ ಮಾಡಬೇಕಾದುದರಿಂದ ಕಾಗದಗಳು ಕಸಬೆಯ ಜನರಿಗೆ ತಕ್ಕ ಕಾಲದಲ್ಲಿ ಸಿಕ್ಕುವುದು ಕಷ್ಟವಾಗಿದೆ. ಪೋಸ್ಟ ಮಾಸ್ತರರು ಮದ್ಯಾನ್ಹ ಜುಡೀಶ್ಯಲ್ ಸ್ಟಾಂಪುಗಳನ್ನು ಮಾರುವ ಕೆಲಸದಲ್ಲಿಯೂ ಮದ್ಯಾಹ್ನದನಂತರ ಮನಿಆರ್ಡರು ರಿಜಿಸ್ಟ್ರಿ ಇತ್ಯಾದಿ ಕೆಲಸಗಳಲ್ಲಿಯೂ ಇರುವುದರಿಂದ ಕಾಗದ ಪಡಕೊಳ್ಳುವರೆ ಜನರೇ ಆಫೀಸಿಗೆ ಹೋಗಿ ಕಾಯಬೇಕಾಗುತ್ತದೆ. ಆದಕಾರಣ ಇಲಾಖೆಯವರು ಒಬ್ಬ ಬಟ್ವಾಡೆ ಪೇದೆಯನ್ನು ಇರಿಸುತ್ತಿದ್ದರೆ ಉಪಕಾರವಾಗುತ್ತಿತ್ತು.

~~~~~~

ಬೆಳ್ತಂಗಡಿ:—ಇಲ್ಲಿ ಹುಲಿಗಳ ಉಪದ್ರವು ಹೆಚ್ಚಾಗುತ್ತಾ ಬರುತ್ತಿದೆ. ಕೆಲವು ದಿನಗಳ ಹಿಂದೆ ಕಸಬೆ ಸಮೀಪ ಮೇಯಲಿಕ್ಕೆ ಹೋಗಿದ್ದ ಹೂಡುವ ಕೋಣಗಳಲ್ಲಿ ಒಂದನ್ನು ಹುಲಿಯು ಕೊಂದು ಮತ್ತೊಂದನ್ನು ಘಾಯಪಡಿಸಿಯದೆ. ಕೋಣಗಳನ್ನು ಕೂಡಾ ಹಿಡಿಯುವದರಿಂದ ಇದು ಸಾಧಾರಣ ಹುಲಿಯಾಗಿರದೆ ಹೆಬ್ಬುಲಿಯಾಗಿರಬೇಕೆಂದು ಭಾವಿಸುತ್ತಾರೆ. ಕೋವಿ ಸಪ್ಪಳವು ಕಡಿಮೆಯಾಗಿರುವುದರಿಂದಲೇ ಕಾಡಿನಲ್ಲಿರತಕ್ಕಂತವರು ಊರಿಗೆ ಇಳಿದು ಹಾವಳಿ ಮಾಡ ಪ್ರಾರಂಭಿಸಿರುತ್ತಾರೆ. ಮಾನ್ಯ ಕಲೆಕ್ಟರ್ ದೊರೆಗಳವರು ಈ ಸಂಗತಿಯನ್ನಾದರೂ ಮನವರಿಕೆ ಮಾಡಿಕೊಂಡು ಇಲ್ಲಿಯ ಮಾನ್ಯ ಗೃಹಸ್ಥರಿಗೆ ಬಂದೂಕು ಬಗ್ಗೆ ಲೈಸನ್ಸ್ ದಯಪಾಲಿಸುವದಾದರೆ ಮಹದುಪಕಾರವಾಗುತ್ತಿತ್ತು.

~~~~~~

ಮಂಗಳೂರು.

ಮದ್ರಾಸು ಗವರ್ನಮೆಂಟಿನವರಿಂದ ತಂತೀ ಮೂಲಕ ಕಳುಹಿಸೋಣಾದ ವರ್ತಮಾನ:—ಇದೇ ಅಗೋಸ್ತು ತಿಂಗಳ ತಾ 21ನೇ ಶುಕ್ರವಾರ ದಿನ ಸೂರ್ಯಾಸ್ತಮಾನ ಕಾಲದಲ್ಲಿ ಸೂರ್ಯನಿಗೆ ಗ್ರಹಣವು ಹಿಡಿಯುವದು. ಆ ಸಮಯದಲ್ಲಿ ಆಕಾಶದಲ್ಲಿ ಬೆಳಕುಗಳು ತೋರಿ, ಇತರ ಭೌತಿಕ ವಿದ್ಯಮಾನಗಳು ಸಹಾ ಕಂಡು ಬರಬಹುದು. ಈ ಸಂಭವವು ಸಹಜವಾದದ್ದು ವ ಸ್ವಾಭಾವಿಕತರದ್ದಾದ್ದರಿಂದ ಜನರು ಗಾಬರಿ ಪಡಬಾರದೆಂಬದು ಈ ಮೂಲಕ ಸೂಚಿಸೋಣಾಗುತ್ತದೆ.

ಇಲ್ಲಿ ತಾ. ೧೩ರಲ್ಲು ಕಲೆಕ್ಟರ ಆಫೀಸಿನಲ್ಲಿ ಸೇರಿದ ಸಾಹುಕಾರರ ಸಭೆಯಲ್ಲಿ ಸಾಹುಕಾರರೆಲ್ಲರೂ ತಾವು ಮುಂಬಯಿ ಮತ್ತು ಕರಾಚಿ ಬಂದರುಗಳ ದರಗಳಿಗೆ ಅನುಸಾರವಾದ ದರಗಳನ್ನು ಇಲ್ಲಿ ಇಡುವೆವೆಂಬ ನಿರ್ಣಯವು ಕಲೆಕ್ಟರ ದೊರೆಗಳವರಿಗೆ ತಿಳಿಸೋಣಾಗಿರುವುದು. ಈಗ ಇಲ್ಲಿಯ ಬಜಾರು ಧಾರಣೆಯು ಏರಿರುವುದಿಲ್ಲ.

ತಾ. ೧೫ನೇ ಬುಧವಾರ ಮುನ್ಸಿಪಲ್ ಚೇಯರ್ಮನ್ ಮ. ರಾ. ರಾ. ಎಮ್. ಎಮ್. ಬಂಗೇರರವರು ಕೊಟ್ಟ ನೋಟೀಸು ಪ್ರಕಾರ ಇಲ್ಲಿಯ ಗವರ್ನಮೆಂಟ ಕೊಲೇಜಿನ ಸಭಾಸದನದಲ್ಲಿ ಪುರಜನರ ಸಭೆಯು ನೆರೆದಿತ್ತು. ಯುದ್ಧ ಕಾಲದಲ್ಲಿ ಇಲ್ಲಿಯ ನಿವಾಸಿಕರ ರಾಜಭಕ್ತಿಯನ್ನೂ, ಬ್ರಿಟಿಷ ಆಳ್ವಿಕೆಯಲ್ಲಿ ಪ್ರಜೆಗಳಿಗಿರುವ ವಿಶ್ವಾಸವನ್ನೂ ಈ ಸಂದರ್ಭದಲ್ಲಿ ತಮ್ಮಿಂದಾಗುವ ಸಹಾಯವೆಲ್ಲವನ್ನು ಕೊಡಲು ಸಿದ್ಧವಿರುವೆವೆಂಬದಾಗಿ ಸೂಚಿಸಿ ನಿರ್ಣಯಗಳು ಈ ಸಭೆಯಲ್ಲಿ ಮಾಡೋಣಾದವು. ಮುನ್ಸಿಪಲ್ ವೈಸ್‌ಚೆಯರ್ಮೆನರಾದ ಡಾಕ್ಟರ್ ಎಲ್. ಪಿ. ಫೆರ್ನಾಂದಿಸರು ಸಭಾಧ್ಯಕ್ಷರಾಗಿದ್ದರು. ಪುರನಿವಾಸಿಕರಲ್ಲಿ ಎಲ್ಲಾ ಜಾತಿವರ್ಗಗಳ ಗೃಹಸ್ಥರು ಕೂಡಿಬಂದಿದ್ದರು. ಯೂರೋಪಿಯ ಪ್ರತಿನಿಧಿಗಳಾಗಿ ಇಲ್ಲಿಯ ಪೋರ್ಟ್ ಆಫೀಸರರು ಸಭೆಗೆ ದಯಮಾಡಿ ಬಂದಿದ್ದರು. ಈ ನಿರ್ಣಯಗಳನ್ನು ವೈಸರಾಯಿಪ್ರಭುಗಳಿಗೂ ಮದ್ರಾಸ್ ಗವರ್ನರ ದೊರೆಗಳಿಗೂ ತಂತೀ ಮೂಲಕ ತಿಳಿಸಬೇಕೆಂದು ನಿಶ್ಚಯಿಸಿ ರಾಜಗೀತವನ್ನು ಹಾಡಿ ಸಭೆಯು ಮುಕ್ತಾಯವಾಯಿತು.

ಇಲ್ಲಿಯ ಸೆಶ್ಶನ್ಸ್ ಕೋರ್ಟಿನಲ್ಲಿ ಈ ತಿಂಗಳಲ್ಲಿ ಒಟ್ಟಿಗೆ ೩ ಸೆಶ್ಶನ್ಸ್ ಮೊಕದಮೆಗಳು ತನಕಿಗೆ ಇಡಲ್ಪಟ್ಟಿದ್ದವು. ಮೊದಲನೇ ಮೊಕದಮೆಯು ಕಾಸರಗೋಡು ಸಬ್ ಮೇಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟಿದ್ದಾಗಿತ್ತು. ಈ ಮೊಕದಮೆಯಲ್ಲಿ ಅಬ್ದುಲರಹಿಮಾನ್ ಮತ್ತು ಇನ್ನೊಬ್ಬನು ಇ. ಪಿ. ಕೋಡಿನ ೩೦೨ನೇ ಪ್ರಕರಣದ ಮೇಲೆ, ಇದೇ ಕಳೆದ ಮೇ ತಾ. ೧೯ರಲ್ಲು ಮಂಜಪ್ಪಶೆಟ್ಟಿ ಎಂಬ ಒಬ್ಬ ಮುದುಕನನ್ನು ಕೊಂದರೆಂಬದಾಗಿ ಆಪಾದಿಸಲ್ಪಟ್ಟಿದ್ದರು. ೩-೬ ನೇ ಆಪಾದಿತರು ಈ ಕೃತ್ಯವನ್ನು ನಡಿಸುವರೆ ೧-೨ನೇ ಆಪಾದಿತರನ್ನು ಪ್ರೇರೇಪಿಸಿದವರೆಂದು ಆಪಾದಿಸಲ್ಪಟ್ಟಿದ್ದರು. ಜಡ್ಜರು ಎಸೆಸ್ಸರ ಅಭಿಪ್ರಾಯವನ್ನು ಒಪ್ಪಿ ೧-೨ನೇ ಆಪಾದಿತರು ತಪ್ಪಿತಸ್ಥರೆಂಬ ಅಭಿಪ್ರಾಯಪಟ್ಟು ಇ. ಪಿ. ಕೋಡಿನ ೩೦೪ನೇ ಪ್ರಕರಣದ ಮೇಲೆ ೧-೨ನೇ ಆಪಾದಿತರಿಗೆ ಹತ್ತತ್ತು ವರ್ಷಗಳ ಸಜಾ ವಿಧಿಸಿ, ೩-೬ನೇ ಆಪಾದಿತರನ್ನು ಖುಲಾಸುಪಡಿಸಿದರು.

ಅನಂತರ ಕಾರ್ಕಳ ಸಬ್ ಮೇಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಖೂನಿ ಮೊಕದಮೆಯು ತನಕಿಯಾಯಿತು. ಈ ಮೊಕದಮೆಯಲ್ಲಿ ಪುಟ್ಟಣ್ಣ ಶೇರಿಗಾರನು ಬಾಬಣ್ಣ ಆಚಾರಿಯನ್ನು ಕಳೆದ ಜೂನು ತಾ. ೧೯ರಲ್ಲು ಕೊಂದಿದ್ದನೆಂಬುದಾಗಿ ಆಪಾದಿಸಲ್ಪಟ್ಟಿದ್ದನು. ಆಪಾದಿತನು ಅಪರಾಧಿಯಲ್ಲ ಎಂಬದಾಗಿ ಜಡ್ಜರು ಅಭಿಪ್ರಾಯಪಟ್ಟು ಆಪಾದಿತನನ್ನು ಖುಲಾಸುಪಡಿಸಿದರು.

ಮೂರನೇದಾಗಿ ಮಂಗಳೂರು ತಾಲೂಕು ಸಬ್ ಮೇಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ತುಕ್ರ ಮತ್ತು ಇತರ ೪ ಹೊಲೆಯರ ಮೊಕದಮೆಯು ತನಕಿ ಮಾಡಲ್ಪಟ್ಟಿತು. ಜಡ್ಜರು ೩ನೇ ಆಪಾದಿತನು ಮಾತ್ರ ತಪ್ಪಿತಸ್ಥನೆಂದು ಅಭಿಪ್ರಾಯಪಟ್ಟು ಅವನಿಗೆ ಇ. ಪಿ. ಕೋಡಿನ ೩೦೪ನೇ ಪ್ರಕರಣದ ಮೇಲೆ ೧ ವರ್ಷದ ಕಠಿಣ ಸಜಾ ವಿಧಿಸಿದರು.

ಕಾಫಿ ಕಳವಿನ ಮೊಕದಮೆಯಲ್ಲಿ ಇದೇ ತಾ. ೧೭ರಲ್ಲು ರಾ| ಬೋಳಂತೂರ ಸರ್ವೋತ್ತಮ ಪ್ರಭುಗಳು ಕೋರ್ಟಿಗೆ ಹಾಜರಾಗಿದ್ದರು. ಇವರನ್ನು ಜಾಮೀನಿನ ಮೇಲೆ ಬಿಟ್ಟು, ಮೊಕದಮೆಯ ತನಕಿಯನ್ನು ಇದೇ ತಾ. ೨೫ಕ್ಕೆ ಇಟ್ಟಿರುತ್ತಾರೆ.

ಕುಂದಾಪುರ ಆಕ್ಟಿಂಗ್ ಸಬ್ ಕಲೆಕ್ಟರರವರು ಇದೇ ತಿಂಗಳ ತಾ. ೧೬ ಕಾರ್ಕಳದಿಂದ ಹಿರಿಯಡ್ಕ; ತಾ. ೧೭ ಹಿರಿಯಡ್ಕದಿಂದ ಉಡುಪಿ; ೧೮-೨೧ ಉಡುಪಿ; ೨೨ ಕಾಪು; ೨೩-೨೫ ಕಾಪು; ೨೬ ಮಂಗಳೂರು; ೨೭-೨೮ ಮಂಗಳೂರು; ೨೯ ಉಡುಪಿ; ೩೦ ಉಡುಪಿ; ೩೧ ಉಡುಪಿಯಿಂದ ಕುಂದಾಪುರಕ್ಕೆ ಈ ರೀತಿ ಸರ್ಕೀಟು ಬೆಳೆಸುವರು.

ಇದೇ ತಾ. ೧೯ರ ವರೇಗೆ ಇಲ್ಲಿ ೧೧೫ ಇಂಚು ಮಳೆ ಬಿದ್ದಿರುವುದು. ಕಳೆದ ವರ್ಷ ಇಷ್ಟೇ ಸಮಯಕ್ಕೆ ೭೫ ಇಂಚುಗಳ ಮಳೆ ಮಾತ್ರ ಬಿದ್ದಿತ್ತು.

ಇಲ್ಲಿ ತಾ. ೧೮ ಮತ್ತು ೧೯ರಲ್ಲು ಎರಡು ವಾಂತಿಭೇದಿ ಮರಣಗಳು ಆಗಿರುವವು. ತಿರುಪತಿ ಯಾತ್ರೆಗೆ ಹೋಗಿ ಹಿಂತಿರುದವರಲ್ಲಿ ಈ ಮರಣ ಸಂಭವಿಸಿತು.

ಕಾಸರಗೋಡು ರೇಂಜು ಶಾಲೆಗಳ ಸಬ್ ಅಸಿಸ್ಟಾಂಟ ಇನ್ಸ್‌ಪೆಕ್ಟರರಾದ ರಾ| ಪಿ. ಮಂಗೇಶರಾಯರು ಮಂಗಳೂರು ರೇಂಜಿಗೆ ವರ್ಗಾಯಿಸಲ್ಪಟ್ಟು ಇದೇ ತಾ. ೨೪ರಲ್ಲು ಚಾರ್ಜ ತಕ್ಕೊಂಡಿರುವರು.



ಲಂಬಿಕ್ ವೆಜಿಟೆಬಲ್ ಟೋನಿಕ್ ಸಿರಪ್.

ನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು. ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ತಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಅನೋಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಬೇಧಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಚುಳುಮು, ಹಲ್ಲುನೋವು, ವಾತ, ಸಂಧಿವಾತ, ಹುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಅಂಡ್ ಕೊ. **S. VAIDYA & Co.,**
ಪಾರ್ಕ್ ಟೌನು, ಮದ್ರಾಸು. *Park Town, Madras.*

"ಆಯೊನಿಕ್ ಫಾರ್ಮೆಸಿ"

ಎಂಬ ಔಷಧ ಪರಿಶೋಧನಾ ಗ್ರಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) **ಫೀವರ್ ಸೊಲ್ಯೂಷನ್.** ಎಂಬ ಜ್ವರನಿವಾರಣೆಯ ರಸಾಯನ. (2) **ಫೀವರ್ ಡ್ರೊಪ್ಸ್** ಎಂಬುವ ಜ್ವರನಿವಾರಣ ಬಿಂಧುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) **ಬ್ಲಡ್ ಪ್ಯೂರಿಫ್ಯಾಯಿಂಗ್ ಸೊಲ್ಯೂಷನ್** ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು. ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಆಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ತಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮೆಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರೆಯುತ್ತವೆ.

S. VAIDYA & Co., ಎಸ್. ವೈದ್ಯಾ ಅಂಡ್ ಕೊ.
Park Town, Madras. ಪಾರ್ಕ್ ಟೌನ್, ಮದ್ರಾಸು.

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮಗ್ರಿಗಳು ಬೇಕಾದರೂ, ಪಿ. ಡಿ. ನೀಲಕಾಂತ ಎಂಡ್ ಕೊ. ಬೆನಾರಿಸ್ ಸಿಟಿ ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು. ಕೆಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉಡುಪು ತೊಡುಪುಗಳನ್ನು ತರಿಸುತ್ತಿರುವರು. ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು. ಸೀದಾ ನಮಗೆ ಬರೆದು ಒಡವೆಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಸೇಕಡಾ 25ರಂತೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಒರ್ಡರುಗಳನ್ನು ವಿ. ಪಿ. ಮೂಲಕ ಕಳುಹಿಸಿಕೊಡುವೆವು. ಸಂದೇಹಪಡಬೇಡಿರಿ. (1) ಜರಿತಾರಿನ ರೇಶ್ಮೆ, ನಾನಾ ತರದ ಅರಿವೆಗಳು, ಶೀರೆಗಳು, ರವಕೆ ಕಣಗಳು, ಅಂಗಿ ವಸ್ತ್ರ ಇತ್ಯಾದಿ. (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ. (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರ್ಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮಗ್ರಿಗಳು. (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳೆಲ್ಲವುಗಳಿಗೂ ಬರೆಯಬಹುದು.

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸೋಣಾಗುವುದು.

ನಮ್ಮ ವಿಳಾಸ:— ಪಿ ಡಿ. ನೀಲಕಾಂತ ಎಂಡ್ ಕೊ,
ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್. ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್. ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ:—

ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರ.

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

IIನೇ ಸ್ಟೆಂಡಾರ್ಡ್ ಗಣಿತ	0—3—0
IIIನೇ „ „	0—4—0
IVನೇ „ „	0—6—0
3ನೇ ಪುಸ್ತಕದ ಶಬ್ದಾರ್ಥ ಪ್ರಾಣಿಕೋಟಿ, ವನಸ್ಪತಿಕೋಟಿ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ)	0—2—6
4ನೇ ಪುಸ್ತಕದ ಶಬ್ದಾರ್ಥ	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಭಾಗ ...	0—3—0
3ನೇ ದರ್ಜೆಯ ದಕ್ಷಿಣ ಕನ್ನಡದ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು (ಇದರಲ್ಲಿ ವೃತ್ತಿಗಳೂ, ಕಥೆಗಳೂ, ಅಭಿನಯದ ಹಾಡುಗಳೂ ಇರುತ್ತವೆ)	0—1—6
ಗಣಿತಸಾರ ಎಂಬ ಮಗ್ಗಿ ಕೋಷ್ಟಕಗಳ ಪುಸ್ತಕ	0—1—0
ಬಾಲಶಿಕ್ಷೆ	(ಅಚ್ಚಿನಲ್ಲಿದೆ)
ಒಂದನೆಯ ಪುಸ್ತಕ	(ತಯ್ಯಾರಿಯಲ್ಲಿವೆ.)
ಎರಡನೆಯ „	
ಮೂರನೆಯ „	
ನಾಲ್ಕನೆಯ „	

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವುವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಶನ್ ಕೊಡಲಾದೀತು.

ವಿ. ಲಕ್ಷ್ಮಣರಾವ್,
ಸ್ಕೂಲ್ ಮಾಸ್ತರ್, ಉಡುಪಿ.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು·
ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ, ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0. ಗ್ರಾಹಕರುತ್ವರೆಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತೃಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ.	ಮಂಗಳೂರು,
ಮ॥ ಪಾವಂಜೆ ಗುರುರಾವ್,	ಪಾವಂಜೆ ಗೋಪಾಲಕೃಷ್ಣ
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.	ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೊಓಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ಐದು ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00. ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ. 2,22,00,000. ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೋಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡೆಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಟಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ
ಸೊಸೈಟಿಯ ಏಜಂಟ್.
ತ್ರಿಕುಲೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಗೌ. ಮಠದ ಬಳಿ,

Canarese Novels Etc.
ಕನ್ನಡ ಪುಸ್ತಕಗಳು.

ಮ। ರಾ। ರಾ। ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಆ.		ರೂ. ಆ.
ಸಂಗವಿಚಿತ್ರ ಹೊಸ ನಾವಿಲ್	1–4	ಕಮಲಾ ಕಾಂತ ದ್ವಿ. ಮು	0–2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1–4	ಲೀಲೆ [ಸಮಾಜ ಚಿತ್ರ]	0–4
ನವಾಬನಂದಿನಿ ಡಿಟೊ 2ನೇ ಭಾಗ	1–8	ಮಾಲತಿ [ಅತಿ ಮನೋಹರ] ದ್ವಿ. ಮು.	0–3
ಸೀತಾರಾಮ (ಇತಿಹಾಸ)	1–8	ರಾಧಾರಾಣಿ [ಕಾದಂಬರಿ] ತೃ. ಮು	0–3
ವಿಷವೃಕ್ಷ ದ್ವಿ. ಮು.	1–4	ಯುಗಳಾಂಗುರೀಯ ,,	0–3
ದೇವೀ ಚೌಧುರಾಣಿ ಡಿಟೊ	1–4	ಭ್ರಾಂತಿವಿಲಾಸ ,	0–8
ರಾಜಸಿಂಹ (ಇತಿಹಾಸ)	1–5	ನೊಂದಸುಡಿ [ಸ್ತ್ರೀನೀತಿ]	0–2
ಕಪಾಲಕುಂಡಲ	0.13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0–2
ಮೃಣ್ಮಯಿ ಡಿಟೊ 2ನೇ ಭಾಗ	1–1	ವೈಜ್ಞಾನಿಕ ಪ್ರಹಸನ [ನಕಲಿ]	0–4
ಕೃಷ್ಣಕಾಂತನ ಉಯಿಲು	1–0	ಚಿರತ್ನನಾಟಕರತ್ನ ಡಿಟೊ	0–7
ಮನೋರಮ [ಪತ್ತೇದಾರಿ ಕಥೆ]	1–0	ಚಿತ್ರವಿಚಿತ್ರಾವಳಿ [Tit Bits]	0–8
ಪರಿಮಳ ಡಿಟೊ ದ್ವಿ. ಮು	0.10	ನೀರದೆ [ಹೊಸ ಕಾದಂಬರಿ]	0–8
ಸಾಧನೆ. ಡಿಟೊ	0–8	ಭಾರತಮಹಿಳಾ [ಸ್ತ್ರೀನೀತಿ]	0–8
ಕೊಹಿನೂರು [ಇತಿಹಾಸ]	0.12	ಅಮೃತಪುಳಿನ [ನಾವಿಲ್]	0 11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0–3	ಇತ್ಯಾದಿ	

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತ ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ 1ಕ್ಕೆ 3 ಆಣೆ 12ಕ್ಕೆ 1 ಉಚಿತ ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು

	ರೂ. ಆ		ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ ಮು	0–8	ನಿರ್ಭಾಗ್ಯಚಾಣಕ್ಯ [ಹೊಸಕಾದಂಬರಿ]	0–6
ಕ. ಕವಿಚರಿತೆ [ಪೂರ್ವಭಾಗ]	3–2	ಅನಂಗಸುಂದರಿ ಡಿಟೊ	0–8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10	ತಾರಾ ಸುಂದರಿ ಡಿಟೊ	0–8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0–6	ರಾಧಾಮಾಧವಿ ಡಿಟೊ	0–8
ಕಲಾನಾಥ ಡಿಟೊ	0–8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0–9
ಶೋಭನೆ [ಬಂಗಾಳಿ ನಾವಿಲ್]	0 12	ಪಶುವೈದ್ಯಸಂಗ್ರಹ ಡಿಟೊ ದ್ವಿ ಮು	0–9
ಯಾಮಿನಿ [ಬಂಗಾಳೀ ನಾವಿಲ್]	0–3	ಧರ್ಮಪದವೆಂಬ ಬುದ್ಧಗೀತೆ	0.12
ಪ್ರಿಯಂವದೆ [ಪತಿವ್ರತಾ ಕಥೆ]	0–8	ಜೈಮಿನಿಭಾರತ [ಸಟೀಕಾಕಾವ್ಯ]	4–0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0–8	ಹರಿಕಥಾಮೃತಸಾರ ಡಿಟೊ	1–6
ಸನ್ಯಾಸಿ [ಹೊಸ ಕಾದಂಬರಿ]	0–6	ಚದುರಂಗಬೋಧಿನಿ	0–3
ಮೃತ್ಯು ಪರೀಕ್ಷೆ . ಡಿಟೊ	0–2	ಸರ್ವೇಯ್ಮ್ಯಾನ್ಯುಯಲ್	0–5
ವೃಂದಾವನ ಡಿಟೊ	0–2	ನ್ಯಾಯದರ್ಪಣ [ಲಾ]	1–0
ಸುಮನೋರಮ ಡಿಟೊ	0–2	ವ್ಯವಹಾರ ದೀಪಿಕೆ [ಲಾ]	3–0
ಮಾಲಿನಿ ಡಿಟೊ	0–2	ಶಾಕುಂತಲ ನಾಟಕ ದ್ವಿ ಮು	0–9
ಪ್ರೇಮಪಿಪಾಸೆ ಡಿಟೊ	0–2	ಶೂರಸೇನಚರಿತ್ರೆ ನಾಟಕ ಡಿಟೊ	1–0
ವಿರಕ್ತಳಾದ ಸೌದಾಮಿನಿ ಡಿಟೊ	0–5	ಚಂಡಕೌಶಿಕ ನಾಟಕ ಡಿಟೊ	0.12
ಚಿತ್ರಕಳಾವತಿ ಡಿಟೊ	0–2	ರಾಮವರ್ಮ ಲೀಲಾವತೀ ನಾಟಕ	0–8
ಚಾತುರ್ಯವತಿ ಡಿಟೊ	0–2	ಪಾಂಚಾಲೀ ಪರಿಣಯ ನಾಟಕ	0.10
ವಸುಮತಿ ಡಿಟೊ	0–2	ಚಂಡೀಮದಮರ್ದನ ನಾಟಕ	0–5
ವಿಲಕ್ಷಣಶಿಕ್ಷಣ ಡಿಟೊ	0–2	ಪ್ರಬೋಧ ಚಂದ್ರೋದಯ ನಾಟಕ	0 10
ಪದ್ಮಿನಿ ಡಿಟೊ	0–2	ಭರ್ತೃಹರಿ ನಿರ್ವೇದ ನಾಟಕ	0–3
ಭಾನುಮತಿ ಡಿಟೊ	0–2	ನಿರುಪಮಾ [ನಾಟಕ]	0.12
ಕ್ಷೀರರೋಹಿಣಿ ಡಿಟೊ	0–2	ಧ್ರುವವಿಜಯ [ನಾಟಕ]	0–4
ಸಂತಾಪಕ ಡಿಟೊ	0–4	ಸೀತಾಪರಿಣಯ [ನಾಟಕ]	0–4
ಚಂದ್ರಮತಿ [ಸ್ತ್ರೀನೀತಿ]	0–6	ಸೀತಾಸುವರ್ಣಮೃಗ [ನಾಟಕ]	0–12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪಾಲು ಖರ್ಚು ಅಲಾಯಿದ.

ವಿಳಾಸ:—

ಎಸ್. ಟಿ. ಎ. ಬೆಂಗಳೂರು ಸಿಟಿ

ಆರೋಗ್ಯವೇ ಭಾಗ್ಯ!

ಹವೆಯ ಬದಲಾವಣೆಯಿಂದ ಉಂಟಾಗುವ ತಲೆನೋವು, ಕೈಕಾಲುನೋವು, ಶರೀರಭಾರ, ನೆಗಡಿ, ಕಫ, ಕಾಸ, ಜ್ವರ, ಛಳಿಜ್ವರ, ಚಳಿವಾತ, ವಾಂತಿಭೇದಿ, ಉಷ್ಣಭೇದಿ, ಮೇಹ ಇತ್ಯಾದಿ ನೂರಾರು ಬಾಧ್ಯಗಳೂ ಮನಮನೆಯಲ್ಲೂ ಪ್ರತ್ಯಕ್ಷವಾಗಿ ತೋರುತ್ತಿರುವ ಈ ಕಾಲದಲ್ಲಿ

ದಿವ್ಯ ಸಂಜೀವಿನೀ
ಯುಕೆಲಿಪ್ಟಸ್ ತೈಲ

ಎಂಬ ಅತ್ಯಪೂರ್ವ ಫಲಕಾರಿಯಾದ ಈ ಎಣ್ಣೆಯ ಸೀಸೆಯೊಂದನ್ನು ಗೃಹಸ್ಥರು ಸಂಗ್ರಹಿಸಿಕೊಳ್ಳಿ! ಈ ಎಣ್ಣೆ ಇದ್ದಲ್ಲಿ ಆವ ರೋಗದ ಸುಳಿವೂ ತೋರದು, ಎಂತಹ ರೋಗವನ್ನೂ ಇದು ತಡೆಗಟ್ಟಿ, ನಿರ್ಮೂಲಿಸಿ ಬಿಡುವುದು ಉಪಯೋಗಿಸಿದವರ ಅನುಭವಕ್ಕಿಂತಲೂ ಹೆಚ್ಚಿನ ವಿಸ್ತಾರವಾದ ವಿಜ್ಞಾಪನೆಯು ನಮ್ಮದಾಗಿ ಇಲ್ಲ.

ಪ್ರಾಣದಾನ ಮಾಡಿಯದೆ.

ಕಂಡ್ಲೂರಿನ ಮೆ। ಉಮ್ಮರ್ ಸಾಹೇಬರು ಈ ರೀತಿ ಬರೆಯುವರು:—"ಪ್ರಿಯರೇ ತಮ್ಮಲ್ಲಿಂದ ನಾನು ಸ್ವಲ್ಪ ದಿವಸದ ಕೆಳಗೆ ಒಂದು ಡಜನ್ ನೀಲಗಿರಿ ಯುಕಲಿಪ್ಟಸ್ ತೈಲ ತರಿಸಿಕೊಂಡಿದ್ದೆನು ಅದನ್ನು ಕೆಲವರಿಗೆ ಕೊಟ್ಟಿದ್ದರಿಂದ ಪ್ರಾಣದಾನ ಕೊಟ್ಟ ಹಾಗಿದೆ. ಇದನ್ನು ಕೇಳಿ ಎಲ್ಲರೂ ಬಾಟ್ಲಿಗಳನ್ನು ಕೊಂಡುಹೋದುದಲ್ಲದೆ ಈಗ ಅನೇಕರು ಪ್ರತಿ ದಿವಸ ಬರುತ್ತಾ ಇದ್ದಾರೆ. ನನಗೆ ಸಹಾ ಒಂದು ಬಾಟ್ಲಿ ಉಳಿಯಲಿಲ್ಲ ಆದ್ದರಿಂದ ಈ ಕಾಗದ ಕಂಡ ಕೂಡಲೇ ಒಂದು ಡಜನ್ ಬಾಟ್ಲಿಗಳನ್ನು ವಿ ಪಿ ಮಾಡಿ ಕಳುಹಿಸಿರಿ." ಔನ್ಸ್ ಸೀಸೆ 1ಕ್ಕೆ 0–5–0. ವಿ. ಪಿ. ಬೇರೆ ಡಜನ್ ಬಾಟ್ಲಿಗಳನ್ನು ಒಮ್ಮೆಯೇ ತರಿಸಿಕೊಂಡರೆ ರೂ. 3 ವಿ. ಪಿ ಬೇರೆ.

1914ನೇ ಇಸವಿ ಕೆಲೆಂಡರು ಸಹಿತವಾದ ಪರಿಮಳದ ಕಾರ್ಡುಗಳು. ಡಜನ್ ಕಾರ್ಡುಗಳಿಗೆ 0–12–0 ಗ್ರೋಸ್ ಕಾರ್ಡುಗಳಿಗೆ ರೂ. 6. ವಿ. ಪಿ. ಬೇರೆ.

ಸ್ನೆಹಲತಾ ಮಸ್ತಕ ತಾಪಹಾರಿಣಿ ತೈಲ — ಮೆದುಳು ರೋಗಗಳಿಗೆ ಅತ್ಯುಪಯೋಗವಾದ ತೈಲ ಸೀಸೆ 1ಕ್ಕೆ 0–12–0. ಡಜನ್ ಸೀಸೆಗಳಿಗೆ ರೂ 8. ವಿ ಪಿ. ಬೇರೆ

ಪೋಟೊ ಎನ್‌ಲಾರ್ಜ್‌ಮೆಂಟುಗಳು, ರಬ್ಬರ್ ಮೊಹರುಗಳು ಅಗ್ಗ ದರದಲ್ಲಿ ತಯಾರಿಸಿ ಕೊಡೋಣಾದೀತು.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಕಂಕನಾಡಿ ಪೋಸ್ಟು, ದ ಕ.

ವಾಚಕರೇ!

ಕಾಲಕ್ಕೆ ತಕ್ಕ ಜೀವನೋಪಾಯ ಇದಲ್ಲವೆ?

ಈ ನಮ್ಮ ಮೈಸೂರು ದೇಶದಲ್ಲಿ ಆಂಗ್ಲೇಯ ಪ್ರಭುಗಳಿಂದಲೂ ನಮ್ಮನ್ನಾಳುವ ಶ್ರೀಮನ್ಮಹಾರಾಜ ಸರಕಾರದವರಿಂದಲೂ ಸಹ ಪ್ರೋತ್ಸಾಹಿಸಿ ದ್ರವ್ಯಸಹಾಯಮಾಡುತ್ತಿರುವ ವಿದ್ಯಾಭ್ಯಾಸಂಗಕ್ಕೆ ಅನುಕೂಲವಾಗಿ ಈಗಿನ ಕಾಲದಲ್ಲಿ ಗೌರವವು ಮತ್ತು ಪ್ರಸಿದ್ಧಿಯಂ ಪಡದಿರುವ ಕುಶಲ ವಿದ್ಯಾವಂತರಿಂದ ನವೀನವಾಗಿ ರಚಿಸಲ್ಪಟ್ಟು ಕನ್ನಡ ಮತ್ತು ಇಂಗ್ಲಿಷ್ ಸ್ಕೂಲುಗಳ ಎಲ್ಲಾ ತರಗತಿಗಳ ಬಾಲಕರು ಮತ್ತು ಬಾಲಕಿಯರಿಗೆ ಪಾಠಕ್ಕೆ ಸಿದ್ಧವಾಗಿರುವ ಕನ್ನಡ ಇಂಗ್ಲಿಷ್ ಪುಸ್ತಕಗಳು ಮುತ್ತು ಸಂಸ್ಕೃತ ತೆಲಗು ವೈದ್ಯ ವೇದಾಂತ ಜ್ಯೋತಿಷ್ಯ ಕನ್ನಡ ಗ್ರಂಥಗಳು ಅಲ್ಲದೆ ಉತ್ತಮ ಕಾದಂಬರಿಗಳು ಸ್ಟೇಶನರಿ ಸಾಮಾನುಗಳು ಅತ್ಯುತ್ತಮವಾದ ಕಾಗದ ಅಕ್ಷರಗಳಿಂದ ತಯಾರಿಸಲ್ಪಟ್ಟು ಸುಲಭ ಕ್ರಯಕ್ಕೆ ಸಿದ್ಧವಾಗಿರುತ್ತೆ.

ಅಪೂರ್ವ ಪುಸ್ತುಕಗಳು.

ಇದು ಸರ್ವರಲ್ಲಿಯೂ ಇರಬೇಕಾದ್ದು **ಜಮಾ ಖರ್ಚಿನ ಪದ್ಧತಿ 0–12–0.** ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

ಆಂಗ್ಲಭಾಷ ಪ್ರಕಾಶಿಕ—(ಸ್ವತಃ ಇಂಗ್ಲಿಷ್ ಕಲಿಯುವ ದೊಡ್ಡ ಪುಸ್ತುಕ. ಇದನ್ನು ಗುರುವಿನಂತೆ ಭಾವಿಸಿ. ಬೆಲೆ 1—8—0. ವೈದ್ಯಸಾರಸಂಗ್ರಹ (ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನಪಂಡಿತರಿಂದ ಮರ್ಯಾದಿಸಲ್ಪಟಿರುತೆ. ಬೆಲೆ 3—0—0.

ಆರ್ಯಕೀರ್ತಿ ...	0–10—0	ಚಂದ್ರಿಕೆ	0—4—0
ಹನುಮದ್ವಿಲಾಸಂ ...	0—8—0	ಕಲಾನಾಥ	0—6—0
ಶಾಕುಂತಲ ನಾಟಕ	0—8—0	ಶಿವಾನಂದಲಹರಿ... ...	0—6—0
ಸ್ತ್ರೀಧರ್ಮನೀತಿ	0—8—0	ಪ್ರಶ್ನೋತ್ತರ ಲೇಖ್ಯಬೋಧಿನಿ	1—4—0
ಶೋಭನೆ	0—8—0	ಚಿತ್ರವಿಚಿತ್ರಾವಳಿ ...	0—8—0
		ವಿಷವೃಕ್ಷ ...	1—4—0

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್.
ಮೆನೇಜರ್ ವಿದ್ಯಾಸಾಗರ ಬುಕ್ ಡಿಪೋ.
ಚಿಕ್ಕಪೇಟೆ ಬೆಂಗಳೂರು ಸಿಟಿ.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	217,400—0—0
Paid up Capital	192,400—0—0
Deposits	490,644—4—2
Reserve Fund	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/- have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/-and above in multiples of Rs. 5/ received for 3, 6, 12 and 24 months @ 4, 4½, 5 and 5½%. respectively. Terms on application.

Short-notice Deposits requiring one weeks notice of withdrawal after one month received @ 2½%. per annum.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4⅜%.

Loans granted on proper securities and pledges.

Sealed Parcels for safe custody received on a moderate charge.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	217,400—0—0
ಆಗತ ಮೂಲ ಧನವು ,, ...	192,400—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	490,644—4—2
ರಕ್ಷಿತ ಧನವು	27,590-12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳ ಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿ ಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮ ವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬ ಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಗೆ ಬೇಂಕಿನ ಸೆಕ್ರೆಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂ ಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂ ಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋ ಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4⅜ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st. August 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ತಾವವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರೆದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೩—೦

ಪತ್ರ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೋ, ಬಳ್ಳಾರಿ.

_ಂದೇ ತಿಂಗಳು ! ಮಿಂಚಿ ಹೋದ ಮೇಲೆ ಚಿಂತಿಸ ಬೇಡಿ !!

ಅಲ್ಪ ಬೆಲೆ !!!

ಬೇರೆ ಬೇರೆ ಪುಸ್ತಕಗಳಿಗೆ ವೃಥಾ ಹೆಚ್ಚು ಹಣವನ್ನು ವೆಚ್ಚ ಮಾಡಬೇಡಿ !!

ಸುಳ್ಳಿಗೆ ನೂರಾರು ದಾರಿ ! ನಿಜಕ್ಕೆ ಒಂದೇ ದಾರಿ !!

ನಿಮ್ಮ ಪರೀಕ್ಷೆಗಾಗಿ ಮೊದಲು ಒಂದು ಪ್ರತಿ ಮಾತ್ರ ೧-೮-೧ ಗೆ ಟಪ್ಪಾಲು ಖರ್ಚು ಇಲ್ಲದೆ ದೊರೆಯುತ್ತೆ.

೩ ಪುಸ್ತಕಗಳೂ ಒಟ್ಟಾಗಿ ಒಂದರಲ್ಲೇ ಬೈಂಡಾಗಿವೆ.

ಈ ದಿನವೇ ಒಂದು ಕಾರ್ಡು ಬರಿಯಿರಿ ! ಬೇಗ ಬೇಗ ಬರಿಯಿರಿ !!

ಬಹುಮಾನ— ಒಟ್ಟಾಗಿ ತರಿಸಿಕೊಳ್ಳುವವರಿಗೆ, ೩ ಪ್ರತಿಗೆ ಒಂದು ಉತ್ತಮವಾದ ಭಗವದ್ಗೀತ [ಟೀಕು, ತಾತ್ಪರ್ಯ ಸಹ ಉಳ್ಳದ್ದು]. ೫ ಪ್ರತಿಗೆ ೧ ಪ್ರತಿ ಉಚಿತ. ಅಂಚೆ ವೆಚ್ಚ ಮಾಫಿ.

ಆಂಗ್ಲಭಾಷಾ ಪ್ರಕಾಶಕ

೬೦ ಭಾಗಗಳೂ ಒಂದರಲ್ಲೇ ಅಡಗಿವೆ. ಒಂದೇ ತಿಂಗಳು ಟಪ್ಪಾಲ್ ಖರ್ಚಿಲ್ಲ.

(ಸ್ವತಃ ಇಂಗ್ಲೀಷು ಕಲಿಯುವುದಕ್ಕೆ ಅತ್ಯುಪಯೋಗವಾದದ್ದು)

ಯುದ್ಧ ಪ್ರಾರಂಭವು ಸರ್ವಿಯಾ ಮತ್ತು ಒಸ್ಟ್ರಿಯಾ ದೇಶಗಳೊಗಾಯಿತೆಂಬುದನ್ನು ವಾಚಕರು ತಿಳಿದಿರುವರು. ಒಸ್ಟ್ರಿಯಾ ಸಾಮ್ರಾಜ್ಯದ ಬೊಸ್ನಿಯಾದಲ್ಲಿರುವ ಸೆರೆಜಿವೊ ಪಟ್ಟಣದಲ್ಲಿ ಸರ್ವಿಯಾ ದೇಶದ ಪರವಾಗಿ ಸಹಾನುಭೂತಿಯುಳ್ಳ ಒಬ್ಬ ಬೊಸ್ನಿಯಾದ ವಿದ್ಯಾರ್ಥಿಯು ಮಾಡಿದ ಒಸ್ಟ್ರಿಯಾದ ಯುವರಾಜರ ಭಯಂಕರ ಕೊಲೆಯಿಂದ ಈ ಯುದ್ಧವು ಪ್ರಾಪ್ತಿಯಾಯಿತು. ಕೊಲೆಗಾರನನ್ನು ತಕ್ಕ ರೀತಿಯಲ್ಲಿ ಶಿಕ್ಷಿಸಿ ಸರ್ವಿಯಾನರ ಒಳಸಂಚಿನಿಂದ ಈ ಕೊಲೆಯು ನಡದದ್ದೇ ಆದರೆ ಈ ಕೊಲೆಯಲ್ಲಿ ಸಂಬಂಧಪಟ್ಟ ಸರ್ವಿಯನರಿಗೆ ಸಹ ತಕ್ಕ ಶಿಕ್ಷೆಯನ್ನು ಕೊಡುವುದು ಒಸ್ಟ್ರಿಯಾ ಸಾಮ್ರಾಜ್ಯದವರಿಗೆ ಅಸಾಧ್ಯವಾಗಿರಲಿಲ್ಲ. ಒಸ್ಟ್ರಿಯಾನರ ಇಂಥಾ ವಿಚಾರದಲ್ಲಿ ಯುರೋಪಿಯ ಮಿಕ್ಕ ಪ್ರಬಲರಾಜ್ಯಗಳ ಸಹಾನುಭೂತಿಯು ಸಹ ಒಸ್ಟ್ರಿಯಾ ದೇಶಕ್ಕೆ ಲಭಿಸುತ್ತಿತ್ತು. ಯುದ್ಧದ ಹೇತುವು ಯುವರಾಜರ ಕೊಲೆ ಮಾತ್ರವಾಗಿರುತ್ತಿದ್ದರೆ ಒಸ್ಟ್ರಿಯನರು ತಾಳ್ಮೆಯಿಂದ ಈ ಕೊಲೆಯ ತನಖಿಯನ್ನು ನಡಿಸಿ, ಪ್ರತಿಕಾರ ಶಿಕ್ಷೆಯನ್ನು ವಿಧಿಸಿ ಸುಮ್ಮನಿರುತ್ತಿದ್ದರು. ಆದರೆ ಈ ಕೊಲೆಯು ಯುದ್ಧದ ತಾತ್ಕಾಲಿಕ ಕಾರಣವಾಗಿರುವುದು. ಸಪ್ತಸಾಗರಗಳನ್ನು ತನ್ನ ದಾಹ ಪರಿಹಾರಾರ್ಥವಾಗಿ ಕುಡಿದ ಅಗಸ್ತ್ಯ ಮುನಿಯ ತೃಷ್ಣೆಗೆ ಮಿಕ್ಕಿದ ರಾಷ್ಟ್ರತೃಷ್ಣೆಯುಳ್ಳ ಜರ್ಮನಿಯಂಥಾ ಆಪ್ತನು ಒಸ್ಟ್ರಿಯಾಕ್ಕೆ ಇರುತ್ತಾ ಕೊಲೆಯನ್ನು ನೆವನವಾಗಿ ಮಾಡಿಕೊಂಡು ಸರ್ವಿಯಾವನ್ನು ಇದೇ ಸಂದರ್ಭದಲ್ಲಿ ನುಂಗಿಬಿಡಲು ಒಸ್ಟ್ರಿಯಾ ದೇಶವು ಉಪಕ್ರಮಿಸಿತು. ಬಲ್ಕಾನ್ ಅರ್ಧದ್ವೀಪದ ದಕ್ಷಿಣ ಪೂರ್ವಕ್ಕಿರುವ 'ಏಜಿಯನ್‌ಸಿ' ಎಂಬ ಉಪಸಾಗರಕ್ಕೆ ಒಸ್ಟ್ರಿಯಾಕ್ಕೂ ಜರ್ಮನಿಗೂ ಸೆಟ್ಟಗಾದ ಮಾರ್ಗವು ಸರ್ವಿಯಾ ಮೊದಲಾದ ಬಲ್ಕಾನ್ ಸಂಸ್ಥಾನಗಳಿಂದ ಹಾದುಹೋಗುತ್ತದೆ. ಈ ದಾರಿಯನ್ನು ಹೇಗಾದರೂ ಕೈವಶ ಮಾಡಿಕೊಳ್ಳಬೇಕೆಂಬುದೇ ಜರ್ಮನಿಯ ಮತ್ತು ಒಸ್ಟ್ರಿಯಾದ ಮುಖ್ಯ ಉದ್ದೇಶವಾಗಿದೆ. ಏಕೆಂದರೆ ಈ ಸಮುದ್ರದಿಂದ ಏಸ್ಯಾಮೈನರ್ ಅಥವಾ ಸಣ್ಣಾಸ್ಯಕ್ಕೆ ದಾಟಿಹೋದರೆ ಕ್ರಮೇಣ ಒಂದು ವೇಳೆ ಪರ್ಸಿಯನ್ ಗಲ್ಫ್ ಅಥವಾ ಪಾರ್ಸಿಕೊಲ್ಲಿಯ ಮಾರ್ಗವಾಗಿ ಆಸ್ಯಖಂಡಕ್ಕೆ ಸುಲಭ ದಾರಿಯು ಸಾಧ್ಯವಾಗಬಹುದು. ಜರ್ಮನರು ಸಣ್ಣಾಸ್ಯದಲ್ಲಿ ತಮ್ಮ ಹಣ ವೆಚ್ಚಮಾಡಿ ರೈಲ್ವೆಗಳನ್ನು ಹಾಕಿಸುತ್ತಿರುವುದರಿಂದ ಜರ್ಮನರ ಈ ಉದ್ದೇಶವನ್ನು ಯಾರೂ ಊಹಿಸಬಹುದಾಗಿರುವುದು. ಸರ್ವಿಯಾವನ್ನು ತನ್ನ ರಾಜ್ಯಕ್ಕೆ ಕೂಡಿಸಿಕೊಳ್ಳಲು ಒಸ್ಟ್ರಿಯಾ ದೇಶಕ್ಕೆ ಇನ್ನೂ ಕೆಲವು ಉದ್ದೇಶಗಳಿರುವವು. ಬಲ್ಕಾನ್ ಸಂಸ್ಥಾನದ ಬೊಸ್ನಿಯಾ ಮತ್ತು ಹರ್ಜಿಗೊವಿನಾ ಪ್ರಾಂತ್ಯಗಳನ್ನು ಒಸ್ಟ್ರಿಯಾ ದೇಶವು ಕೈವಶಮಾಡಿಕೊಂಡಂದಿನಿಂದ ಸರ್ವಿಯಾ ಮತ್ತು ಒಸ್ಟ್ರಿಯಾ ದೇಶಗಳೊಳಗಣ ಪರಸ್ಪರ ದ್ವೇಷವು ಹೆಚ್ಚುತ್ತಲಿರುವುದು. ಸರ್ವಿಯನರ ಜನಾಂಗದವರು, ಸರ್ವಿಯನರ ಕ್ರೈಸ್ತ ದೇವಾಲಯಗಳ ಭಜಕರು, ಅವರ ರಕ್ತಸಂಬಂಧಿಗಳು ಒಸ್ಟ್ರಿಯಾ ದೇಶಕ್ಕೆ ಕೂಡಿಸಿದ ಈ ಬಲ್ಕಾನ್ ಪ್ರಾಂತ್ಯಗಳಲ್ಲಿ ಹಲವರಿರುವರು. ಸರ್ವಿಯದ ಅರಸ್ಥಾನಕ್ಕೆ ಕೂಡಿರಬೇಕೆಂಬುದು ಈ ಜನರ ಮನೋಗತವಾಗಿರುವುದರಿಂದ ಅಸಂತುಷ್ಟಿಯ ಚಿಹ್ನೆಗಳು ಈ ಪ್ರಾಂತ್ಯಗಳಲ್ಲಿ ಆಗಿಂದಾಗ್ಯೆ ಕಾಣುತ್ತಲಿವೆ. ಸರ್ವಿಯಾವು ಸ್ವತಂತ್ರವಾದ ದೇಶವಾಗಿರುವುದರಿಂದ ಇಂಥಾ ಅಸಂತುಷ್ಟಿಗೆ ಆಸ್ಪದ ದೊರಕುವುದೆಂದು ಸರ್ವಿಯಾವನ್ನು ಪೂರ್ಣವಾಗಿ ಒಸ್ಟ್ರಿಯಾ ಸಾಮ್ರಾಜ್ಯಕ್ಕೆ ಕೂಡಿಸಿಕೊಳ್ಳಬೇಕೆಂಬುದು ಒಸ್ಟ್ರಿಯಾದ ಮತ್ತೊಂದು ಉದ್ದೇಶವಾಗಿರುವುದು. ಮೇಲೆ ವಿವರಿಸಿದ ತನ್ನ ಮನಸಾಭಿಷ್ಟವು ಬಹಳ ಮಟ್ಟಿಗೆ ನೆರವೇರುವ ಸಂದರ್ಭವು ಈ ಯುದ್ಧ ಮೂಲಕ ದೊರಿಯಬಹುದಾದ್ದರಿಂದಲೂ, ಒಸ್ಟ್ರಿಯನ್ ಸಾಮ್ರಾಜ್ಯಕ್ಕೆ ಒಂದುವೇಳೆ ಜರ್ಮನ ಚಕ್ರವರ್ತಿಯು ಬಾಧ್ಯಸ್ಥನಾಗಬಹುದಾದ್ದರಿಂದಲೂ ಒಸ್ಟ್ರಿಯನರಲ್ಲಿ ಜರ್ಮನ್ ಜನಾಂಗದವರೇ ಹೆಚ್ಚಾಗಿರುವುದರಿಂದಲೂ ಜರ್ಮನಿಯು ಒಸ್ಟ್ರಿಯಾದೊಡನೆ ಒಂದಾಗಿ ಸೇರಿದೆ.

ತನ್ನ ರಾಷ್ಟ್ರಕ್ಕೆ ತಾಗಿರುವ ಬಲ್ಕಾನ್ ಸಂಸ್ಥಾನಗಳನ್ನು ಈ ರೀತಿ ಒಸ್ಟ್ರಿಯಾ ಮತ್ತು ಜರ್ಮನ ಸಾಮ್ರಾಜ್ಯಗಳು ಮಾತ್ರ ಕೈವಶಮಾಡಿಕೊಳ್ಳುವುದರಿಂದ ರುಶ್ಯವು ಅಸಮಾಧಾನಗೊಂಡಿದೆ. ಅಲ್ಲದೆ ಸರ್ವಿಯನರು ಮತ್ತು ರುಶ್ಯಯನರು ಒಂದೇ ಜನಾಂಗದವರಾದ್ದರಿಂದ ರುಶ್ಯವು ಸರ್ವಿಯನರ ಬಗ್ಗೆ ಈ ಯುದ್ಧವನ್ನು ಸೇರಬೇಕಾಯಿತು.

ಫ್ರಾನ್ಸ್, ಬ್ರಿಟನ್ ಮತ್ತು ಬೆಲ್ಜಿಯಮ್ ದೇಶಗಳು ಈ ಯುದ್ಧಕ್ಕೆ ಹೇಗೆ ಜರ್ಮನಿಯಿಂದ ಸೆಳೆಯಲ್ಪಟ್ಟವೆಂಬುದನ್ನು ತಿಳಿಯುವುದು ಅಗತ್ಯ. ರುಶ್ಯಾ ಮತ್ತು ಫ್ರಾನ್ಸು ಈ ಎರಡು ರಾಜ್ಯಗಳ ನಡುವೆ ಇರುವ ಜರ್ಮನಿಯು ೧೮೭೦ನೇಯ ಫ್ರೆಂಚ ಜರ್ಮನರ ಯುದ್ಧವು ಮುಗಿದಂದಿನಿಂದ ಯುದ್ಧದ ಉಪಕರಣಗಳನ್ನು ತಯಾರಿಸುವುದರಲ್ಲಿ ಬಹಳ ಹಣ ವೆಚ್ಚಮಾಡುತ್ತಿರುವುದು. ಯುರೋಪ ಖಂಡದ ಶಾಂತತೆಗೋಸ್ಕರ ಇತರ ಜನಾಂಗದವರೂ ಜರ್ಮನಿಯಂತೆಯೇ ತಾವೂ ಸಹ ಈ ಸನ್ನಾಹಗಳನ್ನು ಮಾಡಬೇಕಾಯಿತು. ಪ್ರಕೃತ ಈ ಯುದ್ಧ ಉಪಕರಣಗಳ ಖರ್ಚು ಯುರೋಪಿಯ ಜನಾಂಗಗಳಿಂದ ಸಹಿಸಕೂಡದಷ್ಟಾಗಿರುವುದು. ೧೮೭೮ರ ವರೆಗೆ ರುಶ್ಯ ಮತ್ತು ಜರ್ಮನಿ ದೇಶಗಳೊಳಗೆ ಪರಸ್ಪರ ಮೈತ್ರಿಯು ಇತ್ತು. ೧೮೭೮ರಲ್ಲಿ ಬಲ್ಕಾನ್ ಸಂಸ್ಥಾನದ ಬೊಸ್ನಿಯಾ ಮತ್ತು ಹರ್ಜೆಗೋವಿನಾ ಪ್ರಾಂತ್ಯಗಳನ್ನು ಒಸ್ಟ್ರಿಯಾ ದೇಶವು ಪಡದನಂತರ ರುಶ್ಯ ಮತ್ತು ಜರ್ಮನಿಯೊಳಗಿದ್ದ ಮೈತ್ರಿಭಾವವು ಮಾರ್ಪಡುತ್ತಬಂತು. ರುಶ್ಯ ಮತ್ತು ಒಸ್ಟ್ರಿಯಾ ದೇಶಗಳಲ್ಲಿ ಯಾವದೊಂದಾದರೂ ಕಡೆಯನ್ನು ಸೇರುವುದು ಜರ್ಮನಿಗೆ ಅಗತ್ಯವಾಯಿತು. ಒಸ್ಟ್ರಿಯದಲ್ಲಿ ಜರ್ಮನರು ಸುಮಾರು ೧೦ ಮಿಲಿಯ ಇರುವುದರಿಂದ ಸ್ವಭಾವಿಕವಾಗಿ ರುಶ್ಯವನ್ನು ಬಿಟ್ಟು ಒಸ್ಟ್ರಿಯ ದೇಶದೊಡನೆ ಜರ್ಮನಿಯು ಒಪ್ಪಂದವನ್ನು ಮಾಡಿಕೊಂಡಿತು. ತನ್ನನ್ನು ಫ್ರಾನ್ಸು ಕಾಡಿಸುತ್ತಿದ್ದದ್ದರಿಂದ ಇಟೆಲಿಯು ಜರ್ಮನ್ ಮತ್ತು ಒಸ್ಟ್ರಿಯಾನರ ಒಪ್ಪಂದವನ್ನು ಸೇರಿತು. ಈ ಒಪ್ಪಂದಕ್ಕೆ ಟ್ರಿಪಲ್ ಎಲ್ಲಾಯನ್ಸ್ ಎಂದೆನ್ನುತ್ತಾರೆ. ಈ ಒಪ್ಪಂದದ ಪ್ರಕಾರ ಇಟೆಲಿಯು ಜರ್ಮನ್ ಮತ್ತು ಒಸ್ಟ್ರಿಯನರನ್ನು ಈ ಯುದ್ಧದಲ್ಲಿ ಒಂದಾಗಿ ಸೇರಬೇಕಿತ್ತು. ಆದರೆ ಬಲ್ಕಾನ್ ಸಂಸ್ಥಾನಗಳ ಮೇಲಿನ ಪ್ರಭುತ್ವವನ್ನು ಒಸ್ಟ್ರಿಯಾವು ಪಡೆಯುವುದು ಇಟೆಲಿಗೆ ಇಷ್ಟವಲ್ಲದ್ದರಿಂದ ಇಟೆಲಿಯು ಒಸ್ಟ್ರಿಯನರ ಯುದ್ಧ ಸಾಧನೆಗಳನ್ನು ನೋಡಿಕೊಂಡು ತಟಸ್ಥಭಾವವನ್ನು ತಾಳಿರುವುದು.

೧೮೯೦ನೇ ವರುಷದ ವರೆಗೆ ರುಶ್ಯದ ಮೇಲಿರುವ ಜರ್ಮನಿಯ ವಿರೋಧಭಾವವನ್ನು ಜರ್ಮನಿಯ ಮಂತ್ರಿಗಳಾದ ಬಿಸ್‌ಮಾರ್ಕ ಎಂಬವರು ಹೊರಬೀಳಲು ಬಿಡಲಿಲ್ಲ. ಆದರೆ ೧೮೮೮ರಲ್ಲಿ ಜರ್ಮನಿಯ ಈಗಿನ ಚಕ್ರವರ್ತಿಗಳಾದ ಕೈಸರ್ ವಿಲ್ಹೆಲ್ಮ್‌ರವರು ರಾಜ್ಯಭಾರವನ್ನು ವಹಿಸಿದನಂತರ ಬಿಸ್ಮಾರ್ಕರವರ ಸಾಮಸಾಧನೆಗಳೆಲ್ಲವೂ ಬಿದ್ದು ಹೋದವು. ರುಶ್ಯ ಮತ್ತು ಜರ್ಮನಿ ಇವರೊಳಗೆ ಪರಸ್ಪರ ವೈರ ಉಂಟಾಯಿತು. ಈ ಕಾಲದಲ್ಲಿ ಫ್ರಾನ್ಸು ದೇಶಕ್ಕೆ ಯುರೋಪೀಯ ಪ್ರಬಲ ರಾಜ್ಯಗಳ ಮೈತ್ರಿಯು ಬೇಕಾಗಿತ್ತು. ಜರ್ಮನಿ ಒಸ್ಟ್ರಿಯ ಮತ್ತು ಇಟೆಲಿ ರಾಜ್ಯಗಳ ಟ್ರಿಪಲ್ ಎಲ್ಲಾಯನ್ಸನ್ನು ಎದುರಾಡಲಿಕ್ಕೆ ೧೮೯೧ರಲ್ಲಿ ಫ್ರಾನ್ಸ್ ಮತ್ತು ರುಶ್ಯಾ ದೇಶಗಳೊಳಗೆ ಡ್ಯುಆಲ್ ಎಲಾಯನ್ಸ್ ಎಂಬ ಒಪ್ಪಂದವಾಯಿತು. ಜರ್ಮನಿಯು ಯುದ್ಧದಲ್ಲಿ ಒಸ್ಟ್ರಿಯಾ ದೇಶದ ಸಹಾಯಾರ್ಥವಾಗಿ ಹೋದೊಡನೆ ಇವುಗಳನ್ನು ಎದುರಾಡಲು ಫ್ರಾನ್ಸ್ ಮತ್ತು ರುಶ್ಯಾ ದೇಶಗಳು ಏಕೆ ಹೋದವೆಂಬುದು ಈಗ ವ್ಯಕ್ತವಾಗಬಹುದು.

ಫ್ರಾನ್ಸು ಮತ್ತು ಬ್ರಿಟನ್ ದೇಶಗಳೊಳಗೆ ಪ್ರಕೃತ ಕಾರ್ಯರೂಪುಗೊಂಡ ಸ್ನೇಹಭಾವವು ಹೇಗೆ ಜನಿಸಿತೆಂಬುದನ್ನು ತಿಳಿದರೆ ಯುದ್ಧಕ್ಕೆ ಸೇರಿರುವ ಯೂರೋಪೀಯ ರಾಜ್ಯಗಳ ಯುದ್ಧದ ಉದ್ದೇಶವೇನೆಂಬುದು ಪೂರ್ಣವಾಗಿ ಗೊತ್ತಾಗುವುದು. ಕಳೆದ ಶತಮಾನದ ಅಂತ್ಯ ಭಾಗದಲ್ಲಿ ಫ್ರೆಂಚ ಮತ್ತು ಆಂಗ್ಲೇಯರೊಳಗೆ ಸ್ನೇಹಭಾವವು ಇದ್ದಿಲ್ಲ. ಐಗುಪ್ತದಲ್ಲಿ ಆಂಗ್ಲೇಯರಿಗೆ ಸ್ವಾತ್ವ್ಯಗಳಿರುತ್ತಾ ಫ್ರಾನ್ಸಿಗೆ ಇಂಥಾ ಸ್ವಾತ್ವ್ಯಗಳು ಅಲ್ಲಿರವು. ಇದೇ ಇವರೊಳಗಣ ವೈಮನಸ್ಸಿಗೆ ಕಾರಣವಾಗಿತ್ತು. ಆದರೆ ಐಗುಪ್ತ ಪ್ರಾಂತ್ಯಗಳನ್ನು ಬ್ರಿಟನರ ಆಜ್ಞೆ ಪ್ರಕಾರ ಫ್ರೆಂಚರು ಕ್ರಮೇಣ ಬಿಟ್ಟು ಹೋದರು. ಭೂಲೋಕದಲ್ಲಿ ಶಾಂತಿದಾಯಕನೆಂದು ಕೀರ್ತಿ ಪಡೆದ ಸ್ವರ್ಗಸ್ಥ ಎಡ್ವರ್ಡ ಚಕ್ರವರ್ತಿಗಳು ಫ್ರಾನ್ಸು ಮತ್ತು ಬ್ರಿಟನ್ ದೇಶಗಳೊಳಗೆ ಕಲಹಗಳಿರುವುದು ಎಂದೂ ಉಚಿತವಲ್ಲವೆಂತ ಹೇಳಿ ೧೯೦೪ರಲ್ಲಿ ಇವರೊಳಗಿರುವ ಭೇದಗಳೆಲ್ಲಾ ಮಾಜಿಹೋಗುವಂತೆ ಒಂದು ಒಪ್ಪಂದವನ್ನು ಮಾಡಿಸಿದರು. ಈ ಒಪ್ಪಂದಕ್ಕೆ 'ಎಂಟೆಂಟೆ ಕೊರ್ಡಿಯಾಲ್' ಎಂದು ಹೇಳುತ್ತಾರೆ. ಅಂದಿನಿಂದ ಫ್ರಾನ್ಸ್ ಮತ್ತು ಬ್ರಿಟನ್ ದೇಶಗಳು ಅತ್ಯಂತ ಸ್ನೇಹಿತರಾಗಿರುವರು. ಬ್ರಿಟನರು ಫ್ರೆಂಚರೊಡನೆ ಮಾಡಿಕೊಂಡ ಈ ಗೆಳತನದಿಂದ ಜರ್ಮನರಲ್ಲಿ ಅಸೂಯೆಯು ಉಂಟಾಯಿತು. ರುಶ್ಯ ಮತ್ತು ಜಪಾನೀಯರ ಯುದ್ಧದ ನಂತರ ರುಶ್ಯವು ಬಲಹೀನವಾದ್ದರಿಂದ ತಮ್ಮನ್ನು ಎದುರಾಡಲು ಏರ್ಪಡಿಸಿದ ಫ್ರಾನ್ಸ್ ಮತ್ತು ರುಶ್ಯದ ಡ್ಯುಅಲ್ ಎಲಾಯೆನ್ಸ್ ಕಳೆಗುಂದಿತೆಂದು ಜರ್ಮನಿಯು ತೃಪ್ತಿಪಡು

ತ್ತಿದ್ದಾಗ ಇಂಗ್ಲಾಂಡವು ಫ್ರಾನ್ಸನ್ನು ಸೇರಿ ಈ 'ಡುಅಲ್' ಎಲಾಯೆನ್ಸನ್ನು ಬಲಪಡಿಸಿದ್ದರಿಂದ ಜರ್ಮನಿಗೆ ಅಸಮಾಧಾನ ಉಂಟಾಯಿತು. ೧೮೮೪ರಿಂದ ಜರ್ಮನಿಯು ಅಫ್ರಿಕಾ ಮೊದಲಾದ ಪ್ರಾಂತ್ಯಗಳಲ್ಲಿ ಬ್ರಿಟಿಷರಂತೆಯೇ ವಸಹತಿಗಳನ್ನು ಸ್ಥಾಪಿಸಲು ಹೊರಡಿತು. ಜರ್ಮನಿಯು ಈ ಪ್ರಯತ್ನಗಳನ್ನೂ ಶ್ರೇಷ್ಟವಾದಂಥಾ ಹಡಗುಪಡೆಯುಳ್ಳ ಆಂಗ್ಲೇಯರಿಗೆ ತೀರಾ ನಿಲ್ಲಿಸಿಬಿಡುವ ಸಾಮರ್ಥ್ಯವಿದ್ದಾಗ್ಯೂ ಆಂಗ್ಲೇಯರು ಜರ್ಮನರನ್ನು ಈ ವಿಷಯದಲ್ಲಿ ಸ್ನೇಹಭಾವದಿಂದಲೇ ನಡಿಸಿದರು. ಜರ್ಮನಿಗೆ ಮಾತ್ರ ಬ್ರಿಟಿಷ ಸ್ವಾಸ್ಥ್ಯಗಳ ಬೆಳವಣಿಕೆಯನ್ನು ನೋಡಿ ಮತ್ತಷ್ಟು ಅಸೂಯೆಯು ಉಂಟಾಯಿತು. ದಕ್ಷಿಣ ಆಫ್ರಿಕದಲ್ಲಿ ನಡದ ಯುದ್ಧ ಕಾಲದಲ್ಲಿಯೂ ಇತರ ಕೆಲವು ಸಂದರ್ಭಗಳಲ್ಲಿಯೂ ಸಹ ಆಂಗ್ಲೇಯರ ಮೇಲೆ ಜರ್ಮನಿಗಿರುವ ಈ ಭಾವವು ಬಹಿರಂಗವಾಗಿ ತೋರಿಬಂತು. ಭೂಲೋಕದಲ್ಲಿ ಅತಿ ಶ್ರೇಷ್ಟವಾದಂಥಾ ಭೂಸೇನೆಯೊಂದಿಗೆ ತನ್ನ ಹಡಗುಪಡೆಯನ್ನು ಸಹ ಇದೇ ರೀತಿ ಬಲಪಡಿಸಿ ಲೋಕವನ್ನೆಲ್ಲಾ ತಲ್ಲಣಗೊಳ್ಳಿಸುವ ಸನ್ನಾಹಗಳನ್ನು ಜರ್ಮನಿಯು ಮಾಡುತ್ತಿದ್ದಾಗ ಇಂಗ್ಲಾಂಡ ಸುಮ್ಮನಿರಲು ಆಗಲಿಲ್ಲ. ಫ್ರೆಂಚರ ಮತ್ತು ಆಂಗ್ಲೇಯರ ಮೈತ್ರಿಯು ಮತ್ತಷ್ಟು ಅಭಿವೃದ್ಧಿಗೊಂಡಿತು. ಭೂಮಧ್ಯ ಸಮುದ್ರದಲ್ಲಿ ಫ್ರೆಂಚರು ತಮ್ಮ ಹಡಗುಪಡೆಯನ್ನಿಟ್ಟರೆ 'ನೋರ್ತಸಿ' ಎಂಬ ಫ್ರಾನ್ಸಿನ ಉತ್ತರ ದಿಕ್ಕಿನ ಉಪಸಾಗರದಲ್ಲಿ ಬ್ರಿಟಿಷ ಹಡಗುಪಡೆಯು ಫ್ರಾನ್ಸಿನ ಕರಾವಳಿಯನ್ನು ಭದ್ರಪಡಿಸುವದೆಂಬ ಕರಾರು ಫ್ರೆಂಚ ಮತ್ತು ಆಂಗ್ಲೇಯರೊಳಗಾಯಿತು. ಆದ್ದರಿಂದಲೇ ಈ ಯುದ್ಧದಲ್ಲಿ ಬ್ರಿಟಿಷ ಹಡಗುಪಡೆಯು 'ನೋರ್ತಸಿ' ಉಪಸಾಗರದಲ್ಲಿ ಫ್ರೆಂಚರ ಕರಾವಳಿಯನ್ನು ಕಾಯುತ್ತಲಿದೆ.

೧೮೩೯ರಲ್ಲಿ ಆದ ಒಪ್ಪಂದದ ಪ್ರಕಾರ ಬೆಲ್ಜಿಯಮ್ ದೇಶವು ಯಾರನ್ನೂ ಸೇರದೆ ತಟಸ್ಥಭಾವದಿಂದ ಸ್ವತಂತ್ರವಾಗಿರಬೇಕೆಂಬ ಶರ್ತವಿತ್ತು. ಬ್ರಿಟನ್ ಈ ಒಪ್ಪಂದಕ್ಕೆ ಸೇರಿದ್ದದರಿಂದ ಈ ಶರ್ತವನ್ನು ಈ ಒಪ್ಪಂದಕ್ಕೆ ಸೇರಿರುವರೆಲ್ಲರೂ ಮನ್ನಿಸುವಂತೆ ಪ್ರಯತ್ನಿಸುವುದು ಬ್ರಿಟಿಷರಿಗೆ ಅಗತ್ಯವಾಯಿತು. ಈ ರೀತಿ ಬಲಹೀನರಾದವರನ್ನು ಸದೆ ಬಡಿದು ಅವರ ಧನ ಪ್ರಾಣ ಮಾನ ಹಾನಿಯನ್ನು ಮಾಡಲೆಳಸುವ ಜರ್ಮನಿಯ ದುಸ್ಸಾಧನೆಯನ್ನು ಅಳಿಸಿಬಿಟ್ಟು ಬಲಹೀನರನ್ನು ರಕ್ಷಿಸುವ ಧರ್ಮೋದ್ದೇಶದಿಂದ ಇಂಗ್ಲಾಂಡವು ರಣರಂಗವನ್ನು ಸೇರಿರುವುದು. ಪರಮಾತ್ಮನು ಬ್ರಿಟಿಷರ ಈ ಉದ್ದೇಶವು ನೆರವೇರಿ ಈ ಯುದ್ಧ ಮೂಲಕ ಲೋಕಕಲ್ಯಾಣಕಾರಕವಾದ ಶಾಂತತೆಯು ನೆಲೆಗೊಳ್ಳಲೆಂದು ಪ್ರಾರ್ಥಿಸುತ್ತೇವೆ

ಮದ್ರಾಸು ಸಂಸ್ಥಾನದಲ್ಲಿ ಏರ್ಪಡಿಸಲ್ಪಟ್ಟಿರುವ ಯುದ್ಧದ ಫಂಡು.

ಮದ್ರಾಸು ಸಂಸ್ಥಾನದ ದೊರೆತನದಿಂದ ಏರ್ಪಡಿಸಲ್ಪಟ್ಟ ಯುದ್ಧ ಫಂಡಿನ ಪರವಾಗಿ ಈ ಕೆಳಗಿನ ಜಾಹೀರುನಾಮೆಯು ಪ್ರಕಟಣೆಯಾಗಿರುವದು.—

ಯುದ್ಧರಂಗದಲ್ಲಿ ಕಾದಾಡುತ್ತಿರುವ ಬ್ರಿಟಿಷ ಸಾಮ್ರಾಜ್ಯದ ಸೇನಿಕರಿಗೇನೇ ನೆಟ್ಟಗಾಗಿ ಇಲ್ಲಿಂದ ಸಹಾಯವು ಕೊಡಲಾಗಬೇಕೆಂದು ಈ ಮೊದಲೇ ಪ್ರಮುಖ ಮಹಾರಾಜರುಗಳು, ರಾಜರುಗಳು ಜಮೀನುದಾರರುಗಳು ಸೂಚಿಸಿ ಅಭಿಮಾನಪೂರ್ವಕ ಉದಾರ ಭಾವದ ದ್ರವ್ಯ ಸಹಾಯವನ್ನು ಮಾಡಬೇಕೆಂದು ಈ ಮೊದಲೇ ವಿಜ್ಞಾಪನೆಗಳು ಬಂದಿರುವುದರಿಂದ ವೈಸರಾಯರ ಅನುಮತಿಯನ್ನು ಪಡೆದು ಈ ಬಗ್ಯೆ ಪ್ರತ್ಯೇಕ ಒಂದು ಫಂಡನ್ನು ಏರ್ಪಡಿಸಲು ನಿಶ್ಚಯಿಸಿದ್ದೇವೆ. ಯುದ್ಧದಿಂದ ಹಿಂದೂಸ್ಥಾನದಲ್ಲಿ ಉಂಟಾಗುವ ಕಷ್ಟ ಪರಿಹಾರಾರ್ಥವಾಗಿ ವೈಸರಾಯರಿಂದ ಸ್ಥಾಪಿಸಲ್ಪಟ್ಟ ಫಂಡಿನಿಂದ ಈ ಫಂಡು ಪ್ರತ್ಯೇಕವಾಗಿರುವುದು. ಈ ಫಂಡಿನಿಂದ ಕೊಡುವ ದ್ರವ್ಯವು ಯುದ್ಧಕ್ಕೆ ಬೇಕಾದ ಕುದುರೆಗಳು ಅಥವಾ ಸೇನಾಸಿಬ್ಬಂದಿಗಳ ಆಫೀಸರರಿಗೆ ಯುಕ್ತ ತೋರುವ ಇತರ ಸಾಮಾಗ್ರಿಗಳು ಮೊದಲಾದವುಗಳನ್ನು ಸೇನೆಗೆ ಸಂಗ್ರಹಿಸಿ ಕೊಡುವುದರಲ್ಲಿ ವಿನಿಯೋಗಿಸಲ್ಪಡುವುದು. ಈ ಫಂಡಿಗೆ ಸಹಾಯವನ್ನು ಶೀಘ್ರದಲ್ಲಿ ಮಾಡಬೇಕಾಗಿರುವುದು. ಈ ಫಂಡಿನಿಂದ ಎಂಥಾ ಸಹಾಯವನ್ನು ಮಾಡಬಹುದೆಂದುದನ್ನು ಕೂಡಿದ ಐವಜಿನಿಂದ ನಿರ್ಣಯಿಸತಕ್ಕದ್ದಾಗಿರುತ್ತದೆ. ಆದ್ದರಿಂದ ಈ ಫಂಡಿಗೆ ಕೊಡೋಣಾಗುವ ದ್ರವ್ಯ ಸಹಾಯವನ್ನು ಈಗಲೇ ಸ್ವೀಕರಿಸಲು ಸಿದ್ಧವಾಗಿರುವೆವು. ಈ ಫಂಡಿನ ಮೊದಲಿನ ನಾಲ್ಕು ಜನ ಚಂದಾದಾರರಿಂದ ೮||ಲಕ್ಷ ರೂಪಾಯಿಗಳು ಈ ಮೊದಲೇ ಕೊಡೋಣಾಗಿರುವವು. ಫಂಡಿಗೆ ಕೊಡೋಣಾಗುವ ಹೆಚ್ಚುವ ಕಡಮೆ ಐವಜಿನ ಚಂದಾ ಮೊಬಲಗುಗಳನ್ನು ಸಹ ಕೃತಜ್ಞತೆಯಿಂದ ಸ್ವೀಕರಿಸಿ ದಾನಿಗಳ ಹೆಸರನ್ನು ಕ್ರಮವಾಗಿ ಪ್ರಕಟಿಸುವೆವು.

ಈ ಫಂಡಿನ ಒಂದು ಶಾಖೆಯಾಗಿ ಗವರ್ನರ ದೊರೆಗಳವರ ಪತ್ನಿ ಲೇಡಿ ಪೆಂಟ್ಲೆಂಡರವರು ಸೇನೆಗೆ ಬೇಕಾದ ಉಡುಪುಗಳು, ಗಾಯವಡೆದವರ ಚಿಕಿತ್ಸೆ ಬಗ್ಯೆ ಬೇಕಾದ ಸಾಮಾಗ್ರಿಗಳು ಇತ್ಯಾದಿಗಳನ್ನು ಕೂಡಿಸುವ ಒಂದು ನಿಧಿಯನ್ನು ಸ್ಥಾಪಿಸುವರು. ಈ ನಿಧಿಗೆ ಉಡುಪು ಇತ್ಯಾದಿಗಳನ್ನು ಉಚಿತವಾಗಿ ವ್ಯಾಪಾರ ಸಂಘದವರು ಕೆಲಸಗಾರರ ಕೂಟಗಳು ಅಥವಾ ಇತರರ್ಯಾರಾದರೂ ಕಳುಹಿಸಿಕೊಡಬಹುದು. ಈ ನಿಧಿಗೆ ಬೇಕಾಗಿರುವ ಸಾಮಾಗ್ರಿಗಳ ಪಟ್ಟಿಯು ಸದ್ಯದಲ್ಲಿಯೇ ಪ್ರಕಟಿಸಲ್ಪಡುವುದು. ಈ ನಿಧಿಯಲ್ಲಿ ಕೂಡಿಸೋಣಾಗುವ ಸಾಮಾಗ್ರಿಗಳೆಲ್ಲವೂ ಭದ್ರವಾಗಿ ಸೇನಿಕರ ಉಪಯೋಗಕ್ಕೆ ಕಳುಹಿಸಲ್ಪಡುವವು. ಈ ಫಂಡಿನ ಪರವಾದ ಎಲ್ಲಾ ಪತ್ರವ್ಯವಹಾರವನ್ನು 'ಸಕ್ರೆಟರಿ, ಮದರಾಸು ಯುದ್ಧ ಫಂಡು, ಗವರ್ನರ ದೊರೆಗಳವರ ಕೆಂಪ್' ಎಂಬ ವಿಳಾಸಕ್ಕೆ ಬರಕೊಳ್ಳಬೇಕಾಗಿರುವುದು.

ಯುದ್ಧದ ಭವಿಷ್ಯತ್ತು

ಪಾಶ್ಚಾತ್ಯಜ್ಯೋತಿಷ್ಯರಲ್ಲಿ ಒಬ್ಬರಾದ ಲಿಯೋಕೆಂಡಾಲ್ ಎಂಬವರು ಈಗಿನ ಯುದ್ಧದ ಭವಿಷ್ಯತ್ತನ್ನು ಈ ಕೆಳಗೆ ಕಂಡಂತೆ ಗಣಿತದ ಮೂಲಕ ನಿರ್ಣಯಿಸಿ ಹೇಳಿರುತ್ತಾರೆ —"ಪಶ್ಚಿಮಾರ್ದಗೋಳಕ್ಕಿರುವ ಗ್ರಹಚಾರ ಸ್ಥಿತಿಯನ್ನು ಪರಿಶೀಲಿಸಿದರೆ, ಈ ಯುದ್ಧ ದೋಷವು ದೀರ್ಘಕಾಲ ಪರ್ಯಂತ ವಿಸ್ತರಿಸಿಕೊಂಡಿರುವುದೆಂದು ಹೇಳಲು ಅವಕಾಶವಿಲ್ಲ

ಜರ್ಮನಿ ಜರ್ಮನಿಗೆ ಆದಿಯಲ್ಲಿ ಸ್ವಲ್ಪ ಜಯಪ್ರಾಪ್ತಿಯು ಉಂಟಾಗಬಹುದು, ಆದರೆ ಅದು ಅಷ್ಟು ಪ್ರಾಮುಖ್ಯವನ್ನೈದಲಾರದು. ದೇಶದೊಳಗೆ ದ್ರವ್ಯಸಂಬಂಧವಾದ ವೈಕಲ್ಯವು ಹೆಚ್ಚು ಹಾಹಾಕಾರವನ್ನು ಹುಟ್ಟಿಸುವುದು. ಆದ್ದರಿಂದ ಈ ಯುದ್ಧಾಭಿನಿವೇಶವು ವಿರಮಿಸುವುದು. ಜರ್ಮನಿ ಪ್ರಜೆಗಳು ಅಂತಃಕಲಹದಿಂದ ತುಂಬಿ ಹೋಗುವರು. ಆದರಿಂದ ಈ ಸಾಮ್ರಾಜ್ಯಕ್ಕೆ ಒಳಗೂ ಹೊರಗೂ ವಿನಾಶವು ಪ್ರಾಪ್ತವಾಗುವುದು. ಈ ಕ್ಷೋಭೆಯು ಮೊದಲಿಂದಲೂ ದೊರೆತನದ ನಿರಾಕರಣೆಯು ಕಡೆಗೆ ತಿರುಗುವುದು. ಕಡೆಗೆ ರಾಜಧ್ವಂಸನದಲ್ಲಿ ಪರಿಣಾಮಗೊಳ್ಳುವುದು. ಚಕ್ರವರ್ತಿಯ ಜಾತಕದಲ್ಲಿ ದುಷ್ಟಗ್ರಹಚಾರವು ವಿಶೇಷವಾಗಿದೆ.

ರುಷ್ಯಾ. ಯುದ್ಧಸಂರಂಭಕ್ಕೆ ಅಧಿಪತಿಗಳಾದ ಗ್ರಹಗಳು ರುಷ್ಯಾ ರಾಜ್ಯಕ್ಕೆ ಹೆಚ್ಚು ಅನುಕೂಲಗಳಾಗಿವೆ. ಫ್ರಾನ್ಸ್ ರಾಜ್ಯಕ್ಕೆ ಹಾಗಿಲ್ಲ. ಜರ್ಮನಿಯ ಮೇಲೆ ಬದ್ಧದ್ವೇಷವುಳ್ಳವುಗಳು ಈ ರುಷ್ಯಾ ಫ್ರಾನ್ಸ್‌ಗಳೆರಡೇ.

ಫ್ರಾನ್ಸ್ ಫ್ರೆಂಚ್ ಸೇನಾನಿವಹಕ್ಕೆ ಈ ತಿಂಗಳ ಕೊನೆಯಲ್ಲೂ, ಸಪ್ಟಂಬರ್ ತಿಂಗಳ ಮೊದಲು ಕೆಲದಿನಗಳಲ್ಲೂ ಸ್ವಲ್ಪ ಜೀರ್ಣತೆಯು ತಪ್ಪದು. ಆದರೆ ಒಳಿಕಕ್ಕೆ ಉತ್ತಮವಾದ ತಾರಾಬಲವು ಪ್ರಾಪ್ತವಾಗುವುದೆಂದು ತೋರಿ ಬರುತ್ತದೆ.

ಆಸ್ಟ್ರಿಯಾ ಆಸ್ಟ್ರಿಯಾರಾಷ್ಟ್ರಕ್ಕೆ ಮುಂದೆ ಬಹಳ ದುರ್ದಿನಗಳಿರುವುವು. ಯೂರೋಪುರಾಷ್ಟ್ರ ಸಮೂಹದಲ್ಲಿ ಈ ಆಸ್ಟ್ರಿಯಾದತೇಜಸ್ಸು ಕ್ಷೀಣಿಸಿ ಹೋಗುವುದು.

ಇಟಲಿ ಇಟಲಿದೇಶವು ಪುನಃ ಶಸ್ತ್ರಪ್ರಸಂಗವನ್ನು ವಹಿಸುವುದು. ಅತಿಶಯವಾದ ಜಯವನ್ನೂ ಕೀರ್ತಿಯನ್ನೂ ವಿಸ್ತರಿಸುವುದು.

ಇಂಗ್ಲೆಂಡ್ ಇನ್ನು ಇಂಗ್ಲೆಂಡಿನ ದೆಶೆಯು ಹೇಗಿರುವುದೆಂದರೆ—ಈ ದೇಶಾದೃಷ್ಟವನ್ನು ರಕ್ಷಿಸುವ ಗ್ರಹಗಳೆಲ್ಲಾ ಶ್ರೇಯಃಪ್ರದಸ್ಥಾನದಲ್ಲಿವೆ. ಅನುಕೂಲಗ್ರಹ ವೀಕ್ಷಣೆಯು ಪೂರ್ಣವಾಗಿದೆ. ಇದು ವರೆಗೆ ಕೆಟ್ಟವಾಗಿದ್ದ ನಕ್ಷತ್ರಗಳೂ ಕೂಡ ಈಗ ಉತ್ತಮರಾಶಿಯಲ್ಲಿ ಪ್ರವೇಶಿಸುತ್ತಿವೆ. ಇಂಗ್ಲೆಂಡು ತನ್ನ ಕೀರ್ತಿ ಗೌರವಗಳನ್ನೂ ಶಕ್ತಿ ವಿಶೇಷವನ್ನೂ ಚೆನ್ನಾಗಿ ಉಳಿಸಿಕೊಳ್ಳುವುದು.

ಭರತಖಂಡ ಭರತಖಂಡದ ಸಂಬಂಧವಾಗಿ ಗ್ರಹಗಳ ವಿಚಾರವನ್ನು ಪರಿಶೀಲಿಸಿದರೆ, ಈ ದೇಶದಲ್ಲಿ ಯಾವ ವಿಧವಾದ ಮಾರ್ಪು ಉಂಟಾಗುವಂತೆ ಕಾಣುವುದಿಲ್ಲ.

ಈಗಿನ ಆಂದೋಳನವು ನಿಷ್ಕಾರಣವಾಗಿ ಹುಟ್ಟಿರುತ್ತದೆ. ಬೇಗನೆ ಇದೆಲ್ಲವೂ ವ್ಯವಸ್ಥಿತವಾಗುವುದು. ಯೂರೋಪಿನ ಭೂಗೋಳ ಚಿತ್ರದಲ್ಲಿ ರಾಷ್ಟ್ರಗಳ ಎಲ್ಲೆಯನು ವ್ಯತ್ಯಾಸಮಾಡಿ ಬರೆಯಬೇಕಾಗುವುದು. ರುಷ್ಯಾ—ಫ್ರಾನ್ಸ್—ರಾಷ್ಟ್ರಗಳ ವೈಶಾಲ್ಯವು ವಿಸ್ತರಿಸುವುದು. ಜರ್ಮನಿ ರಾಜ್ಯವು ತನ್ನ ಮೂಲ ಭೂಮಿಯಲ್ಲೇ ಸ್ವಲ್ಪ ಕಳೆದುಕೊಳ್ಳುವುದು. ೪೦ ವರ್ಷಗಳ ಹಿಂದೆ ಕತ್ತಿಮೊನೆಯ ಶಕ್ತಿಯಿಂದ ಹಿಡಿದುಕೊಂಡಿರುವ ಆಲ್ಸೆಸ್ ಲೋರೈನ್ ಪಟ್ಟಣಗಳು ಮತ್ತೆ ಫ್ರೆಂಚರ ಸೊತ್ತಾಗಿ ಪರಿಣಮಿಸುವುವು. ಆಸ್ಟ್ರಿಯದ ಹಣೆಬರಹವು ಚೆನ್ನಾಗಿಲ್ಲ. ಈ ಯುದ್ಧರೋಗವು ನಿವಾರಿತವಾಗುವುದರೊಳಗೆ ದೇಶವೆಲ್ಲಾ ನಾನಾ ವಿಧವಾದ ಉಪಟಳದಿಂದ ಬೆಂಡಾಗುವುದು. ಜರ್ಮನಿಗೆ ಅಪಜಯವು ತಪ್ಪದ ಫಲವು, ಅದು ಖಂಡಿತ. ಯುದ್ಧ ಸಂಬಂಧವಾದ ಜಾತಕ ಲಕ್ಷಣವನ್ನು ಪರಿಶೀಲಿಸಿದರೆ, ಸೂರ್ಯನು ತುಲಾರಾಶಿಯಿಂದ ವೃಶ್ಚಿಕರಾಶಿಯನ್ನು ಪ್ರವೇಶಿಸುವ ವರೆಗೂ ಶಾಂತತೆಯು ಸಮನಿಸುವುದಿಲ್ಲ. ಆ ಶಾಂತಿಯುಂಟಾಗುವುದು ಅಕ್ಟೋಬರ್

ತಿಂಗಳು ೩ನೇಯ ವಾರದಲ್ಲಿ ಜರಗುವುದು. ಈ ಯುದ್ಧ ಪ್ರಸಕ್ತಿಯು ಎಷ್ಟು ಅಕಸ್ಮಾತ್ತಾಗಿ ಉಂಟಾಯಿತೋ ಸಂಧಿನಿರ್ಧಾರಣವೂ ಕೂಡ ಅಷ್ಟು ಅಕಸ್ಮಾತ್ತಾಗಿಯೇ ಆಗುವುದು."

ಮೈ. ಸ್ಟಾ.

ದಿವಂಗತರಾದ ಪವಿತ್ರ ಹತ್ತನೇ ಪಿಯುಸ್ ಪೋಪ ಸ್ವಾಮಿಗಳವರು.

"ಈ ಯುದ್ಧದ ಭಯಂಕರವಾದ ನೋಟಗಳಿಂದ ನನ್ನನ್ನು ರಕ್ಷಿಸಿದುದಕ್ಕಾಗಿ ಭಗವಂತನಿಗೆ ನಾನು ತುಂಬಾ ಕೃತಜ್ಞನಾಗಿರುವೆನು" ಎಂಬ ಕಡೇ ಮಾತುಗಳನ್ನಾಡಿ, ಲೋಕಪ್ರಿಯರಾದ ಪವಿತ್ರ ಹತ್ತನೇ ಪಿಯುಸ್ ಪೋಪ ಗುರುಸ್ವಾಮಿಗಳವರು ಕಳೆದ ಬ್ರಹಸ್ಪತಿವಾರ ತಾ. 20ರಲ್ಲು ಪ್ರಾತಃ ಒಂದು ಘಂಟೆ ಸಮಯಕ್ಕೆ ದೇವರಾಧೀನರಾದರು. ಯುರೋಪ ಖಂಡದ ಸಮಸ್ತ ರಾಜರೊಳಗೆ ಈಗ ನಡಿಯುವ ಮಹಾ ಯುದ್ಧವನ್ನು ಸಂಧಾನಗೊಳಿಸುವರೆ ಇವರುಗಳು ನಡಿಸಿದ ಪ್ರಯತ್ನಗಳು ಸಫಲವಾಗದೆ ಹೋಗಿ ಭೂಲೋಕದ ಜನಾಂಗವೆಲ್ಲಾ ಯುದ್ಧದೇವಿಗೆ ಬಲಿಯಾಗುತ್ತದೆಂಬ ಆಲೋಚನೆಯಿಂದ ಕಠಿಣವಾದ ದುಃಖದಲ್ಲಿ ವೃದ್ಧಪ್ರಾಯರಾಗಿ ಅನಾರೋಗ್ಯದಿಂದ ಬಳಲುತ್ತಿದ್ದ ಈ ಮಹಾ ತಾತರು ಮುಳುಗಿದುದ್ದೇ ಅವರುಗಳನ್ನು ಅಕಾಲಮರಣಕ್ಕೆ ಗುರಿಮಾಡಿರುವದು

"ಹತ್ತನೆ ಪಿಯುಸ್"ವೆಂಬ ಹೆಸರು ಇವರುಗಳು ಸಂ| 1903ನೇ ಇಸವಿ ಆಗೋಸ್ತು ತಾ. 9ಕ್ಕೆ ಪೋಪಸ್ವಾಮಿ ಪಟ್ಟಕ್ಕೆ ಬಂದಾಗ ತೆಗೆದುಕೊಂಡಿದ್ದಾಗಿರುತ್ತದೆ ನಿಜವಾಗಿ ಜ್ಯೋಸೆಪ್ ಮೆಲ್ಕಿಯೊರ್ ಸಾರ್ಟೋವೆಂಬ ಹೆಸರಿದ್ದ ಈ ಮಹಾ ಪುರುಷರು ಜಿಯೊವಾನಿ ಬಾತ್ತಿಸ್ತ ಸಾರ್ಟೋ ಮತ್ತು "ಮಾರ್ಗರಿತ ಸಾಂತೊನಿ"ಯರೆಂಬ ಇಟಲಿ ದೇಶದ ವೆನೆಷಿಯದ ರೀಸ್‌ವೆಂಬ ಊರಿನ ಪುಣ್ಯ ನಿವಾಸಿಕರಲ್ಲಿ ಸಂ| 1835ನೇ ಜೂನು ತಾ 2ರಲ್ಲಿ ಜನ್ಮವೆತ್ತಿದರು ಬಡ ಕುಟುಂಬದವರಾದ ಇವರುಗಳು ತಾವು ಸಂತರ ಒರುವ ಉನ್ನತ ಸ್ಥಿತಿಯ ಸಂಜ್ಞೆಯಾಗಿ ಬಾಲಾರಭ್ಯದಲ್ಲಿ ಭಕ್ತಿರಸ, ವಿದ್ಯಾಪ್ರೀತಿ, ಬುದ್ಧಿಚಾತುರ್ಯ ಮೊದಲಾದ ಸದ್ಗುಣಗಣಗಳಿಂದ ಶೋಭಿಸುತ್ತಾ ಇವರುಗಳ ಗ್ರಾಮಸ್ಥರಾಗಿದ್ದ ಆಗ ವೆನಿಸ್ ಪ್ರಾಂತ್ಯದ ಪಾತ್ರಿಯಾರ್ಕ್ ಪದವಿಯನ್ನನುಭವಿಸುತ್ತಿದ್ದ ಕಾರ್ಡಿನಲ್ ಮೊನಿಕೊರೆಂಬವರ ಮನಸ್ಸನ್ನು ಆಕರ್ಶಿಸಿ ವೈದಿಕತ್ವಕ್ಕೆ ಬರಲು ಅವರಿಂದ ಪ್ರೋತ್ಸಾಹ ದೊರಕುವ ಅದೃಷ್ಟವಿದ್ದವರಾದರು.

ಗ್ರಾಮ ಶಾಲೆಗೆ ಹೋಗುತ್ತಿದ್ದ "ಚಿಕ್ಕ ಸಾರ್ಟೋ" ತಮ್ಮ ಪ್ರೋತ್ಸಾಹಕರ ಅಪ್ಪಣೆ ಮೇರೆಗೆ "ಪಾದುವಾ" ಪಟ್ಟಣದ ಸೆಮಿನೆರಿಯಲ್ಲಿ ಸಂ| 1850ನೇ ಇಸವಿಯಿಂದ ವಿದ್ಯಾಭ್ಯಾಸ ನಡಿಸುವಾಗ ಸರ್ವರಿಗೂ ಆನಂದಮಯವಾದ ತೃಪ್ತಿಯನ್ನಿತ್ತಿದ್ದರು ಗುರುಪದವಿಗೆ ಬರಲಿಕ್ಕೆ ಅವಶ್ಯವಿರುವ ಪ್ರಾಯಕ್ಕೆ ಬಾರದಿದ್ದರೂ ಆಗ ಪೋಪರಾಗಿದ್ದ ಒಂಭತ್ತನೇ ಪಿಯುಸರವರಿಂದ "ಡಿಸ್ಪೆನ್ಸೆಶನ್" ವ ರಜೆಯನ್ನು ಪಡೆದು ಸಂ| 1858ನೇ ಸಪ್ತಂಬರ ತಾ 18ಕ್ಕೆ ವೈದಿಕತ್ವವನ್ನು ಹೊಂದಿದರು ಗುರುಪದವಿಗೆ ಬಂದ ಕೂಡಲೇ ಇವರುಗಳನ್ನು ಹೊರ ಪ್ರಾಂತ್ಯಗಳಿಂದ ತಮ್ಮ ಸ್ಥಾನವಾದ ವೆನಿಸ್ ಪಟ್ಟಣಕ್ಕೆ ತಂದು ಈ ದಿವ್ಯ ಪುರುಷರಿಗೆ ಸಹಜವಾಗಿ ಒಂದೊದಗುವ ಉನ್ನತ ಸ್ಥಿತಿಗೆ ಕೈಕೊಡಬೇಕೆಂಬ ಇರಾಧೆ ಇದ್ದ ಇವರುಗಳ ಪೂರ್ಣ ಪ್ರೋತ್ಸಾಹಕರಾದ ಕಾರ್ಡಿನಲ್ ಮೊನಿಕೊರವರು ಈ ಸಮಯದಲ್ಲಿ ತೀರಿಹೋಗಿದ್ದರು. ಹೀಗಾಗಿ "ಡೊನ್ ಜ್ಯೊಸೆಪ್ಪ"ರೆಂದು ಆಗ ಕರೆಯಲ್ಪಡುತ್ತಿದ್ದ ಇವರು ಸಂ 1867ನೇ ಇಸವಿಯ ವರೆಗೆ ಟೊಲೊಂಬೊದ ರೆಕ್ಟರುಗಳ ಸಹಾಯಕರಾಗಿಯೂ, 1867ನೇ ಇಸವಿಯಲ್ಲಿ ಸಾಲ್ಜಾನೊ ಇಗರ್ಜಿಯ ರೆಕ್ಟರರಾಗಿಯೂ, ಸರ್ವರ ಪ್ರೀತಿ ಪಾತ್ರನಾಗಿ ಕೆಲಸ ನಡಿಸಿದ ಮೇಲೆ ತಾನು ಕಲಿತ ಸೆಮಿನೆರಿಯಲ್ಲಿಯೇ ಪ್ರೊಫೆಸರರಾದರು ಅದೇ ಡಾಯೊಸೆಜಿನ ವಿಕರ್ ಜನರಲ್ ಪದವಿಗೆ ಸಹ ಬಂದು ಸಂ 1884ನೇ ಇಸವಿಯಲ್ಲಿ ಮಾಂತುವಾದ ಬಿಶೋಪರಾದರು. ಗ್ರಾಮ ಪ್ರಾಂತ್ಯದಲ್ಲಿಯೂ ಬಡ ಕುಟುಂಬದಲ್ಲಿಯೂ ಜನಿಸಿದ್ದು ಸದಾ ಕಾಲ ಗರೀಬ ತರದ ಜೀವನವನ್ನೇ ಇವರು ವರ್ತಿಸುತ್ತಿದ್ದರು ಹೆಚ್ಚು ಹುಟ್ಟುವಳಿ ಇದ್ದ ಮಾಂತುವ ಪಟ್ಟಣದ ಬಿಶೋಪರಾಗಿದ್ದರೂ ಸಂ 1893ನೇ ಜೂನ್ ತಾ. 13ರಲ್ಲು ಪವಿತ್ರ 13ನೇ ಲಿಯೋ ಪೋಪ ಗುರುಸ್ವಾಮಿಗಳು ಇವರುಗಳನ್ನು ಪೋಪ ಸ್ವಾಮಿಗಳ ಕೌನ್ಸಿಲು ಆಗಿರುವ ಸೆಕ್ರೆಡ್ ಕೊಲೇಜಿನ ಮೆಂಬರರಾಗಿ ಚುನಾಯಿಸಿ "ಕಾರ್ಡಿನಲ್" ಗುರು ಪದವಿಗೆ ತಂದಾಗ ಆ ಪದವಿಗೆ ಬೇಕಿರುವ "ಇನ್ಸಿಗ್ನಿಯಾ" ವ ಡ್ರೆಸ್ಸನ್ನು ಕೊಂಡುಕೊಳ್ಳಲಿಕ್ಕೆ ಇವರುಗಳ ಹತ್ತರ ಹಣವಿರಲಿಲ್ಲವಂತೆ. ಇವರುಗಳ ದಾನ ಧರ್ಮ ಇಷ್ಟು ವಿಪರೀತವಾಗಿತ್ತು.

ಈ ಕಾರ್ಡಿನಲ್ "ರೆಂಕ್" ಕೊಡಲ್ಪಡುವ ಎರಡು ದಿವಸಗಳ ಮೊದಲು ಬಿಶೋ, ಸಾರ್ಟೋರವರು ತಮ್ಮ ಪೂರ್ಣಾಭಿವೃದ್ಧಿಯ ಕಾರಣಭೂತರಾಗಿದ್ದ ಕಾರ್ಡಿನಲ್ ಮೊನಿಕೊರವರ ಹುದ್ದೆಯಾಗಿರುವ ವೆನಿಸ್ ಪ್ರಾಂತ್ಯದ "ಪಾತ್ರಿಯಾರ್ಕ್" ಎಂಬ ಪ್ರಾಂತ್ಯದ ಬಿಶೋಪರುಗಳೆಲ್ಲರೂ ತಮ್ಮ ಕೈಕೆಳಗಿರುವ ಪದವಿಗೆ ಬಂದಿದ್ದರು. ಲೋಕದ ಸರ್ವ ಜನರ ಜ್ಞಾಪಕದಲ್ಲಿರುವ ಪವಿತ್ರ ಹದಿಮೂರನೇ ಲಿಯೋ ಪೋಪ ಸ್ವಾಮಿಗಳು ಮೃತಪಟ್ಟಾಗ ಅವರುಗಳ ಉತ್ತರಾಧಿಕಾರಿಯನ್ನು ಚುನಾಯಿಸುವ ಬಗ್ಯೆ "ಸೆಕ್ರೆಡ್ ಕೊಲೇಜು" ವ 62 ಕಾರ್ಡಿನಲ್‌ಗಳು ತಮ್ಮಲ್ಲಿ ಓಬ್ಬರನ್ನು ಹೆಕ್ಕಿ ತೆಗೆಯುವ ಬಗ್ಯೆ ಅದೇ ವರ್ಷ ಅಂದರೆ 1903ನೇ ಜುಲೈ 29ಕ್ಕೆ ಸಭೆ ಕೂಡಿದ್ದಾಗ್ಗೆ ಬಡ ಯೋಗಿಯಾದ ಕಾರ್ಡಿನಲ್ ಸಾರ್ಟೋರವರು ಚುನಾಯಿಸಲ್ಪಡುವರೆಂಬದಾಗಿ ಯಾವಾತನೂ ನೆನಸಲಿಲ್ಲ ದೈವಚಿತ್ತದಿಂದ ಇವರುಗಳಿಗೆ 50 ಓಟುಗಳು ಸಿಕ್ಕುವಾಗ ಎಲ್ಲಾ ಜನರ ಆಲೋಚನೆ ಪ್ರಕಾರ ಈ ಚಕ್ರವರ್ತಿಗಳ ಪದವಿಗೆ ಮೇಲೆನ್ನಿಸುವ ಪೋಪ ಪದವಿಯು ಪಡೆಯುವ ಹಾಗೆ ಇರುವ ಕಾರ್ಡಿನಲ್ ರಾಂಪೊಲ್ಲಿರವರಿಗೆ ಉಳಿದ ಓಟುಗಳು ಸಿಕ್ಕಿದವು ಹೀಗಾಗಿ ಅದೇ ಆಗೋಸ್ತು ತಾ. 9ಕ್ಕೆ ರೀಸ್ ಪಟ್ಟಣದ ಬಡ ನಿವಾಸಿಕರಾಗಿದ್ದ ಜ್ಯೊಸೆಪ್ ಸಾರ್ಟೋರವರಿಗೆ ಪೋಪ ಪಟ್ಟವನ್ನು ಇಟಲಿ ದೇಶದ ರೋಮ ಪುರದಲ್ಲಿ ಕಟ್ಟಿದರು.

ಹೀಗೆ 10, 11 ವರ್ಷ ಈ ಮಹಾ ಹುದ್ದೆಯ ಕಾರ್ಯಭಾರವನ್ನು ತಮ್ಮ ಯಥಾಕಾಲದ ಸಮಾಧಾನದಿಂದಲೂ ಪೂರ್ಣ ಧೈರ್ಯದಿಂದಲೂ ನಡಿಸುವಾಗ ಇವರುಗಳ ಯೋಗಿ ಸ್ವಭಾವವು ಸರ್ವ ಕಡೆಯಲ್ಲಿಯೂ ತೋರುತ್ತಿತ್ತು. ವೆಟಿಕಾನ್ ಎಂಬ ಪೋಪ ಸ್ವಾಮಿಗಳ ರಾಜಧಾನಿ ವ ಅರಮನೆಯಲ್ಲಿ ಇವರುಗಳು ತಪೋಬದ್ಧರಾದ ಮಹಾ ಋಷಿಯಂತೆ ಪ್ರಜ್ವಲಿಸುತ್ತಿದ್ದರು ಇವರುಗಳ ಆಡಳಿತೆಯಲ್ಲಿ ದೇವಭಕ್ತಿಯು ಅಭಿವೃದ್ಧಿಗೊಳಿಸುವ ಅನೇಕ ಮಹತ್ತಾದ ಕಾನೂನುಗಳು ಜಾರಿಗೆ ಬಂದಿರುವವು. ಇಗರ್ಜಿಗಳಲ್ಲಿ ಇತ್ತಲಾಗೆ ಹೆಚ್ಚಾಗಿ ರೂಢಿಯಲ್ಲಿದ್ದ ಬಹಳ ಖುಶಾಲನ್ನುಂಟುಮಾಡುವ ಮೊಝಾರ್ಟ್ ಮೊದಲಾದ ಗಾಂಧರ್ವ ಸಮಾನವಾದ ಅನೇಕರ ಗಂಭೀರವಾದ ಗಾಯನ ರಾಗವನ್ನೆಲ್ಲಾ ಪೂರ್ಣವಾಗಿ ತೆಗೆದುಹಾಕಿ ಅವುಗಳೆಲ್ಲವುಗಳ ಬದಲಿಗೆ ಗ್ರೆಗೊರಿಯನ್ ಚೆಂಟ್ ಎಂಬ ಖುಶಾಲು ರಹಿತವಾಗಿದ್ದರೂ ಗಂಭೀರಮಯವಾದ ಗಾಯನ ರಾಗವನ್ನು ಹೇಳಿಸಬೇಕಾಗಿ ಕೊಟ್ಟ ಹುಕುಂ ಇವರುಗಳ ಮನೋಧೈರ್ಯವನ್ನು ವ್ಯಕ್ತಗೊಳಿಸುತ್ತದೆ ರೋಮನ್ ಕೆಥೋಲಿಕ ಮತದಲ್ಲಿ ಕ್ರಮೇಣವಾಗಿ ನೆಲಗೊಂಡು ಬಂದಿದ್ದ ಅನೇಕಾನೇಕ ಅನ್ಯ ಸ್ವಭಾವದ ಸಂಗತಿಗಳನ್ನು ಒಂದರ ನಂತರ ಒಂದನ್ನು ತಿದ್ದುಪಾಟ ಮಾಡುತ್ತಾ ಬರುತ್ತಿದ್ದ ಈ ಮಹಾ ಕಾರ್ಯಭಾರಿ ಪುರುಷೋತ್ತಮರನ್ನು ಯುರೋಪ ಖಂಡದ ಘೋರವಾದ ಯುದ್ಧದ ಚಿಂತೆಯು ವಿದಿವಶರನ್ನಾಗಿ ಮಾಡಿದುದು ದುರಾದೃಷ್ಟವೇ ಸೈ ಭಕ್ತ ಜನರಾದ ಕೆಥೋಲಿಕರಿಗೆ ಇವರು ದಯಪಾಲಿಸಿದ ವರಗಳನ್ನು ಇವರು ತೋರಿಸಿಕೊಟ್ಟ ಉದಾತ್ತ ಜೀವನ ಮಾರ್ಗವನ್ನೂ ಇನ್ನೊಮ್ಮೆ ಪ್ರಸ್ತಾಪಿಸುವೆವು ಕ್ರೂಜಿಯನ್ನು ಜೇಸು ಸ್ವಾಮಿಗಳವರು ಪರಿಶುದ್ಧಗೊಳಿಸಿದಂತೆ ಬಡತನವನ್ನು ಪ್ರತಿಷ್ಠೆಗೊಳಿಸಿದ ಮಹಾಯೋಗಿಗಳ ಪರಿಶುದ್ಧಾತ್ಮವು ಭಗವಂತನನ್ನು ಕಣ್ಣಾರೆ ಕಾಣುವ ಸುಖವನ್ನು ಕೂಡಲೆ ಪಡೆಯುವುದು.

ಕ್ರೈಸ್ತ ಮಾಹೆ.

ಚಿತ್ರ ಪ್ರದರ್ಶನವು.

ತಾಯಮ್ಮನವರ ಪುಣ್ಯ ತಿಥಿ.

ತೀರ್ಥರೂಪ ತಂದೆಯವರ ಪಾದಕ್ಕೆ.

ಬಾಲಕ ಅಣ್ಣಪ್ಪನು ಮಾಡುವ ಬಿನ್ನಹ ನಾವೆಲ್ಲರೂ ಇದುವರೇಗ ಕ್ಷೇಮದಲ್ಲಿದ್ದೇವೆ—ತಮ್ಮ ಕ್ಷೇಮ ಸಮಾಚಾರಕ್ಕೂ ನಾನು ನಡಕೊಳ್ಳತಕ್ಕ ಬುದ್ಧಿಮಾರ್ಗಕ್ಕೂ ಆಗಿಂದಾಗ [illegible] ಬರೆಯಬೇಕಾಗಿ ಬೇಡಿಕೊಳ್ಳುತ್ತೇನೆ

ತಾಯಮ್ಮನವರು ಗಣೇಶ ಚತುರ್ಥಿ ದಿನ ಸ್ವರ್ಗಸ್ಥರಾದ ಕಾರಣ ಪ್ರತಿ ವರುಷವೂ ಅದೇ ದಿನ ಅವರ ಪುಣ್ಯತಿಥಿ ಮಾಡಬೇಕಾಗಿ ತಾವು ಅಪ್ಪಣೆ ಕೊಟ್ಟಿದ್ದೀರಿ ಆಗೋಸ್ತು ೮ನೇ ತಾರೀಕಿನ ಸ್ವದೇಶಾಭಿಮಾನಿಯಲ್ಲಿ ವೇ| ಮಂಗಳೂರು ನಾರಾಯಣಾಚಾರ್ಯರು ಗಣೇಶ ಚತುರ್ಥಿ ಸೋಮವಾರ ದಿನವೇ ಬರುತ್ತದೆಂತ ರತ್ನಾವಳಿ ಮುಕ್ತಾವಳಿ, ನಿರ್ಣಯ ಸಿಂಧು ಮೊದಲಾದ ೭ ಗ್ರಂಥಗಳ ಆಧಾರ ಕಾಣಿಸಿ ಪ್ರಕಟಿಸಿದ್ದಾರೆ ಆಗೋಸ್ತು ೧೫ನೇ ತಾರೀಕಿನ ಸ್ವದೇಶಾಭಿಮಾನಿಯಲ್ಲಿ ಅವರಿಗಿಂತಲೂ ಹೆಚ್ಚು ಶಾಸ್ತ್ರಾಧಾರ ಕೊಟ್ಟು ವೇ| ಉದಿಯಾವರ ನಾರಾಯಣಾಚಾರ್ಯರು ಗಣೇಶ ಚತುರ್ಥಿಯನ್ನು ಮಂಗಳವಾರ ದಿವಸವೇ ಆಚರಿಸಬೇಕಾಗಿ ಬರೆದಿದ್ದಾರೆ. ಸರಕಾರದವರಂತೂ ಎಲ್ಲಾ ಜಿಲ್ಲೆಗಳಿಗೂ ಗಣೇಶಚತುರ್ಥಿ ಸೋಮವಾರ ಬರುವುದೆಂತ ನಿರ್ಣಯಿಸಿ ಸೋಮವಾರವೇ ರಜಾ ದಿವಸವೆಂತ ನಿರ್ಣಯಿಸಿದ್ದಾರೆ.

ಇಲ್ಲಿಯ ಸುಂಕದ ಕಟ್ಟೆ ರಾಘವಾಚಾರ್ಯರ ಕೂಡ ನಾನು ವಿಚಾರಿಸಲಾಗಿ "ಸೋಮಂ ಕುಜಂ ಚತುರ್ಥಿಂ ಕೃತ್ವಾ ಯಜಮಾನಾಯ ದರಿದ್ರಂ ಪೀಡಯತಿ [illegible]

ಮಾತು ತಿಲಕಾಷ್ಟಮಹಿಶ ಬಂಧನವೆಂಬ ಗ್ರಂಥದಲ್ಲಿ ಇರುವುದರಿಂದ ಸೋಮವಾರ ಅಥವ ಮಂಗಳವಾರ ಗಣೇಶ ಚತುರ್ಥಿ ಆಚರಿಸಿದರೆ ಮನೆಯ ಯಜಮಾನನಿಗೆ ಬಡತನ ಬರುವುದು, ಆದುದರಿಂದ ಬುಧವಾರ ದಿವಸವೇ ಆಚರಿಸಬೇಕೆಂತ ಹೇಳಿದರು. ಬುಧವಾರ ದಿವಸ ಖಚ್ಚೇರಿಗೆ ರಜೆಯಿಲ್ಲ. ರಜೆ ಕೇಳಿದರೆ ನಮ್ಮ ಆಫೀಸರರು ಸಿಟ್ಟಾಗುತ್ತಾರೆ. ಆದುದರಿಂದ ತಾಯಮ್ಮನವರ ಶ್ರಾದ್ಧ ಯಾವ ದಿವಸ ಮಾಡುವುದೆಂಬದಕ್ಕೆ ನನಗೆ ದಾರಿ ತೋರುವುದಿಲ್ಲ.

— ಕಳೆದ ಮೇ ತಿಂಗಳಲ್ಲಿ ಏಕಾದಶಿ ಎರಡು ದಿವಸವೂ ಉಂಟೆಂದು ಗಂಜಿಮಠ ನರ್ಸಯ್ಯ ಉಪಾಧ್ಯರು ಹೇಳಿದ್ದರಿಂದ ಅಜ್ಜಯ್ಯನವರು ೨ ದಿನವೂ ಏಕಾದಶಿ ಆಚರಿಸಿದರು. ಮೊದಲನೆ ದಿನದ ಉಪವಾಸದ ಬಗ್ಗೆ ಗೋದಿ ದೋಶೆ ಮತ್ತು ಕೂವೆ ಹಿಟ್ಟಿನ ಕಾಕಂಬಿ ತಿಂದರು. ಮರುದಿನ ಹುರುಳಿ ಹಿಟ್ಟು ಮತ್ತು ಗೆಣಸಿನ ಪಾಯಸ ತಿಂದರು. ರಾತ್ರೆಯಲ್ಲಿ "ಪೂರ್ವಾಶಾಢೆ" ಸುರುವಾಗಿ ದಾಕ್ತಾರರಿಗೆ ಕರೆತರಿಸಿ ಅಜ್ಜಯ್ಯನವರ ಪ್ರಾಣ ಉಳಿಸುವುದಕ್ಕೆ ರೂ. ೧೨ ಖರ್ಚು ಮಾಡಿದೆನು. ಎರಡು ದಿವಸವೂ ಗಣೇಶ ಚತುರ್ಥಿ ಬಂದರೆ ಅಜ್ಜಯ್ಯನವರಂತೆ ಇರುವ ಜನರ ಅವಸ್ಥೆ ಏನಾಗುತ್ತದೋ?

ವೈದಿಕರು ಹೇಳುವಂತೆ ಕುಡಿದಾಪರಿಕ್ಕೆ ಸರಕಾರಿ ಕೆಲಸದ ಸಂಬಂಧ ನನಗೆ ಸಾಧ್ಯವಿಲ್ಲ. ಯಾವ ಆಚಾರ್ಯರ ಮಾತು ಗಣ್ಯಮಾಡದೆ ಶ್ರೀ ಒಳ್ಮದ ಮಾದ್ವಾಚಾರ್ಯರ ಪಂಚಾಂಗದಲ್ಲಿ ತೋರುವಂತೆ ನಾನು ಮಂಗಳವಾರ ದಿನವೇ ಶ್ರಾದ್ಧ ಮಾಡಬೇಕಾಗಿ ನಿರ್ಣಯಿಸಿದ್ದೇನೆ. ಇದಕ್ಕೆ ತಮಗೆ ಆಕ್ಷೇಪವಿದ್ದರೆ ಪ್ರತಿ ವರುಷವೂ ಅಗೋಸ್ತು ತಿಂಗಳ ಫಲಾನಾ ತಾರೀಕಿಗೇ ನಾನು ಶ್ರಾದ್ಧ ಮಾಡಬೇಕಾಗಿ ತಾವು ನನಗೆ ಈಗಲೇ ತಿಳಿಸಬೇಕು. ಇಲ್ಲವಾದರೆ ತಾಯಮ್ಮನವರ ಶ್ರಾದ್ಧ ಮಾಡುವುದಕ್ಕೆ ನನಗೆ ಸಾಧ್ಯವಾಗದು. ತಾವು ಮಂಗಳೂರಲ್ಲಿರುವ ಕಾಫಿ ಹೊಟೇಲಿನಲ್ಲಿ ಇಪ್ಪರು ತರುಣರಿಗೆ ಹಸ್ತೋದಕ ಕೊಟ್ಟು ತಾವೇ ಶ್ರಾದ್ಧ ಮಾಡುವದು ಅತ್ಯುತ್ತಮವು.

16–8–1914 ಇಂತಿ ಬಿನ್ನಹ.

ಪತ್ರವ್ಯವಹಾರ.

ಪ್ರಿಯರೇ,

ಕಳೆದ ಸಂಚಿಕೆಯಲ್ಲಿ ಜೆಜುವಿತರ ವಿಷಯ ಕೆಲವು ಅನ್ಯಾಯವಾದ ಮಾತುಗಳನ್ನು ಪ್ರಕಟಿಸಿದ್ದನ್ನು ನೋಡಿ ಬಹಳ ದುಃಖಪಟ್ಟು ನನ್ನ ಅಭಿಪ್ರಾಯ ಮಟ್ಟಿಗೆ ಈ ಕೆಳಗೆ ಉತ್ತರ ಬರೆದಿದ್ದೇನೆ.

ಕಳೆದ ಸಂಚಿಕೆಯಲ್ಲಿಯೇ ಅಲ್ಲದೆ ಇದರ ಮೊದಲು ಸಹ ಜೆಜುವಿತರ ನ ಗುರುಗಳ ವಿಷಯ ಕೆಲವು ಪತ್ರಗಳು ಪ್ರಕಟಿಸಲ್ಪಟ್ಟಿದ್ದವು. ತನ್ನ ಸ್ವಂತ ಹೆಸರನ್ನು ಹಾಕದೆ, ಅಡ್ಡ ಹೆಸರುಗಳನ್ನು ಕೊಟ್ಟು, ಬೇರೆಯವರಿಗೆ ಯಾರು ಬರದದ್ದು ಎಂತ ತಿಳಿಯದೆ ಕೆಲವರ ಮನಸನ್ನು ಈ ಮೂಲಕ ಕೆಡಿಸಿ ಬಿಡುತ್ತಿದೆ. ಈ ಸಂಚಿಕೆಯಲ್ಲಿ ಪ್ರಕಟಿಸಿದ ಪ್ರಕಾರ ಮೊದಲು ಅವರನ್ನು ವರ್ಣಿಸಿ ಮತ್ತು ದೂಷಿಸುವದು ನನಗೆ ಸರಿ ತೋರುವುದಿಲ್ಲ. ಜೆಜುವಿತರು ಇಲ್ಲಿಗೆ ಬಂದು ಅರಸು ಮಕ್ಕಳ ಹಾಗೆ ಜೀವಿಸುವದು ನಮಗೆ ಸರಿ ತೋರುವದಿಲ್ಲವೆಂತ ಬರದದ್ದು ಪೂರ್ಣ ಅನ್ಯಾಯ. ಯಾಕೆಂದರೆ ನಮ್ಮ ಮಂಗಳೂರಲ್ಲಿಯೇ ಇರುವ ಜೆಜುವಿತರು ಎಂತೆಂತಹ ದೊಡ್ಡ ಕುಟುಂಬದವರೂ ಅರಸು ಕುಟುಂಬದವರೂ ಆಗಿರುವರು. ಅಲ್ಲಿ ಅವರ ಸ್ವಂತ ವೃತ್ತಿಯನ್ನು ಬಿಟ್ಟು ಆಸ್ತಿಯನ್ನು ಸಹ ಜನರ ಪ್ರಯೋಜನಕ್ಕೆ ಕೊಟ್ಟು ಇಲ್ಲಿಯ ಜನರ ಬಗ್ಗೆ ಕಷ್ಟ ತೆಗೆದುಕೊಳ್ಳುವರಲ್ಲದೆ ಬೇರೆಯಾವ ತರದಿಂದಾದರೂ ಸಂಪಾದನೆ ಮಾಡಿ ತಮ್ಮ ಊರು ಮನೆಗೆ ಕಳುಹಿಸಿಕೊಡುತ್ತಾರೊ ಏನೆಂಬದು ಸರ್ವರಿಗೂ ಗೊತ್ತಿರಬೇಕು. ಇಲ್ಲಿಯೇ ನಮಗಾಗಿ ಸ್ಕೂಲು ಕೊಲೇಜುಗಳನ್ನು ಸ್ಥಾಪಿಸಿ, ವಿದ್ಯೆಯನ್ನು ಕೊಟ್ಟದ್ದರಿಂದ ಕೆಥೋಲಿಕರು ದೊಡ್ಡ ಹುದ್ದೆಗಳನ್ನು ಪಡದು ಕೀರ್ತಿವಂತರಾಗಿರುವರು ಮತ್ತು ಕಂಕನಾಡಿ ಆಸ್ಪತ್ರಿಯನ್ನು ಸ್ಥಾಪಿಸಿ ಅದರಲ್ಲಿ ರೋಗಿಗಳಿಗೋಸ್ಕರ ವರುಷಕ್ಕೆ ಬಹಳ ಖರ್ಚು ಮಾಡುವ ವಿಷಯವು ಸರ್ವರೂ ತಿಳಿದಿರಬೇಕು. ಅದಲ್ಲದೆ ಬಡವರಿಗೋಸ್ಕರ ಜೆಪ್ಪು ಕಬ್ಬಿಣದ ಮತ್ತು ಇತರ ಸಾಮಾಗ್ರಿಗಳ ಕಾರ್ಖಾನೆಯನ್ನು ನಡಿಸಿ ಜನರಿಗೆ ಬಹಳ ಸಹಾಯ ಮಾಡುತ್ತಿರುವರು. ನಾರಾವಿಯಲ್ಲಿ ಫಾದರ್ ಕೋರ್ಟೆಯವರು ಅರಸು ಮಕ್ಕಳ ಹಾಗೆ ಊಟ ಮಾಡದೆ ಅನ್ನ ಊಟ ಬಿಟ್ಟು ಮಾಡುವ ಪ್ರಯತ್ನವು ಎಲ್ಲರಿಗೂ ಗೊತ್ತುಂಟು. ಇಷ್ಟೆಲ್ಲಾ ಉಪಕಾರ ಮಾಡುವ ಜೆಜುವಿತರು ಬೇರೆಯವರು ಬಿಟ್ಟ ಆಸ್ತಿ ಅಲ್ಲದೆ ಅವರೇ ಸ್ವಂತ ಮನೆಯಿಂದ ಸಹ ಅನೇಕ ಹಣವನ್ನು ತಂದು ನಮಗಾಗಿ ಖರ್ಚು ಮಾಡುತ್ತಾರೋ ಯಾ ಅವರೇ ಇಟ್ಟುಕೊಳ್ಳುತ್ತಾರೋ—ಇದನ್ನು ತಿಳಿಸದೆ ಮತ್ತು ಅವರು ಯಾರ ಮನಸ್ಸನ್ನು ಸೆಳಗೊಂಡು ಅವರ ಆಸ್ತಿಯನ್ನು ಒಳಗೆ ಹಾಕಿ ಯಾರನ್ನು ಅಸಡ್ಡೆಯಿಂದ ನಡಿಸುತ್ತಾರೆಂಬದನ್ನು ತೋರಿಸದೆ--ಸುಮ್ಮನೆ ದೂಷಣೆಗಳನ್ನು ಬರೆದು ಪ್ರಯೋಜನವಿರದು. ಕೆಲವರು ತಮ್ಮ ಇಚ್ಛೆಯಿಂದ ಆಸ್ತಿಗಳನ್ನು ಬೇರೆ ಬೇರೆ ಉದ್ದೇಶಕ್ಕಾಗಿ ವ ಕಾರ್ಯ ನಡಿಸುವಗೋಸ್ಕರ ಬಿಟ್ಟದ್ದು ಹೌದು. ಜೆಜುವಿತರು ಆ ಉದ್ದೇಶಗಳನ್ನು ನಡಿಸುತ್ತಾರೊ ಯಾ ಸುಮ್ಮನೆ ಆಸ್ತಿಯನ್ನು ಮತ್ತು ಹುಟ್ಟುವಳಿಯನ್ನು ಹಾಳು ಮಾಡುತ್ತಾರೋ ಎಂದು ಸ್ಪಷ್ಟವಾಗಿ ತಿಳಿಸದೆ ದೂರಿ ಬರಿಯುವದು ಬರದಂಥವರಿಗೆ ಅಪಮಾನಕರವಾಗಿರುವುದು. ಇದರ ಮೊದಲಿನ ಸಂಚಿಕೆಯಲ್ಲಿ ಪ್ರಕಟವಾದ ಲೇಖನವನ್ನು ಬರದದ್ದು ಒಂದುವೇಳೆ ಕೆಥೋಲಿಕನಲ್ಲವಾದರೆ ಕೆಥೋಲಿಕನೇ ಬೇರೆಯವರಿಗೆ ದುರ್ಬುದ್ಧಿ ಕೊಟ್ಟು ತನ್ನ ಹೆಸರು ಹಾಕದೆ ಅಡ್ಡ ಹೆಸರು ಹಾಕಿ ಜೆಜುವಿತರ ಮೇಲೆ ಇದ್ದ ದ್ವೇಶವನ್ನು ಹೀಗಾದರೂ ಬೇರೆಯವರ ಮನಸ್ಸಿಗೆ ತೋರಿಸಿ ಪರಿಹಾರ ಮಾಡುತ್ತಿರುವನು. ಇದನ್ನು ಓದಿ ಸುಮ್ಮನೆ ಇದ್ದ ಕೆಥೋಲಿಕರೇ, ಈಗಾದರೂ ನನ್ನ ಜವಾಬು ಸರಿ ಅಲ್ಲವಾದರೆ ನೀವೇ ಸರಿ ಜವಾಬನ್ನು ಕೊಟ್ಟು ಕ್ರೈಸ್ತ ಮಾಹಿತಿ ಎಂಬ ಹೆಸರು ಕೊಟ್ಟವರ ಮನಸ್ಸನ್ನು ಸರಿಮಾಡಿರಿ ಎಂತ ಅನೇಕ ಸಾರಿ ಪ್ರಾರ್ಥಿಸುವ,

ಕಲ್ಯಾಣಪುರ, 21–8–14. ಲೊರೆನ್ಸ್ ಡಿ'ಸೋಜ.

ಉಪ್ಪಿನಂಗಡಿ ತಾಲೂಕು ಬೋರ್ಡಿನವರಿಗೆ ವಿಜ್ಞಾಪನೆ.

ಸ್ವಾಮಿಾ,

ಗ್ರಾಮ ರಸ್ತೆಗಳು ತೆರಿಯುವರೆ ಗವರ್ನಮೆಂಟಿನವರು ಹೆಚ್ಚು ದ್ರವ್ಯ ಸಹಾಯವನ್ನು ಕೊಟ್ಟಿರುವರಷ್ಟೆ. ತಾಲೂಕು ಬೋರ್ಡಿನವರ ಅಧಿಕಾರಕ್ಕೊಳಪಟ್ಟ ಉಪ್ಪಂಗಡಿ ತಾಲೂಕಿನ ಬಾಂತಬಳಪ್ಪಿನಿಂದ ಬೆಳ್ಳಾರೆಗೆ ಹೋಗುವ ರಸ್ತೆಯು ಹೆಚ್ಚು ಗಾಡಿಗಳು ಉಪಯೋಗವಾಗುವಂತಾದದಾಗ್ಯೂ ರಸ್ತೆಯು ಬಹಳ ಇಕ್ಕಟ್ಟಾಗಿಯೂ ಅಲ್ಲಲ್ಲಿ ಎತ್ತರ ತಗ್ಗು ದಿಣ್ಣೆಗಳಿದ್ದು ಒಮ್ಮೆಯೇ ಗಾಡಿಗಳು ಎದುರುಗೊಂಡಲ್ಲಿ ಅಜುಬಾಜು ಮಾಡಿ ಗಾಡಿಗಳು ತಿರುಗಿಸಲಿಕ್ಕೆ ಆಗಲೀ ಎಡೆ ಸಿಕ್ಕದೆ ಉತಾರು ಸ್ಥಳಗಳಲ್ಲಿ ಅವಗಢಕ್ಕೆ ಸಿಕ್ಕಿಕೊಂಡು ಹಲವು ಗಾಡಿಗಳು ಗಂಡಾಂತರಕ್ಕೊಳಪಟ್ಟು, ಎತ್ತುಗಳಿಗೆ ಸಹಾ ಜಖಂ ಸಂಭವಿಸಿ, ಅನೇಕರಿಗೆ ನಷ್ಟ ಸಂಭವಿಸುವದು ತಪ್ಪದೇ ತಪ್ಪದು. ಹೀಗಾಗಿ ಪ್ರಯಾಣಿಕರು ಎಡೆ ದಾರಿಯಲ್ಲಿ ಪಡುವ ಸಂಕಷ್ಟಗಳು ಹೇಳಿ ಪೂರೈಸದು. ಇಂಥಾ ಸಂಕಷ್ಟಗಳನ್ನು ನಿವಾರಿಸುವ ಬಗ್ಗೆ ತಾಲೂಕು ಬೋರ್ಡಿನ ಮೆಂಬರರು ಆ ರಸ್ತೆಯನ್ನು ಮೇಲ್ತನಿಕಿಯಿಂದ ಗಾಡಿಗಾರರೂ ಪ್ರಯಾಣಿಕರೂ ಗಂಡಾಂತರದಲ್ಲಿ ಸಿಕ್ಕಿ ಬೀಳದಂತೆ ಸದರಿ ರಸ್ತೆಯಲ್ಲಿ ಐದು ಮೈಲಿನ ಒಳಗಿನ ಪಾಶಿಲೆ ರಸ್ತೆಯನ್ನಾದರೂ ಸರಿಪಡಿಸುವಂತೆ ತಾಲೂಕು ಬೋರ್ಡಿನವರು ಮಾಡುತ್ತಿದ್ದರೆ ಉಪಕಾರವಾಗುತ್ತಿತ್ತು.

ಮದ್ರಾಸ್ ಸರಕಾರದವರು ಸಂಸ್ಥಾನದ ಗ್ರಾಮಗಳಲ್ಲೆಲ್ಲಾ ಶುದ್ಧವಾದ ಕುಡಿಯುವ ನೀರಿನ ಸರಬರಾಯಿ ಜನರಿಗೆ ದೊರಕುವಂತೆ ಬಾವಿಗಳನ್ನು ಆಯಾಯ ಕಡೆಗಳಲ್ಲಿ ತೋಡಿಸಲಿಕ್ಕೆ ಲೋಕಲ್ ಬೋರ್ಡುಗಳಿಗೆ ವಿಶೇಷವಾದ ದ್ರವ್ಯ ಸಹಾಯವನ್ನು ಕೊಟ್ಟಿರುವರಾಗಿ ಕೇಳುತ್ತೇವೆ. ನಮ್ಮ ಪುತ್ತೂರು ಟೌನಿನಲ್ಲಿ ಎಂತೂ ಹಲವು ಕಡೆಗಳಲ್ಲಿ ಬಾವಿ ತೋಡಿಸಿರುವರು. ಆದರೆ ಬೇಸಿಗೆಕಾಲದಲ್ಲಿ ನೀರಿಗಾಗಿ ಹೆಚ್ಚಿನ ಸಂಕಷ್ಟ ಪಡುತ್ತಿರುವ ದರ್ಬೆ ಟೋಲಗೇಟಿನ ಬಳಿಯಿರುವ ನಿವಾಸಿಕರಿಗೂ ಗಾಡಿಗಾರರಿಗೂ ಪ್ರಯಾಣಿಕರಿಗೂ ಬಾವಿಯು ಅಗತ್ಯವಿರುತ್ತದೆ. ಈ ವಿನಹ ಮಡಿಕೇರಿ ರಸ್ತೆಯ ೩ನೇ ಮೈಲ್ ೪-೫ನೇ ಫರ್ಲೋಂಗ್ ಮಧ್ಯಯಿರುವ ದರ್ಬೆ ಎಳಮುಡಿ ಎಂಬಲ್ಲಿ ಅಜುಬಾಜಿನ ಮನೆಮಾರುಗಳ ನಿವಾಸಿಕರಿಗೂ ಬಾವಿಯು ಅಗತ್ಯ. ಈ ರೀತಿ ಎರಡು ಬಾವಿಗಳನ್ನು ತೋಡಿಸಿ ನಿವಾಸಿಕರೂ ಪ್ರಯಾಣಿಕರೂ ಬೇಸಿಗೆ ಕಾಲದಲ್ಲಿ ನೀರಿಗಾಗಿ ಪಡುವ ಸಂಕಷ್ಟಗಳನ್ನು ನಿವಾರಿಸುವಂತೆ ತಾಲೂಕು ಬೋರ್ಡಿನವರು ತಕ್ಕ ನಿಗಾ ಕೊಡಲೆಂದು ಕೋರುತ್ತೇವೆ.

ಪುತ್ತೂರು. 20–8–14. ನಿವಾಸಿಕ.

ನೋಟೀಸು.

ಪ್ರತೀ ದಿನವೂ ಪ್ರಕಟವಾಗುವ ಯುದ್ಧವಾರ್ತೆಯ ಸಪ್ಲಿಮೆಂಟನ್ನು ವಿ. ಪಿ. ಮೂಲಕ ಕಳುಹಿಸಿ ಕೊಡಬೇಕೆಂತ ಅಪೇಕ್ಷಿಸಿ ನಮಗೆ ಪ್ರತೀ ನಿತ್ಯವೂ ಪರವೂರುಗಳಿಂದ ಓರ್ಡರುಗಳು ಬರುತ್ತಲಿವೆ. ವಿ. ಪಿ. ಮೂಲಕ ಕಳುಹಿಸಲು ನಮಗೆ ಅನುಕೂಲವಿಲ್ಲದಿರುವುದರಿಂದ ಅಪೇಕ್ಷಕರು ಒಂದು ತಿಂಗಳ ಚಂದಾ ರೂ. 1–0–0ನ್ನು ಮನಿಯಾರ್ಡರು ಯಾ ಟಪ್ಪಾಲ ಚೀಟು ಮೂಲಕ ಕಳುಹಿಸಿಕೊಟ್ಟಲ್ಲಿ ಸಪ್ಲಿಮೆಂಟನ್ನು ಪ್ರತೀ ನಿತ್ಯವೂ ಕಳುಹಿಸುವೆವು.

ಮೆನೇಜರ್, ಸ್ವದೇಶಾಭಿಮಾನಿ.

ಯುದ್ಧ ಸಮಾಚಾರವು.

ತಾ. 22ನೇ ಅಗೋಸ್ತು

ಬೆಲ್ಜಿಯುವ್. ಲೀಜು ಕೋಟೆಗಳು ಬಿದ್ದು ಹೋಗಿವೆ ಎಂಬ ವರ್ತಮಾನವಿತ್ತು. ಆದರೆ ನಂತರದ ಆಧಾರವುಳ್ಳ ವರ್ತಮಾನದಿಂದ ಕೋಟೆಗಳು ಸುರಕ್ಷಿತವಾಗಿದೆ ಎಂತ ತಿಳಿಯುತ್ತೇವೆ.

ವ್ಯೂಜ್ ನದಿಯನ್ನು ಡಿನೆಂಟ್ ಎಂಬಲ್ಲಿ ದಾಟಲು ಜರ್ಮನರು ಮಾಡಿದ ಪ್ರಯತ್ನದಲ್ಲಿ ಜರ್ಮನರು ಫ್ರೆಂಚರಿಂದ ಇನ್ನೊಮ್ಮೆ ಓಡಿಸಲ್ಪಟ್ಟರು ಈ ಸರ್ತಿ ಸಹ ಜರ್ಮನರಿಗೆ ವಿಶೇಷ ನಷ್ಟವುಂಟಾಗಿರುತ್ತದೆ

ಜರ್ಮನ ಆಫೀಸರರೊಬ್ಬರು ನಡಿಸುತ್ತಿದ್ದ ಆಕಾಶನಾವೆಯನ್ನು ಬೆಲ್ಜಿಯನರು ಕೆಳಗಿಳಿಸಿ ಹಿಡಿದರು. ಅದರಲ್ಲಿರುವ ಆಫೀಸರನು ತನ್ನ ಕೋವಿಯನ್ನು ಬೆಲ್ಜಿಯನರ ಮೇಲೆ ಹಾರಿಸಲು ಪ್ರಯತ್ನಿಸಿದನು. ಈ ಆಫೀಸರನ ಹತ್ತಿರ ಇದ್ದ ಜರ್ಮನರ ಸೇನೆಯ ಮಾಹಿತಿಯು ಬೆಲ್ಜಿಯನರಿಗೆ ದೊರಕಿರುತ್ತದೆ

ಜರ್ಮನರ ಸೇನೆಗೆ ಫ್ರಾನ್ಸಿಗೆ ಸರಾಗವಾಗಿ ಹೋಗಲಿಕ್ಕೆ ಹಾದಿಯನ್ನು ಇನ್ನಾದರೂ ಬಿಟ್ಟುಕೊಡಬಹುದೆಂಬುದಾಗಿ ಬೆಲ್ಜಿಯನರನ್ನು ಜರ್ಮನರು ವಿಜ್ಞಾಪಿಸಿಕೊಳ್ಳುತ್ತಿರುವರು. ಬೆಲ್ಜಿಯನರು ತಮ್ಮ ಅಪೇಕ್ಷೆಯಂತೆ ನಡದ್ದಲ್ಲಿ ಈ ತನಕ ಬೆಲ್ಜಿಯನರು ತಮ್ಮ ಕಡೆ ತೋರಿದ ವಿರೋಧಭಾವವನ್ನು ತಾವು ಮನಸ್ಸಿಗೆ ತಾರೆವು ಮತ್ತು ಯುದ್ಧದ ಅಂತ್ಯದಲ್ಲಿ ಬೆಲ್ಜಿಯನರ ರಾಜ್ಯವು ಬೆಲ್ಜಿಯನರಿಗೇನೇ ಸುರಕ್ಷಿತವಾಗಿ ಉಳಿಯುವಂತೆ ಮಾಡುವೆವು ಎಂದು ಜರ್ಮನರು ಬೆಲ್ಜಿಯನರನ್ನು ವಿಜ್ಞಾಪಿಸಿಕೊಂಡಿದ್ದರು. ಜರ್ಮನರ ಈ ವಿಜ್ಞಾಪನೆಯನ್ನು ಬೆಲ್ಜಿಯನರು ತುಚ್ಛೀಕಾರದಿಂದ ತಿರಸ್ಕರಿಸಿರುತ್ತಾರೆ. ಯುರೋಪಿನ ಇತರ ಕೆಲವು ದೇಶಗಳೊಡನೆ ಜರ್ಮನಿಯು ಇಂಥಾ ಪ್ರಯತ್ನಗಳನ್ನು ನಡಿಸಿತೆಂದೂ ಈ ಪ್ರಯತ್ನಗಳು ಬಿದ್ದು ಹೋದವೆಂದೂ ತಿಳಿದುಬರುತ್ತದೆ ಇದರಿಂದ ಜರ್ಮನಿಯು ಎಂಥಾ ಅಡಚಣಿಯಲ್ಲಿರುವುದೆಂಬುದು ವ್ಯಕ್ತವಾಗುವುದು.

ಲಂಡನಿನಲ್ಲಿರುವ ಯುದ್ಧ ಸಮಾಚಾರ ಸಂಗ್ರಹದ ಆಫೀಸಿನವರು ಈ ವರ್ತಮಾನಗಳನ್ನು ಪ್ರಕಟಗೊಳಿಸಿರುತ್ತಾರೆ.—

ಆಲ್‌ಸೆಸಿನಲ್ಲಿ ಫ್ರೆಂಚರು ಇನ್ನೂ ಮುಂದರಿಸುತ್ತಿರುವರು. ಜರ್ಮನರು ಹೀಗೆ ಮುಂದರಿಸಿ ಬರುವ ಫ್ರೆಂಚರ ಮುಂದೆ ಉತ್ತರಕ್ಕೂ ಪೂರ್ವಕ್ಕೂ ತಲೆತಪ್ಪಿಸಿಕೊಂಡು ಓಡಿ ಹೋಗುತ್ತಿರುವರು. ಫ್ರೆಂಚರಿಗೆ ಜರ್ಮನರ ಯುದ್ಧಸಾಮಾಗ್ರಿಗಳು ಬಹಳ ವಿಶೇಷವಾಗಿ ದೊರಕಿವೆ. ಜರ್ಮನರು ಆಲ್‌ಸೇಸ್ ಪ್ರಾಂತ್ಯಗಳ ಕೆಲವು ಕಡೆಗಳಲ್ಲಿ ತುಫಾಕಿಗಳ ಮೂಲಕ ಭದ್ರಪಡಿಸಿರುವ ಸ್ಥಳಗಳನ್ನು ಫ್ರೆಂಚರ ಕುದುರೆಪಡೆಯು ನಾಶಪಡಿಸಿ ಅವುಗಳನ್ನು ಸ್ವಾಧೀನ ಮಾಡುತ್ತಲಿದೆ. ಫ್ರೆಂಚರ ತೋಪುಗಳಿಂದ ವೈರಿಗಳಲ್ಲಿ ಆಗುವ ಹಾವಳಿಯು ಬಹಳ ವಿಶೇಷವಾದದ್ದೆಂದು ತಿಳಿದುಬರುತ್ತದೆ.

ಫ್ರೆಂಚರ ಧ್ವಜಗಳನ್ನು ಧರಿಸಿಕೊಂಡು ಫ್ರೆಂಚರ ಆಕಾಶನಾವೆಯೆಂದು ನಟಿಸುತ್ತಿದ್ದ ಜರ್ಮನರ ಆಕಾಶನಾವೆಯು ಲುನೆವಿಲ್ಲೆ ಎಂಬಲ್ಲಿ ಸಿಡಿಮದ್ದಿನ ತೋಟೆಗಳನ್ನು ಹಾಕಿತು. ಆದರೆ ಇದರಿಂದ ವಿಶೇಷ ಹಾನಿಯು ಉಂಟಾಗಲಿಲ್ಲ.

ರಣರಂಗದಲ್ಲಿ ಬ್ರಿಟಿಷ್ ಸೇನೆಯ ಆರೈಕೆಗಾಗಿ ಭಾರತೀಯ ವೈದ್ಯ ವೃತ್ತಿಯವರ ಒಂದು ಸೇನಾಂಗವನ್ನು ಏರ್ಪಡಿಸಿ ಯುದ್ಧದಲ್ಲಿ ಘಾಯಪಡದವರ ಶುಶ್ರೂಷೆಯನ್ನು ಮಾಡಬಹುದೆಂಬ ಸೂಚನೆಯನ್ನು ಸ್ಟೇಟ್ ಸೆಕ್ರಿಟರಿಗಳೆಂದ ಶ್ರೀ ಪ್ರಭುಗಳವರು ದಯಪಾಲಿಸಿರುವರು.

ರುಶ್ಯ. ರುಶ್ಯಯನರ ಸೇನೆ ಸನ್ನಾಹಗಳೆಲ್ಲವು ಸಿದ್ಧವಾಗಿ ಕಳದ 14ನೇ ತಾರೀಕಿನಿಂದ ಶತ್ರುಗಳು ಇನ್ನು ಮುಂದರಿಸಿ ಬಾರದಂತೆ ಕಾದಾಡುತ್ತಿರುವರು. ರುಶ್ಯಯನರು ರುಶ್ಯ ದೇಶವನ್ನು ಒಳನುಗ್ಗಲು ಬರುತ್ತಿದ್ದ ಒಸ್ಟ್ರಿಯಾದ ಕುದುರೆಪಡೆಯನ್ನು ಸೋಲಿಸಿರುತ್ತಾರೆ.

ಬಾಲ್ಕಾನ್ ಸಂಸ್ಥಾನಗಳು. ಒಲ್ಗೇರಿಯವು ಬೆಲ್ಜಿಯನರೊಂದಿಗೆ ತನ್ನ ಸಹಾನುಭೂತಿಯನ್ನು ತೋರಿಸುತ್ತಿರುವುದು. ಬೆಲ್ಜಿಯನರ ಸೇನೆಯನ್ನು ಸೇರಲು ಅಪೇಕ್ಷಿಸುವ ಒಲ್ಗೇರಿಯನರು ಬೆಲ್ಜಿಯನರನ್ನು ಸೇರಬಹುದೆಂದು ಅಪ್ಪಣೆ ಕೊಟ್ಟಿರುವರು.

ತಾ 23ನೇ ಅಗೋಸ್ತು

ಬೆಲ್ಜಿಯುವ್ ಲೀಜು ಮತ್ತು ನಾಮೂರು ಕೋಟೆಗಳ ನಡುವೆ ವ್ಯೂಜ ನದಿಯನ್ನು ಜರ್ಮನರ ದೊಡ್ಡ ಸೇನೆಯು ದಾಟುತ್ತಲಿದೆ.

ಡೀಸ್ಟ್ ಪಟ್ಟಣಕ್ಕೆ ಜರ್ಮನರು ಪುನಹ ಮುತ್ತಿಗೆ ಹಾಕಿರುವರು ಇಲ್ಲಿರುವ ರೈಲ್ವೆ ಸ್ಟೇಶನುಗಳನ್ನು ಸುಲುಕೊಳ್ಳುತ್ತ ಪಟ್ಟಣವನ್ನು ತೋಪುಗಳಿಂದ ಹಾರಿಸುವ ಪ್ರಯತ್ನ ನಡಿಸುತ್ತಿದ್ದಾರೆ ಪಟ್ಟಣ ನಿವಾಸಿಕರು ಹೆದರಿ ಓಡಿಹೋಗುತ್ತಿರುವರು.

ಲೀಜುಕೋಟೆಯ ಸಮೀಪವಿರುವ ಟಿರ್ಲಮೊಂಟ್‌ನ್ನು ಮುತ್ತಿ ಅವನ್ನು ಸಹ ನಾಶಗೊಳಿಸುವ ಪ್ರಯತ್ನದಲ್ಲಿದ್ದಾಗ ಬೆಲ್ಜಿಯನರು ಶತ್ರುಗಳ ಈ ಪ್ರಯತ್ನವನ್ನು ಕಂಡು ಅವರನ್ನು ಅಲ್ಲಿಂದ ಓಡಿಸಿರುತ್ತಾರೆ.

ಯುದ್ಧದ ಸ್ಥಿತಿಯನ್ನು ವಿವರಿಸಿ ಬೆಲ್ಜಿಯನರು ಒಂದು ಪ್ರಕಟಣೆಯನ್ನು ಪ್ರಜಾ ಜನರ ತಿಳುವಳಿಕೆ ಒಗ್ಗೆ ಪ್ರಸಿದ್ಧಗೊಳಿಸಿರುತ್ತಾರೆ —ಬಹಳ ನಷ್ಟಹೊಂದಿದ ಮೇಲ ಜರ್ಮನರ ಸೇನೆಯು ಒಲವಾರ್ಶ್ವವು ವ್ಯೂಜ್ ನದಿಯನ್ನು ದಾಟಿ ಬೆಲ್ಜಿಯನ್ ಮತ್ತು ಫ್ರೆಂಚರ ಒಟ್ಟು ಕೂಡಿದ ಸೇನೆಯು ಇರುವ ಸ್ಥಳದ ವರೆಗೆ ನದಿಯ ಎರಡು ದಡಗಳನ್ನೂ ಆಕ್ರಮಿಸಿಕೊಂಡಿರುವುದು. ಜರ್ಮನರು ತಮ್ಮ ಕುದುರೆ ಪಡೆಯನ್ನು ಸಣ್ಣ ಸಣ್ಣ ಹಿಂಡುಗಳಲ್ಲಿ ಮುಂದೆ ಕಳುಹಿಸಿದರು. ಆದರೆ ಈ ಅಶ್ವ ಪಡೆಯು ಬೆಲ್ಜಿಯನ್ ಮತ್ತು ಫ್ರೆಂಚ ಸೇನಿಕರಿಂದ ಹಿಂದಕ್ಕೆ ಓಡಿಸಲ್ಪಟ್ಟಿತು. ಆದರೆ ಉತ್ತರ ಭಾಗದಲ್ಲಿ ಇವರನ್ನು ಇದಿರಿಸುವವರು ಕಡಮೆಯಾದ್ದರಿಂದ ಅಲ್ಲಿ ವ್ಯೂಜ್ ನದಿಯನ್ನು ದಾಟಿರುತ್ತಾರೆ

ಫ್ರೆಂಚರ ಸೇನೆಯು ಶೀಘ್ರವಾಗಿ ಮುಂದುವರಿಯುತ್ತಿರುವುದು. ಮೆಟ್ಜ ಎಂಬ ಜರ್ಮನ ಕೋಟೆಗೆ ಹೋಗುವ ರೈಲ್ವೆ ಮಾರ್ಗದಲ್ಲಿರುವ ಮೋರಜಿಂಗನ್ ಪಟ್ಟಣವನ್ನು ಹಿಡಿದಿರುತ್ತಾರೆ ಶತ್ರುಗಳನ್ನು ಸನಿನುಗಳಿಂದ ತಿವಿದು ಬಿಟ್ಟು ಓಡಿಸಿ ಮುಲ್ ಸೇನನ್ನು ಸ್ವಾಧೀನ ತಕ್ಕೊಂಡಿರುವರು ಗ್ಯುಬ್‌ವಿಲ್ಲರ್ ಎಂಬ ಇನ್ನೊಂದು ಪಟ್ಟಣವನ್ನು ಸಹ ಫ್ರೆಂಚರು ಹಿಡಿದಿರುತ್ತಾರೆ.

ಹಿಂದೂಸ್ಥಾನ. ಇಲ್ಲಿ ಏರ್ಪಡಿಸೋಣಾದ ಯುದ್ಧ ಫಂಡಿಗೆ ಮೂರು ಲಕ್ಷ ಅರುವತ್ತು ಸಾವಿರ ರೂಪಾಯಿಗಳ ಚಂದಾ ಹಣವು ಈ ತನಕ ಕೂಡಿರುತ್ತದೆ.

ಬ್ರಿಟಿಷ ಮತ್ತು ಶತ್ರುಗಳ ಪ್ರಜೆಗಳು ಕೂಡಿ ಪಾಲಿನಲ್ಲಿ ನಡಿಸುವ ಕಂಪೆನಿಗಳಲ್ಲಿ ಶತ್ರುಗಳ ಪ್ರಜೆಗಳಿಗೆ ಇನ್ನು ಮುಂದೆ ಪಾಲಿರಕೂಡದು ಮತ್ತು ಈ ಕಂಪೆನಿಗಳನ್ನು ಬ್ರಿಟಿಷ ಪ್ರಜೆಗಳೇ ನಡಿಸತಕ್ಕದಾಗಿದೆ ಎಂದು ತಿಳಿಸಿರುವರು. ಪೂರ್ಣ ಜರ್ಮನ್ ಅಥವಾ ಒಸ್ಟ್ರಿಯನ್ ಪ್ರಜೆಗಳು ವ್ಯಾಪಾರ ನಡಿಸಬೇಕಾದರೆ ಇವರು ರೊಯಲ್ ಲ್ಯಾಸನ್ಸನ್ನು ಪಡಿಯಬೇಕಾಗಿರುವುದು.

ಕೆಥೊಲಿಕ ಕ್ರೈಸ್ತ ಮತಸ್ಥರ ಜಗದ್ಗುರುಗಳಾದ ಪೋಪ್ ಸಾಹೇಬರ ಮರಣವು.

ಪೋಪ ಜಗದ್ಗುರುಗಳವರು ಇದೇ ತಿಂಗಳ ತಾ. 20ನೇ ಬೆಳಿಗ್ಗೆ ಘಂಟೆ 1ಕ್ಕೆ ಮೃತಪಟ್ಟರು.

ಯುರೋಪ ಖಂಡದಲ್ಲಿ ಯುದ್ಧವು ಸಂಭವಿಸಿರುವುದನ್ನು ಕೇಳಿ ಪೋಪ ಸಾಹೇಬರ ಅಸ್ವಸ್ಥವು ವಿಶೇಷವಾಗಿ ಮೃತಪಟ್ಟರೆಂಬುದಾಗಿ ತಿಳದುಬರುತ್ತದೆ. ಇವರು ಪ್ರಾಣವನ್ನು ಬಿಡುವ ಮೊದಲು **ಈ ರೀತಿ ಹೇಳಿದರು**—ನನ್ನ ಅವಸಾನವು ಸಮೀಪಿಸಿರುವುದು. ಈ ಯುದ್ಧಪ್ರಾಪ್ತಿಯಿಂದ ಯುರೋಪ ಖಂಡಕ್ಕೆ ಸಂಭವಿಸಿರುವ ದುರದೃಷ್ಟವನ್ನು ದಯಾಮಯನಾದ ಪರಮೇಶ್ವರನು ನಾನು ನೋಡದಂತೆ ಮಾಡಿದನು

ಯುದ್ಧವು ನಡೆಯದಂತೆ ಪೋಪ ಸಾಹೇಬರು ಬಹಳವಾಗಿ ಪ್ರಯತ್ನಿಸಿದ್ದರು. ತನ್ನ ಪ್ರಯತ್ನವು ನೆರವೇರದೆ ಹೋದ್ದರಿಂದ ಇವರ ಸಂಕಷ್ಟದ ಸ್ಥಿತಿಯು ವಿಪರೀತವಾಗಿ ಹೋಯಿತು.

ಕಾರ್ಡಿನಲ್ ವೊಲ್ಫೆ ಎಂಬವರು ಪೋಪರ ಅಧಿಕಾರವನ್ನು ಸದ್ಯಕ್ಕೆ ನಡಿಸುವರು

ಒರುವ ತಿಂಗಳ ತಾ ೩ಕ್ಕೆ ಹೊಸ ಪೋಪ ಸಾಹೇಬರು ಆರಿಸಲ್ಪಡುವರು.

ತಾ 24ನೇ ಅಗೋಸ್ತು.

ಬೆಲ್ಜಿಯುವ್. ಜರ್ಮನರು ಬೆಲ್ಜಿಯಮಿನ ಬ್ರುಸೆಲ್ಸನ್ನು ಕೈವಶಮಾಡಿಕೊಂಡಿರುವರು ಲೀಜ್ ಮತ್ತು ನಾಮೂರು ಕೋಟೆಗಳಿಂದ ಬ್ರುಸೆಲ್ಸ್ ಪಟ್ಟಣದ ಸುತ್ತಲೂ ಎಂಟ್‌ವರ್ಪ್ ಪಟ್ಟಣದ ವರೆಗೆ ಫ್ರೆಂಚರ ಮತ್ತು ಬೆಲ್ಜನರ ಸೇನೆಗಳ ವ್ಯೂಹವನ್ನು ರಚಿಸಿ ಜರ್ಮನರನ್ನು ಈ ವ್ಯೂಹದ ಒಳಗೆ ಒರುವ ಹಾಗೆ ಮಾಡಿ ನಂತರ ಇವರನ್ನು ಕಾದಾಡುವ ಯುದ್ಧ ಸಾಧನೆಯ ಒಗ್ಗೆ ಬೆಲ್ಜನರು ಬ್ರುಸೆಲ್ಸ್ ಪಟ್ಟಣವನ್ನು ಶತ್ರುಗಳಿಗೆ ಅವರನ್ನು ಎದುರಾಡದೆ ಬಿಟ್ಟು ಕೊಟ್ಟಿರುವರೆಂಬದಾಗಿ ತೋರುತ್ತದೆ. ಆದ್ದರಿಂದ ಬ್ರುಸೆಲ್ಸ್ ಪಟ್ಟಣವು ಜರ್ಮನರ ಕೈವಶ ಸೇರಿದ್ದರಿಂದ ಬೆಲ್ಜನರು ಪರಾಜಯ ಹೊಂದಿದರೆಂತ ಹೇಳಲು ಆಸ್ಪದವಿಲ್ಲ.

ಆರಿಸ್‌ಕೊಟ್ ಎಂಬಲ್ಲಿ ಶನಿವಾರ ದೊಡ್ಡ ಕದನವಾಯಿತು ಜರ್ಮನರ ಕಾಲಾಳು ಸೇನೆಯು ಫಿರಂಗಿಗಳ ಸಹಿತ ಬೆಲ್ಜನರ ಮೇಲೆ ಬಿತ್ತು ಬೆಲ್ಜನರ ಸೇನೆಯು ಜರ್ಮನರ ಸೇನೆಗಿಂತ ೧೦ ಪಾಲಷ್ಟು ಸಣ್ಣದಾಗಿದ್ದರೂ ಆಸುರರಂತೆ ಶತ್ರುಗಳ ಸೇನೆಯೊಡನೆ ಕಾದಾಡಿತು. ಲೀಜಿನಲ್ಲಿದ್ದ ಬೆಲ್ಜನರ ಎರಡು ರೆಜಿಮೆಂಟುಗಳು ಆಶ್ಚರ್ಯ ರೀತಿಯಲ್ಲಿ ಕಾದಾಡಿತು. ಬೆಲ್ಜನರು ಲೊವೈನ್ ಎಂಬಲ್ಲಿಗೆ ಹಿಂದೆ ಸರಿದರು. ಬೆಲ್ಜಿಯನ್ ಸೇನೆಯ ಮೆಜರ್ ಗಿಲ್ಸನರು ಘಾಯವೊಡೆದಿದ್ದರೂ ಮುಖ್ಯ ಸೇನೆಗೆ ಸೇರಲು ೨೮೦ ಮಂದಿಯೊಡನೆ ಹಿಂದರಿದರು.

ಬೆಲ್ಜನರ ಸೇನೆಯು ಈಗ ಎಂಟವರ್ಪಿಗೆ ಸುರಕ್ಷಿತವಾಗಿ ತಲಪಿ ಫ್ರೆಂಚ ಸೇನೆಗೆ ಸೇರಲು ಸಿದ್ಧವಾಗಿರುವುದು. ಜರ್ಮನರ ಬಹಳ ಬಲವುಳ್ಳ ಸೇನೆಯು ಬ್ರುಸೆಲ್ಸಿಗೆ ಮುಂದರಿಯುತ್ತಲಿದೆ.

ಫ್ರಾನ್ಸ್. ಆಲ್‌ಸೆಸಿನಲ್ಲಿ ಮುಲ್ಹೊಸೆನ್ ಮತ್ತು ಆಲ್ಟಿಕರ್ಚಿನಲ್ಲಿ ಫ್ರೆಂಚರಿಗೆ ಮಹಾ ಜಯ ಉಂಟಾಗಿರುವುದು. ಶತ್ರುಗಳ ೨೪ ಪಿರಂಗಿಗಳನ್ನು ಫ್ರೆಂಚರು ಹಿಡಿದಿರುವರು. ಜರ್ಮನರು ರೈನ್ ನದಿಯಕಡೆ ಸರಿಯುತ್ತಿದ್ದಾರೆ.

ಆಸ್ಟ್ರಿಯ. ಸಬಾಚಿನಲ್ಲಿ ಸರ್ವಿಯರೊಡನೆ ಆದ ಕದನದಲ್ಲಿ ಆಸ್ಟ್ರಿಯದಲ್ಲಿ ಗಾಯವೊಡೆದವರನ್ನು ನಿಸಿ ಎಂಬಲ್ಲಿಗೆ ತರುತ್ತಲಿದ್ದಾರೆ ಸಬಾಚಿನಲ್ಲಿ ಮೂರು ದಿವಸಗಳ ವರೆಗೆ ಯುದ್ಧ ನಡೆಯಿತು. ಆಸ್ಟ್ರೀಯರ ಸೇನೆಯು ೧೦೦,೦೦೦ ಮಂದಿಯ ಬಲವುಳ್ಳದ್ದಾಗಿತ್ತು. ಸರ್ವಿಯರು ಇನ್ನೂ ಶತ್ರುಗಳನ್ನು ಹಿಂದಟ್ಟುತ್ತಿದ್ದಾರೆ. ಈ ಯುದ್ಧದಲ್ಲಿ ಕೆಲವು ಕೋವಿಗಳು ಅನೇಕ ಕುದುರೆಗಳೂ ನಾಶವಾಗಿರುವವು. [illegible] ಸಿಯುತ್ತಿದ್ದಾರೆ.

ರುಷ್ಯ. ರುಷ್ಯರು ಮೂರು ದಿವಸಗಳ ವರೆಗೆ ಕಾದಾಡಿ ಪೂರ್ವ ಪ್ರಶ್ಯದಲ್ಲಿ ೨೦ ಮೈಲು ಮುಂದರಿಸಿ ವೈಸೆಕ್ ಎಂಬ ಪಟ್ಟಣವನ್ನು ಹಿಡಿದಿರುವರು.

ಕ್ರಾಸ್‌ನಿಕ್ ಎಂಬಲ್ಲಿ ರುಷ್ಯರು ಆಸ್ಟ್ರೀಯಾನರ ಕಾಲಾಳು ಸೇನೆಯೊಡನೆ ಕಾದಾಡಿ ೬ ಹುದ್ದೆದಾರರನ್ನೂ ೨೫೦ ಸೈನೀಕರನ್ನೂ ಹಿಡಿದಿರುವರು. ಆಸ್ಟ್ರೀಯಾನರು ಓಡಿಹೋಗಿರುತ್ತಾರೆ. ಪೂರ್ವ ಪ್ರಶ್ಶಿಯದ ಸರಹದ್ದಿನಲ್ಲಿ ಯುದ್ಧವು ನಡೆಯುತ್ತಲಿದೆ

ಹೊಲ್ಲೆಂಡ್. ಡಚ್ಚ ಸರಕಾರದವರು ತಮ್ಮ ನೌಕಾವಳಿಯನ್ನು ಸಿದ್ಧಗೊಳಿಸುತ್ತಿರುವರು.

ಊಸ್ಟಬರ್ಗ್ಸ್ ಎಂಬಲ್ಲಿ ಹಾರಾಡುತ್ತಿದ್ದ ಒಂದು ಜರ್ಮನಿ ಯುದ್ಧನಾವೆಯು ಗುಂಡಿನಿಂದ ಹೊಡೆಯಲ್ಪಟ್ಟು ಕೆಳಗೆ ಇಳಿಸಲ್ಪಟ್ಟಿರುವುದು

ಜಾಪಾನ್. ಜಾಪಾನಿಯರು ಜರ್ಮನಿಗೆ ಕೊಟ್ಟ ಕಂಡಿತವಾಚೆಗೆ ಜರ್ಮನಿಯು ಇನ್ನೂ ಉತ್ತರಕೊಡಲಿಲ್ಲ. ಕಳೆದ ಆದಿತ್ಯವಾರ ೩ ಗಂಟೆಗೆ ಈ ಕಂಡಿತವಾಚೆಯ ಅವಧಿಯು ಮುಗಿದಿರುವುದು.

ಅಂಗ್ಲಾಳ. ಕಿಚನರ್ ಪ್ರಭುಗಳ ಹೊಸ ಸೇನೆಗೆ ಈ ತನಕ ೭೦,೦೦೦ ಮಂದಿ ಸೇರಿರುವರು.

ಜರ್ಮನಿಯಲ್ಲಿದ್ದ ಜಪಾನೀಯ ವಿದ್ಯಾರ್ಥಿಗಳಲ್ಲಿ ೧೦೦ ಮಂದಿ ಲಂಡನಿಗೆ ಬಂದು ತಲಪಿರುವರು. ಜರ್ಮನರು ಅಲ್ಲಿರುವ ರುಷ್ಯ ಮತ್ತು ಫ್ರೆಂಚ ಜನರನ್ನು ಬಹಳ ಪೀಡಿಸುತ್ತಿದ್ದಾರೆಂದೂ ಜಪಾನರು ತಮಗೆ ಶತ್ರುಗಳಾದ ಪಕ್ಷದಲ್ಲಿ ಅವರಿಗೂ ಅದೇ ಅವಸ್ಥೆಯು ಬಂದೀತೆಂತ ಹೆದರಿಸುತ್ತಿದ್ದಾರೆಂದೂ ಇವರು ಹೇಳುತ್ತಿರುವರು.

ಹಿಂದೂಸ್ಥಾನ ಬಂಗಾಳ ಅಖಾತದಲ್ಲಿ ಶತ್ರುಗಳ ನಾವೆಗಳು ಇಲ್ಲವೆಂದು ಪ್ರಕಟವಾಗಿದೆ

ಹಿಂದೂಸ್ಥಾನದ ರಿಲೀಫ್ ಫಂಡಿಗೆ ೪೧ ಲಕ್ಷ ರೂಪಾಯಿಗಳು ಕೂಡಿರುವುದು

~~~~~

ತಾ. 25ನೇ ಆಗೋಸ್ತು.

ಬೆಲ್ಜಮ್—ಬೆಲ್ಜಿಯನರಿಂದ ಸೆರೆ ಹಿಡಿಯಲ್ಪಟ್ಟ ೧೭ ಜರ್ಮನ ಆಫೀಸರರೂ ೪೫೦ ಸೇನಿಕರೂ ಬ್ರುಗೆಸಿನಿಂದ ಪಹರೆ ಸಮೇತ ಡನ್‌ಕರ್ಕ್ ಎಂಬಲ್ಲಿಗೆ ಕಳುಹಿಸಲ್ಪಟ್ಟಿರುವರು! ಬಹುಶ್ಯಾ ಇವರು ಇಂಗ್ಲಾಂಡಿಗೆ ಸಾಗಿಸಲ್ಪಡ ಸಾಕೆಂತ ತೋರುತ್ತದೆ

ಜರ್ಮನರು ನಾಮೂರು ಕೋಟೆಗೆ ಮುತ್ತಿಗೆ ಹಾಕಲು ಪ್ರಾರಂಭಿಸಿದ್ದಾರೆ. ಶತ್ರುಗಳ ಸೇನೆಯು ನಾಮೂರು ಕೋಟೆಯ ಫಿರಂಗಿಗಳಿಟ್ಟ ಸ್ಥಳದಿಂದ ಹೊರಗೆ ಮ್ಯೂಜು ನದಿಯನ್ನು ದಾಟುತ್ತಲಿದೆ ನಾಮೂರು ಕೋಟೆಗೆ ತೋಪುಗಳನ್ನು ಹಾರಿಸಲು ಪ್ರಾರಂಭಿಸಲ್ಪಟ್ಟಿದೆಂತ ಪ್ರಕಟವಾಗಿದೆ

ಜರ್ಮನರು ಎಲೋಸ್ಟ್ ಮತ್ತು ವೆಟ್ಟರ್ನ್ ಎಂಬ ಪಟ್ಟಣಗಳನ್ನು ವಶಮಾಡಿಕೊಂಡಿದ್ದಾರೆ. ಘೆಂಟ್ ಎಂಬುದನ್ನೂ ಬೇಗನೇ ಸೇರಿಕೊಳ್ಳಲಿಕ್ಕಿರುವುದರಿಂದ ಅಲ್ಲಿಯ ನಿವಾಸಿಕರು ಒಸ್ಟೆಂಡ್ ಎಂಬಲ್ಲಿಗೆ ಓಡಿಹೋಗುತ್ತಲಿದ್ದಾರೆ ಶತ್ರುಗಳು ಘೆಂಟನ್ನೂ ಒಸ್ಟೆಂಡನ್ನೂ ವಶಮಾಡಿಕೊಂಡರೆಂಬ ವಾರ್ತೆ ಬಂದದೆ

ಜರ್ಮನರು ಬ್ರುಸೆಲ್ಸನ್ನು ವಶಮಾಡಿಕೊಂಡನಂತರ ಪಟ್ಟಣದ ಮೇಲೆ ೮ ಮಿಲಿಯ ಪವನುಗಳ ಯುದ್ಧ ತೆರಿಗೆಯನ್ನು ಹೊರಿಸಿರುವರೆಂತ ಲಂಡನಿನ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿದ್ದಾರೆ.

ಜರ್ಮನರು ಲೀಜ್ ಪ್ರೊವಿನ್ಸಿನ ಮೇಲೆ ೨ ಮಿಲಿಯ ಪವನುಗಳ ಯುದ್ಧ ವಂತಿಗೆಯನ್ನು ಹೊರಿಸಿರುವರು.

ರುಶ್ಯ:—ರುಶ್ಯರು ತಾ. ೨೦ರಲ್ಲು ಜೆಬ್ರುಜ್ ನದಿಯನ್ನು ದಾಟಿ ಆಸ್ಟ್ರೀಯ ಪ್ರದೇಶಗಳನ್ನು ಒಳನುಗ್ಗಿರುವರು.

ಗೆಲೀಸಿಯಕ್ಕೆ ಸೇರಿದ ಕ್ರಾಸ್ನೆ ಎಂಬಲ್ಲಿ ರುಷ್ಯರು ವಿಶೇಷ ಜಯ ಹೊಂದಿರುವರು. ಶತ್ರುಗಳ ಸೇನೆಯಲ್ಲಿ ವಿಶೇಷ ನಷ್ಟವನ್ನುಂಟು ಮಾಡಿ ಆರು ಆಫೀಸರರನ್ನೂ 1250 ಸೈನಿಕರನ್ನೂ ಸೆರೆಹಿಡಿದಿರುತ್ತಾರೆ.

ಪೂರ್ವ ಪ್ರಶ್ಯದಲ್ಲಿ ರುಷ್ಯರ ವಾಯುನಾವಿಕರು ಶತ್ರುಗಳ ಸೇನೆ ಸಂಬಂಧವಾದ ಕಟ್ಟೋಣಗಳ ಮೇಲೆ ಸಿಡಿಮದ್ದುಗಳನ್ನು ಹಾಕಿರುವರು

ಗಂಬಿನೆನ್ ಡಿಸ್ಟ್ರಿಕ್ಟಿನಲ್ಲಿ ರುಶ್ಯರಿಗೂ ಜರ್ಮನರಿಗೂ ಕದನ ನಡೆಯುತ್ತಲಿದೆ. ರುಶ್ಯರು ಇಲ್ಲಿ ೧೪ ಜರ್ಮನ್ ಕಾಲಾಳು ರೆಜಿಮೆಂಟಿನ ಕೂಡೆ ಕಾದಾಡುತ್ತಿರುತ್ತಾರೆ ರುಶ್ಯರ ಕುದುರೆ ಪಡೆಯು ಜರ್ಮನರ ೨ ಫಿರಂಗಿಗಳನ್ನು ಹಿಡಿದಿರುವುದು.

ರುಶ್ಯರು ಇಲ್ಲಿ ಶತ್ರುಗಳ ಒಂದು ಸೇನಾಂಗವನ್ನು ಹಿಡಿದು ಅನೇಕರನ್ನು ಸೆರೆಯಾಗಿ ಮಾಡಿರುವರು.

ಫ್ರಾನ್ಸ್:—ಫ್ರೆಂಚ್ ಸರಕಾರದವರು ಬೆಲ್ಜನರ ಕಡೆಗಿರುವ ತಮ್ಮ ಸಹತಾಪವನ್ನು ತೋರ್ಪಡಿಸಿ ಬೆಲ್ಜಮಿನಲ್ಲಿ ಒಬ್ಬ ಜರ್ಮನನಾದರೂ ಉಳಿಯದ ಹಾಗೆ ಮಾಡುವ ವರೆಗೆ ಸಹಾಯ ಮಾಡುವೆವು ಎಂತ ತಿಳಿಸಿರುತ್ತಾರೆ.

ಸರ್ವಿಯ:— ಲೊನಿಟಿಜ ಎಂಬಲ್ಲಿ ಆಸ್ಟ್ರೀಯರಿಗೂ ಸರ್ವಿಯರಿಗೂ ೪ ದಿವಸಗಳ ಕಠಿಣ ಕಾಳಗ ನಡೆದು ಸರ್ವಿಯರಿಗೆ ಪೂರ್ಣ ಜಯವಾಗಿರುವುದು. ಡ್ರಿನ ನದಿಯನ್ನು ಎರಡು ದಡಗಳಿಂದಲೂ ದಾಟಿದ ಆಸ್ಟ್ರೀಯನರ ಸೇನೆಯನ್ನು ಸರ್ವಿಯನರು ಹತಪಡಿಸಿರುವರು. ಉಭಯ ಪಕ್ಷದಲ್ಲಿ ವಿಶೇಷ ನಷ್ಟ ಉಂಟಾಗಿರುವುದು ಜಯಶಾಲಿಗಳಾದ ಸರ್ವಿಯನರು ಕೆಲವು ಸಾವಿರ ಮಂದಿಯನ್ನು ಸೆರೆಹಿಡಿದಿರುವರು. ಡ್ರೀನ ಸೇತುವೆಯತ್ತ ಕಡೆ ಓಡಿದ ಆಸ್ಟ್ರೀಯ ಸೇನೆಯನ್ನು ಸರ್ವಿಯನರು ಎಲ್ಲಾ ಕಡೆಯಲ್ಲಿಯೂ ಓಡಿಸಿಕೊಂಡು ಹೋದರು. ಶತ್ರುಗಳ ೪೦ ಫಿರಂಗಿಗಳೂ ಅನೇಕ ಕುದುರೆಗಳೂ ಆಯುಧ ಸಾಮಾಗ್ರಿಗಳೂ ಸಿಕ್ಕಿರುವುದು ಎಂತ ಸರ್ವಿಯ ಸರಕಾರದವರು ಪ್ರಕಟಿಸಿರುವರು ಮೊಂಟೆನಿಗ್ರೊದವರು ಕ್ರಾಟಿವೊವೆ ಎಂಬದನ್ನು ವಶಮಾಡಿಕೊಂಡಿದ್ದಾರೆ ಸರ್ವಿಯರು ಆಸ್ಟ್ರೀಯಾನರನ್ನು ಡ್ರೀನಾದತ್ತ ಕಡೆ ಓಡಿಸಿರುವರು ಎಂತ ಪೊಂಡಿಚೇರಿಗೆ ತಂತೀ ಬಂದಿರುವುದು

ಜರ್ಮನರ ಜೆಪ್ಲಿನ ಆಕಾಶನಾವೆಗಳಲ್ಲಿ ಒಂದು ಹೊಲ್ಲಂಡಿನಲ್ಲಿ ಕಾಣಿಸಿಕೊಂಡಿತು ಡಚ್ಚ ಸೋಲ್ಜರರು ಅದಕ್ಕೆ ಗುಂಡು ಹಾರಿಸಿದ್ದರಿಂದ ಅದು ಹಿಂದೆಹೋಯಿತು. ಮತ್ತೊಂದು ನಾವೆಯು ಮೆಸ್ಟ್ರಿಚ್ಟ್ ಎಂಬಲ್ಲಿ ಕಾಣಿಸಿಕೊಂಡಿರುವುದು ಆದರೆ ಇದರಿಂದ ಹೆಚ್ಚಿನ ಪ್ರಯೋಜನವಾಗಲಿಲ್ಲ. ಫ್ರೆಂಚರ ಆಕಾಶನಾವೆಯು ರಾತ್ರಿಯಲ್ಲಿ ಜರ್ಮನರ ಕುದುರೆಪಡೆಯು ಇರುವಲ್ಲಿ ಹಾರಿ ಕೆಲವು ಸಿಡಿಮದ್ದುಗಳನ್ನು ಬಿಸಾಡಿರುವುದು ಇದರಿಂದ ಶತ್ರುಗಳ ಸೇನೆಯಲ್ಲಿ ದೊಡ್ಡ ಗಲಿಬಿಲಿಯುಂಟಾಯಿತು. ನಾವೆಯು ಕೂಡ್ಲೇ ದೀಪವನ್ನು ನೊಂದಿಸಿ ಜರ್ಮನರ ಗುಂಡಿಗೆ ತಪ್ಪಿಸಿಕೊಂಡು ಪುನಃ ತನ್ನ ಸ್ಥಳಕ್ಕೆನೇ ಸೇರಿರುವುದು.

ಜರ್ಮನರು ಡಮ್ ಡಮ್ ಎಂಬ ಪ್ರಯೋಗಿಸಕೂಡದೆಂದು ಕಟ್ಟು ಮಾಡಿರುವ ಗುಂಡುಗಳನ್ನು ಈ ಯುದ್ಧದಲ್ಲಿ ಪ್ರಯೋಗಿಸುತ್ತಿರುವುದರಿಂದ ಫ್ರಾನ್ಸ್ ಸರಕಾರದವರು ಇದನ್ನು ವಿರೋಧಿಸಿ ಹೇಗು ಪಂಚಾಯತ ಸಭೆಗೆ ತಿಳಿಸಿರುವರು.

ಟರ್ಕಿ:—ಫ್ರಾನ್ಸ್, ಇಂಗ್ಲಾಂಡ್ ಮತ್ತು ರುಶ್ಯ ಸರಕಾರದವರು ಈ ಯುದ್ಧದಲ್ಲಿ ಟರ್ಕಿಯ ಅಧಿಕಾರವನ್ನು ಕೆಡಿಸಲು ಕೈಹಾಕುವದಿಲ್ಲವೆಂಬ ಪೂರ್ಣ ಭರವಸೆಯನ್ನು ಟರ್ಕಿಗೆ ಕೊಟ್ಟಿರುವರು.

ಅಂಗ್ಲಾಳ:—ಪ್ರಿನ್ಸ್ ಅಫ್‌ವೇಲ್ಸರ ಯುದ್ಧ ಫಂಡಿಗೆ ಈತನಕ ಒಂದುವರೆ ಮಿಲಿಯ ಪವನು ಕೂಡಿರುವುದು.

ಮದ್ರಾಸ್ ಸಂಸ್ಥಾನದ ಯುದ್ಧ ಫಂಡಿಗೆ ಸಂಸ್ಥಾನದ ನಾಲ್ಕು ಮಂದಿಯಿಂದಲೇ ಎಂಟೂವರೆ ಲಕ್ಷ ರೂಪಾಯಿ ವಾಗ್ದಾನ ಮಾಡಲ್ಪಟ್ಟಿರುವುದು.

ಸಿಮ್ಲಾದಲ್ಲಿಯ ಯುದ್ಧ ಫಂಡಿಗೆ ಈ ವರೆಗೆ ಆರುವರೆ ಲಕ್ಷ ರೂಪಾಯಿ ಕೂಡಿರುವುದು.

ಯುದ್ಧವು ಪ್ರಾರಂಭವಾದ ಕೂಡ್ಲೇ ಮುಂಬಾಯಿ ಸರಕಾರದವರು ಸ್ಟೇಟ್ ಸೆಕ್ರೆಟರಿಯವರಿಗೆ ಜರ್ಮನಿಯಲ್ಲಿರುವ ಭಾರತೀಯ ವಿದ್ಯಾರ್ಥಿಗಳ ಹೆಸರನ್ನು ತಿಳಿಸಿರುವುದರಿಂದ ಜರ್ಮನಿಯಲ್ಲಿರುವ ಅಮೇರಿಕದ ಯುನೈಟೆಡ್‌ಸ್ಟೇಟ್ ರಾಯಭಾರಿಯ ಮೂಲಕ ಅವರ ಜಾಗ್ರತೆ ತಕ್ಕೊಳ್ಳುವರೆ ಏರ್ಪಾಡು ಮಾಡಲ್ಪಟ್ಟಿರುವುದು

~~~~~

ತಾ. 26ನೇ ಆಗೋಸ್ತು

ಬೆಲ್ಜಮ್. ಜರ್ಮನರು ಮ್ಯೂಜನಿಂದ ಘೆಂಟಿಗೆ ಮುಂದರಿದು ಅಲ್ಲಿಂದ ದಕ್ಷಿಣಕ್ಕೆ ಸರಿದು ಫ್ರಾನ್ಸಿನ ಮೇಲೆ ಬೀಳಲುಬಹುದೆಂತ ಊಹಿಸಲ್ಪಟ್ಟದೆ ಬೆಲ್ಜಮಿನಲ್ಲಿರುವ ಜರ್ಮನರು ಎಂಡ್ರಾಡೆಯ ಮಾರ್ಗವಾಗಿ ಫ್ರಾನ್ಸಿಗೆ ಮುಂದರಿಯುತ್ತಿದ್ದಾರೆಂತ ವಾರ್ತೆ ಇದೆ

ಫ್ರಾನ್ಸ್, ಇಂಗ್ಲೆಂಡ್ ಮತ್ತು ಬೆಲ್ಜಮ್ ಸೇನೆಗಳು ಎಲ್ಲಿರುವವೆಂಬ ವಿಷಯವು ಬಹಳ ಗುಪ್ತವಾಗಿರುವುದು.

ಜರ್ಮನರು ಲೀಜಿನಿಂದ ಪುನಃ ಅರ್ಧ ಮಿಲಿಯ ಪವನುಗಳನ್ನು ಕೂಡಿಸಿರುವರು.

ಬೆಲ್ಜಿಯಮಿನಲ್ಲಿ ದೊಡ್ಡ ಯುದ್ಧವು ಪ್ರಾರಂಭವಾಗಿಯದೆಂಬ ವಾರ್ತೆ ಇದೆ

ಫ್ರೆಂಚರು ಚಾರ್ಲಿರೋಯಿ ಡಿಸ್ಟ್ರಿಕ್ಟಿನಲ್ಲಿ ಶತ್ರುಗಳೊಡನೆ ಕಾದಾಡುತ್ತಿರುವರು. ಬೆಲ್ಜಮಿಗೆ ಸೇರಿದ ಹೈನಾಲ್ಟ್ ಪ್ರೊವಿನ್ಸಿನಲ್ಲಿ ಕಠಿಣ ಕಾಳಗ ನಡೆಯುತ್ತಿದೆ

ಲುಕ್ಸೆಂಬರ್ಗಿನ ಹಾರ್ಲೆಮಿ ಎಂಬಲ್ಲಿಂದ ಜರ್ಮನರು ದಕ್ಷಿಣಕ್ಕೆ ಸರಿಯುತ್ತಿದ್ದಾರೆ

ಟ್ರೆಲಿಮೊಂಟ್ ಎಂಬಲ್ಲಿ ಬೆಲ್ಜನರಿಗೂ ಜರ್ಮನರಿಗೂ ಆದ ಕಠಿಣ ಯುದ್ಧದ ವಾರ್ತೆಯು ಪ್ರಕಟವಾಗಿರುವುದು. ಬೆಲ್ಜನರು ಬಹಳ ರಣಧೀರರಾಗಿ ಜರ್ಮನರ ಶ್ರೇಷ್ಠವಾದ ಸೈನ್ಯದೊಡನೆ ಕಾದಾಡಿದರು ಒಂದು ಕಡೆಯಲ್ಲಿ ೧೦ ಸಾವಿರ ಜರ್ಮನರ ಮುಂದೆ ೨೪೦ ಮಂದಿ ಬೆಲ್ಜನರು ಎದುರಾಡಬೇಕಾಯಿತು ಬೆಲ್ಜನರು ಕಡೆಗೆ ಮೆಲ್ಲನೆ ತಮ್ಮ ಮುಖ್ಯ ಸೇನೆಗೆ ಹಿಂದೆ ಸರಿದರು

ಜರ್ಮನರು ಡೈಸ್ಟ್ ಎಂಬ ಪಟ್ಟಣಕ್ಕೆ ಗುಂಡುಹೊಡೆಯುತ್ತಿದ್ದಾರೆ. ಜರ್ಮನರ ವಾಯುನಾವೆಗಳು ಬೆಲ್ಜನರ ಮೇಲೆ ಗುಂಡುಗಳನ್ನು ಹಾರಿಸ ಪ್ರಯತ್ನಿಸುತ್ತಲಿವೆ

ಏರಿಸ್‌ಕೋಟಿನ ಸಮೀಪ ಬೆಲ್ಜನರು ಕೆಲವು ತಾಸುಗಳ ವರೆಗೆ ಎಡೆಬಿಡದೆ ಶತ್ರುಗಳ ಮೇಲೆ ಗುಂಡು ಹಾರಿಸುತ್ತಿರಬೇಕಾಯಿತು. ಹೀಗೆ ಇಲ್ಲಿಯ ಹತಾಹತಿಯಿಂದ ಹೆಚ್ಚಿನ ಕೊಲೆಯಾಯಿತು. ಇಲ್ಲಿ ಜೀವದ ಮರವೆ ಇಲ್ಲದೆ ಬೆಲ್ಜನರು ಕಾದಾಡಿ ಒಳ್ಳೇ ಸ್ಥಿತಿಯಿಂದ ಹಿಂದೆ ಸರಿದರು

ಉತ್ತರ ಬೆಲ್ಜಮನ್ನು ಜರ್ಮನರು ಬಿಟ್ಟು ಹೋಗಿರುವರು. ರೈಲ್ವೇ ವ್ಯವಹಾರಗಳು ಈಗ ಘೆಂಟಿನಿಂದ ಎಂಟ್‌ವರ್ಪಿಗೆ ಯಥಾರೀತಿ ನಡೆಯುತ್ತಿದೆ. ಎಂಟ್‌ವರ್ಪಿನಿಂದ ಡಚ್ ಲಿಂಬರ್ಗಿಗೂ ವ್ಯವಹಾರವು ನಡೆಯುತ್ತಿದೆ.

ಜರ್ಮನರು ತಮಗೆ ಸಿಕ್ಕಿದ ಸೆರೆಯವರನ್ನು ಅಮಾನುಷ ರೀತಿಯಲ್ಲಿ ಕಾಡು ಮನುಷ್ಯರಂತೆ ನಡಿಸುತ್ತಿದ್ದಾರೆಂತ ಪ್ರಕಟವಾಗಿದೆ.

ಫ್ರಾನ್ಸ್:—ಅಲ್‌ಸೆಸ್ ಲೊರೈನಿನಲ್ಲಿ ಫ್ರೆಂಚರು ಜರ್ಮನರೊಡನೆ ೬ ದಿವಸಗಳ ವರೆಗೆ ಎಡೆಬಿಡದೆ ಕಾದಾಡಿದರು ಅಲ್ಲಿ ಜರ್ಮನರ ಸೇನೆಯು ಅಪರಿಮಿತವಾಗಿದ್ದುದರಿಂದ ಫ್ರೆಂಚರ ಸೇನೆಯ ಎಡಪಾರ್ಶ್ವವು ಹಿಂದೆ ಸರಿಯಬೇಕಾಯಿತು ಆದರೆ ಬಲಗಡೆಯು ಇನ್ನೂ ಬಲವಾಗಿದ್ದು ಕಾದಾಡುತ್ತಿದೆ

ಫ್ರೆಂಚರು ಜರ್ಮನರಿಂದ ಮುಲ್ಹೌಸೆನನ್ನು ಪುನಃ ತಕ್ಕೊಂಡಿರುವರು. ಇಲ್ಲಿ ಜರ್ಮನರ ೨೪ ಫಿರಂಗಿಗಳೂ ೧೦೦೦೦ ಸೇನಿಕರೂ ಫ್ರೆಂಚರಿಗೆ ಸಿಕ್ಕಿರುವುದು. ಕಠಿಣವಾದ ಸನೀನು ಕಾಳಗ ಮಾಡಿ ಫ್ರೆಂಚರು ಜರ್ಮನರನ್ನು ರೈನಿಗೆ ಓಡಿಸಿದರು. ಇದೇ ಫ್ರೆಂಚರ ಉದ್ದೇಶವಾಗಿತ್ತು. ಅಲ್‌ಸೆಸಿನಲ್ಲಿ ಫ್ರೆಂಚರಿಗೆ ವಿಶೇಷ ಜಯವಾಗುತ್ತಾ ಬರುತ್ತದೆ.

ಜರ್ಮನರ ಜೆಪಲಿನ್ ವಾಯುನಾವೆಯನ್ನು ಬೇಡನ್‌ವಿಲ್ಲೆ ಎಂಬಲ್ಲಿ ಫ್ರೆಂಚರು ಗುಂಡುಹೊಡೆದು ಕೆಳಗಿಳಿಸಿರುವರು. ಮ

ಕ್ಕೊಂದು ವಾಯುನಾವೆಯನ್ನು ಟಿರ್‌ಪೊಂಡೆ ಎಂಬಲ್ಲಿ ಗುಂಡು ಹೊಡೆದು ಕೆಳಗೆ ಇಳಿಸಿದರು. ಅದಕ್ಕೆ ಬೆಂಕಿ ಹತ್ತಿಕೊಂಡದ್ದರಿಂದ ಅದರ ಆಫೀಸರನು ಸತ್ತುಹೋದನು.

ಜರ್ಮನರು 'ನೋರ್ತಸೀ' ಎಂಬ ಸಮುದ್ರದಲ್ಲಿ ಸಿಕ್ಕಿದ ಕ್ಲಿಲ್ಲಾ ಸಿಡಿಮದ್ದುಗಳನ್ನು ಹಾಕಿಟ್ಟಿರುವುದರಿಂದ ವ್ಯಾಪಾರ ಹಡಗುಗಳು ಎಚ್ಚರವಾಗಿರಬೇಕೆಂದು ಬ್ರಿಟಿಷ್ ಸರಕಾರದವರು ಎಚ್ಚರಿಸಿರುವರು. ಬ್ರಿಟಿಷರು ಸಿಡಿಮದ್ದುಗಳನ್ನು ಸಮುದ್ರದಲ್ಲಿ ಹಾಕಲಿಲ್ಲವೆಂದು ಪ್ರಕಟವಾಗಿದೆ.

'ನೋರ್ತಸೀ'ಯಲ್ಲಿ ಡಚ್ಚರ ಎರಡು ಹಡಗುಗಳಿಗೆ ಸಿಡಿಮದ್ದು ತಗಲಿ ನಷ್ಟಪಟ್ಟಿರುವುದು. ಎರಡು ಬ್ರಿಟಿಷ್ ಹಡಗುಗಳನ್ನು ಜರ್ಮನರು ಹಿಡಿದು ಮುಳುಗಿಸಿರುವರು.

ಮೆಡಿಟರೇನಿಯನಿನಲ್ಲಿ ಶತ್ರುಗಳ ಹಡಗವು ಇಲ್ಲವೆಂಬದಾಗಿ ಮಾಲ್ಟದಿಂದ ವಾರ್ತೆ ಬಂದದೆ.

ಸರ್ವಿಯ — ಸರ್ವಿಯರು ಲೊಟ್ಸಿನಿಟ್ಸ ಎಂಬಲ್ಲಿ ಜಯ ಹೊಂದಿದ ನಂತರ ಆಸ್ಟ್ರಿಯಾನರ ಸೇನೆಗಳನ್ನು ಕಡಿದು ಹಾಕಿ ಬಹಳ ಕೊಳ್ಳೆ ಹೊಡೆದಿರುವರು. ಹಿಡಿಯಲ್ಪಟ್ಟ ಕೋವಿಗಳು ಬಹಳ ವಿಶೇಷತರದವುಗಳಾಗಿರುವವು.

ಫ್ರೆಂಚರ ನೌಕಾವಳಿಯು ಆಸ್ಟ್ರೀಯಾನರ ಒಂದು ಯುದ್ಧ ಹಡಗವನ್ನು ಮುಳುಗಿಸಿಬಿಟ್ಟಿತು. ಫ್ರೆಂಚರ ನೌಕಾವಳಿಯೂ ಮತ್ತು ಮೊಂಟೆನಿಗ್ರೋಯರೂ ಕೆಟ್ಟಾರೋದ ಮೇಲೆ ಬಿದ್ದಿರುವರು. ಎಡ್ರಿಯಾಟಿಕ್ ಸಮುದ್ರದಲ್ಲಿ ಯುದ್ಧ ನಡೆಯುತ್ತಲಿದೆಂತ ಇಟಲಿ ಪತ್ರಗಳಲ್ಲಿ ಪ್ರಕಟವಾಗಿದೆ.

ರುಷ್ಯ — ರಷ್ಯರು ತಾ. ೨೦ರಲ್ಲು ಗಂಬಿನೆನ್ ಎಂಬಲ್ಲಿ ಕಠಿಣ ಯುದ್ಧ ಮಾಡಿ ಜರ್ಮನರ ಅನೇಕ ಕೋವಿಗಳನ್ನು ಹಿಡಿದಿರುವರು. ಮರುದಿನ ರುಷ್ಯಯನರಿಗೆ ಜಯವಾಯಿತು. ಜರ್ಮನರಿಗೆ ವಿಶೇಷ ನಷ್ಟ ಉಂಟಾಗಿ ಹಿಂದೆ ಸರಿದರು. ರುಷ್ಯಾನರು ಅವರನ್ನು ಹಿಂದಟ್ಟಿದರು. ಈ ಜಯದಿಂದ ರುಷ್ಯನರಿಗೆ ಯುದ್ಧ ಸಾಧನೆಯ ಬಗ್ಗೆ ಬಹಳ ಪ್ರಯೋಜನವಾಯಿತೆಂತ ಪ್ರಕಟವಾಗಿದೆ. ಅನಂತರ ರುಷ್ಯಾನರು ಇನ್‌ಸ್ಟರ್‌ಬರ್ಗ್ ಎಂಬದನ್ನು ವಶಮಾಡಿಕೊಂಡರು. ಗೋಲ್ಡಾಪ್ ಎಂಬದನ್ನೂ ರುಷ್ಯಾನರು ವಶಮಾಡಿಕೊಂಡಿದ್ದಾರೆ. ಪೂರ್ವ ಪ್ರಶ್ಯದಲ್ಲಿ ೬ ದಿವಸಗಳವರೆಗೆ ನಡೆದ ಯುದ್ಧವು ಬಹಳ ಕಠಿಣತರವಾಗಿತ್ತು. ಜರ್ಮನರು ಜೀವದ ಮರವೆಯಿಲ್ಲದೆ ಕಾದಾಡಿದರು. ನಂತರ ಹಿಂದೆ ಓಡಿಸಲ್ಪಟ್ಟರು. ಅಲ್ಲಿದ್ದ ಜರ್ಮನ್ ನಿವಾಸಿಕರು ಗ್ರಾಮಗಳನ್ನು ಬಿಟ್ಟು ಉತ್ತರ ಕಡೆಗೆ ಓಡುತ್ತಿದ್ದಾರೆ.

ಇಟೆಲಿ — ಇಟಲಿ ನೌಕಾವಳಿಗೆ ಡ್ಯೂಕ್ ಆಫ್ ಎಬ್ರೂಜಿಯವರ ಮುಖ್ಯ ಸೇನಾಧಿಪತಿಯಾಗಿ ನೇಮಿಸಲ್ಪಟ್ಟಿರುವರು. ಇಂಗ್ಲಾಂಡ್, ಫ್ರಾನ್ಸ್, ರುಷ್ಯ ರಾಜ್ಯಗಳಿಗೆ ಸಹಾಯವಮಾಡಬೇಕೆಂಬ ಚಳವಳವು ಇಟಲಿಯಲ್ಲಿ ವಿಶೇಷವಾಗಿ ನಡೆಯುತ್ತಲಿದೆ. ಇಟಲಿಯರ ಒಂದೆರಡು ದಿನಗಳಲ್ಲಿ ಯುದ್ಧಕ್ಕೆ ಸೇರುವರೆಂಬದಾಗಿ ಮಾಲ್ಟದಿಂದ ರೂಟರ್ಸ್ ಬಾತ್ಮೀದಾರರು ತಿಳಿಸಿರುತ್ತಾರೆ.

ಆಸ್ಟ್ರಿಯವು ಇಟಲಿಯ ಮೇಲೆ ಹೆಚ್ಚಿನ ಕೋಪಗೊಂಡಿರುವುದು. ಇಟಲಿಯು ಆಸ್ಟ್ರಿಯದ ಶತ್ರುಗಳ ಸೇನೆಯನ್ನು ಎಡ್ರಿಯಾಟಿಕ್ ಸಮುದ್ರದಲ್ಲಿ ನಡೆಯ ಬಿಟ್ಟಿರುವುದು ನ್ಯಾಯವಲ್ಲವೆಂತ ಆಸ್ಟ್ರೀಯವು ಇಟಲಿಯನ್ನು ದೂರುತ್ತಿರುವುದು. ಹೀಗೆ ಇಟಲಿಯು ಬೇಗನೇ ಯುದ್ಧ ಸಾರುವ ಸಂಭವವು ಇದೆ ಎಂತ ವಾರ್ತೆ ಇದೆ.

ಜಾಪಾನ್ — ಜಾಪಾನಿನ ಕಂಡಿಶವಾಚೆಗೆ ಜರ್ಮನರು ಉತ್ತರ ಕೊಡಲಿಲ್ಲ.

ಜಾಪಾನ್ ಕಿಯಾಚೋ ಎಂಬದರ ಮೇಲೆ ಬೀಳಲು ಸಿದ್ಧವಾಗಿದೆ. ಕೆಲವು ಸಾವಿರ ಜರ್ಮನರು ಇದನ್ನು ಕಾಪಾಡುತ್ತಿದ್ದಾರೆ. ಬಂದರ ಮತ್ತು ಆಜುಬಾಜುನಲ್ಲಿ ಸಿಡಿಮದ್ದುಗಳು ಹಾಕಲ್ಪಟ್ಟಿವೆ. ಜಾಪಾನ್ ಜರ್ಮನಿಯ ಮೇಲೆ ಯುದ್ಧ ಸಾರಿರುವುದು.

ತಾ. 27ನೇ ಆಗೋಸ್ತು.

ಬೆಲ್ಜಿಯಮ್, ಘೆಂಟ್ ಪಟ್ಟಣದ ಪೂರ್ವದಲ್ಲಿರುವ ಮಲಿಯ ಪಟ್ಟಣವನ್ನು ದಾಟಿ ಮುಂದರಿಸಿ ಜರ್ಮನರು ಪಶ್ಚಿಮಕ್ಕೆ ಬರಲಿಲ್ಲ. ಫ್ರಾನ್ಸನ್ನು ಒಳನುಗ್ಗುವ ಪ್ರಯತ್ನವನ್ನು ಮಾಡಲು ದಕ್ಷಿಣಕ್ಕೆ ಹೋಗಿರುವರು. ಫ್ರೆಂಚರ ಮತ್ತು ಜರ್ಮನರ ಸೇನೆಗಳು ಸರಿಯಾಗಿ ಒಂದಕ್ಕೊಂದು ಇದಿರಾಗಿವೆ.

ಬೆಲ್ಜಿಯಮಿನ ದಕ್ಷಿಣ ಪಶ್ಚಿಮ ಪ್ರಾಂತ್ಯಗಳಲ್ಲಿ ನಡೆಯುವ ಯುದ್ಧದ ವರ್ತಮಾನವನ್ನು ಯೂರೋಪಿನವರೆಲ್ಲರೂ ಕೇಳಲು ಬಹಳ ಆತುರವುಳ್ಳದ್ದಾಗಿದೆ. ನಾಮೂರು ಮತ್ತು ಮೊನ್ಸ್ ಪಟ್ಟಣಗಳ ನಡುವೆ ಸಾಲು ಸಾಲಾಗಿರುವ ಫ್ರೆಂಚರ ಸೇನೆಯನ್ನು ದಾಟಿ ಫ್ರಾನ್ಸನ್ನು ಒಳನುಗ್ಗಲು ಜರ್ಮನ್ ಸೇನಿಕರು ವಿಶ್ವ ಪ್ರಯತ್ನವನ್ನು ಮಾಡುತ್ತಿರುವರು. ಜರ್ಮನ ಸೇನೆಯಲ್ಲಿ ಅತ್ಯುತ್ಕೃಷ್ಟವಾದ ಏಳು ಪಾಳ್ಯಗಳಾದರೂ ಇಲ್ಲಿ ಫ್ರೆಂಚರ ಸೇನೆಯನ್ನು ಪ್ರತಿಭಟಿಸುತ್ತಿರುವದೆಂತ ನಿರೀಕ್ಷಿಸುತ್ತಾರೆ. ಇಲ್ಲಿ ನಡೆಯುವ ಕಾಳಗವು ಹಲವು ದಿನಗಳ ವರೆಗೆ ತೀರದು.

ಬ್ರುಸಲ್ಲಿನಲ್ಲಿ ಪ್ರಕೃತ ೩೦೦೦೦ ಜರ್ಮನ್ ಸೇನಿಕರು ಇರುವರು. ಜರ್ಮನರ ಬಾಕಿ ಸೇನೆಯು ಬೆಲ್ಜಿಯಮಿನ ಮಧ್ಯ ಪ್ರಾಂತ್ಯದಲ್ಲಿಯೂ ಉತ್ತರ ಪ್ರಾಂತ್ಯದಲ್ಲಿಯೂ ಇರುವುದು. ಎಂಟವರ್ಪನ್ನು ವೈರಿಗಳ ಹತ್ತರ ಸೇರದ ರೀತಿ ಮದ್ದಿನ ಸುರಂಗ ಇತ್ಯಾದಿಗಳಿಂದ ಭದ್ರಪಡಿಸಿರುವುದು. ೨ ಜರ್ಮನ ಸೇನಿಕರು ಎಂಟವರ್ಪಿನ ಹತ್ತಿರ ಹೋಗುವುದನ್ನು ಸಹ ಬಹಳ ಪ್ರಯಾಸದಿಂದ ತಪ್ಪಿಸಿಕೊಳ್ಳುವರು.

ಜರ್ಮನರ ಸೇನೆ ಎಷ್ಟು ಸ್ಥಳಗಳಲ್ಲಿ ಬಂದು ಮೇಲೆ ಹಾಯುವುದೆಂತ ತಿಳಿಯ ಬರುವದಿಲ್ಲ. ಆದರೆ ತ್ರಿಕೋಣಾಕಾರದಲ್ಲಿ ನಾಮೂರಿನ ದಕ್ಷಿಣದಿಂದ ಬಹಳ ದಟ್ಟವಾಗಿ ಸಾಲು ಕಟ್ಟಿ ನಿಂತಿರುವ ಅಸಂಖ್ಯಾತ ಸೇನೆಯೊಡನೆ ಜರ್ಮನರ ಸೇನೆಯು ಕಾದಾಡಲಿಕ್ಕಿರುವುದೆಂತ ತೋರಿಬರುತ್ತದೆ.

ಸೇನೆಗಳ ಎಡದ ಅಂಗದಲ್ಲೆಲ್ಲಾ ಫ್ರೆಂಚರಿಗೂ ಜರ್ಮನರಿಗೂ ಕಾಳಗವು ಹತ್ತಿದೆ.

ಬ್ರಿಟಿಷ ಸೇನೆಯು ಕಳೆದ ಆದಿತ್ಯವಾರ ಮೊನ್ಸ ಎಂಬಲ್ಲಿ ಶತ್ರುಗಳೊಡನೆ ಶೂರತನದಿಂದ ಕಾದಾಡಿದರು.

ತಾ. ೨೨ರಲ್ಲು ಅರ್ಲ ಆಫ್ ಲಿವನ್‌ರು ವಿಶೇಷ ಗಾಯಪಡೆದಿದ್ದರೆಂತ ತಿಳಿದ ಬರುತ್ತದೆ.

ನಾಮೂರು ಕೋಟೆಯು ಬಿದ್ದಿರುವುದೆಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿದ್ದಾರೆ.

ನಾಮೂರು ಕೋಟೆಯನ್ನು ತಕ್ಕೊಳ್ಳುವುದಕ್ಕಾಗಿ ಜರ್ಮನರು ಜೀವದ ಮರವೆ ಇಲ್ಲದೆ ಕಾದಾಡಿದರು ಎಂತ ಫ್ರೆಂಚ ಆಫೀಸರರು ಪ್ರಕಟಿಸಿರುತ್ತಾರೆ. ಈಗ ಫ್ರೆಂಚರು ಮೊನ್ಸಿನಿಂದ ಡಚ್ ಲಕ್ಸೆಂಬರ್ಗಿನ ಸರಹದ್ದು ವರೆಗೆ ಜರ್ಮನರಿಗೆ ಎದುರಾಗಿ ಯುದ್ಧಕ್ಕೆ ನಿಂತಿದ್ದಾರೆ. ಅಲ್ಲಿ ಜರ್ಮನರ ಸರ್ವ ಸೇನೆಯು ಯುದ್ಧಕ್ಕೆ ತಯಾರಿದೆ. ಬಲಗಡೆಯು ಕಾಡು ಪ್ರದೇಶವಾದುದರಿಂದ ಅಲ್ಲಿ ಯುದ್ಧ ಪ್ರಾರಂಭಿಸುವದೆ ಸ್ವಲ್ಪ ಕಷ್ಟವಾಗಿದೆ. ಈ ಯುದ್ಧವು ಕೆಲವು ದಿವಸಗಳ ವರೆಗೆ ನಡೆಯುವುದು. ರಣರಂಗವು ಬಹಳ ವಿಸ್ತೀರ್ಣವಾಗಿರುವುದರಿಂದಲೂ ಯುದ್ಧಕ್ಕೆ ನಿಂತ ಸೇನೆಯು ವಿಪರೀತವಾಗಿರುವುದರಿಂದಲೂ ಈ ಕದನವು ಒಂದರ ಹಿಂದೆ ಒಂದು ಕ್ರಮ ಪ್ರಕಾರವಾಗಿ ನಡೆಯಬೇಕಾಗಿದೆ. ಆದುದರಿಂದ ಅಂತ್ಯದ ಫಲವನ್ನು ನಿಧಾನವಾಗಿ ಕಾಯಬೇಕಾಗಿದೆ ಎಂತ ಫ್ರೆಂಚರು ತಿಳಿಸಿರುತ್ತಾರೆ.

ಚಾರ್ಲೆರೋಯಿಯ ಒಂದು ಸಲ ಜರ್ಮನರಿಂದ ತೆಗೆದುಕೊಳ್ಳಲ್ಪಟ್ಟಿತು ಮತ್ತು ಪುನಃ ಫ್ರೆಂಚರಿಂದ ಹಿಂದೆ ತೆಗೆದುಕೊಳ್ಳಲ್ಪಟ್ಟಿತು.

ಬ್ರುಸೆಲ್ಲಿನಿಂದ ೩೦೦೦೦ ಸಾವಿರ ಜರ್ಮನರು ದಕ್ಷಿಣ ಕಡೆಗೆ ಚಾರ್ಲೆರೋಯಿಮತ್ತುಕಡೆ ಮುಂದರಿಯುತ್ತಿದ್ದಾರೆ.

ಬೆಲ್ಜನರ ಸೇನೆಯಲ್ಲಿ ಯುದ್ಧ ಪ್ರಾರಂಭವಾದಂದಿನಿಂದ ಹತ್ತು ಸಾವಿರ ಮಂದಿ ಮಡಿದರೆಂತ ಬೆಲ್ಜಮಿನ ಯುದ್ಧ ಮಂತ್ರಿಯು ತಿಳಿಸಿರುವರು.

ಫ್ರೆಂಚರು ಆಲ್‌ಸೇಸಿನ ಕೆಲವು ಕೋಟೆಕೊತ್ತಲು ಸ್ಥಳಗಳನ್ನು ತೆಗೆದುಕೊಂಡು ಬಲಕಾಯಿಸುತ್ತಿರುವುದರಿಂದ ಈಗ ಡೂನನ್ ಮತ್ತು ಸಾಲೆಸಿನಲ್ಲಿ ಫ್ರೆಂಚರ ಸೇನೆಯು ಇರುವುದು ಅಷ್ಟೊಂದು ಅವಶ್ಯವಿಲ್ಲವೆಂಬ ಆಲೋಚನೆಯಿಂದ ಫ್ರೆಂಚರು ಅಲ್ಲಿರುವ ತಮ್ಮ ಸೇನೆಯನ್ನು ಹಿಂದೆ ಕರೆಯಲು ನಿರ್ಣಯಿಸಿದ್ದಾರೆ.

ರುಷ್ಯ:— ಜರ್ಮನರು ರುಷ್ಯರಿಂದ ಹಿಂದೆ ಓಡಿಸಲ್ಪಟ್ಟು ಎಂಗ್ರಾಪ್ ನದಿಯನ್ನು ದಾಟುತ್ತಲಿದ್ದಾರೆ. ರುಷ್ಯನರು ಜರ್ಮನಿಗೆ ಸೇರಿದ್ದ ಜೋಹಾನ್ನಿಸ್‌ಬರ್ಗ್, ಒರ್ಟೆಲ್ಸ್‌ಬರ್ಗ್, ವಿಲ್ಲೆನ್‌ಬರ್ಗ್ ಮತ್ತು ಸೋಲ್ಡಾನ್ ಪಟ್ಟಣಗಳನ್ನು ವಶಮಾಡಿಕೊಂಡರು. ನೈಡೆನ್‌ಬರ್ಗ್ ಎಂಬ ಪಟ್ಟಣವನ್ನು ಬಿಟ್ಟುಹೋಗುವ ಮೊದಲು ಜರ್ಮನರು ಅದಕ್ಕೆ ಬೆಂಕಿಕೊಟ್ಟು ತೆರಳಿದರು. ಇಲ್ಲಿ ಜರ್ಮನರ ನೈವದಾರಗಳು ನಡೆಯು ಕೊಡದೆಂದು ರುಷ್ಯಾನರು ಹೆದರಿಸುತ್ತಾರೆ. ಲೈಸೆಕ್ ಎಂಬಲ್ಲಿಗೆ ೨೦ ಮೈಲು ಪಶ್ಚಿಮದಲ್ಲಿರುವ ಎರ್ಲೆಸ್ ಪಟ್ಟಣವನ್ನು ರುಷ್ಯರು ವಶಮಾಡಿಕೊಂಡರು.

ಗಂಬಿನೆನ್ ಎಂಬಲ್ಲಿ ರುಷ್ಯನರಿಗೆ ಆದ ಜಯದಿಂದ ಜರ್ಮನಿಗೆ ವಿಶೇಷ ನಷ್ಟವುಂಟಾಗಿರುವುದೆಂತ ಪಾರಿಸ್ ನಗರದಿಂದ ತಂತಿ ಬಂದದೆ.

ರುಷ್ಯರು ಜರ್ಮನರ ಪ್ರದೇಶದಲ್ಲಿ ಈ ವರೆಗೆ ೮೦ ಮೈಲುಗಳ ವಿಸ್ತೀರ್ಣವನ್ನು ಒಳನುಗ್ಗಿರುವರು. ಜರ್ಮನಿಯ ಮುಖ್ಯ ಪಟ್ಟಣವಾದ ಬೆರ್ಲಿನಿಗೆ ಹೋಗಲು ಉಳಿದ ೩೦೦ ಮೈಲುಗಳನ್ನು ಯುದ್ಧ ಮಾಡಿಕೊಂಡು ಬೇಗನೇ ಸೇರಬೇಕೆಂಬದು ರುಷ್ಯರ ಉದ್ದೇಶವಾಗಿದೆ. ರುಷ್ಯರು ಇನ್‌ಸ್ಟರ್ ಬರ್ಗನ್ನು ವಶಮಾಡಿಕೊಂಡು ಡೆಂಟ್ಜಿಕ್ ವರೆಗಿನ ರೈಲ್ವೆಗಳನ್ನು ಸ್ವಾಧೀನ ಮಾಡಿಕೊಂಡಿರುವುದು ರುಷ್ಯರು ಮಾಡಿದ ವಿಶೇಷ ಕಾರ್ಯವಾಗಿರುವುದು. ರುಷ್ಯನರು ಇನ್ನು ವಿಸ್ಟುಲ ನದಿ ಸಮೀಪದ ಮತ್ತು ಜವುಗುಪ್ರದೇಶಗಳನ್ನು ದಾಟಿ ಮುಂದರಿಯ ಬೇಕಾಗಿದೆ. ಅದಲ್ಲದೆ ಬಲಪಾರ್ಶ್ವದಲ್ಲಿ ಕೊಯೆನಿಗ್ಸ್‌ಬರ್ಗ್ ಎಂಬ ದೊಡ್ಡ ಕೋಟೆಯೂ ಇದೆ.

ಸರ್ವಿಯರು ಲೋಜನ್ನಿಟ್ಸಿನ ಸಬಾಜ್ ಪ್ರದೇಶಗಳನ್ನು ವಶಮಾಡಿಕೊಂಡು ಆಸ್ಟ್ರಿಯಾನರನ್ನು ಓಡಿಸಿರುವರು. ಸರ್ವಿಯರ ಕುದುರೆ ಪಡೆಯು ಆಸ್ಟ್ರಿಯದ ಸೇನೆಯನ್ನು ಸೋಲಿಸಿ ೮ ವಿಶೇಷ ತರದ ಕೋವಿಗಳನ್ನೂ ೧೦ ಸಿಡಿಗಿರಣಿಗಳನ್ನೂ ಹಿಡಿದಿರುವುದು.

ಆಸ್ಟ್ರಿಯನರು ಸಬಾಜಿನಲ್ಲಿ ಪುನಃ ಸರ್ವಿಯರ ಮೇಲೆ ಬೀಳಲು ಯತ್ನಿಸಿ ಹಿಂದಕ್ಕೆ ಓಡಿಸಲ್ಪಟ್ಟರು.

ಸರ್ವಿಯರು ಈಗ ಸೇವ್ ನದಿಯನ್ನು ದಾಟಿ ಹಂಗೇರಿಗೆ ಒಳನುಗ್ಗಲು ಸಿದ್ಧರಾಗಿದ್ದಾರೆ.

ಸರ್ವಿಯರ ಈ ವರೆಗೆ ಲೋಜನ್ನಿಟ್ಸಿನ ಸಬಾಜ್ ಪಟ್ಟಣಗಳಲ್ಲಿ ೪೫೦೦ ಆಸ್ಟ್ರಿಯನರ ಸೇನಿಕರನ್ನೂ ೫೪ ಫಿರಂಗಿಗಳನ್ನೂ ಇನ್ನು ಹೆಚ್ಚಿನ ರೈಫಲ್ ಕೋವಿ ಇತ್ಯಾದಿ ಯುದ್ಧ ಸಾಮಾಗ್ರಿಗಳನ್ನೂ ಸೆರೆ ಹಿಡಿದಿರುವರು.

ಜಪಾನು ಮೊದಲು ಇಂಗ್ಲೀಷರೊಡನೆ ಮಾಡಿಕೊಂಡ ಒಪ್ಪಂದವನ್ನು ಪಾಲಿಸಿ ಈ ಯುದ್ಧದಲ್ಲಿ ಅವರೊಡನೆ ಸೇರಿದ್ದರಿಂದ ಎಲ್ಲಾ ಪತ್ರಗಳು ಇವರ ಈ ಸಮಯೋಚಿತವಾದ ಕೃತವನ್ನು ಹೊಗಳುತ್ತಿವೆ.

ಜಪಾನಿಯರ ಟ್ಸಿಂಗ್‌ಟೋ ಎಂಬಲ್ಲಿಗೆ ಗುಂಡು ಹಾರಿಸಲು ಪ್ರಾರಂಭಿಸಿದ್ದಾರೆ.

ಹಿಂದೂಸ್ಥಾನಕ್ಕೆ ಈ ವರೆಗೆ ಜರ್ಮನಿ ಮತ್ತು ಆಸ್ಟ್ರಿಯದಿಂದ ಬರುತ್ತಿದ್ದ ಸಾಮಾನುಗಳನ್ನು ಇಂಗ್ಲಾಂಡಿನಿಂದಲೇ ಒದಗಿಸಿ ಕೊಡುವ ಏರ್ಪಾಡ ಮಾಡಲ್ಪಡುವುದು. ಈ ವಿಷಯ ಆಲೋಚಿಸುವರೆ ಲಂಡನ್ ವಾಣಿಜ್ಯಸಂಘದವರ ವಿಶೇಷ ಸಭೆಯು ಕೂಡುವುದು.

ದಕ್ಷಿಣ ಹಿಂದೂಸ್ಥಾನ

ಸಿಲೋನು ದ್ವೀಪದ ಮುಖ್ಯ ಪಟ್ಟಣವಾದ ಕೊಲೊಂಬದಲ್ಲಿ ಒಂದ ಸೆಶನ್ಸ್ ಮೊಕದ್ದಮೆಯು ತನಿಖೆಯಾಗುತ್ತಿರುವ ವೇಳೆ ಒಬ್ಬ ಜೂರಿಯು ನಿದ್ದೆಮಾಡುತ್ತಿದ್ದನು. ಜಡ್ಜರು ನೋಡಿ ದರ್ಯಾಪ್ತಿಯನ್ನು ನಿಲ್ಲಿಸಿ ಮರುದಿನ ಅವನ ಮೇಲೆ ಮೊಕದ್ದಮೆ ಮಾಡಿದಾಗ ಆ ಪಂಚಾಯಿತಿಗಾರನು ತನ್ನ ಅನಿವಾರ್ಯಗಳನ್ನು ಹೇಳಿ ಜಡ್ಜಿಯವರ ಕ್ಷಮೆ ಬೇಡಿದ್ದರಿಂದ ಅವರು ಎಚ್ಚರಿಕೆ ಹೇಳಿ ಬಿಟ್ಟುಬಿಟ್ಟರು.

ಗುಂಟೂರಲ್ಲಿ ಹರಿಯುವ ಕೃಷ್ಣಾನದಿಯು ಈ ವರುಷ ಎರಡನೇ ಸಲ ಪ್ರವಾಹ ಬಂದು ದಡಗಳ ಮೇಲೆ ಹೊರಳಿ ಅನೇಕ ಗ್ರಾಮಗಳನ್ನೂ, ಫಲಭರಿತವಾದ ಜಮೀನುಗಳನ್ನೂ ಕೊಚ್ಚಿ ಬಿಟ್ಟಿದೆ. ಸಾವಿರಾರು ಪ್ರಜೆಗಳು ಜೀವನಕ್ಕೆ ಮಾರ್ಗವಿಲ್ಲದೆ ಕಷ್ಟಪಡುತ್ತಾರೆ.

ಮದ್ರಾಸ್ ಪಟ್ಟಣದ ಮುನಿಸಿಪಲ್ ಆಫೀಸಿನಲ್ಲಿ ಗುಮಾಸ್ತೆಯಾಗಿದ್ದ ಸುಬ್ರಹ್ಮಣ್ಯ ಅಯ್ಯರ್ ಎಂಬ ೩೩ ವರುಷದ ಬ್ರಾಹ್ಮಣನು ಕಳೆದ ಸೋಮವಾರ ಸಾಯಂಕಾಲ ಮಸ್ಟಿಯಲ್ಲಿ ಮಂಗಳಾರತಿ ನೋಡಿ ನಮಸ್ಕಾರಮಾಡುವಾಗ್ಗೆ ಅವನ ಬಟ್ಟೆಯು ಕರ್ಪೂರದ ಆರತಿಗೆ ತಗಲಿ ಹತ್ತಿಕೊಂಡು ಮೈಯೆಲ್ಲಾ ಸುಟ್ಟು ಹೋಯಿತು. ಅವನ ತಂದೆ ಮುಂತಾದವರು ಕೂಡಲೇ ಆಸ್ಪತ್ರೆಗೆ ಅವನನ್ನು ಸಾಗಿಸಿ ಶುಶ್ರೂಷೆ ನಡೆಸಿದರೂ ಅವನು ಮೃತಪಟ್ಟನು.

ಅನಂತಶಯನದಲ್ಲಿ ಒಬ್ಬ ಕಕ್ಷಿಗಾರನು ತನ್ನ ಮೊಕದ್ದಮೆಯನ್ನು ದೊಡ್ಡ ವಕೀಲನಿಗೆ ವಹಿಸಬೇಕೆಂದು ತಿರುವಾನಂತಪುರಕ್ಕೆ ಹೋಗುತ್ತಿದ್ದಾಗ ನಾಲ್ಕು ಜನರು ಅವನನ್ನು ನಿಲ್ಲಿಸಿಕೊಂಡರು. ಅವರಲ್ಲಿ ಒಬ್ಬನು ತಾನೇ ದೊಡ್ಡ ವಕೀಲನೆಂದು ನಟಿಸಿ ಆ ಕಕ್ಷಿಗಾರನಿಗೆ ನಂಬಿಕೆ ಹುಟ್ಟಿಸಿ ಅವನಿಂದ ಎರಡು ಪವನುಗಳನ್ನು ತೆಗೆದುಕೊಂಡನು. ಇದು ಪತ್ತೆಯಾಗಿ ೪ ಜನರ ಮೇಲೆಯೂ ಮೊಕದ್ದಮೆ ನಡೆದು ಸೆಶ್ಶನ್ಸ್ ಜಡ್ಜರು ಆ ಪೈಕಿ ೩ ಮಂದಿಗೆ ತಲಾ ಒಂದು ವರುಷ ಕಠಿಣ ಸಜೆಯನ್ನೂ ೧೦೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿದರು. ನಾಲ್ಕನೇ ಅಪಾದಿತನಿಗೆ ೧೮ ತಿಂಗಳ ಕಠಿಣ ಸಜಸ್ತೂ ೧೦೦ ರೂಪಾಯಿ ಜುಲುಮಾನೆಯೂ ಆಯಿತು

ದಕ್ಷಿಣ ಕನ್ನಡ.

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಪ್ರೊ. ಪಿ. ನಂಬ್ರ 93/1914

1. ಅತ್ತಾವರ ಭಾಗಿ
2. ಭಕ್ತಿಮತಿ.
3. ಕುಸುಮಪತಿ.
4. ಪಾಂಡೇಶ್ವರ ರಾಮಯ್ಯ.

} ಮೈನರರು } ಅರ್ಜಿದಾರರು.

ತಾ 28-3-1914ರಲ್ಲು ಮೃತಪಟ್ಟ, ದೂಮಪ್ಪ ಗುರಿಕಾರನ ಮಗ ಪಾಂಡೇಶ್ವರ ಲಕ್ಷ್ಮಣನಿಗೆ ಸಲ್ಲುವ ಹಣವನ್ನು ವಸೂಲು ಮಾಡುವರೆ ತಮ್ಮ ಪೈಕಿ 1ನೇಯವಳ ಹೆಸರಲ್ಲಿ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಅರ್ಜಿ ಕೊಟ್ಟಿರುತ್ತಾರೆ. ಆಕ್ಷೇಪಯಿದ್ದವರು ತಾ. 15-9-14ನೇ ದಿವಸ ೧೧ ಗಂಟೆಗೆ ಜಿಲ್ಲಾ ಕೋರ್ಟಿಗೆ ಜಾಹೀರು ಮಾಡಿಕೊಳ್ಳತಕ್ಕದ್ದು.

ಮಂಗಳೂರು 21-8-1914. M. Madhava Rao. *Vakil for Petitioner.*

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಪ್ರೊ. ಪಿ ನಂಬ್ರ [illegible]/1914

1. ಕುಂಬಳೆ ಪದ್ಮನಾಭ ಪ್ರಭು.
2. ,, ,, ಜನಾರ್ಧನ ಪ್ರಭು.
3. ,, ,, ವಿಶ್ವನಾಥ ಪ್ರಭು

| ಮೈನರರ ಕ್ಷೇ ಮಹೇಂತಕಗಳು ಲಕ್ಷ್ಮಿಯಾನೆ ಯಮುನ ಅಮ್ಮ | ಅರ್ಜಿದಾರರು.

ತಾ. 7-4-1913ರಲ್ಲು ಮಂಗಳೂರು ಶಹಾರಿನಲ್ಲಿ ಮೃತವಾದ ಕುಂಬಳೆ ಹನುಮಂತ ಯಾನೆ ಅಚ್ಯುತ ಪ್ರಭುಗಳ ಸಾಲಗಳನ್ನು ವಸೂಲು ಮಾಡುವರೆ ಮೇಲಿನ ಅರ್ಜಿದಾರರು 1ನೇ ಅರ್ಜಿದಾರನ ಹೆಸರಿಗೆ ಸರ್ಟಿಫಿಕೇಟು ಸಿಕ್ಕಬೇಕಾಗಿ ಮಾಡಿದ ಸೆಕ್ಷೆಶನ್ ಸರ್ಟಿಫಿಕೇಟು ಅರ್ಜಿಯು ತಾ. 17-9-14ಕ್ಕೆ ಮೇಲಿನ ಕೋರ್ಟಿನಲ್ಲಿ ತನಕಿಗೆ ಮಧ್ಯಾನ್ಹ 11 ಗಂಟೆಗೆ ಇಟ್ಟಿರುತ್ತದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಗಳು ಜಾಹೀರು ಮಾಡತಕ್ಕದ್ದು.

ಮಂಗಳೂರು 20-8-14. **A. Varada Rau.** ***Vakil for Pititioner.***

ನೋಟೀಸು.

ಕೊಡಗು ವಿದ್ಯಾ ಇಲಾಖೆಯ ಗವರ್ನಮೆಂಟ ಸ್ತ್ರೀ ಪಾಠಶಾಲೆಗಳಲ್ಲಿ ಮಾಹೆಯಾನ ರೂ ೨೫ ರಿಂದ ೩೦ ಮತ್ತು ೩೫ ರೂಪಾಯಿ ತಲಬಿನ ಇಬ್ಬರು ತರ್ಬೀತಾದ ಉಪಾಧ್ಯಾಯಿನಿಯರು ಬೇಕಾಗಿದ್ದಾರೆ. ಲೋವರ್ ಸೆಕೆಂಡರಿ ಅಥವಾ ಮೇಲಿನ ಪರೀಕ್ಷೆಗಳನ್ನು ಪಾಸಾದವರು ಕೆಳಗಿನ ವಿಳಾಸಕ್ಕೆ ಅರ್ಜಿಮಾಡುವದು.

A. Rama Rau
Asst Inspector of schools,
Coorg, Mercara.

ಉಡುಪಿ.—ಶ್ರೀ ಅದಮಾರು ಶ್ರೀ ಪಾದಂಗಳವರ ಸೂಚನೆ ಮೇರೆಗೆ ಇಲ್ಲಿರತಕ್ಕ ಶ್ರೀ ಪಾದಂಗಳವರೂ ವೈದಿಕರೂ ಈ ತಾ. ೨೧ರಲ್ಲು ಶ್ರೀ ಕೃಷ್ಣ ಮಠದಲ್ಲಿ ಸಭೆ ಸೇರಿ ಈ ಯುರೋಪ ಖಂಡದಲ್ಲಿ ಪ್ರಾರಂಭವಾಗಿರುವ ಘೋರ ಯುದ್ಧದಲ್ಲಿ ನಮ್ಮ ಚಕ್ರವರ್ತಿಗಳಿಗೆ ಸರ್ವ ಪ್ರಕಾರದಲ್ಲಿಯೂ ಜಯವಾಗಬೇಕೆಂದು ಶ್ರೀ ಕೃಷ್ಣನನ್ನು ಪ್ರಾರ್ಥಿಸಿ ಈ ಸಂಗತಿಯನ್ನು ಪರ್ಯಾಯ ಶಿರೂರು ಶ್ರೀ ಪಾದಂಗಳವರು ತಂತಿ ಮೂಲಕ ಮೈಸರಾಯ ಪ್ರಭುಗಳಿಗೆ ತಿಳಿಸಿರುವರು

ಈ ತಾ ೨೦ರಲ್ಲು ಕೊರನೇಶನ್ ಟ್ರಾನ್ಸಿಟ್ ಕಂಪೆನಿಯ ಜಟ್ಕದಲ್ಲಿ ಮಂಗಳೂರಿಂದ ಇಲ್ಲಿಗೆ ಬರುತ್ತಿದ್ದ ಸುಮಾರು ೧೦ ವರುಷ ಪ್ರಾಯದ ಒಬ್ಬ ಸೊನಾರ್ ಜಾತಿಯ ಹುಡುಗನಿಗೆ ಜಟ್ಕದಲ್ಲಿಯೇ ಕಡಂಬಳೆ ಹಾವು ಕಚ್ಚಿ ಸುಮಾರು ೯ ಗಂಟೆ ರಾತ್ರೆಗೆ ಇಲ್ಲಿ ಜಟ್ಕದಿಂದ ಇಳಿದ ಸ್ವಲ್ಪ ಹೊತ್ತಿನಲ್ಲಿಯೇ ಆತನು ಮೃತನಾದನು

ಗಣೇಶ ಚತುರ್ಥಿಯನ್ನು ಇಲ್ಲಿ ಸರ್ವರೂ ಏಕಪ್ರಕಾರವಾಗಿ ಸೋಮವಾರ ದಿವಸವೇ ಆಚರಿಸಿದರು ಶೇ। ಉದ್ಯಾವರ ನಾರಾಯಣಾಚಾರ್ಯರು ಮಂಗಳವಾರವೇ ಆಚರಿಸಬೇಕಾಗಿ ಪ್ರತ್ಯೇಕವಾಗಿ ತಯಾರಿಸಿ ಅಲ್ಲಲ್ಲಿ ಕಳುಹಿಸಿದ ಪತ್ರವನ್ನು ಇಲ್ಲಿ ಯಾರೂ ಲಕ್ಷ್ಯ ಮಾಡಿದಂತೆ ತೋರಲಿಲ್ಲ

ಇಲ್ಲಿಯ ಅಂಗಡಿಗಾರರು ವಿಲಾಯಿತಿ ಸಾಮಾನುಗಳಿಗೂ ಸಕ್ಕರೆ ಗೋಧಿ ಮೊದಲಾದ ಪದಾರ್ಥಗಳಿಗೂ ದಿನೇ ದಿನೇ ಬೆಲೆ ಏರಿಸುತ್ತಲೇ ಬರುತ್ತಾರೆ ಮಳೆ ಹೆಚ್ಚಾಗಿ ಬೈಲು ಗದ್ದೆಗಳ ಪೈರಿಗೆ ಹಾನಿಯಾಗಿದೆ.

ಇದೇ ತಿಂಗಳ ತಾ ೧೬ರಲ್ಲಿ ಜುಬುಲಿ ಯುನಿಯನ್ ಕ್ಲಬ್ಬಿನಲ್ಲಿ ಸೆಕ್ರೆಟರಿಗಳಾದ ರಾ। ಕೊಟ್ಟಿಕಾರ್ ರಾಮನಾಥ ಪೈಗಳವರು ಉಡ್ಪಿ ಮಹಾ ಜನರ ಸಭೆ ಕರೆದರು. ವಕೀಲರೂ, ವ್ಯಾಪಾರಸ್ಥರೂ, ಇತರರೂ ಈ ಸಭೆಯಲ್ಲಿ ಹಾಜರಿದ್ದರು. ರಾ। ಸಾಂತಾರ್ ವೆಂಕಟಸುಬ್ಬ ಭಟ್ಟರವರು ಸಭಾಧ್ಯಕ್ಷರಾಗಿದ್ದರು ಮೈಸರಾಯ ಪ್ರಭುಗಳಿಗೆ ಈ ಯುದ್ಧ ಸಂದರ್ಭದಲ್ಲಿ ರಾಜಭಕ್ತಿ ಶ್ರದ್ಧೆಗಳನ್ನು ಸೂಚಿಸಿ ತಂತಿ ಬಿಡಲು ನಿರ್ಣಯಿಸಲ್ಪಟ್ಟಿತು. ವಿದೇಶಿ ಸಾಮಾಗ್ರಿಗಳ ಬೆಲೆಯನ್ನು ವ್ಯಾಪಾರಸ್ಥರು ಏರಿಸದಂತೆ ಒಂದು ಕಮ್ಮಿಟಿಯು ಸಹ ಏರ್ಪಾಡಿಸಲ್ಪಟ್ಟಿತು. ಇದೇ ಸಭೆಯಲ್ಲಿ ಉಡ್ಪಿ ನಿವಾಸಿಕರ ಪರವಾಗಿ ಗವರ್ನರ ದೊರೆಗಳವರು ಚಿತ್ತೈಸುವಾಗ ಅವರಿಗೆ ಅರ್ಪಿಸುವ ಬಿನ್ನಹ ಪತ್ರದ ಪ್ರತಿಯನ್ನು ಜಿಲ್ಲಾ ಕಲೆಕ್ಟರ ದೊರೆಗಳವರಿಗೆ ಕಳುಹಿಸಿಕೊಡಲು ನಿರ್ಣಯಿಸಲ್ಪಟ್ಟಿರುವುದು.

ಮಂಗಳೂರು.

ಇಲ್ಲಿಯ ಮಾಂಸ ಮಾರ್ಕೆಟಿನಲ್ಲಿ ಮಾಂಸದ ದರವು ದಿನೇ ದಿನೇ ಏರುತ್ತಲಿರುವುದರಿಂದ ಇನ್ನು ಮುಂದೆ ರಾತ್ಲಿಗೆ ಆಣೆ ಶಕ್ಕಿಂತ ಹೆಚ್ಚಿನ ದರದಲ್ಲಿ ಮಾಂಸ ಮಾರದಂತೆ ಮುನಿಸಿಪಾಲಿಟಿಯವರು ನಿಯಮ ಮಾಡಬೇಕೆಂದು ಜಿಲ್ಲಾ ಕಲೆಕ್ಟರ ದೊರೆಗಳವರು ಮುನಿಸಿಪಾಲಿಟಿಯವರಿಗೆ ಆಜ್ಞಾಪಿಸಿರುವರೆಂದು ತಿಳಿಯುತ್ತೇವೆ.

ಇಲ್ಲಿ ಬಿಡಿ ನಾಯಿಗಳ ಉಪಟಳವು ಹೆಚ್ಚಿದಂತೆ ತೋರುತ್ತದೆ. ಆಹಾರವಿಲ್ಲದೆ ಹುಚ್ಚು ನಾಯಿಗಳಂತೆ ತೋರುವ ಈ ಬಿಡಿ ನಾಯಿಗಳು ಬೀದಿ ತುಂಬಾ ಮುಖ್ಯವಾಗಿ ಹಂಪನಕಟ್ಟೆಯಿಂದ ಮುಸಾಫ್ರಿ ಬಂಗ್ಲೆಯ ವರೆಗಿನ ಮಾರ್ಗದಲ್ಲಿ ವ ಮಾರ್ಕೆಟು ಮಾರ್ಗದಲ್ಲಿ ಬಹಳವಾಗಿರುವುದರಿಂದ ಮುನಿಸಿಪಾಲಿಟಿಯವರು ನಿಗಾ ಕೊಟ್ಟು ಇವುಗಳನ್ನು ಕೊಲ್ಲಿಸಲು ಹುಕುಂ ಕೊಡುವುದು ಉಚಿತವಾಗಿದೆ.

ಇಲ್ಲಿಯ ಜಿಲ್ಲಾ ಸರ್ಜನರವರು ಇಲ್ಲಿಂದ ಇತರ ಕಡೆಗೆ ಹಂಗಾಮಿಯಾಗಿ ವರ್ಗಾಯಿಸಲ್ಪಟ್ಟಿರುವರು.

ಮಳೆಗಾಲ ಪ್ರಾರಂಭವಾದನಂತರ ಇಲ್ಲಿಯ ಮುನಿಸಿಪಾಲ್ ರಸ್ತೆಗಳಲ್ಲಿ ಕೆಲವು ಕಳೆದ ವರ್ಷಕ್ಕಿಂತ ಬೇಗನೇ ದುರುಸ್ತಿ ಮಾಡಲ್ಪಟ್ಟದ್ದರಲ್ಲಿ ಮುನಿಸಿಪಾಲಿಟಿಯವರ ಕಾರ್ಯದಕ್ಷತೆಯು ತೋರ್ಪಡುತ್ತದೆನ್ನಬಹುದಾದರೂ ದುರುಸ್ತಿ ಮಾಡಲ್ಪಟ್ಟ ರಸ್ತೆಗಳು ಬೇಗನೇ ಪುನಃ ಹುಳ್ಳುಹುಳ್ಳಾಗಿರುವುದು ಶೋಚನೀಯವಾಗಿದೆ. ಹೊಸ ಗಣಪತಿ ಸೆಕಂಡರಿ ಶಾಲೆಯ ಎದುರಿನ, ಪುತ್ತೂರು ಸಾಹೇಬರ ಅಂಗಡಿಯ ಕೆಳರಸ್ತೆ ವ ಇನ್ನು ಕೆಲವು ರಸ್ತೆಗಳು ಒಂದೊಂದು ಸಲ ದುರುಸ್ತಿ ಮಾಡಲ್ಪಟ್ಟಿದ್ದರೂ ಪುನಃ ನಾದುರುಸ್ತಿಯನ್ನು ಹೊಂದಿರುವುದು. ಈ ಕೆಲಸಗಳನ್ನು ವಹಿಸಿಕೊಂಡ ಕಂಟ್ರಾಕ್ಟರರು ಕಂಟ್ರಾಕ್ಟು ನಿಯಮಕ್ಕನುಸಾರವಾಗಿ ಪ್ರಥಮ ಸಾರಿಯೇ ಈ ಕೆಲಸವನ್ನು ಸರಿಯಾಗಿ ಮಾಡಿಸುತ್ತಿದ್ದರೆ ದಾರಿಗರಿಗೆ ವ ಬಂಡೀ ಎಳೆಯುವ ಕುದುರೆ ಎತ್ತುಗಳಿಗೆ ದಾರಿಗಳ ನಾದುರುಸ್ತಿಯಿಂದುಂಟಾಗುವ ಉಪಟಳವು ಪುನಃ ಸಂಭವಿಸುತ್ತಿದ್ದಿಲ್ಲವೆಂದು ಹೇಳಬೇಕಾಗಿದೆ.

ಬ್ರಿಟಿಷ್ ಚಕ್ರವರ್ತಿಗಳ ಕಡೆಗೆ ತಮಗಿರುವ ರಾಜಭಕ್ತಿಯ ಪರವಾಗಿ ಇಲ್ಲಿಯ ಬಿಲ್ಲವರ ಸಮೂಹವು ಕೂಡಾ ಇದೇ ಕಳದ ತಾ. ೨೩ನೇ ಆದಿತ್ಯವಾರ ಬೆಳಗ್ಗೆ ಕೊಡಿಯಾಲಬೈಲು ಶ್ರೀ ಗೋಕರ್ಣನಾಥ ದೇವಸ್ಥಾನದಲ್ಲಿ ನೆರದು ದೇವರ ಸನ್ನಿಧಿಯಲ್ಲಿ ಮಹಾಪೂಜೆಯನ್ನು ನಡಿಸಿ ನಮ್ಮ ಸಾಮ್ರಾಜ ಸರಕಾರಕ್ಕೆ ಸಂಪೂರ್ಣ ಜಯವಾಗಲೆಂದು ಭಕ್ತಿಪುರಸ್ಸರವಾಗಿ ಪ್ರಾರ್ಥನೆಯನ್ನು ನಡಿಸಿರುವದು.

ಕಾಫಿ ಕಳವು ಮೊಕದ್ದಮೆಯಲ್ಲಿ ಆಪಾದಿಸಲ್ಪಟ್ಟ ಕಾಂತಪ್ಪ ಮತ್ತು ವೈಂದಪ್ಪನ ಮೇಲಿದ್ದ ಆರೋಪಣೆಗಳ ತನಕಿ ನಡೆದು ಕಳೆದವಾರ ಕಾಂತಪ್ಪನಿಗೆ ೬ ತಿಂಗಳ ಕಠಿಣ ಸಜೆಯೂ ವೈಂದಪ್ಪನಿಗೆ ೩ ತಿಂಗಳ ಕಠಿಣ ಸಜೆಯೂ ವಿಧಿಸಲ್ಪಟ್ಟಿರವುದು.

ರೋಮನ್ ಕೆಥೊಲಿಕರ ಜಗದ್ಗುರುಗಳಾದ ಪೋಪಸ್ವಾಮಿಯವರು ದೈವಾಧೀನರಾದ ಶೋಕಾರ್ಥವನ್ನು ತೋರ್ಪಡಿಸುವರೆ ಈ ದಿನ ೪½ ಗಂಟೆಗೆ ಇಲ್ಲಿಯ ಕೆಥೊಲಿಕ್ ಎಸೋಷಿಯೇಶನಿನಲ್ಲಿ ಸೊಸೈಟಿ ಮೆಂಬರರ ಜನರಲ್ ಮೀಟಿಂಗು ಕೂಡುವುದು.

ಇಲ್ಲಿಯ ಪಟ್ಟಣಿಗರ ರಾಜಭಕ್ತಿಯನ್ನು ತೋರ್ಪಡಿಸಿ ಮುನಿಸಿಪಾಲಿಟಿಯ ಚೆಯರ್ಮೇನರವರು ಮೈಸರಾಯ ಪ್ರಭುಗಳಿಗೆ ಬಿಟ್ಟ ತಂತಿ ವಾರ್ತೆಗೆ ಕೃತಜ್ಞತೆಯನ್ನು ತೋರ್ಪಡಿಸುವ ಉತ್ತರವು ಮೈಸರಾಯರ ಖಾಸಗಿ ಸೆಕ್ರೆಟರಿಯವರಿಂದ ಬಂದಿರುವುದು

ಕೆಥೊಲಿಕ ಎಸೊಸಿಯೇಶನಿನವರು ಕಳುಹಿಸಿದ ತಂತಿಗೂ ಕೃತಜ್ಞತೆಯನ್ನು ತೋರ್ಪಡಿಸುವ ಉತ್ತರವು ಬಂದಿರುತ್ತದೆ.

ಜರ್ಮನರ ಮತ್ತು ಆಸ್ಟ್ರಿಯನರ ಕೂಡೆ ಲೇವಾದೇವಿಗಳನ್ನು ನಡಿಸಕೂಡದೆಂಬ ಆಜ್ಞೆಗೆ ಇಲ್ಲಿ ವಿಪರೀತ ಅರ್ಥವು ಕಲ್ಪಿಸಲ್ಪಟ್ಟದೆ. ದೇಶೀಯ ಪ್ರೊಟೆಸ್ಟಾಂಟ ಕ್ರೈಸ್ತರಿಗೆ "ಮಿಶ್ಶನಿನವರು" ಎಂಬ ಅಡ್ಡ ಹೆಸರು ಇಲ್ಲಿ ರೂಢಿಗೆ ಬಂದು ಹೋಗಿರುವುದರಿಂದ ಮೇಲಿನ ಆಜ್ಞೆಯನ್ನು ತಪ್ಪಾಗಿ ಗ್ರಹಿಸಿ ಇಲ್ಲಿ ಬಾಸೆಲ್ ಮಿಶ್ಶನಿಗೆ ಸೇರಿದ ದೇಶೀಯ ಕ್ರೈಸ್ತರ ಕೂಡೆ ಸಾಹುಕಾರರು ಲೇವಾದೇವಿಗಳನ್ನು ನಡಿಸಲು ಹೆದರಿಕೊಂಡಿರುವುದರಿಂದ ಈ ಬಡ ದೇಶೀಯ ಕ್ರೈಸ್ತರಿಗೆ ಬಹಳ ತೊಂದರೆಗೆ ಕಾರಣವಾಗಿರುವುದು. ಈ ಆಜ್ಞೆಯು ಜರ್ಮನ್ ವ ಆಸ್ಟ್ರಿಯ ದೇಶದಲ್ಲಿ ಹುಟ್ಟಿ ಬೆಳೆದ ಆ ದೇಶೀಯರಿಗೆ ಲಗಾವಾಗುತ್ತದಲ್ಲದೆ ಇಲ್ಲಿಯೇ ಹುಟ್ಟಿ ಬೆಳೆದಿರುವ ದೇಶೀಯ ಕ್ರೈಸ್ತರಿಗೆ ಲಗಾವಾಗುವುದಿಲ್ಲವಾಗಿಯೂ ಇಲ್ಲಿಯ ದೇಶೀಯ ಕ್ರೈಸ್ತರು ಇತರ ದೇಶೀಯರಂತೆಯೇ ಬ್ರಿಟಿಷ್ ಪ್ರಜೆಗಳಾಗಿರುವುದರಿಂದ ಇವರ ಕೂಡೆ ಲೇವಾದೇವಿಗಳನ್ನು ನಡಿಸುವರೆ ಭಯವಿಲ್ಲವಾಗಿಯೂ ಈ ಮೂಲಕ ಸೂಚಿಸುತ್ತೇವೆ.

ದಕ್ಷಿಣ ಕನ್ನಡಾ ಕಲೆಕ್ಟರ ಆಫೀಸು:—ಕುಂದಾಪುರ ಆಕ್ಟಿಂಗ್ ಸಬ್ ಮೇಜಿಸ್ಟ್ರೇಟರಾದ ಮಿ ಎಮ್. ಸುಲ್ತಾನ್ ಮೊಹಿದಿನ್ ಸಾಹೇಬರವರು ಉಡ್ಪಿ ಆಕ್ಟಿಂಗ್ ಸಬ್ ಮೇಜಿಸ್ಟ್ರೇಟರಾಗಿಯೂ ಉಡ್ಪಿಯ ಆಕ್ಟಿಂಗ್ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿರುವ ಮ। ರಾ। ರಾ। ಆರ್ ಶಿವರಾಯರವರು ಕುಂದಾಪುರದ ಆಕ್ಟಿಂಗ್ ಸಬ್ ಮೇಜಿಸ್ಟ್ರೇಟರಾಗಿಯೂ ಬೆಳ್ತಂಗಡಿಯ ಡ್ಯುಪಿಟಿ ತಹಸೀಲದಾರರಾಗಿರುವ ಮ। ರಾ। ರಾ। ಡಿ. ವಾಸುದೇವರಾಯರು ಕಾರ್ಕಳದ ಸಬ್ ಮೇಜಿಸ್ಟ್ರೇಟರಾಗಿಯೂ ಕಾರ್ಕಳದ ಸಬ್ ಮೇಜಿಸ್ಟ್ರೇಟರಾದ ಮ। ರಾ। ರಾ। ಬಿ. ಕೃಷ್ಣಾಚಾರಿಯವರು ಬೆಳ್ತಂಗಡಿ ಡ್ಯುಪಿಟಿ ತಹಸೀಲದಾರರಾಗಿಯೂ ನೇಮಿಸಲ್ಪಟ್ಟಿರುವರು.

ಒಂದೇ ತಿಂಗಳು! ಮೀರಿಹೋದ ಮೇಲೆ ಚಿಂತಿಸಬೇಡಿ!!

ಅಲ್ಪ ಬೆಲೆ!!.

ಬೇರೆ ಬೇರೆ ಪುಸ್ತಕಗಳಿಗೆ ವೃಥಾ ಹೆಚ್ಚು ಹಣವನ್ನು ವೆಚ್ಚ ಮಾಡಬೇಡಿ!!

ಸುಳ್ಳಿಗೆ ನೂರಾರು ದಾರಿ! ನಿಜಕ್ಕೆ ಒಂದೇ ದಾರಿ!!

ನಿಮ್ಮ ಪರೀಕ್ಷೆಗಾಗಿ ಮೊದಲು ಒಂದು ಪ್ರತಿ ಮಾತ್ರ ೧೮೧ ಗೆ ಟಪ್ಪಾಲು ಖರ್ಚು ಇಲ್ಲದೆ ದೊರೆಯುತ್ತೆ.

೩ ಪುಸ್ತಕಗಳೂ ಒಟ್ಟಾಗಿ ಒಂದರಲ್ಲೇ ಬೈಂಡಾಗಿವೆ.

ಈ ದಿನವೇ ಒಂದು ಕಾರ್ಡು ಬರೆಯಿರಿ! ಬೇಗ ಬೇಗ ಬರೆಯಿರಿ!!

ಬಹುಮಾನ—ಒಟ್ಟಾಗಿ ತರಿಸಿಕೊಳ್ಳುವವರಿಗೆ, ೩ ಪ್ರತಿಗೆ ಒಂದು ಉತ್ತಮವಾದ ಭಗವದ್ಗೀತ [ಟೀಕೆ, ತಾತ್ಪರ್ಯ ಸಹ ಉಳ್ಳದ್ದು] ೫ ಪ್ರತಿಗೆ ೧ ಪ್ರತಿ ಉಚಿತ ಅಂಚೆ ವೆಚ್ಚ ಮಾಫಿ

ಆಂಗ್ಲಭಾಷಾ ಪ್ರಕಾಶಕ

೬೦ ಭಾಗಗಳೂ ಒಂದರಲ್ಲೇ ಅಡಗಿವೆ — ಒಂದೇ ತಿಂಗಳು ಟಪ್ಪಾಲ್ ಖರ್ಚಿಲ್ಲ.

(ಸ್ವತಃ ಇಂಗ್ಲೀಷು ಕಲಿಯುವುದಕ್ಕೆ ಅತ್ಯುಪಯೋಗವಾದದ್ದು)

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೨ ರೂ.

೧೧ ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತ ಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ. ೬ ಆಣೆ

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಪ್ರಜ್ಞಾ ಸಾರಸ್ವತ ಚೂರ್ಣ ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವವು ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B. M Nath & Co, *Ayurvedic Chemists,*

Vepery Post. MADRAS

ಪ್ರಾಜ್ಞದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:— ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ಭಸ್ಮ, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ. ಚಳಿಜ್ವರ, ಜ್ವರ, ಹೊಟ್ಟೇ ಶೂಲೆ, ಸಂದುಗಳ ನೋವು, ಮೈ ಕಾಲು ಛೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ. ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ಊರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ ಸ್ತ್ರೀಯರ ಹೆರಿಗೆ ಶೂಲೆ, ಮಕ್ಕಳ ಎಳವು, ಜ್ವರ, ನಚ್ಚುಜ್ವರ, ಕೃಶತ್ವಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ. — 220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.

ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ. ಕೈಬಿಟ್ಟಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ ಹೊಟ್ಟೆಯುಬ್ಬರಿಸದೆ, ಮೂತ್ರವು ಕಟ್ಟಿದ ಕೊಟ್ಟ ಕೂಡಲೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ ಬೇಕಾದೀತು! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ! ಇತರೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ"

ಮೈಸೂರು.

ಡೋಂಗರೆ

ಇವರ

ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ, ಎಲ್. ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು.

ಬಾಲಾಮೃತವನ್ನು ನಾನು ಉಪಯೋಗಿಸಿಹೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟ್ಲಿ ಒಂದರ ಕಿಮ್ಮತು 0—12—0. ಟಪಾಲ ಖರ್ಚು 0—4—0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ

Girgaon Bombay. ಗಿರಗಾಂವ ಮುಂಬಯಿ

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ. ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತ್ತು ಆಣೆ 8. ಡಜನ್ 1ಕ್ಕೆ ರೂ. 5-0-0. ವಿ. ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್‌ಮಾರ್ಕ್. 0—6—0. 3 ಡಬ್ಬಿಗಳಿಗೆ 0—15—0. ವಿ. ಪಿ. ಪ್ರತ್ಯೇಕ.

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ್.

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—6. ಡಜನ್ 1ಕ್ಕೆ 1—2—0. ವಿ. ಪಿ. ಪ್ರತ್ಯೇಕ.

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ. 0—8—0.

ಮೋಹಿನಿ ತೈಲ

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ **ಮೋಹಿನಿ** ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ. ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತ್ತು **ಆಣೆ** 0—12—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ದರ ರೂ. 1—0—0.

ಕೆ. ನಟರಾಜನ್ ಎಡಿಟರ್, ಇಂಡಿಯನ್ ಸೋಷಿಯಲ್ ರಿಫ್ಫೊರ್ಮರ್:— ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸವೆಲ್, ಮೈಸೂರು:— ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತವೆ.

ಆರ್. ಆರ್. ಗಂಗೋಲಿ:— ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ದಾಂಡೆಕರ್, ಎಲ್. ಎಮ್. ಎಂಡ್. ಎಸ್:— ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪ್ಪೊ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಅಮೃತಾಂಜನ ಡಿಪ್ಪೊ,

9 ಜಹಂಗೀರ್ ಸ್ಟ್ರೀಟ್, ಜೋರ್ಜ್ ಟೌನ್, **ಮದ್ರಾಸು.**

109 ಫ್ರೇಯರ್ ರೋಡ, **ಮುಂಬಯಿ.**

Printed & Published by V. S. Kamath at the Mangalore Trading Association's Sharada Press, Mangalore.

[illegible]

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ 2—1—0.

ಪುಸ್ತಕ VIII ಮಂಗಳೂರು ತಾ. 4ನೇ ಸಪ್ಟೆಂಬರ ಶುಕ್ರವಾರ 1914. **ಸಂಚಿಕೆ** 36

NOTICE.

In the Court of the District Munsif of Kundapur

INSOLVENCY PETITION $\frac{3}{1914}$

Manjunath Pai, Son of Tandamundi Srinivasa Pai, residing in Ajri Village Coondapoor Taluk. } *Petitioner.*

AND

Mananje Subraya Hegde & Others. ... ... *Creditors.*

Notice is hereby given that the abovenamed petitioner has applied to this Court to be declared an insolvent, and the petition is posted to the 18th of September 1914.

KOONDAPOOR, 1—9—1914. **K. L. Bhandari,** *Vakil.*

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ ಜಡ್ಜರ ಕೋರ್ಟಿನಲ್ಲಿ.

ವ್ರೊ. ಪಿ. ನಂಬ್ರ $\frac{102}{1914}$

ರ್ವೈಮೂದ್ ಪಾಸ್ಕಾಲ ಕುಲಾಸೊ ವಗೈರೆರು 8 ಜನರು—ಅರ್ಜಿದಾರರು.

ಮತ್ತು

1. ಆಲಿಸ ಮೊಂತ್ರೇರೊ.
2. ಬಿರ್ಜಿತ್ತ ಕುಲಾಸೊ. } ರೆಸ್ಪೊಂಡೆಂಟರು.

ತಾರೀಕು 19-5-1914ರಲ್ಲು ಮಂಗಳೂರು ಶಹರು ಬೋಳಾರದಲ್ಲಿ ಮೃತಪಟ್ಟ ಕೈತಾನ್ನ ಕುಲಾಸರ ಆಸ್ತಿಯ ಪರಿಪಾಲನೆ ಬಗ್ಯೆ 1ನೇ ಅರ್ಜಿದಾರಗೆ ಲೆಟ್ಟರ್ಸ್ ಓಫ್ ಯೆಡಮಿನಿಸ್ಟ್ರೇಶನ ಕೊಡಬೇಕಾಗಿ ಮೇಲ್ಕಂಡ ಅರ್ಜಿದಾರರು ಸದರಿ ಕೋರ್ಟಿಗೆ ಮಾಡಿದ ಸದರಿ ಅರ್ಜಿಯು ಇದೇ 1914ನೇ ಇಸವಿ ಅಕ್ಟೋಬರ ತಾರೀಕು 1ಕ್ಕೆ ತನಕಿಗೆ ಇಡೋಣಾಗಿಯದೆ. ಆಕ್ಷೇಪ ಇದ್ದವರು ತಮ್ಮ ಆಕ್ಷೇಪಗಳನ್ನು ಸದರಿ ತಾರೀಕಿನ ಒಳಗೆ ಸದರಿ ಕೋರ್ಟಿನ ಮುಂದೆ ಜಾಹೀರುಮಾಡಿಕೊಳ್ಳತಕ್ಕದ್ದು ಎಂತ ಈ ಮೂಲಕ ಸರ್ವ ಜನರಿಗೆ ತಿಳಿಸೋಣಾಗುತ್ತದೆ.

ಮಂಗಳೂರು. ತಾ. 2—9—1914. **A. C. Gonsalves.** ***Pleader for Petitioners***

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ವ್ರೊ. ಪಿ. ನಂಬ್ರ $\frac{98}{1914}$

ಮಾಣಿ ಹೆಂಗಸು—**ಅರ್ಜಿದಾರಳು.**

ಮಂಗಳೂರು ತ್ಯಾಹಾರ ಪೈಕಿ ಹೊೈಗೆ ಬಜಾರ್ ಬೆಂಗರೆಯಲ್ಲಿ ಕಳೆದ ಫೆಬ್ರುವರಿ ತಾ. ೧೭ರಲ್ಲು ಮೃತಪಟ್ಟ ಕೊರಗ ಮರಕಾಲನ ಸಾಲಗಳನ್ನು ವಸೂಲು ಮಾಡುವ 1889ನೇ ಇಸವಿ VIIನೇ ಆಕ್ಟ್ ಮೇರೆಗೆ ತನಗೆ ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ಸದರಿ ಮೃತನ ವಿಧವೆ ವ ಯಕ್ಸ್‌ಕ್ಯೂಟ್ರಿಕ್ಸಳಾದ ಮೇಲ್ಕಂಡ ಅರ್ಜಿದಾರಳು ಕೊಟ್ಟ ಸದರಿ ಅರ್ಜಿ ಇದೇ ಬರುವ ಸಪ್ಟಂಬರ ತಾ. 8ಕ್ಕೆ ಪೂರ್ವಾಹ್ನ 11 ಗಂಟೆಗೆ ತನಕಿಗೆ ಇಟ್ಟಿರುವದರಿಂದ ಆಕ್ಷೇಪಣೆ ಇದ್ದವರು ಅವರ ಆಕ್ಷೇಪಣೆಗಳನ್ನು ಸದರಿ ಕೋರ್ಟಿನಲ್ಲಿ ಸದರಿ ತಾರೀಕಿಗೆ ಜಾಹೀರು ಮಾಡಿಕೊಳ್ಳತಕ್ಕದ್ದು.

25—8—1914. **P. D'Souza** *Pleader for Petitioner*

"ಸಕ್ಕರೆಯ ಸಾರವು."

ಬಹಳ **ಅನುಕೂಲವೂ ಉಪಯೋಗಕರವೂ ಆಗಿರುವುದು**

ಸಕ್ಕರೆಯನ್ನು ಉಪಯೋಗಿಸಕೂಡದಂಥಾ

ಮೂತ್ರ ರೋಗಿಗಳಿಗೆ ಅತ್ಯವಶ್ಯಕವಾದದ್ದು.

ಮೇಲಣ ರೋಗಬಾಧೆಯು ಇಲ್ಲದವರು ಸಹ ಇದನ್ನು ಉಪಯೋಗಿಸಿಕೊಳ್ಳಬಹುದು ಸಾಧಾರಣ ಎರಡು ಕುಡುತೆ ಕಾಫಿ ವ ಚಾ ಇತ್ಯಾದಿಗಳಿಗೆ ಒಂದು ಕಾಳಿನ ಪ್ರಮಾಣದಲ್ಲಿ ಈ ಸಕ್ಕರೆಯ ಸಾರವನ್ನು ಹಾಕಿದರೆ ಸರಿಯಾಗಿ ಸವಿಯನ್ನುಂಟುಮಾಡುತ್ತದೆ: ಸಕ್ಕರೆಯ ಸಾರ ತುಂಬಿಸಿದ ಸುಂದರವಾದ ಗಾಜಿನ ಕರಡಿಗೆ ಒಂದಕ್ಕೆ ಕ್ರಯ 0—6—0.

ಲೆಕ್ಟೊಮಿಟರ್ ಎಂಬ ಹಾಲನ್ನು ಪರೀಕ್ಷಿಸುವ ಉಪಕರಣವು.

ಗೃಹಕೃತ್ಯದ ಉಪಯೋಗದ ಬಗ್ಯೆ ಶುದ್ಧವಾದ ಹಾಲು ದೊರಕುವದೇ ಕಷ್ಟಸಾಧ್ಯ. ನೀರನ್ನು ಹಾಲಿಗೆ ಕೂಡಿಸಿ ಮಾರುವ ಅಭ್ಯಾಸವು ಬಹಳವಾಗಿ ರೂಢಿಗೆ ಬಂದಿರುವುದು. ನೀರಿಗೆ ಬೆಲೆಕೊಟ್ಟು ಹಾಲೆಂದು ಕುಡಿಯುವೆವು. ಲೆಕ್ಟೊಮಿಟರ್ ಎಂಬೀ ಉಪಕರಣದಿಂದ ಹಾಲಿಗೆ ನೀರನ್ನು ಕೂಡಿಸಿರುವುದೋ ಎಂಬದನ್ನು ಹಾಲನ್ನು ತೆಗೆದುಕೊಳ್ಳುವಾಗಲೇ ಸುಲಭದಲ್ಲಿ ಯಾರಿಂದಲೂ ಪರೀಕ್ಷಿಸಲಾಗುತ್ತದೆ. ಈ ಉಪಕರಣವನ್ನು ಉಪಯೋಗಿಸುವ ಕ್ರಮವು ಇದರೊಂದಿಗೆ ಸೂಚಿಸೋಣಾಗಿರುತ್ತದೆ.

ಲೆಕ್ಟೊಮಿಟರ್ ಒಂದಕ್ಕೆ ಕ್ರಯ ರೂ. 1—0—0.

ಹಲವು ವರುಷಗಳಿಂದ ಬಹಳ ಗುಣಕಾರಿಯೆಂದು ಅನುಭವ ಸಿದ್ಧವಾದ

ಗಜಕರ್ಣದ ಮುಲಾಮು.

ಒಂದೆರಡು ಸಲ ಇದನ್ನು ಹಾಗಿಸುವಷ್ಟರಲ್ಲಿ ಈ ಮುಲಾಮಿನ ಯೋಗ್ಯತೆಯು ವ್ಯಕ್ತವಾಗುವುದು. ಈ ಮುಲಾಮನ್ನು ಹಚ್ಚಿ ಅದನ್ನು ತೊಳೆದು ತೆಗಿಯುವಾಗ ತಣ್ಣೀರನ್ನೇ ಉಪಯೋಗಿಸತಕ್ಕದು. ಡಬ್ಬಿಯೊಂದಕ್ಕೆ ಕ್ರಯ ರೂ. 0-6-0 ಮಾತ್ರ

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,

[illegible], ಮಂಗಳೂರು

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮಗ್ರಿಗಳು ಬೇಕಾದರೂ, ಪಿ. ಡಿ. ನೀಲಕಾಂತ ಎಂಡ್ ಕೊ. ಬೆನಾರಿಸ್ ಸಿಟಿ ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು. ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉಡುಪು ತೊಡುಪುಗಳನ್ನು ತರಿಸುತ್ತಿರುವರು. ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು. ಸೀದಾ ನಮಗೆ ಬರೆದು ಒಡವೆಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಸೇಕಡಾ 25ರಂತೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಒರ್ಡರುಗಳನ್ನು ವಿ. ಪಿ. ಮೂಲಕ ಕಳುಹಿಸಿಕೊಡುವೆವು ಸಂದೇಹಪಡಬೇಡಿರಿ (1) ಜರಿತಾರಿನ ರೇಶ್ಮೆ, ನಾನಾ ತರದ ರವಿಕೆಗಳು, ಶೀರೆಗಳು, ರವಕೆ ಕಣಗಳು, ಅಂಗಿ ವಸ್ತ್ರ ಇತ್ಯಾದಿ. (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ. (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರ್ಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮಗ್ರಿಗಳು (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳೆಲ್ಲವುಗಳಿಗೂ ಬರೆಯಬಹುದು.

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸಲಾಗುವುದು.

ನಮ್ಮ ವಿಳಾಸ:— ಪಿ ಡಿ ನೀಲಕಾಂತ ಎಂಡ್ ಕೊ,

ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್. ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್ ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ್ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ:—

ಕೆನರಾ ಹೈಸ್ಕೂಲು ಕನ್ನಡ ಪಂಡಿತ

ಎಮ್. ತಿಮ್ಮಪ್ಪಯ್ಯ,

ಮಂಗಳೂರು

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

IIನೇ ಸ್ಟೆಂಡಾರ್ಡ ಗಣಿತ	0—3—0
IIIನೇ ,, ,, ...	0—1—0
IVನೇ ,, ,, ...	0—6—0
3ನೇ ಪುಸ್ತಕದ ಶಬ್ದಾರ್ಥ ಪ್ರಾಣಿಕೋಟಿ, ವನಸ್ಪತಿಕೋಟಿ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ)	0—2—6
4ನೇ ಪುಸ್ತಕದ ಶಬ್ದಾರ್ಥ	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಭಾಗ ...	0—3—0
3ನೇ ದರ್ಜೆಯ ದಕ್ಷಿಣ ಕನ್ನಡದ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು (ಇದರಲ್ಲಿ ವೃತ್ತಿಗಳೂ, ಕಥೆಗಳೂ, ಅಭಿನಯದ ಹಾಡುಗಳೂ ಇರುತ್ತವೆ)	0—1—6
ಗಣಿತಸಾರ ಎಂಬ ಮಗ್ಗಿ ಕೋಷ್ಟಕಗಳ ಪುಸ್ತಕ	0—1—0
ಬಾಲಶಿಕ್ಷೆ	(ಅಚ್ಚಿನಲ್ಲಿದೆ)
ಒಂದನೆಯ ಪುಸ್ತಕ	(ತಯ್ಯಾರಿಯಲ್ಲಿವೆ.)
ಎರಡನೆಯ ,,	
ಮೂರನೆಯ ,,	
ನಾಲ್ಕನೆಯ ,,	

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವುವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಶನ್ ಕೊಡಲಾದೀತು.

ವಿ. ಲಕ್ಷ್ಮಣರಾವ್,

ಸ್ಕೂಲ್ ಮಾಸ್ತರ್, ಉಡುಪಿ.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!

ಹನೂಮತ್ಪರವಾದ್ಯ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ, ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0 ಗ್ರಾಹಕರುತ್ತರೆವಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,

ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ, ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ.	ಮಂಗಳೂರು.
ಮ॥ ಪಾವಂಜೆ ಗುರುರಾವ್,	ಪಾವಂಜೆ ಗೋಪಾಲಕೃಷ್ಣ
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.	ಬ್ರಾಹ್ಮಣ ಕೇರಿ.

ಹಿಂದೂಸ್ಥಾನ ಕೊಒಪರೇಟಿವ್

ಇನ್ಸುರೆನ್ಸ್ ಸೊಸೈಟಿ ಲಿಮಿಟೆಡ್.

ಹೆಡ್ ಆಫೀಸ್— ಹಿಂದೂಸ್ಥಾನ ಬಿಲ್ಡಿಂಗ್ಸ್ ಕಲ್ಕತ್ತ.

ಶಾಖೆಗಳು—ಮುಂಬಾಯಿ, ಮದ್ರಾಸ್, ಅಸ್ಸಾಮು, ಪಂಜಾಬ್.

1912ನೇ ಇಸವಿಯ 6ನೇ ಇನ್ಸುರೆನ್ಸ್ ಆಕ್ಟಿನ ನಿಬಂಧನೆಗಳಿಗೆ ಒಳಪಟ್ಟದ್ದಾಗಿರುತ್ತದೆ.

ನಿಯಮಿತ ಮೂಲಧನ—ರೂ. ಒಂದು ಕೋಟಿ. ಪ್ರತಿಜ್ಞಾತ ಮೂಲಧನ—ರೂ. 870,000,00 ಆಗತ ಮೂಲಧನ—ರೂ. 10,00,000. ಉತ್ತರಿಸೋಣಾದ ವಿಮೆ—ರೂ. 2,22,00,000. ಭಂಡ—ರೂ. 20,00,000.

ಸೊಸೈಟಿಯ ಹಣವು ಸರಕಾರಿ ಭದ್ರತಾ ಪತ್ರಗಳಲ್ಲಿಯೂ, ಸ್ಥಿರಸೊತ್ತುಗಳಲ್ಲಿಯೂ ಹೆಚ್ಚಾಗಿ ಇರುತ್ತಾ ವಿಮೇದಾರರಿಗೆ ಈ ಸೊಸೈಟಿಯಲ್ಲಿ ದೃಢವಾದ ಮತ್ತು ನಿರ್ವಿವಾದವಾದ ಭದ್ರತೆ ಇದೆ ಎಂಬುದಕ್ಕೆ ಏನು ಅನುಮಾನ?

ವಿಮೆಯ ಮುಂಗಡ ದರ ವಗೈರೆ ಇತರ ವಿಮೇ ಉತ್ತರಾಯಿಸುವ ಕಂಪೆನಿಗಳಿಗಿಂತಲೂ ಕಡಿಮೆಯಾಗಿರುವದಲ್ಲದೆ ಪೊಲಿಸಿದಾರರು ಹೆಚ್ಚಿನ ಲಾಭವನ್ನು ನಿರೀಕ್ಷಿಸಬಹುದು.

ಸ್ತ್ರೀಪುರುಷರು ಎಲ್ಲಾ ಅನುಕೂಲತೆಗಳೊಡನೆ ಜೀವವಿಮೇ ಉತ್ತರಾಯಿಸಬಹುದು. ರದ್ದಾದ ವಿಮೇ ಪತ್ರಗಳನ್ನು ಅತಿಸುಲಭ ವ ನ್ಯಾಯವಾದ ರೀತಿಯಿಂದ ಪುನರ್ಜೀವನ ಮಾಡಿ ಊರ್ಜಿತ ಪಡಸಬಹುದು.

ವಿಮೆಯ ಮುಂಗಡ ದರಗಳು ತಿಂಗಳುಗಟ್ಲೆಯಿಂದಲೂ, ಮೂರು ತಿಂಗಳಿಗೊಂದು ಬಾರಿಯಾಗಿಯೂ, ಆರು ತಿಂಗಳಿಗೊಂದಾವರ್ತಿಯಾಗಿಯೂ, ವರ್ಷಾವಧಿಯಿಂದಲೂ ವಿಮೇದಾರರು ತಮ್ಮ ತಮ್ಮ ಅನುಕೂಲತೆ ಮೇರೆಗೆ ಕಟ್ಟಬಹುದು.

ಹೆಚ್ಚಿನ ಮಾಹಿತಿ ತಿಳಿಯಲಪೇಕ್ಷೆಯುಳ್ಳವರು ಈ ಕೆಳಗಿನ ವಿಳಾಸದಾರರಿಂದ ಸೊಸೈಟಿಯ ಸೂಚಕ ಪತ್ರಗಳನ್ನು ತರಿಸಿಕೊಳ್ಳಬಹುದು.

ವಿಳಾಸ:— ಕೆ. ಶಂಕರ ನ್ಯಾಕ್,

ಸೊಸೈಟಿಯ ಏಜಂಟ್,

ಶ್ರೀಕುಲೇಶ್ವರ ದೇವಸ್ಥಾನದ ರಸ್ತೆಯಲ್ಲಿರುವ ಗೌರ ಮಠದ ಬಳಿ,

ಮಂಗಳೂರು.



ಎಲಂಬಿಕ್ ವೆಜಿಟೆಬಲ್ ಟೊನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾ ಉವ ಓಷಧಿಯು. ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳ ಕೂಡಿಟ್ಟು ತಾದ್ದು ಪಿತ್ತಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು ರಕ್ತ ಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣ ವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು ಬಾಟ್ಲು 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷದಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲು ಒಂದರ ಕ್ರಯ ರೂ 1—6—0

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು.—ಶೀತ, ಬೇಧಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ಹುಳುಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟ್ಲು ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಅಂಡ್ ಕೊ.
ಪಾರ್ಕ ಟೌನು, ಮದ್ರಾಸು.

S. VAIDYA & Co.,
Park Town, Madras.

"ಆಯೊನಿಕ್ ಫಾರ್ಮಸಿ"

ಎಂಬ ಔಷಧ ಪರಿಶೋಧನಾ ಗ್ರಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೀಕ್ತ ಔಷಧಗಳು ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗ್ರಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) **ಫೀವರ್ ಸೊಲ್ಯುಷನ್.** ಎಂಬ ಜ್ವರನಿವಾರಣೆಯ ರಸಾಯನ, (2) **ಫೀವರ್ ಡ್ರೊಪ್ಸ್** ಎಂಬುವ ಜ್ವರನಿವಾರಣ ಬಿಂದುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) **ಬ್ಲಡ್ ಪ್ಯುರಿಫ್ಯಾಯಿಂಗ್ ಸೊಲ್ಯುಷನ್** ಎಂಬುವ ರಕ್ತಶುದ್ಧಿಯ ರಸಾಯನವು ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು- ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ತಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲು ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನ ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co.,
Park Town, Madras.

ಎಸ್. ವೈದ್ಯಾ ಅಂಡ್ ಕೊ.
ಪಾರ್ಕ ಟೌನ, ಮದ್ರಾಸು.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಸಿಕ್ಕುವುದು. ಇದರಿಂದ ದೊರೆತಕ್ಕ ಲಾಭವಾದರೋ ಇದರ ಲಿಯು ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಚ್ಚ ಕೊಡಲೀವರ್ ಎಣ್ಣೆಯೂ ಅದರಂತೆ ಪಕ್ವಗೊಳ್ಳದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಾಮದರಿಂದ ಅವನ್ನು ಸೇವಿಸುವವರಿಂದ ಆತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾ- ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿಸ್ಪ ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ದೊರಲ್ಪಡುವದು ಮತ್ತು ಕನ್ನಡ ಬಲ್ಲವರೆಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0

ದಿ. ಊಲನ್ ಮಾರ್ಟ್‌ ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಸಂಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨ ರತಮೂಲಿಕಾ ಅಮೃತಸಂಜೀವನಿ—ಈ ಟೋನಿಕ್ ದ್ರಾವಕವು ಇಂದ್ರಿಯಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0

೩ ಬಾಲಸಂಜೀವನಿ—ಮಧುರವಾದ ಟೋನಿಕ್ ಅರಕ್ಕ ಬಾಲಕರಿಗೆ ಸರಕ್ತಾಂಗಿ ಮಾಡಿ ವರ್ಣವನ್ನೂ ಬಲವನ್ನೂ ಹೆಚ್ಚಿಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ —ಈ ಸುವಾಸನ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪುಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಪಡಿಸುತ್ತದೆ. ಬಾಟ್ಲಿ 1ಕ್ಕೆ 1—0—0

೫ ಸುದರ್ಶನನಾಶಿನಿ—ಈ ಔಷಧವು ಜ್ವರ ಇತ್ಯಾದಿ ಎಲ್ಲಾ ದುಷ್ಟ ವ್ಯಾಧಿಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0

೬ ಗರುಡಧ್ವಜ—ಇದು ಸರ್ಪ ಮುಚ್ಚುಗಾಯಿ, ಚೇಳು ಇತ್ಯಾದಿ ಸರ್ವ ಕಡಿ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0

೭ ಆನಂದವನವಿಲಾಸ—ಇದು ಡಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧಕಳ್ಳ ಶೈಂಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ ಘೃತಗಳು, ಆಸವಾರಿಷ್ಟಗಳು ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಶಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಆಚ್ಚಾಗುತ್ತಲಿದೆ! ಆಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ಪಂಚಾಂಕೀ ಮರಾಠಿನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಆಗೋಸ್ತು ತಿಂಗಳ ಆಖೈರ ಒಳಗೆ ಪ್ರಕಾಶಿತವಾಗುವದು. ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕ ಜನರು ಈ ಸಂದರ್ಭವನ್ನು ಬಿಡಲಾಗದು. ಬೆಲೆ 10 ಆಣೆ. ಟ. ಹಾ. ಬೇರೆ.

ಜುಲೈ ಆಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡು, ಓರ್ಡರುಗಳನ್ನು ರಿಜಿಸ್ಟರ್ ಮಾಡುವ ಗ್ರಾಹಕರಿಗೆ 8 ಆಣೆ. ಟ. ಹಾ. ಬೇರೆ. ಹಣವನ್ನು ಮುಂಗಡವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅಥವಾ ಮನಿಆರ್ಡರು ದ್ವಾರಾ ಕಳುಹಿಸಬೇಕು.

ತ್ವರೆಮಾಡಿರಿ!!

ಕಲ್ಯಾಣಪುರ ಮಂಗೇಶರಾವ್,
ಕಲ್ಯಾಣಪುರ, ದ. ಕನ್ನಡ.

ನರೆ ಕೂದಲನ್ನಿಟ್ಟುಕೊಂಡು
ಮುಧುಕರಾಗಿ ಕಾಣುವದೇಕೆ?

☞ ದರ್ಬಾರ್ ಕೂದಲು ರಂಗು.

ಒಂದು ಸಲ ಹಚ್ಚಿದರೆ 20 ವರುಷದ ಪ್ರಾಯ ಸಮರ್ಥರಂತೆ ಕಾಣುತೀರಿ. ಈ ರಂಗು ಹಚ್ಚಿಕೊಂಡರೆ ಕೂದಲು ಅಚ್ಚ ಕಪ್ಪಾಗಿ ಹೊಳೆಯುತ್ತೆ. ಈಗ ಮಾರಾಟಕ್ಕೆ ಬಂದಿರುವ ಅಲ್ಪತರದ ದಲಿಗೆ ಹಚ್ಚುವ ಬ್ಯಾಗಳ ರಂಗುಗಳು ತುಂಬಾ ಕೀಳುಜಾತಿಯವು. ಹಚ್ಚಿದ ಮೇಲೆ ಕೂದಲು ಕೆಂಚಾಗಿ ಅಸಂಹ್ಯವಾಗಿ ಕಾಣುತದೆ. ನಮ್ಮ "ದರ್ಬಾರ್ ಕೂದಲು ರಂಗು" ಅಂಥಾದ್ದಲ್ಲ; ಬಹು ಮೇಲಾದದ್ದು. ಒಂದಾವರ್ತಿ ತರಿಸಿ ಪರೀಕ್ಷೆ ಮಾಡಿದರೆ ನೀವೇ ಸಂತೋಷ ಪಡುವಿರಿ.

ಕ್ರಯ ಬ್ರಶು ಸಮೇತ ಬಾಟಿ 1ಕ್ಕೆ ರೂ. 1.
ಅಂಚೆ ಹಾಸಲು ಆಣೆ 0—4—0.

ವಿಳಾಸ — ವಿ ಎ ಎಸ್. ಪಾಣಿ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

V A S PANI,
No 3, Erulappen Street, Madras.

ಡಾಕ್ಟರ್ ನವರತ್ನರ ಕೇಶಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಷ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಪ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅಂದಿಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ವಿಳಾಸ—ನರಸಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 4ನೇ ಸಪ್ಟಂಬರ 1914

ಲೋಕಲ್ ಬೋರ್ಡುಗಳೂ ಗ್ರಾಮ ಕ್ಷೇಮರಕ್ಷಣೆಯ ಏರ್ಪಾಡುಗಳೂ.

ಗ್ರಾಮ ಕ್ಷೇಮರಕ್ಷಣೆಯ ಏರ್ಪಾಡುಗಳಿಗೆ ಸರಕಾರದವರು ಈಗಲೀಗ ಹೆಚ್ಚಿನ ಲಕ್ಷ್ಯವನ್ನು ಕೊಡುತ್ತಿರುವುದು ಸಂತೋಷಕರ ವಿಷಯವಾಗಿದೆ. ಸಂಸ್ಥಾನದ ಇತರ ಪ್ರಾಂತ್ಯಗಳ ಲೋಕಲ್ ಬೋರ್ಡುಗಳಿಗೆ ಕೊಟ್ಟಂತೆಯೇ ನಮ್ಮ ಬೋರ್ಡುಗಳಿಗೂ ಈ ಏರ್ಪಾಡುಗಳಿಗೆ ಬೇಕಾದ ದ್ರವ್ಯಸಹಾಯವು ಕೊಡೋಣಾಗಿರುವುದು. ಇಂಥಾ ದ್ರವ್ಯಸಹಾಯವನ್ನು ಉಪಯುಕ್ತವಾದ ರೀತಿಯಲ್ಲಿ ಹೇಗೆ ವಿನಿಯೋಗಿಸಬಹುದೆಂಬ ಪ್ರಸ್ತಾಪವನ್ನು ಪ್ರಕೃತ ಇಲ್ಲಿಯ ಕೆಲವು ಬೋರ್ಡುಗಳು ಪರ್ಯಾಲೋಚಿಸುತ್ತಿರುವವು.

ಗ್ರಾಮಗಳ ಕ್ಷೇಮ ಸ್ಥಿತಿಯು ಪ್ರಕೃತ ಹೇಗಿರುವುದು? ಅನಾರೋಗ್ಯದ ಕಾರಣವೇನು? ಅನಾರೋಗ್ಯವನ್ನು ದೂರಪಡಿಸಲು ನಮ್ಮ ಜಿಲ್ಲೆಯ ವಿಶೇಷ ವಿದ್ಯಮಾನಗಳಲ್ಲಿ ನಮಗೆ ಎಂಥಾ ಸೌಕರ್ಯಗಳು ಬೇಕಾಗಿರುವವು? ಇವುಗಳನ್ನು ಕಲ್ಪಿಸಿಕೊಳ್ಳುವ ಬಗೆ ಹೇಗೆ? ಇಂಥಾ ವಿಚಾರಗಳನ್ನು ತಾಲೂಕು ಬೋರ್ಡುಗಳ ಮೆಂಬರರಲ್ಲಿ ಪ್ರತಿಯೊಬ್ಬರು ಪದೇ ಪದೇ ಮಾಡುವ ರೂಢಿಯು ಬೋರ್ಡು ಮೆಂಬರರುಗಳಲ್ಲಿ ಇದ್ದರೆ ಸರಕಾರದವರು ಆಗಿಂದಾಗ್ಯೆ ಕೊಡುವ ದ್ರವ್ಯಸಹಾಯವನ್ನು ಜನರ ಉಪಯೋಗಾರ್ಥವಾಗಿಯೇ ಉಪಯೋಗಿಸಲು ಹೆಚ್ಚಿನ ಅವಕಾಶ ದೊರಕುತ್ತದೆ. ಮತ್ತು ಎಷ್ಟರ ಮಟ್ಟಿನ ದ್ರವ್ಯಸಹಾಯವು ಬೋರ್ಡುಗಳಿಗೆ ಈ ವಿಷಯಗಳಲ್ಲಿ ಬೇಕಾಗಿರುವುದೆಂದು ಸರಕಾರದವರಿಗೆ ಆಗಿಂದಾಗ್ಯೆ ವಿಜ್ಞಾಪಿಸಿಕೊಳ್ಳಲೂ ಸಹ ಆಸ್ಪದ ದೊರಿಯುವುದು. ಆರೋಗ್ಯ ಏರ್ಪಾಡುಗಳನ್ನು ಯೋಚಿಸಿ ಅವುಗಳ ಜ್ಯಾರಿಯಲ್ಲಿ ತಕ್ಕದಾದ ಮೇಲ್ವಿಚಾರವನ್ನಿಡುವುದು, ಮಾರ್ಗಗಳ ದುರುಸ್ತಿ, ಹೊಸ ಮಾರ್ಗಗಳನ್ನು ಹಾಕಿಸುವುದು, ವಯ್ಯೋಣ ಮತ್ತು ಪ್ರಯಾಣಗಳ ಸೌಕರ್ಯದ ಬಗ್ಗೆ ಯಾವ್ಯಾವ ಏರ್ಪಾಡುಗಳು ಬೇಕಾಗಿವೆ ಎಂತ ಆಗಿಂದಾಗ್ಯೆ ನೋಡಿಕೊಳ್ಳುವುದು, ಶುದ್ಧವಾದ ಕುಡಿಯುವ ನೀರಿನ ಸರಬರಾಯಿ, ಗ್ರಾಮಗಳ ಹೊಲಸು ಪ್ರಾಂತ್ಯಗಳನ್ನು ಸಜ್ಜುಗೊಳಿಸುವುದು, ಲೋಕಲ್ ಬೋರ್ಡಿನವರು ಕೈಕೊಳ್ಳಬೇಕಾದ ಈ ಎಲ್ಲಾ ಕೆಲಸಗಳನ್ನು ಬೋರ್ಡು ಮೆಂಬರರು ತಮ್ಮ ತಮ್ಮೊಳಗೆ ಹಂಚಿಕೊಂಡು ಈ ಕೆಲಸಗಳೆಲ್ಲವುಗಳ ಮೇಲ್ವಿಚಾರವನ್ನು ನೋಡಿಕೊಳ್ಳುವ ಪದ್ಧತಿಯು ಮುಂಬಯಿ ಸಂಸ್ಥಾನದ ಕೆಲವು ಲೋಕಲ್ ಬೋರ್ಡುಗಳಲ್ಲಿರುವುದೆಂತ ಕೇಳಿ ತಿಳಕೊಂಡಿರುವೆವು. ಇಂಥಾ ಪದ್ಧತಿಯು ನಮ್ಮ ಲೋಕಲ್ ಬೋರ್ಡುಗಳಲ್ಲಿಯೂ ಇರುತ್ತಿದ್ದರೆ, ಜನರಿಂದ ತೆರಿಗೆಯ ರೂಪದಲ್ಲಿ ಸಂಗ್ರಹಿಸುವ ಹಣವನ್ನೂ ಸರಕಾರದವರು ಆಗಿಂದಾಗ್ಯೆ ಕೊಡುವ ದ್ರವ್ಯಸಹಾಯವನ್ನೂ ಇನ್ನೂ ಬಹಳ ಉಪಯುಕ್ತವಾದ ರೀತಿಯಲ್ಲಿ ವಿನಿಯೋಗಿಸಲು ಅನುಕೂಲವಾದ ಸಂದರ್ಭಗಳು ಯಾವಾಗಲೂ ದೊರಕುವವು. ಬೋರ್ಡು ಮೆಂಬರರು ತಮ್ಮ ಮೆಂಬರುತನದ ಜವಾಬ್ದಾರಿಯನ್ನು ಮನಸ್ಸಿಗೆ ತಂದುಕೊಳ್ಳದೆ ಎಲ್ಲಾ ಕಾರ್ಯಭಾರವನ್ನು ಬೋರ್ಡು ಅಧ್ಯಕ್ಷರ ತಲೆಯ ಮೇಲೆ ಹಾಕಿದರೆ ಜನರ ಹಿತದ ಯಾವ ಸಾಧನೆಯೂ, ಬೇಕಾದಂತೆ ನಡಿಯುವುದು ಕಷ್ಟಸಾಧ್ಯ. ಸರಕಾರದವರು ಕೊಡುವ ದ್ರವ್ಯಸಹಾಯವನ್ನು ತಕ್ಕ ಕಾಲದಲ್ಲಿ ವಿನಿಯೋಗಿಸದೆ ಸುಮ್ಮನಿಟ್ಟರೆ ಅಧ್ಯಕ್ಷರ ಯೋಗ್ಯತೆ ಕುರಿತು ಸರಕಾರದವರ ಅಭಿಪ್ರಾಯವು ಮಾರ್ಪಡುವದೆಂಬ ಅಂಜಿಕೆಯಿಂದ ದ್ರವ್ಯಸಹಾಯಗಳನ್ನು ಖರ್ಚುಮಾಡುವ ಅವಸರವು ಸಾಮಾನ್ಯವಾಗಿ ಬೋರ್ಡು ಅಧ್ಯಕ್ಷರಲ್ಲಿರುತ್ತದೆ. ಆದ್ದರಿಂದ ದ್ರವ್ಯಸಹಾಯವಾಗಿ ದೊರಿಯುವ ಮೊಬಲಗುಗಳೆಂತೂ ಖರ್ಚಿಗೆಯೇ ಹೋಗುವವು. ಲೋಕಲ್ ಬೋರ್ಡುಗಳಿಗೆ ಆಡಳಿತೆಯ ಸ್ವತಂತ್ರವು ಅಧಿಕವಾಗಿ ಕೊಡೋಣಾಗುವ ಈ ಕಾಲದಲ್ಲಿ ಮೆಂಬರರುಗಳು ತಮ್ಮ ಕರ್ತವ್ಯಗಳನ್ನು ಅರಿತು ತಮ್ಮ ಬೋರ್ಡುಗಳ ಕಾರ್ಯಸಾಧನೆಗಳಲ್ಲಿ ರಬಹುದಾದ ಕುಂದುಗಳನ್ನು ಮಾಜಿಪಡಲು ಪ್ರಯತ್ನಿಸುವುದು ಅಗತ್ಯ.

ಸಂಸ್ಥಾನದ ಇತರ ಪ್ರಾಂತ್ಯಗಳ ತಾಲೂಕು ಬೋರ್ಡುಗಳಿಗೆ ದೊರಕಿದಂತೆಯೇ ನಮ್ಮ ಪ್ರಾಂತ್ಯಗಳ ಬೋರ್ಡುಗಳಿಗೂ ಗ್ರಾಮಗಳ ಕ್ಷೇಮ ರಕ್ಷಣೆಯ ಏರ್ಪಾಡುಗಳ ಬಗ್ಗೆ ದ್ರವ್ಯಸಹಾಯವು ದೊರಕಿರುವುದು. ಅಂದರೆ ಸಂಸ್ಥಾನದ ಇತರ ಎಲ್ಲಾ ಪ್ರಾಂತ್ಯಗಳ ವಿದ್ಯಮಾನಗಳಿಗನುಸಾರವಾಗಿ ನಮಗೂ ದ್ರವ್ಯಸಹಾಯವು ದೊರಕಿರುತ್ತದೆ. ಆದರೆ ಈ ಜಿಲ್ಲೆಯ ವಿದ್ಯಮಾನಗಳು ಇತರ ಜಿಲ್ಲೆಗಳ ವಿದ್ಯಮಾನಗಳಿಗೆ ಸಮಾನವಾಗಿರವು. ಇಲ್ಲಿಯ ಹವಾ ಗುಣವೂ ಪ್ರಕೃತಿ ಲಕ್ಷಣವೂ ಬೇರೆಯಾಗಿರುವುದು. ಆದ್ದರಿಂದ ಈ ಜಿಲ್ಲೆಯ ಇಂಥಾ ವಿಶೇಷ ವಿದ್ಯಮಾನಗಳನ್ನು ತಿಳಕೊಂಡು ಇಲ್ಲಿಯ ಸ್ಥಳಿಕ ಮಾಹಿತಿಯನ್ನು ಸರಕಾರದವರಿಗೆ ಆಗಿಂದಾಗ್ಯೆ ವಿಜ್ಞಾಪಿಸಿಕೊಳ್ಳಬೇಕು. ನಮ್ಮಲ್ಲಿ ಎಂಥಾ ಏರ್ಪಾಡಿನ ಜಾರಿಯಾಗಲಿ ಸರಿಯಾಗಿ ನಡಿಯಲು ನಮಗಿರುವ ವಿಶೇಷ ಪ್ರತಿಬಂಧಕವು ಯಾವುದೆಂತ ಸೂಚಿಸಿ ಇದರ ನಿವೃತ್ತಿಯನ್ನು ಸರಕಾರದ ಸಹಾಯದಿಂದ ಮೊದಲಾಗಿ ಹೊಂದಬೇಕಾಗಿದೆ. ಹವಾ ಗುಣವೂ ಪ್ರಕೃತಿ ಲಕ್ಷಣಗಳೂ ಈ ಜಿಲ್ಲೆಯಲ್ಲಿ ಸಂಸ್ಥಾನದ ಇತರ ಪ್ರಾಂತ್ಯಗಳಿಗಿಂತ ಬೇಧವುಳ್ಳವುಗಳಾಗಿರುವುದರಿಂದ ಇಲ್ಲಿಯ ಗ್ರಾಮಗಳಲ್ಲಿ ಜನರು ವಾಸಿಸುವ ಕ್ರಮಗಳಲ್ಲಿಯೂ ವಾಸ್ತವ್ಯಗಳಲ್ಲಿಯೂ ಬೇಧವಿರುವುದು. ಸಂಸ್ಥಾನದ ಇತರ ಪ್ರಾಂತ್ಯಗಳಲ್ಲಿ ಅಗತ್ಯವೆಂದು ತೋರಿಬಂದಿರಬಹುದಾದ ಆರೋಗ್ಯ ರಕ್ಷಣೆಯ ಏರ್ಪಾಡುಗಳು ಇಲ್ಲಿ ಅದೇ ರೀತಿ ಅವಶ್ಯವಾದವುಗಳೆಂತ ಕಂಡು ಬರಲಿಕ್ಕಿಲ್ಲವಾದ್ದರಿಂದ ಇಲ್ಲಿಯ ಗ್ರಾಮಗಳ ಕ್ಷೇಮ ರಕ್ಷಣೆಯ ಏರ್ಪಾಡುಗಳನ್ನು ಇಲ್ಲಿಯ ವಿದ್ಯಮಾನಗಳಿಗೆ ತಕ್ಕಂತೆ ಮಾಡುವುದು ಅಗತ್ಯವಾಗಿದೆ.

ಅಂಥಾ ಏರ್ಪಾಡುಗಳೇನೆಂಬುದನ್ನು ಮುಂದಿನ ಸಂಚಿಕೆಯಲ್ಲಿ ಸೂಚಿಸುವೆವು.

ನಮ್ಮ ಜಿಲ್ಲೆಯಲ್ಲಾಗುವ ಪೋಲೀಸು ಸರ್ಕಲ್ ಇನ್ಸ್‌ಪೆಕ್ಟರರ ನೇಮಕಗಳು.

ಪೋಲೀಸು ಸರ್ಕಲ್ ಇನ್ಸಪೆಕ್ಟರರ ಕೆಲಸಕ್ಕೆ ಪೂರ್ಣ ಯೋಗ್ಯತೆಯುಳ್ಳ ಸಬ್ ಇನ್ಸಪೆಕ್ಟರರುಗಳು ನಮ್ಮ ಜಿಲ್ಲೆಯಲ್ಲಿರುತ್ತಾರಾದರೂ ಈಚೆಗೆ ಇವರಿಗೆ ಸಿಕ್ಕಬೇಕಾದ ಸರ್ಕಲ್ ಇನ್ಸಪೆಕ್ಟರರ ನೇಮಕಗಳು ಇವರಿಗೆ ಸಿಕ್ಕದೆ ಈ ಹುದ್ದೆಗಳಿಗೆ ಇತರ ಜಿಲ್ಲೆಗಳ ಸಬ್ ಇನ್ಸಪೆಕ್ಟರರನ್ನು ನೇಮಿಸುವುದು ಇತ್ತಲಾಗೆ ಇಲ್ಲಿಯ ಪೋಲೀಸು ಇಲಾಖೆಯಲ್ಲಿ ರೂಢಿಗೆ ಬರುತ್ತಿರುವುದು. ಪೋಲೀಸು ಇಲಾಖೆಯ ಮೇಲಾಧಿಕಾರಿಗಳು ಈ ಜಿಲ್ಲೆಯಲ್ಲಿ ಈ ರೀತಿ ವರ್ತಿಸಲು ಕಾರಣವೇನೋ ತಿಳಿಯದು. ತಕ್ಷೀರುಗಳನ್ನು ಶೋಧಿಸಿ ತಪ್ಪುಗಾರರೆಂಬುದನ್ನು ರುಜುಪಡಿಸುವುದರಲ್ಲಿಯೂ, ಕಳವುಗಳನ್ನು ಪತ್ತೆಮಾಡಿ ಹಿಡಿದಿದ್ದುರಿಂದಲೂ ಇನ್ನೂ ಹಲವು ರೀತಿಗಳಲ್ಲಿ ತಮ್ಮ ಕೆಲಸ ಜಾಣ್ಮೆಯನು ತೋರಿ ಮೇಲಾಧಿಕಾರಿಗಳಿಂದ ಇನಾಮುಗಳನ್ನು ಪಡದು ಸಾಕಷ್ಟು ಕಾಲ ಸಬ್ ಇನ್ಸಪೆಕ್ಟರರ ಕೆಲಸವನ್ನು ನೋಡಿದಂಥವರು ಈ ಜಿಲ್ಲೆಯಲ್ಲಿರುತ್ತಾ ಇವರಿಗೆ ಬಡ್ತಿಯನ್ನು ಕೊಟ್ಟು ಇಲಾಖೆಯವರು ಇವರನ್ನು ಏಕೆ ಪ್ರೋತ್ಸಾಹಿಸುವದಿಲ್ಲವೆಂಬದು ಗೊತ್ತಾಗದು. ಈ ಜಿಲ್ಲೆಯವರಾದ ಪೋಲೀಸು ಆಫೀಸರವರಿಗೆ ಈ ಜಿಲ್ಲಾ ಜನರ ಹಂಗುದಾಕ್ಷಿಣ್ಯಗಳು ವಿಶೇಷವಿದ್ದು ತಮ್ಮಿಂದಾಗಬೇಕಾದ ಕಾರ್ಯಸಾಧನೆಯನ್ನು ಇವರು ಸರಿಯಾಗಿ ಮಾಡುವುದು ಕಷ್ಟಸಾಧ್ಯವಾದ್ದರಿಂದ ಇತರ ಜಿಲ್ಲೆಯ ಸಬ್ ಇನ್ಸಪೆಕ್ಟರರನ್ನು ಇಲ್ಲಿ ಸರ್ಕಲ್ ಇನ್ಸಪೆಕ್ಟರರಾಗಿ ತರಲು ಕಾರಣವಿರುವುದೆಂತ ಒಂದು ವೇಳೆ ಊಹಿಸಬಹುದು. ಆದರೆ ಈ ಸಂಸ್ಥಾನದ ಇತರ ಜಿಲ್ಲೆಗಳ ಸರ್ಕಲ್ ಇನ್ಸಪೆಕ್ಟರರು ಬಹಳ ಮಟ್ಟಿಗೆ ಆಯಾ ಜಿಲ್ಲೆಯವರೇ ಆಗಿರುವ ಕಾರಣ ಈ ಊಹನೆಗೆ ತಕ್ಕ ಆಧಾರವು ಇಲ್ಲಿ ಮಾತ್ರಹೇಗೆ ಸಿಕ್ಕಿರುವದೋ? ಒಂದು ವೇಳೆ ಇಲ್ಲಿಯ ಪೋಲೀಸು ಮೇಲಾಧಿಕಾರಿಗಳಿಗೆ ತೋರಿ ಬಂದಂತೆ ಈ ಜಿಲ್ಲೆಯ ವಿಶೇಷ ವಿದ್ಯಮಾನಗಳಲ್ಲಿ ಸಂಸ್ಥಾನದ ಇತರ ಜಿಲ್ಲೆಯವರನ್ನು ತಂದು ಇಲ್ಲಿ ಸರ್ಕಲ್ ಇನ್ಸಪೆಕ್ಟರರಾಗಿ ನೇಮಿಸುವುದೇ ಉಚಿತವೆಂತ ಕಂಡರೆ ಇಲ್ಲಿ ಪೋಲೀಸು ಇಲಾಖೆಯಲ್ಲಿ ಉತ್ತಮ ಸೇವೆಯನ್ನು ಗೈದಿರುವ ಸಬ್ ಇನ್ಸಪೆಕ್ಟರರು ಇದೇ ಹುದ್ದೆಗಳಲ್ಲಿ ಸದಾ ಇರುವರೋ? ಈ ಜಿಲ್ಲೆಯ ಮೇಲಾಧಿಕಾರಿಗಳು ಇತರ ಜಿಲ್ಲೆಯ ಸಬ್ ಇನ್ಸಪೆಕ್ಟರರನ್ನು ಇಲ್ಲಿಗೆ ಸರ್ಕಲ್ ಇನ್ಸಪೆಕ್ಟರರಾಗಿ ನೇಮಿಸಿ ತರುವಂತೆ ನಮ್ಮ ಜಿಲ್ಲೆಯ ಸಬ್ ಇನ್ಸಪೆಕ್ಟರರಿಗೆ ಇತರ ಜಿಲ್ಲೆಗಳಲ್ಲಿ ಯಾಕೆ ಸರ್ಕಲ್ ಇನ್ಸಪೆಕ್ಟರರ ಹುದ್ದೆಯು ದೊರಿಯುವುದಿಲ್ಲ?

ಇಲ್ಲಿಯ ಪೋಲೀಸು ಸಬ್ ಇನ್ಸಪೆಕ್ಟರರುಗಳ ಈ ಸಂಕಷ್ಟವನ್ನು ಇನ್ನಾದರೂ ಅಧಿಕಾರಿಗಳು ತಕ್ಕ ರೀತಿಯಲ್ಲಿ ನಿವಾರಿಸುವುದು ಅಗತ್ಯವಾಗಿರುವುದು.

ಯುದ್ಧಕ್ಕೆ ಬೇಕಾದ ಸಾಧನ ಸಂಪತ್ತು.

ಯುದ್ಧ ಸಾಧನಕ್ಕೆ ಜನರಿಗಿಂತ ಮುಖ್ಯವಾಗಿ ಬೇಕಾದದ್ದು ಸಂಪತ್ತಾಗಿದೆ. ಯಾವ ಜನಾಂಗದವರಲ್ಲಿ ಸಂಪತ್ತು ಹೆಚ್ಚಾಗಿರುವುದೋ ಆ ಜನಾಂಗದವರು ಯುದ್ಧದಲ್ಲಿ ಜಯಶೀಲರಾಗುವ ಸಂಭವಗಳು ಹೆಚ್ಚಾಗಿವೆ. ಟರ್ಕಿಯಲ್ಲಿ ಸೇನೆಗೆ ತಕ್ಕಂತೆ ಸಂಪತ್ತಿಲ್ಲದ್ದರಿಂದ ಟರ್ಕಿಯವರು ಯುರೋಪಿಯ ಜನಾಂಗಗಳೊಡನೆ ಹೋರಾಡಿ ಆಗಿಂದಾಗ್ಯೆ ಪರಾಜಯ ಪಡೆಯಬೇಕಾಯಿತು. ಯುದ್ಧ ಪ್ರಾರಂಭವಾಗಬೇಕಾದರೆ ಯುರೋಪಿಯ ಜನಾಂಗಗಳು ಚಿನ್ನ ಬೆಳ್ಳಿಯನ್ನು ಧಾರಾಳವಾಗಿ ಸಂಗ್ರಹಿಸಿ ಅವುಗಳನ್ನು ಭದ್ರವಾಗಿರಿಸುವರು. ಚಲಾವಣೆಯಲ್ಲಿರುವ ಚಿನ್ನ ಬೆಳ್ಳಿಯ ನಾಣ್ಯಗಳನ್ನು ಸಂಗ್ರಹಿಸಿಡಲು ಬೇಕಾದ ಏರ್ಪಾಡನ್ನು ಸಹ ಮಾಡುವರು. ಯುದ್ಧ ಕಾಲದಲ್ಲಿ ಕೆಲವು ರಾಜ್ಯಗಳವರು ಹಣದ ಚಲಾವಣೆಯು ಸರಿಯಾಗಿ ಆಗುವಂತೆ ಬಹಳ ಚಿಕ್ಕ ಚಿಕ್ಕ ಮೊಬಲಗುಗಳ ಬಗ್ಗೆ "ನೋಟು"ಗಳನ್ನು ರಚಿಸುವರು. ಚಿನ್ನ ಬೆಳ್ಳಿಯ ಸಂಗ್ರಹವು ಯುದ್ಧ ಕಾಲದಲ್ಲಿ ಜನಾಂಗಗಳಿಗೆ ಮುಖ್ಯವಾಗಿ ಬೇಕಾದುದರಿಂದ ಅಂಥಾ ಸಂಗ್ರಹಗಳನ್ನು ಬಹಳ ಸಾಹಸದಿಂದ ಮಾಡುತ್ತಾರೆ. ಈ ಸಂದರ್ಭದಲ್ಲಿ ಪ್ರಕೃತ ಯುದ್ಧಕ್ಕೆ ಇಳಿದಿರುವ ರಾಜ್ಯಗಳ ದ್ರವ್ಯ ಸಂಗ್ರಹವು ಹೇಗಿರುವುದೆಂಬುದನ್ನು ತಿಳಿದರೆ ಜಯಲಕ್ಷ್ಮಿಯು ಯಾರ ಪಕ್ಷವನ್ನು ವರಿಸುವ ಸಂಭವಗಳಿರುವವೆಂಬುದನ್ನು ತಿಳಕೊಳ್ಳಬಹುದು.

ರುಶ್ಯ, ಫ್ರಾನ್ಸು ಮತ್ತು ಜರ್ಮನ್ ದೇಶಗಳು ಕಳೆದ ಎರಡು ವರುಷಗಳಿಂದ ಬಲು ಚಟುವಟಿಕೆಯಿಂದ ಚಿನ್ನ ಬೆಳ್ಳಿಯ ಸಂಗ್ರಹವನ್ನು ಮಾಡುತ್ತಲಿದ್ದಾರೆ. ದ್ರವ್ಯಸಂಗ್ರಹವನ್ನು ಬೇಕಾದಂತೆ ಮಾಡುವರೆ ಈ ಮೂರು ರಾಜ್ಯಗಳಿಗಿರುವ ಅಸ್ಪದವು ಯುರೋಪಿಯ ಇತರ ರಾಜ್ಯಗಳಿಗಿರದು. ಈ ಮೂರು ರಾಜ್ಯಗಳು ದನವನ್ನು ಕೂಡಿಸಿದ ರೀತಿಯಲ್ಲಿ ಒಸ್ಟ್ರಿಯಾ ಮತ್ತು ಇಟೇಲಿ ರಾಜ್ಯಗಳಿಗೆ ಕೂಡಿಸಲು ಸಾಧ್ಯವಾಗಲಿಲ್ಲ. "ಟ್ರಿಪಲ್ ಎಲಾಯನ್ಸ್" ಎಂಬ ಜರ್ಮನಿ, ಒಸ್ಟ್ರಿಯಾ ಮತ್ತು ಇಟೆಲಿ ರಾಜ್ಯಗಳಲ್ಲಿ 211,440,000 ಪವನುಗಳಷ್ಟು ದ್ರವ್ಯ ಸಂಚಯವು ಇರುವುದು. ಆದರೆ ರುಶ್ಯ ಫ್ರಾನ್ಸ್ ಮತ್ತು ಬ್ರಿಟನ್ ದೇಶಗಳ ದ್ರವ್ಯ ಸಂಚಯವು 426,000,000 ಪವನುಗಳಷ್ಟು ಇರುವುದರಿಂದ ಶತ್ರುಗಳ ಸಂಪದಕ್ಕಿಂತ ನಮ್ಮ ಪಕ್ಷದವರ ಸಂಪತ್ತು ಬಹಳ ವಿಶೇಷವಾಗಿರುವುದು. ಇದರಲ್ಲಿ ರುಶ್ಯಾ ದೇಶದವರದ್ದು ಬೆಳ್ಳಿ ನಾಣ್ಯಗಳಲ್ಲಿ 8,000,000 ಪವನುಗಳಷ್ಟು ಮತ್ತು ಚಿನ್ನದ ನಾಣ್ಯಗಳಲ್ಲಿ 172,240,000 ಪವನುಗಳ ಮೌಲ್ಯದ್ದಾಗಿರುವುದು. ಫ್ರಾನ್ಸ್ ದೇಶದವರ ದ್ರವ್ಯಸಂಗ್ರಹವು ಬೆಳ್ಳಿಯ ನಾಣ್ಯಗಳಲ್ಲಿ 22,000,000 ಚಿನ್ನದ ನಾಣ್ಯಗಳಲ್ಲಿ 160,000,000 ಆಗಿರುವುದು.

"ನೋಟು"ಗಳ ಚಲಾವಣೆ ಮೂಲಕ ಯುದ್ಧ ಕಾಲದಲ್ಲಿ ಇತರ ಯುರೋಪಿಯ ರಾಜ್ಯಗಳು ಯುದ್ಧದ ಸಾಧನ ಸಂಪತ್ತನ್ನು ಸಂಗ್ರಹಿಸುವ ರೀತಿಯಲ್ಲಿ ಸಂಪತ್ತನ್ನು ಸಂಗ್ರಹಿಸುವ ಅಗತ್ಯವು ಬ್ರಿಟಾನಿಗೆ ಇರದು. ಅದರ ಸಂಪತ್ತು ಅಷ್ಟು ವಿಶೇಷವಾಗಿರುವುದು. ಎಲ್ಲಾ ರಾಜ್ಯಗಳ ಹಡಗು ಪಡೆಗಳಿಗಿಂತ ಬಲವಾದ ಮತ್ತು ಅನೇಕ ಯುದ್ಧನಾವೆಗಳುಳ್ಳ ಹಡಗು ಪಡೆಯು ಬ್ರಿಟಾನಿಗೆ ಇರುವುದರಿಂದ ವ್ಯಾಪಾರ ವೈವಾಟಗಳ ಮೂಲಕ ಎಲ್ಲಾ ಕಾಲಗಳಲ್ಲಿಯೂ ದ್ರವ್ಯವನ್ನು ಶೇಖರಿಸುವ ತ್ರಾಣವು ನಮ್ಮ ಆಣ್ಕರಿಗಿರುತ್ತದೆ. ಅಮೇರಿಕದಿಂದ ನಿರಂತರವಾಗಿ ಚಿನ್ನವನ್ನು ತರಿಸಿಕೊಳ್ಳುವ ಸಾಮರ್ಥ್ಯವು ಅಂಗ್ಲಾಳಕ್ಕೆ ಇರುವುದರಿಂದ ಯುರೋಪಿಯ ಇತರ ರಾಜ್ಯಗಳು ನಾಣ್ಯ ರೂಪದಲ್ಲಿ ತಮ್ಮ ಸಾಧನ ಸಂಪತ್ತನ್ನು ಒಟ್ಟು ಕೂಡಿಸಿಟ್ಟಿರುವಾಗ ಅಂಗ್ಲಾಳದಲ್ಲಿ ಚಿನ್ನದ ಗಟ್ಟಿಗಳನ್ನೇ ಬಹಳವಾಗಿ ಕೂಡಿಸಿಟ್ಟಿರುವರು. ಈ ಚಿನ್ನದ ಸಂಗ್ರಹದ ಪ್ರಯೋಜನವು ಅಂಗ್ಲಾಳದ ಮೂಲಕ ಫ್ರಾನ್ಸಿಗೂ ಧಾರಾಳವಾಗಿರುವುದು.

ಯುದ್ಧದ ಸಾಧನ ಸಂಪತ್ತು ಈ ರೀತಿ ಬ್ರಿಟನ್, ಫ್ರಾನ್ಸ್ ಮತ್ತು ರುಶ್ಯ ದೇಶಗಳಲ್ಲಿಯೇ ಅಧಿಕವಾಗಿರುವುದು.

ಈಗಿನ ಯುದ್ಧಕಾಲದ ಗ್ರಹಸ್ಥಿತಿಯು ಭಾರತ ಯುದ್ಧಕಾಲದ ಗ್ರಹಸ್ಥಿತಿಯಂತೆಯೇ ಇರುವುದು.

ಒಬ್ಬ ಗಣಿತಜ್ಞರು ಈಗಿನ ಯುದ್ಧಕಾಲದ ಗ್ರಹಸ್ಥಿತಿಯನ್ನು ಗುಣಿಸಿನೋಡಿ ಇಂಥಾ ಗ್ರಹಸ್ಥಿತಿಯು ಭಾರತ ಯುದ್ಧಕಾಲದ ಗ್ರಹಸ್ಥಿತಿಯಂತೆಯೇ ಇರುವುದೆಂದು ಈ ರೀತಿ ಬರೆದಿರುವರು —

ಮಘಾಸ್ವಂಗಾರಕೋ ವಕ್ರ ಶ್ರವಣೇಚ ಬ್ರಹಸ್ಪತಿಃ ॥ ಭಗಂ ನಕ್ಷತ್ರಮಾಕ್ರಮ್ಯ ಸೂರ್ಯ ಪುತ್ರೇಣ ಪೀಡ್ಯತೆ ॥೧॥ ಚಂದ್ರ ಸೂರ್ಯಾ ಉಭೌಗ್ರಸ್ತಾವೇಕಾಹ್ನಹಿ ತ್ರಯೋದಶ ॥ ಮಘಾ ನಕ್ಷತ್ರದಿಂದ ಉತ್ತರೆ ವರೆಗೆ ಅಂಗಾರಕನು ಸಂಚರಿಸುವಾಗ್ಯೆ ಶನಿಯ ದೃಷ್ಟಿ ಆತನ ಮೇಲಿದ್ದರೆ ಮತ್ತು ಆ ಕಾಲದಲ್ಲಿ ಶ್ರವಣ ನಕ್ಷತ್ರದಲ್ಲಿ ವಕ್ರನಾಗಿ ಬ್ರಹಸ್ಪತಿಯು ಬಂದ ಪಕ್ಷದಲ್ಲಿ ಒಂದೇ ವಾರದಲ್ಲಿ ಎರಡು ಗ್ರಹಣಗಳು ಪ್ರಾಪ್ತವಾಗಿ ಈ ಎರಡು ಗ್ರಹಣಗಳ ನಡುವೆ ೧೫ ದಿನಗಳಿದ್ದರೆ ಲೋಕದಲ್ಲಿ ಭೀಕರವಾದಂಥಾ ಯುದ್ಧವು ಪ್ರಾಪ್ತವಾಗಿ ಬಹಳ ನಷ್ಟವುಂಟಾಗುವುದು. ಈ ರೀತಿ ಭಾರತ ಪರ್ವದ ಅಧ್ಯಾಯದಲ್ಲಿರುವ ಶ್ಲೋಕದ ಅರ್ಥವನ್ನು ನೋಡಿಕೊಂಡು ಈಗಿನ ಗ್ರಹಸ್ಥಿತಿಯನ್ನು ನೋಡಿದ್ದಲ್ಲಿ ಮೇಲಣ ಶ್ಲೋಕದಲ್ಲಿ ವಿವರಿಸಿದ ಗ್ರಹಸ್ಥಿತಿಯೇ ಈಗಿನ ಯುದ್ಧ ಕಾಲದಲ್ಲಿರುವದೆಂತ ಸಿದ್ಧಾಂತ ಮಾಡಿ ಹೇಳಿರುವರು. ಶುಕ್ರವಾರ ಸೂರ್ಯಗ್ರಹಣವಿತ್ತು. ಇದೇ ಶುಕ್ರವಾರ ಅಂದರೆ ಸೂರ್ಯಗ್ರಹಣದ ೧೫ ದಿವಸಗಳಲ್ಲಿ ಚಂದ್ರಗ್ರಹಣವಿರುವುದು. ಆದ್ದರಿಂದ ಈ ಯುದ್ಧವು ಬಹಳಮಟ್ಟಿಗೆ ಭಾರತಯುದ್ಧಕ್ಕೆ ಸಮಾನವಾಗಿದೆ.

ಪತ್ರವ್ಯವಹಾರ

ಪುತ್ತಿಗೆ ಹೊಳೆಗೆ ಸಂಕವು ಅಗತ್ಯವಾಗಿರುವುದು

ಅಯ್ಯಾ,

ಉಡುಪಿ ತಾಲೂಕು ಪೆರಡೂರು ಎಂಬ ಊರಿನಲ್ಲಿ ಪ್ರತಿ ಒಂದು ತಿಂಗಳಿಗೂ ಶಂಕ್ರಾಂತಿಯೂ ದೊಡ್ಡ ಉತ್ಸವವೂ ನಡಿಯುತ್ತದೆ. ಇಲ್ಲಿ ಶ್ರೀ ಅನಂತ ಪದ್ಮನಾಭ ದೇವರ ಹಳೆಯ ದೊಡ್ಡ ದೇವಸ್ಥಾನ ಉಂಟು. ವರುಷದ ೧೨ ತಿಂಗಳುಗಳ ಪೈಕಿ ಅಗೋಸ್ತು ತಿಂಗಳಿನ (ಸೋಣ ತಿಂಗಳಿನ) ಶಂಕ್ರಾಂತಿಯೆಂಬ ಉತ್ಸವವು ವಿಶೇಷವಾಗಿಯೂ ದೊಡ್ಡದಾಗಿಯೂ ಜರಗುವುದು. ಇಲ್ಲಿಗೆ ಪೂರ್ವ, ಪಶ್ಚಿಮ, ದಕ್ಷಿಣ ಉತ್ತರ ಈ ನಾಲ್ಕು ಕಡೆಯಿಂದಲೂ ಹೆಚ್ಚಾಗಿ ಜನರು ಬರುವರು. ಪೆರಡೂರಿಗೆ ಬರಬೇಕಾದರೆ ನಾಲ್ಕು ಕಡೆಯಿಂದಲೂ ನಾಲ್ಕು ಹೊಳೆಗಳನ್ನು ದಾಟಿ ಬರಬೇಕು. ಆದರೆ ದಕ್ಷಿಣ ದಿಕ್ಕಿನಲ್ಲಿದ್ದ ಪುತ್ತಿಗೆ ಎಂಬ ಹೊಳೆಯು ಬಹಳ ಕೆಟ್ಟದ್ದಾಗಿಯೂ ಹೆಚ್ಚು ಆಳವಾಗಿಯೂ ದೊಡ್ಡ ಅಪಾಯಕರದ್ದಾಗಿಯೂ ಇರುವುದು. ಇದೇ ತಿಂಗಳಿನ ತಾರೀಕು ೧೫ರಲ್ಲು ಸೋಣ ಶಂಕ್ರಾಂತಿಗೆ ಎಂತ ಬಂದ ಜನರು ನದಿಯಲ್ಲಿ ಪ್ರವಾಹವು ಬಹಳ ಹೆಚ್ಚಾದ್ದರಿಂದ ಈಚೆಗೆ ಪಾರಾಗಲಿಕ್ಕಾಗದೆ ಅಲ್ಲಿಯೇ ಉಳಕೊಂಡರು. ಆದರೂ ಹೆಚ್ಚು ಧಣವಂತರು ಪ್ರಯತ್ನ ಮಾಡಿ ಈಚೆಗೆ ಹ್ಯಾಗಾದರೂ ದಾಟಿ ಬಂದರು. ಬಡವರು ಮರುದಿವಸ ನೀರು ಇಳಿದನಂತರ್ರು ದೋಣಿ ಒತ್ತುವವರಿಗೆ ಇನಾಮು ಕೊಟ್ಟು ಹ್ಯಾಗಾದರೂ ಈಚೆಗೆ ಬಂದರು. ತಾ. ೧೫—೮—೧೪ರಲ್ಲು ಸುಮಾರು ಶ್ಯಾಮು ಗಂಟೆ ೫ಕ್ಕೆ ಹಣವಂತರು ಸ್ವಲ್ಪ ಬಲತ್ಕಾರ ಮಾಡಿ ದೋಣಿ ಒತ್ತುವವರಿಗೆ ಒಬ್ಬೊಬ್ಬರಿಗೆ ಎಂಟೆಂಟಾಣೆ ಪ್ರಕಾರ ನಾಲ್ಕು ಮಂದಿಗೆ ಹಿಡಕೊಂಡು ೨ ದೋಣಿಯಲ್ಲಿ ಒಂದು ಸವಾರಿ ಗಾಡಿಯನ್ನು ಇಟ್ಟು ಈಚೆಗೆ ಬರಲಿಕ್ಕೆ ಹೊರಟರು. ದೋಣಿಗಳು ಬರುವ ದಾರಿಯಲ್ಲಿ ಹೆಚ್ಚು ಆಳವಾಗಿದ್ದು ತೆರೆಯೂ, ಹೊಯಿಲೂ ಜೋರಾದ್ದರಿಂದ ದೋಣಿಯನ್ನು ಅದರ ಮೇಲಿದ್ದ ಸವಾರಿಗಾಡಿ ಸಮೇತ ಪ್ರವಾಹವು ಕೆಳಗೆ ಎಳಕೊಂಡು ಹೋಯಿತು. ನಾಲ್ಕು ಮಂದಿ ದೋಣಿ ಒತ್ತುವವನರು ಎಷ್ಟು ಪ್ರಯತ್ನಪಟ್ಟರೂ ಈಚೆಗೆ ತರಲಿಕ್ಕೆ ಅಸಾಧ್ಯವಾಯಿತು. ಗಾಡಿ ಮೇಲಿದ್ದ ಸವಾರಿಯು ಮೂರು ಮಂದಿ ಜನರು

ಬಾಯಿಗೆ ಬಾಯಿಗೆ ಹೊಡೆದುಕೊಂಡು, ಅಯ್ಯಯ್ಯೋ! ಓ ಅಪ್ಪಾ! ಎಂತ ಬೊಬ್ಬೆ ಹಾಕಿದರು, ಮಾತ್ರವಲ್ಲಾ ಅವರು ಜೀವದ ಆಶೆ ಬಿಟ್ಟರೆಂತ ನಾನು ನಂಬುತ್ತೇನೆ. ನಾವೆಲ್ಲರೂ ಸಾಯುತ್ತೇವೆ. ಯಾರೂ ಬದುಕುವುದಿಲ್ಲ, ಅಯ್ಯೋ! ಎಂತ ಹೆಚ್ಚಾಗಿ ಬೊಬ್ಬೆ ಹಾಕಿದರು. ಆದರೆ ಶ್ರೀ ಅನಂತ ಪದ್ಮನಾಭ ದೇವರ ಕೃಪೆಯಿಂದ ಸುಮಾರು ಎರಡು ಮೈಲು ಕೆಳಗೆ ಹೋಗಿದ್ದ ದೋಣಿಯನ್ನು ಅದಷ್ಟು ಪ್ರಯತ್ನಮಾಡಿ ಈಚೆಗೆ ತಂದರು. ಈಚೆಗೆ ಬರುವಾಗ ಸುಮಾರು ರಾತ್ರೆ ಗಂಟೆ ೧೨ ಆಗಿತ್ತು. ಆದರೆ ಶ್ರೀ ದೇವರ ಕೃಪೆಯಿಂದ ಯಾವ ಜೀವವೂ ನಷ್ಟವಾಗಲಿಲ್ಲ. ಹೀಗೆಯೇ ಸದಾ ಆಗುವು ದರಿಂದ ಜನರಿಗೆ ಈಚೆ ಆಚೆ ಹೋಗಲಿಕ್ಕೆ ನಷ್ಟವೂ ಕಷ್ಟವೂ ಭ್ರಷ್ಟವೂ ತೊಂದರೆಯೂ ಆಗುತ್ತದೆಂಬದರಲ್ಲಿ ಅನುಮಾನವಿಲ್ಲ. ಅದ್ದರಿಂದ ಈ ವಿಷಯದಲ್ಲಿ ಜಿಲ್ಲಾ ಕಲೆಕ್ಟರ್ ದೊರೆಗಳವರು ಚೆನ್ನಾಗಿ ಆಲೋಚಿಸಿ ಈ ನದಿಗೆ ಕೂಡಲೇ ಸೇತುವೆ ಆಗುವ ಹಾಗೆ ಸೆಂಕ್ಷನ್ ಮಾಡುವರೆಂಬದಾಗಿ ನಂಬಿ ಪ್ರಾರ್ಥಿಸುತ್ತೇನೆ.

ಪೆರಡೂರು, ತಾ. 28—8—44. ಪಿ. ವಿ. ಎಮ್.

ಗ್ರಾಮ ಮುನ್ಸೀಫ್ ಕೋರ್ಟು.

ಸ್ವಾಮಿಾ ಪತ್ರಿಕರ್ತರೇ,

ಸಿವಿಲ್ ಕೋರ್ಟುಗಳಿಗೆ ಕೊಂಡುಹೋಗುವ ವ್ಯಾಜಗಳಿಂದುಂಟಾಗುವ ಖರ್ಚನ್ನು ಬಡವರಿಂದ ತಡೆದುಕೊಳ್ಳುವದು ಕಷ್ಟಸಾಧ್ಯವಾದುದರಿಂದ ಸರಕಾರದವರು ಬಡ ವರ ಉಪಯೋಗಾರ್ಥವಾಗಿ ಅಲ್ಲಲ್ಲಿ ಗ್ರಾಮ ಮುನ್ಸೀಫ್ ಕೋರ್ಟುಗಳನ್ನು ಸ್ಥಾಪಿಸಿ ೨೦ ರೂಪಾಯಿ ಒಳಗಿನ ವ್ಯಾಜಗಳನ್ನು ಏನೂ ಖರ್ಚಿಲ್ಲದೆ ಈ ಗ್ರಾಮ ಮುನ್ಸಿಫ್ ಕೋರ್ಟುಗಳಲ್ಲಿ ನಡೆಯಿಸಬೇಕೆಂಬ ನಿಯಮ ಮಾಡಿರುವರಷ್ಟೆ. ಪರಂತು, ಬಡವರು ಈ ಗ್ರಾಮಕೋರ್ಟಿನಿಂದ ಪಡೆಯುವ ಕಷ್ಟವನ್ನು ವಿವರಿಸಲಸಾಧ್ಯವು. "ದೇವರು ಕೊಟ್ಟರೂ ಪೂಜಾರಿ ಬಿಡ" ಎಂಬ ಲೋಕೋಕ್ತಿಯು ಇಲ್ಲಿಯ ಕಸಬಾ ಗ್ರಾಮ ಮುನ್ಸೀಫ ಕೋರ್ಟಿನಲ್ಲಿ ನಡೆಯುತ್ತಿದೆ. ಈ ಕೋರ್ಟು ಸ್ಥಾಪಿಸಲ್ಪಟ್ಟ ಪ್ರಥಮದ ವರ್ಷದಲ್ಲಿ ಸುಮಾರು ೨೦೦೦ ವ್ಯಾಜಗಳು ಇಲ್ಲಿ ದಾಖಲು ಮಾಡಲ್ಪಟ್ಟಿದ್ದವು. ಈಗ ೩-೪ ವರ್ಷಗಳಿಂದ ಸದರಿ ಕೋರ್ಟಿನಲ್ಲಿ ದಾಕಲಾಗುವ ವ್ಯಾಜಗಳ ಸಂಖ್ಯೆಯು ಕಡಿ ಮೆಯಾಗುತ್ತಾ ಬರುತ್ತಿದೆ. ಇದರಿಂದಲೇ ಕೋರ್ಟಿನ ಮೇಲೆ ಜನರಿಗಿದ್ದ ನಂಬಿ ಕೆಯು ಕಡಿಮೆಯಾಗುತ್ತಾ ಬಂತೆಂದು ನಂಬ ಆಸ್ಪದ ದೊರಕುವದು. ಮುಖ್ಯ ವಾಗಿ ಇಲ್ಲಿಯ ಗ್ರಾಮ ಮುನ್ಸೀಫರಲ್ಲಿರುವ ಕೆಲವು ನ್ಯೂನತೆಗಳೂ, ದಿನೇ ದಿನೇ ಈ ಗ್ರಾಮ ಕೋರ್ಟಿನಲ್ಲಿ ಹೆಚ್ಚುತ್ತಿರುವ ಅವಿದ್ಯಾವಂತರಾದ ವಕೀಲರ ಸಂಖ್ಯೆಯೂ ಈ ಗ್ರಾಮ ಕೋರ್ಟಿನ ಮೇಲೆ ಜನರು ಅಸಡ್ಡೆಯನ್ನು ತೋರಿಸಲು ಕಾರಣವೆಂದು ಹೇಳಿ ದರೆ ಕಕ್ಷಿಗಾರರ‍್ಯಾರೂ ಅಲ್ಲಗಳೆಯರು. ಈ ಗ್ರಾಮ ಮುನ್ಸೀಫ ಕೋರ್ಟಿನ ವಕೀ ಲರನ್ನು ನೋಡಿದ ಮಾತ್ರದಿಂದ ಇವರಿಂದ ಬಡವರಿಗೆ ಉಂಟಾಗುವ ಪ್ರಯೋಜನವು ಏಷ್ಟೆಂಬದು ಖಾತ್ರಿಯಾಗದಿರದು. ಇವರು ವ್ಯವಹರಿಸಲು ಅನುಭವವಿಲ್ಲದವರಾದ ಕಾರಣ ಕಕ್ಷಿಗಾರರಿಗೆ ಕೊಡುವ ಅನುಭವವು ತಪ್ಪಾಗಿ, ಸದರಿ ಕೋರ್ಟಿನಲ್ಲಿ ದಾಕ ಲಾಗುವ ವ್ಯಾಜ್ಯಗಳು ತನಕಿಯಾಗುವಾಗ ಬೆಂಚ ಮೆಂಬರರು ಇವುಗಳ ಮೇಲೆ ಆಕ್ಷೇ ಪವನ್ನು ಹಿಡಿಯುವುದರಿಂದ ವಕೀಲರು ಕೈಪೇತನ್ನು ಹಿಂದೆಗೆಯುವರು. ಅದೇ ವ್ಯಾಜ್ಯವನ್ನು ಮಾರಣೇ ದಿನ ಪುನಃ ದಾಕಲು ಮಾಡುತ್ತಾರೆ. ಈ ವ್ಯಾಜ್ಯವೂ ತಪ್ಪೆಂದು ಮೆಂಬರರು ಹೇಳಿದರೆ ಕೈಪೇತು ದುರುಸ್ತಿಗೆ ಅರ್ಜಿ ಮಾಡಲ್ಪಡುತ್ತದೆ. ಅನಂತರ ದುರುಸ್ತಿ ಮಾಡಿದ ವ್ಯಾಜ್ಯವು ಪುನಃ ತನಕಿಯಾಗುವಾಗ ವಾದಿ ಪ್ರತಿವಾದಿಗ ಳೇ ವಾದೇವಿ ನಡೆದ ತಾರೀಕು ೬ ತಿಂಗಳು ಇಲ್ಲದಿರುವುದರಿಂದ ವ್ಯಾಜ್ಯವು ನಂಬತಕ್ಕ ದಲ್ಲಾ ಎಂತ ಮೆಂಬರರು ಹೇಳುವರು. ಪುನಃ ತಾರೀಕು ತಬ್ದೀಲಿಯಿಂದ ಬೇರೆ ವ್ಯಾಜ್ಯ ಮಾಡುತ್ತೇವೆಂತ ಹೇಳಿ ಪ್ರತಿವಾದಿಗೆ ನೋಟೀಸು ಕೊಡುವರು. ಇದೇ ರೀತಿ ಕೈಪೇತು ಬರೆಯ ತಿಳಿಯದೆ ಬರೇ ಉದರ ಪೋಷಣೆಯ ಬಗ್ಗೆ ಕಾಲಕ್ಷೇಪ ಮಾಡುವ ಈ ಗ್ರಾಮಕೋರ್ಟು ವಕೀಲರಿಂದ ಕಕ್ಷಿಗಾರನಿಗೆ ಹತ್ತಿಪ್ಪತ್ತು ರೂಪಾಯಿ ನಷ್ಟವಾಗುತ್ತದೆ. ಕೆಲವು ಸಾರಿ ೫ ರೂಪಾಯಿಯ ದಾವೆಗೆ ವಾದಿಗೆ ೧೦ ರೂಪಾಯಿ ಖರ್ಚಾಗುವದೂ ಇದೆ. ಕೆಲವು ವ್ಯಾಜ್ಯಗಳು ಡಿಸ್ಟ್ರಿಕ್ಟ್ ಮುನ್ಸೀಫ ಕೋರ್ಟಿಗೆ ಟ್ರಾನ್ಸ್‌ಫರ್ ಆಗುತ್ತದೆ. ವ್ಯಾಜ್ಯ ತನಕಿಯಾಗುವ ಸಮಯ ವಾದಿ ಪ್ರತಿವಾದಿಯರ ವಕೀಲರೂ, ಉಭಯಪಕ್ಷದ ಸಾಕ್ಷಿಗಾರರೂ ಬಸ್ಸಿನ ಮೇಲೆ ಇನ್ನೊಬ್ಬರು ಬಿದ್ದು ಮಾ ತಾಡುವುದರಿಂದುಂಟಾಗುವ ಬೊಬ್ಬೆಯಿಂದ ಅನೇಕಾವರ್ತಿ ಗ್ರಾಮ ಮುನ್ಸೀಫರಿಗೆ ವಾದಿ ಪ್ರತಿವಾದಿಯರ ನಿಜವಾದ ವಾಗ್ಮೂಲವೇನೆಂಬದು ಗೊತ್ತಾಗದು. ಸ್ವಲ್ಪ ದೊಡ್ಡವರಿ ಗೆಂತೂ ಹಾಗೆಹೀಗೆ ಪ್ರಯೋಜನವಾಗುತ್ತದೆ. ಬಡವನ ವ್ಯಾಜ್ಯದ ಸ್ಥಿತಿ ಹೇಳತೀರದು. ಎಲ್ಲಾ ಅನರ್ಥ ಸುಲಿಗೆಗಳಿಗೆ ಇಲ್ಲಿ ಕೂಡಿರುವ ವಕೀಲರೇ ಕಾರಣರು. ಹೀಗೆ ಈ ಗ್ರಾಮಕೋರ್ಟಿನ ಮೇಲೆ ಬಡ ಜನರಿಗೆ ಇದ್ದ ಭರವಸವು ಪೂರ್ಣ ಕಮ್ಮಿಯಾಗಿರುವುದು. ಈ ವಕೀಲರ ವಿಷಯದಲ್ಲಿ ಕೋರ್ಟ ಪ್ರೆಸಿಡೆಂಟರು ಏನೂ ಜಾಗ್ರತೆ ತೆಗೆದುಕೊಳ್ಳದೆ ಇರುವದು ಬಡ ಕಕ್ಷಿಗಾರರ ದುರಾದೃಷ್ಟವೆನ್ನಬೇಕಾಗಿದೆ. ಆದುದರಿಂದ ಸದರಿ ಕೋ ರ್ಟಿನ ಮೇಲಾಧಿಕಾರಿಗಳಾದ ಕಲೆಕ್ಟರ ದೊರೆಗಳು ಈ ವಿಷಯ ತನಕಿ ನಡಿಸಿ, ಸಮರ್ಥ ರಾದ ಮುನ್ಸೀಫರನ್ನು ನೇಮಿಸಿ, ಅಲ್ಲಿ ವ್ಯವಹರಿಸತಕ್ಕ ವಕೀಲರನ್ನು ಪರೀಕ್ಷಿಸಿ ಬುದ್ಧಿ ವಂತರಾದವರನ್ನೂ, ಸದ್ವರ್ತನೆಯುಳ್ಳವರನ್ನೂ ಮಾತ್ರ ಇರಗೊಡಿಸಿದರೆ ಬಡವರಿಗೆ ಹೆಚ್ಚಿನ ಉಪಕಾರವಾದೀತಲ್ಲದೆ ಬಡ ಜನರಿಗೆ ಗ್ರಾಮ ಕೋರ್ಟುಗಳಿಂದುಂಟಾಗ ಬಹುದಾದ ಪ್ರಯೋಜನಗಳು ಸರಿಯಾಗಿ ದೊರಕಿ, ಜನರಿಗೆ ಇಂತಹ ಕೋರ್ಟುಗಳ ಮೇಲೆ ಪೂರ್ಣ ನಂಬಿಕೆಯೂ ಹುಟ್ಟುವುದು.

ಬಡ ಕಕ್ಷಿಗಾರ.

ವರ್ಗವಾಗಿ ಹೋದ ನಮ್ಮ ಶಾಲಾ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರು.

ಮಹನೀಯರೇ,

ಸುಳ್ಯ ಪ್ರಾಂತ್ಯಗಳ ಉಪಾಧ್ಯಾಯರುಗಳ ಎರಡು ಮಾತುಗಳಿಗೆ ಪ್ರೀತಿಯಿಟ್ಟು ತಮ್ಮ ಪತ್ರದಲ್ಲಿ ಎಡೆ ಕೊಡಬೇಕಾಗಿ ಪ್ರಾರ್ಥಿಸುತ್ತೇವೆ.

ಕಾಸರಗೋಡು ರೇಂಜಿನ ಶಾಲೆಗಳ ಸಬ್ ಅಸಿಸ್ಟಾಂಟ್ ಇನ್ಸಪೆಕ್ಟರರಾಗಿದ್ದ ಮ॥ ರಾ॥ ರಾ॥ ಪಂಜೆ ಮಂಗೇಶರಾಯರು ಬೇರೆ ರೇಂಜಿಗೆ ವರ್ಗಾಯಿಸಲ್ಪಟ್ಟಿದ್ದರಿಂದ ನಮ್ಮಲ್ಲಿ ಉಂಟಾಗಿರುವ ವಿಷಾದವನ್ನು ಈ ಮೂಲಕ ಸೂಚಿಸಿರುತ್ತೇವೆ. ಹೀಗೆ ವಿಷಾದವನ್ನು ಸೂಚಿಸುವಾಗ ನಮ್ಮಲ್ಲಿಯ ಪ್ರಾಂತ್ಯಗಳಲ್ಲಿ ವಿದ್ಯಾಪ್ರಸರಣದ ಬಗ್ಗೆ ಅವರು ಮಾಡಿದ ಪ್ರಯತ್ನಗಳ ಉಪಕಾರ ಸ್ಮರಣೆಯನ್ನು ಮಾಡದಿದ್ದರೆ ನಾವು ಕೃತ ಘ್ನರೆಂತಾಗುವೆವು. ಗುಡ್ಡ ಮತ್ತು ಕಾಡುಗಳಿಂದ ತುಂಬಿದ್ದು ಮಲೆಜ್ವರ ಯುಕ್ತವಾದ ನಮ್ಮ ಗ್ರಾಮಗಳಲ್ಲಿ ಆಫೀಸರರು ಸರ್ಕೀಟು ಬೆಳಸಿ ನಮ್ಮ ಹಾಲಹವಾಲುಗಳನ್ನು ವಿಚಾರಿಸಿ ನಮಗೆ ಹಿತವನ್ನು ಮಾಡುವದು ಸಾಮಾನ್ಯ ಕೆಲಸವಲ್ಲ. ವಿದ್ಯೆಯಲ್ಲಿ ಬಹಳ ಹಿಂದುಳಿದಿರುವ ನಮ್ಮ ಪ್ರಾಂತ್ಯಗಳಿಗೆ ಪದೇ ಪದೇ ಬರುವದೆಂದರೆ ರಾ॥ ಮಂ ಗೇಶರಾಯರಿಗೆ ಬಹಳ ಸಂತೋಷಕರ ಕೆಲಸವಾಗಿತ್ತು. ಮಕ್ಕಳ ಮಾತ್ರವಲ್ಲ; ಶಾಲಾ ಉಪಾಧ್ಯಾಯರಲ್ಲಿ ಕೂಡಾ ವಿದ್ಯಾಭಿರುಚಿಯನ್ನುಂಟುಮಾಡುತ್ತಿರುವ ಇವರ ಬುದ್ಧಿ ಚಾತುರ್ಯವನ್ನೂ ಶಾಲಾ ಮಕ್ಕಳ ಮೇಲೆ ಇವರಿಗೆ ವಿಶೇಷವಾಗಿರುವ ಪ್ರೀತಿಯನ್ನೂ ಎಷ್ಟು ಕೊಂಡಾಡಿದರೂ ಸಾಲದು. ರಾ॥ ಮಂಗೇಶರಾಯರ ಶಾಲಾ ಸಂದರ್ಶನೆ ಯನ್ನು ಶಾಲಾ ಮಕ್ಕಳು ಉಲ್ಲಾಸದಿಂದ ಎದುರುನೋಡುತ್ತಿದ್ದರು. ಸಂದರ್ಶನೆಯ ಕಾಲದಲ್ಲಿ ಇವರು ಮಾಡುತ್ತಿದ್ದ ಉಪಾಧ್ಯಾಯರ ಕೆಲಸದ ವಿಮರ್ಶೆಯು ಉಪಾಧ್ಯಾ ಯರಲ್ಲಿ ವೃತ್ತಿಗೆ ಉತ್ತೇಜನವನ್ನುಂಟುಮಾಡುತ್ತಿತ್ತು. ಉಪಾಧ್ಯಾಯರು ಮಾಡು ತ್ತಿದ್ದ ತಪ್ಪುಗಳನ್ನು ಇವರು ಸೂಚಿಸಿದ್ದರಿಂದ ಉಪಾಧ್ಯಾಯರುಗಳಲ್ಲಿ ಮನನೊಂದು ತ್ತಿದ್ದಿಲ್ಲ. ಯಾಕೆಂದರೆ ಇವರು ತಮ್ಮ ಉದ್ಯೋಗಾಭಿಮಾನವನ್ನು ಮರೆತು ಸ್ನೇಹಾ ಭಿಮಾನದಿಂದ ಅಲ್ಪ ತಾಬೇದಾರರಾದ ನಮ್ಮೆಲ್ಲವರನ್ನು ಜಾತಿಭೇದ ಇತ್ಯಾದಿಗಳನ್ನು ಲೆಕ್ಕಿಸದೆ ನಡಿಸುತ್ತಿದ್ದರು. ಇಂಥವರ ಮುಂದೆ ತಪ್ಪನ್ನು ಅಣಗಿಸಲು ಸಹ ಮನ ಒಡೆಂಬಡುತ್ತಿದ್ದಿಲ್ಲ. ಇವರಲ್ಲಿರುವ ವಿದ್ಯಾವಾತ್ಸಲ್ಯ, ನಿರಾಡಂಬರ, ಸಹಾನುಭೂತಿ, ಸ್ನೇಹಭಾವ, ವಿದ್ಯಾಪ್ರೌಢತೆಯನ್ನು ಆಲೋಚಿಸಿದರೆ ಇವರಿಗೆ ಪ್ರಕೃತ ಸರಕಾರದವರು ದಯಪಾಲಿಸಿರುವ ಉದ್ಯೋಗವು ಕೆಂಚಿತ್ತಾಗಿ ಕಾಣಬರುತ್ತದೆ. ಮಲೆ ಪ್ರಾಂತ್ಯಗ ಳಲ್ಲಿ ಕೆಲವು ವರುಷಗಳ ವರೆಗೆ ಕೆಲಸಮಾಡುತ್ತಿದ್ದುದರಿಂದ ಮಲೆಜ್ವರವು ಇವರಿಗೆ ಪ್ರಾಪ್ತವಾಗಿ ನಮ್ಮನ್ನು ಬಿಟ್ಟು ಮತ್ತೊಂದು ರೇಂಜಿಗೆ ಇವರಿಗೆ ಹೋಗಬೇಕಾಯಿತೆಂಬ ದಾಗಿ ನೆನಸುತ್ತೇವೆ. ಇಂಥವರು ವಿದ್ಯಾಖಾತೆಯಲ್ಲಿ ಶ್ರೇಷ್ಠ ಪದವಿಯನ್ನು ಪಡದು ಈ ಜಿಲ್ಲಾ ಜನರು ಇವರ ಗುಣಾತಿಶಯಗಳ ಪ್ರಯೋಜನಗಳನ್ನು ಪಡೆಯುವವರಾಗ ಲೆಂದು ಮನಃಪೂರ್ವಕವಾಗಿ ಅಪೇಕ್ಷಿಸುವ,

ಸುಳ್ಯ ಅತ್ತಣ ಬಡ ಉಪಾಧ್ಯಾಯ

ಉಡುಪಿ, ತಾ. 31 – 8 – 14.

ಪತ್ರಾಧಿಪರೇ,

ಕಡಂಬಳ ಹಾವು ಕಡಿತದ ವಿಷವೇಗವು ಬಹಳ ವಿಪರೀತವೇ ಸರಿ. ಕೊರೊನೇಶನ್ ಜಟ್ಕಾಭಂಡಿಯಲ್ಲಿ ಸೋನಾರ್ ಜಾತಿಯ ಹುಡುಗನು ಈ ಹಾವಿನ ಕಡಿತದಿಂದ ಮೃತಪಟ್ಟನೆಂಬದು ಜನರಿಗೆ ತಿಳಿಯುವಷ್ಟರಲ್ಲಿ ಮುಲ್ಕಿಯಿಂದ ಮಂಗಳೂರಿಗೆ ಓಡಾಡುತ್ತಿದ್ದ ಈ ಕಂಪೆನಿಯ ಭಂಡಿಗಳೂ ನಿಂತುಹೋಗಿವೆ ಕಡಂಬಳ ಹಾವಿನ ವಿಷವು ಗಾಡಿಗಳಿಗೆ ಸಹ ಏರಿಹೋಯಿತೇ? ಈ ವಿಷವೇಗವು ವಿಪರೀತವೇ ಸರಿ

. ಸ್ವಾಮಿಾ, ಎಂಥಾ ಪ್ರಯತ್ನಗಳನ್ನು ನಡಿಸಿದರೂ ದ್ವೈತಮತ ಸಂಸ್ಥಾಪನೆಯ ಪಟ್ಟಣವಾದ ಉಡುಪಿಗೆ ಮಂಗಳೂರಿನಿಂದ ಪ್ರಯಾಣಿಕರನ್ನು ಒಯ್ಯುವ ಸಾಧನೆಯು ದ್ವೈತವಾಗಿರದೆ ಅದ್ವೈತದಲ್ಲಿ ಕೊನೆಗಾಣುತ್ತಲಿರುವುದು ಹ್ಯಾಗೂ ಜಟ್ಕಾಬಂಡಿಗಳ ದರಗಳು ಉಡ್ಪಿಯಿಂದ ಮಂಗಳೂರಿಗೆ ಹೆಚ್ಚಿರುವವು ಉಡ್ಪಿಯಲ್ಲಿ ಕೊರೊನೇಷನ್ ಕಂಪೆನಿಯ ಸಾಹಸವು ಇಲ್ಲಿಗೆ ಮುಗಿಯಿತು. ದ್ವೈತ ಮಾರ್ಗ ಸಾಧನೆಯನ್ನು ಅವಲಂಬಿಸಿ ಸ್ಥಾಪಿಸೋಣಾದ ಜಟ್ಕಾ ಕಂಪೆನಿಗಳು ಮಡಿದುಹೋದ ಲೆಕ್ಕವನ್ನು ನೋಡಿ ಅವುಗಳ ಹೆಸರು ಪಟ್ಟಿಯನ್ನು ತಯ್ಯಾರಿಸಿದರೆ ಇನ್ನು ಒಂದು ವೇಳೆ ಹೊಸತಾಗಿ ಸ್ಥಾಪಿಸಲ್ಪಡಬಹುದಾದ ಜಟ್ಕಾ ಕಂಪೆನಿಗಳಿಗೆ ಹೆಸರುಗಳು ಸಹ ಸಿಕ್ಕುವದು ಕಷ್ಟವಾಗಿದೆ ಇದೀಗ ನಮ್ಮೂರಿನವರ ಪ್ರಯತ್ನ ಒಬ್ಬರು ಒಂದು ಉದ್ಯೋಗವನ್ನು ಮಾಡುತ್ತಿರುವರಾದರೆ ಅಂಥಾ ಉದ್ಯೋಗದಲ್ಲಿರುವ ಕೊರತೆಗಳನ್ನು ನೋಡಿಕೊಂಡು ಅವನ್ನು ಸರಿಪಡಿಸುವ ಸಾಧನೆಯನ್ನು ಕೈಕೊಂಡು ತನ್ನ ಮತ್ತು ಪರರ ಒಳ್ಳಿತನ್ನು ಸಾಧಿಸುವ ಬದಲಿಗೆ ಉದ್ಯೋಗದ ಗತಿಯನ್ನೇ ಕೆಡಿಸಿಬಿಟ್ಟು, ಸರ್ವ ನಾಶವನ್ನು ತಂದುಕೊಳ್ಳುವರು.

ಸ್ವಾಮಿಾ, ಉಡ್ಪಿಯಿಂದ ಮಂಗಳೂರಿಗೆ ಜಟ್ಕಾಬಂಡಿಗಳ ಎರಡು ಕಂಪೆನಿಗಳ ಅಗತ್ಯವಿರುವದೋ, ಅಗತ್ಯವಿರುವದಾದರೆ ಯಾತಕ್ಕೆ ಎಂಬುದನ್ನು ಸರಿಯಾಗಿ ಆಲೋಚಿಸದೆ, ಹಿಂದುಮುಂದು ನೋಡದೆ, ದೊಡ್ಡದೊಡ್ಡ ಹೆಸರುಗಳಲ್ಲಿ ಕಂಪೆನಿಗಳನ್ನು ಸ್ಥಾಪಿಸಿ, ಸ್ಥಾಪಿಸಿದ ಕೆಲವು ಕಾಲದಲ್ಲಿಯೇ ಅವುಗಳನ್ನು ಕಿತ್ತುಬಿಡುವ ಸಾಹಸ ಬುದ್ಧಿಮಾನಗಳನ್ನು ಎಷ್ಟು ಹೊಗಳಿದರೂ ಸಾಲದು! ಇಂಥವರು ಈ ರೀತಿ ತಮ್ಮ ಹಣದ ದುರುಪಯೋಗವನ್ನು ಮಾಡಿ ಪ್ರಯಾಣಿಕರಿಗೆ ಸಹ ವಿಶೇಷ ಅನಾನುಕೂಲತೆಯನ್ನುಂಟುಮಾಡುತ್ತಲಿದ್ದಾರೆ. ಜಟ್ಕಾ ಕಂಪೆನಿಗಳು ರೈಲ್ವೆ ಕಂಪೆನಿಗಳ ಮೊದಲಾದ ಜನರ ಅನುನಿತ್ಯದ ವ್ಯಾಪಾರದ ಕಂಪೆನಿಗಳು, ಅಲ್ಪಲಾಭದಲ್ಲಿ ತೃಪ್ತಿಹೊಂದಿಕೊಂಡು ಲೋಕ ಹಿತಾರ್ಥವಾಗಿ ಕೆಲಸ ನಡಿಸಬೇಕಾದವುಗಳಾಗಿರುವವು ವಿಶೇಷ ದ್ರವ್ಯ ವಿನಿಯೋಗವನ್ನು ಮಾಡಲು ಶಕ್ತರಾದವರು ಅಲ್ಪ ಲಾಭದಲ್ಲಿ ತೃಪ್ತಿಹೊಂದಬಹುದು ತೃಪ್ತಿ ಇದ್ದವರು ಗೌರವದಿಂದ ಉದ್ಯೋಗ ನಡಿಸಬಹುದು ಆದ್ದರಿಂದ ಹಣವಂತರು ಇಂಥಾ ಉದ್ಯೋಗಗಳಿಗೆ ಕೈಹಾಕಿ ತಮ್ಮ ಹೇರಳವಾದ ದ್ರವ್ಯದ ವಿನಿಯೋಗವನ್ನು ಮಾಡಿ ಜನರಿಗೂ ಉಪಕಾರವನ್ನು ಮಾಡಬೇಕಾಗಿದೆ ಇಂಥಾ ಹಣವಂತರು ಇಲ್ಲದ್ದಲ್ಲಿ ಜನರೇ ಹಲವು ಪಾಲುಗಳನ್ನು ಮಾಡಿಕೊಂಡು ಇಂಥಾ ಕಂಪೆನಿಗಳನ್ನು ಏರ್ಪಡಿಸಬೇಕು. ಕಂಪೆನಿಯನ್ನು ಜನರ ಸೌಖ್ಯಕ್ಕೂ ಅನುಕೂಲತೆಗೂ ಆಸ್ಪದ ಕೊಡುವಂತೆ ನಡಿಸಬೇಕು ಈ ರೀತಿ ಕಂಪೆನಿಗಳ ಮೂಲಕ ಈ ವ್ಯಾಪಾರವು ನಡಿಸೋಣಾಗುವುದರಿಂದ ಇಂಥಾ ಕಂಪೆನಿಗಳಲ್ಲಿರುವ ಕೊರತೆಗಳನ್ನು ತಿದ್ದಲು ಅವಕಾಶ ದೊರಕುತ್ತದೆ ಇಂಥಾ ಕಂಪೆನಿಗಳನ್ನು ಜನರು ತಮ್ಮವು ಎಂತ ಕರೆಯುವ ಅಭಿಮಾನವು ಸಹ ಜನರಲ್ಲಿ ಉಂಟಾಗುವುದರಿಂದ ಕಂಪೆನಿಯ ಬೆಳವಣಿಗೆಗೆ ಸಹಾಯವಾಗುವದು

ನಮ್ಮ ಕರಾವಳಿಯಲ್ಲಿ ಜಟ್ಕಾಭಂಡಿಗಳ ವ್ಯಾಪಾರಕ್ಕೆ ಪ್ರಾರಂಭವಾಗಿ ಹಲವು ವರುಷಗಳಾದವು. ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಧ್ಯವಾದಷ್ಟು ವೇಗದಲ್ಲಿ ಪ್ರಯಾಣಮಾಡುವ ಅನುಕೂಲತೆಯನ್ನು ಜನರು ಚನ್ನಾಗಿ ತಿಳಕೊಂಡಿರುತ್ತಾರೆ ಇಂಥಾ ಕಂಪೆನಿಗಳನ್ನು ಹೇಗೆ ನಡಿಸಬೇಕೆಂಬ ಅನುಭವವು ಜನರಲ್ಲಿ ಉಂಟಾಗಿರುವುದು. ಒಬ್ಬಿಬ್ಬರು ಈ ಕಂಪೆನಿಗಳನ್ನು ನಡಿಸುವದರಿಂದ ಉಂಟಾಗುವ ಅಡಚಣಿಯನ್ನೂ ಕಷ್ಟ ನಷ್ಟ, ಉಪದ್ರಗಳನ್ನೂ ಸರ್ವರೂ ತಿಳಿದಿರುವರು. ಆದ್ದರಿಂದ ನಮ್ಮ ಜಿಲ್ಲೆಯ ವಿದ್ಯಮಾನಗಳಲ್ಲಿ ಈ ಜಿಲ್ಲೆಯಲ್ಲಿ ಪ್ರಯಾಣಿಕರ ಪ್ರಯೋಜನದ ಏರ್ಪಾಡುಗಳನ್ನು ಹಲವು ಜನರು ಪಾಲೆತ್ತಿ ಮಾಡಿದ ಕಂಪೆನಿಗಳ ಮೂಲಕವೇ ನಡಿಸುವುದು ನನಗೆ ಉಚಿತ ತೋರುತ್ತದೆ. ಮಂಗಳೂರಲ್ಲಿ ಎಂತೂ 'ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿ'ಯೆಂಬದೊಂದು ಈ ಬಗ್ಗೆ ಮಂಗಳೂರು ಮತ್ತು ಉಡ್ಪಿಯ ಹಲವು ಸದ್ಗೃಹಸ್ಥರುಗಳಿಂದ ಸ್ಥಾಪಿಸಲ್ಪಟ್ಟಿರುವದೆಂದು ಕೇಳಿ ಕೆಲವು ತಿಂಗಳುಗಳಾದವು. ಮೋಟರ ಭಂಡಿಗಳಲ್ಲಿ ಈ ಕಂಪೆನಿಯವರು ಪ್ರಯಾಣಿಕರನ್ನು ಅತ್ತಿತ್ತ ಒಯ್ಯುವ ಏರ್ಪಾಡನ್ನು ಮಾಡುವರೆಂದು ಕೇಳಿದ್ದೆ. ಒಂದುವೇಳೆ ಈ ಕಂಪೆನಿಯವರಿಗೆ ಉಡ್ಪಿ ಅತ್ತಕಡೆ ಮೋಟಾರುಗಳನ್ನು ನಡಿಸಲು ಈಗಲೇ ಸಾಧ್ಯವಲ್ಲದಿದ್ದರೂ ಪ್ರಯಾಣಿಕರು ವಿಶೇಷ ಅಡಚಣಿಯನ್ನೂ ನಷ್ಟವನ್ನೂ ಪ್ರಕೃತ ಪಡಿಯುವ ಈ ಸಂದರ್ಭದಲ್ಲಿ ಜಟಕಾಭಂಡಿಗಳ ಮೂಲಕವಾದರೂ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯವರು ತಮ್ಮ ಕಾರ್ಯ ಪ್ರಾರಂಭವನ್ನು ಈಗಲೇ ಮಾಡುವದು ಅಗತ್ಯವಾಗಿದೆ. ಆದ್ದರಿಂದ ಈ ಕಂಪೆನಿಯಲ್ಲಿ ಪಾಲು ತಕೊಂಡಂಥ ಹಲವು ಸದ್ಗೃಹಸ್ಥರು ಈ ವಿಷಯವನ್ನು ಬರಹ ಮೂಲಕ ಕಂಪೆನಿಯ ಡಿರೆಕ್ಟರರುಗಳಿಗೆ ಬರಕೊಂಡು ಅಗತ್ಯವಾದ ಕಾರ್ಯ ವಿವರವನ್ನು ಶೀಘ್ರದಲ್ಲಿ ನಡಿಸಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯವರು ತಮ್ಮ ಪರೋಪಕಾರ ಭಾವವನ್ನು ತೋರಿಸಿದರೆ ಜನರಿಂದ ವಿಶೇಷ ಪ್ರೋತ್ಸಾಹವು ಇವರಿಗೆ ದೊರಿಯುವುದು.

ಜನ ಹಿತೈಷಿ

ಕೋಟೆಕಾರ ಮಾರ್ಗದ ಪ್ರಯೋಜನ.

ಉಳ್ಳಾಲ ರೈಲ್ವೆ ಸ್ಟೇಶನಿನ ಎದುರಿನಿಂದ ದೆರ್ಲಕಟ್ಟೆ ಪಾತೂರು ಮಾರ್ಗ ಅಸ್ಸಾಗೋಳಿ ವರೆಗೆ ಒಂದು ಮಾರ್ಗವು ಸೆಂಕ್ಷನ್ ಆಗಿ ಮಾರ್ಗದ ಕೆಲಸವು ಶುರುವಾಗುವ ಸಂದರ್ಭದಲ್ಲಿತ್ತು ತನ್ಮಧ್ಯ ಸದರಿ ಮಾರ್ಗವು ಬೈಲುಗದ್ದೆಗಳ ನಡುವಿನಿಂದ ಹಾದುಹೋಗುವ ಪ್ರಯುಕ್ತ ಹೆಚ್ಚು ಹಣ ತಗಲುವದೆಂಬ ಒಂದೇ ಸಂಗತಿಯಿಂದ, ಆ ಮಾರ್ಗದಿಂದ ಜನರಿಗೆ ಉಂಟಾಗುವ ಹೆಚ್ಚಿನ ಪ್ರಯೋಜನದ ಸಂಗತಿ ಕೂಡಾ ಆಲೋಚಿಸದೆ ಮನ್ನಾ ಇಡಲಾಯಿತು ನಂತರ ಕೋಟೆಕಾರ ನಿವಾಸಿಕನ ಅಪೇಕ್ಷೆ ಮೇರೆಗೆ ಈ ಮಾರ್ಗಕ್ಕಿಂತ ಸುಮಾರು ೪ ಫರ್ಲಾಂಗ ದೂರದಿಂದ ಅಂದರೆ ೫ ಮೈಲ ೬ ಫರ್ಲಾಂಗ ಸಮಿಾಪ ಸರ್ವೆ ನಂಬ್ರ ೧೯, ೨೦, ೨೧, ೨೨ನೇಗಳಿಂದ ಹಾದುಹೋಗುವ ಮಾರ್ಗವನ್ನು ಆರಿಸಿ ತೆರೆಯೋಣಾಗಿಯದೆ ಜನರಿಗೆ ಉಂಟಾಗುವ ಹೆಚ್ಚಿನ ಪ್ರಯೋಜನವೇ ಮಾರ್ಗದ ಮುಖ್ಯ ಉದ್ದೇಶ. ಖರ್ಚಿನ ಸಂಗತಿಯು ೨ನೇದು. ಹೀಗಿರುತ್ತಾ ಖರ್ಚಿನ ಸಂಗತಿಯೇ ನೋಡಿ ಮಾರ್ಗ ಮಾಡುವದಾದರೆ ೭ನೇ ಮೈಲಿಕಲ್ಲಿನಿಂದ ದೆರ್ಲಕಟ್ಟೆಗಾಗಿ ಅಸ್ಸಾಗೋಳಿಗೆ ಹೋಗುವ ಮಾರ್ಗವು ಈಗಲೂ ನಾದುರುಸ್ತಿಯಲ್ಲಿ ಇದೆ. ಇದನ್ನೇ ಒರೇ ಸ್ವಲ್ಪ ಖರ್ಚಿನಿಂದ ದುರುಸ್ತಿಮಾಡಿದ್ದಾದರೆ ಬಹಳ ಪ್ರಯೋಜನ ಕೂಡಾ ಇರುತ್ತಿತ್ತು ಈ ಮಾರ್ಗವು ಸರಕಾರಿ ಬಂಜರು ಸ್ಥಳದಿಂದಲೇ ಹಾದುಹೋಗುತ್ತದೆ. ಹೊಲಗದ್ದೆಗಳು ಈ ಮಾರ್ಗಕ್ಕೆ ತಟ್ಟುವದೇ ಇಲ್ಲ. ಹೀಗಿರುತ್ತಾ, ಈಗ ಆರಿಸಿ ತೆಗದ ಮಾರ್ಗವು ಕೋಟೆಕಾರ ಗ್ರಾಮಸ್ಥರಿಗೆ ಬಹಳ ಉಪಕಾರವುಳ್ಳದ್ದು ಎಂದು ನಿವಾಸಿಕನು ಹೇಳುತ್ತಾನೆ ಮಾರ್ಗವು ಈಗ ಹಾದುಹೋಗುವ ಬೈಲಗದ್ದೆಗಳ ಸ್ಥಳವು ಬಹಳ ಕಂತವಾಗಿ ಎಷ್ಟು ಇಕ್ಕಟ್ಟಾಗಿಯೂ, ಸಂಕೋಚವಾಗಿಯೂ ಇರುತ್ತದಂದರೆ—ಸಾಮಾನ್ಯವಾಗಿ ೧-೨ ಮಳೆಗೆ ನೆರೆಬಂದಂತೆ ೨-೩ ದಿವಸಗಳ ವರೆಗೆ ನೀರು ತುಂಬಿ ಹೊಲಗಳು ಮುಳುಗಿ ನೀರು ೧-೨ ಕೋಲು ಗದ್ದೆಗಳ ಮೇಲಿನಿಂದ ಹರಿಯುತ್ತದೆ. ಈ ಸಂಗತಿಯನ್ನು ನಿವಾಸಿಕನು ನೋಡದಿದ್ದರೂ ಸ್ಥಳಿಕ ರೈತರನ್ನು ವಿಚಾರಿಸಿದಲ್ಲಿ ನಿಜತ್ವವು ತಿಳಿಯಬರುವದು ಇಂತಹ ಸಂಕೋಚವಾಗಿ ಇಕ್ಕಟ್ಟಾದ ಸ್ಥಳದಲ್ಲಿ ಕಂತವಾದ ಗದ್ದೆಗಳಿಗಿಂತ ಕನಿಷ್ಟ ಪಕ್ಷಕ್ಕೆ ೩ ಯಾ ೪ ಕೋಲು ಎತ್ತರ ಮಾರ್ಗ ಬಂದದ್ದಾದರೆ ಮಳೆಗಾಲದಲ್ಲಿ ತುಂಬುವ ನೀರಿನ ಪ್ರವಾಹಕ್ಕೆ ಮಾರ್ಗವು ಕಟ್ಟೆಕಟ್ಟಿದ ಹಾಗೆ ಆಗಿ, ಹಲವು ದಿವಸಗಳ ವರೆಗೆ ನೀರು ತುಂಬಿ ತುಳುಕಿ ಸರಿಯಾಗಿ ಹಾದುಹೋಗುವರೆ ಮಾರ್ಗದಿಂದ ಉಪಾಯವಿಲ್ಲದೆ, ನೀರು ನಿಂತರೆ ಮಾರ್ಗದ ಪೂರ್ವ ದಿಕ್ಕಿನ ಹಲವು ವಿಸ್ತೀರ್ಣದ ಗದ್ದೆಗಳ ಪೈರು ಕೊಳತು ಹೋಗಿ, ವರ್ಷಂಪ್ರತಿ ಹೇರಳ ನಷ್ಟವಾಗಿ, ಪೈರನ್ನು ಸಾಕಿ ಸಲಹಿದ ರೈತರಿಗೆ ಬೆಳೆ ಕೊಯ್ಯುವ ಉಪದ್ರ ನಿಂತುಹೋದಾಗ್ಯೂ, ನಮ್ಮ ಕೋಟೆಕಾರ ನಿವಾಸಿಕನಿಗೆ ಉಪಕಾರವೇ ಸರಿ. ಇಷ್ಟೆ ಅಲ್ಲದೆ ತೋಡಿನಲ್ಲಿ ನೀರು ತುಂಬಿ ಗದ್ದೆಯ ಮೇಲಿನಿಂದ ಹಲವು ಅಡಿ ಎತ್ತರದಿಂದ ಪ್ರವಹಿಸುವ ನೀರು ಮಾರ್ಗದಿಂದ ತಡೆಯಲ್ಪಟ್ಟು ಸಂಕದ ೧ ಯಾ ೨ ದ್ವಾರದಿಂದ ಹಾದು ಹೋಗುವ ರಭಸಕ್ಕೆ ಇಕ್ಕೇರಿದ ಕಟ್ಟಪುಣಿಗಳು ಝರ್ಜರಿತವಾಗದೆ ನಿಲ್ಲವು. ಕೋಟೆಕಾರ ಗಾಮಸ್ಥರಿಗೆ ಇಂಥಾ ಉಪಕಾರವನು ಮಾಡಿದ ನಿವಾಸಿಕನ ನೆನ್ನ ಸ್ಮರಣೆಯು ಕೋಟೆಕಾರ ರೈತರಿಗೆ ವರ್ಷಂಪ್ರತಿ ಆಗುವದು.

ಕೋಟೆಕಾರ ರೈತರಲ್ಲೊಬ್ಬ

ಯುದ್ಧ ಸಮಾಚಾರವು.

ತಾ 29ನೇ ಆಗೋಸ್ತು

ಬ್ರಿಟಿಷ ಸೇನೆಯು ಹೊಸ ಸೇನನೆಲೆಗಳಿಗೆ ಬಹಳ ಚಮತ್ಕಾರದಿಂದ ಸೇರಿಹೋಗಿರುತ್ತದೆ ರಣರಂಗದಲ್ಲಿ ನಿರಂತರ ಕಾದಾಟವು ನಡಿಯುತ್ತಿದ್ದರೂ ಶತ್ರುಗಳಿಂದ ಬ್ರಿಟಿಷ್ ಸೇನೆಗೆ ತಮ್ಮ ಸಾಧನಗಳಲ್ಲಿ ತಡೆಹಾಕಲು ಆಗಲಿಲ್ಲ

ಬ್ರಿಟಿಷ್ ಸೇನೆಗೆ ಉಂಟಾದ ನಷ್ಟವು ಇಂತಿಷ್ಟೇ ಎಂತ ಸರಿಯಾಗಿ ಹೇಳಲಾಗುವದಿಲ್ಲ. ಆದರೆ ನಷ್ಟವು ವಿಶೇಷವಾಗಿರದು

ಬ್ರಿಟಿಷ್ ಮತ್ತು ಅಫ್ರೀಕ ಸೇನೆಗಳು ಜರ್ಮನ್ ಇಂಪೀರಿಯಲ್ ಕಾವಲು ಸೇನೆಯಲ್ಲಿ ವಿಶೇಷ ನಷ್ಟವನ್ನುಂಟುಮಾಡಿರುವುದು

ಅಲ್ಜೀರಿಯನ್ ಸೋಲ್ಜರರೂ ಸನೀನು ಯುದ್ಧದಲ್ಲಿ ಬಹಳ ಪರಾಕ್ರಮವನ್ನು ತೋರಿಸುತ್ತಲಿರುವರು. ಗುಂಡಿನೇಟುಗಳನ್ನು ಲಕ್ಷಿಸದೆ ಶತ್ರುಗಳ ಸೇನೆಯ ಮೇಲೆ ಮುಂದರಿದಿರುವರು

ತಾ ೨೩ರಲ್ಲು ನಾಮೂರು ಕೋಟೆಯಿಂದ ಬಿದ್ದ ಒಂದು ಗುಂಡಿನ ಪೆಟ್ಟಿನಿಂದ ಶತ್ರು ಸೇನೆಯ ಪ್ರಿನ್ಸ್ ಫ್ರೆದರಿಕರು ಮೃತರಾದರೆಂತ ಜರ್ಮನ್ ಸರಕಾರದ ಕಡೆಯಿಂದ ಪ್ರಕಟವಾಗಿರುವುದು

ಮೊನ್ನಿನ ದಕ್ಷಿಣ ಕಡೆಯಲ್ಲಿ ಬ್ರಿಟಿಷ್ ಸೇನೆಗೂ ಶತ್ರುಗಳ ಸೇನೆಗೂ ಕೋವಿಗಳ ಯುದ್ಧವು ನಡೆಯಿತು ಜರ್ಮನರ ಗುಂಡುಗಳು ತಕ್ಕ ರೀತಿಯಲ್ಲಿ ಪ್ರಯೋಗಿಸಲ್ಪಡಲಿಲ್ಲ ಇಂಗ್ಲಿಷ್ ಕೋವಿಗಾರರು ಪಟ್ಟಣದ ಎತ್ತರ ಸ್ಥಳದಲ್ಲಿ ತಮ್ಮ ಕೋವಿಗಳನ್ನು ಇಟ್ಟು ಸಮಂಜಸವಾಗಿ ಸೂಕ್ಷ್ಮತೆಯಿಂದ ಗುಂಡುಗಳನ್ನು ಹಾರಿಸುತ್ತಿರುವರು ಈ ಯುದ್ಧವನ್ನು ಕಣ್ಣಾರೆ ಕಂಡವರು ಬ್ರಿಟಿಷ್ ಸೋಲ್ಜರರ ಸ್ಥೈರ್ಯ ಮತ್ತು ಕುಶಲತೆಯನ್ನು ಬಹಳವಾಗಿ ಹೊಗಳುತ್ತಿರುವರು

ಜರ್ಮನರು ರೌದ್ರಾವೇಶದಿಂದ ಇವರ ಮೇಲೆ ಆರು ಸಾರಿ ಬಿದ್ದರೂ ಬಹಳ ನಷ್ಟ ಹೊಂದಿ ಹಿಂದೆರಳಿದರು ಅಲ್ಜೀರಿಯನ್ ಸೇನೆಯ ಸನೀನು ಕಾಳಗದ ಎದುರಿಗೆ ಬಿದ್ದು ಶತ್ರುಗಳಲ್ಲಿ ವಿಶೇಷ ನಷ್ಟ ಉಂಟಾಗಿರುವುದು

ಬೆಲ್ಜಿಮಿನಲ್ಲಿ ವಶಮಾಡಿಕೊಂಡ ಸ್ಥಳಗಳ ಮೇಲೆ ಜರ್ಮನರು ಮಿಲಿಟರಿ ಗವರ್ನರರನ್ನು ನೇಮಿಸಿರುವರು.

ಎಂಟವರ್ಪಿನ ಮೇಲೆ ಬಿದ್ದ ಜರ್ಮನರ ಮೂರು ಸೇನಾಂಗಗಳನ್ನು ಬೆಲ್ಜನರು ೧೦ ಮೈಲುಗಳ ಹಿಂದಕ್ಕೆ ಓಡಿಸಿರುವರು.

ಫ್ರಾನ್ಸ್ —ಲೊರೈನಿನಲ್ಲಿ ಫ್ರೆಂಚ ಸೇನೆಯೂ ಶತ್ರು ಸೇನೆಯೂ ಇದಿರಿದುರಾಗಿ ಕಾದಾಡುತ್ತಿರುವವು. ಫ್ರೆಂಚರ ಒಂದು ಸೇನಾಂಗವು ವೆಜೊಜೆ ಕಣಿವೆಯಲ್ಲಿ ಶತ್ರುಗಳನ್ನು ವಿಸ್ಮಯ ಪಡಿಸಿರುವುದು. ವೆರ್ಡನ್ ಉತ್ತರಕ್ಕೆ ಯುದ್ಧವು ನಡೆಯುತ್ತಿದೆ.

ಜರ್ಮನರ ಎರಡು ಯುದ್ಧನಾವೆಗಳನ್ನು ಬ್ರಿಟಿಷರ ಒಂದು ಯುದ್ಧನಾವೆಯು ೨ ದಿವಸ ರಾತ್ರಿ ಹಗಲು ಹಿಂದಟ್ಟಿಕೊಂಡು ಹೋಗಿ ಶತ್ರುಗಳ ನಾವೆಗಳಲ್ಲಿ ವಿಶೇಷ ನಷ್ಟವನ್ನುಂಟು ಮಾಡಿರುವುದು.

ಜರ್ಮನರ ಜೆಪಲಿನ್ ಆಕಾಶನಾವೆಯು ಎಂಟವರ್ಪಿನ ಮೇಲೆ ೮ ಸಿಡಿಮದ್ದುಗಳನ್ನು ಹಾಕಿರುವುದು. ಇದರಿಂದ ೧೨ ಮಂದಿ ಸತ್ತರು. ಒಂದು ಸಿಡಿಮದ್ದು ಅರಮನೆಯ ಸಮೀಪವೇ ಬಿದ್ದಿರುವುದು

ಪೂರ್ವ ಪ್ರುಶ್ಯದಲ್ಲಿರುವ ಜರ್ಮನ್ ಸೇನೆಯು ಕೊಯೆನಿಗ್ಸ್‌ಬರ್ಗಿಗೆ ಮುಂದರಿಸುತ್ತಿರುವ ರುಶ್ಯ ಸೇನೆಯಿಂದ ಹಿಂದಟ್ಟಲ್ಪಟ್ಟಿರುವುದು ಜರ್ಮನರ ೩ ಡಿವಿಜನ್ ಸೇನೆಯು ಸ್ಟೈಡೆನ್‌ಬರ್ಗಿನ ಉತ್ತರದಲ್ಲಿರುವ ಕೋಟೆ ಕೊತ್ತಲು ಸ್ಥಳದಲ್ಲಿ ಸೇರಿರುವುದು ಎಡಪಾರ್ಶ್ವದಲ್ಲಿ ಮೇಲೆ ಬಂದು ಬೀಳುತ್ತಿದ್ದ ಶತ್ರು ಸೇನೆಯನ್ನು ರುಶ್ಯರು ಓಡಿಸಿರುವರು ಇಲ್ಲಿ ಶತ್ರುಗಳು ತಮ್ಮ ಕೋವಿಗಳನ್ನು ಬಿಟ್ಟು ಪಲಾಯನ ತೆಗೆದಿರುವರು

ರುಶ್ಯರು ಪುನಃ ಮೊರ್ಡೆನ್‌ಬರ್ಗ್, ಸೆನ್ಸ್‌ಬರ್ಗ್ ಬಿಸ್ಚೊಪ್ಸ್‌ಬರ್ಗ್ ಎಂಬೀ ಸ್ಥಳಗಳನ್ನು ತೆಗೆದುಕೊಂಡು ಮುಂದರಿಯುತ್ತಿರುವರು

ರುಶ್ಯರು ಗೆಲೀಸಿಯವನ್ನು ಒಳನುಗ್ಗಿ ಟಾರ್ನೊಮೊಲನ್ನು ವಶಮಾಡಿಕೊಂಡು ನಿಸ್ಟರ್ ನದಿಯನ್ನು ದಾಟಿದರು ಆಸ್ಟ್ರೀಯರ ಮೂರು ಸೇನಾಂಗಗಳು ಮಾತ್ರ ಇವರನ್ನು ತಡೆಯುತ್ತಿದ್ದವು

ಸರ್ವಿಯರ ಪ್ರಾಂತ್ಯದ ಯಾವ ಕಡೆಯಲ್ಲಾದರೂ ಈಗ ಆಸ್ಟ್ರೀಯರು ಇಲ್ಲದ ಹಾಗೆ ಸರ್ವಿಯರಿಂದ ಮಾಡಲ್ಪಟ್ಟಿರುವುದು

ಅಫ್ರೀಕದ ಜರ್ಮನ್ ಟೊಗೊಲೇಂಡ್ ತಾ ೨೭ರಲ್ಲು ಬ್ರಿಟಿಷರಿಗೆ ಶರಣಾಗತವಾಯಿತು ಬ್ರಿಟಿಷ್ ಮತ್ತು ಫ್ರೆಂಚ ಸೇನೆಯು ತಾ. ೨೭ರಲ್ಲು ಕಾಮಿನ ಎಂಬ ಪಟ್ಟಣವನ್ನು ಪ್ರವೇಶಿಸಿರುವದು

ಹಿಂದೂಸ್ಥಾನ ಟರ್ಕಿಯು ತಟಸ್ಥಭಾವವನ್ನು ಸ್ವೀಕರಿಸಿದುದರಿಂದ ಬಂಗಾಳದ ಮಹಮ್ಮದೀಯರು ತಮಗಿರುವ ಸಂತೋಷವನ್ನು ತೋರ್ಪಡಿಸುವ ತಂತೀವಾರ್ತೆಯನ್ನು ಕನ್‌ಸ್ಟಾಂತಿನೋಪಲಿಗೆ ಕಳುಹಿಸಿ ಕೊಟ್ಟಿರುವರು

ಮುಂಬಾಯಿಯಲ್ಲಿ ಕೂಡಿಸಿದ ಇಂಪೀರಿಯಲ್ ರಿಲೀಫ್ ಫಂಡಿಗೆ ೬॥ ಲಕ್ಷ ರೂಪಾಯಿ ಕೂಡಿರುವುದು ಮದ್ರಾಸಿನಲ್ಲಿ ೧೧ ಲಕ್ಷ ೫೩ ಸಾವಿರ ಬಂಗಾಳ ೭೦ ಸಾವಿರ, ಅದಲ್ಲದೆ ಬಂಗಾಳದವರು ೨೦ ಲಕ್ಷ ಗೋಣಿಚೀಲಗಳನ್ನು ಒದಗಿಸಿ ಕೊಡುವರೆ ೫೬ ಲಕ್ಷ ರೂಪಾಯಿ ಕೂಡಿಸುತ್ತಿರುವರು

ಸೆಪ್ಟಂಬರ ತಾ ೭ರಲ್ಲು ಬ್ರಿಟಿಷ್ ಸೇನೆಯ ಜಯವನ್ನು ಬಯಸಿ ಎಲ್ಲಾ ದೇವಾಲಯಗಳಲ್ಲಿ ದೇವಾರಾಧನೆಯು ನಡೆಯುವ ಏರ್ಪಾಡು ಮಾಡಲ್ಪಡುತ್ತಿದೆ ಹಿಂದೂಗಳೂ, ಮುಹಮ್ಮದೀಯರೂ, ಪಾರ್ಸಿಯರೂ ಆ ದಿನ ತಂತಮ್ಮ ದೇವಾಲಯಗಳಲ್ಲಿ ದೇವತಾ ಪೂಜೆ ನಡಿಸುವರೆಂದು ನಿರೀಕ್ಷಿಸಲ್ಪಟ್ಟದೆ.

ತಾ 30ನೇ ಅಗೋಸ್ತು

ಬ್ರಿಟಿಷ್ ಸೇನೆಯ ಮೇಲೆ ಜರ್ಮನರು ಪ್ರಚಂಡವಾಗಿ ಬಿದ್ದು ಅತಿರೇಕ ನಷ್ಟಹೊಂದಿ ಹಿಂದೆ ಅಟ್ಟಲ್ಪಟ್ಟರು ಮೊನ್ನಿನ ಸುತ್ತಲು ಕದನವಾಗುತ್ತಿರುವುದರಿಂದ ಬ್ರಿಟಿಷ ಸೇನೆಯು ಫ್ರೆಂಚರ ಎಡಪಾರ್ಶ್ವದಲ್ಲಿರುವರೆಂತ ತಿಳಿಯಬಹುದಾಗಿದೆ

ಪ್ರುಶ್ಯ ಸೇನೆಯು ವಿಶೇಷವಾದ ಧೈರ್ಯದಿಂದ ತಿರಿಗಿ ತಿರಿಗಿ ಬ್ರಿಟಿಷ ಸೇನೆಯ ಮೇಲೆ ಉರುಳಾಡಿಕೊಂಡು ಬಂದರೂ ಬ್ರಿಟಿಷ ಸೇನೆಯು ಅವರನ್ನು ಭಯಾಸ್ಪದ ಹುಟ್ಟುವ ರೀತಿಯಲ್ಲಿ ಹತಗೈದು ಹಿಂದಟ್ಟಿರುವುದು. ಜರ್ಮನ್ ಸೇನೆಯಲ್ಲಿ ಶ್ರೇಷ್ಠವಾದ ಸೇನೆಯು ಬ್ರಿಟಿಷ ಸೇನೆಯ ಮೇಲೆ ಬೀಳಲು ಪ್ರತ್ಯೇಕಿಸಲ್ಪಟ್ಟಿರುವುದಾದರೂ ಶತ್ರುಗಳ ಒಂದು ಸೇನೆಯ ನಂತರ ಮತ್ತೊಂದು ಸೇನೆಯನ್ನು ಬ್ರಿಟಿಷ ಸೇನೆಯು ನಷ್ಟಗೊಳಿಸಿ ಹಿಂದೆ ಓಡಿಸಿರುವರು. ಬ್ರಿಟಿಷ ಸೇನೆಯ ಸನೀನು ಕಾಳಗದ ಎದುರಿಗೆ ಜರ್ಮನರು ಎದುರು ನಿಲ್ಲಲು ಅಶಕ್ತರಾಗಿರುತ್ತಾರೆ.

ಮೊನ್ಸ್ ಯುದ್ಧಕ್ಕೆ ನಂತರ ಬಿಟ್ಟು ಬ್ರಿಟಿಷ ಸೇನೆಯಲ್ಲಿ ಸೇಕಡಾ ೬ರಂತೆ ಮಾತ್ರ ಪ್ರಾಣಾಪಾಯ ಹೊಂದಿರುವರು. ದಕ್ಷಿಣ ಆಫ್ರಿಕದ ಯುದ್ಧದಲ್ಲಿ ಬ್ರಿಟಿಷ ಸೇನೆಯಲ್ಲಿ ಸೇಕಡಾ ೬ರಿಂದ ೨೪ರಂತೆ ನಷ್ಟವುಂಟಾಗಿರುವುದರಿಂದ ಈ ನಷ್ಟವು ವಿಶೇಷವಲ್ಲವೆಂತ ಭಾವಿಸಲ್ಪಟ್ಟದೆ.

ಜರ್ಮನ್ ಕುದುರೆಪಡೆಯ ಮೂರು ಸೇನಾಂಗಗಳು ಬ್ರಿಟಿಷ ಸೇನೆಯ ಮೇಲೆ ರೋಶಾವೇಶದಿಂದ ಬಿದ್ದರೂ ಬ್ರಿಟಿಷ್ ಸೇನೆಯು ಶತ್ರುಗಳ ಸೇನೆಯನ್ನು ಓಡಿಸಿರುವುದು ಲಿಲ್ಲೆಯಲ್ಲಿ ಶತ್ರುಗಳ ಒಂದು ಸೇನಾಂಗವು ಪೂರ್ಣ ಯುದ್ಧಕ್ಕೆ ಪ್ರಾರಂಭವಾಗುವ ಮೊದಲೇ ಹಿಂದೆ ಸರಿಯಲ್ಪಟ್ಟಿರುವುದು. ಕಾಡಿನಲ್ಲಿ ಅಡಗಿದ್ದ ಶತ್ರುಗಳ ಎರಡನೇ ಅತಿ ದೊಡ್ಡದಾಗಿರುವ ಕುದುರೆಪಡೆಯನ್ನು ಫ್ರೆಂಚರು ಹೆಚ್ಚು ಕಡಿಮೆ ಪೂರಾ ನಾಶಪಡಿಸಿರುವರು ಶತ್ರುಗಳ ಮೂರನೇ ಸೇನಯ ಗತಿ ಏನೆಂಬದು ಗೊತ್ತಾಗಲಿಲ್ಲ

ಫ್ರೆಂಚರು ಲೆ ಕ್ವೆಸ್ನೆ ಡಿಸ್ಟ್ರಿಕ್ಟಿನಲ್ಲಿ ಜರ್ಮನರ ಒಂದು ವಾಯುನಾವೆಯನ್ನು ಕೆಳಗಿಳಿಸಿರುವರು ಈ ವಾಯುನಾವೆಗೆ ಬೆಂಕಿಹಿಡಿದು ಬ್ರಿಟಿಷ ಸೇನೆಯ ಸಮೀಪ ಕೆಳಗೆ ಬಿತ್ತು

ಲೊರೈನಿನಲ್ಲಿ ಜರ್ಮನರು ಪೂರ್ಣವಾಗಿ ಹಿಂದಟ್ಟಲ್ಪಟ್ಟಿರುವರು

ಬೆಲ್ಜನರ ಪರಾಕ್ರಮವನ್ನು ಶ್ಲಾಘಿಸಿ, ಅವರಿಗೆ ಬ್ರಿಟಿಷರು ಸಹಾಯಮಾಡುವ ಆಗತ್ಯವೇನೆಂಬದನ್ನು ಕುರಿತು ಮಿ। ಆಸ್ಕ್ವಿತರವರು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಭಾಷಣ ಕೊಟ್ಟು, ಬೆಲ್ಜಿಯಮಿನ ಸ್ವತಂತ್ರವನ್ನು ಉಳಿಸುವರೆಯೂ ಯುರೋಪಖಂಡದ ಕಾಯಿದೆಯ ಮರ್ಯಾದೆಯನ್ನು ಕಾಪಾಡುವರೆಯೂ ಬ್ರಿಟಿಷರು ಪೂರ್ಣ ಮನಸ್ಸಿನಿಂದ ನಿಶ್ಚರ್ಯಿಸಿರುವರೆಂಬದಾಗಿ ತಿಳಿಸುವ ಪತ್ರವನ್ನು ಬೆಲ್ಜಿಯಮ್ ಅರಸರಿಗೆ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಿಂದ ಕಳುಹಿಸಿಕೊಟ್ಟರು

ಬೆಲ್ಜನರು ಈಚೆಗೆ ಮಾಡಿದ ಯುದ್ಧದಲ್ಲಿ ಜರ್ಮನರನ್ನು ಮೆಲ್ವಿನ್ಸ್ ಕಡೆ ಓಡಿಸಿರುವರು ದಕ್ಷಿಣ ಕಡೆ ಮುಂದರಿಯುತ್ತಿದ್ದ ಜರ್ಮನ್ ಸೇನಾಂಗವು ಹಿಂದೆ ಹೋಗುವ ಹಾಗೆ ಮಾಡಲ್ಪಟ್ಟಿರುವುದು ನಾಮೂರಿನ ಬೆಲ್ಜನರ ಸೇನಾಂಗವು ತನ್ನ ಕಾರ್ಯವನ್ನು ಮಾಡಿ ಫ್ರೆಂಚ ಲೈನಿಗೆ ಸೇರಿರುವುದು ನಾಮೂರಿನ ಕೆಲವು ಕೋಟೆಗಳನ್ನು ಬೆಲ್ಜನರು ಇನ್ನೂ ಕಾಪಾಡುತ್ತಿರುವರೆಂತ ಬೆಲ್ಜಿಯನ್ ಸರಕಾರದವರು ಪ್ರಕಟಿಸಿರುವರು.

ಬ್ರಿಟಿಷ್ ಸಮರ ನಾವೆಗಳು ಒಸ್ಟೆಂಡನ್ನೂ ಎನ್‌ಪಿರೊನ್ನನ್ನೂ ವಶಮಾಡಿಕೊಂಡಿರುವವು.

ಜರ್ಮನ್ ಕೈಸರರ ಸೋದರಳಿಯನಾದ ಕೌಂಟ್ ಸ್ಟೆವರಿನರವರು ಸೇನಾಧಿಪತಿಯಾಗಿದ್ದ ಉಲ್ಹಾನ್ ಸೇನೆಯು ಕೋರ್ಟರಾಯಿ ಎಂಬಲ್ಲಿ ಪ್ರಿನ್ಸರ ಸಹಿತ ಹಿಡಿಯಲ್ಪಟ್ಟಿರುವುದು

ಅಲ್‌ಸೆಸಿನಲ್ಲಿ ನಾನ್ಸಿ ಮತ್ತು ಒಸೆಜಿನ ಮಧ್ಯೆ ಫ್ರೆಂಚ ಮತ್ತು ಶತ್ರುಸೇನೆಗಳೊಳಗೆ ಕದನವು ನಡಿಯುತ್ತಿದೆ ಶತ್ರುಗಳ ಸೇನೆಯಲ್ಲಿ ವಿಶೇಷ ನಷ್ಟ ಉಂಟಾಗಿರುವುದು ಬರೇ ಸ್ವಲ್ಪ ವಿಸ್ತೀರ್ಣದಲ್ಲಿ ಶತ್ರುಗಳ ೧೫೦೦ ಶವಗಳು ಬಿದ್ದಿತ್ತು. ಒಂದು ಸುರಂಗದಲ್ಲಿ ಶತ್ರುಗಳ ಒಂದು ಸೇನೆಯು ಸಿಡಿಮದ್ದಿನ ಮಧ್ಯೆ ಬಿದ್ದು ನಾಶವಾಗಿರುವುದ ಎಂತ ಫ್ರೆಂಚಸರಕಾರದವರು ಪ್ರಕಟಿಸಿರುವರು.

ಜರ್ಮನರ ಇನ್ನೊಂದು ವಾಯುನಾವೆಯು ಎಂಟವರ್ಪಿನ ಮೇಲೆ ಬೀಳಲು ಯುಕ್ತಿಸಿತು. ಪರಂತು ಎಂಟವರ್ಪಿನ ಅಧಿಕಾರರು ಜಾಗರೂಕತೆಯಿಂದ ಇದ್ದುದರಿಂದ ಹಿಂದೆ ಹೋಯಿತು.

ರುಶ್ಯ:—ರುಷ್ಯಾನರು ಸ್ವೈಡನ್‌ಬರ್ಗಿನ ಉತ್ತರದಲ್ಲಿರುವ ವರ್ಡಾನ್ ಮತ್ತು ಫ್ರಂಕೆನಾನ್ ಎಂಬ ಕೋಟೆಗಳ ಮೇಲೆ ಬಿದ್ದಿರುವರು. ರುಷ್ಯರು ನೆರೆಯಂತೆ ಮುಂದರಿಯುತ್ತಿರುವರು. ರುಷ್ಯರು ಲುವೆನ್‌ಸ್ಟೈನ್‌ಗೆ ೨೧ ಮೈಲು ದೂರದಲ್ಲಿರುವ ರೇಥ್‌ಷ್ಲೈನೆಸ್ ಎಂಬ ರೈಲ್ವೆಯನ್ನು ಹಿಡಿದಿರುವರು.

ರುಷ್ಯರು ಆಸ್ಟ್ರೀಯಾನರನ್ನು ಸ್ಟೊಟ್ರೈಪೆ ನದಿಯುತ ಕಡೆ ಓಡಿಸಿರುವರು.

ರುಷ್ಯರ ಕೊಸಾಕ ಸೇನೆಯು ಜರ್ಮನರ ಕುದುರೆಪಡೆಯ ಮೇಲೆ ಬಿದ್ದು ರೋಷವೇಶದಿಂದ ಅನೇಕ ಸೈನಿಕರನ್ನು ತುಂಡುತುಂಡಾಗಿ ಕಡದಿರುವರು

ಬ್ರಿಟಿಷರ 'ಹೈಫ್ಲೈಯರ್' ಎಂಬ ಕ್ರೂಜರ್ ಯುದ್ಧನಾವೆಯು ಜರ್ಮನಿಯ "ಕೈಸರ್ ವಿಲ್ಹೆಮ್ ಡರ್‌ಗ್ರೊಸೆ" ಎಂಬ ಕ್ರೂಜರ್ ಯುದ್ಧನಾವೆಯನ್ನು ಮುಣುಗಿಸಿರುವುದು.

ಆಸ್ಟ್ರಿಯಾನರು ನೋವಿ ಬಜಾರಿನ ಸಾಂಜಿಕನ್ನು ಬಿಟ್ಟುಹೋಗಿರುವರು.

ಹಿಂದೂಸ್ಥಾನ ಹಿಂದೂಸ್ಥಾನದಿಂದ ಕಳುಹಿಸುವ ಸೇನೆಯ ಖರ್ಚಿನ ಬಗ್ಗೆ ಮೈಸೂರು ಮಹಾರಾಜರವರು ೫೦ ಲಕ್ಷ ರೂಪಾಯಿ ಕೊಡುತ್ತೇನೆಂದೂ ಅವಶ್ಯವಿದ್ದರೆ ತನ್ನ ಸೇನೆಯನ್ನು ಕೂಡ ಕೊಡುವೆನೆಂದೂ ವೈಸರಾಯ ಪ್ರಭುಗಳಿಗೆ ತಿಳಿಸಿರುವರು

~~~~~

ತಾ 31ನೇ ಆಗೋಸ್ತು

ಚಾರ್ಲೆರೋಯಿಯಲ್ಲಿ ಬ್ರಿಟಿಷರ ಫಿರಂಗಿಸೇನೆಯೂ ಕಾಲಾಳುಪಡೆಯೂ ಜರ್ಮನರ ಅತಿರೇಕ ಸೇನೆಯ ಮೇಲೆ ಬಿದ್ದಿರುವರು ಚಾರ್ಲೆರೋಯಿಯಲ್ಲಿ ಫ್ರಂಚ ಮತ್ತು ಜರ್ಮನ್ ಸೇನೆಯೊಳಗೆ ನಡೆದ ಕದನವು ಅತಿ ಭಯಂಕರವಾಗಿತ್ತು ಬೀದಿ ತುಂಬಾ ಹೆಣಗಳ ರಾಶಿಯು ತುಂಬಿಹೋಗಿತ್ತು ಹೆಣಗಳ ರಾಶಿಯ ಮೇಲೆಯೇ ನಿಂತುಕೊಂಡು ಕದನ ನಡೆಯಿತು ಫ್ರಂಚರ ಅಲ್ಜೀರಿಯ ಸೇನೆಯು ಸನೀನು ಯುದ್ಧದಲ್ಲಿ ಜರ್ಮನ ಸೇನೆಯೊಡನೆ ಅದನ್ನು ಆಶ್ಚರ್ಯಪಡಿಸುವ ರೀತಿಯಲ್ಲಿ ಕಾದಾಡಿದರೂ ಸೇಕಡಾ ೮೦ರಂತೆ ನಷ್ಟಹೊಂದಿತ

ಮೊನ್ನಿನಲ್ಲಿ ನಡೆದ ಯುದ್ಧದಲ್ಲಿ ಘಾಯ ಪೊಂದದ ಬ್ರಿಟಿಷ ಸೈನಿಕರು ಪೋರ್ಟ್ಸ್‌ಮೌಟನಿಗೆ ಬಂದು ತಲಪಿರುವರು. ಹೆಚ್ಚಿನವರು ಕಾಲುಗಳಲ್ಲಿ ಮಾತ್ರ ಘಾಯಪೊಂದಿರುವರು.

ಬುಧವಾರ ನಡೆದ ಯುದ್ಧದಿಂದ ಬ್ರಿಟಿಷ ಫ್ರೆಂಚ ಸೇನೆಗಳ ನೆಲೆಗಳಿಗೆ ಯಾವದೊಂದು ಹಾನಿಯುಂಟಾಗಲಿಲ್ಲ. ಫ್ರೆಂಚರು ಒಸೆಜ್ ಮತ್ತು ನೆನ್ಸಿಯಿಂದ ಮುಂದರಿಯುತ್ತಿದ್ದಾರೆಂತ ಫ್ರೆಂಚ ಸರಕಾರದವರು ಪ್ರಕಟಿಸಿರುವರು

ಲಿಲ್ಲೆಯಲ್ಲಿ ಜರ್ಮನ ಸೇನೆಯು ಫ್ರಂಚ ಲೈನುಗಳನ್ನು ಒಡೆದು ಒರ್ಬಿಸಿನ ವರೆಗೆ ಮುಂದರಿದರು. ಅಲ್ಲಿ ಕಠಿಣ ಯುದ್ಧ ನಡೆದು ಫ್ರೆಂಚ ಸೇನೆಯು ಶತ್ರುಗಳಲ್ಲಿ ವಿಶೇಷ ನಷ್ಟವನ್ನುಂಟುಮಾಡಿ ಹಿಂದಟ್ಟಿದರು ಬ್ರಿಟಿಷ ಮತ್ತು ಫ್ರೆಂಚ ಸೇನೆಗಳ ಈಗಿನ ನೆಲೆಯು ಅತಿ ಬಲವತ್ತಾಗಿರುವುದಲ್ಲದೆ ಜರ್ಮನರು ಈ ಕದನಗಳಲ್ಲಿ ಪಡೆದ ನಷ್ಟವು ಅತಿ ವಿಶೇಷವಾಗಿರುವುದು

ಬ್ರಿಟಿಷ ಸೇನೆಯ ಮೇಲೆ ಶತ್ರುಗಳ ಅತಿ ಉತ್ಕೃಷ್ಟವಾದ ಸೇನೆಯು ಬಿದ್ದಿರುವುದು. ಬ್ರಿಟಿಷ ಸೇನೆಯು ಅತ್ಯಾಶ್ಚರ್ಯ ರೀತಿಯಿಂದ ಶತ್ರುಗಳ ಈ ಸೇನೆಯನ್ನು ಎದುರಿಸಿದ್ದರೂ ಸ್ವಲ್ಪ ದೂರಕ್ಕೆ ಹಿಂದೆ ಸರಿಯಬೇಕಾಯಿತು. ಬಲಕಡೆಯಲ್ಲಿ ಫ್ರೆಂಚ ಸೇನೆಯು ಬ್ರಿಟಿಷ ಸೇನೆಯ ನೆಲೆಯನ್ನು ಕಾಪಾಡಿತು ಎಂತ ಫ್ರೆಂಚ ಸರಕಾರದವರು ಪ್ರಕಟಿಸಿರುವರು.

ಕಳೆದ ೫ ದಿವಸಗಳಿಂದ ಜರ್ಮನ ಸೇನೆಯಲ್ಲಿ ವಿಶೇಷ ನಷ್ಟ ಉಂಟಾಗಿರುವುದು ನೆನ್ಸಿಯ ಆಗ್ನೇಯ ದಿಕ್ಕಿನಲ್ಲಿ ೭,೦೦೦ ಜರ್ಮನ್ ಹೆಣಗಳು ಬಿದ್ದಿರುವುದು ಮ್ಯೂಸಿನಲ್ಲಿ ಫ್ರೆಂಚ ಸೇನೆಯು ಹಲವು ಸಾರಿ ಮೇಲೆ ಹಾಯಿದು ಬಂದ ಜರ್ಮನರನ್ನು ಹಿಂದೆ ಓಡಿಸಿರುವರು ನಾಮೂರನ್ನು ಕಾಪಾಡಿಕೊಂಡಿದ್ದ ಬೆಲ್ಜನರ ಸೇನೆಯೊಂದಿಗೆ ಇದ್ದ ಫ್ರಂಚ ಸೇನೆಯು ಫ್ರೆಂಚರ ಮುಖ್ಯ ಲೈನಿಗೆ ಬಂದು ಸೇರಿರುವುದು

ಕಳೆದ ಬುದವಾರ ಬ್ರಿಟಿಷ ಸೇನೆಯು ೫ ಜರ್ಮನ್ ಸೇನೆ, ೩ ಕುದುರೆಪಡೆಯ ಸೇನಾಂಗ ಮತ್ತು ರಿಜರ್ವ್ ಸೇನೆಯೊಂದಿಗೆ ಕಾದಾಡಬೇಕಾಯಿತು ಬ್ರಿಟಿಷ ಸೇನೆಯು ಶತ್ರುಗಳ ಕುದುರೆಪಡೆಯನ್ನು ಸುಟ್ಟುಹಾಕಿತು ಮತ್ತೊಂದು ಸೇನೆಯು ಶತ್ರುಗಳಲ್ಲಿ ವಿಶೇಷ ನಷ್ಟವನ್ನುಂಟುಮಾಡಿತು ಬ್ರಿಟಿಷ ಸೇನೆಯ ವರ್ತನವು ಎಲ್ಲಾ ವಿಧದಲ್ಲಿಯೂ ಹೊಗಳಿಕೆಗೆ ಯೋಗ್ಯವಾಗಿತ್ತೆಂದೂ ಫ್ರೆಂಚ ಸೇನಾಧಿಪತಿ ಜೊಫ್ರೆಯವರು ಬ್ರಿಟಿಷರ ಈ ವರ್ತನವನ್ನು ಬಹಳವಾಗಿ ಕೊಂಡಾಡಿರುವರೆಂದೂ ಮಿ| ಅಸ್ಕ್ವಿತರವರು ಬ್ರಿಟಿಷ ಪಾರ್ಲಿಮೆಂಟ್ ಸಭೆಯಲ್ಲಿ ತಿಳಿಯಪಡಿಸಿದರು

ಜರ್ಮನ ಸೈನಿಕರು ಹಟಸಂಭೋಗ, ಲೂಟಿ, ಬೆಂಕಿಕೊಡುವುದು, ಕೊಲೆ ಮತ್ತು ಉಪದ್ರ ಮೊದಲಾದ ದುಷ್ಕೃತ್ಯಗಳನ್ನು ನಡಿಸಿ ಬಹಳ ಅನ್ಯಾಯ ಮಾಡುತ್ತಿದ್ದಾರೆಂದು ಫ್ರೆಂಚ ಮತ್ತು ಬೆಲ್ಜಿಯನ ಸರಕಾರದವರು ಹೇಳುವರು

ಒಬ್ಬ ಬ್ರಿಟಿಷ ಸೋಲ್ಜರನು ಜರ್ಮನರ ವರ್ತನೆಯು ಭಯಂಕರವಾದ ಪಿಶಾಚಿಗಳಂತೆ ಇದೆ, ಅವರು ಮನುಷ್ಯರಂತೆ ವರ್ತಿಸದೆ ಹುಚ್ಚು ಪಶುಗಳಂತೆ ನಡೆಯುತ್ತಾರೆ ಎಂಬಿತ್ಯಾದಿ ವಿಷಯವನ್ನು ತಿಳಿಸುವ ಪತ್ರವನ್ನು ತನ ಮನೆಗೆ ಬರೆದಿರುವನು

ಬೆಲ್ಜಿಯನ್—ಲೊವೈನಿನಲ್ಲಿ ಜರ್ಮನರು ಬೆಲ್ಜಿಯನರ ಸೇನೆಯಿಂದ ಸೋಲಿಸಲ್ಪಟ್ಟು ಪಟ್ಟಣವನ್ನು ಸುಟ್ಟು ನೆಲಸಮ ಮಾಡಿ ನಡೆದು ಬಿಟ್ಟರು ಇಲ್ಲಿ ಜರ್ಮನರು ತಮ್ಮ ಸೇನೆಯನ್ನು ಬೆಲ್ಜನರ ಸೇನೆಯೆಂದೆಣಿಸಿ ಅದಕ್ಕೆ ಗುಂಡು ಹಾರಿಸಿದರು ನಂತರ ತಮ್ಮ ತಪ್ಪನ್ನು ಮುಚ್ಚುವುದಕ್ಕಾಗಿ ಲೊವೈನಿನ ನಿವಾಸಿಕರೇ ಗುಂಡು ಹಾರಿಸಿದರೆಂಬ ವಾರ್ತೆ ಹುಟ್ಟಿಸಿದರು

ರುಶ್ಯ—ರುಷ್ಯಾನರು ಟಿಲ್‌ಸಿಟ್ ಎಂಬ ಪಟ್ಟಣವನ್ನು ವಶಮಾಡಿಕೊಂಡಿರುವರು

ವಿಸ್ತುಲ ಮತ್ತು ನಿಸ್ಟರ್ ಸಮೀಪ ಆಸ್ಟ್ರೀಯ ಮತ್ತು ರುಷ್ಯ ಸೇನೆಯೊಳಗೆ ಯುದ್ಧ ನಡೆದಿರುವುದು

ಸರ್ವಿಯಾ—ಸರ್ವಿಯರು ಆಸ್ಟ್ರೀಯವನ್ನು ಒಳನುಗ್ಗಲು ನಿರ್ಣಯಿಸಿರುವರು ಯುದ್ಧ ಸಾಧನೆಯ ಬಗ್ಗೆ ದಕ್ಷಿಣ ಬೊಸ್ನಿಯಾದಲ್ಲಿ ಹಲವು ಸ್ಥಳಗಳನ್ನು ಸರ್ವಿಯರು ತಕ್ಕೊಂಡಿರುವರು

ಅಂಗ್ಲಾಳ:—ಬ್ರಿಟಿಷ್ ಸರಕಾರದವರು ಫ್ರಾನ್ಸಿನಲ್ಲಿ ತಮ್ಮ ಎರಡು ಡಿವಿಜನ್ ಸೇನೆಯನ್ನು ಹೆಚ್ಚಿಸಲು ನಿರ್ಣಯಿಸಿರುವರು. ಹಿಂದೂಸ್ಥಾನದಿಂದ ಕಳುಹಿಸಲ್ಪಡುವ ಕುದುರೆಪಡೆ ಸೇನೆಯೂ ಫ್ರಾನ್ಸಿಗೆ ಕಳುಹಿಸೋಣಾಗುವುದು. ಬ್ರಿಟನಿನಿಂದ ಒಂದು ಡಿವಿಜನ್ ಸೇನೆಯು ಕಳುಹಿಸೋಣಾಗಿರುವುದೆಂತಲೂ ಫ್ರಾನ್ಸಿನಲ್ಲಿ ನಷ್ಟಹೊಂದಿದ ಸೇನೆಯು ಭರ್ತಿಮಾಡಲ್ಪಡುವದೆಂತಲೂ ಕಿಚನರ್ ಪ್ರಭುಗಳು ತಿಳಿಯಪಡಿಸಿರುವರು.

ಆಫ್ರೀಕದ ಟೊಗೊಲೇಂಡ್ ಬ್ರಿಟಿಷರ ಶರಣಾಗತವಾಗಿರುವುದು. ಇಲ್ಲಿಯ ಯುದ್ಧದಲ್ಲಿ ಬ್ರಿಟಿಷ ಸೇನೆಯಲ್ಲಿ ಒಟ್ಟಿಗೆ ೩ ಆಫೀಸರರು ಮಡಿದರು, ೫ ಮಂದಿ ಘಾಯಪೊಡೆದರು. ದೇಶೀಯ ಸೇನೆಯಲ್ಲಿ ೨೮ ಮಂದಿ ಮಡಿದರು, ೪೭ ಮಂದಿ ಘಾಯಪೊಡೆದರು ಫ್ರೆಂಚ ಸೇನೆಯಲ್ಲಿಯೂ ಇದೇ ರೀತಿ ಪ್ರಾಣಾಪಾಯವು ಸಂಭವಿಸಿರುವುದು

ಜರ್ಮನಿಯಲ್ಲಿ ಕೆಲಸಗಾರರಿಗೆ ಕೆಲಸವಿಲ್ಲದಿರುವುದರಿಂದ ಅಂತಃಕಲಹಗಳುಂಟಾಗುವ ಸಂಭವವುಗಳು ತೋರುತ್ತಲಿದೆಂತ ಜರ್ಮನ್ ವರ್ತಮಾನ ಪತ್ರಗಳು ಸೂಚಿಸುತ್ತವೆ.

~~~~~

ತಾ. 1ನೇ ಸಪ್ಟಂಬರ.

ಬ್ರಿಟಿಷ ನೌಕಾವಳಿಯು 'ನೋರ್ತಸಿಯ ಕರಾವಳಿಯಾದ ಹೆಲಿಗೋಲೇಂಡ್ ಸಮೀಪ ಜರ್ಮನರ ಮೂರು ಕ್ರೂಜರ್ ಯುದ್ಧನಾವೆಗಳನ್ನು ಮುಣುಗಿಸಿರುವುದು ಬ್ರಿಟಿಷರ ನಾವೆಗಳು ಮುಣುಗಿಸಲ್ಪಡಲಿಲ್ಲ

ಫ್ರೆಂಚರ ಸರಹದ್ದಿನ ಸೊಮ್ಮೆಯಿಂದ ಒಸೆಜಿನ ವರೆಗಿನ ಸ್ಥಿತಿಯು ಯಥಾರೀತಿ ಇದೆ ಜರ್ಮನ್ ಸೇನೆಯು ಮುಂದರಿಯುವುದನ್ನು ನಿಲ್ಲಿಸಿದಹಾಗೆ ತೋರುತ್ತದೆ. ಒಟ್ಟಾರೆ ಇಲ್ಲಿ ನಡೆದ ಕದನದಲ್ಲಿ ಫ್ರೆಂಚರೂ ಜರ್ಮನರೂ ವಿಶೇಷ ದಣಿದಿರುವರು ಮುಖ್ಯವಾಗಿ ಜರ್ಮನ್ ಸೇನೆಯಲ್ಲಿ ಹೆಚ್ಚಿನ ನಷ್ಟವಾಗಿರುವುದು. ಜರ್ಮನಿ ಕಾಲಾಳು ಸೇನೆಯೂ ೨ ರೆಜಿಮೆಂಟುಗಳೂ ಈ ಕದನದಲ್ಲಿ ಒಂದಾಗಿ ಕೂಡಿಸಲ್ಪಟ್ಟಿತೆಂತಲೂ ಅನಂತರ ಈ ಒಂದರಲ್ಲಿ ೬೦ ಮಂದಿ ಮಾತ್ರ ಉಳಿದರೆಂತಲೂ ಸೆರೆ ಹಿಡಿಯಲ್ಪಟ್ಟ ಜರ್ಮನರು ಹೇಳುವರು

ಟೂರ್ನೆ ಎಂಬಲ್ಲಿದ್ದ ಬ್ರಿಟಿಷ್ ಕೊನೆಕಾವಲು ಸೇನೆಯ ಮೇಲೆ ೫೦೦೦ ಜರ್ಮನ್ ಕುದುರೆಪಡೆ ಸೈನಿಕರು ೩ ಫಿರಂಗಿಗಳ ಸಹಿತ ಬಿದ್ದರು. ಬ್ರಿಟಿಷ್ ಸೈನಿಕರು ಅವರೊಡನೆ ೭ ತಾಸುಗಳ ವರೆಗೆ ಕಾದಾಡಿ ಹತಬಡಿದರು ಕಡೆಗೆ ಶತ್ರುಗಳಲ್ಲಿ ಹತಶೇಷರಾದ ೩೦೦ ಮಂದಿ ಕೊಂಬ್ರಾಯಿ ಕಡೆಗೆ ಹಿಂದೆ ಸರಿದರು ಇವರಲ್ಲಿ ಹೆಚ್ಚಿನವರು ಘಾಯಪೊಡೆದಿದ್ದರು

ಚಾರ್ಲೆರೋಯಿಯಲ್ಲಿ ಫ್ರೆಂಚ ಫಿರಂಗಿಸೇನೆಯು ಶತ್ರುಗಳನ್ನು ಭಯಂಕರ ರೀತಿಯಲ್ಲಿ ಹತಬಡಿದು ಅವರು ಮೇಲೆ ಬಾರದ ಹಾಗೆ ಮಾಡಿರುವದು. ಇಲ್ಲಿ ಬ್ರಿಟಿಷ್ ಸೇನೆಗಿಂತಲೂ ಫ್ರೆಂಚ ಸೇನೆಯಲ್ಲಿ ಹೆಚ್ಚಿನ ಅಪಾಯ ಉಂಟಾಗಿರುವುದೆಂತ ತಿಳಿದುಬರುತ್ತದೆ ಜರ್ಮನ್ ಸೋಲ್ಜರರು ಬ್ರಿಟಿಷ್ ಸೋಲ್ಜರರ ಕೂಡೆ ಯುದ್ಧ ಮಾಡುತ್ತಾರೆಂಬ ವಿಷಯವು ಜರ್ಮನ್ ಸೋಲ್ಜರರಿಗೆ ಗೊತ್ತಿಲ್ಲವೆಂದೂ ರುಶ್ಯಾನರೊಡನೆ ಯುದ್ಧಮಾಡುವುದೆಂದು ಆಫೀಸರರು ತಮಗೆ ತಿಳಿಸಿರುವರೆಂದೂ ಸೆರೆಹಿಡಿಯಲ್ಪಟ್ಟ ಜರ್ಮನ್ ಸೋಲ್ಜರರು ಹೇಳುತ್ತಿರುವರು.

ಲೊವೈನಿನಲ್ಲಿ ಸೆರೆಹಿಡಿಯಲ್ಪಟ್ಟ ಬೆಲ್ಜನ ಗಂಡಸರು ಎಷ್ಟು ವಿರೋಧಿಸಿದರೂ ಜರ್ಮನ್ ಸೋಲ್ಜರರು ಲಕ್ಷ್ಯಮಾಡದೆ ಅಲ್ಲಿಯ ಹೆಂಗಸರನ್ನು ಆಗ್ಗಾಡಿಯಲ್ಲಿ ಹಾಕಿ ಎಲ್ಲಿಗೋ ಒಯ್ದಿರುವರು ಅನಂತರ ಇಡೀ ಪಟ್ಟಣವನ್ನು ಸುಟ್ಟುಹಾಕಿದರು. ಪ್ರಖ್ಯಾತ ದೇವಾಲಯಗಳೂ ಪುಸ್ತಕ ಭಂಡಾರಗಳೂ ಸುಟ್ಟುಹೋದವು. ಅಲ್ಲಿಯ ರಾಜಧಾನಿಯನ್ನು ೪೫,೦೦೦ ನಿವಾಸಿಕರ ಕೂಡೆ ಬೂದಿಮಾಡಿ ಬಿಟ್ಟರು ಎಂತ ಬೆಲ್ಜಿಯನ್ ವಿದೇಶಿ ಮಂತ್ರಿಯವರು ತಿಳಿಸಿರುವರು. ಜರ್ಮನ ಸೋಲ್ಜರರು ಒಂದು ಪಟ್ಟಣಕ್ಕೆ ಮುಂದರಿಸುತ್ತಿರುವಾಗ ಮಾಡುವ ಅತ್ಯಾಚಾರವು ತಡೆಯಕೂಡದ್ದಾಗಿರುವದೆಂತಲೂ ಪಟ್ಟಣವನ್ನು ಪೂರ್ಣ ವಶಮಾಡಿಕೊಂಡ ನಂತರ ಮಾಡುವ ಅನ್ಯಾಯಗಳು ತುಸ ಕಮ್ಮಿಯಾಗಿರುವದೆಂತಲೂ ತಿಳಿದುಬರುತ್ತದೆ.

ರುಶ್ಯ:—ರುಶ್ಯಾನರು ಎಲ್ಲೆನ್‌ಸ್ಟೈನಿನ ಪ್ರಾಮುಖ್ಯ ಪಟ್ಟಣವನ್ನು ಹಿಡಿದಿರುವರು.

ರುಶ್ಯಾನರು ಗೆಲಿಸಿಯಕ್ಕೆ ಮುಂದರಿಯುತ್ತಿದ್ದಾರೆ. ಆಸ್ಟ್ರಿಯಾನರ ಸೇನೆಯು ದಿಕ್ಕಾಪಾಲಾಗಿರುವದು.

ರುಷ್ಯಾನರು ಕೊಯಿನೆಸ್‌ಬರ್ಗನ್ನು ಪೂರ್ಣವಾಗಿ ಮುತ್ತಿಗೆ ಹಾಕಿರುವರು.

ಫ್ರೆಂಚ, ಬ್ರಿಟಿಷ್ ಮತ್ತು ಮೊಂಟೆನಿಗ್ರೋಯರ ನೌಕಾವಳಿಗಳು ಕೆಟ್ಟಾರೋ ಎಂಬಲ್ಲಿಗೆ ಗುಂಡು ಹಾರಿಸಿ [illegible]

ಕೋಟೆಗಳನ್ನು ಕೆಡವಿರುವವು. ಆಸ್ಟ್ರಿಯರ ಯುದ್ಧನಾವೆಯು ಪ್ರತಿಭಟಿಸಿದರೂ ಪ್ರಯೋಜನವಾಗದೆ ಬೇಗನೇ ಹಿಂದರಿಯಿತು,

ಹಿಂದೂಸ್ಥಾನದ ಸೇನೆಯನ್ನು ಯುದ್ಧಕ್ಕೆ ಕಳುಹಿಸುವ ಆಲೋಚನೆಯನ್ನು ಎಲ್ಲಾ ಪತ್ರಗಳು ಅಂಗೀಕರಿಸಿರುವವಲ್ಲದೆ ಭಾರತೀಯ ಸೇನೆಯ ಪರಾಕ್ರಮದ ಗುಣಕಥನವನ್ನು ಮಾಡುತ್ತಿರುವವು.

~~~~~

ತಾ. 2ನೇ ಸಪ್ಟಂಬರ.

ಹೊಲಿಗೋಲೇಂಡಿನಲ್ಲಿ ಆದ ನೌಕಾವಳಿ ಕದನದಲ್ಲಿ ಬ್ರಿಟಿಷ್ ನೌಕಾಸೇನೆಯಲ್ಲಿ ೬೯ ಮಂದಿ ಹತರಾಗಿರುವರು. ಮೃತರಾದವರ ಪೈಕಿ ಇಬ್ಬರು ಲೆಪ್ಟನೆಂಟರು. ೩೫ ಮಂದಿ ಘಾಯಪೊಡೆದಿರುವರು

ಬ್ರಿಟಿಷರಿಂದ ಸೆರೆಹಿಡಿಯಲ್ಪಟ್ಟ ೨೦೦ ಜರ್ಮನ್ ನೌಕಾಸೇನಿಕರನ್ನು ನೋರ್ ಎಂಬಲ್ಲಿಗೆ ತಂದಿರುತ್ತಾರೆ ಎಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿರುವರು

ಮುಣುಗಿಹೋದ ಜರ್ಮನ್ ನಾವೆಗಳ ಜರ್ಮನರನ್ನು ರಕ್ಷಿಸುವರೆ ಬ್ರಿಟಿಷ ಡಿಸ್ಟ್ರೋಯರ್ ನಾವೆಗಳು ಬಹಳ ಪ್ರಯತ್ನಮಾಡಿರುವವು. ಜರ್ಮನ್ ಆಫೀಸರರು ನೀರಿನಲ್ಲಿ ಮುಣುಗುತ್ತಿರುವ ತಮ್ಮ ಸ್ವಂತ ಸೈನಿಕರಿಗೆ ಪಿಸ್ತೂಲಿನಿಂದ ಹೊಡೆಯುತ್ತಿರುವುದನ್ನು ಬ್ರಿಟಿಷರು ಕಂಡಿರುವರು. ಡಿಸ್ಟ್ರೋಯರ್ ಡಿಫೆಂಡರ್ ನಾವೆಯು ಘಾಯಪೊಡೆದ ಜರ್ಮನರನ್ನು ರಕ್ಷಿಸ ಪ್ರಯತ್ನಿಸುತ್ತಿರುವಾಗ ಜರ್ಮನರ ಕ್ರೂಜರ್ ನಾವೆಯಿಂದ ಹಿಂದಟ್ಟಲ್ಪಟ್ಟಿತು. ಕೂಡಲೇ ಬ್ರಿಟಿಷರ ಎರಡು ಸಮರನಾವೆಗಳು ಸಹಾಯಕ್ಕೆ ಬಂದುದರಿಂದ ಜರ್ಮನ್ ಕ್ರೂಜರ್ ನಾವೆಯು ಹಿಂದೆಹೋಯಿತು. ೫ ಜರ್ಮನ್ ನಾವೆಗಳ ಕಲಾಸಿಗಳು ಮುಣುಗಿಹೋಗಿರುವರು. ಒಟ್ಟಿಗೆ ಇವರ ಸಂಖ್ಯೆ ೧೨೦೦. ಸೆರೆಹಿಡಿಯಲ್ಪಟ್ಟ ೩೦೦ ಮಂದಿಯ ವಿನಹ ಇತರ ಜರ್ಮನ ಸೈನಿಕರು ಹತರಾಗಿರುವರು. ಇತರ ಜರ್ಮನ್ ನಾವೆಗಳಲ್ಲಿಯೂ ವಿಶೇಷ ನಷ್ಟವುಂಟಾಗಿರುವುದು

ಶತ್ರುಗಳ ಸಮುದ್ರದ ಕರಾವಳಿಯಲ್ಲಿ ಬ್ರಿಟಿಷರ ಸಮರ ನಾವೆಗಳು ತೋರಿಸಿದ ವಿಶೇಷ ಚಮತ್ಕಾರವೇ ಈ ನೌಕಾವಳಿ ಯುದ್ಧದ ಜಯಕ್ಕೆ ಕಾರಣವಾಯಿತು

ಆಫ್ರೀಕದ ಪಶ್ಚಿಮ ತೀರದ ಕೆನರಿ ದ್ವೀಪಗಳ ದಕ್ಷಿಣ ಪ್ರಾಂತ್ಯದಲ್ಲಿ ಬ್ರಿಟಿಷರ "ಕೈಪಾರ" ಮತ್ತು "ನಯಾನ್ಸ" ಹಡಗಗಳನ್ನು ಮುಣುಗಿಸಿದ ಜರ್ಮನರ "ವಿಲ್‌ಹೆಲ್ಮ್‌ಡರ್ ಗ್ರೋಸ" ಎಂಬ ನಾವೆಯನ್ನು ಬ್ರಿಟಿಷರ "ಹೈಪ್ಲ್ಯಯರ್" ನಾವೆಯು ಮುಣುಗಿಸಿ, ಅದರಲ್ಲಿದ್ದ "ಕೈಪಾರ" ಮತ್ತು "ನಯಾನ್ಸ" ನಾವೆಗಳ ಕಲಾಸಿಗಳನ್ನು ರಕ್ಷಿಸಿರುವದು

ಅಗೋಸ್ತು ತಾ ೨೩ರಿಂದ ತಾ ೨೬ರ ವರೆಗೆ ಬ್ರಿಟಿಷ ಸೇನಿಕರಲ್ಲಿ ಒಟ್ಟಿಗೆ ೫ ೬ ಸಾವಿರ ನಷ್ಟಪಟ್ಟರೆಂತ ಕಿಚನರ್ ಪ್ರಭುಗಳು ತಿಳಿಯಪಡಿಸಿರುವರು. ಶತ್ರುಗಳ ಸೇನೆಯಲ್ಲಿ ಆದ ನಷ್ಟವು ಬಹಳ ಹೆಚ್ಚಾಗಿರುವುದು. ತಾ ೨೩ರಲ್ಲು ಬ್ರಿಟಿಷ ಸೇನೆಯು ಮೊನ್ಸಿನಲ್ಲಿ ಕದನಕ್ಕೆ ನಿಂತು ಮುಂದರಿಯುತ್ತಿದ್ದ ಶತ್ರುಗಳ ಸೇನೆಯನ್ನು ಎದುರಿಸಿದರು. ಮರುದಿನ ಜರ್ಮನರು ತಮ್ಮ ಹೆಚ್ಚಿನ ಸೇನೆಯೊಡನೆ ಬ್ರಿಟಿಷರ ಸೇನೆಯ ಮೇಲೆ ಬಿದ್ದು ಬ್ರಿಟಿಷರು ಭದ್ರವಾದ ನೆಲೆಯನ್ನು ಸೇರಿಕೊಳ್ಳದ ಹಾಗೆ ಪ್ರಯತ್ನಿಸಿದರು. ಆದರೆ ಇದು ಶತ್ರುಗಳಿಂದ ಸಾಧ್ಯವಾಗಲಿಲ್ಲ. ಶತ್ರುಗಳು ಈ ಎರಡು ದಿವಸಗಳಲ್ಲಿ ವಿಶೇಷ ನಷ್ಟಪಟ್ಟರು. ಬ್ರಿಟಿಷ ಸೇನೆಯು ತಾ ೨೫ರಲ್ಲಿ ಕೆಂಬ್ರಾಯಿಂದ ಲೆಂಡೆರ್ಸಿಸ್ ವರೆಗಿನ ನೆಲೆಯನ್ನು ಸೇರಿಕೊಂಡಿತು, ತಾ ೨೬ರಲ್ಲು ಜರ್ಮನರ ೫ ದೊಡ್ಡ ಸೇನಾಪಾಳ್ಯಗಳು ಬ್ರಿಟಿಷರ ಪಾಳ್ಯಗಳೊಂದಿಗೆ ಭಯಂಕರ ರೀತಿಯಿಂದ ಕಾದಾಡಿತು, ಈ ಕದನವು ಅತಿ ಕಠಿಣವಾಗಿದ್ದು ಜೀವದ ಮರವೆ ಇಲ್ಲದೆ ಕಾದಾಡಬೇಕಾಯಿತು. ಶತ್ರುಗಳ ಫಿರಂಗಿಗಳ ಅತಿರೇಕ ಗುಂಡಿನ ಮಳೆಯನ್ನು ಬ್ರಿಟಿಷ ಸೇನೆಯು ವಿಚಿತ್ರರೀತಿಯಲ್ಲಿ ತಡೆಗಟ್ಟಿ, ತಮ್ಮನ್ನು ತಾವೇ ಕಾಪಾಡಿಕೊಂಡಿತು. ತಾ. ೨೭ರಿಂದ ಬ್ರಿಟಿಷ ಸೇನೆಯು ತಮ್ಮ ನೆಲೆಗೆ ಹಿಂದೆ ಸರಿದು ಈಗ ಪುನಃ ಶತ್ರುಗಳ ಕೂಡೆ ಯುದ್ಧಮಾಡಲು ಸಿದ್ಧವಾಗಿರುವವು. ಬ್ರಿಟಿಷ ಕುದುರೆಪಡೆಯು ಜನರಲ್ ಸರ್ ಫಿಲಿಪ್ ಚೆಟ್‌ವೋಡರ ಸೇನಾಧಿಪತ್ಯದಲ್ಲಿ ಜರ್ಮನರ ಕುದುರೆಪಡೆಯ ಒಡನೆ ಅತಿ ಸಾಹಸದಿಂದ ಕಾದಾಡಿರುವುದು. ಈಗ ಬ್ರಿಟಿಷ ಮತ್ತು ಫ್ರೆಂಚ ಸೇನೆಯ ನೆಲೆಯು ಅತಿ ಭದ್ರವಾಗಿರುವುದು. ಬ್ರಿಟಿಷ ಸೇನೆಯು ಹಿಂದರಿಯುವಾಗ ತೋರಿಸಿದ ಸ್ಥೈರ್ಯ ಮತ್ತು ಚಮತ್ಕಾರವನ್ನು ಕಿಚನರ್ ಪ್ರಭುಗಳು ಬಹಳವಾಗಿ [illegible] ರುವರು. ಜರ್ಮನರ ಗುಂಪು ಗುಂಪು ಸೈನಿಕರ ತಂಡಗಳು [illegible] ಬ್ರಿಟಿಷ [illegible] ಮೇಲೆ [illegible] [illegible]

ತಾ. ೨೬ನೇಯ ದಿನದ ಕದನದಲ್ಲಿ ಬ್ರಿಟಿಷರು ಜೀವದಾಸೆ ಇಲ್ಲದೆ ಕಾದಾಡಿ ಶತ್ರುಗಳ ಸೇನೆಯಲ್ಲಿ ವಿಶೇಷ ನಷ್ಟವನ್ನುಂಟುಮಾಡಿರುವರು. ಜರ್ಮನ ಸೇನಿಕರು ಕಿಕ್ಕಿರಿದು ನಿಂತು ಬ್ರಿಟಿಷರ ಮೇಲೆ ಬಿದ್ದುದರಿಂದ ಜರ್ಮನ ಸೇನೆಯಲ್ಲಿ ವಿಶೇಷ ನಷ್ಟವಾಗಿರುವುದು. ಬ್ರಿಟಿಷರ ಒಂದೇ ಒಂದು ಫಿರಂಗಿಗಳಾದರೂ ಶತ್ರುಗಳಿಗೆ ಸಿಗಲಿಲ್ಲ. ಜರ್ಮನರ ನಷ್ಟವನ್ನೂ ಬ್ರಿಟಿಷರ ನಷ್ಟವನ್ನೂ ಸರಿಹೋಲಿಸುವುದಾದರೆ ಬ್ರಿಟಿಷರ ನಷ್ಟ ಬಹು ಸಲ್ಪವಾಗಿರುವುದು. ಉದಾಹರಣೆಗಾಗಿ ತಾ. ೨೬ರಲ್ಲು ಜರ್ಮನರ ಕಾಲಾಳು ಸೇನೆಯು ಬಹಳ ಹತ್ತಿರದಲ್ಲಿ ಒಂದು ಇಕ್ಕಟ್ಟಾದ ಮಾರ್ಗವಾಗಿ ಬ್ರಿಟಿಷ ಸೇನೆಯ ಕಡೆಗೆ ಮುಂದರಿಯಿತು. ಬ್ರಿಟಿಷರ ಫಿರಂಗಿ ಸೇನೆಯು ಇದನ್ನು ಕಂಡು ಕೂಡಲೇ ಗುಂಡ ಹಾರಿಸಿ ಇಡೀ ಸೇನಾಂಗವನ್ನು ನಾಶಮಾಡಿತು. ಸುಮಾರು ೮೦೦ ಜರ್ಮನರ ಹೆಣಗಳು ಆ ಇಕ್ಕಟ್ಟಾದ ದಾರಿಯಲ್ಲೇ ಬಿದ್ದಿತ್ತು. ಬ್ರಿಟಿಷರ ಕುದುರೆ ಪಡೆಗೂ ಶತ್ರುಗಳ ಕುದುರೆ ಪಡೆಗೂ ನಡೆದ ಕಾಳಗದಲ್ಲಿ ಶತ್ರುಪಡೆಯು ವಿಶೇಷ ನಷ್ಟ ಹೊಂದಿ ದಿಕ್ಕಾಪಾಲಾಗಿರುವುದು. ಇಂಥಾ ಅನೇಕ ಉದಾಹರಣೆಗಳನ್ನು ಕಿಚನರ್ ಪ್ರಭುಗಳವರು ತೋರಿಸಿಕೊಟ್ಟು ಜರ್ಮನರು ಮುಂದರಿಯುವ ಕಾರ್ಯದಲ್ಲಿ ವಿಶೇಷ ನಷ್ಟ ಹೊಂದಿದರೆಂತಲೂ ಬ್ರಿಟಿಷ ಸೇನೆಯು ಈಗ ಪುನಃ ಕಾದಾಡಲು ಪೂರ್ಣ ಸಿದ್ಧವಾಗಿರುವುದೆಂತಲೂ ತಿಳಿಸಿರುವರು

ಬೆಲ್ಜಿಯಮ್ —ಜರ್ಮನ ಸೇನೆಯು ಬೆಲ್ಜಿಯಮಿನಿಂದ ಹಿಂದೆ ಹೋಗಿರುವುದು. ಮುಖ್ಯವಾಗಿ ಎಂಟ್‌ವರ್ಪ್ ಮತ್ತು ಲಿಂಬರ್ಗಿನ ಸುತ್ತಲೂ ಇದ್ದ ಜರ್ಮನ್ ಸೇನೆಯು ಪೂರ್ಣವಾಗಿ ಹೋಗಿರವುದು ಎಂತ ಎಂಟ್‌ವರ್ಪಿನಿಂದ ವಾರ್ತೆ ಬಂದಿರುವುದು. ಜರ್ಮನ ಸೇನೆಯು ತುಂಬಿದ್ದ ಅಗ್ನಾಡಿಗಳು ಬೆಲ್ಜಿಯಮಿನ ಮಾರ್ಗವಾಗಿ ಈಶಾನ್ಯ ದಿಕ್ಕಿಗೆ ಹೋಗಿರುವುದು. ರುಸ್ಯಾನರ ವೇಗವಾದ ಮುಂದರಿಯುವಿಕೆಯೇ ಜರ್ಮನ ಸೇನೆಯನ್ನು ಬೆಲ್ಜಿಯಮಿನಿಂದ ಹಿಂದೆ ತೆಗೆದದ್ದರ ಕಾರಣವಾಗಿರಬಹುದು. ಬ್ರುಸೆಲ್ಸಿನಲ್ಲಿದ್ದ ಸೇನೆಯ ಸಂಖ್ಯೆಯೂ ತಗಿಸಲ್ಪಟ್ಟಿರುವುದು

ಇಂಗ್ಲಾಂಡಿನಲ್ಲಿ ತಯಾರಾದ ಹೊಸ ಸೇನೆಯು ಪ್ರಮಾಣ ಮಾಡಿಕೊಳ್ಳುವ ಬಗೆ ಪಟಣದಲ್ಲಿ ಹಾದುಹೋಯಿತು. ಹೊಸ ಸೇನೆಯಲ್ಲಿ ಘಟ್ಟಿಮುಟ್ಟಾದ ಅನೇಕ ಮಂದಿ ಸೇರಿರುವರು. ಹಲವು ಭಾರತೀಯರ ಹೆಸರುಗಳೂ ಈ ಸೇನಾಂಗದಲ್ಲಿ ಸೇರಿಸಿರುವರು. ಇವರು ವೃದ್ಧರಾಗಿ ಸೇರಿದರೂ ಗುಂಡುಹೊಡೆಯುವ ಸೇನಾಂಗಕ್ಕೆ ಸೇರುವ ಇಚ್ಛೆಯುಳ್ಳವರಾಗಿರುವರು. ರೋಬರ್ಟ ಪ್ರಭುಗಳು ಈ ಹೊಸ ಸೇನೆಗೆ ಹೃದಯಂಗಮವಾದ ಬುದ್ಧಿವಾದವನ್ನು ಹೇಳಿರುವರು

ರುಸ್ಯ—ಲಿಂಬರ್ಗಿನಲ್ಲಿ ರುಸ್ಯಾನರಿಗೆ ವಿಶೇಷ ಜಯವಾಗಿರುವುದು. ಇಲ್ಲಿ ೬೦೦೦ ಆಸ್ಟ್ರಿಯರನ್ನು ಸೆರೆ ಹಿಡಿದು ೧೩ ಫಿರಂಗಿಗಳನ್ನು ತಕ್ಕೊಂಡರು. ಒಂದು ಹಂಗೇರಿಯದ ರೆಜಿಮೆಂಟು ಶರಣಾಗತವಾಗಿರುವುದು

ಆಸ್ಟ್ರೇಲೇಸಿಯ —ನ್ಯೂಜಿಲೇಂಡಿನ ಬ್ರಿಟಿಷ್ ಗವರ್ನರಿಂದ ಕಳುಹಿಸಲ್ಪಟ್ಟ ಸೇನೆಗೆ ಆಸ್ಟ್ರೇಲೇಸಿಯದಲ್ಲಿ ಜರ್ಮನರಿಗೆ ಸೇರಿದ ಸಮೋವದಲ್ಲಿರುವ ಎಪಿಯವು ಶರಣಾಗತವಾಗಿರುವುದು.

ಹಿಂದೂಸ್ಥಾನ —ಇಂಡಿಯನ್ ರಿಲೀಫ್ ಫಂಡಿಗೆ ಮುಂಬಾಯಿಯಲ್ಲಿ ೯ ಲಕ್ಷ ರೂಪಾಯಿ ಕೂಡಿರುವುದು. ಈ ಫಂಡಿಗೆ ಸಿಮ್ಲದಲ್ಲಿ ಒಟ್ಟಿಗೆ ೧೫ ಲಕ್ಷ ರೂಪಾಯಿ ಕೂಡಿರುವುದು

~~~~~

ಇಟಲಿಯ ದಕ್ಷಿಣ ಭಾಗದಲ್ಲಿರುವ ಸಿಸಿಲಿ ದ್ವೀಪಕ್ಕೆ ಸೇರಿದ ಕ್ಯಾಸ್ಟೆಲ್ಲಾ ಮೇರ್ ಎಂಬ ಸ್ಥಳದಲ್ಲಿ ಕಳೆದ ತಿಂಗಳಾಂತ್ಯದಲ್ಲಿ ಸಿಡಿಮದ್ದಿನ ರಭಸಕ್ಕೆ ಬಾಣಗಳ ಕಾರ್ಖಾನೆಯಲ್ಲಿ ಮದ್ದು ಹತ್ತಿಕೊಂಡು ಅನೇಕ ಜನರು ಮೃತಪಟ್ಟರು. ಈ ಕಾರ್ಖಾನೆಯ ಕಟ್ಟಡವೆಲ್ಲಾ ಹಾಳಾಯಿತು

~~~~~

ಟರ್ಕಿಯರಿಗೂ ಬಲ್ಗೇರಿಯರಿಗೂ ನಡೆದ ಯುದ್ಧಕ್ಕೆ ಮುಂಚೆ ಸರ್ವಿಯಾ ರಾಜ್ಯವು ೧೮ ಡಿಸ್ಟ್ರಿಕ್ಟುಗಳನ್ನು ಪಡೆದಿತ್ತು. ಈ ರಾಜ್ಯವು ೧೮,೬೫೦ ಚದರ ಮೈಲು ವಿಸ್ತಾರವಾಗಿಯೂ ೨೯,೧೧,೭೦೧ ಪ್ರಜಾ[illegible]ಗಿಯೂ ಇತ್ತು. ಈ ಯುದ್ಧ ಮುಗಿದ ಮೇಲೆ [illegible] ತೀರ್ಮಾನದಂತೆ. ಸರ್ವಿಯಾ ರಾಜ್ಯಕ್ಕೆ ೧೫,೬೬೬ ಚದರ ಮೈಲುಗಳ ಹೊಸ ಪ್ರದೇಶವು ೧೫,[illegible] ಪ್ರಜೆಗಳೂ ಸೇರಿಸಲ್ಪಟ್ಟಿತು. ಈಗ ಸರ್ವಿಯಾ ರಾಜ್ಯವು ಒಟ್ಟಿಗೆ [illegible] ಚದರ ಮೈಲುಗಳ [illegible]. ಅದರಲ್ಲಿ ಒಟ್ಟು [illegible] ಪ್ರಜೆಗಳಿದ್ದಾರೆ. ರಾಜ್ಯವು [illegible] ಡಿಸ್ಟ್ರಿಕ್ಟುಗಳಾಗಿ ವಿಂಗಡಿಸಲ್ಪಟ್ಟಿದೆ.

ಉತ್ತರ ಹಿಂದೂಸ್ಥಾನ.

ಹಿಂದೂಸ್ಥಾನದಲ್ಲಿ ಚಲಾವಣೆಯಲ್ಲಿರುವಂಥಾ [illegible] ರೂಪಾಯಿ ಕರೆನ್ಸಿ ನೋಟುಗಳ ಛಾಪಾವನ್ನು ಜಪಾನಿನಲ್ಲಿ ವಸ್ತ್ರಗಳಿಗೆ ಹಾಕಿ ಅಂಥಾ ವಸ್ತ್ರಗಳನ್ನು ಹಿಂದೂಸ್ಥಾನಕ್ಕೆ ವಿಶೇಷವಾಗಿ ಕಳುಹಿಸಿ ವಿಕರಿಮಾಡುತ್ತಿದ್ದರು. ಇಂಥಾ ವಸ್ತ್ರಗಳನ್ನು ಅಕ್ಟೋಬರ ತಿಂಗಳ ತಾ ೫ನೇ ತಾರೀಕಿನಿಂದೀಚೆಗೆ ಹಿಂದೂಸ್ಥಾನಕ್ಕೆ ತರಿಸಿ ಯಾರೂ ವಿಕರಿಮಾಡಕೂಡದೆಂಬದಾಗಿ ಇಂಡಿಯಾ ಸರಕಾರದವರು ಪ್ರಕಟಿಸಿದ್ದಾರೆ. ಕೆಲವು ದಿನಗಳ ಹಿಂದೆ ಅಂಥಾ ಚಿತ್ರವನ್ನು ದೀಪದ ಕಡ್ಡಿ ಪೆಟ್ಟಿಗೆಗಳ ಮೇಲೆ ಛಾಪೆಮಾಡಿ ಜಪಾನಿನಿಂದ ಹಿಂದೂಸ್ಥಾನಕ್ಕೆ ಕಳುಹಿಸುತ್ತಿದ್ದರು. ಅದನ್ನು ಆಗಲೇ ನಮ್ಮ ಸರಕಾರದವರು ಮೇಲ್ಕಂಡಂತೆ ಹುಕುಂ ಕೊಟ್ಟು ತಡೆದುಬಿಟ್ಟರು

~~~~~

ಮುಲ್ತಾನಿನ ಕಮ್ಮರ್ಶಿಯಲ್ ಎಂಡ್ ಜಮಿನ್ದಾರ್ ಬೇಂಕು ಲೇವಾದೇವಿಯನ್ನು ನಿಲ್ಲಿಸಿ ಬಿಡುವರೆ ಲಾಹೋರಿನ ಚೀಫ್ ಕೋರ್ಟಿಗೆ ಮನವಿ ಮಾಡಿಕೊಂಡಿರುವುದು

~~~~~

ಜರ್ಮನ್ ಪೂರ್ವ ಆಫ್ರೀಕದಲ್ಲಿರುವ ಭಾರತೀಯರನು ಅಲ್ಲಿಯ ಜರ್ಮನರು ಅಮಾನುಷ ರೀತಿಯಲ್ಲಿ ಪೀಡಿಸುತ್ತಿರುವರೆಂಬ ವಾರ್ತೆ ಬಂದಿರುವುದು

~~~~~

ರಂಗೂನಿನಲ್ಲಿ ಈಚೆಗೆ ಬಂದ ನೆರೆಯಿಂದ ಪೇಗ್ಯುಡಿವಿಜನಿನಲ್ಲಿ ೬೦,೦೦೦ ಎಕ್ರೆ ಭೂಮಿಯೂ ಎಮ್ಹರ್ಸ್ಟ ಡಿಸ್ಟ್ರಿಕ್ಟಿನಲ್ಲಿ ೧೦,೦೦೦ ಎಕ್ರೆ ಭೂಮಿಯೂ ಹಾಳಾಗಿರುವುದು

~~~~~

ಹಣ ಬಡ್ಡಿಗೆ ಸಾಲ ಕೊಡುವವರ ಕೈಯಿಂದ ಕೃಷಿಗಾರರನ್ನು ತಪ್ಪಿಸುವ ಬಗ್ಗೆ ಮುಂಬಾಯಿ ಸರಕಾರದವರು ಒಂದು ಕಾನೂನನ್ನು ತಯಾರಿಸಿರುವರು

~~~~~

ಪ್ಲೇಗ ಬೇನೆಯ ರೋಗವನ್ನು ಹರಡಿಸುವ ಸಾರಥಿಗಳಾದ ಇಲಿಗಳ ಹುಟ್ಟಡಗಿಸುವ ಬಗ್ಗೆ ಮುಂಬಾಯಿ ಸರಕಾರದವರು ಈ ವರ್ಷ ಪುನಃ ೫೦,೦೦೦ ರೂಪಾಯಿ ಸೆಂಕ್ಷನ್ ಮಾಡಿರುತ್ತಾರೆ. ಈ ವರ್ಷ ಈ ಕೆಲಸವು ೪ ಜಿಲ್ಲೆಗಳಲ್ಲಿ ನಡೆಯುವುದು.

~~~~~

ಮದ್ರಾಸ್ ಸ್ಟೀಮ್ ನೆವಿಗೇಶನ್ ಕಂಪೆನಿ ಎಂಬ ಹಡಗು ಕಂಪೆನಿಯನ್ನು ಕಳಚಿ ಬಿಡುವರೆ ಸಲಿಮ್ಬಾರ್ ವರ್ಕ್ ಲಿಮಿಟೆಡ್ ಎಂಬ ಕಂಪೆನಿಯವರು ಮಾಡಿದ ಮನವಿಯು ಕಲ್ಕತ್ತೆಯ ಹೈಕೋರ್ಟಿನಲ್ಲಿ ಮನ್ನಿಸಲ್ಪಟ್ಟು ಆಫೀಸಿಯಲ್ ರಿಸೀವರರು ನೇಮಿಸಲ್ಪಟ್ಟಿರುತ್ತಾರೆ. ಹಡಗ ಕಂಪೆನಿಯಿಂದ ಮನವಿ ಮಾಡಿಕೊಂಡ ಕಂಪೆನಿಗೆ ೧೭೪೪ ರೂಪಾಯಿ ಬರತಕ್ಕದಿತ್ತು. ಆದರೆ ಹಡಗ ಕಂಪೆನಿಯು ಇದನ್ನು ಕೊಡಲಶಕ್ತವಾಗಿರುವುದು

~~~~~

ದಕ್ಷಿಣ ಕನ್ನಡ

ಕೂಡಲೇ ಬೇಕಾಗಿರುವರು!

ಲೆಕ್ಕದ ಮಾಹಿತಿಯುಳ್ಳ ಶ್ಯಾನುಭಾಗರೊಬ್ಬರು ಬೇಕಾಗಿರುವರು. ತಮ್ಮ ಯೋಗ್ಯತೆಯನ್ನು ಸೂಚಿಸಿ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರಕೊಂಡಲ್ಲಿ ವ ಮುಖತಃ ಮಾತಾಡಿದಲ್ಲಿ ಸಂಬಳ ವ ಇತರ ವಿವರವು ತಿಳಿಸಲಾಗುವುದು.

ನಗರಕಾರ್ ಎಂಡ್ ಸನ್ಸ್.

ಜವಳಿ ಸಾವಕಾರರು,

ರಥಬೀದಿ, ಮಂಗಳೂರು.

ಮಂಗಳೂರು.

ಮದ್ರಾಸ್ ಗವರ್ನರಿನ [illegible] ಕೌನ್ಸಿಲು ಕ್ರಮವು:—ಗವರ್ನರ ಪ್ರಭುಗಳವರು [illegible] ತಾ. ೧೫ರಲ್ಲು [illegible]

ಬೆಳಗ್ಗೆ ಪಾಲ್ಘಾಟಿಗೆ ತಲಪುವರು. ಆ ದಿನ ಅಲ್ಲಿಯೇ ಇದ್ದು ಪಾಲ್ಘಾಟಿನ ವಲಿಯ ರಾಜರವರಿಂದ ಕೊಡೋಣಾಗುವ ಆತಿಥ್ಯ ಸತ್ಕಾರವನ್ನು ಸ್ವೀಕರಿಸಿ ಮರುದಿನ ಕೊಲ್ಲೆಂಗೋಡಿಗೆ ಹೋಗಿ ಸಾಯಂಕಾಲ ಪಾಲ್ಘಾಟಿಗೆ ಹಿಂದೆರಳಿ, ಈರೋಡು ಮಾರ್ಗವಾಗಿ ಕ್ವಿಲೋನಿಗೆ ಹೊರಟು, ತಾ. ೨೨ರಲ್ಲು ಕ್ವಿಲೋನಿಗೆ ತಲಪುವರು. ಕ್ವಿಲೋನಿನಿಂದ ಟ್ರಿವಂಡ್ರಮಿಗೆ ಮಧ್ಯಾಹ್ನಕ್ಕೆ ತಲಪಿ ಒಂದು ದಿನ ಅಲ್ಲಿಯೇ ಇದ್ದು ಮರುದಿನ ಕ್ವಿಲೋನಿಗೆ ಹಿಂದೆರಳಿ ತಾ ೨೪ನೇ ರಾತ್ರಿ ಊಟದನಂತರ ಹೊರಟು ತಾ. ೨೫ರಲ್ಲು ಕೊಚ್ಚಿಗೆ ಸೇರಿದ ಬೋಲ್ಗಟ್ಟಿ ರೆಸಿಡೆನ್ಸಿಗೆ ಚಿತ್ತೈಸುವರು. ತಾ. ೨೬ರಲ್ಲು ಬ್ರಿಟಿಷ್ ಕೊಚ್ಚಿಯನ್ನೂ, ತಾ ೨೭ನೇ ಬೆಳಗ್ಗೆ ಎರ್ನಾಕುಲಮನ್ನೂ ಸಂದರ್ಶಿಸಿ ತಾ ೨೮ನೇ ಮಧ್ಯಾಹ್ನದ ನಂತರ ಎರ್ನಾಕುಲಂ ಬಿಟ್ಟು ತಲಚೇರಿಗೆ ಹೋಗುವರು. ತಾ. ೨೯-೩೦ ತಲಚೇರಿ. ತಾ ೩೧ ಕಣ್ಣಾನೂರನ್ನು ಸಂದರ್ಶಿಸಿ ಅಂದೇ ತಲಚೇರಿಗೆ ಹಿಂದೆರಳುವರು. ನವಂಬರ ತಾ. ೧ನೇ ಆದಿತ್ಯವಾರ ತಲಚೇರಿಯಲ್ಲೇ ಇದ್ದು ತಾ ೨ನೇ ಸೋಮವಾರ ತಲಚೇರಿಯಿಂದ ಪುನಃ ಕಣ್ಣಾನ್ನೂರಿಗೆ ಹೋಗಿ, ಅಂದೇ ತಲಚೇರಿಗೆ ಹಿಂದೆರಳಿ ಸಾಯಂಕಾಲ ಮಂಗಳೂರಿಗೆ ಹೊರಟು ಮರುದಿನ ಬೆಳಗ್ಗೆ ಮಂಗಳೂರಿಗೆ ತಲಪಿ ತಾ. ೩. ೪. ೫ರಲ್ಲು ಮಂಗಳೂರಲ್ಲಿಯೇ ಕಳೆಯುವರು. ತಾ. ೬ರಲ್ಲು ಮೂಡಬಿದ್ರೆಗೆ ಹೋಗಿ ಅಲ್ಲಿಂದ ತಾ ೭-೮ರಲ್ಲಿ ಕಾರ್ಕಳ ಮಲ್ಪೆ, ವೇಣೂರನ್ನು ಸಂದರ್ಶಿಸುವರು ಉಳಿದ ಕಾಲಶಿಯಮಕ ಪಟ್ಟಿಯು ಮುಂದಕ್ಕೆ ಗೊತ್ತಾಗುವುದು.

ಇಲ್ಲಿ ಟ್ರೆಜರಿ ಡ್ಯೂಪಿಟಿ ಕಲೆಕ್ಟರರಾಗಿದ್ದ ಕುಂಞಾಯಿನ್ ಸಾಹೇಬ್ ಬಹುದ್ದೂರರವರು ಕಲಿಕೋಟೆಗೆ ವರ್ಗಾಯಿಸಲ್ಪಟ್ಟಿರುವರು. ಇಲ್ಲಿಯ ಟ್ರೆಜರಿ ಡ್ಯೂಪಿಟಿ ಕಲೆಕ್ಟರಾಗಿ ಮ ರಾ ರಾ ಎಮ್. ಪಾಂಡುರಂಗ ಕಿಣಿಯವರು ವರ್ಗಾಯಿಸಲ್ಪಟ್ಟು ಇದೇ ಕಳೆದ ತಾ ೩೧ರಲ್ಲು ಚಾರ್ಜ ತಕ್ಕೊಂಡಿರುವರು

ಕಾಫಿ ನೊಕದಮೆಯಲ್ಲಿ ಅಪಾದಿಸಲ್ಪಟ್ಟಿದ್ದ ಮಾಪಿಳ್ಳೆಯರಿಬ್ಬರಲ್ಲಿ ಒಬ್ಬೊಬ್ಬನಿಗೆ ಎರಡೆರಡು ತಿಂಗಳ ಸಜಾ ವಿಧಿಸಲ್ಪಟ್ಟಿರುವದು.

ಇದೇ ಕಳೆದ ತಾ ೨೭ರಲ್ಲು ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗು ಜರಗಿತು. ಈ ಸಭೆಯಲ್ಲಿ ಮುಖ್ಯವಾಗಿ ಡಿಸ್ಟ್ರಿಕ್ಟ್ ಬೋರ್ಡು ಇಂಜಿನಿಯರರಿಂದ ತಯಾರಿಸಲ್ಪಟ್ಟ ಅಂದಾಜು ಪಟ್ಟಿಗಳು ಇಡಲ್ಪಟ್ಟಿರುವವು.

ಕುಂದಾಪುರದಲ್ಲಿ ಒಂದು ಹೊರರೋಗಿಗಳ ಆಸ್ಪತ್ರೆ ಕಟ್ಟಿಸುವ ಬಗ್ಗೆ ರೂ ೨೩೫೦ ಎಕ್ಕಹೊಳೆಗೆ ಸಂಕ ಹಾಕಿಸುವರೆ ರೂ. ೩೫೮೦೦, ಮಲ್ಪೆಯಲ್ಲಿ ಒಂದು ಅತ್ತ ದಾರಿಗೆ ರೂ ೪೩೫೮ ಹೊಸದುರ್ಗಪಣೆತಡಿ ರಸ್ತೆಯನ್ನು ಮಂದರಿಸುವರೆ ರೂ ೫೦೦೦ ಕೊಕ್ಕಡದಿಂದ ದರ್ಮಸ್ಥಳಕ್ಕೆ ಮಾರ್ಗ ಕಡಿಸುವರೆ ರೂ ೩೩೦೦ ಸೆಂಕ್ಷನ್ ಮಾಡಲ್ಪಟ್ಟಿರುವುಕು.

ಮದ್ರಾಸ್ ಗವರ್ನರ ಪ್ರಭುಗಳವರು ಇಲ್ಲಿಗೆ ಚಿತ್ತೈಸುವ ಕಾಲ ಅವರಿಗೆ ಬಹುಮಾನ ಪತ್ರವನ್ನ ಅರ್ಪಿಸಬೇಕೆಂಬ ಪ್ರಸ್ತಾಪವು ಸಭೆಯ ಮುಂದಿಡಲ್ಪಟ್ಟು ಬಹುಮಾನ ಪತ್ರದ ಬಗ್ಗೆ ಕರಡಿಗೆಯನ್ನು ಮಾಡುವರೆ ರೂ. ೨೦೦ನ್ನು ಸೆಂಕ್ಷನು ಮಾಡಬೇಕಾಗಿ ಸರಕಾರದವರನ್ನು ಕೇಳಿಕೊಳ್ಳಬೇಕೆಂಬ ನಿರ್ಣಯವಾಯಿತ .

ಬೋರ್ಡು ಆಸ್ಪತ್ರೆಗಳಲ್ಲಿ ಔಷಧೋಪಚಾರ ಹೊಂದುವವರಿಂದ, ಕೇವಲ ಬಡವರನ್ನು ಬಿಟ್ಟು ಉಳಿದವರಿಂದ ಔಷಧಿಗೆ ಹಣ ತಕ್ಕೊಳ್ಳಬೇಕೆಂಬ ಸರಕಾರದವರಿಂದ ಡಿಸ್ಟ್ರಿಕ್ಟ್ ಬೋರ್ಡಿಗೆ ಕಳುಹಿಸಲ್ಪಟ್ಟ ವಿಷಯವು ಸಭೆಯ ಮುಂದಿಡಲ್ಪಟ್ಟು ಸದ್ಯಾ ಒಂದು ವರ್ಷದ ವರೆಗೆ ಪರೀಕ್ಷಾರ್ಥವಾಗಿ ಮಂಗಳೂರು ಮತ್ತು ಪುತ್ತೂರು ತಾಲೂಕು ಬೋರ್ಡು ಆಸ್ಪತ್ರೆಗಳಲ್ಲಿ ಈ ಆಲೋಚನೆಯನ್ನು ಜಾರಿಗೆ ತರಬೇಕೆಂದೂ, ಒಳರೋಗಿಗಳಿಂದ ದಿವಸಕ್ಕೆ ಒಂದಾಣೆ ಪ್ರಕಾರವೂ ಹೊರರೋಗಿಗಳಿಂದ ಅರುಪೈ ಪ್ರಕಾರವೂ ತಕೊಳ್ಳಬೇಕೆಂದು ಸಭೆಯಲ್ಲಿ ನಿರ್ಣಯವಾಯಿತು.

ಡಿಸ್ಟ್ರಿಕ್ಟ್ ಬೋರ್ಡಿನ ಕೆಲಸಗಾರರಿಗೆ ಜೂನು, ಜುಲಾಯಿ, ಆಗೋಸ್ತು ತಿಂಗಳಿಗೆ ಮುಂಗಾಯಿ ಭತ್ತೆಯು ಕೊಡೋಣಾಗಬೇಕೆಂದು ನಿರ್ಣಯವಾಯಿತು

ಪಾಣೆಮಂಗಳೂರಿಂದ ಸಂಪಾಜೆ ಸರಹದ್ದು ವರೆಗಿನ ರಸ್ತೆಗೆ ಪುನಃ ಕಲ್ಲು ಹಾಕಿ ದುರುಸ್ತಿಮಾಡುವದಕ್ಕೆ ರೂ. ೧೩೫೦೦ ಸೆಂಕ್ಷನ್ ಆಗಿರುವುದು.

ಬಂಟ್ವಾಳದಲ್ಲಿ ಶಸ್ತ್ರೋಪಯೋಗದ ಬಗ್ಗೆ ಒಂದು ಕೋಣೆಯನ್ನು ಕಟ್ಟಿಸುವರೆ ರೂ. ೬೩೦; ಬಂಟವಾಳದಲ್ಲಿ ಅಂಟುರೋಗಿಗಳ ಬಗ್ಗೆ ಒಂದು ಶೆಡ್ಡನ್ನು ಕಟ್ಟಿಸುವರೆ ರೂ. ೯೯೦. ಮುಲ್ಕಿಯ ಸಬ್ ಅಸಿಸ್ಟಾಂಟ್ ಸರ್ಜನರಿಗೆ ಮನೆಯನ್ನು ಕಟ್ಟಿಸುವ ಬಗ್ಗೆ ರೂ ೧೯೫೦ ಬೆಳ್ತಂಗಡಿಯಲ್ಲಿ ಸಬ್ ಅಸಿಸ್ಟಾಂಟ ಸರ್ಜನರಿಗೆ ಮನೆಯನ್ನು ಕಟ್ಟಿಸುವರೆ ರೂ ೧೯೮೦, ಪುತ್ತೂರು ಆಸ್ಪತ್ರೆಯಲ್ಲಿ ಶಸ್ತ್ರ ಪ್ರಯೋಗದ ಮತ್ತು ಡ್ರೆಸಿಂಗ್ ಕೋಣೆಗಳ ಬಗ್ಗೆ ರೂ. ೯೯೦ ಪುತ್ತೂರಲ್ಲಿ ಸೋಂಕು ರೋಗಿಗಳ ಶೆಡ್ಡು ಬಗ್ಗೆ ರೂ ೧೦೦೦, ಉಡುಪಿಯಲ್ಲಿ ಹೊರರೋಗಿಗಳ ಒಂದು ಆಸ್ಪತ್ರೆ ಬಗ್ಗೆ ರೂ. ೨೫೦೦, ಹೀಗೆ ೧೨,೦೪೦ ರೂಪಾಯಿ ಆಸ್ಪತ್ರೆಗಳ ಬಗ್ಗೆ ಈ ಸಭೆಯಲ್ಲಿ ಸೆಂಕ್ಷನ್ ಆಗಿರುವುದು. ಇದಕ್ಕೆ ಬೇಕಾದ ಹಣದ ಬಗ್ಗೆ ಸರಕಾರದವರನ್ನ ಕೇಳಿಕೊಳ್ಳಬೇಕೆಂಬ ನಿರ್ಣಯವಾಗಿರುವುದು.

ಮೈಸೂರಿನಿಂದ ಬಂದಿರುವ ಥಿಯೊಸಾಫಿಕಲ್ ಇನ್ಸ್‌ಪೆಕ್ಟರ್ ಬ್ರಹ್ಮಶ್ರೀ ಕೆ ನರಹರಿ ಶಾಸ್ತ್ರಿಗಳು ಈ ಕೆಳಗೆ ನಮೂದಿಸಿರುವ ಪ್ರಕಾರ ಕನ್ನಡ ಭಾಷೆಯಲ್ಲಿ ಕೆನರಾ ಹೈಸ್ಕೂಲಿನಲ್ಲಿ ಉಪನ್ಯಾಸ ಮಾಡುತ್ತಾರೆ

ತಾ 2 ಬುಧವಾರ ಸಾಯಂಕಾಲ 6 — 15ರಿಂದ 7 — 15 ವರೆಗೆ "ಪುರುಷಾರ್ಥ ವಿಚಾರ" ತಾ 3 ಗುರುವಾರ ಸಾಯಂಕಾಲ 6 — 15ರಿಂದ 7 — 15 ವರೆಗೆ "ಪುನರ್ಜನ್ಮ". ತಾ. 4 ಶುಕ್ರವಾರ ಸಾಯಂಕಾಲ 6 — 15ರಿಂದ 7 — 15 ವರೆಗೆ "ಪ್ರಾರಬ್ಧ, ಪುರುಷ ಪ್ರಯತ್ನ" ತಾ 5 ಶನಿವಾರ ಸಾಯಂಕಾಲ 6 — 15ರಿಂದ 7 — 15 ವರೆಗೆ "ಹಿಂದೂ ದೇಶದ ಪುನೋವೃದ್ಧಿ" ತಾ. 6 ಭಾನುವಾರ ಸಾಯಂಕಾಲ 3 — 30ರಿಂದ 6 — 30 ವರೆಗೆ "ಚಂದ್ರಹಾಸ ಚರಿತ್ರೆ" ಹರಿಕಥೆ

ಜೊಳಂತೂರ ಸರ್ವೋತ್ತಮ ಪ್ರಭುಗಳವರ ಮೇಲಿನ ಕಾಫಿ ಮೊಕದಮೆಯು ಇದೇ ತಿಂಗಳ ತಾ ೧೦ಕ್ಕೆ ಮುಂದರಿಸಿಡೋಣಾಗಿದೆ

~~~~~

ಕಾಪು:—ಸರಕಾರಿ ಸ್ಥಳದಲ್ಲಿ ಪಂಚಮರು ಕಟ್ಟಿಸಿದ ಕಟ್ಟೋಣವನ್ನ ಕಿತ್ತು ಹಾಕಿ ಹೊಸ ಒಕ್ಕಲು ಹಾಕಿಸಿದ ಪ್ರಯುಕ್ತ ಪಂಚಮರ ಕಡೆಯಿಂದ ಉಡುಪಿ ಮೇಜಸ್ಟ್ರೇಟ ಕೋರ್ಟಿನಲ್ಲಿ ಉಳಿಯಾರುಗೋಳಿ ಗ್ರಾಮದ ಬಾವುಗುತ್ತಿನ ಪಂಚಸೆಟ್ರ ಮೇಲೆ ಫಿರ್ಯಾದು ದಾಕಲು ಆಗಿತ್ತು ತಾ ೨೫ರಲ್ಲು ಮೇಜಸ್ಟ್ರೇಟರು ಪ್ರತಿ ಒಬ್ಬ ಸೆಟ್ರಿಗೆ ೪ ತಿಂಗಳ ಕಠಿಣ ಸಜೆ ೫೦ ರೂಪಾಯಿ ಜುರುಮಾನೆ ಪ್ರಕಾರ ವಿಧಿಸಿದರು ಕೂಡಲೇ ಸೆಟ್ರ ಕಡೆಯಿಂದ ಜಾಮೀನಿನಲ್ಲಿ ಬಿಡುವರೆ ಜಿಲ್ಲಾ ಕಲೆಕ್ಟರವರಲ್ಲಿ ಅರ್ಜಿ ಮಾಡಿಕೊಂಡ ಮೇರೆಗೆ ಜಾಮೀನಿನ ಮೇಲೆ ಬಿಟ್ಟರಾಗಿಯೂ ಅಪೀಲು ತನಖೆಯು ಮಂಗಳೂರು ಡಿಪ್ಯುಟಿ ಕಲೆಕ್ಟರವರಲ್ಲಿ ಬರುವ ತಿಂಗಳತಾ. ೧೪ಕ್ಕೆ ಇಟ್ಟಿರುತ್ತಾರಾಗಿ ಕೇಳುತ್ತೇವೆ

ಎಲ್ಲಾ ಕಡೆಗಳಲ್ಲೂ ಜೀನಸು ಧಾರಣೆ ಅಲ್ಪಸ್ವಲ್ಪ ತಗ್ಗಿದೆ ಎಂಬದಾಗಿ ಕೇಳಿದಾಗ್ಯೂ ಈ ಊರ ಸಾಹುಕಾರರು ಮೊದಲಿನಂತೆಯೇ ಕ್ರಯ ಏರಿಸಿ ಮಾರಾಟ ಮಾಡುತ್ತಿರುವರು. ಇನ್ನಾದರೂ ಸಾಹುಕಾರರು ಬಡ ಜನರ ಗೋಳಿಗೆ ಅರ್ಹರಾಗರು ಎಂದು ನಂಬುತ್ತೇನೆ

ಅದ್ಯಾರು ಶ್ರೀಗಳವರು ಅದ್ಯಾರು ಮಠದಿಂದ ಮಂಗಳೂರಿನ ರಸ್ತೆಗೆ ಯರ್ಮಾಳದಲ್ಲಿ ಕೂಡುವಂತೆ ಸ್ವಂತ ಖರ್ಚಿನಿಂದ ರಸ್ತೆ ಮೊಡಿಸುವರಾಗಿ ಕೇಳಿ ಸರ್ವರು ಸಂತೋಷಪಡುವವರಾಗಿರುತ್ತಾರೆ. ಈ ರಸ್ತೆಯಿಂದ ಅನೇಕರಿಗೆ ಬಲು ಉಪಕಾರವಾದೀತು.

ಕೊರನೇಶನ್ ಟ್ರಾನ್ಸಿಟ್ ಕಂಪೆನಿಯವರು ಹಿಂದು ಟ್ರಾನ್ಸಿಟ್ ಕಂಪೆನಿಯವರಿಗೆ ಜಡ್ಕಾ, ಕುದುರೆಗಳನ್ನೆಲ್ಲಾ ಮಾರಾಟ ಮಾಡಿದರಾಗಿ ಕೇಳುತ್ತೇವೆ. ಮೊದಲು ಉಡುಪಿಯಿಂದ ಮಂಗಳೂರಿಗೆ ರೂಪಾಯಿ ೨ — ೦ — ೦ ಚಾರ್ಜು [illegible] ಈಗ ರೂ. ೨ — ೪ — ೦ ಆಗಲಿಕ್ಕೆ ಇದೇ ಕಾರಣವೆಂತಲೂ ತಿಳಿಯುತ್ತೇವೆ. ಸರ್ವರಿಂದಲೂ ಬಲು ಸಾಹಸಿಯೆಂದು ಹೊಗಳಲ್ಪಡುತ್ತಿರುವ ರಾ ಸುಬ್ಬಯ್ಯ ಸೆಟ್ರವರು ಇಟ್ಟಿದ್ದ [illegible] ಬರಿದೆ ಮೊದಲಿನಂತೆಯೇ [illegible]

ಪ್ರಯಾಣಿಕರೆಲ್ಲರೂ ಇವರನ್ನು ಶ್ಲಾಘಿಸಲು ಕಾರಣವಿದೆ.

—— . o ——

ಸುಳ್ಯ:—ಇಲ್ಲಿಯ ಮೊಗರ್ಪಣೆಯೆಂಬ ಹೊಳೆಯ ಸಂಕಕ್ಕೆ ಬದಿಯ ಬೇಲಿಗಾಗಿ ಇಟ್ಟ ಸರಳು ಎರಡೇ ಅಂತರವಾದುದರಿಂದ ಕಂಡಿಗಳು ಬಹಳ ಅಗಲವಿವೆ. ಶಾಲೆಗೆ ಹೋಗುವ ನೂರಾರು ಹುಡುಗರು ವ ಇತರ ಹುಡುಗರು ಇಲ್ಲಿ ಕಂಡಿಗಳ ಮೂಲಕ ನೆರೆಯನ್ನು ನೋಡುವುದರಿಂದ ಅಪಾಯಕ್ಕೆ ಗುರಿಯಾಗಬಹುದು ಆದುದರಿಂದ ಬೋರ್ಡಿನವರು ಈ ಸಂಕಕ್ಕೆ ಇನ್ನೆರಡು ಸರಳುಗಳನ್ನು ಹಾಕಿಸುತ್ತಿದ್ದರೆ ಉಪಕಾರವಿತ್ತು

~~~~~

ಮುಂಬಾಯಿ ಬಾತ್ಮೀದಾರರಿಂದ:—ಮುಂಬಾಯಿ ಶಹಾರಿನ ಬ್ಯಾಂಕ್ ಅಫ್ ಇಂಡಿಯಾ ಎಂಬ ಬ್ಯಾಂಕಿನಲ್ಲಿ ಕೆಲಸ ಮಾಡುವ ಮೊಗೇರ ಜಾತಿಯವರು ಈಗ ಸದ್ಯಕ್ಕೆ ಯುರೋಪ್ ಖಂಡದಲ್ಲಿ ನಡದಿರುವ ಯುದ್ಧಗಳಲ್ಲಿ ನಮ್ಮ ಬ್ರಿಟಿಷ್ ಸರಕಾರಕ್ಕೆ ಜಯ ಸಿಕ್ಕುವ ಹಾಗೆ ಇದೇ ಆಗೋಸ್ತು ತಿಂಗಳ ತಾ ೨೩ನೇ ಆದಿತ್ಯವಾರ ದಿವಸ ಮಧ್ಯಾಹ್ನ ಕಾಲದಲ್ಲಿ ಹರಿಕೀರ್ತನೆಯ ನಂತರ ಶ್ರೀ ದೇವರಿಗೆ ಆರಾಧನೆ ಪೂಜೆ ವಗೈರೆಗಳನ್ನು ನಡಿಸಿದರು ಇದಕ್ಕೆ ತಗಲಿದ ಖರ್ಚು ಸದರಿ ಬ್ಯಾಂಕಿನ ಯುರೋಪಿಯನ್ ಮುಂತಾದ ಸರ್ವ ಗ್ರಹಸ್ತರು ತಮ್ಮ ಯೋಗ್ಯತಾನುಸಾರವಾಗಿ ಕೊಟ್ಟ ದ್ರವ್ಯ ಸಹಾಯದಿಂದ ನಡಿಸಲಾಯಿತು ಮತ್ತು ಹಾಲಿ ಮುಂಬಾಯಿ ಶಹಾರಿನ ಶ್ರೀ ಮಹಾ ಭಾರತ ಮಂಡಳಿಯವರು ಈ ಸಭೆಗೆ ಬಂದಿದ್ದರು. ಸುಮಾರು ಮುನ್ನೂರಕ್ಕಿಂತ ಅಧಿಕ ಜನರು ಈ ಪೂಜೆಗೆ ಬಂದು ಬ್ರಿಟಿಷ್ ಸರಕಾರಕ್ಕೆ ಜಯ ಸಿಕ್ಕುವಂತೆ ಪ್ರಾರ್ಥನೆ ಮಾಡಿ ಪ್ರಸಾದವನ್ನು ಸ್ವೀಕರಿಸಿದರು.

~~~~~

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಅವ್ವಲ್ ಮಸ್ಕತಿ ಅಕ್ಕಿ	5 — 5 — 0	5 — 9 — 0
ದುಯಂ ,, ,,	5 — 2 — 0	5 — 5 — 0
ಸುಗ್ಗಿ ,,	5 — 1 — 0	5 — 3 — 0
ಗಾಡಿ ಸುಗ್ಗಿ ,,	4 — 13 — 0	4 — 14 — 0
ಗುಡ್ಡು ,,	5 — 0 — 0	5 — 4 — 0
ದುಯಂ ಗುಡ್ಡು ,,		4 — 14 — 0
ಅವ್ವಲ್ ಬೆಳ್ತಿಗೆ ,,	5 — 10 — 0	5 — 12 — 0
ಗುಡ್ಡು ಬೆಳ್ತಿಗೆ ,,	5 — 2 — 0	5 — 4 — 0
ರಂಗೂನು ಬೆಳ್ತಿಗೆ ಗೋಣಿ ೧ರ	9 — 0 — 9	9 — 2 — 0
ಗೋದಿ ಗೋಣಿ ೧ರ	14 — 0 — 0	15 — 0 — 0
ಹುರುಳಿ ಗೋಣಿ ೧ರ		8 — 4 — 0
ಕಡಲೆ ಗೋಣಿ ೧ರ.	11 — 4 — 0	11 — 8 — 0
ತೊಗರಿ ಗೋಣಿ ೧ರ		13 — 8 — 0
ತೊಗರಿ ಬೇಳೆ ಗೋಣಿ ೧ರ	13 — 8 — 0	15 — 0 — 0
ಉದ್ದು ಗೋಣಿ ೧ರ		10 — 0 — 0
ಊರು ಬೆಲ್ಲ ಖಂಡಿ ೧ರ		55 — 0 — 0
ಉಪ್ಪು ಗೋಣಿ ೧ರ		4 — 0 — 0
ಕೊಬ್ಬರಿಖಂಡಿ ಖಂಡಿ ೧ರ		27 — 0 — 0
ಎಳ್ಳಿಂಡಿ ಖಂಡಿ ೧ರ		32 — 8 — 0
ಕೊಬ್ರಿ ಎಣ್ಣೆ ಮುಡಿ ೧ರ		4 — 12 — 0
ಎಳ್ಳೆಣ್ಣೆ ಮುಡಿ ೧ರ		5 — 8 — 0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ		5 — 3 — 0
ಮೋರಿಸ್ ಸಕ್ಕರೆ ಮುಡಿ ೧ರ		3 — 12 — 0
ಕಾಫಿ ಖಂಡಿ ೧ರ.	160 — 0 — 0	190 — 0 — 0
ಬೀಗೋಟು ಖಂಡಿ ೧ರ	90 — 0 — 0	94 — 0 — 0
ತಾಂಬ್ರ ತಗಡು ಮುಡಿ ೧ರ		16 — 12 — 0
,, ಪಾತ್ರೆಗಳು		21 — 0 — 0
ಚೀನಿ ಬೆಳ್ಳಿ ಸೇರು ೧ರ		20 — 0 — 0
ಕಬ್ಬಿಣ ಖಂಡಿ ೧ರ		35 — 0 — 0
ಗೇರು ಬೀಜ ಮುಡಿ ೧ರ		2 — 0 — 0
~~~~~

ಮುಳಿಯಿಲ್‌ರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಡ್ತೆ 1ಕ್ಕೆ ಕ್ರಯ 10 ಆಣೆ ಇದು ಎಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ

ಮಸ್ತಕಾಮೃತ ತೈಲವನ್ನು ಕಳೆದ ಐದು ವರುಷಗಳಿಂದ ಉಪಯೋಗಿಸಿಕೊಳ್ಳುತ್ತಿರುವದರಿಂದ ನನ್ನ ಮುದೀ ಕಾಲದಲ್ಲಿ ಯೌವ್ವನ ಪ್ರಾಯದಲ್ಲಿದ್ದ ಹಾಗೆ ಈ ದಿವ್ಯ ತೈಲದಿಂದ ಸಹಾಯದಿಂದ ನಾನು ಕೆಲಸಮಾಡಲಾರೆನು, ನನ್ನ ನೇತ್ರೇಂದ್ರಿಯಗಳು ಒಳ್ಳೆ ಸ್ಥಿತಿಯಲ್ಲಿ

ರೆವರೆಂಡ್ ಇ ಸೋನ್ಸ್,
ಮೂಲ್ಕಿ

ತಾ 15—4—13

ಮುಳಿಯಿಲ್ಸ್ ಹೇರ್ ಓಯಿಲ್—ಕ್ರಯ 12 ಆಣೆ ನನ್ನ ಕೂದಲು ಅಧಿಕ ಉದುರುತ್ತಿರುವ ತಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ ಇನ್ನೊಂದು ಕುಪ್ಪಿ ವಿ ಪಿ ಮೂಲಕ ರವಾನಿಸಿರಿ.

ಮಿಸಿಸ್ ಪೈ ಕರಿಂಗ್ಟನ್
ಗ್ರೀನ್‌ವಿಲ್ಲಾ ಕಲ್ಲಿಕೋಟೆ

ತಾ 23—5—13

ಮುಳಿಯಿಲ್ಸ್ ಹೇರ್ ಓಯಿಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ ಇನ್ನೊಂದು ಡಜನ್ ಕುಪ್ಪಿಗಳನ್ನು ಆದಷ್ಟು ತ್ವರೆಯಲ್ಲಿ ರವಾನಿಸಿರಿ

ಮಿಸ್ ಎಸ್ ಸೋನ್ಸ್,
ಸ್ಕೂಲು ಮಿಸ್ಟ್ರೆಸ್, ಮಂಗಳೂರು

21ನೇ ಒಕ್ಟೋಬರ 1913

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ

ಚತುರ್ಥಿ ಮಾತ್ರೆಯನ್ನು ತಕ್ಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ ಇದು ಒಳ್ಳೇ ಗುಣಕರವೆಂಬದಾಗಿ ಹೇಳುವರೆ ಅನುಮಾನವಿಲ್ಲ

ಎ ಪೊಕ್ರ ಹೆಗ್ಗಡ,
ಕುಕ್ಕುಛಿ, ಕಾರ್ಕಳ

ತಾ 13—6—13

ವಯೊಲೆಟ್ ಹೇರ್ ಓಯಿಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ತಲೆವೇದನೆಯು ಗುಣಪಡುವದು ಕಾಯಂ ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ ಅತಿ ಘೋರವಾದ ತಲೆನೋವಿನಿಂದ ಶ್ರಮಿಪಡುತ್ತಿದ್ದ ನನ್ನ ಮೊಮ್ಮಗಳಿಗೆ ತಮ್ಮಿಂದ ತಕ್ಕೊಂಡ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಲ್ಲದೆ ಅವಳು ಇದಲ್ಲದವಳು ಹಚ್ಚಿನ ರೋಗಿಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲೆಂಬದು ನನ್ನ ಪ್ರಾರ್ಥನೆಯಾಗಿದೆ

M JACOBI,
Ha Clerk CALICUT

4—7—13

ವಿಳಾಸ — **ಮುಳಿಯಿಲ್ ಎಂಡ್ ಸನ್ಸ್**, ಕಾಸರಗೋಡು, ದ ಕ

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಅತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ನಮ್ಮ ಏಜಂಟರು — 1 ಮೆಸ್ಸರ್ಸ್. ರಫಯೆಲ್ ಎಂಡ್ ಕೊ , ದ್ರಿಬೊಬಿಲ್ಡಿಂಗ್
2. ಜುಬಿಲಿ ಕೇಕ್ ಬಜಾರ್, ಬೆಂಗಳೂರು. ಮಂಗಳೂರು

MUSICAL MART

Kavi & Sons,

MANGALORF

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

,ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೊನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ, ವ ಇತರ ಗಾಯನ ಸಾಮಗ್ರಿಗಳನ್ನು ಯೆಡ್ವಾನ್ಸ್ ಕೊಟ್ಟಲ್ಲಿ ನಮ್ಮ ಜವಾಬದಾರಿಯಿಂದ ತರಿಸಿಕೊಡುವೆವು. ಹೇಂಡ್ ಹಾರಮೊನಿಯಮ್ ಸಿಂಗಲ್ ರೀಡ್ ರೂ. 25ರಿಂದ 82ರ ವರೆಗೂ, ಡಬ್ಬಲ್ ರೀಡ್ ರೂ. 30ರಿಂದ ರೂ. 45, 50ರ ವರೆಗೂ, ಪೋಲ್ಡಿಂಗ್ ರೂ. 70, 75, 105.

ಕವಿ ಎಂಡ್ ಸನ್ಸ್,
ಮ್ಯೂಜಿಕಲ್ ಮಾರ್ಟ, ಮಂಗಳೂರು ದ ಕ

—o—

ಹೊಸ ಗ್ರಂಥಗಳು

ಬೆಲೆ ಕಡಿಮೆ! ಓದುವದಕ್ಕೆ ಆನಂದ!!

ಮಂಜುಘೋಷಾಶೃಂಗಾರಾದ್ಭುತ ಕಥೆ.

ಇದು ಶೃಂಗಾರ ರಸಭರಿತವಾದ ಕಾದಂಬರಿ ಕಥೆಯು ಇದರಲ್ಲಿ ಮಂಜುಘೋಷೆಯು ತನಗೆ ಎಂಥ ಸಂಕಟ ಬಂದರೂ ಸಹ ಎದೆಗುಂದದ ತನ್ನ ಪತಿಯಾದ ವಸಂತ ಮಾಧವನೊಡನೆ ವಿವಾಹದಲ್ಲಿ ಸಂಚರಿಸಿ ಆ ಮೇಲೆ ಪತಿಯ ನ್ನಗಲಿ, ಪುತ್ರನನ್ನಗಲಿ, ಅತಿ ಕಷ್ಟಕ್ಕೆ ಗುರಿಯಾಗಿ, ಜಗನಿಯ ತನ ಪಾದಾರವಿಂದದಲ್ಲಿ ಭಕ್ತಿಯನ್ನಿಟ್ಟು ಪತಿ ಸಿದ್ಧಿ ದ ಪರಮೇಶ್ವರನು ಕರುಣಿಸಿ ಪತಿ, ಸುತ, ಮಾತಾಪಿತೃಗಳ ದರ್ಶನಮಾಡಿಸಿದನು ಎಂಬ ವಿಷಯ ಗರ್ಭಿತವಾದದ್ದಿದ್ದು ಕೇವಲ ತಿಳಿಗನ್ನಡದಿಂದ ಮುದ್ರಿಸಲ್ಪಟ್ಟಿದೆ ಇದರ ಪ್ರಥಮ ಮುದ್ರಣವು ಮೂರೇ ತಿಂಗಳಲ್ಲಿ ಮುಗಿದುಹೋದುದರಿಂದ ಇದರ ಗುಣವು ಎಷ್ಟರ ಮಟ್ಟಿಗೆ ಇರುವದೆಂಬದು ಓದುವವರಿಗೆ ತಾನೇ ಕಂಡುಬರುವದು ಈಗ ದ್ವಿತೀಯ ಮುದ್ರಣವು ಒಲೆಗೆ ಸಿದ್ಧವಾಗಿದೆ ಕ್ರಯ ೮ ಆಣೆ

ಹಾತೀಮತಾಯಿ ಕಥೆ

ಇದು ಕೇವಲ ಪರೋಪಕಾರ ದಿಗ್ದರ್ಶನ ವಿಷಯಕವಾದದ್ದಿದ್ದು ಪ್ರತಿಯೊಬ್ಬನು ಅನುಕರಣೆಯ ಮಾಡಲಿಕ್ಕೆ ಯೋಗ್ಯವಾಗಿದೆ ಇದರಲ್ಲಿ ಕಥಾ ನಾಯಕನಾದ ಹಾತೀಮನು, ಕಥಾನಾಯಕಿಯಾದ ಹುಸ್ನಬಾನು ಎಂಬವಳ ಏಳು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಹೇಳಿ ಅವಳನ್ನು ಮುನೀರಷಹನೆಂಬ ರಾಜಪುತ್ರನಿಗೆ ವಿವಾಹಮಾಡಿಸಿದನೆಂಬ ಸಂದರ್ಭವು ವರ್ಣಿಸಲ್ಪಟ್ಟಿದೆ ಈ ಕಥೆಯು ಹಿಂದೂಸ್ಥಾನಿ, ಮರಾಠಾದಿ ಭಾಷೆಗಳಲ್ಲಿ ಪ್ರಚುರವಾಗಿ ಲಕ್ಷಾವಧಿ ಪ್ರತಿಗಳು ಖರ್ಚಾಗಿ ಹೋದದ್ದನ್ನೂ ಹೋಗುತ್ತಿರುವದನ್ನೂ ಕಂಡು ಕನ್ನಡ ಭಾಷೆಯಲ್ಲಿ ಭಾಷಾಂತರ ಮಾಡಿಸಿ ವಿಕ್ರಯಕ್ಕೆ ಸಿದ್ಧಮಾಡಲ್ಪಟ್ಟಿದೆ ಕ್ರಯ ೮ ಆಣೆ

ವಿಷ್ಣುಶರ್ಮ ಪಂಚತಂತ್ರ ಕಥೆಗಳು

ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿ ಸರ್ವಾಂಗ ಸುಂದರವಾಗಿದ್ದು ಅದರಂತೆಯೇ ತಿಳಿಗನ್ನಡದಲ್ಲಿ ಮಿತ್ರಭೇದ, ಸುಹೃಲ್ಲಾಭ ಸಂಧಿವಿಗ್ರಹ ಲಬ್ಧನಾಶ ಅಸಂಪ್ರೇಕ್ಷ್ಯಕಾರಿತ್ವವೆಂಬ ಐದು ತಂತ್ರಗಳನ್ನು ಒಳಗೊಂಡಿದೆ ಇದರಲ್ಲಿ ವಿಷ್ಣುಶರ್ಮನಿಂದ ಬೋಧಿತರಾದ ಈರ್ವರು ರಾಜಪುತ್ರರು ಸನ್ಮಾರ್ಗವರ್ತಿಗಳಾದ ಸಂಗತಿಯನ್ನೂ ಅಲ್ಲಲ್ಲಿ ಕಥಾ ಸಂದರ್ಭಾನುಸಾರವಾಗಿ ಹೇಳಿದ ನೀತಿಪರವಾದ ಸಂಸ್ಕೃತ ಶ್ಲೋಕಗಳೂ ಅವುಗಳ ಟೀಕೆಯು ಸಹಿತವಾಗಿದ್ದು ಸುಬೋಧವಾಗಿರುವ ಉಪಕಥೆಗಳನ್ನೂ ಒಳಗೊಂಡದ್ದಾಗಿದೆ ಈ ಗ್ರಂಥ ವಾಚನದಿಂದ ಪ್ರತಿಯೊಬ್ಬ ಮನುಷ್ಯನು ಸನ್ಮಾರ್ಗವರ್ತಿಯಾಗುವನೆಂದು ನಾವು ಖಂಡಿತವಾಗಿ ಹೇಳುತ್ತೇವೆ ಈ ಗ್ರಂಥವು ಕನ್ನಡ ಭಾಷೆಯಲ್ಲಿ ನೂತನವಾಗಿ ಪ್ರಕಟವಾಗಿದೆ ಕ್ರಯ ೮ ಆಣೆ

ಮೋಹನಾಂಗಿಯ ಕಥೆ

ಈ ಕಥೆಯು ವಾಚಕರು, ಓದಿದರೆ ಉಲ್ಲಾಸವನ್ನುಂಟುಮಾಡುತ್ತದೆ. ಮೋಹನಾಂಗಿಯು ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವವರ ದೆಶೆಯಿಂದ ತನಗೆ ಎಂಥಾ ವಿಪತ್ತು ಬಂದಾಗ್ಯೂ, ಭಗವಂತನ ಅನುಗ್ರಹದಿಂದ ಪಾರಾಗಿ ತನ್ನ ಭರ್ತನನ್ನು ಕೂಡಿದಳು. ಇದರಿಂದ ಸ್ತ್ರೀಯರಿಗೂ ಪುರುಷರಿಗೂ ಸಹ ನೀತಿಯನ್ನುಂಟುಮಾಡುವುದು ಕ್ರಯ ೪ ಆಣೆ

ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳ ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು ಜೋತಿಷ್ಯ ಗ್ರಂಥಗಳು ವೈದ್ಯಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವ ಮತ ಗ್ರಂಥಗಳ ನಾಟಕಗಳು, ಕನ್ನಡ ಸಂಸ್ಕೃತ ಗ್ರಂಥಗಳು ಇವುಗಳಲ್ಲದೆ ಸ್ಮಾರ್ತ ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ —

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ಣಾಟಕ ಬುಕ್ ಡಿಪೋ ಏಜಂಟ್, **ಬಳ್ಳಾರಿ.**

ವಿವಾಹ ಮಂಟಪ.

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ ತಯಾರಿಸಲ್ಪಡುವುದರಿಂದ ಸರ್ವರಿಂದಲೂ ಪ್ರೋತ್ಸಾಹವನ್ನು ಪಡದಿದೆ. ಕನ್ನಾನೂರ, ಮೈಸೂರು, ನಾಗಪುರ, ವಿಶಾಖಪಟ್ಟಣ, ಲಾಹೋರು ಮೊದಲಾದ ವಸ್ತುಪ್ರದರ್ಶನಗಳಲ್ಲಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು ಒಮ್ಮೆ ಸವಿದು ನೋಡಲಾರಿರಾ !

ಸ್ಟೀವನ್ಸ್ ಎಂಡ್ ಸನ್ಸ್
ಪೋಸ್ಟು ಆಫೀಸಿನ ಮತ್ತು ರಿಜಿಸ್ಟ್ರಿ ಆಫೀಸಿನ ಮಧ್ಯೆ,
ಪನಕಟ್ಟಾ, ಮಂಗಳೂರು.

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಆಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ	12-0-0	A ಅರಗಜ	ತೊಲೆ 1ಕ್ಕೆ	2-0-0
ಅಂಬರ್ ಬತ್ತಿ	,, ,,	6-0-0	B ಅರಗಜ	,, ,,	1-0-0
ಕಸ್ತೂರಿ ಬತ್ತಿ	,, ,,	3-0-0	ಕಸ್ತೂರಿ ಬಿಲ್ಲೆ	,, ,,	2-0-0
ಜವಾಜಿ ಬತ್ತಿ	,, ,,	2-0-0	ಜವಾಜಿ ಬಿಲ್ಲೆ	,, ,,	1-0-0
ಘಮಗಿನ ಬತ್ತಿ	,, ,,	1-8-0	ಕೇಸರಿ ಬಿಲ್ಲೆ	,, ,,	0-8-0
ಪನ್ನೀರ್ ಬತ್ತಿ	,, ,,	0-12-0	ತಾಂಬೂಲ ರತ್ನ ಸೀಸೆ 1ಕ್ಕೆ		0-4-0
ಮಸಾಲಾ ಬತ್ತಿ	,, ,,	0-6-0	ದಶಾಂಗ ಡಬ್ಬಿ 1ಕ್ಕೆ		0-4-0

ಮೇನೇಜರ್, "ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

THE BOMBAY LIFE ASSURANCE CO. LTD.

Established 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

"There can be no doubt that the Policy Contracts are well secured".

Chairman:—The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co Ltd., The Tata Mills Co. Ltd., Managing Agent of Messrs. Marsland Price & Co. Ltd., and fellow of the Bombay University.

Actuary—(George King Esq. F. F. A., F. I. A., London.)

Medical Referee—Dr. R. Row, M. D. D. Sc. London.)

Managing Director—Framrose R. Joshi, Justice of the Peace, The Honorary Presidency Magistrate & etc.

Wanted Agents on very liberal commission.

Apply for full particulars to—**Kochikar Bros.**; Udipi, Chief Agents for South Canara, Malabar, Travancore and Cochin.

ಮುಂಬಯಿ ಲೈಫ್ ಇನ್ಶೂರೆನ್ಸ್ ಕಂಪೆನಿ. ಲಿಮಿಟೆಡ್.

(೧೯೦೮ರಲ್ಲಿ ಸ್ಥಾಪಿಸಲ್ಪಟ್ಟಿತು)

ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಾತಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆದಾರರ ಬಾಧ್ಯತೆಗಳ ಬಗ್ಗೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚ್ಯುಯರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು:— ಹ. ಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೊಲಿಕ್ ಮಾರ್ಸ್ ಲೆಂಡ್ ಪ್ರ್ಯಾಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೊಗಳವರು.

ಎಕ್ಚುಯುಯರಿ:—ಮೆ॥ ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)

ಮೆಡಿಕಲ್ ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ. ಡಿ. ಎಸ್. ಸಿ. (ಲಂಡನ್):

ಮೆನೇಜಿಂಗ್ ಡೈರೆಕ್ಟರ್:—ರಾ॥ ಫ್ರೆಮ್‌ರೋಜ್ ಆರ್. ಜೋಶಿ ಒನರರಿ ಪ್ರೆಸಿಡೆನ್ಸಿ ಮೇಜಿಸ್ಟ್ರೇಟರು.

ಏಜಂಟರು ಬೇಕಾಗಿರುವರು, ಧಾರಾಳವಾದ ಕಮಿಶನ್ ಕೊಡೋಣಾಗುವದು, ವಿಶೇಷ ಮಾಹಿತಿಗೆ ಈ ಕೆಳಗಿನ ವಿಳಾಸದವರಿಗೆ ಬರೆಯಿರಿ:—

ಕೊಚ್ಚಿಕಾರ್ ಬ್ರದರ್ಸ್, ಪ್ರಾಮುಖ್ಯ ಏಜಂಟರು. ಉಡುಪಿ

ಯಮ್. ವಿ. ಶಾಸ್ತ್ರಿಗಳ ಆಯುರ್ವೇದಿಕ್ ಡಿಸ್‌ಪೆನ್ಸರಿ.

ಪ್ರಿಯಾಲಾಸವ

ಎಂಬ ಜೀವನೌಷಧ.

ಜೀವನ (ಜಾಲುವಿಕೆ) ಎಂದರೇನೆಂಬದನ್ನು ನಮ್ಮ ಪ್ರಾಚೀನ ಜೀವಚಿಂತಕರು ನಾನಾ ರೀತಿಯಿಂದ ವಿಮರ್ಶಿಸಿ ಜೀವನದ ಸರ್ವಸ್ವವೂ ರಕ್ತವನ್ನು ಆಶ್ರಯಿಸಿಕೊಂಡಿರುವದೆಂದೂ ರಕ್ತವೇ ಜೀವ (ಜೀವರಕ್ಷಣ ಶಕ್ತಿ)ವೆಂದೂ ನಿರ್ಧರಿಸಿರುವರು. ರಕ್ತದಾಟಕ್ಕಾಗಿಯೇ ಸ್ನಾಯುವ್ಯಾಪಾರಗಳು ನಡೆಯುವವು. ರಕ್ತದ ಶುದ್ಧತ್ವಕ್ಕಾಗಿಯೂ ವೃದ್ಧಿಗಾಗಿಯೂ ಶ್ವಾಸ, ವೃಕ್ಕ, ಯಕೃತ್, ಪ್ಲೀಹ, ಹೃದಯ ಈ ಮೊದಲಾದ ಪ್ರತ್ಯಂಗಗಳಲ್ಲಿ ನಿಮೇಷ ನಿಮೇಷವೂ ಅತ್ಯದ್ಭುತ ವ್ಯಾಪಾರಗಳು ನಡೆಯುತ್ತಿರುತ್ತವೆ. ಜೀವಚಿಂತಕರು ಹೇಳುವಂತೆ ಯಾವಾತನ ಶರೀರದಲ್ಲಿ ಶುದ್ಧ ರಕ್ತವು ಓಡ್ಯಾಡಿಕೊಂಡಿರುತ್ತದೋ ಅವನೆ ಸರ್ವ ಪುರುಷಾರ್ಥಕ್ಕೆ ಪಾತ್ರನು. ಅವನಲ್ಲಿಯೇ ಪಂಚಜ್ಞಾನೇಂದ್ರಿಯ ಮತ್ತು ಪಂಚ ಕರ್ಮೇಂದ್ರಿಯಗಳು ತಮ್ಮ ವ್ಯಾಪಾರಗಳನ್ನು ನಿರಭ್ಯಂತರವಾಗಿ ನಡಿಸುತ್ತವೆ. ಧೈರ್ಯ, ಸ್ಥೈರ್ಯ, ಶೌರ್ಯ, ವಿವೇಕ, ಬುದ್ಧಿ ಮೊದಲಾದ ಸದ್ಗುಣಗಳಿಗೆ ನಿಧಿಯಾಗುವನು. ಜೀವ ರಕ್ತವು ಅಶುದ್ಧವಾದರೆ ಸರ್ವ ರೋಗಗಳು ತಲೆದೋರುವವು. ಅಜ್ಞಾನ, ಮೋಹ, ಭಯ, ಅಶಕ್ತಿ ಮೊದಲಾದ ಅವಗುಣಗಳು ಬಂದು ಸೇರಿಕೊಳ್ಳುವವು. ಈ ಜೀವ ರಕ್ತವು ಕೆಡದಂತೆ ನಮ್ಮ ಶರೀರದೊಳಗಣ ರಕ್ತಶೋಧನೆಯ ಕಾರ್ಖಾನೆಗಳಲ್ಲಿ ಕ್ರಮವಾಗಿಯೂ ಸ್ಥಿರವಾಗಿಯೂ ಕೆಲಸಗಳು ನಡಿಯುವಂತೆ ಪ್ರಿಯಾಲಾಸವವೆಂಬ ಜೀವನೌಷಧವನ್ನು ನಮ್ಮ ಪ್ರಾಚೀನರೇ ಕಂಡು ಹಿಡಿದಿರುತ್ತಾರೆ. ಪ್ರಕೃತ ಪ್ರಿಯಾಲಾಸವವನ್ನು ಆಯುರ್ವೇದ ಶಾಸ್ತ್ರರೀತ್ಯಾ ತಯಾರಿಸಿರುವೆವು. ರಕ್ತವನ್ನುವೃದ್ಧಿಪಡಿಸಿ ಉತ್ತಮವಾಗಿ ಕಾಪಾಡಿಕೊಳ್ಳಬೇಕೆಂದಿರುವವರು ಕೂಡಲೇ ಪ್ರಿಯಾಲಾಸವವನ್ನುತರಿಸಿ ಕೆಲವುಸಮಯ ಸೇವನೆಮಾಡಿದರೆ ತಮ್ಮ ಜೀವನವನ್ನು ದೀರ್ಘಕಾಲ ಆರೋಗ್ಯದಿಂದ ಇರಿಸಿಕೊಳ್ಳಬಹುದು. ಇನ್ನು ಗ್ರಹಣಿ ಅರುಚಿ ಮೂಲವ್ಯಾಧಿ ಅಜೀರ್ಣ ನೇತ್ರ ಮತ್ತು ದಮ್ಮುರೋಗ ಉಳ್ಳವರು ಪ್ರಿಯಾಲಾಸವವನ್ನು ಸೇವಿಸಿದರೆ ಈ ರೋಗಗಳಿಂದ ನಿವೃತ್ತರಾಗುವರು. ಇದನು ಉಪಯೋಗಿಸುವ ಕ್ರಮವು ಇದರೊಂದಿಗೆನೇ ಇರುವದು.

ಕ್ರಯ 6 ಔನ್ಸ್ ಬಾಟ್ಲಿಗೆ ರೂ. 1—8—0. ವಿ. ಪಿ. ಚಾರ್ಜು ಪ್ರತ್ಯೇಕ.

ಜಾಸ್ತಿ ಒಂದೇ ಸಲ ತರಿಸಿಕೊಳ್ಳುವವರಿಗೆ ಕಮಿಶನ್ ದೊರಕುವುದು.

ವಿಳಾಸ:— ಯಮ್. ವಿ. ಶಾಸ್ತ್ರಿ. ಆಯುರ್ವೇದ ಭೂಷಣ, ಮಂಗಳೂರು

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡೆದಿರುವ ಯಗ್ಸಿಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0-0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲ ಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎನ್. ಉಪಾಧ್ಯಾಯ

ಸುಗಂಧಕಾರ, ಮೈಸೂರು.

ಅನುಭವಸಿದ್ಧವಾದ ವನೌಷಧಗಳು.

೧. ಕುಂತಳಾವಂತ ತೈಲವು. [illegible] ಶಿರೋರೋಗ ನಾಶಕವು ಸುವಾಸಿತವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ನಾಲ್ಕು ಬಹುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨ ತ್ರಮೋಹರಿವು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು ಬಾಟ್ಲಿಗೆ ೨ ೮-೦

೩. ಪಂಚಜೀರಕ ಪಾಕ. ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು ರಾತಲಿಗೆ ೨ ರೂ

೪. ಸೂರಣಾವ ಲೇಹ. ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಮೇಲೆ ಅತ್ಯುತ್ತಮವು. ಪೌಷ್ಟಿಕವಾಗಿದೆ ರಾತಲಿಗೆ ೨ ರೂ

೫ ಪ್ಲೀಹೋದರಾರಿ ಚೂರ್ಣ. ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. ಜಗನ್ಮೋಹನ ದಂತಮಂಜನ. ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. ಸರಳಭೇದಿ ಮಾತ್ರೆ. ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ

ನಮ್ಮ ವಿಳಾಸ — ಬಿ ಎಮ್. ನಾಥ್ ಮತ್ತು ಕಂಪೆನಿ,

ವೇಪರಿ ಪೋಸ್ಟು ಮದರಾಸು.

೮. ಮಹಾಜ್ವರಾಂಕುಶ ಮಾತ್ರೆ. ಚಳಿಜ್ವರ, ಪರಿಸರೆಯ ಜ್ವರ ಮುಂತಾಗಿ ಎಲ್ಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ ತೊಲೆಗೆ ೨ ರೂ.

೯. ವಾಸಾವ ಲೇಹ. ಕೆಮ್ಮು, ಗುರ್ಲುಶ್ವಾಸ, ಕಫ, ಕ್ಷಯಗಳ ಮೇಲೆ ರಾಮಬಾಣವು. ರಾತಲಿಗೆ ೨ ರೂ.

೧೦ ಶಾಲ್ಮಲೀ ಪಾಕ ಸ್ವಪ್ನಾವಸ್ಥೆ, ಮೂತ್ರದಲ್ಲಿ ಧಾತುಪತನ, ದುರ್ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಗೊಳಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. ರಾತಲಿಗೆ ೩ ರೂ.

೧೧. ವಾತಮುರಾರಿ ಬಾಮ್. ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನೂ ಕೂಡಲೆ ಗೆಲ್ಲುವದು. ಬಾಟ್ಲಿಗೆ ೮ ಆಣೆ ೩ ಬಾಟ್ಲಿಗೆ ೧ ರೂ ೬ ಆಣೆ.

೧೨ ಗಜಕರ್ಣ ಕೇಸರಿ ಮುಲಾಮು. ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. ಉರಿಯುವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩ ಸವ್ವೀರಾಂಜನ (ಸುರುಮಾ). ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. ತೊಲೆಗೆ ೧ ರೂ.

೧೪ ಪ್ರಜ್ಞಾ ಸಾರಸ್ವತ ಚೂರ್ಣ. ಉನ್ಮಾದ, ಅಪಸ್ಮಾರ, ಉಗ್ಗುಮಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯವಾದ ಎಲ್ಲ ಔಷದಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಕನ್ನಡ ಕೆಟಲಾಗು ನೋಡಿರಿ ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು

B M Nath & Co, *Ayurvedic Chemists,*

Vepery Post, MADRAS

ಪಾಳ್ಯದ ವೆಂಕಟಾಚಲ ಪಂಡಿತರ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆ:—ಈ ಮಾತ್ರೆಗಳನ್ನು ಹವಳದ ಭಸ್ಮ, ಚಿನ್ನದ ಬೇರು, ಉತ್ತಮವಾದ ಕಸ್ತೂರಿ ಮೊದಲಾದ ಹೆಚ್ಚು ಬೆಲೆಯುಳ್ಳ ಪದಾರ್ಥಗಳ ಮಿಶ್ರದಿಂದ ತಯಾರಿಸಿದೆ ಚಳಿಜ್ವರ, ಜ್ವರ, ಹೊಟ್ಟೆ ಶೂಲೆ, ಸಂದುಗಳ ನೋವು, ಮೈ ಕಾಲು ಹೊಡೆತ (ಬಾರ), ಮೈ ನಡುಕ, ಶೀತವಾತಗಳ ಬಾಧೆ, ಅಜೀರ್ಣ, ಅಗ್ನಿನಷ್ಟ, ಹಲ್ಲುನೋವು, ಕೆಮ್ಮಲು, ನೆಗಡಿ, ನಿಶ್ಶಕ್ತಿ, ಅರೋಚಕ, ಇನ್ನೂ ಅನೇಕ ರೋಗಗಳಿಗೆ ಕೊಟ್ಟರೆ ಖಂಡಿತವಾಗಿ ಗುಣಪಡಿಸುತ್ತದೆ ತಾಂಬೂಲದೊಡನೆ ಅಥವಾ ಹಾಗೆಯೇ ಉಪಯೋಗಿಸುತ್ತಿದ್ದರೆ ಬಹಳ ಹೊತ್ತು ಸುವಾಸನೆಯಾಗುತ್ತಾ, ಎಂತಹ ಆಹಾರವನ್ನಾದರೂ ಜೀರ್ಣಗೊಳಿಸಿ, ಯಾವ ಕಾಯಿಲೆಗೂ ದಾರಿಕೊಡದೆ, ನೀರುಗಳ ಹವಾ ಬದಲಾವಣೆಯನ್ನು ಸರಿಪಡಿಸಿ, ರಕ್ತದಲ್ಲಿಯ ದೋಷವನ್ನು ತೆಗೆದು ಶುದ್ಧಿಮಾಡಿ ವೃದ್ಧಿಪಡಿಸುತ್ತದೆ. ಸ್ತ್ರೀಯರ ಹುಟ್ಟು ಶೂಲೆ, ಮಕ್ಕಳ ಎಳವು, ಜ್ವರ, ನಡುಜ್ವರ, ಕ್ಷಯಕ್ಷಗಳನ್ನು ಗುಣಪಡಿಸುತ್ತದೆ ಇದನ್ನು ಸೇವಿಸುತ್ತಿರುವವರು ಖಂಡಿತವಾಗಿಯೂ ಪ್ಲೇಗಿನ ಸೋಂಕಿಗೆ ಗುರಿಯಾಗುವದಿಲ್ಲ. ಒಳ್ಳೇ ಶಕ್ತಿವರ್ಧಕವಾಗಿದೆ.—220 ಮಾತ್ರೆಗಳುಳ್ಳ ಕುಪ್ಪಿಗೆ 4 ಆಣೆ, 5 ಕುಪ್ಪಿಗೆ ಒಂದು ಕುಪ್ಪಿ ಹೆಚ್ಚು, 1ರಿಂದ 12 ಕುಪ್ಪಿ ವರೆಗೆ ಪೋಸ್ಟೇಜು 4 ಆಣೆ.

೨ ವೈಶ್ವಾನರಾಸವ (ಕಾಲರಾ ಔಷಧ).

ವಾಂತಿಭೇದಿ (ಕಾಲರಾ), ಶೀತಭೇದಿ, ಅಜೀರ್ಣದ ಭೇದಿಗಳಿಗೆ ಈ ವೈಶ್ವಾನರಾಸವವು ಸಂಜೀವನವಾಗಿದೆ, ಕೈಮೀರಿತೆಂದು ತೋರಿದಾಗಲೂ ಆಶ್ಚರ್ಯವಾಗುವಂತೆ ರೋಗದ ಮೇಲೆ ಕೆಲಸ ಮಾಡುತ್ತದೆ. ಖಂಡಿತವಾಗಿ ಇದರಲ್ಲಿ ಅಫೀಮು ಸೇರಿಲ್ಲ. ಹೊಟ್ಟೆಯುಬ್ಬರಿಸದೆ, ಮೂತ್ರ [illegible] ಮೊದಲನೇ ವೇಳೆಯಲ್ಲೇ, ಗುಣವು ತೋರುತ್ತದೆ. ಸಮಯದಲ್ಲಿ [illegible]! ಒಂದೇ ಒಂದು ಬುದ್ಧಿಯು ನಿಮ್ಮಲ್ಲಿರಲಿ! ಇತರೋಪಚಾರ ಸಹಾಯವನ್ನು ಅಪೇಕ್ಷಿಸದೆ ಕಾಲರಾವನ್ನು ಬೇಗನೆ ಗುಣಪಡಿಸುವ ಸಿದ್ಧಾಮೃತ ಇದೊಂದೇ.

ಅನುಪಾನ ಪತ್ರವು ಔಷಧದೊಡನೆ ಇರುವುದು. ಬೆಲೆ ರೂ. 1; ಟಪಾಲ್ ಖರ್ಚು ಬೇರೆ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ.

ನಮ್ಮ ವಿಳಾಸ:—ಶ್ರೀ ಸೀತಾರಾಘವ ವೈದ್ಯಶಾಲಾ

ಮೈಸೂರು.

ಡೋಂಗರೆ ಇವರ ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ ಎಲ್. ಎಲ್. ಬಿ. ಹೆಡ್ ಮಾಸ್ತರ ಹೈಸ್ಕೂಲು ಜುನಾಗಡ ಇವರು ಬರೆದದ್ದು.

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು ಚಿಕ್ಕ ಮಕ್ಕಳಿಗೆ ಬಹು ಗುಣವುಳ್ಳದ್ದೆಂದು ನನಗೆ ಪೂರ್ಣ ಕಂಡುಬಂತು. ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

ಬಾಟ್ಲಿ ಒಂದರ ಕಿಮ್ಮತ್ತು 0—12—0. ಟಪ್ಪಾಲ ಖರ್ಚು 0-4-0

K. T. Dongre & Co., ಕೆ. ಟಿ. ಡೋಂಗರೆ ಮತ್ತು ಕಂಪನಿ

Girgaon Bombay ಗಿರಗಾಂವ ಮುಂಬಯಿ

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಮಾಯ ವಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಡಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯ ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯ ಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ

ದಿನೇ ದಿನೇ ಇವರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ ಡಿ. ಅಂಡ್ರ್ಯೂಸ್ ಎಮ್. ಎಮ್ ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ — ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

Estd. 1888 ಸ್ಥಾಪನೆ 1888.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರಿ ಮತ್ತು ಕಟವಾಯಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ ೨೦–೨೫ ವರ್ಷಗಳ ಹಳತ, ಮೈಮನೆ ಮಾಡಿಕೊಂಡಿದ್ದಂಥ ಗಜಕರ್ಣವಿದ್ದರೂ ಇವರಿಂದ ನಾಶಹೊಂದುವದು ನಿಶ್ಚಯವೇ. ಬೆಲೆ ಬಾಟ್ಲಿ ೧ಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ಬೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಜಖಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪೀನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವ್ರೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರಿ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ೧ಕ್ಕೆ ರೂ. ೧—೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ ಕಂಪನಿ ಗಿರಗಾಂವ ನಂ ೪ ಮುಂಬಯಿ.

ಒಂದೇ ತಿಂಗಳು! ಮಿಂಚಿ ಹೋದ ಮೇಲೆ ಚಿಂತಿಸ ಬೇಡಿ!!

ಅಲ್ಪ ಬೆಲೆ!!!

ಬೇರೆ ಬೇರೆ ಪುಸ್ತಕಗಳಿಗೆ ವೃಥಾ ಹೆಚ್ಚು ಹಣವನ್ನು ವೆಚ್ಚ ಮಾಡಬೇಡಿ!!

ಸುಳ್ಳಿಗೆ ನೂರಾರು ದಾರಿ! ನಿಜಕ್ಕೆ ಒಂದೇ ದಾರಿ!!

ನಿಮ್ಮ ಪರೀಕ್ಷೆಗಾಗಿ ಮೊದಲು ಒಂದು ಪ್ರತಿ ಮಾತ್ರ ೧-೮-೧ ಗೆ ಟಪ್ಪಾಲು ಖರ್ಚು ಇಲ್ಲದೆ ದೊರೆಯುತ್ತೆ.

೩ ಪುಸ್ತಕಗಳೂ ಒಟ್ಟಾಗಿ ಒಂದರಲ್ಲೇ ಬೈಂಡಾಗಿವೆ.

ಈ ದಿನವೇ ಒಂದು ಕಾರ್ಡು ಬರಿಯಿರಿ! ಬೇಗ ಬೇಗ ಬರಿಯಿರಿ!!

ಬಹುಮಾನ— ಒಟ್ಟಾಗಿ ತರಿಸಿಕೊಳ್ಳುವವರಿಗೆ, ೭ ಪ್ರತಿಗೆ ಒಂದು ಉತ್ತಮವಾದ ಭಗವದ್ಗೀತ [ಟೀಕು, ತಾತ್ಪರ್ಯ ಸಹ ಉಳ್ಳದ್ದು] ೫ ಪ್ರತಿಗೆ ೧ ಪ್ರತಿ ಉಚಿತ ಅಂಚೆ ವೆಚ್ಚ ಮಾಫಿ

೩೦ ಭಾಗಗಳೂ ಒಂದರಲ್ಲೇ ಅಡಗಿವೆ

ಆಂಗ್ಲಭಾಷಾ ಪ್ರಕಾಶಕ

ಒಂದೇ ತಿಂಗಳು ಟ್ರಾಯಲ್ ಎರ್ಚಿಲ್ಲ.

(ಸ್ವತಃ ಇಂಗ್ಲೀಷು ಕಲಿಯುವುದಕ್ಕೆ ಅತ್ಯುಪಯೋಗವಾದದ್ದು)

ಇದರಲ್ಲಿ ಇಂಗ್ಲೀಷು ವರ್ಣಮಾಲೆ, ಬರಿಯುವ ಸಾಧನೆಗಳು, ಶಬ್ದಸಂಯೋಜನ, ಸ್ವರಾಕ್ಷರಗಳ ವಿದ ವಿಧ ಶಬ್ದಾಭ್ಯಾಸ, ಉಚ್ಚಾರಣೆ—ಅರ್ಥ, ವಾಕ್ಯಗಳನ್ನು ಜೋಡಿಸುವ ಕ್ರಮ, ಲಿಪ್ಪಿಗಳು, ಪಾಠಶಾಲೆಯಲ್ಲಿ ೫ ವರ್ಷ ಕಲಿಯುವಷ್ಟು ವ್ಯಾಕರಣ ವಿದಿ, ವಿಧಾನಗಳು, ಇವುಗಳಿಗೆ ನೂರಾರು ಸಾಧನೆಗಳು, ನಾನಾ ವಿಧ ವಾಕ್ಯಗಳನ್ನು ಮಾಡುವ ಶುಲಭ ಅಭ್ಯಾಸಗಳು, ಇಂಗ್ಲೀಷು ಸಂಪ್ರದಾಯ ಮತ್ತು ಭಾಷಾ ಶೈಲಿ, ಮತ್ತು ಭಾಷಾಂತರ ಮಾಡುವ ವಿದಾನಗಳು, ಇವುಗಳಿಗೆ ನೂರಾರು ಸಾದನೆಗಳು, ಬಾಷಾ ಜ್ಞಾನಕ್ಕೆ ಬೇಕಾದ ಅನೇಕ ಚಿಕ್ಕ ಕಥೆಗಳು, ಸಂಭಾಷಣಾ ಕ್ರಮಗಳು, ಸಂಭಾಷಣೆಯಲ್ಲಿ ಪ್ರತಿಯೊಂದು ವಿಷಯಕ್ಕೂ ಬೇಕಾಗುವ ಕನ್ನಡ—ಇಂಗ್ಲೀಷ್, ಇಂಗ್ಲೀಷ್—ಕನ್ನಡ ಶಬ್ದಕೋಶ (ನಾಣ್ಣುಡಿಯ ನಿಘಂಟು) ೬೪ ಪುಟಗಳು, ಪ್ರಶ್ನೋತ್ತರ ರೂಪವಾದ ಸಂಭಾಷಣಾ ವಾಕ್ಯಗಳು ೬೦೦, ಕನ್ನಡ—ಇಂಗ್ಲೀಷು ಗಾದೆಗಳು ಸಾಂಕೇತಿಕ ಲೇಖನ ಚಿನ್ಹೆಗಳು ತಂತೀ ವರ್ತಮಾನ, ಕ್ಷೇಮಸಮಾಚಾರ, ಲೇವಾದೇವಿ ಕಾಗದಗಳು, ಅರ್ಜಿಗಳು, ಮುಂತಾದುವು ಬರಿಯುವ ಅಭ್ಯಾಸಗಳು, ಇವುಗಳಿಗೆ ನೂರಾರು ಮಾದರಿಗಳು ಅಡಿಗಿವೆ ಹೆಚ್ಚು ಪ್ರತಿಗಳಿಲ್ಲ. ತ್ವರೆ ಮಾಡಿರಿ ಕ್ರಯ **1-8-0.**

☞ ನಮ್ಮ ವಿಳಾಸ—

ಎ. ವಿ. ರಾಯಲು,
ಅವೆನ್ಯೂ ರೋಡು,
ಬೆಂಗಳೂರು ಸಿಟಿ.

ಹೊಸ ಪುಸ್ತಕ 1344 ಪುಟಗಳು!! ಹೊಸ ಪುಸ್ತಕ 1344 ಪುಟಗಳು!!

ಬ್ರ॥ ಶ್ರೀ ॥ಬಿ. ವಿ. ಸುಬ್ರಹ್ಮಣ್ಯ ಶರ್ಮ ವಿರಚಿತವಾದ

ಸುಧಾರಸಧಾರಾ ಎಂಬ

ಕನ್ನಡ ಟೀಕಾ ತಾತ್ಪರ್ಯ ಉದಾಹರಣೆಗಳಿಂದೊಡಗೂಡಿದ

ಬೃಹಜ್ಜಾತಕಾಖ್ಯ ಹೋರಾ ಶಾಸ್ತ್ರಂ.

ಮಾನವನು ತನ್ನ ಅದೃಷ್ಟ ಚಕ್ರದ ಫಲಾಫಲಗಳನ್ನು ಅರಿತು ಮುಂದೊದಗಬಹುದಾದಫಲಸ್ವರೂಪವನ್ನು ಇತರರ ಸಹಾಯವಿಲ್ಲದೆ ತಿಳಿದುಕೊಂಡು ದುಷ್ಟ ಫಲಗಳು ದೂರವಾಗಿ ಸುಫಲಗಳು ಕರಗತವಾಗುವಂತೆ ಮಾಡುವಂತಹ ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ ನಮ್ಮಿಂದ ಈಗ ತಾನೇ ಸಂಸ್ಕೃತ, ಹಿಂದಿ, ಮಾರಾಟಿ ಬಾಷೆಗಳಿಂದ ತರ್ಜುಮೆ ಮಾಡಿ ಪ್ರಕಾಶಗೊಂಡ "ಸುಧಾರಸಧಾರಾ" ಎಂಬ ಕನ್ನಡ ಟೀಕಾ ತಾತ್ಪರ್ಯ ಉದಾಹರಣೆಗಳಿಂದ ಮಾಡಿದ ಬೃಹಜ್ಜಾತಕವೆಂಬ ಹೋರಾ ಶಾಸ್ತ್ರ ಒಂದಲ್ಲದೆ ಮತ್ಯಾವದೂ ಸಮರ್ಥವಾಗಿಲ್ಲವು. 1344 ಪುಟ 2 ಭಾಗಗಳ ಪುಸ್ತಕ ಒಂದೇ ಬ್ಯಾಂಡ್ ಈ ಗ್ರಂಥರತ್ನವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ ಹೆಂಗಸರೂ ಸಹಾ ಪರರ ಸಹಾಯಾಪೇಕ್ಷೆಯಿಲ್ಲದೆ ಓದಿ ತಿಳಿಯಲು ಅನುಕೂಲವಾಗಿರುವದು ಇದರೊಳಡಗಿರುವ 28 ಪ್ರಕರಣಗಳಲ್ಲಿ ವಿಷಯ ಸಂಗ್ರಹವೆಂತೆಂದರೆ:—1. 2ನೇ ಪ್ರಕರಣಗಳಲ್ಲಿ ಶಾಸ್ತ್ರ ಪ್ರಯೋಜನವೂ, ಜ್ಯೋತಿಶ್ಶಾಸ್ತ್ರದ ಪೀಠಿಕಾ ಭಾಗಗಳೂ 3 ಸಜೀವ ನಿರ್ಜೀವಗಳ ಉತ್ಪತ್ತಿ 4 ಗರ್ಭಧಾರಣ ಯೋಗಗಳು, 5 ಜನನ ಕಾಲ ಲಕ್ಷಣ ಮತ್ತು ಫಲ, 6 ಬಾಲಾರಿಷ್ಟ ವಿಚಾರ ಅವುಗಳ ನಿವಾರಣೋಪಾಯಗಳು, 7 ಆಯುರ್ದಾಯ ವಿಚಾರ, 8 ದಶಾಭುಕ್ತಿ ನಿರ್ಣಯ, 9 ಅಷ್ಟಕ ವರ್ಗ ವಿಚಾರ, 10 ಜೀವನೋಪಾಯ ವಿಚಾರ, 11 ರಾಜಯೋಗ ಸೂಚನೆ ಅವುಗಳ ಫಲ ವಿಚಾರ, 12 1800 ಯೋಗಗಳ ಲಕ್ಷಣ ಮತ್ತು ಫಲ, 13 ಚಂದ್ರ ಸಂಬಂದವಾದ ಯೋಗಗಳು, 14 ಒಂದಕ್ಕಿಂತಲೂ ಹೆಚ್ಚು ಗ್ರಹಗಳು ಒಂದೇ ಕಡೆ ಸೇರಿದರೆ ಅವುಗಳ ಫಲ, 15 ಸನ್ಯಾಸಿಗಳ ಯೋಗಗಳು, 16 ನಕ್ಷತ್ರಗಳ ಫಲಗಳು, 17 ರಾಶಿ ಫಲಗಳು, 18 ರಾಶಿಗಳ ಫಲ ಮತ್ತು ಕೇರಳೀಯೋಕ್ತ ಫಲಗಳು, 19 ದೃಷ್ಟಿ ಫಲಗಳು, 20 ಭಾವ ಲಕ್ಷಣ, ಆ ಫಲಗಳ ವಿಚಾರ, 21 ಕ್ಷೇತ್ರಫಲಗಳು, **22.** ಗ್ರಹಗಳ ಅವಸ್ಥೆ ಅಷ್ಟಕ ವರ್ಗ ಫಲ, 23 ಅನಿಷ್ಟಯೋಗಗಳು, ಅವುಗಳಿಂದಾಗುವ ಫಲಗಳು, 24 ಸ್ತ್ರೀಜಾತಕವ ಅದರ ಫಲಗಳು, 25 ಮರಣ ಕಾರಣ ಅದರ ಫಲಗಳು, 26 ನಷ್ಟಜಾತಕ ಬರಿಯುವ ರೀತಿ, 27 ದ್ರೇಕ್ಕಾಣ ವರ್ಣನೆ, ಪ್ರಶ್ನೆಗೆ ಬೇಕಾದ ಸಹಾಯ ವಿಷಯ, 28 ಅನುಕ್ರಮಣಿಕಾ ಸಂಗ್ರಹ, ಗ್ರಂಥಕರ್ತರ ವರ್ಣನೆ ಮೇಲೆ ಹೇಳಿರುವಂತೆ ಬರಿಯಲ್ಪಟ್ಟ ಒಂದು ಪುಸ್ತಕ ತಮ್ಮ ಬಳಿಯಲ್ಲಿದ್ದರೆ **10** ಜನ ಜ್ಯೋತಿಷಜ್ಞರಿದ್ದರೆ ಎಷ್ಟು ಅನುಕೂಲವೋ, ಅಷ್ಟು ಅನುಕೂಲ ಇದು ಪ್ರೌಢರಿಗೂ ಸ್ತ್ರೀಯರಿಗೂ, ಧಾರಾಳವಾಗಿ ತಿಳಿಯುವಂತೆ ಉತ್ತಮ ಕಾಗದದಲ್ಲಿ ಪ್ರಿಂಟ ಮಾಡಿಸಿದೆ ಈ ತಿಂಗಳು ಅಖೈರಿನೊಳಗಾಗಿ ಆರ್ಡರ್ ಕೊಡುವವರಿಗೆ **4—0—0** ರೂಪಾಯಿ ವಿ ಪಿ ಚಾರ್ಜು 0—6—0 ಆಣೆ ಅನಂತರ 5—0—0 ರೂಪಾಯಿ. ಜಾಗ್ರತೆ ತರಿಸಿಕೊಳ್ಳಿ ಅನಂತರ ಈ ಬೆಲೆಗೆ ದೊರೆಯಲಾರದು. ಟೀಕಾ ಜೈಮಿನಿ 930 ಪುಟ 4—0—0 ರೂ ಸಟೀಕಾ ಹರಿಕಥಾಮೃತಸಾರ 344 ಪುಟ ರೂ. 1—4—0 ಕನ್ನಡ ದ್ವಾದಶಸ್ಕಂದ ರೂ 3—0—0. ಶುಕ ಸಪ್ತತಿ 70 ಕಥೆ ಶುದ್ಧ ಪ್ರತಿ ರೂ 2—0—0 4 ಜನ ಫಕೀರರ ಕಥೆ ರೂ. 0—8—0. ಸಟೀಕ ಭೋಜರಾಜ ಚರಿತ್ರೆ ರೂ 0—8—0 ಮತ್ತು ನಮ್ಮಲ್ಲಿ ಯಾವಾಗ್ಯೂ ಕನ್ನಡ, ಸಂಸ್ಕೃತ, ತೆಲಗು ವಗೈರೆ ಪುಸ್ತಕಗಳು ದೊರೆಯುತ್ತೆ.

ಟಿ. ಎನ್. ಕೃಷ್ಣಯ್ಯ ಶೆಟ್ಟಿ
ಬುಕ್ ಡಿಪೋ,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ನಮ್ಮ ಏಜಂಟರು:—ಎಂ. ಸುಬ್ಬರಾವ್
ಬುಕ್ ಸೆಲ್ಲರ್,
ಶಂಕರಪುರಂ, ಬೆಂಗಳೂರು ಸಿಟಿ.

ಹಾರ್ಮೋನಿಯಂ ಸ್ವಯಂ ಬೋಧಿನೀ.

ಕನ್ನಡದಲ್ಲಿ ಇಂತಹ ಪುಸ್ತಕವು ಇದುವರೆಗೆ ಒಂದಾದರೂ ಪ್ರಕಟವಾಗಿಲ್ಲ. ಉತ್ತರ ಕರ್ಣಾಟ, ಮಧ್ಯ ಕರ್ಣಾಟ, ಮತ್ತು ದಕ್ಷಿಣ ಕರ್ಣಾಟ ಈ ಮೂರು ರಾಜ್ಯಗಳಲ್ಲಿರುವ ಕನ್ನಡಿಗರಿಗೂ ಅನುಕೂಲಿಸುವಂತೆ ಪುರಂದರ ದಾಸರ ಕೀರ್ತನೆಗಳೇ ಮುಂತಾದ ಕನ್ನಡ ಕೀರ್ತನೆಗಳನ್ನು ಮಾತ್ರವೇ ಆರಿಸಿ ಎಲ್ಲರೂ ತಿಳಿದುಕೊಳ್ಳುವಂತೆ ಸುಲಭ ಮಾರ್ಗದಲ್ಲಿ ಬರೆದಿದೆ. ಇದರಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಸ್ವರಸ್ಥಾಯಿಗಳೂ ವಿವರವಾಗಿ ಕೊಟ್ಟಿರುವುದರಿಂದ ಯಾವ ವಿಚಾರದಲ್ಲಿಯೂ ಸಂದೇಹಕ್ಕೆ ಆಸ್ಪದವೇ ಇರುವುದಿಲ್ಲ. ಹಾರ್ಮೋನಿಯಂ ಬೋಧಕರಿಗೂ ಇದರಿಂದ ಅನೇಕ ವಿಷಯಗಳು ತಿಳಿಯಬರುವವು.

ಬೆಲೆ ಆಣೆ ೧—೪—೦. ಅಂಚೆ ವೆಚ್ಚ ಬೇರೆ.

ಕೊರವಂಜಿ ನಾಟಕ ಗಕ್ಕೆ	೦—೧೪—೦
ದುರ್ಗೇಶ ನಂದಿನಿ ,,	೧—೪—೦
ವ್ರತಚೂಡಾಮಣಿ	೧—೦—೦
ಕಿರಿ ವ್ರತವುಳ್ಳ ವ್ರತವಲ್ಲಿಗಕ್ಕೆ	೦—೮—೦
ವ್ಯಾಪಾರ ಧರ್ಮಸೂಚಿಕೆ ,,	೦—೬—೦
ನವೀನ ಭರತಖಂಡ ,	೦—೫—೦
ಬಸವರಾಜೇಂದ್ರ ವಿಜಯ ,	೦—೧೨—೦
ಮುಕುಂದ ಮಾಲಾ ಸ್ತೋತ್ರ ,	೦—೨—೦
ಮಹಿಮ್ನ ಸ್ತೋತ್ರ ,	೦—೩—೦
ಶುಕಸಪ್ತತಿ	೧—೬—೦

ಮೇಲ್ಕಂಡ ಪುಸ್ತಕಗಳನ್ನು ೧ ೦ ೦ ಕಮ್ಮಿ ಇಲ್ಲದೆ ತರಿಸಿಕೊಳ್ಳತಕ್ಕವರಿಗೆ "ತಿಲಕ್ ಚರಿತ್ರೆ ೧, ಪತ್ರವ್ಯವಹಾರದ ಮೂಲಕ ವ್ಯಾಪಾರ ಮಾಡುವ ಪ್ರಯೋಜನ ೧, ಈ ಎರಡು ಪುಸ್ತಕಗಳೂ ಬಹುಮಾನವಾಗಿ ಕೊಡುವೆವು. ಡಾಕಲು ಪ್ರತ್ಯೇಕ.

ವಿಳಾಸ:— ಎಚ್ ಎನ್ ರಾವ್ ಆಂಡ್ ಬ್ರದರ್ಸ್,
ಪುಸ್ತಕ ವ್ಯಾಪಾರಸ್ಥರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬರ್ಮಿಸ್ ಬ್ಯುಟಿ ಒಯಿಲ್

ಎಂಬ

ಬರ್ಮಾದೇಶದ ಸೌಂದರ್ಯ.

ಯುವತಿಗಳ ಉಪಯೋಗದ ಈ ತೈಲವು ಬಹಳ ಮನೋಹರವಾದ ಸುವಾಸನೆಯುಳ್ಳ ಶಿರೋ ತೈಲವಾಗಿರುವುದು. ಪುಷ್ಪರಾಶಿಯಲ್ಲಿ ಅತೀ ದಿವ್ಯವಾದವುಗಳ ಮತ್ತು ಉಪಯೋಗಕ್ಕೆ ಹಿತಕರವಾದವುಗಳ ಪರಿಮಳ ಸಾರದಿಂದ ನೂತನ ಶಾಸ್ತ್ರೋಕ್ತ ವಿಧಾನಗಳ ಪ್ರಕಾರ ಈ ಎಣ್ಣೆಯು ತಯ್ಯಾರಿಸಲ್ಪಟ್ಟದ್ದಾಗಿರುವುದು. ಇದರ ಸುವಾಸನೆಯು ದೀರ್ಘಕಾಲ ಉಳಿಯುವುದಲ್ಲದೆ, ಕೂದಲು ಉದುರಿ ಬೀಳುವುದು, ಬೋಳತಲೆ, ತಲೆಹಾಶಿ, ಮೊದಲಾದ ಶಿರೋರೋಗಗಳು ಈ ತೈಲ್ಯ ಉಪಯೋಗದಿಂದ ಎಂದೂ ಪ್ರಾಪ್ತವಾಗವು. ಶಿರೋರೋಗಗಳನ್ನು ಗುಣಪಡಿಸುವ ವಿಶೇಷ ಗುಣವು ಸಹ ಈ ತೈಲ್ಯಕ್ಕೆ ಇದೆ. ಸ್ನೇಹಿತರೇ ಮೊದಲಾದವರಿಗೆ ಉತ್ಸವ, ಹಬ್ಬ ಮೊದಲಾದ ವಿಶೇಷ ದಿನಗಳಲ್ಲಿ ಇನಾಮಾಗಿಕೊಡುವಮ್ಮ ಚಲೋದಾಗಿರುವುದು. ಒಮ್ಮೆ ಉಪಯೋಗಿಸಿದವರಿಗೆ ಪೂರ್ಣ ಸಮಾಧಾನವನ್ನು ಕೊಡುತ್ತಿರುವುದರಿಂದ ಸರ್ವರಿಂದಲೂ ಧಾರಾಳವಾಗಿ ಉಪಯೋಗಿಸಲ್ಪಟ್ಟು ಭರತಖಂಡದ ಅತ್ಯುತ್ತಮವಾದ ವಸ್ತು ಎಂದು ಖ್ಯಾತಿಗೊಂಡಿರುವುದು. ಒಂದು ಕೈಗನ್ನಡಿ, ಬಾಚಣಿಕೆಗಳನ್ನು ಕೂಡಿರುವ ಎಣ್ಣೆ ಬಾಟ್ಲಿ ಒಂದಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ವಿನಹ. ಮೂರು ಬಾಟ್ಲಿಗಳಿಗೆ ರೂ. ೩. ಟಪ್ಪಾಲು ಖರ್ಚು ಇಲ್ಲ.

ಯುತೊಡ್ಯಾನ್.

ಹಲವು ವರುಷಗಳಿಂದ ಯುತೊಡ್ಯಾನ್ ಎಂಬುವ ಈ ಔಷಧಿಯು ಸರ್ವ ಕಡೆಯಲ್ಲಿಯೂ ಖ್ಯಾತಿಪಡೆದಿರುವುದು. ನರಸಂಸ್ಥಾಯುವನ್ನು ಬಲಪಡಿಸುವ ಧಾತುವರ್ಧಕ ಈ ಔಷಧಿಯು ಎಂಥಾ ತರದ ನಿರ್ಬಲತ್ವವನ್ನಾದರೂ ಹೋಗಗೊಳಿಸುವುದು. ಸಾವಿರಾರು ಜನರು ಇದನ್ನು ಉಪಯೋಗಿಸಿದ್ದಲ್ಲಿ ಇದು ಬಹಳ ತೃಪ್ತಿಕರವಾದ ಔಷಧಿ ಎಂತ ಕಂಡುಬಂದದೆ. ಈ ದಿನವೇ ಒಂದು ಸೀಸೆಗೆ ಬರೆದುಹಾಕಿರಿ.

ಬಾಟ್ಲಿ ಒಂದರ ಕ್ರಯ 2—8—0. ವಿ. ಪಿ. ಚಾರ್ಜು ಬೇರೆ.

ಒಟ್ಟೊ ಪೆರೆಡ್ಯಾಸ್.



ಮಧುರ, ಕೋಮಲ, ಬಹಳ ಕಾಲ ಉಳಿಯುವ, ಅತೀ ಮನೋಹರವಾದ ಸುವಾಸನೆಯನ್ನು ಬೀರುವಂಥಾದ್ದು. ಪ್ರಕೃತಿಯ ಸುವಾಸನೆಯುಳ್ಳ ಪುಷ್ಪಗಳಿಂದ ಸಂಗ್ರಹಿಸಲ್ಪಟ್ಟು ಸ್ಪಿರಿಟ್ ಅಥವಾ ಮದ್ಯಗಳ ಮಿಶ್ರಣದಿಂದ ಅಶುದ್ಧವಾಗದೆ ಇರುವ ಅತ್ಯುಪಯುಕ್ತ ಪರಿಮಳ ದ್ರವವು. ಕೈವಸ್ತ್ರ ಅಥವಾ ಅಂಗಿಯ ತೋಳಿನ ಅಂಚಿಗೆ ಒಮ್ಮೆ ಈ ಪರಿಮಳ ದ್ರವವನ್ನು ಹಚ್ಚಿದರೆ ಮೂರು ದಿವಸಗಳ ತನಕ ಗಮಗಮಿಸುವ ಪುಷ್ಪತೋಟದ ಪರಿಮಳವನ್ನು ಬೀರುತ್ತಿರುವುದು. ಇಂಥಾ ಪರಿಮಳವಿಲ್ಲವೆಂತ ಕಂಡುಬಂದರೆ ರೂ. ೧೦೦ನ್ನು ಇನಾಮಾಗಿ ಕೊಡುವೆವು. ಇತರ ಎಂಥಾ ಬಿರುಸಾದ ಪರಿಮಳಗಳ ಎಡೆಯಲ್ಲಿಯೂ 'ಒಟ್ಟೊ ಪೆರೆಡ್ಯಾಸ್' ಇದರ ಪರಿಮಳವೇ ಎಲ್ಲವುಗಳಿಗಿಂತ ಮೇಲಾಗಿ ಬರುವುದು.

ಚಿಕ್ಕ ಸ್ಯಾಚಿನದಕ್ಕೆ	0—8—0.
ನಡುತರದ್ದಕ್ಕೆ	0-12—0.
ದೊಡ್ಡ ಸ್ಯಾಚಿಗೆ	1-14—0.

ವಿ. ಪಿ. ಚಾರ್ಜು 4 ಆಣೆ. ಅರ್ಧಾಣೆಯ ಟಪ್ಪಾಲು ಚೀಟುಗಳನ್ನು ಕಳುಹಿಸುವವರಿಗೆ ಪರಿಮಳದ ಕಾರ್ಡನ್ನು ಇತರ ಯಾವ ಖರ್ಚೂ ಇಲ್ಲದೆ ಕಳುಹಿಸಿಕೊಡುವೆವು.

ದಿ ಫ್ಲೋರಲ್ ಪರ್‌ಫ್ಯುಮರಿ ಕಂಪೆನಿ,
ಮುಂಬಯಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೀಕುಗಳೂ, ಬೇರೆ ಅನೇಕ ತರದ ಸ್ವದೇಶಿ ಚೀಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬ್ಲ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ಧೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೀಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.



ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜಿ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು.

ಲೋಕಪ್ರಸಿದ್ಧವಾದ ಪಂಜಾ ಸಾಲಾಮಿಸ್ರಿ ಮುರಬ್ಬಾ.

ಎರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದ ಬಹಳವಾಗಿ ಬೆಳೆಯುತ್ತದೆ ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು ಅನೇಕರು ಉರುಳುಗಡ್ಡೆ, ಶಾವುಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾ ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ

ಈ ಮುರಬ್ಬವನ್ನು ಪ್ರತಿಯೊಬ್ಬರು ಸೇವಿಸಬಹುದು
ಕೈಯಿಂದ ಮುಟ್ಟದೆ ತಯಾರು ಮಾಡಲ್ಪಟ್ಟಿರುವದು

- ಪಂಜಾ ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು— ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು
- ಪಂಜಾ ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮುತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು

ಒಂದು ಡಬ್ಬಿ ಮುರಬ್ಬವನ್ನು 15 ದಿನಗಳು ಉಪಯೋಗಿಸುವದರಿಂದ ಪೂರ ಗುಣಕೊಡುತ್ತೆ 2—3 ಡಬ್ಬಿ ಮುರಬ್ಬವನ್ನು ಉಪಯೋಗಿಸುವದರಿಂದ ಜನ್ಮಾಂತರದ ವರಿವಿಗೂ ಗುಣಕೊಡುತ್ತೆ.

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2 ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಯವರೆಗೆ ಆಣೆ 6

ಏಜಂಟರು — ಡಿ ಸಯ್ಯದ್ ಉಸ್ಮಾನ್ ಎಂಡ್ ಕೊ
ದೊಡ್ಡಪೇಟೆ, ಬೆಂಗಳೂರು ಸಿಟಿ

ಡಿ ಮುನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹದಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ಕೃಷ್ಣವಿಲಾಸ ಟ್ರೇಡಿಂಗ್ ಕಂಪೆನಿ,

ಮಾನ್ಯ ಗೃಹಸ್ಥರೇ, ಗಿರಗಾಂ, ಮುಂಬಯಿ

ತಮ್ಮ ಕಡೆಯ ಹಲವು ಮಂದಿ ಗೃಹಸ್ಥರು ವರ್ತಮಾನ ಪತ್ರಗಳಲ್ಲಿ ಕೊಟ್ಟಿರುವ "ಪ್ರಸಿದ್ಧ ಪತ್ರಿಕೆ"ಗಳು ಹೊಗಳಿ ವಿವರಿಸುವ ಸಾಮಾನುಗಳನ್ನು ಇಲ್ಲಿಗೆ ಒರೆದು ತರಿಸಿಕೊಳ್ಳುತ್ತಿರುವಲ್ಲಿ ಆ ವಸ್ತುಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಬರೆದಿರುವಂತೆ ಚನ್ನಾಗಿರುವುದರ ಬದಲಿಗೆ ಬಹಳ ಹಲಕೀ ಸಾಮಾನುಗಳಿದ್ದು ಅವುಗಳಿಗೆ ಕೊಟ್ಟ ಹಣ ದುರ್ವ್ಯಯ ಮಾಡಿದಂತೆ ಆಯಿತಲ್ಲಾ ಎಂದು ವ್ಯಸನಪಡುತ್ತಿರುವದು ನಮ್ಮ ತಿಳುವಳಿಕೆಗೆ ಬಂದದೆ ನಾವು ಹಲವು ವರ್ಷಗಳಿಂದ ಪರವೂರ ಗೃಹಸ್ಥರಿಗೆ ಇಲ್ಲಿಂದ ಅತ್ಯುತ್ಕೃಷ್ಟವಾದ ವಸ್ತುಗಳನ್ನು ಪೇಟೆಯಿಂದ ಬಹಳ ಚೌಕಶೀಯಿಂದ ಕಡಿಮೆ ಖರೀದಿಗೆ ಕೊಂಡುಕೊಂಡು ರವಾನಿಸುತ್ತಿರುವುದು ಸಮಸ್ತರಿಗೂ ಗೊತ್ತೇ ಇದ್ದ ವಿಷಯವಾಗಿದೆ. ಆದುದರಿಂದ ಎಲ್ಲಾ ಗೃಹಸ್ಥರು ತಮಗೆ ಮುಂಬಯಿಯಿಂದ ಏನೇ ವಸ್ತುಗಳು ಬೇಕಿದ್ದರೂ ನಮಗೆ ಬರೆದಲ್ಲಿ ನಾವು ಅವುಗಳನ್ನು ಪೇಟೆಯಿಂದ ಕಡಿಮೆ ಕಿಮ್ಮತ್ತಿಗೆ ತಕ್ಕೊಂಡು ವಿ. ಪಿ. ಟಪ್ಪಾಲು ಮೂಲಕ ಕಳುಹುವೆವು. ಈ ಸಂಗತಿಯನ್ನು ತಮ್ಮ ಮಿತ್ರಬಾಂಧವರೊಡನೆ ಪ್ರಚಾರಪಡಿಸಬೇಕಾಗಿ ನಾವು ನಮ್ಮ ಎಲ್ಲಾ ಗೃಹಸ್ಥರನ್ನು ಬೇಡುವೆವು.

ವಾಚುಗಳು ನಮ್ಮಲ್ಲಿ ವೆಸ್ಟೆಂಡ್, ಸ್ಟೇವರ್ಲ್, ಬ್ಲೂಬ್ರಾ, ಬರ್ನ್ಸ ಮೊದಲಾದ ಕಂಪನಿಯ ವಾಚು ಮತ್ತು ಗಡಿಯಾರಗಳು ಆಯಾಯ ಕಂಪನಿಯಲ್ಲಿ ಮಾರಾಟ ಮಾಡುವದಕ್ಕಿಂತ ಕಡಿಮೆ ಬೆಲೆಗೆ ದೊರೆಯುತ್ತವೆ.

ರೂಪಾಯಿ ಹತ್ತು ಯಾ ಹೆಚ್ಚಿನ ಬೆಲೆಯ ಸಾಮಾನುಗಳಿಗೆ ಬರೆಯುವವರು ರೂಪಾಯಿ ಒಂದನ್ನು ಮುಂಗಡವಾಗಿ ಕಳುಹಿಸಬೇಕು. [illegible] ಹಣದಿಂದ ಕಳುಹುವೆವು.

Krishnavilasa Trading Company,
Girgaum, Bombay.

ಸ್ವಲ್ಪ ಹೊತ್ತು ನಿಂತುಕೊಳ್ಳಿ !

ಅಗರಬತ್ತಿ ಅಥವಾ ಸುಗಂಧದಬತ್ತಿ

ಪ್ರಸಿದ್ಧವಾದ ಅಂಬರು, ಪುನಗು, ಕಸ್ತೂರಿ, ಪನ್ನೀರು, ಜಂತುವಿನಾಸಿನಿ ಬತ್ತಿಗಳು, ಅರಗಜ ಅಥವ ಹಸೀಗಂಧ ಬಿಲ್ಲೆಗಳು, ಪನ್ನೀರು ಅಥವಾ ರೋಸ್ ವಾಟರು, ಹಿಂದೂ ಸೆಂಟುಗಳು, ಸುವ್ವಾಸನೇ ದ್ರವ್ಯಗಳು, ಇವುಗಳೆಲ್ಲಾ ಉತ್ತಮವಾದ ಪದಾರ್ಥಗಳಿಂದ ಮಾಡಲ್ಪಟ್ಟವೆ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತೆ. ವ್ಯಾಪಾರಗಾರರಿಗೆ ಕಮಿಷನ್ ಕೊಡಲ್ಪಡುತ್ತೆ. ಯಾವ ವಿಷಯಕ್ಕೂ ಈ ಕೆಳಗೆ ಬರೆದಿರುವ ಅಡ್ರೆಸಿಗೆ ಬರೆದರೆ ಕಳಿಸಲ್ಪಡುತ್ತೆ

ಮೆ ನೇ ಜ ರ್ ,
ಸ್ವದೇಶೀ ಪರಫ್ಯೂಮರೀ ವರ್ಕ್ಸ್ ಬೆಂಗಳೂರು ಸಿಟಿ.

ಕಳವು, ದರೋಡೆ.

ಡಕಾಯಿತಿ, ಅಕ್ರಮ ಸ್ತ್ರೀಸಂಗಮ, ಆಸಾಮಿಚೋರಿ, ಮಾನಭಂಗ, ಮಾನನಷ್ಟ, ಮುಂತಾದವುಗಳಿಗೆ ಶಿಕ್ಷೆ ವಿಧಿಸಿರುವ ದಂಡ ನೀತಿಶಾಸ್ತ್ರವು ಪೂರ್ವದಲ್ಲಿ ಶುಕ್ರಾಚಾರ್ಯರಿಂದ ರಚಿತವಾಗಿ ಈಗಿನ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಅನುಮೋದಿಸಿ ಇಂಡಿಯಾ ಗವರ್ನರ್ ಜನರಲ್‌ರವರಿಂದ ಮಂಜೂರಾಗಿ ಕಲ್ಕತ್ತಾ, ಮುಂಬೈ, ಮದ್ರಾಸು, ಮೈಸೂರು ಜಿಲ್ಲಾಗಳಲ್ಲಿ "ಕನ್ನಡ ಇಂಡಿಯನ್ ಪೆನಲ್‌ಕೋಡ್" ಎಂಬ ಅಭಿದಾನದಿಂದ ಜಾರೀಲಿ ತಂದಿರುವರು. ಈ ಆಕ್ಟಿಗೆ ಅನೇಕ ಜಡ್ಜಿಗಳು ಟಿಪ್ಪಣಿಗಳನ್ನು ಬರೆದಿರುವರು. ಅವುಗಳೂ ಈ ಪುಸ್ತಕದಲ್ಲಿ ಅಡಗಿರುವವು. ಕ್ರಯ: ದಪ್ಪ ಕಾಗದದ್ದು ರೂ. ೨—೦—೦. ಹಸನು ಕಾಗದದ್ದು ರೂ. ೨—೮—೦.

[illegible]

ಎಲ್. ಸುಬ್ಬ ನರಸಿಂಗರಾವ್,
ಎಡಿಟರ್ ಲಾ ಗೆಜೆಟ್, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಕರ್ನಾಟಕ ವನೌಷಧಾಲಯ ಶಿರಸಿ.

ಔಷಧಗಳ ಗುಣದ ಬಗ್ಯೆ ಡಾಕ್ಟ್ರರ ಮುಂತಾದವರ ಕಡೆಯಿಂದ ಸರ್ಟಿಫಿಕೇಟುಗಳು ಶಿಕ್ಕಿರುತ್ತವೆ.

೧. ರೋಗನಾಶಕ. ರಕ್ತ, ಧಾತು ಶುದ್ಧಿ ವ ವೃದ್ಧಿಕರ ಲೋಹ ಮಿಶ್ರಿತ ಗುಳಿಗೆ ೪೨ ಟೆ. ಖ ಸಹ ಕ್ರಯ ರೂ ... ೨—೪—೦

೨. ಪ್ರವಾಳ ಕೇಶರ ಅಮರಸತ್ವ ಶಿಲಾಜಿತು ವ ವನಸ್ಪತಿ ಮಿಶ್ರಿತ ಧಾತುಪೌಷ್ಟಿಕ ಶಕ್ತಿವರ್ಧಕ ಗುಳಿಗೆ ೪೨ ಕ್ರಯ ರೂ ೨—೪—೦

೩. ಗರ್ಮಿ ರೋಗನಾಶಕ ಗುಳಿಗೆ. ೭ ದಿವಸದಲ್ಲಿ ಖಚಿತ ಗುಣ ೪೨ ಗುಳಿಗೆ ಡಬ್ಬಿ ೧ಕ್ಕೆ ಕ್ರಯ ರೂ .. ... ೩—೪—೦

೪. ಟಾಕಿಚಪ್ಪೆನಾಶಕ ಮಲಮು. ಡಬ್ಬಿ ೧ಕ್ಕೆ ಕ್ರಯ ರೂ ೧—೪—೦

೫. ವಾತನಾಶಕ ತೈಲ ಯಾವದೇ ತರದ ವಾತವಿದ್ದರೂ ಗುಣ ಕುಪ್ಪಿ ೧ಕ್ಕೆ ಕ್ರಯ ರೂ . ೧—೪—೦

೬ ಭೃಂಗಾಮಲಕಾದ್ಯ ತೈಲ. ಶಿರೋರೋಗ ನೇತ್ರರೋಗ ನಿವಾರಣ ಅಕಾಲದಲ್ಲಿ ಆದ ಹಣ್ಣುಕೂದಲು ಕಪ್ಪಾಗುತ್ತವೆ ಕುಪ್ಪಿ ೧ಕ್ಕೆ ಕ್ರಯ ರೂ .. .. ೧—೪—೦

೭. ಜಂಬೀರ ತೈಲ ಮೇಲಿನಂತೆ ಗುಣ ಕುಪ್ಪಿ ೧ಕ್ಕೆ ಕ್ರ ರೂ ೧—೨—೦

೮. ಮೂಲವ್ಯಾಧಿ ಹರಚೂರ್ಣ. ಡಬ್ಬಿ ೧ಕ್ಕೆ ಕ್ರಯ ರೂ. ೧—೪—೦

೯. ಕಫದಮ್ಮುಹರ ಚೂರ್ಣ ಡಬ್ಬಿ ೧ಕ್ಕೆ ಕ್ರಯ ರೂ ೧—೪—೦

೧೦. ಇಸುಬುರುತ್ತಿ ಮಲಮು ಡಬ್ಬಿ ೧ಕ್ಕೆ ಕ್ರಯ ರೂ ೧—೪—೦

೧೧ ಅಸಾಧ್ಯಕೆಟ್ಟ ಹುಣ್ಣುಗಳಿಗೆ ಮಲಮು . ... ೧—೪—೦

೧೨. ಮದನೋದ್ಭವ ಚೂರ್ಣ. ಡಬ್ಬಿ ೧ಕ್ಕೆ ರೂ ೧ ೧೨—೦

೧೩ ಅಮೃತಪಾಕ (ವೃದ್ಧನಾದರೂ ಸಶಕ್ತನಾಗುತ್ತಾನೆ) ಅತ್ಯಂತ ಪೌಷ್ಟಿಕ ಶಕ್ತಿವರ್ಧಕ ೪೦ ತೊಲೆ ಡಬಿ ೧ಕ್ಕೆ .. ೩—೮—೦

೧೪. ಅಮೃತಗುಟಿ ಅಗ್ನಿವೃದ್ಧಿಕರ ಪಿತ್ತಕಫನಾಶಕ ಜ್ವರಗಡ್ಡೆ ಅಸ್ಥಿಗತಜ್ವರ ನಾಶವಾಗಿ ಶಕ್ತಿ ಬರುತ್ತದೆ ದಮ್ಮು ಕೆಮ್ಮು ಗುಣವಾಗುತ್ತದೆ ಗುಳಿಗೆ ೪೨೦ ಕ್ರಯ ರೂ ೨—೦—೦

ಈ ಶಿವಾಯ ಇನ್ನೂ ಅನೇಕ ಔಷಧಗಳು ಶಿಕ್ಕುತ್ತವೆ ರೋಗದ ಲಕ್ಷಣ ಪೂರ್ಣವಾಗಿ ತಿಳಿಸಿದರೆ ಯೋಗ್ಯ ಕಿಮ್ಮತಿಗೆ ಉತ್ತಮ ಔಷಧಗಳು ಕಳುಹಿಸಲಾಗುವದು.

ಪತ್ತೆ:—ಆರ್. ಯಸ್ ವರ್ಖೆ ಕಸಬೆ, ವೈದ್ಯಭೂಷಣ,
ಪೋಸ್ಟು ಶಿರಸಿ, ಜಿಲ್ಲಾ ಉತ್ತರ ಕಾನಡಾ

ದಿ ಕೆನರಾ ಸ್ಯಾಕಲ್ ಮಾರ್ಟ, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರ್ಖಾನೆಯಲ್ಲಿ ಪ್ರಸಿದ್ಧವಾದ ಬಿ ಎಸ್ ಎ ಸಿಂಗರ್ ಹಂಬರ್, ಬಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆಸ್ಸನ್, ರೋಯಲ್, ಮಿನೋರಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್ ಎ. ಬ್ರೆಂಪ್ಟನ್, ಬ್ರೂಕ್ಸ್, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ.

K. K. Shanbhog, Proprietor
THE CANARA CYCLE MART,
Udipi, S. Canara.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು.

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

ಧಾತುಪೌಷ್ಟಿಕ ವಜ್ರಾಂಗಪಾಕ.

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು, ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಜಿಠ್ಠೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ. ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ. ೩—೮—೦, ಒಮ್ಮೇಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦. ಟಪ್ಪಾಲು ಖರ್ಚು ಬೇರೆ.

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗನಾಶಕ ಗುಳಿಗೆ ೪೨ಕ್ಕೆ ಉತ್ತಮ ಗುಣ ಕ್ರಯ ರೂ. ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೇಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ. ೧ ಟಪ್ಪಾಲು ಖರ್ಚು ಬೇರೆ.

ಇನ್ನು ಅನೇಕ ಔಷಧಗಳು ನಮ್ಮ ಕಂಪೆನಿಯಲ್ಲಿ ಶಿಗುತವೆ. ಅನುಪಾನಪತ್ರಿಕೆ ಔಷಧಿಯ ಸಂಗಡ ಕಳುಹಿಸುವೆವು.

ನಮ್ಮ ವಿಳಾಸ:— ವಿ. ಎಸ್. ಮೋಡಕ.
ಕರ್ಣಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ

ಯುನಿವರ್ಸಲ್ ಎಸ್ಯುರನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಶೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬವನ್ನು ನೀವು ಅರಿತಿರುವಿರೋ?

ಇನ್ಶೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, *ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ. ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ

			ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	.	ರೂ.	13,329—0—0	22,549—0—0
,, (ವಿವಾಹ)	..	,,	25,670—0—0	38,933—0—0
ಜುಮ್ಲಾ ಕೇಸುಗಳು	.	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	..	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	..	,,	32,074—0—0	2,49,460—0—0
(ಸ್ಪೆಶಲ್) ರಕ್ಷಿತ ಧನ	...	,,	10,000—0—0	50,000—0—0
(ಜನರಲ್) ರಕ್ಷಿತ ಧನ	...	,,	37,230—0—0	23,778—3—2
			ಲಾಭವು ಶೇಕಡಾ ೫ರಂತೆ ಹಂಚಿ ಕೊಡಲ್ಪಟ್ಟಿದೆ.	ಶೇಕಡಾ ೯ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಪ್ ಎಶ್ಶೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಾತಿಯನ್ನಿಟ್ಟಿರುವುದು 2. ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು, 3. ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು, 4. ರೂ. 3,00,000ಗಿಂತಲೂ ಹೆಚ್ಚಿಗೆ ಭಾದ್ಯತಗಳನ್ನು ಕೊಟ್ಟಿದೆ. 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಮಿತಿಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9. ಡೈರೆಕ್ಟರು—ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

ಮೋಟಾರ್ ಭಂಡಿಗಳ ಓಡ್ಯಾಟಕ್ಕೆ ಇಲ್ಲಿರುವ ವತ್ತೊಂದು ಪ್ರತಿಬಂಧಕವು ಈ ಪ್ರಾಂತ್ಯಗಳಲ್ಲಿ ಬಹಳವಾಗಿ ಬೀಳುವ ಮಳೆಯಾಗಿರುವುದು ಮಳೆಯು ಮಿತಿಮೀರಿಯಾಗುವ ಕಾಲವು ಇಲ್ಲಿ ಮುಖ್ಯವಾಗಿ ಜುಲಾಯಿ ಮತ್ತು ಆಗೋಸ್ತು ತಿಂಗಳುಗಳಲ್ಲಾಗಿದೆ ಈ ಕಾಲದಲ್ಲಿ ನಮ್ಮ ಪ್ರಾಂತ್ಯಗಳಲ್ಲಿ ಎಂಥಾ ಗಾಡಿಗಳಲ್ಲಾದರೂ ಪ್ರಯಾಣಮಾಡುವುದು ಬಹಳ ಕಷ್ಟ ಜಟಕಾ ಕುದರೆಗಳಿಗೆ ೧೭ ಮೈಲಗಳ ಪ್ರಯಾಣಕ್ಕೆ ೧೫ ೧೬ ತಾಸುಗಳು ಬೇಕಾಗುತ್ತವೆ ಗಾಡಿಗಳು ಸಹ ನೀರಿನಿಂದ ತುಂಬಿಹೋಗುವುದರಿಂದ ಪ್ರಯಾಣವು ಬಹಳ ಕಷ್ಟವೇ ಸರಿ ಮೋಟಾರ್ ಬಂಡಿಗಳನ್ನು ಈ ಕಾಲದಲ್ಲಿ ಕುದುರೆ ಜಟ್ಕಾ ಗಾಡಿಗಳಿಗಿಂತ ಹೆಚ್ಚಿನ ಅನುಕೂಲತೆಯಿಂದ ಉಪಯೋಗಿಸಬಹುದು ಈ ಬಗ್ಗೆ ಇಲ್ಲಿಯ ಮಳೆಕಾಲದ ಮಾಹಿತಿಯನ್ನು ತಿಳಿದು ಮಳೆಯಿಂದ ಮೋಟಾರ್ ಇಂಜಿನಿಗಳ ಚಲನೆಯು ಕೆಡದಂತೆ ಮಾಡಿದರೆ ಮೋಟಾರ್ ಗಾಡಿಗಳನ್ನು ನಡಿಸುವದೆ ವಿಶೇಷ ಅಭ್ಯಂತವಿರದೆಂದು ತೋರುವುದು ಜುಲಾಯಿ ಆಗೋಸ್ತು ತಿಂಗಳುಗಳ ನಂತರ ಮಳೆಯು ಬಹಳವು ಕಡಿಮೆಯಾಗುವುದರಿಂದ ಮೋಟಾರುಗಳನ್ನು ನಡಿಸಲು ತೊಂದರೆ ಇರದು ಮಳೆ ಬಿದ್ದ ಮಾರ್ಗದಲ್ಲಿ ಕೆಸರು ತುಂಬಿದರೆ ಮೋಟಾರ್ ಬಂಡಿಗಳು ಈ ಕೆಸರಿನಲ್ಲಿ ನಡಿಯಲಾರವೆಂಬ ಮತ್ತೊಂದು ಶಂಕಿತವಾದ ಸಂಶಯವು ಕೆಲವರಲ್ಲಿ ಇರಬಹುದು ಇದೇ ರೀತಿ ಕೆಸರ ತುಂಬಿರುವ ಹಾಳು ಮಾರ್ಗಗಳಲ್ಲಿ ಮೋಟಾರ್ ಗಾಡಿಗಳು ಸರಿಯಾಗಿ ಪ್ರಯಾಣಿಕರನ್ನು ಕೊಯಂಬುತ್ತೂರಿನಿಂದ ಪೊಲ್ಲಾಚಿಗೂ ಪೊಲ್ಲಾಚಿಯಿಂದ ಕೊಯಂಬುತ್ತೂರಿಗ ಒಯ್ಯುವುದನ್ನು ನಾವು ನೋಡಿರುವೆವು ಗಾಡಿಗಳ ವೇಗವು ತತ್ಕಾಲದಲ್ಲಿ ಸ್ವಲ್ಪ ಕಡಿಮೆಯಾಗಬಹುದಲ್ಲದೆ ಪ್ರಯಾಣವು ಪೂರ್ಣ ಅಸಾಧ್ಯವಾಗದು

ಎಲ್ಲಾ ಸಾಧನೆಗಳ ಪ್ರಾರಂಭದ ಪ್ರಯತ್ನಗಳು ಬಹಳ ಕಷ್ಟವಾಗಿವೆ ಈ ಕಷ್ಟಗಳನ್ನು ಲೆಕ್ಕಿಸದೆ ಇಂಥಾ ಕಾರ್ಯಸಾಧನೆಯಲ್ಲಿ ಮುಂದರಿಯ ಬೇಕಾದರೆ ಜನರ ಆದರಣೆಯೂ ಸಹಾನುಭೂತಿಯೂ ಅಗತ್ಯವಾಗಿರಬೇಕು ಕಳೆದ ಸಂಚಿಕೆಯಲ್ಲಿ ಉಡುಪಿಯ ಒಬ್ಬ ಬಾತ್ಮೀದಾರರು ಸೂಚಿಸಿರುವಂತೆ ಇಂಥಾ ಕಾರ್ಯಸಾಧನೆಯಲ್ಲಿ ಹಣದ ಲಾಭದಾಶೆಗಿಂತ ಜನೋಪಕಾರದ ಕಾಂಕ್ಷೆಯು ಬಲವಾಗಿರಬೇಕಾಗಿದೆ ಇಂಥಾ ಉದ್ದೇಶಗಳಿಂದ ಪ್ರೇರಿತವಾದ ಸಂಸ್ಥೆಗಳ ಕಾರ್ಯಸಾಧನೆಯು ಎಂದೂ ಅಸಾಧ್ಯವಾಗದು

ಚಿತ್ರಪ್ರದರ್ಶನವು.

ಬಸವನಪುರದಿಂದ ಮಹಿಷಪುರಕ್ಕೆ ಹೋಗುತ್ತಿದ್ದ ಲೋಕಲ್ ಬೋರ್ಡು ಮೆಂಬರ ಅಶ್ವಪತಿರಾಯರ ನೋಟು ಬೂಕು

ಮಹಿಷಪುರದಿಂದ ಬಂದ ಜಟಕಾ ಬಂಡಿಯು ಬಸವನಪುರಕ್ಕೆ ಈ ಹೊತ್ತು ಒಂದು ಗಳಿಗೆ ಹೊತ್ತಿರುವಾಗಲೇ ಬಂದು ತಲ್ಪಿರುವದು ಶಿವರಾಮ ಹೊಳ್ಳರೂ ಸಂಕ್ರಯ್ಯ ಗೌಡರೂ ಅಶ್ವಪತಿರಾಯರ ಬಂದೆಯೇ ಜಟಕಾ ಬಂಡಿಯಿಂದ ಇಳಿದರು ಹೊಳ್ಳರಿಗೆ ಪ್ರಯಾಣಕಾಲದಲ್ಲಿ ಎಚ್ಚರಿಕೆ ಹೆಚ್ಚು ಬಂಡಿಯ ಹಿಂದುಮುಂದೆ ನೋಡಿಕೊಂಡು ತನ್ನ ಒಡವೆಗಳಲ್ಲಿ ಏನಾದರೂ ಬಿಟ್ಟುಹೋಗಿಯದೋ ಎಂತ ಬಂಡಿಯಲ್ಲಿ ಹಣಕಿನೋಡುತ್ತಿರುವಾಗ ಒಂದು ನೋಟು ಬೂಕ್ ಗಾಡಿಯಲ್ಲಿ ಇವರಿಗೆ ಸಿಕ್ಕಿತು ಯಾರ ಪುಸ್ತಕವಾಗಿರಬಹುದೆಂಬದಾಗಿ ಹೊಳ್ಳರು ನೋಡಲು ಅಶ್ವಪತಿರಾಯರ ಹೆಸರು ಅದರಲ್ಲಿ ಇತ್ತು. ನೋಟು ಬೂಕನ್ನು ತೆರಿಯುತ್ತಿರುವಾಗ ಮಧ್ಯ ಪೆನ್ಸಿಲು ಇಟ್ಟಿರುವ ಪಾನುಗಳಲ್ಲಿ ಪುಸ್ತಕವು ತನ್ನಂತೆಯೇ ತೆರಿಯೋಣಾಯಿತು ಶಿವರಾಮ ಹೊಳ್ಳರು ಈ ಪಾನುಗಳಲ್ಲಿ ಬರೆದಿರುವದನ್ನು ಓದಲು ಪ್ರಾರಂಭಿಸಿದರು

ಸಂಕ್ರಯ್ಯ ಗೌಡ ಸ್ವಾಮಿಾ, ಊರು ಸೇರಬೇಕಾದರೆ ಇನ್ನೂ ಮೂರು ಮೈಲುಗಳಿವೆ ಕತ್ತಲೆಯಾಗಿ ಹೋದರೆ ಆ ಕಾಡನ್ನು ದಾಟಿಹೋಗೋದು ಹೇಗೆ, ನಡಿಯಿರಿ ಹೋಗುವ.

ಶಿವರಾಮ ಹೊಳ್ಳ. ಗೌಡರೇ ನನ್ನ ಈ ದಸ್ತಾವೇಜು ಕಟ್ಟುಗಳನ್ನು ಸ್ವಲ್ಪ ಹಿಡಿಯಿರಿ. ಈ ನೋಟುಬೂಕಿನಲ್ಲಿ ಬರೆದದ್ದನ್ನು ನಡಿಯುವಾಗಲೇ ಓದುವೆನು. ಇನ್ನು ಒಂದು ಕ್ಷಣದಲ್ಲಿ ಓದಿಯಾಗುವದು.

ದಸ್ತಾವೇಜುಗಳ ಕಟ್ಟನ್ನು ಗೌಡರು ಹಿಡಕೊಂಡು ಹೊಳ್ಳರೂ ಗೌಡರೂ ತಮ ಗ್ರಾಮಾಭಿಮುಖವಾಗಿ ಹೊರಟರು. ಎರಡು ಫರ್ಲಂಗುಗಳು ನಡಿಯುವಷ್ಟರಲ್ಲಿ ಹೊಳ್ಳರದು ಓದಿಯಾಯಿತು.

"ಗೌಡರೇ, ಪ್ರಪಂಚದ ವಿದ್ಯಮಾನಗಳೇ ಬಹಳ ಚೋದ್ಯ! ನನಗೆ ಈ ತನಕ ಆ ಮುದಿ ಕೋತಿ—ಅಶ್ವಪತಿರಾಯ—ಇನ್ನೂ ಯಾಕೆ ಬೋರ್ಡು ಮೆಂಬರುತನಕ್ಕೆ ಜೀವಕೊಡುತ್ತಿದ್ದನೆಂಬದು ಗೊತ್ತಾಗುತ್ತಿದ್ದಿಲ್ಲ ಈಗ ಎಲ್ಲಾ ಸಮಾಚಾರ ತಿಳಿಯಿತ ನನಗೆ ೧೦ ವರುಷಗಳು ಬಿಡದೆ ಸರಕಾರದವರು ಬೋರ್ಡು ಮೆಂಬರನನ್ನಾಗಿ ನೇಮಿಸಿದರೆ ಒಂದು ಸಾವಿರ ರೂಪಾಯಿಗಳ ಹುಟ್ಟುವಳಿಯ ಆಸ್ತಿಯನ್ನು ಶುಲಭದಲ್ಲಿಯೇ ಮಾಡಿ ಹಾಕುವೆನು ದೊಡ್ಡವರು, ಹೇರಳ ಭೂಕಂದಾಯ ಕೊಡುವ ವರ್ಗದಾರರು ಗೌಡರೇ, ದೊಡ್ಡಸ್ಥಿಕೆ ಎಲ್ಲಾ ಗೊತ್ತಾಯಿತು

ಸ ಗೌಡ —ಏನೂ ಸ್ವಾಮಿಾ, ಇದೇನು ನೋಟುಬೂಕ್ ನೋಡಿದ ಅನುಭವವೋ?

ಶಿ ಹೊಳ್ಳ —ಗಾಡಿ ಇಳಿದು ಗಾಡಿಯಲ್ಲಿ ಏನಾದರೂ ಬಿಟ್ಟುಹೋಗಿದೆಯೋ ಎಂತ ನೋಡುವಾಗ ಈ ನೋಟುಬೂಕ್ ಸಿಕ್ಕಿತು ಬೂಕು ಬೋರ್ಡು ಮೆಂಬರ ಅಶ್ವಪತಿರಾಯರದೆಂದು ತೋರಿ ಬರುತ್ತದೆ ಅಶ್ವಪತಿರಾಯರನ್ನು ಬಲ್ಲಿರಲ್ಲಾ!

ಸ ಗೌಡ ಕೇಳಿ ಒಲ್ಲ ನಿನ್ನೆ ತಾವು ಕಲೆಕ್ಟರ ಆಫೀಸಿನ ಒಳ ಭಾಗದಲ್ಲಿದ್ದಾಗ ನಾವೆಲ್ಲರೂ ಎಲ ಪಾರ್ಶ್ವದ ಚಾವಡಿಯಲ್ಲಿದ್ದೆವು ಆಗ ನಮ್ಮ ಕೆರೆ ತೋಟ ನರ್ಸಪೈಗಳವರು ಈ ಅಶ್ವಪತಿರಾಯರನ್ನು ನೋಡು ನೋಡೆಂತ ಬೇರಳು ತೋರಿಸಿ ತುಂಬಾ ನಕ್ಕುಬಿಟ್ಟರು ಅಶ್ವಪತಿರಾಯರನ್ನು ಆಗ ನೋಡಿ ತಿಳಿದೆ ಬಾಯಿಯಲ್ಲಿ ಒಂದು ಹಲ್ಲೂ ಇರದು ಬಿಳ್ಳ ಬೆಳೆದು ಹಣ್ಣಾದ ಗಲ್ಲ ಮಿಾಶೆ ತಲೆಗೆ ದೊಡ್ಡ ಜರಿ ರೂಮಾಲು, ಆಫೀಸರರ ಕಪ್ಪು ಅಂಗಿ, ರೇಶ್ಮೆ ಅಂಚಿನ ಹುಟ್ಟಳ್ಳೆ ಧೋತ್ರ, ಕೈಯಲ್ಲಿ ಜರಿ ಎಲವಸ್ತ್ರ ಎಲ್ಲಾ ನೋಡಿಬಿಟ್ಟೆ ನರ್ಸಪೈಗಳವರು ನಗುವದ್ಯಾಕೆಂದು ಕೇಳಲು ನನಗೆ ನಮ್ಮನಿರದಕ್ಕೆ ಇವರು ಕಣ್ಣೊತ್ತಿ ಹೇಳಿದರಲ್ಲದೆ, ಅವರ ಹಿಂದಕಡೆ ಪಕ್ಷಿಯ ಜರಿ ಜೋಡು ಎಲವಸ್ತ್ರವನ್ನು ತಲೆಗೆ ಕಟ್ಟಿರುವ ಇನ್ನೊಬ್ಬನನ್ನು ಸಹ ನೋಡಿಬಿಡು ಎಂತ ಹೇಳಿದರು ಅಶ್ವಪತಿರಾಯರು ನಮ್ಮನ್ನು ಹಾದು ಸ್ವಲ್ಪ ದೂರ ಹೋಗುವಷ್ಟರಲ್ಲಿ ನರ್ಸಪೈಗಳವರು ಹೊಟ್ಟೆಹುಣ್ಣಾಗುವಂತೆ ತಿರಿಗೊಮ್ಮೆ ನಗಾಡಿಬಿಟ್ಟರು

ಶಿ ಹೊ —ಏನಪ್ಪಾ! ಏನು, ನಗೆಗೆ ಕಾರಣವೇನು?

ಸ ಗೌಡ —ಕೇಳಿ, ಕೇಳಿ! ನರ್ಸಪೈಗಳವರ ಕಣ್ಣಾದರೋ ಎಲ್ಲವನ್ನೂ ನೋಡಬಲ್ಲುದು ದೊರೆಗಳ ದಫೆದಾರ್ ಅಬ್ದುಲ್ ಗಫೀಪ್ ಸಾಹೇಬ ಮತ್ತು ಅವನ ಹತ್ತಿರ ದೊಡ್ಡ ದೊಡ್ಡ ಮುಂಡಾಸುಗಳನ್ನೂ ಸುತ್ತಿಕೊಂಡಿರುವವರಲ್ಲಿ ಕೆಲವು ಹೊಸ ಪೇದೆಗಳು ಬಿಳಿ ಪೋಷಾಕನ್ನು ಹಾಕಿಕೊಂಡು ನಿಂತಿದ್ದರು ಅಶ್ವಪತಿರಾಯರು ಇವರಿಗೆ ಸಹ ತಲೆ ಬಗ್ಗಿಸಿ ನಮಸ್ಕರಿಸಿದರಂತೆ. ಪೇದೆಗಳು ಯಾರು, ಗುಮಾಸ್ತರು ಯಾರು, ಇನ್ನು ಪೇಲಾಪಿಸರರ್ಯಾರೆಂದು ತಿಳಿಯಲಾರದ ಈ ಮುದಿ ವಾನರಕ್ಕೆ ಈ ಮೆಂಬರುತನ ಯಾಕಪ್ಪಾ ಎಂತ ಹೇಳಿ ಇನ್ನೊಮ್ಮೆ ನಗಾಡಿದರು ಅಶ್ವಪತಿರಾಯರಿಗೆ ತಮ್ಮ ರುಜು ಹಾಕಲು ಗೊತ್ತಿರುವದಲ್ಲದೆ ಹೆಚ್ಚೇನೂ ಅಕ್ಷರ ಮಾಹಿತಿ ಇರದೆಂದು ಹೇಳಿ ಅವರ ಹಿಂದಕಡೆ ಇರುವ ಜರಿ ಎಲವಸ್ತ್ರದ ಶ್ಯಾನಭಾಗರು ಅವರ ಹಿಂದೆ ಇದ್ದುಕೊಂಡು ಕೋತಿಯನ್ನು ಅತ್ತಿತ್ತ ಕೊಂಡುಹೋಗುವಂತೆ ಅಶ್ವಪತಿರಾಯರನ್ನು ಒಯ್ಯುತ್ತಿದ್ದರೆಂತ ನರ್ಸಪೈಗಳವರು ಹೇಳಿದರು ಇನ್ನೊಮ್ಮೆ ಆ ಅಶ್ವಪತಿರಾಯರನ್ನು ಚನ್ನಾಗಿ ನೋಡುವ ಎಂತ ಅತ್ತಿತ್ತ ನೋಡುವಷ್ಟರಲ್ಲಿ ಅಶ್ವಪತಿರಾಯರೂ ಅವರ ಶ್ಯಾನುಭಾಗರೂ ಜಟಕಾ ಹತ್ತಿ ಹೋಗಿಬಿಟ್ಟರು

ಶಿ ಹೊಳ್ಳ —ಗೌಡ್ರೇ, ಮಹಿಷಪುರದಿಂದ ಬೋರ್ಡ್ ಮಿಾಟಿಂಗ್ ತೀರಿಸಿ ನಾವು ಬಂದ ಬಂಡಿಯಲ್ಲಿಯೇ ಈಗಲೇ ನಮ್ಮೊಟ್ಟಿಗೆ ಗಾಡಿಯಿಂದ ಕೆಳಗಿಳಿದ ಅಶ್ವಪತಿರಾಯರನ್ನು ನೀವು ನೋಡಲಿಲ್ಲವೇ? ಸರಿ ಸರಿ, ಮಿಾಟಿಂಗಿನ ಪೋಷಾಕನ್ನು ಬದಲಾಯಿಸಿದ್ದ ಅಶ್ವಪತಿರಾಯರ ಗುರ್ತು ತಮಗೆ ಸಿಕ್ಕದೆ ಇದ್ದದ್ದು ದೊಡ್ಡದಲ್ಲ. ನಮ್ಮ ಇದಿರು ಕಡೆಯಲ್ಲಿ ಬೆನ್ನು ಹರಿದುಹೋದ ಗುಬ್ಬಿಗಳಿಲ್ಲದೆ ಕುತ್ತಿಗೆಯಿಂದ ಜೋಲಾಡುತ್ತಿದ್ದ ಫೇನ್ಸಿ ಜುಬ್ಬಾ ಹಾಕಿ, ತಲೆಗೆ ಮೂರು ಮೊಳದ ಹಳೆ ಪಂಜೆಯನ್ನು ಸುತ್ತಿಕೊಂಡು, ಇನ್ನೊಂದು ಹಳೆ ಪಂಜೆಯನ್ನುಟ್ಟುಕೊಂಡು ಕೂತಿದ್ದ ಬೋರ್ಡು ಮೆಂಬರ ಅಶ್ವಪತಿರಾಯರನ್ನು ನೀವು ಗುರುತಿಸದೆ ಇದ್ದದ್ದು ಆಶ್ಚರ್ಯವಲ್ಲ! ಗೌಡ್ರೇ, ಇತರ ವಿಷಯಗಳಲ್ಲಿ ಹಿನ್ನರಿಂದು [illegible] ಹಣ ಕೂಡಿಸುವದರಲ್ಲಿ ಇವರಷ್ಟು ಸಾಹಸಿಗಳು [illegible] ಇವರು ಸಾಧಾರಣ [illegible] ವರುಷ ಪ್ರಾಯದಲ್ಲಿರುವಾಗ [illegible] ಇವರಿಗೆ ರೂ. [illegible] ಆಸ್ತಿಗಳು [illegible]

ಸ. ಗೌಡ:—ಏನಪ್ಪಾ! ಇವರು ಅಷ್ಟು ಆಸ್ತಿವಂತರೋ? ಇಷ್ಟೆಲ್ಲಾ ಸಂಪತ್ತನ್ನು ಹ್ಯಾಂಗೆ ಕೂಡಿಸಿಹಾಕಿದರೋ, ಇವರು ಬಲು ಸಾಮರ್ಥ್ಯವಂತರೇ ಸರಿ!

ಶಿ. ಹೊಳ್ಳ:—ಈಗ ವಯಸ್ಸು ಇವರಿಗೆ ೭೫ ವರುಷಗಳು ಮಿಕ್ಕಿ ಹೋದರೂ ಮೊನ್ನೆ ಬಸವನಪುರದಿಂದ ವಿಟಾಟಂಗಿನ ಬಗ್ಗೆ ಮಹಿಷಪುರಕ್ಕೆ ಹೋಗಿ ಒರುವಷ್ಟರಲ್ಲಿ ರೂ ೭೫ ಅಂದರೆ ನಗದಿ ೫ ಪವನುಗಳನ್ನು ತಂದಿರುತ್ತಾರೆ. ಕಂಡಿರೋ, ಇವರ ಚಮತ್ಕಾರ! ಈ ಐದು ಪವನುಗಳ ಲೆಕ್ಕದ ವಿವರವನ್ನು ಈ ನೋಟಬೂಕಿನಲ್ಲಿ ಓದುತ್ತಾ ಬಂದೆ. ಬರಹ ತನಗೆ ಸ್ವತಹ ಗೊತ್ತಿಲ್ಲದಿದ್ದರೂ ಲೆಕ್ಕ ವಿವರವನ್ನು ಕೂಡಲೇ ತನ್ನ ಕ್ಯಾನುಬಾಗರಿಂದ ಬರಿಸಿರುವರು.

ಸ. ಗೌಡ:—ಸ್ವಾಮಿಾ, ಹೊಳ್ಳರೇ, ಪೂರ್ಣ ಕತ್ತಲೆ ಹ್ಯಾಂಗೂ ಆಗಲಿಲ್ಲ. ಸಾಯಂಕಾಲದ ಬೆಳಕು ಇನ್ನೂ ತುಸು ಇರುವುದು. ಆ ಲೆಕ್ಕವಿವರವನ್ನು ಸ್ವಲ್ಪ ಓದಿ ಹೇಳುವಿರಾ?

ಶಿ. ಹೊಳ್ಳ:—ಅಗತ್ಯ ಓದಿ ಹೇಳುವೆನು. ಇತ್ತ ಕೇಳಿ —ಪ ನೆಯಿಂದ ಹೊರಡುತ್ತಾ ಕೈಯಲ್ಲಿ ತಕ್ಕೊಂಡ, ಅಣೆ ೩, ಬಾಬುರಾಯಪಂತರು ಬೆಳ್ಳೀ ಮಾರುತಿ ಮೂರ್ತಿ ತರಲು ಕೊಟ್ಟ ರೂ ೭—೦—೦, ಸೋಮಯ್ಯಾಜಿ ಹುಬ್ಬಳ್ಳಿ ಧೋತ್ರಿ ಜೋಡು ಒಂದು ತರಲು ಕೊಟ್ಟ ರೂಪಾ ೬—೮—೦, ಪಾ॥ ಪರಶುರಾಮ ಶಾಸ್ತ್ರಿಗಳು ಒಂದು ಸಾವಿರ ಕಂಠ ಹವಳದ ಬಗ್ಗೆ ರೂ ೧೦—೦—೦, ಗ॥ ನಾಗಪ್ಪನಾಯ್ಕರು ವನ್ನಾರುಪೇಟೆ ಸೀರೆ ಒಂದಕ್ಕೆ ರೂ ೭—೧೨—೦, ಅಗ್ರಹಾರ ಮನೆ ಸೀತಮ್ಮ ಹೆಂಗಸರು ಬೆಳ್ಳೀ ಪಂಚಪಾತ್ರೆ ಬಗ್ಗೆ ರೂ. ೫೫—೦—೦, ಮೇಲ್ಪೇಟೆ ಸೀತಾರಾಮ ಗೌಡರು ಇಮಿಟೇಶನ್ ಕೆಂಪಿನ ಬಗ್ಗೆ ರೂ. ೧೫; ಸಬ್ ಮೇಜಿಸ್ಟ್ರೇಟ್ ಗುಂಡರಾಯರಿಂದ ಅಪೋಕಾರಿಷ್ಟ ಬಾಟ್ಲಿ ೩ಕ್ಕೆ ರೂ ೯—೭—೦, ಈ ಸರ್ತಿ ಸಿಕ್ಕಿದ ಬತ್ತೆ ರೂ ೧೭—೯—೭ . ...

ಈ ರೀತಿ ಜುಮ್ಲಾ ಹಣ ರೂ. ೧೫೦ರ ಲೆಕ್ಕವಿರುತ್ತದೆ. ಇದರಲ್ಲಿ ೧೫೫ನ್ನು ೮ ದಿನವೇ ಸೇಕಡಾ ೧೨॥ ದರದ ಬಡ್ಡಿಯಂತೆ ಸಾವಕಾರ ರಾಮಯ್ಯ ಪ್ರಭುಗಳಿಗೆ ಕೊಟ್ಟ ಲೆಕ್ಕವಿದೆ. ನಂತರ ಉಳಿದ ಸಿಲುಕುನೊಂದಿಗೆ ಮಹಿಷಪುರಕ್ಕೆ ಹೋಗಿರುವರೆಂತ ತೋರುತ್ತದೆ. ಗೌಡರೇ ಇದೇನು, ಈ ನೋಟಬೂಕಿನೊಳಗೆ ಹಲವು ಕಾಗದ ತುಂಡುಗಳಿರುವವು! ಹೋ! ಹೋ! ತಿಳಿಯಿತು ಮಹಿಷಪುರದ ಸಾವುಕಾರರಿಂದ ಪಡಕೊಂಡ ಸಾಮಾಗ್ರಿಗಳ ಲೆಕ್ಕದ ಪಟ್ಟಿಗಳು! ಪ್ರತಿಯೊಂದರಲ್ಲಿ ಪ್ರಾಕು ವರ್ಗದ ಪಾನು ಪ್ರಕಾರ ಹಿಂದಿನ ಬಾಕಿ ರೂಪಾಯಿ ಮೊಬಲಗುಗಳು ಮೂರು ಸಾಲುಗಳಿಗೆ ಮಿಕ್ಕಿವೆ. ತಿಳಿದಿರೋ ಹಣ ಕೂಡಿಸುವ ಚಮತ್ಕಾರ ತಿಳಿದಿರೋ?

ರೆವಿನ್ಯು, ಸಿವಿಲ್ ಕ್ರಿಮಿನಲ್ ವ್ಯವಹರಣೆಗಳ ಮಾಹಿತಿಯು ಸಂಕ್ರಯ್ಯಗೌಡರಿಗೆ ತಕ್ಕಷ್ಟು ಇದ್ದರೂ ಅಶ್ವಪತಿರಾಯರ ಧನವೃದ್ಧಿ ಸಾಧನೆಯು ಇವರಿಗೆ ಪಕ್ಕನೆ ತಿಳಿಯಲಿಲ್ಲ. 'ಬರಹೊನ್ನಾ' ಕಸಬಿನ ಶಿವರಾಮ ಹೊಳ್ಳರಿಗೆ ಒಂದು ಕ್ಷಣಮಾತ್ರದಲ್ಲಿ ಎಲ್ಲಾ ಗೊತ್ತಾಯಿತು.

ಸ. ಗೌಡ:—ಆ ಪಟ್ಟಿಗಳಿಂದ ಅಶ್ವಪತಿರಾಯರ ಎಂಥಾ ಚಮತ್ಕಾರವು ತಮಗೆ ತಿಳಿದುಬಂತು?

ಶಿ. ಹೊಳ್ಳ:—ಪ್ರತಿ ಪಟ್ಟಿಯಲ್ಲಿ ಮೂರು ವರುಷಗಳ ಹಣ ಬಾಕಿ ಇರುವದು. ಈ ಸರ್ತಿ ತಕ್ಕೊಂಡ ಸಾಮಗ್ರಿಗಳನ್ನು ಸಹ ಕಡಕ್ಕೆ ಪಡಕೊಂಡಿರುತ್ತಾರೆ. ಮಹಿಷಪುರದಲ್ಲಿ ಸಾವುಕಾರರು ಹೆಚ್ಚು ಸಾಮಾನುಗಳನ್ನು ಕಡಕ್ಕೆ ಕೊಡುತ್ತಿರುವರು. ನಿಮ್ಮ ನಮ್ಮಂಥವರು ಈ ಸಾವುಕಾರರ ಹಣವನ್ನು ಒಂದೆರಡು ತಿಂಗಳು ಬಾಕಿಮಾಡಿಕೊಂಡರೆ ಕೈಪೇತುಹಾಕಿ ನಮ್ಮ ಗುಂಡಾಂತರ ಮಾಡಿಬಿಡುತ್ತಾರೆ. ಬೋರ್ಡ್ ಮೆಂಬರರು—ಇವರದು ಎಷ್ಟು ಬಾಕಿಯಾದರೂ ಸಾವುಕಾರರ ರಿಯಾಯತಿ ಬಹಳವಿದೆ. ಈ ರೀತಿ ಇತರರಿಂದ ಸಾಮಗ್ರಿಗಳ ಬಗ್ಗೆ ನಗದಿಯಾಗಿ ಪಡದ ಐವಜನ್ನು ಬಡ್ಡಿಗೆ ಕೊಟ್ಟು ಈ ಬಡ್ಡಿ ಹಣದಿಂದ ಸಾವಕಾರರ ಸಾಲ ತೀರಿಸುವ ವರೇಗೆ ಬೋರ್ಡು ಮೆಂಬರರಿಗೆ ಸಮಯ ದೊರಕುತ್ತದೆ. ಅಶ್ವಪತಿರಾಯರ ಚಮತ್ಕಾರವು ಈಗಾದರೂ ತಿಳಿಯಿತೇ?

ಸ. ಗೌಡರು:—ತಿಳಿಯಿತು! ತಿಳಿಯಿತು! ಸ್ವಾಮಿಾ ಹೊಳ್ಳರೇ, ಇವರ ಇಂಥಾ ಇನ್ನು ಯಾವ ಚಮತ್ಕಾರವನ್ನು ತಿಳಿದಿರುವಿರಿ? ಬೋರ್ಡು ಮೆಂಬರುತನಕ್ಕೆ ನೇಮಿಸಲ್ಪಡಬೇಕಾದರೆ ಏನು ಉಪಾಯ ನಡಿಸಬೇಕು?

ಶಿ. ಹೊಳ್ಳರು:—ಅದೆಲ್ಲಾ ಹೇಳಬಹುದು. ಆದರೆ ಈಗ ಕತ್ತಲೆಯಾಯಿತು. ನಿಮ್ಮ ಮನೆ ಹತ್ತಿರ ಬಂದೆವು. ನನಗೆ ಇನ್ನೂ ಇಲ್ಲಿಂದ ಅರ್ಧ ಮೈಲು ನಡೆಯಲಿಕ್ಕಿದೆ. ಇನ್ನು ಇನ್ನೊಂದು ಸರ್ತಿ ಮಾತಾಡಬಹುದು. ಹ್ಯಾಗೂ [illegible] ವಿಷಯಗಳನ್ನು ತಿಳಿದಿರಲ್ಲ!

ಸ. ಗೌಡ:—ಹಾಗಾದರೆ ಸ್ವಾಮಿ, ನಾನು ಇಲ್ಲಿ ನಿಲ್ಲುವೆನು. ಅಪ್ಪಣೆ.

ಶಿವರಾಮ ಹೊಳ್ಳರು ಮುಂದರಿಸಿ ತಮ್ಮ ಮನೆಗೆ ಹೋದರು.

ಚಿತ್ರಕ

ಪತ್ರವ್ಯವಹಾರ.

ಸುಳ್ಯ ಪ್ರಾಂತ್ಯಗಳ ಉಪಾಧ್ಯಾಯರುಗಳಿಗೆ

ಮಹಾಶಯರೇ,

ಸೂರ್ಯ ಚಂದ್ರರೇ ಮೊದಲಾದ ಗ್ರಹಗಳೂ ಇತರ ನಕ್ಷತ್ರಗಳೂ ನಮ್ಮ ಆಕಾಶದಲ್ಲಿ ಸರ್ತಿ ಪ್ರಕಾರ ಮೂಡಿ ಯಥಾನುಶಕ್ತಿಯಾಗಿ ಹೊಳೆಗಿ ಮುಳುಗುತ್ತಾ ನಮ್ಮ ಭೂವಲಯದ ಸರ್ವ ಸಸ್ಯ ಸಂಪದ್ಸಮೃದ್ಧತೆಯನ್ನುಂಟುಮಾಡಿ ಸರ್ವ ಪ್ರಾಣಿಗಳ ರಕ್ಷಣೆಯ ಕಾರ್ಯಬಾರದಲ್ಲಿ ಭಾಗಿಗಳಾಗುತ್ತಿವೆ. ಇವಲ್ಲದೆ ಆರಂಭದಲ್ಲಿ ಅಲ್ಪ ಪ್ರಕಾಶದ ಚಿಕ್ಕ ಚುಕ್ಕಿಯಂತೆ ಬಹುದೂರದಲ್ಲಿ ಗೋಚರಿಸಿ ದಿನೇ ದಿನೇ ವೃದ್ಧಿಹೊಂದುತ್ತಿರುವ ಪ್ರಕಾಶದೊಂದಿಗೆ ಸಮಿಾಪಿಸುತ್ತಾ ಭೂಮಿಗೆ ಅತೀ ಸಮಿಾಪ ಬಂದಾಗ ತನ್ನ ನಿಜ ಸ್ವರೂಪವಾದ ಶೂನ್ಯತ್ವವನ್ನು ಪ್ರಕಟಗೊಳಿಸಿ ಭೂಮಿಯನ್ನಗಲಿ ಹೋಗುತ್ತಿರುವಾಗ ಪ್ರಕಾಶ ಕುಂದುತಾ ಕಡೆಗೆ ಅನಂತವಾದ ಆಕಾಶ ಮಂಡಲದಲ್ಲಿ ಮಾಯವಾಗುವ ಧೂಮಕೇತುವೂ ಗೋಚರಿಸುವದುಂಟು.

ನಕ್ಷತ್ರಗಳು ಅಸಂಖ್ಯಾತವಾಗಿಯೂ ಅವುಗಳಿಂದ ಈ ಪೃಥ್ವಿಗೆ ದೊರೆಯಬಹುದಾದ ಶುಭಾಶುಭಗಳು ಅತ್ಯಲ್ಪವಾಗಿಯೂ ಇರುವದರಿಂದ ಅವುಗಳನ್ನು ನಾವು ಗಣನೆಗೆ ತರುವದೇ ಇಲ್ಲ. ಇವುಗಳಿಗಿಂತ ಸಮಿಾಪಸ್ಥವಾಗಿರುವ ಗ್ರಹಗಳಿಂದ ನಾವು ಶುಭಾಶುಭ ಫಲಗಳನ್ನು ಹೊಂದಲಾಪೆವೆಂಬ ನಂಬುಗೆಯಿಂದ ನಾವು ಅವುಗಳ ಚಲನಾದಿಗಳನ್ನು ಲಕ್ಷಿಸಿ ನೋಡುತ್ತಿದ್ದೇವೆ. ಈ ಗ್ರಹಗಳೊಳಗೆ ಚಂದ್ರ ಸೂರ್ಯರಿಬ್ಬರು ನಮ್ಮ ಆಗುಹೋಗಿನ ಸರ್ವ ಭಾರವನ್ನು ವಹಿಸಿಕೊಂಡ ಕಾರಣದಿಂದ ಸಮಿಾಪ ಸಂಬಂಧಿಗಳೆಂದೆಣಿಸಲ್ಪಡುತ್ತಾರೆ. ಸಮಸ್ತ ಜೀವರಾಸಿಯು ಇರವೇ ಇವರಿಬ್ಬರನ್ನು ಹೊಂದಿಕೊಂಡಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗದು. ಆದರೆ ಇವರೊಳಗೆ "ತಮಶಾಂತಂ, ಅಮೃತರೂಪಂ, ಸೌಖ್ಯವರ್ಧನಂ, ಭುವನ ಪ್ರಕಾಶಂ, ಜನಾವ ಲೋಕಪ್ರಿಯಂ" ಎಂಬಿತ್ಯಾದಿ ಗುಣನಾಮಗಳನ್ನು ಹೊಂದಿರುವ ಸುಧಾಂಶುವೋ "ತಪನ, ಉಷ್ಣರಶ್ಮಿ, ಜಗಚ್ಚಕ್ಷು, ಲೋಕಬಾಂಧವ" ಎಂಬಿತ್ಯಾದಿ ಹೆಸರುಗಳನ್ನು ಪಡೆದ ಭಾಸ್ಕರನೋ, ಯಾರು ಹೆಚ್ಚಿನ ಉಪಕಾರಿಗಳು ಎಂಬ ತಾರತಮ್ಯವನ್ನು ನಿರ್ಧರಿಸಲು ನಮ್ಮ ಕೈಲಾಗದು. ಅವರವರು ಅವರವರ ಮಟ್ಟಿಗೆ ತಮ್ಮ ಕರ್ತವ್ಯವನ್ನು ಲೋಪವಿಲ್ಲದೆ ನಡಿಸುತ್ತಿರುವವರು. ಅವರವರ ದೆಸೆಯಿಂದ ಸಸ್ಯಾದಿಗಳು ಯಥಾಯೋಗ್ಯವಾಗಿ ಅಭಿವೃದ್ಧಿಯನ್ನೈದುತ್ತಿರುವವು.

ಅರಿಷ್ಟ ಸೂಚಕವಾದ ಬಾಲಕೇತುವು ಗೋಚರವಾಗುತ್ತಲೇ ಕ್ಷಾಮಡಾಮರಾದಿಗಳ ಭಯವು ತಲೆದೋರುವದಲ್ಲದೆ ವಿಚಿತ್ರ ನೋಟದ ದೆಸೆಯಿಂದ ತತ್ಕಾಲಿಕ ಗೌರವವೂ ಅಭಿಮಾನವೂ ಅವಿದ್ಯಾವಂತರಾದ ಕೆಲಬರಲ್ಲಿ ಜನಿಸಬಹುದಾದರೂ ವಿದ್ಯಾವಂತರು ಅದರ ನಿಜ ಸ್ವಭಾವವನ್ನು ಅರಿತಿರುವ ದೆಸೆಯಿಂದ ಅದನ್ನು ಉದಾಸೀನ ದೃಷ್ಟಿಯಿಂದ ನೋಡುತ್ತಿರುವರು.

ನಮ್ಮ ವಿದ್ಯಾ ಇಲಾಖೆ ಎಂಬ ಆಕಾಶದಲ್ಲಿ ನಮಗೆ ನಕ್ಷತ್ರ ರೂಪಗಳಾದವರೂ, ಗ್ರಹ ಸ್ವರೂಪರಾದವರೂ, ಸೂರ್ಯ ಚಂದ್ರರಂತಿರುವವರೂ ಧೂಮಕೇತುವಿನಂತಿರುವವರೂ ಇರುವದು.

ಇತ್ತಲಾಗೆ ಕೆಲವು ವರುಷಗಳಿಂದ ಕಾಸರಗೋಡು ಮತ್ತು ಮಂಗಳೂರು ರೇಂಜಿನ ಪ್ರಾಥಮಿಕ ಉಪಾಧ್ಯಾಯ ಮಂಡಲದಲ್ಲಿ ಕಾಸರಗೋಡು ಮತ್ತು ಮಂಗಳೂರು ರೇಂಜಿನವರು ಪರಸ್ಪರ ಅಭಿಮುಖಪಾದತಲರಂತಿದ್ದು ಸೂರ್ಯ ಚಂದ್ರೋಪಮರಾದ ಮ॥ ರಾ॥ ರಾ॥ ಎನ್. ಕೃಷ್ಣರಾವ್ ಮತ್ತು ಪಿ. ಮಂಗೇಶರಾವ್‌ಗಳಿಂದ ಬುದ್ಧಿವಾದವೆಂಬ ಬೆಳಕನ್ನು ಹೊಂದುತ್ತಿದ್ದಾರೆ. ಇವರಿಬ್ಬರಲ್ಲಿ ಮಂಗಳೂರು ರೇಂಜಿನಲ್ಲಿ ಅಸ್ತಮಿತರಾಗುವವರು ಕಾಸರಗೋಡು ರೇಂಜಿನಲ್ಲಿ ಉದಯಿಸುತ್ತಲೂ ಕಾಸರಗೋಡು ರೇಂಜಿನಲ್ಲಿ ಮುಳುಗುವವರು ಮಂಗಳೂರು ರೇಂಜಿನಲಿ ಮೂಡುತ್ತಲೂ ಇರುವದು ಯುಕ್ತವೂ ಅಗತ್ಯವೂ ಅಲ್ಲವೇ?

ಸುಳ್ಯ ಪ್ರಾಂತ್ಯದ ಉಪಾಧ್ಯಾಯರುಗಳೇ, ನಿಮ್ಮ ಸುಧಾಮರೀಚಿಯು ನಮ್ಮ ಭಾಗಕ್ಕೆ ದೊರೆಯದ್ದಕ್ಕಾಗಿ ನೀವು ಹೆಚ್ಚು ವ್ಯಾಕುಲಪಡಬೇಕಿಲ್ಲ. ನಮ್ಮ ಚಂದಮರೀಚಿಯು ನಿಮಗೆ ಲಭಿಸಿದ್ದರಿಂದ ನಿಮಗದೊಂದು ಕೊರತೆಯಾಯಿತೆಂದು ಅನುಭವವಾಗಲು ಎಡೆ ಇರದು.

ಆಕಾಶದಲ್ಲೂ ಈ ಪ್ರಪಂಚ ಸರ್ವತ್ರದಲ್ಲೂ ಯಾವದೂ ಶಾಶ್ವತವಲ್ಲ. ಪಂಚಭಕ್ಷ್ಯ ಪರಮಾನ್ನಗಳೂ, ಮನೋಹ್ಲಾದಕರವಾದ ಗಾಯನಗಳೂ, ಅಮಿತ ಸೇವನೆಯಿಂದ ಅಸಹ್ಯವಲ್ಲದಿದ್ದರೆ, ದುಸ್ಸಹವಾದರೂ ಆಗುತ್ತಿವೆ. ಆದುದರಿಂದಲೇ ಭಗವಂತನು ತನ್ನ ಸೃಷ್ಟಿಯನ್ನು ನಶ್ವರವಾಗಿ ಕಲ್ಪಿಸಿರುವನು.

ಆದರೆ ನಿಮ್ಮ ಪತ್ರಿಕೆಯನ್ನು ಓದುತ್ತಿರುವಾಗಲೇ ನಮಗೊಂದು ವ್ಯಸನಾಂಕುರವು ತಲೆದೋರ ತೊಡಗಿತು. ಯುವಕರಾದ ರಾ। ರಾ। ಮಂಗೇಶರಾಯರು, ರೋಹಿಣೀಯೊಡನೆ ಬಹುಕಾಲವಿದ್ದುದಕ್ಕೆ ಪ್ರಾಯಶ್ಚಿತ್ತರೂಪವಾಗಿ ಶಾಪಗ್ರಸ್ತನಾದ ಅಮೃತಕಿರಣನೋಪಾದಿ, ಮಲೆಜ್ವರಗ್ರಸ್ತರಾಗಿ ಕಾಸರಗೋಡು ರೇಂಜಿನಿಂದ ಹೊರಡಲು ಅಗತ್ಯಪಟ್ಟದ್ದು ನಿಜವಾದರೆ—"ಗಾಲಿಯೊಂದೇ ರಥಕೆ, ಜೋಡಾಗಿ ಪೂಡುವರೆ, ಸಾಲದೇಳೇಹಯಂ' ಎಂಬೀ ತರದ ಹಲವು ತೊಂದರೆಗಳಿಗೊಳಗಾದ ಖರಕಿರಣನ ಅವಸ್ಥೆಯಲ್ಲಿರುವ ರಾ। ರಾ। ಕೃಷ್ಣರಾಯರ ಸ್ಥಿತಿಯು ಆ ರೇಂಜಿನಲ್ಲಿ ಹೇಗಾಗುವದೋ ಭಗವಂತನೇ ಬಲ್ಲ. ಕಾಲಗತಿಯನ್ನಾರು ಬಲ್ಲರು? ಚಂದ್ರಸೂರ್ಯ ನಕ್ಷತ್ರಗಳೇ ಈ ತರದ ಭ್ರಮಣೆಗಳಿಗೊಳಗಾಗಿರುವಲ್ಲಿ ಮಾನವರ ಪಾಡೇನು? ಸರ್ವ ವ್ಯಾಪಕನಾದ ಭಗವಂತನು ಎಲ್ಲಿದ್ದರೂ ಕಾಪಾಡಬಲ್ಲನು.

ಮಂಗಳೂರು ರೇಂಜ್.

~~~~~~~~

ಮಂಗಳೂರಲ್ಲಿ ನೆರೆದ ರಾಜಭಕ್ತಿ ವರ್ಧಕವಾದ ಮುಹಮ್ಮದೀಯರ ಸಭೆಯು.

~~~~~~~~

ಇದೇ ತಿಂಗಳ ೬ರಲ್ಲು ಅಂಜಮನ್ ಮುಸಿರುಲ್ ಇಸ್ಲಾಮುಯೆಂಬ ಒಂದು ಕಚ್ಚೋಣದಲ್ಲಿ ಪಟ್ಟಣದ ಮುಖ್ಯಸ್ಥರಾದ ಮಾಪ್ಲಾ ಮುಹಮ್ಮದೀಯರವರಿಂದಲೂ, ಪ್ರಾಮುಖ್ಯಸ್ಥರಾದ ಇತರ ಮುಹಮ್ಮದೀಯರವರಿಂದಲೂ ಕಲಿತವಾದ ಒಂದು ಸಭೆಯು ನೆರೆಯಿತು. ಮೌಲಾನ ಸೇಯುದ್ ಅಹ್ಮದ್ ಹಾಜಿ ಕಾಜಿಸಾಹೇಬರೆಂಬ ಮಹಾನುಭಾವರು ಅಗ್ರಾಸನವನ್ನು ವಹಿಸಿಕೊಂಡಿದ್ದರು. ಪ್ರಜಾಧರ್ಮವು ಯಾವ ರೀತಿಯಲ್ಲಿರಬೇಕೆಂಬ ವಿಷಯವನ್ನು ಮುಹಮ್ಮದೀಯರಿಗೆ ತಿಳಿಸುವುದೇ ಈ ಕೂಟದ ಮುಖ್ಯ ಉದ್ದೇಶವಾಗಿತ್ತು. ಸಭೆಯಾಗಿ ಸ್ವಲ್ಪ ಸಮಯದ ತರುವಾಯ ಹಾಜಿ ತಾಲಿಬ್ ಆಲಿ ಸಾಹೇಬರು, ಯೂರೋಪಿನಲ್ಲಿ ಈಗ ನಡೆಯುವ ಘೋರವಾದ ಯುದ್ಧದಿಂದ ಬ್ರಿಟಿಷರಿಗೆ ಸಂಭವಿಸಿದ ಸಂಕಷ್ಟದ ವಿಷಯವಾಗಿಯೂ, ಬ್ರಿಟಿಷರ ಆಳಿಕೆಯಿಂದ ಹಿಂದೂದೇಶದ ಮುಹಮ್ಮದೀ ನಿವಾಸಿಕರಿಗೆ ದೊರೆತ ಸಕಲ ವಿಧವಾದ ಪ್ರಯೋಜನಗಳ ವಿಷಯವಾಗಿಯೂ, ಮನೋರಂಜಕವಾದ ಮತ್ತು ಪ್ರೋತ್ಸಾಹಕರವಾದ ಒಂದು ಉಪನ್ಯಾಸವನ್ನು ಹಿಂದೂಸ್ಥಾನಿ ಭಾಷೆಯಲ್ಲಿ ಕೊಟ್ಟರು. ಇದಾದೊಡನೆಯೇ ಸಭಾಸದರು ಒಬ್ಬೊಬ್ಬರಾಗಿ ಎದ್ದು ನಿಂತು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸಲುದ್ಯುಕ್ತರಾದರು. ಒಲ್ಲಿ ಹುಸೇನಬ್ಬ ಸಾಹೇಬರು ರಾಜಮಾನ್ಯರಾದ ವೈಸರಾಯಿ ಪ್ರಭುಗಳವರಿಗೂ, ಮದರಾಸು ಸಂಸ್ಥಾನಕ್ಕೆ ಅಧಿಕಾರಿಯಾದ ಗವರ್ನರಪ್ರಭುಗಳವರಿಗೂ ತಮಗೆ ಬ್ರಿಟಿಷ್ ಸರಕಾರದ ಮೇಲಿರುವ ಅನುರಾಗವನ್ನೂ ಭಕ್ತಿಯನ್ನೂ ಟೆಲಿಗ್ರಾಮು ಮೂಲಕ ತಿಳಿಸಬೇಕೆಂಬುದು ತನ್ನ ಅಭಿಪ್ರಾಯವೆಂದೆನ್ನಲು, ಹಾಜಿ ಅಬ್ದುಸ್ಸತ್ತಾರ್ ದಾವೂದು ಸೇಟರು ಮತ್ತು ಅಸರ್ಮತ ಮುಹಮ್ಮದ್ ಹಾಬಿಬ್ ಸಾಹೇಬರು ಈ ಅಭಿಪ್ರಾಯಕ್ಕೆ ಸಮ್ಮತಿಕೊಟ್ಟರು. ಈಗ ನಡೆಯುವ ಯುದ್ಧದಲ್ಲಿ ಬ್ರಿಟಿಷರಿಗೆ ಜಯಲಕ್ಷ್ಮಿಯೊಲಿಯುವ ಹಾಗೆ ದೇವರನ್ನು ಪ್ರಾರ್ಥನೆಯ ಮೂಲಕ ಬೇಡಿಕೊಳ್ಳಬೇಕೆಂಬುದೇ ತನ್ನಾಲೋಚನೆಯೆಂದು ಡಿ. ಎಮ್. ಡಿಮಾಲುದ್ದೀನ್ ಸಾಹೇಬರು ಹೇಳಲು ಮುಹಮ್ಮದ್ ರಹ್ಮತುಲ್ಲ ಸಾಹೇಬರೂ ಅಬ್ದು ರಹಿಮಾನ್ ಸಾಹೇಬು ಅಫಾನಿಯರೂ ಇದೇ ತಮ್ಮ ಅಭಿಪ್ರಾಯವೆಂದರು. ಪ್ರಕೃತ ಪಾಶ್ಚಿಮಾತ್ಯರೊಳಗೆ ಉಂಟಾದ ಈ ಘೋರ ಯುದ್ಧದಲ್ಲಿ ಟರ್ಕಿ ದೇಶಕ್ಕೆ ಚಕ್ರವರ್ತಿಯಾದ ಸುಲ್ತಾನರು ಭಾಗಸ್ಥರಾಗದಿರಬೇಕೆಂತಲೂ, ಇದು ಅಸಾಧ್ಯವೆಂದು ತೋರಿದರೆ ಬ್ರಿಟಿಷರ ಸಹಾಯಕರಾಗಿರಬೇಕೆಂಬುದಾಗಿಯೂ, ಇವೇ ತಮ್ಮ ದೀನಭಾವದ ಮತ್ತು ಮನಃಪೂರ್ವಕವಾದ ಪ್ರಾರ್ಥನೆಯೆಂದು ಸಾರ್ವಭೌಮರಾದ ಸುಲ್ತಾನರಿಗೆ ತಿಳಿಸಲೋಸುಗ ಬೊಂಬಾಯಿಯಲ್ಲಿರುವ ಟರ್ಕಿ ರಾಯಭಾರಿಯವರಿಗೆ ಟೆಲಿಗ್ರಾಮು ಮೂಲಕ ಈ ತಮ್ಮ ಅಭಿಪ್ರಾಯವನ್ನು ತಿಳಿಸುವುದೇ ತಮ್ಮ ಪ್ರಥಮ ಕರ್ತವ್ಯವೆಂದೂ ಎಚ್. ಮುಹಮ್ಮದ್ ಪುತ್ತೂರು ಸಾಹೇಬರು ಸೂಚಿಸಲು ಎಮ್. ಮುಹಮ್ಮದ್ ಪುತ್ತಬ್ಬ ಸಾಹೇಬರು ಮತ್ತು ಮಾಮುಬ್ಯಾರಿ ಮುಕ್ತೇಸರರು ಈ ಆಲೋಚನೆಯನ್ನು ಕೂಡಲೇ ನೆರವೇರಿಸಲು ತಾವು ಸಿದ್ಧರಾಗಿರುತ್ತೇವೆಂದುತ್ತರವಿತ್ತರು. ಕದನದಲ್ಲಿ ಯಾವ ರೀತಿಯಾಗಿಯೂ ಸೇರುವುದಿಲ್ಲವೆಂದು ತನ್ನ ಅಭಿಪ್ರಾಯವನ್ನು ಅಫ್ಘಾನಿಸ್ಥಾನದ ರಾಜಶ್ರೀ ಅಮೀರರು ಬಹಿರಂಗವಾಗಿ ತಿಳಿಸಿರುವುದನ್ನು ಕೇಳಿ, ಈ ಸಭೆಯು ಎಣಿಸಲಶಕ್ಯವಾದ ಸಂತೋಷ ಪಡುವುದುಚಿತವೆಂದು ಹಾಜಿ ತಾಲಿಬಲಿ ಸಾಹೇಬರು ಹೇಳಿದರು. ಒಡನೆಯೇ ಅಕ್ಬರ್ ಖಾನ್‌ಸಾಹೇಬರು ಮತ್ತು ಸೊಂತಗೆ...ರಿಗಳ ಮುಗೆ ಹೆಂಬ್ಯಾರಿಗಳು ಇವರಿಬ್ಬರೂ ತಮ್ಮ ಮನಸ್ಸೂ ಇದೇ ಆಗಿದೆ ಎಂದರು. ಈ ರೀತಿಯಾಗಿ ಸಭಿಕರೆಲ್ಲರೂ ತಮ್ಮ ತಮ್ಮ ಮನಸ್ಸಿಗೆ ಯೋಗ್ಯವೆಂದು ತೋರಿ ಬಂದ ವಿಷಯಗಳನ್ನು ತಿಳಿಸಿದ ತರುವಾಯ ಎಮ್. ಮುಹಮ್ಮದ್ ಖಾನ್‌ಸಾಹೇಬರು ಈ ಅಭಿಪ್ರಾಯಗಳ ನಕಲು ಒಂದನ್ನು ದಕ್ಷಿಣ ಕನ್ನಡ ಜಿಲ್ಲಾ ಮೇಜಿಸ್ಟ್ರೇಟರವರ ಸನ್ನಿಧಿಗೆ ಅವರ ಪಠನಕ್ಕೋಸುಗ ಕಳುಹಿಸುವುದುಚಿತವೆಂದು ಹೇಳಲು ವಕೀಲ ಉಸ್ಮಾನ ಸಾಹೇಬರು ಮತ್ತು ಹಾಜಿ ಇಬ್ರಾಹಿಮ್ ಇಲ್ಯಾಸ್ ಸೇಟರು ತಾವೂ ಇದೇ ಮತಸ್ಥರಾಗಿದ್ದೇವೆಂದರು. ಇದಾದೊಡನೆಯೇ ಸಭಿಕರೆಲ್ಲರೂ ಈ ಅಭಿಪ್ರಾಯಗಳನ್ನು ಆದಷ್ಟು ತ್ವರೆಯಿಂದ ನೆರವೇರಿಸಬೇಕೆಂದು ಒಟ್ಟುಕೂಡಿ ಹೇಳಿಕೊಂಡರು. ತರುವಾಯ ಬ್ರಿಟಿಷ್ ಗವರ್ನಮೆಂಟಿಗೆ ಜಯವಾಗಲೆಂದು ದೇವರನ್ನು ಪ್ರಾರ್ಥಿಸುತ್ತಾ, ಎಲ್ಲರೂ ತಮ್ಮ ಗೃಹಾಭಿಮುಖವಾಗಿ ನಡೆದರು.

~~~~~~~~

ಪುತ್ತೂರಲ್ಲಿ ಜರಗುವ ಯುದ್ಧಫಂಡಿನ ಸಭೆ.

~~~~~~~~

ಅಯ್ಯಾ,

ಏಕಛತ್ರಾಧಿಪತಿಗಳಾದ ನಮ್ಮ ಸಾರ್ವಭೌಮರಲ್ಲಿ ನಮಗೆ ಇರುವ ರಾಜಭಕ್ತಿಯನ್ನು ಅರ್ಪಿಸುವುದಕ್ಕೂ, ನಮಗೋಸ್ಕರ ವಿಲಾಯತಿಯಲ್ಲಿ ಪ್ರಕೃತ ಯುದ್ಧ ಮಾಡುವ ರಣವೀರರಿಗೆ ಯಾವ ವಿಧದಿಂದ ಸಹಾಯಮಾಡಬಹುದೆಂಬ ಕುರಿತು ಆಲೋಚಿಸುವುದಕ್ಕೂ ಪುತ್ತೂರಲ್ಲಿ ಇದೇ ತಿಂಗಳ ತಾ. ೧೩ರಲ್ಲಿ ಕೂಡುವ ಮಹಾ ಸಭೆಗೆ ಎಲ್ಲವರೂ ಬರಬೇಕಾಗಿ ನಮಗೆ ಆಮಂತ್ರಣ ಪತ್ರವು ಬಂದಿದೆ.

ನಮಗೋಸ್ಕರ ಅಂದರೆ ಇಡೀ ಬ್ರಿಟಿಷ್ ಸಾಮ್ರಾಜ್ಯದ ಅದ್ವಿತೀಯ ಪರಾಕ್ರಮದ ಬಹುಮಾನವನ್ನೂ ಭದ್ರತೆಯನ್ನೂ ಕಾಪಾಡುವುದಕ್ಕೂ, ದೈತ್ಯಸ್ವಭಾವದ ಜರ್ಮನರಿಂದ ನಿಷ್ಕಾರಣವಾಗಿ ಆಕ್ರಮಿಸಲ್ಪಟ್ಟ ಮಿತ್ರವರ್ಗದವರಿಗೆ ಆಪತ್ಕಾಲದಲ್ಲಿ ಸಹಾಯಮಾಡುವುದಕ್ಕೂ ಪ್ರತಿಜ್ಞಾಬದ್ಧರಾದ ನಮ್ಮ ಸಾರ್ವಭೌಮರು ಯುದ್ಧರಂಗಕ್ಕೆ ಕಾಲಿಟ್ಟುದು ನ್ಯಾಯವೇ ಸರಿ.

ಈ ಯುದ್ಧದಲ್ಲಿ ನಮ್ಮ ಧೈರ್ಯವನ್ನೂ ಸ್ಥೈರ್ಯವನ್ನೂ ತೋರಿಸಿ ನಮ್ಮ ಮಾತೃಭೂಮಿಯ ಅಭಿಮಾನವನ್ನು ರಕ್ಷಿಸುವುದಕ್ಕಾಗಿಯೂ, ಮುಖ್ಯತಃ ನಮ್ಮ ಬಾದಷಹರ ಪಾದಸೇವೆಯನ್ನು ಯಾವ ಪರಿಯಲ್ಲಾದರೂ ಮಾಡಿ ಸಾರ್ಥಕ ವೀರರೆನ್ನಿಸಿಕೊಳ್ಳಬೇಕೆಂಬ ಅಭಿಲಾಷೆಯಿಂದಲೂ ಭಾರತೀಯರು ಮಾಡಿಕೊಂಡ ಮನವಿಯ ಪ್ರಕಾರ ಗವರ್ನಮೆಂಟಿನವರು ಅನೇಕ ಮಂದಿ ಹಿಂದುಸ್ಥಾನದ ಶಿಪಾಯಿಗಳನ್ನು ಯುದ್ಧಕ್ಕೆ ಕೊಂಡುಹೋಗಿದ್ದಾರೆ. ಹೀಗೆ ಯುದ್ಧಕ್ಕೆ ನುಗ್ಗಿದಂಥಾ ಶ್ರಮಸಹಿಷ್ಣುಗಳೂ ಅಪ್ರತಿಮ ಧೈರ್ಯಶಾಲಿಗಳೂ ಆದ ಹಿಂದುಸ್ಥಾನದ ಸೈನಿಕರ ಪೈಕಿ ಅನೇಕರು ನಶ್ವರದೇಹವನ್ನು ತೊರೆದು ವೀರಸ್ವರ್ಗವನ್ನು ಪಡೆಯುವ ಸಂಭವವಿರುವುದು. ಆದರೆ ಈ ರೀತಿ ಮಡಿದುಹೋಗಬಹುದಾದ ರಣವೀರರ ಅನಾಥ ವಿಧವೆಯರ ಮತ್ತು ಬಾಲಕರ ಸಂರಕ್ಷಣೆಗೆ ತಕ್ಕುದಾದ ಒಂದು ಏರ್ಪಾಡನ್ನು ಮಾಡುವುದು ಅಗತ್ಯವಾದುದರಿಂದ ಆ ಬಗ್ಯೆ ನಮ್ಮ ದಯಾಪರರಾದ ವೈಸರಾಯ ಪ್ರಭುಗಳು ಒಂದು ಫಂಡನ್ನು ಏರ್ಪಡಿಸಿದ್ದಾರೆ. ಇದಕ್ಕೆ ವೈಸರಾಯ ಫಂಡು ಎಂದು ಕರೆಯುತ್ತಾರೆ.

ಈ ವೈಸರಾಯಿ ಫಂಡು ಪ್ರಕೃತ ಸ್ವತಹ ಯುದ್ಧಮಾಡುವ ರಣವೀರರಿಗೆ ಅನ್ನವಸ್ತ್ರ ಮೊದಲಾದವುಗಳನ್ನು ಒದಗಿಸುವುದರ ಖರ್ಚಿಗಾಗಿ ಮದ್ರಾಸ್ ಗವರ್ನರರವರು ಏರ್ಪಡಿಸಿದ ಫಂಡಿನಷ್ಟೇ ಮುಖ್ಯವಾಗಿರುತ್ತದೆ. ವೈಸರಾಯ ಫಂಡನ್ನು ಅಲಕ್ಷ್ಯಮಾಡದೆ ಅದಕ್ಕೆ ನಮ್ಮ ಯಥಾನುಶಕ್ತಿಯ ಸಹಾಯವನ್ನು ತಪ್ಪದೆ ಮಾಡಬೇಕೆಂಬುದೇ ನನ್ನ-ಈ ಪತ್ರದ ಉದ್ದೇಶವಾಗಿದೆ. ವೀರರು ಮಡಿದುಹೋದುದರಿಂದ ಅವರ ವಯೋವೃದ್ಧರಾದ ತಂದೆತಾಯಿಗಳು ಮತ್ತು ಹೆಂಡತಿ ಮಕ್ಕಳು ಮೊದಲಾದವರಿಗೆ ಯಾವ ತರದ ಅನಾನುಕೂಲಗಳೂ ಸಂಭವಿಸದ ಹಾಗೆ ನಾವು ನೋಡಿಕೊಳ್ಳಬೇಕಾಗಿರುತ್ತದೆ. ಅನಾಥರಾಗಿರಬಹುದಾದ ತಮ್ಮ ಕುಟುಂಬದವರಿಗೆ ಯಾವ ಸಂಕಷ್ಟಗಳಾದರೂ ಒದಗಬಹುದೆಂಬ ಯೋಚನೆಯೇ ಯುದ್ಧಮಾಡುವ ವೀರರ ಮನಸ್ಸಿನಲ್ಲಿರಗೊಡಿಸಬಾರದು.

ಆದುದರಿಂದ ತಾ. ೧೩ನೆಯ ಮಹಾಸಭೆಗೆ ದಯಪಾಲಿಸುವ ಎಲ್ಲಾ ಗೃಹಸ್ಥರೂ ಈ ಸಂಗತಿಗಳನ್ನು ಗೋಚರದಲ್ಲಿರಿಸಿಕೊಂಡು ವೈಸರಾಯ ಫಂಡನ್ನು ಕೂಡಾ ಜ್ಞಾಪಕದಲ್ಲಿಟ್ಟು ಅದಕ್ಕೂ ಯಥಾಪ್ರಕಾರ ವಂತಿಗೆಯನ್ನು ಕೊಡಬೇಕೆಂದು ನನ್ನ ಪ್ರಾರ್ಥನೆಯಾಗಿರುತ್ತೆ.

ಪುತ್ತೂರು,
ತಾ. 8-9-1914.

ಹಜಾರಾಜ.

ಯುದ್ಧ ಸಮಾಚಾರವು.

ತಾರೀಕು 4ನೇ ಸಪ್ಟಂಬರ.

ಫ್ರೆಂಚ ಬ್ರಿಟಿಷ ಸೇನಾಪಾಳ್ಯಗಳ ಹೊಸನೆಲೆಯ ಮೇಲೆ ಬೀಳಲು ಬಂದ ಶತ್ರುಗಳ ಸೇನೆಯನ್ನು ಫ್ರೆಂಚರ ಬಲಗಡೆಯ ಸೇನಾಂಗವು ತಡೆದು, ಕದನಕ್ಕೆ ನಿಂತು, ಶತ್ರುಗಳನ್ನು ಓಡಿಸಿರುವದು.

ಬ್ರಿಟಿಷ ಫ್ರೆಂಚ ಸೇನೆಗಳಲ್ಲಿ ನಷ್ಟವುಂಟಾಗಿದ್ದರೂ ಸೈನಿಕರು ಎದೆಗುಂದದೆ ಕಾದಾಡುತ್ತಿರುವರು.

ಫ್ರೆಂಚ ಸೇನೆಯು ಎರಡು ದಿವಸಗಳ ಹಿಂದೆ ಲೊರೈನ್ ಮತ್ತು ಒಸೆಜನಲ್ಲಿ ಶತ್ರುಗಳ ಮೇಲೆ ಬಿದ್ದಿರುವರು. ಇಲ್ಲಿ ಫ್ರೆಂಚರು ತಮ್ಮ ಕೈಸೇರಿದ ಪಟ್ಟಣವನ್ನು ಬಲಪಡಿಸಿಕೊಂಡು ನಂತರ ಪುನಃ ಶತ್ರುಗಳ ಮೇಲೆ ಬೀಳಲು ಯತ್ನಿಸಿರುತ್ತಾರೆ. ಆದಕಾರಣ ಫ್ರೆಂಚರು ಇಲ್ಲಿ ಮೆಲ್ಲನೆ ಮುಂದರಿಯುತ್ತಿರುವರು.

ಬ್ರಿಟಿಷ್ ಜರ್ಮನರೊಳಗೆ ಫ್ರಾನ್ಸಿನಲ್ಲಿ ಕದನ ನಡೆಯುತ್ತಿರುವದಾದರೂ ಬ್ರಿಟಿಷ್ ಮತ್ತು ಜರ್ಮನ್, ವೈದ್ಯರು ಯುದ್ಧ ರಂಗದಲ್ಲಿ ಸ್ನೇಹಭಾವದಲ್ಲಿಯೇ ಇರುವರು. ಉಭಯ ಪಕ್ಷದವರೂ ತಮಗೆ ಬೇಕಾದ ಔಷಧಿಗಳನ್ನು ಬದಲಾಯಿಸಿಕೊಳ್ಳುತ್ತಿರುವರು. ಒಬ್ಬ ಬ್ರಿಟಿಷ್ ಸರ್ಜನರು ಪಾಯ ಒಡೆದ ಜರ್ಮನ್ ಸೇನಿಕನ ಮೇಲೆ ಜರ್ಮನ್ ವೈದ್ಯರ ಸಹಾಯದಿಂದ ಶಸ್ತ್ರ ಪ್ರಯೋಗ ನಡಿಸಿದರು

ಜರ್ಮನರು ಬ್ರುಸೆಲ್ಸನ್ನು ಪ್ರವೇಶಿಸಿದ್ದರಿಂದ ಬ್ರುಸೆಲ್ಸಿನಲ್ಲಿ ಬರಗಾಲವಾಗುತ್ತದೋ ಏನೋ ಎಂಬ ಭಯಕ್ಕೆ ಕಾರಣವಾಗಿದೆ. ಈಗ ಅಲ್ಲಿ ನೂರು ಮಂದಿಯಲ್ಲಿ ಒಬ್ಬನಿಗೆ ಹಾಲು ಮತ್ತು ಮಾಂಸ ಸಿಕ್ಕುವುದು ಕಷ್ಟವಾಗಿದೆ ಒಂದು ಪ್ರಾಂತ್ಯದವರು ಅಲ್ಲಿರುವ ಜರ್ಮನರಿಗೆ ದಿನನಿತ್ಯ ೪೦೦ ಬಾಟ್ಲಿ ವೈನ್ ಮತ್ತು ೪೦,೦೦೦ ರಾತ್ಲ ಮಾಂಸ ಒದಗಿಸಿಕೊಡಬೇಕಾಗಿರುವುದು ಬ್ರುಸೆಲ್ಸಿನಲ್ಲಿ ರೊಟ್ಟಿ ಮಾಡುವ ವ್ಯಕ್ತಿಯವರು ದಿನಾಲೂ ೭೦,೦೦೦ ರಾತ್ಲ ರೊಟ್ಟಿ ಕೊಡಬೇಕಾಗಿರುವುದು.

ಜರ್ಮನರು ಬ್ರುಸೆಲ್ಸಿನ ಮೇಲೆ ಹೊರಿಸಿರುವ ಯುದ್ಧ ತೆರಿಗೆಗೆ ಬ್ರುಸೆಲ್ಸಿನ ನಾಲ್ಕು ಮಂದಿ ಐಶ್ವರ್ಯವಂತರು ಜಾಮೀನು ನಿಂತಿರುವರು

ಜರ್ಮನ ಸೇನೆಯಲ್ಲಿ ಸತ್ತವರ ಸಂಖ್ಯೆಯನ್ನು ಪ್ರಕಟಿಸಕೂಡದೆಂಬದಾಗಿ ಜರ್ಮನ ಸರಕಾರದವರು ತಮ್ಮ ರಾಜ್ಯದ ವರ್ತಮಾನ ಪತ್ರಗಳಿಗೆ ಹುಕುಂ ಮಾಡಿರುವರು

ರುಶ್ಯ. ರುಶ್ಯರು ಆಸ್ಟ್ರಿಯ ಸರಹದ್ದಿನ ಮೇಲೆಲ್ಲಾ ಬೀಳುತ್ತಿದ್ದಾರೆ ರುಶ್ಯರು ಲಬ್ಲಿನಿನ ದಕ್ಷಿಣಕ್ಕೆ ಕಾಳಗಕ್ಕೆ ನಿಂತಿರುವರು ಕಾಳಗ ಮಾಡುವ ಪ್ರದೇಶವೆಲ್ಲಾ ಆಸ್ಟ್ರಿಯೂನರ ಹೆಣಗಳಿಂದ ತುಂಬಿ ಹೋಗಿರುವುದು ಎಂತ ಪ್ರಕಟವಾಗಿದೆ.

ಹಿಂದೂಸ್ಥಾನ:—ಅಫಘಾನಿಸ್ಥಾನದ ಅಮೀರರವರು ಈ ಯುದ್ಧಕಾಲದಲ್ಲಿಯ ತನ್ನ ತಟಸ್ಥಭಾವವನ್ನು ವೈಸರಾಯರವರಿಗೆ ತಿಳಿಯಪಡಿಸಿರುವರು -

ತಾರೀಕು 5ನೇ ಸಪ್ಟಂಬರ.

ಫ್ರೆಂಚ ಬ್ರಿಟಿಷ್ ಸೇನಾಪಾಳ್ಯಗಳ ನೆಲೆಯು ಯಥಾರೀತಿ ಇದೆ. ಫ್ರೆಂಚರ ಎಡಭಾಗದಲ್ಲಿ ಮಾತ್ರ ಜರ್ಮನರು ಸ್ವಲ್ಪ ಜಯ ಹೊಂದಿರುವರು. ಇತ್ತಕಡೆ ಫ್ರೆಂಚರಿಗೆ ಲೊರೈನಿನಲ್ಲಿ ಹೊಸ ಜಯಗಳು ಆಗಿವೆ.

ಫ್ರೆಂಚರ ವಾಯುನಾವೆಯು ಶತ್ರುಗಳ ಕುದುರೆಪಡೆಯ ತೋಪಿ ಹೊಡೆಯುವವರನ್ನು ಹತಬಡಿದನಂತರ ಜರ್ಮನರ ಬತ್ತೇರಿಯನ್ನು ಫ್ರೆಂಚರು ತಕ್ಕೊಂಡಿರುತ್ತಾರೆ.

ವೊಸೇಜ್ ಮತ್ತು ಲೊರೈನಿನ ಫ್ರೆಂಚ ಮತ್ತು ಬ್ರಿಟಿಷ್ ಸೇನಾಪಾಳ್ಯಗಳ ಸ್ಥಿತಿಯು ಏನೊಂದೂ ಬದಲಾಗಲಿಲ್ಲ. ಫ್ರೆಂಚರ ಒಂದು ವಾಯುನಾವೆಯು ಜರ್ಮನ ಸೇನಾಪಾಳ್ಯಗಳ ಮೇಲೆ ಹಾರುತ್ತಿರುವಾಗ ಅದಕ್ಕೆ ಜರ್ಮನರು ಗುಂಡು ಹಾರಿಸಿದರು. ಗುಂಡು ವಾಯುನಾವೆಗೆ ತಗಲಿ, ಯಂತ್ರವು ನಿಂತು ಹೋಗಿ, ನಾವೆಯು ಬಲವಾಗಿ ಹೋಲಾಡಿದರೂ ನಾವಿಕನು ಬಹಳ ಪ್ರಯತ್ನದಿಂದ ಜರ್ಮನ್ ಸೇನೆಯ ವಿಶೇಷ ಮಾಹಿತಿಯ ಸಹಿತ ನಾವೆಯನ್ನು ಫ್ರೆಂಚ ನೆಲೆಯ ಕಡೆಗೆ ನಡಿಸಿದನು.

ಫ್ರಾನ್ಸಿಗೆ ಕಳುಹಿಸಲ್ಪಟ್ಟ ಬ್ರಿಟಿಷ ಸೇನೆಯಲ್ಲಿ ನಷ್ಟಹೊಂದಿದ ಫರಸರಿಯಾದ ಸಂಖ್ಯೆಯು ಈಗ ಕಾಣೆಯಾಗಿರುತ್ತದೆ:— ೮೩೭ ಆಫೀಸರು ಹತರಾಗಿರುವರು. ೬೩೭ ಆಫೀಸರರು ಘಾಯಪೆಟ್ಟು ಒಡೆದಿರುವರು. ೯೫ ಆಫೀಸರರು ಕಾಣೆಯಾಗಿರುವರು, ೧೬೭೭ ಸೈನೀಕರು ಹತರಾಗಿರುವರು, ೭೨೪ ಮಂದಿ ಘಾಯ ಒಡೆದಿರುವರು, ೪೧೮೩ ಕಾಣೆಯಾಗಿರುವರು ಕಾಣೆಯಾದವರಲ್ಲಿ ಘಾಯವೊಡೆದವರೂ, ಶತ್ರುಗಳಿಗೆ ಸಿಕ್ಕಿ ಬಿದ್ದ ಸೆರೆಯವರೂ, ಒಂಟಿಯಾಗಿ ಹಿಂದುಳಿದವರೂ, ಪ್ರಾಣಾಪಾಯ ಸ್ಥಿತಿಯಲ್ಲಿರುವವರೂ ಸೇರಿರುವರು

ಘಾಯವೊಡೆದ ಆಫೀಸರರಲ್ಲಿ ನವ್ಯ ವೈಸರಾಯ ಹಾರ್ಡಿಂಜ ಪ್ರಭುಗಳವರ ಮಗನಾದ ಲೆಫ್ಟನೆಂಟ್ ಹಾರ್ಡಿಂಜರವರು ಸೇರಿರುವರು.

ಫ್ರೆಂಚ ಸೇನೆಯು ಸ್ಪಿನ್‌ಕೋರ್ಟ್ ಮತ್ತು ಲಂಗಿಯೋನ್ ಪ್ರಾಂತ್ಯದಲ್ಲಿ ಜರ್ಮನ್ ಯುವರಾಜರ ಸೇನೆಯನ್ನು ಸೋಲಿಸಿರುವದು

ಜರ್ಮನರ ಕುದುರೆಪಡೆಯು ಕಾಡುಪ್ರದೇಶವನ್ನು ದಾಟಿಕೊಂಡು ಹೋಗುತ್ತಿರುವಾಗ ಬ್ರಿಟಿಷರು ಅವರೊಡನೆ ಕಾದಾಡಿ ೧೦ ಫಿರಂಗಿಗಳನ್ನು ಹಿಡಿದಿರುವರು

ಮತ್ತೊಂದು ಜರ್ಮನ್ ಕುದುರೆ ಪಡೆಯೂ ಸ್ವೊಯಿಸನ್ಸ್ ಮತ್ತು ಎನ್ನಿ-ಕೆ-ಚಾಟೊ ಎಂಬೀಸ್ಥಳದ ನೆಲೆಯಲ್ಲೇ ಮುಂದರಿದಿರುವುದು. ಮ್ಯೂಕ್ಸ್ ಡಿಸ್ತ್ರಿಕ್ತಿನಲ್ಲಿ ಶತ್ರುಸೇನೆಯಲ್ಲಿ ಹೆಚ್ಚಿನ ಚಟುವಟಿಕೆಯು ತೋರಿಬರುವದಿಲ್ಲ

ಜರ್ಮನರ ವಾಯುನಾವೆಯು ಪಾರಿಸ್ ನಗರದಲ್ಲಿ ಕಾಣಿಸಿಕೊಂಡು, ಗೇರ್ ಸೆಂಟ್ ಲಾಜರೆ ಮತ್ತು ಒಪ್ರದ ಸಮೀಪ ಸಿಡಿಮದ್ದುಗಳನ್ನು ಹಾಕಿತು ಈ ವಾಯುನಾವೆಯ ಮೇಲೆ ಫ್ರೆಂಚರು ಮಾಡಿನಿಂದ ತೋಪಿಗಳನ್ನು ಹಾರಿಸಿದರು ಅನಂತರ ಈ ವಾಯುನಾವೆಯು ಹಿಂದೆ ಹೋಯಿತು. ವಾಯುನಾವೆಯು ಬಿಸಾಡಿದ ಸಿಡಿಮದ್ದಿನಿಂದ ಎರಡು ಹೆಂಗಸರು ಘಾಯವೊಡೆದರೆಂತ ಪೊಯನಿಯರ್ ಪತ್ರಿಕೆಗೆ ತಂತಿ ಬಂದಿರುವುದು

ಹೇಗು ಕನ್‌ವೆನ್‌ಶನ್ ಸಭೆಯ ಪ್ರಕಾರ ವಾಯುನಾವೆಗಳಿಂದ ಸಿಡಿಮದ್ದುಗಳನ್ನು ಬಿಸಾಡುವುದು ಅಮಾನುಷಕೃತ್ಯವಾದುದರಿಂದ ಜರ್ಮನರ ಈ ಕೃತ್ಯವನ್ನು ವಿರೋಧಿಸಬೇಕೆಂದು ಪಾರಿಸಿನಲ್ಲಿರುವ ಅಮೇರಿಕದ ರಾಯಭಾರಿಯು, ಅಮೇರಿಕ ಸರಕಾರವನ್ನು ಕೇಳಿಕೊಂಡಿರುವನು.

ಜರ್ಮನ ವಾಯುನಾವೆಯು ಪಾರಿಸಿನಲ್ಲಿ ಸಿಡಿಮದ್ದು ಹಾಕಿದ್ದರ ಮುಯ್ಯಿಗೆ ಮುಯ್ಯಿ ತೀರಿಸುವ ಬಗ್ಗೆ ಫ್ರೆಂಚರ ಕೆಲವು ವಾಯುನಾವೆಗಳು ಸರಹದ್ದಿಗೆ ಹೊರಟಿರುವವು

ಬೆಲ್ಜಿಯಮ್ ಜರ್ಮನರು ಬ್ರುಸೆಲ್ಸನ್ನು ಮತ್ತು ಅದರ ಆಜುಬಾಜನ್ನು ಕೋಟೆಗಳಿಂದ ಬಲಕಾಯಿಸಲು ಪ್ರಾರಂಭಿಸಿರುವರು ಅಲ್ಲಿರುವ ಬ್ರಿಟಿಷರಿಗೆ ೨೪ ತಾಸಿನೊಳಗೆ ಪಟ್ಟಣವನ್ನು ಬಿಟ್ಟುಹೋಗಲು ಅಪ್ಪಣೆಯಾಗಿದೆ

ರುಶ್ಯ —ರುಶ್ಯದ ಪ್ರಧಾನಪುರವಾದ ಸೆಂಟ್ ಪೀಟರ್ಸ್ ಬರ್ಗಿಗೆ ರುಶ್ಯ ಸರಕಾರದವರು ಪೆಟ್ರೊಗ್ರೆಡ್ ಎಂಬ ಹೆಸರು ಕೊಟ್ಟಿರುತ್ತಾರೆ

ಪೂರ್ವಪ್ರುಶ್ಯದಲ್ಲಿ ಜರ್ಮನರು ಪಕ್ಕನೇ ರುಷ್ಯಾನರ ಮೇಲೆ ಬಿದ್ದುದ್ದರಿಂದ ಇಲ್ಲಿ ರುಷ್ಯಾನರು ಹಿಂದರಿದರೆಂತ ಪ್ರಕಟವಾಗಿದೆ ರುಶ್ಯರ ಬೆಂಬಲ ಸೇನೆಯು ಸಹಾಯಕ್ಕೆ ಬಂದಿರುವುದು

ರುಷ್ಯಾನರಿಗೆ ಲೆಂಬರ್ಗಿನ ಸಮೀಪ ವಿಶೇಷ ಜಯವುಂಟಾಗಿರುವುದು. ಇಲ್ಲಿ ರುಷ್ಯಾನರು ೪೭೦೦ ಆಸ್ಟ್ರೀಯಾನರನ್ನು ಹೂಣಿಟ್ಟರು. ಆಸ್ಟ್ರಿಯಾನರ ಬಾವಟೆಗಳನ್ನೂ ೩೨ ಫಿರಂಗಿಗಳನ್ನೂ ಅನೇಕ ಸೈನೀಕರನ್ನೂ ಒಬ್ಬ ಜನರಲನನ್ನೂ ಸೆರೆ ಹಿಡಿದರು. ವಾರ್ಶೊ ಡಿಸ್ಟ್ರಿಕ್ಟಿನಲ್ಲಿಯೂ ರುಷ್ಯಾನರಿಗೆ ವಿಶೇಷ ಜಯವಾಗಿ ಆಸ್ಟ್ರೀಯಾನರ ಹಲವು ತೋಪಿಗಳನ್ನೂ ಸಾವಿರಕ್ಕಿಂತಲೂ ಹೆಚ್ಚು ಸೈನೀಕರನ್ನೂ ಸೆರೆ ಹಿಡಿದಿರುತ್ತಾರೆ. ಈಗ ರುಷ್ಯಾನರು ಲೆಂಬರ್ಗಿಗೆ ಮುಂದರಿಯುತ್ತಿದ್ದಾರೆ. ಶತ್ರುಗಳು ಮೆಲ್ಲನೆ ಹಿಂದರಿದಿರುವರು. ಕೆಲವು ತೋಪಿಗಳು ರುಷ್ಯಾನರಿಗೆ ಸಿಕ್ಕಿರುವವು. ಶತ್ರುಗಳು ಹೆಲೆಕ್ ಎಂಬಲ್ಲಿ ರುಷ್ಯಾನರ ಮೇಲೆ ಬೀಳಲು ಯತ್ನಿಸಿದರೂ ವಾರ್ಶೊ ಪ್ರಾಂತ್ಯದಲ್ಲಿ ಬಹಳ ನಷ್ಟಹೊಂದಿ ಹಿಮ್ಮೆಟ್ಟಲ್ಪಟ್ಟರು.

ಗಾಲಿಶ್ ಪ್ರಾಂತ್ಯದಲ್ಲಿ ಎರಡು ರುಷ್ಯಾನರ ಸೇನೆಯು ಮುಂದರಿಯುವುದನ್ನು ಜರ್ಮನರು ನಿಲ್ಲಿಸ ಪ್ರಯತ್ನಿಸಿದರು. ಇಲ್ಲಿ ರುಷ್ಯಾನರ ಸೇನೆಯ ಜನರಲ್ ಸಮ್ಸನೊಫರು ಕೊಲ್ಲಲ್ಪಟ್ಟರು.

ಲೆಂಬರ್ಗಿನ ಪೂರ್ವದಲ್ಲಿರುವ ಲೊಕೆಶ್ಟ ಎಂಬಲ್ಲಿ ರುಷ್ಯಾನರು ಆಸ್ಟ್ರಿಯಾನರ ಸೇನೆಯನ್ನು ಸೋಲಿಸಿ, ೧೦೦ ಆಫೀಸರರನ್ನೂ, ೪೦೦೦ ಸೇನಿಕರನ್ನೂ ೨೦ ತೋಪಿಗಳನ್ನೂ ತಕ್ಕೊಂಡರು. ಆಸ್ಟ್ರಿಯಾನರ ಒಬ್ಬ ಸೇನಾಧಿಪತಿಯು ಈ ಕದನದಲ್ಲಿ ಮಡಿದನು. ಲೆಂಬರ್ಗಿಗೆ ೧೦ ಮೈಲು ದೂರದಲ್ಲಿ ನಡೆಯುತ್ತಿದ್ದ ಯುದ್ಧವು ಅಂತ್ಯವಾಯಿತು. ರುಶ್ಯಾನರು ಆಸ್ಟ್ರಿಯಾನರ ೩ ಸೇನಾಂಗಗಳನ್ನು ಸೋಲಿಸಿ ವಿಶೇಷ ನಷ್ಟಪಡಿಸಿದರು ರುಶ್ಯಾನರು ೧೫೦ ತೋಪಿಗಳನ್ನು ಹಿಡಿದರು.

ಲೆಂಬರ್ಗಿನ ಪೂರ್ವದಲ್ಲಿ ೭ ದಿವಸಗಳ ಯುದ್ಧ ನಡೆದನಂತರ ರುಷ್ಯಾನರು ಅನೇಕ ಕೋಟೆ ಕೊತ್ತಲುಗಳನ್ನು ಹಿಡಿದು ಮುಖ್ಯ ಕೋಟೆಗೆ ಮುಂದರಿಯುತ್ತಿದ್ದಾರೆ

ತಾ. ೧ರಲ್ಲು ಕಠಿಣ ಕಾಳಗ ನಡೆದು ಆಸ್ಟ್ರೀಯರ ೨೦೦ ಸಾವಿರ ಸೈನೀಕರು ಕೂಡಿದ್ದ ಸೇನೆಗಳನ್ನು ರುಶ್ಯರು ಮುರಿಯಬಡಿದರು ರುಷ್ಯಾನರ ಕುದುರೆ ಪಡೆಯು ಶತ್ರುಗಳನ್ನು ಹಿಂದಟ್ಟಿ ಪೂರ್ಣ ಜಯಶಾಲಿಯಾಯಿತು ಶತ್ರುಗಳಲ್ಲಿ ಅನೇಕ ಮಂದಿ ಸೆರೆ ಬಿದ್ದಿರುವರು

ಜಾಪಾನ್.—ಜಾಪಾನಿಯರು ಕಿಯೊಚೊ ದ್ವೀಪಗಳಲ್ಲಿ ೭ ದ್ವೀಪಗಳನ್ನು ವಶಮಾಡಿಕೊಂಡಿರುವರಲ್ಲದೆ ಜರ್ಮನರು ಸಮುದ್ರದಲ್ಲಿ ಹಾಕಿದ್ದ ಸಿಡಿಮದ್ದಿನ ಗನಿಗಳಲ್ಲಿ ಒಂದು ಸಾವಿರ ಗನಿಗಳನ್ನು ತೆಗೆದಿರುವರು.

ದಕ್ಷಿಣ ಆಫ್ರಿಕದಲ್ಲಿರುವ ಭಾರತೀಯರು ಬ್ರಿಟಿಷ ಸರಕಾರದವರ ಕಡೆಗಿರುವ ತಮ್ಮ ರಾಜಭಕ್ತಿಯನ್ನು ತೋರ್ಪಡಿಸಿ, ಬ್ರಿಟಿಷ ಸೇನೆಯ ಮಂಗಲವನ್ನು ಬಯಸಿ ಪ್ರಾರ್ಥಿಸುತ್ತಿರುವರೆಂತ ತಿಳಿಯಪಡಿಸಿರುವರು. ತಮಗೆ ತಾಪತ್ರಯಗಳಿದ್ದರೂ ಬ್ರಿಟಿಷರ ಧ್ವಜದ ಆಶ್ರಯದಲ್ಲಿ ತಾವು ಅನುಭವಿಸುವ ಉದಾರತ್ವ ಮತ್ತು ಸ್ವತಂತ್ರವನ್ನು ಚೆನ್ನಾಗಿ ಅರಿತಿರುವೆವೆಂತ ಅವರು ಹೇಳುವರು. ೫೦೦೦ ಭಾರತೀಯರಿರುವ ಒಂದು ಸೇನಾಂಗವನ್ನು ತಯಾರಿಸುವರೆ ಇವರು ನಿರ್ಣಯಿಸಿರುವರು

ಹಿಂದೂಸ್ಥಾನ.—ಇಂಪೀರಿಯಲ್ ರಿಲೀಫ್ ಫಂಡಿಗೆ ಹಣ ಕೂಡಿಸುವುದು ಹೇಗೆ ಮತ್ತು ಅದನ್ನು ಉಪಯೋಗಿಸುವುದು ಯಾವ ಬಗ್ಗೆ ಎಂಬ ವಿಷಯವು ಪ್ರಕಟಿಸಲ್ಪಟ್ಟಿರುವುದು. ಈ ಫಂಡಿಗೆ ವೈಸರಾಯ ಪ್ರಭುಗಳವರು ಪ್ರೆಸಿಡೆಂಟರಾಗಿಯೂ ಸರ್ ವಿಲಿಯಮ್ ಮೇಯರರು ವೈಸ್‌ಪ್ರೆಸಿಡೆಂಟರಾಗಿಯೂ ಇರುವರು. ಹಣವನ್ನು ಕೂಡಿಸುವರೆ ಮತ್ತು ಸಂಕಷ್ಟದಲ್ಲಿರುವವರನ್ನು ಗೊತ್ತುಹಚ್ಚುವರೆ ಸಂಸ್ಥಾನಿಕ ಮತ್ತು ಸ್ಥಳಿಕ ಕಮಿಟಿಗಳು ನೇಮಿಸಲ್ಪಡುವವು. ಈ ಫಂಡಿನ ಹಣವು ಮುಖ್ಯವಾಗಿ ಯುದ್ಧಕ್ಕೆ ಹೋದ ಸೈನೀಕರ ಕುಟುಂಬದ ಬಗ್ಗೆ ಮತ್ತು ಯುದ್ಧದಲ್ಲಿ ಸತ್ತವರ ಹೆಂಡತಿ ಮಕ್ಕಳ ಬಗ್ಗೆ ಉಪಯೋಗಿಸಲ್ಪಡುವುದು. ಈ ಹಣವನ್ನು ಉಪಯೋಗಿಸುವುದರಲ್ಲಿ ಯೂರೋಪಿಯನ್ ಮತ್ತು ಭಾರತೀಯರೆಂಬ ಮತ್ತು ಆಫೀಸರನು ಮತ್ತು ಸೈನೀಕನು ಎಂಬ ಭೇದವಿರದು. ಯುದ್ಧಸಂಬಂಧ ತಾಪತ್ರಯಪಡುವ ಕೇವಲ ಬಡವರಿಗೂ ಈ ಫಂಡಿನಿಂದ ಸ್ವಲ್ಪ ಸಹಾಯ ಕೊಡೋಣಾಗುವುದು. ಸ್ಥಳಿಕ ಮತ್ತು ಸಂಸ್ಥಾನಿಕ ಕಮಿಟಿಗಳು ಈಗ ಕೂಡಿಸಿದ ಹಣದಲ್ಲಿ ಸೇಕಡಾ ೨೫ರಂತೆ ಮಾತ್ರ ಇಟ್ಟುಕೊಂಡು ಉಳಿದದ್ದನ್ನು ಯುದ್ಧಕ್ಕೆ ಹೊರಟಿರುವ ಸೈನೀಕರ ಕುಟುಂಬದ ಸಹಾಯ ಬಗ್ಗೆ ಸೆಂಟ್ರಲ್ ಕಮಿಟಿಗೆ ಕಳುಹಿಸಿಕೊಡಬೇಕಾಗಿರುವುದು.

ತಾರೀಕು 6ನೇ ಸಪ್ಟಂಬ

ಬ್ರಿಟಿಷರು ಶತ್ರುಗಳ ಹತ್ತು ತೋಪಿಗಳನ್ನು ತಕ್ಕೊಂಡು ಶತ್ರುಗಳನ್ನು ಹಿಂದೆ ಅಟ್ಟಿರುವರು. ಕದನವು ನಡೆಯುತ್ತಿದೆ ಎಂತ ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಪ್ರಕಟಿಸಿರುವರು.

ಬ್ರಿಟಿಷ್ ಫೀಲ್ಡ್ ಮಾರ್ಶೆಲ್ ಸರ್ ಜೋನ್ ಫ್ರೆಂಚರವರು ಯುದ್ಧ ಪ್ರಾರಂಭಿಸುವ ಮೊದಲು ಸೇನೆಗೆ ಹೃದಯಂಗಮವಾದ ಭಾಷಣ ಕೊಟ್ಟಿರುವರು:—"ಜನಾಂಗದ ಸ್ವತಂತ್ರತೆಯನ್ನೂ ಗೌರವವನ್ನೂ [illegible] ಬಗ್ಗೆ ನಮ್ಮ ಜತೆಗಾರರಾದ ಫ್ರೆಂಚ ಮತ್ತು ಬೆಲ್ಜಿಯಮ [illegible] ಸೇನೆಗಳೊಡನೆ ನಿಂತು, [illegible] ನಾವು ಇಲ್ಲಿ ಬಂದಿದ್ದೇವೆ. [illegible] ನಿಮ್ಮ ಶಕ್ತಿಯ ಮೇಲೆ ನಂಬಿಕೆಯುಳ್ಳವನಾಗಿ [illegible]

ಯೂಪ ನೀತಿ ಸ್ಥಿತಿಯನ್ನು ಅರತು, ನಾವು ದೇವರಿಗಾಗಿ, ಮತ್ತು ನಮ್ಮ ದೇಶಕ್ಕಾಗಿ ಕಾದಾಡಬೇಕು ವ ಸಾಯಬೇಕು."

ಬ್ರಿಟಿಷರು ಜರ್ಮನರ ಫಿರಂಗಿಗಳನ್ನು ಬಹು ಶೂರತನದಿಂದ ಹಿಡಿದಿರುವರು ಜರ್ಮನರು ಬಣವೆಗಳ ಹಿಂದೆ ಇಟ್ಟಿದ್ದ ೧೧ ಫಿರಂಗಿಗಳು ಬ್ರಿಟಿಷರ ಮೇಲೆ ಗುಂಡಿನ ಮಳೆಯನ್ನು ಸುರಿಸುತ್ತಿದ್ದರೂ ಬ್ರಿಟಿಷ ಸೇನೆಯು ಅದನ್ನು ಲಕ್ಷ್ಯಮಾಡದೆ ಮುಂದರಿದು, ಫಿರಂಗಿ ಹೊಡೆಯುವವರನ್ನು ಕಡಿದು ಹಾಕಿ, ಫಿರಂಗಿಗಳನ್ನು ಹಾಳುಮಾಡಿ, ಶತ್ರುಗಳ ಇತರ ಬತ್ತೇರಿಗಳಿಂದ ಹಾರಿ ಬರುತ್ತಿದ್ದ ಗುಂಡುಗಳನ್ನು ತಪ್ಪಿಸಿ ಹಿಂದಕ್ಕೆ ಹೋದರು

ಬ್ರಿಟಿಷ್ ಸೇನೆಯಲ್ಲಿ ಪುನಃ ೫೨೧೮ ಮಂದಿ ಪ್ರಾಣಾಪಾಯ ಹೊಂದಿದರೆಂತ ಪ್ರಕಟವಾಗಿದೆ ಆಫೀಸರರ ಪೈಕಿ ೧೮ ಮಂದಿ ಮಡಿದರು, ೭೮ ಮಂದಿ ಘಾಯಪೊಡೆದರು, ೮೭ ಮಂದಿ ಕಾಣೆಯಾಗಿರುವರು ಸೈನಿಕರ ಪೈಕಿ ೫೨ ಮಂದಿ ಮಡಿದರ, ೩೧೨ ಮಂದಿ ಘಾಯಪೊಡದರು, ೪೭೭೨ ಮಂದಿ ಕಾಣೆಯಾಗಿರುವರು ಅಸಮರ್ಥರಾಗಿದ್ದು ಹಿಂದೆ ಕಳುಹಿಸಲ್ಪಟ್ಟ ೨೪೮೨ ಮಂದಿಯೂ ಸೆರೆಹಿಡಿಯಲ್ಪಟ್ಟವರೂ ದಾರಿತಪ್ಪಿ ಒಂಟಿಯಾಗಿ ತಿರುಗಾಡುವವರೂ ಕಾಣೆಯಾದವರ ಸಂಖ್ಯೆಯಲ್ಲಿ ಸೇರಿರುವರು

ಫ್ರಾನ್ಸ್:—ಫ್ರೆಂಚ ಸರಕಾರವು ಪಾರಿಸ್ ನಗರದಿಂದ ಬೊರ್ಡೋಗೆ ವೈಯ್ಯೋಣಾಪ್ತರ ಕುರಿತು ಫ್ರೆಂಚ ಸರಕಾರದವರು ತಮ್ಮ ಪ್ರಜೆಗಳಿಗೆ ಈ ರೀತಿ ತಿಳಿಸಿರುವರು ಪಾರಿಸ್ ನಗರದ ಸುತ್ತಲೂ ಕಾಳಗ ನಡೆಯುವ ಸಂಭವವಿರುವುದರಿಂದ ಸರಕಾರವನ್ನು ಬೊರ್ಡೋ ಪಟ್ಟಣಕ್ಕೆ ವೈಯ್ಯುವದು ಅವಶ್ಯವಾಯಿತು ಪಾರಿಸ್ ನಗರದ ಮೇಲೆ ಶತ್ರುಗಳು ಬೇಗನೆ ಬರುವ ಸಂಭವವಿಲ್ಲವಾದರೂ ಸೈನ್ಯವ್ಯೂಹಗಳು ಪಟ್ಟಣದ ಸುತ್ತು ತಿರುಗಬೇಕಾಗಿರುವುದು ದೇಶದಲ್ಲೆಲ್ಲಾ ರಾಜ್ಯಭಾರವನ್ನು ಸರಿಯಾಗಿ — ಏನೊಂದೂ ಅಭ್ಯಂತರವಿಲ್ಲದೆ ನಡಿಸಲಿಕ್ಕಾಗುವ ಹಾಗೆ ಸರಕಾರವನ್ನು ಪಾರಿಸ್ ನಗರದಿಂದ ಇತರ ಕಡೆಗೆ ವೈಯ್ಯುವುದು ಅವಶ್ಯವಾಗಿದೆ ಮುಖ್ಯ ಸೇನಾಧಿಪತಿಯ ಕೈಕೆಳಗಿನ ಸೇನೆಯು ಪಟ್ಟಣವನ್ನು ಕಾಪಾಡುವುದು ಅದೇ ಕಾಲ ಇತರ ಪ್ರದೇಶಗಳಲ್ಲಿಯೂ ಯುದ್ಧ ನಡಿಸೋಣವಾಗುವುದು ಈ ಯುದ್ಧವು ಒಸ್ಸದ ಯುದ್ಧ ವಿರತಿ ವ ತಾತ್ಕಾಲಿಕ ಯುದ್ಧವನ್ನು ನಿಲ್ಲಿಸುವ ಏರ್ಪಾಡಗಳೇನಾದರೂ ಇಲ್ಲದ ನಡೆಯುವುದು.

ಪಾರಿಸಿನ ಮೇಲೆ ವಾಯುನಾವೆಗಳ ವಿಶೇಷ ಕಾಳಗವು ನಡೆಯುತ್ತಿದೆ ಪಾರಿಸ್ ನಗರದ ಮೇಲೆ ಸಿಡಿಮದ್ದು ಎಸೆದ ಜರ್ಮನ್ ವಾಯುನಾವೆಯ ಮೇಲೆ ಫ್ರೆಂಚ ವಾಯುನಾವೆಯು ಬಿದ್ದಿರುವುದು. ಈ ಜರ್ಮನ ವಾಯುನಾವೆಯು ಬಹಳ ಮೇಲಕ್ಕೆ ಹಾರಿ ತಪ್ಪಿಸಿಕೊಂಡಿತು ಆದರೆ ನಂತರ ಫ್ರೆಂಚ ವಾಯುನಾವೆಯು ಮತ್ತೊಂದು ಜರ್ಮನ ವಾಯುನಾವೆಗೆ ಗುಂಡು ಹಾರಿಸಿ ಎರಡು ಜರ್ಮನರನ್ನು ಕೊಂದಿರುವುದು ಯುದ್ಧನಾವೆಗಳ ಕದನದಿಂದ ಉಂಟಾಗುವ ಉಪಟಳವನ್ನು ತಪ್ಪಿಸಿಕೊಳ್ಳುವ ಬಗ್ಗೆ ಪಾರಿಸ್ ನಗರದಲ್ಲಿರುವ ಹೆಂಗಸರು ಮತ್ತು ಮಕ್ಕಳು ಇತರ ಕಡೆಯಲ್ಲಿರುವ ತಮ್ಮ ಸಂಬಂಧಿಕರಲ್ಲಿಗೆ ವ ಸ್ನೇಹಿತರಲ್ಲಿಗೆ ಹೋಗುವುದು ಒಳ್ಳೇದೆಂದು ಪಾರಿಸಿನಲ್ಲಿ ಸೂಚಿಸಲ್ಪಟ್ಟಿರುವುದು

ಬೆಲ್ಜಿಯುಮ್:—ಎಂಟ್‌ವರ್ಪಿನ ಮೇಲೆ ಜವ ನದ ಜೆಪಲಿನ್ ವಾಯುನಾವೆಯು ಬಿಸಾಡಿದ ಸಿಡಿಮದ್ದಿನಿಂದ ೧೦ ಮನೆಗಳ ನಾಶವಾಗಿರುವವು

ಹಲವು ಸಾವಿರ ಆಸ್ಟ್ರೀಯಾನರು ಲೆಂಬರ್ಗನಲ್ಲಿ ಕೊಲ್ಲಲ್ಪಟ್ಟರು ಅನೇಕರು ಸೆರೆಹಿಡಿಯಲ್ಪಟ್ಟರು

ರುಷ್ಯಾನರು ಆಸ್ಟ್ರೀಯಾನರ ೪ ಸೇನೆಗಳನ್ನು ಲೆಂಬರ್ಗಿನ ಸಮೀಪ ಪೂರ್ಣವಾಗಿ ಹತಬಡೆದು ವಿಶೇಷ ನಷ್ಟವನ್ನುಂಟು ಮಾಡಿ ೧೫೦ ತೋಪುಗಳನ್ನು ಹಿಡಿದಿರುವರೆಂತ ವೈಸರಾಯ ಪ್ರಭುಗಳವರಿಗೆ ತಂತೀ ಬಂದಿರುವುದು ರುಷ್ಯನರು ಕೊಯಿನೆಗ್ಸ್‌ಬರ್ಗನ ಆಕ್ರಮಿಸಿರುವರು

ಶಾಂತ ಸಾಗರದಲ್ಲಿರುವ ಸಾಮೊವ ದ್ವೀಪವನ್ನು ಬ್ರಿಟಿಷರು ಹಿಡಿದು ಅಲ್ಲಿಯ ಜರ್ಮನ್ ಗವರ್ನರರನ್ನೂ ಇತರ ನೆರೆಯವರನ್ನೂ ಫಿಜಿದ್ವೀಪಕ್ಕೆ ಕಳುಹಿಸಿರುವರು

~~~~~~

ತಾರೀಕು 7ನೇ ಸಪ್ಟಂಬರ.

ಪಾರಿಸ್ ನಗರದ ಕೋಟೆಗಳು ಜರ್ಮನರನ್ನು ಪಟ್ಟಣದ ೧೨ ಮೈಲು ದೂರಕ್ಕೆ ನಿಲ್ಲುವ ಹಾಗೆ ಮಾಡುವಂಥವುಗಳಾಗಿವೆ. ಕೋಟೆಗಳನ್ನು ತಕ್ಕೊಂಡ ನಂತರ ಮಾತ್ರವೇ ಪಟ್ಟಣಕ್ಕೆ ತೋಪು ಹಾರಿಸಲು ಜರ್ಮನರಿಂದ ಸಾಧ್ಯವಾದೀತಲದೆ ಈ ಮೊದಲು ಪಟ್ಟಣಕ್ಕೆ ಹಾರಿಸಬಹುದಾದ ತೋಪುಗಳು ಜರ್ಮನರ ಕೂಡೆ ಇಲ್ಲ ಎಂಬದಾಗಿ ಕಿಚನರ್ ಪ್ರಭುಗಳು ಹೇಳಿರುವರು.

ಜರ್ಮನರು ಫ್ರಾನ್ಸಿನೊಡನೆ ಒಪ್ಪಂದಮಾಡಿಕೊಳ್ಳಲು ಸಿದ್ಧವಾಗಿರುವುದೆಂಬ ವಾರ್ತೆಯು ಹಬ್ಬಿರುವುದು

ಜರ್ಮನಿಯಲ್ಲಿ ಬಲತ್ಕಾರದಿಂದ ಪೈರು ಕರಾವು ಮಾಡಿಸುವ ಬಗ್ಗೆ ಜರ್ಮನರು ೧೦೦೦ ಮಂದಿ ಬೆಲ್ಜಿಯನರನ್ನು ಜರ್ಮನಿಗೆ ಗಡಿಪಾರು ಮಾಡಿರುತ್ತಾರೆ

ರುಶ್ಯ ರುಶ್ಯರು ಲಬ್ಲಿನಿನಲ್ಲಿ ಆಸ್ಟ್ರಿಯಾನರ ಸೇನೆಯನ್ನು ಹಿಂದಟ್ಟಿ ೧೦೦೦ ಮಂದಿಯನ್ನೂ ೮ ಫಿರಂಗಿಗಳನ್ನೂ ಸೆರೆಹಿಡಿದರು ಸರಹದ್ದಿನಲ್ಲೆಲ್ಲಾ ಕಠಿಣ ಕಾಳಗ ನಡೆಯುತ್ತಿದೆ. ರುಶ್ಯಾನರು ೭ ದಿವಸಗಳಲ್ಲಿ ೪೦,೦೦೦ ಆಸ್ಟ್ರಿಯಾನರನ್ನು ಸೆರೆಹಿಡಿದರು

ರುಶ್ಯಾನರು ಕಳೆದ ಬ್ರಹಸ್ಪತಿವಾರ ಲೆಂಬರ್ಗನ್ನು ವಶಮಾಡಿಕೊಂಡರು

— — ೦ ——

ತಾರೀಕು 9ನೇ ಸಪ್ಟಂಬರ.

ಜರ್ಮನರು ಪಾರಿಸಿಗೆ ಮುಂದರಿಯುತ್ತಿರುವರು ಫ್ರೆಂಚ ಮತ್ತು ಬ್ರಿಟಿಷ ಸೇನೆಗಳು ಬಲವಾದ ಪಾರಿಸ್ ಕೋಟೆಗಳ ಸುತ್ತಲು ಬಲಕಾಯಿಸಿರುವವು ಫ್ರೆಂಚ ಮತ್ತು ಬ್ರಿಟಿಷ್ ಸೇನೆಗಳು ಸೋತುಹೋಗದೆ ಜರ್ಮನರಿಗೆ ಇಡೀ ಪಾರಿಸ್ ನಗರವನ್ನು ಮುತ್ತುವುದು ಅಸಾಧ್ಯವಾಗಿರುವುದು

ವೆರ್ಡನ್ ಡಿಸ್ಟ್ರಿಕ್ಟಿನಲ್ಲಿ ಫ್ರೆಂಚರು ಜರ್ಮನರೊಡನೆ ಕಾದಾಡಿ ಶತ್ರುಗಳಲ್ಲಿ ನಷ್ಟವನ್ನುಂಟುಮಾಡಿರುವರು. ಲೋರೈನಿನಲ್ಲಿಯೂ ಒಸೆಜೆಸ್‌ನಲ್ಲಿಯೂ ಪುನಃ ಫ್ರೆಂಚರು ಜಯಪ್ರದರಾಗಿರುವರು

ಬೆಲ್ಜಿಯುಮ್ —ಜರ್ಮನರು ಮೆಲಿನ್ಸ್ ಪಟ್ಟಣಕ್ಕೆ ಎರಡು ತಾಸುಗಳ ವರೆಗೆ ಗುಂಡು ಹಾರಿಸಿದರು ತನ್ಮಧ್ಯೆ ಅಲ್ಲಿದ್ದ ಪ್ರಖ್ಯಾತ ಚಿತ್ರಗಳನ್ನು ಬೆಲ್ಜಿಯನರು ಎಂಟ್‌ವರ್ಪಿಗೆ ಸಾಗಿಸಿದರು. ಅಲ್ಲಿಯ ದೇವಾಲಯದ ಹೆಚ್ಚಿನ ಭಾಗವು ಹಾಳಾಗಿರುವುದು.

ಜರ್ಮನರ ಒಂದು ಬಲವಾದ ಸೇನೆಯು ಬ್ರುಸೆಲ್ಸಿನಿಂದ ಟೆರ್‌ಮೊಂಡಯ ಕಡೆಗೆ ಹೋಗಿರುವುದು. ಎಂಟ್‌ವರ್ಪ ಮತ್ತು ಒಸ್ಟೆಂಡಿನ ವ್ಯವಹಾರಗಳನ್ನು ಕಡಿಯುವದೇ ಈ ಸೇನೆಯು ಅಲ್ಲಿಗೆ ಹೋಗಿದ್ದರ ಉದ್ದೇಶವಾಗಿದೆ

ಬೆಲ್ಜಿಯುಮಿನ ಮೆಲೀನ್ಸ್ ಜಿಲ್ಲೆಯಲ್ಲಿ ಮೆಲೀನ್ಸ್ ಪಟ್ಟಣವನ್ನು ಹಾಳುಮಾಡುವ ಜರ್ಮನರ ಪ್ರಯತ್ನವನ್ನು ನೋಡಿಕೊಂಡು ಅಲ್ಲಿಯ ನೀರು ಕಾಲುವೆಗಳಿಗೆ ಅಡ್ಡ ಕಟ್ಟಿರುವ ಅಣೆ ಕಟ್ಟುಗಳ ಬಾಗಿಲುಗಳನ್ನು ತೆರೆದು ಪಟ್ಟಣದಲ್ಲೆಲ್ಲಾ ಬೆಲ್ಜಿಯನರು ನೀರು ತುಂಬುವಂತೆ ಮಾಡಿದರು. ಜರ್ಮನರು ನೀರಿನ ಈ ಪ್ರವಾಹವನ್ನು ನೋಡಿ ಬೆಚ್ಚಿ ಬಿದ್ದರೂ ಪರಾಕ್ರಮದಿಂದ ನೀರಲ್ಲಿ ನಿಂತುಕೊಂಡು ತಮ್ಮ ಫಿರಂಗಿಗಳನ್ನು ರಕ್ಷಿಸಲು ಪ್ರಯತ್ನಿಸಿದರು

ಎಂಟ್‌ವರ್ಪ ಕೋಟೆಗಳಿಂದ ಹಾರಿಸೋಣಾದ ತೋಪುಗಳ ಗುಂಡುಗಳಿಂದ ಜರ್ಮನರಲ್ಲಿ ಬಹಳ ನಷ್ಟ ಉಂಟಾಗಿರುತ್ತದೆ

ಒಸ್ಟ್ರಿಯಾ:—ಸರ್ವಿಯನರ ಮತ್ತು ರುಶ್ಯಯನರೊಂದಿಗೆ ಕಾದಾಡಿಕೊಂಡು ಒಸ್ಟ್ರಿಯನರ ಸೇನೆಯು ಬಹಳವಾಗಿ ಮಡಿದಿರುವುದರಿಂದಲೂ ಯುದ್ಧ ಸಾಮಾಗ್ರಿಗಳು ಸಹ ಶತ್ರುಗಳ ಕೈವಶವಾಗಿ ಹೋದದ್ದರಿಂದಲೂ ತನ್ನ ಸೇನೆಯನ್ನು ಹೊಸಶಾಳ್ಗಗಳಿಂದ [illegible] ಯಾನರಿಗಿರದು. ರುಶ್ಯಯನರು ಜಯಿಸಿರುವ ಒಸ್ಟ್ರಿಯಾದ ಪ್ರಾಂತ್ಯಗಳನ್ನು [illegible] ಗಿ ಅವನ್ನು ಮಾಡಿ ಈ ಸಂಸ್ಥಾನದಲ್ಲಿ ರುಶ್ಯಯನರು ತಮ್ಮ ಅಧಿಕಾರಿಗಳನ್ನು ಇಡುತ್ತಿರುವರು ಈ ರೀತಿ ಒಸ್ಟ್ರಿಯಾನರು ಸೋತು ಹೋಗಿರುವುದರಿಂದ ರುಶ್ಯಾನರ ದಕ್ಷಿಣ ಭಾಗದಲ್ಲಿರುವ ಸೇನೆಗೆ ಜರ್ಮನಿಯ ಬರ್ಲಿನ್ ಪಟ್ಟಣದತ್ತಕಡೆಯಿಂದ ಎದುರಿಸಲು ಯಾವ ಸೇನೆಯೂ ಇರದು.

ಜಪಾನೀಯರ ಎರಡು ಸಾವಿರ ಸೇನಿಕರುಳ್ಳ ಒಂದು ದಳವು ಕಿಂಯೊಚೊ ಪಟ್ಟಣದ ಹೊರಪಾರ್ಶ್ವದಲ್ಲಿ ಬಂದಿಳಿದಿರುವುದು

ಈ ಯುದ್ಧವು ಸಂಧಾನದಲ್ಲಿ ತೀರುವುದಾದರೆ ಬ್ರಿಟಿಷ್ ಫ್ರೆಂಚ, ರುಷ್ಯ ಸರಕಾರದವರು ಒಂದಾಗಿ ಸಂಧಾನ ಶರ್ತಗಳನ್ನು ಜರ್ಮನರಿಗೆ ಕೊಡಬೇಕಲ್ಲದೆ ಬೇರೆಬೇರೆಯಾಗಿ ಕೊಡಕೂಡದೆಂಬದಾಗಿ ಈ ಮೂರು ರಾಜ್ಯಗಳವರೂ ನಿರ್ಣಯ ಮಾಡಿಕೊಂಡಿರುವರು

~~~~~~

ತಾರೀಕು 9ನೇ ಸಪ್ಟಂಬರ.

ಜರ್ಮನರು ಪಾರಿಸಿಗೆ ಮುಂದರಿಯುತ್ತಿದ್ದಾರೆಂಬ ವಾರ್ತೆಯು ಪಾರಿಸಿಗೆ ತಲಪಿದರಿಂದ ಪುರವಾಸಿಗಳಲ್ಲಿ ಅನೇಕರು ಪಟ್ಟಣವನ್ನು ಬಿಟ್ಟುಹೋಗಲು ಪ್ರಾರಂಭಿಸಿರುವರು ಪಟ್ಟಣ ಬಿಟ್ಟು ಹೋಗುವವರಲ್ಲಿ ಹೆಚ್ಚಿನವರು ಪಾರಿಸಿನಲ್ಲಿ ಪ್ರಖ್ಯಾತಿಪಡೆದ ಪಂದ್ಯಾಟ ಕುದುರೆಗಳ ಮಾಲಿಕರಾದ ಇಂಗ್ಲಿಷರಾಗಿರುವರು

ಪಾರಿಸಿನ ಮೇಲೆ ಜರ್ಮನ ಸೇನೆಯು ಮುಂದೊತ್ತಿ ಬರುವುದು ಕಮ್ಮಿಯಾಗಿಯದೆಂದೂ ಭಯಪಡಲು ಕಾರಣವಿಲ್ಲವೆಂದೂ ಕಡೆಗೆ ಬಂದ ವಾರ್ತೆಯಿಂದ ತಿಳಿದುಬರುತ್ತದೆ

ಎಡಕಡೆಯಿಂದ ಮುಂದೊತ್ತಿ ಬರುತ್ತಿದ್ದ ಜರ್ಮನರನ್ನು ಫ್ರೆಂಚರು ತಡೆದಿರುವರು ಜರ್ಮನರು ಕೊಂಪೇಗ್ನೆ ಮತ್ತು ಸೇಲಿಸ್ ಡಿಸ್ಟ್ರಿಕ್ಟುಗಳನ್ನು ಬಿಟ್ಟುಹೋಗಿರುತ್ತಾರೆ

ರೈಮ್ಸ್ ಮತ್ತು ವೆರ್ಡನ್ ಪ್ರಾಂತ್ಯದಲ್ಲಿ ವಿಶೇಷ ಕದನವು ನಡೆಯುತ್ತಿದೆ ಬುಧವಾರ ದಿನ ಈ ಸ್ಥಳದಲ್ಲಿ ಒಟ್ಟಿಗೆ ೩—೪ ಮಿಲಿಯ ಸೈನಿಕರು ಯುದ್ಧಕ್ಕೆ ನಿಂತಿದ್ದರು ಎಂತ ಬೆರ್ಲಿನಿನಿಂದ ವಾರ್ತೆ ಬಂದಿರುವುದು ಇಲ್ಲಿ ನಡೆಯುತ್ತಿರುವ ಭಯಂಕರ ಕದನಗಳು ಇತಿಹಾಸದಲ್ಲಿ ಹಿಂದೆ ಆಗಲಿಲ್ಲವೆಂತ ಪ್ರಕಟವಾಗಿದೆ.

ಲಿಲ್ಲೆ ಪ್ರಾಂತ್ಯದ ಮೇಲೆ ಜರ್ಮನರು ೮ ಮಿಲಿಯ ಪವನುಗಳ ಯುದ್ಧತೆರಿಗೆಯನ್ನು ಹೊರಿಸಿರುವರು

ಒಟ್ಟಿಗೆ ಬ್ರಿಟಿಷ ಸೇನೆಯಲ್ಲಿ ೧೫,೦೦೦ ಮಂದಿ ಅಪಾಯ ಹೊಂದಿರುವರು. ಈ ಪೈಕಿ ಕಾಣೆಯಾದವರಲ್ಲಿ ಅನೇಕರು ಪುನಃ ಸೇನೆಗೆ ಬಂದು ಸೇರಿರುವರು. ಜರ್ಮನ ಸೇನೆಯಲ್ಲಿ ಬ್ರಿಟಿಷರಕ್ಕಿಂತ ೩ ಪಾಲಷ್ಟು ಹೆಚ್ಚಿಗೆ ನಷ್ಟವಾಗಿರುವುದು

ಬ್ರಿಟಿಷ ಸೇನೆಗೆ ೧೯,೦೦೦ ಮಂದಿ ಪುನಃ ಸೇರಿಸಲ್ಪಟ್ಟಿರುವರು. ಬ್ರಿಟಿಷ ಸೈನೀಕರೆಲ್ಲರೂ ಎದೆಗುಂದದೆ ಧೈರ್ಯದಿಂದ ಇರುವರು

ಬ್ರಿಟಿಷ ಸೇನೆಯು ಈಗ ಮಾರ್ನೆ ಎಂಬಲ್ಲಿಯ ದಕ್ಷಿಣ ಕಡೆಯಲ್ಲಿದೆ ಇದರ ಬಲ ಮತ್ತು ಎಡಪಾರ್ಶ್ವಗಳಲ್ಲಿ ಫ್ರೆಂಚ ಸೇನೆಯು ಇದೆ ಜರ್ಮನರು ಮಾರ್ನೆಯ ಕಡೆಗೆ ಫ್ರೆಂಚ ಸೇನೆಗಳ ಎಡ ಮತ್ತು ಮಧ್ಯಭಾಗದ ಕಡೆ ಮುಂದರಿಯುತ್ತಿದ್ದಾರೆಂತ ತೋರುತ್ತದೆ.

ಫ್ರೆಂಚರ ಜನರಲ್ ಜೊಫ್ರೆಯವರು ಜರ್ಮನರ ಸೇನೆ ನೆಲೆಗಳನ್ನು ಕೆಡವಿಬಿಟ್ಟಿರುವರೆಂದೂ ಬ್ರಿಟಿಷರು ಜರ್ಮನರನ್ನು ಸುತ್ತಿರುವರೆಂತಲೂ ಬುಲ್ಲೋನಿನಲ್ಲಿ ವಾರ್ತೆ ಇದೆ

ಜರ್ಮನರು ಲಿಲ್ಲೆ, ವೆಲೆನ್ಸಿಯೆನ್ಸ್, ಆರ್ಮೆಂಟಿಯರೆಸ್, ಡೊವೆ; ಬೆಲ್ಲಿಯಲನ್ನು ಅವಸರದಿಂದ ಬಿಟ್ಟುಹೋಗಿರುತ್ತಾರೆಂತ ವಾರ್ತೆಇದೆ.

ಬ್ರಿಟಿಷ ಮತ್ತು ಫ್ರೆಂಚ ಸೇನೆಗೆ ಸೆಂಟ್‌ಕ್ವೆಂಟಿನಿನಲ್ಲಿ ವಿಶೇಷ ಜಯವಾಗಿರುವುದು. ಬ್ರಿಟಿಷ ಫ್ರೆಂಚ ಸೇನೆಗಳು ಜರ್ಮನರನ್ನು ಹಿಂದಟ್ಟಿ ಅವರಲ್ಲಿ ವಿಶೇಷ ನಷ್ಟಪಡಿಸಿರುತ್ತಾರೆ.

ಜರ್ಮನರ ಮೊದಲನೇ ಸೇನಾಂಗವು ಲಾಫರ್ಟೆಸೌಸ್ ಜಾಕ ಎಮಿಯನ್ ಮತ್ತು [illegible] ಮಧ್ಯೆ ಇದೆ. [illegible]

...ಲ್ಲಿಗೆ ಮುಂದರಿಸುತ್ತಿದೆ. ಜರ್ಮನರು ಈ ಎಲ್ಲಾ ಸ್ಥಳಗಳ ಮೇಲೆ ಹಾಕಿರಲ್ಲ ಮುಂದರಿದಿದರು ಎಂತ ವಾರ್ತೆ ಇದೆ

ರುಶ್ಯಾನರು ೧೦ ದಿವಸಗಳ ಯುದ್ಧವಮಾಡಿ ಆಸ್ಟ್ರಿಯಾನರನ್ನು ಪೂರ್ಣವಾಗಿ ಸೋಲಿಸಿರುವರು. ಆಸ್ಟ್ರಿಯಾನರ ಇಬ್ಬರು ಜನರಲರು ಮಡಿದುಹೋದರೆಂತ ಆಸ್ಟ್ರೀಯ ರಾಜಧಾನಿಯಾದ ವಿಯನ್ನಾದಲ್ಲಿ ಪ್ರಕಟವಾಗಿದೆ

ಜರ್ಮನರ ಸಹಾಯವು ಆಸ್ಟ್ರಿಯಾನರಿಗೆ ಬಹಳ ತಡವಾಗಿ ಬಂತು

ರುಶ್ಯಾನರು ಲೆಂಬರ್ಗ್ ಸ್ಟೇಶನಿಗೆ ನುಗ್ಗಿದಾಗ ಅಲ್ಲಿ ಯುದ್ಧ ಸಾಮಾಗ್ರಿಗಳನ್ನು ತುಂಬಿಸಿ ಆಗ ತಾನೇ ಹೊರಡಲಿಕ್ಕಿರುವ ಕೆಲವು ಅಗ್ಗಾಡಿಗಳು ರುಶ್ಯಾನರಿಗೆ ಸಿಕ್ಕಿದವು.

ಲಬ್ಲಿನ್ ಪೋಲ್ಮ್ ಸರಹದ್ದಿನಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ಆಸ್ಟ್ರಿಯಾನರು ಇಲ್ಲಿ ರುಶ್ಯಾನರ ಸೇನೆನೆಲೆಗಳನ್ನು ಚದರಿಸಲು ವಿಶೇಷ ಪ್ರಯತ್ನ ಮಾಡಿ ೫೦೦೦ ಮಂದಿಯನ್ನು ಕಳಕೊಂಡರು

ರುಶ್ಯಾನರು ಕೊಯಿನೆಗ್ಸ್‌ಬರ್ಗನ್ನು ಮುತ್ತಿಗೆ ಹಾಕಿರುತ್ತಾರೆ

ಜರ್ಮನರು ರುಶ್ಯಾನ ಜನರ ಮೇಲೆ ವಿಶೇಷ ದುರಾಚಾರಗಳನ್ನು ನಡಸುತ್ತಿದ್ದಾರೆಂದು ರುಶ್ಯ ಸರಕಾರದವರು ಪ್ರಕಟಿಸಿರುವರು

ಬ್ರಿಟಿಷರ ೫೬ ವಾಯುನಾವೆಗಳು ಇಂಗ್ಲಿಷ್ ಕಾಲುವೆಯನ್ನು ದಾಟಿ ಯುದ್ಧರಂಗಕ್ಕೆ ಹೋಗಿರುವವು ಎಂತ ಪ್ರಕಟವಾಗಿದೆ

ಜರ್ಮನರ ಹಾಳಾದ ೭ ಡಿಸ್ಟ್ರೋಯರ್ ಮತ್ತು ಟೋರ್ಪೆಡೋ ಬೋಟುಗಳು ಕೀಲಿಗೆ ಬಂದಿರುವ ಮತ್ತು ಜರ್ಮನರ ಇತರ ಕೆಲವು ಯುದ್ಧನಾವೆಗಳು ಮುಣುಗಿಸಲ್ಪಟ್ಟಿರುವದೆಂಬ ವಾರ್ತೆಯು ನಿಜವಾಗಿರುವುದು

ಒವಾನ್ —ಜಪಾನಿನ ಎರಡು ಜೆಫಲಿನ್ ವಾಯುನಾವೆಗಳು ಸಿಂಗ್‌ಟೋ ಎಂಬಲ್ಲಿಗೆ ಸಿಡಿಮದ್ದು ಹಾಕಿರುವುದು. ಒಂದು ವಾಯುನಾವೆಗೆ ಜರ್ಮನರು ೧೫ ಗುಂಡು ಹಾರಿಸಿದರು. ಆದರೆ ಎರಡು ನಾವೆಗಳೂ ಸುರಕ್ಷಿತವಾಗಿ ಹಿಂದಿರುಗಿದವು.

ತಾರೀಕು 10ನೇ ಸಪ್ಟೆಂಬರ.

ಫ್ರಾನ್ಸಿನಲ್ಲಿ ಕದನವು ನಡೆಯುತ್ತಿದೆ. ಪಾರಿಸಿಗೆ ಮುಂದರಿಯುತ್ತಿರುವ ಜರ್ಮನ ಸೇನೆಯನ್ನು ತಡೆಗಟ್ಟಲು ಮುಂದರಿದ ಫ್ರೆಂಚ ಬ್ರಿಟಿಷ ಸೇನೆಗಳು ಜರ್ಮನರ ಬಲ ಪಾರ್ಶ್ವದ ಸೇನೆಯನ್ನು ಕಲೆತು ಶತ್ರುಗಳೊಡನೆ ಕಾದಾಡಿರುವರು.

ಜರ್ಮನ್ ಸೇನೆಯ ೧೦ನೇ ತುಕಡಿಯ ಸೇನಾಧಿಪತಿಯು ಗೈಸ್ ಎಂಬಲ್ಲಿ ನಡೆದ ಯುದ್ಧದಲ್ಲಿ ಮಡಿದಿರುವನು. ಇಲ್ಲಿ ಫ್ರೆಂಚರು ಜರ್ಮನ್ ಸೇನೆಯ ೩ ತುಕಡಿಗಳನ್ನು ಹಿಂದಟ್ಟಿರುವರು

ಫ್ರಾನ್ಸಿನಲ್ಲಿ ನಡೆದ ಕದನಗಳಲ್ಲಿ ಜರ್ಮನ ಸೇನೆಯಲ್ಲಿ ೬೫ ಸಾವಿರ ಮಂದಿ ಮಡಿದಿರುವರೆಂತ ಫ್ರಾನ್ಸಿನಿಂದ ಬ್ರುಸೆಲ್ಸಿಗೆ ಕಳುಹಿಸಲ್ಪಟ್ಟ ಜರ್ಮನ್ ಸೇನಿಕರ ಗುರುತು ಪಟ್ಟಿಯಿಂದ ತಿಳಿದುಬರುತ್ತದೆ

ಬೆಲ್ಜಿಯಮ್. ಬೆಲ್ಜಿಯಮಿನ ಮೆಲಿನ್ಸ್ ಡಿಸ್ಟ್ರಿಕ್ಟಿನಲ್ಲಿ ನಡೆದ ಯುದ್ಧದಲ್ಲಿ ಜರ್ಮನ ಸೇನೆಯಲ್ಲಿ ೩೦೦೦ ಮಂದಿ ನಷ್ಟಪಟ್ಟಿರುವರು

ರುಶ್ಯಾನರು ಗೆಲಿಸಿಯದಲ್ಲಿರುವ ಪ್ರೆಜೆಮ್ಸಿಲ್ ಎಂಬ ಮಹಾ ಕೋಟೆಗಳನ್ನು ಮುತ್ತಿರುವರು. ಇವು ಬೇಗನೇ ಶರಣಾಗತವಾಗುವುದು ವ ರುಶ್ಯಾನರಿಂದ ಬಡೆಯಲ್ಪಡುವುದು.

ಬಾಲ್ಕಾನ್. ಮೊಂಟೆನಿಗ್ರೋಯರು ಆಸ್ಟ್ರಿಯಾನರನ್ನು ಹರ್ಜೆಗೋವಿನಿಯಾದ ಬೋಲ್ಬಂಟಿಜ ಎಂಬಲ್ಲಿ ಸೋಲಿಸಿ ಶತ್ರುಗಳ ಸರ್ವ ಯುದ್ಧಸಾಹಿತ್ಯಗಳನ್ನು ಹಿಡಿದಿರುವರು. ಆಸ್ಟ್ರೀಯದ ಸಿಯಾಂಟಿಜ ಎಂಬ ಪಟ್ಟಣವನ್ನು ಮೊಂಟೆನಿಗ್ರೋಯರು ಹಿಡಿದಿರುವರು. ಇಲ್ಲಿ ಕಾಳಗ ನಡೆಯುತ್ತಿದೆ.

ವಿದೇಶ ವೃತ್ತಾಂತ.

ಅಲ್ಬಾನಿಯದಲ್ಲಿ ಹೊಸ ಸರಕಾರದ ವಿರೋಧ ಪಕ್ಷದವರು ದುರಾಜ್ಜೊವನ್ನು ಪ್ರವೇಶಿಸಿ ಅರಮನೆಯ ಮೇಲೆ ತಮ್ಮ ಧ್ವಜವನ್ನು ಏರಿಸಿರುವರು

ಕಾರ್ಡಿನಲ್ ಡೆಲ್ಲ ಚಿಯಸ್ಸ್‌ರವರು ಹೊಸ ಪೋಪಸ್ವಾಮಿಯಾಗಿ ಆರಿಸಲ್ಪಟ್ಟಿರುತ್ತಾರೆ

ಉತ್ತರ ಹಿಂದೂಸ್ಥಾನ

ಇದೇ ತಾ ೧೪ರಲ್ಲಿ ವೃದ್ಧ ದಾದಭೋಯಿ ನಾರೋಜಿಯವರ ೯೦ನೇ ಜನ್ಮೋತ್ಸವವು ಆಚರಿಸೋಣಾಯಿತು. ಈ ದಿನ ಅವರಿಗೆ ಅನೇಕ ಸ್ನೇಹಿತರಿಂದ ಶುಭೋಕ್ತಿಗಳು ಕಳುಹಿಸಲ್ಪಟ್ಟಿತು. ಬೇಗಂ ವ ಚಾಯಿ ಗಜನಾಥಿ ಹಿಂದೂ ಸ್ತ್ರೀಮಂಡಳಿಯವರು ವರ್ಸೋವದಲ್ಲಿರುವ ಮಿ ದಾದಭೋಯಿ ನಾರೋಜಿಯವರ ಬಂಗ್ಲೆಗೆ ಹೋಗಿ ಅವರಿಗೆ ಮಂಗಲ ಸೂಚಕವಾದ ಪತ್ರವನ್ನು ಅರ್ಪಿಸಿ ಈ ಮಂಡಳಿಯವರ ಕೈಕೊಂಡ ವಿವಿಧ ಸಂಸ್ಥಾಧನೆಗಳನ್ನು ಸೂಚಿಸಿದರು

ದಾದಭೋಯಿ ನಾರೋಜಿಯವರ ಕಾಲೋಚಿತ ಉತ್ತರವನ್ನು ಕೊಟ್ಟು, ಮುಖ್ಯವಾಗಿ ಹಿಂದೂ ಸ್ತ್ರೀಯರು ಜಾತಿಭೇದಗಳೇನೂ ಇಲ್ಲದೆ ಇತರ ಸ್ತ್ರೀಯರ ಕೂಡ ಬೆರೆತುಕೊಂಡು ಕೆಲಸ ಮಾಡುವುದನ್ನು ನೋಡಿ ತಾನು ಬಹು ಸಂತೋಷಪಟ್ಟೆನು. ಇದು ಈ ಕಾಲದ ಸತ್‌ಚಿಹ್ನೆಗಳಾಗಿವೆ. ವಿದ್ಯಾಭ್ಯಾಸವೇ ಇದರ ಮೂಲಕಾರಣವೆಂದು ಹೇಳಿದುದಲ್ಲದೆ ವೈಸರಾಯ ಹಾರ್ಡಿಂಜ ಪ್ರಭುಗಳವರ ಪತ್ನಿಯವರು ಸ್ತ್ರೀಯರ ಉದ್ಧರಣೆ ಬಗ್ಗೆ ಮಾಡಿದ ಪ್ರಯತ್ನವು ದೀರ್ಘಕಾಲ ಉಳಿಯುವುದೆಂಬದು ತನಗೆ ಖಾತ್ರಿ ಇದೆ ಎಂದೂ ಈ ಸ್ತ್ರೀಮಂಡಲವು ನಮ್ಮ ಒಳ್ಳೇ ಸರಕಾರಕ್ಕೆ ಸಹಾಯ ಮಾಡುತ್ತಿದೆಂದೂ ಲೇಡಿ ವಿಲಿಂಗ್ಡನರವರ ಕಾರ್ಯದಲ್ಲಿ ಪಾಲು ತಕ್ಕೊಂಡಿದೆಂದೂ ತಿಳಿದು ಬಹು ಸಂತೋಷ ಪಡುತ್ತೇನೆಂದು ಹೇಳಿರುವರು

ರಂಗೂನಿನಲ್ಲಿ ಅಕ್ಕಿಯ ಕ್ರಯವು ವಿಶೇಷವಾಗಿ ತಗ್ಗಿರುವುದು. ಬರ್ಮದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ನೆರೆ ಬಂದು ಒಟ್ಟಿಗೆ ಸುಮಾರು ೧೧೬,೦೦೦ ಎಕ್ರೆ ವಿಸ್ತೀರ್ಣ ಭೂಮಿಯ ಪೈರುಗಳನ್ನು ಕೊಚ್ಚಿಕೊಂಡು ಹೋಗಿರುವುದು

ಮುಂಬಾಯಿಯಲ್ಲಿ ಸೂಲಗಿತ್ತಿಯರನ್ನು ತಬೀತು ಮಾಡುವ ಸಂಬಂಧ ಲೇಡಿ ವಿಲಿಂಗ್ಡನರವರು ಕೈಕೊಂಡ ಕಾರ್ಯವನ್ನು ಜಾರಿಗೆ ತರುವ ಬಗೆ ಹೇಗೆಂಬದನ್ನು ಕುರಿತು ಆಲೋಚಿಸುವ ಬಗ್ಗೆ ಲೇಡಿ ವಿಲಿಂಗ್ಡನರವರು ಸ್ವತಃ ಬಡ ಜನರು ವಾಸಿಸುವ ಕೆಲವು ಕೇರಿಗಳಿಗೆ ಹೋಗಿ ಸೂಲಗಿತ್ತಿಯರನ್ನು ಕೂಡಿಸಿ ತನ್ನ ಆಲೋಚನೆಯನ್ನು ಅವರಿಗೆ ವಿವರಿಸಿ ಹೇಳಿರುವರು. ಆ ಕೇರಿಗಳಲ್ಲಿ ವಾಸಿಸುವ ಜನರೊಡನೆಯೂ ಲೇಡಿ ವಿಲಿಂಗ್ಡನರವರು ಮಾತನ್ನಾಡಿ ಆ ಜನರ ಸ್ಥಿತಿಗತಿಗಳನ್ನು ತಿಳಕೊಂಡಿರುವರು

ದರ್ಭಂಗದ ಬಾಗಮತಿ ನದಿಯಲ್ಲಿ ವಿಶೇಷ ನೆರೆ ಬಂದು ಅನೇಕ ಪ್ರದೇಶಗಳು ನೀರಿನ ಅಡಿಯಲ್ಲಿವೆ

ಮುಂಬಾಯಿಯ ಕೆಲವು ಶಾಲಾ ವಿದ್ಯಾರ್ಥಿಗಳು ಯುದ್ಧ ಫಂಡಿಗೆ ವಂತಿಗೆ ಕೊಟ್ಟಿರುವರು. ಯುದ್ಧ ನಕ್ಷೆಯನ್ನು ಬಹು ಆಸಕ್ತಿಯಿಂದ ಪರಿಸುತ್ತಿರುವರು. ಕೆಲವು ಶಾಲೆಗಳಲ್ಲಿ ಪ್ರತಿದಿನದ ಯುದ್ಧ ಸಮಾಚಾರವನ್ನು ಈ ವಿದ್ಯಾರ್ಥಿಗಳಿಗೆ ತಿಳಿಯ ಹೇಳಿ ಬ್ರಿಟಿಷರು ಜರ್ಮನಿಯೊಡನೆ ಯುದ್ಧ ಸಾರಲು ಕಾರಣವೇನೆಂಬ ಕುರಿತು ವಿವರಿಸೋಣಾಗುತ್ತಿದೆ

ನಿರಾಶ್ರಿತ ಜನರಲ್ಲಿಯೂ ಸ್ವಗೌರವವಿದೆಂಬದು ಈ ಕೆಳಗಿನ ದೃಷ್ಟಾಂತದಿಂದ ವಿದಿತವಾಗುವದು. ಪೇಶ್ವಾರಿನ ಒಬ್ಬ ಬೀದಿ ಗುಡಿಸುವವನ ಮನೆಯಲ್ಲಿ ಒಂದು ವಿವಾಹವಾಯಿತು. ಈ ವಿವಾಹಕ್ಕೆ ನರ್ತಕಿಗಳನ್ನು ನಾಟ್ಯ ಮಾಡಲು ಕರೆದಾಗ ಅವರು ಗುಡಿಸುವವನ ಮನೆಯಲ್ಲಿ ನಾಟ್ಯಮಾಡೆವೆಂದು ಹೇಳಿ ಒಬ್ಬರಾದರೂ ಬರಲಿಲ್ಲ. ಹ್ಯಾಗು ವಿವಾಹವು ನರ್ತನವಿಲ್ಲದೆ ನಡೆಯಿತು. ವಿವಾಹದ ನಂತರ ಆ ಹಲಾಲುಖೋರನು ಈ ವಿಷಯವನ್ನು ತನ್ನ ಜಾತಿ[illegible] ತಿಳಿಸಿದ್ದರಿಂದ ಎಲ್ಲರೂ ಒಟ್ಟು ಕೂಡಿ ನರ್ತಕಿಯರ ಮನೆಗೆ ಯಾರೂ ಕೆಲಸಕ್ಕೆ ಹೋಗಬಾರದೆಂದು ಮುಷ್ಕರ ಹಾಕಿದರು. ಈ ನರ್ತಕಿಯರು ಮುನಿಸಿಪಾಲಿಟಿಗೆ ದೂರು ಮಾಡಿಕೊಂಡರೂ ಪ್ರಯೋಜನವಾಗದೆ ಹೋಯಿತು. ಕಡೆಗೆ ಆ ನರ್ತಕಿಯರು ತಾವಾಗಿ ಹಲಾಲುಖೋರರಲ್ಲಿಗೆ ಹೋಗಿ ಮಾತನ್ನಾಡಿದರು. ನರ್ತಕಿಯರಲ್ಲಿ ಒಬ್ಬಳು ಗುಡಿಸುವವನ ಮನೆಗೆ ಹೋಗಿ ನಾಟ್ಯಮಾಡಬೇಕೆಂಬ ತೀರ್ಮಾನವಾಯಿತು. ಹೀಗೆ ನರ್ತಕಿಯರು ಮಾಡಿದ್ದರಿಂದ ಹಲಾಲುಖೋರರು ಪುನಃ ಕೆಲಸ ತೊಡಗಿದರು.

ದಕ್ಷಿಣ ಕನ್ನಡ

ಕಾಸರಗೋಡು.—ಇದೇ ತಾ. ೫ರಲ್ಲು ಇಲ್ಲಿ ಶಾಲಾ ಕ್ರಿಕೆಟ್ ಸಂಗಡದವರಿಗೂ ಕಂಬಾಯಿಂಡ್ ಕ್ರಿಕೆಟ್ ಸಂಗಡದವರಿಗೂ ಕ್ರಿಕೆಟ್ ಪಂದ್ಯಾಟ ನಡೆದು, ಶಾಲಾ ಸಂಗಡದವರು ಪೂರ್ಣವಾಗಿ ಸೋತುಹೋಗಿರುವರು

ಇಲ್ಲಿಯ ಸಾಹುಕಾರರು ದವಸಧಾನ್ಯಗಳ ಬೆಲೆಯನ್ನು ಏರಿಸುತ್ತಿರುವರು. ಹೀಗೆಯೇ ಸಾಹುಕಾರರು ಮುಂದಕ್ಕೂ ಏರಿಸುವುದಾದರೆ ಬಡವರು ಜೀವನ ಸಾಗಿಸುವುದೇ ಕಷ್ಟವಾಗುವುದು. ನಮ್ಮ ಊರಲ್ಲೇ ಬೆಳೆಯುವ ದವಸಧಾನ್ಯಗಳಿಗೆ ಕೂಡಾ ಕ್ರಯ ಏರಿಸುವುದರ ಕಾರಣವೇನೋ ಅರಿಯೆವು

ಮಲ್ಪೆ —ಕಳೆದ ಆಗೋಸ್ತು ತಾರೀಕ ೩೧ರಲ್ಲು ರಂಬಳಕಟ್ಟೆ, ಕೊಪ್ಪಲ, ಹೊಸಕಟ್ಟೆ, ಸಂಕೇಸ, ಬಾಬತೋಟ ಮೊದಲಾದ ಸ್ಥಳಗಳ ಮೊಗೇರರೆಲ್ಲರೂ ಮಲ್ಪೆಯ ರಾ। ಯಂ. ಕೆ. ಸೋಮನವರಿಂದ ಆಮಂತ್ರಿಸಲ್ಪಟ್ಟು ಮಹಾ ಸಭೆ ನೆರೆದರು. ಈ ಸಭೆಯಲ್ಲಿ ಮಂಗಳೂರಿನ ವಿ. ಮೋಹನಪ್ಪ ತಿಂಗಲಾಯರು ಹಾಜರಿದ್ದು [illegible] ಮತ್ತು ಸ್ವಪ್ರಯತ್ನದ ಕುರಿತು ಮಾತಾಡಿದರು. ಅಕ್ಷರ ಜ್ಞಾನವಿಲ್ಲದೆಯೂ, ಅಮಲು ಪಾನದ ದಾಸತ್ವದಿಂದಲೂ ಸ್ವಜಾತಿಯವರು ಪರರ ಕೈಗೆ ಸಿಕ್ಕಿ ಹೇಗೆ ಪರಾವಲಂಬಿಗಳಾಗುತ್ತಿರುವರೆಂಬದರ ಕುರಿತು ರಾ। ಯಂ. ಕೆ. ಸೋಮನವರು ಭಾಷಣ ಕೊಟ್ಟು, ಉಡುಪಿ ತಾಲೂಕು ಮೊಗೇರರ ಶ್ರೀ ಜ್ಞಾನೋದಯ ಸಭೆಯ ಬಲವನ್ನು ಹೆಚ್ಚಿಸಿ ತನ್ಮೂಲಕ ಸ್ವಜಾತಿಯವರೊಳಗೆ ಮದ್ಯಪಾನ ನಿಷೇಧಕ ಚಳುವಳಿಯನ್ನುಂಟುಮಾಡಿ ಜ್ಞಾನಾಭಿವೃದ್ಧಿ ಸಾಧನೆಗೆ ತೊಡಗಬೇಕೆಂದು ಸಭಿಕರನ್ನು ಪ್ರಾರ್ಥಿಸಿದರು. ಈ ಬಗ್ಗೆ ರಂಬಳಕಟ್ಟೆಯಿಂದ ೧೮, ಕೊಪ್ಪಲದಿಂದ ೨, ಸಂಕೇಸದಿಂದ ೧, ಹೊಸಕಟ್ಟೆಯಿಂದ ೧, ಬಾಬತೋಟದಿಂದ ೧, ಕೂಡಾ ೨೩ ಜನರು ಸಭೆಯ ಮುಂದೆ ಬಂದು ಆ ದಿನದಿಂದ ತಮ್ಮ ಜೀವಕಾಲವೆಲ್ಲಾ ಸಂಪೂರ್ಣ ಮದ್ಯಪಾನ ನಿಷೇಧಕ ವ್ರತವನ್ನು ಕೈಕೊಳ್ಳುವ ಕುರಿತು ಪ್ರಮಾಣವನ್ನು ಮಾಡಿದರು. ಪ್ರತೀ ಪಕ್ಷದಲ್ಲಿಯೂ ಇದೇ ಪ್ರಕಾರ ಅಲ್ಲಲ್ಲಿ ಸಭೆ ಕೂಡಿ ಮದ್ಯಪಾನ ನಿಷೇಧಕರ ಸಂಖ್ಯೆಯನ್ನು ಹೆಚ್ಚಿಸುತ್ತಿರಬೇಕೆಂದು ನಿರ್ಣಯಿಸೋಣಾಯಿತಲ್ಲದೆ, ಮದದ ಗಡಿಯಲ್ಲಿ ದುರ್ವಿನಿಯೋಗವಾಗುವ ಸಮಯವು ಸದ್ವಿನಿಯೋಗವಾಗುವಂತೆ ಮದ್ಯಪಾನ ನಿಷೇಧಕರ ಬಗ್ಗೆ ಒಂದು ರಾತ್ರಿ ಶಾಲೆಯನ್ನು ತಾನೇ ತನ್ನ ಖರ್ಚಿನಿಂದ ತೆರೆಯುವೆನೆಂದು ಸಹಾ ರಾ। ಯಂ. ಕೆ. ಸೋಮನವರು ವಾಗ್ದತ್ತ ಮಾಡಿದರು. ಇವರು ಈ ರೀತಿ ಸ್ವಜಾತಿ ಹಿತವರ್ಧನೆಯ ಕಾರ್ಯ ಸಾಧನೆಗೆ ತೊಡಗಿದ್ದು ಬಹು ಶ್ಲಾಘನೀಯವಾಗಿದೆ

ಪೊಳಲಿ —ಇಲ್ಲಿ ಇದೇ ತಿಂಗಳ ತಾ. ೬ನೇ ಆದಿತ್ಯವಾರ ದಿವಸ ನಮ್ಮ ಪೊಳಲಿ ಶ್ರೀ ರಾಜರಾಜೇಶ್ವರಿ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಪಟೇಲರ ಮೂಲಕ ಮಾನ್ಯ ಸದ್ಗೃಹಸ್ಥರ ಸಭೆಯು ಸೇರಿ ನಮ್ಮನ್ನಾಳುವ ಇಂಗ್ಲಿಷ ರಾಜರಿಗೆ ನಡಿಯುವ ಯುದ್ಧದಲ್ಲಿ ಜಯಸಿಕ್ಕಬೇಕಾಗಿ ಸರ್ವ ವಾದ್ಯರವಗಳಿಂದ ಶ್ರೀದೇವಿಗೆ ವಿಶೇಷ ಮಹಾ ಪೂಜೆಗಳು ಜೋಡು ಕಾರ್ತಿ ಪೂಜೆಗಳು ಕೂಡಾ ಮಾಡಿಸಿ ಎಲ್ಲವರು ದೇವಿ ಸಮಕ್ಷದಲ್ಲಿ ನಿಂತು ಬ್ರಿಟಿಷ್ ಮಹಾ ರಾಜರಿಗೆ ಶ್ರೀದೇವಿಯು ಜಯವನ್ನು ದಯಪಾಲಿಸಬೇಕಾಗಿ ಪ್ರಾರ್ಥಿಸಿ ಮಂಗಳವಾರ ರಾತ್ರಿಗೆ ಗಾಯತ್ರಿ ಪೂಜೆ, ಕೂಡಾ ಮಾಡಬೇಕೆಂತ ನೇಮಿಸಿ ಅಮುಣಿಜೆ ಶಾಲಾ ವಿದ್ಯಾರ್ಥಿಗಳಿಂದ ಮಹಾರಾಜರಿಗೆ ಜಯವಾಗಲಿ ಎಂಬ ಪದ್ಯವನ್ನು ಹಾಡಿಸಿದನಂತರ ಅದೇ ರಾತ್ರಿ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಕೂಡಾ ವಿಶೇಷ ಪೂಜೆಗಳು ಮಾಡೋಣಾಯಿತು

ಅಮ್ಮುಂಜೆ ಮೊಗರು:—ಈ ಗ್ರಾಮಕ್ಕೆ ಸೇರಿದ ಪರಿಯಾಳ ಎಂಬಲ್ಲಿ ಮಾರಕ [illegible] ಜ್ವರ ಹಿಡಿದವರಿಗೆ ವ ರೋಗಿಗಳಿಗೆ [illegible] ದೇವರ ಪ್ರಾರ್ಥನೆಮಾಡಿ ನೀರು ಕೊಟ್ಟು [illegible] ಜನರನ್ನು [illegible]

ತೆಕ್ಕಿಲ:—ಕಾಸರಗೋಡು ತಾಲೂಕು ತೆಕ್ಕಿಲ ಮುದ್ರಾಸೆ ಮಹಮ್ಮದಿ ಎಂಬ ಅರಬೀ ಶಾಲೆಯು ಇದೇ ಸಪ್ಟಂಬರ ತಾರೀಕು ೨ ಮಧ್ಯಾಹ್ನ ಘಂಟೆ ೧. ತಿಂಕ್ಕೆ ಪ್ರತಿಷ್ಟಿಸಲ್ಪಟ್ಟಿತು. ಅನೇಕ ಮಹಮ್ಮದಿ ಗ್ರಹಸ್ಥರು ಮತ್ತು ಮೌಲ್ವಿಯರೂ ಕೂಡಿಬಂದಿದ್ದರು. ಮೌಲ್ವಿ ಟಿ. ಎಂ. ಅಬ್ದುಲ್ಲ ಸಾಹೇಬರು ನಮ್ಮ ದಯಾಳು ಸರಕಾರವಾದ ಇಂಗ್ಲಿಷರ ಆಳಿಕೆಯಿಂದ ನಮ್ಮ ಹಿಂದೂ ದೇಶಕ್ಕೆ ಆದ ಅತಿ ಉಪಕಾರದ ಕುರಿತೂ ವಿದ್ಯೆಯ ವರ್ಧನೆಯ ಕುರಿತೂ ಭಾಷಣ ಕೊಟ್ಟರು. ಪತೆಂಲ ಟಿ. ಎ. ಅಬ್ದುಲ್ಲ ಸಾಹೇಬರು ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನೂ ಪೆನ್ಸಿಲುಗಳನ್ನೂ ಇನಾವಾಗಿ ಕೊಟ್ಟರು ಅನೇಕ ಗ್ರಹಸ್ಥರೂ ಸಭೆಗೆ ಕೂಡಿ ಬಂದಿದ್ದರು ಮೌಲ್ವಿ ಅಬ್ದುಲ್ಲ ಸಾಹೇಬರು ನಮ್ಮ ೫ನೇ ಜೋರ್ಜ್ ಚಕ್ರವರ್ತಿಯವರಿಗೆ ದೀರ್ಘಾಯುಷ್ಯವನ್ನು ಬಯಸಿ ನಮ್ಮ ದೇಶವು ಸದಾಕಾಲ ಇಂಗ್ಲಿಷರ ಆಳಿಕೆಯಲ್ಲಿಯೇ ಇರುವ ಹಾಗೆ ಪ್ರಾರ್ಥಿಸಿದನಂತರ ಸಭೆಯು ಅಗಲಿತು

~~~~~~

ಕುಂಬಳೆ. ಇಲ್ಲಿ ಮೆಸರ್ಸ್ ಕೆ ದೇವಪ್ಪ ವಾಮನ ಶೆಣ್ಯ ಬಿ. ಶ್ರೀನಿವಾಸ ಕೃಷ್ಣನಾಯಕ್ ಕಂಪೆನಿಯವರು ಮುಂಬಯಿ ಮದ್ರಾಸು ಮುಂತಾದ ಬೇರೆ ಬೇರೆ ಪ್ರಾಂತ್ಯಗಳಿಂದ ತರಿಸುವ ಜವಳಿಯನ್ನು ಅತೀ ಅಲ್ಪ ಮುನಾಫೆಯಿಂದ ಚಿಲ್ಲರೆಯಾಗಿ ವ ರಖಮ್ ಆಗಿ ವಿಕ್ರಯಿಸುವದರಿಂದ ಅನೇಕ ವ್ಯಾಪಾರಸ್ತರು ಸಹಾ ಇವರಿಂದಲೇ ವಸ್ತ್ರಲು ಕೊಂಡುಕೊಳ್ಳುತ್ತಿರುವರು.

ಇಲ್ಲಿ ಈಚೆಗೆ ಏರ್ಪಡಿಸಿದ ಗಾಡಿ ಚೌಕದ ಸ್ಥಳವು ತಗ್ಗು ದಿನ್ನೆಯಾಗಿದ್ದು ಹೊಸತಾಗಿ ಕಟ್ಟಿಸಿದ ಸರ್ಕಾರಿ ಬಾವಿಯ ಮಣ್ಣಿನ ರಾಶಿ ಸಹಾ ಇರುವದರಿಂದ ಗಾಡಿಗಳು ತಂಗ ವರೆ ಅನಾನುಕೂಲವಾಗಿರುತ್ತದೆ ಮತ್ತು ಸಮೀಪವಿರುವ ಶೇಂದಿಅಂಗಡಿಯು ರಸ್ತೆಗಳು ಕೂಡುವ ಮಧ್ಯಸ್ಥಳದಲ್ಲಿದ್ದು ಲಗ್ತಿಯಿರುವ ಶಾಲೆಗೆ ವ್ಯಾಪಾರಸ್ಥರಿಗೆ ವ ಆಮದು ರಫ್ತಾಗುವ ಜನರಿಗೆ ಸಹಾ ತೊಂದರೆಯನ್ನು ಉಂಟುಮಾಡುತ್ತದೆ. ಇದನ್ನು ಬೇರೆ ಕಡೆಗೆ ಹಾಕಿಸಿ ಸದರಿ ಗಾಡಿಚೌಕವನ್ನು ಸರಿಪಡಿಸಿ ಕಂಪೌಂಡು ಹಾಕಿಸುವದ ಅಗತ್ಯ

ಇನ್ನು ಸಧ್ಯದಲ್ಲೇ ಗಾಡಿಗಳ ಚಲಾವಣೆಗೆ ಪ್ರಾರಂಭವಾಗುವದರಿಂದ ಈ ಏರ್ಪಾಡುಗಳು ತ್ವರ್ಯ ಆಗಬೇಕಾಗಿದೆ

ಇಲ್ಲಿ ವಾರಾಟಕ್ಕೆ ಬರುವ ಕಾಯಿಪಲ್ಯವನ್ನು ಅಲ್ಲಲ್ಲಿ ರಸ್ತೆ ಕಿನಾರೆಯಲ್ಲಿಟ್ಟು ತೊಂದರೆ ಪಡಿಸ ವದರಿಂದ ವಿನಾ ಮಾರ್ಕೆಟಿನ ಬಡಗು ಪ್ರತ್ಯೇಕ ಒಂದು ಮಾರ್ಕೇಟು ಇದಕ್ಕಾಗಿ ಅವಶ್ಯವಿದೆ

~~~~~~

ಮೂಡಬಿದ್ರೆ:—ಇದೇ ತಿಂಗಳ ತಾ ೪ರಲ್ಲು ಮಧ್ಯಾಹ್ನ ೨ ಗಂಟೆಗೆ ಮೂಡಬಿದ್ರೆ ಬೋರ್ಡ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯರ ಸಭೆಯು ದಕ್ಷಿಣಕನಡಾ ಜಿಲ್ಲಾ ಶಾಲೆಗಳ ಅಸಿಸ್ಟಾಂಟು ಇನ್ಸ್‌ಪೆಕ್ಟರವರಾದ ಮ. ರಾ, ರಾ ರಾವ್ ಬಹುದ್ದೂರ್ ರಘುನಾಥರಾಯರವರ ಅಧ್ಯಕ್ಷತೆಯಲ್ಲಿ ಜರಗಿತು ಆ ಸಭೆಯಲ್ಲಿ ಶಾಲಾ ಮಕ್ಕಳು ದೇವರ ಕುರಿತು ಪ್ರಥಮತಃ ಹಾಡುಗಳನ್ನು ಆಡಿದರು. ನಂತರ ಕಳದ ಸಾರಿಯ ಸಭೆಯ ಪ್ರೊಸಿಡಿಗ್ಸನ್ನು ಮ। ರಾ। ರಾ। ಸದರಿ ಶಾಲೆಯ ಹೆಡ್ ಮಾಸ್ತರ ಕೆ ಗಣಪತಿ ರಾವ್ ಓದಿಹೇಳಿದರು. ನಂತರ ಸದರಿ ಶಾಲೆಯ ೧ನೇ ಅಸಿಸ್ಟಾಂಟ ಮಾಸ್ತರ ಕೆ. ಆರ್. ವರದಶ್ಯಾನ ಭಾಗರು ಉಪಾಧ್ಯಾಯರ ಕರ್ತವ್ಯದ ಕುರಿತು ಉಪನ್ಯಾಸ ಓದಿದರು. ಶಾಲೆಗೆ ಸಂಬಂಧಪಟ್ಟ ಕೆಲವು ಹಾಡುಗಳನ್ನು ರಾಗ ಮೂಲಕವಾಗಿ ಹುಡುಗರು ಹಾಡಿದರು. ಇದಾದ ಮೇಲೆ ಅಧ್ಯಕ್ಷರವರು ಉಪಾಧ್ಯಾಯರ ಕರ್ತವ್ಯವನ್ನು ಕುರಿತು ವ ಪದ್ಯಗಳನ್ನು ಕುರಿತು ಇನ್ನೂ ಹೆಚ್ಚಿಗೆ ಅನುಭವವನ್ನು ಕೊಟ್ಟರು. ನಂತರ ಈಗ ನಡಿಯುವ ಯುದ್ಧವನ್ನು ಕುರಿತು ನಕಾಶವನ್ನು ಬಿಡಿಸಿ ವಿವರಿಸಿ ಎಲ್ಲರಿಗೂ ತಿಳಿಯುವಂತೆ ವಿವರಿಸಿ ಹೇಳಿದರು. ರಾಜರ ಗೀತವನ್ನು ಮಕ್ಕಳೂ ಉಪಾಧ್ಯಾಯರೂ ಒಟ್ಟಿಗೆ ಕೂಡಿ ಹಾಡಿದರು. ಯುದ್ಧಕ್ಕೆ ಕಳುಹಿಸಲ್ಪಟ್ಟ ಜನರ ಸಂಸಾರ ಪೋಷಣೆ ಬಗ್ಗೆ ಗವರ್ನರ ಜನರಲರವರಿಂದ ತೆರಿಯೋಣಾದ ಯುದ್ಧದ ಫಂಡಿಗೆ ಉಪಾಧ್ಯಾಯರೆಲ್ಲರೂ ಹಣ ಸಹಾಯ ಮಾಡುವದು ಅಗತ್ಯವೆಂದೂ ಅದನ್ನು ಕುರಿತು ಬರುವ ಸಭೆಗೆ ಆಲೋಚಿಸಿ ಹಣಕಳುಹಿಸುವದೆಂಬದಾಗಿ ನಿರ್ಣಯಿಸೋಣಾಯಿತು. ನಂತರ ಅಧ್ಯಕ್ಷರವರು ಮೊಜಿಕ್‌ಲೇಂಟನನ್ನು ತೋರಿಸಿ ಸಭೆಯು ಅಂತ್ಯವಾಯಿತು.

~~~~~~

ಮಂಗಳೂರು:—ಹದ ಮಾಡಿದ ಚರ್ಮವನ್ನು ಹಿಂದೂಸ್ಥಾನದಿಂದ ವಿದೇಶಗಳಿಗೆ ರಫ್ತು ಮಾಡಕೂಡದಾಗಿ ಯುದ್ಧ ಪ್ರಾರಂಭಕಾಲದಲ್ಲಿ ಮದ್ರಾಸು ಸರಕಾರದವರ ಅಪ್ಪಣೆಯಾಗಿತ್ತು. ಈ ಅಪ್ಪಣೆಯನ್ನು ಶಿಥಿಲಗೊಳಿಸಿ ತಂತೀ ಮೂಲಕ ಎಲ್ಲಾ ಜಿಲ್ಲೆಗಳಿಗೂ ಇದನ್ನು ತಿಳಿಸಿರುವರು. ಹೀಗೆ ಶಿಥಿಲಗೊಳಿಸಿದ ಅಪ್ಪಣೆ ಪ್ರಕಾರ ಬ್ರಿಟನ್, ರುಶ್ಯಾ ಮತ್ತು ಫ್ರಾನ್ಸು ದೇಶಗಳಿಗೆ ಹದಮಾಡಿದ ಚರ್ಮವನ್ನು ಇನ್ನು ಕಳುಹಿಸಬಹುದೆಂದು ತಿಳಿಯುತ್ತೇವೆ. ಚರ್ಮದ ಬಿದ್ದುಹೋದ ಕ್ರಯವು ಇದರಿಂದ ಏರುವ ಸಂಭವವಿರುವುದು.

ಇಲ್ಲಿಯ ಮೊಗೇರರೆಲ್ಲಾ ಕಳದ ಸೋಮವಾರ ದಿವಸ ಯಾರೂ ಕೆಲಸಕ್ಕೆ ಹೋಗದೆ ನಿಂತು, ಎಲ್ಲರೂ ಕದ್ರೆ ದೇವಸ್ಥಾನದಲ್ಲಿ ಮಹಾ ಸಭೆ ಕೂಡಿ ಅಭಿಷೇಕ ಪೂಜಾದಿಗಳನ್ನು ಮಾಡಿಸಿ ಬ್ರಿಟಿಷ ಚಕ್ರವರ್ತಿಯರಿಗೆ ಈಗಿನ ಯುದ್ಧದಲ್ಲಿ ಸಂಪೂರ್ಣ ಜಯವುಂಟಾಗಲೆಂದು ಪ್ರಾರ್ಥಿಸಿದರು

ಈ ತಿಂಗಳ ೧೭ ಯಾ ೧೮ನೇ ತಾರೀಕಿನಿಂದ ಮುಂಬಯಿಂದು ಇಲ್ಲಿಗೆ ಸರಕು ತುಂಬಿ ಬರುವ ಮುಂಬಯಿ ಸ್ಟೀಮ್ ನೆವಿಗೇಶನ್ ಕಂಪೆನಿಯ ಸ್ಟೀಮರುಗಳು ಮುಂಬಯಿಂದ ನಮ್ಮ ಕರಾವಳಿಗೆ ಯಾವಾಗ ತೆರಳುವವೆಂಬ ವರ್ತಮಾನವು ಇನ್ನೂ ಸರಿಯಾಗಿ ತಿಳಿದು ಬಾರದ್ದರಿಂದ ಇಲ್ಲಿಯ ವ್ಯಾಪಾರಸ್ತರು ಬಹಳ ಯೋಚನೆಯಲ್ಲಿರುವರು

ತೆಂಗಿನ ಎಣ್ಣೆಯ ಕ್ರಯವು ಕೊಚ್ಚಿ ಖಂಡಿಯೊಂದಕ್ಕೆ ರೂ. ೮೦ರಂತೆ ಆದದು ಈಗ ಪುನಹ ಏರಲು ಪ್ರಾರಂಭವಾಗಿ ಪ್ರಕೃತ ರೂ ೯೦ರಂತಿರುವುದು

ಯುದ್ಧದ ಸೇನಿಕರ ಉಪಯೋಗಾರ್ಥವಾಗಿ ಇಲ್ಲಿಂದ ಕಾಫಿ ಪ್ಲೇಂಟರರು ಮತ್ತು ಸಾವಕಾರರು ಕೂಡಿಕೊಂಡು ಕೆಲವು ಖಂಡಿ ಕಾಫಿ ಬೀಜವನ್ನು ಉಚಿತವಾಗಿ ಕಳುಹಿಸಿಕೊಡುವ ಏರ್ಪಾಡು ಮಾಡುತ್ತಿರುವರಾಗಿ ಕೇಳುತ್ತೇವೆ.

ವರ್ತಮಾನ ಪತ್ರಗಳನ್ನು ಪ್ರಕಟಿಸುವರೆ ಸಾಕಾದಷ್ಟು ಕಾಗದವು ಇಲ್ಲದೆ ಪತ್ರಗಳಿಗೆ ಬಹಳ ಅಡಚಣೆಯು ಈ ಯುದ್ಧಕಾಲದಲ್ಲಿ ಪ್ರಾಪ್ತವಾಗಬಹುದೆಂಬದಾಗಿ ತೋರುತ್ತದೆ ಕೆನಡಾ, ಸ್ಕಂಡಿನೆವಿಯಾ, ಅಮೇರಿಕ ಮೊದಲಾದ ಪ್ರಾಂತ್ಯಗಳಿಂದ ಕಾಗದ ಅಥವಾ ಕಾಗದ ತಯ್ಯಾರಿಗೆ ಬೇಕಾದ ಮರದ ಬಂಪು ಇತ್ಯಾದಿಗಳನ್ನು ಸರಾಗವಾಗಿ ಅಂಗ್ಲಾಳಕ್ಕೆ ವೈಯ್ಯುವರೆ ಆಗದ್ದರಿಂದ ಕಾಗದ ಕೊರತೆಯನ್ನು ಲಂಡನ್ ಮತ್ತು ಪಾರೀಸ ಪಟ್ಟಣದ ಪತ್ರಗಳು ಬಹಳ ಅನುಭವಿಸುತ್ತಿರುವವು ಲ ಡನಿನಲ್ಲಿ ಕೆಲವು ಪತ್ರಗಳ ಪರಿಮಾಣವು ಚಿಕ್ಕದಾಗಿದೆ ಪಾರೀಸಿನಲ್ಲಿ ಪತ್ರಗಳನ್ನು ಕಾಗದದ ಒಂದೇ ಹಾಳೆಯಲ್ಲಿ ಪ್ರಕಟಿಸುತ್ತಿರುವರು ಹಿಂದೂಸ್ಥಾನದಲ್ಲಿ ಸಹ ಕೆಲವು ಪತ್ರಗಳು ತಮ್ಮ ಪರಿಮಾಣದಲ್ಲಿ ಸಂಕೋಚವಾಗಿ ಬಂದಿವೆ. ಬೇಗನೆ ಕಾಗದದ ಸರಬರಾಯಿಯು ಜಾರಿಗೆ ಇರದೆ ಹಲವು ಪತ್ರಗಳನ್ನು ನಿಲ್ಲಿಸಿಬಿಡುವ ಸಂಭವವು ಬಂದೊದಗಬಹುದೆಂತ ಕೆಲವು ಆಂಗ್ಲಭಾಷಾ ಪತ್ರಗಳು ಬರಿಯುತ್ತಿರುವವು

ಮುನಿಸಿಪಾಲಿಟಿಯ ಚೆಯರ್‌ಮೇನರಾದ ದಿವಾನ್ ಬಹುದ್ದೂರ್ ಮ। ರಾ। ರಾ। ಎಮ್ ಎಮ್. ಬಂಗೇರರ ಆಮಂತ್ರಣದ ಮೇರೆಗೆ ಕಳದ ಶನಿವಾರ ಇಲ್ಲಿಯ ಗವರ್ನಮೆಂಟ ಕಾಲೇಜಿಯ ಸಭಾಸದನದಲ್ಲಿ ಯುದ್ಧ ಫಂಡಿನ ಶಾಖೆಯನ್ನು ಏರ್ಪಡಿಸಲು ಒಂದು ಪುರಜನರ ಸಭೆಯು ಕೂಡಿತು. ಈ ಸಭೆಗೆ ಡಿಸ್ಟ್ರಿಕ್ಟ ಜಡ್ಜರವರು ಅಧ್ಯಕ್ಷರಾಗಿದ್ದು ಯುದ್ಧದ ಕಾರಣ, ಸ್ಥಿತಿ ಇತ್ಯಾದಿಗಳನ್ನು ಕಾಲೋಚಿತ ಭಾಷಣದಿಂದ ಸಭಿಕರಿಗೆ ತಿಳಿಯಹೇಳಿ ಈ ನಿಮಿತ್ತ ವೈಸರಾಯಪ್ರಭುಗಳವರೂ ಮದ್ರಾಸು ಗವರ್ನರರೂ ತೊಡಗಿದ ಫಂಡಿಗೆ ವಂತಿಗೆ ಕೂಡಿಸಬೇಕಾಗಿ ಸಭಿಕರನ್ನು ವಿಜ್ಞಾಪಿಸಿಕೊಂಡರು ಅಧ್ಯಕ್ಷರ ಮಾತುಗಳನ್ನು ಬಿರಿಸ್ಟರರಾದ ಮ। ರೋಯಿಯವರೂ ಸರಕಾರಿ ವಕೀಲರಾದ ಮ। ಎ. ಜೆ. ಲೋಬರವರೂ ಅನುಮೋದಿಸಿದ ಮೇಲೆ ಕಾರ್ಯನಿರ್ವಾಹಕ ಸಭೆಯು ಸ್ಥಾಪಿಸಲ್ಪಟ್ಟಿತು ಈ ಕಾರ್ಯನಿರ್ವಾಹಕ ಸಭೆಗೆ ರಾವ್ ಬಹದ್ದೂರ್ ಎನ್. ಸುಬ್ಬರಾಯರವರು ಸೆಕ್ರೆಟರಿಗಳಾಗಿ ಆರಿಸಲ್ಪಟ್ಟರು. ಆಯಾ ಸಮುದಾಯದಲ್ಲಿ ವಂತಿಗೆ ಎತ್ತುವ ಬಗ್ಗೆ ಆಯಾ ಸಮುದಾಯ ಮುಂದಾಳುಗಳ ಉಪಸಭೆಗಳು ನೇಮಿಸಲ್ಪಟ್ಟಿರುತ್ತವೆ.

ಇಲ್ಲಿಗೆ ಡಿಸ್ಟ್ರಿಕ್ಟ ಸರ್ಜನರಾಗಿ ನೇಮಿಸಲ್ಪಟ್ಟ ಮೇಜರ್ ಸ್ಪ್ರಿಗ್ಗಿ ದೊರೆಗಳವರು ನಿನ್ನೆ ಸಾಯಂಕಾಲದ ಛಂಡಿಯಲ್ಲಿ ಇಲ್ಲಿಗೆ ಬರಲಿಕ್ಕಿದ್ದರು.

ಟ್ರಾಮ್ಸೇಟು ಗಾಡಿಗಳಲ್ಲಿ ಪ್ರಯಾಣ ಮಾಡುವಾಗ ಉದುರಗಳು ಏರುಗಳಲ್ಲಿ ಗಾಡಿಗಳನ್ನು ಸುಲಭದಲ್ಲಿ ಎಳೆಯಬಹುದಾಗುವಂತೆ ಪ್ರಯಾಣಿಕರು ಗಾಡಿಗಳಿಂದ ಕೆಳಗಿಳಿಯುವಂತೆ ಗಾಡಿಗಳಲ್ಲಿ ನೋಟೀಸು ಹಚ್ಚ ಬೇಕೆಂಬ ಆಜ್ಞೆಯು ಟ್ರಾಮ್ಸೇಟು ಕಂಪೆನಿಗಳ ಮಾಲೀಕರಿಗೆ ಬಂದಿರುವುದಾಗಿ ಕೇಳುತ್ತೇವೆ.

ಬೊಂಬಾಯಿ ಸ್ಟೀಮ್ ನೆವಿಗೇಶನ್ ಕಂಪೆನಿಯ ಶುರುವಿನ ಸ್ಟೀಮರು ಬರುವ ತಾ. ೧೪ನೇ ಸೋಮವಾರ ಮುಂಬಯಿಯಿಂದ ಹೊರಟು ತಾ. ೧೭ಕ್ಕೆ ಇಲ್ಲಿಗೆ ತಲಪುವದು.

ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರ ಆಫೀಸು:—ಕಾರ್ಕಳ ತಾಲೂಕು ೨ನೇ ಗ್ರೇಡ್ ರೆವಿನ್ಯು ಇನ್ಸ್‌ಪೆಕ್ಟರ ರಾ। ಎಚ್. ಕೃಷ್ಣಯ್ಯರವರು ಕುಂದಾಪುರ ಡಿವಿಜನಲ್ ಆಫೀಸಿನ ೩ನೇ ಕ್ಲಾರ್ಕರಾಗಿ ನೇಮಿಸಲ್ಪಟ್ಟಿರುವುದರಿಂದ ಕುಂದಾಪುರ ಡಿವಿಜನಲ್ ಆಫೀಸಿನ ೩ನೇ ಕ್ಲಾರ್ಕ ರಾ। ಜಿ. ನರಶಿಂಗರಾಯರು ಕಾರ್ಕಳ ತಾಲೂಕಿನ ರೆವಿನ್ಯೂ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು.

ಕುಂದಾಪುರ ಡಿವಿಜನಲ್ ಆಫೀಸರರ ಸರ್ಕೀಟು ಕ್ರಮ ಪಟ್ಟಿ:—ಸಪ್ತಂಬರ ತಾ. ೧೧ ಕುಂದಾಪುರದಿಂದ ಹಾಲಾಡಿ, ತಾ. ೧೨ ಹಾಲಾಡಿ, ತಾ. ೧೩ ೧೪ ಅಲ್ಬಾಡಿ, ತಾ ೧೫-೧೬ ಸೋಮೇಶ್ವರ, ತಾ. ೧೭ ಹೆಬ್ರಿ, ತಾ. ೧೮ ೧೯ ಪೆರ್ಡೂರು; ತಾ. ೨೦ ಉಡ್ಪಿಗೆ, ತಾ. ೨೧-೨೨ ಉಡ್ಪಿ, ತಾ. ೫ ಮಂಗಳೂರಿಂದ ಪಡುಬಿದ್ರಿಗೆ; ತಾ. ೬ ಉಡ್ಪಿ, ತಾ. ೭ ಕುಂದಾಪುರ.

ಕುಂದಾಪುರ ಲೇಂಡ್ ರಿಕೋರ್ಡ ರೆವಿನ್ಯೂ ಇನ್ಸ್‌ಪೆಕ್ಟರಾದ ರಾ. ಶ್ರೀನಿವಾಸರಾಯರು ಪ್ರಿವಿಲೆಜ್ ರಜೆಯ ಮೇಲಿರುವುದರಿಂದ ಕಾರ್ಕಳ ಫಿರ್ಕ ಅಕ್ಟಿಂಗ್ ೨ನೇ ಗ್ರೇಡ್ ರೆವಿನ್ಯೂ ಇನ್ಸ್‌ಪೆಕ್ಟರರಾದ ರಾ। ಬಿ. ಕೆ. ಕೃಷ್ಣರಾಯರು ರೂ. ೪೦ರ ಲೇಂಡ್-ರಿಕೋರ್ಡ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿರುವರು.

ಉಡ್ಪಿ ತಾಲೂಕು ಆಫೀಸಿನ ೭ನೇ ಕ್ಲಾರ್ಕ ರಾ। ಎಸ್. ನಾರಾಯಣಸ್ವಾಮಿಕರು ರಾ। ಬಿ. ಕೃಷ್ಣರಾಯರ ಕೆಲಸ ನೋಡಬೇಕಾಗುವುದು.

~~~~~~

ಜೀನಸುಗಳ ಧಾರಣೆ, ಮಂಗಳೂರು. (ರಖಂ)

ಅವ್ವಲ್ ಮಸ್ಕತಿ ಅಕ್ಕಿ	5 — 5 — 0	5 9 — 0
ದುಯಂ ,, ,,	5 — 2 — 0	5 — 4 — 0
ಸುಗ್ಗಿ ,,	5 — 0 — 0	5 — 3 — 0
ಗಾಡಿ ಸುಗ್ಗಿ ,,	4 — 11 — 0	4 — 12 — 0
ಗುಡ್ಡು ,,	5 — 0 — 0	5 — 2 — 0
ದುಯಂ ಗುಡ್ಡು ,,	4 — 11 — 0	4 — 13 — 0
ಅವ್ವಲ್ ಬೆಳ್ತಿಗೆ ,,	5 — 8 — 0	5 — 12 — 0
ಗುಡ್ಡು ಬೆಳ್ತಿಗೆ ,,	5 — 0 — 0	5 — 3 — 0
ರಂಗೂನು ಬೆಳ್ತಿಗೆ ಗೋಣಿ ೧ರ	9 — 0 — 0	9 — 4 — 0
ಗೋದಿ ಗೋಣಿ ೧ರ		13 — 0 — 0
ಹುರುಳಿ ಗೋಣಿ ೧ರ		8 — 4 — 0
ಕಡಲೆ ಗೋಣಿ ೧ರ.		11 — 8 — 0
ತೊಗರಿ ಗೋಣಿ ೧ರ		12 — 0 — 0
ತೊಗರಿ ಬೇಳೆ ಗೋಣಿ ೧ರ.	12 — 0 — 0	15 — 0 — 0
ಉದ್ದು ಗೋಣಿ ೧ರ		10 — 8 — 0
ಊರು ಬೆಲ್ಲ ಖಂಡಿ ೧ರ		55 — 0 — 0
ಉಪ್ಪು ಗೋಣಿ ೧ರ		4 — 2 — 0
ಕೊಬ್ರಿಹಿಂಡಿ ಖಂಡಿ ೧ರ		70 — 0 — 0
ಎಳ್ಹಿಂಡಿ ಖಂಡಿ ೧ರ		32 — 8 — 0
ಕೊಬ್ರಿ ಎಣ್ಣೆ ಮಣ ೧ರ		5 — 0 — 3
ಎಳ್ಳೆಣ್ಣೆ ಮಣ ೧ರ		7 — 0 — 0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ		5 — 4 — 0
ಮೋರಿಸ್ ಸಕ್ಕರೆ ಮಣ ೧ರ		4 — 0 — 0
ಕಾಫಿ ಖಂಡಿ ೧ರ.	165 — 0 — 0	178 — 0 — 0
ಬೇಗೋಟು ಖಂಡಿ ೧ರ	95 — 0 — 0	98 — 0 — 0
ತಾಂಬ್ರ ತಗಡು ಮಣ ೧ರ		16 — 0 — 0
ಪಾತ್ರೆಗಳು ,,		21 — 0 — 0
[illegible] ಸೇರು ೧ರ		20 — 0 — 0
[illegible] ಖಂಡಿ ೧ರ		35 — 0 — 0
ಸೇರು [illegible] ಮುಡಿ ೧ರ		1 — 8 — 0

~~~~~~
~~~~~~



ಎಲಂಬಿಕ್ ವೆಜಿಟೆಬಲ್ ಟೊನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು. ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿರುವಂಥಾದ್ದು. ಪಿತ್ಥಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತ ಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು. ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಭೇಧಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ಹುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಅಂಡ್ ಕೊ. S. VAIDYA & Co.,
ಪಾರ್ಕ ಟೌನು, ಮದ್ರಾಸು. *Park Town, Madras.*

"ಆಯೊನಿಕ್ ಫಾರ್ಮಸಿ"

ಎಂಬ ಔಷಧ ಪರಿಶೋಧನಾ ಗ್ರಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯುಷನ್. ಎಂಬ ಜ್ವರನಿವಾರಣೆಯ ರಸಾಯನ. (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂಧುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) ಬ್ಲಡ್ ಪ್ಯುರಿಫ್ಯಾಯಿಂಗ್ ಸೊಲ್ಯುಷನ್ ಎಂಬುವ ರಕ್ತಶುದ್ಧಿಯ ರಸಾಯನವು. ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು. ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು- ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ಥಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನ ಈ ಕೆಳಗಿನ ವಿಳಾಸದವರಲ್ಲಿ ದೊರೆಯುತ್ತವೆ.

S. VAIDYA & Co., ಎಸ್. ವೈದ್ಯಾ ಅಂಡ್ ಕೊ.
Park Town, Madras. ಪಾರ್ಕ ಟೌನ ಮದ್ರಾಸು.

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮುಗ್ರಿಗಳು ಬೇಕಾದರೂ, **ಪಿ. ಡಿ. ನೀಲ ಕಾಂತ ಎಂಡ್ ಕೊ. ಬೆನಾರಿಸ್ ಸಿಟಿ** ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉಡುಪು ತೊಡುಪುಗಳನ್ನು ತರಿಸುತ್ತಿರುವರು ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮುಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು. ಸೀದಾ ನಮಗೆ ಬರೆದು ಒಡವೆಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಸೇಕಡಾ 25ರಂತೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಒರ್ಡರುಗಳನ್ನು ವಿ ಪಿ. ಮೂಲಕ ಕಳುಹಿಸಿಕೊಡುವೆವು ಸಂದೇಹಪಡಬೇಡಿರಿ (1) ಜರಿತಾರಿನ ರೇಶ್ಮೆ, ನಾನಾ ತರದ ಅರಿವೆಗಳು, ಶೀರೆಗಳು, ರವಕೆ ಕಣಗಳು, ಅಂಗಿ ವಸ್ತ್ರ ಇತ್ಯಾದಿ. (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ. (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರ್ಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮುಗ್ರಿಗಳು. (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳೆಲ್ಲವುಗಳಿಗೂ ಬರೆಯಬಹುದು.

ನಮ್ಮ ಕೆಟಲಾಗು ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸೋಣಾಗುವುದು.

ನಮ್ಮ ವಿಳಾಸ:— ಪಿ ಡಿ. ನೀಲಕಾಂತ ಎಂಡ್ ಕೊ,
ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್ ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್. ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ್ ಪುಸ್ತಕವಾಗಿ ಇಡಲಿಕ್ಕೂ ತಕ್ಕದ್ದಾಗಿದೆ. ಕ್ರಯ 0—8—0.

ವಿಳಾಸ:—
ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರು.

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

IIನೇ ಸ್ಟೆಂಡಾರ್ಡ್ ಗಣಿತ ...	0—3—0
IIIನೇ ,, ,, ...	0—4—0
IVನೇ ,, ,, ...	0—6—0
3ನೇ ಪುಸ್ತಕದ ಶಬ್ದಾರ್ಥ ಪ್ರಾಣಿಕೋಟಿ, ವನಸ್ಪತಿಕೋಟಿ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ) ...	0—2—6
4ನೇ ಪುಸ್ತಕದ ಶಬ್ದಾರ್ಥ ...	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು ...	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಭಾಗ ...	0—3—0
3ನೇ ದರ್ಜೆಯ ದಕ್ಷಿಣ ಕನ್ನಡದ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು (ಇದರಲ್ಲಿ ವೃತ್ತಿಗಳೂ, ಕಥೆಗಳೂ, ಅಭಿನಯದ ಹಾಡುಗಳೂ ಇರುತ್ತವೆ) ...	0—1—6
ಗಣಿತಸಾರ ಎಂಬ ಮಗ್ಗಿ ಕೋಷ್ಟಕಗಳ ಪುಸ್ತಕ ...	0—1—0
ಬಾಲಶಿಕ್ಷೆ ...	(ಅಚ್ಚಿನಲ್ಲಿದೆ)
ಒಂದನೆಯ ಪುಸ್ತಕ	
ಎರಡನೆಯ ,,	
ಮೂರನೆಯ ,,	(ತಯ್ಯಾರಿಯಲ್ಲಿವೆ.)
ನಾಲ್ಕನೆಯ ,,	

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವುವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಷನ್ ಕೊಡಲಾದೀತು.

ಪಿ. ಲಕ್ಷ್ಮಣರಾವ್,
ಸ್ಕೂಲ್ ಮಾಸ್ತರ್, ಉಡುಪಿ.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!

ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸರಳ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಉತ್ಕೃಷ್ಟವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ, ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0. ಗ್ರಾಹಕರುತ್ತರವಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ — ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ

ಆಚಾರ ದರ್ಪಣ.

P. D'Souza,
Pleader for Petitioners.

ಮಾರಾಟಕ್ಕಿದೆ.

ಕೆಂಪುಗಳಿಂದ ಕಟ್ಟಿದ ಕೈಗೆ ಹಾಕಿಕೊಳ್ಳುವ ಕಂಕಣವುಳ್ಳ ಗಡಿಯಾರವು

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರಕೊಳ್ಳುವುದು:—

ಎಸ್. ಎ. ಗೋಕರ್ಣ,
ಉಳ್ಳಾಲ, ದಕ್ಷಿಣ ಕನ್ನಡ.

ಮಹಾರಾಣಿ ಗೃಹಶೀಲೆ.

ಪುತ್ತೂರ ಪ್ಲೀಡರರಾದ ಬಿ. ಆನಂದರಾಯರಿಂದ ಶುಲಭ ಶೈಲಿಯಲ್ಲಿ ರಚಿಸಲ್ಪಟ್ಟ ಮನೋರಂಜಕವಾದ ಕಥೆಯು.

ಕೆಲವು ಪ್ರತಿಗಳು ಮಾತ್ರ ಉಳಿದಿರುವವು. ಕ್ರಯ ಆಣೆ ೨.

ಮುಕ್ತಾಹಾರ.

ಮುಕ್ತಾಹಾರದ ಮೂಲಕ ನೆರವೇರಿದ ವಿವಾಹದ ಮನೋಹರವಾದ ಕಥೆಯು. ಕ್ರಯ ಒಂದಾಣೆ ಮಾತ್ರ.

ಈ ಪುಸ್ತಕಗಳು ದೊರೆಯುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು, ದ. ಕ.

ಯುದ್ಧ ಸಮಾಚಾರವು.

ಯುದ್ಧ ಸಮಾಚಾರವನ್ನು ಸ್ವದೇಶಾಭಿಮಾನಿಯ ಸ್ಪೆಶ್ಯಲ್ ಸಪ್ಲಿಮೆಂಟಾಗಿ ಪ್ರತಿನಿತ್ಯದಲ್ಲಿಯೂ ಪ್ರಕಟಿಸುತ್ತಿರುವೆವು ಈ ಸಪ್ಲಿಮೆಂಟುಗಳನ್ನು ದಿನಂಪ್ರತಿ ಕ್ರಮಪ್ರಕಾರ ಪಡೆಯಲಪೇಕ್ಷಿಸುವ ಪರಸ್ಥಳದವರು ತಿಂಗಳೊಂದಕ್ಕೆ ರೂ. 1ರಂತೆ ಮನಿಯಾರ್ಡರ್ ವ ಸ್ಟಾಂಪುಗಳ ಮೂಲಕ ಚಂದಾಹಣ ರವಾನಿಸಿ ಕೊಟ್ಟರೆ ಒಂದು ತಿಂಗಳವರೆಗೆ ಯುದ್ಧ ಸಮಾಚಾರದ ಸಪ್ಲಿಮೆಂಟುಗಳನ್ನು ನಿತ್ಯ ಕಳುಹಿಸಿಕೊಡುವೆವು.

ಮ್ಯಾನೇಜರ್
ಸ್ವದೇಶಾಭಿಮಾನಿ,
ರಥಬೀದಿ, ಮಂಗಳೂರು.

"ಸಕ್ಕರೆಯ ಸಾರವು."

ಬಹಳ ಅನುಕೂಲವೂ ಉಪಯೋಗಕರವೂ ಆಗಿರುವುದು.

ಸಕ್ಕರೆಯನ್ನು ಉಪಯೋಗಿಸಕೂಡದಂಥಾ ಮೂತ್ರ ರೋಗಿಗಳಿಗೆ ಅತ್ಯವಶ್ಯಕವಾದದ್ದು.

ಮೇಲಣ ರೋಗಬಾಧೆಯು ಇಲ್ಲದವರು ಸಹ ಇದನ್ನು ಉಪಯೋಗಿಸಿಕೊಳ್ಳಬಹುದು ಸಾಧಾರಣ ಎರಡು ಕುಡುತೆ ಕಾಪಿ ವ ಚಾ ಇತ್ಯಾದಿಗಳಿಗೆ ಒಂದು ಕಾಳಿನ ಪ್ರಮಾಣದಲ್ಲಿ ಈ ಸಕ್ಕರೆಯ ಸಾರವನ್ನು ಹಾಕಿದರೆ ಸರಿಯಾಗಿ ಸವಿಯನ್ನುಂಟುಮಾಡುತ್ತದೆ. ಸಕ್ಕರೆಯ ಸಾರ ತುಂಬಿಸಿದ ಸುಂದರವಾದ ಗಾಜಿನ ಕರಡಿಗೆ ಒಂದಕ್ಕೆ ಕ್ರಯ 0—6—0.

ಲೆಕ್ಟೋಮಿಟರ್ ಎಂಬ ಹಾಲನ್ನು ಪರೀಕ್ಷಿಸುವ ಉಪಕರಣವು.

ಗೃಹಕೃತ್ಯದ ಉಪಯೋಗದ ಬಗ್ಯೆ ಶುದ್ಧವಾದ ಹಾಲು ದೊರಕುವದೇ ಕಷ್ಟಸಾಧ್ಯ. ನೀರನ್ನು ಹಾಲಿಗೆ ಕೂಡಿಸಿ ಮಾರುವ ಅಭ್ಯಾಸವು ಬಹಳವಾಗಿ ರೂಢಿಗೆ ಬಂದಿರುವುದು. ನೀರಿಗೆ ಬೆಲೆಕೊಟ್ಟು ಹಾಲೆಂದು ಕುಡಿಯುವೆವು. ಲೆಕ್ಟೋಮಿಟರ್ ಎಂಬೀ ಉಪಕರಣದಿಂದ ಹಾಲಿಗೆ ನೀರನ್ನು ಕೂಡಿಸಿರುವುದೋ ಎಂಬದನ್ನು ಹಾಲನ್ನು ತೆಗೆದುಕೊಳ್ಳುವಾಗಲೇ ಶುಲಭದಲ್ಲಿ ಯಾರಿಂದಲೂ ಪರೀಕ್ಷಿಸಲಾಗುತ್ತದೆ. ಈ ಉಪಕರಣವನ್ನು ಉಪಯೋಗಿಸುವ ಕ್ರಮವು ಇದರೊಂದಿಗೆ ಸೂಚಿಸೋಣಾಗಿರುತ್ತದೆ.

ಲೆಕ್ಟೋಮಿಟರ್ ಒಂದಕ್ಕೆ ಕ್ರಯ ರೂ 1—0—0.

ಕಲವು ವರುಷಗಳಿಂದ ಬಹಳ ಗುಣಕಾರಿಯೆಂದು ಅನುಭವ ಸಿದ್ಧವಾದ

ಗಜಕರ್ಣದ ಮುಲಾಮು.

...ದ್ದೆರಡು ಸಲ ಇದನ್ನು ಹಾಗಿಸುವಷ್ಟರಲ್ಲಿ ಈ ಮುಲಾಮಿನ ಯೋಗ್ಯತೆಯು ವ್ಯಕ್ತವಾಗುವುದು. ಈ ಮುಲಾಮನ್ನು ಹಚ್ಚಿ ಅದನ್ನು ತೊಳೆದು ತೆಗಿಯುವಾಗ ತಣ್ಣೀರನ್ನೇ ಉಪಯೋಗಿಸತಕ್ಕದು. ಡಬ್ಬಿಯೊಂದಕ್ಕೆ ಕ್ರಯ ರೂ. 0-6-0 ಮಾತ್ರ.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
ಔಷಧ ವ್ಯಾಪಾರಸ್ಥರು, ರಥಬೀದಿ, ಮಂಗಳೂರು.

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮಗ್ರಿಗಳು ಬೇಕಾದರೂ, ಪಿ. ಡಿ. ನೀಲಕಾಂತ ಎಂಡ್ ಕೊ. ಬೆನಾರಿಸ್ ಸಿಟಿ ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು. ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉಡುಪು ತೊಡುಪುಗಳನ್ನು ತರಿಸುತ್ತಿರುವರು. ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು. ಸೀದಾ ನಮಗೆ ಬರೆದು ಒಡವೆಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಸೇಕಡಾ 25 ರಷ್ಟೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಒರ್ಡರುಗಳನ್ನು ವಿ. ಪಿ. ಮೂಲಕ ಕಳುಹಿಸಿಕೊಡುವೆವು. ಸಂದೇಹಪಡಬೇಡಿರಿ. (1) ಜರಿತಾರಿನ ರೇಶ್ಮೆ ನಾನಾ ತರದ ಅರಿವೆಗಳು, ಶೀರೆಗಳು, ರವಕೆ ಕಣಗಳು, ಅಂಗಿ ವಸ್ತ್ರ ಇತ್ಯಾದಿ. (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ. (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮಗ್ರಿಗಳು. (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳೆಲ್ಲವುಗಳಿಗೂ ಬರೆಯಬಹುದು.

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸಲಾಗುವುದು.

ನಮ್ಮ ವಿಳಾಸ:— ಪಿ ಡಿ. ನೀಲಕಾಂತ ಎಂಡ್ ಕೊ,
ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್. ತಿಮ್ಮಪ್ಪಯ್ಯನವರಿಂದ ಹಳೆಗನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್. ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0.

ವಿಳಾಸ:—
ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್. ತಿಮ್ಮಪ್ಪಯ್ಯ,
ಮಂಗಳೂರು.

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

IIನೇ ಸ್ಟೆಂಡಾರ್ಡ ಗಣಿತ	0—3—0
IIIನೇ „ „	0—4—0
IVನೇ „ „	0—6—0
3ನೇ ಪುಸ್ತಕದ ಶಬ್ದಾರ್ಥ ಪ್ರಾಣಿಕೋಟಿ, ವನಸ್ಪತಿಕೋಟಿ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ)	0—2—6
4ನೇ ಪುಸ್ತಕದ ಶಬ್ದಾರ್ಥ	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಭಾಗ	0—3—0
3ನೇ ದರ್ಜೆಯ ದಕ್ಷಿಣ ಕನ್ನಡದ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು (ಇದರಲ್ಲಿ ವೃತ್ತಿಗಳೂ, ಕಥೆಗಳೂ, ಅಭಿನಯದ ಹಾಡುಗಳೂ ಇರುತ್ತವೆ)	0—1—6
ಗಣಿತಸಾರ ಎಂಬ ಮಗ್ಗಿ ಕೋಷ್ಟಕಗಳ ಪುಸ್ತಕ	0—1—0
ಬಾಲಶಿಕ್ಷೆ	(ಅಚ್ಚಿನಲ್ಲಿದೆ)

ಒಂದನೆಯ ಪುಸ್ತಕ
ಎರಡನೆಯ „
ಮೂರನೆಯ „
ನಾಲ್ಕನೆಯ „
(ತಯ್ಯಾರಿಯಲ್ಲಿವೆ.)

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವುವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಶನ್ ಕೊಡಲಾದೀತು.

ವಿ. ಲಕ್ಷ್ಮಣರಾವ್,
ಸ್ಕೂಲ್ ಮಾಸ್ತರ್, ಉಡುಪಿ.

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!
ಹನೂಮತ್ಪ್ರೋಕ್ತವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಉತ್ಕೃಷ್ಟವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಮುದ್ದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ; ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0. ಗ್ರಾಹಕರುತ್ಸವಮಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ:— ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ.

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ತಾರತಮ್ಯವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಉಚಿತವಾಗುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತೃಭಕ್ತಿ, ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳ್ಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ.	ಮಂಗಳೂರು.
ಮ॥ ಪಾವಂಜೆ ಗುರುರಾವ್,	ಪಾವಂಜೆ ಗೋಪಾಲಕೃಷ್ಣ
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.	ಬ್ರಾಹ್ಮಣ ಕೇರಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ ಉಪಯೋಗಿಸಿದರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೀಟುಗಳೂ; ಬೇರೆ ಅನೇಕ ತರದ ಸ್ವದೇಶಿ ಚೀಟುಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಸ್ಕೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಬು ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೀಟುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಹುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸ್ವತಃ ಬಂದು ಪರೀಕ್ಷಿಸಿರಿ!

ಕ್ರಯ ಕಮ್ಮಿ—ನಗದಿ.

ವಿಳಾಸ:— ಜೆ. ಎಸ್. ಸೋಜ ಎಂಡ್ ಕಂಪೆನಿ,
ಹಂಪನ್‌ಕಟ್ಟಾ, ಮಂಗಳೂರು



ಎಲಂಬಿಕ್ ವೆಜಿಟೆಬಲ್ ಟೊನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷಧಿಯು. ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷಧಿಗಳನ್ನು ಕೂಡಿಸಿ ಸಂಯೋಜಿಸಲ್ಪಟ್ಟದ್ದು. ಪಿತ್ಥಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವುದು. ರಕ್ತ ಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು. ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ.

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು. ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿನ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಬಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು. ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಒಪ್ಪಲು ಯುಕ್ತವಾಗಿರುವುದು, ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು.

ಬಾಟ್ಲಿ ಒಂದರ ಕ್ರಯ ರೂ. 1—6—0.

ಅನೊಡ್ಯಾನ್. ಹೊರಗೆ ತಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು. ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಬೇಧಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ಹುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟಿ ಒಂದರ ಕ್ರಯ 7 ಆಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಅಂಡ್ ಕೊ. **S. VAIDYA & Co.,**
ಪಾರ್ಕ್ ಟೌನ್ನು, ಮದ್ರಾಸು. ***Park Town, Madras.***

"ಆಯೊನಿಕ್ ಫಾರ್ಮೆಸಿ"

ಎಂಬ ಔಷಧ ಪರಿಶೋಧನಾ ಗೃಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು: ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) **ಫೀವರ್ ಸೊಲ್ಯೂಷನ್.** ಎಂಬ ಜ್ವರನಿವಾರಣೆಯ ರಸಾಯನ. (2) **ಫೀವರ್ ಡ್ರೊಪ್ಸ್** ಎಂಬುವ ಜ್ವರನಿವಾರಣ ಬಿಂದುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ.

(3) **ಬ್ಲಡ್ ಪ್ಯೂರಿಫ್ಯಾಯಿಂಗ್ ಸೊಲ್ಯೂಷನ್** ಎಂಬುವ ರಕ್ತಶುದ್ಧಿಯ ರಸಾಯನವು ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು. ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕಿ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು ಶ್ವಾಸಕೋಶ, ಅನ್ನಕೋಶ, ಪಿತ್ಥಕೋಶ ಇವುಗಳನ್ನು ಸೇರಿಕೊಂಡು ಆರೋಗ್ಯವನ್ನು ಕೆಡಿಸುವವು. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧತೆಯೇ ಆಗಿರುವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಜ್ಜಿಯಾಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಆಯೊನಿಕ್ ಫಾರ್ಮೆಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಈ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co., **ಎಸ್. ವೈದ್ಯಾ ಅಂಡ್ ಕೊ.**
Park Town, Madras. **ಪಾರ್ಕ್ ಟೌನ್ ಮದ್ರಾಸು.**

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಸಕ್ಕಗ್ಗಿದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಆಷ್ಟೆ ಕೊಡಲೀವರ್ ಎಣ್ಣೆಯೂ ಅದರಿಂದ ಸಕ್ಕಗ್ಗಿದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಫೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನ ಕೇಳಿಕೊಳ್ಳಿರಿ. ಈ ಮಿಶ್ರಣವು ಸುಲಭವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ದೊರಲ್ಪಡುವದು ಮತ್ತು ಕನ್ನಡ ಬಲ್ಲವರೆಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ ಊಲನ್ ಮಾರ್ಟ್. ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರಿಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨. ಶತಮೂಲಿಕಾ ಅಮರಸಂಜೀವನಿ—ಈ ಟೋನಿಕ್ ದ್ರಾವಕವು ಸಕಲ ಪ್ರಾಣಿಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ 1—0—0

೩. ಬಾಲಸಂಜೀವನಿ—ಮಧುರ ಟೋನಿಕ್ ಅಶಕ್ತ ಬಾಲಕರನ್ನ ಸಶಕ್ತರಾಗಿ ಮಾಡಿ ವರ್ಧಮಾನ ಚಂದ್ರನಂತೆ ಬೆಳೆಸುತ್ತದೆ. ಬಾಟ್ಲಿ 1ಕ್ಕೆ 0—12—0.

೪. ವಸಂತ ಕುಸುಮಾಕರ—ಈ ಸುವಾಸಿತ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮಿದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಧ್ವಜ—ಇದು ಸರ್ಪ ಹುಚ್ಚುನಾಯಿ, ಚೇಳು, ಇಲಿ ಇತ್ಯಾದಿ ಸರ್ವ ಕರಿಣ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0

೭. ಆನಂದವನವಿಲಾಸ—ಇದು ಡ್ಯಾಬಿಟಿಸ ಎಂಬ ಮಧುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧಕಲ್ಪ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಸೌಂದರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ್ಯ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಅಚ್ಚಾಗುತ್ತಲಿದೆ! ಅಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ಪಂಚಾಂಕೀ ಮರಾಠಿನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಅಗೋಸ್ತು ತಿಂಗಳ ಅಖೈರ ಒಳಗೆ ಪ್ರಕಾಶಿತವಾಗುವದು. ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕ ಜನರು ಈ ಸಂದರ್ಭವನ್ನು ಬಿಡಲಾಗದು. ಬೆಲೆ 10 ಆಣೆ. ಟ. ಹಾ. ಬೇರೆ.

ಜುಲೈ ಅಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡು, ಓರ್ಡರುಗಳನ್ನು ರಜಿಸ್ಟರ್ ಮಾಡುವ ಗ್ರಾಹಕರಿಗೆ 8 ಆಣೆ. ಟ. ಹಾ. ಬೇರೆ. ಹಣವನ್ನು ಮುಂಗಡವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅಥವಾ ಮನಿಆರ್ಡರು ದ್ವಾರಾ ಕಳುಹಿಸಬೇಕು: **ತ್ವರೆಮಾಡಿರಿ!!**

ಕಲ್ಯಾಣಪುರ ಮಂಗೇಶರಾವ್,
ಕಲ್ಯಾಣಪುರ, ದ. ಕನ್ನಡ.

ಮರೆಯ ಬ್ಯಾಡಿರಿ. ಮರೆಯ ಬ್ಯಾಡಿರಿ.

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮಿಶನ್ ದೊರಿಯುವದು.

ಅಪಾಯ ರೋಮಸಂಹಾರಿ. ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉಪಯೋಗಿಸುವಾಗ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು ಮರೆಯ ಬ್ಯಾಡಿರಿ.

3 ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ಆಣೆ 14

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1 10 0 ಅಂಚೇ ಹಾಸಲು ಆ 4

ವಸ್ತ್ರಕಾಗೆ ಅನುಕೂಲವಾಗಿ ಕೊಡಲ್ಪಡುತ್ತದೆ

ವಿಳಾಸ — ವಿ. ಎ. ಎಸ್. ಪಾಣಿ ಕಂಪೆನಿ.

ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

V. A. S. PANI,
No 3, Erulappen Street, Madras.

ಡಾಕ್ಟರ್ ನವರತ್ನರ ಪಕ್ಷಾಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಷ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ ಜರಿ, ಸಾದಾ ಶೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗ್ಯೆರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

ಕ್ರಯವು ಅಂಗಡಿಗಳ ತರಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ—ನರಶಿಂಹ ಲಕ್ಷ್ಮಣಪಾಲ
ರಥಬೀದಿ ಮಂಗಳೂರು ದ. ಕ.

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 18ನೇ ಸಪ್ಟಂಬರ 1914

ಯುದ್ಧವು ಯಾವಾಗ ಮುಗಿಯಬಹುದು?

ನಿತ್ಯದಲ್ಲಿಯೂ ಪ್ರಕಟವಾಗುವ ಯುದ್ಧಸಮಾಚಾರದ ಸ್ವಭಾವವನ್ನು ಪರಿಶೀಲಿಸಿ ಮೇಲಣ ಪ್ರಶ್ನೆಗೆ ಖಂಡಿತವಾದ ಉತ್ತರವನ್ನು ಕೊಡುವದು ಸಾಧ್ಯವಲ್ಲ ಸಂಧಾನವಾಗುವ ಸಂದರ್ಭದಲ್ಲಿ ಇಂಗ್ಲಾಂಡ್, ಫ್ರಾನ್ಸ್, ರುಶ್ಯ ಮತ್ತು ಜಪಾನ್ ತಾವು ನಾಲ್ವರೂ ಒಟ್ಟು ಸೇರಿ ಸಂಧಾನ ಶರ್ತಗಳನ್ನು ನಿರ್ಣಯಿಸತಕ್ಕದೆಂಬ ಒಡಂಬಡಿಕೆಯು ಈ ನಾಲ್ಕು ರಾಷ್ಟ್ರಗಳಲ್ಲಾಗಿರುವುದು ಈ ನಾಲ್ಕು ರಾಷ್ಟ್ರಗಳು ಒಟ್ಟು ಸೇರುವುದರಿಂದ ಭೂಲೋಕದ ಕಾದಾಡುವ ಸೇನಿಕರ ಸಂಖ್ಯೆಯ ಹೆಚ್ಚಿನಂಶವು ಜರ್ಮನರೊಡನೆ ಕಾದಾಡಲಿಕ್ಕಿರುವುದು. ಇಂಥಾ ಬಲವನ್ನು ಜರ್ಮನಿಯು ಮುರಿದುಬಿಡುವುದು ಪೂರ್ಣ ಅಸಾಧ್ಯವಾಗಿರುತ್ತದೆ ಬೆಲ್ಜಿಯಮಿನಲ್ಲಿ ಬೆಲ್ಜಿಯನರು ಜರ್ಮನರೊಡನೆ ಪುನಹ ಕಾದಾಡಲು ಪ್ರಾರಂಭಿಸಿರುವುದರಿಂದ ಜರ್ಮನರ ಸೇನೆಯ ಬಲವು ಆ ಪ್ರಾಂತ್ಯಗಳಲ್ಲಿ ಕಡಮೆಯಾಗಿರುವುದೆಂದು ವ್ಯಕ್ತವಾಗುವದು ಬೆಲ್ಜಿಯನರನ್ನು ಜರ್ಮನರು ಇತ್ತಲಾಗೆ ತಿರಿಗೊಮ್ಮೆ ಸೇರಿಕೊಳ್ಳಲು ವಿಜ್ಞಾಪಿಸಿಕೊಂಡರೆಂಬುದು ಬೆಲ್ಜಿಯಮ್ ಪ್ರಾಂತ್ಯಗಳಲ್ಲಿ ಜರ್ಮನರ ನಿರ್ಬಲತ್ವವನ್ನು ಮತ್ತಷ್ಟು ರುಜುಪಡಿಸುವುದು ಜರ್ಮನ ಸೇನೆಯು ಪಾರೀಸನ್ನು ಅತಿಕ್ರಮಿಸುವುದೆಂಬ ನಿರೀಕ್ಷಣೆಯು ಕಳೆದ ವಾರದಲ್ಲಿತ್ತು ಆದರೆ ಪಾರೀಸು ನಗರದ ಹತ್ತಿರದ ವರೆಗೆ ಹೋಗಿದ್ದ ಜರ್ಮನರು ಪಾರೀಸು ನಗರದ ನಾಲ್ವತ್ತು ಮೈಲು ದೂರದಲ್ಲಿ ಪೂರ್ವಕ್ಕೆ ತಿರುಗಿ ಅಲ್ಲಿಂದ ಪಾರೀಸ ನಗರದ ದಕ್ಷಿಣಕ್ಕೆ ಹೋಗಿ ಆಲ್‌ಸೆಸ್ ಲೊರೈನಿನಲ್ಲಿ ಕಾದಾಡುತ್ತಿರುವ ಫ್ರೆಂಚರ ಸೇನೆಯನ್ನು ಸುತ್ತಿ ಅದನ್ನು ನಾಶಪಡಿಸಲೆಣಿಸಿದರು ಜರ್ಮನರ ಈ ಸಾಧನೆಯನ್ನು ಬ್ರಿಟಿಷ ಸೇನೆಯು ನೆರವೇರಲು ಬಿಡಲಿಲ್ಲ ಜರ್ಮನರ ಬಲಭಾಗದಲ್ಲಿ ಬ್ರಿಟಿಷ ಸೇನೆಯು ಕಾದಾಡಿ ಜರ್ಮನರನ್ನು ಸೋಲಿಸಿಬಿಟ್ಟಿರುವುದು ಪ್ರಕೃತ ಜರ್ಮನರು ಹಿಂದಕ್ಕೆ ಓಡುತ್ತಿರುವರೆಂಬ ವಾರ್ತೆಯು ಒಂದೆರಡು ದಿನಗಳಿಂದ ಪ್ರಕಟವಾಗುತ್ತಿರುವುದು. ರುಶ್ಯಯನರು ಒಸ್ಟ್ರಿಯಾನರನ್ನು ಸೋಲಿಸಿ ಒಸ್ಟ್ರಿಯಾ ದೇಶದ ಹಲವು ಪ್ರಾಂತ್ಯಗಳನ್ನು ಕೈವಶ ಮಾಡುತ್ತಿರುವರು ಕೊನಿಗ್ಸ್‌ಬರ್ಗನ್ನು ಮುತ್ತಿದ ನಂತರ ರುಶ್ಯಯನರು ಜರ್ಮನಿಯನ್ನು ಒಳನುಗ್ಗುವ ಸಾಧನೆಯನ್ನು ಪ್ರಕೃತ ಬಿಟ್ಟಿರುವರೆಂತ ಕಾಣುವುದು ಒಸ್ಟ್ರಿಯಾ ದೇಶದ ಮುಖ್ಯ ಪಟ್ಟಣವಾದ ವಿಯನ್ನಾ ಪಟ್ಟಣವನ್ನು ಕೈವಶ ಮಾಡುವ ಸಾಧನೆಯಲ್ಲಿ ಪ್ರಕೃತ ರುಶ್ಯಯನರಿರುವರು ಯುದ್ಧ ಸಮಾಚಾರದಿಂದ ವ್ಯಕ್ತವಾಗುವ ಮೇಲಣ ವೃತ್ತಾಂತದಿಂದ ಯುದ್ಧವು ಇನ್ನು ಬೇಗನೆ ಮುಗಿಯುವುದೆಂತ ಹೇಳಬಹುದು

ಬ್ರಿಟಿಷ ಪಾರ್ಲಿಮೆಂಟ ಸಭೆಯಲ್ಲಿ ಭಾರತೀಯರನ್ನು ಶ್ಲಾಘಿಸಿದುದು

ಹಿಂದೂಸ್ಥಾನದ ವೈಸರಾಯಿಗಳಾದ ಹಾರ್ಡಿಂಗ್ ಪ್ರಭುಗಳವರು ಭಾರತೀಯ ಪ್ರಜೆಗಳು ಈ ಯುದ್ಧ ಕಾಲದಲ್ಲಿ ತೋರಿಸಿರುವ ರಾಜಭಕ್ತಿಯನ್ನೂ ಮಾಡಿರುವ ಸಹಾಯವನ್ನೂ ಪ್ರಸ್ತಾಪಿಸಿ ಬ್ರಿಟಿಷ ಪಾರ್ಲಿಮೆಂಟ ಸಭೆಗೆ ಬರಕೊಂಡಿರುವ ವೃತ್ತಾಂತವು ಸಭೆಯಲ್ಲಿ ಓದಿದೊಡನೆ ಸಭಿಕರಲ್ಲಿ ಉಂಟಾದ ಸಂತೋಷವನ್ನೂ ಉತ್ಸಾಹವನ್ನೂ ವಾಚಕರು ಲಕ್ಷ್ಯಕ್ಕೆ ತಂದುಕೊಳ್ಳಬೇಕಾಗುವುದು. ಹಿಂದೂಸ್ಥಾನದ ಸ್ಟೇಟ್ ಸೆಕ್ರಿಟರಿಗಳಾದ ಕ್ರೂ ಪ್ರಭುಗಳವರು ಪಾರ್ಲಿಮೆಂಟ ಸಭೆಯಲ್ಲಿ ಈ ಕುರಿತು ಆಡಿದ ವಚನಗಳನ್ನು ಸರ್ವರೂ ಸ್ಮರಣೆಯಲ್ಲಿರಿಸಿಕೊಳ್ಳಬೇಕಾಗಿದೆ. "ಸ್ವರಾಜ್ಯಭಾರವನ್ನು ನಡಿಸುತ್ತಿರುವ ಕೆನಡಾ ದೇಶದಿಂದ ನಮಗೆ ದೊರೆತಿರುವ ಸಹಾಯವು ವಿಶೇಷವಾಗಿರುವುದು. ಅವರು ನಮ್ಮ ರಕ್ತ ಸಂಬಂಧದವರು. ನಮ್ಮ ಜನಾಂಗದವರು. ನಮ್ಮ ಸಂಪದಾಯದವರಾಗಿರುವರು. ಆದರೆ ಅನಾದಿಕಾಲದ ನಾಗರೀಕತೆಯ ವರ್ಚಸ್ಸವುಳ್ಳ, ರಣರಂಗಗಳಲ್ಲಿ ಶೂರರೂ, ರಾಜ್ಯದಾಡಳಿತೆಯನ್ನು ನಡಿಸುವುದರಲ್ಲಿ ಪ್ರವೀಣರೂ, ವಿದ್ಯಾವಿಶಾರದರೂ ಎಂದು ಹೆಸರುಗೊಂಡ ಅನ್ಯ ಜನಾಂಗದ ಭಾರತೀಯರು ಪೂರ್ಣ ಮನಸ್ಸಿನಿಂದ ಈ ಕಾಲದಲ್ಲಿ ಬ್ರಿಟಿಷ ಸರಕಾರದವರೊಂದಿಗೆ ಚಕ್ರವರ್ತಿಯವರ ಆಶ್ರಯದಲ್ಲಿ ಸೇರಿಕೊಂಡು, ಮಾಡುತ್ತಿರುವ ಸಹಾಯವು ಅತಿ ವಿಶೇಷವಾಗಿರುವುದು. ಹಿಂದೂಸ್ಥಾನದ ಅಧಿಕಾರಿಗಳ ಮೂಲಕ ಬ್ರಿಟಿಷ ಪಾರ್ಲಿಮೆಂಟ ಸಭೆಯ ಕೃತಜ್ಞತೆಯನ್ನು ಸೂಚಿಸಲು ಈ ಸಭೆಯು ಅಪೇಕ್ಷಿಸದೆ ಇರದೆಂತ ನಾನು ಪೂರ್ಣ ನಂಬಿರುವೆನು." ಬ್ರಿಟಿಷ ಸಾಮ್ರಾಜ್ಯದ ಇತಿಹಾಸದಲ್ಲಿ ಭಾರತೀಯರ ಈ ವರ್ತನೆಯು ಬಹಳ ಪ್ರಶಂಸನೀಯವಾಗಿರುವುದೆಂತ ಲೇಂಡ್ಸ್‌ಡೌನ್ ಪ್ರಭುಗಳು ಅಪ್ಪಣೆವಿತ್ತಿರುತ್ತಾರೆ. ಕರ್ಜನ್ ಪ್ರಭುಗಳು ಸಹ ವೈಸರಾಯಿ ಪ್ರಭುಗಳು ಬ್ರಿಟಿಷ ಪಾರ್ಲಿಮೆಂಟ ಸಭೆಗೆ ಬರೆದಿರುವ ಈ ವೃತ್ತಾಂತವನ್ನು ತಿಳಿದು ವಿಶೇಷ ಉತ್ಸಾಹಭರಿತರಾಗಿರುತ್ತಾರೆ ಈಟಿಗಳನ್ನು ಧರಿಸಿರುವ ಬಂಗಾಳದ ಸೇನಿಕರು ಜಯಶೀಲರಾಗಿ ಬರ್ಲಿನ್ ನಗರ ರಸ್ತೆಗಳಲ್ಲಿ ತಿರುಗಾಡುತ್ತಿರುವುದನ್ನೂ ಗುರ್ಖಾ ಸೇನಿಕರು ಪೊಸ್ಟ್‌ಡೆಮ್ ಉದ್ಯಾನವನಗಳಲ್ಲಿ ವಿಹರಿಸುತ್ತಿರುವುದನ್ನೂ ತಾನು ನೋಡಲಪೇಕ್ಷಿಸುವೆನೆಂತ ಕರ್ಜನ ಪ್ರಭುಗಳು ತಮ್ಮ ಮನಸ್ಸಿನ ಉಲ್ಲಾಸವನ್ನು ವ್ಯಕ್ತಗೊಳಿಸಿರುತ್ತಾರೆ ಭಕ್ತಿಪ್ರದರ್ಶನವಾಗಿ ನಮ್ಮ ಗೌರವದ ಕರ್ತವ್ಯವನ್ನು ನಾವು ಮಾಡುತ್ತಿರುವಾಗ ಬ್ರಿಟಿಷ ಜನರ ಈ ಶ್ಲಾಘನೆಯನ್ನು ನಾವು ವಂದನಾಪೂರ್ವಕ ಸ್ವೀಕರಿಸುವ

ಯುದ್ಧದಿಂದ ಇಲ್ಲಿಯ ವ್ಯಾಪಾರಸ್ಥರಿಗೆ ಉಂಟಾಗುವ ನಷ್ಟವು

ವಿದೇಶಗಳಿಗೆ ಕಳುಹಿಸಿಕೊಡಲು ಕೂಡಿಸಿಟ್ಟ ಕೊಬ್ಬರಿ, ತೆಂಗಿನ ಎಣ್ಣೆ, ನೆಲಕಡಲೆ ಮುಂತಾದ ಜೀನಸುಗಳಿಗೆ ಯುದ್ಧವು ಪ್ರಾರಂಭವಾದಂದಿನಿಂದ ಕ್ರಯವು ವಿಶೇಷ ತಗ್ಗಿರುವುದು ನಮ್ಮ ಪ್ರಾಂತ್ಯಗಳಿಂದ ವಿದೇಶಗಳಿಗೆ ಹೋಗುತ್ತಿದ್ದ ಗೇರುಬೀಜಕ್ಕೂ ಸಹ ಇದೇ ರೀತಿ ಬೆಲೆ ಕಡಮೆಯಾಗಿರುವುದು ಮುಡಿಯೊಂದಕ್ಕೆ ರೂ 3—10ಗೆ ಕಡಮೆಯಾಗದ ದರದಲ್ಲಿ ಗೇರುಬೀಜವನ್ನು ಕ್ರಯಕ್ಕೆ ಪಡದಿರುತ್ತಾ ಗೇರುಬೀಜದ ದರವು ಪ್ರಕೃತ ರೂ 1-8-0 ಯಾ 1-12-0 ಆಗಿರುವುದೆಂದರೆ ಇದರ ವ್ಯಾಪಾರಸ್ಥರಿಗೆ ಎಂಥಾ ನಷ್ಟವು ಉಂಟಾಗಬಹುದೆಂಬದನ್ನು ಊಹಿಸಬಹುದು ಇತ್ತಲಾಗೆ ಕೆಲವು ವರುಷಗಳಿಂದ ಗೇರುಬೀಜವು ವಿದೇಶಗಳಿಗೆ ವಿಶೇಷವಾಗಿ ರಫ್ತಾಗುವದನ್ನು ನೋಡಿ ಈ ಪ್ರಾಂತ್ಯಗಳ ಕೃಷಿಕರು ನೀರಿನಾಶ್ರಯವಿಲ್ಲದ ಬಂಜರುಗುಡ್ಡಗಳನ್ನು ಸಹ ದರಖಾಸ್ತಿಗೆ ಪಡದು ಬೀಜದ ಸಸಿಗಳನ್ನು ಇಂಥಾ ಗುಡ್ಡಗಳಲ್ಲಿ ನೆಡುವ ಉದ್ಯೋಗವನ್ನು ಕೈಕೊಂಡಿರುತ್ತಾರೆ ಗೇರುಬೀಜದ ಕ್ರಯವು ಹೀಗೆ ತಗ್ಗಿರುವುದರಿಂದ ಈ ಉದ್ಯೋಗದಲ್ಲಿರುವವರು ಪ್ರಕೃತ ಬಹಳ ನಿರಾಶೆಗೊಂಡಿರುವರು. ಜಿಲ್ಲೆಯಲ್ಲಿ ಪ್ರಕೃತ ಒಂದು ಲಕ್ಷ ಮುಡಿಗಳಷ್ಟು ಗೇರುಬೀಜವು ದಾಸ್ತಾನು ಇರಬಹುದು ಇನ್ನು ಎರಡು ಯಾ ಮೂರು ತಿಂಗಳುಗಳಲ್ಲಿ ಇದು ವಿಕ್ರಿತವಾಗಿ ಹೋಗದೆ ಇದ್ದರೆ ಬೀಜವು ಹಾಳಾಗಿ ಮೂರು ನಾಲ್ಕು ಲಕ್ಷ ರೂಪಾಯಿಗಳ ಒಟ್ಟಾರೆ ನಷ್ಟವು ವ್ಯಾಪಾರಸ್ಥರಿಗೆ ಉಂಟಾಗುವ ಸಂಭವವಿದೆ ಗೇರುಬೀಜಕ್ಕೆ ಪ್ರಕೃತ ಯುದ್ಧದಲ್ಲಿ ಸೇರಿರದ ಇತರ ವಿದೇಶಗಳಲ್ಲಿ ಎಲ್ಲೆಲ್ಲಿ ಗಿರಾಕಿಗಳು ದೊರಕಬಹುದೆಂಬುದನ್ನು ತಮ್ಮ ಆಯಾ ಕಡೆಗಳಲ್ಲಿರುವ ರಾಯಭಾರಿಗಳ ಪರಿಮುಖ ತಿಳಕೊಳ್ಳುವ ಸೌಕರ್ಯವು ಸರಕಾರದವರಿಗಿರುವದರಿಂದ ಸರಕಾರದವರು ಈ ವಿಷಯದಲ್ಲಿ ತಮಗೆ ಸಾಧ್ಯವಿರುವ ಪ್ರಯತ್ನಗಳನ್ನು ಆದಷ್ಟು ತ್ವರ್ಯದಲ್ಲಿ ನಡಿಸಿದರೆ ಉಪಕಾರವಾಗುವುದು

ಯುದ್ಧದ ಇನ್ನೂ ಕೆಲವು ಭವಿಷ್ಯತ್ಸೂಚನೆಗಳು.

"ಹೆರ್‌ಮಾನ್" ಎಂಬ ಜ್ಯೋತಿಷ್ಯರು ಗುಣಿಸಿ ಎಷ್ಟೋ ಕಾಲಕ್ಕೆ ಹಿಂದೆಯೇ ಹೇಳಿರುವ ಭವಿಷ್ಯತ್ತು ಈಗ ಪ್ರಕಟಿತವಾಗಿರುವುದು. ಅದರ ಪ್ರಕಾರ ಈ ವರ್ಷದಲ್ಲಿ ಜರ್ಮನಿಯವರು ಅನಾಮಧೇಯರಾಗುವರು. ೧೮೭೦ನೆಯ ವರ್ಷದಲ್ಲಿ ಜೀನಾದ ಬಳಿಯಲ್ಲಿ ಇವರಿಗೆ ಅಪಜಯ ಉಂಟಾಗುವುದೆಂದು ಈ ಜ್ಯೋತಿಷ್ಯರೇ ನುಡಿದಿದ್ದರು. ೨ನೆಯ ವಿಲಿಯಮ್‌ರವರು ಜರ್ಮನ್ ಸಿಂಹಾಸನಕ್ಕೆ ಕೊನೆಯವರೆಂತಲೂ ೧೮೪೯ನೆಯ ವರ್ಷದಲ್ಲಿ ಮೊದಲನೆಯ ವಿಲಿಯಮ್ ಒಬ್ಬಾನೊಬ್ಬ ಪ್ರಸಿದ್ಧ ಭವಿಷ್ಯದ್ವಾದಿಯನ್ನು ಪ್ರಶ್ನೆಮಾಡಿದಾಗ, ಆತನು ೧೮೬೧ನೆಯ ವರ್ಷದಲ್ಲಿ ಮೊದಲನೆಯ ವಿಲಿಯಮ್ ಸಿಂಹಾಸನವನ್ನೇರುವನೆಂಬುದಾಗಿಯೂ, ೧೮೭೧ನೆಯ ವರ್ಷದಲ್ಲಿ ಜರ್ಮನಿ ರಾಜ್ಯವು ಸ್ಥಾಪಿಸಲ್ಪಡುವದೆಂಬುದಾಗಿಯೂ, ಆತನು ೧೮೮೮ನೆಯ ವರ್ಷದಲ್ಲಿ ಮೃತನಾ

ಗುವನೆಂಬದಾಗಿಯೂ, ೧೯೧೫ನೆಯ ವರ್ಷದಲ್ಲಿ ಜರ್ಮನಿರಾಜ್ಯಕ್ಕೆ ಅಂತ್ಯವುಂಟಾಗುವುದೆಂಬುದಾಗಿಯೂ ಹೇಳಿದ್ದನು. ಆ ಭವಿಷ್ಯತ್ತಿನ ಪ್ರಕಾರ ಮೊದಲನೆಯ ಮೂರು ಭವಿಷ್ಯತ್ತುಗಳೂ ಹೇಳಿದ್ದಂತೆಯೇ ನಡೆದಿರುವುವು. ಕೊನೆಯ ಭವಿಷ್ಯತ್ತಿನ ಫಲವು ನಿರೀಕ್ಷಣೀಯವಾಗಿರುವುದು.

"ಕೌಂಟ್‌ಲಿಯೋ ಟಾಲ್‌ಸ್ಟಾಯಿ" ಎಂಬ ರಷ್ಯಾದೇಶದ ದೊಡ್ಡ ವೇದಾಂತಿಯು ತಾನು ಮೃತನಾಗುವುದಕ್ಕೆ ಸ್ವಲ್ಪದಿನ ಮುಂಚಿತವಾಗಿ ರಷ್ಯಾ ಚಕ್ರವರ್ತಿಯವರಿಗೆ ಒಂದು ಪತ್ರವನ್ನು ಬರೆದಿದ್ದನು. ಅವರು ಅದನ್ನು ಜರ್ಮನಿ ಚಕ್ರವರ್ತಿಯವರಿಗೂ ಇಂಗ್ಲೆಂಡ್ ಪ್ರಭುಗಳಿಗೂ ಸಹ ಕಳುಹಿಸಿದ್ದರು. ಆ ಪತ್ರಿಕೆಯಲ್ಲಿದ್ದ ಅಭಿಪ್ರಾಯವೇನೆಂದರೆ:—

ನಾನು ಈಗ ಹೇಳಬೇಕೆಂದಿರುವ ವಿಷಯಗಳು ಸರ್ವರಿಗೂ ಸಂಬಂಧಿಸಿರುತ್ತವೆ. ಇವು ಬೇಗನೆ ನೆರವೇರುವುವು. ಅದೃಷ್ಟಸ್ವಪ್ನದಲ್ಲಿ ನನಗೊಬ್ಬ ಸ್ತ್ರೀಯು ಗೋಚರಿಸುತ್ತಿರುವಳು. ಈಕೆಯ ಮುಖವಿಕಾಸವನ್ನು ಕಂಡು ಅನೇಕ ರಾಷ್ಟ್ರದವರು ಬುದ್ಧಿಭ್ರಾಂತರಾಗಿ ಈಕೆಯ ಸಮೀಪವನ್ನೈದುವರು. ಆದರೆ ಆಕೆಯು ಇವರನ್ನು ಆಟಪಾಟಗಳಲ್ಲಿ ಮುಳುಗಿಸಿಬಿಡುವಳು. ಆಕೆಯು ಅಲಂಕರಿಸಿಕೊಂಡಿರುವ ವಸ್ತ್ರವೈಢೂರ್ಯಾದಿಗಳನ್ನು ನೋಡಿದರೆ ಆಕೆಯನ್ನು "ವಾಣಿಜ್ಯತೃಷ್ಣಾದೇವತೆ" ಎಂದು ಹೇಳಬಹುದು. ಆಕೆಯ ಸೌಂದರ್ಯವನ್ನು ನೋಡಿ ಯಾರು ತಾನೇ ಮೋಹಿತರಾಗುವದಿಲ್ಲ? ಬಾರೆಂದು ಯಾರು ತಾನೇ ಕರೆಯುವುದಿಲ್ಲ? ಆದರೆ ಆಕೆಯು ಹೆಜ್ಜೆಯಿಟ್ಟ ಪ್ರದೇಶವೆಲ್ಲಾ ದಗ್ಧವಾಗುವುದು. ಎಲ್ಲೆಲ್ಲಾ ಗೋಳೇ ಗೋಳು. ಆಕೆಯ ಉಸಿರು ವ್ಯಾಪಿಸಿದೆಡೆಯಲ್ಲೆಲ್ಲಾ ನೀಚ ವ್ಯಾಪಾರಗಳೇ ಹುಟ್ಟುವುವು. ಈ ತ್ರಿಲೋಕ ಸುಂದರಿಯ ನೋಟವು ವಿಷಸಮಾನವು. ಲೋಕವನ್ನೆಲ್ಲಾ ನಾಶಗೊಳಿಸುವ ದೊಡ್ಡ ದೀವಟಿಗೆಗಳನ್ನು ತಾನು ಹೋದ ಕಡೆಗೆಲ್ಲಾ ತೆಗೆದುಕೊಂಡು ಹೋಗುವಳು. ಈ ದೀವಟಿಗೆಗಳಲ್ಲಿ ಯುದ್ಧವೆಂಬುದೊಂದು, ಮತ್ತೊಂದು ದುರಭಿಮಾನವು, ಮೋಸಗಾರತನವು, ಮತ್ತೊಂದು ಅಶಾಸ್ತ್ರೀಯ ಸಂಪ್ರದಾಯಗಳಿಗೆಲ್ಲಾ ಮೂಲಕಾರಣವಾದ ಶಾಸನವು. ೧೯೧೨ ವರ್ಷದಲ್ಲಿ ಯೂರೋಪಖಂಡದ ಆಗ್ನೇಯ ಭಾಗದಲ್ಲಿ ಮೊದಲನೆಯ ದೀವಟಿಗೆಯ ಮಹಾಗ್ನಿಯು ಪ್ರಜ್ವಲಿತವಾಗುವುದು. ೧೯೧೩ನೆಯ ವರ್ಷದಲ್ಲಿ ಅದು ಮಹಾ ಸಪ್ರವರ್ತಕಾರಿಯಾಗಿ ಪರಿಣಮಿಸಿ ಧ್ವಂಸಮಾಡುವುದು. ಯೂರೋಪಖಂಡವೆಲ್ಲಾ ಅಗ್ನಿಜ್ವಾಲೆಗಳು ವ್ಯಾಪಿಸುವುವು, ರಕ್ತಪ್ರವಾಹಗಳು ಮಡುಗಟ್ಟಿ ಹರಿಯುವುವು, ರಣರಂಗದ ಘೋಷಗಳೇ ಕೇಳುವುವು. ೧೯೧೫ನೆಯ ವರ್ಷದ ಸುಮಾರಿನಲ್ಲಿ ರಕ್ತಪ್ರವಾಹದಿಂದ ಕೂಡಿದ ಈ ರಂಗಸ್ಥಲಕ್ಕೆ ಬಹು ಆಶ್ಚರ್ಯಕರನಾದ ಪುರುಷನು ಪ್ರವೇಶಿಸುವನು. ಈತನು ಯುದ್ಧನೀತಿಯಲ್ಲಿ ಅಷ್ಟೊಂದು ಶಿಕ್ಷಿತನಲ್ಲ, ಗ್ರಂಥಕರ್ತನೂ, ವ್ಯವಹಾರಸ್ಥನೂ. ಆತನು ಇಷ್ಟರೊಳಗೇ ಹುಟ್ಟಿ ಬೆಳೆಯುತ್ತಿದ್ದಾನೆ. ಈತನು ೧೯೨೫ನೆಯ ವರ್ಷದ ವರೆಗೆ ಯೂರೋಪಿನಲ್ಲಿ ಬಹು ಪ್ರದೇಶಗಳನ್ನು ಸ್ವಾಧೀನಪಡಿಸಿಕೊಳ್ಳುವನು. ಇದು ದೈವಪ್ರೇರಿತವು, ಈಶ್ವರೋದ್ದಿಷ್ಟವಾದ ಕಾರ್ಯವಾಗಿರುವುದು. ಅಷ್ಟರಲ್ಲಿ ಪೂರ್ವಾರ್ಧಗೋಳದ ರಾಜ್ಯಾಂಗದಲ್ಲಿ ನೂತನ ಶಕಾರಂಭವಾಗುವುದು. ಸಾಮ್ರಾಜ್ಯವೂ ಇಲ್ಲ, ರಾಷ್ಟ್ರಗಳೂ ಇಲ್ಲ. ಜಗತ್ತೆಲ್ಲಾ ಸಂಪೂರ್ಣವಾದ ಒಂದು ಮಹಾ ಸಂಯುಕ್ತ ಜಾತಿಯಾಗಿ ಏರ್ಪಡುವುದು. ಬಳಿಕ ೧೯೪೦ರಲ್ಲಿ ಮತಾಭಿಪ್ರಾಯಗಳು ವ್ಯತ್ಯಸ್ತವಾಗುವುವು. ಮತಾಧಿಕಾರವು ಅಳಿಸಿಹೋಗುವುದು. ನೀತಿಯು ಕ್ಷೀಣಿಸುವುದು. ಆಗ ಮರಳಿ ಸಕಲ ಸಂಸ್ಕರಣವೂ ಆರಂಭಿಸುವುದು. ಇದು ಅದ್ವೈತದ ಹಾದಿಯನ್ನು ಸ್ಥಾಪಿಸುವುದು. ಜೀವಾತ್ಮರ ವಿಚಾರ ವಿಷಯಕವಾದ ಅಭಿಪ್ರಾಯಗಳು ನೂತನ ವಿಕಾಸವನ್ನೊಂದಿ, ಲೋಕದಲ್ಲಿ ಧರ್ಮವು ಪ್ರತಿಪಾದಿಸಲ್ಪಡುವುದು. ಪ್ರತಿಯೊಂದು ದೇಶದಲ್ಲೂ ರಾಜಕೀಯ-ಧಾರ್ಮಿಕ ಕಲ್ಲೋಲಗಳು ಪ್ರಜೆಗಳ ಆಧ್ಯಾತ್ಮಿಕ ಜೀವನವನ್ನು ನಿರ್ಮೂಲಗೊಳಿಸಿರುವುವು. ಆದರೂ ಈ ಎರಡರಿಂದ ಜ್ಞಾನವು ವೃದ್ಧಿಗೊಳ್ಳುತ್ತಲೇ ಇದೆ. ಅಸ್ತಾಚಲದಲ್ಲಿ ಸೂರ್ಯನು ಮುಳುಗುವಾಗ ಮೆಲ್ಲಮೆಲ್ಲನೆ ಆ ದಿವ್ಯ ಜ್ಯೋತಿಯೆಲ್ಲವೂ ಕ್ಷೀಣಿಸಿ ಹೋಗುವ ಹಾಗೆ ಈ ಪ್ರಪಂಚ ನಾಟಕವು ಮುಗಿದುಹೋಗುವುದು. ಮರಳಿ ಆ ವಾಣಿಜ್ಯತೃಷ್ಣಾದೇವತೆಯ ಒಂದು ಸಂಜ್ಞಾಮಾತ್ರದಿಂದ ನವೀನ ಚರಿತ್ರವು ಪ್ರಾರಂಭಗೊಳ್ಳುವುದು.

ಮೈ. ಸ್ವಾ.

ಪಾಶ್ಚಾತ್ಯ ಮತ್ತು ಪೌರಸ್ತ್ಯ ಸಂಸ್ಕೃತಿಗಳು.

ಈ ಶಿರೋಲೇಖವನ್ನು ನೋಡಿ ಎಷ್ಟೋ ವಾಚಕರಿಗೆ "ಸಂಸ್ಕೃತಿ" ಎಂಬ ಶಬ್ದವು ಅಪರಿಚಿತವಾಗಿ ಕಂಡುಬರಬಹುದು. ಆದರೆ ಇಂಗ್ಲಿಷ್ ಭಾಷೆಯಲ್ಲಿ (Civilization.) ಎಂಬ ಶಬ್ದವು ಯಾವ ಅರ್ಥದಲ್ಲಿ ಉಪಯೋಗಿಸಲ್ಪಡುವುದೋ ಅದೇ ಅರ್ಥದಲ್ಲಿ "ಸಂಸ್ಕೃತಿ" ಎಂಬುವದು ಉಪಯೋಗಿಸಲ್ಪಟ್ಟಿದೆ. ಇದೇ ಅರ್ಥದಲ್ಲಿ ಸುಧಾರಣೆ, ನಾಗರಿಕತೆ, ಮುಂತಾದ ಹಲವು ಶಬ್ದಗಳು ಉಪಯೋಗಿಸುವದುಂಟು. ಆದರೆ "ಸಂಸ್ಕೃತಿ" ಎಂಬ ಶಬ್ದದಿಂದ ಬರುವಷ್ಟು ಘನ ಮತ್ತು ವ್ಯಾಪಕವಾದ ಅರ್ಥವು ಮಿಕ್ಕ ಶಬ್ದಗಳಿಂದ ಬರಲಾಗದು. ಆದುದರಿಂದ ಸದರಿ ಶಬ್ದವನ್ನೇ ಪ್ರಯೋಗಿಸಿದ್ದೇವೆ. ಈ ಸಂಗತಿಯನ್ನು ಪ್ರಥಮತಃವೇ ತಿಳುಕೊಂಡರೆ ಮುಂದಿನ ವಿಷಯವು ವಾಚಕರಿಗೆ ಬಹು ಸುಲಭವಾಗುವುದು.

ಪಾಶ್ಚಾತ್ಯ ಮತ್ತು ಪೌರಸ್ತ್ಯ ದೇಶಗಳು, ಭೂಪೃಷ್ಠದ ಮೇಲೆ ಎಷ್ಟರ ಮಟ್ಟಿಗೆ ಪರಸ್ಪರ ದೂರವಿರುವವೋ ಅಷ್ಟೇ ಆಯಾ ಸಂಸ್ಕೃತಿಯ ಉದ್ಭವ, ಅಭಿವೃದ್ಧಿ, ಪರಿಣಾಮ ಇವು ದೂರವಿರುವವು ಎಂದರೆ—ಚುಟುಕಿನಿಂದ ಹೇಳುವದಾದರೆ—ಈ ಎರಡೂ ಸಂಸ್ಕೃತಿಗಳ ಸ್ವರೂಪವು ಪರಸ್ಪರ ಪೂರ್ಣ ಭಿನ್ನವಾಗಿರುವುದು. ಪಾಶ್ಚಾತ್ಯ ಸಂಸ್ಕೃತಿಯು ಮುಖ್ಯವಾಗಿ ಮಾನವೀ ಜೀವನ ಕ್ರಮವು ಆದಷ್ಟು ಸುಲಭ ಮತ್ತು ಸುಖಮಯವಾಗಬೇಕೆಂಬದಾಗಿ ಇಚ್ಛೈಸುತ್ತಿರುವದು. ಮನುಷ್ಯರೆಲ್ಲರೂ ಒಂದೇ ಯೋಗ್ಯತೆಯವರು. ಅವರಲ್ಲಿ ಈಶ್ವರನಿರ್ಮಿತವಾದ ಯಾವ ಹೆಚ್ಚು ಕಡಿಮೆಯೂ ಇಲ್ಲ; ಆದಕಾರಣ ಪ್ರತಿ ಒಬ್ಬನು ಯೋಗ್ಯತೆ ಇದ್ದರೆ ಸಂಪತ್ತಿಗೂ, ಅಧಿಕಾರಕ್ಕೂ ಮೇಲಾದ ಮನ್ನಣೆಗೂ ಪಾತ್ರನಾಗಿರುತ್ತಾನೆ. ಇವೇ ಮುಂತಾದ ಕೆಲವು ಉತ್ತಮ ಕಲ್ಪನೆಗಳಿಂದ ಪಾಶ್ಚಾತ್ಯ ಸಂಸ್ಕೃತಿಯು ಹುಟ್ಟಿತು. ಆದರೆ ಅದರ ಬೆಳವಣಿಗೆ ಮಾತ್ರ ಬೇರೆ ವಿಧದಿಂದಲೇ ಆಯಿತು. ಸುಖದ ಮಹತ್ವಾಕಾಂಕ್ಷೆಯು ಮನುಷ್ಯನಿಗೆ ಇರಬೇಕಾಗಿದ್ದದ್ದೇ. ಅದು ಇಲ್ಲದೆ ಹೋದರೆ ಅವನಿಂದ ಯಾವ ಕೆಲಸವೂ ಆಗದು. ಹೀಗಿದ್ದರೂ "ಸಕ್ಕರೆಯನ್ನಾದರೂ ಹೆಚ್ಚು ತಿನ್ನಬಾರದು" ಎಂಬ ಗಾದೆಯಂತೆ ಯಾವದಾದರೂ ಸಂಗತಿಯು ಪರಮಾವಧಿಯು ಅಷ್ಟು ಹಿತಕರವಲ್ಲ. ಈ ಮಾತಿಗೆ ಪಾಶ್ಚಾತ್ಯ ಸಂಸ್ಕೃತಿಯೇ ದೃಷ್ಟಾಂತವಾಗಿದೆ. ಮನುಷ್ಯರೆಲ್ಲರೂ ಒಂದೇ ಯೋಗ್ಯತೆಯವರು; ಕೂಡಿದಷ್ಟು ಪ್ರಯತ್ನಪಟ್ಟು, ಆದಷ್ಟು ಸುಲಭ ಉಪಾಯದಿಂದ ತಮ್ಮ ಸೌಖ್ಯವನ್ನು ಹೆಚ್ಚಿಸಬೇಕು. ಈ ಒಂದೇ ಮಹತ್ವ ಕಾಂಕ್ಷೆಯಿಂದ ಪ್ರೇರಿತರಾದ ಪಾಶ್ಚಾತ್ಯರ, ಅವರ ಬುದ್ಧಿಸಾಮರ್ಥ್ಯ, ದೀರ್ಘೋದ್ಯೋಗ ಮತ್ತು ಸಾಹಸ ಇವುಗಳಿಗೆ ಅನುಗುಣವಾದ ಯಂತ್ರಸಾಮರ್ಥ್ಯವೂ ಕೈವಶವಾದ ಕಾರಣ ಅವರ ಸಂಸ್ಕೃತಿಯ ಸ್ವರೂಪವು ವಿರಾಟ್ ಪುರುಷನಂತೆ ಲೋಕವನ್ನೆಲ್ಲಾ ಹಬ್ಬಿಕೊಳ್ಳ ಹತ್ತಿತು. ಭೂಪೃಷ್ಠದ ಮೇಲಿನ ದೇಶಗಳು ಸ್ವಾಭಾವಿಕವಾಗಿ ಬಹು ಅಂತರದಲ್ಲಿರುವವಾದರೂ ಈ ಸಂಸ್ಕೃತಿಯು ಅವುಗಳನ್ನು ಏಕತ್ರ ಆಕರ್ಷಿಸಹತ್ತಿತು. ಈ ರೀತಿಯಿಂದ ಪಾಶ್ಚಾತ್ಯ ಸಂಸ್ಕೃತಿಯು ಅಭಿವೃದ್ಧಿಯನ್ನು ಹೊಂದುತ್ತಿರುವಾಗ ಜಗತ್ತಿನೊಳಗಿನ ಎಷ್ಟೋ ದೇಶಗಳಲ್ಲಿ ಕವಿದಿರುವ ಅಜ್ಞಾನವು ಇದೇ ಸಂಸ್ಕೃತಿಯಿಂದ ನಾಶವಾಗಹತ್ತಿತೆಂಬದನ್ನು ಯಾರೂ ಅಲ್ಲಗಳೆಯರು. ಇದು ಈ ಸಂಸ್ಕೃತಿಯ ಮಧ್ಯ ಕಾಲವು.

ಈಗ ನಮ್ಮ ಪೌರಸ್ತ್ಯ ಸಂಸ್ಕೃತಿಯ ಹುಟ್ಟು ಮತ್ತು ಬೆಳವಣಿಗೆಯನ್ನು ಸ್ವಲ್ಪ ಮಟ್ಟಿಗೆ ಪ್ರಸ್ತಾಪಿಸಿ ಅನಂತರ ಅವೆರಡರ ಪರಿಣಾಮವನ್ನು ಆಲೋಚಿಸುವ. ಪೌರಸ್ತ್ಯ ಸಂಸ್ಕೃತಿಯ ಇತಿಹಾಸವು ಅತಿ ಪ್ರಾಚೀನ ಕಾಲದ್ದು—ಸೃಷ್ಟಿದೇವಿಯ ಪ್ರಶಾಂತ ಮತ್ತು ಮನೋಹರವಾದ ನೋಟವನ್ನು ಏಕಾಂತದಲ್ಲಿ ಅನುಭವಿಸುತ್ತಿರುವ ಋಷಿಗಳು ಈಶ್ವರೀ ಸ್ಫೂರ್ತಿಯಿಂದ ಋಗ್ಮಂತ್ರಗಳನ್ನು ಯಾವಾಗ ಉಚ್ಚರಿಸ ಹತ್ತಿದರೋ ಆಗಲೇ ನಮ್ಮ ಸಂಸ್ಕೃತಿಯು ಜನ್ಮಕ್ಕೆ ಬಂದಿತು. ಈ ವೇದ ಕಾಲದಲ್ಲಿ ಜನಿಸಿದ ಸಂಸ್ಕೃತಿಯೊಳಗೆ ಪುನರ್ಜನ್ಮ, ಪುಣ್ಯ, ಪಾಪ, ಈಶ್ವರ, ಜೀವಾತ್ಮ ಮೊದಲಾದ ಅರ್ಮರ ಉಚ್ಚ ಕಲ್ಪನೆಗಳು ಕಂಡುಬರುವದು ಸಹಜವೇ. ಅನಂತರದ ಕಾಲದಲ್ಲಿ ಅಂದರೆ ಸ್ಮೃತಿ ಸೂತ್ರಕಾಲದಲ್ಲಾಗಲೀ, ಪೌರಾಣಿಕ ಕಾಲದಲ್ಲಾಗಲೀ ಅದರ ಜೋಪಾಸನೆ ಹಾಗೂ ಅಭಿವೃದ್ಧಿಯಾದ ಕಾರಣ ಅದರಲ್ಲಿ ಯಾವ ಕಲ್ಮಶವೂ ಸೇರಿಕೊಂಡಿರಲಿಲ್ಲ. ಮನುಷ್ಯನು ಐಹಿಕ ಸುಖಗಳನ್ನು ಮಾತ್ರ ಪಡೆದರಾಯಿತು—ಈ ಅಭಿಪ್ರಾಯವನ್ನು ಅದು ಎಂದೂ ಬೋಧಿಸಲಿಲ್ಲ. ಮನುಷ್ಯನಿಗೆ ಪುನರ್ಜನ್ಮವಿದ್ದ ಕಾರಣ ಅವನು ಯಾವಾಗಲೂ ನೀತಿ ಸಮ್ಮತವಾದ ಕೃತ್ಯಗಳನ್ನೆ ಮಾಡಬೇಕು. ದುಷ್ಕೃತ್ಯಗಳಿಗೆ ಎಡೆಕೊಟ್ಟರೆ ಅದರ ಫಲವನ್ನು ಈಗ ಇಲ್ಲಾದರೂ ಇನ್ನೊಂದು ಜನ್ಮದಲ್ಲಿ ಅವನು ಅನುಭವಿಸಬೇಕಾದೀತು. ಇವೇ ಮೊದಲಾದ ವಿಚಾರಗಳನ್ನು ನಮ್ಮ ಸಂಸ್ಕೃತಿಯು ಪ್ರಾಚೀನ ಕಾಲದಿಂದ ಬೋಧಿಸುತ್ತ ಬಂದಿದೆ. ಆ ಸಂಸ್ಕೃತಿಯೊಳಗೆ ಧರ್ಮ, ತತ್ವಜ್ಞಾನ, ಸಮಾಜದ ಮತ್ತು ನೀತಿಯ ನೇಮ, ಇವು ಏಕರೂಪವಾಗಿ ಕೂಡಿಕೊಂಡಿರುವುದರಿಂದ ಅದರ ಸ್ವರೂಪವು ಬಹು ಶಾಂತವಾಗಿರುವುದು.

ಈ ಪ್ರಕಾರವಾಗಿ ನಮ್ಮ ಸಂಸ್ಕೃತಿಯು, ಮನುಷ್ಯನ ದೃಷ್ಟಿಯು ಹೆಚ್ಚಾಗಿ ದೇವರ ಕಡೆಗೆ ಹೋಗುವಂತೆ ಯತ್ನೈಸಿದೆ. ಆದರೆ ಮನುಷ್ಯನಿಗೆ ಪರಲೋಕದ ಜೀವಿತವು ಸುಖಮಯವಾಗಬೇಕೆಂತ ಈ ಲೋಕದಲ್ಲಿ ಆದಷ್ಟು ಕಷ್ಟಗಳನ್ನು ಅವನು ಅನುಭವಿಸಬೇಕು; ಎಲ್ಲವರು ಈಶ್ವರ ಧ್ಯಾನದಲ್ಲಿ ತತ್ಪರರಾಗ್ಗಿ ಕಾಡಿಗೆ ಹೋಗಿ ಜಟಾ ಭಾರಗಳನ್ನು ಬೆಳಸಿ ತಪಶ್ಚರ್ಯ ಮಾಡುತ್ತಿರಬೇಕೆಂತ ಹೇಳುವುದು ತಪ್ಪು ಎಂಬುವುದು ವಿಚಾರವಂತರಿಗೆ ಕಂಡುಬರುವುದು. ಮನುಷ್ಯನಿಗೆ ಪರಲೋಕದಂತೆ ಈ ಲೋಕದ ಜೀವಿತವು ಸುಖಮಯವಾಗಿರಬೇಕು. ಆದಕಾರಣ ಈ ಇಪ್ಪತ್ತನೇ ಶತಮಾನದಲ್ಲಿ ಬರೇ ನಮ್ಮ ಪ್ರಾಚೀನ ಸಂಸ್ಕೃತಿಯಿಂದಲೇ ನಿರ್ವಾಹವಾಗದು.

ಪಾಶ್ಚಾತ್ಯರ ಸಂಸ್ಕೃತಿಯನ್ನು ಅಂಗೀಕರಿಸುವದರಲ್ಲಿ ಹಿತವುಂಟು. ಈ ನಮ್ಮ ಅಭಿಪ್ರಾಯದ ಮೇಲಿಂದ ಪಾಶ್ಚಾತ್ಯ ಸಂಸ್ಕೃತಿಯು ಸರ್ವೋತ್ತಮವಾದದ್ದು ಎಂದು [illegible]ದರೆ ಅದು ಮಾತ್ರ ಸರಿಯಲ್ಲ ಏಕೆಂದರೆ ಪಾಶ್ಚಾತ್ಯ ಸಂಸ್ಕೃತಿಯಲ್ಲಿ ಎಷ್ಟು ಒಳ್ಳೇ ಗುಣವಿರುವದೋ ಅಷ್ಟೇ—ಕಿಂಬಹುನಾ ಹೆಚ್ಚು ದೋಷಗಳಿರುವವು. ಪಾಶ್ಚಾತ್ಯ ಸಂಸ್ಕೃತಿಯು ಅತಿ ವಾಯವೇ ಸ್ವಾತಂತ್ರ್ಯವನ್ನು ಮಿತಿಮಾರಿ ಅಪೇಕ್ಷಿಸುತ್ತಿರುವದರಿಂದಲೂ, ಧರ್ಮ, ತತ್ವಜ್ಞಾನ, ಸಮಾಜಬಂಧನ, ನೀತಿನೇಮ ಮೊದಲಾದವು ಒಂದಕ್ಕೊಂದು ಸಂಬಂದವಿಲ್ಲವಾದ್ದರಿಂದಲೂ ಆ ದೇಶದಲ್ಲಿ ಈಗ ಎಷ್ಟೋ ಶತಮಾನಗಳಿಂದ ನಡಿಯುವಂಥ ಪ್ರತಿ ಒಂದು ಸಂಗತಿಯು "ಸಂಸ್ಕೃತಿ"ಯ ಹೆಸರಿನಿಂದಲೇ ನಡಿಯುತಲಿದೆ! ಅಲ್ಲಿಯ ಸಂಸ್ಕೃತಿಗೆ ಇಷ್ಟು ವ್ಯಾಪಕ ಮತ್ತು ಬಯಂಕರ ಸ್ವರೂಪವು ಬಂದಿರುವದರಿಂದ ಆಗಾಗ್ಯೆ ಆ ದೇಶದಲ್ಲಿ ಘೋರ ಸಂಗ್ರಾಮಗಳು ನಡಿಯುತ್ತಲಿವೆ ಸಂಸ್ಕೃತಿಯ ಹೆಸರಿನಿಂದ ನಡಿಯುತ್ತಿರುವ ಸಂಗ್ರಾಮ ಸತ್ರದಲ್ಲಿ ಇಷ್ಟರ ವರೆಗೆ ಎಷ್ಟು ಪ್ರಾಣಗಳ ಆಹುತಿಯಾಯಿತೋ, ಇನ್ನು ಮುಂದೆ ಎಷ್ಟು ಆಗಲಿಕ್ಕೆ ಉಂಟೋ? ಇದು ದೇವರಿಗೆ ಗೊತ್ತು! ಇಂಥ ಆ ಪಾಶ್ಚಾತ್ಯ ಸಂಸ್ಕೃತಿ ದೇವಿಗೆ ದೂರದಿಂದಲೇ ನಮಸ್ಕಾರವಿರಲಿ

ಮೇಲಿನ ಉಪಪಾದನೆ ಮೇಲಿಂದ ಎರಡೂ ಸಂಸ್ಕೃತಿಗಳಲ್ಲಿ ಒಳ್ಳೇದೂ, ಕೆಟ್ಟದ್ದೂ, ಇದ್ದದ್ದು ವಾಚಕರಿಗೆ ಕಂಡುಬರುವುದು ಅರ್ಥಾತ್ ಪೌರಸ್ತ್ಯ ಸಂಸ್ಕೃತಿಯಿಂದ ರಾಷ್ಟ್ರವು ದುರ್ಬಲ ಮತ್ತು ಪತಿತವಾಗುತ್ತಿರುವಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಅಲ್ಲಿಯ ಸಂಸ್ಕೃತಿಯಿಂದ ಕೆಲಕಾಲ ವೈಬವ ಶಿಖರಕ್ಕೆ ಏರಿದಾಗ್ಯೂ ಆ ಸಂಸ್ಕೃತಿಯ ಮದದಿಂದಲೇ ಅವು ಯಾದವರಂತೆ ತಮ್ಮ ತಮ್ಮೊಳಗೆ ಜಗಳಾಡಿ ಕೊನೆಗ ಶಾಂತವಾಗುತ್ತವೆ ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ ಐಹಿಕ ಸುಖದಲ್ಲಿ ಸಾರವಿಲ್ಲೆಂದೆಣಿಸಿ ಆರ್ಯರು ಕಾಡಿಗೆ ಹೋಗಿ ಪರಮಾರ್ಥ ಶೋಧಿಸಹತ್ತಿದರೆ ಪಾಶ್ಚಾತ್ಯರು ಐಹಿಕ ಸುಖಾಸಕ್ತರಾಗಿ ತಮ್ಮ ಬಲದ್ದೂ, ಸಂಪತ್ತಿನದೂ, ಹಾಗೂ ಸಾಮರ್ಥ್ಯದ್ದೂ ರಣರಂಗದಲ್ಲಿ ಶ್ರೇಷ್ಠತ್ವವನ್ನು ತೋರಿಸುತ್ತಿರುವರು ಈ ರೀತಿ ಅನರ್ಥಕ್ಕೆ ಆಸ್ಪದವಾದ ಈ ಎರಡೂ ಸಂಸ್ಕೃತಿಯೊಳಗಿನ ಅಹಿತಾಂಶವನ್ನು ಬಿಟ್ಟು ಒಳ್ಳೇದನ್ನು ಹಿಂಬಾಲಿಸುವದರಿಂದ ಒಂದು ಜನಾಂಗವು ಶಾಂತಿಸುಖವನ್ನು ಹೊಂದೀತೆಂಬುದಕ್ಕೆ ಸಂದೇಹವಿಲ್ಲ ಆದಕಾರಣ ಪ್ರಕೃತ ನಮ್ಮ ಭಾರತೀಯರು ಪಾಶ್ಚಾತ್ಯ ಸಂಸ್ಕೃತಿಯನ್ನು ಅನುಕರಿಸುವಾಗ ಅದರೊಡನೆ ಏಕಜೀವವಾಗಿರುವ ಕೆಟ್ಟ ಅಂಶವನ್ನು ಬಿಡಲು ಬಹು ಜಾಗರೂಕರಾಗಿರಬೇಕು ಅಂದರೆ ಪಾಶ್ಚಾತ್ಯ ಸಂಸ್ಕೃತಿಯಿಂದ ಮುಖ್ಯವಾಗಿ ತಕ್ಕೊಳ್ಳಬೇಕಾದ ಅಂಶಗಳು ಯಾವವೆಂದರೆ.—ದೀರ್ಘೋದ್ಯೋಗವು, ಆದುನಿಕ ಶಾಸ್ತ್ರಗಳು, ಶೋಧಕ ಬುದ್ಧಿಯು, ವ್ಯಾಪಾರ ಕೌಶಲ್ಯವು, ಸಾಹಸವು, ಮತ್ತು ವಿದ್ಯಾತತ್ಪರತೆಯು ಇಲ್ಲಿ ಇನ್ನೊಂದು ಸಂಗತಿ ಹೇಳಬೇಕಾದ್ದೇನಂದರೆ—ಈ ಎಲ್ಲ ಗುಣಗಳು ನಮ್ಮಲ್ಲಿ ಬಂದರೆ ನಾವು ಅವರಂತೆ ಐಹಿಕ ಮದದಿಂದ ಸೊಕ್ಕಿಹೋದೇವು ಹಾಗೂ ಈಗ ಅವರಲ್ಲಿ ನಡಿಯುವಂತೆ ಅನರ್ಥಗಳು ನಮ್ಮಲ್ಲಿ ಸಂಬವಿಸ್ಯಾವು ಎಂತ ಕೆಲವರಿಗೆ ತೋರಬಹುದು ಆದರೆ ಈ ಪಾಶ್ಚಾತ್ಯ ಸಂಸ್ಕೃತಿಯ ಮಾತ್ರೆಯನ್ನು ಸೇವಿಸುತ್ತಿರುವಾಗ ಬಹು ಶಾಂತವಾದ ಪೌರಸ್ತ್ಯ ಸಂಸ್ಕೃತಿಯ ಅನುಪಾನವನ್ನು ನಡಿಸಿದರೆ ಅದು ಗಂಗಾ ಯಮುನೆಗಳ ಸಂಗಮದಂತೆ ಬಹು ಮನೋಹರವಾಗಿಯೂ ಸ್ಪೃಹಣೀಯವಾಗಿಯೂ ಫಲಿಸೀತು

ಸಾರಾಂಶ ಮೇಲಿನ ಲೇಖನವು ಹೇಳುವದೇನಂದರೆ, ಪಾಶ್ಚಾತ್ಯ ಸಂಸ್ಕೃತಿಯು ಶ್ರೇಷ್ಠವೋ, ಪೌರಸ್ತ್ಯ ಸಂಸ್ಕೃತಿಯು ಶ್ರೇಷ್ಠವೋ, ಈ ವಿವಾದದಲ್ಲಿ ಲಾಬವಿಲ್ಲ ವಸ್ತುತಃ ಎರಡೂ ಸಂಸ್ಕೃತಿಗಳು ಶ್ರೇಷ್ಠವೇ. ಆದರೆ ಅವುಗಳ ಶ್ರೇಷ್ಠತ್ವ ಕನಿಷ್ಠತ್ವವು ಉಪಯೋಗದ ಮೇಲೆ ಹೊಂದಿಕೊಂಡಿರುವುದು. ಬೆಂಕಿಯು ಸಾಧಕವೂ ಆಗಬಹುದು, ಬಾಧಕವೂ ಆಗಬಹುದು. ಹಾಗೆಯೇ ಪ್ರತಿ ಒಂದು ವಸ್ತುವು ಅದರದರ ಉಪಯೋಗದ ಮೇಲಿಂದ ಒಳ್ಳೇದೂ, ಕೆಟ್ಟದ್ದೂ ಆಗಿರುವದು ಅನ್ಯರನ್ನು ಅನುಕರಿಸುವವನು ತನ್ನ ಮತ್ತು ಸಮಾಜದ ಪರಿಸ್ಥಿತಿಯನ್ನು ಆಲೋಚಿಸಿ ಅದಕ್ಕೆ ತಕ್ಕದ್ದು ಯಾವುದೋ ಅದನ್ನೇ ಹಿಂಬಾಲಿಸಬೇಕಲ್ಲದೆ "ಇದು ನಮ್ಮ ಹಲಬರದಲ್ಲವೋ" ಇದರಲ್ಲಿ ಏನುಂಟು? ನವನಾಗರಿಕತೆ ಹೊಂದಿದ ನಮಗೆ ಪ್ರಾಚೀನರ ಮೂಢ ಕಲ್ಪನೆಗಳು ಏಕೆ?" ಈ ತಿಳುವಳಿಕೆಯಿಂದ ಮೆರೆಯಹತ್ತಿದರೆ ಅವನು ಸಜ್ಜನರ ಹಾಸ್ಯಕ್ಕೆ ಗುರಿಯಾಗದೆ ಇರನು. ಆದುವರಿಂದ ಪಾಶ್ಚಾತ್ಯ ಹಾಗೂ ಪೌರಸ್ತ್ಯ ಸಂಸ್ಕೃತಿಯೊಳಗಿನ ಹಿತಕರವಾದ ಅಂಶವನ್ನೆ ಆಚರಿಸಿದರೆ ಎಲ್ಲರೂ ಅಭಿವೃದ್ಧಿಯನ್ನು ಹೊಂದುವರು.

A. S.

ಪುತ್ತೂರು ಯುದ್ಧ ಫಂಡಿನ ಸಭೆಯ ಪ್ರೊಸಿಡಿಂಗ್ಸ್.

(ತಾ॥ 13—9—1914)

1. ಮ॥ ರಾ॥ ವಿಟ್ಲದ ರವಿವರ್ಮ ನರಸಿಂಹ ರಾಜರವರನ್ನು ಸಭಾಧ್ಯಕ್ಷರಾಗಿ ಚುನಾಯಿಸತಕ್ಕದ್ದೆಂತ ಮ॥ ರಾ॥ [illegible]ಹಳ್ಳಿ ಶಿವರಾಯರು ಸೂಚಿಸಿದ್ದನ್ನು ಮ॥ ರಾ॥ ಬಿ. ವೆಂಕಟಕೃಷ್ಣರಾಯರು ಅನುಮೋದಿಸಿದರು.

2. ಅಧ್ಯಕ್ಷರು ತಮ್ಮ ಅಭಿಪ್ರಾಯವನ್ನು ಸೂಚಿಸಿ, ಏಕಛತ್ರಾದಿಪತಿಗಳಾದ ನಮ್ಮ ಸಾರ್ವಭೌಮರು ಹಿಂದುಸ್ಥಾನದ ಉಪರಾಜರಿಗೂ ಪ್ರಜಾ ಜನರಿಗೂ ಬರೆದು ಕಳುಹಿಸಿದ ರಾಯಸಪತ್ರದ ಭಾಷಾಂತರವನ್ನು ಓದಬೇಕೆಂದು ಮ॥ ರಾ॥ ಬಿ ವೆಂಕಟಕೃಷ್ಣರಾಯರೊಡನೆ ಹೇಳಿದರು

ಅನಂತರ ರಾ ವೆಂಕಟಕೃಷ್ಣರಾಯರು ಅದನ್ನು ಓದಿಹೇಳಿದರು.

3 ಡಿಪ್ಯುಟಿ ಕಲೆಕ್ಟರವರಾದ ಮ॥ ರಾ॥ ಪಿ ಸೀತಾರಾಮಯ್ಯರವರು ಮತ್ತು ಮ॥ ರಾ॥ ಬೈಂದೂರು ರಾಮರಾಯರು ಸಭೆಗೂಡಿದ ಉದ್ದೇಶವನ್ನು ವಿವರಿಸಿ ಹೇಳಿದರು.

4 ಈ ಕೆಳಗಿನ ಒಂದನೇ ನಿರ್ಣಯವನ್ನು ಮ॥ ಸವೂರ ಶಿವರಾಯರು ಸೂಚಿಸಿದ್ದನ್ನು ಮ ಕಲ್ಲ ಪೂವಣಿ ಹೆಗ್ಗಡೆಯರು ಅನುಮೋದಿಸಿದರು ಮ॥ ಮುಲ್ಕಿ ಬಾಬುರಾಯರು ಆದರಿಸಿದರು

ಈ ದಿವಸ ಈ ಮಹಾ ಸಭೆಯಲ್ಲಿ ಒಟ್ಟುಗೂಡಿದಂಥಾ ಉಪ್ಪಿನಂಗಡಿ ತಾಲೂಕಿನ ನಿವಾಸಿಕರಾದ ನಾವು ನಮ್ಮ ಅದ್ವಿತೀಯ ಕಿರೀಟಧಾರಿಗಳಾದ ಶ್ರೀಮನ್ಮಹಾರಾಜಾ ಚಕ್ರವರ್ತಿಯವರಲ್ಲಿ ನಮಗಿರುವ ಮನಃಪೂರ್ವಕವಾದ ರಾಜಭಕ್ತಿಯನ್ನೂ ವಿಶ್ವಾಸವನ್ನೂ ಕೇವಲ ವಿಧೇಯ ಬಾವದಿಂದ ಸಮರ್ಪಿಸುವೆವು. ಮತ್ತು ಯೂರೋಪ ಖಂಡದಲ್ಲಿ ಈಗ ನಡೆಯುವ ಯುದ್ಧದಲ್ಲಿ ನಮ್ಮ ಸಾರ್ವಬೌಮರಿಗೆ ಜಯವಾಗಲೆಂದು ಹೃದಯಪೂರ್ವಕವಾಗಿ ಪ್ರಾರ್ಥಿಸುವೆವು

5 ಈ ಕೆಳಗಿನ ಎರಡನೇ ನಿರ್ಣಯವನ್ನು ಮ॥ ಬಿ ವೆಂಕಟಕೃಷ್ಣರಾಯರು ಸೂಚಿಸಿದ್ದನ್ನು ಮ॥ ಹೊಸದುರ್ಗ ಗಣಪತಿರಾಯರ ಅನುಮೋದಿಸಿದರು ಮೊಕದಮ್ ಇಸ್ಮಾಲಿ ಸಾಹೇಬರು ಆದರಿಸಿದರು

ಈ ತಾಲೂಕಿನ ನಿವಾಸಿಕರಾದ ನಾವು ನಮ್ಮ ಸರ್ವಸ್ವವನ್ನೂ ರಾಜ್ಯದ ಅನುಪತ್ಯಕ್ಕಾಗಿ ಅರ್ಪಣಮಾಡುವೆವು ಈ ಉದ್ದೇಶಾರ್ಥವಾಗಿ ಈಗ ಸದ್ಯಃ (1) ಮದ್ರಾಸ್ ಯುದ್ಧ ಫಂಡಿಗೂ (2) ವೈಸರಾಯ ಪ್ರಬುಗಳು ಏರ್ಪಡಿಸಿದ ಫಂಡಿಗೂ ದ್ರವ್ಯವನ್ನು ಒದಗಿಸಿ ಕೊಡುವುದಕ್ಕೆ ಒಂದು ವಂತಿಗೆ ಪಟ್ಟಿಯನ್ನು ಈ ಕ್ಷಣವೇ ಮಾಡುವಂತೆ ಈ ಮೂಲಕ ನಿರ್ಣಯಿಸುತ್ತೇವೆ

6 ಈ ಕೆಳಗಿನ ಮೂರನೇ ನಿರ್ಣಯವನ್ನು ಮ ಬೆಳ್ತಂಗಡಿ ಮಂಗೇಶರಾಯರು ಸೂಚಿಸಿದ್ದನ್ನು ಮ ಮಂಜೇಶ್ವರ ಜನಾರ್ದನ ಬಟ್ಟರು ಅನುಮೋದಿಸಿದರು.

ಈ ಮಹಾ ಸಭೆಯ ಉದ್ದೇಶವನ್ನು ನೆರವೇರಿಸುವುದಕ್ಕೆ ಈ ಕೆಳಗೆ ನಮೂದಿಸಿದ ಗೃಹಸ್ಥರಿಂದ ಕೂಡಿದ ಒಂದು ಕಾರ್ಯನಿರ್ವಾಹಕ ಸಭೆಯನ್ನು ಏರ್ಪಡಿಸಬೇಕು

1 ಮ॥ ರಾ॥ ವಿಟ್ಲದ ನರಸಿಂಹರಾಜರವರು 2 ರಾ॥ ಧರ್ಮಸ್ಥಳ ಚಂದಯ್ಯ ಹೆಗಡೆಯರು 3 ರಾ॥ ಸರಾಫ ನರಸಿಂಹನ್ನಾಕರು 4 ರಾ॥ ಮಂಗಲಪಾಡಿ ಕೃಷ್ಣಯ್ಯನವರು 5 ರಾ॥ ಕಲ್ಲ ಪೂವಣಿ ಹೆಗ್ಗಡೆಯರು 6 ರಾ॥ ಹಾಗಲವಾಡಿ ಮೊಕದಮ್ ಇಸ್ಮಾಲಿ ಸಾಹೇಬರು 7 ರಾ॥ ರೆವರೆಂಡ್ ಫಾದರ್ ಪಿ ಡಿ ಸೋಜರು 8 ರಾ॥ ಮಂಜೇಶ್ವರ ಜನಾರ್ದನ ಬಟ್ಟರು 9 ರಾ॥ ಬಿ ದಾಸರೈಗಳು 10 ರಾ॥ ಕೆಯ್ಯೂರ ಸುಬ್ರಾಯರು 11 ರಾ॥ ಬೈಂದೂರು ರಾಮರಾಯರು 12 ರಾ॥ ಬೈಂದೂರು ಆನಂದರಾಯರು (ತಹಶಿಲ್ದಾರ್)

ಇವರ ಪೈಕಿ ಮ॥ ರಾ॥ ಬೈಂದೂರು ರಾಮರಾಯರು ಗೌರವ ಕಾರ್ಯದರ್ಶಿ ಮತ್ತು ಖಜಾನಜಿಯಾಗಬೇಕಾಗಿ ನಿಶ್ಚೈಸಿಯದೆ"

ಈ ನಿರ್ಣಯವನ್ನು ಸರ್ವಸಮ್ಮತದಿಂದ ಅಂಗೀಕರಿಸೋಣಾಯಿತು

7 ಈ ಕೆಳಗಿನ ನಾಲ್ಕನೇ ನಿರ್ಣಯವನ್ನು ಮ॥ ವಿ ರಾಜಲಕ್ಷ್ಮಿನಾಥ ಸ್ವಾಮಿಜಿಯವರು ಸೂಚಿಸಿದ್ದನ್ನು ಮ॥ ರಾ॥ ಬಿ ದಾಸರೈಗಳು ಅನುಮೋದಿಸಿದರು.

"ಒಂದನೇ ನಿರ್ಣಯವನ್ನು ಮತ್ತು ಎರಡನೇ ನಿರ್ಣಯದ ಒಂದನೇ ಭಾಗವನ್ನು ಮದ್ರಾಸು ಗವರ್ನರ್ ದೊರೆಗಳವರಿಗೆ ತಿಳಿಸುವಂತೆ ಸಭಾಧ್ಯಕ್ಷರಿಗೆ ಈ ಮೂಲಕ ಅಧಿಕಾರ ಕೊಟ್ಟದ್ದಾಯಿತು,"

8 ಶಾಲಾ ಹುಡುಗರಿಂದ ರಾಜಗೀತವನ್ನು ಹಾಡಿಸಿ ಸಭೆಯು ಕೈದುಮಾಡಲಾಯಿತು.

(Sd.) R. V. Narasimha Raja
Chairman

ಈ ಸಭೆಯಲ್ಲಿ ಕೂಡಿದ್ದ ಗೃಹಸ್ಥರು ರೂಪಾಯಿ 663—0—0 ವೈಸರಾಯ ಪ್ರಭುಗಳು ಏರ್ಪಡಿಸಿದ ಫಂಡಿಗೂ, ರೂ. 2,325—8—0 ಮದ್ರಾಸು ಯುದ್ಧ ಫಂಡಿಗೂ ವಂತಿಗೆ ಹಾಕಿದರು ಹೀಗೆ ಜುಮ್ಲಾ ವಂತಿಗೆ ರೂಪಾಯಿ 2988—8—0 ಆಯಿತು. ಇದರ ವಿನಹ ಈ ತಾಲೂಕಿನ ಧರ್ಮಸ್ಥಳದ ಚಂದಯ್ಯ ಹೆಗ್ಗಡೆಯರು ತನ್ನ ವಂತಿಗೆಯಾಗಿ ರೂ 500ನ್ನು ಅಲಾಹಿದಾ ಕಲ್ಲೆಕ್ಟರ್‌ರವರಿಗೆ ರವಾನಿಸಿರುತ್ತಾರೆ. ಮೇಲೆ ಕಾಣಿಸಿದ ರೂಪಾಯಿ 2988—8—0ರ ಪೈಕಿ ರೂ 403—0—0 ಕೂಡಲೇ ಸಭೆಯಲ್ಲೇ ವಸೂಲಾಗಿಯದೆ

B Rama Rao
Hon Secretary
Executive Committee, War Fund,
Puttur

ಪತ್ರವ್ಯವಹಾರ.

ಮಂಗಳೂರು
ತಾ 14—9—1914

ಅಯ್ಯಾ ಪತ್ರಿಕಾಕರ್ತರೇ,

ರೈಲ್ವೇ ಕಂಪೆನಿಯವರು ಮಂಗಳೂರು ಮುನಿಸಿಪಾಲಿಟಿಯಲ್ಲಿ ರೈಲ್ವೆ ಮಾರ್ಗದ ಎರಡು ಪಕ್ಕಗಳಲ್ಲಿರುವ ಖಾಲಿ ಸ್ಥಳವು ತಮ್ಮ ಉಪಯೋಗಕ್ಕೆ ಬೇಡವೆಂದು ನಿಶ್ಚಯಿಸಿ ಸರ್ಕಾರಕ್ಕೆ ಬಿಟ್ಟುಕೊಟ್ಟಿರುತ್ತಾರೆ ಎಂದು ಹಾಗೆ ಕಾಣುತ್ತದೆ ಈ ಸ್ಥಳದಲ್ಲಿ ಜನರ ವಾಸ್ತವ್ಯಕ್ಕೆ ಯೋಗ್ಯವಾದ ಮನೆಗಳನ್ನು ಕಟ್ಟಬಹುದು ಮುನಿಸಿಪಾಲಿಟಿಯಲ್ಲಿ ಮನೆಗಳು ಕಟ್ಟಲಿಕ್ಕೆ ಸರಿಯಾದ ಸ್ಥಳಗಳು ಸಿಕ್ಕುವದಿಲ್ಲ ಈ ಸ್ಥಳವನ್ನು ಆದಷ್ಟು ಬೇಗನೆ ಸರಕಾರದವರು ಏಲಮಿನ ಮೂಲಕ ಜನರಿಗೆ ಕ್ರಯಕ್ಕೆ ಕೊಡುವದರಿಂದ ಬಹಳ ಉಪಕಾರವಾಗುವದು ಆದರೆ ಸ್ಥಳವನ್ನು ಊರಿನ ಜನರಿಗೆ ಕ್ರಯಕ್ಕೆ ಕೊಡುವಾಗ ರೈಲ್ವೆ ಲೈನಿನ ಪಶ್ಚಿಮ ದಿಕ್ಕಿನ ಬೇಲಿಗೆ ತಾಗಿ ಯೋಗ್ಯವಾದ ಮಾರ್ಗವನ್ನು ಮಾಡಿ ಸದ್ರಿ, ಅಗಲದ ಸಳವನ್ನು ಪ್ರತ್ಯೇಕಿಸಿ ಇಡಿಸಿ ಮಾರ್ಗವನ್ನು ಮಾಡಿಸಿ ಆ ಮಾರ್ಗವು ಸೈಂಟ್ ಪೌಲ್ ಇಗರ್ಜಿಯ ಮೈದಾನಿನ ಒಳಿಯ ಮಾರ್ಗಕ್ಕೆ ಕೂಡುವಂತೆ ಮಾಡಿದರೆ ಸ್ಥಳಗಳನ್ನು ಪಡಕೊಂಡು ಮನೆಗಳನ್ನು ಕಟ್ಟಿಸುವವರಿಗೆ ಬಹಳ ಅನುಕೂಲತೆಗಳನ್ನು ಉಂಟುಮಾಡಿದಂತಾಗುವದು ಮತ್ತು ಹೀಗೆ ಹೊಸತಾಗಿ ಮನೆಗಳನ್ನು ಕಟ್ಟಿಸುವವರು ಮಾನ್ಯ ಕಲೆಕ್ಟರ್ ದೊರೆಗಳವರ ಉಪಕಾರವನ್ನು ಸ್ಮರಿಸುತ್ತಾ ಇರುವರು.

ಪುರವಾಸಿ

ಉಡುಪಿ ತಾ 14—9—14

ಸ್ವಾಮೀ ಪತ್ರಕರ್ತರೇ,

ತಮ್ಮ ಕಳೆದ ಸಂಚಿಕೆಯಲ್ಲಿ ಟ್ರಾನ್ಸಿಟು ಕಂಪೆನಿಗಳಿಗೆ ಆದ ಸರಕಾರದವರ ಹುಕುಮಿನ ಸಾರಾಂಶವನ್ನು ಓದಿದರೆ ಟ್ರಾನ್ಸಿಟು ಗಾಡಿಗಳ ಬಡ ಕುದುರೆಗಳ ಮೇಲೆ ಸರಕಾರದವರಿಗೆ ದಯೆ ಹುಟ್ಟಿತೆಂದು ತೋರಿಬರುತ್ತದೆ ಆದರೆ ಹೀಗೆ ದಯಾಪರವಾದ ಇನ್ನೂ ಕೆಲವು ಆಜ್ಞೆಗಳಿಗೆ ಈ ವಿಷಯದಲ್ಲಿ ಆಸ್ಪದವಿರುತ್ತದೆ ಘಾಯಗಳಿಂದ ತುಂಬಿದ ನಿರ್ಜೀವ ಸ್ಥಿತಿಯಲ್ಲಿರುವ ಕುದುರೆಗಳನ್ನು ಇನ್ನೂ ಟ್ರಾನ್ಸಿಟು ಗಾಡಿಗಳಿಗೆ ಕಟ್ಟುತ್ತಿರುವರು ಇಂಥಾ ಕುದುರೆಗಳನ್ನು ಕಟ್ಟದಂತೆ ಪೋಲೀಸು ಅಧಿಕಾರಿಗಳು ತಕ್ಕ ಜಾಗ್ರತೆ ತಕೊಳ್ಳುವಂತೆ ತೋರುವದಿಲ್ಲ ಅದಲ್ಲದೆ ಇನ್ನೊಂದು ಸಂಗತಿ ಇರುವುದು, ಏನಂದರೆ—ಕುದುರೆಗಳಿಗೆ ಘಾಯವಾಗಲು ಕಾರಣವೇನು? ಬಂಡಿ ಹೊಡಿಯುವವರು ಕೊಡುವ ಪೆಟ್ಟುಗಳು ಮತ್ತು ಕುದುರೆಗಳನ್ನು ಟ್ರಾನ್ಸಿಟು ಬಂಡಿಗಳಿಗೆ ಕಟ್ಟಲು ಉಪಯೋಗಿಸುವ ಸಾಮಾನುಗಳು ಒಳ್ಳೇ ಕುದುರೆಗಳನ್ನು ಕಟ್ಟುವ ಏರ್ಪಾಡು ಮಾಡಿದರೆ ಪೆಟ್ಟುಗಳ ಆಗತ್ಯವಿರದು ಮತ್ತು ತಂಗಿನಶಿಪ್ಪೆಯ ಹಗ್ಗಗಳಿಂದ ಕುದುರೆಗಳನ್ನು ಭಂಡಿಗಳಿಗೆ ಕಟ್ಟುವ ಬದಲಾಗಿ ಚರ್ಮದ ಸಾಮುಗ್ರಿಗಳನ್ನೇ ಕಟ್ಟುವ ಏರ್ಪಾಡಾಗಬೇಕು. ಆಗ ಕುದುರೆಗಳು ಘಾಯವೊಡೆದು ಹಾಳಾಗುವದು ಕಡಿಮೆಯಾಗುವದು. ಟ್ರಾನ್ಸಿಟು ಮಾಲೀಕರೂ ಜಿಲ್ಲಾ ಅಧಿಕಾರಿಗಳೂ ಈ ವಿಷಯದಲ್ಲಿ ತಕ್ಕ ಆಲೋಚನೆ ನಡಿಸಿದರೆ ಪ್ರಯಾಣಿಕರಿಗೆ ಸೌಖ್ಯವು ದೊರಕುವದು ಮತ್ತು ಬಾಯಿ ಬಾರದ ಪ್ರಾಣಿಗಳಾದ ಬಡ ಕುದುರೆಗಳಿಗೆ ಮತ್ತಷ್ಟು ದಯೆಯನ್ನು ತೋರಿಸಿದಂತಾಗುವದು.

ಉಡುಪಿ ನಿವಾಸಿಕ.

ಧರ್ಮಾಸ್ಪತ್ರೆಗಳಲ್ಲಿ ಔಷಧಿಗಳ ವಿಕ್ರಯವು.

ಅಯ್ಯಾ,

ಈ ತಿಂಗಳ ತಾ ೯ನೇಯ ಸಂಚಿಕೆಯಲ್ಲಿ ಮಂಗಳೂರು ಮತ್ತು ಪುತ್ತೂರು ತಾಲೂಕು ಬೋರ್ಡು ಆಸ್ಪತ್ರೆಗಳಲ್ಲಿ ಕೇವಲ ಬಡವರನ್ನು ಬಿಟ್ಟು ಉಳಿದವರಿಂದ ಔಷಧಿ ಬಗ್ಗೆ ಹಣ ಪಡಕೊಳ್ಳಬೇಕೆಂಬ ಏರ್ಪಾಡನ್ನು ಪರೀಕ್ಷಾರ್ಥವಾಗಿ ಜಾರಿಗೆ ತರುವಂತ ಕಂಡುಬರುತ್ತದೆ. ಈ ವಿಷಯದಲ್ಲಿ ನಾನು ಬಡಜನರ ಬಗ್ಗೆ ಹೇಳಲಿಕ್ಕಿರುವ ಎರಡು ಮಾತುಗಳಿಗೆ ಸ್ಥಳಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ಸರಕಾರದ ಧರ್ಮಾಸ್ಪತ್ರೆಗಳಲ್ಲಿ ಕೇವಲ ಬಡವರಲ್ಲದವರಿಂದ ಔಷಧಿಗಳ ಬಗ್ಗೆ ಹಣಪಡಿಯಬೇಕೆಂಬ ಆಲೋಚನೆಯು ಬೋರ್ಡಿನವರಲ್ಲಿ ಉಂಟಾಗಲು ಕಾರಣವೇನು? ಆಸ್ಪತ್ರೆಗಳಲ್ಲಿ ಔಷದಿಗಳಿಗೆ ತಗಲುವ ಖರ್ಚು ಮಿತಿಮೀರಿ ಹೋಗಿರುವದೋ? ಹೀಗೆ ಖರ್ಚು ಮಿತಿಮೀರಿ ಹೋಗಿದ್ದರೆ ಇದನ್ನು ತಗ್ಗಿಸಲು ಯಾವ ಉಪಾಯ ಮಾಡಬಹುದು? ಈಗ ಬೋರ್ಡಿನವರು ಮಾಡಿರುವ ಉಪಾಯವು ಪರೀಕ್ಷಾರ್ಥ ಸಾಧನೆಗಾದರೂ ಉಚಿತವೇ?

ಪತ್ರಾಧಿಪರೇ, ಬೋರ್ಡು ಅಧಿಕಾರಿಗಳು ಈ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ಸಂಗ್ರಹಿಸಬೇಕಾದರೆ ಬಹಳ ಪ್ರಯತ್ನಪಡಬೇಕೆಂತಿಲ್ಲ ನಮ್ಮ ಮುನ್ಸಿಪಾಲಿಟಿಯಲ್ಲಿರುವ ವೆನ್‌ಲೂಕ್ ಧರ್ಮಾಸ್ಪತ್ರೆಯಲ್ಲಿ ಔಷಧಿಗಳನ್ನು ವಿಕ್ರಯಿಸುವ ಏರ್ಪಾಡು ಕೆಲವು ವರುಷಗಳಿಂದ ಇರುತ್ತದೆ ಮುನ್ಸಿಪಾಲಿಟಿಯ ಆಡಳಿತೆ ರಿಪೋರ್ಟುಗಳನ್ನು ತೆರದು ನೋಡಿದರೆ ಹೀಗೆ ಔಷಧಿಗಳ ವಿಕ್ರಯದಿಂದ ಒಂದು ವರುಷದಲ್ಲಿ ಎಷ್ಟು ಹಣವು ಮುನ್ಸಿಪಾಲಿಟಿಯವರಿಗೆ ಹುಟ್ಟಿಬಂದಿರುವದೆಂದು ತಿಳಿಯುವದು ಮಂಗಳೂರು ಮುನ್ಸಿಪಾಲಿಟಿಯ ಆಸ್ಪತ್ರೆಯಲ್ಲಿ ಒಟ್ಟಿಗೆ ಎಷ್ಟು ರೂಪಾಯಿಗಳ ಔಷದಿಯು ಖರ್ಚಾಗುವದು, ಎಂಥೆಂಥಾ ಜನರು ಧರ್ಮಾಸ್ಪತ್ರೆಯಿಂದ ಔಷದಿಗಳನ್ನು ಪಡಕೊಳ್ಳುವರು, ಹೀಗೆ ಕೆಲವು ವರುಷಗಳಿಂದ ಔಷದಿಗಳ ವಿಕ್ರಯದ ಮೊಬಲಗು ಕಡಿಮೆಯಾಗುವರೆ ಕಾರಣಗಳನ್ನು ಸಹಾ ಈ ಆಸ್ಪತ್ರೆಯ ವೃತ್ತಾಂತದಿಂದ ತಿಳಕೊಳ್ಳಲು ಅನುಕೂಲವಾಗಿರುತ್ತದೆ ಈ ಆಸ್ಪತ್ರೆಯ ವೃತ್ತಾಂತವನ್ನು ತರಿಸಿ ನೋಡಿ ಡಿಸ್ಟ್ರಿಕ್ಟ್ ಬೋರ್ಡಿನವರು ನಂತರ ಬೋರ್ಡು ಆಸ್ಪತ್ರೆಗಳಲ್ಲಿ ಔಷದಿಗಳ ವಿಕ್ರಯದ ಏರ್ಪಾಡನ್ನು ಜಾರಿಗೆ ತರುವದು ಒಳ್ಳೇದು

ಮಂಗಳೂರು ಶಹಾರಿನಲ್ಲಿ ಅಧಿಕಾರಸ್ಥರ ಕಣ್ಣೆದುರಿರುವ ವೆನ್‌ಲೂಕ್ ಆಸ್ಪತ್ರೆಯಲ್ಲಿ ಸಹ ಔಷದಿಗಳ ವಿಕ್ರಯದ ನಿಯಮವನ್ನು ಇಟ್ಟಿರುವುದರಿಂದ ಬಡವರಿಗೆ ಹೆಚ್ಚಿನ ಪ್ರಯೋಜನ ಉಂಟಾಗುವ ಬದಲಿಗೆ ಸಂಕಷ್ಟ ಉಂಟಾಗಿರುವದೆಂದು ನನ್ನ ಅಭಿಪ್ರಾಯವಾಗಿರುವದು ಪ್ರಥಮತಾ ಆಸ್ಪತ್ರೆಗೆ ಔಷಧಿಗೆ ಬಂದವರಲ್ಲಿ ಕೇವಲ ಬಡವರು, ಬಡವರು, ಮಧ್ಯಮ ತರಗತಿಯವರು ಮತ್ತು ಐಶ್ವರ್ಯವಂತರು ಈ ವಿವಿಧ ತರಗತಿಯವರನ್ನು ಗೊತ್ತುಮಾಡಿಕೊಳ್ಳುವ ಏರ್ಪಾಡು ಯಾವದು? ಧರ್ಮಾಸ್ಪತ್ರೆಯಲ್ಲಿ ಬಡವರು ಮಾತ್ರ ಔಷದಿಗಳನ್ನು ಧರ್ಮಕ್ಕೆ ಪಡಕೊಳ್ಳಬೇಕು, ದೊಡ್ಡವರು ಸಹ ಇಲ್ಲಿಂದ ಔಷದಿಗಳನ್ನು ಕಾಸು ಕೊಡದೆ ಒಯ್ಯುವದರಿಂದ ಬಡವರಿಗೆ ಹಾನಿಯುಂಟುಮಾಡುತ್ತೇವೆ ಎಂಬ ಮಮತಾಭಾವವು ಇಲ್ಲಿಯ ಐಶ್ವರ್ಯವಂತರಲ್ಲಿ ಇರುವದು ಕಡಮೆಯಾಗಿರುವುದು ಇಂದಾ ಸಂಗತಿಯಲ್ಲಿ ದೊಡ್ಡವರು ಬಡವರು ಯಾರೆಂತ ವೈದ್ಯ ಆಫೀಸರರಿಗೆ ಗೊತ್ತುಮಾಡಿಕೊಳ್ಳುವದು ಅಸಾಧ್ಯವಾಗಿ ಧರ್ಮಾಸ್ಪತ್ರೆಯಲ್ಲಿ ಬಡವರು ದೊಡ್ಡವರೂ, ದೊಡ್ಡವರು ಬಡವರೂ ಆಗಿಹೋಗುವ ಸಂಭವಗಳಿರುತ್ತವೆ. ಅದಲ್ಲದೆ ಆಗಿಂದಾಗ್ಯೆ ವೈದ್ಯ ಉದ್ಯೋಗಸ್ಥರು ವರ್ಗಾವರ್ಗಿ ಹೊಂದುವದರಿಂದ ಊರ ಜನರಲ್ಲಿ ದೊಡ್ಡವರು ಬಡವರು ಯಾರೆಂಬದನ್ನು ಇವರಿಂದ ತಿಳಿಯುವದು ಪೂರ್ಣ ಅಸಾಧ್ಯ. ಬಡವರಿಗಿಂತ ದೊಡ್ಡವರಿಗೆ ಉಪಕಾರ ಮಾಡುವ ಸ್ವಭಾವವು ಮನುಷ್ಯರಲ್ಲಿ ಸಹಜವಾದ್ದರಿಂದ ಒಂದು ವೇಳೆ ಅತ್ಯಲ್ಪ ಬೆಲೆಗೆ ದೊಡ್ಡವರಿಗೆ ಔಷಧಿ ಸಿಕ್ಕುವಾಗ ಬಡವರನ್ನು ಲಕ್ಷ್ಯಕ್ಕೆ ತಂದುಕೊಳ್ಳುವದು ಸಾಧ್ಯವಾಗುವದಿಲ್ಲ. ಮುನ್ಸಿಪಾಲಿಟಿಯಲ್ಲಿ ಈ ಕೆಲಸವು ಸಾಧ್ಯವಾಗದೆ ಹೋದರೆ ಬೋರ್ಡು ಆಸ್ಪತ್ರೆಗಳಲ್ಲಿ ದೊಡ್ಡವರು ಬಡವರು ಯಾರೆಂಬದನ್ನು ವೈದ್ಯ ಉದ್ಯೋಗಸ್ಥರು ಹ್ಯಾಗೆ ನಿರ್ಧರಿಸಿಕೊಳ್ಳುವರೋ? ಮುನ್ಸಿಫಲ್ ಆಸ್ಪತ್ರೆಯಲ್ಲಿ ಔಷಧಿಗಳ ವಿಕ್ರಯದಿಂದ ಅತ್ಯಲ್ಪ ಹಣವು ದೊರೆಯುವದಾದರೆ ಬೋರ್ಡು ಆಸ್ಪತ್ರೆಗಳಲ್ಲಿ ಇದು ಎಷ್ಟಾಗುವದು? ಆದ್ದರಿಂದ ಆಸ್ಪತ್ರೆಗಳಲ್ಲಿ ಏನಾದರೂ ವರುಷಕ್ಕೆ ರೂ ೨೦ ಯಾ ೩೦ ಸಿಕ್ಕುವ ಹಾಗೆ ವಿಕ್ರಯದ ಈ ಏರ್ಪಾಡನ್ನು ಜಾರಿಗೆ ತಂದರೆ ಬಡವರು ಇನಷ್ಟು ತೊಂದರೆಗೆ ಗುರಿಯಾಗುವರು ಇಷ್ಟೇ ಅಲ್ಲ; ಮೇಲಾಧಿಕಾರಿಗಳಿಂದ ದೂರವಾಗಿರುವ ಬೋರ್ಡು ಆಸ್ಪತ್ರೆಗಳಲ್ಲಿ ಇಂಥಾ ಏರ್ಪಾಡಿನಿಂದ ಮತ್ತೊಂದು ಅನರ್ಥವು ಉಂಟಾಗಬಹುದು. ಏನಂದರೆ ಆಸ್ಪತ್ರೆಯ ವೈದ್ಯ ಉದ್ಯೋಗಸ್ಥರಿಗೆ ರೋಗಕ್ಕೆ ತಕ್ಕ ಔಷಧಿಗಳನ್ನು ಕೊಡುವ ಒಂದು ಅಧಿಕಾರ. ಇದರೊಂದಿಗೆ ದೊಡ್ಡವನು ಯಾರು ಬಡವನು ಯಾರು ಎಂತ ನಿರ್ಣಯಿಸುವ ದೆವಿನ್ನು ಅಧಿಕಾರವನ್ನು ಕೊಟ್ಟು ಪರೀಕ್ಷಿಸುವದು ಸರಿಯಲ್ಲ ಎಂತ ನನಗೆ ಕಾಣುತ್ತದೆ. ಬೋರ್ಡಿನವರ ಆಸ್ಪತ್ರೆಗಳನ್ನು ಜನರು ಅವನ್ನು ಭಾವಿಸುವಂತೆ ಧರ್ಮಾಸ್ಪತ್ರೆಗಳನ್ನಾಗಿಯೇ ಇಡುವದು ಒಳ್ಳೇದು

ಮಂಗಳೂರು.
ತಾ. 12—9—1914

ಹಳೆರೋಗಿ.

ಯುದ್ಧ ಸಮಾಚಾರವು.

ತಾರೀಕು 11ನೇ ಸಪ್ಟಂಬರ.

ಕಳೆದ ಮೂರು ವಾರಗಳಿಂದ ಒಂದು ಮುಕ್ಕಾಲು ಮಿಲಿಯ ಜನರು ಪಾರಿಸ್ ನಗರವನ್ನು ಬಿಟ್ಟುಹೋದರು ಅನೇಕ ಸರಕಾರಿ ಕಟ್ಟಡಗಳಿಗೆ ಉಕ್ಕಿನ ತಗಡಿನಿಂದ ಅಡ್ಡ ಕಟ್ಟಿರುವರು

ಬೆಲ್ಜಿಯಮ್. ಬೆಲ್ಜಿಯನರು ಎಂಟ್‌ವರ್ಪಿನ ತೆಮ್ಮೂಡಲಲ್ಲಿರುವ ಅಣೆಕಟ್ಟುಗಳನ್ನು ತೆರೆದುಬಿಟ್ಟಿದ್ದರಿಂದ ಟಿರ್‌ಮೊಂಡೆಯ ವರೆಗೆ ವಿಶೇಷ ನೆರೆಬಂದು ಅನೇಕ ಜರ್ಮನರು ಈ ನೆರೆಯಲ್ಲಿ ಮುಣುಗಿಹೋದರು ಕೆಲವರು ಮರಗಳ ಮೇಲೆಯೂ ಮನೆಗಳ ಮೇಲೆಯೂ ಹತ್ತಿದರು. ಇಲ್ಲಿ ಜರ್ಮನರು ಕೆಲವು ಫಿರಂಗಿಗಳನ್ನು ಕಳಕೊಂಡರು ಶುಕ್ರವಾರ ಮತ್ತು ಶನಿವಾರ ಇಲ್ಲಿ ನಡೆದ ಕಾಳಗದಲ್ಲಿ ಜರ್ಮನರಲ್ಲಿ ೫೦೦೦ ಮಂದಿ ಹತರಾಗಿರುವರು.

ಜರ್ಮನರು ಡಿನಾಬ್ ಪಟ್ಟಣಕ್ಕೆ ಗುಂಡುಹಾರಿಸಿ ಮತ್ತು ಬೆಂಕಿಕೊಟ್ಟು ಪಟ್ಟಣವನ್ನು ನಾಶಮಾಡಿದರು ಈ ಮಧ್ಯೆ ನೂರಾರು ಮಂದಿ ಪಟ್ಟಣಿಗರನ್ನು ಗುಂಡುಹೊಡೆದು ಕೊಂದರು ಪಟ್ಟಣದ ಸುಮಾರು ನೂರು ಮಂದಿ ಪ್ರಮುಖರನ್ನು ಪಟ್ಟಣದ ಮಧ್ಯದಲ್ಲಿ ಸಂಹರಿಸಿದರು. ಜರ್ಮನರು ಅಲ್ಲಿಯ ನೇಶನಲ್ ಬೇಂಕಿಗೆ ಹೋಗಿ ಬೇಂಕಿನ ಎಲ್ಲಾ ಹಣವನ್ನು ಕೊಡಬೇಕೆಂದು ಬೇಂಕ್ ಮೆನೇಜರನನ್ನು ಕೇಳಿದರು. ಮೆನೇಜರನು ನಿರಾಕರಿಸಿದ್ದರಿಂದ ಮೆನೇಜರನನ್ನೂ ಅವನ ಇಬ್ಬರು ಮಕ್ಕಳನ್ನೂ ಗುಂಡು ಹೊಡೆದು ಕೊಂದರು

ಮೆಲಿನ್ಸ್ ಎಂಬಲ್ಲಿ ಆದ ಯುದ್ಧದಲ್ಲಿ ಜರ್ಮನರ ೬,೦೦೦ ಶವಗಳು ಬಿದ್ದಿದ್ದವು. ಜರ್ಮನರು ಅಲ್ಲಿಂದ ದಿಕ್ಕಾಪಾಲಾಗಿ ಬ್ರುಸೆಲ್ಸಿಗೆ ಓಡಿಹೋದರೆಂತ ಎಂಟ್‌ವರ್ಪಿನಲ್ಲಿ ಪ್ರಕಟವಾಗಿದೆ

ರುಷ್ಯಾ —ಆಸ್ಟ್ರೀಯಾನರ ಒಂದು ಪೂರ್ಣ ಸೇನೆಯು ಆಹಾರವಿಲ್ಲದೆ ಪಡುತ್ತಿರುವ ಕಷ್ಟವನ್ನು ತಡೆಯಲಾರದೆ ತಮ್ಮನ್ನು ಶೆರೆಹಿಡಿಯಬೇಕೆಂದು ರುಷ್ಯಾನರನ್ನು ಕೇಳಿಕೊಂಡಿತೆಂತ ರೋಮ ನಗರದಲ್ಲಿ ಪ್ರಕಟವಾಗಿದೆ.

ಸೆರಾಡ್ಜ ಎಂಬಲ್ಲಿ ರುಷ್ಯಾನರು ಒಂದು ಜೆಪ್ಲಿನ್ ವಾಯುನಾವೆಗೆ ಗುಂಡು ಹಾರಿಸಿ ನಾವೆಯನ್ನು ಕೆಳಗಿಳಿಸಿ ೩೦ ಜನರು, ಎರಡು ಆಫೀಸರರು ಮತ್ತು ಸಿಡಿಮದ್ದು ಯುದ್ಧ ಪರಗಳ ಸಹಿತ ಸೆರೆಹಿಡಿದಿರುವರು.

ಲೆಂಬರ್ಗಿನ ಸಮೀಪ ಆಸ್ಟ್ರೀಯಾನರ ೧೨ ಸೇನಾ ತುಕಡಿಗಳು ಪೂರ್ಣ ನಾಶವಾಗಿರುವವು. ಮತ್ತೊಂದು ಆಸ್ಟ್ರೀಯಾನರ ಸೇನೆಯು ಲಬ್ಲಿನ್ ಹತ್ತರ ವಿಶೇಷ ನಷ್ಟ ಪಟ್ಟಿರುವದೆಂತ ಪ್ರಕಟವಾಗಿದೆ.

ರುಷ್ಯಾನರು ಲೆಂಬರ್ಗಿಗೆ ೨೦ ಮೈಲು ದಕ್ಷಿಣದಲ್ಲಿರುವ ಮಿಕೊಲಜೊಫ್ ಎಂಬ ಕೋಟೆಯನ್ನು ಹಿಡಿದಿರುವರು ಇಲ್ಲಿ ೪೦ ವಿಶೇಷ ತರದ ಫಿರಂಗಿಗಳನ್ನೂ ಒಂದು ವರ್ಷಕ್ಕೆ ಸಾಕಾಗುವಷ್ಟು ಆಹಾರ ಸಾಮಾಗ್ರಿಗಳನ್ನೂ ವಶಮಾಡಿಕೊಂಡಿರುವರು. ಈ ಕೋಟೆಯಿಂದ ನಿಸ್ಟರಿಗೆ ಹೋಗುವ ದಾರಿ ಇರುವುದು, ಲೆಂಬರ್ಗಿಗೆ ೩೨ ಮೈಲು ದೂರವಿರುವ ರವರುಸ್ಕ ಕೋಟೆಯನ್ನೂ ರುಷ್ಯಾನರು ಹಿಡಿದಿರುವರು. ಇದು ಆಸ್ಟ್ರೀಯಾನರ ನಾಲ್ಕು ರೈಲ್ವೆಯು ಕೂಡುವ ಸ್ಥಳದಲ್ಲಿರುವುದು.

ಗೆಲೀಸಿಯವನ್ನು ರುಷ್ಯಾನರು ಪೂರ್ಣವಾಗಿ ವಶಮಾಡಿಕೊಂಡು ಕೌಂಟ್ ಬೊಬ್ರಿನ್‌ಸ್ಕಿಯವರನ್ನು ಗೆಲೀಸಿಯದ ಗವರ್ನರ್ ಜನರಲನ್ನಾಗಿ ನೇಮಿಸಿರುವರು.

ಪೋಲ್ಯಾ ಪ್ರಾಂತ್ಯದ ಕಡೆ ಮುಂದರಿಯುತ್ತಿದ್ದ ಆಸ್ಟ್ರೀಯ ಸೇನೆಯಲ್ಲಿ ರುಷ್ಯಾನರು ಹಲವು ತೋಪುಗಳನ್ನೂ ಅನೇಕ ಸೈನೀಕರನ್ನೂ [illegible]ಹಿಡಿದಿರುವದರಿಂದ ಅಲ್ಲಿದ್ದ ಆಸ್ಟ್ರೀಯ ಸೇನೆಯು ಹಿಂದರಿದಿರುವುದು. ಆಸ್ಟ್ರೀಯ ಸೈನೀಕರು ಆಮಾತಿಸಾರ ರೋಗದಿಂದ ವಿಶೇಷವಾಗಿ ವೇದನೆಪಡುತ್ತಿರುವರೆಂಬ ವಾರ್ತೆ ಬಂದಿರುವುದು.

ತಾರೀಕು 12ನೇ ಸಪ್ಟಂಬರ.

ಜರ್ಮನರು ಘೆಂಟ್ ಪಟ್ಟಣವನ್ನು ವಶಮಾಡಿಕೊಂಡಿರುವರು ಪರಂತು, ಅಲ್ಲಿರುವ ಅಮೇರಿಕ ರಾಯಭಾರಿಯು ಮುನ್ಸಿಪಾಲಿಟಿ ಮತ್ತು ಜರ್ಮನರೊಳಗೆ ಕರಾರನ್ನು ಮಾಡುತ್ತಿರುವುದರಿಂದ ಜರ್ಮನರು ಇನ್ನೂ ಪಟ್ಟಣವನ್ನು ಪ್ರವೇಶಿಸಲಿಲ್ಲ

ಆಸ್ಟ್ರೀಯ ಆಸ್ಟ್ರೀಯದ ಚಕ್ರವರ್ತಿ ಫ್ರಾನ್ಸಿಸ್ ಜೊಸೆಫ್‌ರವರು ಮೃತರಾದರೆಂಬ ವಾರ್ತೆ ಇರುವುದು. ಆಸ್ಟ್ರಿಯಾ ದೇಶದೊಳಗೆ ಒಳತೊಂದರೆಗಳು ಹಬ್ಬಿರುವುದರಿಂದ ನಿಜವಾದ ವಾರ್ತೆಯು ಬರಲಿಕ್ಕೆ ಅಡ್ಡಿಯಾಗಿದೆ.

ಇಟೆಲಿ —ಆಸ್ಟ್ರೀಯದಲ್ಲಿರುವ ಇಟೆಲಿಯವರು ದಂಗೆ ಏಳುವ ಹಾಗಿದ್ದಾರೆಂಬ ಅನುಮಾನದ ಮೇಲೆ ಆಸ್ಟ್ರೀಯ ಸರಕಾರದವರು ವಿಚಾರ ನಡಿಸದೆನೇ ಅವರನ್ನು ಗುಂಡು ಹೊಡೆದು ಕೊಂದಿರುವರೆಂಬ ವಾರ್ತೆ ಬಂದದೆ ಈ ಕಾರಣದಿಂದ ಇಟೆಲಿಯ ಸೊಶ್ಯಲಿಸ್ಟರು ಸಿಟ್ಟುಗೊಂಡು ಈ ದೇಶದವರಿಗೆ ಯುದ್ಧದ ಸಂಬಂಧ ಇರುವ ಅಪೇಕ್ಷೆಯನ್ನು ತೋರ್ಪಡಿಸುವ ಬಗ್ಗೆ ಪಾರ್ಲಿಮೆಂಟ್ ಸಭೆಯನ್ನು ಕೂಡಿಸಬೇಕೆಂದಿರುವರು.

ಹಿಂದೂಸ್ಥಾನ —ಮದ್ರಾಸ್ ಯುದ್ಧ ಫಂಡಿನಿಂದ ಯುದ್ಧದ ಬಗ್ಗೆ ಕುದುರೆಗಳನ್ನೂ ಒಂದು ಆಸ್ಪತ್ರಿ ಹಡಗವನ್ನೂ ಒದಗಿಸಿಕೊಡುವ ಆಲೋಚನೆಯನ್ನು ವೈಸರಾಯ ಪ್ರಭುಗಳವರೂ, ಕಿಚನರ್ ಪ್ರಭುಗಳವರೂ ಸ್ಟೇಟ್ ಸೆಕ್ರಟರಿಗಳವರೂ ಒಪ್ಪಿರುವರು

ಯುದ್ಧಕ್ಕೆ ಕಳುಹಿಸೋಣಾಗುವ ಕುದುರೆಗಳು ಮದ್ರಾಸಿನಲ್ಲಿ ಕೂಡಿಸಲ್ಪಟ್ಟ ಯೂರೋಪಿಗೆ ಹೋಗುವ ಹಡಗದಲ್ಲಿ ಕಳುಹಿಸಲ್ಪಡುವದು

ಆಸ್ಪತ್ರಿ ಹಡಗದ ಬಗ್ಗೆ "ಟಂಡ" ಎಂಬ ಹಡಗವನ್ನು ತೆಗೆದುಕೊಂಡಿರುವರು ಮೂರು ವಾರಗಳೊಳಗೆ ಈ ಹಡಗವು ಮದ್ರಾಸಿಗೆ [illegible] ತಲಪುವುದು ಈ ಹಡಗದಲ್ಲಿ ಕೆಲಸ ಮಾಡುವರೆ ಮದ್ರಾಸ್ ಸಂಸ್ಥಾನದ ಯುರೋಪಿಯನ್ ಮತ್ತು ಭಾರತೀಯ ದಾಕ್ತಾರರೂ ದಾದಿಗಳೂ ಆರಿಸಲ್ಪಡುವರು ಈ ವಿಷಯ ಮುಂದಕ್ಕೆ ಪ್ರಕಟಿಸಲ್ಪಡುವುದು ಪ್ರಕೃತ ಮದ್ರಾಸ್ ಯುದ್ಧ ಫಂಡಿನಿಂದ ಈ ಎರಡು ವಿಧವಾಗಿ ಸಹಾಯ ಮಾಡಲ್ಪಡುವುದು.

ತಾರೀಕು 13ನೇ ಸಪ್ಟಂಬರ.

ಪೂರ್ವ ಕಡೆಯಲ್ಲಿ ಮುಂದರಿಸುತ್ತಿದ್ದ ಜರ್ಮನ್ ಜನರಲ್ ಒನ್ ಕಲ್ಕರ ಸೇನೆಯಲ್ಲಿ ಬ್ರಿಟಿಷ ಸೇನೆಯು ವಿಶೇಷ ನಷ್ಟವನ್ನುಂಟುಮಾಡಿದ್ದರಿಂದ ಬೆಂಬಲ ಸೇನೆಯು ಬಂದು ಕೂಡುವ ವರೆಗೆ ಆ ಸೇನೆಯು ಪುನಃ ಬ್ರಿಟಿಷ ಸೇನೆಯ ಮೇಲೆ ಬೀಳಲು ಅಸಮರ್ಥವಾಗಿರುವುದು

ಬ್ರಿಟಿಷ್ ಸೇನೆಯ ಆಫೀಸರರಲ್ಲಿ 9 ಮಂದಿ ಹತರಾದರು, ೯ ಮಂದಿ ಗಾಯಪೊಡೆದರು, ಇತರ ೯೦ ಮಂದಿ ಗಾಯಪೊಡೆದರು ಎಂತ ಕಾ. ಆರಲ್ಲ ಯುದ್ಧರಂಗದಿಂದ ಬಂದ ವರದಿಯಿಂದ ತಿಳಿದುಬರುವುದು.

ಫ್ರಾನ್ಸಿನ ಬಲಪಾರ್ಶ್ವದಲ್ಲಿ ಸೋಲಿಸಲ್ಪಟ್ಟ ಜರ್ಮನ ಸೇನೆಗೆ ಸಹಾಯಮಾಡುವರೆ ೬೦,೦೦೦ ಜರ್ಮನ್ ಸೇನಿಕರು ಬೆಲ್ಜಿಯಮಿನ ಮಾರ್ಗವಾಗಿ ಹೋಗಿರುವರು.

[illegible] ಕಾಳಗ ನಡಿಯುವ ೧೫೦ ಮೈಲುಗಳ ಸೇನಾ ನೆಲೆಗಳಲ್ಲಿ ಶತ್ರುಗಳಿಗೆ ಎಲ್ಲಿಯೂ ಜಯವಾಗಲಿಲ್ಲ. ಪಾರಿಸ್ ಕೋಟೆಯನ್ನು ಶತ್ರುಗಳು ಮುತ್ತುವರೆಂಬದಾಗಿ ಮೊದಲು ಪಾರಿಸ್ ಪಟ್ಟಣಿಗರು ಭಯಪಟ್ಟಿದ್ದರೂ ಈಗ ಭಯವಿಲ್ಲದೆ ಇರುವರು. ಅದಲ್ಲದೆ ಈಗ ಪಾರಿಸ್ ಆಕಾಶವಾಣಿ [illegible]ಗಳಿಂದಲೂ ಯುದ್ಧರಂಗದಿಂದಲೂ ಜರ್ಮನರ ಫಿರಂಗಿಗಳ ಗರ್ಜನೆಯು ನಿಂತದ್ದರಿಂದ ಪಟ್ಟಣಿಗರಲ್ಲಿ ಮತ್ತಷ್ಟು ಧೈರ್ಯ ಉಂಟಾಗಿರುವುದು. ಯುದ್ಧ ಸಾಧನೆಯ ಬಗ್ಗೆ ಪ್ರತ್ಯೇಕಿಸಲ್ಪಟ್ಟ ಕಾಡು ಪ್ರದೇಶಗಳಲ್ಲಿಯೂ ಎತ್ತರ ಗುಡ್ಡಗಳಲ್ಲಿಯೂ ಈಗ ಫ್ರೆಂಚರು ಶತ್ರುಗಳ ಎದುರು ಎದುರಾಗಿ ನಿಂತು ಕಾದಾಡುತ್ತಿರುವರು ಎಂಬ ದೃಢ ನಂಬಿಕೆಯು ಪಾರಿಸ್ ಪಟ್ಟಣಿಗರಲ್ಲಿ ಉಂಟಾಗಿರುವುದು

ವೈಸರಾಯ ಪ್ರಭುಗಳವರಿಗೆ ಸ್ಟೇಟ್ ಸೆಕ್ರೆಟರಿಯವರಿಂದ ಈ ರೀತಿ ತಂತೀ ಬಂದಿರುವುದು —"ಫ್ರಾನ್ಸಿನಲ್ಲಿ ಕದನವು ನಡಿಯುತ್ತಿದೆ ಶತ್ರುಗಳು ಎಲ್ಲಾ ಸೇನಾನೆಲೆಗಳಿಂದ ಹಿಂದಕ್ಕೆ ಓಡಿಹೋಗಿರುವರು ಬ್ರಿಟಿಷರು ಮಾರ್ನೆ ನದಿಯ ಉತ್ತರವನ್ನು ದಾಟಿ ಶತ್ರುಗಳ ತೋಪುಗಳನ್ನೂ ೩೫೦ಕ್ಕಿಂತಲೂ ಹೆಚ್ಚಿನ ಸೇನಿಕರನ್ನೂ ಶೆರೆಹಿಡಿದಿರುವರು ಇಲ್ಲಿ ಶತ್ರುಗಳಿಗೆ ವಿಶೇಷ ನಷ್ಟವುಂಟಾಗಿರುವುದು ಶತ್ರುಗಳ ೨೦೦ ಶವಗಳನ್ನು ಬ್ರಿಟಿಷ ಸೈನಿಕರು ಹೂಣಿಟ್ಟರು."

ರುಶ್ಯಾ ಟೊಮಸ್‌ಜೊ ಎಂಬಲ್ಲಿ ರುಶ್ಯರು ಆಸ್ಟ್ರಿಯರ ಸೇನೆಯನ್ನು ೩ ಕಡೆಗಳಿಂದಲೂ ಮುತ್ತಿದರು, ಆಸ್ಟ್ರೀಯರು ದಿಕ್ಕಾಪಾಲಾಗಿ ಓಡಿಹೋದರು ರುಶ್ಯಾನರು ಅವರನ್ನು ಹಿಂದಟ್ಟಿದರು. ಆಸ್ಟ್ರೀಯ ಮತ್ತು ಜರ್ಮನ ಸೇನೆಗಳು ಲಬ್ಲಿನ್ ಸಮೀಪ ಕೋಟೆ ಕೊತ್ತಲುಗಳನ್ನು ಬಿಟ್ಟು ದಕ್ಷಿಣ ಕಡೆಗೆ ಹಿಂದೆ ಸರಿದಿರುವದು

ಬೆರ್ಲಿನ್ ಮತ್ತು ವಿಯಾನ್ನದ ಕಡೆಗೆ ಮುಂದರಿಸುವುದೇ ರುಶ್ಯಾನರ ಮುಖ್ಯ ಗುರಿಯಾಗಿರುವುದು ಲಬ್ಲಿನಿನಲ್ಲಿ ರುಶ್ಯರಿಗೆ ಜಯವಾದುದರಿಂದ ವಿಯಾನ್ನಕ್ಕೆ ಮಾರ್ಗ ತೆರೆದುಕೊಟ್ಟಂತಾಯಿತು. ಅತ್ತಕಡೆಯಲ್ಲಿ ಸರ್ವಿಯರು ಬುಡಾಪೆಸ್ಟಿಗೆ ಮುಂದರಿಸಿ ಅಲ್ಲಿಂದ ವಿಯಾನ್ನವನ್ನು ತಕ್ಕೊಳ್ಳುವ ಕೆಲಸದಲ್ಲಿ ಉದ್ಯುಕ್ತರಾಗುವರು ಸರ್ವಿಯರು ವಿಯಾನ್ನವನ್ನು ವಶಪಡಿಸುವ ಕೆಲಸ ತೊಡಗಿದಲ್ಲಿ ಅಲ್ಲಿಗೆ ಹೋಗಿರುವ ರುಶ್ಯಾನರ ಸೇನೆಯು ದಕ್ಷಿಣ ಜರ್ಮನಿಯನ್ನು ವಶಮಾಡಿಕೊಳ್ಳುವ ಕೆಲಸ ಪ್ರಾರಂಭಿಸುವುದು ತನ್ಮಧ್ಯೆ ಉತ್ತರದಲ್ಲಿರುವ ರುಶ್ಯಾ ಸೇನೆಯು ಬೆರ್ಲಿನಿಗೆ ಮುಂದರಿಸುವುದು.

ಜರ್ಮನರು ಪೂರ್ವ ಸರಹದ್ದಿಗೆ ತಮ್ಮ ಸೇನೆಯನ್ನು ಎಡೆಬಿಡದೆ ಕಳುಹಿಸುತ್ತಲಿರುವರು ಒಟ್ಟಿಗೆ ಈ ತನಕ ೨೦೦,೦೦೦ ಜರ್ಮನ ಸೇನೆಯು ಬಂದಿರುವುದೆಂತ ರುಶ್ಯದ ಮುಖ್ಯ ಪಟ್ಟಣವಾದ ಪೆಟ್ರೊಗ್ರಾಡಿನಲ್ಲಿ ಪ್ರಕಟವಾಗಿದೆ.

ರುಷ್ಯಾನರು ಆಸ್ಟ್ರೀಯಕ್ಕೆ ಸೇರಿದ ಗೊರ್ಡೆಕ್ ಎಂಬಲ್ಲಿರುವ ಬಲವಾದ ಕೋಟೆಯ ಮೇಲೆ ಬಿದ್ದಿರುವರು ರೆವರುಸ್ಕದಲ್ಲಿರುವ ಆಸ್ಟ್ರೀಯರ ವಿಶೇಷ ಸೇನೆಯು ಇರುವದು

ರುಶ್ಯನರು ರುಮೇನಿಯ ಸರಹದ್ದಿನ ಹತ್ತಿರವಿರುವ ಆಸ್ಟ್ರೀಯಾನರ ಸಂಜೀವ ಮತ್ತು ಗಾಟ್ನ ಪಟ್ಟಣಗಳನ್ನು ಹಿಡಿದಿರುವರು.

ಜಪಾನ್.—ಸಿಂಗ್‌ಟಾವೊದಲ್ಲಿ ವಿಪರೀತ ಮಳೆ ಬಂದಿರುವುದರಿಂದ ಪಟ್ಟಣದಲ್ಲಿ ನೆರೆ ಬಂದಿರುವುದು. ಆದುದರಿಂದ ಜಪಾನೀಯರ ನೆಲಸೇನೆಯು ಸದ್ಯಾ ಅಲ್ಲಿಗೆ ಹೋಗದು. ಪರಂತು ನೌಕಾವಳಿಯು ಅಲ್ಲಿಯ ಕೋಟೆಗಳಿಗೆ ಗುಂಡುಹಾರಿಸುತ್ತಿದೆ.

ಟರ್ಕಿ. ಟರ್ಕಿಯು ಯುದ್ಧಕ್ಕೆ ಸೇರುವ ಹಾಗೆ ಜರ್ಮನ್ ಕೈಸರರು ಬಹಳವಾಗಿ ಬೇಡಿಕೊಂಡರು. ಆದರೆ ಎಲ್ಲಾ ನಾಗರಿಕ ರಾಜ್ಯಗಳಿಂದ ತುಚ್ಛೀಕರಿಸಲ್ಪಡುವ ಜರ್ಮನರ ಈ ವರ್ತನೆಯಲ್ಲಿ ತಾನು ಭಾಗಿಯಾಗುವದಿಲ್ಲವೆಂತ ಸುಲ್ತಾನರು ಉತ್ತರ ಕೊಟ್ಟರೆಂತ ಡೈಲಿ ಟೆಲಗ್ರಾಫಿನ ನ್ಯೂಯೋರ್ಕ ಬಾತ್ಮೀದಾರರು ಹೇಳುವರು.

ಜರ್ಮನರ ವರ್ತನೆಯನ್ನು ಮೆಕ್ಸಿಕೋ-ದೇಶದ [illegible] ಎಲ್ಲರವರೂ ಖಂಡಿಸಿರುವರೆಂತ ತಿಳಿದುಬರುತ್ತದೆ

ಅಂಗ್ಲಾಂಡ. ಹಿಂದೂಸ್ಥಾನದಿಂದ ರಣರಂಗಕ್ಕೆ ಕಳುಹಿಸಲ್ಪಡುವ ಭಾರತೀಯ ಸೇನೆಯಲ್ಲಿ ಗುರ್ಖರು ಸೇರಿರುವರೆಂತ ಕಿಚ. ಪ್ರಭುಗಳವರು ಹೇಳಿರುವರು.

ವೈಸರಾಯ ಪ್ರಭುಗಳವರು ಹಿಂದೂಸ್ಥಾನದ ಶ್ರೀಮಂತ, ದೇಶಿಯ ರಾಜರ ಮತ್ತು ಇತರ [illegible] ಜನರೂ ಈ ಯುದ್ಧ [illegible] ಸರಕಾರಕ್ಕೆ ಮಾಡುತ್ತಿರುವ ಸಹಾಯವನ್ನೂ ತಿಳಿಸುವ ಸಂದೇಶವನ್ನು ಇಂಗ್ಲಾಂಡಿಗೆ ಕಳುಹಿಸಿ ಕೊಟ್ಟಿರುವರು. ಈ [illegible] ಹಿಂದೂಸ್ಥಾನದ ಉಪಕಾರ[illegible]

ಗಳಾಗಿರುವ ಮಿ|| ರೋಬರ್ಟ್ಸರವರು ಪಾರ್ಲಿಮೆಂಟ್ ಕಾಮನ್ಸ್ ಸಭೆಯಲ್ಲಿ ಓದಿಹೇಳಿದರು. ಹಿಂದೂಸ್ಥಾನದಲ್ಲಿರುವ ಸುಮಾರು ೭೦೦ ದೇಶೀಯ ರಾಜರುಗಳು ಒಮ್ಮನಸ್ಸಾಗಿ ಸಾಮ್ರಾಜ್ಯ ಸರಕಾರಕ್ಕೆ ಸಹಾಯಮಾಡುವರೆ ತಮ್ಮ ತನುಮನಧನವನ್ನು ಒಪ್ಪಿಸಿರುವರು. ಅನೇಕ ರಾಜರುಗಳು ಯುದ್ಧರಂಗಕ್ಕೆ ಖುದ್ದಾಗಿ ಹೋಗಲು ತಾವಾಗಿ ಒಪ್ಪಿಗೆ ಕೊಟ್ಟಿರುವರು. ಈ ಪೈಕಿ ಜೋಡಾಪುರ, ಬಿಕಾನಿರ, ಕಿಸಂಗ್ರಹ, ರಟ್ಲಾಮ್, ಸೆಚಿನ್, ಪಟಿಯಾಲದ ರಾಜರುಗಳೂ ಸರ್ ಪ್ರತಾಪಸಿಂಘ್, ಬೋಪಾಲದ ಯುವರಾಜರು ಕೂಚಿಬಿಹಾರ್ ಮಹಾರಾಜರ ಒಬ್ಬ ಸಹೋದರರ, ಮೊದಲಾದ ಕೆಲವರನ್ನು ಯುದ್ಧಕ್ಕೆ ಕಳುಹಿಸಲು ವೈಸರಾಯ ಪ್ರಭುಗಳು ಆರಿಸಿರುತ್ತಾರೆ. ಸರ್ ಪ್ರತಾಪಸಿಂಘರಿಗೆ ೭೦ ವರ್ಷ ವಯಸ್ಸಾದರೂ ಸಾಮ್ರಾಜ್ಯಕ್ಕಾಗಿ ಯುದ್ಧಕ್ಕೆ ಹೋಗಲು ಹೊರಟಿರುವರು. ಅವರೊಡನೆ ಅವರ ೧೬ ವರ್ಷದ ಸೋದರಳಿಯನೂ ಹೊರಟಿರುವರು. ಇನ್ನು ಹಲವು ರಾಜರು ಒಟ್ಟುಕೂಡಿ ಆಸ್ಪತ್ರೆ ಹಡಗಗಳನ್ನೂ ಕುದುರೆಗಳನ್ನೂ ಒದಗಿಸಿಕೊಡುತ್ತಿರುವರು. ಇನ್ನ ಕೆಲವು ರಾಜರು ಹಣಸಹಾಯವನ್ನು ಮಾಡುತ್ತಿರುವರು. ಇಂತಿತ್ಯಾದಿ ವಿಷಯಗಳ ಹಣಕೊಡಿದ್ದ ಸಹಾಯಮಾಡಿದವರ ಹೆಸರು ಪಟ್ಟಿಗಳೂ ಅವರು ಮಾಡಿದ ಸಹಾಯ ವಿವರಣೆಯೂ ಪಾರ್ಲಿಮೆಂಟ್ ಸಭೆಯಲ್ಲಿ ಓದಿದಾಗ ಮಧ್ಯೆ ಮಧ್ಯೆ ಮೆಂಬರರು ಹಿಂದೂಸ್ಥಾನದ ರಾಜಭಕ್ತಿಯನ್ನು ಶ್ಲಾಘಿಸಿ ಧನ್ಯವಾದವನ್ನಿತ್ತರು. ವೈಸರಾಯರ ಈ ವರದಿಯನ್ನು ಓದುತ್ತಿರುವಾಗ ಪಾರ್ಲಿವೆಂಟಿನ ಒಬ್ಬ ಮೆಂಬರರು ಎದ್ದುನಿಂತು ಈ ವರದಿಯ ಒಂದು ನಕಲನ್ನು ಕೈಸರನಿಗೆ ಕಳುಹಿಸಿಕೊಡಬೇಕೆಂದು ಕೂಗಿದರು. ಪ್ರಭು ಮಂದಿರದಲ್ಲಿಯೂ ಕಾಮನ್ಸ್ ಸಭಾಮಂದಿರದಲ್ಲಿಯೂ ಹಿಂದೂಸ್ಥಾನದವರ ರಾಜಭಕ್ತಿಯು ಬಹಳವಾಗಿ ಶ್ಲಾಘಿಸಲ್ಪಟ್ಟಿರುವುದು.

ತಾ|| ೧೮ರಲ್ಲು ವೈಸರಾಯ ನ್ಯಾಯವಿಧಾಯಕ ಸಭೆಯಲ್ಲಿ ನಡೆದ ಪ್ರಸ್ತಾಪವನ್ನು ಕ್ರೂ ಪ್ರಭುಗಳವರು ಪಾರ್ಲಿಮೆಂಟ್ ಪ್ರಭು ಮಂದಿರದಲ್ಲಿ ತಿಳಿಯಹೇಳಿ ಹಿಂದೂಸ್ಥಾನ ಬೊಕ್ಕಸವು ಯುದ್ಧದ ಖರ್ಚಿಗಾಗಿ ಒಂದು ಮಿಲಿಯ ಪವನು ಕೊಡುವರೆ ಮೆಂಬರರು ತಾವಾಗಿ ಸಮ್ಮತಿಸಿರುವರೆ ಬದಾಗಿ ಹೇಳಿದರು.

ತಾರೀಖು 14ನೇ ಸೆಪ್ಟಂಬರ

ಬ್ರಿಟಿಷರ ಸೇನೆಯಲ್ಲಿ ಸದ್ಯ ಬರ ತಾ|| ೧೦ರ ತನಕ 10 ಆಫೀಸರರು ಹತರಾದರು, ೯೩ ಆಫೀಸರರ ಗಾಯಪೊಡೆದರ 81 ಕಾಣೆಯಾದರು. ಸೈನಿಕರ ಪೈಕಿ 61 ಹತರಾದರು, 510 ಗಾಯಪೊಡೆದರು, 2853 ಕಾಣೆಯಾದರು.

ಬ್ರಿಟಿಷರ ಸೇನೆಯಲ್ಲಿ ಒಟ್ಟಿಗೆ ಈ ವರೆಗೆ 18,720 ಜನ ದಿ ಪ್ರಾಣಾಪಾಯ ಹೊಂದಿದರು. ಈ ಸಂಖ್ಯೆಯಲ್ಲಿ ಕಾಣೆಯಾದ 16,587 ಮಂದಿಯೂ ಸೇರಿಸಲ್ಪಟ್ಟಿರುವರು.

ಪ್ರುಶ್ಯದ ಪ್ರಿನ್ಸ್ ಜೊಯೆಕಿಮ್‌ರವರು ಫ್ರಾನ್ಸಿನಲ್ಲಿ ನಡೆದ ಕದನದಲ್ಲಿ ಘಾಯ ಒಡೆದಿರುವರು.

ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಈ ರೀತಿ ಪ್ರಕಟಿಸಿರುವರು —ಫ್ರಾನ್ಸಿನಲ್ಲಿ ಕಾಳಗ ನಡೆಯುತ್ತಿದೆ. ಬ್ರಿಟಿಷ ಸೇನಿಕರು ಶತ್ರುಗಳನ್ನು ಎಲ್ಲಾ ಸೇನಾನಿಲೆಗಳಿಂದ ಓಡಿಸಿರುವರು. ಬ್ರಿಟಿಷರ 1ನೇ ಸೇನಾ ತುಕಡಿಯು 200 ಮಂದಿ ಜರ್ಮನರನ್ನು ಹೊನೆಟ್ಟು ಶತ್ರುಗಳ 12 ಫಿರಂಗಿಗಳನ್ನೂ ಕೆಲವು ಸೈನಿಕರನ್ನೂ ಸೆರೆ ಹಿಡಿದಿರುವುದು.

ಬ್ರಿಟಿಷರ 2ನೇ ಸೇನಾ ತುಕಡಿಯು ಶತ್ರುಗಳ ಬತ್ತೇರಿಯನ್ನೇ ಹಿಡಿದಿರುವುದು. ಇಲ್ಲಿ ಜರ್ಮನರು ವಿಶೇಷ ನಷ್ಟಪಟ್ಟು ಬಹಳವಾಗಿ ದಣಿದು ಹೋದರು. ಬ್ರಿಟಿಷರು ಮಾರ್ನೆ ನದಿಯನ್ನು ಉತ್ತರ ಕಡೆಯಲ್ಲಿ ದಾಟಿರುವರು.

ಜರ್ಮನ ಸೇನೆಯು ಎರಡು ದಿವಸಗಳ ವರೆಗೆ ಕಾದಾಡಿ ನಂತರ ಮಾರ್ನೆ ನದಿಯ ಕಡೆಗೆ ಹಿಂದೆ ಸಂದಿರುವದೆಂತ ಜರ್ಮನರು ಪ್ರಕಟಿಸಿರುವರು.

ಜರ್ಮನರ ಪ್ರಿನ್ಸ್ ಎರ್ನೆಸ್ಟ್ ಆಫ್ ಸಾಕ್ಸ-ಮೈನಿಂಜೆನ್‌ರವರು ನಾಮೂರಿನಲ್ಲಿ ಮಡಿದುಹೋದರು.

ಬ್ರಿಟಿಷರ ಎಡಪಾರ್ಶ್ವ ಸೇನೆಯು ಮಾರ್ನೆ ನದಿಯನ್ನು ದಾಟಿ ಹಿಂದೆ ಸರಿಯುತ್ತಿರುವ ಶತ್ರುಗಳನ್ನು ಓಡಿಸಿಕೊಂಡು ಹೋಗುತ್ತಿರುವರು. ಪ್ರುಶ್ಯದ ಕಾವಲು ಸೇನೆಯು ಹಿಂದೆ ಬಗಿಗುವದು.. ಈ ಕೆಲಸವು ಬಹಳ ಪ್ರಯಾಸದಿಂದ ನಡೆಯಿತು.

ಜರ್ಮನ್ ಆಫೀಸರರು ತಮ್ಮ ಸೇನಿಕರನ್ನು ಮುಂದೆ ನೂಕಿಕೊಂಡು ಹೋಗುವ ಬದಲಿಗೆ ಖಡ್ಗ ಮತ್ತು ರಿವಾಲ್ವರಿನಿಂದ ಅಟ್ಟುತ್ತಿರುವದನ್ನು ಕಂಡು ಬ್ರಿಟಿಷ್ ಸೈನಿಕರು ಆಶ್ಚರ್ಯಪಟ್ಟಿರುವರು.

ಬೆಲ್ಜಿಯಮ್:—ಜರ್ಮನರು ಬೆಲ್ಜಿಯಮಿನಲ್ಲಿರುವ ತಮ್ಮ ಸೇನೆಯನ್ನು ಕಡಿಮೆ ಮಾಡಿದ್ದು ನೋಡಿಕೊಂಡು ಬೆಲ್ಜಿಯನರು ಆಸಕ್ತಿಯಿಂದ ಕದನಕ್ಕೆ ತೊಡಗಿರುವರು. ಎಂಟ್‌ವರ್ಪ್ ಕೋಟೆಯ ಸೇನೆಯು ಜರ್ಮನರ ೩೦೦ ಮಂದಿಯನ್ನು ಸೆರೆ ಹಿಡಿದಿರುವುದ.

ಫ್ರಾನ್ಸಿಗೆ ಹೋಗುತ್ತಿರುವ ಜರ್ಮನ ಬಂಬಲ ಸೇನೆಯ ಮೇಲೆ ವೆಟ್ಟೆರಾನ್ ಎಂಬಲ್ಲಿ ಬೆಲ್ಜಿಯನರು ಬಿದ್ದಿರುವರು.

ತಾ|| ೧೧ರಲ್ಲಿ ರುಶ್ಯಾನರು ಜರ್ಮನ ಮತ್ತು ಆಸ್ಟ್ರಿಯ ಸೇನೆಯನ್ನು ಸೋಲಿಸಿ ಕಾರ್ನಿಕ್ ಡಿಸ್ಟ್ರಿಕ್ಟನ್ನು ವಶಮಾಡಿಕೊಳ್ಳುವ ಕೆಲಸದಲ್ಲಿ ನಿರತರಾಗಿರುವರು. ಟೊವ ಸ್ಟೆಫ್-ರವಸ್ಕದಿಂದ ನಿಸ್ತರ್ ವರೆಗೆ ಕಠಿಣ ಕಾಳಗ ನಡೆಯುತ್ತಿದೆ ಎಂತ ರುಶ್ಯ ಸರಕಾರದವರು ಪ್ರಕಟಿಸಿರುವರು.

ಸರ್ವಿಯ:—ಸರ್ವಿಯನರು ವಿಚೆಗಾರ್ಡ್ ಎಂಬಲ್ಲಿ ಆಸ್ಟ್ರಿಯನರೊಡನೆ ಕಾದಾಡಿ ಜಯ ಹೊಂದಿರುವರು. ಇಲ್ಲಿ ಸರ್ವಿಯನರು ಶತ್ರುಗಳನ್ನು ಡ್ರಿನ ನದಿಯ ಎಡ ದಡದ ಕಡೆಗೆ ಅಟ್ಟಿರುವರು.

ಸರ್ವಿಯನರು ಸೆಮ್ಲಿನ್ ಪಟ್ಟಣವನ್ನು ವಶಮಾಡಿಕೊಂಡಿರುವರು. ಈ ಯುದ್ಧದಲ್ಲಿ ವಿಶೇಷ ರಕ್ತಪಾತವಾಗಿರುವದು.

ಸರ್ವಿಯ ಸೇನೆಯು ಹಂಗೇರಿಯನ್ನು ನುಗ್ಗಿರುವುದು. ಸೇವ್ ನದಿಯ ಮೇಲಿರುವ ಮಿಟ್ರೊಜ ಪಟ್ಟಣದಲ್ಲಿ ಆಸ್ಟ್ರಿಯನರ ಒಂದು ಮಹಾ ಸೇನೆಯನ್ನು ಸರ್ವಿಯನರು ಹಿಂದೆ ಓಡಿಸಿರುವರು. ಇಲ್ಲಿ ಯುದ್ಧ ಸಾಮಗ್ರಿಗಳನ್ನೂ ಕೆಲವು ಮಂದಿಯನ್ನೂ ಸೆರೆಹಿಡಿದಿರುವರು.

ಮೊಂಟಿನಿಗ್ರೊಯನು ಫೊಕ ಪಟ್ಟಣವನ್ನು ಹಿಡಿದಿರುವರು.

ಅಂಗ್ಲಾಳ:—ಇಂಗ್ಲಾಂಡಿನ ಹೊಸ ಸೇನೆಗೆ 439,000 ಮಂದಿ ಬಂದು ಕೂಡಿರುವರು. 500,000 ಮಂದಿಯ ಇನ್ನೊಂದ ಸೇನೆಯನ್ನು ಕೂಡಿಸುವರೆ ಪಾರ್ಲಿಮೆಂಟ್ ಸಭೆಯವರು ಆಲೋಚಿಸಿರುವರು.

ಹಿಂದೂಸ್ಥಾನದವರು ಈ ಯುದ್ಧಕಾಲದಲ್ಲಿ ಸಾಮ್ರಾಜ್ಯ ಸರಕಾರಕ್ಕೆ ಮಾಡುತ್ತಿರುವ ಸಹಾಯವನ್ನು ಇಂಗ್ಲಾಂಡಿನ ಎಲ್ಲಾ ಪತ್ರಿಕೆಗಳು ಹೊಗಳುತ್ತಿರುವವು.

ಕರ್ಜನ್ ಪ್ರಭುಗಳವರು ಈ ರೀತಿ ಹೇಳಿರುವರು. —ವೈಸರಾಯ ಪ್ರಭುಗಳವರು ಹಿಂದೂಸ್ಥಾನದ ರಾಜಭಕ್ತಿ ಪರವಾಗಿ ಕಳುಹಿಸಿದ ಸಂದೇಶವು ಎಲ್ಲರ ಕಿವಿಗಳಲ್ಲಿ ಗಣಗಣಿಸುತ್ತಿದೆ. ಪಾರ್ಲಿಮೆಂಟಿನಲ್ಲಿ ಇಂಥಾ ವಿಶೇಷ ಸಂದೇಶವು ಈ ವರೆಗೆ ಹೇಳಲ್ಪಟ್ಟಿದ್ದಿಲ್ಲ. ಬಂಗಾಳದ ಘೂಲದರರು ಬೆರ್ಲಿನಿನ ಬೀದಿಗಳಲ್ಲಿಯೂ ಗುರ್ಕ ಸೈನಿಕರು ಪೊಟ್ಸ್‌ಡಾಮಿನ ಉದ್ಯಾನವನಗಳಲ್ಲಿಯೂ ಠವಿಸುವದನ್ನು ನೋಡಲು ತಾನು ಇಚ್ಛಿಸುವೆನು ಎಂಬದಾಗಿ ಹೇಳಿರುವರು.

ತಾರೀಖು 15ನೇ ಸೆಪ್ಟಂಬರ

ಬ್ರಿಟಿಷ ಮತ್ತು ಫ್ರೆಂಚ ಸೇನೆಗಳು ಸೆಜ್ನಿಯ ಉತ್ತರದಲ್ಲಿ ಜಯಹೊಂದಿ ಶತ್ರುಗಳೊಡನೆ ಕಾದಾಡಿದರು. ಕಳೆದ ರಾತ್ರಿಯಿಂದ ಶತ್ರುಗಳು ಮಾರ್ಸ್ಮೆಂಟ್ ಗೊಂಡ್ ಮತ್ತು ಸೊಮ್ಮೆಸನ್ಸ್ ಎಂಬಲ್ಲಿ ಕಾಳಗ ನಿಲ್ಲಿಸಿದ್ದಾರೆ. ಶತ್ರುಗಳು ವಿತ್ರಿಯ ಪಶ್ಚಿಮಕ್ಕೆ ಹಿಂದೆ ಸಂದಿರುವರು. ಅಲ್ಲಿ ಜರ್ಮನ ಯುವರಾಜರ ಸೇನೆಯು ಕಾಳಗ ಮಾಡುತ್ತಿರುವುದು, ಆದರೆ ಅಲ್ಲಿ ಯುವರಾಜರ ಸೇನೆಗೆ ಈವರೆಗೆ ಯಾವದೊಂದು ಜಯವಾಗಲಿಲ್ಲ. ಹೀಗೆ ಮಾರ್ನೆಯ ಕದನದಲ್ಲಿ ಬ್ರಿಟಿಷ ಮತ್ತು ಫ್ರೆಂಚ ಸೇನೆಗಳಿಗೇ ಜಯವಾಗಿರುವುದು.

ಎಡಪಾರ್ಶ್ವದಲ್ಲಿ ಬ್ರಿಟಿಷ ಫ್ರೆಂಚ ಸೇನೆಗಳಿಗೆ ಮಹಾ ಜಯವಾಗಿರುವುದು, ಬ್ರಿಟಿಷ ಫ್ರೆಂಚ ಸೇನೆಗಳು ಈಗ ಮಾರ್ನೆಯ ಉತ್ತರ ಕಡೆಗೆ ಮುಂದರಿಸಿ ಸ್ವಾಸನ್ ಮತ್ತು ಕೆಂಪೇನ್ಯೆಯ ಕಡೆ ಹೋಗುತ್ತಿದೆ. ಜರ್ಮನರು ಯುದ್ಧ ಸಾಮಗ್ರಿಗಳನ್ನೂ ಘಾಯ ಒಡೆದವರನ್ನೂ ಬಿಟ್ಟು ಹೋಗಿರುವರು. ಅನೇಕ ಜರ್ಮನರು ಸೆರೆಹಿಡಿಯಲ್ಪಟ್ಟಿರುತ್ತಾರೆ. ಫ್ರೆಂಚರು ಜರ್ಮನರ ಇನ್ನೊಂದು ಧ್ವಜವನ್ನು ಹಿಡಿದಿರುವರು. ಬ್ರಿಟಿಷ ಸೇನೆಯು ಜರ್ಮನರ ೧೧ ಫಿರಂಗಿಗಳನ್ನೂ ಅನೇಕ ಯುದ್ಧ ಸಾಮಗ್ರಿಗಳನ್ನೂ ೧೫೦೦— ೨೦೦೦ ಮಂದಿಯನ್ನೂ ಸೆರೆಹಿಡಿದಿರುವರು. ಮಧ್ಯದಲ್ಲಿ ಶತ್ರುಗಳು ಸೆಜ್ನಿ ಮತ್ತು ರಿವಿಗ್ನಿಯ ಮಧ್ಯೆ ದಾರಿ ಬಿಟ್ಟುಕೊಟ್ಟಿರುವರು. ಆರ್ಗೋನ್ನೆಯಲ್ಲಿರುವ ಜರ್ಮನರು ಇನ್ನೂ ಹಿಂದೆ ಬೀಳಲಿಲ್ಲ. ಬ್ರಿಟಿಷ ಫ್ರೆಂಚ ಸೇನೆಗಳು ೫ ದಿವಸಗಳ ವರೆಗೆ ಎಡೆಬಿಡದೆ ಕಾದಾಡಿದರೂ ಶಕ್ತಿ ಕಳಕೊಳ್ಳದೆ ಶತ್ರುಗಳನ್ನು ಇನ್ನೂ ಹಿಂದಟ್ಟುತ್ತಿರುವರು. ಲೋರೈನ್ ಮತ್ತು ವೊಸಜಸಿನಲ್ಲಿ ನಡೆಯುವ ಕಾಳಗದ ವಿಷಯ ಹೊಸ ವಾರ್ತೆಗಳೇನೂ ಇಲ್ಲ ಎಂತ ಫ್ರೆಂಚ ಸರಕಾರದವರು ಪ್ರಕಟಿಸಿರುವರು.

ಜರ್ಮನ್ ಸರಕಾರದವರು ಈ ರೀತಿ ಪ್ರಕಟಿಸಿರುವರು — ಪ್ಯಾರಿಸಿನ ಪೂರ್ವದಲ್ಲಿ ಮುಂದರಿಸಿದ ಜರ್ಮನ-ಸೇನೆಯನ್ನು ಬ್ರಿಟಿಷ ಸೇನೆಗಳು ಹಿಂದಟ್ಟಿದ್ದರಿಂದ ಮಾರ್ನೆಯನ್ನು ದಾಟಿ ಹಿಂದೆ ಬಂದಿರುವರು. ಈ ಸೇನೆಯ ಮೇಲೆ ಪ್ಯಾರಿಸಿನ ಉತ್ಕೃಷ್ಟ ಸೇನೆಗಳು ಮೆಕ್ಸ್ ಮತ್ತು ಮೊಂಟಮಿರಯಿಲಿನ ಮಧ್ಯೆ ಬಿತ್ತು. ಜರ್ಮನ ಸೇನಾಪಾಳ್ಯಗಳು ಎರಡು ದಿವಸಗಳ ವರೆಗೆ ಕಾದಾಡಿ ಎದುರಾಡ ತಕ್ಕ ಸ್ಥಳವನ್ನು ಕಲ್ಪಿಸಿಕೊಂಡರೂ ಬ್ರಿಟಿಷರ ಮತ್ತು ಫ್ರೆಂಚರ ಬಲವಾದ ಹೊಸ ಸೇನೆಗಳು ಸಹಾಯಕ್ಕೆ ಬಂದುದರಿಂದ ಜರ್ಮನರು ಹಿಂದೆ ಸರಿಯಬೇಕಾಯಿತು. ವೆರ್ಡನಿನ ಪಶ್ಚಿಮದಲ್ಲಿ ಜರ್ಮನರು ಎಡೆಬಿಡದೆ ಕಾದಾಡುತ್ತಿರುವರು. ಒಸೆಜ್ ಮತ್ತು ಲೊರೈನಿನ ಸ್ಥಿತಿಯು ಬದಲಾಗಲಿಲ್ಲ. ಪೂರ್ವ ಯುದ್ಧರಂಗದಲ್ಲಿ ಕದನವು ಪ್ರಾರಂಭಿಸಿಯವೆ. ಜರ್ಮನ್ ಚಕ್ರವರ್ತಿಯೂ ಅವರ ಪರಿವಾರವೂ ಲಕ್ಸೆಂಬರ್ಗಿನಲ್ಲಿದೆ. ರಾತ್ರಿಕಾಲ ವಾಯುನಾವೆಗಳು ಅವರನ್ನು ಕಾಯುತ್ತಿವೆಂತ ಜರ್ಮನ್ ಸರಕಾರದವರು ಪ್ರಕಟಿಸಿರುವರು.

ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಈ ರೀತಿ ಪ್ರಕಟಿಸಿರುವರು — ಬ್ರಿಟಿಷ ಸೇನೆಗಳು ಒಯ್ಸೆ ನದಿಯನ್ನು ದಾಟಿ ಶತ್ರುಗಳನ್ನು ಹಿಂದಟ್ಟುತ್ತಿರುವರು. ಶತ್ರು ಸೇನೆಯಲ್ಲಿ ೫೦೦ ಮಂದಿಯನ್ನು ಸೆರೆಹಿಡಿದಿರುವರು. ಫ್ರೆಂಚ ಮತ್ತು ಬ್ರಿಟಿಷ ಕುದುರೆ ಪಡೆಗಳು ಸಿಸ್ಸನ್ಸ್ ಸಮೀಪವಿದೆ. ಶತ್ರುಗಳು ವಿತ್ರಿಯ ಉತ್ತರಕ್ಕೆ ಸರಿಯುತ್ತಿದ್ದಾರೆ.

ಫ್ರೆಂಚರು ಜರ್ಮನರ ಒಂದು ಸೇನಾಪಾಳ್ಯದ ಎಲ್ಲಾ ತೊಪುಗಳನ್ನು ಹಿಡಿದಿರುತ್ತಾರೆ.

ಬೆಲ್ಜಿಯಮ್:—ಬೆಲ್ಜಿಯನರು ಅಡನಾರ್ಡೆ, ರೆನಿಯಕ್ಸ ಮತ್ತು ಕೋರ್ಟ್ರಾಯಿಯಲ್ಲಿ ಶತ್ರುಗಳ ಮೇಲೆ ಬಿದ್ದಿರುವರು. ಎಂಟ್‌ವರ್ಪ್ ಪ್ರೊವಿನ್ಸ್ ಮತ್ತು ಲಿಂಬರ್ಗನ್ನು ಶತ್ರುಗಳು ಬಿಟ್ಟು ಹೋಗಿರುವರು. ಬೆಲ್ಜಿಯನರು ಟೆರ್ಮೊಂಡೆಯನ್ನು ಶತ್ರುಗಳಿಂದ ಬಿಡಿಸಿಕೊಂಡಿರುವರು. ಜರ್ಮನರು ಈ ಕದನದಲ್ಲಿ ವಿಶೇಷ ನಷ್ಟಪಟ್ಟು ಓಡಿಹೋಗಿರುವರು.

ಮೆಲ್ಲೆಯಿಂದ ಒಡೆನಾರ್ಡೆಯ ಕಡೆಗೆ ರಾತ್ರಿಕಾಲ ಮುಂದರಿಯುತ್ತಿದ್ದ ಜರ್ಮನರೊಡನೆ ಬೆಲ್ಜಿಯನರು ಕಾದಾಡಿ ಶತ್ರುಗಳನ್ನು ಹಿಂದಟ್ಟಿರುವರು. ಎಂಟ್‌ವರ್ಪ್ ಮತ್ತು ಎರಿಸ್ಕೊಟಿನ ಕಡೆಗೆ ಮುಂದರಿಯುತ್ತಿರುವ ಜರ್ಮನ್ ಸೇನೆಯ ಮೇಲೆ ಬೆಲ್ಜಿಯನರ ತೋಪುಸೇನೆಯು ಬಿದ್ದು ಶತ್ರುಗಳಲ್ಲಿ ವಿಶೇಷ ನಷ್ಟಪಡಿಸಿರುವುದು.

ಅಂಗ್ಲಾಳ. ಜರ್ಮನ ಸಮುದ್ರದಲ್ಲಿ ಈಗ ಒಂದೇ ಒಂದು ಜರ್ಮನ ಯುದ್ಧನಾವೆಗಳಿಲ್ಲ. ಬ್ರಿಟಿಷ ನೌಕಾವಳಿಯ ಸ್ಥಿತಿಯು ಈಗ ಇರುವಷ್ಟು ಒಳ್ಳೇ ಸ್ಥಿತಿಯಲ್ಲಿ ಹಿಂದೆ ಎಂದೂ ಇರಲಿಲ್ಲ. ಬ್ರಿಟಿಷರ ಇನ್ನೊಂದು ಮಿಲಿಯ ಸೇನೆಯನ್ನು ಯುದ್ಧರಂಗಕ್ಕೆ ಕಳುಹಿಸುವುದೇ ಈ ಯುದ್ಧಕ್ಕೆ ಅಂತ್ಯಮಾಡುವ ಸುಲಭ ಉಪಾಯವಾಗಿದೆಂದು ಮಿ|| ಚರ್ಚಿಲ್ಲ ಮಂತ್ರಿಯವರು ಹೇಳಿರುವರು.

ಬೆಲ್ಜಿಯಮಿನಲ್ಲಿ ಕಷ್ಟಪಡುತ್ತಿರುವ ಬೆಲ್ಜಿಯನರಿಗೆ ಲಂಡನ್ ಹೊಸ್ಪಿಟಲುಗಳಲ್ಲಿ ತತ್ಕಾಲಿಕ ಸ್ಥಳ ಒದಗಿಸಿಕೊಡೋಣಾಗುವುದೆಂದು ಬ್ರಿಟಿಷ ಸರಕಾರದವರು ಪ್ರಕಟಿಸಿರುವರು.

ಸೆರೆಹಿಡಿಯಲ್ಪಟ್ಟ ಬ್ರಿಟಿಷರನ್ನು ಜರ್ಮನರು ದಯಾಭಾವದಿಂದ ನೋಡುತ್ತಿರುವರೆಂತ ಪ್ರಕಟವಾಗಿದೆ.

ತಾರೀಖು 16ನೇ ಸೆಪ್ಟಂಬರ.

ಫ್ರೆಂಚ ಬ್ರಿಟಿಷ ಸೇನೆಯ ಎಡಪಾರ್ಶ್ವದಲ್ಲಿ ಒಯ್ಸೆ ಮತ್ತು ಮಾರ್ನೆ ನದಿಗಳ ಮಧ್ಯೆ ಶತ್ರುಗಳು ಪಲಾಯನಮಾಡುತ್ತಿದ್ದಾರೆ. ಜರ್ಮನರ ಕುದುರೆಪಡೆಯು ವಿಶೇಷ ದಣಿದಿರುವಂತೆ ತೋರುತ್ತದೆ. ಫ್ರೆಂಚ ಮತ್ತು ಬ್ರಿಟಿಷ ಸೇನೆಗಳು ಅವನ್ನು ಹಿಂದಟ್ಟಿರುವವು. ಮಧ್ಯೆ ಮತ್ತು ಬಲಪಾರ್ಶ್ವದಲ್ಲಿ ಜರ್ಮನರು ವಿಶೇಷ ಆಯುಧ ಸಾಮಗ್ರಿಗಳನ್ನು ಬಿಟ್ಟು ಓಡಿರುವರು. ಆರ್ಗೋನಿಯಲ್ಲಿಯೂ ಶತ್ರುಗಳು ದಾರಿ ಬಿಟ್ಟುಕೊಟ್ಟು ...ತಕ್ಷಣ ಅರಣ್ಯದ ಕಡೆ ಹಿಂದರಿ

ದಿರುವರು ಲೊರೈನಿನಲ್ಲಿ ಫ್ರೆಂಚರಿಗೆ ಹೊಸ ಜಯವಾಗಿರುವುದು. ಇಲ್ಲಿ ಫ್ರೆಂಚರಿಗೆ ಚೆಂಪೊನೆಲ್ಸ್ ರಿಹೆನ್-ವಿಲ್ಲರ್ಸ್, ಗೆರ್ಬೆವಿಲ್ಲರ್ ಅರಣ್ಯಗಳ ಬದಿಪ್ರಾಂತ್ಯಗಳು ಸಿಕ್ಕಿರುವವು. ಜರ್ಮನರು ಸೈಂಟ್ ಡೈಯನ್ನು ಬಿಟ್ಟುಹೋಗಿರುತ್ತಾರೆಂತ ಫ್ರೆಂಚ ಸರಕಾರದವರು ಪ್ರಕಟಿಸಿರುವರು

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ

ಪ್ರೊಫೆಸರ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತು ದೌರ್ಬಲ್ಯವನ್ನೂ ವಾಸಿಮಾಡುತ್ತವೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಷಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಆವಶ್ಯಕವಾಗಿರುತ್ತವೆ.

ವಾತಶೂಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಗಳ ಗುಣವಾದರೋ ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗಜನ್ಯವಾದ ಸ್ತಾವವನ್ನು ಗುಣಮಾಡಿ, ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯ್ಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ಒಸವಳಿದು ಕುಂದಿದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಪೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಕಾಡಣೆ"ಯು ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ದಾಹಲೆ, ರಾ. ಪಾರಸಾವಣಿ, ತಾ. ರಾಮಟೇಕ, ಜಿ. ನಾಗಪುರ.—"ನಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಳಿಗೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸೂರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಳಿಗೆಗಳ ಮೂರು ಬುಡ್ಡಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ವಿಶೇಷವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಬುಡ್ಡಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಛಾಯಾ ಇಬ್ರಾಹಿಮ್ ಪಾಟೀಲ್, ಪನವೇಲ್—"[illegible] ಹಿಡಿದ ಪ್ರೊ. ಜೇಮ್ಸರ ಗುಳಿಗೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. [illegible] ರವಾನಿಸಿರಿ."

4 ವಿ. ಆರ್. [illegible], ಡಿಸ್ಟ್ರಿಕ್ಟ ಬೋರ್ಡ ವಕೀಲು, [illegible], [illegible].—"ಪ್ರೊ. ಜೇಮ್ಸರ ಗುಳಿಗೆಗಳ ಸೀಸೆಯೊಂದನ್ನು ತಮ್ಮಿಂದ [illegible]. [illegible] ನಾವು ಒಳ್ಳೇ ಲಾಭವನ್ನು ಪಡೆದೆವು. ಇನ್ನೆರಡು ಸೀಸೆಗಳನ್ನು [illegible]."

5 [illegible], ಸಂಸ್ಥಾನ [illegible].—ಪ್ರೊ. ಜೇಮ್ಸರ ಗುಳಿಗೆಗಳಿಂದ [illegible] ಗುಣವನ್ನು ಹೊಂದಿರುವದರಿಂದ, [illegible].

THE ANGLO INDIAN DRUG & CHEMICAL COMPANY, 16 MARKET BOMBAY 2.

ಪ್ರಧಾನ ಏಜಂಟರು: ದಿ. ಊಲನ್ ಮಾರ್ಟ್. ಮಂಗಳೂರು ದ. ಕನಡಾ.

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0	ನಿಯಮಿತ ಮೂಲ ಧನವು ರೂಪಾಯಿ	300,000—0—0
Issued Capital	225,000—0—0	ಹುಟ್ಟಿಬಂದ ಮೂಲ ಧನವು ,,	225,000—0—0
Subscribed Capital	217,400—0—0	ಪ್ರತಿಜ್ಞಾತ ಮೂಲ ಧನವು ,,	217,400—0—0
Paid-up Capital	192,400—0—0	ಆಗತ ಮೂಲ ಧನವು ,,	192,400—0—0
Deposits	497,632—8—2	ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು	497,632—8—2
Reserve Fund	27,590—12—0	ರಕ್ಷಿತ ಧನವು	27,590—12—0

Besides the uncalled capital of Rs. 25,000/ 25% of the net profits are added annually to the Reserve Fund Rs. 21,685/ have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively. Terms on application.

Short-notice Deposits requiring one weeks notice of withdrawal after one month received @ 2½% per annum.

Current Deposit Account opened free of charge.

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಗೆ ಬೇಂಕಿನ ಸೆಕ್ರಿಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd,
Mangalore, 1st September 1914.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸ್ಥಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—[illegible]—

ನಮ್ಮ ವಿಳಾಸ:— ಎಂ. ದೇ[illegible]ಯಿ [illegible],
ಕರ್ನಾಟಕ [illegible], ಬಳ್ಳಾರಿ

Canarese Novels Etc.
ಕನ್ನಡ ಪುಸ್ತಕಗಳು.

ಮ| ರಾ| ರಾ| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಅ.		ರೂ. ಅ.
ಪ್ರೊಫೆಸೀತ ಹೊಸ ನಾವಿಲ್	1–4	ಕಮಲಾ ಕಾಂತ ದ್ವಿ ಮು	0–2
ದುರ್ಗೇಶ ನಂದಿನಿ ಸರ್ವೋತ್ಕೃಷ್ಟನಾವಿಲ್	1–4	ಲೀಲೆ [ಸಮಾಜ ಚಿತ್ರ]	0–4
ಕಪಾಲ ಕುಂಡಲ ಡಿಟೊ 2ನೇ ಭಾಗ	1–8	ಮಾಲತಿ [ಅತಿ ಮನೋಹರ] ದ್ವಿ. ಮು.	0–3
ಸೀತಾರಾಮ (ಇತಿಹಾಸ)	1–8	ರಾಧಾರಾಣಿ [ಕಾದಂಬರಿ] ತೃ. ಮು	0–3
ವಿಷವೃಕ್ಷ ದ್ವಿ. ಮು.	1–4	ಯುಗುಳಾಂಗುಲೀಯ ,,	0–3
ದೇವೀ ಚೌಧುರಾಣಿ-ಡಿಟೊ	1–4	ಭ್ರಾಂತಿವಿಲಾಸ ,	0–8
ರಾಜಸಿಂಹ-(ಇತಿಹಾಸ)	1–5	ನೊಂದಸುಡಿ [ಸ್ತ್ರೀನೀತಿ]	0–2
ಚಂದ್ರಶೇಖರ ಮಂಡಲ	0.13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0–2
ಮೃಣ್ಮಯಿ ಡಿಟೊ 2ನೇ ಭಾಗ	1–1	ವೈಜ್ಞಾನಿಕ ಪ್ರಹಸನ [ನಕಲಿ]	0–4
ಕೃಷ್ಣಕಾಂತನ ಉಯಿಲು	1–0	ಚಿರತ್ನನಾಟಕರತ್ನ ಡಿಟೊ	0–7
ಮನೋರಮ [ಪತ್ತೇದಾರಿ ಕಥೆ]	1–0	ಚಿತ್ರವಿಚಿತ್ರಾವಳಿ [Tit Bits]	0–8
ಇಂದಿರ-ಡಿಟೊ-ದ್ವಿ. ಮು.	0.10	ನೀರದೆ [ಹೊಸ ಕಾದಂಬರಿ]	0–8
ಸಾಧನೆ. ಡಿಟೊ	0–8	ಭಾರತಮಹಿಳಾ [ಸ್ತ್ರೀನೀತಿ]	0–8
ಕೊಹಿನೂರು [ಇತಿಹಾಸ]	0.12	ಅಮೃತಪುಲಿನ [ನಾವಿಲ್]	0 11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0–3	ಇತ್ಯಾದಿ	

ಶ್ರೀ ಮಾರುತೀ ಚಿತ್ರಪಟ.

ತ್ರಿ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ1ಕ್ಕೆ 3 ಆಣೆ 12ಕ್ಕೆ 1 ಉಚಿತ ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು —(ಉಪಯುಕ್ತ ಪುಸ್ತಕಗಳು.

	ರೂ ಅ		ರೂ ಅ.
ಕಾದಂಬರೀ ಕಥೆ [ಪೂರ್ತಿ] ದ್ವಿ ಮು.	0–8	ನಿಭಾಗ್ಯ ಚಾಣಕ್ಯ [ಹೊಸಕಾದಂಬರಿ]	0–6
ಕ. ಕವಿಚರಿತೆ [ಪೂರ್ವಭಾಗ]	3–2	ಅನಂಗಸುಂದರಿ ಡಿಟೊ	0–8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10	ತಾರಾ ಸುಂದರಿ ಡಿಟೊ	0–8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0–6	ರಾಧಾಮಾಧವ ಡಿಟೊ	0–8
ಕಲಾನಾಥ ಡಿಟೊ	0–8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0–9
ಶೋಭನೆ [ಬಂಗಾಳಿ ನಾವಿಲ್]	0.12	ಪಶುವೈದ್ಯಸಂಗ್ರಹ ಡಿಟೊ ದ್ವಿ ಮು	0–9
ಯಾಮಿನಿ [ಬಂಗಾಳೀ ನಾವಿಲ್]	0–3	ಧರ್ಮಪದವೆಂಬ ಬುದ್ಧಗೀತೆ	0.12
ಪ್ರಿಯಂವದೆ [ಪತಿವ್ರತಾ ಕಥೆ]	0–8	ಜೈಮಿನಿಭಾರತ [ಸಟೀಕಾತಾತ್ಪರ್ಯ]	4–0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0–8	ಹರಿಕಥಾಮೃತಸಾರ ಡಿಟೊ	1–6
ಸನ್ಯಾಸಿ [ಹೊಸ ಕಾದಂಬರಿ]	0–6	ಚದುರಂಗಬೋಧಿನಿ	0–3
ಪ್ರೇಮಪರೀಕ್ಷೆ ಡಿಟೊ	0–2	ಸರ್ವೇಮ್ಯಾನ್ಯುಯಲ್	0–5
ಬೃಂದಾವನ ಡಿಟೊ	0–2	ನ್ಯಾಯದರ್ಪಣ [ಲಾ]	1–0
ಸುಮನೆ ವೀರಮ ಡಿಟೊ	0–2	ವ್ಯವಹಾರ ದೀಪಿಕೆ [ಲಾ]	3–0
ಮಾಲಿನಿ ಡಿಟೊ	0–2	ಶಾಕುಂತಲ ನಾಟಕ ದ್ವಿ ಮು	0–9
ಪ್ರೇಮಪಿಪಾಸೆ ಡಿಟೊ	0–2	ಶೂರಸೇನಚರಿತ್ರ ನಾಟಕ ಡಿಟೊ	1–0
ವಿರಕ್ತಳಾದ ಸೌದಾಮಿನಿ ಡಿಟೊ	0–5	ಚಂಡಕೌಶಿಕ ನಾಟಕ ಡಿಟೊ	0 12
ಚಿತ್ರಕಳಾವತಿ ಡಿಟೊ	0–2	ರಾಮವರ್ಮ ಲೀಲಾವತೀ ನಾಟಕ	0–8
ಕಾಮುರ್ಯಮತಿ ಡಿಟೊ	0–2	ಗಾಂಧಾರೀ ಪರಿಣಯ ನಾಟಕ	0.10
ವಸುಮತಿ ಡಿಟೊ	0–2	ಚಂಡೀಮದಮರ್ದನ ನಾಟಕ	0–5
ವಿಲಕ್ಷಣಶಿಕ್ಷಣ ಡಿಟೊ	0–2	ಪ್ರಬೋಧ ಚಂದ್ರೋದಯ ನಾಟಕ	0.10
ಪದ್ಮಿನಿ ಡಿಟೊ	0–2	ಭರ್ತೃಹರಿ ನಿರ್ವೇದ ನಾಟಕ	0–3
ಭಾನುಮತಿ ಡಿಟೊ	0–2	ನಿರುಪಮಾ [ನಾಟಕ]	0.12
ಸಹೋದರಿಯರು ಡಿಟೊ	0–2	ಧ್ರುವವಿಜಯ [ನಾಟಕ]	0–4
ಸಂತಾಪಕ ಡಿಟೊ	0–4	ಸೀತಾಪರಿಣಯ [ನಾಟಕ]	0–4
ಚಂದ್ರಮತಿ [ಸ್ತ್ರೀನೀತಿ]	0–6	ಸೀತಾಸುವರ್ಣಮೃಗ [ನಾಟಕ]	0–12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—

ಎಸ್. ಬಿ. ಎ. ಬೆಂಗಳೂರು ಸಿಟಿ

ಹಾರ್ಮೋನಿಯಂ ಸ್ವಯಂ ಬೋಧಿನೀ

ಕನ್ನಡದಲ್ಲಿ ಇಂತಹ ಪುಸ್ತಕವು ಇದುವರೆಗೆ ಒಂದಾದರೂ ಪ್ರಚುರವಾಗಿಲ್ಲ. ಉತ್ತರ ಕರ್ನಾಟ, ಮಧ್ಯ ಕರ್ನಾಟ, ಮತ್ತು ದಕ್ಷಿಣ ಕರ್ನಾಟ ಈ ಮೂರು ರಾಜ್ಯಗಳಲ್ಲಿರುವ ಕನ್ನಡಿಗ್ನರಿಗೂ ಅನುಕೂಲಿಸುವಂತೆ ಪುರಂದರ ದಾಸರ ಕೀರ್ತನೆಗಳೇ ಮುಂತಾದ ಕನ್ನಡ ಕೀರ್ತನೆಗಳನು ಮಾತ್ರವೇ ಆರಿಸಿ ಎಲ್ಲರೂ ತಿಳಿದುಕೊಳ್ಳುವಂತೆ ಸುಲಭ ಮಾರ್ಗದಲ್ಲಿ ಬರೆದಿದೆ. ಇದರಲ್ಲಿ ಹಾರ್ಮೋನಿಯಂ ವಾದ್ಯದ ನಕ್ಷೆಯೂ ಸ್ವರಸ್ಥಾಯಿಗಳೂ ವಿವರವಾಗಿ ಕೊಟ್ಟಿರುವುದರಿಂದ ಯಾವ ವಿಚಾರದಲ್ಲಿಯೂ ಸಂದೇಹಕ್ಕೆ ಆಸ್ಪದವೇ ಇರುವುದಿಲ್ಲ ಹಾರ್ಮೋನಿಯಂ ಬೋಧಕರಿಗೂ ಇದರಿಂದ ಅನೇಕ ವಿಷಯಗಳ ತಿಳಿಯ ಬರುವವು

ಬೆಲೆ ಆಣೆ 0–4–0 ಅಂಚೆ ವೆಚ್ಚ ಬೇರೆ

ಕೊಸವೆ ರಾಮಾಯಣ ೧ಕ್ಕೆ	೦ ೧೪—೦
ದುರ್ಗೇಶ ನಂದಿನಿ ,	೧—೪—೦.
ವ್ರತಚೂಡಾಮಣಿ ,	೧—೦—೦
ಇತಿ ವ್ರತವುಳ್ಳ ವ್ರತವಲ್ಲಿ ೧ಕ್ಕೆ	೦—೮—೦
ವಿ ಚಾರ ಧರ್ಮಸೂಚಿಕೆ ,,	೦—೬—೦
ನವೀನ ಭರತಖಂಡ	೦—೫—೦
ಬಸವರಾಜೇಂದ್ರ ವಿಜಯ ,	೦ ೧೨—೦
ಮುಕುಂದ ಮಾಲಾ ಸ್ತೋತ್ರ ,	೦—೨—೦
ಮಹಿಮ್ನ ಸ್ತೋತ್ರ ,,	೦—೩—೦
ಶುಕಸಪ್ತತಿ ,	೧—೬—೦

ಮೇಲ್ಕಂಡ ಪುಸ್ತಕಗಳನ್ನು ೧—೦—೦ ಕಮ್ಮಿ ಇಲ್ಲದೆ ತರಿಸಿಕೊಳ್ಳತಕ್ಕವರಿಗೆ "ತಿಲಕ್" ಚರಿತ್ರೆ ೧, ಪತ್ರವ್ಯವಹಾರದ ಮೂಲಕ ವ್ಯಾಪಾರ ಮಾಡುವ ಪ್ರಯೋಜನ ೧, ಈ ಎರಡು ಪುಸ್ತಕಗಳೂ ಬಹುಮಾನವಾಗಿ ಕೊಡುವೆವು ಹಾಸಲ ಪ್ರತ್ಯೇಕ

ವಿಳಾಸ — ಎಚ್ ಎನ್. ರಾವ್ ಆಂಡ್ ಬ್ರದರ್ಸ್,
ಪುಸ್ತಕ ವ್ಯಾಪಾರಸ್ಥರು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ವಾಚಕರೇ!

ಕಾಲಕ್ಕೆ ತಕ್ಕ ಜೀವನೋಪಾಯ ಇದಲ್ಲವೆ?

ಈ ನಮ್ಮ ಮೈಸೂರು ದೇಶದಲ್ಲಿ ಆಂಗ್ಲೇಯ ಪ್ರಭುಗಳಿಂದಲೂ ನಮ್ಮನ್ನಾಳುವ ಶ್ರೀಮನ್ಮಹಾರಾಜ ಸರಕಾರದವರಿಂದಲೂ ಸಹ ಪ್ರೋತ್ಸಾಹಿಸಿ ದ್ರವ್ಯಸಹಾಯಮಾಡುತ್ತಿರುವ ವಿದ್ಯಾಭ್ಯಾಸಂಗಕ್ಕೆ ಅನುಕೂಲವಾಗಿ ಈಗಿನ ಕಾಲದಲ್ಲಿ ಗೌರವವು ಮತ್ತು ಪ್ರಸಿದ್ಧಿಯಂ ಪಡದಿರುವ ಕುಶಲ ವಿದ್ಯಾವಂತರಿಂದ ನವೀನವಾಗಿ ರಚಿಸಲ್ಪಟ್ಟು ಕನ್ನಡ ಮತ್ತು ಇಂಗ್ಲಿಷ್ ಸ್ಕೂಲುಗಳ ಎಲ್ಲಾ ತರಗತಿಗಳ ಬಾಲಕರು ಮತ್ತು ಬಾಲಕಿಯರಿಗೆ ಪಾಠಕ್ಕೆ ಸಿದ್ಧವಾಗಿರುವ ಕನ್ನಡ ಇಂಗ್ಲಿಷ್ ಪುಸ್ತಕಗಳು ಮತ್ತು ಸಂಸ್ಕೃತ ತೆಲಗು ವೈದ್ಯ ವೇದಾಂತ ಜ್ಯೋತಿಷ್ಯ ಕನ್ನಡ ಗ್ರಂಥಗಳು ಅಲ್ಲದೆ ಉತ್ತಮ ಕಾದಂಬರಿಗಳು ಸ್ಟೇಶನರಿ ಸಾಮಾನುಗಳು ಅತ್ಯುತ್ತಮವಾದ ಕಾಗದ ಅಕ್ಷರಗಳಿಂದ ತಯಾರಿಸಲ್ಪಟ್ಟು ಸುಲಭ ಕ್ರಯಕ್ಕೆ ಸಿದ್ಧವಾಗಿರುತ್ತೆ.

ಅಪೂರ್ವ ಪುಸ್ತಕಗಳು.

ಇದು ಸರ್ವರಲ್ಲಿಯೂ ಇರಬೇಕಾದ್ದು. **ಜಮಾ ಖರ್ಚಿನ ಪದ್ಧತಿ 0-12-0.** ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

ಆಂಗ್ಲಭಾಷ ಪ್ರಕಾಶಿಕೆ—(ಸ್ವತಃ ಇಂಗ್ಲಿಷ್ ಕಲಿಯುವ ದೊಡ್ಡ ಪುಸ್ತಕ. ಇದನ್ನು ಗುರುವಿನಂತೆ ಭಾವಿಸಿ ಬೆಲೆ 1—8—0. ವೈದ್ಯಸಾರಸಂಗ್ರಹ (ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ಬೆಲೆ 3—0—0.

ಆರ್ಯಕೀರ್ತಿ ...	0–10—0	ಚಂದ್ರಕಳ	0—4—0
ಹನುಮದ್ವಿಲಾಸಂ ...	0—8—0	ಕಲಾನಾಥ	0—6—0
ಶಾಕುಂತಲ ನಾಟಕ	0—8—0	ಶಿವಾನಂದಲಹರಿ... ...	0—6—0
ಸ್ತ್ರೀಧರ್ಮನೀತಿ ...	0—8—0	ಪ್ರಶ್ನೋತ್ತರ ಲೆಖ್ಖಬೋಧಿನಿ	1—4—0
ಶೋಭನೆ	0—8—0	ಚಿತ್ರವಿಚಿತ್ರಾವಳಿ ...	0—8—0
		ವಿಷವೃಕ್ಷ ...	1—4—0

ವಿಳಾಸ:— ಬಿ. ನರಸಿಂಹ ಅಯ್ಯಂಗಾರ್,
ಮೈಸೂರ್ ಬುಕ್ ಡಿಪೊ.
... ಪೇಟೆ ಬೆಂಗಳೂರು ಸಿಟಿ.

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ ಚೇಳು ಕಡಿತ, ಆನೆಗಾಲು, ಸುಟ್ಟ ಗಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷದವಾಗಿ ರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತ್ತು ಆಣೆ 8 ಡಜನ್ 1ಕ್ಕೆ ರೂ. 5-0 0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ —ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಛಾಪೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು ರಾಜಾರಾಣಿ ಟ್ರೇಡ್‌ಮಾರ್ಕ್ 0—6· 3 ಡಬ್ಬಿಗಳಿಗೆ 0—15—0 ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ

ಇದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ ಹಲವು ನಮುನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ ಡಬ್ಬಿ 1ಕ್ಕೆ 0—2—0 ಡಜನ್ 1ಕ್ಕೆ 1—2—0 ವಿ ಪಿ ಪ್ರತ್ಯೇಕ

ಸುಂದರಿ ಮುಲಾಮು.

ಮುದ್ದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು ಡಬ್ಬಿ 1ಕ್ಕೆ ರೂ. 0—8—0

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ. ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು.

ಬಾಟ್ಲಿ ಒಂದರ ಕಿಮ್ಮತ್ತು ಆಣೆ 0—12—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ದರ ರೂ 1—0—0

ಕೆ. ನಟರಾಜನ್ ಎಡಿಟ್, ಇಂಡಿಯನ್ ಸೋಶಿಯಲ್ ರಿಫೋರ್ಮರ್:— ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷದ.

ಡಬ್ಲ್ಯು ಮೆಕ್ಸವೆಲ್, ವೈನಾಡು:— ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತವೆ.

ಆರ್. ಆರ್ ಗಂಗೋಲಿ:— ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ದಾಂಡೇಕರ್, ಎಲ್. ಎಮ್. ಎಂಡ್ ಎಸ್:— ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೋ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ತಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ಸ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪೋ,

9 ಜಹಂಗೀರ್ ಸ್ಟ್ರೀಟ್,
ಜೋರ್ಜ್‌ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ.

Printed & Published by V. S· Kamath at the Mangalore Trading Association's Sharada Press, Mangalore.

Registered No. 408

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ:—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಶೇರಿ ರೂ 2—1—0.

ಪುಸ್ತಕ VIII | ಮಂಗಳೂರು ತಾ 25 ನೇ ಸಪ್ಟಂಬರ ಶುಕ್ರವಾರ 1914 | ಸಂಚಿಕೆ 39

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ.

ಪ್ರೊ. ಪಿ. ನಂಬ್ರ $\frac{107}{1914}$

ಪ್ರೇಮಕೂವರ್ ಬಾಯಿ—ಅರ್ಜಿದಾರಳು.

ಮಂಗಳೂರಲ್ಲಿ ಮೃತವಾದ ಭಾನುಶಂಕರ ಕೃಪಾಶಂಕರರೀಗೆ ಬರತಕ್ಕ ಸಾಲಗಳನ್ನು ವಸೂಲುಮಾಡುವರೆ ಮೇಲಿನ ಅರ್ಜಿದಾರಳು ತನ್ನ ಹೆಸರಿಗೆ ಸರ್ಟಿಫಿಕೇಟು ಸಿಕ್ಕಬೇಕಾಗಿ ಮಾಡಿದ್ದ ಅರ್ಜಿಯು ತಾ. 29—9—1914ರಲ್ಲು ತನಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಇಟ್ಟಿರುತ್ತದೆ. ಆಕ್ಷೇಪ ಇದ್ದವರು ಅವರವರ ಆಕ್ಷೇಪಗಳನ್ನು ಆ ತಾರೀಕಿಗೆ ಸದರಿ ಕೋರ್ಟಿನಲ್ಲಿ ಜ್ಯಾಹೀರು ಮಾಡತಕ್ಕದ್ದು.

Mangalore, 22—9—1914.

M. N. Prabhu
Vakil for Petitioner

ಮಾರಾಟಕ್ಕಿದೆ.

ಕೆಂಪುಗಳಿಂದ ಕಟ್ಟಿದ ಕೈಗೆ ಹಾಕಿಕೊಳ್ಳುವ ಕಂಕಣವುಳ್ಳ ಚಿನ್ನದ ಗಡಿಯಾರವು.

ಬೇಕಾದವರು ಈ ಕೆಳಗಿನ ವಿಳಾಸಕ್ಕೆ ಬರೆಕೊಳ್ಳುವುದು:—

ಎಸ್. ಎ. ಗೋಕರ್ಣ,
ಉಳ್ಳಾಲ, ದಕ್ಷಿಣ ಕನ್ನಡ.

ಮಹಾರಾಣೀ ಗೃಹಶೀಲೆ.

ಪುತ್ತೂರ ಪ್ಲೀಡರರಾದ ಬಿ. ಆನಂದರಾಯರಿಂದ ಶುಲಭ ಶೈಲಿಯಲ್ಲಿ ರಚಿಸಲ್ಪಟ್ಟ ಮನೋರಂಜಕವಾದ ಕಥೆಯು.

ಕೆಲವು ಪ್ರತಿಗಳು ಮಾತ್ರ ಉಳದಿರುವವು. ಕ್ರಯ ಆಣೆ ೨.

ಮುಕ್ತಾಹಾರ.

ಮುಕ್ತಾಹಾರದ ಮೂಲಕ ನೆರವೇರಿದ ವಿವಾಹದ ಮನೋಹರವಾದ ಕಥೆಯು. ಕ್ರಯ ಒಂದಾಣೆ ಮಾತ್ರ.

ಈ ಪುಸ್ತಕಗಳು ದೊರಯುವ ವಿಳಾಸ:—

ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು, ದ. ಕ.

ಯುದ್ಧ ಸಮಾಚಾರವು.

ಯುದ್ಧ ಸಮಾಚಾರವನ್ನು ಸ್ವದೇಶಾಭಿಮಾನಿಯು ಸ್ಪೆಶ್ಯಲ್ ಸಪ್ಲಿಮೆಂಟಾಗಿ ಪ್ರತಿನಿತ್ಯದಲ್ಲಿಯೂ ಪ್ರಕಟಿಸುತ್ತಿರುವೆವು. ಈ ಸಪ್ಲಿಮೆಂಟುಗಳನ್ನು ದಿನಂಪ್ರತಿ ಕ್ರಮಪ್ರಕಾರ ಪಡೆಯಲಪೇಕ್ಷಿಸುವ ಪರಸ್ಥಳದವರು ತಿಂಗಳೊಂದಕ್ಕೆ ರೂ. 1ರಂತೆ ಮನಿಯಾರ್ಡರ್ ವ ಸ್ಟಾಂಪುಗಳ ಮೂಲಕ ಚಂದಾಹಣ ರವಾನಿಸಿ ಕೊಟ್ಟರೆ ಒಂದು ತಿಂಗಳವರೆಗೆ ಯುದ್ಧ ಸಮಾಚಾರದ ಸಪ್ಲಿಮೆಂಟುಗಳನ್ನು ನಿತ್ಯ ಕಳುಹಿಸಿಕೊಡುವೆವು.

ಮ್ಯಾನೇಜರ್
ಸ್ವದೇಶಾಭಿಮಾನಿ,
ರಥಬೀದಿ, ಮಂಗಳೂರು.

"ಸಕ್ಕರೆಯ ಸಾರವು.

ಬಹಳ ಅನುಕೂಲವೂ ಉಪಯೋಗಕರವೂ ಆಗಿರುವುದು.

ಸಕ್ಕರೆಯುನ್ನು ಉಪಯೋಗಿಸಕೂಡದಂಥಾ
ಮೂತ್ರ ರೋಗಿಗಳಿಗೆ ಅತ್ಯವಶ್ಯಕವಾದದ್ದು.

ಮೇಲಣ ರೋಗಬಾಧೆಯು ಇಲ್ಲದವರು ಸಹ ಇದನ್ನು ಉಪಯೋಗಿಸಿಕೊಳ್ಳಬಹುದು ಸಾಧಾರಣ ಎರಡು ಕುಡುತೆ ಕಾಫಿ ವ ಚಾ ಇತ್ಯಾದಿಗಳಿಗೆ ಒಂದು ಕಾಳಿನ ಪ್ರಮಾಣದಲ್ಲಿ ಈ ಸಕ್ಕರೆಯ ಸಾರವನ್ನು ಹಾಕಿದರೆ ಸರಿಯಾಗಿ ಸವಿಯನ್ನುಂಟುಮಾಡುತ್ತದೆ ಸಕ್ಕರೆಯ ಸಾರ ತುಂಬಿಸಿದ ಸುಂದರವಾದ ಗಾಜಿನ ಕರಡಿಗೆ ಒಂದಕ್ಕೆ ಕ್ರಯ 0—6—0.

ಲೆಕ್ಟೊಮಿಟರ್ ಎಂಬ ಹಾಲನ್ನು ಪರೀಕ್ಷಿಸುವ ಉಪಕರಣವು.

ಗೃಹಕೃತ್ಯದ ಉಪಯೋಗದ ಬಗ್ಯೆ ಶುದ್ಧವಾದ ಹಾಲು ದೊರಕುವದೇ ಕಷ್ಟಸಾಧ್ಯ. ನೀರನ್ನು ಹಾಲಿಗೆ ಕೂಡಿಸಿ ಮಾರುವ ಅಭ್ಯಾಸವು ಬಹಳವಾಗಿ ರೂಢಿಗೆ ಬಂದಿರುವುದು. ನೀರಿಗೆ ಬೆಲೆಕೊಟ್ಟು ಹಾಲೆಂದು ಕುಡಿಯುವೆವು. ಲೆಕ್ಟೊಮಿಟರ್ ಎಂಬೀ ಉಪಕರಣದಿಂದ ಹಾಲಿಗೆ ನೀರನ್ನು ಕೂಡಿಸಿರುವುದೋ ಎಂಬದನ್ನು ಹಾಲನ್ನು ತೆಗೆದುಕೊಳ್ಳುವಾಗಲೇ ಶುಲಭದಲ್ಲಿ ಯಾರಿಂದಲೂ ಪರೀಕ್ಷಿಸಲಾಗುತ್ತದೆ. ಈ ಉಪಕರಣವನ್ನು ಉಪಯೋಗಿಸುವ ಕ್ರಮವು ಇದರೊಂದಿಗೆ ಸೂಚಿಸೋಣಾಗಿರುತ್ತದೆ.

ಲೆಕ್ಟೊಮಿಟರ್ ಒಂದಕ್ಕೆ ಕ್ರಯ ರೂ. 1—0—0.

ಹಲವು ವರುಷಗಳಿಂದ ಬಹಳ ಗುಣಕಾರಿಯೆಂದು ಅನುಭವಸಿದ್ಧವಾದ

ಗಜಕರ್ಣದ ಮುಲಾಮು.

ಒಂದೆರಡು ಸಲ ಇದನ್ನು ತಾಗಿಸುವಷ್ಟರಲ್ಲಿ ಈ ಮುಲಾಮಿನ ಯೋಗ್ಯತೆಯು ವ್ಯಕ್ತವಾಗುವುದು. ಈ ಮುಲಾಮನ್ನು ಹಚ್ಚಿ ಅದನ್ನು ತೊಳೆದು ತೆಗಿಯುವಾಗ ತಣ್ಣೀರನ್ನೇ ಉಪಯೋಗಿಸತಕ್ಕದು. ಡಬ್ಬಿಯೊಂದಕ್ಕೆ ಕ್ರಯ ರೂ. 0-6-0 ಮಾತ್ರ.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್,
[illegible], ರಥಬೀದಿ, ಮಂಗಳೂರು.

ಬಹುಮಾನ! ಬಹುಮಾನ!! ಬಹುಮಾನ!!!

1—4—0ಯನ್ನು ಮಣಿಯಾರ್ಡರ ಮೂಲಕ ಕಳುಹಿಸುವವರಿಗೆ ಒಂದು ಜಂಟಲ್ ಮೆನ್ ಜೇಬುಗಡಿಯಾರ, ಗಾಡನಿದ್ರೆಯಲ್ಲು ಸಹ ಎಚ್ಚರಗೊಳಿಸುವ ಅಲಾರಂ ಟೈಂಪೀಸು, ರೈಲ್ವೆ ಲಿವರ್ ಎಂಬ ಸಾದಾ ಟೈಂಪೀಸು, 18 ಕ್ಯಾರೆಟ್ ಚಿನ್ನದ ಸುಂದರವಾದ ಕೈಉಂಗುರ ಅಲ್ಲದೆ ಶ್ಯಾಯಿ ಇಲ್ಲದೆ ತಾನಾಗಿ ಬರೆಯುವ 14 ಕ್ಯಾರೆಟ್ ಚಿನ್ನದ ಮುಳ್ಳುಳ್ಳ ಫೌಂಟನ್ ಪೆನು ಇವುಗಳಲ್ಲಿ ಯಾವದಾದರೂ ಇದನ್ನು ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಯಾಗುವದಕ್ಕಾಗಿ ಕೆಲವು ಕಾಲದ ವರೆಗೆ ಮಾತ್ರವೇ ಕೊಡಲ್ಪಡುತ್ತೆ. ಮೇಲೆ ಹೇಳಿದ ಸಾಮಾನುಗಳು ಪ್ರತಿ ಒಂದರ ರಹಿ ನಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆ ಮಣಿಯಾರ್ಡರ ಕಳುಹಿಸಿ ವಿ. ಪಿ. ಮೂಲಕ ತಾವು [illegible] ಕಳುಹಿಸ ಪಡಿಲ್ಲಾ.

ವಿಳಾಸ — ಗ್ಲೋಬ್ ಅಂಪ್ ಕಂಪೆನಿ,

ತಿರುವಲ್ಲಿಕೇಣಿ, ಮದರಾಸು.

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಹಿ ರೂ 1 15-0



ಇವು 18 ಮೊಳ ದಾಬಾ ವಾಗಿದೆ. ಉಡಲು ಲಾಯಖಾಗಿ [illegible] ಸುಂದರವಾದ ಸಾದಾ [illegible] ಪ್ರಕಟಿಸೋಣ ದೇಸದಿಂದ ಈ ಬಾರಿ [illegible] ಸೀರೆಗಳನ್ನು ಅಸಲು ಬೆಲೆಗೆ ತಗ್ಗಿಸಿ ಮಾರತ್ತೇವೆ. ಜಾಗ್ರತೆ ತರಿಸ ವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತ.

ವಿಳಾಸ — ರಾಮರಾವ್, ಎಸ್ [illegible] ಕೋಜಿಲ್ ಪೇಟಿ

[139-4] ತಿರುವಲ್ಲಿಕೇಣಿ ಮದರಾಸ

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 0—7—0

ನಮ್ಮಲ್ಲಿ [illegible] ಹಟ [illegible] ಸೂಡಬೇಕೆಂದು [illegible] ಮಾದರಿ ಒಡ್ಡಿಗೆಯನ್ನು [illegible] ವಾಗಿ ಕಳುಹಿಸತ್ತೇವೆ.



[illegible] ಕೆನಡಿಯನ್ ಉಸಡಿಂದ [illegible] ತಯಾರಿಸಿ [illegible] ವಾಗಿ [illegible] ಹಾಕಿ [illegible] ಸ್ವಲ್ಪ ಕ್ರಯವನ್ನಿಟ್ಟ ತಯಾರಿಸಿತ್ತೆ [illegible] ಮಣಿಗಳಲ್ಲ, [illegible] ಸ್ತ್ರೀಯರು [illegible] ಪುಸ್ತಕ್ಕೆ

ಲಾಯಖ್ಯಾದದ್ದು

ವಿಳಾಸ — ಎಸ್ ಎನ್ ಮೂರ್ತಿ ಕಂಪೆನಿ,

ತಿರುವಲ್ಲಿಕೇಣಿ ಮದರಾಸು

ಸೂರ್ಯೋದಯ ಪುಸ್ತಕ ಭಂಡಾರ.

ನಮ್ಮ ಪುಸ್ತಕ ಶಾಲೆಯಲ್ಲಿ ದೊರಕುವ ಪುಸ್ತಕಗಳು.

ದ್ವಾದಶಸ್ಕಂದ ಭಾಗವತ, ಅವ್ವಲ್ ಗ್ಲೇಜ್‌ಕಾಗದ ಪ್ರತಿ ರೂ ೫. ದ್ವಾದಶಸ್ಕಂದ ಭಾಗವತ ಸಾಧಾರಣ ಕಾಗದ ದುಯ್ಯಂ ಪ್ರತಿ ರೂ ೪. ದಶಪರ್ವ ಭಾರತ ಮೈಸೂರು ಪ್ರತಿ ರೂ ೨. ದಶಪರ್ವ ಭಾರತ ದುಯ್ಯಂ ರೂ ೧—೮—೦. ಭಾರತ ಕಥಾಸಂಗ್ರಹ ೧೨ ಪರ್ವದ್ದು ಆಣೆ ೬. ತೊರವೆ ರಾಮಾಯಣ ಅವ್ವಲ್ ಪ್ರತಿ ರೂ ೨. ತೊರವೆ ರಾಮಾಯಣ ದುಯ್ಯಂ ಪ್ರತಿ ರೂ ೧. ರಾಮಾಯಣ ಕಥಾಸಂಗ್ರಹ ದಶಾವತಾರ ಕಥೆಗಳ ಸಹಿತ ಅವ್ವಲ್ ರೂ ೧. ಸೋಮೇಶ್ವರ ಶತಕ ಟೀಕು ೦—೨—೬. ಸೋಮೇಶ್ವರಶತಕ ಮೂಲ ೬ ಪೈ. ಹರಿಭಕ್ತಿಸಾರ ಟೀಕು ೦—[illegible]—೬. ಹರಿಭಕ್ತಿಸಾರ ಮೂಲ ೬ ಪೈ. ನಿಜಲಿಂಗಶತಕ ಟೀಕು ೦—[illegible]—೬. ನಿಜಲಿಂಗಶತಕ ಮೂಲ [illegible] ಪೈ. ಸಟೀಕ ಸುದತೀ ಶತಕ ಆಣೆ ೨ ಟೀಕು ತಾತ್ಪರ್ಯ ಸಹಿತ ಭಾಸ್ಕರಶತಕ ಆಣೆ ೬. [illegible]ಸವ ಪುರಾಣ ಆಣೆ ೧೨. ಚನ್ನ ಬಸವ ಪುರಾಣ ಅವ್ವಲ್ ಗ್ಲೇಜ್‌ಕಾಗದ ರೂ [illegible]—೪—೦. ಚನ್ನ ಬಸವ ಪುರಾಣ ದುಯ್ಯಂ ಆಣೆ ೧೨. ದೇವೀ ಮಹಾತ್ಮ್ಯ [illegible]ದ್ಯ ಆಣೆ ೪.

ಇದಲ್ಲದೆ ವೈದ್ಯಗ್ರಂಥಗಳು, ಜೋತಿಷ್ಯ ಗ್ರಂಥಗಳು, ನಾವಿಲ್ ಕಥೆಗಳು, ಹೊಸ [illegible]ಾಗಿ ಬಂಗಾಳಿಯಿಂದ ಕನ್ನಡಿಸಿದವುಗಳು, ನಾಟಕಗಳು, ವೇದಾಂತ ಗ್ರಂಥಗಳು ವಗೈರೆ [illegible]ಾರು ಪುಸ್ತಕಗಳು ಇವೆ. ನೋಡಲಪೇಕ್ಷಿಸುವವರಿಗೆ ನಮ್ಮ ಪುಸ್ತಕಗಳ [illegible]ಂದು ಕ್ಯಾಟಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ:— ಮ್ಯಾನೇಜರ್

ಸೂರ್ಯೋದಯ ಪುಸ್ತಕ ಭಂಡಾರ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ವ್ಯಾಧಿತರೇ!!

ಇತ್ತ ಲಕ್ಷ್ಯ ಕೊಡಿರಿ.

ಯುಕಲಿಪ್ಟಸ್ ತೈಲ—ತಲೆನೋವು, ಕಣ್ಣುಉರಿ, ಕತ್ತಿ, ಕಲ್ಲಿನಿಂದುಂಟಾದ ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಪಿತ್ತ, ಉಷ್ಣಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧ ಪಿತ್ತ, ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧವಾದ ಚಳಿಜ್ವರ (ಮಲೇರಿಯ) ವಾಂತಿಭೇದಿ, ಹೆಂಗಸರ ಹೊಟ್ಟೆ ನೋವು ಮೊದಲಾದ ಸರ್ವ ವಿಧವಾದ ರೋಗಗಳಿಗೆ ದಿವ್ಯೌಷಧಿ. ಕ್ರಯ ಚಿನ್ನ ಸೀಸೆಗೆ ೫ ಆಣೆ ವ್ಹಿ ಪಿ. ಬೇರೆ. ಡಜನ್ ಸೀಸೆಗಳನ್ನು ತರಿಸಿಕೊಂಡರೆ ರೂ ೩. ವ್ಹಿ ಪಿ ಬೇರೆ. ಅನುಪಾನ ಪತ್ರ ಸೀಸೆಯೊಂದಿಗೆ

ಇಕ್ಲಿಪ್ಸ ಬಾಮ್—ವಾತ, ಸಂಧಿವಾತ, ಶಿರೋಭಾರ, ಅರ್ಧಾಂಗ ವಾಯು, ಎದೆನೋವು, ಶೀತ, ಕೆಮ್ಮು, ಹಲ್ಲುನೋವು, ಘಾಯ, ಪಕ್ಷವಾತ, ಮೊಡವೆ, ನಾಯಿಕಡಿತ, ಕಜ್ಜಿ, ಹುಳ ಮೇಯುವುದು ಮೊದಲಾದ ಸರ್ವ ವಿಧದ ನೋವುಗಳಿಗೆ ದಿವ್ಯೌಷಧ. ಬಾಟ್ಲಿಗಕ್ಕೆ ೮ ಆಣೆ. ವ್ಹಿ ಪಿ ಬೇರೆ. ಡಜನ್ ಬಾಟ್ಲಿಗಳಿಗೆ ರೂ ೪-೧೨-೦. ವ್ಹಿ ಪಿ ಬೇರೆ.

ಸ್ನೇಹಲತಾ ಮಸ್ತಕತಾಪಹಾರಿಣೀ.—ತಲೆನೋವು, ಶಿರೋಭಾರ, ತಲೆಸಿಡಿತ ಮೊದಲಾದ ಮೆದುಳು ರೋಗಗಳಿಗೆ ದಿವ್ಯ ತೈಲ. ಕೇಶವು ಉದ್ದವಾಗಿ ಬೆಳೆಯುವುದು. ಸೀಸೆಗಕ್ಕೆ ೧೨ ಆಣೆ ವ್ಹಿ ಪಿ ಬೇರೆ. ಡಜನ್ ಬಾಟ್ಲಿಗಳಿಗೆ ರೂ ೮. ವ್ಹಿ ಪಿ. ಬೇರೆ.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.

ಕಂಕನಾಡಿ ಪೋಸ್ಟು, ದ. ಕ.

ದಸರಾ ಬಹುಮತಿ ಗಡಿಯಾರ.

15 ಸಾಮಾನು ಬಹುಮತಿ ಸಹಿತ ರೂ. 3—14—0



ಇದರಲ್ಲಿ ನಮೂದಿಸಿರುವ 7 ರೂಪಾಯಿ ಬೆಲೆವುಳ್ಳ ಗಡಿಯಾರವನ್ನು ದಸರಾ ಒಳಗೆ ತರಿಸಿಕೊಳ್ಳುವವರಿಗೆ ರೂ 3—14—0ಗೆ 15 ಬಹುಮಾನಗಳು ಉಚಿತವಾಗಿ ಕೊಡುತ್ತೇವೆ.

1 ಉತ್ತರ ಮುಖಿ. 2 ಪೇನಾಕತ್ತಿ, 3. ಬ್ಲೂಬ್ಲೆಕ್ ಶಾಯಿ ಪೊಟ್ಲೆ, 4. ಹಣದ ಚೀಲ, 5 ಗಡಿಯಾರ ಸರಪಣಿ, 6 ಎಲೆಕ್ಟ್ರಿಕ್ ಬಂಗಾರದ ಶ್ಯಾಮಂತಿಗೆ ಹೂವು, 7 ಇಮಿಟೇಷನ್ ಡೈಮಂಡ್ ಶರಟು ಗುಕಿಡಿ, 8 ಜರ್ಮನ್ ಬೆಳ್ಳಿಯ ಕುಂಕುಮ ಭರಣಿ, 9 ಡಿಟೋ ಸಾದಿನ ಚಿಪ್ಪು, 10 ಡಿಟೋ ಕಣ್ಣುಕಪ್ಪಿನ ಬರಣಿ, 11 ಡಿಟೋ ನಶ್ಯದ ಡಬ್ಬಿ, 12. ಇಮಿಟೇಷನ್ ಡೈಮಂಡ ಮೂಗೊಟ್ಟು, 13 ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಗೆ, 14. ಎಲೆಕ್ಟ್ರೋ ಸೀಲು ಉಂಗುರ, 15 ಕತ್ತಿ.

ಈ ಕೆಳಗಿನ ಸಾಮಾನುಗಳು ಸಹ ನಮ್ಮಲ್ಲಿ ದೊರೆಯುತ್ತೆ

ಮಧುರೆ ಚುನ್ನಡ ಸೀರೆ ಒಂದಕ್ಕೆ ರೂ. 2—3—0.

ಮಧುರೆ ಕೆಂಪು ಸೀರೆ ರೂ. 3—0—0.

ತಂಜಾವೂರು ಗೆಜ್ಜೆ ಅಡ್ಡಿಗೆ ಆಣೆ 6.

ವಿಳಾಸ:—

ಕೆ. ರಾಧಾಕೃಷ್ಣ,

2/18 ಕಾರು ಸ್ಟೀಟು.

ತಿರುವಲ್ಲಿಕೇಣಿ,

ಮದ್ರಾಸು.

ನ್ಯಾಯದರ್ಪಣ..

ಹೊಸ ಪುಸ್ತಕ

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳ, ಶಾಸನಗಳ ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0 ವಿ. ಪಿ 1—12—0

ಲಾಯರ್ ಯಂ ಯಸ್. ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ

ಎಲ್ಲರೂ ಚಂದಾದಾರರಾಗಿ ಸೇರಲು ಇದೇ ಸಮಯ

ಚಾತುರ್ಯ

ಈ ಮಾಸಪತ್ರಿಕೆಯು ಸ್ತ್ರೀಪುರುಷರಿಗೆ ಜ್ಞಾನಮಾರ್ಗವನ್ನು ಬೋಧಿಸುವದಕ್ಕಾಗಿಯೇ ಹೊರಟಿರುತ್ತೆ. ಇದರಲ್ಲಿ ಹಾಸ್ಯರಸವುಳ್ಳ ಸಂಭಾಷಣೆಗಳೂ, ನಕಲಿಗಳೂ, ವಿನೋದ ಕಥೆಗಳೂ, ಚಮತ್ಕಾರವುಳ್ಳ ಮಾತುಗಳು ಇರುವವು. ಹಾಸ್ಯರಸ ಯುಕ್ತವಾಗಿ ನೀತಿಗಳನ್ನು ಬೋಧಿಸುವ ಇಂಥಾ ಪತ್ರಿಕೆಯನ್ನು ಹಿಂದೆ ಯಾರೂ ಪ್ರಕಟಿಸಿರುವದಿಲ್ಲ! ಈ ದುರ್ಲಭವಾದ ಮನುಷ್ಯ ಜನ್ಮದಲ್ಲಿಯೇ ಜ್ಞಾನವನ್ನು ಸಂಪಾದಿಸಬೇಕು ಆದ್ದರಿಂದ ಆಲಸ್ಯಮಾಡದೆ ಚಂದಾದಾರರಾಗಲು ಸಿದ್ಧರಾಗಿರಿ. ಮಾದರಿ ಪತ್ರಿಕೆ ಅಪೇಕ್ಷಿಸುವವರು ½ ಆಣೆ ಸ್ಟ್ಯಾಂಪು ಕಳುಹಿಸತಕ್ಕದ್ದು

ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ಸ್ತ್ರೀಯರಿಗೆ, ಮತ್ತು ವಿದ್ಯಾರ್ಥಿಗಳಿಗೆ ಮಾತ್ರ ೬ ಆಣೆ ಇತರರಿಗೆ ೧೦ ಆಣೆ

ವಿಳಾಸ:— ಮ್ಯಾನೇಜರ್ "ಚಾತುರ್ಯ"

ಚಾಮರಾಜಪೇಟೆ,

ಬೆಂಗಳೂರು ಸಿಟಿ

ದಿ ಯುನಿವರ್ಸಲ್ ಎಸ್ಸ್ಯುರೆನ್ಸ್ ಕಂಪೆನಿ ಲಿಮಿಟೆಡ್, ಕಲ್ಕತ್ತಾ.

ನಮ್ಮೊಳಗೆ ಸದರಿ ಕಂಪೆನಿಯ ಸಬ್ ಏಜಂಟರಾಗಿದ್ದ ಮಣೂರು ಅನಂತ ಹೊಳ್ಳರನ್ನು ಸದರಿ ಕಂಪೆನಿಯ ಏಜನ್ಸಿ ಕೆಲಸದಿಂದ ನಿವೃತ್ತಿ ಪಡಿಸಿರುವದರಿಂದ ಕಂಪೆನಿಗೆ ವಿಮೆದಾರರಿಂದ ಬರತಕ್ಕ ಎಲ್ಲಾ ವಿಧವಾದ ಐವಜುಗಳನ್ನು ವಿಮೆದಾರರು ಇನ್ನುಮುಂದೆ ಸೀದಾ ನಮ್ಮ ಬಳಿಗೆ ರವಾನಿಸತಕ್ಕದ್ದು. ಇದಕ್ಕೆ ವಿರೋಧವಾಗಿ ಅವರ ಕೂಡೆ ವಸೂಲು ಕೊಟ್ಟರೆ ಅಂಥಾ ಪಾವತಿಯು ನಮಗೆ ಯಾ ಕಂಪೆನಿಗೆ ಬಾಧಿಸತಕ್ಕದ್ದಲ್ಲ ಎಂಬದಾಗಿ ಎಲ್ಲರೂ ತಿಳಿದಿರುವರು.

ಎಮ್. ಲಕ್ಷ್ಮಣರಾವ್ ಬ್ರದರ್ಸ್,

ಚೀಫ್ ಏಜಂಟ್, ಉಡುಪಿ.

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯರವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

1 ಧಾತುಪುಷ್ಟಿ ರಸಾಯನ—ಇದರ ಸೇವನೆಯಿಂದ ನರಗಳ ಸಂಬಂಧವಾದ ಮತ್ತು ಅನೇಕ ವಿಧವಾದ ಎಲ್ಲಾ ಶರೀರ ದುರ್ಬಲಗಳು ಹೋಗಿ ಹೊಟ್ಟೆಯಲ್ಲಿ ಅಗ್ನಿವುಂಟಾಗಿ ದೇಹವು ಪುಷ್ಟಿ ಹೊಂದುವದು. ಪುಷ್ಟಿಯನ್ನು ಕಳೆದುಕೊಂಡ ಚಿಕ್ಕ ವಯಸ್ಸಿನವರಿಗೆ ಇದು ತಕ್ಕ ಔಷಧವು. ಇದರಿಂದ ಶರೀರದ ಪ್ರತಿ ಅವಯವದ ನೋವೂ, ಅಶಕ್ತಿಯೂ ಹೋಗಿ ಪುಷ್ಟಿಯೂ ಬಲವೂ ಉಂಟಾಗುವುದು. ಪೆಟ್ಟಿಗೆ ೧ಕ್ಕೆ ರೂ, ೨—೦—೦, ವಿ ಪಿ ಛಾಂಗಿ ಚಾರ್ಜು ೬ ಆಣೆ

2 ಅಜೀರ್ಣಮಾತ್ರೆಗಳು—ಅಜೀರ್ಣ ತೇಗುವದು ಹೊಟ್ಟೆಯಲ್ಲಿ ಉರಿ, ಮತ್ತಾಗಿರುವಿಕೆ, ಹಸಿವಿಲ್ಲದಿರುವದು, ಪಿತ್ತದಿಂದ ಬಾಯಿಯ ದುರ್ಗಂಧ, ಹೊಟ್ಟೆ ಶೂಲೆ ನಿದ್ದೆ ಹತ್ತದಿರುವಿಕೆ ತಲೆತಿರುಗುವುದು, ಇವೆಲ್ಲಾ ನಿರ್ಮೂಲವಾಗುವವು. ಪೆಟ್ಟಿಗೆ ೧ಕ್ಕೆ ೮ ಆಣೆ ವಿ ಪಿ ಛಾಂಗಿಚಾರ್ಜುಗಳು ೬ ಪೆಟ್ಟಿಗೆವರಿಗೂ ೫ ಆಣೆ

3 ಪ್ರಮೇಹನಿವಾರಣಿ—ಯಾವ ಕಾರಣದಿಂದಲಾದರೂ ಸಂಭವಿಸಿದ ಕಷ್ಟ ನಿದ್ರೆಯಲ್ಲಿ ಉರಿ ಮುಂತಾದವು ವಾಸಿಯಾಗುವುವು. ಸ್ತ್ರೀಪುರುಷರು ಉಪಯೋಗಿಸಬಹುದು. ಸೀಸೆ ೧ಕ್ಕೆ ರೂ ೧ ೬ ಸೀಸವರಿಗೂ ವಿ ಪಿ ಚಾರ್ಜು ೫ ಆಣೆ

4 ಲಕ್ಷ್ಮೀಕರ ಕಸ್ತೂರಿ ಮಾತ್ರೆಗಳು—ಇದು ಭೋಜನಾನಂತರ ತಾಂಬೂಲದ ಸಂಗಡ ೧-೨ ಮಾತ್ರೆಗಳನ್ನು ಸೇವಿಸಿದರೆ ಇತರ ಸುವಾಸನಾ ದ್ರವ್ಯಗಳು ಅನಾವಶ್ಯಕವಾಗಿರುವುದಲ್ಲದೆ, ಅಲ್ಪಕಾಲದಲ್ಲಿ ಅತ್ಯಂತ ಕಠಿಣವಾದ ಆಹಾರವನ್ನು ಕೂಡ ಜೀರ್ಣಕ್ಕೆ ತರುವುದು. ಬೆಳಗ್ಗೆ ಊಟಕ್ಕೆ ಮುಂಚೆ ೨ ಮಾತ್ರೆಗಳನ್ನು ಕ್ರಮವಾಗಿ ಸೇವಿಸುತ್ತಿದ್ದರೆ, ಅಜೀರ್ಣ, ಮಂದ, ಹಲ್ಲುವೇದನೆ, ಹೊಟ್ಟೆಯ ಉರಿ ಇವುಗಳು ವಾಸಿಯಾಗುವವು. ಇದರಲ್ಲಿ ಆಕ್ಷೇಪಣೀಯವಾದ ಲಹರಿ ಪ್ರತಿಬಂಧಕವಾದ ಯಾವ ವಸ್ತುವೂ ಇಲ್ಲ. ಕಸ್ತೂರಿ ಸ್ವರ್ಣ ಮುಂತಾದ ಅಮೂಲ್ಯ ವಸ್ತುಗಳು ಸೇರಿರುವದರಿಂದಲೂ, ಎಳೆ ಮಕ್ಕಳಿಂದ ಮುದುಕರ ವರೆಗೆ ಎಲ್ಲರೂ, ಬರಿಣೆಯಲ್ಲಿ ಹಾಕಿಕೊಂಡು ಉಪಯೋಗಿಸಬಹುದು. ಕ್ರಮವಾಗಿ ಸೇವಿಸುವದರಿಂದ ಜ್ವರ, ನೆಗಡಿ, ಕೆಮ್ಮಲು ಮುಂತಾದವುಗಳಿಗೆ ಸಣ್ಣ ಮಕ್ಕಳಿಂದ ದೊಡ್ಡವರಿಗೆ ೧ರಿಂದ ೪ ಮಾತ್ರೆಗಳಂತೆ ಕೊಟ್ಟರೆ ತಕ್ಷಣ ಗುಣಕಾಣುವದು. ಸೀಸೆ ೧ಕ್ಕೆ ೪ ಆಣೆ ವಿ ಪಿ ೩ ಸೀಸೆವರಿಗೂ ೫ ಆಣೆ ಪ್ರತ್ಯೇಕವು

5 ವೇದನಾಪರಿಹಾರಕ ತೈಲವು—ಇದನ್ನು ಮೇಲ್ಭಾಗದಲ್ಲಿ ಮಾತ್ರ ಹಚ್ಚುವದರಿಂದ ಕೈಕಾಲು ಹಿಡಿದುಕೊಳ್ಳುವುದು, ವಾತರೋಗ, ಪಾರ್ಶ್ವವಾಯು, ನರಗಳ ಸೆಳತ, ಮೊಣಕಾಲು, ಸೊಂಟ ಮತ್ತು ಎದೆ ತೋಳು, ಸಕಲ ಅಂಗಗಳ ಕೀಲಿನ ನೋವುಗಳು, ತಲಶೂಲೆ, ಹಲ್ಲುನೋವು, ಕಿವಿನೋವು, ಛಳಿ, ಕೆಮ್ಮು ಮುಂತಾದ ಎಲ್ಲಾ ವಿಧವಾದ ನೋವುಗಳೂ ಖಂಡಿತವಾಗಿ ವಾಸಿಯಾಗುವವು. ಸೀಸೆ ೧ಕ್ಕೆ ರೂ ೧-೦-೦ ವಿ. ಪಿ ೩ ಸೀಸೆವರಿಗೂ ೫ ಆಣೆ

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.

P. SUBBAROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—

ಪಿ. ಸುಬ್ಬರಾಯ,
ಆಯುರ್ವೇದ ಔಷಧಶಾಲ,
ವೆಂಕಟೇಶ ಪೆರುಮಾಳ್ ದೇವಸ್ಥಾನ,
ದಿ, ತಂಜಾವೂರು.

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ತೆಗೆಯಲ್ಪಟ್ಟುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯು ಎಷ್ಟನೆಯ ಅಂಶವು ಶಾರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ಹಾಸೇ ಅವಲಂಬಿಸಿರುತ್ತದೆ ಅಚ್ಚ ಕೊಡಲೀವರ್ ಎಣ್ಣೆಯೂ ಅದರಿಂದ ತೆಗೆಯಲ್ಪಟ್ಟ ಬೇರೆ ಔಷಧಗಳು ಹೊಲಸಾಗಿಯೂ ಶಕ್ತಿಶಾಲಿಯಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದ್ದಾದುದರಿಂದ ಅವನ್ನು ಸೇವಿಸುವವರಿಂದ ಅತಿಸಾರವು ಅನುಸರಿಸುತ್ತದೆ. ಆದರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ವೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿಸ್ಪಟ್ಟು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾದ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆವಶ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲಿರುವವರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ವೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ದೊರಕಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟಲಿಗೆ 1—12—0

ದಿ ಊಲನ್ ಮಾರ್ಟ್, ಮಂಗಳೂರು,
ದಕ್ಷಿಣ ಕನ್ನಡಾ.

ಮರೆಯ ಬ್ಯಾಡಿರಿ. ಮರೆಯ ಬ್ಯಾಡಿರಿ

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮಿಷನ್ ದೊರಿಯುವದು.

ಅಪಾಯ ರೋಮಸಂಹಾರಿ ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉರಿ ಸೆಕೆ ಮುಂತಾದ ಬಾಧೆಗಳಿಲ್ಲವು ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು. ಮರೆಯ ಬ್ಯಾಡಿರಿ.

3 ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ಆಣೆ 14

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1 10 0 ಅಂಚೆ ಹಾಸಲು ಆ 4

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ

ವಿಳಾಸ — ವಿ ಎ ಎಸ್ ಪಾಣಿ ಕಂಪೆನಿ

ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು

V A S PANI,
No 3, Erulappen Street, Madras.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧ ಕುಟುಂಬಸಂಜೀವನಿ—ಎಲ್ಲಾ ರೋಗಗಳನ್ನು ತ್ವರಿತವಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨ ಶತವರ್ಷ ಜೀವನ ರಸಸಂಜೀವನಿ—ಈ ಟಾನಿಕ್ ದ್ರವಕವು ಎಲ್ಲಾ ರೋಗಗಳಿಗೆ ಪ್ರತಿ[illegible] ರಕ್ತವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ —0—0

ಬಾಲಸಂಜೀವನಿ—ಮಕ್ಕಳ ಟೋನಿಕ್ [illegible] ಸಶಕ್ತರಾಗಿ ಮಾಡಿ [illegible] ಬೆಳೆಸುತ್ತದೆ. ಬಾಟ್ಲಿ 1ಕ್ಕೆ 0—12—0

೪ ವಸಂತ ಕುಸುಮಾಕರ — ಈ ಸುವಾಸಿತ ತೈಲವು ಕೇಶ ವೃದ್ಧಿಮಾಡಿ ಶಿರೋರೋಗ [illegible] ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ ಬುದ್ಧಿ ಭ್ರಮೆಯನ್ನು [illegible] ಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫ ಸುದರ್ಶನಚೂರ್ಣ—ಈ ಸಿದ್ಧೌಷಧವು [illegible] ಇತ್ಯಾದಿ [illegible] 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0

೬ ಗರುಡಧ್ವಜ—[illegible] ಹುಚ್ಚುನಾಯಿ, ಜೇಡ ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿ[illegible] ಅನುಭವಸಿದ್ಧ 2—0—0

೭ ಆನಂದವನವಿಲಾಸ—ಇದು [illegible] ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಪ [illegible] ತಯಾರಿಸಿದ ಔಷಧ ಪಾತ್ರೆಗಳು, ಲೇಹ ಚೂರ್ಣಗಳು ತೈಲ್ಯ ಘೃತಗಳು ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯಪಟ್ಟಿ[illegible]ದ ನಮ್ಮ [illegible]ಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್ ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಡಾಕ್ಟರ್ ನವರತ್ನರ ಕಪ್ಪು ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ 1 ಟಪ್ಪಾಲು ಚಾರ್ಜು 0—4—0

Dr. Navaratna & Sons,
Kalbadevi Road BOMBAY

ಏಜಂಟರು —ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು

ಆಚ್ಚಾಗುತ್ತಲಿದೆ! ಆಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ಪಂಚಾಂಕೀ ಮರಾಠಿನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಅಗೋಸ್ತು ತಿಂಗಳ ಆಖೈರ ಒಳಗೆ ಪ್ರಕಾಶಿತವಾಗುವದು. ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕ ಜನರು ಈ ಸಂದರ್ಭವನ್ನು ಬಿಡಲಾಗದು. ಬೆಲೆ 10 ಆಣೆ. ಟ. ಹಾ. ಬೇರೆ.

ಜುಲೈ ಆಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರಕೊಂಡು, ಓರ್ಡರುಗಳನ್ನು ರಿಜಿಸ್ಟರ್ ಮಾಡುವ ಗ್ರಾಹಕರಿಗೆ 8 ಆಣೆ. ಟ. ಹಾ. ಬೇರೆ. ಹಣವನ್ನು ಮುಂಗಡವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅಥವಾ ಮನಿಆರ್ಡರು ದ್ವಾರಾ ಕಳುಹಿಸಬೇಕು.

ತ್ವರೆಮಾಡಿರಿ!!

ಕಲ್ಯಾಣಪುರ ಮಂಗೇಶರಾವ್,
ಕಲ್ಯಾಣಪುರ, ದ. ಕನ್ನಡ.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10 ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಲಾಕಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ವನ್ನಾರಪೇಟೆ, ಆರ್ನಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊನ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ವೆಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಡುತ್ತಿರುವ ರೇಶ್ಮೆ ಜರಿ, ಸಾದಾ ಸೀರೆಗಳು, ವಲ್ಲಿಗಳು, ಧೋತ್ರಗಳು, [illegible]ವಸ್ತ್ರಗಳು ವಗೈರೆ ದೊರಕುವವಲ್ಲದೆ ಜಪಾನು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲಾ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತುಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರಕುತ್ತವೆ.

[illegible] ಅಂಗಡಿಗಳ ಕ್ರಯಕ್ಕೆ ತಕ್ಕಂತೆ ಅಗ್ಗವಾಗಿರುವುದು.

ನಮ್ಮ ವಿಳಾಸ—ನರಸಿಂಹ ಲಕ್ಷ್ಮಣಸಾಲಿ
[illegible] ಮಂಗಳೂರು ದ. [illegible]

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 25ನೇ ಸಪ್ಟಂಬರ 1914

ಮದ್ರಾಸಿನಲ್ಲಿ "ಎಮ್ಡನಿನ" ಸಮಾಚಾರ

ಕಳೆದ ಬುಧವಾರ ತಾ. ೨೩ನೇ ಮಧ್ಯಾಹ್ನದಿಂದ ನಿನ್ನೆ ಸಾಯಂಕಾಲದ ತನಕ ಮದ್ರಾಸಿನಲ್ಲಿ ಎಮ್ಡನ್ ಯುದ್ಧನಾವೆಯ ಆಧಾರವಿಲ್ಲದ ಹಲವು ಒಗೆಯ ಸುದ್ದಿಗಳು ಪ್ರಬಲವಾಗಿ ಇಲ್ಲಿ ಹರಡತೊಡಗಿದ್ದವು. ಮದ್ರಾಸಿನಲ್ಲಿರುವ ಇಲ್ಲಿಯ ನಿವಾಸಿಕರ ಬಂಧುಗಳು ಭದ್ರವಾಗಿರುವರೋ ಎಂಬುದನ್ನು ತಿಳಕೊಳ್ಳಲು ಹಲವು ಟೆಲಿಗ್ರಾಮುಗಳು ಮದ್ರಾಸಿಗೆ ಬಿಡೋಣಾಗಿದ್ದವು. ಯುದ್ಧವಂದರೇನ, ಮುತ್ತಿಗೆಯಂದರೇನು, ಈ ಯುದ್ಧಕಾಲದಲ್ಲಿ ಹಿಂದೂಸ್ಥಾನದ ಬದ್ರತೆಗಾಗಿ ಸರಕಾರದವರು ಎಂಥೆಂಥಾ ಏರ್ಪಾಡುಗಳನ್ನು ಮಾಡಿರುವರು ಮೊದಲಾದ ವಿವರವನ್ನು ಸರಿಯಾಗಿ ತಿಳಿಯಲಾರದ ಜನರಲ್ಲಿ ಈ ಸುದ್ದಿಗಳು ಉದ್ದುದ್ದ ಬೆಳೆದವು. ಪೂರ್ವ ಕರಾವಳಿಯಲ್ಲಿ ಸಿಲೋನ ದ್ವೀಪವನ್ನು ಬಿಟ್ಟು ಒಂದೆರಡು ಗುಂಡುಗಳನ್ನು ಹಾರಿಸುತ್ತಿರುವ ಜರ್ಮನರ ಒಂಟಿನಾವೆಯು ಕರಾವಳಿಗೆ ಮುತ್ತಿಗೆಯನ್ನು ಹಾಕುವ ವಿಷಯವನ್ನು ಸಹ ಎಂದೂ ಊಹಿಸಲಾರದ ಯುರೋಪು ಪ್ರಾಂತ್ಯಗಳಿಂದ ಸಾವಿರಾರು ಮೈಲುಗಳ ಪ್ರಯಾಣವನ್ನು ಬೆಳಸಿ ಹಡಗುಗಳು ಆತಂಕವಿಲ್ಲದೆ ಹಿಂದೂಸ್ಥಾನಕ್ಕೆ ಯುದ್ಧಪ್ರಾರಂಭವಾದಂದಿನಿಂದ ಬರುತ್ತಿರುವುದರಿಂದ ಹಿಂದೂಸ್ಥಾನದ ಕರಾವಳಿಯಿಂದ ಸಾವಿರಾರು ಮೈಲುಗಳ ಪ್ರಾಂತ್ಯದಲ್ಲಿ ಸಹ ಶತ್ರುಗಳ ನಾವೆಯು ಇಲ್ಲವೆಂಬುದು ಸ್ಪಷ್ಟವಾಗುವುದು. ಎಲ್ಲಿಯೋ ಜಪಾನ ಪ್ರಾಂತ್ಯಗಳಿಂದ ತಲೆತಪ್ಪಿಸಿ ನಮ್ಮ ಪೂರ್ವ ಕರಾವಳಿಗೆ ಓಡಿಬಂದಿರುವ ಜರ್ಮನರ ಎಮ್ಡನ್ ನಾವೆಯು ಅಲ್ಲಲ್ಲಿ ಒಂದೆರಡು ಗುಂಡುಗಳನ್ನು ಹಾರಿಸಿತೆಂದರೆ ನಿವಾಸಿಕರೆಂದೂ ಗಾಬರಿಪಡಬೇಕೆಂತಿಲ್ಲ. ಮದ್ರಾಸಿನ ರೇವೂ ಕೋಟೆಗಳೂ ಬಹಳ ಬದ್ರವಾಗಿರುವುದರಿಂದ ಅಲ್ಲಿ ಜರ್ಮನರ ನಾವೆಯಿಂದ ಕೆಲವು ಗುಂಡುಗಳು ಒಂದು ಬಿದ್ದರೂ ನಿವಾಸಿಕರ್‍ಯಾರೂ ಬೆಚ್ಚಿಬೀಳದೆ ಗುಂಡುಗಳ ಶಬ್ದವು ಏನೆಂದು ವಿಚಾರಿಸಿ ಸುಮ್ಮನಾದರು. ಎಮ್ಡನ್ ನಾವೆಯು ಇತ್ತ ಪಶ್ಚಿಮ ಕರಾವಳಿಗೆ ತಿರುಗದಂತೆಯೂ ಪೂರ್ವ ಕರಾವಳಿಯಲ್ಲಿಯೇ ಇದನ್ನು ಹಿಡಿದು ನಾಶಪಡಿಸಲು ತಕ್ಕ ಏರ್ಪಾಡು ನಡೆದಿರುವುದರಿಂದ ಎಮ್ಡನ್ ನಾವೆಯಿಂದ ಉಂಟಾಗಬಹುದಾದ ಅನಾಹುತಕ್ಕೆ ಅಂಜಲು ಎಳ್ಳಿನಷ್ಟಾದರೂ ಆಸ್ಪದವಿರದು. ಎಮ್ಡನ್ ನಾವೆಯಿಂದ ಜರ್ಮನರು ವಾಯುವಿಮಾನಗಳಲ್ಲಿ ನಮ್ಮ ದೇಶಕ್ಕೆ ಬಂದು ಬೊಂಬುಗಳನ್ನು ಹಾಕುವರು ಎಂಬ ವಿಚಿತ್ರವಾದ ಆಧಾರವಿಲ್ಲದ ಸುದ್ದಿಯನ್ನು ಕೇಳಿ ಯಾರಾದರೂ ನಗಾಡದೆ ಇರಲಾರರು. ವಾಯುವಿಮಾನಗಳನ್ನು ತುಂಬಿ ಬರಲು ಇದು ಯುರೋಪ ಪ್ರಾಂತ್ಯದಿಂದ ಬಂದ ನಾವೆಯೇ ಅಲ್ಲ. ವಾಯುವಿಮಾನಗಳ ಚಲಾವಣೆಗೆ ಆಸ್ಪದ ಕೊಡುವಷ್ಟು ದೊಡ್ಡದು ಈ ಎಮ್ಡನ್ ನಾವೆಯಾಗಿರದು. ವಿಮಾನಗಳು ಈ ನಾವೆಯಲ್ಲಿರುವ ಕುರುಹುಗಳು ಇರವು. ಅದಲ್ಲದೆ ಹಿಂದೂಸ್ಥಾನದ ಮೇಲೆ ಶತ್ರುಗಳ ವಾಯುವಿಮಾನಗಳ ಸಂಚರಣೆಯನ್ನು ಎದುರಾಡಲು ಬೇಕಾದ ವಾಯುವಿಮಾನಗಳನ್ನು ನಮ್ಮ ಸರಕಾರದವರು ಇಟ್ಟುಕೊಂಡಿರುತ್ತಾರೆ. ಇಂಥಾ ವಿದ್ಯಮಾನಗಳಲ್ಲಿ ಜನರು ನಾನಾ ಬಗೆಯ ಸುದ್ದಿಗಳ ಕಲ್ಪನಾ ಕಥೆಗಳನ್ನು ಎಂದೂ ನಂಬಕೂಡದು.

ಯುರೋಪ ಖಂಡದಲ್ಲಿ ದಶದಿಕ್ಕುಗಳಲ್ಲಿಯೂ ಜರ್ಮನರಿಗೆ ಯುದ್ಧದಲ್ಲಿ ಹೋರಾಡಲಿಕ್ಕಿರುವುದರಿಂದ ಜರ್ಮನಿಯು ಹಿಂದೂಸ್ಥಾನದಲ್ಲಿ ಅನಾಹುತವನ್ನುಂಟುಮಾಡುವ ವಿಷಯವನ್ನು ಕನಸಿನಲ್ಲಾದರೂ ಎಣಿಸಲಾರದು. ಜರ್ಮನಿಯಿಂದ ಪರರಾಜ್ಯಗಳಿಗೆ ಕಳುಹಿಸಿಕೊಡತಕ್ಕ ಸೇನೆಯಾಗಲಿ ಈ ಸೇನೆಯನ್ನು ಒಯ್ಯತಕ್ಕ ಹಡಗುಗಳಾಗಲಿ ಜರ್ಮನಿಗಿರವು. ಚತುಸ್ಸಾಗರಗಳ ಮೇಲಣ ಸಂಪೂರ್ಣ ಅಧಿಕಾರವನ್ನು ತನ್ನ ಅತಿ ಶ್ರೇಷ್ಠವಾದ ನೌಕಾ ಬಲದಿಂದ ಪಡೆದಿರುವ ನಮ್ಮ ಸಾಮ್ರಾಜ್ಯ ಸರಕಾರದವರ ಯುದ್ಧನಾವೆಗಳ ಪಹರೆಯಿಂದ ಸಾಮಗ್ರಿಗಳನ್ನು ತುಂಬಿ ಬರುವ ಶತ್ರುಗಳ ಹಡಗುಗಳು ಅತ್ತಿತ್ತ ಚಲಿಸಲಾರವಾದ್ದರಿಂದ ಹಿಂದೂಸ್ಥಾನದಲ್ಲಿ ಶತ್ರುಗಳ ಯಾವ ಸಾಧನೆಗೂ ಇಂಬಿರದು. ಹಿಂದೂಸ್ಥಾನವು ಇಷ್ಟು ಭದ್ರವಾಗಿರುವುದರಿಂದಲೇ ಇಲ್ಲಿಂದ ನಮ್ಮ ಸರಕಾರದವರು ೭೦,೦೦೦ ಸೇನಿಕರನ್ನು ಸಾಮ್ರಾಜ್ಯ ಸರಕಾರದವರ ಸಹಾಯಕ್ಕಾಗಿ ಕಳುಹಿಸಿಕೊಟ್ಟಿರುತ್ತಾರೆ. ಆದ್ದರಿಂದ ಸುದ್ದಿಗಳ ಕಲ್ಪನಾಕಥೆಗಳನ್ನು ನಮ್ಮ [illegible] ಶಕ್ತಿಯಿಂದ ಇವುಗಳು ಏನೂ ಆಧಾರವಿಲ್ಲದವುಗಳೆಂತ ತಿಳಿಯ[illegible]ದು.

ಮದ್ರಾಸಿನಲ್ಲಿ ಎಮ್ಡನ್ ನಾವೆಯಿಂದ ಉಂಟಾದ ಅನಾಹುತದ ವಿವರವು ಈ ರೀತಿ ಪ್ರಕಟವಾಗಿರುವುದು:—ತಾ. ೨೨ನೇ ಮಂಗಳವಾರ ರಾತ್ರಿ ೯ ಹುತ್ತು ೧೧ ಘಂಟೆಗಳೊಳಗಣ ಸಮಯದಲ್ಲಿ ಜರ್ಮನರ ಯುದ್ಧನಾವೆಯು ಮಾರ್ಕೊಮೆನಿಯಾ ಎಂಬ ನಾವೆಯೊಂದಿಗೆ ಮದ್ರಾಸು ರೇವಿನ ದಕ್ಷಿಣ ಪೂರ್ವಕ್ಕೆ ಬಂದು ತಲ್ಪಿ ರೇವಿನ ಮೇಲೆ ಗುಂಡುಗಳನ್ನು ಹಾರಿಸಲು ತನ್ನ ಕೋವಿಗಳನ್ನು ತಿರುಗಿಸಿತು. ತೋಪುಗಳಿಂದ ಹಾರಿಸಿದ ಪ್ರಥಮ ಗುಂಡುಗಳು "ಬರ್ಮಾ ಒಯಿಲ್ ಕಂಪೆನಿಯ" ಮನೇಜರರಾದ ಮಿ| ಎಲಿಸ್ ಎಂಬವರು ಮಲಗುವ ಕೋಣೆಗೆ ಬಂದು ಬಿದ್ದವು. ನಂತರದ ಗುಂಡುಗಳು ಕೆರಸಿನ ಎಣ್ಣೆಯ ಟಾಂಕುಗಳಿಗೆ ಬಿದ್ದು ಟಾಂಕುಗಳಲ್ಲಿರುವ ಎಣ್ಣೆಗೆ ಬೆಂಕಿ ಹತ್ತಿತು. ಎಣ್ಣೆಯ ಜ್ವಾಲೆಯಿಂದುಂಟಾದ ಬೆಳಕಿನಿಂದ ಮದ್ರಾಸು ಪಟ್ಟಣದ ಸಮುದ್ರ ಕರಾವಳಿಯ ಪ್ರಾಂತ್ಯಗಳಲ್ಲಿ ಸೂರ್ಯೋದಯವಾದಂತೆ ತೋರಿತು. ರೇವಿನಲ್ಲಿದ್ದ ಪಹರೆಯ ಪೋಲೀಸು ಪೇದೆಯು ಗುಂಡಿನಿಂದ ಹಾರಿಸಲ್ಪಟ್ಟನು. ಆತನ ಶವವು ರೇವಿನಲ್ಲಿ ತೇಲಾಡುತ್ತಿರುವುದನ್ನು ಕಂಡುಹಿಡಿದರು. ರೇವಿನ ಉತ್ತರ ಕಡೆಯಲ್ಲಿರುವ ಕೋವಿಯಿಂದ ಮೂರು ಸರ್ತಿ ಗುಂಡುಗಳನ್ನು ಹಾರಿಸುವುದನ್ನು ನೋಡಿ ಎಮ್ಡನ್ ಯುದ್ಧನಾವೆಯು ತಾನು ಗುಂಡು ಹಾರಿಸುವುದನ್ನು ನಿಲ್ಲಿಸಿಬಿಟ್ಟಿತು. ರೇವಿನಲ್ಲಿರುವ ಚುಪ್ರಾ ಎಂಬ ಹಡಗದಲ್ಲಿ ಮಿಚ್ಚೆಲ್ ಎಂಬವನಿಗೆ ಎಮ್ಡನ್ ನಾವೆಯ ಗುಂಡು ತಗಲಿ ಆತನು ಕೂಡಲೇ ಮೃತಪಟ್ಟನು. ಇದೇ ಹಡಗದ ಪಾಯ ಪಡೆದ ಇನ್ನು ನಾಲ್ವರನ್ನು ಆಸ್ಪತ್ರಿಗೆ ಒಯ್ದಿರುವರು. ಮದ್ರಾಸು ಪೋಸ್ಟಾಫೀಸಿನ ಕುದುರೆ ಲಾಯಗಳು ಹಾಳಾಗಿವೆ. ಪೋರ್ಟ್ ಟ್ರಸ್ಟಿನ ಮುಖ್ಯ ಕಾವಲುಗಾರನಾದ ಹೆರಿಸ್ ಎಂಬವರ ಮನೆಗೂ ಸ್ವಲ್ಪ ಜಖಂ ಉಂಟಾಗಿರುವುದು.

ಅಧಿಕಾರಿಗಳಿಂದ ಪಡೆದ ವೃತ್ತಾಂತವು ಈ ರೀತಿಯಾಗಿರುವುದು—ರಾತ್ರಿ ಘಂಟೆ ೯ ೩೦ಕ್ಕೆ ಎಮ್ಡನ್ ನಾವೆಯು ನೋಡ ಸಿಕ್ಕಿತು. ಕೂಡಲೇ ಕಾಸ್ಲೀಮೋಡ ಬತ್ತೇರಿಯಿಂದ ಮೂರಾವರ್ತಿ ಗುಂಡುಗಳು ಎಮ್ಡನಿನ ಮೇಲೆ ಹಾರಿಸೋಣಾದವು. ಒಂದಾವರ್ತಿ ಹಾರಿಸಿದ ಗುಂಡು ಎಮ್ಡನಿನ ಮೇಲಿಂದ ಹಾದುಹೋದವು. ಬಾಕಿ ಎರಡು ಸಲ ಹಾರಿಸಿದ ಗುಂಡುಗಳು ಎಮ್ಡನಿನ ಬಹಳ ಸಮೀಪ ಹೋಗಿರುವವು. ಎಮ್ಡನಿಗೆ ಈ ಗುಂಡುಗಳು ತಾಗಿವೆಯೋ ಇಲ್ಲವೊ ಎಂಬುದು ಸರಿಯಾಗಿ ಗೊತ್ತಾಗಲಿಲ್ಲ. ಹ್ಯಾಗೂ ಮೂರು ಸಲ ಗುಂಡು ಹೊಡೆಯುವಷ್ಟರೊಳಗೆ ತನ್ನ ದೀಪಗಳನ್ನು ನೊಂದಿಸಿಕೊಂಡು ಎಮ್ಡನ್ ನಾವೆಯು ಕೂಡಲೇ ಹೊರಟು ಹೋಯಿತು. ಕೆರೆಸಿನ ಎಣ್ಣೆಯ ಟಾಂಕುಗಳಿಗೆ ಬೆಂಕಿ ಹಾಕಿ ನಿವಾಸಿಕರನ್ನು ಗಾಬರಿಪಡಿಸುವ ಉದ್ದೇಶದಿಂದ ಎಮ್ಡನ್ ನಾವೆಯು ಬಂದದ್ದಾಗಿ ತಿಳಕೊಳ್ಳುತ್ತಾರೆ. ೯ ೩೦ ಗಂಟೆಗೆ ಪ್ರಾರಂಭವಾದ ಕೋವಿಗಳ ಹಾರಿಸೋಣವು ಕಾಲು ಘಂಟೆಯಲ್ಲಿ ಮುಗಿದಿರುವುದು. ಚುಪ್ರಾ ಹಡಗದಲ್ಲಿ ಒಬ್ಬನು ಮೃತಪಟ್ಟಿರುವನು ಮತ್ತು ಕೆಲವರು ಗಾಯಪಡದಿರುವರ.

ಎಮ್ಡನ್ ಯುದ್ಧನಾವೆಯು ರೇವಿನಿಂದ ಸುಮಾರು ೭೦೦೦ ಗಜಗಳಷ್ಟು ದೂರದಲ್ಲಿತ್ತೆಂತ ನಾವೆಯನ್ನು ನೋಡಿದವರು ಹೇಳುತ್ತಿರುವರು. ಪೋರ್ಟು ಆಫೀಸಿನಲ್ಲಿದ್ದ ಅಧಿಕಾರಿಗಳು ಎಮ್ಡನ್ ನಾವೆಯು ರೇವಿನ ಹತ್ತಿರ ಬಂದೊಡನೆ ಅದರ ದೀಪಗಳನ್ನು ಕಂಡು ಅದು ಶತ್ರುಗಳ ನಾವೆ ಎಂತ ಗುರುತಿಸಿದರು. ನಾವೆಯು ಇನ್ನು ಸ್ವಲ್ಪ ದಕ್ಷಿಣಕ್ಕೆ ಮುಂವರಿಸಿ ಬಂದು ತನ ದೀಪಗಳನ್ನು ನೊಂದಿಸಿ ಕರಾವಳಿಯಲ್ಲಿ ಬಹಳ ದೂರದವರೆಗಿರುವ ಪ್ರಾಂತ್ಯಗಳನ್ನು ಗುರುತಿಸಲಾಗುವ ಜ್ಯೋತಿಗಳನ್ನು ಎಮ್ಡನ್ ನಾವೆಯು ಆಗಿಂದಾಗ್ಯೆ ಬೆಳಗಿಸುತ್ತ ಕೆರೆಸಿನ ಎಣ್ಣೆಯ ಕೊಠಡಿಗಳು ಇರುವ ಪ್ರಾಂತ್ಯದಲ್ಲಿ ಗುಂಡುಗಳನ್ನು ಹಾರಿಸಿತು.

ಯುದ್ಧನಾವೆಯು ಬೆಳಗಿಸುತ್ತಿದ್ದ ಜ್ಯೋತಿಯಿಂದಲೂ ಕೆರೆಸಿನ ಎಣ್ಣೆಯ ಪ್ರಕಾಶದಿಂದಲೂ ಗುಂಡುಗಳ ನಿನಾದದಿಂದಲೂ ಮದ್ರಾಸಿನಲ್ಲಿ ವಿಶೇಷ ಕೋಲಾಹಲವು ಉಂಟಾಯಿತು. ಯುದ್ಧನಾವೆಯಿಂದ ಇದೆಲ್ಲ ಉಂಟಾಯಿತೆಂದು ತಿಳಿದವರಲ್ಲಿ ಕೆಲವರು ಕೋವಿಗಳ ಬಾಯಿಂದ ತಪ್ಪಿಸಿಕೊಳ್ಳುವ ಬಗೆ ಹೇಗೆಂದು ಅತ್ತಿತ್ತ ಓಡತೊಡಗಿದರು. ಹಲವರು ಧೈರ್ಯದಿಂದ ಕೋವಿಗಳ ಶಬ್ದವೇನೆಂತ ನೋಡಲು ಹೋದರು. ಮತ್ತೆ ಕೆಲವರು ಇದೇನೋ ಸಂಭ್ರಮದ ಪ್ರಕಾಶವೆಂತ ತಿಳಕೊಂಡು ಇದನ್ನು ನೋಡುವ ತವಕದಲ್ಲಿ ಹೋಗುತ್ತಿದ್ದರು. ಆದರೆ ಎಮ್ಡನ್ ನಾವೆಯು ಬೇಗನೆ ಹೋಗಿ ಕೋವಿಗಳ ಶಬ್ದ ಇತ್ಯಾದಿಗಳು ನಿಂತುಹೋದ್ದರಿಂದ ಜನರು ಬೇಗನೆ ಶಾಂತವಾದರು.

ಕೆಲವು ಲಕ್ಷ ರೂಪಾಯಿಗಳ ಎಣ್ಣೆಯು ಸುಟ್ಟುಹೋದದ್ದಲ್ಲದೆ ಇತರ ವಿಶೇಷ ನಷ್ಟವೇನೂ ಉಂಟಾಗಲಿಲ್ಲ. ಮೂವರು ಮಡಿದು ಹೋಗಿರುವರು. ಕೆಲವರು ಘಾಯಪಡೆದಿರುವರು. ರೇವಿನಲ್ಲಿ ಉಂಟಾದ ನಷ್ಟವು ರೂ. ೫೦೦೦ಕ್ಕೆ ಮಿಕ್ಕಿ ಹೋಗದು. ಹ್ಯಾಕೋರ್ಟಿನ ದೀಪಸ್ತಂಭ ಇತ್ಯಾದಿಗಳು ಭದ್ರವಾಗಿವೆ. ಹ್ಯಾಕೋರ್ಟಿನ ವಠಾರದ ಸುತ್ತಲಿನ ಗೋಡೆಯ ಕೆಲವು ಕಡೆಗಳಲ್ಲಿ ಗುಂಡು ಬಿದ್ದಿರುವುದು. ಇದೇ ರೀತಿ ಕೆಲವು [illegible]ಣಗಳಿಗೆ ಅಲ್ಪಸ್ವಲ್ಪ ಹಾನಿಯುಂಟಾಗಿರುವುದು. ಎಮ್ಡನಿನ ಕೋವಿಯಿಂದ ಹಾರಿಸಲ್ಪಟ್ಟ ಗುಂಡು ಮಾತ್ರ ಪಟ್ಟಣದ ಹಲವು ಭಾಗಗಳಲ್ಲಿ ಬಿದ್ದಿರುವವು.

ಎಮ್ಡನ್ ನಾವೆಯು ಪುದುಚೇರಿಯಿಂದ ಹಾದುಹೋಗಿರುವದು. ಪುದುಚೇರಿಯಲ್ಲಿ ಹಾನಿಯೇನೂ ಮಾಡಿದ್ದಿಲ್ಲ.

ಬರುವ..

ಮಂಗಳೂರು ಮೊಗೇಯರರ ಶ್ರೀ ಜ್ಞಾನೋದಯ ಸಮಾಜವು.

ಈ ಸಮಾಜದ ನಾಲ್ಕನೇ ವಾರ್ಷಿಕ ವರದಿಯಲ್ಲಿ ತೋರಿಬರುವ ಕಾರ್ಯವಿವರವು ಸಂತೋಷಕರವಾಗಿರುವುದು. ಈ ಸಮಾಜವು ಬಾಳಿ ಮೊಗೇಯರರ ಜಾತಿಯ ಅಭಿವೃದ್ಧಿ ಪ್ರಯತ್ನಗಳು ನಿರಂತರವಾಗಿ ನಡಿಯಬೇಕಾದ ಅಗತ್ಯವುಳ್ಳ ಸಾಧನೆಯ ಸರಿಯಾದ ದಾರಿಯನ್ನು ಈ ಸಮಾಜದವರು ಕಂಡುಹಿಡಿದಿರುವರು. ಸಮಾಜದ ದೀನಸ್ಥಿತಿಗೆ ಕಾರಣವೇನು, ಇಂಥಾ ದೀನಸ್ಥಿತಿಯನ್ನು ಹೇಗೆ ಹೋಗಗೊಳಿಸಬಹುದು, ಪರಸ್ಪರ ಪ್ರೀತಿವಿಶ್ವಾಸಗಳನ್ನು ತಮ್ಮ ಸಮುದಾಯದವರಲ್ಲಿ ಹೇಗೆ ಉಂಟುಮಾಡಬಹುದು ಮೊದಲಾದ ಮುಖ್ಯ ಸಂಗತಿಗಳನ್ನು ಪರ್ಯಾಲೋಚಿಸಿಕೊಂಡು ಜ್ಞಾನೋದಯ ಸಮಾಜದವರು ತಮ್ಮ ಜಾತಿಯ ಉನ್ನತಿಯ ಸಾಧನೆಯನ್ನು ಕೈಕೊಂಡಿರುವರು. ಮೊಗೇಯರರಲ್ಲಿ ಕೇಡಿಗೆ ಮುಖ್ಯಕಾರಣವು ಅವರಲ್ಲಿ ಬೇರೂರಿಕೊಂಡಿರುವ ಮದ್ಯಪಾನ ಅಭ್ಯಾಸವಾಗಿದೆ. ಈ ಅಭ್ಯಾಸವನ್ನು ಕಿತ್ತುಬಿಡುವುದು ಜ್ಞಾನೋದಯ ಸಮಾಜದ ಪ್ರಥಮ ಉದ್ದೇಶವಾಗಿರುವುದು. ಈ ಸಮಾಜಕ್ಕೆ ಸೇರುವ ಮೆಂಬರರು ತಾವು ಮದ್ಯಪಾನವನ್ನು ಎಂದೂ ಮಾಡೆವು ಎಂಬ ಪ್ರತಿಜ್ಞೆಯನ್ನು ಮಾಡಿಕೊಳ್ಳಬೇಕಾಗಿರುವುದು. ಇಂಥಾ ಪ್ರತಿಜ್ಞೆಯನ್ನು ಹಾಕಿಕೊಂಡ ಮೆಂಬರರು ಜ್ಞಾನೋದಯ ಸಮಾಜದಲ್ಲಿ 104 ಮಂದಿ ಇರುವರು. ಮೆಂಬರರು ತಮ್ಮ ಜಾತಿ ಸಮುದಾಯದವರು ಇರುವ ಗ್ರಾಮಗಳಿಗೆ ಹೋಗಿ ಮದ್ಯಪಾನ ನಿಷೇಧವನ್ನು ಬೋಧಿಸುತ್ತಿದ್ದಾರೆ. ಜ್ಞಾನೋದಯ ಸಮಾಜದವರು ಮೊಗೇಯರರ ಅಭಿವೃದ್ಧಿ ಬಗ್ಗೆ ಕೈಕೊಂಡಿರುವ ಎರಡನೇ ಸಾಧನವು ತಮ್ಮ ಸಮಾಜದವರಲ್ಲಿ ವಿದ್ಯಾಪ್ರಸರಣೆಯಾಗಿರುವುದು. ಈ ಬಗ್ಗೆ ರಾತ್ರಿ ಶಾಲೆಯನ್ನು ಸ್ಥಾಪಿಸಿರುವರಲ್ಲದೆ ಆಯಾ ಗ್ರಾಮಗಳಲ್ಲಿ ಮೊಗೇಯರರ ಬಗ್ಗೆ ಶಾಲೆಗಳು ಸ್ಥಾಪಿಸಲ್ಪಡುವಂತೆ ಜ್ಞಾನೋದಯ ಸಮಾಜದವರ ಪ್ರಯತ್ನ ನಡಿಯುತ್ತಿರುವುದು. ಬೈಕಂಪಾಡಿಯಲ್ಲಿ ಬಬ್ಬರಿಯ ದೈವದ ಭಂಡಾರದಿಂದ ಕೆಲವು ಹಣವನ್ನು ಅಲ್ಲಿ ಒಂದು ಶಾಲಾ ಕಟ್ಟಡವನ್ನು ಕಟ್ಟಿಸುವುದರಲ್ಲಿ ವಿನಿಯೋಗಿಸಿರುವರೆಂತ ವರದಿಯಿಂದ ತೋರಿಬರುತ್ತದೆ. ಮೇಲು ಜಾತಿಯ ಬ್ರಾಹ್ಮಣರಲ್ಲಿ ಹಲವರು ತಮ್ಮ ದೇವಸ್ಥಾನಗಳ ಹಣವನ್ನು ದುರ್ವಾಜ್ಯಗಳಲ್ಲಿ ವಿನಿಯೋಗಿಸುತ್ತಿರುವಾಗ ಮೊಗೇಯರರು ಬಬ್ಬರಿಯ ದೈವದ ಭಂಡಾರದ ಹಣ ಸಹಾಯದಿಂದ ವಿದ್ಯಾಶಾಲೆಯನ್ನು ಸ್ಥಾಪಿಸಿದರೆಂಬ ವಿಷಯವು ಬಹಳ ಶ್ಲಾಘನೀಯವಾಗಿರುವುದು. ಶಿಕ್ಷಣ ಪ್ರಸರಣೆಯನ್ನು ವಾಚನಮಂದಿರ ಇತ್ಯಾದಿಗಳ ಮೂಲಕ ಸಹ ಜ್ಞಾನೋದಯ ಸಮಾಜದವರು ಸಾಧಿಸುತ್ತಿದ್ದಾರೆ. ಜ್ಞಾನೋದಯ ಮಂದಿರವನ್ನು ಕಟ್ಟಿಸಲು ಪ್ರಾರಂಭಿಸಿರುವರೆಂತ ವರದಿಯಿಂದ ತೋರಿಬರುವುದು. ರಾವ್ ಬಹದ್ದೂರ್ ಮ॥ ರಾ॥ ರಾ॥ ಸಮಂಪಳ್ಳಿ ಸುಬ್ಬರಾವ್‌ರವರು ಈ ಮಂದಿರದ ಅಸ್ತಿವಾರದ ಕಲ್ಲನ್ನು ಇಟ್ಟ ಸಂಭ್ರಮದ ವೃತ್ತಾಂತವು ಸಹ ಈ ವರದಿಯಲ್ಲಿರುವುದು. ರೂ. 1100 ಮಾತ್ರ ಈ ಮಂದಿರದ ಬಗ್ಗೆ ವಾಗ್ದಾನ ಮಾಡಲ್ಪಟ್ಟದೆಂದೂ ಇನ್ನು ಮಂದಿರದ ಕೆಲಸವನ್ನು ಪೂರೈಸಲಿಕ್ಕೆ ರೂ. 1000ವಾದರೂ ಬೇಕಾದೀತೆಂಬುದಾಗಿಯೂ ವರದಿಯಲ್ಲಿ ಸೂಚಿಸೋಣಾಗಿರುವದು. ಜ್ಞಾನೋದಯ ಸಮಾಜದ ಮಂದಿರದ ಸ್ಥಾಪನೆಯ ಈ ಕಾರ್ಯಕ್ಕೆ ಮೊಗೇಯರರು ತಮ್ಮ ಪೂರ್ಣ ಸಹಕಾರವನ್ನೀಯುವುದು ಅಗತ್ಯವಾಗಿರುವುದು. ಈ ಸಮಾಜದವರು ತಮ್ಮ ಜಾತಿಯವರ ಸಹಾಯಾರ್ಥವಾಗಿ ಪರಸ್ಪರ ಸಹಾಯಕ ಲೇವಾದೇವಿ ಸಂಘವನ್ನು ಸ್ಥಾಪಿಸಿರುತ್ತಾರೆ. ಈ ಸಂಘದವರು ಸಾಲಗಳ ವಸೂಲಿ ತೊಂದರೆಯಿಲ್ಲದೆ ರೂ. 2275—0—0 ವಹಿವಾಟವನ್ನು ನಡಿಸಿರುವರು. ಈ ಸಮಾಜದ ಕಾರ್ಯ ಚಟುವಟಿಕೆಯಲ್ಲಿ ಆಸಕ್ತರಾಗಿರುವ ಇದರ ಕಾರ್ಯದರ್ಶಿ ರಾ| ಮೋಹನಪ್ಪ ತಿಂಗಳಾಯರ ಶ್ರಮವು ಪ್ರಶಂಸನೀಯವಾಗಿರುವುದು. ಇಂಥಾ ಆಸಕ್ತಿಯು ಸಮಾಜದ ಇನ್ನೂ ಕೆಲವು ಮೆಂಬರರಲ್ಲಿ ತಲೆದೋರಿತೆಂದರೆ ಜ್ಞಾನೋದಯ ಸಮಾಜದ ಅಭಿವೃದ್ಧಿಯ ಪ್ರಯತ್ನಗಳು ನೆರವೇರುವುದರಲ್ಲಿ ಅನುಮಾನವಿರದು.

ಪ್ಯಾರಿಸ್ ಪಟ್ಟಣ.

ಇದು ಫ್ರಾನ್ಸ್ ದೇಶದ ರಾಜಧಾನಿಯು. ಇದು ಭೂಲೋಕದ ಅಮರಾವತಿಯೇ ಸರಿ. ಪ್ರಪಂಚದಲ್ಲಿ ವೈಶಾಲ್ಯದೊಳಗೂ ಜನಸಂಖ್ಯೆಯೊಳಗೂ ಲಂಡನ್ ಪಟ್ಟಣವು ದೊಡ್ಡದಾಗಿದ್ದರೂ ಈ ಪ್ಯಾರಿಸ್ ಪಟ್ಟಣವನ್ನು ಸರಿಹೋಲುವಂಥ ನಗರವು ಪ್ರಪಂಚದಲ್ಲಿ ಮತ್ತೊಂದಿಲ್ಲ. ಈ ಪಟ್ಟಣದಲ್ಲಿ ವಾಸವಾಗಿರುವ ಜನರ ಸಂಖ್ಯೆಯು ೨,೬೬೯,೭೬೪. ಇದು ಅಭೇದ್ಯವಾದ ಉತ್ತಮದುರ್ಗದಿಂದ ಸಂರಕ್ಷಿಸಲ್ಪಟ್ಟದೆ. ಈ ಕೋಟೆಯು ೫೪ ಕೋಟಿ ರೂಪಾಯಿಗಳ ವೆಚ್ಚದಿಂದ ಕಟ್ಟಲ್ಪಟ್ಟದೆ. ೯೪ ಬುರುಜುಗಳನ್ನು ಹೊಂದಿರುವ ಈ ಕೋಟೆಯ ಗೋಡೆಯು ಪಟ್ಟಣದ ಸುತ್ತಲೂ ಇದೆ. ಈ ಗೋಡೆಯ ಮಂದವು ೧೯ ಅಡಿ. ಎತ್ತರವು ೪೧ ಅಡಿ. ಇದರಲ್ಲಿ ೧೭ ಕೋಟೆಗಳು ಉನ್ನತವಾದ ಸ್ಥಾನಗಳಲ್ಲಿದ್ದು ೧ ಸಾವಿರ ಫಿರಂಗಿಗಳು ಅವುಗಳ ಮೇಲೆ ಇಡಲ್ಪಟ್ಟು ಪಟ್ಟಣವನ್ನು ಕಾಪಾಡುತ್ತಿರುವವು. ಈ ಕೋಟೆಯ ಮಗ್ಗುಲಲ್ಲಿ ೧೭ ಗಜಗಳ ಅಗಲದ ಕಂದಕವು ಪಟ್ಟಣದ ಶ್ರೀಯ ಒಡ್ಯಾಣದಂತೆ ಸುತ್ತಲೂ ಆವರಿಸಿಕೊಂಡಿದೆ. ಈ ಕೋಟೆಗಳೆಲ್ಲಾ ಆವರಿಸಿಕೊಂಡಿರುವ ಪ್ರದೇಶದ ಒಟ್ಟು ವೈಶಾಲ್ಯವು ೪೦೦ ಚದರ ಮೈಲುಗಳಾಗುವವು. ಶ್ರೇಷ್ಠರಾದ ೫೦ ಸಾವಿರ ಸೈನಿಕರು ಯಾವಾಗಲೂ ಕೋಟೆಯಲ್ಲಿ ವಾಸವಾಗಿರುವರು.

ಈ ಶ್ರೇಷ್ಠ ಪಟ್ಟಣವನ್ನು ಒಂದಾವೃತ್ತಿ ಸಂದರ್ಶಿಸಿದವರು ತಮ್ಮ ತಮ್ಮ ಜೀವಾಂತವಾಗಿ ಅದನ್ನು ಮರೆಯಲಾರರು. ಸೀನ್ ಎಂಬ ನದಿಯು ಪ್ಯಾರಿಸ್ ಪಟ್ಟಣದ ನಡುವೆ ಹರಿಯುತ್ತಿರುವುದರಿಂದ ಆ ಪಟ್ಟಣಕ್ಕೆ ಅತುಲವಾದ ಸೌಂದರ್ಯವು ಉಂಟಾಗಿದೆ. ಈ ಪಟ್ಟಣವನ್ನು ಸಂದರ್ಶಿಸಿದ ರಾಜರು, ಕವಿಗಳು, ಗ್ರಂಥಕರ್ತರು, ವರ್ತಕಶ್ರೇಷ್ಠರು, ಕಲಾವಿದರು ಮೊದಲಾದ ಯಾರೊಬ್ಬರೂ ತನ್ನ ಜೀವಿತಕಾಲದ ಶೇಷವನ್ನೆಲ್ಲಾ ಈ ನಗರದಲ್ಲೇ ಕಳೆಯಬೇಕೆಂದು ಆಸೆಪಡದೆ ಹೋಗುವುದಿಲ್ಲ. ಈ ಪಟ್ಟಣವನ್ನು ನವರತ್ನ ಖಚಿತ ಸುವರ್ಣಾಭರಣಕ್ಕೆ ಹೋಲಿಸಬಹುದು. ಇಲ್ಲಿರುವ ವರಸೆಯಾದ ಪ್ರಾಸಾದಪಂಗ್ತಿಗಳ ವೈಭವವೂ ಮಧ್ಯೆ ಮಧ್ಯೆ ಇರುವ ಉಪವನರಾಜಿಗಳ ಸೊಂಪೂ, ಬೀದಿಗಳ ಸೌಂದರ್ಯವೂ, ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿರುವ ಶಿಲಾಪ್ರತಿಮೆಗಳ ಸೊಗಸೂ, ಇವೆಲ್ಲಕ್ಕೂ ಮಿಗಿಲಾಗಿ ಅಲಂಕೃತರಾಗಿ ಸಂಚರಿಸುತ್ತಿರುವ ಸ್ತ್ರೀಪುರುಷರ ವಿಲಾಸವೂ ಇವೆಲ್ಲವೂ ಸೇರಿ, ಆ ಪಟ್ಟಣವನ್ನು ಜಗತ್ತಿನ ಸಕಲ ಭೋಗಭಾಗ್ಯಗಳ ತವರೂರೆನಿಸುವುದು. ಆದುದರಿಂದ ಒಬ್ಬಾನೊಬ್ಬ ಭಾರತೀಯನು ಇದನ್ನು ನೋಡಿ ಇದು "ತಾಜಮಹಲ್" ಎಂದು ಹೇಳಿರುವನು. (ಎಂದರೆ ದೇದೀಪ್ಯಮಾನವಾಗಿ ಹೊಳೆಯುತ್ತಿರುವ ಪ್ರಾಸಾದವೆಂದು ಅರ್ಥವು). ನಮ್ಮ ಪುರಾಣಗಳಲ್ಲಿ ವರ್ಣಿಸಲ್ಪಟ್ಟಿರುವ ಅಮರಾವತಿಯಂತೆಯೇ ಇದರ ಸೌಂದರ್ಯಸಂಪತ್ತಿಗಳು ವಿರಾಜಿಸುತ್ತಿರುವ ಕಾರಣ, ಇದು ಜಗತ್ತನ್ನೆಲ್ಲಾ ದಿಗ್ಭ್ರಮೆಗೊಳಿಸುವ ಮೋಹಿನೀ ವೇಷದಂತೆ ಒಪ್ಪುತ್ತಿರುವುದು. ಇದು ಪ್ರಪಂಚದ ಎಲ್ಲಾ ಪಟ್ಟಣಗಳಿಗಿಂತಲೂ ಧನಸಂಪತ್ತಿನಲ್ಲಿ ಮುಂದಾದುದೆಂದು ಹೇಳಬಹುದು. ಇಲ್ಲಿನ "ಬ್ಯಾಂಕ್ ಆಫ್ ಫ್ರಾನ್ಸ್" ಎಂಬ ಧನಾಗಾರದಲ್ಲಿ ೨೮೫ ಕೋಟಿ ರೂಪಾಯಿಗಳು ಸುರಕ್ಷಿತ ಧನವಾಗಿರುವುವು. ಇದು ಇಂಗ್ಲೆಂಡ್, ಜರ್ಮನಿ, ಇಟಲಿ, ಆಸ್ಟ್ರಿಯಾ ಬ್ಯಾಂಕುಗಳಲ್ಲಿರುವ ರಿಜರ್ವ್ ಫಂಡೆಲ್ಲವನ್ನೂ ಕೂಡಿಸಿದರೆ ಆಗುವ ಮೊತ್ತಕ್ಕಿಂತಲೂ ಹೆಚ್ಚಿನದಾಗುವುದೆಂಬುದನ್ನು ಗಮನಿಸಿದರೆ ಇದರ ಭಾಗ್ಯವೆಷ್ಟೆಂಬುದು ಗೊತ್ತಾಗುವುದು. ಸಕಲ ರಾಷ್ಟ್ರದವರಿಗೂ ಸುರಕ್ಷಿತ ಧನವನ್ನಿಡಲು ಈ ಪ್ಯಾರಿಸೇ ಮುಖ್ಯ ಸ್ಥಳವಾಗಿರುವುದು. ಮಾನುಷದೇಹದಲ್ಲಿ ಹೃದಯವು ಹೇಗೆ ಮುಖ್ಯ ಸ್ಥಾನವಾಗಿರುವುದೋ ಹಾಗೆ ಈಗ್ಗೆ ಪ್ರಪಂಚಕ್ಕೆಲ್ಲ ಈ ಪ್ಯಾರಿಸೇ ವರ್ತಕತನಕ್ಕೆ ಪ್ರಾಧಾನ್ಯವನ್ನು ವಹಿಸಿರುತ್ತದೆ. ಈ ಪ್ಯಾರಿಸಿನಲ್ಲಿ ಬಡ್ಡಿಯು ನೂರಕ್ಕೆ ಮೂರರಂತೆ ಇರುತ್ತದೆ. ಈ ದರವು ಯಾವಾಗಲೂ ವ್ಯತ್ಯಸ್ತವಾಗುವುದಿಲ್ಲ. ಪ್ಯಾರಿಸು ಇತರ ದೇಶದವರಿಗೆ ತಾನು ಸಾಲವನ್ನು ಕೊಡುತ್ತಿರುವುದೇ ಹೊರತು ಇತರರಿಂದ ಯಾವಾಗಲೂ ತಾನು ಸಾಲವನ್ನು ತಂದರಿಯದು. ಅಮೇರಿಕಾದಲ್ಲಿ ಹೊಸದಾಗಿ ನಿರ್ಮಿಸಲ್ಪಟ್ಟ ಪನಾಮಾಕಾಲ್ವೆಯನ್ನು ಮಾರಿದಾಗ ಅಲ್ಲಿನ ಯುನೈಟೆಡ್ ಸ್ಟೇಟ್ಸಿನವರು ಫಿಲಿಪೈನ್ ದ್ವೀಪಗಳ ಸಂಬಂಧದಲ್ಲಿ ಅದಕ್ಕೆ ಕೊಡಬೇಕಾದ ೧೨ ಕೋಟಿ ರೂಪಾಯಿಗಳನ್ನೂ, ಸ್ಪೈಯಿನ್ ದೇಶದವರು ಕೊಡಬೇಕಾದ ೬ ಕೋಟಿ ರೂಪಾಯಿಗಳನ್ನೂ ಈ ಪ್ಯಾರಿಸ್ ಪಟ್ಟಣವೇ ಸಾಲವಾಗಿ ಕೊಟ್ಟು ತನ್ನ ಸಿರಿವಂತಿಗೆಯನ್ನು ವ್ಯಕ್ತಪಡಿಸಿತು. ಪ್ಯಾರಿಸಿನ ಬೇಂಕುಗಳಲ್ಲಿ ವರ್ಷ ೧ಕ್ಕೆ ೭೫,೦೦೦,೦೦೦,೦೦೦ ರೂಪಾಯಿಗಳ ವ್ಯವಹಾರ [illegible] ಯೆಂಬುದನ್ನು ಕೇಳಿ ಯಾರು ತಾನೇ ಆಶ್ಚರ್ಯಪಡುವುದಿಲ್ಲ ? [illegible] ಜರ್ಮನರಂಥ ಅಸೂಯಾಪರರ ಕಣ್ಣು ಬಿದ್ದದ್ದು ದೀನಾಶ್ಚರ್ಯ?

ಪ್ರ. ಪ್ರ.

ಪೂರ್ಣ ಪ್ರಾಥಮಿಕ ವಿದ್ಯಾಶಾಲೆ.

ಉದ್ಯೋಗಸ್ಥರೊಡನೆ ಮಾತಾಡುವದೆಂಬದೇ ದೊಡ್ಡ ಗೌರವ. ಅದ ... ಡನೆ ಇಂಗ್ಲಿಷ್ ಭಾಷೆಯಲ್ಲಿ ಸಂಭಾಷಿಸುವದೆಂದರೆ ಏನು ಹೇಳಲಿ? ಹಾಗೆ ಮಾತಾಡಬಲ್ಲ ಮನುಷ್ಯನು ತನ್ನ ಗ್ರಾಮದಲ್ಲಿ ಉಚ್ಚನೆಂದೆಣಿಸಲ್ಪಡುವನು. ಈ ಬಹುಮಾನಕ್ಕಾಗಿಯೇ ಹಳ್ಳಿಪಳ್ಳಿಗಳ ಧನಿಕರಲ್ಲಿ ಅಧಿಕಾಂಶದವರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವದು. ವಿದ್ಯಾರ್ಥಿಗಳ ಹೆತ್ತವರು ಲೆಕ್ಕ, ಚರಿತ್ರೆ, ಆರೋಗ್ಯಶಾಸ್ತ್ರ, ಕೃಷಿಶಾಸ್ತ್ರ, ದೇಹಶಾಸ್ತ್ರ, ರಸಾಯನಶಾಸ್ತ್ರ, ಚಿತ್ರಲೇಖನ, ಭೂಮಿತಿಶಾಸ್ತ್ರ ಮುಂತಾದವುಗಳನ್ನು ಮಕ್ಕಳು ಎಷ್ಟರ ಮಟ್ಟಿಗೆ ತಿಳಿದಿರುವರೆಂಬದನ್ನು ವಿಚಾರಿಸುವದಿಲ್ಲ; ಅವರ ಮುಖ್ಯೋದ್ದೇಶವು ತಮ್ಮ ಮಕ್ಕಳು ಇಂಗ್ಲಿಷ್ ಭಾಷೆಯಲ್ಲಿ ಸಂಭಾಷಿಸಲು ಬಲ್ಲವರಾಗಬೇಕೆಂಬುದೊಂದೇ. ಆದರೆ ತಮ್ಮ ವಾಂಛಿತವು ಯಾವ ತರದ ಶಾಲೆಯಿಂದ ಅಂದರೆ ಸೆಕೆಂಡರಿ ಶಾಲೆಯಿಂದಲೋ, ಅಥವಾ ಕಂಪ್ಲೀಟ್ ಎಲಿಮೆಂಟರಿ ಶಾಲೆಯಿಂದಲೋ, ಯಾವದರಿಂದ ಪ್ರಾಪ್ತಿಯಾದೀತೆಂಬದನ್ನರಿಯರು. ಆರಂಭದಿಂದಲೇ ಇಂಗ್ಲಿಷನ್ನು ಕಲಿಸತೊಡಗುವ ಸೆಕೆಂಡರಿ ಶಾಲೆಗೆ, ತಕ್ಕಮಟ್ಟಿಗೆ ಎರಡು ಮೂರು ವರುಷಗಳ ವರೆಗಾದರೂ ತನ್ನ ಮಗನು ಹೋದರಾದೀತೆಂಬ ಮನಸ್ಸು ಬಡವನಿಗೆ ಕೂಡಾ ಇರುವದು. ಆದರೆ ಅಲ್ಲಿನ ಹೆಚ್ಚಿನ ದರದ ಫೀಸು ಮತ್ತು ಪಟ್ಟಣ ನಿವಾಸದ ಖರ್ಚು ತಿಳಿದಾಗ ತಲೆತಿರುಗ ತೊಡಗಿ "ಯಾರೂ ಇಲ್ಲದ ಕಾಲಕ್ಕೆ ಅಪ್ಪನ ಸೊಸೆ" ಎಂಬಂತೆ ಕಂಪ್ಲೀಟ್ ಎಲಿಮೆಂಟರಿಶಾಲೆಗೆ ಕಳುಹಿಸಬೇಕೆಂದು ನಿರ್ಧರಿಸಿಕೊಳ್ಳುವನು. ಅಷ್ಟರಲ್ಲಿ ಸಮೀಪಸ್ಥವಾದ ಬೋರ್ಡುಶಾಲೆಯು ನೆನಪಿಗೆ ಬರುವದು. "ಒಳ್ಳೇದು. ಇಲ್ಲಿ ಹೇಗೂ ಸಂಬಳ ಕೊಡಬೇಕಾದ್ದಿಲ್ಲ. ಇಲ್ಲಿ ಕಲಿತು ಮುಗಿಯಲಿ! ಆಮೇಲೆ ಧೂರದ ಶಾಲೆಗೆ ಹೋಗಬಹುದು." ಎಂದು ನಿರ್ಧರಿಸಿ ಅಲ್ಲಿಗೆ ಕಳುಹಿಸುವನು. "ಇಲ್ಲಿ ಸದ್ಯದಲ್ಲೇ ನಾಲ್ಕನೇ ದರ್ಜೆ ಇಡುವ ಸಂಭವವಿದೆ. ಮೂರನೇ ದರ್ಜೆಯ ಪರೀಕ್ಷೆ ಆದಮೇಲೆ ನಾನು ಅದಕ್ಕಾಗಿಯೇ ನಾಲ್ಕನೇ ದರ್ಜೆಯ ಪಾಠಗಳನ್ನು ಕಲಿಸ ತೊಡಗಿದ್ದೇನೆ." ಎಂದು ಆ ಶಾಲೆಯ ಉಪಾಧ್ಯಾಯರು ಹೇಳುವಾಗ್ಗೆ ಹುಡುಗನ ರಕ್ಷಕನಿಗೂ "ಇರಲಿ! ಹೇಗೂ ಸಂಬಳದ ತೊಡಕು ಇಲ್ಲವಲ್ಲಾ!! ಇಲ್ಲಿ ಮುಂದಕ್ಕೂ ಸರ್ಟಿಫಿಕೇಟು ಸಿಕ್ಕದಿದ್ದರೆ ಮತ್ತೆ VI ದರ್ಜೆಯ ಶಾಲೆಗೆ ಒಂದು ವರ್ಷ ಕಳುಹಿಸಿದರೆ ಸರಿ" ಎಂದು ತೋರುವದು. ಆಮೇಲೆ IV ದರ್ಜೆಯ ಶಾಲೆಗೆ ಸಂದರ್ಭಾನುಸಾರವಾಗಿ ಒಂದು ವರುಷವೋ ಅಥವಾ ಮೂರು ವರುಷವೋ ಹೋಗಿ ಸರ್ಟಿಫಿಕೇಟು ಹೊಂದಿದಮೇಲೆ ಐದನೇ ದರ್ಜೆಗೆ ಸೇರುವ ಯೋಚನೆಯು ವಿದ್ಯಾರ್ಥಿಯಲ್ಲಿ ಅಂಕುರಿಸುವದು. "ಇಷ್ಟು ಗಟ್ಟಿಗನಾದ ಮಗನನ್ನು ಮನೆಯಲ್ಲಿ ಕುಂದ್ರಿಸಿ ಕೆಡಿಸಬಾರದು" ಎಂಬ ಮಾತು ನೆರೆಹೊರೆಯವರಿಂದಲೂ ಆ ಕಾಲದಲ್ಲಿ ಹೊರಡುವದು. ಇಂಗ್ಲಿಷ್ ಕಲಿಸಬೇಕೆಂಬ ಇಚ್ಛೆಯು ಬೂದಿಯೊಳಗಿದ್ದ ಕೆಂಡದಂತೆ ಇವನಲ್ಲೂ ಇದ್ದೇ ಇತ್ತು. ಈಗ ಕಂಪ್ಲೀಟ್ ಎಲಿಮೆಂಟರಿ ಶಾಲೆಗೆ ಹೋಗಿ ವಿಚಾರಿಸುವಾಗ್ಗೆ ಐದನೇ ದರ್ಜೆಗೆ ಸೇರಲು ಸರಿಯಾದ ಕಾಲವಲ್ಲವೆಂದು ತಿಳಿಯಬಂತು. "ನಾಲ್ಕನೇ ದರ್ಜೆಯ ಸರ್ಟಿಫಿಕೇಟು ಇರುವ ನನ್ನ ಹುಡುಗನು ಸಂಬಳ ದಂಡಾ ತೆತ್ತುಕೊಂಡು ಅದೇ ದರ್ಜೆಯಲ್ಲಿ ಯಾಕೆ ಇರಬೇಕು, ಇಲ್ಲಿಯ ನಾಲ್ಕನೇ ದರ್ಜೆಯ ಹುಡುಗರು ಐದನೇ ದರ್ಜೆಗೆ ಬೀಳುವ ಸಮಯ ನೋಡಿಕೊಂಡು ಆಗಲೇ ಕಳುಹಿಸುವೆನು" ಎಂದು ಹೇಳಿ ಹೊರಟು ಹೋಗಿ, ನಾಲ್ಕಾರು ತಿಂಗಳನಂತರ ಆ ಶಾಲೆಗೆ ಹುಡುಗನನ್ನು ಕಳುಹಿಸುವನು. "ನಮಗೆ ಭಿನ್ನರಾಸಿ ಕಲಿಸಲಿಲ್ಲ; ಮಗ್ಗಿ ಬರುವದಿಲ್ಲ; ಲೆಕ್ಕದ ರೀತಿ ಮರೆತುಹೋಗಿದೆ; ಹೇಳಿದ್ದನ್ನು ಬರೆಯುವದಕ್ಕೆ ಬಾರದು; ಓದಲು ಅಭ್ಯಾಸ ಬಿಟ್ಟುಹೋಗಿ ತೊಡಕುತ್ತದೆ; ಭೂಗೋಳಶಾಸ್ತ್ರ ಕಲಿಸಲಿಕ್ಕೆ ನಮ್ಮ ಶಾಲೆಯಲ್ಲಿ ಪಟವೇ ಇರಲಿಲ್ಲ; ಆರೋಗ್ಯಸೂತ್ರಗಳನ್ನು ನಮಗೆ ಕಲಿಸಲೇ ಇಲ್ಲ; ಇಂಗ್ಲಿಷು ಉಪಾಧ್ಯಾಯರಿಗೇ ಬಾರದು. ಆದರೆ ಅವರು ತಾನೂ ಕಲಿತುಕೊಂಡು ನಮಗೂ ಕಲಿಸುತ್ತಾರೆ" ಎಂಬ ಉತ್ತರಗಳು ಸಂದರ್ಭಾನುಸಾರವಾಗಿ, ಪ್ರಶ್ನೆಗಳಿಗೆ ವಿದ್ಯಾರ್ಥಿಯಿಂದ ದೊರೆಯುವವು.

ಕಂಪ್ಲೀಟ್ ಎಲಿಮೆಂಟರಿ ಶಾಲೆಯ ಉಪಾಧ್ಯಾಯನೇನುಮಾಡಬೇಕು? ಸರ್ಟಿಫಿಕೇಟು ಇರುವ ಹುಡುಗನನ್ನು ಅವನ ಯೋಗ್ಯತೆಗೆ ಅನುಗುಣವಾಗಿರುವ II-III ದರ್ಜೆಗೆ ಸೇರಿಸಿಕೊಳ್ಳುವದು, ಆ ಸರ್ಟಿಫಿಕೇಟಿಗೆ ಅವಮಾನಮಾಡಿದಂತಾಗುವದು. ಹುಡುಗನ ಯೋಗ್ಯತೆಯನ್ನು ಲೆಕ್ಕಿಸದೆ, ರಕ್ಷಕನ ಅಪೇಕ್ಷೆ ಮೇರೆಗೆ V ದರ್ಜೆಗೆ ಸೇರಿಸಿಕೊಳ್ಳಲು, ಇಡೀ ದರ್ಜೆಯು ಕೆಟ್ಟುಹೋಗಿ ಸಂದರ್ಶನಾಧಿಕಾರಿಗಳ ತಾಡನೆ ತರ್ಜನೆಗೊಳಗಾಗಬೇಕಾಗುವದೆಂಬ ಭಯ. ಎರಡು ಮಾರ್ಗಗಳನ್ನೂ ತ್ಯಜಿಸಿ ಹುಡುಗನನ್ನು IV ದರ್ಜೆಯಲ್ಲೇ ಇಟ್ಟುಬಿಡುವದು ಉಭಯತ ಶ್ರೇಯಸ್ಕರವಾಗಿ ತೋರಿ ಹಾಗೇ ಮಾಡಬೇಕಾಗುವದು.

ಹೀಗೆ ಪುನಃ ನಾಲ್ಕನೇ ದರ್ಜೆಗೆ ಸೇರಿದವರೂ ಕ್ರಮ ತಪ್ಪದೆ ಕಲಿತುಕೊಂಡು ಬಂದ ಅದೇ ಶಾಲೆಯ ಮಕ್ಕಳು ಸರ್ವರೂ ತಿಳಿದಿರುವ ಪ್ರಮೇಯಗಳು ಈ ಹುಡುಗನು ಎಂದೂ ಕೇಳಿದವುಗಳೇ ಅಲ್ಲ. ಈ ಶಾಲೆಯ ಉಪಾಧ್ಯಾಯರುಗಳು ಉಪಯೋಗಿಸುವ ಮಾತುಗಳೇ ಈತನಿಗೆ ತಿಳಿಯುವ... ಅವರು ಹೇಳುವ ಗಿಡ, ಮರ, ಊರು, ಜನ, ಭಾವ, ಲೋಹ, ಆಕೃತಿ, ಮುಂತಾದ ಪ್ರತಿಯೊಂದು ಜಾತಿಯ ಶಬ್ದವೂ ಈತನನ್ನು ಗಲಿಬಿಲಿಪಡಿಸುವದು. ನಾಲ್ಕನೇ ದರ್ಜೆಯಲ್ಲಿ ಒಬ್ಬ ಹುಡುಗನಿಗಾಗಿ ಮಗ್ಗಿ, ಟವಣಿ, ಅಕ್ಷರ ಸಂಯೋಜನಾದಿಗಳನ್ನು ಬೋಧಿಸಲು ಉಪಾಧ್ಯಾಯರುಗಳಿಂದ ಸಾಧ್ಯವಿಲ್ಲ. ಅವೆಲ್ಲಾ ಅಂತಿರಲಿ. ವಿದ್ಯಾರ್ಥಿಯು ಬಯಸಿ ಬಂದ ಇಂಗ್ಲಿಷಿನ ಗತಿಯೇನು? ಕಂಪ್ಲೀಟ್ ಎಲಿಮೆಂಟರಿ ಶಾಲೆಯಲ್ಲೇ ಆರಂಭದಿಂದಲೂ ಕಲಿತ ಮಕ್ಕಳು II ದರ್ಜೆ ಮೊದಲ್ಗೊಂಡು ಶಬ್ದಗಳನ್ನು ಹೆಕ್ಕಿ ಕಲಿಯುತ್ತಾ ಬಂದವರೊಂದಿಗೆ "A, B, C, D ಮಾತ್ರ ಓದಲಿಕ್ಕೂ ಬರೆಯಲಿಕ್ಕೂ ಬರುತ್ತದೆ" ಎಂಬ ಇವನು ಏನು ಮಾಡಬಲ್ಲನು?

ಇಂಥಾ ವಿದ್ಯಾರ್ಥಿಗಳಲ್ಲಿ ಸಾಹಸವುಳ್ಳ ಒಬ್ಬಿಬ್ಬರು ಸಾಧನೆಮಾಡಿ ಭಗೀರಥ ಯತ್ನದಿಂದ ಮುಂದರಿಸಬಲ್ಲವರಿರಬಹುದಾದರೂ, ಹೆಚ್ಚಿನವರು ಒಂದೆರಡು ವರ್ಷ ಶಾಲೆಗೆ ನಡದಾಡಿ, ವಿದ್ಯೆಯನ್ನು ಸಾಕುಮಾಡುವದೇ ಲೇಸೆಂದು ಎಣಿಸುವರು.

ಬೇರೆ ಶಾಲೆಗಳಿಂದ ಕಂಪ್ಲೀಟ್ ಎಲಿಮೆಂಟರಿ ಶಾಲೆಗೆ ಹೋಗಿ ಸೇರಿ, ಏನೂ ತೊಡಕಿಲ್ಲದಂತೆ ವಿದ್ಯಾಭ್ಯಾಸವನ್ನು ಮುಂದರಿಯುವದು ಸಾಧ್ಯವಾಗಬೇಕಾದರೆ, ಒಂದು ಕಂಪ್ಲೀಟ್ ಎಲಿಮೆಂಟರಿ ಶಾಲೆಗೆ ಸಮೀಪಸ್ಥವಾಗಿರುವ ಇತರ ಎಲಿಮೆಂಟರಿ ಶಾಲೆಗಳೆಲ್ಲಾ ಕಂಪ್ಲೀಟ್ ಎಲಿಮೆಂಟರಿ ಶಾಲೆಯ ಮುಖ್ಯೋಪಾಧ್ಯಾಯರ ಮೇಲ್ವಿಚಾರಕ್ಕೊಳಪಟ್ಟು, ಆ ಶಾಲೆಯಲ್ಲಿ ಕಲಿಸಲ್ಪಡುವ ಪಾಠಗಳನ್ನು ಆ ಶಾಲೆಯಲ್ಲಿ ಆಯಾ ಕ್ಲಾಸುಗಳಿಗೆ ಆಯಾ ಕಾಲಗಳಲ್ಲಿ ಕಲಿಸುತ್ತಿರುವ ಪ್ರಕಾರವೇ ಕಲಿಸುತ್ತಿರಬೇಕೆಂದು ವಿದ್ಯಾ ಇಲಾಖೆಯವರು ವಿಧಿಸಬೇಕು. ತಮ್ಮ ವಿದ್ಯಾಭ್ಯಾಸವನ್ನು ಮುಂದರಿಸಲೆಳಸುವ ವಿದ್ಯಾರ್ಥಿಗಳಿಗೆ "ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್"ನಿಂದ ಏನೂ ಪ್ರಯೋಜನವಿಲ್ಲದಿರುವ ಕಾರಣ ಅವರು ಇನ್ಸ್‌ಪೆಕ್ಟರರ ಸಂದರ್ಶನೆಯ ಕಾಲವನ್ನು ಕಾದಿರಬೇಕಾದ್ದಿಲ್ಲವೆಂಬದನ್ನು ಇನ್ಸ್‌ಪೆಕ್ಟಿಂಗ್ ಆಫೀಸರರು ತಮ್ಮ ಸರ್ಕೀಟುಕಾಲದಲ್ಲಿ ಹಳ್ಳಿಪಳ್ಳಿಯ ಗೃಹಸ್ಥರಿಗೆ ಸ್ವತಹಾ ವಿವರಿಸಿ ತಿಳಿಸಬೇಕು. ಎಲ್ಲಾ ಶಾಲೆಯ ಉಪಾಧ್ಯಾಯರು ಶಾಲಾ ವರ್ಷಾವಧಿ ಸಂದರ್ಶನೆಯನ್ನು ಕಾದಿರದೆ ಪ್ರತಿ ವರ್ಷದ ಜನವರಿ ತಿಂಗಳಲ್ಲಿ ಮಕ್ಕಳನ್ನು ಮೇಲಣ ದರ್ಜೆಗೆ ಹಾಕಬೇಕೆಂದಿರುವ ನಿಯಮವನ್ನು ತಪ್ಪದೆ ಅನುಸರಿಸಬೇಕು.

ಇಷ್ಟೆಲ್ಲಾ ಮಾಡಿದರೆ ಕಂಪ್ಲೀಟ್ ಎಲಿಮೆಂಟರಿ ಶಾಲೆಗಳ ನಿಜವಾದ ಪ್ರಯೋಜನವು ಜನರಿಗೆ ಗೊತ್ತಾಗಿ ಲೋಕಕ್ಕೆ ಮಹದುಪಕಾರವಾಗುವದು.

ಸಂದರ್ಶನಾಧಿಕಾರಿ.

ಪತ್ರವ್ಯವಹಾರ.

ವ್ಯಾಪಾರಸ್ಥರ ಸಂಕಷ್ಟ ಮತ್ತು ಆದಾಯತೆರಿಗೆಯು.

ಮಂಗಳೂರು
22-9-1914.

ಸ್ವಾಮಿಾ,

ಯುದ್ಧದಿಂದ ಇಲ್ಲಿಯ ವ್ಯಾಪಾರಸ್ಥರಿಗೆ ಉಂಟಾಗುವ ನಷ್ಟದ ಪ್ರಸ್ತಾಪವು ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿರುತ್ತದೆ. ಕೈಯಲ್ಲಿರಬಹುದಾದ ನಗದಿ, ಹೊರಗೆ ದೊರಿಯುವ ಸಾಲ ಮತ್ತು ಜೀನಸುಗಳನ್ನೇ ಬೇಂಕಿನವರಿಗೆ ಈಡಿಟ್ಟು, ದೊರಕಬಹುದಾದ ಮೊಬಲಗುಗಳು—ಇಷ್ಟೆಲ್ಲಾ ಹಣದಿಂದ ಗೇರುಬೀಜ, ರಾಮಪತ್ರಿ ಮೊದಲಾದ ವಿದೇಶಗಳಿಗೆ ಇಲ್ಲಿಂದ ಹೋಗುವ ಜೀನಸುಗಳನ್ನು ರಾಶಿರಾಶಿಯಲ್ಲಿ ದಾಸ್ತಾನು ಇಟ್ಟಿರುತ್ತಾರೆ. ವಿದೇಶಿ ವ್ಯಾಪಾರಸ್ಥರು ಈಗ ಈ ಜೀನಸುಗಳನ್ನು ತಕ್ಕೊಳ್ಳುವದಿಲ್ಲವಾದ್ದರಿಂದ ಕ್ರಯವು ಇವುಗಳಿಗೆ ವಿಪರೀತ ಕಡಿಮೆಯಾಗಿದೆ. ಇದೊಂದು ಸಂಕಷ್ಟ. ವಿದೇಶವ್ಯಾಪಾರಕ್ಕೆ ಈ ರೀತಿ ಅಡಚಣೆಯಿರುವದರಿಂದ ಹಣಕ್ಕೂ ಬಹಳ ಅಡಚಣೆ ಉಂಟಾಗಿರುತ್ತದೆ. ಊರ ಜೀನಸುಗಳಿಗೆ ಕ್ರಯವು ತಗ್ಗುತ್ತಿರುವದನ್ನು ನೋಡಿಕೊಂಡು ಸಾಲಗಾರರು ತಮ್ಮ ಹಣ ವಾಪಾಸು ಸಿಕ್ಕಬೇಕೆಂದು ಪತ್ತಾಯಮಾಡುತ್ತಿದ್ದಾರೆ. ಬೇಂಕುಗಳಲ್ಲಿ ಸಾಲವು ಮೊದಲಿನ ಹಾಗೆ ದೊರಿಯುವದಿಲ್ಲ. ಏನಾದರೂ ... ಕೋರ್ಜಿ ಹುಟ್ಟುವಳಿಯ ಸಾವುಕಾರನಿಗೆ ೫,೦೦೦ ಸಾವಿರ ರೂಪಾಯಿಗಳ ಸಾಲವು ದೊರಕುವದು ಕಷ್ಟ. ಈ ರೀತಿ ವ್ಯಾಪಾರಸ್ಥರಿಗೆ ಯೋಚನೆಯಿಂದ ರಾತ್ರಿಕಾಲದಲ್ಲಿ ನಿದ್ರೆಹತ್ತುವದು ತುಂಬಾ ಅಸಾಧ್ಯ. ಇದು ಎರಡನೆಯ ಸಂಕಷ್ಟ. ಇತ್ತಲಾಗಿ ಕೆಲವು ದಿವಸಗಳಿಂದ ಇನ್‌ಕಮ್‌ಟೇಕ್ಸ್ ಆದಾಯ ತೆರಿಗೆಯ ನೋಟೀಸುಗಳು ಬರಲು ಪ್ರಾರಂಭವಾಗಿಯುವೆ. ಸಾಧಾರಣ ರೂಪಾಯಿ ೪೦೦ ತೆರುವವರಿಗೆ ರೂ. ೬೦೦ ರೂ. ೧೫೦ ಇದ್ದವರಿಗೆ ರೂ. ೪೦೦, ರೂ. ೧೦೦ ಇದ್ದವರಿಗೆ ರೂ. ೨೦೦ ಈ ರೀತಿ ನೋಟೀಸುಗಳ ಸುಲಾವಣೆಯಾಗಿದೆ. ಇನ್ನು ಬರಲಿಕ್ಕಿರುವ ನೋಟೀಸುಗಳು ಎಷ್ಟು ಭಯಂಕರವಾಗಿವೆ ಎಂಬದನ್ನು ನೋಡಲಿಕ್ಕಿರುವದು. ... ಈ ವಿಷಯ ಮಾತೆತ್ತುವದೇ ಪ್ರಯೋಜನವಿಲ್ಲ. ನೋಟೀಸು ಬಂದಾದರೆ ಹಣ ಕೊಡದೆ

ಬೇಕು. ನಗದಿಯಾಗ್ಗಿ ಕೊಡಬೇಕು. ಹ್ಯಾಗೆ ಕೊಡಲೋ ಶ್ರೀ ದೇವರೇ ಬಲ್ಲ. ಇದು ಮೂರನೆಯ ಸಂಕಷ್ಟ. ಮನೆಯಲ್ಲಿರುವ ಹೆಂಡತಿ ಮಕ್ಕಳನ್ನು ಸಾಕಬೇಕು, ಶಾಲಾ ಹುಡುಗರಿಗೆ ಸಂಬಳ ಕೊಡಬೇಕು, ರಾತ್ರಿಯೆಲ್ಲಾ ಜ್ವರದಿಂದ ತಳಮಳಗೊಳ್ಳುತ್ತಿರುವ ಮಗುವನ್ನು ನೋಡಲಿಕ್ಕೆ ಡಾಕ್ಟಾರರನ್ನು ಕರೆಯಬೇಕು, ದನ ಎಮ್ಮೆಗಳಿಗೆ ತಿಂಡಿ ಒದಗಿಸಬೇಕು—ಇಷ್ಟೆಲ್ಲಾ ಸಾಧನೆಯನ್ನು ದಿವಾಳಿದಾಸನೆಂಬ ಗುಟ್ಟು ಹೊರಗೆ ಬೀಳದಂತೆ ಮಾಡಬೇಕು—ಎಲ್ಲಾ ಸಾಧನೆಗಳಿಗಿಂತ ಈ ಸಾಧನೆಯಿಂದ ಮೈಯ್ಯಲ್ಲಿರುವ ರಕ್ತವೆಲ್ಲವು ಕುಂದುತ್ತಲಿದೆ. ಏನು ಮಾಡುವದೋ ತಿಳಿಯದು.

ಪತ್ರಾಧಿಪರೇ, ಈ ಸಂಕಷ್ಟಗಳ ಮಾತು ಹಾಗಿರಲಿ. ರಾಜಪ್ರತಿನಿದಿಗಳಾಗಿ ಬರುವ ಗವರ್ನರದೊರೆಗಳವರನ್ನು ಯೋಗ್ಯರೀತಿಯಲ್ಲಿ ಉಪಚರಿಸಬೇಕು ಇದು ಯಾರೂ ಅಲ್ಲವೆಂತ ಹೇಳರು. ಗವರ್ನರರ ಸಂದರ್ಶಣೆಯ ಖರ್ಚನ್ನು ಸಂಪನ್ನರಾದ ವಕೀಲರೂ ಸಾಹುಕಾರರೂ, ವರ್ಗದಾರರೂ ತಮ್ಮೊಳಗಿಂದಲೇ ಕೂಡಿಸುವ ವಾಡಿಕೆಯು ಹಿಂದೆ ಇತ್ತು. ಈ ವರುಷ ಈ ವಾಡಿಕೆಯನ್ನು ಬಿಟ್ಟು ಒಂದು ಹೊಸ ಕ್ರಮದಲ್ಲಿ ಗವರ್ನರ ದೊರೆಗಳವರ ಸಂದರ್ಶನಾ ಖರ್ಚನ್ನು ಕೂಡಿಸುತ್ತಲಿದ್ದಾರೆ. ವಕೀಲರೂ, ಸಂಪನ್ನರೂ, ವರ್ಗದಾರರೂ ತಾವೇ ರೂ ೧೦೦-೫೦ ೩೦ ಈ ರೀತಿ ಕೊಡುವ ಕ್ರಮವನ್ನು ಬಿಟ್ಟು, ನಶೆ, ಬೀಡಿ, ಲತ್ತುಗಳನ್ನು ಮಾರುತ್ತ ದಿವಸ ಒಂದಕ್ಕೆ ಕೆಲವು ಆಣೆಗಳನ್ನು ಸಹ ಬಹಳ ಕಷ್ಟದಿಂದ ಕೂಡಿಸುವ ಬಡ ಅಂಗಡಿಗಾರರ ಬಾಗಲುಗಳಿಗೆ ಹೋಗಿ ಈ ಬಗ್ಯೆ ವಂತಿಗೆ ಕೂಡಿಸಿದ ಈ ನವೀನ ಕ್ರಮದ ಜ್ಯಾರಿಯನ್ನು ಯಾಕೆ ಮಾಡಿದರೋ ತಿಳಿಯದು

ಸ್ವಾಮಿಾ, ಆನಂದಸಂವತ್ಸರದ ಕೌತುಕವೇ? ಸಾಕು! ಸಾಕು!! ಸಾಕು!!!

ವ್ಯಾಪಾರ ಮಾಹಿತಿ

~~~~~~

ದಿವಂಗತಳಾದ ಶ್ರೀಮತೀ ಜಾನಕಿಯಮ್ಮನು.

~~~~~~

ಎಂಪ ದೇಶದ ಏಳಿಗೆಗೂ, ಜನರ ಜ್ಞಾನಾಭಿವೃದ್ಧಿಗೂ ವಿದ್ಯೆಯೇ ಮೂಲಕಾರಣವು. ಈ ವಿದ್ಯೆಯಲ್ಲಿ ಮಾನವರು ಬಾಲ್ಯದಲ್ಲಿ ತಾಯಿಯಿಂದ ಹೊಂದುವ ವಿದ್ಯೆಯು ಬೇರೆಲ್ಲಾ ವಿದ್ಯೆಗಳಿಗೂ ಆದಿಪ್ರಾಯವಾಗಿರುವದರಿಂದ ತಾಯಂದಿರು ಮಕ್ಕಳಿಗೆ ಕೊಡುವ ವಿದ್ಯೆಯು ಉತ್ತಮ ತರದ್ದಾಗಿರಬೇಕು. ಹಾಗಿದ್ದರೇನೇ ಒಂದು ಜನಾಂಗದವರ ಜ್ಞಾನವು ಅಭಿವೃದ್ಧಿಯಾಗಿ, ಆ ಜನರು ಏಳಿಗೆಯನ್ನು ಹೊಂದುವರು. ಆದುದರಿಂದ ಮಾತೆಯರಿಗೆ ದೊರೆಯುವ ವಿದ್ಯೆಯು ಅತಿ ಶ್ರೇಷ್ಟವಾದುದು. ಇಂತಹ ಸ್ತ್ರೀ ವಿದ್ಯಾಭ್ಯಾಸವು ಪೂರ್ವದಲ್ಲಿ ನಮ್ಮ ಭಾರತ ಭೂಮಿಯಲ್ಲಿ ಪ್ರಚುರದಲ್ಲಿದ್ದುದರಿಂದಲೇ ಭಾರತೀಯರು ಕ್ರಿಯಾಕೌಶಲದಲ್ಲಿಯೂ ಜ್ಞಾನದಲ್ಲಿಯೂ ಅದ್ವಿತೀಯರಾಗಿದ್ದರು. ಆದರೆ ಕ್ರಮೇಣ ಸ್ತ್ರೀ ವಿದ್ಯಾಭ್ಯಾಸವು ಕ್ಷೀಣತೆಯನ್ನು ಹೊಂದುತ್ತಾ ಬಂದುದರಿಂದ ದೇಶವೂ ಜೀರ್ಣವಾಗುತ್ತಾ ಬಂತು. ಈಚೀಚೆಗೆ ಇದನ್ನೆಲ್ಲಾ ಕುರಿತು ಚಿಂತಿಸಿದ ಕೆಲವಿದ್ವಾಂಸರು ಭಾರತ ಭೂಮಿಯನ್ನು ಪುನರುದ್ಧಾರ ಮಾಡಬೇಕೆಂಬ ಕೋರಿಕೆಯಿಂದ ಮಹಿಳೆಯರಿಗೆ ವಿದ್ಯೆಯನ್ನು ಕಲಿಸುವದಕ್ಕಾಗಿ ಅಲ್ಲಲ್ಲಿ ಪಾಠಶಾಲೆಗಳನ್ನು ಕಟ್ಟಿಸುತ್ತಿದ್ದಾರೆ.

ಆದರೆ ಅಂತಹ ಸಾನುಕೂಲ್ಯವು ಉಡುಪಿಗೆ ಇಲ್ಲವೆಂದು ಜನರು ಚಿಂತಿಸುತ್ತಿರಲು ದೈವಯೋಗದಿಂದ ಜಾನಕಿಯಮ್ಮನೆಂಬಾಕೆಯು, ಮ| ರಾ| ರಾ| ಸಾಪಂಜೆ ಗುರುರಾಯರ ಉದರದಲ್ಲಿ ೧೮೯೫ನೆ ಇಸವಿ ಮಾರ್ಚ ತಿಂಗಳ ೧೩ನೆಯ ದಿವಸ ಜನಿಸಿ, ಶುಕ್ಲಪಕ್ಷದ ಚಂದ್ರನಂತೆ ಬೆಳೆಯುತ್ತಾ, ಬಾಲ್ಯದೊಳಗೇ ಕನ್ನಡ ವಿದ್ಯಾಭ್ಯಾಸವನ್ನು ಮಾಡಿ, ತನ್ನ ಎಂಟನೆಯ ವಯಸ್ಸಿನಲ್ಲೇ ಉಡುಪಿ ಹ್ಯಾಸ್ಕೂಲಿನ ಸಂಸ್ಕೃತ ಪಂಡಿತರಾದ ಬ್ರಹ್ಮಶ್ರೀ ಶ್ರೀನಿವಾಸ ಶಾಸ್ತ್ರಿಗಳಿಗೆ ಪತ್ನಿಯಾಗಿ, ಗೃಹಕೃತ್ಯ ವ್ಯಾಪಾರವನ್ನು ಸರಿಯಾಗಿ ನಡೆಯಿಸುತ್ತಾ, ವಿರಾಮಕಾಲದಲ್ಲಿ ಪತಿಯಿಂದ ಸಂಸ್ಕೃತವನ್ನು ಅಭ್ಯಾಸ ಮಾಡಿ, ಕಾವ್ಯನಾಟಕಾಲಂಕಾರಾದಿಗಳನ್ನು ಕಲಿತು, ಕೆಲವು ಸದ್ಗೃಹಸ್ಥರ ಅಪೇಕ್ಷೆ ಮೇರೆಗೆ ಇಲ್ಲಿ ತೆರೆಯಲ್ಪಟ್ಟ ಬೋರ್ಡು ಹುಡುಗಿಯರ ಶಾಲೆಗೆ ಕಾರಣಭೂತಳಾಗಿಯೂ, ಮುಖ್ಯೋಪಾಧ್ಯಾಯಿನಿಯಾಗಿಯೂ ಇದ್ದ ಶ್ರೀಮತೀ ಕಾಂತಮ್ಮನ ಸಹಾಯಕಳಾಗಿದ್ದು, ತೃಪ್ತಿಕರವಾಗಿ ಒಂದು ವರುಷ ಉಪಾಧ್ಯಾಯಿನೀ ಕೆಲಸವನ್ನು ನಡೆಯಿಸುತ್ತಿದ್ದಳು.

ಈಕೆಯ ಸಂಸ್ಕೃತ ಜ್ಞಾನದ ವಿಷಯ ತಿಳಿದ ಸಂಸ್ಕೃತ ಶಾಲೆಗಳ ಸುಪರಿಂಟೆಂಡೆಂಟರಾದ ಮ| ರಾ|-ರಾ| ಕೃಷ್ಣಮಾಚಾರ್ಯರವರ ಸೂಚನೆ ಮೇರೆಗೆ ಈ ಕ್ಷೇತ್ರದಲ್ಲಿ ಈಕೆಯು ಮನೆಯಲ್ಲೇ ತೆರೆಯಲ್ಪಟ್ಟ "ಶಾರದಾ ವಿಲಾಸ ಸಂಸ್ಕೃತ ಬಾಲಿಕಾ ಪಾಠಶಾಲೆ"ಗೆ ಈಕೆಯು ಮುಖ್ಯೋಪಾಧ್ಯಾಯಿನಿಯಾಗಿ, ಕ್ರಮೇಣ ಕನ್ನಡ ಎರಡು ತರಗತಿಗಳನ್ನೂ ಸಂಸ್ಕೃತ-ಮೂರು ತರಗತಿಗಳನ್ನೂ ಏರ್ಪಡಿಸಿ ಸುಮಾರು ೭೫ ಮಂದಿ ವಿದ್ಯಾರ್ಥಿನಿಯರಿಗೆ ಬೇರಿಬ್ಬರು ಉಪಾಧ್ಯಾಯಿನಿಯರ ತಕ್ಕಷ್ಟು ಸಹಾಯದಿಂದ ಕನ್ನಡ ಸಂಸ್ಕೃತ ಮೊದಲಾದುವುಗಳನ್ನು ಅಭ್ಯಾಸ ಮಾಡಿಸುತ್ತಿದ್ದು, ಬಾಲಕಿಯರಿಗೆ ಸಂಗೀತವು ಅಗತ್ಯವಾದುದೆಂಬುದನ್ನು ತಿಳಿದು, ಆ ವಿದ್ಯೆಯನ್ನು ಸ್ವತಃ ಕಲಿತು ಬಾಲಕಿಯರಿಗೆ ಹೇಳಿಕೊಡುತ್ತ, ಸರಕಾರದ ಮತ್ತು ಈ ಕ್ಷೇತ್ರದ ಸ್ವಜಾತಿ ವಿಜಾತಿಯರ ಆದರಣೆಯನ್ನು ಪಡೆಯುತ್ತಾ, ವಿದ್ಯಾರ್ಥಿನಿಯರಿಗೆ ಜ್ಞಾನಭಕ್ತಿ ವೈರಾಗ್ಯಪ್ರದಗಳಾದ ಸಂಸ್ಕೃತ, ಕನ್ನಡ ಪದ್ಯಗಳನ್ನೂ ಪಾಠಗಳನ್ನೂ ಅಭ್ಯಾಸ ಮಾಡುತ್ತಾ ಸುಮಾರು ಮೂರು ವರುಷ ಶಾಲೆಯನ್ನು ನಡಿಯಿಸಿ, ತನ್ನ ಪೂರ್ವ ವಯಸ್ಸಿನಲ್ಲಿಯೇ "ಸುಕೃತೀ ನಿರಾಯುಃ" ಎಂಬಂತೆ, ಪರಂಧಾಮವನ್ನೈದಿದ ಗೃಹಿಣಿಯರಿಗೆ ಮಾದರಿಯಾಗಿದ್ದ ಈ ಪುಣ್ಯಾತ್ಮೆಯು 1914ನೇ ಇಸವಿ ಸಪ್ಟಂಬರ ತಾರೀಕು 14ನೇ ಸೋಮವಾರ ಅಪರಾಹ್ನ ಗಂಟೆ 3ಕ್ಕೆ ತನ್ನ ಹತ್ತೊಂಬತ್ತನೆಯ ವಯಸ್ಸು ತುಂಬುವಷ್ಟರಲ್ಲೇ ಇಹಲೋಕದ ಈ ಸಂಸಾರ ಕಷ್ಟವನ್ನು ತೊರೆದು ಉತ್ತಮ ಲೋಕವನ್ನು ಕುರಿತು ಹೋದಳು.

ಈ ಮಹಿಳೆಯ ಮರಣದಿಂದ ಈಕೆಯ ಎರಡು ಗಂಡು ಮಕ್ಕಳಿಗೂ, ಪತಿಗೂ, ತಂದೆತಾಯಿಗಳಿಗೂ, ಬಂಧುಗಳಿಗೂ, ಮಾತ್ರವಲ್ಲದೆ, ಇವಳ ವಿದ್ಯೆಯನ್ನೂ ಸುಗುಣಾತಿಶಯಗಳನ್ನೂ ಅರಿತಿದ್ದ ನೂರಾರು ಜನಗಳಿಗೂ ಉಂಟಾಗುತ್ತಿರುವ ಅತ್ಯಂತ ದುಃಖವು ಆಕೆಯು ಪದೇ ಪದೇ ಹೇಳುತ್ತಿದ್ದ "|| ಮರಣಂ ಪ್ರಕೃತಿಃ ಶರೀರಿಣಾಂ ವಿಕೃತಿರ್ಜೀವಿತಮುಚ್ಯತೇ ಬುಧೈಃ | ಕ್ಷಣಮಪ್ಯವತಿಷ್ಠತೇ ಶ್ವಸನ್ ಯದಿಜಂತುರ್ನನುಲಾಭವಾನಸೌ ||" ಎಂಬ ಕಾಳಿದಾಸೋಕ್ತಿಯಿಂದ ಸಮಾಧಾನವಾಗಬೇಕಲ್ಲದೆ ಬೇರೇನೂ ಉಪಾಯವಿಲ್ಲ,

ತನ್ನ ಪತಿಸೇವೆಯನ್ನು ಭಕ್ತಿಯಿಂದ ಮಾಡುತ್ತ, ಬಾಲರಾದ ಮಿತ್ರರನ್ನು ಪ್ರೀತಿಯಿಂದ ಸಲಹುತ್ತ, ಪತಿಪಿತ ಬಂಧುಬಾಂಧವರಿಗೆಲ್ಲಾ ತನ್ನ ನಡೆನುಡಿಯಿಂದ ಸಂತೋಷವನ್ನುಂಟುಮಾಡುತ್ತ, ಸ್ವದೇಶ ಮಹಿಳೆಯರ ಮೇಲ್ಮೆಗಾಗಿ ಹೇಚಾಡುತ್ತಿದ್ದು ಪರವನ್ನೈದಿದ ಪುಣ್ಯಾತ್ಮಳಾದ ಜಾನಕಿಯಮ್ಮನ ಆತ್ಮಕ್ಕೆ ಸದ್ಗತಿಯನ್ನೂ ಅವಳ ಮಕ್ಕಳಿಗೆ ವಿದ್ಯಾಬುದ್ಧಿ ದೀರ್ಘಾಯುಸ್ಸು ಕ್ಷೇಮಲಾಭಾದಿಗಳನ್ನೂ ಭಕ್ತವತ್ಸಲನಾದ ಪರಮಾತ್ಮನು ದಯಪಾಲಿಸಲಿ!

S K.

~~~~~~

ಸ್ವದೇಶಾಭಿಮಾನಿಯ ಪತ್ರಿಕಾಕರ್ತರ ಸನ್ನಿಧಾನಕ್ಕೆ —

ತಮ್ಮ ಅಮೂಲ್ಯ ಪತ್ರದಲ್ಲಿ ಈ ಲೋಕೋಪಕೃತಿಯ ವಿಷಯಕ್ಕೆ ಅವಕಾಶ ಕೊಡುವಿರಾಗಿ ನಂಬುತ್ತೇನೆ

ಮಂಜೇಶ್ವರ ಬಾಲಿಕಾ ಪಾಠಶಾಲೆಯ ವಿಷಯವು ತಮ್ಮ ಪತ್ರಿಕೆಯ ಪಾಠಕ ಮಹಾಶಯರಿಗೆ ನೂತನವಾದದ್ದಲ್ಲ. ಈ ಮೊದಲು ಏತದ್ವಿಷಯವು ಹಲವು ಸಾರಿ ತಮ್ಮ ಪತ್ರದಲ್ಲಿ ಬಂದಿರುವದರಿಂದ ಸದರಿ ಶಾಲೆಯ ಜನ್ಮಕಥನವು ಚರ್ವಿತಚರ್ವಣವಾಗದಿರದು ಆದದರಿಂದ ಪ್ರಸ್ತುತ ವಿಷಯವನ್ನೆ ಇಲ್ಲಿ ನಿವೇದಿಸುತ್ತೇನೆ.

ಬಾಲಿಕಾ ಪಾಠಶಾಲೆಯು ಜನಸಾಮಾನ್ಯಕ್ಕೆ ಅಮಿತ ಫಲದಾಯಿ ಎಂಬುದು ನಿರ್ವಿವಾದ ಸಂಗತಿಯು—ಸರಕಾರದವರು ಕೊಡುವಷ್ಟು ಉತ್ತೇಜನವನ್ನು ಸ್ತ್ರೀವಿದ್ಯಾಭಿವೃದ್ಧಿಗೆ ಕೊಡುವ ವಿಷಯವು ಜನಜನಿತವಾದದ್ದೇ. ಆದರೆ ಪ್ರತಿಯೊಂದು ಕಡೆಯಲ್ಲಿಯೂ ರಾಜಸಹಾಯದಿಂದಲೇ ಶಾಲೆಗಳು ನಡಿಯಬೇಕೆಂಬುದು ತಪ್ಪು ಗ್ರಹಿಕೆ. ಜನರು ತಮ್ಮ ಸ್ವಪ್ರಯತ್ನಗಳಿಂದ ತಮ್ಮ ಬಾಲಾಭಿವೃದ್ಧಿಯನ್ನು ಕೋರುವದು ಎಷ್ಟೋ ಶ್ರೇಯಸ್ಕರವು. ಇಂಥಾ ಸಮಾಜಾಭಿವೃದ್ಧಿಯ ವಿಷಯಗಳಲ್ಲಿ ಸಾರ್ವಜನಿಕ ಸಂಸ್ಥೆಗಳಾಗಿರುವ ದೇವಸ್ಥಾನಗಳು, ಸ್ಥಳೀಯ ಬೋರ್ಡುಗಳು ತಮ್ಮ ಕೈಲಾಗುವ ಸಹಾಯವನ್ನು ಮಾಡುವದು ಈಗಿನ ನಮ್ಮ ಸರ್ಕಾರದವರಿಗೆ ಮಾನ್ಯವೂ ಜನಮನ ಹಿತಕರವೂ ಆಗಿದೆ. ಈ ಕಾರಣಗಳಿಂದ ನಮ್ಮಾಪತ್ತನನಿವಾಸ್ಥಿಕರು ಏಕೀಭವಿಸಿ ಒಂದು ಬಾಲಿಕಾ ಪಾಠಶಾಲೆಯನ್ನು ನಮ್ಮ ದೇವಸ್ಥಾನದಿಂದ ಇಡಿಸೋಣಾಗಬೇಕಾಗಿಯೂ ಪ್ರಕೃತದಲ್ಲಿರುವ ಶಾಲೆಯನ್ನು ಶಾಲಾ ಚಾಲಕರು ಬಿಟ್ಟುಕೊಡುತ್ತೇವೆಂತ ಹೇಳುವ ಸಂದರ್ಭದಲ್ಲಿಯೇ ಅದನ್ನು ಸ್ವೀಕರಿಸಿ ಇನ್ನೂ ಉತ್ತಮ ತರದಿಂದ ನಡಿಸುವ ವಿಲೆವಾರಿಯನ್ನು ಮಾಡಿಸಬೇಕಾಗಿಯೂ ಶ್ರೀಮದನಂತೇಶ್ವರ ದೇವಸ್ಥಾನದ ಆಡಳಿತೆ ಮೊಕ್ತೇಸರರಿಗೆ ವಿನಂತಿಪತ್ರವು ಬರಕೊಂಡು ಈಗ ಕೆಲವು ತಿಂಗಳು ಕಳೆದರೂ ಇನ್ನೂ ಉತ್ತರವನ್ನು ದಯಪಾಲಿಸದಿರುವದನ್ನು ಕಂಡು ನಿವಾಸಿಕರೆಲ್ಲಾ ಶೋಚಿಸುತ್ತಾರೆ. ಇನ್ನಾದರೂ ಸದರಿ ಲೇಖಕ್ಕೆ ಉತ್ತರವನ್ನು ತಮ್ಮ ಪತ್ರಪರಿಮುಖೇನ ಕಳುಹಿಸಿದ್ದಲ್ಲಿ ಜನರೆಲ್ಲರೂ ಮೊಕ್ತೇಸರರ ಆಧಾರವನ್ನು ಮನ್ನಿಸ್ಯಾರೆಂತ ನಂಬುತ್ತೇನೆ.

ತಾ. 21—9—14. ಮಂಜೇಶ್ವರ ನಿವಾಸಿ.

~~~~~~

ಯುದ್ಧ ಸಮಾಚಾರವು.

ತಾರೀಕು 18ನೇ ಸಪ್ಟಂಬರ.

ಸರ್ವಿಯನರು ಸೆಮ್ಲಿನಿನಲ್ಲಿ ಜಯಪ್ರದರಾಗಿರುವರು. ಇಲ್ಲಿ ಆಸ್ಟ್ರಿಯನರು ಬಹು ಬೇಗನೇ ಸೋತುಹೋಗಿರುವರು. ಆಸ್ಟ್ರಿಯನರು ವಿಶೇಷ ಯುದ್ಧಸಾಮಗ್ರಿಗಳನ್ನೂ ಆಹಾರವನ್ನೂ ಬಿಟ್ಟುಹೋಗಿರುವರು. ಪಟ್ಟಣನಿವಾಸಿಕರು ಬಹು ಸಂತೋಷಪಟ್ಟಿರುವರು.

ಸೇವ್ ಮತ್ತು ಡ್ರಿನ ನದಿಯ ಬಳಿ ಸರ್ವಿಯನರಿಗೆ ಇನ್ನೊಂದು ವಿಶೇಷ ಜಯವಾಗಿರುವುದು. ಇಲ್ಲಿ ಸರ್ವಿಯನರು ೯೦,೦೦೦ ಆಸ್ಟ್ರಿಯನರನ್ನು ಸೋಲಿಸಿ ಅನೇಕ ಫಿರಂಗಿಗಳನ್ನು ಹಿಡಕೊಂಡರು.

ರುಶ್ಯನರು ಸಾನ್ ನದಿಯನ್ನು ದಾಟಿ ೩೦ ಫಿರಂಗಿಗಳನ್ನೂ ೮ ಸಾವಿರ ಸೇನಿಕರನ್ನೂ ಆಹಾರ ಸಾಮಗ್ರಿಗಳನ್ನೂ ರವರುಸ್ಕದ ಬಳಿಯಲ್ಲಿ ವಶಮಾಡಿಕೊಂಡಿರುವರು.

ನಿಸ್ಟರ್ ನದಿಯ ಬಲಪಾರ್ಶ್ವದಲ್ಲಿ ಆಸ್ಟ್ರಿಯನರು ಡ್ರೊಗೊಬೈಚ್ ಎಂಬಲ್ಲಿಗೆ ಓಡಿಸಲ್ಪಟ್ಟಿರುವರು. ರುಶ್ಯನರು ಬಕೋವಿನದ ರಾಜಧಾನಿಯಾದ ಕೆಬರೊನೇವಿಜ್ಜವನ್ನು ಒಂದೇ ಒಂದು ಗುಂಡು ಖರ್ಚು ಮಾಡದೆ ವಶಮಾಕೊಂಡಿರುವರು.

ಪೂರ್ವ ಪ್ರುಶ್ಯದಲ್ಲಿ ಜರ್ಮನರ ವಿಶೇಷ ಸೇನೆಯು ಬಂದು ಕೂಡಿರುವುದು. ಜರ್ಮನರು ಅಲ್ಲಿ ಮೆಸ್ಸೂರಿಯನ್ ಸರೋವರ ಪ್ರಾಂತ್ಯದಲ್ಲಿ ಕದನಕ್ಕೆ ಪ್ರಾರಂಭಿಸಿರುವರು. ಇಲ್ಲಿರುವ ಜವುಗು ಪ್ರದೇಶಗಳ ಮತ್ತು ಅರಣ್ಯಗಳ ಮಾಹಿತಿಯನ್ನು ಚೆನ್ನಾಗಿ ಬಲ್ಲವರಾದ ಜರ್ಮನರು ನೊರ್ಡೆನ್‌ಬರ್ಗ-ಗೋಲ್ಡಾಪ್—ಸೌವಾಲ್ಕಿಯಲ್ಲಿ ರುಶ್ಯನರ ಸೇನೆಯು ಮೇಲೆ ಬಿದ್ದಿರುವರು. ಜರ್ಮನರ ಸೇನೆಯ ಮುಂದರಿಯೋಣವನ್ನು ರುಶ್ಯನರು ಬಹಳ ಕಷ್ಟದಿಂದ ತಡೆದರು. ತಾ. ೧೫ರಲ್ಲು ರುಶ್ಯನರು ಈ ಅತಿ ಕಷ್ಟವಾದ ನೆಲೆಯಿಂದ ಹಿಂದೆ ಸರಿದು ಇತರ ನೆಲೆಗಳನ್ನು ಸೇರಿಕೊಂಡಿರುವರು.

ತಾ. ೧೫ರಲ್ಲು ಜರ್ಮನರ 'ಹೆಲ್ಲ' ಎಂಬ ಕ್ರೂಜರ್ ನಾವೆಯು ಮುಣುಗಿಸಲ್ಪಟ್ಟಿರುವುದೆಂತ ಬರ್ಲಿನಿನಲ್ಲಿ ಪ್ರಕಟವಾಗಿದೆ.

ತಾ. ೧೦-೧೫ರ ಮಧ್ಯ ಕಾಲದಲ್ಲಿ ಜರ್ಮನರ ಎಮ್ಡೆನ್ ಎಂಬ ಕ್ರೂಜರ್ ನಾವೆಯು ಬ್ರಿಟಿಷರ "ಇಂಡಿಯ" "ಲವಟ್" "ಕಿಲ್ಲಿನ್," ಡಿಪ್ಲೊಮೆಟ್," ಮತ್ತು ಟ್ರಾಬಾಕ್ ಎಂಬ ನಾವೆಗಳನ್ನು ಮುಣುಗಿಸಿರುವುದು. ಮುಣುಗಿ ಹೋದ ನಾವೆಗಳ ನಾವಿಕರನ್ನು "ಕಬಿಂಗ" ನಾವೆಗಳಲ್ಲಿ ಹಾಕಿ ಕಲ್ಕತ್ತೆಗೆ ತಂದಿರುವರು. ಜರ್ಮನರ 'ಎಮ್ಡೆನ್' ಕ್ರೂಜರ್ ನಾವೆಯನ್ನು ಬ್ರಿಟಿಷರ ಕ್ರೂಜರ್ ನಾವೆಗಳು ಅಟ್ಟಿಕೊಂಡುಹೋಗುತ್ತಿರುವುದು. 'ಎಮ್ಡೆನ' ನಾವೆಯು ೩೫೦೦ ಟನ್ ಭರಾವಣಿಯುಳ್ಳ ಸಣ್ಣ ನಾವೆಯಾಗಿರುವುದು. "ಮುಣುಗಿ ಹೋದ ನಾವೆಗಳು ೩೫೦೦-೭೦೦೦ ಟನ್‌ಗಳ ಭರಾವಣೆಗಳುಳ್ಳದ್ದಾಗಿದೆ.

ರಂಗೂನಿನಿಂದ ಪಶ್ಚಿಮ ಪ್ರಾಂತ್ಯಕ್ಕೆ ಹಡಗುಗಳು ಹೋಗಕೂಡದೆಂದೂ ಸಿಂಘಾಪುರ ಮತ್ತು ಮೆರ್ಗ್ವಿಗೆ ದೋಣಿಗಳನ್ನು ನಡಿಸುವವರು ತಮ್ಮ ಸ್ವಂತ ಜವಾಬ್ದಾರಿಯ ಮೇಲೆ ಕೊಂಡುಹೋಗಬಹುದೆಂದೂ ಪ್ರಕಟವಾಗಿದೆ.

ತಾರೀಕು 19ನೇ ಸಪ್ಟಂಬರ.

ಎಸ್ನೆಯ ಉತ್ತರದಲ್ಲಿರುವ ಜರ್ಮನರು ಇನ್ನೂ ಮತ್ತು ಕೋಟೆ ಅರಣ್ಯದಲಿ ಇರುವರು. ಮಧ್ಯಪಾರ್ಶ್ವ ಜರ್ಮನ ಸೇನೆಯು ಕ್ರೈಮ್ಸ್ ಉತ್ತರದಿಂದ ಕಾರೊನ್ಸ್ ಮತ್ತು ವಿಯನ್ನೆ-ಲಾ-ವಿಲ್ಲದ ವರೆಗೆ ವಿಸ್ತರಿಸಿರುವುದು. ಬಲಪಾರ್ಶ್ವದ ಜರ್ಮನರು ಮೆಜ್ಜ್, ಎಟೈನ್, ಡೆಲ್ಮೆ ಮತ್ತು ಚಾಟಿ ಸಾಲಿನ್ಸಿಗೆ ಹಿಂದರಿಯುತ್ತಿದ್ದಾರೆ.

ಟ್ರೊಯನ್ ಕೋಟೆಯನ್ನು ಫ್ರೆಂಚರು ಬಿಡಿಸಿಕೊಂಡದ್ದರಿಂದ ಜರ್ಮನ ಸೇನೆಗೆ ಹಿಂದರಿಯುವುದು ಕೂಡಾ ಕಷ್ಟಸಾಧ್ಯವಾಗಿದೆ. ಫ್ರೆಂಚರು ಈಗ ಟೌಲಿನಿಂದ ವೆರ್ಡನ್ ವರೆಗಿನ ಕಣಿವೆ ಮಾರ್ಗಗಳನ್ನು ಸ್ವಾಧೀನ ಪಡಿಸಿಕೊಂಡಿರುವುದರಿಂದ ಜರ್ಮನ್ ಯುವರಾಜರ ಮತ್ತು ವ್ಯುರ್ತೆನ್‌ಬರ್ಗ ಡ್ಯೂಕರ ಸೇನೆಗಳಿಗೆ ಮ್ಯೂಸ್ ನದಿಯನ್ನು ದಾಟಿ ಹಿಂದೆ ಹೋಗುವುದು ಕಷ್ಟಸಾಧ್ಯವಾಗಬಹುದು. ಇವರು ಲೋಂಗ್ವಿಯ ಮಾರ್ಗವಾಗಿ ಲಕ್ಸೆಂಬರ್ಗಿಗೆ ಹೋಗುವ ಪ್ರಯತ್ನ ಮಾಡಬೇಕಾದೀತು.

ಜರ್ಮನ್ ಯುವರಾಜರ ಸೇನೆಯು ಹಿಂದೆ ಓಡಿಸಲ್ಪಟ್ಟಿರುವುದು. ಈಗ ಈ ಸೇನೆಯು ವಾರೆನ್ಸ್ ಒರ್ನೆಯಲ್ಲಿದೆ. ಬ್ರಿಟಿಷ ಫ್ರೆಂಚ ಸೇನೆಗಳು ರೈಮ್ಸನ್ನು ತಕ್ಕೊಂಡಿರುವವು. ಬ್ರಿಟಿಷರ ಬಲಪಾರ್ಶ್ವದಲ್ಲಿದ್ದ ಫ್ರೆಂಚರ ಸೇನಾತುಕಡಿಯು ಶತ್ರುಗಳ ೬೦೦ ಸೇನಿಕರನ್ನು ಸೆರೆಹಿಡಿದು ೧೫ ಫಿರಂಗಿಗಳನ್ನು ವಶಮಾಡಿಕೊಂಡಿರುವುದೆಂತ ವೈಸರಾಯ ಪ್ರಭುಗಳವರಿಗೆ ತಂತೀ ಬಂದಿರುವುದು. ಈಗ ಫ್ರಾನ್ಸಿನಲ್ಲಿ ಮಳೆ ಬರುವುದರಿಂದ ಮಳೆಯ ನೀರು ಬೀದಿ ತುಂಬಾ ಏರಿ ಜರ್ಮನರಿಗೆ ಹಿಂದರಿಯುವುದು ಕೂಡಾ ಕಷ್ಟವಾಗಿದೆ.

ಫ್ರೆಂಚ ಕುದುರೆಪಡೆಯು ೧೦೦೦ ಸೈನಿಕರು ಜರ್ಮನ ಕುದುರೆಪಡೆಯು ೬೦೦೦ ಮಂದಿಯೊಡನೆ ಪೊಪ್ಪರಿಂಗ್ ಎಂಬಲ್ಲಿ ಕಾದಾಡಿ ಅವರನ್ನು ಮುರಿಯಬಡಿದರು. ಫ್ರೆಂಚ ಸೇನಿಕರು ೧೫೦ ಜರ್ಮನರನ್ನೂ ಕ್ವಿಕ್‌ಫಯರ್ ತೋಪುಗಳನ್ನೂ ಹಿಡಿದರು. ಫ್ರೆಂಚರಲ್ಲಿ ೩೦ ಮಂದಿ ನಷ್ಟವಾದರು. ಈ ಪೈಕಿ ಇಬ್ಬರು ಆಫೀಸರರು ಹತರಾದರು.

ಸೆರೆ ಹಿಡಿಯಲ್ಪಟ್ಟ ೧೫೦೦ ಜರ್ಮನರು ಇಂಗ್ಲಾಂಡಿಗೆ ತಲಪಿರುವರು.

ಬೆಲ್ಜಿಯಮ್:—ಎಲೊಸ್ಟಿನಲ್ಲಿ ಜರ್ಮನ ಕುದುರೆ ಪಡೆಯು ಬೆಲ್ಜಿಯನರೊಡನೆ ಕಾದಾಡಿ ವಿಶೇಷ ನಷ್ಟಹೊಂದಿ ೩೦,೦೦೦ ಜರ್ಮನರು ಅವಸರದಿಂದ ಎಲೊಸ್ಟನ್ನು ಬಿಟ್ಟು ಆ ಪ್ರಾಂತ್ಯದ ಅಜುಬಾಜಿನಲ್ಲಿ ಕಾದಾಡುತ್ತಿರುವ ಸೇನೆಗೆ ಹೋಗಿ ಕೂಡಿರುವರು.

ಬ್ರುಸೆಲ್ಸಿನಲ್ಲಿ ಜರ್ಮನರು ಕೋಟೆಗಳನ್ನು ಬಲಕಾಯಿಸಿರುವರು. ಅಲ್ಲಿ ಈಗ ೬೦೦೦ ಜರ್ಮನರಿರುವರು.

ಆಸ್ಟ್ರೀಯಕ್ಕೆ ವಿರೋಧವಾಗಿ ರುಮೇನಿಯದವರು ಯುದ್ಧ ಮಾಡಬೇಕೆಂದಿರುವರು. ರುಮೇನಿಯವೂ ಇಟಲಿಯೂ ಒಟ್ಟಿ ಕೂಡಿ ಆಸ್ಟ್ರೀಯದ ಮೇಲೆ ಬೀಳಬೇಕೆಂದು ರುಮೇನಿಯವು ಇಟಲಿಯನ್ನು ಪ್ರೇರೇಪಿಸುತ್ತಿರುವದು. ಸೋಮಾಲಿ ಲೇಂಡಿನಲ್ಲಿದ್ದ ಇಟಲಿಯರ ಕ್ರೂಜರ್ ನಾವೆಯು ವೆನಿಸಿಗೆ ಹಿಂದೆ ಕರೆಯಲ್ಪಟ್ಟಿರುವುದು.

ರುಶ್ಯನರು ಸಾನ್ ನದಿಯ ಕೆಳಭಾಗವನ್ನು ಏನೊಂದೂ ತಡೆಯಿಲ್ಲದೆ ದಾಟಿರುವರು. ರುಶ್ಯನರು ಗ್ರೊಡೆಕನ್ನು ವಶಮಾಡಿಕೊಂಡು ಮೊಸ್ಕ್ಸಿಸಿಗೆ ತಲಪಿರುವರು. ಈಗ ಪ್ರೆಜಮಿಸಿಲಾಗೆ ಮುಂದರಿಯುತ್ತಿರುವರು. ಪೂರ್ವ ಪ್ರುಶ್ಯದಲಿ ತಾ. ೧೫ರಲ್ಲು ಕದನ ನಡೆಯಲಿಲ್ಲವೆಂತ ರುಶ್ಯದ ಯುವರಾಜರವರು ಪ್ರಕಟಿಸಿರುವರು.

ಆಸ್ಟ್ರಿಯನರ ಸಹಾಯಕ್ಕೆ ಹೋದ ಜರ್ಮನ ಸೇನೆಯು ಆಸ್ಟ್ರೀಯನರ ಹೇಡಿತನವನ್ನು ನೋಡಿ ಬಹಳವಾಗಿ ಮನನೊಂದಿರುವರು. ಈ ವಿಷಯ ಒಬ್ಬ ಜರ್ಮನ್ ಆಫೀಸರನು ಈ ರೀತಿ ಹೇಳಿರುವನು:—"ಆಸ್ಟ್ರಿಯನರು ನಮ್ಮ ಸಹಾಯವನ್ನು ಕೇಳಿ ಈಗ ನಮ್ಮನ್ನು ಬಿಟ್ಟು ಓಡಿಹೋಗಿರುವರು. ಇಂತಹ ಅವಮಾನವನ್ನು ಜರ್ಮನ ಸೇನೆಯು ಎಂದೂ ಕ್ಷಮಿಸದು".

ಸರ್ವಿಯನರ ಮುಂದರಿಯುವಿಕೆಯನ್ನು ತಡೆಯುವರೆ ಆಸ್ಟ್ರಿಯನರು ಡ್ರಿನದಲ್ಲಿ ತಮ್ಮ ಸೇನೆಯನ್ನು ತಂದು ಕಾದಾಡಿದರು. ಡ್ರಿನ ನದಿಯನ್ನು ದಾಟಲು ಯತ್ನಿಸಿದ ಆಸ್ಟ್ರಿಯನರು ಬಹಳ ನಷ್ಟಹೊಂದಿ ಅಟ್ಟಲ್ಪಟ್ಟರು. ಸೂರ್ಯ ಮುಣುಗುವಾಗ ಆಸ್ಟ್ರಿಯನರಿಗೆ ಸ್ವಲ್ಪ ಜಯವಾಗುವಂತೆ ಕಂಡರೂ ಸರ್ವಿಯನರು ತೋಪುಗಳಿಂದಲೂ ಸನೀನುಗಳಿಂದಲೂ ಕಾದಾಡಿ ಆಸ್ಟ್ರಿಯನರನ್ನು ಪೂರ್ಣವಾಗಿ ಸೋಲಿಸಿದರು.

ಆಸ್ಟ್ರಿಯನರು ಬುದ್ಧಾಪೆಸ್ಟಿನ ಬೀದಿಗಳಲ್ಲಿ ಸುರಂಗಗಳನ್ನು ತೋಡುತ್ತಿರುವರು. ೧೫೦,೦೦೦ ಸರ್ವಿಯನರು ಅಲ್ಲಿಗೆ ಮುಂದೊತ್ತಿರುವರು.

ಬೊಸ್ನಿಯದಲ್ಲಿ ಸರ್ವಿಯನರೂ ಮೊಂಟೆನಿಗ್ರೊಯನರೂ ಒಟ್ಟುಕೂಡಿ ಶತ್ರುಗಳನ್ನು ಹಿಂದೆ ಓಡಿಸಿರುವರು. ಸರ್ವಿಯನರು ವಿಸ್ಸೆಗ್ರೇಡನ್ನು ವಶಮಾಡಿಕೊಂಡಿರುವರು.

ಜಪಾನಿಯರು ಸಿಮೋವನ್ನು ಹಿಡಿದಿರುವರು.

ಬಂಗಾಳ ಅಖಾತದಲ್ಲಿ ಜರ್ಮನ ಕ್ರೂಜರ್ ನಾವೆಯಿಂದ ಮುಣುಗಿಸಲ್ಪಟ್ಟ 'ಇಂಡಸ್' ಮತ್ತು 'ಲೊವಟ್' ನಾವೆಗಳು ಖಾಲಿ ಹಡಗವಾಗಿದ್ದು ಮುಂಬಾಯಿಗೆ ಹೋಗುವಂಥದಾಗಿತ್ತು. 'ಕಿಲ್ಲಿನ್' ಹಡಗದಲ್ಲಿ ಕಲ್ಲಿದ್ದಲು ತುಂಬಿಸಲ್ಪಟ್ಟಿತು. ಇದು ಕೊಲೊಂಬಕ್ಕೆ ಹೋಗುವಂಥಾದ್ದು. 'ಟ್ರಾಬೊಚ್' ಎಂಬ ಹಡಗದಲ್ಲಿಯೂ ಕಲ್ಲಿದ್ದಲು ತುಂಬಿಸಲ್ಪಟ್ಟಿತ್ತು. ಇದು ಕಲ್ಕತ್ತೆಗೆ ಬರುವಂಥಾದ್ದು. 'ಡಿಪ್ಲೊಮಟ್' ಹಡಗವು ಇಂಗ್ಲಾಂಡಿಗೆ ಹೋಗುವಂಥಾದು. ಇದರಲ್ಲಿ ೪೦,೦೦೦ ಪೆಟ್ಟಿಗೆ ಚಾ ಇತ್ತು. ಮತ್ತೊಂದು ರುಶ್ಯನರ ಕಲ್ಲಿದ್ದಲು ತುಂಬಿದ ಹಡಗವನ್ನೂ 'ಎಮ್ಡೆನ್' ಕ್ರೂಜರ್ ನಾವೆಯು ಹಿಡಿದು ಅದರಲ್ಲಿದ್ದ ಕಲ್ಲಿದ್ದಲನ್ನು ತುಂಬಿಸಿಕೊಂಡಿರುವುದು. ಎಮ್ಡೆನ್ ಕ್ರೂಜರ್ ನಾವೆಯು ಮುಳುಗಿಸಿದ ಬ್ರಿಟಿಷ ವ್ಯಾಪಾರ ಹಡಗಗಳಿಂದ ಕಲ್ಲಿದ್ದಲನ್ನು ತೆಗೆಯಲಿಲ್ಲ. ಮುಣುಗಿಸಲ್ಪಟ್ಟ ಹಡಗಗಳ ನಾವಿಕರು 'ಕಬಿಂಗ' ಹಡಗದಲ್ಲಿ ಕಲ್ಕತ್ತೆಗೆ ಬಂದು ತಲಪಿರುವರು. 'ಎಮ್ಡೆನ' ನಾವೆಯಲ್ಲಿದ್ದ ಜರ್ಮನ್ ಆಫೀಸರರು ಮುಣುಗಿಹೋದ ನಾವೆಗಳ ನಾವಿಕರನ್ನು ದಯಾಭಾವದಿಂದ ಕಂಡಿರುವರೆಂತ ಇವರು ಹೇಳುತ್ತಿರುವರು. 'ಎಮ್ಡೆನ' ಕ್ರೂಜರ್ ಇಟಲಿಯ 'ಲೋರಿಡಾನೋ' ಹಡಗವನ್ನು ಅಟ್ಟಿರುವುದು. ಆದರೆ ಇದು ತಪ್ಪಿಸಿಕೊಂಡು ಕಲ್ಕತ್ತೆಗೆ ಬಂದು ಸೇರಿರುವುದು.

ಜರ್ಮನ್ ಎಮ್ಡೆನ್ ಕ್ರೂಜರ್ ನಾವೆಯೊಡನೆ ಕಲ್ಲಿದ್ದಲು ತುಂಬಿಸಿದ ಹೆಂಬರ್ಗ ಅಮೇರಿಕ ಲೈನಿನ 'ಮಾರ್ಕೊಮಾನಿಸ್' ನಾವೆಯು ಇದೆ. ಇದು ಎಲ್ಲಾ ತಂತೀ ಇಲ್ಲದ ಟೆಲಿಗ್ರಾಫಿನೊಡನೆ ಸಂಭಾಷಣೆ ನಡಿಸಿ ಬಂದರಗಳನ್ನು ಬಿಡುವ ಎಲ್ಲಾ ನಾವೆಗಳ ತಾರೀಕನ್ನು ತಿಳಕೊಂಡಿರುವುದರಿಂದ ಇಂತಹ ಅನಾಹುತ ಸಂಭವಿಸಲು ಕಾರಣವಾಯಿತು. ಬಂಗಾಳ ಅಖಾತಕ್ಕೆ ಬಂದ 'ಎಮ್ಡೆನ್' ನಾವೆಯ ಆಫೀಸರರು ಇಂಗ್ಲಿಷ ಯುದ್ಧನಾವೆಗಳ ಕೈಗೆ ತಾವು ಬೀಳುವುದು ನಿಶ್ಚಯವೆಂತ ಹೇಳಿರುವರೆಂದು ಮುಣುಗಿಹೋದ ಹಡಗಗಳ ನಾವಿಕರು ಹೇಳುವರು.

ತಾರೀಕು 20ನೇ ಸಪ್ಟಂಬರ.

ಫ್ರಾನ್ಸು. ಈ ತಿಂಗಳ ತಾ. ೧೪ ಮತ್ತು ೧೫ರಲ್ಲಿ ಬೆಂಗೊಟ್ಟು ಹೋಗುತ್ತಿದ್ದ ಜರ್ಮನರ ಸೇನೆಯು ಹಿಂದಕ್ಕೆ ಹೊಸ ಸೇನಿಕರು ಬಂದು ಸೇರಿದ್ದರಿಂದ ಫ್ರೆಂಚರ ಸೇನೆಯೊಡನೆ ಜರ್ಮನರ ಹಿಂಭಾವಲಿನವರು ಕಾದಾಡಹತ್ತಿದರು. ಜರ್ಮನ ಸೇನಿಕರು ಬಹಳ ಯುದ್ಧಸಾಮಗ್ರಿಗಳನ್ನೂ ಸೆರೆಹಿಡಿದವರನ್ನೂ ಬಿಟ್ಟು ಓಡಿಹೋಗಿರುತ್ತಾರೆ.

ತಾ. ೧೫ರಲ್ಲಿ ಪ್ರಕಟವಾದ ಲಂಡನಿನ ಯುದ್ಧಸಮಾಚಾರದ ಅಧಿಕೃತ ವೃತ್ತಾಂತವು ಈ ರೀತಿ ಇರುತ್ತದೆ— ಎಸ್ನೆ ನದಿಯ [illegible] ನಮ್ಮ ಸೇನೆಯ ಸ್ಥಿತಿಯು

ಚಿನ್ನಾಗಿರುವುದು. ಜರ್ಮನರು ನಮ್ಮ ಸೇನೆಗಳ ಪ್ರಥಮ ಪಾಳ್ಯದ ಮೇಲ್ಬಾಯ್ದರು. ಆದರೆ ಶತ್ರುಗಳ ಸೇನಿಕರನ್ನು ನಮ್ಮ ಸೇನೆಯು ಹಿಂದಟ್ಟಿರುವುದು. ಜರ್ಮನರ ನಷ್ಟವು ಮಿತಿಮೀರಿ ಇರುವುದು. ಬ್ರಿಟಿಷ ಸೇನಿಕರು ೨೦೦ ಜನ ಜರ್ಮನರನ್ನು ಸೆರೆಹಿಡಿದಿರುವರು.

ಫ್ರಾನ್ಸಿನಲ್ಲಿರುವ ಜರ್ಮನ್ ಸೇನಿಕರ ಬೆಂಬಲಕ್ಕೆ ಜರ್ಮನ್ ಸೇನಿಕ ಪಾಳ್ಯಗಳು ಬಂದು ಸೇರುತ್ತಿವೆ ಕಳೆದ ಮಂಗಳವಾರದ ವರೆಗೆ ೧೦,೦೦೦ ಜರ್ಮನ ಸೇನಿಕರು ಫ್ರಾನ್ಸಿನಲ್ಲಿರುವ ಜರ್ಮನ ಸೇನೆಯನ್ನು ಬಂದು ಸೇರಿರುವರು.

ಯುದ್ಧದಲ್ಲಿ ಸೆರೆಹಿಡಿಯಲ್ಪಟ್ಟ ಬ್ರಿಟಿಷ ಸೇನಿಕರನ್ನು ಜರ್ಮನಿಯಲ್ಲಿ ಜನರು ಬಹಳ ಮನ್ನಣೆಯಿಂದ ನಡಿಸುತ್ತಿರುವರು. ಬ್ರಿಟಿಷ ಕೈದಿಗಳನ್ನು ಒಯ್ಯುವ ಕಾವಲುಗಾರರಿಗೆ ತಿಳಿಯದಂತೆ ಜರ್ಮನ್ ಸ್ತ್ರೀಯರು ಹೊಗೆಸೊಪ್ಪು, ಹಣ್ಣುಹಂಪಲು ಇತ್ಯಾದಿಗಳನ್ನು ಬ್ರಿಟಿಷ ಸೇನಿಕರಿಗೆ ಕೊಡುತ್ತಿರುವರಂತೆ.

ಈ ತಿಂಗಳ ತಾ. ೬ರಲ್ಲಿ ಬೆಲ್ಜಿಯಮಿನ ವಿಲ್ವೋರ್ಡೆ ಎಂಬ ಪಟ್ಟಣದಲ್ಲಿ ರೋಗಿಗಳಿರುವ ಒಂದು ಆಸ್ಪತ್ರೆಯನ್ನು ಜರ್ಮನರು ಸುಟ್ಟುಬಿಟ್ಟು ವಿಶೇಷ ಅತ್ಯಾಚಾರ ನಡಿಸಿದರೆಂಬ ತಪ್ಪು ಜರ್ಮನರ ಮೇಲೆ ಆರೋಪಿಸಲ್ಪಟ್ಟಿರುವುದು.

ಫ್ರಾನ್ಸಿನಲ್ಲಿ ಮಳೆಯು ಪ್ರಕೃತ ಮಿತಿಮೀರಿ ಬರುತ್ತಿರುವುದರಿಂದ ಕುದುರೆಗಳ ಮೂಲಕ ಯುದ್ಧಸಾಮಗ್ರಿಗಳನ್ನು ಒಯ್ಯಲಿಕ್ಕೂ ಸೇನೆಗಳನ್ನು ಬೇಕಾದಂತೆ ಅತ್ತಿತ್ತ ಒಯ್ಯುವುದಕ್ಕೂ ಬಹಳ ಅಡಚಣೆಯುಂಟಾಗಿರುವುದು.

ರಾತ್ರಿಹಗಲು ಬಂದು ಮೇಲ್ಬಾಯುತ್ತಿರುವ ಶತ್ರುಗಳ ಪಾಳ್ಯಗಳನ್ನು ಹಿಂದಕ್ಕಟ್ಟಿರುವರೆಂತ ತಾ. ೧೭ರಲ್ಲಿ ಪಾರೀಸಿನಲ್ಲಿ ಪ್ರಕಟವಾದ ಸಮಾಚಾರದಿಂದ ತಿಳಿದುಬರುತ್ತದೆ.

ಬ್ರುಸೆಲ್ಸ್ ಮತ್ತು ಎಂಟ್‌ವರ್ಪ ನಡುವೆ ಇರುವ ರೈಲ್ವೆ ಸಂಕವನ್ನು ಬೆಲ್ಜಿಯನರು ಮುರಿದುಬಿಟ್ಟಿರುತ್ತಾರೆ.

ಒಸ್ಟ್ರಿಯಾ. ಜರ್ಮನರು ಗೆಲಿಸಿಯಾದಲ್ಲಿ ಒಸ್ಟ್ರಿಯನರ ಸೇನಿಕರನ್ನು ಕೂಡಿಸಿಕೊಂಡು ಕಾದಾಡ ಪ್ರಯತ್ನಿಸಿದರು. ಆದರೆ ಜರ್ಮನರ ಈ ಪ್ರಯತ್ನವು ಬಿದ್ದುಹೋಗಿ ೫೦೦೦ ಜರ್ಮನ ಸೇನಿಕರು ಸೆರೆಹಿಡಿಯಲ್ಪಟ್ಟಿರುವರು. ಲಿಂಬರ್ಗನ್ನು ರುಶ್ಯಯನರು ಹಿಡಿದಂದಿನಿಂದ ಒಸ್ಟ್ರಿಯನರ ನಷ್ಟದ ಅಂದಾಜು ಈ ರೀತಿ ಮಾಡೋಣಾಗಿರುತ್ತದೆ. ಘಾಯಪಡೆದವರು ಮತ್ತು ಮೃತಪಟ್ಟವರು ೨೫೦,೦೦೦, ಸೆರೆಹಿಡಿಯಲ್ಪಟ್ಟವರು ೧೦೦,೦೦೦, ರುಶ್ಯಯನರಿಗೆ ಸಿಕ್ಕಿದ ಕೋವಿಗಳು ೪೦೦.

ಕಳೆದ ಆಗೋಸ್ತು ೧ನೇ ತಾರೀಕಿನ ವರೆಗೆ ರುಶ್ಯ ಮತ್ತು ಒಸ್ಟ್ರಿಯಾ ದೇಶಗಳೊಳಗೆ ಮಿತ್ರಭಾವವೇ ಇತ್ತು. ಮತ್ತು ಸರ್ವಿಯಾ ಮತ್ತು ಒಸ್ಟ್ರಿಯದೊಳಗಣ ವಿವಾದವನ್ನು ರುಶ್ಯವು ತೀರಿಸುವ ವಿಷಯ ಒಸ್ಟ್ರಿಯಾಕ್ಕೆ ಸಮ್ಮತಿ ಇತ್ತು. ಆದರೆ ಜರ್ಮನಿಯು ಕೂಡಲೆ ರುಶ್ಯ ಮತ್ತು ಫ್ರಾನ್ಸು ದೇಶಗಳೊಡನೆ ಯುದ್ಧ ಪ್ರಾರಂಭಿಸಿದ್ದರಿಂದ ಯುರೋಪ ಖಂಡದ ಈ ಭಯಂಕರ ಯುದ್ಧಕ್ಕೆ ಕಾರಣವಾಯಿತೆಂದು ಸೂಚಿಸಿರುವ ವಿಯನ್ನಾದಲ್ಲಿದ್ದ ಬ್ರಿಟಿಷ ರಾಯಭಾರಿಯವರ ಪತ್ರವು ಪ್ರಕಟಿಸಲ್ಪಟ್ಟಿರುತ್ತದೆ.

ಹೆಲಿಗೋಲೇಂಡಿನಿಂದ ೬ ಮೈಲು ದೂರದಲ್ಲಿ ಬ್ರಿಟಿಷರ ಸಬ್ ಮೆರ್ರ್ಯಾನುನಾವೆಯು ಜರ್ಮನರ ಹೆಲಾ ಎಂಬ ಯುದ್ಧನಾವೆಯನ್ನು ಮುಣುಗಿಸಿ ಬಿಟ್ಟಿರುತ್ತದೆ.

ಜಪಾನ್. ಜಪಾನೀಯರ ಸೇನಿಕರು ಕಿಯಾಚೊದಲ್ಲಿಯ ರೈಲ್ವೆ ನಿಲ್ದಾಣವನ್ನು ಹಿಡಿದಿರುವರು.

ಅಘಾಖಾನ್‌ರವರು ಪ್ರಿನ್ಸ್ ಒಫ್ ವೇಲ್ಸರ ಯುದ್ಧ ಫಂಡಿಗೆ ೧೦೦೦ ಪವನುಗಳ ವಂತಿಗೆಯನು ಕೊಟ್ಟಿರುತ್ತಾರೆ. ಅಂಗ್ಲಾಂಡು, ಹಾಲೆಂಡು ಮತ್ತು ಸಾರ್ವೆಸು ಪ್ರಾಂತ್ಯಗಳಲ್ಲಿ ವ್ಯಾಪಾರಗಳು ಎಂದಿನಂತೆ ನಡೆಯಲು ಪ್ರಾರಂಭವಾಗಿದೆ.

ಹಿಂದೂಸ್ಥಾನದಿಂದ ಕಳುಹಿಸೋಣಾದ ಸೇನೆಯ ಖರ್ಚು ಇಂಡಿಯಾ ಸರಕಾರದವರೆ ವಹಿಸಿಕೊಳ್ಳುವರೆಂಬ ಇಲ್ಲಿಯ ಪ್ರಜಾವರ್ಗದವರ ಸರ್ವಸಮ್ಮತವಾದ ನಿರ್ಣಯವನ್ನು ಅಂಗೀಕರಿಸುವರೆ ಬ್ರಿಟಿಷ ಪಾರ್ಲಿಮೆಂಟ ಸಭೆಯ ಮಂಜೂರಾತಿಯು ಅಗತ್ಯವಿತ್ತು. ಈ ಮಂಜೂರಾತಿಯನ್ನು ಕೊಡುವ ವಿಷಯವನ್ನು ಪಾರ್ಲಿಮೆಂಟ ಸಭೆಯ ಪ್ರಭುಸದನದ ಮುಂದೆಯೂ ಪ್ರಜಾಪ್ರತಿನಿಧಿಗಳ ಸದನದ ಮುಂದೆಯೂ ತಂದಿದ್ದರು. ಸಭಿಕರು ಇಂಡಿಯಾ ಸರಕಾರದವರ ಈ ನಿರ್ಣಯಕ್ಕೆ ತಮ್ಮ ಅಂಗೀಕಾರವನ್ನು ಕೊಟ್ಟದ್ದಲ್ಲದೆ ಹಿಂದೂಸ್ಥಾನದ ಪ್ರಜಾವರ್ಗಗಳು ಮತ್ತು ಸಾಮಂತ ರಾಜರುಗಳು ಸಾಮ್ರಾಜ್ಯ ಸರಕಾರದವರಿಗೆ ಮಾಡಿದ ಸಹಾಯವನ್ನು ಬಹಳವಾಗಿ ಶ್ಲಾಘಿಸಿರುತ್ತಾರೆ.

ಹಿಂದೂಸ್ಥಾನ. ಬಂಗಾಳದ ಕೊಲ್ಲಿಯಲ್ಲಿ ಮುಣುಗಿಹೋದ ನಾವೆಗಳಲ್ಲಿದ್ದ ಸಾಮಗ್ರಿಗಳ ಬೆಲೆಯು ೨೫೬,೬೦೦ ಪವನುಗಳೆಂದು ನಿರ್ಣಯಿಸಲ್ಪಟ್ಟಿರುತ್ತದೆ. ಯುದ್ಧ ವಿಮೆಯ ದರಗಳು ಪೂರ್ವ ಕರಾವಳಿಯಲ್ಲಿ ಸೇಕಡಾ ೬ರಂತೆಯೂ ಪಶ್ಚಿಮ ಕರಾವಳಿಯಲ್ಲಿ ಸೇಕಡಾ ೪ರಂತೆಯೂ ಹೆಚ್ಚಿವೆ.

ಮದ್ರಾಸಿನಿಂದ ಹೋಗುವ "ಹೊಸ್ಪಿಟಲ್‌ಸಿಪ್" ಎಂಬ ನಾವೆಯ ಸಿಬಂದಿಯಲ್ಲಿ ಮೇಜೊರ್ ಡಿ. ಗಣಪತಿಯವರಿರುವರು. ಬಹುಮಾನಪಟ್ಟ ಡಾಕ್ಟರ್ ಟಿ. ಎಮ್. ನಾಯರರವರು ಈ ಸಿಬಂದಿಯನ್ನು ಸೇರುವರು.

~~~~~~

ತಾರೀಕು 21ನೇ ಸಪ್ಟಂಬರ.

ಶತ್ರುಗಳು ಎರ್ಸನೆಸಿನಲ್ಲಿ ಸುರಂಗಗಳನ್ನು ಕಟ್ಟುತ್ತಲಿರುವರು.

ಸೆನ್ಲಿಸಿನಲ್ಲಿ ಜರ್ಮನರು ಅಲ್ಲಿಯ ಪಟ್ಟಣ ಪಾಲಕರನ್ನೂ ೫ ಪ್ರಮುಖರನ್ನೂ ಸವಾಧಿಯ ಮುಂದೆ ಮೊಣಕಾಲೂರಿಸಿ ಗುಂಡು ಹೊಡೆದು ಕೊಂದರು. ಅನಂತರ ಪಟ್ಟಣದಲ್ಲಿ ವಿವಿಧ ಆಹಾರ ಸಾಮಗ್ರಿಗಳನ್ನು ತಕ್ಕೊಂಡು, ಇತರ ೨೦ ಮಂದಿಯನ್ನು ಕೊಂದರು. ಈ ಪೈಕಿ ಹೆಂಗಸರೂ ಮಕ್ಕಳೂ ಸೇರಿದ್ದರು. ಅನಂತರ ಪಟ್ಟಣಕ್ಕೆ ಬೆಂಕಿ ಕೊಟ್ಟರು. ಕ್ರೈಲ್ ಪಟ್ಟಣವನ್ನು ಸುಟ್ಟುಹಾಕಿದರು.

ಜರ್ಮನರು ರೈಮ್ಸನ್ನು ತಾ. ೩ರಲ್ಲಿ ವಶಮಾಡಿಕೊಂಡಿದ್ದರು. ಇದನ್ನು ಫ್ರೆಂಚರು ಪುನಃ ವಶಮಾಡಿಕೊಂಡಾಗ ಜರ್ಮನರು ರೈಮ್ಸ್ ಪ್ರಾಂತ್ಯದಲ್ಲಿ ಹಚ್ಚಿದ್ದ ಪತ್ರಗಳು ದೊರಕಿದವು. ಇದರಲ್ಲಿ ಪಟ್ಟಣದ ೮೧ ಪ್ರಮುಖರ ಹೆಸರು ಬರೆಯಲ್ಪಟ್ಟಿತ್ತು. ಇವರನ್ನು ಜರ್ಮನ ಸರ್ವ ಸೇನಾಧಿಪತಿಯು ಸೆರೆಯಾಗಿ ಮಾಡಿ ಪಟ್ಟಣದಲ್ಲಿ ಏನಾದರೂ ಗಲಿಬಿಲಿಯಾದರೆ ಈ ೮೧ ಮಂದಿಯನ್ನು ಗಲ್ಲಿಗೆ ಹಾಕಿ ಪಟ್ಟಣವನ್ನು ಸುಟ್ಟು ಬಿಡುವೆನೆಂದು ಬರೆದಿದ್ದರು.

ಬ್ರಿಟಿಷ ಸೇನೆಗಳು ಹಿಂದರಿಯುತ್ತಿರುವಾಗ ಎಸ್ನೆ ನದಿಯ ಸೇತುವೆಗಳನ್ನು ಹಾರಿಸಿ ಬಿಡುವುದು ಅಗತ್ಯವಾಗಿತ್ತು. ಬ್ರಿಟಿಷರ ಇಂಜನಿಯರರು ಇದನ್ನು ಹಾರಿಸಿ ಬಿಡಲು ಪ್ರಯತ್ನಿಸಿ ಧೈರ್ಯದಿಂದ ಒಬ್ಬರ ತರುವಾಯ ಒಬ್ಬರು ೧೧ ಇಂಜನಿಯರರು ಸೇತುವೆಯ ಸಮೀಪ ಹೋಗಿ ಬೆಂಕಿ ಇಡಪ್ರಯತ್ನಿಸುವಷ್ಟರಲ್ಲಿ ೧೧ ಮಂದಿಯನ್ನೂ ಜರ್ಮನರು ಗುಂಡು ಹಾರಿಸಿ ಕೊಂದರು. ೧೨ನೇ ಇಂಜನಿಯರನು ಹ್ಯಾಗೂ ಪ್ರಯತ್ನದಿಂದ ಹೋಗಿ ಸೇತುವೆಗೆ ಬೆಂಕಿ ಕೊಟ್ಟು ಸೇತುವೆಯನ್ನು ಹಾರಿಸಿದನು. ಆದರೆ ಅವನನ್ನೂ ಕೂಡ್ಲೇ ಶತ್ರುಗಳು ಗುಂಡು ಹೊಡೆದು ಕೊಂದರು.

ರಣರಂಗದಲ್ಲಿ ಈಗ ಬ್ರಿಟಿಷರ ೬ಕ್ಕಿಂತಲೂ ಹೆಚ್ಚಿಗೆ ಡಿವಿಜನ್ ಸೇನಾಂಗಗಳಿವೆ ಮತ್ತು ಕುದುರೆಪಡೆಯ ೨ ಸೇನಾಂಗಗಳಿವೆ. ಇವುಗಳು ಬೆಂಬಲ ಸೇನೆಯಾಗಿ ಮುಖ್ಯ ಸೇನೆಗೆ ಕೂಡುತ್ತಿರುವವು. ಇನ್ನು ಹಿಂದೂಸ್ಥಾನದ ಇತಿಹಾಸ ಪ್ರಸಿದ್ಧವಾದ ಸೇನೆಯು ರಣರಂಗಕ್ಕೆ ಬೇಗನೇ ಸೇರುವದು. ದಕ್ಷಿಣ ಆಫ್ರಿಕದ ಯುದ್ಧ ಮಾಹಿತಿಯುಳ್ಳ ಆಫೀಸರರಿಂದ ಲಂಡನಿನಲ್ಲಿ ಸೇನೆಯು ತರ್ಬೀತಾಗುತ್ತಿದೆ. ಆಸ್ಟ್ರೇಲಿಯ ಮತ್ತು ನ್ಯೂಜಿಲೇಂಡಿನಲ್ಲಿಯೂ ಹೊಸ ವಿಧಾನವಾಗಿ ಸೇನೆಯು ತರ್ಬೀತಾಗುತ್ತಿರುವುದು. ಇಂಗ್ಲಾಂಡಿನಲ್ಲಿ ಈಗ ೪ ಸೇನಾಂಗಗಳು ತಯಾರಾಗುತ್ತಿರುವವು. ಬ್ರಿಟಿಷರ ಒಂದು ಡಿವಿಜನ್ ಸೇನೆಯು ಈಜಿಪ್ತಿಗೂ ಮತ್ತೊಂದು ಬ್ರಿಗೇಡ್ ಸೇನೆಯು ಮಾಲ್ಟಕ್ಕೂ ಹೋಗಿರುವದು ಎಂಬಿತ್ಯಾದಿ ವಿಷಯಗಳು ಕಿಚನರ್ ಪ್ರಭುಗಳವರ ಭಾಷಣದಿಂದ ತಿಳಿದು ಬಂದಿರುವುದು.

ಯುನೈಟೆಡ್‌ಸ್ಟೇಟ್ ಪ್ರೆಸಿಡೆಂಟ ವಿಲ್ಸನರು ಸಂಧಾನ ಮಾಡಲು ಪ್ರಯತ್ನಿಸುತ್ತಿರುವರು. ಬೆರ್ಲಿನಿನಲ್ಲಿರುವ ಅಮೇರಿಕ ರಾಯಭಾರಿಯು ಈ ವಿಷಯ ಜರ್ಮನ್ ಸರಕಾರದವರೊಡನೆ ಮಾತಾಡಿದಲ್ಲಿ ಪ್ರೆಸಿಡೆಂಟ ವಿಲ್ಸನರು ಫ್ರೆಂಚ ಬ್ರಿಟಿಷರಿಂದ ಸಂಧಾನ ಶರ್ತಗಳನ್ನು ಕೇಳಿಕೊಳ್ಳಬಹುದೆಂಬ ಉತ್ತರವು ದೊರಕಿರುವುದು.

ಪ್ರಿನ್ಸ್ ಅಫ್ ವೇಲ್ಸರವರು ರಣರಂಗಕ್ಕೆ ಹೋಗುವರೆ ಕಿಚನರ್ ಪ್ರಭುಗಳ ಅಪ್ಪಣೆಯನ್ನು ಕೇಳಿಕೊಂಡಿರುವರು. ಆದರೆ ಪ್ರಿನ್ಸ್ ಅಫ್ ವೇಲ್ಸರವರು ಯುದ್ಧ ಸಂಬಂಧವಾದ ಪೂರ್ಣ ತರ್ಬೀತಿಯನ್ನು ಹೊಂದದಿರುವುದರಿಂದ ರಣರಂಗಕ್ಕೆ ಹೋಗುವುದು ಹಿತವಲ್ಲವೆಂಬದಾಗಿ ಕಿಚನರ್ ಪ್ರಭುಗಳವರು ಸೂಚಿಸಿರುವರು.

ತಾರೀಕು 22ನೇ ಸಪ್ಟಂಬರ.

ರವೈನ್ ಬಳಿಯಲ್ಲಿದ್ದ ಒಸ್ಯೆಲ್ ಸಂಕವನ್ನು ಜರ್ಮನರು ಕಡಿಯಪ್ರಯತ್ನಿಸಿದರು. ಇಲ್ಲಿ ಜರ್ಮನರು ಫ್ರೆಂಚರ ಉಡುಪುಗಳನ್ನು ಹಾಕಿಕೊಂಡು ಬಂದು ಈ ಸಂಕವನ್ನು ಕಡಿದು ಪಾರಿಸ್ ಮತ್ತು ಕರಾವಳಿಗಿರುವ ವ್ಯವಹಾರವನ್ನು ನಿಲ್ಲಿಸಬೇಕೆಂದಿದ್ದರು. ಆದರೆ ಫ್ರೆಂಚರು ಅವರನ್ನು ಹಿಡಿದರು.

ಕಳೆದ ೫ ದಿವಸಗಳಲ್ಲಿ ನಡೆದ ಕದನವು ಅತಿ ಕಠಿಣವಾಗಿತ್ತು. ತೋಪುಗಳ ಕಾಳಗವೂ ಕಾಲಾಳುಸೇನೆಯ ಕಾಳಗವೂ ಕಠಿಣವಾಗಿತ್ತು. ರಾತ್ರಿಕಾಲ ಮೇಲ್ಬಾಯ್ದು ಬಂದ ಜರ್ಮನರು ಪ್ರತಿಸಾರಿ ಎಂಬಂತೆ ಹಿಮ್ಮೆಟ್ಟಲ್ಪಟ್ಟರು.

ತಾ. ೧೪ನೇ ಬೆಳಿಗ್ಗೆ ಕದನವು ಪ್ರಾರಂಭವಾಯಿತು. ಜರ್ಮನರು ಇಲ್ಲಿ ಬೆಂಬಲ ಸೇನೆಯ ಬರೋಣವನ್ನು ಕಾಯುತ್ತಿದ್ದರು. ನಂತರ ತಾ. ೧೫ನೇ ರಾತ್ರಿ ಜರ್ಮನರು ಫ್ರೆಂಚ ಬ್ರಿಟಿಷ ಸೇನೆಗಳ ಎಡಪಾರ್ಶ್ವದ ಮೇಲ್ಬಾಯಿದರು. ಫ್ರೆಂಚ ಮತ್ತು ಬ್ರಿಟಿಷ ಸೈನಿಕರು ಇಲ್ಲಿ ವಿಶೇಷ ಧೈರ್ಯವನ್ನು ತೋರಿಸಿ ಎದುರಾಡಿದರು. ಜರ್ಮನರು ಇಲ್ಲಿ ಫ್ರೆಂಚ ಬ್ರಿಟಿಷ ಸೇನೆಗಳ ನೆಲೆಯನ್ನು ಆಕ್ರಮಿಸುವರೆ ವಿಶೇಷ ಪ್ರಯತ್ನಪಟ್ಟು ಜೀವದ ಮರವೆ ಇಲ್ಲದೆ ಕಾದಾಡಿದರು. ಜಯಹೊಂದಬೇಕು ವ ಸಾಯಬೇಕು ಎಂಬ ನಿರ್ಣಯದ ಮೇಲೆ ಶತ್ರು ಸೇನೆಯು ಇಲ್ಲಿ ಕಾದಾಡಿ ವಿಶೇಷ ಪ್ರಾಣಾರ್ಪಣೆ ಮಾಡಿದರು. ಕಡೆಗೆ ಸಫಲವಾಗದೆ ೧೦ ಕಿಲೊಮಿಟರ್ ದೂರ ಹಿಂದಕ್ಕೆ ಸರಿದರು. ಫ್ರೆಂಚರು ಇಲ್ಲಿ ೬೦೦ ಸೈನಿಕರನ್ನೂ ಕೆಲವು ಕ್ವಿಕ್‌ಫಯರ್ ಕೋವಿಗಳನ್ನೂ ಸೆರೆಹಿಡಿದರು.

ಜರ್ಮನ ವಾಯುನಾವೆಗಳಿಗೆ ಪೆಟ್ರೋಲಿನ ಕೊರತೆ ಬಂದಿರುವುದರಿಂದ ಅವು ಫ್ರೆಂಚ ನೆಲೆಗಳ ಮೇಲೆ ಹಾರುವುದಿಲ್ಲವೆಂಬದಾಗಿ ಜರ್ಮನ ಸೆರೆಯವರು ಹೇಳಿರುವರು.

ಹೊಯೆನ್ ಮಾರ್ಗವಾಗಿ ಫ್ರೆಂಚರು ಮುಂದರಿಸುತ್ತಿದ್ದಾರೆ. ಎಸ್ನೆಯ ಶಿಖರಗಳು ಫ್ರೆಂಚರಿಗೆ ಸಿಕ್ಕಿರುವವು. ಶತ್ರುಗಳಿಗೆ ಬೆಂಬಲ ಸೇನೆಯು ಬಂದು ಕೂಡಿರುವುದು. ಲೊರೈನಿನಲ್ಲಿ ಫ್ರೆಂಚರು ಮುಂದರಿಸುತ್ತಲಿರುವರು. ಜರ್ಮನ್ ಯುವರಾಜರ ಸೇನೆಯು ಹಿಂದರಿಯುತ್ತಿರುವದು ಎಂತ ಪೊಂಡಿಚೇರಿಗೆ ತಂತೀ-ಬಂದಿರುವುದು.

ಬೆಲ್ಜಿಯಮ್:—ಜರ್ಮನರು ತಾ. ೧೭ರಲ್ಲು ಟೆರ್ಮೊಂಡು ಎಂಬಲ್ಲಿಗೆ ಫಿರಂಗಿ ಹಾರಿಸಿ ಪಟ್ಟಣವನ್ನು ನಾಶಗೊಳಿಸಿದರು. ಅಲ್ಲಿಯ ದೇವಾಲಯದ ಶಿಖರವು ಬಿದ್ದುಹೋಗಿದೆ. ದೇವಾಲಯದ ಅಡಿಭಾಗ ಮಾತ್ರ ಉಳಿದಿರುವುದು. ಇತರ ಎಲ್ಲಾ ಕಟ್ಟೋಣಗಳು ನಾಶವಾಗಿರುವವು.

ಜರ್ಮನರು ಟೆರ್ಮೊಂಡೆ ಮತ್ತು ಬ್ರುಸೆಲ್ಸಿನ ಮಧ್ಯೆ ಇರುವ ರೈಲ್ವೆ ವ್ಯವಹಾರವನ್ನು ಮುರಿದಿರುವರು.

ಪೂರ್ವ ಪ್ರುಶ್ಯದಲ್ಲಿ ರುಶ್ಯನರ ಜನರಲ್ ರೆನೆನ್‌ಕೆಂಫ್‌ರವರು ಜರ್ಮನರನ್ನು ಎದುರಿಸಿ ಹಿಂದಕ್ಕೆ ಅಟ್ಟಿರುವರು. ಕೆಲವು ಸ್ಥಳಗಳಲ್ಲಿ ಜರ್ಮನರು ಹಿಂದಕ್ಕೆ ಸರಿದಿರುವರು.

ಮೊಂಟಿನಿಗ್ರನ್ನರು ಬೋಸ್ನಿಯದ ಗೊರೋಜ ಪಟ್ಟಣವನ್ನು
~~~~~~

ವಶಮಾಡಿಕೊಂಡು ಅದನ್ನು ಪ್ರವೇಶಿಸಿದರು ಅಲ್ಲಿಯ ನಿವಾಸಿಕರು ಬಹು ಆದರದಿಂದ ಮೊಂಟಿನಿಗ್ರೋನ್ನರನ್ನು ಬರಮಾಡಿಕೊಂಡರು ಸರ್ವಿಯನರೂ ಮೊಂಟಿನಿಗ್ರೋಯರೂ ಸರ್ಜಿವೋಗೆ ಆದಿತ್ಯವಾರ ತಲಪುವರೆಂದು ನಿರೀಕ್ಷಿಸಲ್ಪಟ್ಟಿರುವುದು

ಬಂಗಾಳ ಅಖಾತದಲ್ಲಿ ಬಂದಿರುವ ಜರ್ಮನ್ ಕ್ರೂಜರ್ ಎಮ್ಡನ್ ನಾವೆಯು "ಮೆಥೆನೆಸ್" ಎಂಬ ವ್ಯಾಪಾರ ಹಡಗವನ್ನು ಮುಳುಗಿಸಿರುವುದು ಈ ಹಡಗವನ್ನು ಮುಳುಗಿಸಿದ ನಂತರ ಅದರ ನಾವಿಕರನ್ನು "ಮಕೋನಾನ್ನಿಯ ಹಡಗದಲ್ಲಿ ಹಾಕಿ ರಂಗೂನಿನ ಕಡೆಗೆ ಪ್ರಯಾಣ ಮಾಡಿ, ತಾ ೧೮ನೇ ರಾತ್ರಿ ಎಲಿಫೇಂಟ್ ಪ್ಯೊಂಟಿನ ಹೊರಗೆ ೪-೫ ಮೈಲು ದೂರದಲ್ಲಿ ನೊರ್ವೆ ದೇಶದ "ಡೊವ್ರೆ" ಎಂಬ ನಾವೆಯನ್ನು ಹಿಡಿದು "ಮೆಥೆಸನ್" ನಾವೆಯ ನಾವಿಕರನ್ನು ಅದರಲ್ಲಿ ಹಾಕಿ ರಂಗೂನಿಗೆ ಕಳುಹಿಸಿಕೊಟ್ಟಿರುವುದು ಮುಳುಗಿಸಲ್ಪಟ್ಟ ಈ ನಾವೆಯು ಶೀಮೆಯಿಂದ ಕಲ್ಕತ್ತೆಯ ಮಾರ್ಗವಾಗಿ ಕೊಲೊಂಬೋಗೆ ಹೋಗುವಂಥಾದ್ದಾಗಿತ್ತು ಈ ಹಡಗದಲ್ಲಿ ೫೭ ಆಸ್ಮಾ ಖಂಡದ ನಾವಿಕರೂ ೧೩ ಯೂರೋಪಿಯನ್ ನಾವಿಕರೂ ಇದ್ದರು ನಾವಿಕರಿಗೆ "ಎಮ್ಡನ್" ಕ್ರೂಜರ್ ನಾವೆಯ ಆಫೀಸರರು ಬಹಳ ಮರ್ಯಾದೆ ತೋರಿಸಿದರು ಮುಳುಗಿದ ಹಡಗದಲ್ಲಿದ್ದ ಕಲ್ಲಿದ್ದಲನ್ನು "ಎಮ್ಡನ್" ನಾವೆಗೆ ಮುಳುಗಿದ ಹಡಗದ ನಾವಿಕರಿಂದ ತುಂಬಿಸಿ ಅವರಿಗೆ ದಿವಸಕ್ಕೆ ಅರ್ಧ ಡೊಲ್ಲರಿನಂತೆ ಸಂಬಳ ಸಹಾ ಕೊಟ್ಟರು "ಡೊವ್ರೆ" ಹಡಗದವರಿಗೆ 'ಮೆಥೆಸೆನ್" ನಾವಿಕರನ್ನು ಕೊಂಡುಹೋಗುವ ಖರ್ಚನ್ನೂ ಕೊಡುತ್ತೇವೆಂದು "ಎಮ್ಡನ್" ಕ್ರೂಜರ್ ಆಫೀಸರರು ಹೇಳಿ ಪ್ರಯಾಣದ ಖರ್ಚನ್ನು ಕೊಟ್ಟರು. ಈಗ ರಂಗೂನಿಗೆ ಹೋಗುವ ಹಡಗ ಪ್ರಯಾಣವು ನಿಲ್ಲಿಸಲ್ಪಟ್ಟಿರುವುದು

'ಮೆಥೆನೆಸ್" ಹಡಗವು ೪೭೭೫ ಟನ್ ಭರಾವಣೆಯುಳ್ಳ ಹಡಗವಾಗಿರುವದು

'ಎಮ್ಡನ್" ಕ್ರೂಜರ್ ನಾವೆಯು ಈಗ ಎಲ್ಲಿಗೆ ಹೋಗಿರುವುದೆಂಬದಾಗಿ ತಿಳಿಯದ್ದರಿಂದ ಚೋಕಿ ಪ್ಯೊಂಟಿನ ಹೊರಗೆ ಇರುವ ಎಲ್ಲಾ ದೀಪಸ್ತಂಭಗಳು ಈಗ ಹಚ್ಚಲ್ಪಡುವುದಿಲ್ಲ

ಆಂಗ್ಲಾಳ —ಇಂಗ್ಲಾಂಡಿನಲ್ಲಿ ಭಾರತೀಯರ ಎಂಬುಲೆನ್ಸ್ ಕೊರ್ಪ್ಸ್ ಅಂದರೆ ಯುದ್ಧದಲ್ಲಿ ಘಾಯಹೊಡೆದವರನ್ನು ಉಪಚರಿಸುವವರ ಸೇನಾಂಗವು ತಯಾರಾಗಿರುವುದು ಹಿಂದೂಸ್ಥಾನದಿಂದ ಯುದ್ಧರಂಗಕ್ಕೆ ಹೋಗುವ ಭಾರತೀಯ ಸೈನಿಕರ ಉಪಚಾರದ ಬಗ್ಗೆ ಇಂಗ್ಲಾಂಡಿನಲ್ಲಿರುವ ಭಾರತೀಯರ ಈ ಎಂಬುಲೆನ್ಸ್ ಕೊರ್ಪ್ಸ್ ಹೋಗಬಹುದೆಂದು ಯುದ್ಧ ಆಫೀಸಿನಿಂದ ಹುಕುಂ ದೊರಕಿರುವುದು ಈ ಕೊರ್ಪ್ಸಿನ ಒಂದಂಶವು ಘಾಯಹೊಡೆದು ಇಂಗ್ಲಾಂಡಿಗೆ ತರಲ್ಪಟ್ಟ ಭಾರತೀಯ ಸೈನಿಕರ ಬಗ್ಗೆ ಇಂಗ್ಲಾಂಡಿನಲ್ಲಿ ಉಳಿಯುವುದು ಈಗ ಈ ಕೊರ್ಪ್ಸಿಗೆ ೧೫೦ ಮಂದಿ ಭಾರತೀಯರು ಸೇರಿರುವರು. ಕೆಲವರು ಇನ್ನೂ ಸೇರುತ್ತಲಿರುವರು ಕೆಲವರು ಈ ಸಂಬಂಧವಾದ ತರಬೇತುಪಡೆಯುತ್ತಿದ್ದಾರೆ

ತಾರೀಕು 23ನೇ ಸಪ್ಟಂಬರ.

ಲಂಡನ್ ವರ್ತಮಾನ ಸಂಗ್ರಹ ಆಫೀಸಿನವರು ಈ ರೀತಿ ಪ್ರಕಟಿಸಿರುವರು — ರಾತ್ರಿಕಾಲ ಶತ್ರುಗಳು ಫ್ರೆಂಚ ಬ್ರಿಟಿಷ ಸೇನೆಯ ಮೇಲೆ ಬಿದ್ದು ಹಿಂದಟ್ಟಲ್ಪಟ್ಟಿರುವರು. ವಿಶೇಷ ಮಳೆಗರೆಯುತ್ತಿದೆ

ಮ್ಯೂಸ್ ನದಿಯ ಬಲದಡದಲ್ಲಿ ನೊಯನ್ ಸಮೀಪ ಫ್ರೆಂಚ ಸೇನೆಯ ಎಡಪಾರ್ಶ್ವವು ಸ್ವಲ್ಪ ಮುಂದರಿದಿರುವುದು. ಎಸ್ನೆಯ ಬಲದಡದಲ್ಲಿರುವ ಗುಡ್ಡಗಳನ್ನು ಫ್ರೆಂಚರು ಹಿಡಿದುಕೊಂಡಿರುವರು. ಇಲ್ಲಿ ಫ್ರೆಂಚರಿಗೆ ಲೊರೈನಿನಿಂದ ಬೆಂಬಲ ಸೇನೆಯು ಬಂದು ಕೂಡಿರುವುದು.

ಮಧ್ಯಪಾರ್ಶ್ವದಲ್ಲಿರುವ ಜರ್ಮನರು ಆಳವಾದ ಕಂದಕಗಳಿಂದ ಇನ್ನೂ ಹೊರಬೀಳಲಿಲ್ಲ. ಜರ್ಮನ್ ಯುವರಾಜರ ಸೇನೆಯು ಹಿಂದರಿಯುತ್ತಲಿದೆ.

ಎಸ್ನೆಯ ಸ್ಥಿತಿಯು ಫ್ರೆಂಚ ಬ್ರಿಟಿಷ ಸೇನೆಗಳಿಗೆ ಗುಣವಾಗಿಯೇ ಇದೆ. ಎಡಪಾರ್ಶ್ವದ ಸೇನೆಯು [illegible] ಶತ್ರುಗಳ ಒಂದು ಧ್ವಜವನ್ನು ಹಿಡಿದು ಅನೇಕ ಸೇನಿಕರನ್ನು ಬಂಧಿಗಳಾಗಮಾಡಿರುವುದು. ಒರಾನ್ಸ ಸಾನುಪ್ರದೇಶದಲ್ಲಿ [illegible] ನಡೆದು ಶತ್ರುಗಳ ೧೫ನೇ ಮತ್ತು ೧೬ನೇ ಸೇನಾಂಗಗಳಲ್ಲಿ ಅನೇಕರನ್ನು ಸೆರೆಹಿಡಿದಿರುವರು. ಜರ್ಮನರು [illegible]

ರೈಮ್ಸಿನ ಕಡೆಗೆ ತಲೆಹಾಕಲು ಅಶಕ್ತರಾದರು. ದಿನವೆಲ್ಲಾ ಒಂದು ದೇವಾಲಯಕ್ಕೆ ಗುಂಡುಹಾರಿಸಿದರು. ಫ್ರೆಂಚ ಬಡಪಾರ್ಶ್ವದ ಸ್ಥಿತಿಯು ಬದಲಾಗಲಿಲ್ಲ. ಮಧ್ಯದಲ್ಲಿ ಫ್ರೆಂಚರು ಎಗೋನ್ನೆಯ ಪಶ್ಚಿಮ ಕಡೆಗೆ ಮುಂದರಿದಿರುವರು.

ಎರ್ಡನೆನ್ನಿನಲ್ಲಿ ಜರ್ಮನರು ಹಿಂದೆಬಿದ್ದಿರುವರು ಅಲ್ಲಿ ಶತ್ರುಗಳು ಪುನಃ ಕಂದಕಗಳನ್ನು ಸೇರುತ್ತಲಿರುವರು

ಸೆರೆಹಿಡಿದು ಬೋರ್ಡೆಗೆ ಕೊಂಡುಹೋಗಿರುವ ಜರ್ಮನ ಸೆರೆಯವರಲ್ಲಿ ೧೫ ವರ್ಷದವರೂ ಸೇರಿರುವರು ೧೫ ವರ್ಷ ವಯಸ್ಸಿನ ನಾಲ್ಲಾಹ ಡಗರನ್ನೂ ಜರ್ಮನಿಯ ಹೊಸಸೇನೆಗೆ ಸೇರಿಸಿರುವರು ಎಂತ ಈ ಸೆರೆಯವರು ಹೇಳುವರು

ಮಧ್ಯಪಾರ್ಶ್ವದಲ್ಲಿ ಫ್ರೆಂಚರು ಸೊಯಿನ್ ಗ್ರಾಮವನ್ನು ತಕ್ಕೊಂಡು ಶತ್ರುಗಳ ೧೦೦೦ ಸೇನಿಕರನ್ನು ಬಂಧಿಗಳಾಗಮಾಡಿದರು ಲೊರೈನಿನಲ್ಲಿ ಶತ್ರುಗಳ ಫ್ರೆಂಚರ ಸರಹದ್ದನ್ನು ದಾಟಿ ಹಿಂದರಿದಿರುವ ಎಪ್ರಿಕೊರ್ಟ ಪ್ರಾಂತವನ್ನು ಬಿಟ್ಟುಹೋಗಿರುವರು

ಮ[illegible] ಗವರ್ನರರಾದ ವಿಲಿಂಗ್ಟನ್ ಪ್ರಭುಗಳವರ ಪ್ರಥಮ ಪುತ್ರರಾಗಿರುವ ಲೆಫ್ಟನೆಂಟ್ ಫ್ರಿಮೋಸ್ ತೋವ ಸರವರು ಬ್ರಿಟಿಷ ಸೇನೆಯ ಕಾಣೆಯಾದ ಆಫೀಸರರ ಪಟ್ಟಿಯಲ್ಲಿ ಸೇರಿರುವರೆಂತ ಈಗ ತಾನೇ ಮುಂಬಾಯಿಗೆ ತಂತಿ ಬಂದಿರುವುದು

ಯುನೈಟೆಡ್ ಸ್ಟೇಟಿನ ಪ್ರೆಸಿಡೆಂಟ ವಿಲ್ಸನರವರ, ಸಂಧಾನ ಪ್ರಸ್ತಾಪವನ್ನು ಸದಾ ನಿಲ್ಲಿಸಿರುವರು ಯುದ್ಧಕ್ಕೆ ಸೇರಿದ ರಾಜ್ಯಗಳಲ್ಲಿ ಒಂದು ರಾಜ್ಯವಾದರೂ ಪ್ರೆಸಿಡೆಂಟ ವಿಲ್ಸನರನ್ನು ಈ ವಿಷಯ ಖುದ್ದಾಗಿ ಕೇಳಿಕೊಳ್ಳುವ ಮೊದಲು ಸಂಧಾನ ಪ್ರಸ್ತಾಪಕ್ಕೆ ಕೈಹಚ್ಚುವುದು ಉಚಿತವಲ್ಲವೆಂದು ಪ್ರೆಸಿಡೆಂಟ ವಿಲ್ಸನರ ಆಲೋಚನೆಯಾಗಿರುವದು

ಸಂಧಾನವಾಗುವುದಾದರೆ ಸರ್ವಿಯನರು ಆಸ್ಟ್ರಿಯನರ ಕೂಡೆ ಪ್ರತ್ಯೇಕವಾಗಿ ಸಂಧಾನಮಾಡಿಕೊಳ್ಳುವುದಿಲ್ಲವೆಂದೂ ಫ್ರೆಂಚ ಬ್ರಿಟಿಷ ರಷ್ಯ ರಾಜ್ಯಗಳೊಡನೆ ಕೂಡಿಕೊಳ್ಳುವುದೆಂದೂ ಸರ್ವಿಯ ಸರಕಾರದವರು ಪ್ರಕಟಿಸಿರುವರು

ಜರ್ಮನರಿಗೆ ಯುರೋಪು ಖಂಡದಲ್ಲಿ ಈ ವರೆಗೆ ಇದ್ದ ಸ್ವತಂತ್ರವನ್ನು ಛಿನ್ನಭಿನ್ನಮಾಡದ ಪಕ್ಷಕ್ಕೆ ಜರ್ಮನರು ಯುದ್ಧವನ್ನು ನಿಲ್ಲಿಸುವರೆಂಬದಾಗಿ ವಶಿಂಗ್ಟನ್ ನಗರದ ಜರ್ಮನ್ ರಾಯಭಾರಿಯು ಹೇಳಿರುವರು

ರಷ್ಯನರು ಸೆನಿವ ಮತ್ತು ಸಂಬೋರಿನಲ್ಲಿ ಕೋಟೆಗಳನು ಹಿಡಿದಿರುವರು ಜರೋಸ್ಲಾವ್ ಪಟ್ಟಣವು ಸುಡುತ್ತಿದೆ ಆಸ್ಟ್ರಿಯನರು ಈ ಪಟ್ಟಣವನ್ನು ಬಿಟ್ಟುಹೋಗಿರುವರು ಪ್ರೊಜ್ಮೈಸಲಿನಲ್ಲಿ ರುಷ್ಯನರು ಆಸ್ಟ್ರಿಯನರ ಮಾರ್ಗವನ್ನು ಕಡಿದುಬಿಟ್ಟಿರುವರು

ಕೆಮೋನಿಯ" ಬ್ರಿಟಿಷ ನಾವೆಯು ಜರ್ಮನರ "ಕೆಪ್ ಟ್ರಫೆಲಗಾರ್,, ಎಂಬ ಕ್ರೂಜರ್ ಹಡಗವನ್ನು ದಕ್ಷಿಣ ಅಮೇರಿಕ ಕರಾವಳಿಯಲ್ಲಿ ಮುಳುಗಿಸಿರುವುದು ಜರ್ಮನ್ ಹಡಗದ ನಾವಿಕರನ್ನು ರಕ್ಷಿಸಿರುವುದು 'ಕೆಮೋನಿಯ" ಹಡಗದಲ್ಲಿ ೯ ಮಂದಿ ಹತರಾದರು ೨೬ ಮಂದಿ ಗಾಯಹೊಡೆದರು

ಜರ್ಮನರ ಹಡಗವು ಬ್ರಿಟಿಷರ 'ಡ್ವಾರ್ಫ" ಎಂಬ ನಾವೆಯನ್ನೂ ಮುಳುಗಿಸ ಪ್ರಯತ್ನಿಸಿ ತಾನೇ ಒಡೆದು ಹೋಯಿತು ಜರ್ಮನರ ಒಂದು ಲೊಂಚನ್ನೂ ಬ್ರಿಟಿಷರು ಹಾಳು ಮಾಡಿರುವರು

ದಕ್ಷಿಣ ಕನ್ನಡ

ಮೂಲ್ಕಿ —ಕಳೆದ ಸೋಮವಾರ ದಿವಸ ಚರಂತಿಬೆಟ್ಟು, ಬಪ್ಪನಾಡ, ವಡೇರಬೆಟ್ಟು ಮೊದಲಾದ ಸ್ಥಳಗಳ ಮೊಗೇರರೆಲ್ಲಾ ಕೋಡಿಯಲ್ಲಿ ಮಹಾ ಸಭೆ ನೆರೆದು ಬಂದರು. ಈ ಸಭೆಯಲ್ಲಿ ಬಪ್ಪನಾಡಿನ ಯಂ. ಕೆ ಬಸಪ್ಪನವರೂ ಮಂಗಳೂರಿನ ಮಹಲಿಂಗ ತಿಂಗಳಾಯರೂ, ಬಿ ಮೋನಪ್ಪ ತಿಂಗಳಾಯರೂ ಸ್ವಜಾತಿಯವರ ಹೀನದೀನ ಸ್ಥಿತಿಗೆ ಕಾರಣವಾದ ಮದ್ಯಪಾನ ಮತ್ತು ಅವಿದ್ಯೆಯ ಅನರ್ಥಗಳನ್ನು ವರ್ಣಿಸಿ, ಭಾಷಣಗಳನ್ನು ಮಾಡಿದರು. ಸತ್ಸಂಗ ವಿದ್ಯಾವರ್ಧನೆ, ಮದ್ಯಪಾನ ನಿಷೇಧ ಮೊದಲಾದ ಉದ್ದೇಶಗಳನ್ನು ಕ್ರಮದಿಂದ ಸಾಧಿಸಿ ತಮ್ಮ ಕಷ್ಟನ್ನು ತಾವೇ ನಿವೃತ್ತಿಕೊಳ್ಳಲನುಕೂಲವಾಗುವಂತೆ "ಮೂಲ್ಕಿ ಮೊಗೇರರ ಶ್ರೇಯೋಭಿವೃದ್ಧಿ ಸಮಾಜ"ವನ್ನು ಸ್ಥಾಪಿಸಬೇಕಾಗಿ ಸಭಿಕರನ್ನು ಪ್ರಾರ್ಥಿಸೋಣಾಯಿತು. ಈ ಕೂಡಲೇ ಮದ್ಯಪಾನ ವರ್ಜನಮಾಡಿದ ಬಪ್ಪನಾಡಿನ ಘನೆ ಮೊಗೆ[illegible]ಯು ೩೧ ಜನರು ಆಗಲೇ ಸಮಾಜದ ಸದಸ್ಯರಾಗಿ ಸೇರಿದರಲ್ಲದೆ ಚರಂತಿಬೆಟ್ಟಿನಿಂದ ೩೦, ವಡೇರಬೆಟ್ಟಿನಿಂದ ೧೩, ಬಪ್ಪನಾಡಿನಿಂದ ೮, ಕೂಡಾ ೪೧ ಜನರು ಮದ್ಯಪಾನ ನಿಷೇಧಕ ಕ[illegible]ವನ್ನು ಸಭೆಯ ಮುಂದೆ ಉಚ್ಚರಿಸಿ ಒಬ್ಬೊಬ್ಬರೇ ಪ್ರಮಾಣವನ್ನು ಮಾಡಿದರು ಇವರಲ್ಲಿ ಕೆಲವರು ೫೦-೬೦ ವರ್ಷ ಪ್ರಾಯವಾದವರೂ ಸಹ ಇದ್ದದ್ದು ಸಭೆಯಲ್ಲಿದ್ದ ಯುವಕರಿಗೆಲ್ಲಾ ವಿಸ್ಮಯವನ್ನುಂಟು ಮಾಡಿತು. ಇಲ್ಲಿ ನವೀನವಾಗಿ ಏರ್ಪಡಿಸಿದ ಈ ಸಮಾಜಕ್ಕೆ ಚರಂತಿಬೆಟ್ಟಿನ ರಾ ಸೋಮುಮಂದಣ್ಣಾಯರು ಅಧ್ಯಕ್ಷರಾಗಿಯೂ, ಬಪ್ಪನಾಡಿನ ಯಂ ಕೆ ಬಸಪ್ಪನವರು ಕಾರ್ಯದರ್ಶಿಯರಾಗಿಯೂ ಆರಿಸಲ್ಪಟ್ಟರು ಸಮಾಜದ ಕೂಟವು ಪ್ರತೀ ಪಕ್ಷದಲ್ಲಿಯೂ ಕೂಡಿ ಮದ್ಯಪಾನ ನಿಷೇಧಕರ ಸಂಖ್ಯೆಯನ್ನೇರಿಸುತ್ತಿರಬೇಕೆಂದೂ ಸಮಾಜದ ಸದಸ್ಯರ ಜ್ಞಾನೋದಯಕ್ಕಾಗಿ ಗ್ರಂಥ ವರ್ತಮಾನ ಪತ್ರಗಳ ವಾಚನ ಶ್ರವಣಗಳ ಏರ್ಪಾಡುಗಳನ್ನು ನಡಿಸಬೇಕೆಂದೂ ನಿರ್ಣಯಿಸೋಣಾಯಿತು

ಈ ಸಭಾ ಕಾರ್ಯ ನಡಿಸಿದ ಸ್ಥಳದ ಹತ್ತಿರವೇ ಇದ್ದ [illegible]ದು ಸೇಂದಿ ಅಂಗಡಿಯು ಆ ದಿನ ಕುಡಿಕರ್‍ರ್ಯಾರೂ ಇಲ್ಲದೆ, ಬರೇ ಶೂನ್ಯವಾಗಿಯೂ, ನಿಶಬ್ದವಾಗಿಯೂ ಇದ್ದ ನೋಟವು ಮದ್ಯಪಾನ ನಿಷೇಧಕರಿಗೆಲ್ಲಾ ಅಧಿಕ ಸಂತೋಷವನ್ನುಂಟುಮಾಡಿತು

ಕಾಪು —ಮಲ್ಪೆಯಲ್ಲಿ ಕೆಲವರು ಮಧುಪಾನ ವರ್ಜನೆಗೆ ಪ್ರಮಾಣಮಾಡಿಕೊಂಡ ಬಿಟ್ಟಂತೆಯೇ ಇಲ್ಲಿಯ ೬ ಯುವಕರು ಬೀಡಿ ಎಳೆಯುವ ಅಭ್ಯಾಸವನ್ನು ಇನ್ನು ಮುಂದೆ ಬಿಟ್ಟುಬಿಡುವೆವು ಎಂದು ಕ[illegible]ಕ್ತವಾಗಿ ೪ ಮಂದಿ ಮರ್ಯಾದಸ್ಥರ ಎದುರು ಒಪ್ಪಿರುತ್ತಾರೆ ಇದೇ ರೀತಿ ಬೀಡಿ ಎಳೆಯುವ ಅಭ್ಯಾಸದವರು ಪ್ರಮಾಣಮಾಡಿಕೊಂಡು ಬಿಟ್ಟಲ್ಲಿ ಲೋಕಕ್ಕೆ ಮಹದುಪಕಾರವಾದೀತು

ಯಮಾಳದಲ್ಲಿ ಟಪ್ಪಾಲಾಫೀಸು ಆಗುವ ಸಂದರ್ಭ ಬೋರ್ಡು ಶಾಲೆಯ ಮಾಸ್ತರರಿಗೆ ಆ ಕೆಲಸವನ್ನು ಕೊಟ್ಟಲ್ಲಿ ಹೆಚ್ಚಿನ ಮನಾಫೆ ಸಿಕ್ಕದು ಎಂತಲೂ ಊರ ಯೋಗ್ಯ ಇತರ ಜನರಿಗೆ ಕೊಟ್ಟಲ್ಲಿ ದೀರ್ಘಕಾಲ ಆಫೀಸು ಬಾಳುವಲ್ಲಿ ಸಂಶಯವಿರಲಾರದು ಎಂತಲೂ ಊರ ಜನರ ಅಭಿಪ್ರಾಯವಾಗಿದೆ ಈ ಸಂಗತಿ ತಕ್ಕ ಸಮಯ ಇಲಾಖಾ ಉದ್ಯೋಗಸ್ಥರು ಲಕ್ಷ್ಯಕ್ಕೆ ತಂದುಕೊಳ್ಳುವದು ವಿಹಿತವಾಗಿದೆ

ಉಡ್ಪಿಯಿಂದ ಪಾಂಗಾಳಕ್ಕೆ ಜಟಕಾ ಚಾರ್ಜು ಈಗ ಇಮ್ಮಡಿ ಆಗಿಯದೆ ಇದು ಈಗ ನಡಿಯುವ ಮಹಾ ಯುದ್ಧದ ಮಹಾತ್ಮೆಯಿಂದಲೋ ಯಾ ಈ ಜಲ್ಲೆಯಲ್ಲಿ ಒಂದು ಕಂಪೆನಿ ಎದುರಿಗೆ ಇನ್ನೊಂದು ಕಂಪೆನಿ ಸ್ಥಾಪಿಸಲು ಯೋಗ್ಯವಾದ ಮಹನೀಯರು ಇಲ್ಲವೆಂಬ ಆಲೋಚನೆಯಿಂದಲೋ ಎಂಬದು ತಿಳಿಯಲಾರದು.

ಉಡ್ಪಿ ಮುನ್ಸೀಫ್ ಕೋರ್ಟಿಗೆ ಹೋದ ಎಲ್ಲಾ ಸಾಕ್ಷಿಗಾರರಿಗೆ 'ಕಲ್ಕತ್ತೆಯ ಸೆರಮನೆಯ' ನೆನಪು ಬರುವಂತಿದೆ ಎಂತಲೂ ಅನಾವಶ್ಯಕವಾಗಿ ಸಾಕ್ಷಿಗಾರರನ್ನು ದೀರ್ಘ ಕಾಲದ ವರೇಗೆ ಒಂದು ಸಣ್ಣ ಕೋಣೆಯಲ್ಲಿ ತುಂಬಿಸಿ ಬಿಟ್ಟು ಹೊರಗೆ ಹೋಗಲು ಅಪ್ಪಣೆ ಇಲ್ಲವೆಂತಲೂ ಸಾಕ್ಷಿಗಾರರು ಗುಣುಗುಟ್ಟುತ್ತಿರುವರು. ಈ ವಿಷಯ ಮಾನ್ಯ ಈಗಿನ ಮುನ್ಸೀಫರು ತಕ್ಕ ನಿಗಾ ಕೊಟ್ಟಲ್ಲಿ ಬಡ ಜನರಿಗೆ ಮಹೋಪಕಾರವಾದೀತು.

ಉಡುಪಿ —ಮಳೆಯು ಈ ಉತ್ತರಾ ನಕ್ಷತ್ರದ ಆರಂಭದವರೆವಿಗೂ ಚನ್ನಾಗಿ ಸುರಿದು ಈಗ ಸ್ವಲ್ಪ ಕಡಿಮೆಯಾದದ್ದು ಪೈರುಗಳು ಮಾಗುವುದಕ್ಕೂ ಕಟಾವಿಗೂ ಅನುಕೂಲವಾಯಿತು. [illegible] ಕಾರರೆಲ್ಲರು ಸ್ವೀಮಂನ ಬರೋ[illegible] ಎದುರು ನೋಡುತ್ತಿದ್ದಾರೆ. ಅಲ್ಲಲ್ಲಿ ಜ್ವರ[illegible]ಸಾರಗಳು ಆರಂಭವಾಗಿದೆ.

"ಇಲ್ಲಿಯ ಶಾರದಾ[illegible] ಸಂಸ್ಕೃತ [illegible] ಶಾಲೆಯ ಪ್ರವರ್ತಕರೂ [illegible] ಶ್ರೀಮತಿ ಜಾನಕಿ[illegible] ತಾ. ೧೪ರಲ್ಲು ದೈವಾಧೀನರಾದರು. [illegible] ವಿದ್ಯಾಪಕ್ಷಪಾತಿಗಳಿಗೆಲ್ಲಾ ಬಹು ವ್ಯಸನವಾಗಿದೆ. ಅವರ [illegible] ಯಾರು ಪರಿ[illegible]

ಅದೇ [illegible] ಹೋಗಿದ್ದ [illegible] ಇದ್ದು [illegible]

ತಾ. ೧೫ರಲ್ಲು ಇಲ್ಲಿಯ ಅಬ್ಕಾರಿ ಸರ್ಕಲ್ ಇನ್ಸ್‌ಪೆಕ್ಟರವರ ಇಬ್ಬರು ಮೊಮ್ಮಕ್ಕಳು ಜ್ವರದಿಂದ ಒಂದೇ ದಿವಸ ಒಂದು ತಾಸಿನೊಳಗೆ ಮೃತರಾದರು.

ಪರ್ಯಾಯ ಶ್ರೀ ಸೀರೂರು ಶ್ರೀ ಪಾದಂಗಳವರು ಬಹಳ ಶಿಥಿಲವಾಗಿದ್ದ ಶ್ರೀ ಕೃಷ್ಣಮಠದ ಭೋಜನಶಾಲೆ ಎಂಬ ಛತ್ರವನ್ನು ಪೂರ್ಣ ಹೊಸದಾಗಿ ಕಟ್ಟಿಸುವದಕ್ಕೆ ಉಪಕ್ರಮಿಸಿರುತ್ತಾರೆ ಸುಮಾರು ೨೦—೩೦ ಸಹಸ್ರ ರೂಪಾಯಿ ವೆಚ್ಚವಾಗುವದೆಂತ ತೋರುತ್ತದೆ.

ಇಲ್ಲಿಯ ಸಂಸ್ಕೃತ ಪಾಠಶಾಲೆಯ ಮೇಲಿನ ಮೂರು ತರಗತಿಗಳ ವಿದ್ಯಾರ್ಥಿಗಳು ಕೆಲವು ದಿವಸಗಳಿಂದ ಒಗ್ಗಟ್ಟಾಗಿ ಶಾಲೆಗೆ ಬರುವದನ್ನು ಬಿಟ್ಟಿರುತ್ತಾರಂತೆ ಇತ್ತಲಾಗೆ ಇಬ್ಬರು ಉಪಾಧ್ಯಾಯರನ್ನು ರಾಜಿನಾಮೆ ಕೊಡುವಂತೆ ಮಾಡಿದ್ದೆ ಇದಕ್ಕೆ ಕಾರಣವೆಂತ ತೋರುತ್ತದೆ ಒಟ್ಟಾರೆ ಈಗಿನ ಹೊಸ ಅಧಿಕಾರಿಗಳು ತಮ್ಮ ರೂಲ್ಸುಗಳಿಂದಲೂ ಹುಕುಮುಗಳಿಂದಲೂ ಕಾಯಿದೆಗಳಿಂದಲೂ ಪಾಠಶಾಲೆಯನ್ನು "ಕುಂಬಾರಗೆ ವರ್ಷ ದೊಣ್ಣೆಗೆ ನಿಮಿಷ" ವೆಂಬಂತೆ ಕವಚಿ ಇಡುತ್ತಾರೆಂತ ತೋರುತ್ತದೆ

~~~~~~

ಬಂಗ್ರಮಂಜೇಶ್ವರ — ಇದೇ ಕಳೆದ ತಾ ೧೬ರಲು ಇಲ್ಲಿಯ ಮೊಗೇರ್ ಜಾತಿಯ, ಗುರಿಕಾರರ ತಾವು ಭಜಿಸಿ ಬರುವ ಮಲ್ಲರಾಯ ಭೂತಸ್ಥಾನದಲ್ಲಿಯೂ ತಾ. ೨೨ರಲ್ಲು ಇಲ್ಲಿಯ ಗಾಣಿಗ ಜಾತಿಯವರೆಲ್ಲರೂ ತಾವು ಭಜಿಸಿ ಬರುವ ಶಿವಸ್ಥಳವಾದ ಸಾಸ್ತಾಂ ಎಂಬ ದೇವಸ್ಥಾನದಲ್ಲಿಯೂ ಪ್ರತ್ಯೇಕ ಪ್ರತ್ಯೇಕ ಸ್ಥಳಗಳಲ್ಲಿ ಸಭೆ ಕೂಡಿಸಿ ಯುರೋಪ ಖಂಡದಲ್ಲಿ ಈಗ ಸಂಭವಿಸಿದ ಘೋರ ಯುದ್ಧದಲ್ಲಿ ನಮ್ಮನ್ನು ಆಳುವ ಬ್ರಿಟಿಷ್ ಸಾಮ್ರಾಜ್ಯಕ್ಕೆ ಜಯ ಉಂಟಾಗಬೇಕೆಂದು ಶ್ರೀ ದೇವರಿಗೆ ಅಭಿಷೇಕ ಪೂಜೆ ದೀಪಾರಾಧನೆ ಮುಂತಾದ ವಿನಿಯೋಗಗಳನ್ನು ಪೂರೈಸಿ ತಮಗಿರುವ ರಾಜಭಕ್ತಿಯನ್ನು ಸೂಚಿಸುವ ಬಗ್ಗೆ ತಮ್ಮ ತಮ್ಮ ಯಥಾಸಾಧ್ಯ ದ್ರವ್ಯ ಸಹಾಯವನ್ನು ಪ್ರತ್ಯೇಕ ಒಂದು ಸಭೆ ಸೇರಿಸಿ ಕೂಡಿಸಿ ದ್ರವ್ಯ ವಂತಿಗೆ ಮಾಡಿ ಯುದ್ಧ ಫಂಡಿಗೆ ಕಳುಹಿಸಿಕೊಡಬೇಕೆಂತ ನಿರ್ಣಯಿಸಿ, ಶ್ರೀ ದೇವರ ಬ್ರಿಟಿಷರಿಗೆ ಜಯ ದಯಪಾಲಿಸಲಿ ಎಂಬ ಘೋಷದಿಂದ ಸಭೆ ಅಗಲಿತು

ಇಲ್ಲಿಯ ಶ್ರೀ ಸರಸ್ವತಿ ಬಾಲಿಕಾ ಪಾಠಶಾಲೆಯ ಬಾಲಿಕೆಯರಿಗೆಲ್ಲಾ ಅವರ ಉಪಾಧ್ಯಾಯರು ಯುರೋಪ ಖಂಡದಲ್ಲಿ ಈಗ ಸಂಭವಿಸಿದ ಯುದ್ಧದ ಸಮಾಚಾರವನ್ನು ನಕ್ಷೆಯೊಂದಿಗೆ ವಿವರಿಸಿ ತಿಳಿಸಿದಲ್ಲದೆ ಬ್ರಿಟಿಷರಿಂದ ನಮಗೆ ಉಂಟಾದ ಮಹದುಪಕಾರವನ್ನು ಎಲ್ಲರಿಗೂ ತಿಳಿಯುವ ಹಾಗೆ ಉಪದೇಶಿಸಿ ತತ್ಕಾಲ ಅವರು ಬಾಲಿಕೆಯರೊಂದಿಗೆ ತಾ ೨೨ರಲ್ಲು ಸುಮಾರು ೧೧ ಘಂಟೆಗೆ ಶ್ರೀ ಮದನಂತೇಶ್ವರ ದೇವಸ್ಥಾನಕ್ಕೆ ಹೋಗಿ ಶ್ರೀ ಸನ್ನಿಧಿಯಲ್ಲಿ ನಮ್ಮ ಬ್ರಿಟಿಷ ರಾಜರಿಗೆ ಜಯ ಉಂಟಾಗಲಿ ಎಂದು ಪ್ರಾರ್ಥಿಸಿ ಪುನಹ ಶಾಲೆಗೆ ಹಿಂತೆರಳಿದ ಸಂಗತಿಯನ್ನು ತಿಳಿಸುವದಕ್ಕೆ ಸಂತೋಷ ಪಡುತ್ತೇವೆ

~~~~~~

ಬೆಳ್ತಂಗಡಿ — ಇಲ್ಲಿಯ ಸಬ್ ಪೋಸ್ಟು ಮಾಸ್ತರಾಗಿದ್ದ ಮ. ರಾ. ರಾ. ಶಿವರಾಯರ ಬದ್ತಿಯ ಮೇಲೆ ತಲಚೇರಿಗೆ ವರ್ಗಾಯಿಸಲ್ಪಟ್ಟಿರುವರು ಇವರ ಬದಲಿಗೆ ಬಂಟ್ವಾಳದ ಪೋಸ್ಟಾಫೀಸಿನ ಮ. ರಾ. ರಾ ಜನಾರ್ಧನ ಭಟ್ಟರು ಬಂದಿರುತ್ತಾರೆ

ಇದೇ ತಿಂಗಳ ತಾ ೧೯ರಲ್ಲು ಬೆಳಗ್ಗೆ ಇಲ್ಲಿಯ ಸಬ್ ಜೈಲಿನಲ್ಲಿದ್ದ ಶಿಕ್ಷೆ ವಿಧಿಸಲ್ಪಟ್ಟ ಒಬ್ಬ ಬಂದಿವಾನನು ಪರಾರಿಯಾದರೆ ಪೋಲೀಸಿನವರೂ ಇತರರೂ ಬಹಳ ಪ್ರಯತ್ನಪಟ್ಟು ಹುಡುಕಿ ಸದರಿ ಯವನನ್ನು ಅದೇ ದಿನ ರಾತ್ರಿ [illegible]ದು ತಂದಿರುತ್ತಾರೆ

ಯುದ್ಧದ ಸಂಬಂಧ ಇಲ್ಲಿಯ ಸಾಹುಕಾರರು ಜೀನಸುಗಳಿಗೆ ಬೆಲೆ ಏರಿಸುತ್ತಾರೆ. ನಮ್ಮ [illegible] ಉತ್ಪತ್ತಿಯಾಗುವ ಜೀನಸುಗಳಿಗೆ ಬೆಲೆ ಏರಿಸುವದು ಅತಿ ಅನ್ಯಾಯ ಈ ರೀತಿ ಬೆಲೆ ಏರುವದಾದರೆ ಬಡಬಗ್ಗರ ಜೀವನೋಪಾಯವು ಕಷ್ಟವಾಗುವದು.

~~~~~~

ಹಳೆಅಂಗಡಿ — ಪ್ರಕೃತ ನಡಿಯುವ ಯುದ್ಧದಲ್ಲಿ ಇಂಡಿಯಾ ದೇಶದ ಶ್ರೀಮನ್ಮಹಾರಾಜರವರಿಗೆ ಜಯ ಪ್ರಾಪ್ತಿಯಾಗುವ ಕುರಿತು ಹಳೆಅಂಗಡಿ, ಪಾವಂಜೆ, ಸಸಿಹಿತ್ಲು ಈ ಗ್ರಾಮಸ್ಥರು ತಮ್ಮ ಸ್ವಂತ ಖರ್ಚಿನಿಂದ ಪಾವಂಜೆ ಶ್ರೀ ಮಹಾಲಿಂಗೇಶ್ವರ ದೇವರ ಸನ್ನಿಧಿಯಲ್ಲಿ ಪಾವಂಜೆ ಮ॥ ರಾ. ಶ್ಯಾಮರಾವ್, ಹಳೆಅಂಗಡಿ ಪಟೇಲ್ ಮ. ರಾ ರಾ. ಕೊರಗಮ್ಮೊಲಿ ಇವರ ಅಧ್ಯಕ್ಷತೆಯಲ್ಲಿ ಇದೇ ಸಪ್ಟಂಬರ ತಿಂಗಳ ತಾ. ೮ನೇ ಮಂಗಳವಾರ ಮಧ್ಯಾಹ್ನ ಬ್ರಾಹ್ಮಣ ಸಮಾರಾಧನೆಯನ್ನೂ, ರಾತ್ರೆ ದೀಪಾರಾಧನೆ ಹೂವಿನ ಪೂಜೆಯನ್ನೂ ಮಾಡಿಸಿ ಶ್ರೀಮನ್ಮಹಾರಾಜರವರಿಗೆ ಶ್ರೀ ದೇವರು ಆಯುರಾರೋಗ್ಯ, ಸರ್ವ ಸಂಪತ್ತೂ, ಯುದ್ಧದಲ್ಲಿ ಜಯವೂ ಕರುಣಿಸಲೆಂದ ಸರ್ವರೂ ಪ್ರಾರ್ಥಿಸಿ ನಂತರ ಸರ್ವರಿಗೂ ಪಂಚಗಜ್ಜಾಯವನ್ನು ಹಂಚಲಾಯಿತು

~~~~~~

ಪುತ್ತೂರು — ಇದೇ ತಾ ೧೯ರ ವರೆಗೆ ೧೪೨ ಇಂಚ್ ೫೩ ಸೆಂಟ್ಸ್ ಮಳೆ ಬಿದ್ದಿರುವದು

ನಮ್ಮ ಟೌನಿಗೆ ತಾಲೂಕ ಬೋರ್ಡಿನವರು ಒದಗಿಸಿಕೊಟ್ಟ ಮೂರು ದೀಪಸ್ತಂಭಗಳು ಹಲವು ದಿವಸಗಳ ವರೆಗೆ ಮಾತ್ರ ಉರಿಸಲ್ಪಡುತ್ತಿದ್ದವು. ಈಗ ಉರಿಯದೆ ಶುಕ್ಲಪಕ್ಷದಲ್ಲಿಯೂ ಕೃಷ್ಣಪಕ್ಷದಲ್ಲಿಯೂ ಏಕರೀತಿಯಲ್ಲಿರಲಿಕ್ಕೆ ಕಾರಣವೇನು?

ಇದೇ ತಾ ೨೬ನೇ ಶನಿವಾರ ಇಲ್ಲಿಯ ಶಾರದಾ ವಾಚಕ ಮಂದಿರದಲ್ಲಿ ಶಾರದಾ ಪೂಜೆಯು ತಾ ೨೭ರಲ್ಲು ಶಾರದಾ ವಾಚಕ ಮಂದಿರದ ಸಪ್ತಮ ವರ್ಷದ ವರ್ಧಂತಿ ಉತ್ಸವವೂ ಇಲ್ಲಿಯ ಯೂನಿಯನ್ ಕ್ಲಬ್ಬಿನ ಕಟ್ಟೋಣದಲ್ಲಿ ಜರಗುವದು

ಕೆಂದಿ ಗಡಂಗಿನ ಕಟ್ಟೋಣಗಳು ಭದ್ರವಾದ ಕಟ್ಟೋಣಗಳಾಗಿ ಕಟ್ಟಬೇಕೆಂತಲೂ ಒಂದು ಕೋಣೆ ಇದ್ದು ಬಾಗಿಲು ಬೀಗ ಇರದಾಗಿರಬಾರದು ಲೈಸನ್ಸು ಸಿಕ್ಕಲಾರದೆಂತಲೂ ಕೆಂದಿ ಶರಾಬು ಗಡಂಗುಗಳ ಗೋಡೆಗಳಿಗೆ ಸುಣ್ಣ ಸಾರಿಸಬೇಕೆಂತಲೂ ಗಡಂಗಿನ ಸಮೀಪ ಯಾವ ತರದ ಹೇಸಿಗೆ ಮುಂತಾದ ಗಲೀಜು ಇಲ್ಲದಂತೆ ಅಂಗಡಿಯ ಶುಚಿಯಾಗಿರಬೇಕೆಂತಲೂ ಅಬ್ಕಾರಿ ಇಲಾಖೆಯವರ ಹೊಸ ಕಾಯಿದ ತಂದಿರುವರು

~~~~~~

ಮಂಗಳೂರು

ಕಾಸರಗೋಡಿನ ಪೋಲೀಸ್ ಸಬ್ ಇನ್ಸ್‌ಪೆಕ್ಟರರಾದ ಮ॥ [illegible] ಸೋನ್ಸರವರು ಮಂಗಳೂರು ಟೌನಿಗೆ ವರ್ಗಾಯಿಸಲ್ಪಟ್ಟಿರುವರು

ಇಲ್ಲಿಯ ಮಹಮ್ಮದೀಯರು ತಮ್ಮ ರಾಜಭಕ್ತಿಯನ್ನು ತೋರಿಸಿ ವೈಸರಾಯ ಪ್ರಭುಗಳವರಿಗೂ ಮದ್ರಾಸ್ ಗವರ್ನರ ಪ್ರಭುಗಳವರಿಗೂ ಕಳುಹಿಸಿದ ತಂತಿಗಳಿಗೆ ವೈಸರಾಯ ಪ್ರಭುಗಳವರಿಂದಲೂ ಮದ್ರಾಸ್ ಗವರ್ನರ ಪ್ರಭುಗಳವರಿಂದಲೂ ಕೃತಜ್ಞತಾ ಪೂರ್ವಕವಾದ ಉತ್ತರವು ಬಂದಿರುವುದು

ಬಂಟ್ವಾಳದಲ್ಲಿ ಕಂಚುಗಾರ ಪೊನ್ನನ ರಹಿಮಾನನನ್ನು ಕೊಲೆಮಾಡಿದ ಮೊಕದ್ದಮೆಯಲ್ಲಿ ಜಡ್ಜರು ಅಪಾದಿತನಿಗೆ ಪಾಶಿಕ್ಕೆಯನ್ನೂ ಸ್ತ್ರೀಯನ್ನು ಗಾಯ ಪಡಿಸಿದ ತಪ್ಪಿನ ಮೇಲೆ ೭ ವರ್ಷಗಳ ಕಠಿಣ ಸಜೆಯನ್ನೂ ವಿಧಿಸಿದರು

ಕಾಸರಗೋಡಿನ ಬಿಲ್ಲ ಕರಿಯ ಎಂಬ ಊರ ವೈದ್ಯನು ತನ್ನ ಜಾತಿಯ ಮುತ್ತೈದೆಯ ಬಳಿಗೆ ಹೋಗಿ ಆಕೆಯನ್ನು ಕೊಂದು ಆಭರಣಗಳನ್ನು ಕದ್ದುಕೊಂಡನೆಂಬದಾಗಿ ತಿಳಿಸಿತ್ತಷ್ಟೆ ಈ ಮೊಕದ್ದಮೆಯಲ್ಲಿ ಜಡ್ಜರು ರುಜುವಾತಿಲ್ಲವೆಂಬದಾಗಿ ಆಪಾದಿತನನ್ನು ಬಿಟ್ಟುಬಿಟ್ಟರು ಆದರೆ ಕಳ್ಳತನದ ತಪ್ಪಿನ ಮೇಲೆ ಇನ್ನು ವಿಚಾರಣೆ ನಡೆಸುವ ಬಗ್ಗೆ [illegible] ಲ್ಲಿಟ್ಟಿರುವರು

ಮುಂಬಯಿ ಸ್ಟೀಮ್ ನೇವಿಗೇಷನ್ ಕಂಪೆನಿಯ ನೇತ್ರಾವತಿ ಸ್ಟೀಮರು ನಿನ್ನೆ ಇಲ್ಲಿಗೆ ಮಧ್ಯಾಹ್ನ ಮೂರು ಗಂಟೆಗೆ ಬಂದು ತಲ್ಪಿರುವುದು ಈ ಹೊತ್ತು ಮುಂಬಯಿಂದ ಈ ಕಂಪೆನಿಯ ಮತ್ತೊಂದು ಹಡಗವು ಮಂಗಳೂರಿಗೆ ತೆರಳುವುದಾಗಿ ತಿಳಿಯುತ್ತೇವೆ

ಮದ್ರಾಸು ರೆವಿನ್ಯೂ ಬೋರ್ಡಿನ ಸೆಪರೇಟ್ ರೆವಿನ್ಯೂ ಮೆಂಬರರು ಬರುವ ತಿಂಗಳಾರಂಭದಲ್ಲಿ ಇಲ್ಲಿಗೆ ಬರುವರೆಂಬ ವರ್ತಮಾನ ವಿರುವದು

ಮುಲ್ಕಿಯ ಶ್ರೀ ವೆಂಕಟರಮಣ ದೇವಸ್ಥಾನದ ಸಲುವಾಗಿ ಅದರ ಆಡಳಿತೆ ಮೊಕ್ತೇಸರರಾದ ಮ॥ ರಾ॥ ರಾ॥ ಉದ್ಯಾವರ ಶ್ರೀನಿವಾಸ ಶ್ಯಾನುಭಾಗರೂ ಮ॥ ರಾ॥ ರಾ॥ ಕೋಟಿಕೇರಿ ಗೋಪಾಲಕೃಷ್ಣ ಕುಡ್ವರೂ ಕಳುಹಿಸಿಕೊಟ್ಟ ಔದಾರ್ಯ ಪೂರ್ವಕವಾದ ರೂ. ೨೫೧—೦—೦ ವಂತಿಗೆಯನ್ನು ಸ್ವೀಕರಿಸಿ ಅವರ ರಾಜಭಕ್ತಿ ಪುರಸ್ಸರವಾದ ಈ ಕೆಳಗಣ ಪತ್ರವನ್ನೋದಲು, ಕಲೆಕ್ಟರ ದೊರೆಗಳವರು ಬಹಳ ಆನಂದ ಭರಿತರಾಗಿರುವರು.

ಅವರು ಕಳುಹಿಸಿಕೊಟ್ಟ ಮೊಬಲಗನ್ನು ಮದ್ರಾಸು ಯುದ್ಧದ ಫಂಡಿಗೆ ಜಮೆ ತೆಗೆದುಕೊಂಡಿರುತ್ತದೆ.

ಮಹಾರಾಜಶ್ರೀ ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರ ದೊರೆಗಳವರ ಸನ್ನಿಧಾನಕ್ಕೆ

ಸಂ—೧೯೧೪ನೇ ಇಸವಿಯ ಸಪ್ಟಂಬರ ತಾ ೧೭ರಲ್ಲು ಮುಲ್ಕಿ ಗೌಡಸಾರಸ್ವತ ಬ್ರಾಹ್ಮಣ ಹತ್ತು ಸಮಸ್ತರಿಗೆ ಸಮ್ಮಂಧಿಸುವ ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದ ಶ್ರೀಪ್ಪ ಮೊಕ್ತೇಸರ ಉದ್ಯಾವರ ನರ್ಸಯ್ಯ ಶ್ಯಾನುಭಾಗರ ಮಗ ಶ್ರೀನಿವಾಸ ಶ್ಯಾನುಭಾಗ ೧, ಕೋಟಿಕೇರಿ ಕೃಷ್ಣಕುಡ್ವರ ಮಗ ಸದರಿ ದೇವಸ್ಥಾನದ ಆಡಳಿತೆ ಮೊಕ್ತೇಸರ ಗೋಪಾಲಕೃಷ್ಣ ಕುಡ್ವ ೧ ಕೂಡಾ ೨ ಜನರು ಬರೆಕೊಂಡ ಅರ್ಜಿ: —

ಬ್ರಿಟಿಷ ಸಂಸ್ಥಾನದ ವ ಹಿಂದೂದೇಶದ ಚಕ್ರವರ್ತಿಯವರಾದ ನಮ್ಮ ಅರಸರ ಮೇಲೆ ಅನ್ಯಾಯವಾಗಿ ಜರ್ಮನಿಯವರು ಯುದ್ಧಕ್ಕೆ ಬಂದಿರುವದು-ಪೇಪರುಗಳ ಮೂಲಕವಾಗಿಯೂ ಬೇರೆ ಜನರ ಮೂಲಕವಾಗಿಯೂ ಕೇಳಿ ತುಂಬಾ ವ್ಯಸನಪಟ್ಟು ನಾವು ಶ್ರೀ ದೇವರ ಮುಂದೆ ನಮ್ಮ ಅರಸರು ಯುದ್ಧದಲ್ಲಿ ಪೂರ್ಣ ಜಯ ಹೊಂದಬೇಕಾಗಿಯೂ ಶೀಘ್ರದಲ್ಲಿ ಸದರಿ ಯುದ್ಧವು ಮುಗಿಯಬೇಕಾಗಿಯೂ ದೇವರನ್ನು ಪ್ರಾರ್ಥಿಸುತ್ತೇವೆ.

ಸದರಿ ಯುದ್ಧದ ಫಂಡಿನ ಬಗ್ಗೆ ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದಿಂದ ರೂ ೨೫೧ ಇನ್ನೂರೈವತ್ತೊಂದು ಈ ಅರ್ಜಿ ಮೂಲಕ ಹಾಜರು ಪಡಿಸಿರುತ್ತೇವೆ. ಸದರಿ ರೂಪಾಯಿಗಳನ್ನು ತಾವು ಸ್ವೀಕರಿಸಿ ಸದರಿ ಯುದ್ಧದ ಫಂಡಿಗೆ ನಮ್ಮ ದೇವಸ್ಥಾನದ ಹೆಸರಿನಿಂದ ರವಾನಿಸೋಣಾಗಬೇಕಾಗಿ ಅಪೇಕ್ಷಿಸುತ್ತೇವೆ

ನಮ್ಮ ಅರಸರು ನಮ್ಮನ್ನು ನಡಿಸುವ ನ್ಯಾಯ ಧರ್ಮಗಳಿಂದ ಪೂರ್ಣ ಜಯಹೊಂದಲೇಬೇಕು ಆ ಪ್ರಕಾರ ಪೂರ್ಣ ಜಯ ಹೊಂದುವಂತೆ ಪ್ರತಿನಿತ್ಯವೂ ದೇವರ ಪೂಜೆ ಸಮಯ ದೇವರನ್ನು ಪ್ರಾರ್ಥಿಸುತ್ತಾ ಇರುತ್ತೇವೆ.

(*Sd*) ಆಡಳಿತ ಮೊಕ್ತೇಸರ ಗೋಪಾಲಕೃಷ್ಣ ಕುಡ್ವನ ರುಜು.

(*Sd*) ಮೊಕ್ತೇಸರ ಶ್ರೀನಿವಾಸ ಶ್ಯಾನುಭಾಗನ ರುಜು

ಇಲ್ಲಿಯ ಮೆ॥ ಮಾರ್ಟಿನ್ ಪ್ಯಾಸರವರು ಇಂಪೀರಿಯಲ್ ರಿಲೀಫ್ ಫಂಡಿಗೆ ರೂ ೧೦೦, ಮದ್ರಾಸ್ ಯುದ್ಧ ಫಂಡಿಗೆ ರೂ ೧೦೦ ವಂತಿಗೆ ಕೊಟ್ಟಿರುವರು.

~~~~~~

ಜೀನಸು ಧಾರಣೆ. (ರಖಂ)

ಅವ್ವಲ್ ಮಸ್ಕತಿ ಅಕ್ಕಿ	5— 5—0	5— 9—0
ದುಯಂ ,, ,,	5— 2—0	5— 4—0
ಸುಗ್ಗಿ ,,	5— 0—0	5— 3—0
ಗಾಡಿ ಸುಗ್ಗಿ ,,	4—12—0	4—13—0
ಗುಡ್ಡು ,,	5— 0—0	5— 2—0
ದುಯಂ ಗುಡ್ಡು ,,	4—12—0	4—13—0
ಅವ್ವಲ್ ಬೆಳ್ತಿಗೆ ,,	5— 8—0	5—10—0
ಗುಡ್ಡು ಬೆಳ್ತಿಗೆ ,,	5— 0—0	5— 3—0
ರಂಗೂನು ಬೆಳ್ತಿಗೆ ಗೋಣಿ ೧ರ	9— 0—0	9— 6—0
ಗೋಧಿ ಗೋಣಿ ೧ರ	. . .	13— 0—0
ಹುರುಳಿ ಗೋಣಿ ೧ರ	. . .	8— 6—0
ಕಡಲೆ ಗೋಣಿ ೧ರ.	. . .	11— 8—0
ತೊಗರಿ ಗೋಣಿ ೧ರ	. . .	12— 0—0
ತೊಗರಿ ಬೇಳೆ ಗೋಣಿ ೧ರ.	12—0—0	15— 0—0
ಉದ್ದು ಗೋಣಿ ೧ರ	. . .	10— 8—0
ಊರು ಬೆಲ್ಲ ಖಂಡಿ ೧ರ	. . .	55— 0—0
ಉಪ್ಪು ಗೋಣಿ ೧ರ	. . .	4— 2—0
ಕೊಬ್ರಿ ಖಂಡಿ ೧ರ	. . .	70— 0—0
ಕೊಬ್ರಿ ಹಿಂಡಿ ಖಂಡಿ ೧ರ	. . .	26— 8—0
ಎಳ್ಳಿಂಡಿ ಖಂಡಿ ೧ರ	. . .	32— 8—0
ಕೊಬ್ರಿ ಎಣ್ಣೆ ಮುಡಿ ೧ರ	. . .	5— 6—0
ಎಳ್ಳೆಣ್ಣೆ ಮುಡಿ ೧ರ	. . .	7— 0—0
ಚಿಮಿಣಿ ಎಣ್ಣೆ ಪೆಟ್ಟಿಗೆ ೧ರ	. . .	5— 4—0
ಮೋರಿಸ್ ಸಕ್ಕರೆ ಮುಡಿ ೧ರ	. . .	4— 0—0
ಕಾಫಿ ಖಂಡಿ ೧ರ.	165—0—0	178— 0—0
ಬಿಳೇಗೋಟು ಖಂಡಿ ೧ರ	95—0—0	98— 0—0
[illegible] ತಗಡು ಮುಡಿ ೧ರ	. . .	16— 8—0
[illegible] ಪಾತ್ರೆಗಳು	. . .	21— 0—0
[illegible] ಸೇರು ೧ರ	. . .	20— 0—0
[illegible] ಖಂಡಿ ೧ರ	. . .	35— 0—0
ಗೇರು ಬೀಜ ಮುಡಿ ೧ರ	. . .	1— 8—0



ಎಲಂಬಿಕ್ ವೆಜಿಟೆಬಲ್ ಟೋನಿಕ್ ಸಿರಪ್.

ಬಲಹೀನರಿಗೂ ಕ್ಷೀಣವಾದವರಿಗೂ ಉಪಯೋಗಕರವಾಗಿರುವ ಔಷದಿಯು ಆಯುರ್ವೇದ ಗ್ರಂಥಗಳಲ್ಲಿ ಪ್ರಶಂಸಿಸಲ್ಪಟ್ಟ ಉತ್ತಮ ಔಷದಿಗಳನ್ನು ಕೂಡಿರುವಂಥಾದ್ದು. ಪಿತ್ಥಕೋಶವನ್ನು ಚೇತರಿಸಿ ಜೀರ್ಣಶಕ್ತಿಯನ್ನು ಸರಿಪಡಿಸುವ್ರದು ರಕ್ತ ಶುದ್ಧಿಯನ್ನುಂಟುಮಾಡಿ ರಕ್ತ ಬಲವನ್ನು ಹೆಚ್ಚಿಸುವುದು ದೇಹಪ್ರಕೃತಿಯನ್ನು ಪೂರ್ಣವಾಗಿ ನೂತನಗೊಳಿಸಿ ನವಚೇತನವನ್ನುಂಟುಮಾಡುತ್ತಿದೆ

ಸಾವಿರಾರು ಜನರಿಂದ ಉಪಯೋಗಿಸಲ್ಪಟ್ಟು ಬಹಳ ಗುಣವುಳ್ಳದೆಂದೆನ್ನಿಸಿಕೊಂಡಿದೆ. ಇದರ ಸೇವನೆಯಿಂದ ಅವಗುಣವು ಎಂದೂ ಉಂಟಾಗಲಾರದು ನಿತ್ರಾಣಿಗಳಾದ ಸ್ತ್ರೀಯರಿಗೂ, ಮಕ್ಕಳಿಗೂ ಈ ಔಷಧಿಯನ್ನು ಅಂಜದೆ ಕೊಡಬಹುದು ಬಾಟ್ಲಿ 1ರ ಕ್ರಯ ರೂ. 1-2-0. ಮಾತ್ರೆಗಳಲ್ಲಿ ಸಹ ಈ ಔಷಧಿಯು ದೊರಕುತ್ತದೆ.

ಲೆಕ್ಸೆಟಿವ್. ಬಳಿಕೆಯಾದ ಮಲಬದ್ಧತೆಯನ್ನು ಸರಿಗೊಳಿಸುತ್ತದೆ. ಭೇದಿ ಔಷಧಿಗಳನ್ನು ತಕ್ಕೊಳ್ಳುವುದರಿಂದ ಉಂಟಾಗುವ ಹೊಟ್ಟೆನೋವು, ಜಾಡನೆ, ನಿತ್ರಾಣ, ಮರುದಿನ ಉಂಟಾಗುವ ಮಲಬದ್ಧತೆ ಇತ್ಯಾದಿಗಳು ಇದರ ಸೇವನೆಯಿಂದ ಸಂಭವಿಸವು ಜೀರ್ಣಶಕ್ತಿಯನ್ನು ಸರಿಪಡಿಸಿ ಹಸಿವನ್ನುಂಟುಮಾಡುತ್ತದೆ. ಸೇವನೆಗೆ ಬಹಳ ಯುಕ್ತವಾಗಿರುವುದು. ನೀರಕ್ತತೆಯನ್ನು ಗುಣಪಡಿಸುತ್ತದೆ. ಕೂತಲ್ಲಿಯೇ ಇದ್ದುಕೊಂಡು ವೃತ್ತಿ ನಡಿಸುವವರಿಗೆ ಉಂಟಾಗುವ ಮಲಬದ್ಧತೆಗೆ ಇದು ದಿವ್ಯೌಷಧವಾಗಿರುವುದು

ಬಾಟ್ಲಿ ಒಂದರ ಕ್ರಯ ರೂ. 1—6—0

ಅನೋಡ್ಯಾನ್. ಹೊರಗೆ ಹಾಗಿಸಲಿಕ್ಕೂ ಒಳಗಡೆ ಸೇವನೆಗೂ ಯುಕ್ತವಾದ್ದು ಪ್ರತಿ ಮನೆಯಲ್ಲಿರಬೇಕಾದ ಉತ್ತಮ ಔಷಧಿಯು:—ಶೀತ, ಬೇಧಿ, ಹೊಟ್ಟೆನೋವು, ಕಲರಾ, ಅಗ್ನಿಮಾಂದ್ಯ, ಅತಿಸಾರ ಇವುಗಳನ್ನು ಇದರ ಸೇವನೆಯು ಗುಣಪಡಿಸುವುದು. ಸುಡತ, ಘಾಯಗಳು, ಜಖಮು, ಹಲ್ಲುನೋವು, ವಾತ, ಸಂಧಿವಾತ, ಹುಸಿಗಳ ಕಡಿತ ಇತ್ಯಾದಿಗಳು ಇದರ ಲೇಪನದಿಂದ ಗುಣವಾಗುವವು.

ಬಾಟಿ ಒಂದರ ಕ್ರಯ 7 ಅಣೆ. ಬರೋಡೆಯಲ್ಲಿರುವ ಎಲಂಬಿಕ್ ಕೆಮಿಕಲ್ ವರ್ಕ್ಸ್ ಎಂಬಲ್ಲಿ ಈ ಔಷಧಿಗಳು ತಯ್ಯಾರಾಗುತ್ತಿವೆ. ಪ್ರಾಮುಖ್ಯ ಏಜಂಟರು:—

ಎಸ್. ವೈದ್ಯಾ ಅಂಡ್ ಕೊ. ಪಾರ್ಕ ಟೌನ್ಸ್ ಮದ್ರಾಸು. **S. VAIDYA & Co.,** *Park Town, Madras.*

"ಅಯೊನಿಕ್ ಫಾರ್ಮಸಿ"

ಎಂಬ ಔಷದ ಪರಿಶೋಧನಾ ಗ್ರಹದಲ್ಲಿ ತಯ್ಯಾರಿಸಲ್ಪಡುವ ಪ್ರೊಫೆಸ್ಸರ್ ಗಜ್ಜರರವರ ಶಾಸ್ತ್ರೋಕ್ತ ಔಷಧಗಳು ಅಗ್ಗವಾಗಿಯೂ ಗುಣಕಾರಿಗಳಾಗಿಯೂ ಗೃಹ ಉಪಯೋಗಕ್ಕೆ ತಕ್ಕವುಗಳಾಗಿವೆ.

(1) ಫೀವರ್ ಸೊಲ್ಯೂಷನ್. ಎಂಬ ಜ್ವರನಿವಾರಣೆಯ ರಸಾಯನ, (2) ಫೀವರ್ ಡ್ರೊಪ್ಸ್ ಎಂಬುವ ಜ್ವರನಿವಾರಣ ಬಿಂಧುಗಳು ವಿಷಮಜ್ವರ, ಶೀತಜ್ವರ, ಮೊದಲಾದ ಎಲ್ಲಾ ಬಗೆಯ ಜ್ವರಗಳಲ್ಲಿ ಉಪಯೋಗಿಸಿದ್ದಲ್ಲಿ ಬಹಳ ಗುಣಕಾರಿಗಳಾಗಿ ಕಂಡುಬಂದಿವೆ

(3) ಬ್ಲಡ್ ಪ್ಯುರಿಫ್ಯಾಯಿಂಗ್ ಸೊಲ್ಯೂಷನ್ ಎಂಬುವ ರಕ್ತಶುದ್ಧಿಯ ರಸಾಯನವು ರಕ್ತವು ಅಶುದ್ಧವಾದರೆ ದೇಹಪ್ರಕೃತಿಯು ಕೆಡುವುದು. ರೋಗಿಯು ಇದರಿಂದ ಬಲಹೀನನಾಗುವನು ರಕ್ತದ ಮೂಲಕವೇ ದೇಹದ ಎಲ್ಲಾ ಪಾರ್ಶ್ವಗಳಿಗೂ ಬೇಕಾದ ಪುಷ್ಟಿಯು ದೊರಕೆ ಮಾನಸಿಕ ಮತ್ತು ಶಾರೀರಕ ಬಲವು ಪ್ರಾಪ್ತವಾಗುವುದು ಆದ್ದರಿಂದ ರಕ್ತವು ಯಾವಾಗಲೂ ಶುದ್ಧವಾಗಿರಬೇಕು. ವಿಷಕರ ಪದಾರ್ಥಗಳು ನೆತ್ತರಿನಲ್ಲಿ ಕೂಡಿರುವದಾದರೆ ಎಲ್ಲಾ ಬಗೆ ಇಂದ್ರಿಯ ಚಲನೆಗಳಿಗೆ ತೊಡಕಾಗುವುದು. ನೆತ್ತರಿನಲ್ಲಿರುವ ಅಶುದ್ಧ ಪದಾರ್ಥಗಳು [illegible] ಅನ್ನಕೋಶ, ಪಿತ್ತಕೋಶ ಇವುಗಳನ್ನು ಸೇರಿಕೊಂಡು [illegible]ವನ್ನು [illegible]. ಸರ್ವಸಾಧಾರಣ ರೋಗಗಳ ಮುಖ್ಯಕಾರಣವು ರಕ್ತದ ಅಶುದ್ಧ[illegible]ವುದು. ಬಹುಕಾಲದ ವಾತ, ರಕ್ತದೋಷವು ಚರ್ಮದ ಮೇಲ್ಗಡೆ ಗಟ್ಟಿ[illegible]ಗಿ ಹೊರಬೀಳುವುದೇ ಮೊದಲಾದ ರಕ್ತ ಅಶುದ್ಧತೆಯಿಂದ ಸಂಭವಿಸುವ ಎಲ್ಲಾ ರೋಗಗಳಿಗೂ ಈ ರಸಾಯನವು ಖಾತ್ರಿಯಾದ ಔಷಧಿಯಾಗಿರುತ್ತದೆ. ಕ್ರಯ ಬಾಟ್ಲಿ ಒಂದಕ್ಕೆ ರೂ. 1.

ಅಯೊನಿಕ್ ಫಾರ್ಮಸಿಯಲ್ಲಿ ತಯ್ಯಾರಾದ ಈ ಔಷಧಗಳೆಲ್ಲ ಮದ್ರಾಸಿನಲ್ಲಿ ಕೆಳಗಿನ ವಿಳಾಸದವರಲ್ಲಿ ದೊರಿಯುತ್ತವೆ.

S. VAIDYA & Co., *Park Town, Madras.* ಎಸ್. ವೈದ್ಯಾ ಅಂಡ್ ಕೊ. ಪಾರ್ಕ ಟೌನ್ ಮದ್ರಾಸು.

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮುಗ್ರಿಗಳು ಬೇಕಾದರೂ, ಪಿ. ಡಿ ನೀಲ ಕಾಂತ ಎಂಡ್ ಕೊ. ಬೆನಾರಿಸ್ ಸಿಟಿ ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಷ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು. ಈಗಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉಡುವು ತೊಡುವುಗಳನ್ನು ತರಿಸುತ್ತಿರುವರು. ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡ ಈ ಸಾಮಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒದಗಿಸನ್ನು ಕಳುಹಿಸಿಕೊಡುವ ಅಪೂರ್ವವಾದ ವಸ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು. ಸೀದಾ ನಮಗೆ ಬರೆದು ಒದಗಿಸಿಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಸೇಕಡಾ 25ರಂತೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಒರ್ಡರುಗಳನ್ನು ವಿ ಪಿ ಮೂಲಕ ಕಳುಹಿಸಿಕೊಡುವೆವು. ಸಂದೇಹಪಡಬೇಡಿರಿ. (1) ಜರಿತಾರಿನ ರೇಷ್ಮೆ, ನಾನಾ ತರದ ಆರಿವೇಳ, ಶೀರೆಗಳು, ರವಕೆ ಕಣಗಳು, ಅಂಗಿ ವಸ್ತ್ರ ಇತ್ಯಾದಿ. (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ. (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರ್ಖಾನೆಗಳಿಂದ ತಯ್ಯಾರಿಸಲ್ಪಡುವ ವರದ [illegible] (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ [illegible] ಕಳುಹಿಸಿಕೊಡಲಾಗುವುದು.

ನಮ್ಮ ಕೆಟಲಾಗ ಅಪೇಕ್ಷಿಸುವವರಿಗೆ ಉಚಿತವಾಗಿ ಕಳುಹಿಸಲಾಗುವುದು.

ನಮ್ಮ ವಿಳಾಸ — ಪಿ ಡಿ ನೀಲಕಾಂತ ಎಂಡ್ ಕೊ,

ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರ ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್ ತಿಮ್ಮಪ್ಪಯ್ಯನವರಿಂದ ಕನ್ನಡ ಪದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಶೈಲಿಯಿಂದಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕವಿಯು ಸಮಸ್ತರಾದ ವಾಚಕರಿಗೂ, ಎಫ್ ಎ ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ್ ಪುಸ್ತಕವಾಗಿ ಇಡಲಿಕ್ಕೂ ತಕ್ಕದ್ದಾಗಿದೆ. ಕ್ರಯ 0—8—0

ವಿಳಾಸ —

ಕೆನರಾ ಹೈಸ್ಕೂಲ ಕನ್ನಡ ಪಂಡಿತ

ಎಮ್ ತಿಮ್ಮಪ್ಪಯ್ಯ,

ಮಂಗಳೂರ

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

IIನೇ ಸ್ಟಾಂಡಾರ್ಡ ಗಣಿತ	0—3—0
IIIನೇ ,, ,,	0—4—0
IVನೇ ,, ,,	0—6—0
3ನೇ ಪುಸ್ತಕದ ಶಬ್ದಾರ್ಥ ಪ್ರಶ್ನೋತ್ತರ ವ ಸ್ವತಂತ್ರ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ)	0—2—6
4ನೇ ಪುಸ್ತಕದ ಶಬ್ದಾರ್ಥ	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಭಾಗ	0—3—0
3ನೇ ದರ್ಜೆಯ ದಕ್ಷಿಣ ಕನ್ನಡದ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು (ಇದರಲ್ಲಿ ವೃತ್ತಿಗಳೂ, ಕಥೆಗಳೂ, ಅಭಿನಯದ ಹಾಡುಗಳೂ ಇರುತ್ತವೆ)	0—1—6
ಗಣಿತಸಾರ ಎಂಬ ಮಗ್ಗಿ ಕೋಷ್ಟಕಗಳ ಪುಸ್ತಕ	0—1—0
ಬಾಲಶಿಕ್ಷೆ	(ಅಚ್ಚಿನಲ್ಲಿದೆ)
ಒಂದನೆಯ ಪುಸ್ತಕ	(ತಯ್ಯಾರಿಯಲ್ಲಿವೆ.)
ಎರಡನೆಯ ,,	
ಮೂರನೆಯ ,,	
ನಾಲ್ಕನೆಯ ,,	

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಶನ್ ಕೊಡಲಾದೀತು.

ವಿ. ಲಕ್ಷ್ಮಣರಾವ್,

ಸ್ಕೂಲ ಮಾಸ್ಟರ್, ಉಡುಪಿ

ಯೋಗ್ಯತೆಯಲ್ಲಿ ಹಿರಿದು! ಬೆಲೆಯಲ್ಲಿ ಕಿರಿದು!

ಹನೂಮತ್ಪ್ರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಪದಗಣವು ಮೃದು!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ, ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ 2—1—0 ಗ್ರಾಹಕರುತ್ತರವಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ — ಎಮ್. ಶಿವರಾಮಯ್ಯ,

ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ಶಾಂತವನ್ನು ವಿಶದವಾಗಿ ತೋರಿಸಿಯದೆ. ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮದರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಹಿಡಿಸುವ ರೀತಿಯಲ್ಲಿ ತೋರಿಸಿಯದೆ. ವಿದ್ಯಾರ್ಥಿಗಳಲ್ಲಿ ಮಾತಾಪಿತ ಭಕ್ತಿ ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳಬೇಕಾಗಿ ವಿನಂತಿ. ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ

ವಿಳಾಸ:—

ಉಡುಪಿ	ಮಂಗಳೂರು.
ಮ॥ ಪಾವಂಜ ಗುರುರಾವ್,	ಪಾವಂಜೆ ಗೋಪಾಲಕೃಷ್ಣ
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.	ಬ್ರಾಹ್ಮಣ ಕೇರಿ.

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, ಉತ್ತಮವಾದ ನೀಲಗಿರಿಯ ಚಾ, ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ [illegible] ಉಪಯೋಗಿಸುವವರೆ ಎಂದಿಗೂ ಬಿಡಲಾರರು.

ಬಲ್ಮಠ ಮಿಶ್ಯನ್ ಚೇಕುಗಳೂ; ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಕೋಪಿನ ಕೊಡೆಗಳೂ, ರೇಷ್ಮೆ ವಸ್ತ್ರಗಳೂ; ಪೆಬ್ಬಲ್ ಎಂಬ ಗುರುಸು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ, ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಷ್ಮೆಯ ವಸ್ತ್ರಗಳೂ; [illegible] ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ

ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾಬುಡನ್‌ಗಿರಿ ಕಾಫಿ ಹುಡಿಯು ಸಹ ಕಮ್ಮಿ ಕ್ರಯದಲ್ಲಿ ನಮ್ಮಲ್ಲಿ ದೊರಕುತ್ತವೆ.

ಸಾಕು ಒಂದು ಪರೀಕ್ಷೆ ಸಾಕು!

ಕ್ರಯ ಕಮ್ಮಿ—ಜಿಗಡಿ.

ವಿಳಾಸ — ಜಿ. ಎಸ್. ಸೋಜಾ ಎಂಡ್ ಕಂಪೆನಿ,

ಹಂಪನಕಟ್ಟೆ, ಮಂಗಳೂರು

Canarese Novels Etc.

ಕನ್ನಡ ಪುಸ್ತಕಗಳು.

ಮ॥ ರಾ॥ ರಾ॥ ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು

	ರೂ. ಆ.		ರೂ ಆ
ವಂಗವಿಜೇತ ಹೊಸ ನಾವಿಲ್	1—4	ಕಮಲಾ ಕಾಂತ ದ್ವಿ ಮು	0—2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1—4	ಲೀಲೆ [ಸಮಾಜ ಚಿತ್ರ]	0—4
ಕಪಾಲಕುಂಡಲ... ಡಿಟೊ 2ನೇ ಭಾಗ	1—8	ಮಾಲತಿ [ಅತಿ ಮನೋಹರ] ದ್ವಿ ಮು	0—3
ಸೀತಾರಾಮ (ಇತಿಹಾಸ)	1—8	ರಾಧಾರಾಣಿ [ಕಾದಂಬರಿ] ತೃ ಮು	0—3
ವಿಷವೃಕ್ಷ ದ್ವಿ ಮು.	1—4	ಯುಗುಲಾಂಗುರೀಯ ,,	0—3
ದೇವೀ ಚೌಧುರಾಣಿ ಡಿಟೊ	1—4	ಭ್ರಾಂತಿವಿಲಾಸ ,	0 8
ರಾಜಸಿಂಹ (ಇತಿಹಾಸ)	1—5	ಸೊಂದನುಡಿ [ಸ್ತ್ರೀನೀತಿ]	0—2
ಕಪಾಲಕುಂಡಲ	0 13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0—2
ಮೃಣ್ಮಯಿ ಡಿಟೊ 2ನೇ ಭಾಗ	1—1	ವೈಜ್ಞಾನಿಕ ಪ್ರಹಸನ [ನಕಲಿ]	0—4
ಕೃಷ್ಣಕಾಂತನ ಉಯಿಲು	1—0	ಚಿರತ್ನನಾಟಕರತ್ನ ಡಿಟೊ	0—7
ಮನೋರಮ [ಪತ್ತೇದಾರಿ ಕಥೆ]	1—0	ಚಿತ್ರವಿಚಿತ್ರಾವಳಿ [Tit Bits]	0—8
ಹಂಮನ ಡಿಟೊ ದ್ವಿ. ಮು	0.10	ನೀರದೆ [ಹೊಸ ಕಾದಂಬರಿ]	0—8
ಸಾಧನೆ. ಡಿಟೊ	0—8	ಭಾರತಮಹಿಳಾ [ಸ್ತ್ರೀನೀತಿ]	0—8
ಕೊಹಿನೂರು [ಇತಿಹಾಸ]	0.12	ಅಮೃತಪುಳಿನ [ನಾವಿಲ್]	0 11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0—3	ಇತ್ಯಾದಿ	

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ " ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ" ಪೂಜಾರ್ಹವಾಗಿದೆ!!! ಬೆಲೆ1ಕ್ಕೆ 3 ಆಣೆ 12ಕ್ಕೆ 1 ಉಚಿತ ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು

	ರೂ. ಆ		ರೂ ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ ಮು.	0—8	ನಿರ್ಭಾಗ್ಯಚಾರೀಕ್ಯ [ಹೊಸಕಾದಂಬರಿ]	0—6
ಕವಿಚರಿತೆ [ಪೂರ್ವಭಾಗ]	3—2	ಅನಂಗಸುಂದರಿ ಡಿಟೊ	0—8
ಕೃತಾನು ವಿಶ್ವಾವಸು ಸಂವಾದ [ಗದ್ಯ]	0.10	ತಾರಾ ಸುಂದರಿ ಡಿಟೊ	0—8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0—6	ರಾಧಾಮಾಧವಿ ಡಿಟೊ	0—8
ಕಲಾನಾಥ ಡಿಟೊ	0—8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0—9
ಶೋಭನೆ [ಬಂಗಾಳಿ ನಾವಿಲ್]	0.12	ಪಶುವೈದ್ಯಸಂಗ್ರಹ ಡಿಟೊ ದ್ವಿ ಮು	0—9
ಯಾಮಿನಿ [ಬಂಗಾಳೀ ನಾವಿಲ್]	0—3	ಧರ್ಮಪದವೆಂಬ ಬುದ್ಧಗೀತೆ	0 12
ಪ್ರಿಯಂವದೆ [ಪತಿವ್ರತಾ ಕಥೆ]	0—8	ಜೈಮಿನಿಭಾರತ [ಸಟೀಕಾತಾತ್ಪರ್ಯ]	4—0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0—8	ಹರಿಕಥಾಮೃತಸಾರ ಡಿಟೊ	1—6
ಸನ್ಯಾಸಿ [ಹೊಸ ಕಾದಂಬರಿ]	0—6	ಚದುರಂಗಬೋಧಿನಿ	0—3
ಮೃತ್ಯು ಪರೀಕ್ಷೆ ಡಿಟೊ	0—2	ಸರ್ವೇಮ್ಯಾನ್ಯುಯಲ್	0—5
ಬೃಂದಾವನ ಡಿಟೊ	0—2	ನ್ಯಾಯದರ್ಪಣ [ಲಾ]	1—0
ಕುಮನೆ ವೀರಮ ಡಿಟೊ	0—2	ವ್ಯವಹಾರ ದೀಪಿಕೆ [ಲಾ]	3—0
ಮಾಲಿನಿ ಡಿಟೊ	0—2	ಶಾಕುಂತಲ ನಾಟಕ ದ್ವಿ ಮು	0—9
ಪ್ರೇಮಪಿಪಾಸೆ ಡಿಟೊ	0—2	ಶೂರಸೇನಚರಿತ್ರೆ ನಾಟಕ ಡಿಟೊ	1—(
ನಿರಕ್ತಳಾದ ಸೌದಾಮಿನಿ ಡಿಟೊ	0—5	ಚಂಡಕಾಶಿಕ ನಾಟಕ ಡಿಟೊ	0 12
ಚಿತ್ರಕಲಾವತಿ ಡಿಟೊ	6—2	ರಾಮವರ್ಮ ಲೀಲಾವತೀ ನಾಟಕ	0—8
ಚಾತುರ್ಯವತಿ ಡಿಟೊ	0—2	ಪಾಂಚಾಲೀ ಪರಿಣಯ ನಾಟಕ	0 10
ವಸುಮತಿ ಡಿಟೊ	0—2	ಚಂಡೀಮದಮರ್ದನ ನಾಟಕ	0—5
ವಿಲಕ್ಷಣಶಿಕ್ಷಣ ಡಿಟೊ	0—2	ಪ್ರಬೋಧ ಚಂದ್ರೋದಯ ನಾಟಕ	0 10
ಪದ್ಮಿನಿ ಡಿಟೊ	0—2	ಭರ್ತೃಹರಿ ನಿರ್ವೇದ ನಾಟಕ	0—3
ಭಾನುಮತಿ ಡಿಟೊ	0—2	ನಿರುಪಮಾ [ನಾಟಕ]	0 12
ಸತೀರೋಹಿಣಿ ಡಿಟೊ	0—2	ಧ್ರುವವಿಜಯ [ನಾಟಕ]	0—4
ಸಂತಾಪಕ ಡಿಟೊ	0—4	ಸೀತಾಪರಿಣಯ [ನಾಟಕ]	0—4
ಚಂದ್ರಮತಿ [ಸ್ತ್ರೀನೀತಿ]	0—6	ಸೀತಾಸುವರ್ಣಮೃಗ [ನಾಟಕ]	0—12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. [illegible]

ವಿಳಾಸ— [illegible] ಬೆಂಗಳೂರು ಸಿಟಿ.

"ಶ್ರೀ ಬಸವರಾಜೇಂದ್ರ ವಿಜಯ."

ಪ್ರಸಿದ್ಧವಾದ ಬಸವಪುರಾಣದ ಸಾರಭೂತವಾದ ವರ್ಣನಗ್ರಂಥ. ಸುಂದರವಾದ ಮಾತುಗಳು, ಸುಲಭವಾದ ಸರಣಿ, ಭಕ್ತಿರಸ ಪ್ರಧಾನವಾದ ಕಥೆಗಳು, ಶಿವಶರಣರ ಲೀಲೆಗಳು, ವೀರಶೈವಮತದ ತತ್ವಗಳೂ ಸಹ ಅಡಕವಾಗಿರುವುವು. ಮಕ್ಕಳಿಗೂ ಅರ್ಥವಾಗುವಂತಹ ಮೃದುವಾದ ಮಾತುಗಳಿಂದ ಬರೆಯಲ್ಪಟ್ಟಿದೆ. ಲಿಂಗಾಂಗಿಗಳಾದವರೆಲ್ಲರೂ ಇದನ್ನು ಬಿಡದೆ ಓದಿ ತಮ್ಮ ಮತಧರ್ಮವನ್ನರಿತು ಧನ್ಯರಾಗುವರೆಂದು ನಂಬಿರುತ್ತೇವೆ. ಬೆಲೆ ಸೀಲದ. 0—12—0. ದಪ್ಪ ಕಾಗದ, ಸುಂದರವಾದ ಮುದ್ರಣ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿವೆ

ದಾರಣೆ ಸುಲಭ! ಅಲೀಗರ್ ಬೀಗಗಳು ದಾರಣೆ ಸುಲಭ!

ಭದ್ರವಾಗಿಯೂ, ಚಂದವಾಗಿಯೂ ಇರುವುದು. ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಜನಿಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳು

ನಂಬ್ರ	1	2	3	4	5
	0—12—0	0—15—0	1—4—0	1—10—0	[illegible]

ಆರು ಚಕ್ರಗಳಿರುವ ಬೀಗಗಳು

1—2—0 1—8—0 2—4—0 3—0—0 3—8—0

ಪಿಲ್ಲರ್ ಬೀಗಗಳು

0—4—0 0—5—0 0—6—0 0—8—0 0—10—0

ಟ್ರಂಕುಗಳಿಗೆ ಹಾಕುವ ಕೊಡಿ ಬಗಿಸಿರುವ ಬೀಗ ಒಂದಕ್ಕೆ 0—13—0

[illegible] ಬಹು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಬೆಲೆ ಓದುಗರಿಗೆ [illegible] ಮತ್ತು ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ ಮೇಜುಗಳಿಗೂ ಬೀರೂಗಳಿಗೂ ಹಾಕುವ 4 ಚಕ್ರಗಳಿರುವ ಬೀಗಗಳು ಒಂದಕ್ಕೆ 1—4—0, 1—12—0

ವಿಳಾಸ— ಎಚ್. ಎಸ್. ರಾವ್ ಆಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಲ್ಪ ಬೆಲೆಗೆ ಉತ್ತಮ ಪುಸ್ತಕಗಳು.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ

ಅಪೂರ್ವ ಪುಸ್ತಕಗಳು.

ಎಲ್ಲರಲ್ಲಿಯೂ ಇರಬೇಕಾದ್ದು. ಜಮಾ ಖರ್ಚಿನ ಪದ್ಧತಿ 12 ಆಣೆ. ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿಸುತ್ತದೆ

ಆಂಗ್ಲಬಾಷಾ ಪ್ರಕಾಶಿಕಾ. ಐದು ಬಾಗವು ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ರೂ 1—8—0. ಇದನ್ನು ಗುರುವಿನಂತೆ ಭಾವಿಸಿ.

ವೈದ್ಯಸಾರ ಸಂಗ್ರಹ. ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ. 3

ಆರ್ಯಕೀರ್ತಿ	0—10—0	ಶುಕಸಪ್ತತಿ ...	2—0—0
ಹನುಮದ್ವಿಲಾಸ	0—8—0	ಕುಣಿಗಲು ರಾಮಾಶಾಸ್ತ್ರಿಗಳವರ ಚರಿತ್ರೆ ..	1—0—0
ಶಾಕುಂತಲ ನಾಟಕ	0—8—0	ಸುಮತಿ ಮದನ ಕುಮಾರರ ಚರಿತ್ರೆ I ...	0—8—0
ಸ್ತ್ರೀ ಧರ್ಮನೀತಿ	0—8—0	,, II ...	0—7—0
ಶೋಭನೆ	0—8—0	ಶಿವಗೀತೆ ...	0—6—0
ಚಂದ್ರಕಳಾ	0—4—0	ಸಾಕ[illegible] ...	0—8—0
ಕಲಾನಾಥ ...	0—6—0	ಸನಾತನಧರ್ಮ ದೀಪಿಕೆ ...	1—0—0
ಶಿವಾನಂದಲಹರಿ	0—6[illegible]	[illegible]ರಾಮಾಯಣ ...	0—4—0
ಪ್ರಶ್ನೋತ್ತರ ಲೆಖ್ಖಬೋಧಿನಿ	1—4[illegible]	ಕಥಾಮಂಜರಿ ...	0—6—0
ವಿಷವೃಕ್ಷ ...	1—4—0		
ದುರ್ಗೇಶ ನಂದಿನಿ ...	1—4—0		
ಮುದ್ರಾಮಂಜೂಷ ...	1—8—0		

ದುಷ್ಟ ಚತುಷ್ಟಯ, ನರಬಲಿ, ನೀಲಾಂಬರಿ ವಿಷಮುಹೂರ್ತ, ಮಾಗ[illegible]ಯ ಅತ್ಯಾಚಾರ. ಪ್ರತಿಯೊಂದು ಪ್ರತಿಯೂ 2 ಆಣೆ.

ವಿಳಾಸ:— ವಿದ್ಯಾಸಾಗರ ಬುಕ್ ಡಿಪೋ, [illegible]ಪೇಟೆ ಬೆಂಗಳೂರು ಸಿಟಿ.

ESTABLISHED JULY 1906.

THE CANARA BANK, LIMITED, MANGALORE.
ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು.

Authorised Capital Rs	[illegible]00—0—0
Issued Capital	[illegible]00—0—0
Subscribed Capital	217,400—0—0
Paid up Capital	192,400—0—0
Deposits	497,632—8—2
Reserve Fund	27,590—12—0

Besides the uncalled capital of Rs 25,000/ 25% of the net profits are added annually to the Reserve Fund Rs 21,685/ have been invested in Government Paper of the face value of Rs. 22,500/-

Dividends of not less than 6 % paid during the past years and a bonus of 1% to 2% paid in addition during the last three years.

Fixed Deposits of Rs 50/ and above in multiples of Rs. 5/ received for 3, 6, 12 and 24 months @ 4, 4½, 5 and 5½% respectively Terms on application

Short-notice Deposits requiring one weeks notice of withdrawal after one month received @ 2½% per annum

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4%

Loans granted on proper securities and pledges

Sealed Parcels for safe custody received on a moderate charge

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	217,400—0—0
ಆಗತ ಮೂಲ ಧನವು ,, ...	192,400—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	497,632—8—2
ರಕ್ಷಿತ ಧನವು	27,590—12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡುವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲು ಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು ಈ ವಿಷಯ ಇತರ ವಿಶೇಷಮಾಹಿತಿ ಬಗ್ಗೆ ಬೇಂಕಿನ ಸೆಕ್ರಿಟರಿಗಳಿಗೆ ಬರಕೊಳ್ಳಬಹುದು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾಬೇಕು. ಈ ಠೇವಣಾತಿಗಳಿಗೆ ಸೇಕಡಾ 4⅙ರ ದರ ಬಡ್ಡಿಯು ಕೊಡೋಣಾಗುವುದು

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

Canara Bank Ltd.,
Mangalore, 1st September 1914

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ, ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸಾದವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲ್ಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ [illegible]ವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರೀಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ೧ಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—[illegible]—[illegible]

ನಮ್ಮ ವಿಳಾಸ:— ಎಂ. ದೇಶಾಯಿ ಕಂಪೆನಿ,
ಕರ್ನಾಟಕ ಬುಕ್ ಡಿಪೋ, ಬಳ್ಳಾರಿ

ಮುಳಿಯಿಲ್‌ರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಡ್ತೆ 1ಕ್ಕೆ ಕ್ರಯ 10 ಆಣೆ. ಇದು ಎಲ್ಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ.

................ಮಸ್ತಕಾಮೃತ ತೈಲವನ್ನು ಕಳೆದ ಐದು ವರುಷಗಳಿಂದ ಉಪಯೋಗಿಸಿಕೊಳ್ಳುತ್ತಿರುವುದರಿಂದ ನನ್ನ ಮುದಿ ಮೆದುಳು ಯೌವ್ವನ ಪ್ರಾಯದಲ್ಲೀ ಇದ್ದ ... ಈ ದಿವ್ಯ ತೈಲ ಇಲ್ಲಂಗಣೆ ವಿನಹಾ ನಾನು ಕೆಲಸಮಾಡಲಾರೆನು; ನನ್ನ ನೇತ್ರೇಂದ್ರಿಯಗಳು ...

ರೆವೆರೆಂಡ್ ಇ ಸ್ಟೋನ್ಸ್,

ತಾ. 15—4—13. ಮೈ ...

ಮುಳಿಯಿಲ್ಸ್ ಹೇರ್ ಓಯ್ಲ್—ಕ್ರಯ 12 ಆಣೆ ... ನಿಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನೊಂದು ಕುಪ್ಪಿ ವಿ ಪಿ ಮೂಲಕ ರವಾನಿಸಿರಿ.

ಮಿಸೆಸ್ ವೈ ಕ ರಿಂ...ಸ್,

ತಾ. 23—5—13. ಗ್ರೀನ್‌ವಿಲ್ಲಾ ಕಲ್ಲಿಕೋಟೆ.

...........ಮುಳಿಯಿಲ್ಸ್ ಹೇರ್ ಓಯ್ಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ. ಇನ್ನೊಂದು ಡಜನ್ ಕುಪ್ಪಿಗಳನ್ನು ಆದಷ್ಟು ತ್ವರ್ಯದಲ್ಲಿ ರವಾನಿಸಿರಿ.

ಮಿಸ್ ಎಸ್ ಸ್ಟೋನ್ಸ್,

21ನೇ ಒಕ್ಟೋಬರ 1913 ಸ್ಕೂಲು ಮಿಸ್ಟ್ರೆಸ್, ಮಂಗಳೂರು

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ.

ಚತುರ್ಥಿ ಮಾತ್ರೆಯನ್ನು ತಕ್ಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ ಇದು ಒಳ್ಳೇ ಗುಣಕರವೆಂಬದಾಗಿ ಹೇಳುವರೆ ಅನುಮಾನವಿಲ್ಲ.

ಎ ಪೊಕ್ರು ಹೆಗ್ಗಡೆ,

ತಾ. 13—6—13. ಕುಕ್ಕುಛೆ, ಕಾರ್ಕಳ

ವಯೊಲೆಟ್ ಹೇರ್ ಓಯ್ಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ತಲೆವೇದನೆಯು ಗುಣಪಡುವದು. ಕಾಯಂ ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ. ಅತಿ ಘೋರವಾದ ತಲೆನೋವಿನಿಂದ ಶ್ರಮೆಪಡುತ್ತಿದ್ದ ನನ್ನ ಮೊಮ್ಮಗಳಿಗೆ ತಮ್ಮಿಂದ ತಕ್ಕೊಂಡ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಿಲ್ಲದೆ ಅವಳು ಇರಲಾರಳು ಹೆಚ್ಚಿನ ರೋಗಿಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲೆಂಬದು ನನ್ನ ಪ್ರಾರ್ಥನೆಯಾಗಿದೆ.

M. JACOBI,

4—7—13 *Hd Clerk*, CALICUT.

ವಿಳಾಸ:— **ಮುಳಿಯಿಲ್ ಎಂಡ್ ಸನ್ಸ್**, ಕಾಸರಗೋಡು, ದ. ಕ

---

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುಷ್ಯವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರಿಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,

ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ಮೈಸೂರು ಸಂಸ್ಥಾನದಲ್ಲಿ ದಸರಾದಿನಗಳು ಬಹು ವಿಶೇಷ ದಿನಗಳಾಗಿವೆ. ರಾಜಧಾನಿಯಲ್ಲಿ ಈ ದಿನಗಳಲ್ಲಿ ನಡೆಯುವ ಸಂಭ್ರಮದ ಮಹೋತ್ಸವಗಳನ್ನು ನೋಡುವುದಕ್ಕೆ ಸಂಸ್ಥಾನದ ಆಯಾ ಪ್ರಾಂತ್ಯಗಳಿಂದಲೂ ದೇಶದ ಹಲವು ಕಡೆಗಳಿಂದಲೂ ಮಹಾ ಜನರು ಮೈಸೂರು ರಾಜಧಾನಿಯಲ್ಲಿ ಕೂಡಿ ಬರುವರು. ಈ ದಿನಗಳಲ್ಲಿ ಪ್ರಜಾವರ್ಗವೆಲ್ಲಕ್ಕೂ ಅನುಕೂಲವಾಗುವಂತೆ, ಇಂಥಾ ವಿಶೇಷ ದಿನಗಳು ಬರಿಯ ವಿನೋದ ಆಡಂಬರಗಳಲ್ಲಿ ಮಾತ್ರ ಮುಗಿದುಹೋಗದಂತೆ, ಮೈಸೂರು ಮಹಾರಾಜರವರ ಸರಕಾರದವರು ಈ ದಿನಗಳಲ್ಲಿ ಪ್ರಜಾಭಿವೃದ್ಧಿ ಸಾಧನೆಯ ಹಲವು ಉಪಯುಕ್ತ ವಿಷಯಗಳನ್ನು ನಾನಾ ವಿಧಾನಗಳಲ್ಲಿ ಜನರ ಲಕ್ಷ್ಯಕ್ಕೆ ತರುತ್ತಿರುವರು. ಮೈಸೂರಿನಲ್ಲಿ ಈ ದಿನಗಳಲ್ಲಿ ವಸ್ತು ಪ್ರದರ್ಶನವು ಜರಗುವುದು. ಕೈಗಾರಿಕೆಗಳಿಗೆ ಸಮ್ಬಂಧಪಟ್ಟ ವಿಷಯಗಳು ಮಹಾಜನರು ಸಭೆಸೇರಿ ವಾದಿಸುವರು. ಈ ದಿನಗಳಲ್ಲಿ ಮೈಸೂರಿನ ಪ್ರಜಾಪ್ರತಿನಿಧಿ ಸಭೆಯು ಕೂಡುವುದು. ದಿವಾನರವರು ಸಂಸ್ಥಾನದ ಗತವರುಷದ ವೃತ್ತಾಂತವನ್ನೂ ಮುಂದಿನ ವರುಷದಲ್ಲಿ ಸರಕಾರದವರು ನಡಿಸಲಿಕ್ಕಿರುವ ಕಾರ್ಯ ವಿವರವನ್ನೂ ಸಂಸ್ಥಾನದ ಆದಾಯ ವೆಚ್ಚಗಳ ಪ್ರಸ್ತಾಪದೊಡನೆ ಪ್ರಜಾಪ್ರತಿನಿಧಿಗಳಿಗೆ ತಿಳಿಯ ಹೇಳುವರು. ಸಂಸ್ಥಾನದ ಪ್ರಜಾಭಿವೃದ್ಧಿ ಸಾಧನೋಪಾಯಗಳೆಲ್ಲವು ಪರಿಶೀಲಿಸಲ್ಪಟ್ಟು ಮುಂದಕ್ಕೆ ಇವುಗಳನ್ನು ಹೇಗೆ ಕೈಕೊಳ್ಳಬೇಕೆಂಬುದಾಗಿ ಈ ದಿನಗಳಲ್ಲಿ ನಿರ್ಣಯಿಸಲ್ಪಡುವುದು. ಆದ್ದರಿಂದ ಈ ದಿನಗಳಲ್ಲಿ ಮೈಸೂರಿನಲ್ಲಿ ನಡದ ಮುಖ್ಯ ಕಾರ್ಯವಿವರವನ್ನು ಪರಿಶೀಲಿಸಿದರೆ ಮೈಸೂರ ಸರಕಾರದವರೂ ಪ್ರಜೆಗಳೂ ಸಂಸ್ಥಾನದ ಕ್ಷೇಮಸಾಧನೆಯನ್ನು ನಡೆಸುವ ವಿಧಾನವು ಗೊತ್ತಾಗುವುದು.

ಕಳೆದ ತಿಂಗಳ ತಾ. ೨೨ರಲ್ಲಿ ಆರಂಭಿಸಲ್ಪಟ್ಟು ೬ ದಿನಗಳ ವರೆಗೆ ನಡೆದ ಪರಸ್ಪರ ಸಹಾಯಕ ಸಂಘಗಳ ಮಹಾಸಭೆಯ ವೃತ್ತಾಂತದಿಂದ ಮೈಸೂರು ಸಂಸ್ಥಾನದಲ್ಲಿ ಈ ಅನ್ಯೋನ್ಯ ಸಹಾಯಕ ಸಂಘಗಳ ಬೆಳವಣಿಕೆಯು ಬಹಳ ಉತ್ತಮ ಸ್ಥಿತಿಯಲ್ಲಿದೆಂತ ವ್ಯಕ್ತವಾಗುವುದು. ಈ ಸಂಘಗಳ ಸ್ಥಾಪನೆಗೆ ಮೈಸೂರು ಸಂಸ್ಥಾನದಲ್ಲಿ ಆರಂಭವಾಗಿ ಸುಮಾರು ೯ ವರುಷಗಳಾದವು. ೫೪೩ ಸಂಘಗಳು ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಲ್ಪಟ್ಟಿವೆ. ಸಂಘಗಳ ಮೆಂಬರರ ಸಂಖ್ಯೆಯು ೪೦,೫೦೦ ಆಗಿರುವುದು. ಬಂಡವಾಳವು ೨೧|| ಲಕ್ಷ, ಸಂಘಗಳಲ್ಲಿ ನಡೆದಿರುವ ಲೇವಾದೇವಿಯು ೭೭ ಲಕ್ಷ, ಸಂಘಗಳ ಸುರಕ್ಷಿತ ದ್ರವ್ಯಸಂಚಯವು ೫೩,೦೦೦ವಾಗಿರುವುದು. ಈ ರೀತಿ ಈ ಮಹಾಸಭೆಯ ಆರಂಭಕಾಲದಲ್ಲಿ ಶ್ರೀಮದ್ಯುವರಾಜರವರು ಅಪ್ಪಣೆಕೊಡಿಸಿದಂತೆ ಮೈಸೂರು ರಾಜ್ಯವು ಪರಸ್ಪರ ಸಹಾಯ ಪದ್ಧತಿಯಲ್ಲಿ ಹಿಂದುಸ್ಥಾನದಲ್ಲೇನೂ ಹಿಂದಾಗಿಲ್ಲ. ಕೆಲವು ವಿಷಯಗಳಲ್ಲಿ ಬ್ರಿಟಿಷ್ ಇಂಡಿಯದ ಸೀಮೆಗಳಿಗಿಂತ ಬಹಳ ಮುಂದಾಗಿರುವುದೆಂದೇ ಹೇಳಬೇಕು. ಮೈಸೂರು ಸೀಮೆಯಲ್ಲಿ ೧೪೦ ಜನರಿಗೊಬ್ಬನು ಅನ್ಯೋನ್ಯ ಸಹಾಯಕ ಸಂಘದ ಮೆಂಬರನಾಗಿದ್ದಾನೆ. ಬ್ರಿಟಿಷ ಇಂಡಿಯಾದಲ್ಲಿ ೪೦೦ ಜನರಿಗೆ ಒಬ್ಬ ಮೆಂಬರನಿರುವನು. ೪ ಕೋಟಿ ಜನಸಂಖ್ಯೆಯಿರುವ ಮದ್ರಾಸು ಅಧಿಪತ್ಯದಲ್ಲಿ ೧೩೦೦ ಸಂಘಗಳೂ ಒಂದು ಲಕ್ಷ ಮೆಂಬರುಗಳೂ ಇರುವಾಗ ೬೦,೦೦,೦೦೦ ಪ್ರಜೆಗಳಿರುವ ಮೈಸೂರು ಸಂಸ್ಥಾನದಲ್ಲಿ ೫೪೩ ಸಂಘಗಳೂ ೪೦,೦೦೦ ಮೆಂಬರುಗಳೂ ಇರುವರು. ಇದೇ ರೀತಿ ಮುಂಬಯಿ ಸಂಸ್ಥಾನದ ಪರಸ್ಪರ ಸಹಾಯಕ ಸಂಘಗಳ ಸಂಖ್ಯೆಯೊಡನೆ ಮೈಸೂರು ಸಂಸ್ಥಾನದ ಸಂಖ್ಯೆಯನ್ನು ಹೋಲಿಸಿ ಮೈಸೂರು ಸಂಸ್ಥಾನವು ಪರಸ್ಪರ ಸಹಾಯಕ ಸಂಘಗಳ ಸ್ಥಾಪನೆಯಲ್ಲಿ ಹಿಂದಾಗಿಲ್ಲವೆಂತ ಯುವರಾಜರವರು [illegible]

[illegible] ಯ ಪ್ರಯತ್ನಗಳು ಮೈಸೂರು ಸಂಸ್ಥಾನದಲ್ಲಿ ಸಮಗ್ರವಾಗಿ ನಡಿಯುತ್ತಿರುವವು. ವ್ಯವಸಾಯಗಾರರಿಂದ ಸಾಹುಕಾರರಿಗೆ ಸಲ್ಲಬೇಕಾದ ಹಳೆಯ ಸಾಲಗಳನ್ನು ತೀರಿಸಿ ಸಂಘಗಳು ಹೆಚ್ಚಾಗಿ ಅಭಿವೃದ್ಧಿ ಹೊಂದುವಂತೆ ಪ್ರಯತ್ನಿಸಬೇಕು, ಸಂಸ್ಥಾನದಲ್ಲಿ ವ್ಯವಸಾಯ ಉತ್ಪತ್ತಿಯು ಅಧಿಕವಾಗುವಂತೆ ಅನ್ಯೋನ್ಯ ಸಹಾಯ ಸಂಘಗಳ ಮೂಲಕ ರೈತರಿಗೆ ಒಳ್ಳೇ ನೇಗಿಲು, ಆರೋಗ್ಯದಲ್ಲಿರುವ ದನಗಳು, ಉತ್ಕೃಷ್ಟವಾದ ಬಿತ್ತ, ಕೆಲಸಕ್ಕಾಗಿ ಬೆಲೆ ಹೀಳ ಗೊಬ್ಬರ ಇವುಗಳನ್ನು ಸಂಗ್ರಹಿಸಿಕೊಡುವ ಪ್ರಯತ್ನವು ಹೆಚ್ಚಾಗಿ ನಡಿಯಬೇಕು. ನೇಯಿಗೆಯವರ, ಪಾದರಕ್ಷೆಗಳನ್ನು ಮಾಡುವ ಮೋಚಿಯವರ ಸ್ಥಿತಿಯು ಉತ್ತಮವಾಗುವಂತೆ ಪರಸ್ಪರ ಸಹಾಯಕ ಸಂಘಗಳ ವಿಧಾನಗಳಿಂದ ಮಿತವ್ಯಯ ಸೌಶಿಕ್ಯಗಳು ಈ ಕಸಬುದಾರರಲ್ಲಿ ನೆಲೆಗೊಳ್ಳುವಂತೆ ಶ್ರಮ ಪಡಬೇಕು, ಕಟ್ಟಡಗಳ ಪರಸ್ಪರ ಸಹಾಯಕಸಂಘಗಳು ದೇಶದಲ್ಲಿ ಆರೋಗ್ಯ ಸ್ಥಿತಿಯು ನೆಲಸುವಂತೆ ತಮ್ಮ ಕಾರ್ಯಕ್ರಮಗಳನ್ನು ನಡಿಸಬೇಕು—ಈ ಮೊದಲಾದ ಸೂಚನೆಗಳು ಮಹಾಸಭೆಯ ಅಧ್ಯಕ್ಷರಿಂದಲೂ ಯುವರಾಜರಿಂದಲೂ ಪ್ರಜಾವರ್ಗಕ್ಕೆ ತಮ್ಮ ಮುಂದಿನ ವರ್ತನೆ ಬಗ್ಗೆ ಕೊಡೋಣಾಗಿವೆ.

ಕಳೆದ ತಿಂಗಳ ತಾ. ೨೮ರಲ್ಲಿ ಕೂಡಿದ ಮೈಸೂರು ಪ್ರಜಾಪ್ರತಿನಿಧಿಗಳ ಸಭೆಯ ಮುಂದೆ ದಿವಾನರಾದ ಮಹಾರಾಜ ವಿಶ್ವೇಶ್ವರಯ್ಯನವರು ಮಾಡಿದ ಭಾಷಣದಿಂದ ಮೈಸೂರು ಸರಕಾರದವರು ಕೈಕೊಂಡಿರುವ ಪ್ರಜಾಕ್ಷೇಮದ ಸಾಧನಗಳು ಮತ್ತಷ್ಟು ಚೆನ್ನಾಗಿ ತೋರಿಬರುವವು. ಮೈಸೂರು ಸಂಸ್ಥಾನದ ಸಂಪದಭಿವೃದ್ಧಿಯ ಬಗ್ಗೆ ವಿಶ್ವೇಶ್ವರಯ್ಯನವರು ಬಹಳ ಆಸಕ್ತಿಯಿಂದಲೂ ಉತ್ಸಾಹದಿಂದಲೂ ವಿಶ್ವಪ್ರಯತ್ನಗಳನ್ನು ನಡಿಸುತ್ತಿರುವರೆಂಬುದು ಮೈಸೂರು ಸಂಸ್ಥಾನ ಸರಕಾರದವರ ಕಾರ್ಯವೃತ್ತಾಂತದಿಂದ ವ್ಯಕ್ತವಾಗುವುದು. ಸಂಸ್ಥಾನದಲ್ಲಿ ಹೊಸ ರೈಲ್ವೆ ಮಾರ್ಗಗಳನ್ನು ಹಾಕಿಸುವುದು, ಕನ್ನಂಬಾಡಿ ಎಂಬಲ್ಲಿ ಕಾವೇರಿನದಿಗೆ ಅಡ್ಡ ಆಣೆ ಕಟ್ಟಿಸಿ ನೀರು ಸರಬರಾಯಿಯ ಏರ್ಪಾಟುಮಾಡಿ ಪ್ರಕೃತ ಬಂಜರಾಗಿರುವ ಸಾವಿರಾರು ಎಕ್ರೆಗಳ ವಿಸ್ತೀರ್ಣದ ಪ್ರದೇಶವನ್ನು ಹೊಸತಾಗಿ ಮಾಡುವುದು, ಕಾವೇರಿ ನದಿಯ ಪ್ರವಾಹದಿಂದ ಏರ್ಪಡಿಸಿದ ವಿದ್ಯುಚ್ಛಕ್ತಿ ಸರಬರಾಯಿಯನ್ನು ಮತ್ತಷ್ಟು ಬೆಳಸುವುದು, ಸಂಸ್ಥಾನದ ಆಯಾ ಭಾಗಗಳಲ್ಲಿರುವ ರೈತರ ಉಪಯೋಗದ ಕೆರೆಗಳ ಜೀರ್ಣೋದ್ಧಾರ, ಮಲೆನಾಡುಗಳ ಅಭಿವೃದ್ಧಿ, ಗ್ರಾಮಗಳ ಕ್ಷೇಮಸಾಧನೆ, ಸಂಪದಭಿವೃದ್ಧಿ ಸಮಾಜದ ಕಾರ್ಯಸಾಧನೆ—ಮೈಸೂರು ಸಂಸ್ಥಾನದ ಪ್ರಜಾಭಿವೃದ್ಧಿಸಾಧನದ ಕಾರ್ಯಕ್ರಮವು ಈ ರೀತಿಯಾಗಿದೆ. ೧೯೦೦ರಿಂದ ೧೯೧೧ರ ವರೆಗಿನ ೧೨ ವರುಷಗಳ ಕಾಲದಲ್ಲಿ ರೈಲ್ವೆ ಮಾರ್ಗಗಳನ್ನು ಹಾಕಿಸುವ ಕೆಲಸವು ಪೂರ್ಣವಾಗಿ ನಿಲ್ಲಿಸೋಣಾಗಿತ್ತು. ಆದ್ದರಿಂದ ಬ್ರಿಟಿಷ ಇಂಡಿಯಾದಲ್ಲಿ ಪ್ರಜೆಗಳಿಗಿದ್ದ ರೈಲ್ವೆ ಮಾರ್ಗಗಳ ಸೌಕರ್ಯವು ಮೈಸೂರು ಪ್ರಜೆಗಳಿಗಿದ್ದಿಲ್ಲ. ಹೊಸ ರೈಲ್ವೆ ಮಾರ್ಗಗಳನ್ನು ಹಾಕಿಸುವ ಕೆಲಸವನ್ನು ಸರಕಾರದವರು ಪ್ರಕೃತ ವಿಶೇಷವಾಗಿ ಆರಂಭಿಸಿರುವರು. ಈಗ ೧೩೦ ಮೈಲುಗಳ ವಿಸ್ತೀರ್ಣದ ರೈಲ್ವೆ ಮಾರ್ಗಗಳ ಕೆಲಸವು ಮೈಸೂರು ಸಂಸ್ಥಾನದಲ್ಲಿ ನಡಿಯುತ್ತಿದೆ. ಜನರು ಸಹ ಈ ಕೆಲಸದಲ್ಲಿ ತಮ್ಮ ಹಣವನ್ನು ವಿನಿಯೋಗಿಸುವರೆ ಸಿದ್ಧರಾಗಿರುವರು. ಸಂಸ್ಥಾನದ ವ್ಯಾಪಾರ ಮತ್ತು ವ್ಯವಸಾಯ ಅಭಿವೃದ್ಧಿಗಳಿಗೆ ಮೈಸೂರು ಸಂಸ್ಥಾನದಲ್ಲಿ ೧೦೦೦ ಮೈಲುಗಳ ವಿಸ್ತೀರ್ಣದ ರೈಲ್ವೆ ಮಾರ್ಗಗಳಾದರೂ ಬೇಕಾಗಿರುವವು. ಈ ತನಕ ರೈಲ್ವೆ ಮಾರ್ಗಗಳನ್ನು ಹಾಕಿಸುವುದರಲ್ಲಿ ವಿನಿಯೋಗಿಸಿರುವ ಹಣವು ೨೫೭ ಲಕ್ಷಗಳಾಗಿರುವುದು. ೧೦೦೦ ಮೈಲುಗಳ ವಿಸ್ತೀರ್ಣದ ರೈಲ್ವೆ ಮಾರ್ಗಗಳ ಕೆಲಸವು ಸಂಪೂರ್ಣವಾಗಿ ಈ ಮೊಬಲಗು ೫೦೦ ಲಕ್ಷಗಳಿಗೆ ಏರುವುದು.

ಕಾವೇರಿ ನದಿಯ ನೀರಿನ ಹಕ್ಕು ಮೈಸೂರು ಸಂಸ್ಥಾನಕ್ಕೂ ಇದರ ನೆರೆಯಲ್ಲಿರುವ ಮದ್ರಾಸು ಸಂಸ್ಥಾನದ ಕೆಲವು ಪ್ರಾಂತ್ಯಗಳಿಗೂ ಇರುವುದರಿಂದ ಈ ನದಿಯ ನೀರನ್ನು ಮೈಸೂರಿನವರು ತಡೆದು ಉಪಯೋಗಿಸುವ ವಿಷಯವಿರುವ ವಿವಾದದ ತೀರ್ಮಾನವು ಪ್ರಕೃತ ಇಂಡಿಯಾ ಸರಕಾರದವರಿಂದ ಪರ್ಯಾಲೋಚಿಸಲ್ಪಡುತ್ತಿದೆ. ಕನ್ನಂಬಾಡಿಯಲ್ಲಿ ಕಾವೇರಿ ನದಿಗೆ ಕಟ್ಟಿಸೋಣಾಗುವ ಆಣೆಕಟ್ಟಿನ ಸಹಾಯದಿಂದ ೧೨,೦೦೦ ಎಕ್ರೆಗಳಷ್ಟು ವಿಸ್ತೀರ್ಣದ ಭೂಮಿಯಲ್ಲಿ ಕಬ್ಬಿನ ವ್ಯವಸಾಯವನ್ನು ನಡಿಸಲು ಸಾಧ್ಯವಾಗುವುದು. ಜನಗಳು ಪ್ರಕೃತ ಉಪಯೋಗಿಸುತ್ತಿರುವ ವಿದ್ಯುಚ್ಛಕ್ತಿಯ ಸರಬರಾಯಿಯನ್ನು ೧೧,೦೦೦ ಹೋರ್ಸ ಪವರಿನಿಂದ ೧೬,೦೦೦ಕ್ಕೆ ಹೆಚ್ಚಿಸಲಾಗುವುದು. ಹೀಗೆ ವಿದ್ಯುಚ್ಛಕ್ತಿಯ ಸರಬರಾಯಿಯು ಹೆಚ್ಚಿಸೋಣಾಗುವುದರಿಂದ ಯಂತ್ರ ಇತ್ಯಾದಿಗಳನ್ನು ನಡಿಸಲು ಕೈಗಾರಿಕೆಗಳ ಕಾರಖಾನೆಗಳಿಗೆ ಬಹಳ ಸಹಾಯವು ದೊರಕುವುದು. [illegible]

ಪರ್ಯಾಲೋಚನೆಯಲ್ಲಿರುವುದಾಗಿ ತಿಳಿಯುತ್ತೇವೆ. ಈ ಬಗ್ಗೆ ಬೇಕಾದ ದ್ರವ್ಯಸಹಾಯವನ್ನು ಕೊಡುವುದು, ಭೂಕಂದಾಯವನ್ನು ಮಾಫಿ ಮಾಡುವುದು, ಮೊದಲಾದ ವಿವರಗಳು ಈ ನವೀನ ಏರ್ಪಾಡಿನಲ್ಲಿರುವವು. ಕಳೆದ ವರುಷ ದಿವಾನ ಸಾಹೇಬರು ತಮ್ಮ ಭಾಷಣದಲ್ಲಿ ವ್ಯಕ್ತಗೊಳಿಸಿದ ಗ್ರಾಮಾಭಿವೃದ್ಧಿಯ ಏರ್ಪಾಡಿನ ಜಾರಿಯು ಇತ್ತಲಾಗೆ ಕೆಲವು ತಿಂಗಳುಗಳಿಂದ ಸಂಸ್ಥಾನದಲ್ಲಿ ನಡಿಯುತ್ತಿದೆ. ಇಷ್ಟು ಅಲ್ಪ ಕಾಲದಲ್ಲಿಯೇ ಮೈಸೂರು ಸಂಸ್ಥಾನದ ೧೬,೭೪೦ ಗ್ರಾಮಗಳಲ್ಲಿ ೧೧,೭೭೩ ಗ್ರಾಮಗಳ ಬಗ್ಗೆ ಈ ಏರ್ಪಾಡಿನ ಪ್ರಕಾರ ಕಮಿಟಿಗಳು ಸ್ಥಾಪಿಸಲ್ಪಟ್ಟಿವೆ. ೭೪೬೦ ಗ್ರಾಮಗಳಲ್ಲಿ ಕಮಿಟಿಗಳು ಕಾರ್ಯ ಪ್ರಾರಂಭವನ್ನು ಮಾಡಿರುವವು. ೭೧೨೭ ಗ್ರಾಮಗಳಲ್ಲಿ ನಿವಾಸಿಕರು ಗ್ರಾಮಾಭಿವೃದ್ಧಿಯ ಏರ್ಪಾಡಿನ ಪ್ರಕಾರ ತಮ್ಮ ಅರ್ಧ ದಿವಸದ ಶ್ರಮವನ್ನು ಗ್ರಾಮಗಳ ಪ್ರಯೋಜನಾರ್ಥವಾಗಿ ವಿನಿಯೋಗಿಸುವರೆ ಒಪ್ಪಿಕೊಂಡಿರುವರು. ೫೫ ಗ್ರಾಮಗಳಲ್ಲಿ ವಾಚನಮಂದಿರಗಳಿರುವ ಪುಸ್ತಕಾಲಯಗಳು ಸ್ಥಾಪಿಸಲ್ಪಟ್ಟು ಜನರು ವರ್ತಮಾನಪತ್ರಿಕೆಗಳನ್ನು ತರಿಸಿ ಓದಲು ಪ್ರಾರಂಭಿಸಿರುವರು. ಗ್ರಾಮಾಭಿವೃದ್ಧಿಯ ಏರ್ಪಾಡುಗಳನ್ನು ಇಷ್ಟುವೇಗನೆ ಬ್ಯಾಲಿಗೆ ತಂದ ಮೈಸೂರು ಸರಕಾರದವರ ಮತ್ತು ದಿವಾನರ ಸಾಹಸವು ಸ್ತುತ್ಯವಾಗಿರುವುದು. ಸರಕಾರದವರ ಈ ಸಾಹಸಕ್ಕೆ ತಕ್ಕುದಾದ ಸಹಕಾರವು ಪ್ರಜೆಗಳಲ್ಲಿ ತೋರಿಬಂದಲ್ಲಿ ಪ್ರಜಾಭಿವೃದ್ಧಿಯ ಸಾಧನಗಳಲ್ಲಿ ಹಿಂದೂಸ್ಥಾನದ ಇತರ ಆಶ್ರಿತ ರಾಜರ ಸಂಸ್ಥಾನಗಳನ್ನು ಮಾತ್ರವಲ್ಲ, ಬ್ರಿಟಿಷ ಇಂಡಿಯವನ್ನು ಸಹ ಮೈಸೂರು ಸಂಸ್ಥಾನವು ಹಿಂದಕ್ಕೆ ಹಾಕುವುದರಲ್ಲಿ ಅನುಮಾನವಿಲ್ಲ.

ದೇಶದ ಏಳಿಗೆಗೆ ಅಗತ್ಯವುಳ್ಳ ದೇಶಾಭಿವೃದ್ಧಿ ಪ್ರಯತ್ನಗಳನ್ನು ಮೈಸೂರು ಸರಕಾರದವರು ಯಾವ ರೀತಿ ಪ್ರಾರಂಭಿಸಿರುವರೆಂಬುದು ನಮ್ಮ ಕೈಯಲ್ಲಿರುವ ದಿವಾನರ ಭಾಷಣದ ಕೆಲವಂಶಗಳಿಂದ ತಿಳಿದುಬರುವದು. ದಿವಾನರ ಭಾಷಣವನ್ನು ಪರಿಪೂರ್ಣವಾಗಿ ನೋಡಿಕೊಂಡ ಬಳಿಕ ಈ ವಿಷಯದಲ್ಲಿ ಎಂಥಾ ಪ್ರಯತ್ನಗಳನ್ನು ನಡಿಸಲು ಮೈಸೂರು ಸರಕಾರದವರು ನಿಶ್ಚಯಿಸಿರುವರೆಂಬುದನ್ನು ತಿಳಿಸಿ ಪ್ರಸ್ತಾಪಿಸುವೆವು.

ಗಣಪತಿ ಸೆಕೆಂಡರಿ ಶಾಲೆಯ ವರ್ಷೋತ್ಸವವು.

ಗಣಪತಿ ಸೆಕೆಂಡರಿ ಶಾಲೆಯ ವರ್ಷೋತ್ಸವವು ಎಂದಿನಂತೆ ವಿದ್ಯಾದಶಮಿಯ ದಿನ ಇಲ್ಲಿಯ ಸ್ಕೂಲ್ಸ್ ಇನ್‌ಸ್ಪೆಕ್ಟರಾದ ರಾ। ರಾ। ಆರ್ಣೆಸ್ಟ್ ರಾಯರ ಅಧ್ಯಕ್ಷತೆಯಲ್ಲಿ ಬಹಳ ಸಂಭ್ರಮದಿಂದ ನಡೆಸಲ್ಪಟ್ಟಿತು. ಈ ಉತ್ಸವ ಕಾಲದಲ್ಲಿ ಓದಲ್ಪಟ್ಟ ಶಾಲಾ ವರದಿಯಿಂದ ಶಾಲೆಯು ಇನ್ನು ಬೇಗನೇ ಹೊಸ ಕಟ್ಟಡಗಳಿಗೆ ವರ್ಗಾಯಿಸಲ್ಪಡುವದೆಂದು ತಿಳಿಯುತ್ತೇವೆ. ಹೊಸ ಕಟ್ಟಡದ ಫಂಡಿಗೆ ರೂಪಾಯಿ ೭೨೭—೧೫—೩ನ್ನು ಕೊಟ್ಟ ಮಂಗಳೂರು ಸುಜನ ನಿವಾಸಿಗಳನ್ನೂ ನಾಟಕದಿಂದ ಸಂಗ್ರಹಿಸಿ ರೂ. ೧೬೧—೧—೧೧ ಕೊಟ್ಟ ಬಸೆಲ್ ಮಿಷನ್ ಪ್ರವೀಣರ ಕಂಪೆನಿಯವರನ್ನೂ ಇತರ ಕೆಲವು ಸದ್ಗೃಹಸ್ಥರನ್ನೂ ಸಹ ವರದಿಯಲ್ಲಿ ಶಾಲಾಧಿಕಾರಿಗಳು ವಂದಿಸಿರುವರು. ಶಾಲಾ ಕಟ್ಟಡಗಳ ಫಂಡಿಗೆ ಮ। ರಾ। ರಾ। ದಾಮೋದರ ಪೈ ಮಾಸ್ತರರು ಉದಾರ ಭಾವದಿಂದ ಕೊಟ್ಟ ಮನೆ ಜಾಗೆಗಳನ್ನು ಮಾರಿ ರೂ ೩,೦೦೦ ಕಟ್ಟಡಗಳ ಫಂಡಿಗೆ ದೊರಕಿರುವುದೆಂದು ತಿಳಿಯುತ್ತೇವೆ. ಈ ಶಾಲಾ ಕಟ್ಟಡಗಳಿಗೆ ತಗಲುವ ರೂ. ೩೦,೪೦೦ರಲ್ಲಿ ಅರ್ಧಾಂಶ ಸರಕಾರದವರಿಂದ ಕೊಡಲಾಗಿ ರೂ ೧೫,೫೦೦ನ್ನು ಶಾಲಾ ಆಡಳಿತೆ ಕಮಿಟಿಯವರು ಸಂಗ್ರಹಿಸಬೇಕಾಗಿರುವುದು. ರೂ ೭,೬೦೦ ವಾಗ್ದಾನ ಮಾಡಿದವರಿಂದ ವಸೂಲು ಮಾಡಲಿಕ್ಕಿದೆ. ರೂ. ೭,೯೦೦ ಇನ್ನು ಸಂಗ್ರಹಿಸಬೇಕಾಗಿರುತ್ತದೆ. ಸಂಪನ್ನರ ಉದಾರಾಶ್ರಯವು ಈ ಶಾಲೆಗೆ ಇನ್ನೂ ಬೇಕಾಗಿರುವುದು. ಶಾಲೆಯು ಸಾರಸ್ವತರಿಂದ ಸ್ಥಾಪಿಸಲ್ಪಟ್ಟು ಸಾರಸ್ವತರಿಂದಲೇ ನಡಿಸಲ್ಪಡುತ್ತದಾದರೂ ಎಲ್ಲಾ ಜಾತಿಯ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೋಸ್ಕರ ಈ ಶಾಲೆಯಲ್ಲಿ ಪ್ರವೇಶವು ದೊರಕುವುದೆಂದು ಶಾಲಾಧಿಕಾರಿಗಳು ವರದಿಯಲ್ಲಿ ಸೂಚಿಸಿರುವರು. ವಿದ್ಯಾಭ್ಯಾಸದಲ್ಲಿ ಹಿಂದುಳಿದ ಹಲವು ಜಾತಿಗಳು ಇರುವ ಈ ಪ್ರಾಂತ್ಯದಲ್ಲಿ ವಿದ್ಯಾವಂತ ಜಾತಿಯವರು ಜಾತಿಭೇದವನ್ನು ಲೆಕ್ಕಿಸದೆ ತಮ್ಮ ವಿದ್ಯಾ ಸಂಸ್ಥೆಗಳಲ್ಲಿ ಇತರ ಜಾತಿಯವರಿಗೂ ಸಹ ಪ್ರವೇಶಗೊಡುವುದು ಪ್ರಶಂಸನೀಯವಾಗಿರುವುದು. ಆದರೆ ಈ ಕಾಲದಲ್ಲಿ ಪ್ರತಿ ಜಾತಿಯಲ್ಲೆಂಬಂತೆ ವಿದ್ಯಾ ಸಂಪನ್ನರಿರುವಾಗ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿ ನಡೆಸುವುದರಲ್ಲಿ ಆಯಾ ಜಾತಿಯವರು ಕೂಡಿ ನಡಿಯಲು ಪ್ರಯತ್ನಿಸುವುದು ಅಗತ್ಯವಾಗಿರುತ್ತದೆ. ಗಣಪತಿ ಸೆಕೆಂಡರಿ ಶಾಲೆಯಲ್ಲಿ ದೊರಿಯುವ ಶಿಕ್ಷಣ ತರಗತಿಯು ಉತ್ತಮವಾಗಿರುವುದೆಂದು ವಿದ್ಯಾಶಾಖೆಯವರ ಅಭಿಪ್ರಾಯವಿರುವುದು. ಹೆಚ್ಚಿನ ಯೋಗ್ಯತೆಯ ಉಪಾಧ್ಯಾಯರು ಈ ಶಾಲೆಯ ಬಾಲಕರ ದರ್ಜೆಗಳಲ್ಲಿ ಪಾಠ ಕಲಿಸುವ ಬದಲಾವಣೆಯನ್ನು ಶಾಲಾ [illegible] ಮಾಡಿರುವರು. ಬಾಲಕರ ಶಿಕ್ಷಣದ ಬಗ್ಗೆ ಮಾಡಿದ [illegible]

ತ್ತಿರುವಾಗ ಮಕ್ಕಳ ಅಕ್ಷರಭ್ಯಾಸವನ್ನು ಅಕ್ಕರೆಯಿಂದ ಕೈಕೊಳ್ಳುವಂಥವರನ್ನೇ ಈ ಕೆಲಸಕ್ಕೆ ನೇಮಿಸುವುದು ಮತ್ತಷ್ಟು ಉಚಿತವಾಗಿರುವುದು.

ಶಾಲೆಯ ಕರ್ನಾಟಕ ಅಧ್ಯಾಪಕರಾದ ರಾ। ಕೆ. ಬಿ. ರಾಮಕೃಷ್ಣನವರಿಂದ ತಯ್ಯಾರಿಸಲ್ಪಟ್ಟ ಭ್ರಾತೃಪ್ರೇಮವೆಂಬ ಕನ್ನಡ ನಾಟಕವನ್ನು ಶಾಲಾ ಬಾಲಕರು ಅಂದವಾದ ರೀತಿಯಲ್ಲಿ ಆಡಿ ಸಭಿಕರನ್ನು ವಿನೋದಗೊಳಿಸಿದರು. ಅಧ್ಯಕ್ಷರಾದ ರಾ। ಆರ್ಣೆಸ್ಟ್ ರಾಯರವರು ತಮ್ಮ ಭಾಷಣವನ್ನು ಕನ್ನಡ ಭಾಷೆಯಲ್ಲಿ ಮಾಡಿದರು. ದೇವಭಕ್ತಿ, ಪಿತೃಭಕ್ತಿ, ದೇಶಭಕ್ತಿ, ರಾಜಭಕ್ತಿಗಳುಳ್ಳವರಾಗಿ ವರ್ತಿಸಬೇಕೆಂದು ಅಧ್ಯಕ್ಷರ ಭಾಷಣದ ಮುಖ್ಯ ತಾತ್ಪರ್ಯವಾಗಿರುವುದು. ಈ ಕಾಲದಲ್ಲಿ ಶಾಲಾ ವಿದ್ಯಾರ್ಥಿಗಳಲ್ಲಿ ಪಿತೃಭಕ್ತಿಯು ಕಡಮೆಯಾಗಿರುವಂತೆ ತೋರುತ್ತದೆಂಬ ಅಧ್ಯಕ್ಷರ ಮಾತು ಯಥಾರ್ಥವಾಗಿದೆ. ಈ ಭಕ್ತಿಭಾವವು ಕಡಮೆಯಾಗಲು ಕಾರಣವೇನೆಂಬ ವಿಷಯಕ್ಕೆ ವಿದ್ಯಾರ್ಥಿಗಳೂ ವಿದ್ಯಾರ್ಥಿಗಳ ಹೆತ್ತವರೂ ತಕ್ಕ ಲಕ್ಷ್ಯಕೊಡುವುದು ಅಗತ್ಯವಾಗಿರುವುದು. ಪಾಶ್ಚಾತ್ಯರನ್ನು ಪ್ರತಿ ವಿಷಯದಲ್ಲಿ ಅವರ ಉಡುಪು ತೊಡುಪುಗಳಲ್ಲಿಯೂ ವಿಚಾರವಿಲ್ಲದೆ ಅನುಸರಿಸುವುದರಲ್ಲಿ ಎಚ್ಚರವುಳ್ಳವರಾಗಬೇಕೆಂಬ ಅಧ್ಯಕ್ಷರ ಬೋಧೆಯು ಈಗಿನ ಕಾಲದಲ್ಲಿ ಆಗಿಂದಾಗ್ಯೆ ಸ್ಮರಣೆಗೆ ತಂದುಕೊಳ್ಳಬೇಕಾಗಿರುವಂಥಾದ್ದಾಗಿದೆ. ಪಾಶ್ಚಾತ್ಯ ಮತ್ತು ಪೌರ್ವಾತ್ಯ ಸಂಸ್ಕೃತಿಗಳಲ್ಲಿ ನಮ್ಮ ಸ್ವಭಾವಕ್ಕೆ, ನಮ್ಮ ದೇಶಕ್ಕೆ, ನಮ್ಮ ಯಥಾರ್ಥವಾದ ಕ್ಷೇಮಸಾಧನೆಗೆ ಉಪಯುಕ್ತವಾದಂಥಾದ್ದನ್ನು ನಾವು ಅವಲಂಬಿಸಬೇಕೆಂಬ ಅಧ್ಯಕ್ಷರ ಸಮಯೋಚಿತ ಬುದ್ಧಿವಾದವು ಸರ್ವರಿಂದಲೂ ಮನ್ನಿಸತಕ್ಕದ್ದಾಗಿರುವುದು.

ಅಧ್ಯಕ್ಷರ ಭಾಷಣದ ನಂತರ ಮ। ರಾ। ರಾ। ಸುಜೀರ ರಘುನಾಥಯ್ಯನವರು ಕನ್ನಡಭಾಷೆಯಲ್ಲಿಯೇ ಅಧ್ಯಕ್ಷರನ್ನು ವಂದಿಸಿದರು. ರಾಜರಿಗೆ ಜಯವಾಗಲೆಂದು ಸಭಿಕರೆಲ್ಲರೂ ಹರಸಿದನಂತರ ಸಭೆಯು ಮುಕ್ತಾಯವಾಯಿತು.

ಬಂಗಾಳದಲ್ಲಿ ಸ್ತ್ರೀಯರ ಬಗ್ಗೆ ಏರ್ಪಡಿಸೋಣಾಗುವ ಕೈಗಾರಿಕೆಗಳ ಶಾಲೆಯು

ಆಶ್ರಯವಿಲ್ಲದ ಸ್ತ್ರೀಯರಿಗೂ ವಿಧವೆಯರಿಗೂ ಕಸಬುದಾರಿಕೆಯ ಶಿಕ್ಷಣವನ್ನು ಕೊಡಲು ಒಂದು ಕೈಗಾರಿಕೆಗಳ ಶಾಲೆಯನ್ನು ಸ್ಥಾಪಿಸುವ ಪ್ರಯತ್ನವು ಬಂಗಾಳದಲ್ಲಿ ನಡಿಯುತ್ತಿದೆ. ಕಲ್ಕತ್ತೆಯಲ್ಲಿ ಸ್ತ್ರೀಯರುಗಳಿಂದಲೇ ನಡಿಸಲ್ಪಡುವ ಮಹಿಳಾಶಿಲ್ಪ ಬಜಾರ್ ಎಂಬ ಸಾಮಾಗ್ರಿಗಳ ಕೊಠಡಿಯೊಂದಿರುವುದು. ಇಲ್ಲಿ ಆಯಾ ಪ್ರಾಂತ್ಯಗಳ ಸ್ವದೇಶಿ ಸ್ತ್ರೀಯರಿಂದ ಸಾಮಗ್ರಿಗಳನ್ನು ತರಿಸಿಕೊಂಡು ವಿಕ್ರಯಿಸುತ್ತಿರುವರು. ಇಂಥಾ ಸಾಮಗ್ರಿಗಳನ್ನು ಇನ್ನು ಪ್ರಕೃತ ಸ್ಥಾಪಿಸೋಣಾಗುವ ಕೈಗಾರಿಕೆಯ ಶಾಲೆಯಲ್ಲಿ ತಯಾರಿಸಬೇಕೆಂದು ಉದ್ದೇಶಿಸಲ್ಪಟ್ಟಿರುತ್ತದೆ. ಯುರೋಪು ಮತ್ತು ಅಮೇರಿಕ ಖಂಡಗಳಲ್ಲಿ ತರಬೇತಿಯನ್ನು ಪಡೆದು ಬಂದ ಮಾಹಿತಿದಾರರು ಈ ಶಾಲೆಯ ಮೇಲ್ವಿಚಾರವನ್ನು ನೋಡುವರು. ಗೃಹಕೃತ್ಯಕ್ಕೆ ಅತ್ಯುಪಯುಕ್ತವಾದ ಶುಮಾರು 28 ವಿಧಾನಗಳ ಸಾಮಾಗ್ರಿಗಳು ಈ ಶಾಲೆಯಲ್ಲಿ ತಯ್ಯಾರಿಸುವರು. ಈ ಶಾಲೆಯಲ್ಲಿ ಕಲಿಸೋಣಾಗುವ ಮುಖ್ಯ ವಿಷಯಗಳು ಯಾವವಂದರೆ—ಟ್ಯಾಪ್ ರೈಟಿಂಗ್, ವಸ್ತ್ರ ಹೊಲಿಯುವದು, ಬಾಚಣಿಗೆ ಮತ್ತು ಗುಬ್ಬಿಗಳನ್ನು ತಯ್ಯಾರಿಸುವುದು, ಆವೆ ಮಣ್ಣಿನಿಂದ ಪ್ರತಿಮೆಗಳನ್ನು ಮಾಡುವುದು, ಲಕೋಟಿ ಮೊದಲಾದವುಗಳನ್ನು ತಯ್ಯಾರಿಸುವುದು, ಪುಸ್ತಕಗಳನ್ನು ಕಟ್ಟುವ ಕೆಲಸ, ಮೊದಲಾದ ಇನ್ನೂ ಹಲವು ವಿಷಯಗಳಿವೆ. ಈ ಶಾಲೆಯನ್ನು ಸ್ಥಾಪಿಸಲಿಕ್ಕೆ ರೂ. 3000, ಬಾಡಿಗೆ ರೂ. 1800, ಇತರ ವಯ್ಯೋಣದ ಖರ್ಚು ರೂ. 900, ಈ ರೀತಿ ಹಣವು ಬೇಕಾಗುವುದೆಂತ ಅಂದಾಜು ಮಾಡಲ್ಪಟ್ಟಿರುತ್ತದೆ.

ಕಲ್ಕತ್ತೆಯಲ್ಲಿ ಈ ಶಾಲಾ ಸ್ಥಾಪನೆಗೆ ಇಷ್ಟು ಹಣ ಬೇಕಾದರೆ ನಮ್ಮ ಪ್ರಾಂತ್ಯಗಳಲ್ಲಿ ಇಂಥಾ ಶಾಲೆಗಳನ್ನು ಸ್ಥಾಪಿಸಲು ಇದಕ್ಕಿಂತ ಕಡಮೆ ಐವಜು ಸಾಕು. ಆದರೆ ಇಂಥಾ ಸಾಧನೆಯನ್ನು ಇಲ್ಲಿ ಕೈಕೊಳ್ಳುವವರ್ಯ್ಯಾರು?

ಗವರ್ನರ ದೊರೆಗಳಾದ ಪೆಂಟ್‌ಲೆಂಡ್ ಪ್ರಭುಗಳವರು ಈ ಪ್ರಾಂತ್ಯಗಳನ್ನು ಸಂದರ್ಶಿಸುವ ವಿಷಯ.

ಗವರ್ನರ ದೊರೆಗಳವರು ಈ ಜಿಲ್ಲೆಯ ಸಂದರ್ಶನೆಯನ್ನು ಬರುವ ನವಂಬರ ತಿಂಗಳಲ್ಲಿ ಮಾಡದೆ ಅದನ್ನು ಯುದ್ಧ ಮುಗಿದ ಮೇಲೆ ಮಾಡಬಹುದೆಂಬದಾಗಿ ಮಂಗಳೂರಿನಿಂದ [illegible] ನುಮದರಾಸಿನ 'ಹಿಂದೂ' ಎಂಬ ಪತ್ರಿ[illegible] ಯುದ್ಧದಲ್ಲಿ ನಮ್ಮ [illegible]

ಮಂಗಳೂರಲ್ಲಿ ಸ್ತ್ರೀಪುರುಷರೂ ಮಕ್ಕಳು ಸಹ ತಮ್ಮ ಕರ್ತವ್ಯವನ್ನರಿತು ಆಸಕ್ತಿಯಿಂದ ಯುದ್ಧಫಂಡುಗಳ ಬಗ್ಗೆ ಹಣ ಕೂಡಿಸುತ್ತಿರುವರೆಂತ ಈ ಲೇಖಕರು ಬರೆದಿರುವರು. ರಣರಂಗದಲ್ಲಿ ಬಹಳ ಶೂರತನದಿಂದ ಕಾದಾಡಿ ಸಂಕಟಗೊಂಡ ಬೆಲ್ಜಿಯನರಿಗೆ ಸಂಕಷ್ಟ ನಿವಾರಣೆ ಬಗ್ಗೆ ಸಹ ಒಂದು ಪ್ರತ್ಯೇಕ ಫಂಡು ಮಂಗಳೂರಲ್ಲಿ ಏರ್ಪಡಿಸಲ್ಪಟ್ಟಿರುತ್ತದೆ. ಹಲವು ನಿವಾಸಿಕರು ಈ ಫಂಡಿಗೆ ಸಹ ತಮ್ಮಿಂದ ಸಾಧ್ಯವಾಗುವ ದ್ರವ್ಯಸಹಾಯವನ್ನು ಕೊಡುತ್ತಿರುವರು. ಇಂಥಾ ಸಂದರ್ಭದಲ್ಲಿ—ಪ್ರಜೆಗಳು ತಮ್ಮ ಸರ್ವಸ್ವವನ್ನು ಸಾಮ್ರಾಜ್ಯದ ಸೇವೆಗೆ ಅರ್ಪಿಸಬಹುದಾದ ಈ ಸಂದರ್ಭದಲ್ಲಿ—ಗವರ್ನರ ಪ್ರಭುಗಳು ತಮ್ಮ ಸಂದರ್ಶಣೆಯನ್ನು ಬಾಕಿಯಲ್ಲಿಟ್ಟು ಅದನ್ನು ಯುದ್ಧ ಮುಗಿದ ಬಳಿಕ ಮಾಡಬಹುದೆಂತ ಈ ಮಂಗಳೂರು ನಿವಾಸಿಕರು ವಾದಿಸಿರುತ್ತಾರೆ. ಗವರ್ನರ ದೊರೆಗಳವರ ಸಂದರ್ಶಣೆಯ ಖರ್ಚಿನ ಬಗ್ಗೆ ಕೂಡಿಸಿರುವ ಚಂದಾಹಣವನ್ನು ಈ ಜಿಲ್ಲೆಯಲ್ಲಿ ಏರ್ಪಡಿಸೋಣಾದ ಯುದ್ಧ ಸಂಕಷ್ಟ ನಿವಾರಣಾ ಫಂಡುಗಳಿಗೆ ಕೊಡೋಣಾದ್ದಲ್ಲಿ ಯಾರೂ ಆಕ್ಷೇಪ ಹೇಳರೆಂಬುದು ಇವರ ಇನ್ನೊಂದು ಸೂಚನೆಯಾಗಿರುವುದು. ಇನ್ನೂ ಸಂದರ್ಶಣ ಕಾಲವು ಒಂದು ತಿಂಗಳ ಮುಂದಕ್ಕಿರುವದರಿಂದ ಖಾವಂದರವರು ಯುದ್ಧ ಕಾರಣದಿಂದ ತಮ್ಮ ಸಂದರ್ಶಣೆಯನ್ನು ಮುಂದರಿಸಿದರೆ ಅಡಚಣೆಯಾಗದು. ಗವರ್ನರ ದೊರೆಗಳ ಸಂದರ್ಶಣೆಯು ಯುದ್ಧ ಕಾರಣದಿಂದ ಮುಂದರಿಸೋಣಾಗಬಹುದೆಂತ ಪ್ರಜಾವರ್ಗಗಳಲ್ಲಿ ಹಲವರು ನಿರೀಕ್ಷಿಸುತ್ತಿರುವರು. ಗವರ್ನರದೊರೆಗಳವರನ್ನು ಉಪಚರಿಸುವುದರಲ್ಲಿ ಯಾರಾದರೂ ಖರ್ಚಿನ ವಿಷಯವನ್ನು ಯೋಚಿಸಿಕೊಂಡು ಎಂದೂ ಗುರುಗುಟ್ಟರು. ಅಥವಾ ಸರಕಾರದವರ ನಿರೀಕ್ಷಣೆ ಪ್ರಕಾರ ತಾವು ಗವರ್ನರರ ಸತ್ಕಾರದ ಬಗ್ಗೆ ಹಣ ವೆಚ್ಚ ಮಾಡಬೇಕೆಂಬ ಭಾವನೆಯಿಂದ ಜನರು ಈ ಬಗ್ಗೆ ಚಂದಾ ಕೂಡಿಸುವದೂ ಅಲ್ಲ. ರಾಜ ಪ್ರತಿನಿಧಿಗಳಾದ ಗವರ್ನರದೊರೆಗಳವರನ್ನು ಸಂಭ್ರಮದಿಂದ ಕಾಣದೆ ಇರುವುದು ರಾಜನಿಷ್ಠಾವಂತರಿಗೆ ಅನುಚಿತವೆಂಬ ಭಾವನೆಯು ಪೌರ್ವಾತ್ಯರಲ್ಲಿ ಸಹಜವಾಗಿದೆ. ತನ್ನ ಸತ್ಕಾರದ ಬಗ್ಗೆ ಒಂದಿಷ್ಟಾದರೂ ಹಣವನ್ನು ಖರ್ಚುಮಾಡಕೂಡದೆಂದು ದೊರೆಗಳವರು ಅಪ್ಪಣೆಕೊಡಿಸಿದರೂ ಯಥಾರೀತಿ ಖರ್ಚು ನಡಿಸಿ ಗವರ್ನರರನ್ನು ಸತ್ಕರಿಸದಿದ್ದರೆ ಪ್ರಜಾವರ್ಗಕ್ಕೆ ಎಂದೂ ತೃಪ್ತಿ ಇರದ್ದರಿಂದ ಪ್ರಜೆಗಳು ಖಾವಂದರವರನ್ನು ಇದಿರುಗಾಣುವರೆ ಸರ್ವ ಸನ್ನಾಹಗಳನ್ನು ಮಾಡದೆ ಇರಲಾರರು. ಆದ್ದರಿಂದ ವಿಶೇಷ ಖರ್ಚಿನ ಈ ಯುದ್ಧಕಾಲದಲ್ಲಿ ದೊರೆಗಳವರು ತಮ್ಮ ಸಂದರ್ಶಣೆಯನ್ನು ಮುಂದರಿಸಿಟ್ಟರೆ ಜನರಲ್ಲೆಂದೂ ತಪ್ಪು ಭಾವನೆಯುಂಟಾಗದು. ಈ ರೀತಿ ಖರ್ಚಿನ ವಿಚಾರವನ್ನು ಪರ್ಯಾಲೋಚಿಸಿ ಈ ಲೇಖಕರು ದೊರೆಗಳವರು ತಮ್ಮ ಸಂದರ್ಶಣೆಯ ಕಾಲವನ್ನು ಮುಂದರಿಸಿಡಬೇಕೆಂದನ್ನುವರು. ಲೋಕವೆಲ್ಲವೂ ಪ್ರಕೃತ ನಡೆಯುವ ಯುದ್ಧದ ಶುಭಾಶುಭಗಳ ಯೋಚನೆಯುಳ್ಳರುವಾಗ—ರಣರಂಗದಲ್ಲಿ ಸಾವಿರಾರು ಮಂದಿ ದಿನಾಗಲೂ ಪ್ರತಿನಿತ್ಯವು ಸಾಯುತ್ತಿರುವಾಗ—ನಾವು ಮಾತ್ರ ಸತ್ಕಾರದ ಸಂಭ್ರಮದಲ್ಲಿರುವುದು ಚಂದಗಾಣದು. ಇದೊಂದು ವಿಚಾರ. ಹಲವು ವರುಷಗಳಿಗೊಂದಾವರ್ತಿ ಈ ಪ್ರಾಂತ್ಯಗಳಿಗೆ ಬರುವ ರಾಜ ಪ್ರತಿನಿಧಿಗಳನ್ನು ಯೋಗ್ಯ ರೀತಿಯಲ್ಲಿ ಉಪಚರಿಸದಿರುವುದೂ ಸಹ ಎಂದೂ ಚಂದಗಾಣಲಿಕ್ಕಿಲ್ಲ. ಇದು ಮತ್ತೊಂದು ವಿಚಾರ. ಈ ರೀತಿ ಈ ಕಡೆಯ ಪ್ರಜಾಜನರಲ್ಲಿ ಉಭಯ ಸಂಕಟದ ಭಾವನೆಯಿದೆ ಎಂತ ಈ 'ಮಂಗಳೂರು ನಿವಾಸಿ'ಕರು ಸೂಚಿಸಿರುತ್ತಾರೆ. ಈ ವಿದ್ಯಮಾನಗಳಲ್ಲಿ ನಮ್ಮ ದೇಶದ ಇತರ ಸಂಸ್ಥಾನಗಳ ಗವರ್ನರ ದೊರೆಗಳವರು ತಮ್ಮ ಸಂಚಾರವನ್ನು ಬಾಕಿ ಇಟ್ಟಂತೆ ನಮ್ಮ ಸಂಸ್ಥಾನಾಧಿಪರು ಸಹ ಬಾಕಿ ಇಡಬೇಕೆಂದು ಈ ಲೇಖಕರು ವಿಜ್ಞಾಪಿಸಿಕೊಂಡಿರುವರು.

ಕಾಸರಗೋಡು ಯುದ್ಧಫಂಡಿನ ಸಭೆಯ ಪ್ರೊಸಿಡಿಂಗ್ಸ್

ತಾ. ೨೦ನೇ ಸಪ್ತಂಬರ ೧೯೧೪.

ಮ| ರಾ| ರಾ| ವಕೀಲ್ ಪಿ. ನಾರಾಯಣ ಮೇನೋನರು ದಿವಾನ್ ಬಹದೂರ್. ಎ. ವೆಂಕಟರಮಣ ಪೈಗಳು ಸಭಾಧ್ಯಕ್ಷರಾಗಬೇಕಾಗಿ ಸೂಚಿಸಿದ್ದನ್ನು ಮ| ರಾ| ರಾ| ಟಿ. ಸಿ. ರಾಮವರ್ಮ ರಾಜರವರು ಅನುಮೋದಿಸಿದರು. ದಿವಾನ್ ಬಹದೂರ್ ಎ. ವೆಂಕಟರಮಣ ಪೈಗಳು ಅಧ್ಯಕ್ಷಸ್ಥಾನವನ್ನು ವಹಿಸಿ ತಮ್ಮ ಅಭಿಪ್ರಾಯವನ್ನು ಸೂಚಿಸಿ ಏಕಚಕ್ರಾಧಿಪತಿಗಳಾದ ನಮ್ಮ ಸಾರ್ವಭೌಮರು ಹಿಂದೂಸ್ಥಾನದ ಉಪರಾಜರಿಗೂ ಪ್ರಜಾ ಜನರಿಗೂ ಬರದು ಕಳುಹಿಸಿದ ಸಂದೇಶವನ್ನು ಓದಬೇಕೆಂದು ಮ| ರಾ| ರಾ| ಕೆ. ಪಿ. ಅಚ್ಯುತ್ತಯ್ಯನವರನ್ನು ಅಪೇಕ್ಷಿಸಿದರು. ಮ| ರಾ| ರಾ| ಕೆ. ಪಿ. ಅಚ್ಯುತ್ತಯ್ಯನವರು ಅದನ್ನು ಓದಿದರು. (ಇದನ್ನು ಓದುವಾಗ ಸಭೆಯಲ್ಲಿ ಎಲ್ಲಾ ಜನರು ಎದ್ದು ನಿಂತಿದ್ದರು). [illegible] ಮ| ರಾ| ರಾ| ಎ. [illegible] ಸವರು ಸಭೆಯ [illegible]

ಒಂದನೇ ನಿರ್ಣಯವನ್ನು ಮ| ರಾ| ರಾ| ವಕೀಲ್ ನರಸಿಂಗನ್ನಾಕರು ಸೂಚಿಸಿದರು. ಮ| ರಾ| ರಾ| ಮಹಮ್ಮದ ಶಮ್ನಾಡರು ಅನುಮೋದಿಸಿದರು. ಸರ್ವ ಸಮ್ಮತಿಯಿಂದ ಒಪ್ಪಿಕೊಳ್ಳೋಣಾಯಿತು:—"ಈ ದಿವಸ ಈ ಮಹಾ ಸಭೆಯಲ್ಲಿ ಒಟ್ಟುಕೂಡಿದ ಕಾಸರಗೋಡು ತಾಲೂಕು ನಿವಾಸಿಕರಾದ ನಾವು ನಮ್ಮ ಶ್ರೀಮನ್ ಮಹಾರಾಜ ಚಕ್ರವರ್ತಿಯವರಲ್ಲಿ ನಮಗಿರುವ ಮನಃಪೂರ್ವಕವಾದ ರಾಜಭಕ್ತಿಯನ್ನೂ ವಿಶ್ವಾಸವನ್ನೂ ಕೇವಲ ವಿಧೇಯಭಾವದಿಂದ ಸಮರ್ಪಿಸುವೆವು. ಮತ್ತು ಯುರೋಪ ಖಂಡದಲ್ಲಿ ಈಗ ನಡಿಯುವ ಯುದ್ಧದಲ್ಲಿ ನಮ್ಮ ಸಾರ್ವಭೌಮರಿಗೆ ಜಯವಾಗಲೆಂದು ಹೃದಯ ಪೂರ್ವಕವಾಗಿ ಪ್ರಾರ್ಥಿಸುವೆವು.

ಈ ಕೆಳಗಣ ೨ನೇ ನಿರ್ಣಯವನ್ನು ಮ| ರಾ| ರಾ| ಕೆ. ಪಿ. ಅಚ್ಯುತ್ತಯ್ಯನವರು ಸೂಚಿಸಿದರು. ಮ| ರಾ| ರಾ| ಟಿ. ಸಿ. ರಾಮವರ್ಮರಾಜರವರು ಅನುಮೋದಿಸಿದರು. ಮ| ರಾ| ರಾ| ವಕೀಲ್ ಶ್ಯಾಮಸೆಟ್ಟರು ಆಧರಿಸಿದರು. ಮತ್ತು ಸರ್ವಸಮ್ಮತಿಯಿಂದ ಒಪ್ಪಿಕೊಳ್ಳೋಣಾಯಿತು:—"ಈ ತಾಲೂಕು ನಿವಾಸಿಕರಾದ ನಾವು ನಮ್ಮ ಸರ್ವಸ್ವವನ್ನು ರಾಜ್ಯದ ಆಪತ್ಕಾಲಕ್ಕಾಗಿ ಅರ್ಪಣೆ ಮಾಡುವೆವು. ಈ ಉದ್ದಿಶ್ಯಾರ್ಥವಾಗಿ ಸದ್ಯ—(೧) ಮದ್ರಾಸ್ ಯುದ್ಧದ ಫಂಡಿಗೂ (೨) ಮೈಸೂರು ಪ್ರಭುಗಳವರ ಫಂಡಿಗೂ ದ್ರವ್ಯವನ್ನು ಒದಗಿಸಿ ಕೊಡುವದಕ್ಕೆ ಒಂದು ವಂತಿಗೆ ಪಟ್ಟಿಯನ್ನು ಈ ಕ್ಷಣವೇ ಮಾಡುವಂತೆ ಈ ಮೂಲಕ ನಿರ್ಣಯಿಸುತ್ತೇವೆ".

ಈ ಕೆಳಗಣ ಮೂರನೇ ನಿರ್ಣಯವನ್ನು ಮ| ರಾ| ರಾ| ವಕೀಲ್ ಸಿ. ಮಂಜುನಾಥ ಕಮ್ತಿರು ಸೂಚಿಸಿದರು. ಮ| ರಾ| ರಾ| ಕುಂಞಿಮ್ಮಾಕುಟ್ಟಿ ಬ್ಯಾರಿ ಸಾಹೇಬರು ಅನುಮೋದಿಸಿದರು—"ಈ ಮಹಾ ಸಭೆಯ ಉದ್ದೇಶವನ್ನು ನೆರವೇರಿಸುವಗೋಸ್ಕರ ಈ ಕೆಳಗಣ ಗೃಹಸ್ಥರಿಂದ ಕೂಡಿದ ಒಂದು ಕಾರ್ಯನಿರ್ವಾಹಕ ಸಭೆಯನ್ನು ಏರ್ಪಡಿಸಬೇಕು." ೧ ದಿವಾನಬಹದ್ದೂರು ಎ. ವೆಂಕಟ್ರಮಣಪೈಗಳು. ೨. ಮ| ರಾ| ರಾ| ಪಿ. ನಾರಾಯಣ ಮೇನೋನರು. ೩ ಮ| ರಾ| ರಾ| ಯಸ್. ಯಸ್. ರಾಮರಾಯರು ೪ ಮ| ರಾ| ರಾ| ಮಹಮ್ಮದ ಶಮ್ನಾಡ ಸಾಹೇಬರು, ೫. ಮ| ರಾ| ರಾ| ಟಿ ಸಿ. ರಾಮವರ್ಮರಾಜರು ೬. ಮ| ರಾ| ರಾ| ಯಂ ವೈಕುಂಟ ಭಕ್ತರು. ೭. ಮ| ರಾ| ರಾ| ಕಂಬಾರ ಕುಂಞಾಲಿ ಬ್ಯಾರಿಗಳು ೮. ಮ| ರಾ| ರಾ| ಕೆ. ನರಸಿಂಗ ನ್ನಾಕರು ೯ ಮ| ರಾ| ರಾ| ಎ. ದೇವಪ್ಪ ಪೂಂಜರು. ೧೦. ಮ| ರಾ| ರಾ| ಕೆ. ಪಿ. ಅಚ್ಯುತ್ತಯ್ಯನವರು ಮತ್ತು ಇವರ ಪೈಕಿ ಮ| ರಾ| ರಾ| ಕೆ. ಪಿ. ಅಚ್ಯುತ್ತಯ್ಯನವರು ಗೌರವ ಕಾರ್ಯದರ್ಶಿ ವ ಖಜಾನಿಜಿಯವರಾಗಿರಬೇಕು.

ಈ ಸಮಯದಲ್ಲಿ ವಂತಿಗೆ ಪಟ್ಟಿಯನ್ನು ಎಲ್ಲವರಿಗೂ ತೋರಿಸೋಣಾದ್ದಲ್ಲಿ ರೂ. ೬೦೫೦—೮—೦ ವಂತಿಗೆ ಕೂಡಿತು. ಈ ಪೈಕಿ ೧೨೪೫ ರೂಪಾಯಿ ಕೂಡಲೇ ವಸೂಲಾಯಿತು. ಮ| ರಾ| ರಾ| ಕೋಡೋತ ಅಂಬುನ್ನಾರರು ರೂ. ೧೦೦೧ ಮತ್ತು ಯಜಿಕಾನ ಚರಕರೆ ಕೇಳುನ್ನಾರರು ರೂ. ೧೦೦೧ ನೀಲೇಶ್ವರ ತೆಕ್ಕೆಕೂಲದ ಅರಸುಗಳವರ ಕಡೆಯಿಂದ ಮ| ರಾ| ರಾ| ಟಿ. ಸಿ. ರಾಮವರ್ಮ ರಾಜರು ರೂ ೩೧೦. ಮ| ರಾ| ರಾ| ಚರ್ವಾಡಿ ಕೃಷ್ಣನ್ನಾರರು ರೂ. ೩೦೦. ಮ| ರಾ| ರಾ| ಕ್ಯೋಟಿಇಲ್ ಕುಂಞಿಂಬುನ್ನಾರರು ರೂ. ೩೦೦. ಮ| ರಾ| ರಾ| ಕೋಹೋತ ಕುಂಞಿಕಣ್ಣ ನಂಬ್ಯಾರು ರೂ ೩೦೦. ಮ| ರಾ| ರಾ| ಕೂಡ್ಲ ಸುಬ್ರಾಯಶ್ಯಾನುಭಾಗರು ರೂ.೨೦೦. ಮ| ರಾ| ರಾ| ಉಳಿಯತ್ತಾಯ ವಿಷ್ಣು ಆಗ್ರರವರು ರೂ. ೧೦೫. ಮ| ರಾ| ರಾ| ಕೆ. ಬಿ ತಿಮ್ಮಪ್ಪ ಸೆಟ್ಟರು ರೂ. ೧೦೫. ಮ| ರಾ| ರಾ| ಬಂಗ್ರಾಣ ಚಿಕ್ಕಪ್ಪುನ್ನಾಯರು, ರೂ. ೧೦೧. ಮ| ರಾ| ರಾ| ಕೋಡಿಂಗಾರ ಶಂಕರಬಂಟರು ರೂ. ೧೦೧. ಮ| ರಾ| ರಾ| ಕೂಡ್ಲ ಸದಾಶಿವ ಶ್ಯಾನುಭಾಗರು ರೂ. ೧೦೦. ಮ| ರಾ| ರಾ| ಉಪ್ಪಳತಲೆ ಇಗ್ರಾಯಿನ್‌ಇರಿ ಸಾಹೇಬರು ರೂ. ೧೦೦. ಮ| ರಾ| ರಾ| ನಾರಂಪಾಡಿ ರಾಮನ್ನಾರರು ರೂ. ೧೦೦. ಉದೇನೂರು ದೇವಸ್ಥದ ಕಡೆಯಿಂದ ಮ| ರಾ| ರಾ| ಶಂಕರನ್ನಾರರು ರೂ. ೧೦೦. ಇತಿ ಅನೇಕರು ರೂ. ೧೦೦ರ ಒಳಗಿನ ಮೊಬಲಗನ್ನು ಸಹಾ ವಂತಿಗೆ ಹಾಕಿರುತ್ತಾರೆ.

ಈ ಕೆಳಗಣ ನಾಲ್ಕನೇ ನಿರ್ಣಯವನ್ನು ಮ| ರಾ| ರಾ| ಯಸ್. ಯಸ್. ರಾಮರಾಯರು ಸೂಚಿಸಿದರು. ಮ| ರಾ| ರಾ| ನರಸಿಂಗನ್ನಾಕರು ಅನುಮೋದಿಸಿದರು. ಮ| ರಾ| ರಾ| ಮಹಮ್ಮದ ಶಮ್ನಾಡ ಸಾಹೇಬರು ಆಧರಿಸಿದರು. ಮತ್ತು ಸರ್ವಸಮ್ಮತಿಯಿಂದ ಒಪ್ಪಿಕೊಳ್ಳೋಣಾಯಿತು. [illegible] ನಿರ್ಣಯವನ್ನು ಮತ್ತು [illegible] ಮದ್ರಾಸ ಗವರ್ನರ ದೊರೆಗಳವರಿಗೆ [illegible]

ಪತ್ರವ್ಯವಹಾರ.

ಸಂಪೂರ್ಣ ಪ್ರಾಥಮಿಕ ಪಾಠಶಾಲೆಗಳೂ, ಇಂಗ್ಲಿಷು ಭಾಷೆಯ ವಿಷಯ ಅತ್ಯಾತುರವೂ.

ಅಯ್ಯಾ ಪತ್ರಾಧಿಪರೇ,

ತಮ್ಮ ಅಮೂಲ್ಯವಾದ ಪತ್ರದ ಕಳೆದ ಸಂಚಿಕೆಯಲ್ಲಿ 'ಸಂದರ್ಶನಾಧಿಕಾರಿ'ಯು ಸಂಪೂರ್ಣ ಮೂಲ ಪಾಠಶಾಲೆಗಳಿಂದ ಹೆಚ್ಚಿನ ಪ್ರಯೋಜನಗಳು ದೊರಕುವ ಹಾಗೆ ಮಾಡುವ ಕೆಲವು ಒಳ್ಳೆ ಸೂಚನೆಗಳನ್ನು ಕೊಟ್ಟಿರುವರು. ಪರಿಪೂರ್ಣ ಮೂಲ ಪಾಠಶಾಲೆಗಳ ಬಾಳಿಕೆಗೆ ಪ್ರತಿಕೂಲವಾಗಿರುವ ಇಂಗ್ಲೀಷ್ ಭಾಷೆಯನ್ನು ಕಲಿಯಬೇಕೆಂದಿರುವ ಅತ್ಯಾತುರ, ಇಂಥಾ ಅತ್ಯಾತುರದ ಚಳವಳವು ಹೇಗೆ ಉಂಟಾಯಿತು, ವಿದ್ಯಾಭ್ಯಾಸದ ಬೆಳವಣಿಕೆಗೆ ಅನಾರೋಗ್ಯಕರವಾದ ಈ ಚಳವಳಕ್ಕೆ ತಡೆಕಟ್ಟುವ ಉಪಾಯವೇನು, ಈ ವಿಷಯ ಕೆಲವು ಮಾತುಗಳನ್ನು ಬರಿಯಲಪೇಕ್ಷಿಸಿರುವೆನು.

ಗ್ರಾಮ ಪಾಠಶಾಲೆಗಳಲ್ಲಿ ನಾಲ್ಕನೇ ದರ್ಜೆಯಲ್ಲಿ ಕಲಿತು ತೇರ್ಗಡೆ ಹೊಂದಿದ ಬಳಿಕ ಮೆಟ್ರಿಕ್ಯುಲೇಷನ್ ಪರೀಕ್ಷೆ ಪಾಸಾಗಿ ಸರಕಾರದ ಉದ್ಯೋಗಕ್ಕೆ ಯೋಗ್ಯತೆಯನ್ನು ಘಳಿಸುವ ಉದ್ದೇಶದಿಂದ ಹೈಸ್ಕೂಲುಗಳನ್ನೂ ಕೋಲೇಜುಗಳನ್ನೂ ವಿದ್ಯಾರ್ಥಿಗಳು ಸೇರುವದಿತ್ತು. ಇವರಲ್ಲಿ ಹಲವರು ಫೋರ್ತ್‌ಫೋರ್ಮು, ಫಿಫ್ತ್‌ಫೋರ್ಮುಗಳಲ್ಲಿ ಕಲಿಯಲಿಕ್ಕೂ ಫೀಸು ತೆರಲಿಕ್ಕೂ ತ್ರಾಣವಿಲ್ಲದೆ ಸೋತುಹೋಗುತ್ತಿದ್ದರು. ಇಷ್ಟೇ ಅಲ್ಲ. ಹೀಗೆ ಕಲಿಯಲಿಕ್ಕಾಗದೆ ಬಿದ್ದು ಹೋಗುವ ವಿದ್ಯಾರ್ಥಿಗಳಿಗೆ ಸಾಮಾನ್ಯ ತಿಳುವಳಿಕೆಯನ್ನು ಸಹ ಸಂಗ್ರಹಿಸಿಕೊಳ್ಳಲು ಅಸ್ಪದವಿಲ್ಲದೆ ಇವರು ಪೂರ್ಣ ಹಾಳಾಗಿ ಹೋಗುತ್ತಿದ್ದರು. ಈ ಹಾವಳಿಯನ್ನು ಸರಕಾರದವರು ನೋಡಿಕೊಂಡು ಸಾಮಾನ್ಯವಾಗಿ ಬೇಕಾದ ಶಿಕ್ಷಣವು ಕೊಡೋಣಾಗುವಂತೆಯೂ ಮುಂಚಿನ ಲೋವರ್ ಸೆಕೆಂಡರಿ ಅಥವಾ ಮಿಡ್ಲ್‌ಸ್ಕೂಲುಗಳಿಗೆ ಸಮಾನವಾದ III ಫೋರ್ಮಿನ ಸರ್ಟಿಫಿಕೇಟು ಸಿಕ್ಕುವಂತೆಯೂ ನಾಲ್ಕನೇ ದರ್ಜೆನಂತರ ಮೇಲಣ ಮೂರು ದರ್ಜೆಗಳಿರುವ ಹಾಯರ್ ಎಲಿಮೆಂಟರಿ ಶಾಲೆಗಳ ಶಿಕ್ಷಣಕ್ಕೆ ತಕ್ಕ ಏರ್ಪಾಡು ಮಾಡಿದರು.

ಈ ರೀತಿ ಎಲಿಮೆಂಟರಿ ಮತ್ತು ಸೆಕೆಂಡರಿ ಶಿಕ್ಷಣಗಳೆಂಬ ಎರಡು ತರಗತಿಗಳು ಶಿಕ್ಷಣಕ್ರಮದಲ್ಲಿ ಮಾಡೋಣಾದನಂತರ ಉಂಟಾದ ಗಲಿಬಿಲಿಯಿಂದ ಹಾಯರ್ ಎಲಿಮೆಂಟರಿ ಶಿಕ್ಷಣದ ಪ್ರಯೋಜನವು ಜನರಿಗೆ ಇನ್ನೂ ಸರಿಯಾಗಿ ತಿಳಿಯದೆ ಹೋಗಿರುವುದು. ಎಲಿಮೆಂಟರಿ ಶಾಲೆಗಳಿಂದ ಬೇಕಾದಂತೆ ಸೆಕೆಂಡರಿ ಶಾಲೆಗಳಿಗೆ ವಿದ್ಯಾರ್ಥಿಗಳು ಹೋಗಿ ಸೇರದಂತೆ ನಿರ್ಬಂಧವು ಮಾಡಲ್ಪಟ್ಟಿರುವುದರಿಂದಲೂ, ನವೀನವಾಗಿ ಏರ್ಪಡಿಸಲ್ಪಟ್ಟ ಹಾಯರ್ ಎಲಿಮೆಂಟರಿ ಶಿಕ್ಷಣದ ಪ್ರಯೋಜನವು ಕಣ್ಣಿಗೆ ಗೋಚರವಾಗದ್ದರಿಂದಲೂ ಸರಕಾರದ ಉದ್ಯೋಗಕ್ಕೆ ಅವಶ್ಯವಿರುವ ಮೆಟ್ರಿಕ್ಯುಲೇಷನ್ ಕ್ಲಾಸುಗಳಿಗೆ ಹೋಗುವರೆ ಈ ನವೀನ ಎಲಿಮೆಂಟರಿ ಶಿಕ್ಷಣದ ಏರ್ಪಾಡು ಅಡ್ಡಿಮಾಡುವ ಹಾಗೆ ಕಂಡದ್ದರಿಂದಲೂ ಹಾಯರ್ ಎಲಿಮೆಂಟರಿ ವಿದ್ಯಾಭ್ಯಾಸದ ಪ್ರಯೋಜನಗಳು ಜನರಿಗೆ ಗೊತ್ತಾಗಲಿಕ್ಕೆ ಎಡೆಸಿಕ್ಕದೆ ಈ ಶಿಕ್ಷಣ ಕ್ರಮದ ಮೇಲೆ ಜನರು ವಿಶ್ವಾಸವಿಡಲು ಅಂಜಿದರು. ಕೆಲವು ಸೆಕೆಂಡರಿ ಶಾಲೆಗಳಿಂದ ಜನರಲ್ಲಿ ನಿರರ್ಥಕವಾಗಿ ಇಂಗ್ಲೀಷು ಭಾಷೆಯನ್ನು ಕಲಿಯಬೇಕೆಂದು ಹುಟ್ಟಿಸೋಣಾದ ಅತ್ಯಾಶೆಯು ಈ ನವೀನ ವಿದ್ಯಾಭ್ಯಾಸ ಕ್ರಮವನ್ನು ಮತ್ತಷ್ಟು ಮೂಲೆಗೊತ್ತಿಬಿಟ್ಟಿತು.

ಸೆಕೆಂಡರಿ ವಿದ್ಯಾಭ್ಯಾಸವನ್ನು ಇಂಗ್ಲಿಷು ಭಾಷೆಯಲ್ಲಿಯೇ ಕೊಡುವ ಕ್ರಮವು ಈ ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಸಹಜವಾದ ಕ್ರಮವಲ್ಲ, ಮಾತ್ರವಲ್ಲ; ವಿದ್ಯಾ ಇಲಾಖೆಯ ಕಾನೂನುಗಳಿಗೆ ಸರಿ ವಿರೋಧವಾಗಿರುತ್ತದೆ. ಯಾಕಂದರೆ ಮದ್ರಾಸು ವಿದ್ಯಾ ಇಲಾಖೆಯ ಕಾನೂನುಗಳಲ್ಲಿ ೬೯ನೇ ಕ್ರಮಪ್ರಕಾರ "ಸೆಕೆಂಡರಿ ಶಾಲೆಗಳಲ್ಲಿ ಎಲ್ಲಾ ಶಿಕ್ಷಣವನ್ನು ವಿದ್ಯಾರ್ಥಿಗಳ ದೇಶಭಾಷೆಯಲ್ಲಿಯೇ ನಡಿಸತಕ್ಕದ್ದು. ಅನ್ಯಭಾಷೆಯಲ್ಲಿ ನಡಿಸಲು ಅಪೇಕ್ಷೆ ಇದ್ದಲ್ಲಿ ವಿದ್ಯಾ ಇಲಾಖೆಯ ಅಧಿಕಾರಿಗಳ ಅಪ್ಪಣೆ ಪಡೆಯತಕ್ಕದ್ದು" ಎಂದು ಸ್ಪಷ್ಟವಾಗಿ ಹೇಳುತ್ತದೆ. ಹೀಗಾಗಿ ಇಂಗ್ಲಿಷು ಕಲಿಯುವಿಕೆಯ ವಿಷಯ ಎದ್ದಿಸಿದ ಈ ಗಲಿಬಿಲಿಯು ಯುರೋಪುಖಂಡದಲ್ಲಿ ಯುದ್ಧ ನಡೆಯುವಾಗ ಮುದ್ರಣಾ[illegible]ಯಲ್ಲಿ ಅಲ್ಲಿಯ ಸ್ಥಳಿಕ ಉತ್ಪನ್ನಗಳಿಗೆ ಕ್ರಯ [illegible]

ಗಳೇ ಇಂಗ್ಲಿಷು ಭಾಷೆಯ ವಿಷಯ ಊರ ಜನರಲ್ಲಿರುವ ಮರುಳುತನಕ್ಕೆ ಕಾರಣಭೂತರಾಗಿರುವರು. ಇವರು ಹೀಗೆ ಮಾಡಲಿಲ್ಲದ್ದಾದರೆ ವಿದ್ಯಾಭ್ಯಾಸವು ಯಥಾಪ್ರಕಾರವೇ ಯಾವತ್ತೂ ಗಲಿಬಿಲಿ ಇಲ್ಲದೆ ನಡೆಯಬಹುದಿತ್ತು. ಈ ಕೊಲೆಜಿನ ಅಧಿಕಾರಿಗಳಾದ ಜೆಜುವಿತ ವೈದೀಕರು ದಕ್ಷಿಣಕನ್ನಡಕ್ಕೆ ದೇಶಭಾಷೆಯಾಗಿರುವ ನಮ್ಮ ಅತೀ ಪ್ರಿಯ ಕನ್ನಡ ಭಾಷೆಯು ಕಥೋಲಿಕ ಕ್ರೈಸ್ತರಿಗೆ ಇಂಗ್ಲಿಷು ಭಾಷೆಯಂತೆಯೇ ಅನ್ಯಭಾಷೆಯೆಂತಲೂ ಈ ಎರಡು ಭಾಷೆಗಳಲ್ಲಿ ಇಂಗ್ಲಿಷು ಭಾಷೆಯು ಕಥೋಲಿಕ ಕ್ರೈಸ್ತರಿಗೆ ಕಲಿಯಲಿಕ್ಕೆ ಸುಲಭವೆಂತಲೂ ಮೊದಲಾದ ಕಾರಣಗಳನ್ನು ಕೂಡಿರುವ ಅರ್ಜಿಯನ್ನು ವಿದ್ಯಾ ಇಲಾಖೆಯ ಆಫೀಸರರಿಗೆ ಕಳುಹಿಸಿ ಬಾಲಕದರ್ಜೆಯಿಂದ ಎಲ್ಲಾ ಶಿಕ್ಷಣವನ್ನು ಇಂಗ್ಲಿಷು ಭಾಷೆಯಿಂದಲೇ ಕಲಿಸಲಿಕ್ಕೆ ಸರಕಾರದವರಿಂದ ಅಪ್ಪಣೆಯನ್ನು ಪಡೆಕೊಂಡಿದ್ದಾರೆ.

ಜೆಜುವಿತ ವೈದಿಕರು ಕೊಡಿಯಾಲಬೈಲ ಛಾಪಖಾನೆ ಇಟ್ಟು ಕಥೋಲಿಕ ಕ್ರೈಸ್ತರ ಜಪ ಪುಸ್ತಕಗಳು ಕೊಂಕಣಿ ಭಾಷೆಯಲ್ಲಿ ರಚಿಸುವ ಮೊದಲು ಜಪಗಳೆಲ್ಲ ಕನ್ನಡ ಭಾಷೆಯಲ್ಲಿಯೇ ಇದ್ದವು. ಕೊಂಕಣಿ ಭಾಷೆಯಲ್ಲಿ ರಚಿಸಿದ ಜಪ ವ ಪ್ರಾರ್ಥನೆಗಳನ್ನು ಬರೆಯುವರೆ ಈಗಲೂ ಕನ್ನಡ ಭಾಷೆಯ ಅಕ್ಷರಗಳನ್ನೇ ಉಪಯೋಗಿಸುವರು. ಮಂಗಳೂರು ದಿಯೊಸಿಜಿಗೆ ಸೇರಿದ ೯೦,೦೦೦ ಕಥೋಲಿಕ ಕ್ರೈಸ್ತರೊಳಗಿರುವ ಮಕ್ಕಳಲ್ಲಿ ಹೆಚ್ಚಿನವರು ದಕ್ಷಿಣಕನ್ನಡ ಜಿಲ್ಲೆಯ ೬೦೦ ಎಲಿಮೆಂಟರಿ ಶಾಲೆಗಳಲ್ಲಿ ನಾಲ್ಕನೆ ದರ್ಜೆಯವರೆಗೆ ಕನ್ನಡದಲ್ಲಿಯೇ ವಿದ್ಯಾಭ್ಯಾಸನಡಿಸುವರು. ಕನ್ನಡ ಭಾಷೆಯು ದೇಶಿಯ ಕ್ರೈಸ್ತರಿಗೆ ಅನ್ಯಭಾಷೆಯೇ? ಈ ೯೦,೦೦೦ ರೊ. ಕ. ಕ್ರೈಸ್ತರಲ್ಲಿ ೧೫,೦೦೦ ಬರಹ ಬಲ್ಲವರಾಗಿರುವಾಗ ೩೦೦೦ ಮಂದಿ ಜನರು ಮಾತ್ರ ಇಂಗ್ಲಿಷು ಬಲ್ಲವರು. ಇವುಗಳಲ್ಲಿ ನೇಕಡಾ ಒಂದರಂತೆಯೂ ಮನೆಯಲ್ಲಿ ಇಂಗ್ಲಿಷು ಭಾಷೆಯನ್ನು ಸಂಭಾಷಣೆಗಾಗಿ ಉಪಯೋಗಿಸುವದಿಲ್ಲ. ಹೀಗಿರುವಾಗ ಈ ಜೆಜುವಿತ ವೈದಿಕರ ಸೆಕೆಂಡರಿ ಶಾಲೆಗಳಲ್ಲಿ ಶಿಕ್ಷಣವನ್ನು ದೇಶಿಯ ಕ್ರೈಸ್ತ ಬಾಲಕರಿಗೆ ಇಂಗ್ಲಿಷು ಭಾಷೆಯಲ್ಲಿ ಕೊಡುವದು ಯಾತರ ನ್ಯಾಯ? ಕನ್ನಡ ಭಾಷೆಯು ಇತಾಲಿಯನರಾದ ಈ ವೈದಿಕರಿಗೆ ಮಾತ್ರ ಅನ್ಯಭಾಷೆಯಾಗಿರುತ್ತದಲ್ಲದೆ ರೋಮನ್ ಕಥೋಲಿಕ ದೇಶಿಯ ಕ್ರೈಸ್ತರಿಗೆ ಅದು ತಾಯಿಯ ಮೊಲೆಯಂತಿರುವದು.

ಫಸ್ಟ್‌ಕ್ಲಾಸ್ ಕಾಫಿ ಹೊಟೆಲೊಂದು ಗ್ಯಾಸ್‌ದೀಪವನ್ನು ಉರಿಸಿದರೆ ಗೌರವವೂ ಗಿರಾಕಿಗಳೂ ಕಡಿಮೆಯಾಗದ ಹಾಗೆ ಅಂಥಾ ಬೇರೆ ಹೊಟೆಲುಗಳೂ ಗ್ಯಾಸ್‌ದೀಪಗಳನ್ನು ಒದಗಿಸಿಕೊಳ್ಳಬೇಕಲ್ಲವೇ? ಫ್ರಾನ್ಸ್‌ದೇಶವು ಎಯರೊಪ್ಲೇನ್ ವ ಆಕಾಶವಿಮಾನಗಳೂ ಜರ್ಮನಿಯು "ಡ್ರೆಡ್‌ನೊಟ್" ವ "ಬಿಸಾರ್ಡ್‌ಬ್ಯಾ" ವೆಂಬ ಘೋರತರದ ಹಡಗಗಳೂ ಯುದ್ಧದ ಸಾಹಿತಿಗಳಾಗಿ ಏರ್ಪಡಿಸಿದಾಗ ಇಂಗ್ಲಿಷು ರಾಜ್ಯವೂ ಅಂಥಾ ಎಯರ್ ಶಿಪ್ಪ್‌ಗಳನ್ನೂ ಡ್ರೆಡ್‌ನೊಟ್ ಹಡಗಗಳನ್ನೂ ತಮ್ಮ ಬಲದ ಮೇಲ್ಮೆಯನ್ನು ಕಾಪಾಡುವ ಬಗ್ಗೆ ಸ್ವತಹಾ ರಚಿಸಿದರು. ಹೀಗೆಯೇ ಸ್ಟೆಂಟ್ ಎಲೊಯಿಶ್ಯಸ್ ಕೊಲೇಜಿನಲ್ಲಿ ಕನ್ನಡ ಗೊತ್ತಿಲ್ಲದ ಕನ್ವೆಂಟ್ ಶಾಲೆಯಲ್ಲಿ ಕಲಿತ ತರುಣಿಯರನ್ನು ಉಪಾಧ್ಯಾಯರನ್ನಾಗಿ ನಿಯಮಿಸಿ ಬಾಲಾಭ್ಯದಿಂದಲೇ ಗಣಿತ ಆರೋಗ್ಯಶಾಸ್ತ್ರ ಮೊದಲಾದ ಸರ್ವತ್ರದಲ್ಲಿಯೂ ಇಂಗ್ಲಿಷಿನಿಂದಲೇ ಶಿಕ್ಷಣವನ್ನು ಕೊಡುವಾಗ ಊರಿನ ಬೇರೆ ಸೆಕೆಂಡರಿ ಶಾಲೆಗಳು ಈ ಮಹತ್ತಾದ ದರಬಾರನ್ನು ಪೂರ್ಣವಾಗಿ ಕೈಕೊಳ್ಳಲಿಕ್ಕೆ ಸಾಧ್ಯವಿಲ್ಲದಿದ್ದರೂ ಬಾಲ್ಯಾಭ್ಯದಿಂದ ಮಕ್ಕಳಿಗೆ A. B. C. D. ಕಲಿಸಬೇಕಾಯಿತು.

ಸ್ಟೆಂಟ್ ಎಲೋಯಿಶ್ಯಸ್ ಕೊಲೇಜು ಮತ್ತು ಅದಕ್ಕೆ ಲಗ್ತಿಯಾಗಿರುವ ಅಪೂರ್ಣ ಸೆಕೆಂಡರಿ ಶಾಲೆಗಳಲ್ಲಿ ಇಂಗ್ಲಿಷನ್ನು ಶಿಕ್ಷಣಾ ಭಾಷೆಯಾಗಿ ಉಪಯೋಗಿಸುತ್ತಾರಲ್ಲದೆ ಬೇರೆ ಯಾವ ಸೆಕೆಂಡರಿ ಶಾಲೆಗೂ ಈ ಕ್ರಮವು ಸಾಧ್ಯವಾಗಲಿಲ್ಲ. ಆದರೆ ಊರಿನ ಫಸ್ಟ್‌ಗ್ರೇಡ್ ಕೊಲೇಜು ಒಂದು ಕ್ರಮವನ್ನು ಕೈಕೊಂಡಾಗ ಸೆಕೆಂಡ್ ಗ್ರೇಡ್ ಕೊಲೇಜುಗಳೂ ಹೈಸ್ಕೂಲುಗಳೂ ಸದ್ಯಕ್ಕೆ ಅಸಾಧ್ಯವಾದರೂ ಕ್ರಮೇಣ ಅದೇ ಕ್ರಮವನ್ನು ಕೈಕೊಳ್ಳಬೇಕಾಯಿತಲ್ಲಾ? ಹೀಗಾಗಿ ಸೆಕೆಂಡರಿ ವಿದ್ಯಾಭ್ಯಾಸವೆಂಬದು ಇಂಗ್ಲಿಷು ವಿದ್ಯಾಭ್ಯಾಸವೆಂತಲೂ ಎಲಿಮೆಂಟರಿ ವಿದ್ಯಾಭ್ಯಾಸವು ಕನ್ನಡ ವಿದ್ಯಾಭ್ಯಾಸವೆಂತಲೂ ಒಂದು ತಪ್ಪು ಅಭಿಪ್ರಾಯವು ಜನರಲ್ಲಿ ಹುಟ್ಟಿರುತ್ತದೆ. ಈ ಪತ್ರವು ಉದ್ದ [illegible] ದಕ್ಷಿಣಕನ್ನಡ ಜಿಲ್ಲೆಯ ನಾಲ್ಕೈದು ಹೈಸ್ಕೂಲುಗಳೇ [illegible] ಇಂಗ್ಲಿಷು ಭಾಷೆಯಿಂದಲೇ [illegible] ಹುಟ್ಟುವ [illegible] ಇದನು ಸರಿ ತರುವ [illegible]

ಯುದ್ಧ ಸಮಾಚಾರವು.

ತಾರೀಕು 26ನೇ ಸಪ್ಟಂಬರ.

ತಾ. ೨೦ — ೨೧ರಲ್ಲು ಫ್ರೆಂಚರು ಶತ್ರುಗಳ ೨೦ ಮೋಟೊರ್ ಗಾಡಿಗಳನ್ನೂ ಜರ್ಮನರ ೬-೭-೮-೯-೧೩-೧೪ನೇ ಸೇನಾಂಗಗಳಿಗೆ ಸೇರಿದ ಅನೇಕ ಸೈನೀಕರನ್ನೂ, ಬವೇರಿಯನ್ ಸೇನಿಕರನ್ನೂ ಸೆರೆ ಹಿಡಿದರು.

ಮೊಬೆಜಿನ ಮುಂದೆ ಹೊಣೆಡದ ಜರ್ಮನರ ಸಾವಿರಾರು ಶವಗಳು ಬಿದ್ದಿರುವವೆಂದೂ ಒಟ್ಟಿಗೆ ೮೦,೦೦೦ ಶವಗಳಾದೀತೆಂದೂ ಒಸ್ಟೆಂಡಿನ ಟೈಮ್ಸ್ ಬಾತ್ಮೀದಾರರು ಹೇಳುವರು

ಬವೇರಿಯನ್ ಮತ್ತು ಪ್ರಶ್ಯನ್ ಸೈನಿಕರೊಳಗೆ ವೈಮನಸ್ಸುಂಟಾಗಿರುವದೆಂತ ಒಸ್ಟೆಂಡಿನ ಟೈಮ್ಸ್ ಬಾತ್ಮೀದಾರರು ತಿಳಿಸುವರು. ಬವೇರಿಯನ್ ಸೈನೀಕರು ೬ ಟ್ರೈನ್ ತುಂಬಾ ಇದ್ದ ಸೆರೆ ಹಿಡಿದ ಫ್ರೆಂಚ ಸೈನೀಕರನ್ನು ಮೊಬೆಜನಲ್ಲಿ ತಪ್ಪಿಸಿಕೊಂಡು ಹೋಗಲು ಬಿಟ್ಟರೆಂತಲೂ ಬ್ರುಸೆಲ್ಸಿನ ಮೇಲೆ ಹಾರುವ ಬೆಲ್ಜಿಯನರ ವಾಯುನಾವೆಗಳಿಗೆ ಗುಂಡುಹೊಡೆಯಲು ಬವೇರಿಯನ್ ಸೈನೀಕರು ಒಪ್ಪಲಿಲ್ಲವೆಂತಲೂ ಈ ಬಾತ್ಮೀದಾರರು ಹೇಳುವರು

ಬ್ರಿಟಿಷರು ಶತ್ರುಗಳ ೧೧ ಇಂಚುಗಳ ೩ ಫಿರಂಗಿಗಳನ್ನು ನಾಶಮಾಡಿರುವರು. ಫ್ರೆಂಚರ ದೊಡ್ಡ ಫಿರಂಗಿಗಳೂ ಎಷ್ಟಿಗೆ ತರಲ್ಪಟ್ಟಿರುವವು.

ಕಠಿಣ ಕಾಳಗ ನಡೆದು ಜರ್ಮನ ಬಲಪಾರ್ಶ್ವವು ಪೆರೊನ್ನೆ ಮತ್ತು ಕ್ವೆಂಟಿನಿನ ನಡುವೆ ಹಿಂದಿರುಗಿತೆಂತ 'ಡೈಲಿ ಮೈಲ್' ಬಾತ್ಮೀದಾರರು ತಿಳಿಸಿರುವರು. ಈ ಪಟ್ಟಣಗಳ ಮಧ್ಯೆ ೯ ಮೈಲುಗಳ ವರೆಗೆ ಶವಗಳು ಬಿದ್ದಿರುವವೆಂತ ಘಾಯಪೊಡೆದವರು ಹೇಳುವರು.

ಸರ್ವಿಯ. ಡ್ರಿನ ನಡಿಯ ಹತ್ತಿರ ಸರ್ವಿಯನರು ೧೫೦ ಸಾವಿರ ಆಸ್ಟ್ರಿಯನರನ್ನು ಸೋಲಿಸಿರುವರು.

ಶತ್ರುಗಳು ಇಲ್ಲಿ ಸರ್ವಿಯಕ್ಕೆ ನುಗ್ಗಿ ಸರ್ವಿಯನರು ಬೊಸ್ನಿಯಕ್ಕೆ ಮುಂದರಿಯದ ಹಾಗೆ ಅಡ್ಡಕಟ್ಟಬೇಕೆಂದು ಪ್ರಯತ್ನಿಸಿದರು ಆದರೆ ಸರ್ವಿಯನ ಸೇನೆಗೆ ಬೇಗನೇ ಬೆಂಬಲ ಸೇನೆಯು ಬಂದು ಕೂಡಿದ್ದರಿಂದ ಸರ್ವಿಯನರು ಜಯಪ್ರದರಾದರು.

ರುಶ್ಯ. ಗೆಲಿಸಿಯದಲ್ಲಿ ರುಶ್ಯನರು ಆಸ್ಟ್ರಿಯನರನ್ನು ಹಿಂದಟ್ಟಿ ವಿಶೇಷ ನಷ್ಟಪಡಿಸಿರುವರು

ರುಶ್ಯನರು ಗ್ಯಾಲಿಸ್ಸಿಗಳಿಗೆ ಮಧ್ಯಸ್ಥಳದಲ್ಲಿರುವ ಜಾರ್‌ಸ್ಲಾವ್ ಕೋಟೆಯನ್ನು ವಶಮಾಡಿಕೊಂಡಿರುವರು.

ಜರ್ಮನರು ಡಮ್‌ಡಮ್ ತೋಟೆಗಳನ್ನು ಪ್ರಯೋಗಿಸಿದರೆಂಬ ವಿಷಯವು ಧೃಢೀಕರಿಸಲ್ಪಟ್ಟಿರುವುದು. ಫ್ರೆಂಚ ಸರಕಾರದವರು ಜರ್ಮನರ ಸೋಲ್ಜರರ ಹತ್ತಿರವಿದ್ದ ಡಮ್‌ಡಮ್ ಕೋವಿಗಳ ಪೊಟೋಗಳನ್ನೂ ಈ ಕೋವಿಗಳಿಂದ ಫ್ರೆಂಚ ಸೋಲ್ಜರರು ಪಡೆದ ಭಯಂಕರ ಘಾಯಗಳ ಪೋಟೋಗಳನ್ನೂ ಲಂಡನಿಗೆ ಕಳುಹಿಸಿಕೊಟ್ಟಿರುವರು. ಜರ್ಮನರ ಈ ಕೃತ್ಯವು ಜಿನೊವ ಕನ್‌ವೆನ್ಶನಿಗೆ ವಿರೋಧವಾಗಿದೆ

ಜರ್ಮನಿಯಲ್ಲಿ ಹಸಿಹತ್ತಿಗೆ ಕ್ರಯ ಏರಿಯದೆಂತಲೂ ಸಾಧಾರಣವಾಗಿ ರುಶ್ಯ, ರುಮೇನಿಯ, ಗೆಲೀಸಿಯ ಮತ್ತು ಅಮೇರಿಕದಿಂದ ಬರುತ್ತಿದ್ದ ಪೆಟ್ರೋಲಿಯಮ್ ಈಗ ಜರ್ಮನಿಗೆ ಬಾರದಿರವುದರಿಂದ ಜರ್ಮನಿಯಲ್ಲಿ ಪೆಟ್ರೋಲಿಯಮ್ ಕಮ್ಮಿಯಾಗಿದೆಂದೂ ಮೋರ್ನಿಂಗ್ ಪೋಸ್ಟಿನ ವಶಿಂಗ್ಟನ್ ಬಾತ್ಮೀದಾರರು ತಿಳಿಸುವರು. ಪೆಟ್ರೋಲಿಯಮ್ ಇಲ್ಲದ್ದರಿಂದ ಜರ್ಮನರು ಇನ್ನು ಹೆಚ್ಚು ಕಾಲ ವಾಯುನಾವೆಗಳನ್ನು ನಡಿಸಲಾರರು ಎಂತ ಇನ್ನೊಂದು ವರದಿಯಿಂದ ತಿಳಿದು ಬರುತ್ತದೆ.

ನೌಕಾವಳಿ ಸಂಗ್ರಾಮ.

ಜರ್ಮನರ ಸಮರನಾವೆಗಳು ಉತ್ತರ ಕಡಲಿನಲ್ಲಿ ಬ್ರಿಟಿಷರ "ಕ್ರೆಸ್ಸಿ" "ಅಬುಕರ್" ಮತ್ತು "ಹೊಗ್" ಎಂಬ ಮೂರು ಕ್ರೂಜರ್ ನಾವೆಗಳನ್ನು ಮುಣುಗಿಸಿರುವುದು. ಈ ನಾವೆಗಳ ನಾವಿಕರನ್ನು ಬ್ರಿಟಿಷರ ಇತರ ಯುದ್ಧನಾವೆಗಳು ರಕ್ಷಿಸಿರುವವು.

ಮುಣುಗಿದ ಬ್ರಿಟಿಷ ಕ್ರೂಜರಿನ ಹತಶೇಷರಾದ ೧೮೭ ಬ್ರಿಟಿಷ ನಾವಿಕರನ್ನು ಒಂದು ಹಡಗವು ಯ್ಮುಯ್ಡೆನಿಗೆ ತಂದಿರುವದು. ಈ ಪೈಕಿ ಗಾಯ ಒಡೆದವರೂ ಮೃತರಾದವರೂ ಸೇರಿರುವರು. ಜರ್ಮನರ ೫ ಸಮರನಾವೆಗಳು ಬ್ರಿಟಿಷರ ಮೂರು ಕ್ರೂಜರ್‌ನಾವೆಗಳ ಮೇಲ್ಬಾಯ್ದು ಬಂದವು. ಇತರ ಬ್ರಿಟಿಷ ಕ್ರೂಜರುಗಳೂ ಟೋರ್ಪೆಡೋನಾವೆಗಳೂ ಕೂಡ್ಲೇ ಸಹಾಯಕ್ಕೆ ಬಂದು ಜರ್ಮನರ ಎರಡು ಸಮರನಾವೆಗಳನ್ನು ಹಾಳು ಮಾಡಿ ಬ್ರಿಟಿಷ ಕ್ರೂಜರಿನ ಹತಶೇಷರನ್ನು ಯ್ಮುಯ್ಡೆನಿಗೆ ತಂದಿರುವುದು. ಹಾರ್‌ವಿಚಿನಲ್ಲಿ ೮೦ ಹತಶೇಷರು ಇಳಿದಿರುವರು. ಒಟ್ಟಿಗೆ ೬೦೦ ಮಂದಿ ರಕ್ಷಿಸಲ್ಪಟ್ಟಿರುವರೆಂತ ಅಂದಾಜಾಗಿಯದೆ. ಸಮುದ್ರದಿಂದ ೩೦ ಆಫೀಸರರು ಎತ್ತಲ್ಪಟ್ಟು ಸುರಕ್ಷಿತವಾಗಿರುವರು ಬ್ರಿಟಿಷರ "ಕ್ರೆಸ್ಸಿ" ಕ್ರೂಜರ್‌ನಾವೆಯು ಜರ್ಮನರ ೨ ಸಮರನಾವೆಗಳನ್ನು ಮುಣುಗಿಸಿದ ನಂತರ ತಾನೂ ಮುಣುಗಿಹೋಯಿತೆಂತ ತಿಳಿದು ಬರುತ್ತದೆ

ಹಿಂದೂಸ್ಥಾನ. ಆಫ್ರಿಕದಲ್ಲಿ ಘಾಯ ಪೊಡೆದ ಭಾರತೀಯ ಸೇನೀಕರನ್ನು ಮುಂಬಾಯಿಗೆ ತರುವರೆ ದೂ ಮುಂಬಾಯಿಯ ಪ್ರಿನ್ಸ್ ಆಫ್ ವೇಲ್ಸ್ ವೆಸ್ಟರ್ನ್ ಇಂಡಿಯ ಮ್ಯೂಸಿಯಮ್ ಎಂಬ ಹೊಸ ವಸ್ತುಪ್ರದರ್ಶನಾ ಕಟ್ಟೋಣದಲ್ಲಿ ಇವರ ಬಗ್ಗೆ ೧೦೦ ಮಂಚಗಳು ಒದಗಿಸಲ್ಪಡುವವೆಂದೂ ತಿಳಿದುಬರುತ್ತದೆ ನವಂಬರ ತಿಂಗಳಲ್ಲಿ ಮುಂಬಾಯಿಗೆ ಘಾಯಪೊಡೆದ ಸೇನಿಕರು ಬಂದು ತಲಪುವರು

ತಾರೀಕು 27ನೇ ಸಪ್ಟಂಬರ.

ಕಳೆದ ಮಂಗಳವಾರ ಮದ್ರಾಸಿನ ರೇವಿನಲ್ಲಿ ಗುಂಡು ಹೊಡೆದ ಎಮ್ಡನ್ ನಾವೆಯನ್ನು ಹಿಡಿಯಲು ಮೂರು ನಾವೆಗಳು ಕಳುಹಿಸೋಣಾಗಿವೆಯೆಂತ ವ್ಯಾಸರಾಯ ಪ್ರಭುಗಳಿಂದ ತಿಳಿಸೋಣಾಗಿರುವುದು.

ಪೆಂಟ್‌ಲೆಂಡ್ ಪ್ರಭುಗಳು ಮದ್ರಾಸಿಗೆ ಬಂದಿರುವರು

ಬ್ರಿಟಿಷ್ ಸೇನಿಕರು ತಮ್ಮ ಸಸೀನುಗಳಿಂದ ಜರ್ಮನ ಸೇನಿಕರನ್ನು ತಿವಿಯುತ್ತ ರಣರಂಗದಲ್ಲಿ ಪ್ರತಿನಿತ್ಯ ಒಂದೊಂದು ಮೈಲು ಮುಂದರಿಯುತ್ತಿದ್ದಾರೆ

ರ್ಹಿಮ್ಸ್‌ನಲ್ಲಿರುವ ಪ್ರಧಾನ ದೇವಮಂದಿರವನ್ನು ಜರ್ಮನ ಸೇನಿಕರು ಹಾಳುಮಾಡಿದ ವಿಷಯ ಪೋಪ್ ಗುರುಗಳು ಜರ್ಮನ್ ಕೈಸರರಿಗೆ ಈ ರೀತಿ ಟೆಲಿಗ್ರಾಮು ಕೊಟ್ಟಿರುವರಂತೆ:—ದೇವಮಂದಿರಗಳನ್ನು ನಾಶಪಡಿಸುವವರು ಸೇನೆಗಳ ಸರ್ವ ಶಕ್ತಿಯನ್ನು ಮುರಿಯಲು ಶಕ್ತನಾದ ದೇವರ ಕೋಪಕ್ಕೆ ಗುರಿಯಾಗುವರು

ಜರ್ಮನಿಯ ಪೂರ್ವಪ್ರಾಂತ್ಯಗಳಲ್ಲಿ ಸೇನಾಧಿಪತ್ಯವನ್ನು ವಹಿಸಿಕೊಳ್ಳುವ ಮೊದಲು ಜರ್ಮನ್ ಚಕ್ರವರ್ತಿಯು ಜರ್ಮನಿಯ ಕೆಲವು ಆಶ್ರಿತ ರಾಜರ ಸಭೆಯನ್ನು ಬ್ರುಸೆಲ್ಸಿನಲ್ಲಿ ಕೂಡಿಸುವರಾಗಿ ತಿಳಿದುಬರುತ್ತದೆ

ನೋರ್ತಸಿ ಉಪಸಾಗರದಲ್ಲಿ ಮುಣುಗಿಹೋದ ನೌಕಾಸೇನಿಕರ ವಿವರವು ಪ್ರಕಟಿಸಲ್ಪಟ್ಟಿರುವುದು ಮುಣುಗಿಹೋದ ಮೂರು ಬ್ರಿಟಿಷ ಕ್ರೂಜರ್ ನಾವೆಗಳಲ್ಲಿ ಒಟ್ಟಿಗೆ ೨೦೦೦ ಸೇನಿಕರಿದ್ದರು. ಇವರಲ್ಲಿ ಹಲವರು ಮುಣುಗಿಹೋಗುವ ಹಡಗಗಳಿಂದ ರಕ್ಷಿಸಲ್ಪಟ್ಟಿರುವರು, ಬ್ರಿಟಿಷ ಹಡಗುಪಡೆಯ ನಾಯಕರಾದ ಸರ್ ಜೋನ್ ಜೆಲ್ಲಿಕೋರವರು ಜರ್ಮನ ನೌಕಾಪಡೆಯನ್ನು ತಕ್ಕ ರೀತಿಯಲ್ಲಿ ದಂಡಿಸುವರೆಂತ ಬ್ರಿಟಿಷ ಸೇನಿಕರು ಹೇಳುತ್ತಿದ್ದಾರೆ.

ತಾ. 28ನೇ ಸಪ್ಟಂಬರ.

ಪಶ್ಚಿಮ ರಣರಂಗ:—ಸಂಯುಕ್ತ ಸೇನೆಗಳ ಎಡಪಾರ್ಶ್ವವು ಮುಂದರಿದಿರುವುದು ಒಂದು ಸೇನಾಂಗವು ಪೆರೊನ್ನೆಯನ್ನು ವಶಮಾಡಿಕೊಂಡು ಜರ್ಮನರ ಧೀರತನದಿಂದ ಮೇಲ್ಬಾಯ್ದು ಬಂದರೂ ಪೆರೊನ್ನೆಯಲ್ಲಿ ಬಲಪಡಿಸಿಕೊಂಡರು ಶತ್ರುಗಳು ಕಂದಕಗಳಲ್ಲಿ ದೊಡ್ಡ ಸೇನೆಗಳನ್ನು ಇಡುತ್ತಿರುವರು. ವಾಯುವ್ಯ ಸರಹದ್ದಿನಲ್ಲಿ ಸಂಯುಕ್ತ ಸೇನೆಗಳು ತುಸ ಮುಂದರಿದಿರುವವು.

ನಾನ್ಸಿ ಮತ್ತು ಒಸೆಜೆಸನಲ್ಲಿ ಶತ್ರುಗಳ ಒಂದು ಸಂಣ ಸೇನಾಂಗವು ಪುನಃ ಒಳನುಗ್ಗ ಪ್ರಯತ್ನಿಸಿ ಬೇಗನೇ ಹಿಮ್ಮೆಟ್ಟಿತು.

ಜರ್ಮನರ ಫಿರಂಗಿಗಳಿಂದ ವಿಶೇಷ ಜೀವನಷ್ಟ ಉಂಟಾಗದಿರುವುದರಿಂದ ಜರ್ಮನರ ಸೇನಿಕರು ಎದೆಗುಂದಿರುವರೆಂತ ಬಂದಿಗಳಾದ ಜರ್ಮನರು ಹೇಳುವರು.

ಬ್ರಿಟಿಷ ಕಾಲಾಳು ಸೈನೀಕರು ತಮ್ಮ ಸಲಿಗಳನ್ನು ತಕ್ಕ ರೀತಿಯಲ್ಲಿ ಪ್ರಯೋಗಿಸಿ ಜರ್ಮನ ಸೋಲ್ಜರರು ಇಂಗ್ಲಿಷ್ ಸೋಲ್ಜರರನ್ನು ನೋಡುವ ಮೊದಲೇ ಜರ್ಮನ ಸೋಲ್ಜರರನ್ನು ನಾಶಮಾಡುತ್ತಲಿರುವರು ಎಂತ ಬಂದಿಗಳಾದ ಜರ್ಮನರು ಹೇಳುವರು.

ಜರ್ಮನರ ಕೈಯಲ್ಲಿ ಸಿಕ್ಕಿದ ಒಂದು ಪತ್ರದಿಂದ ಈ ರೀತಿ ತಿಳಿದುಬರುತ್ತದೆ:—ಇಂಗ್ಲಿಷರಿಂದ ನಮಗೆ ಅತಿ ಕಷ್ಟವಿದೆ. ಅವರು ಬಹು ತಾಳ್ಮೆಯಿಂದ ಕಾದು ಜಾಗ್ರತೆಯಿಂದಿದ್ದು ಏನೊಂದೂ ಅನುಮಾನವಿಲ್ಲದ ಕುದುರೆಪಡೆಯ ಮೇಲೆ ವಿಶೇಷವಾದ ತೋಪುಗಳನ್ನು ಹಾರಿಸುತ್ತಲಿರುವರು ಇಂಗ್ಲಿಷರು ಬಹು ಧೈರ್ಯಶಾಲಿಗಳು ಮತ್ತು ಕಡೆಯ ಸೈನೀಕನು ಉಳಿಯುವ ವರೇಗೆ ಕಾದಾಡುತ್ತಿರುವರ.

ಇನ್ನೊಂದು ಪತ್ರವು ಈ ರೀತಿ ಹೇಳುವುದು:—ಇಂಗ್ಲಿಷ್ ಗಾರ್ಡ್ಸರ ಕೂಡೆ ನಾವು ಕಾದಾಡುತ್ತಿರುವವು. ಹೈಲೇಂಡರ್ಸ್ ಮತ್ತು ಜೊವೆಸ್ ಸೈನೀಕರು ಸಲಿಗಳನ್ನು ಪ್ರಯೋಗಿಸುವುದರಲ್ಲಿ ವಿಶೇಷ ತರ್ಬೀತುಹೊಂದಿರುವರು ಅವರ ತೋಪುಗಳ ಮಧ್ಯದಲ್ಲಿ ಸಿಕ್ಕಿಕೊಳ್ಳುವ ವರೆಗೆ ಅವರು ನಮಗೆ ಕಾಣಸಿಕ್ಕುವದಿಲ್ಲ.

ಇನ್ನೊಂದು ಪತ್ರವು ಈ ರೀತಿ ಹೇಳುವುದು — ಫ್ರೆಂಚರ ವಾಯುನಾವೆಗಳು ಅತ್ಯಾಶ್ಚರ್ಯ ರೀತಿಯಲ್ಲಿ ತನ್ನ ಕೆಲಸವನ್ನು ನಡಿಸುವವು ಅವುಗಳ ಉಪದ್ರದಿಂದ ಬಿಡುಗಡೆಹೊಂದುವುದು ಕಷ್ಟಸಾಧ್ಯವಾಗಿದೆ ಈ ಕದನದಲ್ಲಿ ನಮ್ಮ ಶುಭಾಶುಭಗಳು ಗೊತ್ತಾಗುವವೆಂದು ನಂಬಿರುವೆವು ನಾವು ಮೊದಲಾಗಿ ಇಂಗ್ಲಿಷರನ್ನು ಹೊಡೆದ ನಂತರ ಫ್ರೆಂಚರನ್ನು ಹೊಡೆದರೆ ಎದುರಾಟವನ್ನು ತಕ್ಷಣ ಅಡಗಿಸಬಹುದು. ನಂತರ ರುಶ್ಯನರನ್ನು ಹತಬಡಿಯುವುದಕ್ಕೆ ಕಷ್ಟವಿಲ್ಲ

ಬ್ರಿಟಿಷ ಸೇನೆಯಲ್ಲಿ ಹತರಾದ ಮತ್ತು ಘಾಯಪೊಡೆದ ಆಫೀಸರರ ಹೆಸರು ಪ್ರಕಟಿಸಲ್ಪಟ್ಟಿರುವುದು. ಈ ಪಟ್ಟಿಯಿಂದ ಹೆಚ್ಚಿನ ಆಫೀಸರರು ಘಾಯ ಪೊಡೆದಿರುವರೆಂತ ತೋರಿಬರುತ್ತದೆ.

ಜರ್ಮನರ ೫೩ನೇ ರೆಜಿಮೆಂಟ್ ಸೈನಿಕರು ತಮ್ಮ ಕೈಗಳನ್ನು ಎತ್ತಿ ಶರಣಾಗತರಾಗುತ್ತೇವೆಂತ ಬ್ರಿಟಿಷ್ ಸೋಲ್ಜರರನ್ನು ನಂಬಿಸಿ, ಬ್ರಿಟಿಷ್ ಸೋಲ್ಜರರ ಕಂದಕಗಳ ಸಮೀಪ ಬಂದು, ಹತ್ತಿರ ಸೇರುತ್ತಲೇ ಬ್ರಿಟಿಷ್ ಸೋಲ್ಜರರ ಮೇಲೆ ಗುಂಡು ಹಾರಿಸಿದರು. ಆದರೆ ಬ್ರಿಟಿಷರು ಅವರ ಮಧ್ಯದಲ್ಲಿಯೇ ತೋಪುಗಳನ್ನು ಕೊಂಡುಹೋಗಿ ಗುಂಡುಹಾರಿಸಿ ಅವರನ್ನು ಹಿಂದಟ್ಟಿ ನಷ್ಟಪಡಿಸಿದರು ಎಂತ ಲಂಡನ್ ವರ್ತಮಾನಸಂಗ್ರಹ ಆಫೀಸಿನವರು ಪ್ರಕಟಿಸಿರುವರು.

ನೌಕಾವಳಿ ಸಂಗ್ರಾಮದಲ್ಲಿ ಮಡಿದ ಬ್ರಿಟಿಷ ಸೇನಿಕರನು ಯಿಮ್ಯೂಡೆನಿನಲ್ಲಿ ಡಚ್ಚರು ಮರ್ಯಾದೆ ಪೂರ್ವಕ ಹೂಣಿಟ್ಟರು. ಡಚ್ಚರ ನೌಕಾವಳಿ ಆಫೀಸರನು ಹೂಣಿಡುವಾಗ ಈ ರೀತಿ ಹೇಳಿರುವನು —"ನಾನು ನಿಮ್ಮನ್ನು ಉತ್ತಮವಾದ, ಧೈರ್ಯಶಾಲಿಗಳಾದ ವೀರ ಒಡನಾಡಿಗಳೆಂದು ಕರೆಯುತ್ತೇನೆ ಎಲ್ಲರೂ ನಿಮ್ಮ ಮರಣದಿಂದ ವಿಷಾದಿಸುತ್ತಲಿರುವರು."

ಬ್ರಿಟಿಷರ ವಾಯುನಾವೆಗಳು ಫ್ರಾನ್ಸಿನಲ್ಲಿ ಪ್ರತಿನಿತ್ಯವೂ ಹಾರುತ್ತಲಿರುವವು ಆದರೆ ಒಂದೇ ಒಂದು ಜರ್ಮನ ಜೆಪೆಲೀನ ನಾವೆಯು ಇದರ ಎದುರಿಗೆ ಬರಲಿಲ್ಲ ಜೆಪೆಲೀನ್ ವಾಯುನಾವೆಗಳನ್ನು ಕಂಡಕೂಡಲೇ ನಾಶಮಾಡಬೇಕೆಂದು ಬ್ರಿಟಿಷರ ವಾಯುನಾವೆಗಳಿಗೆ ಹುಕುಂ ಆಗಿರುವುದು. ಮೂರು ಸಾರಿ ಜರ್ಮನರ ವಾಯುನಾವೆಗಳು ಎದುರು ಬಿದ್ದರೂ ಅವು ಜರ್ಮನ ನಾವೆಗಳೆಂದು ತಿಳಿಯದೆ ಬ್ರಿಟಿಷರು ಬಿಟ್ಟುಬಿಟ್ಟರು ಎಂತ ಪ್ರಕಟವಾಗಿದೆ.

ಉತ್ತರ ಕಡಲಲ್ಲಿ ಜರ್ಮನರು ಹಾಕಿರುವ ಸಿಡಿಮದ್ದು ಗೆಣೆಗಳಿಗೆ ಎರಡು ಸಣ್ಣ ದೋಣಿಗಳೂ ಒಂದು ಸೋರ್ವೆ ಹಡಗವೂ ತಗಲಿ ಮುಣುಗಿಹೋಗಿರುವವು. ೯ ಮಂದಿ ಹತರಾಗಿರುವರು.

ರುಶ್ಯನರು ಕ್ರಾಕೌಗೆ ಮುಂದರಿಯುತ್ತಲಿರುವರು.

ಜರೊಸ್ಲಾವನ್ನು ವಶಮಾಡಿಕೊಳ್ಳುವ ಮೊದಲು ನಡೆದ ಒಂದು ವಾರದ ಕದನವು ಬಹು ಭಯಂಕರವಾಗಿತ್ತು. ಗುಡ್ಡಗಳಲ್ಲಿದ್ದ ಆಸ್ಟ್ರಿಯನರು ಕೆಲವು ಮೈಲುಗಳ ದೂರದ ವರೆಗೆ ತಗ್ಗು ಪ್ರದೇಶದ ಮೇಲೆ ಗುಂಡು ಹಾರಿಸಿದರು. ರುಶ್ಯನರು ಎದೆಗುಂದದೆ ಮುಂದರಿದು ತಮ್ಮ ಕೋವಿಗಳನ್ನು ಪ್ರಯೋಗಿಸಿದರು. ೫ನೇ ದಿವಸದಲ್ಲಿ ಆಸ್ಟ್ರಿಯನರ ಕೋವಿಗಳ ಬಲವನ್ನು ಮುರಿದು ಅವರ ಸೆಲೆಗಳನ್ನು ಆಕ್ರಮಿಸಿ ಸೋಮ ಕಾಳಗಮಾಡಿದರು. ಆಸ್ಟ್ರಿಯನರ ಕಂದಕಗಳು ಹೆಣದ ರಾಶಿಯಿಂದ ತುಂಬಿಹೋಗಿದ್ದವು. ೯ ದಿವಸಗಳಿಂದ ತಮಗೆ ಆಹಾರವಿಲ್ಲವೆಂದೂ ಕಾಡು ಹಣ್ಣುಗಳನ್ನೂ ಹಸಿ ಬಟಾಟೆಗಳನ್ನೂ ತಿಂದಿರುವವೆಂದೂ ಬಂದಿಗಳಾದ ಆಸ್ಟ್ರಿಯನರು ಹೇಳುವರು.

ತಂಪದುವ್ವಲು ದಿಕ್ಕಿನಲ್ಲಿ ರುಷ್ಯರು ಕಜಿಸ್ಕಿ ಮತ್ತು ಪೊಲಿಟೈನ್ ಕೋಟೆ ಕೊತ್ತಲು ಪ್ರದೇಶಗಳನ್ನು ಹಿಡಿದಿರುವರು. ಆಸ್ಟ್ರಿಯಾನರ ಪ್ರಜೊಮೈಸಿಲಿನ ಕೋಟೆಯ ಸೇನೆಯು ಮಧ್ಯೆಳ ಗ್ರಾಮವನ್ನು ಬಿಟ್ಟುಹೋಗಿರುವುದು. ಈ ಸೇನೆಯನ್ನು ರುಷ್ಯನರು ಕೋಟೆಗಳ ಕಡೆಗೆ ಹಿಂದಟ್ಟಿರುವರು. ಜರ್ಮನ್ ಸರಹದ್ದಿನಲ್ಲಿ ಕದನ ನಡೆಯಲಿಲ್ಲವೆಂತ ರುಷ್ಯ ಸರಕಾರದವರು ಪ್ರಕಟಿಸಿರುವರು.

ಬಾಲ್ಕಾನ್:—ಮೊಂಟೆನಿಗ್ರೋಯನರು ಕೆಟ್ಟಾರೋಗೆ ಗುಂಡು ಹಾರಿಸುತ್ತಲಿರುವರು.

ಜಯಶಾಲಿಗಳಾದ ಮೊಂಟೆನಿಗ್ರೋಯಾನರು ಸರಜೀವೋದ ಬಹಳ ಹತ್ತಿರದ ಗ್ರಾಮಗಳನ್ನು ಸೇರಿರುವರು. ಸೋತುಹೋದ ಆಸ್ಟ್ರೀಯಾನರು ಸರಜೆವೊವನ್ನು ಸೇರಿರುವರು.

ಅಂಗ್ಲಾಳ:—ಲಂಡನಿನಲ್ಲಿ ದಿವಸಕ್ಕೆ ೧೦೦೦ ಮಂದಿಯಂತೆ ಹೊಸ ಸೇನೆಗೆ ಸೇರುತ್ತಲಿರುವರು. ಹೊಸ ಸೇನೆಗೆ ಈಗ ಒಟ್ಟಿಗೆ ೫,೨೦,೦೦೦ ಮಂದಿ ಸೇರುವರು.

ಜರ್ಮನಿ ನ್ಯೂಗಿಯಾನ್ನ:—ಆಸ್ಟ್ರೇಲಿಯನರು ಜರ್ಮನ್ ನ್ಯೂಗಿಯಾನ್ನದಲ್ಲಿ ಫ್ರೆದರಿಖ್ ವಿಲ್ಹೆಲ್ಮ್ ಪಟ್ಟಣವನ್ನು ವಶಮಾಡಿಕೊಂಡಿರುವರೆಂಬ ವಾರ್ತೆ ಬಂದಿರುವುದು.

ಫ್ರೆಂಚರು ಏಡ್ರಿಯಾಟಿಕ್ ಸಮುದ್ರದಲ್ಲಿ ಲಿಸ್ಸ ದ್ವೀಪಕ್ಕೆ ಗುಂಡು ಹಾರಿಸಿ ಅದನ್ನು ವಶಮಾಡಿಕೊಂಡು ಫ್ರೆಂಚ ಬ್ರಿಟಿಷ ಧ್ವಜಗಳನ್ನು ಏರಿಸಿರುವರು.

ಜರ್ಮನಿ:—ಜರ್ಮನ ಸೈನಿಕರಲ್ಲಿ ಪ್ರಾಣಾಪಾಯ ಹೊಂದಿದವರ ೩ನೇ ಪಟ್ಟಿಯು ತಯಾರಾಗಿರುವುದು.

ಹಿಂದೂಸ್ಥಾನ:—ಪೊಂಡಿಚೇರಿಯ ಮತ್ತು ಕಾರಿಕಲಿನ ದೀಪಸ್ತಂಭಗಳು ನೊಂದಿಸಲ್ಪಟ್ಟಿರುವವೆಂತ ಮದರಾಸು ಪೋರ್ಟ ಆಫೀಸರರು ಪ್ರಕಟಿಸಿರುವರು.

ಸಪ್ಟಂಬರ ತಾ. ೧೫ರಲ್ಲು ಜೋಧಪುರದ ಮಹಾರಾಜರವರೂ ಮಹಾರಾಜ ರೀಜೆಂಟರವರೂ ಯುದ್ಧರಂಗಕ್ಕೆ ಹೋಗಲು ಹೊರಟರು. ಅವರು ಹೊರಡುವಾಗ ರೈಲ್ವೇ ನಿಲ್ದಾಣದಲ್ಲಿ ಯುರೋಪಿಯಾನರೂ ದೇಶೀಯ ಸರ್ದಾರರೂ ಕೂಡಿಬಂದಿದ್ದರು. ಟ್ರೈನ್ ಬಿಡುವ ಮೊದಲು ಸರ್ ಪ್ರತಾಪಸಿಂಘರವರು ದೇಶಭಾಷೆಯಲ್ಲಿ ಅಲ್ಲಿ ಕೂಡಿದ್ದ ಜನರಿಗೆ ಹೀಗೆಂದರು:—ಇಂಗ್ಲಿಷರು ಈ ಮಹಾಕಾರಣಕ್ಕಾಗಿ ತಮ್ಮ ರಕ್ತವನ್ನು ನೀರಿನಂತೆ ಚೆಲ್ಲುತ್ತಿದ್ದಾರೆ. ಇಂಗ್ಲಿಷರು ಯಾವಾಗಲೂ ಹೀಗೆಯೇ ಮಾಡುತ್ತಿದ್ದ್ರು. ಬಹಳ ವರ್ಷಗಳ ಹಿಂದೆ ರಾಜಪುತ ರಾಜ್ಯಗಳಿಗಾಗಿ ಹೀಗೆಯೇ ಮಾಡಿದರು. ಈಗ ಪುನಃ ಹೀಗೆ ಮಾಡಲು ತೊಡಗಿರುವರು. ಇಂಗ್ಲಿಷರು ಮಾಡಿದ ಉಪಕಾರಕ್ಕೆ ಪ್ರತ್ಯುಪಕಾರ ಮಾಡುವ ಕಾಲ ರಜಪುತರಿಗೆ ಈಗ ಬಂದಿರುತ್ತದೆ. ಆದುದರಿಂದ ಚಕ್ರವರ್ತಿಯವರಿಗಾಗಿ ರಕ್ತಚೆಲ್ಲಲು ಸಿದ್ಧರಾಗಿದ್ದಾರೆ. ಈ ಕಾರಣದಿಂದ ತಾನೂ ಮಹಾರಾಜ ಸಾಹೇಬರೂ ಯುದ್ಧರಂಗಕ್ಕೆ ಹೋಗುತ್ತಿದ್ದೇವೆ. ತಾವು ದೇಶವನ್ನು ಬಿಟ್ಟು ಹೋಗುವಾಗ ಏನು ಸಂಭವಿಸಿದರೂ ಬ್ರಿಟಿಷ ಸರಕಾರದವರು ಜೋಧಪುರದ ಚಿಂತನೆಯನ್ನು ಮಾಡುವವರಾಗಿ ನಂಬಿದ್ದೇವೆ.

ಟ್ರೈನ್ ಬಿಡುವಾಗ ಪ್ರತಾಪಸಿಂಗರು ಚಕ್ರವರ್ತಿಯವರಿಗೆ ಜಯವಾಗಲಿ ಎಂತ ಸ್ವಭಾಷೆಯಲ್ಲಿ ಕೂಗಿದರು. ಜನಸಂದಣಿಯು ಮಹಾರಾಜರ ಕೈಕಾಲುಗಳನ್ನು ಆಲಂಗಿಸಿಕೊಂಡರು.

ಆಘಖಾನರವರು ಲಂಡನಿನಲ್ಲಿ ಪಾಲ್‌ಮಾಲ್ ಗಜೆಟಿನ ಪ್ರತಿನಿಧಿಗಳ ಕೂಡೆ ಹಿಂದೂಸ್ಥಾನದ ರಾಜಭಕ್ತಿಯನ್ನು ಕುರಿತು ಈ ರೀತಿ ಹೇಳಿರುವರು:—ಹಿಂದೂಸ್ಥಾನದ ಜನರ ಮತ್ತು ಸರಕಾರದೊಳಗೆ ಯಾವ ವ್ಯತ್ಯಾಸವಿದ್ದರೂ ಈಗ ಹಿಂದೂಸ್ಥಾನದ ಯಾವ ಭಾಗದಲ್ಲಿಯೂ ಯಾವದೊಂದು ಭೇದವಿರದು. ಪ್ರತಿ ವರ್ಷವೂ ನಾನು ಹಿಂದೂಸ್ಥಾನದ ಎಲ್ಲಾ ಪ್ರದೇಶಗಳನ್ನು ಸಂಚರಿಸುತ್ತಿರುವೆನು. ಕಡೆಯ ಸಾರಿ ದಕ್ಷಿಣ ಹಿಂದೂಸ್ಥಾನದ ಹೊರತು ಎಲ್ಲಾ ಪ್ರೊವಿನ್ಸನ್ನು ಸಂದರ್ಶಿಸಿದ್ದೆನು. ಪ್ರತಿ ಒಂದು ಜಾತಿಯ ಮತದ ಜನರು ಒಗ್ಗಟ್ಟಾಗಿರುವರೆಂತಲೂ ಸಾಮ್ರಾಜ್ಯದ ಬಗ್ಗೆ ಸರ್ವಸ್ವವನ್ನು ಒಪ್ಪಿಸಲು ಸಿದ್ಧರಾಗಿರುವರೆಂತಲೂ ತಿಳಕೊಂಡಿರುವೆನು. ಈಗ ಕಳುಹಿಸಿದ ೬೦ ಸಾವಿರ ಸೈನಿಕರು ಸಾಲದಿದ್ದರೆ ೬೦೦ ಸಾವಿರ ಯಾ ೭ ಮಿಲಿಯ ಸೇನಿಕರನ್ನು ಕಳುಹಿಸಬಹುದು. ಸಾಮ್ರಾಜ್ಯವು ಕೇಳಿದ್ದನ್ನೆಲ್ಲಾ ಕೊಡಲು ಹಿಂದೂಸ್ಥಾನವು ಸಿದ್ಧವಾಗಿರುವುದು. ನಮ್ಮ ಸಾಮ್ರಾಜ್ಯವಾದ ಬ್ರಿಟನಿನೊಂದಿಗೆ ನಿಲ್ಲಲು ನಾವು ನಿರ್ಣಯಿಸಿರುವೆವೆಂತ ತಿಳಿಸಿರುವರು.

ತಾ. 29ನೇ ಸಪ್ಟಂಬರ:—ಪಶ್ಚಿಮ ರಣರಂಗ:—

ನೊಯನ್ ಪ್ರಾಂತ್ಯದ ವಾಯುವ್ಯ ದಿಕ್ಕಿನಲ್ಲಿ ಸಂಯುಕ್ತ ಸೇನೆಗಳ ಎಡಪಾರ್ಶ್ವದ ಮೇಲೆ ಶತ್ರುಗಳ ಉತ್ಕೃಷ್ಟ ಸೇನೆಯು ಒತ್ತಿಕೊಂಡು ಬಂದುದರಿಂದ ಸಂಯುಕ್ತ ಸೇನೆಗಳು ಶತ್ರು ಸೇನೆಗೆ ಸ್ಥಳಕೊಟ್ಟಿರುವುದು. ನಂತರ ಸಂಯುಕ್ತ ಸೇನೆಗಳಿಗೆ ಹೊಸ ಬೆಂಬಲ ಸೇನೆಗಳು ಬಂದು ಸೇರಿದ್ದರಿಂದ ಆ ಪ್ರಾಂತ್ಯದಲ್ಲಿ ಕಠಿಣ ಕಾಳಗ ನಡೆಯುತ್ತದೆಂತ ಫ್ರೆಂಚ ಸರಕಾರದವರು ಪ್ರಕಟಿಸಿರುವರು.

ಬಲಪಾರ್ಶ್ವದಲ್ಲಿ ನಾನ್ಸಿ ಮತ್ತು ಟೊಲಿನಿಂದ ಸಂಯುಕ್ತ ಸೇನೆಗಳು ಶತ್ರುಗಳ ಮೇಲ್ಬಾಯುವ ಮೊದಲೇ ಶತ್ರುಗಳು ರಫೆಮೆಡ್ ಎಂಬ ಕಡೆಗೆ ಹಿಂಜೆ ಸರಿದಿರುವರು.

ಮ್ಯೂಸಿನ ಗುಡ್ಡ ಪ್ರದೇಶದಲ್ಲಿ ಈಗ ಕದನ ನಡೆಯುತ್ತಿದೆ. ಜರ್ಮನರು ಸೇಂಟ್ ಮಿಚ್ಚೆಲ್ ಎಂಬಲ್ಲಿಗೆ ತಲಪಿದರು. ಆದರೆ ಮ್ಯೂಸ್ ನದಿಯನ್ನು ದಾಟಲು ಸಾಧ್ಯವಾಗದೆ ಹೋಯಿತು.

ಬಾಲ್ಕಾನ್:—ಆಸ್ಟ್ರೀಯನರು ಪುನಃ ಸರ್ವಿಯರ ರಾಜಧಾನಿಯಾಗಿದ್ದ ಬೆಲ್ಗ್ರೇಡ್ ಪಟ್ಟಣಕ್ಕೆ ಗುಂಡು ಹಾರಿಸುತ್ತಲಿರುವರು.

ಫ್ರೆಂಚರು ಲಿಸ್ಸ ದ್ವೀಪ, ಪೆಲೊಗೊಸ ದ್ವೀಪಗಳಿಗೆ ಗುಂಡು ಹಾರಿಸಿರುವರು. ಇತರ ದ್ವೀಪಗಳ ನಿವಾಸಿಕರೂ ತಮ್ಮ ಸ್ಥಳಗಳನ್ನು ಬಿಟ್ಟು ಹೋಗುತ್ತಲಿರುವರು. ಡಲ್ಮೆಶಿಯನ್ ಕರಾವಳಿಯ ಜನರು ಕರಾವಳಿಯನ್ನು ಬಿಟ್ಟು ಓಡುತ್ತಲಿರುವರು.

ಜರ್ಮನ ವಾಯುಹಡಗ ನಾವಿಕನೊಬ್ಬನು ಬುಲೋನಿನಲ್ಲಿ ಫ್ರೆಂಚರ ಹಡಗ ಕಟ್ಟುವ ಸ್ಥಳದ ಮೇಲೆ ಒಂದು ಸಿಡಿಮದ್ದನ್ನು ಹಾಕಿದನು. ಆದರೆ ಅಲ್ಲಿ ಏನೊಂದು ಹಾನಿಯಾಗಲಿಲ್ಲ.

ಡಚ್ಚ ಹಡಗಗಳು ಬ್ರಿಟಿಷ ನಾವಿಕರನ್ನು ರಕ್ಷಿಸುವುದರಲ್ಲಿ ಬಹಳ ಪ್ರಯತ್ನ ಮಾಡಿರುವವು. ಡಚ್ಚರ ಹಡಗಗಳು ಹೊಲ್ಲೆಂಡಿಗೆ ಕೊಂಡು ಹೋದ ಬ್ರಿಟಿಷ ನಾವಿಕರನ್ನು ಸರಕಾರದವರು ಹಿಂದೆ ಕಳುಹಿಸಿಕೊಟ್ಟಿರುವರು.

ಹಿಂದೂಸ್ಥಾನ:—ಮುಂಬಯಿ ಗವರ್ನರರ ಮಗ ಲೆಪ್ಟಿನೆಂಟ್ ಫ್ರೀಮನ್ ತೋಮಸರಿಗೆ ಕಾಲಿನಲ್ಲಿ ಗಾಯವಾಗಿರುವುದೆಂದೂ ಸುರಕ್ಷಿತವಾಗಿರುವರೆಂದೂ ತಂತೀ ಬಂದಿರುವುದು.

ಹೈದರಾಬಾದಿನ ನೈಜಾಮರವರು ಯುದ್ಧ ಖರ್ಚಿಗೆ ೬೦ ಲಕ್ಷ ರೂಪಾಯಿ ವಂತಿಗೆ ಕೊಟ್ಟಿರುವರು.

ತಾ. ೩೦ನೇ ಸಪ್ಟಂಬರ.

ಲೊರೈನ್ ಮತ್ತು ವೊಸಜೆಸಿನಲ್ಲಿ ಶತ್ರುಗಳ ಸೈನಿಕರ ಸಂಖ್ಯೆ ಕಡಿಮೆಯಾಗಿರುವುದು.

ಶತ್ರುಗಳ ನೆಲೆಯಲ್ಲೆಲ್ಲಾ ಕಠಿಣ ಕಾಳಗ ನಡೆಯುತ್ತಿದೆ. ಮೇಲ್ಬಾಯ್ದು ಬಂದ ಶತ್ರುಗಳು ವಿಶೇಷ ನಷ್ಟಹೊಂದಿ ಕೆಲವು ಸಾರಿ ಹಿಮ್ಮೆಟ್ಟಿದರು ಎಂತ ವೈಸರಾಯ ಪ್ರಭುಗಳವರಿಗೆ ತಂತೀ ಬಂದಿರುವುದು.

ಫ್ರೆಂಚ ಸರಕಾರದವರು ಈ ರೀತಿ ಪ್ರಕಟಿಸಿರುವರು:—ನಮ್ಮ ಪಾರ್ಶ್ವದಲ್ಲಿ ಕದನ ನಡೆಯುತ್ತಿದೆ. ಸೊಮ್ಮೆ ಮತ್ತು ಓೃಸೆ ಪ್ರಾಂತ್ಯದಲ್ಲಿ ಕಾಳಗವು ಕಠಿಣವಾಗಿರುವುದು. ಓೃಸೆ ಮತ್ತು ಸೊಸ್ಸೊನ್ಸಿನಲ್ಲಿ ನಾವು ಸ್ವಲ್ಪ ಮಾತ್ರ ಮುಂದರಿದಿರುವೆವು.

ಮಧ್ಯ ಪಾರ್ಶ್ವದ ಸ್ಥಿತಿಯು ಯಥಾರೀತಿ ಇದೆ. ಶತ್ರುಗಳು ಮ್ಯೂಸ್ ನದಿಯನ್ನು ದಾಟುವ ಯತ್ನದಲ್ಲಿ ಸಫಲ ಹೊಂದಿದರೂ ನಮ್ಮ ಸೇನೆಯು ಜರ್ಮನರನ್ನು ಹಿಂದಟ್ಟಿರುವುದು.

೧೪ನೇ ಜರ್ಮನ ಸೇನಾಂಗವು ಹಿಂದೆ ಬಿದ್ದು ವಿಶೇಷ ನಷ್ಟಪಟ್ಟಿರುವುದು.

ಜರ್ಮನ್ ವಾಯುನಾವೆಯ ನಾವಿಕನೊಬ್ಬನು ಪಾರಿಸ್ ನಗರದ ಮೇಲೆ ಸಿಡಿಮದ್ದು ಬಿಸಾಡಿರುವನು. ಅದು ಒಂದು ಹೊಟೆಲಿನ ಮೇಲೆ ಬಿದ್ದು ಒಬ್ಬ ವಕೀಲನು ಹತನಾದನು. ಒಬ್ಬ ಹುಡುಗನು ಘಾಯಹೊಂದಿದನು.

ಬ್ರ್ಯಾಯನ್ ಕೋಟೆಯ ಮೇಲೆ ಜರ್ಮನರು ಗುಂಡು ಹಾರಿಸಿದಾಗ ಫ್ರೆಂಚರು ಹಿಂದೆ ಗುಂಡು ಹಾರಿಸದೆ ಎರಡು ಗಾಡಿ ಬೈಹುಲ್ಲಿಗೆ ಬೆಂಕಿ ಕೊಟ್ಟರು. ಇದರ ಜ್ವಾಲೆಯನ್ನು ಜರ್ಮನರು ಕಂಡು ಕೋಟೆಗಳಿಗೆ ಬೆಂಕಿ ಹಾಗಿರುವುದೆಂದು ಭಾವಿಸಿ ಕೋಟೆಯ ಹತ್ತಿರ ಬಂದರು. ಫ್ರೆಂಚರು ಕೂಡಲೇ ಜರ್ಮನರ ಮೇಲ್ಬಾಯ್ದು ೧೦೦೦ ಜರ್ಮನರನ್ನು ಕೊಂದರು.

ಅರ್ಗೋನ್ನೆಯಿಂದ ಮ್ಯೂಸಿನ ವರೆಗೆ ವಿಶೇಷ ಕದನ ನಡೆಯುವುದಿಲ್ಲ. ಮ್ಯೂಸಿನಲ್ಲಿ ಲೊರೈನ್, ವೊಸಜೆಸಿನಲ್ಲಿ ವಿಶೇಷ ಬದಲಾವಣೆಯಾಗಲಿಲ್ಲ.

ಬೆಲ್ಜಿಯಮ್:—ತಾ. ೧೯ರಿಂದ ೪೦,೦೦೦ ಜರ್ಮನರು ವಾಟರ್‌ಲೂ ಎಂಬಲ್ಲಿ ಕಂದಕಗಳನ್ನು ಸೇರಿರುವರೆಂತ ತಿಳಿದುಬರುತ್ತದೆ. ಜರ್ಮನರು ದೊಡ್ಡ ದೊಡ್ಡ ಮುತ್ತಿಗೆ ಹಾಕುವ ಫಿರಂಗಿಗಳನ್ನು ಬ್ರುಸೆಲ್ಸಿನ ಆಜುಬಾಜಿನಲ್ಲಿ ಇಟ್ಟು ಬ್ರುಸೆಲ್ಸಿನಲ್ಲಿ ಬಲವಾದ ಕೋಟೆಗಳನ್ನು ನಿರ್ಮಿಸುವ ಕೆಲಸದಲ್ಲಿ ನಿರತರಾಗಿರುವರು.

ಎಂಟವರ್ಪಿನ ದಕ್ಷಿಣ ಪ್ರಾಂತ್ಯದಲ್ಲಿ ಜರ್ಮನರಿಗೂ ಬೆಲ್ಜಿಯನರಿಗೂ ವಿಶೇಷ ಕದನವಾಗಿ ಜರ್ಮನರಲ್ಲಿ ೩೦೦೦ ಮಂದಿ ಹತರಾದರು. ಬಹಳ ಮಂದಿ ಶೆರೆಬಿದ್ದರು ಎಂತ ವಾರ್ತೆ ಬಂದಿರುವುದು.

ಜರ್ಮನರ ಇನ್ನೊಂದು ಜೆಫಲಿನ್ ನಾವೆಯು ಸುಮಾರು ಒಂದು ಡಜನ್ ಬೊಂಬುಗಳನ್ನು ಒಸ್ಟೆಂಡಿನ ಮೇಲೆ ಎಸೆದಿರುವುದು. ಆದರೆ ಕೆಲವು ಮಾತ್ರ ಸಿಡಿದಿರುವುದು. ಒಬ್ಬ ಮುದುಕನು ಘಾಯ ಒಡೆದಿರುವನು.

ಬ್ರಿಟಿಷ ಸರಕಾರದವರು ಬೆಲ್ಜಿಯನರಿಗೆ ಬಡ್ಡಿ ಇಲ್ಲದೆ ಸಾಲ ಕೊಟ್ಟಿರುವರು.

ಹೊಲ್ಲೆಂಡಿನಿಂದ ಬ್ರಿಟಿಷರ ನಾವಿಕರನ್ನು ಇಂಗ್ಲಾಂಡಿಗೆ ಹಿಂದೆ ಕಳುಹಿಸಿಕೊಟ್ಟದ್ದರಿಂದ ಜರ್ಮನರು ಹೊಲ್ಲೆಂಡಿನ ಮೇಲೆ ಸಿಟ್ಟುಗೊಂಡಿರುವರು.

ಜರ್ಮನಿಗೆ ಸೇರಿದ್ದ ಫ್ರೆಂಚ್ ಕೊಂಗೋದಲ್ಲಿ ಫ್ರೆಂಚರು ಕೊಕೊಬೀಚನ್ನು ವಶಮಾಡಿಕೊಂಡಿರುವರು.

ಸ್ವಿಜರ್‌ಲೇಂಡಿನ ಮಾರ್ಗವಾಗಿ ಜರ್ಮನ ಸೇನೆಯನ್ನು ಕಳುಹಿಸಿಕೊಡಲು ಅಪ್ಪಣೆ ಕೊಡಬೇಕೆಂದು ಜರ್ಮನರು ಸ್ವಿಜರ್‌ಲೇಂಡ್ ಸರಕಾರದವರನ್ನು ಕೇಳಿರುವರೆಂತಲೂ ಸ್ವಿಜರ್‌ಲೇಂಡಿನವರು ಇದಕ್ಕೆ ಒಪ್ಪಿಗೆ ಕೊಡಲಿಲ್ಲವೆಂತಲೂ ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇಟಲಿ ಸರಕಾರದವರು ಸ್ವಿಜರ್‌ಲೇಂಡಿನ್ನ ತಟಸ್ಥಭಾವವನ್ನು ಕಾಪಾಡುವರೆ ಸಿದ್ಧರಾಗಿರುವರು.

ರುಷ್ಯನರು ಕ್ರಾಕೊಗೆ ಹೋಗುವ ರೈಲ್ವೆಯ ಸ್ಥಳವಾದ ರೆಜೆಸ್‌ಜೋವನ್ನು ತೆಗೆದುಕೊಂಡಿರುವರು. ಪ್ರೆಜೆಮೈಸ್ಲ್‌ನ ದಕ್ಷಿಣ ಮತ್ತು ಉತ್ತರದಲ್ಲಿರುವ ಕೋಟೆಕೊತ್ತಲಿನ ಪ್ರಾಂತ್ಯಗಳನ್ನೂ ಹಿಡಿದಿರುವರು.

ವಾರ್‌ಶೋದ ಮೇಲೆ ಜೆಫಲಿನ್ ವಾಯುನಾವೆಯು ಎರಡು ಬೊಂಬುಗಳನ್ನು ಹಾಕಿರುವುದು. ಮೊಡ್ಲಿನ್ ಕೋಟೆಯ ಸಮೀಪ ಈ ವಾಯುನಾವೆಗೆ ಗುಂಡುಹಾರಿಸಿ ಕೆಳಗಿಳಿಸಿ ಅದರ ನಾವಿಕರನ್ನು ಹಿಡಿದಿರುವರು.

ಜಾಪಾನ:—[illegible]ವಿನಲ್ಲಿ ಜಾಪಾನಿಯರು ನೆಲಮಾರ್ಗವಾಗಿ ಶತ್ರುಗಳ ಮೇಲೆ ಬಿದ್ದಿರುವರು. ಜಾಪಾನಿಯರಲ್ಲಿ ಈ ವರೆಗೆ ೩೧೨ ಮಂದಿ ಪ್ರಾಣಾಪಾಯ ಹೊಂದಿರುವರು.

ತಾ. 30ನೇ ಸಪ್ಟಂಬರ.

ಪಶ್ಚಿಮ ರಣರಂಗ—ಬೆಲ್ಜಿಯಂ:—ಜರ್ಮನರು ಮೆಲಿನ್ಸಿನ ಮೇಲೆ ನಿನ್ನೆಯಿಂದ ಪುನಃ ಗುಂಡು ಹಾರಿಸಲು ಪ್ರಾರಂಭಿಸಿರುವರು.

ಬೆಲ್ಜಿಯನರು ಎಂಟವರ್ಪಿನಿಂದ ಎರ್ದೆಯ ಕಡೆಗೆ ಗುಂಡು ಹಾರಿಸಿ ಜರ್ಮನರ ದೊಡ್ಡ ಸೇನೆಯನ್ನು ಹಿಂದಟ್ಟಿ [illegible]

ಮೊನ್ಸ್ ಪಟ್ಟಣವು ಉರಿಯುತ್ತಿದೆಂಬ ವಾರ್ತೆ ಇದೆ.

ಜರ್ಮನರು ಎಂಟವರ್ಪನ್ನು ಹಿಡಿಯಲು ಭಗೀರಥ ಪ್ರಯತ್ನಮಾಡುತ್ತಲಿರುವರು. ಕೋಟೆಗೆ ಹಾರಿಸುವ ಮುತ್ತಿಗೆಯ ಫಿರಂಗಿಯು ೨೫೦೦ ರಾತ್ಲಿನದಾಗಿರುವುದರಿಂದ ಅವನ್ನು ತಕ್ಕ ಸ್ಥಳದಲ್ಲಿ ಇಡುವ ಏರ್ಪಾಡುಮಾಡುತ್ತಿರುವುದರಿಂದ ಎಂಟವರ್ಪಿಗೆ ಮುತ್ತಿಗೆ ಬೀಳಲು ತಡವಾಗಿರುವುದು. ತನ್ಮಧ್ಯೆ ಬೆಲ್ಜಿಯನರು ಜರ್ಮನರ ಯುಕ್ತಿಯನ್ನು ಕೆಡಿಸಲು ಪ್ರಯತ್ನಿಸುತ್ತಿರುವರು.

ಬೆಲ್ಜಿಯನರು ಬ್ರುಸೆಲ್ಸಿನ ಅಜುಬಾಜಿನಲ್ಲಿ ಜರ್ಮನರ ಒಂದು ವಾಯುನಾವೆಯ ಮೇಲ್ಹಾಯ್ದು ಕೆಳಗೆ ಕೆಡವಿ ಅದರಲ್ಲಿದ್ದವರನ್ನು ಹತಬಡಿದರು.

ಎಂಟವರ್ಪಿನಲ್ಲಿ ನಡೆದ ಕದನದ ವಿಷಯವಾಗಿ ಬೆಲ್ಜಿಯನ ಸರಕಾರದವರು ಈ ರೀತಿ ಪ್ರಕಟಿಸಿರುವರು — ಜರ್ಮನರ ದೊಡ್ಡ ಸೇನೆಯು ಎಲೊಸ್ಟಿನ ಮಾರ್ಗವಾಗಿ ಟೆರ್ಮೊಂಡೆಗೆ ಮುಂದರಿಯಿತು. ಅಲ್ಲಿ ಬೆಲ್ಜಿಯನರು ಜರ್ಮನರ ಮೇಲೆ ಬಿದ್ದು ಜರ್ಮನರನ್ನು ಓಡಿಸಿದರು ಜರ್ಮನರಲ್ಲಿ ಅನೇಕ ಸೈನಿಕರನ್ನು ಸೆರೆಹಿಡಿದರು ಹೆಜ್ಜೆನವರು ಗಾಯವೊಡೆದರು.

ಈ ಶಿಟ್ಟಿನಿಂದ ಮುಯ್ಯಿಗೆ ಮುಯ್ಯಿ ತೀರಿಸುವರೆ ಜರ್ಮನರು ಮೆಲಿನ್ಸಿನ ಮೇಲೆ ಗುಂಡು ಹಾರಿಸಿ ಅನೇಕ ಮನೆಗಳನ್ನು ಹಾಳುಮಾಡಿದರು. ೧೦ ಮಂದಿ ನ್ಯಾಯಕರ್ತರು ಹತರಾದರು. ಅನೇಕರು ಘಾಯವೊಡೆದರು ಅನಂತರ ಜರ್ಮನರು ಮೆಲಿನ್ಸ್ ಮತ್ತು ಎಲೊಸ್ಟಿಗೆ ಮುಂದರಿದು ವಿಶೇಷ ನಷ್ಟ ಹೊಂದಿದರು ಜರ್ಮನರ ಕುದುರೆ ಪಡೆಯ ಮೇಲೆ ಬೆಲ್ಜಿಯನರು ಬಿದ್ದು ಎಂಟವರ್ಪಿನ ಸ್ವತ್ತೀನ ಪ್ರದೇಶವನ್ನು ಬಲಕಾಯಿಸಿಕೊಂಡರು.

ಫ್ರಾನ್ಸ್—ತಾ. ೨೬—೨೭ರ ತನಕ ಜರ್ಮನರು ಐನ್ ನದಿಯ ನೆಲೆಯಲ್ಲಿ ವಿಶೇಷ ಕಠಿಣ ರೀತಿಯಿಂದ ಮೇಲ್ಹಾಯ್ದು ರಾತ್ರಿ ಹಗಲು ಕಾದಾಡಿ ಸಂಯುಕ್ತ ಸೇನೆಗಳ ನೆಲೆಯನ್ನು ಮುರಿದು ಬಿಡಲು ಬಹಳ ಪ್ರಯತ್ನ ಮಾಡಿದರು ಜರ್ಮನರು ಇಲ್ಲಿ ಮಾಡಿದ ಪ್ರಯತ್ನವು ವ್ಯರ್ಥವಾಗಿ ಸಂಯುಕ್ತ ಸೇನೆಗಳು ಜರ್ಮನರ ಧ್ವಜಗಳನ್ನೂ ಫಿರಂಗಿಗಳನ್ನೂ ಬಹಳ ಮಂದಿ ಸೈನಿಕರನ್ನೂ ಸೆರೆಹಿಡಿದರು. ಇಲ್ಲಿ ಸಂಯುಕ್ತ ಸೇನೆಗಳು ಎಡೆಬಿಡದೆ ಕಾದಾಡಿದರೂ ಸೈನಿಕರು ಎದೆಗುಂದದೆ ವಿಶೇಷ ಉತ್ಸಾಹದಿಂದಿರುವರು.

ಜರ್ಮನರ ಸೇನೆಯಲ್ಲಿ ಮೃತಪಟ್ಟವರ ೩೪ನೇ ಪಟ್ಟಿಯು ತಯಾರಾಗಿರುವುದು. ಇದರಲ್ಲಿ ೯,೯೨೧ ಮಂದಿಯು ಮೃತಪಟ್ಟಿರುವರೆಂತ ತಿಳಿದುಬರುತ್ತದೆ ಈ ಪಟ್ಟಿಯ ಪ್ರಕಾರ ಒಟ್ಟಿಗೆ ಜರ್ಮನ ಸೇನೆಯಲ್ಲಿ ಈ ವರೆಗೆ ೬೪,೮೭೨ ಮಂದಿ ಮೃತರಾದರೆಂತ ತಿಳಿದು ಬರುತ್ತದೆ.

ಫ್ರೆಂಚ ಸರಕಾರದವರು ಈ ರೀತಿ ಪ್ರಕಟಿಸಿರುವರು:—ಯುದ್ಧರಂಗದಲ್ಲಿ ವಿಶೇಷ ಬದಲಾವಣೆಯಾಗಲಿಲ್ಲ. ಐನೆ ಮತ್ತು ಅರ್ಗೊನ್ನೆಯಲ್ಲಿ ಶತ್ರುಗಳು ಮೇಲ್ಹಾಯ್ದು ಬಂದರೂ ಹಿಮ್ಮೆಟ್ಟಿದರು. [illegible]ರ ಸ್ಥಳಗಳಲ್ಲಿ ಕದನಗಳು ನಿಧಾನವಾಗಿರುವವು.

ಪೂರ್ವ ರಣರಂಗ:

ಡ್ರುಸ್ ಕೆನ್ನಿಕಿಯಲ್ಲಿ ಜರ್ಮನರನ್ನು ರುಶ್ಯನರು ಹಿಂದಟ್ಟಿರುವರು. ಶತ್ರುಗಳು ಒಸ್ಸೊವೆಜ್ಜ ಕೋಟೆಯಿಂದ ಗುಂಡುಗಳನ್ನು ಹಾರಿಸಿದರೂ ಪ್ರಯೋಜನವಾಗಲಿಲ್ಲ. ರುಶ್ಯನರು ಡೆಮ್ರಿಟ್ಜವನ್ನು ವಶಮಾಡಿಕೊಂಡಿರುವರು.

ಪ್ರಜೆಮ್ಯೆಸ್ಲಿನಿಂದ ಆಸ್ಟ್ರೀಯ ಸೇನೆಗಳು [illegible] ಮತ್ತು ನೊಟೊರು ಬಂದಿಯ ಮೇಲೆ ಹಿಂದೆ [illegible]ರುವರು. ಕಕ್ಷಥೀನಿಯಬಲ್ಲಿ ರುಶ್ಯರು [illegible] ಆಸ್ಟ್ರೀಯನರ ಫಿರಂಗಿಗಳನ್ನೂ ಸೈನಿಕರನ್ನೂ [illegible]ರುವರು. ರುಶ್ಯನರು ಆಸ್ಟ್ರೀಯನರನ್ನು ಹಂಗೇರಿಯದ ಕಡೆಗೆ ಓಡಿಸುತ್ತಲಿರುವರು.

ರುಶ್ಯನರು ಜರೋವನ್ನು ಹಿಡಿದಿರುವರು. ಇದು ಪ್ರಜೆಮ್ಯೆಸ್ಲಿಗೆ ೩೦ ಮೈಲು ದಕ್ಷಿಣದಲ್ಲಿದೆ.

ಆಸ್ಟ್ರೀಯದಲ್ಲಿ ವಾಂತಿಭೇದಿಯು ತಲೆದೋರಿರುವುದರಿಂದ ಹಂಗೇರಿಯಾದಲ್ಲಿ ಆಸ್ಪತ್ರೆಗಳನ್ನು ತಯಾರಿಸುತ್ತಲಿರುವರು

~~~~~

ದಕ್ಷಿಣ ಕನ್ನಡ

~~~~~

ಕಾಸರಗೋಡು.

ಇಲ್ಲಿಯ ವಕೀಲರಾಗಿದ್ದ ಮ। ರಾ। ರಾ ಪಿ ದೇವರಾಯರವರು ಸೋಮವಾರ ದಿನ ವೇಳೆಗ್ಗೆ ವಿಧಿವಶರಾದರೆಂಬುದನ್ನು ತಿಳಿಸಲು ವಿಷಾದಿಸುತ್ತೇವೆ ಇವರು ತನ್ನ ಕರ್ತವ್ಯವನ್ನು ಎಷ್ಟು ಸರಿಯಾಗಿ ನಡಿಸುತ್ತಿದ್ದರೆಂಬದನ್ನು ಪ್ರಾಣಾಂತ್ಯದ ಸಮಯದಲ್ಲಿ ಯುದ್ಧ ಫಂಡಿಗೆ ತನ್ನ ಪಂತಿಗೆಯನ್ನು ಕಳುಹಿಸಿಕೊಟ್ಟು ರಾಜಭಕ್ತಿಯನ್ನು ವಿಶದಪಡಿಸಿದುದರಿಂದಲೇ ಊಹಿಸಬಹುದಾಗಿದೆ ಇವರ ಮರಣಕ್ಕೋಸ್ಕರ ಮುನ್ಸಿಪರು ಕೋರ್ಟಿಗೆ ಅರ್ಧ ದಿನ ರಜೆ ಕೊಡಿಸಿದರು

ಇಲ್ಲಿಯ ಬೋರ್ಡ ಶಾಲೆಗೆ ಸರಿಯಾದ ಕಟ್ಟೋಣವಿಲ್ಲದೆ ಛತ್ರದಲ್ಲಿ ಶಾಲೆಯನ್ನು ನಡಿಸುವುದು ಶೋಚನೀಯವಾಗಿದೆ ಈ ವಿಷಯಕ್ಕೆ ಬೋರ್ಡಿನವರು ಗಮನಕೊಡುವವರಾಗಲಿ

~~~~~

ಪುತ್ತೂರು—ಇಲ್ಲಿಯ ಶಾರದಾ ವಾಚಕ ಮಂದಿರದಲ್ಲಿ ಇದೇ ಸಪ್ಟಂಬರ ತಾ. ೨೬ನೇ ಬೆಳಿಗ್ಗೆ ೮॥ ಘಂಟೆಗೆ ಶಾರದಾ ಪೂಜೆಯು ಬಹು ವಿಜೃಂಭಣೆಯಿಂದ ನೆರವೇರಿತು ತಾ ೨೭ರಲ್ಲು ಶಾರದಾ ವಾಚಕ ಮಂದಿರದ ಸಪ್ತಮ ವರುಷದ ವರ್ಧಂತಿ ಸಮಾರಂಭವು ಇಲ್ಲಿಯ ಯೂನಿಯನ್ ಕ್ಲಬ್ ಕಟ್ಟೋಣದಲ್ಲಿ ಸಾಯಂಕಾಲ ೫ ಘಂಟೆಗೆ ಪ್ರಾರಂಭಿಸಿತು ಸಭಾಧ್ಯಕ್ಷಸ್ಥಾನವನ್ನು ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫರಾದ ಮಿಸ್ತರ್ ಸಿ. ಡಿ ಜೆ ಪಿಂತೊರವರು ಅಲಂಕರಿಸಿದ್ದರು ಸಭೆಯ ಪ್ರಾರಂಭಿಸಿದೊಡನೆ ಮಂದಿರದ ಗತವರುಷದ ವರದಿಯನ್ನು ಕಾರ್ಯದರ್ಶಿಗಳಾದ ಮ। ರಾ। ರಾ। ಗುರುಪುರ ಮುಕುಂದ ಪ್ರಭುಗಳವರು ಓದಿದರು ಅನಂತರ ಮ। ರಾ। ರಾ। ವಕೀಲ ಬೈ ದೂರು ಆನಂದರಾಯರವರು "ಮುಂದಣ ಅಭಿವೃದ್ಧಿಯನ್ನು ಪ್ರಬಾರಗೊಳಿಸುವ ಅವಶ್ಯಕತೆ ಕುರಿತು ಒಂದು ಚಲೋ ಉಪನ್ಯಾಸವನ್ನು ಓದಿದರು ಸದರಿ ಉಪನ್ಯಾಸವನ್ನು ಅನುಮೋದಿಸಿ ವಾಚಕ ಮಂದಿರವನ್ನು ಉನ್ನತ ಸ್ಥಿತಿಗೆ ತರುವ ಕುರಿತು ಅರ್ಧ ಘಂಟೆ ತನಕ ಕನ್ನಡ ನುಡಿಗಳಿಂದ ಸಭಾಧ್ಯಕ್ಷರು ಒಂದು ಕಾಲೋಚಿತ ಭಾಷಣವನ್ನು ಕೊಟ್ಟರು ಅನಂತರ ಶಾಲಾ ವಿದ್ಯಾರ್ಥಿಗಳಿಂದಲೂ ನೆರದ ಇತರ ಸ್ಥಳಿಯ ಗಾಯನ ಕಲಾನಿಪುಣ ರಾಜಭಕ್ತಿ ಪ್ರದರ್ಶಕವಾದ ರಾಷ್ಟ್ರೀಯ ಗೀತದಿಂದ ನಿಲಿಸಲ್ಪಟ್ಟಿತು ಈ ಉತ್ಸವಕ್ಕೆ ಸರಕಾರಿ ಹುದ್ದೆದಾರರೂ ವಕೀಲರೂ ಶಾಲಾ ಉಪಾಧ್ಯಾಯರೂ ವಿದ್ಯಾರ್ಥಿಗಳೂ ನೆರದಿದ್ದರು. ಗೀತಗಳು ಗಾಯನಗಳು ಮುಗಿದೊಡನೆ ಕೂಡಿದ ಸಭಿಕರಿಗೆ ಗಂಧ ಪುಷ್ಪ ತಾಂಬೂಲ ಹಂಚಿ ಸಭೆ ಮುಕ್ತಾಯವಾಯಿತು ಕಳೆದ ವರ್ಷದ ಉತ್ಸವವು ಕಳೆದ ಒಕ್ಟೋಬರ ತಾ ೯ರಲ್ಲು ಜರಗಿತ್ತು

ಉಪ್ಪಿನಂಗಡಿ ತಾಲೂಕಿನ ಸುಬ್ರಮಣ್ಯ ಗ್ರಾಮದ ಕುಲಗುಂದದಲ್ಲಿ ವರುಷಂಪ್ರತಿ ಆಗುವ ಜಾನುವಾರು ಸಂತೆಯು ವಾಡಿಕೆ ಪ್ರಕಾರ ಬರುವ ನವಂಬರ ತಾ ೨ಕ್ಕೆ ಪ್ರಾರಂಭವಾಗಿ ಅದೇ ತಿಂಗಳ ೧೭ನೇ ತಾರೀಕು ವರೆಗೆ ಜ್ಯಾರಿ ಇರುವದು

ಇಲ್ಲಿಯ ಸಹಾಯ ಸಂಘದ ಕ್ಲಾರ್ಕ ರಾ। ಕೆಳ್ಯಾರೆ ಶಿವರಾಯರನ್ನು ಕೋವೊಪರೇಟಿವ್ ಪುತ್ತೂರು ಸೆಂಟ್ರಲ್ ಬೇಂಕಿನ ಸುಪರವೈಜರಾಗಿ ನೇಮಿಸಿದ್ದಾರೆ.

ತಾ ೩೦ರಲ್ಲು ರಾ। ಸಿ ಪಾಂಡುರಂಗಪ್ಪಾಕ್ಷ ಮತ್ತು ಮಂಗಳೂರು ಶ್ರೀನಿವಾಸಭಂಡಾರಿಯವರು ಸ್ಥಾಪಿಸಿದ ಶ್ರೀ ಸರಸ್ವತಿ ಗಾಯನ ಮಂದಿರದ ಪ್ರತಿಷ್ಠೆಯು ಮಹೋತ್ಸಾಯಿತು.

[illegible]

~~~~~

ಕಾಪು—[illegible] ಗ್ರಾಮದ [illegible] ಪಂಚ [illegible] ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಒಮ್ಮೆ ಸೂಚಿಸಿರುತ್ತದಷ್ಟೆ. [illegible] ಕೊಂಡಲ್ಲಿ ಐವರಿಗೂ ಶಿಕ್ಷೆಯು [illegible] ರಿಗೆ ಮಾತ್ರ ರೂ ೫೦ ಜುರುಮಾನೆ ಕಾಯಂ ಮಾಡಲ್ಪಟ್ಟಿತೆಂತಲೂ ಇನ್ನು ಮುಂದೆ ಪಂಚಮರ ಜಾತಿಯವರ ವಿಷಯವಾಗಿ ಜಾಗ್ರತೆಯುಳ್ಳವರಾಗಿಯೂ ಇರಬೇಕೆಂದು ಎಚ್ಚರಿಸಿದ್ದಾರಾಗಿಯೂ ಕೇಳುತ್ತೇನೆ.

~~~~~

ಪಡುಬಿದ್ರಿ—ನಡಿಪಟ್ಣದ ಮೊಗೇರರು ನವೀನವಾಗಿ ಕಟ್ಟಿಸಿದ ಭಜನೆ ಮಂದಿರದ ಪ್ರವೇಶೋತ್ಸವು ಇದೇ ಆಶ್ವೀಜ ಶುದ್ಧ ೧ನೇ ಆದಿತ್ಯವಾರ ಬಹೂ ಗದ್ದಲದಿಂದ ನೆರವೇರಿಸಲ್ಪಟ್ಟಿತು. ಬೆಳಿಗ್ಗೆ ದೇವತಾ ಪ್ರತಿಷ್ಠೆ, ಹೋಮ ಪೂಜೋತ್ಸಹಾದಿಗಳಾದವು. ನಡಿಪಟ್ಣ ಊರ ಗುರಿಕಾರರೂ ಹತ್ತು ಸಮಸ್ತರೂ ಇನ್ನು ಈ ಸಂದರ್ಭದಲ್ಲಿ ಆಮಂತ್ರಿಸಲ್ಪಟ್ಟಿದ್ದ ಪರವೂರಿನವರೂ ಸಹ ಮಧ್ಯಾನ್ನದ ಮೇಲೆ ಈ ಭಜನೆ ಮಂದಿರದ ಎದುರು ಹಾಕಿದ ಚಪ್ಪರದಲ್ಲಿ ಮಹಾಸಭೆ ನೆರೆದು ಬಂದರು ಈ ಸಭೆಯಲ್ಲಿ ಮಂಗಳೂರಿನ ಶ್ರೀ ಜ್ಞಾನೋದಯ ಸಮಾಜದವರು ಹರಿಕಥಾ ನಿರೂಪಣೆಯಿಂದ ಭಕ್ತಿ ಮಹಿಮೆಯನ್ನು ವರ್ಣಿಸಿದರಲ್ಲದೆ, ಸ್ವಜಾತಿಯವರ ದುರವಸ್ಥೆಗೆ ಮುಖ್ಯ ಕಾರಣವಾದ ಮದ್ಯಪಾನದ ಅನರ್ಥಗಳನ್ನು ವಿವರಿಸುವ ಮನೋರಂಜಕ ತುಳುಭಾಷಾ ಸಂಗೀತಗಳಿಂದಲೂ ಪ್ರತ್ಯಕ್ಷ ಪ್ರಮಾಣಸಿದ್ಧವಾದ ಭಾಷಣಗಳಿಂದಲೂ ಸಭಿಕರನ್ನೆಲ್ಲಾ ಮದ್ಯಪಾನ ಪರಾಙ್ಮುಖರಾಗುವಂತೆ ಪ್ರೇರೇಪಿಸಿದರು ಸಭಾಂತ್ಯದಲ್ಲಿ ಭಜನೆ ಮಂಡಳಿಯವರು ೧೧ ಜನರೂ, ನಡಿಪಟ್ಣದವರು ೧೮ ಜನರೂ, ಕಾಡಿಪಟ್ಣದವರು ೫ ಜನರೂ ಕೂಡಾ ೩೪ ಜನರು ಸಭೆಯಲ್ಲಿ ಒಬ್ಬೊಬ್ಬರೇ ಎದ್ದು ನಿಂತು ಇಂದಿನಿಂದ ತಮ್ಮ ಮರಣಾಂತ್ಯದ ವರೆಗೂ ಯಾವ ತರದ ಮದ್ಯಪಾನ ಮಾಡಲಿಕ್ಕಿಲ್ಲವೆಂದೂ ಪರರಿಗೆ ತೆಗದು ಕೊಡಲಿಕ್ಕಿಲ್ಲವೆಂದೂ ಪ್ರಮಾಣ ಮಾಡಿದರು' ಸಭೆಗೆ ಬಂದಿದ್ದ ಸ್ವಜಾತಿ ಸ್ತ್ರೀಯರ ಪೈಕಿ ೮ ಜನ ಸ್ತ್ರೀಯರು ಸಹಾ ತಮ್ಮ ಪ್ರಸೂತ ಸಮಯದಲ್ಲಾದರೂ ಸರಿಯೇ ಇನ್ನು ಎಂದೆಂದಿಗೂ ಮದ್ಯಪಾನ ಮಾಡಲಿಕ್ಕಿಲ್ಲವೆಂಬ ಶಪಥವನ್ನು ಮಾಡಿದರು '

ನಂತರ ಊರ ಗುರಿಕಾರರ ಎದ್ದು ಪರವೂರಿನಿಂದ ಬಂದ ಅತಿಥಿಗಳಿಗೂ ಶ್ರೀ ಜ್ಞಾನೋದಯ ಸಮಾಜದವರಿಗೂ ದನ್ಯವಾದವನ್ನು ಕೊಟ್ಟು ಮದ್ಯಪಾನನಿಷೇಧಕ ವ್ರತವನ್ನು ಕೈಕೊಂಡ ಸ್ಮರಣಾರ್ಥವೆಂದು ಭಜನೆ ಮಂಡಳಿಯವರಿಗೆ ರೂಪಾಯಿ ೨೦ನ್ನು ದಾನ ಮಾಡಿದರಲ್ಲದೆ ತಮ್ಮೂರ ಮಕ್ಕಳ ಜ್ಞಾನೋದಯಕ್ಕಾಗಿ ಊರ ಹತ್ತು ಸಮಸ್ತರ ಭಂಡಾರ ಹಣದಿಂದ ಒಂದು ವಿದ್ಯಾಶಾಲೆಯನ್ನು ಸಹ ಕಲ್ಪಿಸಲು ತವಿಂದಾದಷ್ಟು ಪ್ರಯತ್ನಿಸುವೆವೆಂದು ವಾಗ್ದತ್ತವನ್ನಿತ್ತರು.

~~~~~

ಬೈಂದೂರು—ಈ ಪ್ರಾಂತ್ಯ ಸಂಚರಣೆಯಲ್ಲಿರುವ ಶ್ರೀಯುತರಾದ ವಿದ್ಯಾಖಾತೆಯ ಅಸಿಸ್ಟಾಂಟ್ ಇನಸ್ಪೆಕ್ಟರವರೂ ಮ। ರಾ। ಉಡ್ಪಿ ರೇಂಜ್ ಸ್ಕೂಲುಗಳ ಸಬ್ ಅಸಿಸ್ಟಾಂಟ್ ಇನಸ್ಪೆಕ್ಟರವರೂ ಮ। ರಾ। ನಮ್ಮ ಸುಪರ್‌ವೈಸರವರೂ ಕೂಡಾ ಮೂವರು ಮಹನೀಯರು ಸನ್ನಿಹಿತರಾಗಿರುವ ಅಪೂರ್ವ ಸಂದರ್ಭದಲ್ಲಿ ಇವರ ಪರಮ ವಾತ್ಸಲ್ಯ ಯುಕ್ತವಾದ ಕೃಪೆಯಿಂದ ಇಲ್ಲಿ ತಾ. ೨೧-೯-೧೯೧೪ರಲ್ಲು ಉಪಾಧ್ಯಾಯರ ಮೀಟಿಂಗು ನಡಿಯಿತು.

ಆರಂಭದಲ್ಲಿ ಅಧ್ಯಕ್ಷರು ಉಪಾಧ್ಯಾಯರಿಗೆ ಪರೀಕ್ಷಾರ್ಥವಾಗಿ ಕೆಲವು ಪ್ರಶ್ನೆಗಳನ್ನು ಕೇಳಿ ಉತ್ತರವನ್ನು ಸ್ವೀಕರಿಸಿದ ತರುವಾಯ ತಮ್ಮ ಸುವಾಕ್ಯವಾಣಿಯಿಂದ ಸುಬೋಧವಾಗುವಂತೆ "ಉಪಾಧ್ಯಾಯರ ಯೋಗ್ಯತೆ ಪ್ರಾಚೀನಾರ್ವಾಚೀನಕಾಲದ ವಿದ್ಯಾಭ್ಯಾಸ ಕ್ರಮಮರ್ಮ, ಅಕ್ಷರಾಭ್ಯಾಸ ರೀತಿ ಮತ್ತು ಆ [illegible]ಲ್ಲಿ ಈಗ ಅಲ್ಲಲ್ಲಿ ಕಂಡು ಬರುವ ಕೊರತೆಗಳು [illegible] ದ ವಿಶೇಷ ಮಾಹಿತಿ ಮುಂತಾದ ವಿಷಯದಲ್ಲಿ ವ್ಯಾಖ್ಯಾನ ಮಾಡಿದ ತರುವಾಯ ನಮ್ಮ ಸನ್ಮಾನ್ಯ ಸಬ್ ಅಸಿಸ್ಟಾಂಟ್ ಇನಸ್ಪೆಕ್ಟರವರು ತಮ್ಮ ಸ್ಥಿರಗಂಭೀರವಾದ ಸರಳ ಮತ್ತು [illegible] ಯಿಂದ ಹೃದಯಂಗಮವಾಗುವ ರೀತಿಯಿಂದ "ಉಪಾಧ್ಯಾಯರ ನಡತೆ, ಬಾಲ[illegible] ಅನುಸರಿಸಬೇಕಾದ [illegible] ಮೂಲತತ್ವ [illegible] ಮುಂತಾದ ವಿಚಾರ[illegible] ಉಪನ್ಯಾಸ [illegible] ಮೇಲೆ ಶ್ರೀಯುತ ಅಸಿಸ್ಟಾಂಟ್ [illegible]ರವರು [illegible]

[illegible]

ಯಾರ್ಥವಾಗಿ ನಮ್ಮಶ್ರೀಮನ್ ಮೈಸರಾಯರವರು ಏರ್ಪಡಿಸಿರುವ ನಿಧಿಗೆ ಉಪಾಧ್ಯಾಯರೆಲ್ಲರೂ ಯಥಾಶಕ್ತಿ ದ್ರವ್ಯಸಹಾಯ ಮಾಡಬೇಕಾದ ವಿಷಯದಲ್ಲಿ ಲಕ್ಷ್ಯಕೊಡಬೇಕೆಂತ ಅನುಜ್ಞೆಯಾದ ಮೇಲೆ ಶಾಲಾ ವಿದ್ಯಾರ್ಥಿಗಳು ಇಂಪಾದ ಸುಸ್ವರದಿಂದ "ಮಹಾರಾಜರ ಶ್ರೇಯಃ ಪ್ರಾರ್ಥನಾ" ಪದ್ಯವನ್ನು ಹಾಡಿ ಆ ಮೇಲೆ ಸಭೆಯು ಮುಕ್ತಾಯವಾಯಿತು

ಮಂಗಳೂರು

ಕಾಫಿ ಕಳವು ಮೊಕದ್ದಮೆಯಲ್ಲಿ ಶಿಕ್ಷೆ ವಿಧಿಸಲ್ಪಟ್ಟ ಮೈಂದಪ್ಪ ಮತ್ತು ಶಾಂತಪ್ಪನು ಅಪೀಲು ಮಾಡಿಕೊಂಡಿದ್ದರೆಂದು ತಿಳಿಸಿತ್ತಷ್ಟೆ. ಇವರ ಮೇಲೆ ತಪ್ಪು ಸಾಬೀತಾಗದ್ದರಿಂದ ಡಿಸ್ಟ್ರಿಕ್ಟ ಕಲೆಕ್ಟರರು ಇವರನ್ನು ಖುಲಾಸುಪಡಿಸಿದರು. ಆದರೆ ಇದೇ ಮೊಕದ್ದಮೆಯಲ್ಲಿ ಶಿಕ್ಷೆ ವಿಧಿಸಲ್ಪಟ್ಟ ಮಾಪಿಳ್ಳೆಯರಿಬ್ಬರ ಶಿಕ್ಷೆಯು ಅಪೀಲಿನಲ್ಲಿಯೂ ಕಾಯಂ ಆಯಿತು

ಕಳೆದ ತಿಂಗಳ ತಾ ೨೯ ಮತ್ತು ೩೦ರಲ್ಲಿ ಇಲ್ಲಿಯ ಸೈಂಟ್ ಅಲೋಸಿಯಸ್ ಕೊಲೆಜಿನಲ್ಲಿ ಕೊಲೆಜಿನ ಈಗಿನ ವಿದ್ಯಾರ್ಥಿಗಳೂ ಕೊಲೇಜಿನಿಂದ ಶಿಕ್ಷಣಹೊಂದಿದ ಹಳೇ ವಿದ್ಯಾರ್ಥಿಗಳೂ ಕೂಡಿಕೊಂಡು ಬಹಳ ಸಂಭ್ರಮದಿಂದ ತಿಕ್ಲ್ಸ ದಿನವನ್ನು ಆಚರಿಸಿದರು

ಇಲ್ಲಿಯ ಹಂಪನಕಟ್ಟೆಯಲ್ಲಿರುವ ಗ್ರಾಮ ಮುನ್ಸಿಫ್ ಕೋರ್ಟು ಕಟ್ಟಡವನ್ನು ಮುನ್ಸಿಪಾಲ್ ಸೆನಿಟರಿ ಇನ್ಸ್ಪೆಕ್ಟರರ ಆಫೀಸಾಗಿ ಮಾಡಿ ಗ್ರಾಮ ಮುನ್ಸಿಫ್‌ಕೋರ್ಟನ್ನು ರಥಬೀದಿಯಲ್ಲಿರುವ ಹಳೇ ತಾಲೂಕು ಕಚೇರಿಗೆ ತರುವರೆಂದು ಕೇಳುತ್ತೇವೆ

ಹಂಪನಕಟ್ಟೆಯ ರೋಮನ್‌ಕೆಥೋಲಿಕ ಕ್ಲಬಿನಿಂದ ಕೆಳಗೆ ಹೋಗುವ ರಸ್ತೆಯು ಅತಿ ಸಪೂರವಾಗಿದ್ದು ತಿರ್ಗಾಸ್ ಇರುವುದರಿಂದ ಅಪಾಯ ಸಂಭವಿಸುತ್ತದೆಂದು ಹಿಂದಿನ ಒಂದು ಸಂಚಿಕೆಯಲ್ಲಿ ತಿಳಿಸಿತ್ತಷ್ಟೆ. ಮುನ್ಸಿಪಾಲಿಟಿಯವರು ಈ ವಿಷಯ ನಿಗಾಕೊಟ್ಟು ತಿರ್ಗಾಸಿನ ಬಳಿ ಇರುವ ಎತ್ತರವಾದ ದರೆಯನ್ನು ಕಡೆದು ದಾರಿಯನ್ನು ಅಗಲಮಾಡ ಪ್ರಾರಭಿಸಿರುವ ಕೆಲಸವು ಸ್ತುತ್ಯವಾದದಾಗಿದೆ. ಈ ದಾರಿಯ ಉಭಯ ಪಾರ್ಶ್ವದಲ್ಲಿರುವ ದರೆಗಳನ್ನೂ ಸ್ವಲ್ಪ ಸ್ವಲ್ಪ ಕಡದರೆ ರಸ್ತೆಯು ಮತ್ತಷ್ಟು ಅಗಲವಾಗಿ ಈ ರಸ್ತೆಯಲ್ಲಿ ಸಂಭವಿಸುವ ಜಟ್ಕಾ ಬೈಸಿಕಲ್‌ಗಳ ಅವಗಢಗಳ ಸಂಖ್ಯೆಯು ತೀರಾ ಕಡಿಮೆಯಾಗುವುದರಲ್ಲಿ ಅನುಮಾನವಿರದು

ಪಟ್ಟಣದಲ್ಲಿ ಬಿಡಿನಾಯಿಗಳ ಸಂಖ್ಯೆಯು ಹೆಚ್ಚಿರುವುದರಿಂದ ಇವುಗಳನ್ನು ಕೊಲ್ಲಿಸುವರೆ ಮುನ್ಸಿಪಾಲಿಟಿಯವರು ಹುಕುಂ ಕೊಡುವುದು ವಿಹಿತವಾಗಿರುವುದು

ಇದೇ ಕಳೆದ ತಾ ೩೦ನೇ ಸಾಯಂಕಾಲ ಬಲ್ಮಠ ಪ್ರೊಟೆಸ್ಟಾಂಟ ದೇಶೀಯ ಕ್ರೈಸ್ತರು ಮೆ| ಕ್ರಿಶ್ಚಿಯನ್ ತಿಯದೋರ್ ಬಿ ಎ ಬಿ ಎಲ್‌ರವರ ಆಮಂತ್ರಣದ ಮೇಲೆ ಬಲ್ಮಠ ಕ್ರೈಸ್ತ ಯುವಜನ ಸಮಾಜ ಮಂದಿರದಲ್ಲಿ ಕೂಡಿಬಂದ ವ್ಯಾಪಾರಿ ಪ್ರಭುಗಳವರು ಸ್ಥಾಪಿಸಿದ ಇಂಪೀರಿಯಲ್ ರಿಲೀಫ್ ಯುದ್ಧಫಂಡಿಗೆ ವಂತಿಗೆ ಕೊಡಿಸುವ ವಿಷಯ ಆಲೋಚನೆ ನಡೆಸಿದರು. ರೆವರೆಂಡ್ ಜೆ ಬಿ ಸೋನ್ನರವರು ಈ ಸಭೆಯಲ್ಲಿ ಅಧ್ಯಕ್ಷರಾಗಿದ್ದು ರಿಲೀಫ್ ಫಂಡಿಗೆ ಸಹಾಯ ಮಾಡುವ ಅವಶ್ಯಕತೆಯನ್ನು ಸಭಿಕರಿಗೆ ವಿವರಿಸಿದನಂತರ ಕೂಡಿದ್ದವರೆಲ್ಲರೂ ಏಕ ಮನಸ್ಸಿನಿಂದ ಈ ಫಂಡಿಗೆ ಚಂದಾಹಣ ಕೊಡಿಸಲು ಆದಷ್ಟು ಪ್ರಯತ್ನಮಾಡುತ್ತೇವೆಂತ ಒಪ್ಪಿಕೊಂಡದಲ್ಲದೆ ಸಭೆಯಲ್ಲೇ ೧೦೫ ರೂಪಾಯಿ ಚಂದಾ ಹಣವು ಜಮೆ ಆಯಿತು. ಅನಂತರ ಮೆ| ಕ್ರಿಶ್ಚಿಯನ್ ತಿಯದೋರರವರು ಚಂದಾ ಹಣ ಕೂಡಿಸುವ ಬಗ್ಗೆ ಕೆಲವು ಗ್ರಹಸ್ಥರನ್ನು ಆರಿಸಿದ ನಂತರ ರಾಜಗೀತವನ್ನು ಹಾಡಿ ಸಭೆಯು ಅಗಲಿತು ಎಂತ ನಮ್ಮ ಬಾತ್ಮೀದಾರರು ಬರೆದಿರುವರು

ಇಲ್ಲಿಂದ ಬೆಳಗ್ಗೆ ೧೦ ಘಂಟೆಕ್ಕೆ ಬಿಡುತ್ತಿದ್ದ ಗೂಡ್ಸು ಟ್ರೈನ್ ಇದೇ ತಾ ೧೫ರಿಂದ ಬೆಳಗ್ಗೆ ೮- ೫೦ಕ್ಕೆ ಬಿಡೋಣಾಗುವುದು. ಸಾಯಂಕಾಲ ೫-೧೫ ಬಿಡುತ್ತಿದ್ದ ಕೆಟ್ಲ ಟ್ರೈನು ೫-೨೫ಕ್ಕೆ ಬಿಡೋಣಾಗುವುದಲ್ಲದೆ ಕಣ್ಣಾನೂರ ವರೆಗೆ ಹೋಗುವದು. ಈ ಟ್ರೇನು ಕಣ್ಣಾನೂರಿಗೆ ರಾತ್ರಿ ೯ ೧೮ಕ್ಕೆ ತಲಪುವದು. ಇಲ್ಲಿಂದ ಬೆಳಗ್ಗೆ ಹೋಗುವ ಮೈಲುಟ್ರೇನು ಈಗ ಮಂಜೇಶ್ವರ ಸ್ಟೇಷನಿನಲ್ಲಿ ನಿಲ್ಲುವದಿಲ್ಲ

ಮಂಗಳೂರು ಮುನ್ಸಿಪಾಲಿಟಿಯಲ್ಲಿ ಕಳೆದವಾರ ೩ ಪ್ಲೇಗು ಮರಣವಾಗಿರುವುದು.

ಇಲ್ಲಿಯ ಶಾಲೆಗಳ ಕ್ರಿಕೆಟ್ ಪಂದ್ಯಾಟಗಳು ಪ್ರಾರಂಭವಾಗಿರುವವು. ಮಿಶನ್ ಹೈಸ್ಕೂಲು ಸೀನಿಯರ್ ಪಂಗಡದವರಿಗೂ ಕೆನರಾ ಹೈಸ್ಕೂಲು ಸೀನಿಯರ್ ಪಂಗಡದವರಿಗೂ ನಡೆದ ಪಂದ್ಯಾಟದಲ್ಲಿ ಕೆನರಾ ಹೈಸ್ಕೂಲಿನ ಪಂಗಡದವರು ಗೆದ್ದಿರುವರು. ಗವರ್ನಮೆಂಟ್ ಕಾಲೇಜು ಸೀನಿಯರ್ ಪಂಗಡದವರಿಗೂ ಮತ್ತು ಎಲೋಸಿಯಸ್ ಕಾಲೇಜು ಸೀನಿಯರ್ ಪಂಗಡದವರಿಗೂ ನಡೆದ ಆಟದಲ್ಲಿ ಗವರ್ನಮೆಂಟ್ ಕಾಲೇಜಿಯವರು ಗೆದ್ದಿರುವರು. ಈ ದಿನ ಗವರ್ನಮೆಂಟ್ ಕಾಲೇಜು ಮತ್ತು ಕೆನರಾ ಹೈಸ್ಕೂಲು ಸೀನಿಯರ್ ಪಂಗಡದವರಿಗೆ ಪಂದ್ಯಾಟವು ಪ್ರಾರಂಭವಾಗಿರುವುದು. ಜೂನಿಯರ್ ಪಂಗಡದಲ್ಲಿ ಈ ವರೇಗೆ ಮಿಶ್ಯನ್ ಹೈಸ್ಕೂಲು ಪಂಗಡ ಮತ್ತು ಕೆನರಾ ಹೈಸ್ಕೂಲು ಪಂಗಡದವರಿಗೆ ನಡೆದ ಆಟದಲ್ಲಿ ಕೆನರಾ ಹೈಸ್ಕೂಲಿನ ಪಂಗಡದವರು ಗೆದ್ದಿರುವರು. ಉಡ್ಪಿ ಮಿಶ್ಯನ್ ಹೈಸ್ಕೂಲ ಮತ್ತು ಗವರ್ನಮೆಂಟ್ ಕಾಲೇಜ ಜೂನಿಯರ್ ಪಂಗಡದವರನ್ನು ಸೇಂಟ್ ಅಲೋಸಿಯಸ್ ಪಂಗಡದವರು ಸೋಲಿಸಿ ಈ ದಿನ ಕೆನರಾ ಹೈಸ್ಕೂಲ ಜೂನಿಯರ್ ಪಂಗಡದವರೊಡನೆ ಆಡತೊಡಗಿರುವರು

ಮದ್ರಾಸ್ ಗವರ್ನರರ ಸರ್ಕೀಟು ಕ್ರಮಪಟ್ಟಿಯು ಪ್ರಕಟಿಸೋಣಾಗಿರುವುದು —ಒಕ್ಟೋಬರ ತಾ ೧೬ರಲ್ಲು ಪಾಲಾಟಿಗೆ ತಲಪಿ ತಾ ೧೭ರಲ್ಲು ಕೊಲ್ಲೆಂಗೋಡಿಗೆ ಹೋಗಿ ತಾ ೧೭ನೇ ಸಾಯಂಕಾಲ ಪಾಲಾಟಿನ ಕೊಟ್ಟಾಲ್ಲಮಿಗೆ ಹೋಗಿ ಅಲ್ಲಿ ತಾ ೨೦ರ ವರೆಗೆ ತಡೆಯುವರು. ಗವರ್ನರ ಪ್ರಭುಗಳವರು ಅಂಬಸಮುದ್ರದಿಗೆ ಹೋಗಿ ಅಲ್ಲಿ ಹೊಸ ಹೈಸ್ಕೂಲಿನ ಪ್ರತಿಷ್ಟೆ ಮಾಡಿ ಹೈಸ್ಕೂಲ್ ಹೋಸ್ಟೆಲ್ ಕಟ್ಟಡಕ್ಕೆ ಶಂಕುಸ್ಥಾಪನೆಮಾಡುವರು. ಅನಂತರ ಕ್ವಿಲೋನ್ ಮಾರ್ಗವಾಗಿ ತಿರುವನಂತಪುರದಿಂದ ಕುಮಾರಿ ಭೂಶಿರಕ್ಕೆ ಹೋಗಿ ತಾ ೨೪ ಸಾಯಂಕಾಲ ಕ್ವಿಲೋನಿಗೆ ಹಿಂದಿರುಗುವರು. ಅನಂತರ ಸ್ಟೀಮ್ ಬೋಟಿನಲ್ಲಿ ಕೊಚ್ಚಿಗೆ ಹೊರಟು ತಾ ೨೫ರಲ್ಲು ಅಲ್ಲಿಗೆ ತಲಪಿ ೨ ದಿವಸ ತಡೆಯುವರು. ತಾ ೩೧ರಲ್ಲು ಕಣ್ಣಾನ್ನೂರಿಗೆ ಹೋಗಿ ಅದೇ ದಿವಸ ತಲಚೇರಿಗೆ ಹಿಂತಿರುಗುವರು. ನವಂಬರ ೨ರಲ್ಲು ಮಾಹೆಗೆ ಹೋಗುವರು. ತಾ ೩ರಲ್ಲು ತಳಿಪರಂಬಿನ ವ್ಯವಸಾಯ ಫಾರ್ಮನ್ನು ಸಂದರ್ಶಿಸುವರು. ಅಂದೇ ಸಾಯಂಕಾಲ ಮಂಗಳೂರಿಗೆ ತಲಪುವರು. ಮಂಗಳೂರಲ್ಲಿ ೩ ದಿವಸ ತಡೆದ ತಾ ೭ರಲ್ಲು ಪ್ರಭುಗಳವರು ಮಂಗಳೂರಿಂದ ಹೊರಟು ಮೂಡಬಿದ್ರೆ ಮಲ್ಕಿ ಉಡ್ಪಿ ಕಾರ್ಕಳ ವೇಣೂರನ್ನು ಸಂದರ್ಶಿಸಿ ತಾ ೧೦ರಲ್ಲು ಮಂಗಳೂರಿಗೆ ಹಿಂದಿರುಗುವರು. ತಾ ೧೦ನೇ ಸಾಯಂಕಾಲ ಮಂಗಳೂರಿಂದ ತೆರಳಿ ತಾ ೧೧ರಲ್ಲು ಮದ್ರಾಸಿಗೆ ತಲಪುವರು

ಇಲ್ಲಿಯ ಲೀಡಿಂಗ್ ಮತ್ತು ಸ್ಪ್ರಿಂಗ್ ಕಮಿಟಿಯ ಮೆಂಬರರೂ ಮಹಮ್ಮದೀಯರ ವೆಲ್ಫೇರ್ ಲೀಗ್ ಎಂಬ ಸಭೆಯ ಕಮಿಟಿ ಮೆಂಬರರೂ ಆಗಿದ್ದು ಮಂಗಳೂರಲ್ಲಿ ಹೆಸರು ಪಡೆದ ಸಾಹುಕಾರರಾದ ಜಾಫರ್ ಮೆಗ್ರಿಸೇಟ್ ಸಾಹೆಬರವರು ಪಕ್ಷವಾತ ರೋಗದಿಂದ ಈ ದಿನ ಬೆಳಿಗೆ ವಿಧಿವಶರಾದರೆಂತ ತಿಳಿಸಲು ವಿಷಾದಿಸುತ್ತೇವೆ

ಇಲ್ಲಿಯ ಜಪ್ಪು ಸೈಂಟ್‌ಜೊಸೆಫ್ ಸ್ಕೂಲಿನ ಸಿಲ್ವರ್ ಜುಬ್ಲಿ ಉತ್ಸವವು ಇದೇ ಕಳೆದ ತಾ ೨೭ರಲ್ಲು ಬಹು ವಿಜೃಂಭಣೆಯಿಂದ ಜರಗಿತು. ಆ ದಿನ ಅಲ್ಲಿಯ ಸುಮಾರು ೫೦೦ ಅನಾಥ ಮಕ್ಕಳಿಗೆ ಮೆಸ್ಸರ್ಸ್ ಸ್ಟೀವನ್ ಎಂಡ್ ಸನ್ಸರು ತಮ್ಮ ಸ್ವಂತ ಖರ್ಚಿಯಿಂದ ಬಿಸ್ಕುಟು ಹಂಚಿ ಸಂತೋಷಪಡಿಸಿದರು

ಇದೇ ಕಳೆದ ತಾ ೩೦ರ ವರೆಗೆ ಮಂಗಳೂರಲ್ಲಿ ೧೩೪.೮೧ ಇಂಚು ಮಳೆ ಬಿದ್ದಿತ್ತು. ಸರಾಸರಿ ೧೧೬.೭೦ ಇಂಚು ಮಳೆ ಮಾತ್ರ ಬೀಳಬೇಕಿತ್ತು

ಇದೇ ಕಳೆದ ತಾ ೨೫ರಲ್ಲು ದಕ್ಷಿಣಕನ್ನಡಾ ಜಿಲ್ಲೆಯ ಮತ್ತು ಕಣ್ಣಾನ್ನೂರ ಮಾಪಿಳ್ಳೆಯರು ಕಣ್ಣಾನ್ನೂರಲ್ಲಿ ಕೂಡಿಬಂದರು. ಈ ಸಭೆಗೆ ಕಣ್ಣಾನ್ನೂರ ರಾಜ ಸುಲ್ತಾನ ಅಹಮ್ಮದ್ ಅಲಿಯವರು ಅಧ್ಯಕ್ಷರಾಗಿದ್ದರು. ಚಿರಕಲ್ ತಹಸೀಲದಾರರು ಈ ಸಭೆಯ ಉದ್ದೇಶವನ್ನೂ ಮೆಸ್ಸರ್ಸ್ ಎಮ್ ಬಾವ ನೂಪೆನ್ ಮತ್ತು ಯಮ್ ಶಮ್ನಾಡ ಸಾಹೇಬರು ಸಾಮ್ರಾಜ ಸರಕಾರಕ್ಕೆ ಬಂದೊದಗಿರುವ ಈ ಸಂಕಷ್ಟದಲ್ಲಿ ನಮ್ಮ ಹಂಗೇನಾಗಿರಬೇಕೆಂಬುದನ್ನೂ ಸಭೆಯಲ್ಲಿ ವಿವರಿಸಿ ಹೇಳಿದರು. ಅನಂತರ ಯುದ್ಧ ಸಹಾಯ ಫಂಡಿಗೆ ಹಣ ಕೊಡಿಸುವ ಬಗ್ಗೆ ಒಂದು ಕಾರ್ಯನಿರ್ವಾಹಕ ಸಭೆಯು ಏರ್ಪಡಿಸಲ್ಪಟ್ಟಿತು. ಕೂಡಿದ್ದ ಸಭೆಯಲ್ಲಿ ೧೦೦೦ ರೂಪಾಯಿ ಜಮೆ ಆಯಿತು. ಕಣ್ಣಾನೂರ ರಾಜರವರು ತಮ್ಮ ವಂತಿಗೆಯನ್ನು ಸಭೆಯಲ್ಲಿ ಹಾಕದೆ ಬಾಕಿ ಇಟ್ಟಿರುವರು

ಡಿಸ್ಟ್ರಿಕ್ಟ ಕಲೆಕ್ಟರ ಆಫೀಸು:—ಕಲೆಕ್ಟರ ಆಫೀಸಿನ ಕರಸ್ಪೊಂಡೆಂಟ ಸೆಕ್ಷನಿನ ೧ನೇ ಕ್ಲಾರ್ಕರಾಗಿರುವ ಮ. ರಾ. [illegible] ನಾಥ ಭಂಡಾರ್ಕರಯವರು ಪ್ರಿವಿಲೆಜ್ ರಜೆಯಮೇಲಿರುವುದರಿಂದ ಮ. ರಾ. ಯು. ವೆಂಕಟಪ್ಪನವರು ರೂ. ೭೦ರ ೧ನೇ ಕರಸ್ಪೊಡೆಂಟ ಕ್ಲಾರ್ಕರಾಗಿಯೂ, ಮ. ರಾ. ಎನ್. ಕೃಷ್ಣಪ್ಪನವರು ರೂ ೬೦ರ ೧ನೇ ಆಕ್ಟಿಂಗ್ ರಿಕೋರ್ಡ ಕ್ಲಾರ್ಕರಾಗಿಯೂ ರಾ. ಎಮ್ ಕೃಷ್ಣ ಪಾಂಡುರಂಗ ಕಿಣಿ ಬಿ ಎ ಎಲ್. ಎಲ್. ಬಿರವರು ರೂ ೫೦ರ ಆಕ್ಟಿಂಗ್ ಹೆಡ್ ಅಡಿಟರಾಗಿಯೂ ಮೆ. ಸಿ ರುಸಾರಿಯೊರವರು ಕರಸ್ಪೊಂಡೆಂಟ್ ಸೆಕ್ಷನಿನ ೪ನೇ ಕ್ಲಾರ್ಕರಾಗಿಯೂ ರಾ ಎಮ್ ರಾಮಪ್ಪನವರು ೪ನೇ ಎಕೌಂಟೆಂಟರಾಗಿಯೂ, ರಾ. ಕೆ ನಾರಾಯಣ ಸೆಟ್ಟಿ ಕರಸ್ಪೊಂಡೆಂಟ ಸೆಕ್ಷನಿನ ೯ನೇ ಕ್ಲಾರ್ಕರಾಗಿಯೂ ಮೆ ಎಸ್ ಆರ್ ಡಿಸೋಜಸರು ಕರಸ್ಪೊಂಡೆಂಟ ಸೆಕ್ಷನಿನ ೧೧ನೇ ಕ್ಲಾರ್ಕರಾಗಿಯೂ ನೇಮಿಸಲ್ಪಟ್ಟಿರುವರು

ಉಪ್ಪಿನಂಗಡಿ ತಹಸೀಲದಾರ ಮೆ| ಬಿ ಎಸ್ ಅಲ್ಬುಕರ್ಕರವರಿಗೆ ಹಿಂದೆ ಕೊಟ್ಟ ರಜೆ ಕೂಡಿಸಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಹೆಚ್ಚಿಗೆ ೫ ತಿಂಗಳ ರಜೆ ಕೊಡೋಣಾಗಿರುವುದು

ಜಿಲ್ಲಾ ಕಲೆಕ್ಟರ ದೊರೆಗಳವರ ಸರ್ಕೀಟು ಕ್ರಮಪಟ್ಟಿ —ಒಕ್ಟೋಬರ ತಾ ೧ ಚರ್ವತ್ತೂರು ತಾ ೨ ಚರ್ವತ್ತೂರು ತಾ ೩-೪ ಕಾಸರಗೋಡು ತಾ ೫ ಮಂಗಳೂರ ತಾ ೯ ಬಂಟ್ವಾಳ, ತಾ ೧೦ ಸಿದ್ದಕಟ್ಟೆ ತಾ ೧೧ ೧೨ ಮೂಡಬಿದ್ರೆ ತಾ ೧೩ ೧೪ ಕಾರ್ಕಳ ತಾ ೧೫ ವೇಣೂರು ತಾ ೧೬-೧೭ ಬೆಳ್ತಂಗಡಿ ತಾ. ೧೮-೧೯ ೨೦ ೨೧ ಚಾರ್ಮಾಡಿ ತಾ ೨೨ ಬೆಳ್ತಂಗಡಿ ತಾ ೨೩ ಪೂಂಜಾಳಕಟ್ಟೆ ತಾ ೨೪ ಫರಂಗಿಪೇಟೆ ತಾ ೨೫ ಮಂಗಳೂರು

ಜರ್ಮನರ "ಎಮ್ಡೆನ್" ಕ್ರೂಜರ್ ನಾವೆಯು ಅರಬೀ ಸಮುದ್ರದಲ್ಲಿರುವುದು.

ಸಪ್ಟೆಂಬರ ತಾ ೨೬—೨೭ರಲ್ಲು ಜರ್ಮನರ 'ಎಮ್ಡೆನ್" ನಾವೆಯು ಹಿಂದೂಸ್ಥಾನದ ಪಶ್ಚಿಮ ಕರಾವಳಿಯನ್ನು ನುಗ್ಗಿ ಲಕದೀವಿಗಳ ಆಜುಬಾಜಿನಲ್ಲಿ "ಟೆಮೆರಿಕ್" "ಕಿಂಗ್‌ಲಡ್" "ರಿಬೇರಿಯ" "ಫ್ರೈಲ್" ಎಂಬ ಹೆಸರಿನ ನಾಲ್ಕು ಹಡಗಗಳನ್ನು ಮುಣುಗಿಸಿರುವುದು. ಅದಲ್ಲದೆ ಸರಕಾರದವರ ಕಲ್ಲಿದ್ದಲಿನ "ಬರ್‌ಸೆಕ್" ಎಂಬ ನಾವೆಯನ್ನೂ ಹಿಡಿದಿರುವುದು. ಈ ನಾವೆಗಳ ಕಲಾಸಿಗಳನ್ನೆಲ್ಲಾ "ಸ್ಪ್ರೈಫೆಡೆಲ್" ಎಂಬ ನಾವೆಯಲ್ಲಿ ಹಾಕಿರುವುದು. ಈ ನಾವೆಯು ತಾ. ೨೯ರಲ್ಲು ಕೊಲೊಂಬೊ ಬಂದರಕ್ಕೆ ಬಂದು ತಲಪಿರುವುದೆಂತ ಪ್ರಕಟವಾಗಿದೆ

ಬಂಗಾಳ ಅಖಾತವು ಇನ್ನೂ ಸುರಕ್ಷಿತವಾಗಿಲ್ಲವೆಂದು ಪ್ರಕಟವಾಗಿದೆ.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 260/1914.

ಸುಬ್ರಾಯ ಅಡಿಗಾ — ವಾದಿ.

ಶಿವರಾಮ ಕಲ್ಕುರಾ ಕೂಡಾ 5 ಜನರು — ಪ್ರತಿವಾದಿ

ಉಡುಪಿ ತಾಲೂಕು ಬ್ರಹ್ಮಾವರ ಮಾಗಣೆ ಮಟಪಾಡಿ ಗ್ರಾಮದಲ್ಲಿರುವ [illegible]ರಮಣ ಕಲ್ಕುರನ ಮಗ 1ನೇ ಪ್ರತಿವಾದಿ, ಶಿವರಾಮ ಕಲ್ಕುರರಿಗೆ ತಿಳಿಯಪಡಿಸುವದೇನಂದರೆ — 1877ನೇ ಇಸವಿ ಜೂನ್ 19ನೇ ತಾರೀಕಿನ ತಹಾ ದಸ್ತೈವಜದ ಶರ್ತ ಪ್ರಕಾರ ಗೌರಮ್ಮಗೆ ಸಿಕ್ಕತಕ್ಕ ಅಶನಾರ್ಥ ವಗ್ಯೆರೆ ಹಣಗಳು ಪಡೆಯುವ ಹಕ್ಕು ಪಡದ ವಾದಿ ಸುಬ್ರಾಯ ಅಡಿಗನು ಪ್ಲವಂಗ ಸಂವತ್ಸರದ ಲಾಗಾಯ್ತು ಪರಿಧಾವಿ ಸಂವತ್ಸರದ ವರೇಗಿನ ಅಶನಾರ್ಥದ ರೂ 430—0—0ಕ್ಕೆ ದಾವಾ ದಾಖಲು ಮಾಡಿದ್ದಾನೆ. ಅದು ಒಕ್ಟೋಬರ ತಾರೀಕು 8ಕ್ಕೆ ತನಖಿಗೆ ಇಟ್ಟಿರುತ್ತದೆ. ಆ ತಾರೀಕು ನೀವು ಸ್ವತಹಾ ಯಾ ವಕೀಲರ ಮುಖಾಂತರ ಹಾಜರಾಗಿ ಅಗತ್ಯವುಳ್ಳ ವ್ಯವಹರಣ ನಡಿಸಬಹುದು.

ಕುಂದಾಪುರ, ತಾ. 20-9-1914

G. Manjunathaya
Pleader for Plantiff



ಎಲಂಬಿಕ್ ವೆಜಿಟೆಬಲ್ ಟೊನಿಕ್ ಸಿರಪ್.

ಗಜಕರ್ಣದ ಮುಲಾಮು.

ಒಂದೆರಡು ಸಲ ಇದನ್ನು ಹಾಗಿಸುವಷ್ಟರಲ್ಲಿ ಈ ಮುಲಾಮಿನ ಯೋಗ್ಯತೆಯು ವ್ಯಕ್ತವಾಗುವುದು. ಈ ಮುಲಾಮನ್ನು [illegible] ತೆಗಿಯುವಾಗ ತಣ್ಣೀರನ್ನೇ ಉಪಯೋಗಿಸತಕ್ಕದು. ದಬ್ಬಿ[illegible] ಕ್ರಯ ರೂ. 0-6-0 ಮಾತ್ರ

ಮಂಗಳೂರು [illegible] ಎಸೋಶಿಯೇಶನ್,
[illegible], ಮಂಗಳೂರು

ಕಾಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿನ ಎಣ್ಣೆಯಾಗಿರುವದು. ಇದರಿಂದ ದೊರೆಯತಕ್ಕ ಲಾಭವಾದರೋ ಇದರ ಜಿಡ್ಡು ಎಣ್ಣೆಯು ಅಂಶವು ಶರೀರಕ್ಕೆ ಕ್ರಮವಾಗಿ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಅದರಿಂದ ಮಾಡಲ್ಪಟ್ಟ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಿರುವದರಿಂದ ಅವನ್ನು ಸೇವಿಸುವದರಿಂದ ಅತಿಸಾರವು ಆಗುತ್ತದೆ. ಅವರ ಅಂತಹ ಅಪಾಯಗಳಾದರು ಹಾನಿಯಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆವಶ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಫೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲ್ಲಿ ಮಾರಲ್ಪಡುವದು ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ ಊಲನ್ ಮಾರ್ಟ್, ಮಂಗಳೂರು,
ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,
ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ

೧ ಕುಟುಂಬಸಂಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0

೨ ಶತಮೂಲಿಕಾ ಅಮರಸಂಜೀವನಿ—ಈ ಟಾನಿಕ್ ದ್ರಾವಕವು ನಿಶ್ಶಕ್ತರಿಗೆ ಚೈತನ್ಯ [illegible] ಅಮೂಲ್ಯವನ್ನು ಕೊಡುತ್ತದೆ. ಬಾಟ್ಲಿ 1ಕ್ಕೆ [illegible]—0—0

ಬಾಲಸಂಜೀವನಿ—ಮಧುರ ಟಾನಿಕ್ ಇದಕ್ಕೆ ಬಾಲಕರಿಗೆ ಸಶಕ್ತರನ್ನಾಗಿ ಮಾಡಿ [illegible] ವರ್ಧನ ಶಕ್ತಿಯನ್ನು ಬೆಳೆಸುತ್ತದೆ. ಬಾಟ್ಲಿ 1ಕ್ಕೆ 0—12—0

೪ ವಸಂತ ಕುಸುಮಾಕರ—ಈ ಸುವಾಸಿಕ ತೈಲವು ಕೇಶವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪುಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮೆಯನ್ನು ಗುಣಮಾಡುತ್ತದೆ. ಬಾಟ್ಲಿ 1ಕ್ಕೆ 1—0—0

೫ ಸುದರ್ಶನಮಲಾಮು—ಈ ಸಿದ್ಧೌಷಧವು ಪೋಟಾಸ್ಯ ಇತ್ಯಾದಿ ಎಲ್ಲಾ ದುಷ್ಟ ವ್ರಣಗಳನ್ನು 7 8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0

೬ ಗರುಡಧ್ವಜ—ಇದು ಸರ್ಪ ವೃಶ್ಚಿಕ, ಜೇಡ, ಇಲಿ ಇತ್ಯಾದಿ ಸರ್ವ ಕ್ರಿಮಿ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0

೭ ಆನಂದವನವಿಲಾಸ—ಇದು ಪ್ಯಾಟೆಂಟ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧಕಲ್ಪ ಭೈಷಜ್ಯ ಪ್ರಯೋಗಗಳ ತಯಾರಿಸಿದ ಔಷಧ ಮಾತ್ರೆಗಳು, ಲೇಹ ಚೂರ್ಣಗಳು ತೈಲ ಘೃತಗಳು ಆಸವ ಆರಿಷ್ಟಗಳು ತಯಾರು ಇರುತ್ತವೆ. ಕ್ರಯವುಳ್ಳ ನಮ್ಮ ಕೆಟಲಾಗನ್ನು ತರಿಸಿಕೊಳ್ಳಿರಿ. ಏಜೆಂಟರು ಬೇಕು. ಹೆಚ್ಚು ಡಿಸ್ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಅಚ್ಚಾಗುತ್ತಲಿದೆ! ಅಚ್ಚಾಗುತ್ತಲಿದೆ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ಪಂಚಾಂಕೀ ಮರಾಠೀನಾಟಕವು ಈಗ ಅಚ್ಚಿನಲ್ಲಿದ್ದು, ಬರುವ ಆಗೋಸ್ತು ತಿಂಗಳ ಆಖೈರ ಒಳಗೆ ಪ್ರಕಾಶಿತವಾಗುವದು. ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕ ಜನರು ಈ ಸಂದರ್ಭವನ್ನು ಬಿಡಲಾಗದು. ಬೆಲೆ 10 ಆಣೆ. ಟ. ಹಾ. ಬೇರೆ.

ಜುಲೈ ಆಖೈರ ಒಳಗೆ ಈ ಕೆಳಗಿನ ವಿಳಾಸಕ್ಕೆ ಬರೆಕೊಂಡು, ಓರ್ಡರುಗಳನ್ನು ರಿಜಿಸ್ಟರ್ ಮಾಡುವ ಗ್ರಾಹಕರಿಗೆ 8 ಆಣೆ. ಟ. ಹಾ. ಬೇರೆ. ಹಣವನ್ನು ಮುಂಗಡವಾಗಿ ಪೋಸ್ಟೇಜು ಸ್ಟಾಂಪುಗಳ ದ್ವಾರಾ ಅಥವಾ ಮನಿಆರ್ಡರು ದ್ವಾರಾ ಕಳುಹಿಸಬೇಕು. ತ್ವರೆಮಾಡಿರಿ!!

ಕಲ್ಯಾಣಪುರ ಮಂಗೇಶರಾವ್,
ಕಲ್ಯಾಣಪುರ, ದ. ಕ.

ಮರೆಯ ಬ್ಯಾಡಿರಿ. ಮರೆಯ ಬ್ಯಾಡಿರಿ.

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮೀಷನ್ ದೊರೆಯುವದು.

ಅಪಾಯ ರೋಮಸಂಹಾರಿ. ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉರಿ, ಸೆಕೆ ಮುಂತಾದ ಬಾಧೆಗಳಿಲ್ಲವು.

ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು. ಮರೆಯ ಬ್ಯಾಡಿರಿ.

3 ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ಆಣೆ 14

3 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1-10-0 ಅಂಚೆ ಹಾಸಲು ಆ 4 ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ — ವಿ. ಎ. ಎಸ್. ಪಾಣಿ ಕಂಪೆನಿ.
ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

V. A. S. PANI,
No 3, Erulappen Street, Madras.

ಡಾಕ್ಟರ್ ನವರತ್ನರ ಕೇಶಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10 ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ಪನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಮುತ್ತೂರು, ದಿಂಡಿಗಲ್, ಬೆಂಗಳೂರು, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಶ್ಮೆ [illegible], ಸಾದಾ ಸೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ [illegible] ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯಾವಾಗಲೂ ಕ್ರಯಕ್ಕೆ ದೊರೆಯುತ್ತವೆ.

[illegible]
[illegible]
[illegible] ದ. ಕ.

Canarese Novels Etc.

ಕನ್ನಡ ಪುಸ್ತಕಗಳು.

ಮ॥ ರಾ॥ ರಾ॥ ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು

	ರೂ. ಆ.		ರೂ. ಆ.
ವಂಗವಿಜೇತ ಹೊಸ ನಾವಿಲ್	1—4	ಕಮಲಾ ಕಾಂತ ದ್ವಿ. ಮು	0—2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1—4	ಲೀಲೆ [ಸಮಾಜ ಚಿತ್ರ]	0—4
ಕಪಾಲಕುಂಡಲಿ ಡಿಟೋ 2ನೇ ಭಾಗ	1—8	ಮಾಲತಿ [ಅತಿ ಮನೋಹರ] ದ್ವಿ. ಮು.	0—3
ಸೀತಾರಾಮ (ಇತಿಹಾಸ)	1—8	ರಾಧಾರಾಣಿ [ಕಾದಂಬರಿ] ತೃ. ಮು	0—3
ವಿಷವೃಕ್ಷ ದ್ವಿ. ಮು.	1—4	ಯುಗುಳಾಂಗುಳೀಯ ,,	0—3
ದೇವೀ ಚೌಧುರಾಣಿ-ಡಿಟೋ	1—4	ಭ್ರಾಂತಿವಿಲಾಸ ,,	0—5
ರಾಜಸಿಂಹ-(ಇತಿಹಾಸ)	1—5	ಸೊಂದಮತಿ [ಸ್ತ್ರೀನೀತಿ]	0—2
ಕಪಾಲಕುಂಡಲ	0-13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0—2
ಮೃಣ್ಮಯಿ-ಡಿಟೋ 2ನೇ ಭಾಗ	1—1	ವೈಜ್ಞಾನಿಕ ಪ್ರಹಸನ [ನಕಲಿ]	0—4
ಕೃಷ್ಣಕಾಂತನ ಉಯಿಲು	1—0	ಚಿರತ್ನನಾಟಕರತ್ನ ಡಿಟೋ	0—7
ಮನೋರಮ [ಪತ್ತೇದಾರಿ ಕಥೆ]	1—0	ಚಿತ್ರವಿಚಿತ್ರಾವಳಿ [Tit Bits]	0—8
ಪರಿಮಳ-ಡಿಟೋ-ದ್ವಿ. ಮು	0-10	ನೀರದೆ [ಹೊಸ ಕಾದಂಬರಿ]	0—5
ಸಾಧನೆ. ಡಿಟೋ	0—8	ಭಾರತಮಹಿಳಾ [ಸ್ತ್ರೀನೀತಿ]	0—8
ಕೊಹಿನೂರು [ಇತಿಹಾಸ]	0-12	ಅಮೃತಪುಳಿನ [ನಾವಿಲ್]	0 11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0—3	ಇತ್ಯಾದಿ	

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ" ಪೂಜಾರ್ಹವಾಗಿದೆ"! ಬೆಲೆ 1ಕ್ಕೆ 3 ಆಣೆ 12ಕ್ಕೆ 1 ಉಚಿತ. ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು

	ರೂ. ಆ.		ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0—8	ನಿರ್ಭಾಗ್ಯಚಾಣಕ್ಯ [ಸ್ವತಂತ್ರಕಾದಂಬರಿ]	0—6
ಶ್ರೀ. ಕವಿಚರಿತೆ [ಪೂರ್ವಭಾಗ]	3—2	ಅನಂಗಸುಂದರಿ ಡಿಟೋ	0—8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0-10	ತಾರಾ ಸುಂದರಿ ಡಿಟೋ	0—8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0—6	ರಾಧಾಮಾಧವ ಡಿಟೋ	0—8
ಕಲಾನಾಥ ಡಿಟೋ	0—8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0—9
ಶೋಭನೆ [ಬಂಗಾಳಿ ನಾವಿಲ್]	0-12	ಪಶುವೈದ್ಯಸಂಗ್ರಹ ಡಿಟೋ ದ್ವಿ. ಮು	0—9
ಯಾಮಿನಿ [ಬಂಗಾಳೀ ನಾವಿಲ್]	0—3	ಧರ್ಮಪದವೆಂಬ ಬುದ್ಧಗೀತೆ	0-12
ಪ್ರಿಯಂವದೆ [ಪತಿವ್ರತಾ ಕಥೆ]	0—8	ಜೈಮಿನಿಭಾರತ [ಸಟೀಕಾ ಪ್ರಯೋಗ]	4—0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೋ	0—8	ಹರಿಕಥಾಮೃತಸಾರ ಡಿಟೋ	1—6
ಸನ್ಯಾಸಿ [ಹೊಸ ಕಾದಂಬರಿ]	0—6	ಚದುರಂಗಬೋಧಿನಿ	0—3
ಮೃತ್ಯು ಪರೀಕ್ಷೆ ಡಿಟೋ	0—2	ಸರ್ವೇಮ್ಯಾನ್ಯುಯಲ್	0—5
ಬೃಂದಾವನ ಡಿಟೋ	0—2	ನ್ಯಾಯದರ್ಪಣ [ಲಾ]	1—0
ಕುಸುಮನೋರಮ ಡಿಟೋ	0—2	ವ್ಯವಹಾರ ದೀಪಿಕೆ [ಲಾ]	3—0
ಮಾಲಿನಿ ಡಿಟೋ	0—2	ಶಾಕುಂತಲ ನಾಟಕ ದ್ವಿ. ಮು	0—9
ಪ್ರೇಮಪಿಪಾಸೆ ಡಿಟೋ	0—2	ಶೂರಸೇನಚರಿತ್ರೆ ನಾಟಕ ಡಿಟೋ	1—[illegible]
ವಿರಕ್ತಳಾದ ಸೌದಾಮಿನಿ ಡಿಟೋ	0—5	ಚಂಡಕೌಶಿಕ ನಾಟಕ ಡಿಟೋ	0-12
ಚಿತ್ರಕಳಾವತಿ ಡಿಟೋ	0—2	ರಾಮವರ್ಮ ಲೀಲಾವತೀ ನಾಟಕ	0—8
ಚಾತುರ್ಯವತಿ ಡಿಟೋ	0—2	ಪಾಂಚಾಲೀ ಪರಿಣಯ ನಾಟಕ	0-10
ವಸುಮತಿ ಡಿಟೋ	0—2	ಚಂಡೀಮದಮರ್ದನ ನಾಟಕ	0—5
ವಿಲಕ್ಷಣಕಿಶೋರಿ ಡಿಟೋ	0—2	ಪ್ರಬೋಧ ಚಂದ್ರೋದಯ ನಾಟಕ	0-10
ಪದ್ಮಿನಿ ಡಿಟೋ	0—2	ಭರ್ತೃಹರಿ ನಿರ್ವೇದ ನಾಟಕ	0—3
ಭಾನುಮತಿ ಡಿಟೋ	0—2	ನಿರುಪಮಾ [ನಾಟಕ]	0-12
ಸತೀರೋಹಿಣಿ ಡಿಟೋ	0—2	ಧ್ರುವವಿಜಯ [ನಾಟಕ]	0—4
ಸಂತಾಪಕ ಡಿಟೋ	0—4	ಸೀತಾಪರಿಣಯ [ನಾಟಕ]	0—4
ಚಂದ್ರಮತಿ [ಸ್ತ್ರೀನೀತಿ]	0—6	ಸೀತಾಸುವರ್ಣಮೃಗ [ನಾಟಕ]	0—12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ— [illegible] ಬೆಂಗಳೂರು ಸಿಟಿ.

ಶ್ರೀ ಬಸವರಾಜೇಂದ್ರವಿಜಯ.

ಪ್ರಸಿದ್ಧವಾದ ಬಸವಪುರಾಣದ ಸಾರಭೂತವಾದ ವಚನಗ್ರಂಥ. ಸುಂದರವಾದ ಮಾತುಗಳು, ಸುಲಭವಾದ ಸರಣಿ, ಭಕ್ತಿರಸ ಪ್ರಧಾನವಾದ ಕಥೆಗಳು, ಶಿವಶರಣರ ಲೀಲೆಗಳು, ವೀರಶೈವಮತದ ತತ್ವಗಳೂ ಸಹ ಅಡಕವಾಗಿರುವುವು. ಮಕ್ಕಳಿಗೂ ಅರ್ಥವಾಗುವಂತಹ ಮೃದುವಾದ ಮಾತುಗಳಿಂದ ಬರೆಯಲ್ಪಟ್ಟಿದೆ. ಆಂಗ್ಲಾಂಗಿಗಳಾದವರೆಲ್ಲರೂ ಇದನ್ನು ಓದಿ ಆಚರಿಸಿ ತಮ್ಮ ಮತಧರ್ಮವನ್ನರಿತು ಧನ್ಯರಾಗುವರೆಂದು ನಂಬಿರುತ್ತೇವೆ. ಬೆಲೆ ಸುಲಭ. 0—12—0. ದಪ್ಪ ಕಾಗದ. ಸುಂದರವಾದ ಮುದ್ರಣ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿವೆ.

ದಾರಣೆ ಸುಲಭ! ಅಲೀಗರ್ ಬೀಗಗಳು ದಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು. ಒಂದರ ಬೀಗದಕೈ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗೂ ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ್ರು	1	2	3	4	5
	0—12—0	1—15—0	1—4—0	1—10—0	..

ಆರು ಚಕ್ರಗಳಿರುವ ಬೀಗಗಳು

1—2—0 1—8—0 2—4—0 3—[illegible]—0 3—8—0

ವಿಲ್ಲರ್ ಬೀಗಗಳು

0—4—[illegible] 0—5—0 [illegible]—6—0 0—8—0 0—10—0

ಟ್ರಂಕುಗಳಿಗೆ ಹಾಕುವ ಕೊಂಡಿ ಒಳ್ಳೆಸಿರುವ ಬೀಗಗಳಿಗೆ 0—13—0

ಶ್ರೀ ೮, ಅನೇ ನಂಬರು ಬೀಗಗಳನ್ನು ಬ್ಯಾಗುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ಕೊಡಲಾಗುತ್ತೆ. ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ ಬೀರುಗಳಿಗೂ ಹಾಕುವ ೬ ಚಕ್ರಗಳಿರುವ ಬೀಗಗಳಿಗೆ 1—8—0, 1—12—0

ವಿಳಾಸ— ಎಚ್. ಎಸ್. ರಾವ್ ಆಂಡ್ ಬ್ರದರ್ಸ್,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಲ್ಪ ಬೆಲೆಗೆ ಉತ್ತಮ ಪುಸ್ತಕಗಳು.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಷನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಅಪೂರ್ವ ಪುಸ್ತಕಗಳು

ಎಲ್ಲರಲ್ಲಿಯೂ ಇರಬೇಕಾದ್ದು. ಜಮಾ ಖರ್ಚಿನ ಪದ್ಧತಿ 12 ಆಣೆ. ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ-ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿಸುತ್ತದೆ.

ಆಂಗ್ಲಭಾಷಾ ಪ್ರಕಾಶಿಕಾ. ಐದು ಭಾಗವು ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ರೂ 1—8—0. ಇದನ್ನು ಗುರುವಿನಂತೆ ಭಾವಿಸಿ

ವೈದ್ಯಸಾರ ಸಂಗ್ರಹ. ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ 3.

ಆರ್ಯಕೀರ್ತಿ.	0—10—0	ಶುಕಸಪ್ತತಿ ...	2—0—0
ಹನುಮದ್ವಿಲಾಸ ..	0—8—0	ಕಣಿಗಲು ರಾಮಾಶಾಸ್ತ್ರಿಗಳವರ ಚರಿತ್ರೆ ...	1—0—0
ಶಾಕುಂತಲ ನಾಟಕ .	0—8—0	ಸುಮತಿ ಮದನ ಕುಮಾರರ ಚರಿತ್ರೆ I ...	0—8—0
ಸ್ತ್ರೀ ಧರ್ಮನೀತಿ .	0—8—0	,, II ...	0—7—0
ಶೋಭನೆ	0—8—0	ಶಿವಗೀತೆ ...	0—6—0
ಚಂದ್ರಕಳಾ	0—4—0	ಪಾಕಶಾಸ್ತ್ರ... ...	0—8—0
ಕಲಾನಾಥ ...	0—6—0	ಸನಾತನಧರ್ಮ ದೀಪಿಕೆ ...	1—0—0
ಶಿವಾನಂದಲಹರಿ ..	0—6—0	ಬಾಲರಾಮಾಯಣ ...	0—4—0
ಪ್ರಶ್ನೋತ್ತರ ಲೆಖ್ಖಬೋಧಿನಿ	1—4—0	ಕಥಾಮಂಜರಿ ...	0—6—0
ವಿಷವೃಕ್ಷ	1—4—0		
ದುರ್ಗೇಶ ನಂದಿನಿ ...	1—4—0		
ಮುದ್ರಾಮಂಜೂಷ ...	1—8—0		

ದುಷ್ಟ ಚತುಷ್ಟಯ್ಯ, ನರಬಲಿ, ನೀಲಾಂಬರಿ ವಿಷಮುಹೂರ್ತ, ಮಾಯಾವಿನಿಯ ಅತ್ಯಾಚಾರ. ಪ್ರತಿಯೊಂದು ಪ್ರತಿಯೂ 2 ಆಣೆ.

ವಿಳಾಸ:— ವಿದ್ಯಾಸಾಗರ ಬುಕ್ ಡಿಪ್ಪೋ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮಗ್ರಿಗಳು ಬೇಕಾದರೂ, **ಪಿ. ಡಿ. ನೀಲಕಾಂತ ಎಂಡ್ ಕೊ. ಬೆನಾರಿಸ್ ಸಿಟಿ** ಎಂಬ ವಿಳಾಸಕ್ಕೆ ಬರಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸ್ಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು. ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ಬಿಕರಿಯಾಗುವ ಬೆನಾರಿಸಿನ ಉಡುಪು ತೊಡುವಗಳನ್ನು ತರಿಸುತ್ತಿರುವರು ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು ಸೀದಾ ನಮಗೆ ಬರೆದು ಒಡವೆಗಳನ್ನು ತರಿಸಿಕೊಳ್ಳುವದರಿಂದ ನಿಮಗೆ ಸೇಕಡಾ 25ರಂತೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಒರ್ಡರುಗಳನ್ನು ವಿ ಪಿ ಮೂಲಕ ಕಳುಹಿಸಿಕೊಡುವೆವು ಸಂದೇಹಪಡಬೇಡಿರಿ (1) ಜರಿತಾರಿನ ರೇಶ್ಮೆ, ನಾನಾ ತರದ ಒಡವೆಗಳು, ಶೀರೆಗಳು, ರವಕೆ ಕಣಗಳು, ಅಂಗಿ ವಸ್ತ್ರ ಇತ್ಯಾದಿ (2) ಕಂಚಿನ ಅಸಲಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮಗ್ರಿಗಳು (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳೆಲ್ಲವುಗಳಿಗೂ ಬರೆಯಬಹುದು.

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸಲಾಗುವುದು

ನಮ್ಮ ವಿಳಾಸ — ಪಿ ಡಿ ನೀಲಕಾಂತ ಎಂಡ್ ಕೊ,
ಬೆನಾರಿಸ್ ಸಿಟಿ

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಸ್ ತಿಮ್ಮಪ್ಪಯ್ಯನವರಿಂದ ಕನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದ ಲೋಕೋಕ್ತಿಗಳಿಂದ ಯುಕ್ತವಾಗಿದೆ ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಕಥೆ. ಮೆಟ್ರಿಕ್ಯುಲೇಶನ್ ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ್ ಪುಸ್ತಕವಾಗಿ ಇಡಲಿಕ್ಕೂ ಯೋಗ್ಯವಾಗಿದೆ ಕ್ರಯ 0—8—0

ವಿಳಾಸ —

ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಸ್ ತಿಮ್ಮಪ್ಪಯ್ಯ,
ಮಂಗಳೂರು

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

IIನೇ ಸ್ಟೆಂಡಾರ್ಡ ಗಾಯೀಡ	0—3—0
IIIನೇ ,,	0—4—0
IVನೇ ,,	0—6—0
3ನೇ ಪುಸ್ತಕದ ಶಬ್ದಾರ್ಥ ಪ್ರಶ್ನೋತ್ತರ ವ್ಯಾಕರಣ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ)	0—2—6
4ನೇ ಪುಸ್ತಕದ ಶಬ್ದಾರ್ಥ	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು	0—1—6
3ನೇ ದರ್ಜೆಯ ಭೂಗೋಳಶಾಸ್ತ್ರ 1ನೇ ಭಾಗ	0—3—0
3ನೇ ದರ್ಜೆಯ ದಕ್ಷಿಣ ಕನ್ನಡ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧಿನಿ ಇದರಲ್ಲಿ ವೃತ್ತಿಗಳೂ ಕಥೆಗಳೂ, ಅಭಿನಯದ ಹಾಡುಗಳೂ ಇರುತ್ತವೆ	0—1—6
ಗಣಿತಸಾರ ಎಂಬ ಮಗ್ಗಿ ಕೋಷ್ಟಕಗಳ ಪುಸ್ತಕ	0—1—0
ಬಾಲಶಿಕ್ಷೆ	(ಅಚ್ಚಿನಲ್ಲಿದೆ)
ಒಂದನೆಯ ಪುಸ್ತಕ	(ತಯ್ಯಾರಿಯಲ್ಲಿವೆ.)
ಎರಡನೆಯ ,,	
ಮೂರನೆಯ ,,	
ನಾಲ್ಕನೆಯ ,,	

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಕಳುಹಿಸಲ್ಪಡುವುವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಶನ್ ಕೊಡಲಾದೀತು.

ವಿ. ಲಕ್ಷ್ಮಣರಾವ್,
ಸ್ಕೂಲ್ ಮಾಸ್ತರ, ಉಡುಪಿ

ಯೋಗ್ಯತೆಯಲ್ಲಿ ಹಿರಿದು! ... ಬೆಲೆಯಲ್ಲಿ ಕಿರಿದು!

ಹನೂಮತ್ಪರವಾದ ರಾಮಾಯಣ ಕಥೆಯನ್ನೊಳಗೊಂಡ

ಹನೂಮದ್ರಾಮಾಯಣ.

ಹನೂಮಜ್ಜನ್ಮ, ಶ್ರೀರಾಮನ ಋಷ್ಯಮೂಕಾಗಮನ, ಸುಗ್ರೀವಸಖ್ಯ, ಲಂಕಾದಹನ, ಯುದ್ಧಪ್ರಕರಣ, ಮೈರಾವಣಸಂಹಾರ, ಮೊದಲಾದ ರಾಮಾಯಣ ವೃತ್ತಾಂತಗಳನ್ನು ಸುಲಭ ಶೈಲಿಯ ವ್ಯಾಕರಣಬದ್ಧವಾದ ಕಂದಪದ್ಯಗಳಿಂದ ಅಭಿವರ್ಣಿಸುವ ಅತ್ಯುತ್ತಮವಾದ ಪ್ರಾಚೀನ ಕರ್ಣಾಟಕ ಭಾಷೆಯ ಪ್ರೌಢಗ್ರಂಥ! ಬಂಧವು ಬಂಧುರ; ಮುದ್ರಣವು ಶುದ್ಧ!! ಪ್ರೌಢ ವಿದ್ಯಾಲಯಗಳಲ್ಲಿ ಪಠ್ಯಪುಸ್ತಕವಾಗಿರಿಸಲ್ಪಡಲು ಯೋಗ್ಯವಾಗಿದೆ, ಸಾಮಾನ್ಯರ ಪುಸ್ತಕಭಂಡಾರವನ್ನಲಂಕರಿಸಲೂ ಉಪಯುಕ್ತವಾಗಿದೆ!! ಸರ್ವಸಂಗ್ರಾಹ್ಯವಾಗಿದೆ!!!—ಇಂತಹ ಉದ್ಗ್ರಂಥದ ಬೆಲೆ ಕೇವಲ ಮಾತ್ರ ರೂ. 2—1—0 ಗ್ರಾಹಕರುತ್ತರೆವಾಡಿ! ತರಿಸಿಕೊಳ್ಳಿ!! ಪ್ರೋತ್ಸಾಹಿಸಿ!!!

ವಿಳಾಸ — ಎಮ್. ಶಿವರಾಮಯ್ಯ,
ಕನ್ನಡ ಪಂಡಿತ, ಹೈಸ್ಕೂಲು, ಉಡುಪಿ

ಆಚಾರ ದರ್ಪಣ.

ಈ ಲೇಖನದಲ್ಲಿ ಸಂಸಾರದ ಲೌಕಿಕ ಮತ್ತು ಪಾರಮಾರ್ಥಿಕ ಮಾರ್ಗಗಳೊಳಗೆ ಶಾಂತತ್ವವನ್ನು ವಿಶದವಾಗಿ ತೋರಿಸಿಯದೆ ಬ್ರಾಹ್ಮಣರು ನಡೆಸತಕ್ಕ ಬ್ರಹ್ಮಚರ್ಯ, ಗೃಹಸ್ಥಾಶ್ರಮಧರ್ಮ, ಸಂಧ್ಯಾವಂದನೆ, ಹೋಮ, ದೇವರ ಪೂಜೆ ಪಿತೃಕಾರ್ಯಗಳು, ಮಡಿಮೈಲಿಗೆಯ ವಿಚಾರಗಳು, ಇವುಗಳ ಪ್ರಯೋಜನವನ್ನು ಮನಸ್ಸಿಗೆ ಖಚಿತವಾಗುವ ರೀತಿಯಲ್ಲಿ ತೋರಿಸಿಯದೆ ವಿದ್ಯಾರ್ಥಿಗಳಲ್ಲಿ ಮಾತಾಪಿತೃಭಕ್ತಿ ಗುರುಭಕ್ತಿ, ಧರ್ಮಶ್ರದ್ಧೆ, ದೇವರಲ್ಲಿ ಭಕ್ತಿ, ದೇಶಾಭಿಮಾನಗಳು ವೃದ್ಧಿಯಾಗಿ, ಸುಗುಣಗಳು ದೃಢವಾಗಿ ನೆಲಸಿ ಅವರು ಹ್ಯಾಗೆ ಲೋಕೋಪಕಾರಿಗಳಾಗಬಹುದೆಂಬುದು ಸಿದ್ಧಾಂತವಾಗಿ ತೋರಿಸಿಯದೆ. ಧರ್ಮಾಭಿಮಾನವುಳ್ಳ ಸದ್ಗೃಹಸ್ಥರು ತಮ್ಮ ರಕ್ಷಣೆಯೊಳಗಿರುವ ಯುವಕರು ಈ ಲೇಖನದಿಂದ ಪ್ರಯೋಜನ ಹೊಂದುವಂತೆ ನೋಡಿಕೊಳಬೇಕಾಗಿ ವಿನಂತಿ ಕ್ರಯ ಆಣೆ 4. ಟಪ್ಪಾಲು ಹಾಸಲು ಬೇರೆ.

ವಿಳಾಸ:—

ಉಡುಪಿ	ಮಂಗಳೂರು.
ಮ॥ ಪಾವಂಜೆ ಗುರುರಾವ್,	ಪಾವಂಜೆ ಗೋಪಾಲಕೃಷ್ಣ
ಶ್ರೀಮನ್ಮಧ್ವಸಿದ್ಧಾಂತಗ್ರಂಥಾಲಯ.	ಬ್ರಾಹ್ಮಣ ಕೇರಿ.

ಸನ್ 1915 ಇಸವಿಯ

ಪಾಕೆಟ್ ಡೈರಿ.

ಶ್ರೀ ಸೀತಾರಾಘವ



ಪಾಕೆಟ್ ಡೈರಿಗಳು.

ಮೊದಮೊದಲೇ ಬರೆದು ತರಿಸಿಕೊಳ್ಳಿ:—1. ಸಣ್ಣ ಸೈಜು ಸಾದಾ ಡೈರಿಗೆ 4 ಆಣೆ 2 ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 6 ಆಣೆ, 3. ದೊಡ್ಡ ಸೈಜು ಸಾದಾ ಡೈರಿಗೆ 6 ಆಣೆ, ದೊಡ್ಡ ಸೈಜು ಪೆನ್ಸಿಲು ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 8 ಆಣೆ ಟಪ್ಪಾಲು ಖರ್ಚು ಬೇರೆ. ಒಂದೇ ಸಲ 10 ಡೈರಿ ತರಿಸಿಕೊಂಡವರಿಗೆ ಒಂದು ಡೈರಿ ಇನಾಮು 20 ರೂಪಾಯಿಗಿಂತ ಹೆಚ್ಚು ಡೈರಿ ತರಿಸಿಕೊಳ್ಳುವವರಿಗೆ ರೂಪಾಯಿಗೆ $2\frac{1}{2}$ ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ ವಿವರಣೆ—(1) ಈ ವರೆಗೆ ತಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಹಸನಾದ ಕಾಗದದಲ್ಲಿ ಪ್ರತಿ ಪೇಜಿಗೂ ರೂಲು ಹಾಕಿಸಿ ಸೊಗಸಾದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿಸಿದೆ (2) ದೇಹಸೌಖ್ಯ ವಿಚಾರದಲ್ಲಿ ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕಬಾಧಕಗಳನ್ನು ತಕ್ಕಮಟ್ಟಿಗೆ ವಿವರಿಸಿದೆ. ಪಂಚಾಂಗ, ಕ್ಯಾಲೆಂಡರ್, ರಾಹುಕಾಲ ಗುಳಿಕಕಾಲಗಳು, ಸಂವತ್ಸರ ಫಲಗಳು, ಗ್ರಹಣ, ಜಾತಕರ್ಮ ಮೊದಲುಗೊಂಡು ಷೋಡಶ ಕರ್ಮಕ್ಕೆ ಬೇಕಾದ ಲಗ್ನಾದಿಗಳು, ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ (3) ಕೋರ್ಟು ಫೀಸು ಆಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪು ಆಕ್ಟು, ಇವುಗಳಲ್ಲಿ ಮುಖ್ಯವಾಗಿ ಬೇಕಾಗುವ ಮತ್ತಾವ ಡೈರಿಯಲ್ಲೂ ಹೇಳದಿರುವಷ್ಟು ಹೊಸ ವಿಷಯಗಳನ್ನು ಸೇರಿಸಿದೆ. (4) ಮದರಾಸು ಮತ್ತು ಸದರ್ನ್ ಮರಾಟಾ ರೈಲ್ವೇಗಳ ಚಾರ್ಜು, ರೈಲು ಹೊರಡುವ ಕಾಲ, ಅಳತೆ, ತೂಕ, ಗವರ್ನಮೆಂಟ್ ರಜಾ ದಿನಗಳು, ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, ಸೇಕಡಾ ಹಣದ ಬಡ್ಡಿ, ತಲಬು ಜಂತ್ರಿಪಟ್ಟಿ ಸಹಾ ಇರುತ್ತದೆ. ದೋಬಿ ಲೆಕ್ಕ, ಹಾಲಿನ ಲೆಕ್ಕ, ಮುಖ್ಯವಾದ ವಿಷಯ, ಒಟ್ಟು ಜಮಾಖರ್ಚು ಇವುಗಳಿಗೆ ಜಾಗವನ್ನು ಬಿಟ್ಟಿರುತ್ತದೆ. ಈ ಹೊಸ ಪ್ರಯತ್ನಕ್ಕೆ ದೇಶಾಭಿಮಾನಿಗಳ ಪ್ರೋತ್ಸಾಹ ಅತ್ಯವಶ್ಯ.

ನಿಮ್ಮ ಹೆಸರು ವಿಳಾಸಗಳು ಸ್ಪಷ್ಟವಾಗಿರಲಿ

ನಮ್ಮ ವಿಳಾಸ:—ಶ್ರೀ ಸೀತಾರಾಘವ ... ಶಾಲಾ, ... ಉಡುಪಿ

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 9ನೇ ಒಕ್ಟೋಬರ 1914

ಯುದ್ಧಫಂಡಿಗೆ ನಾವು ಯಾಕೆ ವಂತಿಗೆಯನ್ನು ಹಾಕಬೇಕು?

ಇಂಗ್ಲಂಡ್ ದೇಶದ ರಾಜರಿಗೂ ಜರ್ಮನಿಯ ಅರಸರಿಗೂ ಗಂಟಿಕ್ಕಿದ ಯುದ್ಧವು ಯೂರೋಪು ಖಂಡದಲ್ಲಿ ನಡೆಯುತ್ತಿರುವಾಗ ಹಿಂದೂಸ್ಥಾನದಲ್ಲಿದ್ದ ನಾವೇಕೆ ಆ ಯುದ್ಧಫಂಡಿಗೆ ವಂತಿಗೆಯನ್ನು ಕೊಡಬೇಕು? ನಮ್ಮ ಜಿಲ್ಲೆಯವರ ರಾಜಭಕ್ತಿಯು ಅಪಾರವಾಗಿದ್ದರೂ ಅವರು ಮುಕ್ತಹಸ್ತದಿಂದ ಫಂಡಿಗೆ ಹಣವನ್ನು ಕೊಡುವವರಾದರೂ ಈ ಪ್ರಶ್ನೆಯ ಉತ್ತರವನ್ನು ಆಲೋಚಿಸುವುದು ತಕ್ಕದ್ದಾಗಿದೆ.

"ನಮ್ಮ ಮಹಾರಾಜರಷ್ಟು ಐಶ್ವರ್ಯವಂತರು ಯಾರೂ ಇಲ್ಲ; ನಮ್ಮ ಹಿಂದೂಸ್ಥಾನ ಸರಕಾರದ ಧನವೆಲ್ಲಾ ಅವರ ಕೈಯಲ್ಲಿದೆ" ಇತ್ಯಾದಿಯಾದ ಹಳೆಯ ಮಾತುಗಳು ಮುದೀ ಬಾಯಿಗಳಿಂದ ಈಗಲೂ ಹೊರಡುವದುಂಟು. ಇದಕ್ಕೆ ಕಾರಣವೇನೆಂದರೆ: ಪೂರ್ವಕಾಲದಲ್ಲಿ ಈ ದೇಶವನ್ನು ಆಳುತ್ತಿದ್ದ ರಾಜರು ಪ್ರಜೆಗಳಿಂದ ಎತ್ತಿದ ಕರತೆರಿಗೆಗಳನ್ನು ಸ್ವೇಚ್ಛೆಯಾಗಿ ವ್ಯಯಮಾಡುತ್ತಿದ್ದರು. ಹಾಗೆ ಮಾಡುವಾಗ ಅವರ ಕೈತಡೆಯುವುದಕ್ಕೆ ಬಲವಾದ ಕಾಯಿದೆಗಳಿರಲಿಲ್ಲ; ಅವರ ದುರ್ವ್ಯಯವನ್ನು ಕುರಿತು ಎದುರಾಡಲು ಶಕ್ತಿವಂತರು ಇರಲಿಲ್ಲ. ಅಂಥಾ ನಿರಂಕುಶ ಪ್ರಭುತ್ವವು ಈ ಕಾಲದಲ್ಲಿ ಇಲ್ಲ. ಈಗ ಹಿಂದೂಸ್ಥಾನದ ಪ್ರಜೆಗಳಿಂದ ಎತ್ತಿದ ಹಣವೆಲ್ಲಾ ನಮ್ಮ ಹಿತಕ್ಕಾಗಿಯೇ ವಿನಿಯೋಗಿಸಲ್ಪಡುತ್ತದೆ. ಅದರಲ್ಲಿ ಒಂದು ಕಾಸನ್ನು ಕೂಡಾ ಪೋಲು ಮಾಡುವುದಕ್ಕೆ ನಮ್ಮ ಚಕ್ರವರ್ತಿಯವರಿಗೂ ಅಧಿಕಾರವಿಲ್ಲ. ಸರಕಾರದ ಪರ್ಯಾವಧಿ ವೆಚ್ಚಕ್ಕೆ ಬೇಕಾದಷ್ಟೇ ಹಣವನ್ನು ಪ್ರಜೆಗಳಿಂದ ಎತ್ತಿದರೆ ಅದು ತಾನೆ ಸರಿಯಾದ ತೆರಿಗೆ; ಅದಕ್ಕಿಂತಲೂ ಹೆಚ್ಚು ಧನವನ್ನು ಸೆಳೆಯುವ ರಾಜನೇ ಪ್ರಜೆಗಳ ಹೊಟ್ಟೆಬಡಿಯುವ ಅರಸನು. ಹಿಂದೂಸ್ಥಾನದಲ್ಲಿ ನಮ್ಮ ಸರಕಾರದವರು ನಮ್ಮ ಭದ್ರತೆಗೂ ಈ ರಾಜ್ಯದ ಶಾಂತತೆಗೂ ಸಾಕಾದಷ್ಟೇ ಹಣವನ್ನು ತೆರಿಗೆಯ ರೂಪವಾಗಿ ಸ್ವೀಕರಿಸುವರು. ಈ ಹಣವು ಸರಕಾರದ ನಿತ್ಯ ಖರ್ಚಿಗೆ ಸಾಲುವದೇ ಹೊರತು ಇಂಥಾ ಘೋರವಾದ ಯುದ್ಧಕಾಲದಲ್ಲಿ ಸಾಕಾಗದು; ಅದು ಯುದ್ಧಕ್ಕಾಗಿ ತೆಗೆದುಕೊಂಡದ್ದೂ ಅಲ್ಲ; ಪೂರ್ವಕಾಲದಲ್ಲಿ ಹಿಂದೂಸ್ಥಾನದ ರಾಜರು ಯುದ್ಧಪ್ರಸಂಗದಲ್ಲಿ ಬೇಕುಬೇಕಾದಂತೆ ಪ್ರಜೆಗಳಿಂದ ಕರವೆತ್ತುತ್ತಿದ್ದರು. ಈಗ ಅಂಥಾ ಘಟನೆಯು ಜರಗಲಾರದು.

ಹಿಂದೂಸ್ಥಾನವು ಇಂಗ್ಲಿಷ್ ಸಾಮ್ರಾಜ್ಯ ದೇಹದಲ್ಲಿ ಒಂದು ಅಂಗವಾಗಿದೆ. ಈ ಅಂಗಕ್ಕೆ ಇತರರಿಂದ ಯಾವ ಬಗೆಯ ನೋವಾಗದಂತೆಯೂ ಬಾಧೆ ಬಾರದಂತೆಯೂ ಇಂಗ್ಲಾಂಡು ಅದನ್ನು ಹಲವು ಉಪಾಯಗಳಿಂದ ರಕ್ಷಿಸುತ್ತದೆ. ಇಂಗ್ಲಾಂಡಿನ ಮಹಾ ನೌಕಾಸೇನೆಯು ಹಿಂದೂಸ್ಥಾನದ ಗಟ್ಟಿಯಾದ ಬೆಂಬಲವು. ಈ ನೌಕಾಸೈನ್ಯದ ಖರ್ಚಿನಲ್ಲಿ ಒಂದೇ ಒಂದು ಪೈಯಾದರೂ ಹಿಂದೂಸ್ಥಾನದ ಸರಕಾರದಿಂದ ಹೋಗುವದಿಲ್ಲ. ಈ ಹಡಗುಪಡೆಯನ್ನು ಇಟ್ಟಿರುವುದಕ್ಕೆ ಬೇಕಾದ ಲಕ್ಷೋಪಲಕ್ಷ ದ್ರವ್ಯವನ್ನು ಇಂಗ್ಲಾಂಡಿನವರೇ ಕೊಡುತ್ತಲಿದ್ದಾರೆ. ಹೀಗೆ ಹಲವು ವರುಷಗಳಿಂದ ಈ ನೌಕಾಸೇನೆಯಿಂದ ಹಿಂದೂಸ್ಥಾನಕ್ಕೆ ಪ್ರಾಪ್ತವಾದ ಪ್ರಾಣರಕ್ಷಣೆಗೂ ಶಾಂತತೆಗೂ ಪ್ರತಿಯಾಗಿ ಹಿಂದೂಸ್ಥಾನವು ಈ ವರೆಗೆ ಏನು ಕೊಟ್ಟಿದೆ?

ಬಲವಾದ ನೌಕಾಸೇನೆಯು ಇದ್ದುದರಿಂದಲೇ ಹಡಗುಗಳು ಈ ದೇಶದ ಸರಕನ್ನು ಹೇರಿಕೊಂಡು ದೂರಕ್ಕೆ ಸಾಗಿಸಿ, ವ್ಯಾಪಾರವು ಹೇರಳವಾಗಿ ಬೆಳದಿದೆ. ಧನಲಕ್ಷ್ಮಿಯೂ ವ್ಯಾಪಾರಮಾರ್ಗದಲ್ಲಿಯೇ ನಡೆಯುತ್ತಲಿರುವಳು. ನಮ್ಮ ದೇಶದಲ್ಲಿ ಹಲವರು ಈ ವ್ಯಾಪಾರದ ಆಶ್ರಯದಿಂದಲ್ಲವೇ ಸಂಪನ್ನರಾದರು? ಇಂಥಾ ವ್ಯಾಪಾರವಿಸ್ತರಣೆಗೆ ಇಂಗ್ಲಾಂಡಿನ ನೌಕಾಸೇನೆಯಲ್ಲವೇ ಮೂಲಕಾರಣವು?

ಕಾಡುಜಾಗದಲ್ಲಿ ಯಾರೂ ಮುಟ್ಟದೆ ಬಿಟ್ಟುಬಿಟ್ಟ ದಾಮಪತ್ರೆ, ಕಾಸರಕನ ಬೀಜ ಮೊದಲಾದ ಉತ್ಪತ್ತಿಗಳಿಗೆ ಬೆಲೆಯು ಬಂದದ್ದು ಯಾತರಿಂದ? ಅವು ಪರದೇಶಗಳಿಗೆ ರವಾನೆಯಾಗುವದರಿಂದಲ್ಲವೇ? ಕೊಬ್ಬರಿ, ಮೆಣಸು, ಗೇರುಬೀಜ ಈ ಸರಕುಗಳಿಗೆ ಬೆಲೆ ಏರಿ ಹಲವರು ಹಣವಂತರಾದರು. ಇಂಗ್ಲಾಂಡಿಗೆ ಯುದ್ಧ ಸಂಭವಿಸಿದ್ದರೆ ಹಿಂದೂಸ್ಥಾನದ ವ್ಯಾಪಾರವು ಹ್ಯಾಗೆ ಕಲಕೇಗಾಗುತ್ತದೆಂಬದು ವರ್ತಕರ ಅನುಭವಕ್ಕೆ ಈಗ ಬಾರದೆ ಇರಲಿಕ್ಕಿಲ್ಲ. ಈ ವರೆಗೆ ಇಂಗ್ಲಾಂಡು ನಮ್ಮ ವ್ಯಾಪಾರದ ಕೈಹಿಡಿದು ನಮ್ಮ ಕೈಯಲ್ಲಿ ಹಣ ಕೂಡಿಸಿದ್ದಕ್ಕೆ ಪ್ರತಿಯಾಗಿ ಶಕ್ತ್ಯನುಸಾರ ಕೊಡುವದು ವ್ಯಾಪಾರಸ್ಥರ ಧರ್ಮವಲ್ಲವೇ?

ಹಿಂದಿನ ಕಾಲದಲ್ಲಿ ಉದ್ಯೋಗಸ್ಥರಿಗೆ ಸಂಬಳವು ಈಗಿನಂತೆ ಹೆಚ್ಚಾಗಿರಲಿಲ್ಲ. ದೊಡ್ಡದೊಡ್ಡ ಅಧಿಕಾರಿಗಳಿಗೆ ಕೂಡಾ ನೂರು ರೂಪಾಯಿ ಎಂದರೆ ಭಾರಿ ಸಂಬಳವಾಯಿತು. ಈಗ ಎಷ್ಟೋ ಮಂದಿ ದೇಶೀಯ ನೌಕರರು ಈ ಸರಕಾರದ ದಯೆಯಿಂದ ಮೂರು ನಾಲ್ಕು ಸಾವಿರ ರೂಪಾಯಿಯ ವರೆಗೆ ಸಂಬಳವನ್ನು ಪಡೆಯುವದಿಲ್ಲವೇ? ಈ ಉಪಕಾರ ಸ್ಮರಣೆಯನ್ನು ತೋರಿಸುವುದಕ್ಕೆ ಇದಕ್ಕಿಂತಲೂ ಬೇರೊಂದು ಸುಕಾಲವುಂಟೇ?

ಹಿಂದಿನ ರಾಜರು ಧರ್ಮಾಂಧರಾಗಿ ಅನ್ಯಮತಸ್ಥರನ್ನು ಪೀಡಿಸಿ, ಅವರ ದೇವಾಲಯಗಳನ್ನು ಕೆಡವಿ, ಅವುಗಳೊಳಗಿನ ಧನಸಂಚಯವನ್ನು ತಮ್ಮ ಬೊಕ್ಕಸಕ್ಕೆ ಸೆಳೆದುಕೊಳ್ಳುತ್ತಿದ್ದರು. ಹಿಂದೂಸ್ಥಾನದಲ್ಲಿ ಹಲವು ಜಾತಿಯವರಿದ್ದರೂ, ಬೇರೆಬೇರೆ ಮತಗಳಿದ್ದರೂ ಇಂಗ್ಲಿಷ್ ಮಹಾರಾಜರು ಆ ವಿಷಯದಲ್ಲಿ ನಮ್ಮ ಗೋಜಿಗೆ ಬಾರದೆ ಮತಸಂಬಂಧವಾಗಿ ತಾಟಸ್ಥ್ಯವನ್ನು ತೋರಿಸಿದ್ದರಿಂದಲೇ ಮಠಗಳಲ್ಲಿ ಆಯಾ ಜಾತಿಯ ಸ್ವಾಮಿಯವರು ನಿರಾತಂಕವಾಗಿ ಪೂಜೆಮಾಡುವರು; ಗುಡಿಗಳಲ್ಲಿ ಪೂಜಾರಿಯು ನಿರಾಯಾಸವಾಗಿ ಭೂತದ ಆವೇಶವನ್ನು ಮೈಮೇಲೆ ತೋರಿಸುವನು. ಈ ಪ್ರಕಾರವಾಗಿ ನಾವು ಧರ್ಮನಿಷ್ಠರಾಗಿ ನಡೆಯುವಂತೆ ನಮ್ಮ ನಮ್ಮ ಮತಗಳನ್ನು ಹಾಳುಮಾಡದೆ ಇದ್ದದ್ದಕ್ಕೆ ಪ್ರತಿಯಾಗಿ ನಾವು ತೋರಿಸುವ ಕೃತಜ್ಞತೆಯೇನು?

ಎಲ್ಲೆಲ್ಲಿಯೂ ಈಗ ಗ್ರಾಮಶಾಲೆಗಳಿವೆ. ಹಿಂದಿನ ಕಾಲದಲ್ಲಿದ್ದಂತೆ ವಿದ್ಯಾಭ್ಯಾಸಕ್ಕೆ ಈಗ ಯಾವದೊಂದು ಅಡಚಣೆಯಿಲ್ಲ "ಹಳ್ಳಿಹಳ್ಳಿಗಳಲ್ಲಿಯೂ ಶಾಲೆಗಳನ್ನು ತೆರೆದು, ಅವುಗಳಲ್ಲಿ ಹಿಂದೂಸ್ಥಾನದ ಮಕ್ಕಳು ವಿದ್ಯಾದಾನವನ್ನು ಪಡೆದು, ಮುಂದೆ ತಮ್ಮ ತಮ್ಮ ಮನೆಗಳನ್ನು ಸದ್ವರ್ತನದಿಂದ ಬೆಳಗಿಸಬೇಕೆಂಬದೇ ನಮ್ಮ ಅಭೀಷ್ಟವಾಗಿದೆ"—ಹೀಗಲ್ಲವೇ ನಮ್ಮ ಮಹಾರಾಜರು ಡಿಲ್ಲಿಯ ಕಿರೀಟಧಾರಣದಲ್ಲಿ ನಮಗೆ ಅಭಯವಿತ್ತು ವಿದ್ಯಾಭಿವೃದ್ಧಿಯನ್ನು ಉಂಟುಮಾಡಿದರು? ಅಂದಿನಿಂದಲ್ಲವೇ ಎಷ್ಟೋ ಬಡ ಹುಡುಗರು ಶಿಕ್ಷಣವನ್ನು ಪಡೆಯುತ್ತಲಿದ್ದಾರೆ? ಆ ಉತ್ತರಕ್ಕೆ ನಮ್ಮ ಪ್ರತ್ಯುತ್ತರವೇನು? ಈ ಉಪಕಾರವನ್ನು ನೆನೆಸುವವನು ಉಡಿಯನ್ನು ಬಿಚ್ಚಿ ಪಟ್ಟಿಯಲ್ಲಿ ವಂತಿ ಹಾಕಲು ಹಿಂಜರಿಯುವನೇ?

ತಲೆಗೆ ಪೆಟ್ಟು ತಾಗಿದರೆ ಕೈ ಆಡಲಾರದು. ಇಂಗ್ಲಾಂಡಿಗೆ ನೋವಾದರೆ ನಮಗೆ ಸಂಪತ್ತಿ ಉಂಟೇ, ಶಾಂತಿಯುಂಟೇ, ಸುಖವುಂಟೇ? ಇದಕ್ಕಾಗಿಯೇ ಹಲವು ಮಂದಿ ಹಿಂದೂ ಸೈನಿಕರು ಜೀವದ ಆಸೆ ಇಲ್ಲದೆ, ಯೂರೋಪದ ಮೈದಾನುಗಳಲ್ಲಿ ಕಾದಾಡುತ್ತಲಿದ್ದಾರೆ. ಇವರು ನಮ್ಮ ಪ್ರಾಣಗಳನ್ನು ಉಳಿಸುವದಕ್ಕಾಗಿ ತಮ್ಮ ಪ್ರಾಣಗಳನ್ನರ್ಪಿಸುತ್ತಲಿದ್ದಾರೆ. ಹೀಗಿರಲು ಯುದ್ಧದಲ್ಲಿ ಗಾಯಗೊಂಡವರ, ರಣರಂಗದಲ್ಲಿ ಹತ್ತಹಸ್ತರಾಗಿ ಮಲಗಿದವರ ಹೆಂಡತಿಮಕ್ಕಳ ಕಣ್ಣೀರನ್ನು ಒರಸಿ ಅದಷ್ಟು ಸಂತೈಸುವುದು ನಮ್ಮ ಧರ್ಮವಲ್ಲವೇ?

ಪುರಾತನ ಕಾಲದಿಂದಲೂ ಭರತಖಂಡವು ಧಾತೃತ್ವದ ತವರುಮನೆಯೆಂದು ಖ್ಯಾತಿ ಹೊಂದಿದೆ. ಮನೆಗೆ ಬಂದ ಭಿಕ್ಷುಕನಿಗೆ ಒಂದು ಹಿಡಿ ಅಕ್ಕಿಯನ್ನಾದರು ನೀಡದ ಲೋಭಿಯು ನಮ್ಮಲ್ಲಿಲ್ಲ. ಬಲಿ, ಶಿಬಿ, ಮಯೂರಧ್ವಜ ಮೊದಲಾದವರ ಚರಿತ್ರೆಗಳನ್ನು ಕೇಳಿ, ಆ ಮಹನೀಯರೇ ಆದರ್ಶಪುರುಷರೆಂದು ಭಾವಿಸುವಂಥಾ ನಾವು ಈಗ ಸುಮ್ಮನೆ ಇರುವದು ಸರಿಯಲ್ಲ. ನಮ್ಮ ಲೋಭತ್ವದಿಂದ ನಮ್ಮ ಹಿರಿಯರ ಮುಖಕ್ಕೆ ಮಸಿ ಹಚ್ಚುವದು ನಮ್ಮ ಪಾಲಿಗೆ ಬರಬಾರದಷ್ಟೆ.

ವಾಚಕರೇ, ಬಂಧುವಾಚಕರೇ, ಮನಸ್ಸಿನಲ್ಲಿ ಕೊಂಕದಿರಿ. ಕವಡಿಯಾದರು ಸರಿ, ಕೋಟಿಯಾದರೂ ಸರಿ, ಕೊಟ್ಟುಬಿಡಿ. ದಶಾವತಾರದ ಆಟದಲ್ಲಿ ಲವಕುಶರು ಹುಟ್ಟಿದರೆಂದು ಗೆರಟೆಯನ್ನು ತಿರುಗಿಸುವ ವಾಲ್ಮೀಕಿಯ ವೇಷದಲ್ಲಿದ್ದ ಆಟದವನು "ಹಾಲು ಬೆಣ್ಣೆ ಕೊಡಿರವ್ವಾ, ಹಾಲು ಬೆಣ್ಣೆ ಇಲ್ಲದವರು ದುಡ್ಡುದುಗ್ಗಾಣಿ ಕೊಡಿರವ್ವಾ" ಎಂದು ಮೊರೆ ಇಡಲು, ಬಡ ಹಳ್ಳಿಯವನಾದರೂ ಮೂರು ಪೈ ನೀಡುವಾಗ, ಯುದ್ಧ ಸಮಾಚಾರವನ್ನು ದಿನೇ ದಿನೇ ಓದಿಕೊಳ್ಳುವ ನಾವು ಇಂಥಾ ಸತ್ಕಾರ್ಯಕ್ಕಾಗಿ ಗಂಟು ಬಿಚ್ಚುವುದು ಒಂದು ದೊಡ್ಡ ವಿಷಯವೇ? ದಾನಮಾಡುವವನಿಗೆ ಇದಕ್ಕಿಂತಲೂ ಅನುಕೂಲವಾದ ಸಂದರ್ಭವು ಬೇರೊಂದಿಲ್ಲ. ಪುಣ್ಯವನ್ನು ಸಂಪಾದಿಸುವವನಿಗೆ ಇದಕ್ಕಿಂತಲೂ ಬೇರೊಂದು ಸುಲಭವಾದ ಸುಮುಹೂರ್ತವಿಲ್ಲ. ಎಲೇ ವಾಚಕರೇ, ವಂತಿ ಕೊಡಬೇಕೆಂಬ ಬಲಾತ್ಕಾರವಿಲ್ಲ. ರಾಜಭಕ್ತಿ, ದೇಶವಾತ್ಸಲ್ಯ, ಬಾಂಧವಪ್ರೀತಿ, ಇಷ್ಟಪ್ರಾಪ್ತಿ, ಉಪಕಾರಸ್ಮರಣೆ ಇವೆಲ್ಲವೂ ಹಿಂದೂಸ್ಥಾನದಲ್ಲಿ ಹೊರಹೊಮ್ಮುತ್ತಲಿದೆ. ಹೀಗಿರಲು ನಮ್ಮ ಜಿಲ್ಲೆಯವರು ಕೃತಜ್ಞತೆಯನ್ನು ತೋರಿಸುವುದರಲ್ಲಿ ಯಾಕೆ ಹಿಂದಾಳಾಗಬೇಕು? ಓ, ಮಿತ್ರ ವಾಚಕರೇ, ನೀವಾಗಿಯೇ ಕೊಡುಗೈಯಾಗಿ ವಂತಿಗೆ ಎತ್ತುವ

"ವರು ಬಂದ ಕಾಲಕ್ಕೆ | ಕರೆದು ದಾನವ ಮಾಡು;
ಪರಿಣಾಮವದಕ್ಕು ಇದವಕ್ಕು ಕೈಲಾಸ |
[illegible] ಸರ್ವಜ್ಞ ||"

ನಮ್ಮ ಮಹಾರಾಜ ಚಕ್ರವರ್ತಿಯವರು ರಣರಂಗಕ್ಕೆ ಹೋದ ಭಾರತೀಯ ಸೇನಿಕರಿಗೆ ಕಳುಹಿಸಿದ ಸಂದೇಶವು.

ಬ್ರಿಟಿಷ ಸಾಮ್ರಾಜ್ಯದ ಯುದ್ಧದಲ್ಲಿ ಕಾದಾಡುವದಕ್ಕಾಗಿ ಹಿಂದೂಸ್ಥಾನದಿಂದ ಕಳುಹಿಸೋಣಾದ ಇಂಡಿಯನ್ ಸೈನಿಕರನ್ನು ಕುರಿತು ನಮ್ಮ ಮಹಾರಾಜ ಚಕ್ರವರ್ತಿಯವರು ಕೆಳಗಿನ ಜಾಹೀರುನಾಮೆಯನ್ನು ಕೊಟ್ಟಿರುತ್ತಾರೆ —

"ಸೈನಿಕರೇ, ಸೇನಾನಾಯಕರೇ, ನಮ್ಮ ರಾಜ್ಯದ ಮೇಲೆ ನಿರ್ದಯದಿಂದ ದಂಡೆತ್ತಿ ಬಂದ ಮಹಾ ಶತ್ರುವಿಗೆ ವಿರೋಧವಾಗಿ ಕಾದಾಡಿ, ನಮ್ಮ ಇಂಡಿಯನ್ ಸೈನಿಕರು ಈ ಬ್ರಿಟಿಷ್ ಸಾಮ್ರಾಜ್ಯದ 'ಇಜತ್ತನ್ನು' ಕಾಪಾಡುವರೆಂದಾಗಿ ನಾನು ನಿರೀಕ್ಷಿಸಿದ್ದೇನೆ. ಧೀರರೂ ಸ್ವಾಮಿಭಕ್ತರೂ ಆದ ನೀವು ನನ್ನ ಸಾಮ್ರಾಜ್ಯದ ಸರ್ವ ಭಾಗಗಳಿಂದಲೂ ಒಂದಿದ್ದ ಇತರ ನನ್ನ ಸೈನಿಕರೊಡನೆ [illegible] ಹೆಗಲಿಗೆ ಹೆಗಲು ಕೊಟ್ಟು ಕಾದಾಡಿ ನಾನ ನಿಮ್ಮಲ್ಲಿ ಇಟ್ಟ ಈ ಪವಿತ್ರವಾದ ವಿಶ್ವಾಸಕಾರ್ಯವನ್ನು ನಡಿಸಿಕೊಡುವದಕ್ಕಾಗಿ ನೀವು ನನ್ನ [illegible] ನನಗೆ ತಿಳಿದೇ ಇದೆ ನೀವೇ ನನ್ನ ಚಿಂತನಗಳಲ್ಲಿಯೂ ನನ್ನ ಪ್ರಾರ್ಥನೆಗಳಲ್ಲಿಯೂ [illegible] ಇರುವಿರಿ ಎಂಬದನ್ನು ಸ್ಥಿರವಾಗಿ ಇಟ್ಟುಕೊಳ್ಳಿರಿ [illegible] ವಿಶ್ವವನ್ನು ಕೊಡುವೆನು ನಮ್ಮ ಹಿಂದೂಸ್ಥಾನದ ಸೈನ್ಯದ ಕೀರ್ತಿಯೂ [illegible] ನಿಮ್ಮ ಕೈಯಲ್ಲಿದೆ ಆ ಸೈನ್ಯದ ಧೀರತೆಯ ಮತ್ತು ಕ್ಷಾತ್ರತೇಜಸ್ಸಿನ ಉಜ್ವಲವಾದ ಶೌರ್ಯಗಳನ್ನು ಪುನವಂತವಾದ ಮಹಿಮೆಯನ್ನು ಇನ್ನೂ ಇನ್ನೂ ಬೆಳಗಿ [illegible] ಈ [illegible] ನಿಮಗೆ ವಿಶ್ವವನ್ನು ಕೊಡುತ್ತೇನೆ

ಜರ್ಮನ್ ಸಾಮ್ರಾಜರು

ಜರ್ಮನ್ ರಾಜರಾದ ಎರಡನೇ ವಿಲ್‌ಹೆಲ್ಮರು [illegible] ರಲ್ಲಿ ಹುಟ್ಟಿದರು. ಹಿಂದುಸ್ಥಾನವನ್ನು [illegible] ವಿಕ್ಟೋರಿಯಾ ಚಕ್ರವರ್ತಿನಿಯವರು ಇವರ ಮಾತಾಮಹಿ [illegible] ನಮ್ಮ [illegible] ಚಕ್ರವರ್ತಿಯವರ ಇವರಿಗೆ ಮತ್ತಿನ [illegible] ತಂದೆಯ ಸೋದರಿಯ [illegible] ಇವರ ತಂದೆಯಾದ ಫ್ರೆಡರಿಕ ಎಂಬವರು ಇವರ ವಿದ್ಯಾಭ್ಯಾಸಕ್ಕಾಗಿ [illegible] ವಿದ್ವತ್ತಿಕೆ ಯಾಗಲಿ ಪ್ರತಿಭೆಯಾಗಲಿ ತೋರಲಿಲ್ಲ [illegible], ಇವರಲ್ಲಿ ಅಪಾರವಾದ ಒಂದು ಸಾಮರ್ಥ್ಯವಿತ್ತು [illegible] ಹಟವೊಂದಿತ್ತು ಈ ಹಟ ಸಾಧನೆಯಲ್ಲಿ ಯಾವದೊಂದು [illegible] ಎಂದರೂ, ಅವನ್ನು ಲಕ್ಷ್ಯಿಸದೆ, ಹಿಡಿದ ಕೆಲಸವನ್ನು ಸಾಧಿಸ [illegible] ವ್ಯಕ್ತವಾಗಿತ್ತು [illegible] ರಲ್ಲಿ [illegible] ವಿಲ್‌ಹೆಲ್ಮರು [illegible] ತಿರಿ ಕೊಂಡನು. ಆಗ ಇವರ ತಂದೆಯಾದ ಫ್ರೆಡರಿಕ್ [illegible] ವರ್ಷ ವಯಸ್ಸು ವಿಲ್‌ಹೆಲ್ಮರ ಮರಣಾನಂತರ ಫ್ರೆಡ್ರಿಕನು ಪಟ್ಟವನ್ನೇರಿ ಮೂರು ತಿಂಗಳೊಳಗ ಕಾಲಾಧೀನವಾದನು. ಆ ಫ್ರೆಡ್ರಿಕನು ಕೊಂಚ ಕಾಲ ರಾಜ್ಯವಾಳಿದರೂ ಆತನಿಗ ದುಃಖ ತಪ್ಪಲಿಲ್ಲ ಈ ಫ್ರೆಡ್ರಿಕ್ ರಾಜನಿಗೂ [illegible] ಕೋಶಾಧ್ಯಕ್ಷನಾದ ಬಿಸ್ಮಾರ್ಕ್ ಪ್ರಭುವಿಗೂ ಸರಿ ಬೀಳಲಿಲ್ಲ [illegible] ಕಾಲದ [illegible] ಯುವರಾಜನಾದ ಎರಡನೇ ವಿಲ್‌ಹೆಲ್ಮರು ಮುದಿ ರಾಜನ [illegible] ಹಾಕಿಕೊಳ್ಳದೆ ಬಿಸ್ಮಾರ್ಕನ ಬೆನ್ನು ಹಿಡಿದನು ತಂದೆಯು [illegible] ಸ್ವಭಾವದವನು, ಅದಲ್ಲದೆ ಇಂಗ್ಲಿಷ್ ರಾಣಿಯಾದ ವಿಕ್ಟೋರಿಯಾ ಚಕ್ರವರ್ತಿನಿಯ [illegible] ವ ದಿವಮಾಡಿಕೊಂಡಿದ್ದರಿಂದ ಇಂಗ್ಲಿಷ್ ಜನರಲ್ಲಿ ಆತನಿಗೆ ವಿಶ್ವಾಸವಿತ್ತು ಆತನ [illegible] ಸುಖಮಯವಾಗಿರಲಿಲ್ಲ. ಆತನು ಹಾಸಿಗೆ ಹಿಡಿದ [illegible] ಯುವರಾಜನು ಜರ್ಮನ್ ಡಾಕ್ಟರರೇ ಚಿಕಿತ್ಸೆಯನ್ನು ಮಾಡಬೇಕೆಂದಾಗಿ ಹಟಹಿಡಿದನು ಇದಕ್ಕೆ ತಾಯಿಯು ಒಪ್ಪಿಕೊಳ್ಳಲಿಲ್ಲ. ಇವೇ ಮುಂತಾದ ಮನಃಸ್ತಾಪಗಳು ತಂದೆಯವರ ಮರಣಾನಂತರವೂ ಮಗನ ಮನಸ್ಸಿನಿಂದ ಆರಿಹೋಗಲಿಲ್ಲ

ವಿಲ್‌ಹೆಲ್ಮರಿಗೆ [illegible] ರಲ್ಲಿ ಪಟ್ಟಾಭಿಷೇಕವಾಯಿತು, ಆಗ ಅವರಿಗೆ [illegible] ವರ್ಷ ವಯಸ್ಸು. ಪಟ್ಟಕ್ಕೆ ಬಂದ ಕೂಡಲೇ ಅವರು ತನ್ನ ತಂದೆಯಿಂದ ತಳ್ಳಿಹಾಕಲ್ಪಟ್ಟ ಮಂತ್ರಿಯನ್ನು ಕರೆತರಿಸಿ ಅವನನ್ನು ಅಧಿಕಾರಸ್ಥಾನದಲ್ಲಿ ಕುಳ್ಳಿರಿಸಿದರು. ತಂದೆಯ ಹೆಸರಿನಲ್ಲಿ ಕಟ್ಟಿದ ಅರಮನೆಯ "ಫ್ರೆಡ್ರಿಕ್‌ವಿಲಾಸ" ಎಂಬ ಹೆಸರನ್ನೇ ತೊಡೆದುಬಿಡುವಂತೆ ಆಜ್ಞೆ ಮಾಡಿದರು. ಅದು ಅಲ್ಲದೆ ತನ್ನ ತಂದೆಯ ಪ್ರತಿಕಕ್ಷಿಯಾಗಿದ್ದ ಬಿಸ್ಮಾರ್ಕ ಎಂಬ ಮಂತ್ರಿಯನ್ನು ಸಂಭಾವನೆ ಮಾಡಿ, ತನ್ನ ಮಾರ್ಗದರ್ಶಿಯನ್ನಾಗಿ ಇಟ್ಟುಕೊಂಡರು. ಇಂಥಾ ವರ್ತನದಿಂದ ಮಗನಿಗೂ ತಾಯಿಗೂ ಸರಿಬೀಳದೆ ಒಬ್ಬರನ್ನೊಬ್ಬರು ನೋಡುವದೇ ಅಶಕ್ಯವಾಯಿತು. ಮಗನಲ್ಲಿದ್ದ ಮಾತೃಭಕ್ತಿಯೂ ಪಟ್ಟಾಭಿಷೇಕದ ಜಲದಲ್ಲಿ ತೇಲಿಹೋಯಿತು.

ವಿಲ್‌ಹೆಲ್ಮರು ಯುವರಾಜರಾಗಿದ್ದಾಗ ಬಿಸ್ಮಾರ್ಕ [illegible] ಕೆಲಸವಾದ್ದು ಅವರ ಗರಡಿಯಲ್ಲಿ ಆಡಿದವರಾದ್ದರಿಂದ, ಪಟ್ಟಕ್ಕೆ ಬಂದ ತರುವಾಯ ಆ ಪ್ರಖ್ಯಾತನಾದ ಅಮಾತ್ಯನ ಮೇಲೆ ಅವರಿಗೆ ವಿಶ್ವಾಸವೂ, ಅಭಿಮಾನವೂ ತಪ್ಪಲಿಲ್ಲ. ಕ್ರಮೇಣ ಸಿಂಹಾಸನವನ್ನು ಅಲಂಕರಿಸುತ್ತಾ ಬರುವಷ್ಟಕ್ಕೆ ಅದರ ಅಡಿಯಲ್ಲಿ ಕೈಕಟ್ಟಿ ನಿಲ್ಲುವ ಮಂತ್ರಿಯು ರಾಜ ಸೇವಕನೆಂಬ ದುರಭಿಪ್ರಾಯವು ತಲೆಗೆಹತ್ತಿತು; ರಾಜದಂಡವನ್ನು ಕೈಯಿಂದ ಬೀಸುವಷ್ಟಕ್ಕೆ ತನ್ನಲ್ಲಿ ಅಡಗಿಕೊಂಡಿದ್ದ ರಾಜತ್ವದ ಗರ್ವವು ಉದ್ರೇಕವಾಯಿತು. ಇದಕ್ಕೆ ಸರಿಯಾಗಿ ಬಿಸ್ಮಾರ್ಕನ ಪೂರ್ವದ್ವೇಷಿಕರು ರಾಜನ ಮನಸ್ಸನ್ನು ಕೆಡಿಸಿಬಿಟ್ಟರು ಪರಸ್ಪರ ಮನಕ್ಲೇಶದ ಬೀಜವು ಮೊಳೆಯುವದಕ್ಕೆ ಪ್ರಾರಂಭವಾಯಿತು

ಈ ವೈಷಮ್ಯವು ರಾಜ್ಯಕಾರ್ಯದಲ್ಲಿ ತಲೆದೋರಿತು. ರುಶ್ಯವನ್ನು ಒಡನೆ ಸೇರಿಸಿಕೊಂಡು ಫ್ರಾನ್ಸನ್ನು ಬಹಿಷ್ಕಾರ ಹಾಕುವುದೇ ಬಿಸ್ಮಾರ್ಕ ಮಂತ್ರಿಯ ರಾಜತಂತ್ರವು ಇದಕ್ಕಾಗಿ ಆತನು ರುಶ್ಯದೊಡನೆ ಒಪ್ಪಂದವನ್ನು ಮಾಡಿದನು ಈ ಒಪ್ಪಂದದ ಅವಧಿಯು [illegible] ರಲ್ಲಿ ಮುಗಿಯಲು, ಪುನಃ ಆ ಸಂಧಿಯನ್ನು ಆತನು ಬೆಳಿಸುವ [illegible] ಕೈಸರರ ಮನಸ್ಸಿಗೆ ಈ ಒಪ್ಪಂದವು ಸೇರಲಿಲ್ಲ ಈ ಒಡಂಬಡಿಕೆಯು [illegible] ರಲ್ಲಿ ಜರ್ಮನಿಯು ಆಸ್ಟ್ರಿಯಕ್ಕೆ ಕೊಟ್ಟ ಮಾತಿಗೆ ವಿರೋಧವೆಂದು [illegible] ಮನಸ್ಸಿನಲ್ಲಿ ಬಿದ್ದ ಛಿದ್ರವು ದೊಡ್ಡ ಬಿರುಕಾಗಿ ಹೋಯಿತು ಮಂತ್ರಿಗಳೆಲ್ಲಾ ಬಿಸ್ಮಾರ್ಕನ ಪರಿಮುಖವಾಗಿ ಮಾತಾಡುವುದಕ್ಕೆ ಬದಲಾಗಿ ತನ್ನೊಡನೆಯೇ [illegible] ಕೊಳ್ಳಬೇಕೆಂದು ಆಜ್ಞೆಮಾಡಿದನು. ಒಂದು ದಿನ ಒಬ್ಬ ಮಂತ್ರಿಯು ರಾಜ್ಯ [illegible] ಮೇಲೆ ಬಿಸ್ಮಾರ್ಕನ ಅರಮನೆಗೆ ಹೋಗಿ, ಮಂತ್ರಾಲೋಚನೆಯನ್ನು [illegible] ಸಮಾಚಾರವನ್ನು ಕೇಳಿ, ಕೈಸರರು ಅದಕ್ಕೆ ತಕ್ಕ ಉದಾಹರಣೆಯನ್ನು ಬಿಸ್ಮಾರ್ಕನಿಗೆ ಕೇಳಿದರು. ಬಿಸ್ಮಾರ್ಕನು ರಾಜನ ಆಜ್ಞೆಯನ್ನು ಲಕ್ಷಿಸದೆ ಸುಮ್ಮನಾದುದನ್ನು ಕಂಡು ಕೈಸರರು ರೇಗಿ ಬಿದ್ದು, ಬಿಸ್ಮಾರ್ಕನ ಮನೆಯನ್ನು ನುಗ್ಗಿ ಕೋಪಾವೇಶದಿಂದ ಮಾತಾಡಿದರು. "ನನ್ನ ಮನೆಗೆ ಯಾರು ಬರಲಿಕ್ಕೂ ನನ್ನೊಡನೆ ಯಾರಿಗೂ ಮಾತಾಡಲಿಕ್ಕೂ ನಿಮ್ಮ ಅಧಿಕಾರವನ್ನು ನಾನು ಕೇಳಬೇಕೆಂತಿಲ್ಲ" ಎಂದು ಬಿಸ್ಮಾರ್ಕನು [illegible] ಉತ್ತರ ಕೊಟ್ಟನು ತಕ್ಷಣವೇ ಕೈಸರರು ಬಿಸ್ಮಾರ್ಕನಿಗೆ ರಾಜಿನಾಮೆ ಕೊಡುವ [illegible] ತಂತಿ [illegible], ಮಂತ್ರಿ ಶಿರೋಮಣಿಯು ತನ್ನ ಅಧಿಕಾರವನ್ನು ಬಿಟ್ಟು ತೆರಳಿದನು. "ಈ ದೇಶಕ್ಕೆ ಒಬ್ಬನೇ ಯಜಮಾನನು, ಆ ಅಧಿಪತಿಯು ನಾನೇ. ನನ್ನ [illegible] ಬೇರೊಬ್ಬನನ್ನು ಇರಗೊಡಿಸಲಿಲ್ಲ, ಬೇರೊಬ್ಬನನ್ನು ಇರಗೊಡಿಸಲೊಲ್ಲೆ" [illegible] ಕೈಸರರು [illegible]. ಈ ರೀತಿಯಾಗಿ [illegible] ವರ್ಷಗಳ ವರೆಗೆ ಜರ್ಮನಿ ಸಾಮ್ರಾಜ್ಯವನ್ನು ಕಟ್ಟುವದರಲ್ಲಿ ಬೆವರು ಸುರಿದ ಬಿಸ್ಮಾರ್ಕ ಮಂತ್ರಿಯು ಆಸ್ಥಾನದಿಂದ [illegible] ತರುವಾಯ ಕೈಸರರು ತಾನೇ ರಾಜನೌಕೆಯ ಚುಕ್ಕಾಣಿಯನ್ನು [illegible] ಕರ್ಣಧಾರನಾಗಿ ನಡಿಸ ತೊಡಗಿದರು

ತನ್ನ ಸ್ವೇಚ್ಛಾ ಮಾರ್ಗದಲ್ಲಿ ಅಡ್ಡ ಬರುತ್ತಲಿದ್ದ ಬಿಸ್ಮಾರ್ಕನನ್ನು ಕಿತ್ತು ಹಾಕಿದ ತರುವಾಯ ಕೈಸರರಿಗೆ ಮುಂದಿನ ಮಾರ್ಗವು ಸುಗಮ್ಯವಾಗಿಯೂ ಸುಲಭವಾಗಿಯೂ ತೋರಿತು [illegible] ಬಿಸ್ಮಾರ್ಕನ ಹಿಂದೆ ಬಂದ ಮಂತ್ರಿಗಳು ರಾಜನ ಮಾತಿಗೆ ಪ್ರತಿಧ್ವನಿ [illegible] ರಾಜನೀತಿಯನ್ನೇ ಕೊಂಡಾಡುತ್ತಾ ಅವನ ಬಾಯಿಂದ ಬಂದ [illegible] ಇದ್ದರು ಮಂತ್ರಿಗಳ ಸ್ತೋತ್ರದಿಂದ ರಾಜನ ಪ್ರಸನ್ನತೆ [illegible]. ಅವನ ಮುಖದಿಂದ ಅಲ್ಲದ ಸಲ್ಲದ ಮಾತುಗಳು ಹೊರಟವು "ನನ್ನ ಪ್ರತಿಕಕ್ಷಿಗಳನ್ನು ಹರಿಹಂಚಾಗಿ ಮಾಡಿಬಿಡುವೆನು" "ನನ್ನ ಖಂಡೆಯದ ಮೊನೆಗೆ ಮಾರ್ಮಲವ ನೃಪರಿದ್ದಾರೆಯೇ" ಎಂಬಿತ್ಯಾದಿ ಆಡಂಬರದ ವಾಕ್ಯಗಳನ್ನು ಆಡತೊಡಗಿದನು. ಮಾತುಗಳಲ್ಲಿ ವಿವೇಕವಿಲ್ಲ, ಇಂಗ್ಲಿಷರಿಗೂ ಬೂವರರಿಗೂ ಆಫ್ರಿಕದಲ್ಲಿ ಯುದ್ಧವಾದಾಗ ಬೂವರರ ಅಧಿಪತಿಯಾದ ಕ್ರೂಗರನಿಗೆ "ನಿನ್ನ ವಿಜಯವನ್ನು ಹಾರೈಸುವೆನು" ಎಂಬದಾಗಿ ತಂತೀ ಬಿಟ್ಟು, ಕೈಸರರು ಇಂಗ್ಲಿಷ್ ಜನರ ವಿರೋಧವನ್ನು ನಿಷ್ಕಾರಣವಾಗಿ ಸಂಪಾದಿಸಿದರು ಇದಲ್ಲದೆ ಇಂಗ್ಲೆಂಡಿನ "ಡೈಲಿಟೆಲಿಗ್ರಾಫ್" ಪತ್ರಿಕೆಯ ಪರವಾಗಿ ಒಬ್ಬ ಮಹಾಶಯರು [illegible] ರಲ್ಲಿ ಕೈಸರರಿಗೆ ಭೇಟಿಯನ್ನು ಕೊಟ್ಟು, ಅವರೊಡನೆ ಆಡಿದ ಮಾತು ಕಥೆಗಳನ್ನು ಪತ್ರಿಕೆಯಲ್ಲಿ ಪ್ರಕಾಶ ಪಡಿಸಲು ಇಂಗ್ಲೆಂಡಿನಲ್ಲಿ ಒಮ್ಮೆ ಉಲ್ಲೋಲಕಲ್ಲೋಲವಾಯಿತು. ಕೈಸರರು ಇಂಗ್ಲಿಷರ ಮೇಲೂ ಇತರ ದೇಶಗಳ ಮೇಲೂ ತಮಗಿದ್ದ ನಂಜನ್ನೆಲ್ಲಾ ಆ ಪತ್ರಿಕೆಯಲ್ಲಿ ಉಗುಳಿಬಿಟ್ಟಿದ್ದರು ಕೈಸರರ ಇಂಥಾ ಅವಿವೇಕವನ್ನು ಬುಲೋ ಎಂಬ ಮಂತ್ರಿಶ್ರೇಷ್ಠನು ಕಂಡು "ಕೈಸರರು ವಿನಾಕಾರಣವಾಗಿ ಇತರ ರಾಜರನ್ನು ಕೆಣಕುತ್ತಲಿದ್ದಾರೆ, ಇವರ ಅವಿಚಾರದಿಂದ ನಾವು ಕೂಡಾ ಹಾಳಾಗುವ ಸಂಭವ ಬರುತ್ತದೆ, ಎಂದು ಹೇಳಿ ರಾಜಿನಾಮೆ ಕೊಟ್ಟನು.. ಇವನ ತರುವಾಯ ಬೆಥ್‌ಮೆನ್ ಎಂಬವರು ಆ ಪದವಿಗೆ ಬಂದು, ಈಗಲೂ ಕೋಶಾಧ್ಯಕ್ಷರಾಗಿದ್ದಾರೆ.

ಪ್ರಪಂಚದ [illegible]

ಬಾಲ್ಕಾನ್ ಪ್ರದೇಶಗಳಲ್ಲಿ ಕೈಯಾಡಿಸುವುದಕ್ಕೆ ಹೋಗಿ, ರುಶ್ಯದ ಮನಸ್ಸನ್ನು ಕೆಡಿಸಿದರು. "ಇಸ್ಲಾಮ್ ಮತದ ಬಂಧು" ಎಂದು ಬಡಾಯಿ ಹೇಳಿಕೊಂಡು ತುರ್ಕೀ ಸುಲ್ತಾನರ ಹಸ್ತಲಾಘವನ್ನು ಮಾಡಿ, ಅವರ ರಾಜ್ಯಧಾನಿಯಾದ ಕನ್‌ಸ್ತಂತಿನೋಪಲಿನಲ್ಲಿ ಒಂದು ಜರ್ಮನ್ ಬೇಂಕನ್ನು ಏರ್ಪಡಿಸಿದರು. ಮುಸಲ್ಮಾನ ರಾಜ್ಯವಾದ ಬಾಗ್ದಾದ್ ಶೀಮೆಯ ರೈಲ್ವೇಯಲ್ಲಿ ತನಗೆ ಬೇಕಾದ ಹಕ್ಕುಗಳನ್ನು ಉಪಾಯದಿಂದ ಪಡೆದರು. ಆಸ್ಟ್ರಿಯವು ಸರ್ವಿಯರಿಂದ ಬೊಸ್ನಿಯಾ ಮತ್ತು ಹರ್ಜಗೊವಿನಾ ಎಂಬ ಭಾಗಗಳನ್ನು ಸೆಳೆದುಕೊಂಡು ತನ್ನ ರಾಜ್ಯವನ್ನು ವಿಸ್ತರಿಸುವಂತೆ ಅದಕ್ಕೆ ಹುಬ್ಬು ಹಾರಿಸಿದರು. ಈ ರೀತಿಯಾಗಿ ಬಿಸ್ಮಾರ್ಕರು ರುಶ್ಯದೊಡನೆ ಮಾಡಿದ ಒಪ್ಪಂದವನ್ನು ತಪ್ಪಿಸಿ ಹಗೆಯನ್ನು ಮಾಡಿಕೊಂಡರು. ಮೂರು ವರ್ಷಗಳ ಹಿಂದೆ ಆಫ್ರಿಕಾ ಖಂಡದಲ್ಲಿ ಫ್ರಾನ್ಸ್ ದೇಶಕ್ಕೆ ಒಳಿತವಾಗಿದ್ದ ಚಿಕ್ಕದೊಂದು ಸೀಮೆಯ ಮೇಲೆ ಕೈ ಹಾಕಿ, ಹೆದರಿ ಹಿಂಜರಿದು ಫ್ರಾನ್ಸ್ ಮತ್ತು ಇಂಗ್ಲಂಡ್ ಇವರಿಬ್ಬರ ದ್ವೇಷಕ್ಕೆ ಎಡೆಕೊಟ್ಟರು. ನಮ್ಮ ಆಸ್ಯ ಖಂಡದಲ್ಲಿಯೂ ಇವರ ಮಹಿಮೆಯು ಬೆಳಗದೆ ಹೋಗಲಿಲ್ಲ. ೧೮೯೫ರಲ್ಲಿ ಚೀನಾ ಜಪಾನರ ಯುದ್ಧ ಸಮಾಪ್ತಿಯಲ್ಲಿ ಫ್ರಾನ್ಸ್ ರುಶ್ಯ ಮತ್ತು ಜರ್ಮನಿ ಈ ಮೂವರು ಪಂಚಾಯತರಾಗಿದ್ದು ಲಿಯೊಟುಂಗ್ ಪ್ರದೇಶವನ್ನೂ ಪೋರ್ಟ್ ಆರ್ಥರ್ ಎಂಬ ರೇವನ್ನೂ ಜಪಾನರ ಕೈಯಿಂದ ತಪ್ಪಿಸಿ ರುಶ್ಯನ ಬಾಯಿಯಲ್ಲಿ ಹಾಕಿ ಬಿಟ್ಟ ಮಹಾತ್ಮರು ಇವರೇ. ೧೮೯೭ರಲ್ಲಿ ಇಬ್ಬರು ಜರ್ಮನ್ ಮಿಶ್ಯನೆರಿಗಳನ್ನು ಚೀನಿಯರು ಕೊಂದು ಹಾಕಿದರೆಂಬ ನೆವಮಾಡಿ, ಚೀನಿಯವರಿಂದ ಕಿಯೊಚೋ ಎಂಬ ಸ್ಥಳವನ್ನು ಸೆಳೆದುಕೊಂಡ ಮಹಾಶಯರು ಇವರೇ.

ಕೈಸರರಿಗೆ ಮೊದಲಿಂದಲೂ ಇಂಗ್ಲೆಂಡಿನ ನೌಕಾ ಸೈನ್ಯದ ಮೇಲೆ ದೃಷ್ಟಿ ಇತ್ತು. ೧೮೯೭ರಲ್ಲಿ ಅವರು ಕೀಲ್ ಕಾಲಿವೆಯನ್ನು ತೋಡಿ "ಇನ್ನು ಮುಂದೆ ಈ ಬಲವು ನಮ್ಮ ಬಲವು" ಎಂದು ಘೋಷಿಸಿದರು. ಅಂದಿನಿಂದ ವರ್ಷ ವರ್ಷವೂ ಯುದ್ಧ ನಾವೆಗಳನ್ನು ಕಟ್ಟಿಸುತ್ತಾ ಸಮುದ್ರಾಧಿಪತ್ಯಕ್ಕಾಗಿ ಇಂಗ್ಲೆಂಡಿನೊಡನೆ ಸ್ಪರ್ಧಿಸುತ್ತಾ ಇದ್ದರು. ಪ್ರಕೃತದಲ್ಲಿ ಜರ್ಮನಿ ದೇಶವನ್ನು ಯುದ್ಧರಂಗದಲ್ಲಿ ಹೊತ್ತು ಹಾಕಿ ತಮ್ಮ ಅವಿವೇಕತೆಯನ್ನು ಕೊನೆಮುಟ್ಟಿಸಿದರು.

ಕೈಸರರ ಅಹಂಬ್ರಹ್ಮತ್ವವನ್ನೂ ಪರದ್ವೇಷವನ್ನೂ ಲೆಕ್ಕಿಸದೆ ಅವರ ಸಾಮರ್ಥ್ಯವನ್ನೂ ಅವರ ಕಾರ್ಯದಕ್ಷತೆಯನ್ನೂ ಆಶೋಷಿತವಾದ ಸಾದನಾಬಲವನ್ನೂ ನೋಡಿದರೆ, ಅವರನ್ನು ಮಹಾಪುರುಷರಲ್ಲಿ ಒಬ್ಬರೆಂದು ಹೇಳಬೇಕಾಗಿದೆ. ಎದೆಯಲ್ಲಿದ್ದದ್ದೇ ಕಂಠದಲ್ಲಿ, ಕಂಠದಲ್ಲಿದ್ದದ್ದೇ ನಾಲಿಗೆಯ ತುದಿಯಲ್ಲಿ, ತುದಿ ನಾಲಿಗೆಯಲ್ಲಿದ್ದದ್ದೇ ಲೇಖನಿಯ ಮೊನೆಯಲ್ಲಿ, ಲೇಖನಿಯ ಮೊನೆಯಲ್ಲಿದ್ದದ್ದೇ ಪತ್ರದಲ್ಲಿ —ಇದೇ ಇವರ ನಿಷ್ಕಾಪಟ್ಯ. ತನ್ನ ಆಲೋಚನೆಯು ನ್ಯಾಯವಾಗಲೀ ಅನ್ಯಾಯವಾಗಲೀ, ಒಳ್ಳೇದಾಗಲೀ ಕೆಟ್ಟದ್ದಾಗಲೀ ಹೇಳಿಯೇ ಬಿಡುವರು. ರಾಜ್ಯಸೂತ್ರವನ್ನು ಬೇರೆಯವರ ಕೈಯಲ್ಲಿ ಕೊಟ್ಟು ಪಟ್ಟದ ಮೇಲೆ ಮಲಗುವಂಥಾ ರಾಜನಾಗಿರದೆ, ತಾನೇ ಜನಗಳನ್ನು ಆಳಬೇಕು, ತಾನೇ ಅವರನ್ನು ನಡಿಸಬೇಕು. ತಾನೇ ಅಧಿಕಾರವನ್ನು ಮಾಡಬೇಕು, ಇದೇ ರಾಜ್ಯಭಾರವೆಂದು ನಂಬಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಪ್ರಪಂಚದ ರಾಜ ಪರ್ವತಶ್ರೇಣಿಯಲ್ಲಿ ಇದೊಂದು ಅಗ್ನಿಪರ್ವತವೆಂದೆನ್ನಬಹುದು. ಇತರ ಗಿರಿಗಳು ಉನ್ನತವಾಗಿದ್ದರೂ ಅಚಲವಾಗಿದೆ. ಇದು ಅಹರ್ನಿಶಿ ಹೊಗೆಯುತ್ತಲಿದೆ ಉರಿಯುತ್ತಲಿದೆ. ಆಗಾಗ ಗುಡುಗುವುದೂ ಉಂಟು. ೧೮೯೦ರಲ್ಲಿ ಈ ಅಗ್ನಿ ಪರ್ವತವು ಉಗುಳಿದ ಕಾದ ಶಿಲಾರಸದಲ್ಲಿ ಬಿಸ್ಮಾರ್ಕನು ನಾಶವಾಗಿ ಜರ್ಮನಿಯ ಮೂಲಸ್ತಂಭವೇ ಆದರಿದಂತಾಯಿತು. ಈ ವರ್ಷ ಆ ಪರ್ವತದ ದ್ವಾರದಿಂದ ಹೊರಟ ಅಗ್ನಿ ಪ್ರವಾಹದಲ್ಲಿ ಹಲವು ರಾಜ್ಯಗಳ ನಿರಪರಾಧಿಗಳಾದ ಜನರು ನಾಶವಾದರು.

ಕೊಬ್ಬಿಗೆ ಕೊನೆಯಿದೆ ಎಂಬಂತೆ ಕೈಸರರ ಗರ್ವವು ಈ ಯುದ್ಧದಲ್ಲಿ ಬಂಗವಾದರೆ ಮುಂದೆ ಈ ಜ್ವಾಲಾಮುಖಿಯು ಬಾಯಿ ಬಿಡದೆ ಅನಂತಕಾಲ ಶಾಂತವಾಗುವದರಲ್ಲಿ ಸಂಶಯವಿಲ್ಲ.

ಕೊಂಬಾಡಿ ಗ್ರಾಮದ 'ಸುಧಾರಣಾ ಮಂಡಲಿ

ಇದೇ ತಾರೀಕು ೪—೧೦—೧೯೧೮ನೇ ದಿನ ಮಧ್ಯಾಹ್ನ ಸುಮಾರು ೪ ಘಂಟೆ ಸಮಯಕ್ಕೆ ಕೊಂಬಾಡಿ ಶಾಲೆಯಲ್ಲಿ ಕಾವೂರು, ಪಧ್ವಿನಂಗಡಿ, ಕೊಂಬಾಡಿ, ಪದವು, ದೇರೆಬೈಲು, ಬನಂದಳಿ, ಪಚ್ಚನಾಡಿ, ಮರವೂರು, ವಗೈರೆ ಗ್ರಾಮದ ಸುಮಾರು ೨೦೦-೩೦೦ ಜನರು ಕೂಡಿ ಒಂದು ಸಭೆಯು ಕೂಡಿತು.

ಈ ಸಭೆಯಲ್ಲಿ ಮ| ರಾ| ಪಿ. ನರಸಿಂಹಪೈಯವರು ಮಂಗಳೂರು ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘದ ಕಾರ್ಯದರ್ಶಿಯವರಾದ ಮೆ| ಎಮ್. ಎ. ಎಮ್. ಡಿಸೋಜರನ್ನು ಅಧ್ಯಕ್ಷಸ್ಥಾನಕ್ಕೆ ಚುನಾಯಿಸಬೇಕಾಗಿ ಸೂಚಿಸಿದ್ದನ್ನು ರಾ: ಕೆ. ಅಣ್ಣಪ್ಪ ಶ್ಯಾನುಭಾಗರು ಅನುಮೋದಿಸಿ ಆ ದಿನದ ಮಹಾಸಭೆಯು ಇವರ ಅಧ್ಯಕ್ಷತೆಯಲ್ಲಿ [illegible]

ಈ [illegible] ಗ್ರಾಮದ [illegible] ಸಭೆಯನ್ನು 'ಸುಧಾರಣಾ ಮಂಡಲಿ'ಯೆಂದು [illegible]

ಆರ್. ರೇಗರು ಅನುಮೋದಿಸಿದ ಪ್ರಕಾರ [illegible] ರಾ| ಪಿ. ನರಸಿಂಹಪೈಗಳನ್ನು ಈ ಸಂಘದ ಕಾರ್ಯದರ್ಶಿಯಾಗಿಯೂ ಮೆ| ಎಮ್. ಪಿ. ಎಮ್. ಡಿಸೋಜ, ರಾ| ಕೆ. ಕೃಷ್ಣಯ್ಯ ಶ್ಯಾನುಭಾಗ, ರಾ| ಬಿ. ಕೃಷ್ಣಪೈ, ರಾ| ಜಿ. ನಾರಾಯಣಕಮ್ತಿ, ಮೆ| ಎ. ಎಮ್. ಡಿಸೋಜ, ರಾ| ಬಿ. ಗಣಪತಿಪೈಗಳವರನ್ನು ಆಡಳಿತೆ ಮೆಂಬರರಾಗಿ ಚುನಾಯಿಸಲ್ಪಟ್ಟಿತು.

ಸದರಿ ಕೊಂಬಾಡಿ ಶಾಲೆಯನ್ನು ಇನ್ನು ಮುಂದೆ ಸುಧಾರಣಾಮಂಡಲಿಯ ಶಾಲೆಯಾಗಿ ನಡಸುವಂತೆಯೂ ಶಾಲಾ ಕಟ್ಟೋಣವನ್ನು ಈ ಮಂಡಲಿಯಿಂದ ದುಸ್ಥಿರಗೊಳಿಸುವಂತೆಯೂ ರಾ| ಕೆ ಕೃಷ್ಣಯ್ಯ ಶ್ಯಾನಭಾಗರು ಸೂಚಿಸಿದ್ದನ್ನು ರಾ| ಜಿ. ಪದ್ಮನಾಬ ಕಮ್ತಿಯವರು ಅನುಮೋದಿಸಿದರು.

ರಾ| ಪಿ ಅನಂತಭಟ್ರು ಈ ಶಾಲೆಯ ಮಕ್ಕಳಿಗೆ ಮರಾಠಿ ಬರಹ ಕಲಿಸಬೇಕಾಗಿ ಸೂಚಿಸಿದ್ದನ್ನು ರಾ| ಬಿ. ದಾಸಪ್ಪೈಯವರು ಅನುಮೋದಿಸಿದರು.

ಈ ಮಂಡಲಿಯವರು ತಿಂಗಳುಗಟ್ಲೆ ವಂತಿಗೆ ಇಟ್ಟು ಒಂದು ಸಣ್ಣ ಪುಸ್ತಕಭಂಡಾರವನ್ನೂ ಕೆಲವು ವೃತ್ತಾಂತ ಪತ್ರಿಕೆಗಳನ್ನೂ ತರಿಸಬೇಕಾಗಿ ರಾ| ಗೋಪಾಲ ಪಂಡಿತರು ಸೂಚಿಸಿದ್ದನ್ನು ರಾ| ಪಿ ಶ್ರೀನಿವಾಸ ಪೈಯವರು ಅನುಮೋದಿಸಿದರು.

ಈ ಸುಧಾರಣಾ ಮಂಡಲಿಗೆ ಸೇರಿದ ಯುವಕರ ವಿನೋದದ ಬಗ್ಗೆ ಒಂದು ಫೂಟ್‌ಬೋಲ್ ಆಟವನ್ನೂ ಒಂದು ರಾತ್ರೆಶಾಲೆಯನ್ನೂ ಸ್ಥಾಪಿಸುವ ಏರ್ಪಾಡನ್ನು ಮಾಡಬೇಕಾಗಿ ಈ ಶಾಲಾ ಹೆಡ್ ಮಾಸ್ತರರಾದ ಮೆ| ಎ ಎಮ್ ಡಿಸೋಜರು ಸೂಚಿಸಿದ್ದನ್ನು ಎಮ್ ವೆಂಕಪ್ಪಶೆಟ್ರು ಅನುಮೋದಿಸಿದರು.

ಈ ಮಂಡಲಿಗೆ ಸೇರುವವರು ಕಾರ್ಯದರ್ಶಿಯವರ ಕೂಡೆ ಅನುಬವಪಡೆಯಬಹುದಾಗಿಯೂ ಈ ಸಭಿಕರಿಗೆ ಮತ್ತು ಅಧ್ಯಕ್ಷರಿಗೆ ಕೃತಜ್ಞತಾಪೂರ್ವಕವಾಗಿ ವಂದಿಸುವರೆಯೂ ರಾ| ಜಿ ನಾರಾಯಣ ಕಮ್ತಿಯವರು ಸೂಚಿಸಿದ್ದನ್ನು ಈ ಶಾಲಾ ಹೆಡ್ ಮಾಸ್ತರರಾದ ಮೆ| ಎ ಎಮ್ ಡಿಸೋಜರು ಅನುಮೋದಿಸಿದರು.

ಅನಂತರ ಶಾಲಾ ಮಕ್ಕಳು ರಾಜರ ಗೀತವನ್ನು ಹಾಡಿ ಸಭೆ ಅಂತ್ಯವಾಯಿತು.

M. A M D'Souza,
President

ಪತ್ರವ್ಯವಹಾರ.

ಕುದರೆ ಸವಾರಿ

ಅಯ್ಯಾ,

ಇತ್ತಲಾಗೆ ಸುಮಾರು ಒಂದು ತಿಂಗಳಿನಿಂದ ಒಬ್ಬ ಕುದುರೆ ಖಾಸಗಾರನು ಏನೊಂದೂ ಜೀನು ವಗೈರೆ ಏರಿಸದೇ ಇರುವ ಎತ್ತರವಾದ ಕುದುರೆಯಲ್ಲಿ ಕೂತುಕೊಂಡು ಬೆಳಿಗ್ಗೆ ಸುಮಾರು ೮ ಘಂಟೆಯಿಂದ ೯ ಘಂಟೆ ಒಳಗಿನ ಸಮಯದಲ್ಲಿ ಅತಿ ವೇಗದಿಂದ ಮಂಗಳೂರು ಶ್ಯಾಹಾರ ಡೊಂಗರಕೇರಿಯ ಕೆನರಾ ಹೈಸ್ಕೂಲಿನ ಮಾರ್ಗವಾಗಿ ೨—೩ ದಿವಸಕ್ಕೊಮ್ಮೆ ಎಂಬ ಹಾಗೆ ಓಡಿಸಿಕೊಂಡು ಹೋಗುತ್ತಾನೆ. ಆ ಪ್ರಕಾರ ಕುದುರೆಗಳನ್ನು ಓಡಿಸುವ ಬಗ್ಗೆ ಇಟ್ಟಿರುವ ಊರಿನ ಮೈದಾನುಗಳು ಇರುವಾಗ್ಯೆ ಅಂಥಾ ಸ್ಥಳಗಳಲ್ಲಿ ಓಡಿಸದೇ ಮಾರ್ಗದಲ್ಲಿ ಓಡಿಸಿಕೊಂಡು ಹೋಗುವದರಿಂದ ಕುದುರೆಯ ಗೊರಸಿನ ಸಪ್ಪಳಗಳು ಮನೆಯಲ್ಲಿರುವ ಹೆಂಗಸು ಮಕ್ಕಳ ಹೃದಯಗಳು ಒಡೆಯುವದಲ್ಲದೆ ಗರ್ಬವತಿಯರಿಗೆ ಗರ್ಭ ಇಳಿದು ಹೋಗಲಿಕ್ಕೂ ಸಾಕು. ಆತನು ಈ ರೀತಿ ಓಡಿಸುವಲ್ಲಿ ಮ| ರಾ| ರಾ| ನಗರ ದಾಮೋದರ ಶ್ಯಾನುಭಾಗರ ಮನೆ ಸಮೀಪ ಕೆಲವು ದಿವಸಗಳ ಹಿಂದೆ ಒಬ್ಬ ಮಾನ್ಯ ಗೃಹಸ್ಥರ ಒಂದು ಚಿಕ್ಕಮಗು ಅವರ ಪೂರ್ವ ಸುಕೃತದಿಂದ ಹತನಾಗುವದುಳಿಯಿತು. ಈ ಸಂಗತಿ ಆ ಗೃಹಸ್ಥರು ಸ್ವತಹಾ ತಿಳಕೊಂಡು ಲೋಕೋಪಕಾರವನ್ನು ಸ್ಮರಿಸದೆ ಮಗುವಿನ ಅವಗಡ ತಪ್ಪಿಹೋಯಿತು ಎಂಬ ಸಂತೋಷದಿಂದಲೋ ಈ ಖಾಸಗಾರನಿಗೆ ತನ್ನಿಂದ ತೊಂದರೆಯಾಗಬಾರದೆಂಬ ಭಾವನೆಯಿಂದಲೋ ಏನೂ ನಿಗಾ ಕೊಡದೆ ಇದ್ದದರಿಂದ ಖಾಸಗಾರನು ಮೊನ್ನೆಯೂ ಅದೇ ರೀತಿ ಓಡಿಸುತ್ತಿರುವಾಗ ಮ| ರಾ| ರಾ| ವಕೀಲ್ ನಗರ [illegible] ರಾಯರ ಮನೆ ಸಮೀಪ ಮಾರ್ಗದಿಂದ ಹಾದು ಹೋಗುತ್ತಿದ್ದ ಒಬ್ಬ ಬಡ ಮುದುಕಿಯು ಕುದುರೆಯ ಸಪ್ಪಳವನ್ನು ಕೇಳಿ ಮಾರ್ಗದ ಬದಿಯನ್ನು ಸೇರುತ್ತಿರುವಷ್ಟರಲ್ಲಿ ಕುದುರೆಯು ಸಮೀಪ ತನ್ನ ಮುಂಗಾಲುಗಳೆರಡನ್ನೂ ಮುದುಕಿಯ ತಲೆಯ ಮೇಲೆತ್ತಿದರೂ ದೈವವಶಾತ್ ಮುದುಕಿಯು ಸುರಕ್ಷಿತವಾಗಿ ಉಳಿದಳು. ಈ ಪ್ರಕಾರ ಮಾಡುತ್ತಿರುವ ಖಾಸದಾರನ ಉಪಟಳವು ಒಮ್ಮೆ ನಿಂತರೆ ಊರ ಜನರಿಗೂ ಶಾಲೆಗೆ ಹೋಗುವ ಮಕ್ಕಳಿಗೂ ನಿರ್ಭಯವಾಗುತ್ತದೆ. [illegible] ಬಂದೋಬಸ್ತು ಮಾಡಿ ಪೋಲೀಸಿನವರು ತಕ್ಕ ನಿಗಾ ಕೊಟ್ಟು ಖಾಸದಾರನನ್ನು [illegible] ತ್ತಿದ್ದಾದರೆ ಶಾಲೆಗೆ ಹೋಗುವ ಮಕ್ಕಳ [illegible] ಮಾನ್ಯ ಸರಕಾರದ [illegible]

[illegible] ವಿಠ್ಠಲ ಪ್ರಭು [illegible]

ಬಾರ್ಬಡ್ ವೆಯರ್ ಎಂಬ ಮೊಳೆಯ ಸರಿಗೆಗಳು.

ಸ್ವಾಮಿ,

ಪಟ್ಟಣಗಳಲ್ಲಿ ಬಾರ್ಬಡ್ ವೆಯರ್ ಯಾನೆ ಮೊಳೆಗಳಿರುವ ಸರಿಗೆಗಳನ್ನು ಬೇಲಿ ಬಗ್ಗೆ ಉಪಯೋಗಿಸಕೂಡದೆಂತ ಸರಕಾರ ನಿಬಂಧನೆ ಇರುವುದಾಗಿ ನಾನು ಕೇಳಿದ್ದೆ. ಮನುಷ್ಯನಾಗಲೀ ಪಶುವಾಗಲೀ ಅಪಾಯವನ್ನು ತಿಳಿಯದೆ ಸರಿಗೆಗಳ ನಡುವೆಯಿಂದ ಹೋಗುವುದಕ್ಕೆ ಯತ್ನಿಸಿದರೆ ಮೊಳೆಗಳಿಂದ ಶರೀರವು ಶೀಳಿಹೋಗಿ ಪ್ರಾಣಿಯು ಸಾಯುವದೇ ಸರಿ. ಹೀಗಿರುತ್ತಾ ಮಂಗಳೂರ ಕೋರ್ಟು ಗುಡ್ಡೆಯ ಪಂಚಮ ಶಾಲೆಯ ಸಮೀಪ ಜೆಜುವಿಟರು ಕಟ್ಟಿಸಿದ ಎಲಿಮೆಂಟರಿ ಶಾಲೆಯ ಪೂರ್ವ ಪಶ್ಚಿಮ ಉತ್ತರ ಪಾರ್ಶ್ವಗಳಲ್ಲಿ ಗಡಿ ಬೇಲಿ ಬಗ್ಗೆ ಬಾರ್ಬಡ್ ಸರಿಗೆಗಳನ್ನೇ ಹಾಕಿದ್ದಾರೆ. ಶಾಲೆಯ ಮುಂಭಾಗದ ಮಾರ್ಗದಿಂದ ಪ್ರತಿ ದಿನವೂ ೭೮ ಜನಗಳ ಹಿಂಡುಗಳು ಎರಡಾವರ್ತಿ ಹೋಗುವುದುಂಟು. ಶಾಲೆಗೆ ಅಂತೂ ೩೦೦ ೪೦೦ ಹುಡುಗರು ದಿನ ನಿತ್ಯ ಹೋಗ ವುದೂ ಬರುವುದೂ, ಬೇಲಿ ಒಳಗೆ ಆಡುವುದೂ ಉಂಟು. ಬೇಲಿಯ ಹೊರಗಿದ್ದ ಪಶುಗಳನ್ನು ಒಳಗೆ ನೆಟ್ಟ ಗಿಡಗಳೂ ಸರಿಗೆಗಳ ನಡುವೆ ತಲೆ ಹೊಕ್ಕಿಸುವಂತೆ ಆಕರ್ಷಿಸುತ್ತವೆ. ಹೀಗಿರುತ್ತಾ ಪ್ರತಿ ದಿನವೂ ಪೋಲೀಸು ಆಪೀಸರರಾಗಲಿ ಮುನ್ಸಿಪಲ್ ಉದ್ಯೋಗಸ್ಥರಾಗಲೀ ಈ ಅಪಾಯಕರ ಬೇಲಿಯನ್ನು ನೋಡಿ ಆಕ್ಷೇಪಿಸದೇ ಇದ್ದದ್ದೂ, ಬೇಲಿ ಹಾಕಿ ೩ ೪ ತಿಂಗಳು ಆದಾಗ್ಯೂ ಸರಕಾರದವರು ಆಕ್ಷೇಪಿಸದೆ ಬೇಲಿಯನ್ನು ನಿಲ್ಲಗೊಡಿಸಿದ್ದೂ ನೋಡುವಾಗ ಇಂತಹ ಬೇಲಿಹಾಕ ಕೂಡದಾಗಿ ಸರಕಾರ ನಿಬಂಧನೆ ಉಂಟೆಂತ ಹೇಳುವ ಮಾತು ಅಬದ್ಧವೆಂತ ತಿಳಕೊಳ್ಳಬೇಕಾಗುತ್ತದೆ.

ಅದಲ್ಲದೆ ಮೈದಾನಿನ ಸಮೀಪ ಸರಕಾರಿ ಕಾಲೇಜಿನ ಬಳಿ ಬಾರ್ಬಡ್ ಸರಿಗೆಗಳ ಬೇಲಿ ಹಾಕಿದ್ದದೆ. ಇದನ್ನು ನೋಡುವಾಗ ಸರಕಾರ ನಿಬಂಧನೆ ಇಲ್ಲವೇ ಇಲ್ಲ, ಇರುವುದಾದರೂ ಆ ನಿಬಂಧನೆ ಸರಕಾರಿ ಆಪೀಸುಗಳಿಗೆ ತಗಲುವದಿಲ್ಲವೆಂತ ಊಹಿಸಬೇಕಾಗುತ್ತದೆ.

ಆದುದರಿಂದ ಬಾರ್ಬಡ್ ಸರಿಗೆಗಳ ಕುರಿತ ಸರಕಾರ ನಿಬಂಧನೆ ಉಂಟೊ ಇಲ್ಲವೊ? ಇರುವುದಾದರೆ ಶಾಲೆಗಳಿಗೂ ಸರಕಾರಿ ಸ್ಥಳಗಳಿಗೂ ಆ ನಿಬಂಧನೆ ತಗಲುವುದಿಲ್ಲವೊ ಎಂಬದನ್ನು ತಮ್ಮ ವಾಚಕರಲ್ಲಿ ಯಾರಾದರೂ ವ್ಯಕ್ತಪಡಿಸಿದರೆ ಉಪಕಾರವಾಗುವುದು.

ತಾ 6-10-1914

ಪಟ್ಟಣಿಗ

ಅಯ್ಯಾ,

ನಾನು ಹಳ್ಳಿಯವನಾದರೂ ಕೆಲವರ ಅಪೇಕ್ಷೆಯ ಅನುಸಾರವಾಗಿಯೂ ಅವರ ಸಹಾಯದಿಂದಲೂ ಬೋರ್ಡ ಮೆಂಬರನಾಗಿದ್ದೇನೆ. ತಾಲೂಕು ಬೋರ್ಡ ಮೀಟಿಂಗುಗಳು ಇಂಥಾ ದಿವಸವೇ ಕೂಡುತ್ತವೆಂದು ನಮ್ಮ ನೋಟೀಸು ಮೂಲಕವಾಗಿ ಸವನೆ ತಾಲೂಕು ಬೋರ್ಡು ಪ್ರೆಸಿಡೆಂಟರ ಆಪೀಸಿನಿಂದ ತಿಳಿಸುತ್ತಾರಾದರೂ ಶಹರು ಸ್ಥಳಗಳಲ್ಲಿ ಇರುವ ಮೆಂಬರರಿಗೆ ಈ ನೋಟೀಸುಗಳು ಅಕ್ಕ ಕಾಲದಲ್ಲಿ ಸಿಕ್ಕುವುದರಿಂದ ಅಂಥಾ ಮೆಂಬರರು ಮೀಟಿಂಗಿಗೆ ಹಾಜರಾಗಕ್ಕೆ ಅನುಕೂಲವಾಗುತ್ತದೆ. ನಮ್ಮಂಥವರು ಇರುವ ಹಳ್ಳಿಗಳಿಗೆ ಟಪ್ಪಾಲು ಸ್ವಾಮಿಯ ದಾಲು ಪ್ರಕಾರ ಒಂದು ವಾರಕ್ಕೆ ಎರಡು ಸರ್ತಿ ಎಂತ ಇದ್ದರೂ ಎರಡು ವಾರಕ್ಕೆ ಒಂದು ಸರ್ತಿ ಆಗುವದು ಕೂಡಾ ಅಪರೂಪ. ಟಪ್ಪಾಲು ಪೇದೆಗಳು ನಾವು ಮನೆಯಲ್ಲಿಲ್ಲದ ವೇಳೆಯಲ್ಲಿ ಟಪ್ಪಾಲು ಕಾಗದಗಳು ಬಂದರೆ ನಮ್ಮ ಮನೆಯವರು ತೆಗೆದುಕೊಂಡು ಕಡಿಮೆ ಎಂದರೆ ಎರಡು ತಿಂಗಳ ಮೇಲೆ ನನಗೆ ಕೊಡುವದುಂಟು. ಮರೆತು ಮಾಡಿದ್ದಕ್ಕೆ ಮರುಗಿ ಫಲವಿಲ್ಲ. ಒಂದು ವೇಳೆ ನೋಟೀಸು ಕೈಗೆ ಸಿಕ್ಕಿ ಮೀಟಿಂಗಿಗೆ ಹೋಗುವದಕ್ಕೆ ತಕ್ಕಷ್ಟು ಸಮಯವಿದ್ದರೂ ನೋಟೀಸು ಬರುವ ಮುಂಚೆಯೇ ನಾವು ಇಂಥಾ ದಿವಸದಲ್ಲಿ ಇಂಥಾ ಕೆಲಸವನ್ನು ಮಾಡಬೇಕು, ಇಂಥಾ ಊರಿಗೆ ಹೋಗಬೇಕೆಂದು ನಿಶ್ಚಯಿಸಿದ್ದಾಗ ನಾವು ಮುಂದಾಗಿ ಇಟ್ಟಕೊಂಡ ದಿವಸವೇ ಮೀಟಿಂಗ್ ಆಗತ್ತದೆಂದು ನೋಟೀಸು ಅಕಸ್ಮತ್ತಾಗಿ ಬರುತ್ತದೆ. ಈ ಕಾರಣದಿಂದ ಒಂದು ಕಡೆಯಲ್ಲಿ ಮೆಂಬರರ ಗೈರ್ಹಾಜರಿ ಬೀಳಬೇಕಾಗುತ್ತದೆ. ಈ ತೊಂದರೆಯನ್ನು ತಪ್ಪಿಸಿ ಪ್ರತಿ ಮೀಟಿಂಗಿಗೆ ಸಾಧ್ಯವಾದಷ್ಟು ಹೆಚ್ಚು ಮಂದಿ ಮೆಂಬರರು ಕೂಡುವ ಹಾಗೆ ಮೀಟಿಂಗಿಗೆ ಒಂದು ಕ್ಲುಪ್ತವಾದ ದಿವಸವನ್ನು ಆರಿಸುವುದು ಯೋಗ್ಯವಲ್ಲವೇ?

ಡಿಸ್ಟ್ರಿಕ್ಟ್ ಬೋರ್ಡು ಸಭೆಯು ಕೂಡುವದಕ್ಕೆ ಒಂದು ಪ್ರತ್ಯೇಕವಾದ ದಿವಸವನ್ನು ನಿರ್ಣಯಿಸಿರುತ್ತಾರೆಂದು ಕೇಳಿದ್ದೆನು. ಇದೇ ರೀತಿಯಲ್ಲಿ ತಾಲೂಕು ಬೋರ್ಡು ಮೀಟಿಂಗುಗಳೂ ಪ್ರತಿ ತಿಂಗಳ ಮೊದಲನೇ ಶನಿವಾರ ಅಥವಾ ಕಡೇ ಸೋಮವಾರ ಅಥವಾ ಹುಣ್ಣಿಮೆಯ ದಿನ ಯಾ ಅಮವಾಸೆಯ ಮರುದಿನ ಎಂಬದಾಗಿ ನಿಶ್ಚಯಿಸಿದರೆ ಮೆಂಬರರ ಹಾಜರಿಯು ಹೆಚ್ಚುವದೆಂದು ನೆನಸುತ್ತೇನೆ. ತಹಶೀಲದಾರ ಮುಂತಾದ ಸರಕಾರಿ ಉದ್ಯೋಗಸ್ಥರ ಸರ್ಕಿಟಿಗೂ ಅಡಚಣೆಯಾಗದು. ಖಾಸಗಿ ಮೆಂಬರರು ಅಂಥಾ ದಿವಸದಲ್ಲಿ ಬೇರೆಂದು ಕಾರ್ಯದ ಮೇಲೆ ಹೋಗದಂತೆ [illegible] ಕೊಳ್ಳಬಹುದು. ನನ್ನಂಥಾ ಹಳ್ಳಿಯ ಮೆಂಬರರಿಗೆ ಟಪ್ಪಾಲು ದ್ವಾರ [illegible] ನೋಟೀಸು ಬಾರದಿದ್ದರೂ ಸಭೆಗೆ ಹಾಜರಾಗುವುದಕ್ಕೆ ಅನುಕೂಲವಾಗುವುದು. ಈ ನನ್ನ ಸೂಚನೆಯನ್ನು ಇತರ ಮೆಂಬರರು ಬೋರ್ಡು ಮೀಟಿಂಗಿನಲ್ಲಿ ತಂದು ಇತ್ಯರ್ಥ ಮಾಡುವರು ಎಂಬದಾಗಿ ಹಾರೈಸುತ್ತೇನೆ.

ತಾಲೂಕು ಬೋರ್ಡು ಹಳ್ಳಿ ಮೆಂಬರ.

ಅಯ್ಯಾ ಪತ್ರಿಕಾಕರ್ತರೇ,

ಶಾಲಾ ವಿದ್ಯಾರ್ಥಿಗಳಲ್ಲಿ ಪಿತೃಭಕ್ತಿಯು ಕಡಿಮೆಯಾಗಿರುತ್ತದೆಂಬದಾಗಿ ಗಣಪತಿ ಸೆಕಂಡರಿ ಶಾಲೆಯ ವರ್ಷೋತ್ಸವ ದಿನ ಅಧ್ಯಕ್ಷರಾಗಿದ್ದ ಮ। ರಾ। ಆರ್ಣೆ ಸುಬ್ಬರಾಯರವರು ಹೇಳಿದ್ದರೆಂಬದಾಗಿ ತಮ್ಮ ಅಮೂಲ್ಯ ಪತ್ರಿಕೆಯ ಮೂಲಕ ತಿಳಿದು ಈ ವಿಷಯ ಒಂದೆರಡು ಮಾತುಗಳನ್ನು ಬರೆಯಲು ಪ್ರಾರಂಭಿಸಿರುವೆನು.

ಶಾಲಾ ಮಕ್ಕಳಲ್ಲಿ ಪಿತೃಭಕ್ತಿಯು ಕಡಿಮೆಯಾಗಿರುವುದು ಎಂಬ ಮಾತು ಒಪ್ಪತಕ್ಕದ್ದಾಗಿದೆ. ಈಗಿನ ಶಾಲಾ ವಿದ್ಯಾರ್ಥಿಗಳನ್ನು ನೋಡಿದರೆ ಇವರಲ್ಲಿ ಪಿತೃಭಕ್ತಿಯೇ ಕಾಣದು. ಆದರಲ್ಲಿಯೂ ಕೆಲವು ವಿದ್ಯಾರ್ಥಿಗಳು ತಂದೆಯನ್ನು 'ಅಪ್ಪಾ' ಎಂದು ಕರೆಯಲು ನಾಚುವರು. ಇದಕ್ಕೆ ಕಾರಣವೇನು?

ಈಗಿನ ನವಸುಧಾರಣೆಯೇ ಇದಕ್ಕೆ ಕಾರಣವಾಗಿರುವುದು. ಮಕ್ಕಳು ಶಾಲೆಗೆ ಹೋದ ಕೂಡಲೇ ತಂದೆಯು ಬಹು ಕಷ್ಟದಿಂದ ಮಗನಿಗೆ ಅಂಗಿಯೋ, ಚಲ್ಲನವೋ, ಬೂಟೂಸೊ ಮಾಡಿಸಿಕೊಡುವನು. ಅಷ್ಟರಲ್ಲಿ ಮಗನು ಇಂಗ್ಲಿಷು ಓದುತ್ತಾನೆಂದು ತಂದೆಗೆ ತಿಳಿದಾಕ್ಷಣ ತಂದೆಯು ಮತ್ತಷ್ಟು ಹಿಗ್ಗಿ ಮಗನಿಗೆ ಒಳ್ಳೇ ಪೋಷಾಕನ್ನು ಮಾಡಿಕೊಟ್ಟು ಅವನನ್ನು ಹಿಗ್ಗಿಸುವನು. ಈ ಮಗನಿಗೆ ಮಂಗನ ಕೈಯ್ಯಾ ಮಾಣಿಕ ಕೊಟ್ಟಂತಾಗಿ ಪಾಶ್ಚಾತ್ಯ ಮರ್ಜಿಯಲ್ಲಿ ನಡಿಯ ತೊಡಗಿ ತಂದೆಯು ಮಾಡಿಸಿಕೊಟ್ಟ ಅಂಗಿ ಚಲ್ಲನದೊಟ್ಟಿಗೆ ಕುತ್ತಿಗೆಗೆ ಒಂದು ಕಲ್ಲರ್ ಮತ್ತು ಟೈ ಕಟ್ಟಲು ಪ್ರಾರಂಬಿಸುವನು. ಇನ್ನಿಗೆ ಮಗನು ಪಾಶ್ಚಾತ್ಯ ಸಾಹೇಬನಾದನು. ಮನೆಯಲ್ಲಿ ಮೈಮೇಲೆ ಹಳೇ ಪಂಚೆಯನ್ನು ಹಾಕಿ, ಕೌಪೀನ ಕಟ್ಟಿಕೊಂಡು ಇರುವ ತಂದೆಯನ್ನೂ ಊರ ಪದ್ಧತಿಯ ಸೀರೆಯ ತಾಯಿಯನ್ನೂ ನೋಡುವಾಗ ಹೊಸ ಮರ್ಜಿಯ ಮಗನ ಕಣ್ಣಿಗೆ ರವ್ಯವಾಗದು. ಇವನ ಮರ್ಜಿಯಲ್ಲಿಯೇ ಇರುವ ಸಹಪಾಠಿಗಳೊಡನೆ ಸೇರಿ ಮೆಲ್ಲನೆ ಬೀಡಿ, ಸಿಗರೇಟ್, ಚುಟ್ಟಾ ಸೇದಲು ಪ್ರಾರಂಭಿಸಿ ನಂತರ ಬ್ರಾಂದಿ ವಿಸ್ಕಿ ಸೇವಿಸಲು ಕಲಿಯುವಾಗ ತಂದೆ ತಾಯಿಗಳ ಕಡೆಗೆ ಭಕ್ತಿ ಎಲ್ಲಿಯದು? ಮನೆಯಲ್ಲಿ ಹೋದೊಡನೆ ಮಗನ ಈ ಮರ್ಜಿಯನ್ನು ನೋಡಿ ತಡೆಯಲಾರದ ಹೆತ್ತವರ ಚರಚರ ಮಾತುಗಳು ಕೇಳಿಸಿದವು. ಸ್ವಯಿಚ್ಛೆಯಲ್ಲಿ ಬೆಳೆದು ಹೋದ ಮಗನಿಗೆ ಇದು ಕಿವಿಗೆ ರವ್ಯವಾಗದೆ ತಂದೆತಾಯಿಗಳಿಗೆ ಬೈಯ ಪ್ರಾರಂಭಿಸುವನು. ಹೀಗೆ ತನ್ನ ಸ್ವಯಿಚ್ಛೆಯಿಂದ ನಡೆಯುವ ಮಗನಿಗೆ ಪಿತೃಬಕ್ತಿ ಎಲ್ಲಿ? ಪಿತೃಭಕ್ತಿ ಇಲ್ಲದಿದ್ದರೆ ದೇವಭಕ್ತಿ ಎಲ್ಲಿ? ಹೀಗೆ ಪಾಶ್ಚಾತ್ಯ ಸಂಸ್ಕೃತಿಗಳನ್ನು ಅನುಸರಿಸಿ ಕಲಿತ ವಿದ್ಯಾರ್ಥಿಗಳಿಗೆ ಇತ್ತ ಪಿತೃಬಕ್ತಿಯೂ ಇರದು, ಅತ್ತ ದೇವಬಕ್ತಿಯೂ ಇರದು. ದೇವಸ್ಥಾನ ದೇವಾಲಯಗಳಿಗೆ ಹೋಗುವುದು ಈ ವಿದ್ಯಾರ್ಥಿಗಳಿಗೆ ಎಂದೂ ಸರಿ ಕಾಣದು. ಹಬ್ಬ ಅಮವಾಸೆಗಳಲ್ಲಿ ದೇವಸ್ಥಾನಕ್ಕೆ ಹೋಗಿ ದೇವತಾಪೂಜೆ ಮಾಡುವ ಬದಲಿಗೆ ಒಳ್ಳೇ ಪೋಷಾಕು ಹಾಕಿ ಪೇಟೆ ಸವಾರಿ ಮಾಡುವುದರಲ್ಲಿಯೇ ಇಂಥವರಿಗೆ ಆರ್ತಿ. ಸಮಾಜದ ನೀತಿಯಾಗಲೀ, ನೇಮವಾಗಲೀ ಈ ವಿದ್ಯಾರ್ಥಿಗಳಿಗೆ ಬೇಡ. ತಂದೆ ಕಷ್ಟಮಾಡಿ ಗಳಿಸಿಟ್ಟದ್ದ ಹಣವನ್ನು ದುರುಪಯೋಗ ಮಾಡಿ ಹಾಳುಮಾಡುವುದೇ ಇಂಥವರ ನೀತಿನೇಮವಾಗಿರುವುದು.

ಯಾವ ತಂದೆಯು ಬಾಲ್ಯದಲ್ಲಿಯೇ ಮಗನನ್ನು ಪಾಶ್ಚಾತ್ಯ ಮರ್ಜಿಯಿಂದ ದೂರಮಾಡಿರುವನೋ ಅಂಥವರ ಮಕ್ಕಳಲ್ಲಿ ಕೆಲವರು ಮಾತ್ರ ಒಳ್ಳೇ ವಿದ್ಯಾಭ್ಯಾಸವನ್ನು ಪಡೆದು ಪಿತೃಬಕ್ತಿ ದೇವಬಕ್ತಿಯಲ್ಲಿ ಮೆರೆದು ತಂದೆತಾಯಿಗಳನ್ನು ಸನ್ಮಾನಿಸುತ್ತಾ ದೇಶ ಸೇವೆ ಮಾಡುತ್ತಿರುವರಲ್ಲದೆ ಹೆಚ್ಚಿನವರು ಮರ್ಜಿಯಿಂದಲೇ ತಮ್ಮನ್ನೂ ತಮ್ಮ ಮನೆಯನ್ನೂ ದೇಶವನ್ನೂ ಕೆಡಿಸಿಕೊಳ್ಳುವರು.

ವಿದ್ಯಾರ್ಥಿಗಳೇ, ಪಾಶ್ಚಾತ್ಯ ಮರ್ಜಿಯನ್ನು ಅನುಸರಿಸದೆ ನಮ್ಮ ದೇಶದ ಹಿರಿಯರ ಮರ್ಜಿಯಲ್ಲಿಯೇ ವರ್ತಿಸಿ ಪಿತೃಭಕ್ತಿಯುಳ್ಳವರಾದರೆ ದೇವಭಕ್ತಿಯೂ ನಿಮ್ಮಲ್ಲಿ ಅಂಕುರಿಸಿ ದೇಶದ ಏಳಿಗೆಗೆ ಸಹಕಾರಿಣರಾಗುವಿರಿ. ಕಾಫಿ ಹೋಟೆಲ್, ಸಿಗರೇಟ್ ಪೆಟ್ಟಿಗೆ, ವಿಸ್ಕಿ ಬಾಟ್ಲು ಇತ್ಯಾದಿಗಳಿಂದ ಪಿತೃಭಕ್ತಿಯಾಗಲೀ ದೇವಭಕ್ತಿಯಾಗಲೀ ಹುಟ್ಟದು. ದೇಶವೂ ಏಳಿಗೆಯಾಗದು [illegible].

[illegible]

ಯುದ್ಧ ಸಮಾಚಾರವು.

ತಾ. 4ನೇ ಒಕ್ಟೋಬರ.

ಪಶ್ಚಿಮ ರಣರಂಗದಲ್ಲಿ ವಿಶೇಷ ಬದಲಾವಣೆಯಾಗಲಿಲ್ಲ ದಕ್ಷಿಣ ಒವ್ರೆಯಲ್ಲಿ ಮಾತ್ರ ಸಂಯುಕ್ತ ಸೇನೆಗಳು ಸಿಖೆವ್ರೆ ಎಂಬ ಸ್ಥಳವನ್ನು ವಶಮಾಡಿಕೊಂಡು ರುಷ್ಪೆಡ್‌ಮಾಡ್ ಪ್ರದೇಶಕ್ಕೆ ಮುಂದರಿದಿರುವವು.

ಜರ್ಮನರು ಬಹು ಶೂರತನದಿಂದ ಕಾದಾಡಿ ಕದನಕ್ಕೆ ಅಂತ್ಯಮಾಡಬೇಕೆಂಬ ನಿರ್ಣಯದಿಂದ ರಾತ್ರಿ ಹಗಲು ೨೦ ಸಾರಿ ಸಂಯುಕ್ತ ಸೇನೆಗಳ ಮೇಲ್ಬಾಯ್ದು ಬಂದರು. ಆದರೆ ಬ್ರಿಟಿಷ ಸೈನೀಕರು ಎದೆಗುಂದದೆ ಶತ್ರುಸೇನೆಯು ಪೂರಾ ದಣಿದುಹೋಗುವ ವರೆಗೆ ಅವರೊಡನೆ ಕಾದಾಡಿದರು ಇಲ್ಲಿ ಜರ್ಮನರಲ್ಲಿ ೬೦,೦೦೦ ಮಂದಿ ಪ್ರಾಣಾಪಾಯೆ ಹೊಂದಿದರೆಂತ ಅಂದಾಜಾಗಿರುವುದು ಪೂರ್ವ ರಣರಂಗದಲ್ಲಿ ನಡೆದ ಈ ವರೆಗಿನ ಕದನದಲ್ಲಿ ಜರ್ಮನರಲ್ಲಿ ಒಟ್ಟಿಗೆ ಅರ್ಧ ಮಿಲಿಯ ಸೈನೀಕರು ನಾಶವಾದರೆಂತ ಅಂದಾಜಾಗಿಯದೆ.

ಬ್ರಿಟಿಷ ಸೇನೆಯಲ್ಲಿ ೫ ಆಫೀಸರರು ಮಡಿದರ ೧೬ ಆಫೀಸರರು ಘಾಯಪೊಡೆದರು. ಇಬ್ಬರು ಆಫೀಸರರು ಕಾಣೆಯಾಗಿರುವರು ಕಾಣೆಯಾದವರ ಪೈಕಿ ಲೆಪ್ಟನೆಂಟ್ ಇ ಆರ್ ವಾಕರರವರು ಸೇನೆಗೆ ಬಂದು ಕೂಡಿರುವರು. ಆದರೆ ಘಾಯಪೊಡೆದಿರುವರು

ಬೆಲ್ಜಿಯಂ —ಜರ್ಮನರು ದಿನವೆಲ್ಲಾ ಎಂಟವರ್ಪಿನ ದಕ್ಷಿಣ ಕಡೆಯ ಹೊರ ಕೋಟೆಗಳಿಗೆ ಗುಂಡು ಹಾರಿಸುತ್ತಿದ್ದರು ಆದರೆ ಕೋಟೆಗಳಿಗೆ ಹೆಚ್ಚಿನ ಕೇಡಾಗಲಿಲ್ಲ. ತನ್ಮಧ್ಯೆ ಜರ್ಮನ ಕಾಲಾಳು ಸೇನೆಯು ಸ್ನೆಲ್ಟ್, ಮತ್ತು ನೆನ್ನೆ ನದಿಗಳ ಮಧ್ಯೆ ಮೇಲ್ಬಾಯ್ದು ಬಂದು, ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿದರು.

ಬೆಲ್ಜಿಯನರು ಮೆಲಿನ್ಸನ್ನು ಪುನಃ ವಶಮಾಡಿಕೊಂಡಿರುವರು.

ಜರ್ಮನರು ಬ್ರುಸೆಲ್ಸ್ ಮತ್ತು ನಾಮೂರಿನ ಮೇಲೆ ವಿಧಿಸಿದ ಯುದ್ಧ ತೆರಿಗೆಯ ಪೂರ್ಣಾಂಶವನ್ನು ಕೊಡಲು ಬ್ರುಸೆಲ್ಸಿನ ಪೌರವೃದ್ಧರಾದ ಎಮ್ ಮಾಕ್ಸರು ನಿರಾಕರಿಸಿದ್ದರಿಂದ ಅವರನ್ನೂ ನಾಮೂರಿನ ಅಧಿಕಾರಿಯನ್ನೂ ಜರ್ಮನರು ಕೈದುಮಾಡಿರುವರೆಂತ ತಿಳಿದು ಬರುತ್ತದೆ.

ಇಟಲಿ:—ಇಟಲಿಯರ ಒಂದು ಟೊರ್ಪೆಡೋ ನಾವೆಯು ವೆನಿಸ್ ಮತ್ತು ಕೊಮೆಕಿಯೋದ ಮಧ್ಯೆ ಆಸ್ಟ್ರೀಯನರು ಹಾಕಿದ್ದ ಸಿಡಿಮದ್ದಿನ ಗಣಿಗೆ ತಾಗಿ ಮುಣುಗಿಹೋಯಿತು ಎಡ್ರಿಯಾಟಿಕ್ ಸಮುದ್ರದಲ್ಲಿ ಇಟಲಿಯರ ಮೀನು ಕೈಗಾರಿಕೆಗೆ ಅಭ್ಯಂತರವಾಗಿರುವುದು ಈ ಮೊದಲಾದ ಕಾರಣಗಳಿಂದ ಇಟಲಿಯಲ್ಲಿ ಆಸ್ಟ್ರೀಯನರಿಗೆ ವಿರೋಧವಾದ ಬೊಬ್ಬೆ ಬಿದ್ದಿರುವುದು

ಇಟಲಿಯನರ ಎರಡು ಯುದ್ಧ ಹಡಗಗಳು ಎಡ್ರಿಯಾಟಿಕ್ ಸಮುದ್ರದಲ್ಲಿರುವ ಸಿಡಿಮದ್ದಿನ ಗಣಿಗಳನ್ನು ಹೆಕ್ಕಿ ತೆಗೆಯಲು ಹೋಗಿರುವವು.

ಅಂಗ್ಲಾಳ:—ಹಿಂದೂಸ್ಥಾನದಿಂದ ರಣರಂಗಕ್ಕೆ ಹೋದ ಸೈನೀಕರ ಮೇಲೆ ಹಿಂದೂಸ್ಥಾನದ ಸಾಲಿಗರು ಮಾಡುವ ದಾವೆಗಳನ್ನು ಅವರು ಯುದ್ಧದಿಂದ ಹಿಂತಿರುಗುವ ವರೆಗೆ ಕೋರ್ಟುಗಳು ಸ್ವೀಕರಿಸಬಾರದಾಗಿ ಹಿಂದೂಸ್ಥಾನದ ಮಾಜಿ ಜನರಲ್ ಸರ್ ಒಮೂರುಕ್ರೇರವರು ಟ್ರಾಮ್ಸ್ ಪತ್ರಿಕೆಗೆ ಬರದಿರುವರು.

ಬ್ರಿಟಿಷರ "ಕ್ಲರ್ಟನ್ ಕೇಂಡ್" ಎಂಬ ಕ್ರೂಜರ್ ನಾವೆಯು ಕೆಮರೂನಿನ [illegible] ಶತ್ರುಗಳ [illegible] ಭರಾವಣೆಯ ಎರಡು ಹಡಗಗಳನ್ನು ಶತ್ರುಗಳ "ಗನ್‌ಬೋಟು" ಎಂಬ ಒಂದು ನಾವೆಯನ್ನೂ ಮುಣುಗಿಸಿರುವುದು.

ಪೂರ್ವ ರಣರಂಗ:—[illegible] ೧೦೦ ಮೈಲುಗಳ [illegible] ನದಿಯನ್ನು ದಾಟಲು ಪ್ರಯತ್ನಿಸಿದ ಜರ್ಮನರು [illegible]

[illegible]

[illegible] ವಶಮಾಡಿಕೊಂಡರು. ರುಶ್ಯನರು ಸುವಾಲ್ಕಿ ಮತ್ತು ಮರಿಯಂಪೊಲು ಡಿಸ್ಟ್ರಿಕ್ಟುಗಳಲ್ಲಿ ಶತ್ರುಗಳನ್ನು ಓಡಿಸಿರುವರು

ರುಶ್ಯನರು ಹಂಗೇರಿಯವನ್ನು ನುಗ್ಗಿದ್ದರಿಂದ ವಿಯಾನ್ನದಲ್ಲಿ ವಿಶೇಷ ಭಯ ಉಂಟಾಗಿರುವುದಾದರೂ ಈ ವಿಷಯ ಕಳವಳಪಡಲು ಕಾರಣವಿಲ್ಲವೆಂಬದಾಗಿ ಆಸ್ಟ್ರಿಯ ಸರಕಾರದವರು ಪ್ರಕಟಿಸಿರುವರು ಹಂಗೇರಿಯದ ಹಲವು ಡಿಸ್ಟ್ರಿಕ್ಟುಗಳಲ್ಲಿ ಶಾಂತಿಭಂಗದಿಯು ತಲೆದೋರಿರುವುದೆಂತ ವಾರ್ತೆ ಇದೆ

ಟರ್ಕಿ ಸರಕಾರದವರ ಬಗ್ಗೆ ಇಂಗ್ಲಾಂಡಿನಲ್ಲಿ ಕಟ್ಟಿಸುತ್ತಿದ್ದ ಎರಡು ಯುದ್ಧ ಹಡಗಗಳನ್ನು ಯುದ್ಧ ಪ್ರಾರಂಭವಾದ ಕೂಡಲೇ ಬ್ರಿಟಿಷ ಸರಕಾರದವರು ತಮ್ಮ ಸ್ವಾಧೀನಮಾಡಿಕೊಂಡಿರುವರು ಈ ವಿಷಯ ವೈಸರಾಯ ಪ್ರಭುಗಳವರು ಈ ರೀತಿ ಪ್ರಕಟಿಸಿರುವರ —ಯುದ್ಧಕಾಲದಲ್ಲಿ ರಾಷ್ಟ್ರದ ಭದ್ರತೆ ಬಗ್ಗೆ ಈ ಎರಡು ಯುದ್ಧಹಡಗಗಳನ್ನು ಸಾಮ್ರಾಜ್ಯ ಸರಕಾರದವರು ನಿರ್ವಾಹವಿಲ್ಲದೆ ತಮ್ಮ ವಶಮಾಡಿಕೊಳ್ಳಬೇಕಾಯಿತು ಈ ವರೆಗೆ ಇವುಗಳನ್ನು ಅವರಿಗೆ ಕೈವಶ ಸಲಿಲ್ಲ ಸಾಮ್ರಾಜ್ಯ ಸರಕಾರದವರ ಇದರ ಪೂರ್ಣ ಕ್ರಯವನ್ನು ಟರ್ಕಿ ಸರಕಾರದವರಿಗೆ ಕೊಡಲು ಒಪ್ಪಿರುವುದು ಮಾತ್ರವೇ ಅಲ್ಲ ಯುದ್ಧ ತೀರಿದ ನಂತರ ಅದನ್ನು ಟರ್ಕಿ ಸರಕಾರದವರಿಗೆ ಕೊಡಲಿಕ್ಕೆ ಯಾ ಅಂಥಾ ಬೇರೆ ಹೊಸ ಹಡಗಗಳನ್ನು ಕೊಡಲಿಕ್ಕೂ ಒಪ್ಪಿರುವರು ಯುದ್ಧಕಾಲದಲ್ಲಿ ಈ ಹಡಗಗಳನ್ನು ಪ್ರಯೋಗಿಸಿದರೆ ಅದರ ಬಗ್ಗೆ ಪರಿಹಾರ ದ್ರವ್ಯವನ್ನು ಕೊಡಲೂ ಒಪ್ಪಿರುವರು

ತಾ. 5ನೇ ಒಕ್ಟೋಬರ

ಭಾರತೀಯ ಸೇನೆಯು ಫ್ರಾನ್ಸಿನಲ್ಲಿ ಇಳಿದಿರುವುದು

ಹಿಂದೂಸ್ಥಾನದಿಂದ ಕಳುಹಿಸಲ್ಪಟ್ಟ ಭಾರತೀಯ ಸೇನೆಯು ಫ್ರಾನ್ಸಿನಲ್ಲಿ ಇಳಿದಿರುವುದೆಂದು ಲಂಡನ್ ವರ್ತಮಾನಸಂಗ್ರಹ ಆಫೀಸಿನವರು ಪ್ರಕಟಿಸಿರುವರು

ಚಕ್ರವರ್ತಿಯವರ ಭಾರತೀಯ ಸೇನೆಯು ಫ್ರಾನ್ಸಿನಲ್ಲಿ ಹೋಗಿ ಇಳಿದುದ್ದರಿಂದ ಇತಿಹಾಸದಲ್ಲಿ ಒಂದು ಹೊಸ ಮಾರ್ಪಾಟವಾದಂತಾಯಿತು ಈ ಸೇನೆಯ ಹೋಗಿ ಇಳಿದ ದಿನವು ಬಹು ಶುಭ್ರವಾಗಿತ್ತು ಸೇನೆಯು ಇಳಿದ ಪಟ್ಟಣಕ್ಕೆ ಪ್ರವೇಶಿಸಿದಾಗ ಇಡೀ ಪಟ್ಟಣದವರು ಆಶ್ಚರ್ಯ ಭರಿತರಾಗಿ ಸಂತೋಷದಿಂದ ತುಂಬಿದರು

ಸಿಕ್ಖ್, ಗುರ್ಕ, ಪಂಜಾಬಿ, ಬಲೂಚಿ ಸಿಪಾಯರೂ, ಆಭರಣ ಖಚಿತವಾದ ಮುಂಡಾಸುಗಳನ್ನು ಇಟ್ಟ ಭಾರತೀಯ ರಾಜರೂ ಪಟ್ಟಣವನ್ನು ಹಾದು ಹೋಗುವಾಗ ನಿವಾಸಿಕರು ಕಿಕ್ಕಿರಿದು ನಿಂತು ಪ್ರೋತ್ಸಾಹಸೂಚಕವಾದ ಆರ್ಭಟ ಮಾಡಿದರು ಪಟ್ಟಣದ ಪ್ರತ್ಯೊಂದು ಕಿಟಿಕಿ, ಬಾಗಲು, ಮಾಡು, ಉಪ್ಪರಿಗೆಗಳು ಜನರಿಂದ ತುಂಬಿಹೋಗಿ ಅಲ್ಲಿಂದ ಸೈನೀಕರ ಮೇಲೆ ಪುಷ್ಪಗಳನ್ನು ಚೆಲ್ಲಿದರು. ಕೆಳಗಿದ್ದ ನಿವಾಸಿಕರು ಸಿಪಾಯರ ಕೈಗಳನ್ನು ಹಿಡಿದು, ಹೂವುಬುಕ್ಕೆಗಳನ್ನು ಅವರ ಕವಚಗಳ ಮೇಲೆ ಚುಚ್ಚಿದರು ಬಲೂಚಿ ಸಿಪಾಯರು ಹಾದು ಹೋಗುವಾಗ ನಿವಾಸಿಕರು ಗಾಯನಮಾಡಿದರು ಭಾರತೀಯ ಸೇನಿಕರು ಹರ್ಷಿತರಾಗಿ ಮುಗುಳ್ನಗೆಯನ್ನು ಬೀರುತ್ತಾ ಹಾದುಹೋದರು

ಭಾರತೀಯ ಸೇನೆಯು ಸಾಮ್ರಾಜ್ಯಕ್ಕಾಗಿ ಕಾದಾಡಲು ಫ್ರಾನ್ಸಿನಲ್ಲಿ ಇಳಿದ್ದರಿಂದ ಲಂಡನಿನ ವರ್ತಮಾನ ಪತ್ರಿಕೆಗಳೆಲ್ಲಾ ತಮಗುಂಟಾದ ಸಂತೋಷವನ್ನು ಕೋರ್ಪಡಿಸಿರುವವು. ಕೆಲವು ವರ್ತಮಾನ ಪತ್ರಗಳು ಅವರು ಇಳಿಯುವಾಗ ತೆಗೆದ ಚಿತ್ರಗಳನ್ನು ಪ್ರಕಟಿಸಿರುವವು

ಪಶ್ಚಿಮ ರಣರಂಗ.

ಬ್ರಿಟಿಷ್ ಸೇನೆಯ ಲೆಪ್ಟನೆಂಟ ಕರ್ನೆಲ್ ಗೋರ್ಡನರವರು ಜರ್ಮನರ ಸೆರೆ ಬಿದ್ದು ಈಗ ಜರ್ಮನಿಯಲ್ಲಿರುವರೆಂತ ತಿಳಿದು ಬಂದದೆ. ಲೆಪ್ಟನೆಂಟ್ ಒನೆಬಲ್ ಡಬ್ಲ್ಯು. ಎ. ಸಿ. ಎಲ್‌ರವರು ಹತರಾಗಿರುವರು. ಲೆಪ್ಟನೆಂಟ್ ಆರ್. ಎನ್. [illegible]ರವರು [illegible]

[illegible]

ಅವು ೫ ಸಾರಿ [illegible] ಗುಂಡುಗಳಿಂದ ಜರ್ಮನರ ಒಂದು ಬ್ಯಾಟರಿಯು ಪೂರಾ ನಾಶವಾಗಿರುವುದು. ಅನಂತರ ಆರು ಜರ್ಮನರು ತಮ್ಮ ಫಿರಂಗಿಗಳನ್ನು ಇಡಲು ಹವಣಿಸಿದ ನೆಲೆಗಳನ್ನೆಲ್ಲಾ ಒಂದರ ನಂತರ ಒಂದನ್ನು ಹಾಳುಮಾಡಿರುವುದು.

ಜರ್ಮನರು ಗಿವೆಟ್ ಮತ್ತು ನಾಮೂರಿನ ಮಧ್ಯೆ ಮ್ಯೂಜ್ ನದಿಯ ಮೇಲೆ ೫ ಸಂಕಗಳನ್ನು ಕಟ್ಟಿರುವರು. ಘಾಯಪೊಡೆದ ಜರ್ಮನರನ್ನೂ ಬ್ರುಸೆಲ್ಸಿನಿಂದ ಕೊಂಡುಹೋಗಿರುವರು.

ಲೆಸಿಗ್ನಿಯನ್ನು ಹಿಡಕೊಂಡ ೪೦ ಸಾವಿರ ಜರ್ಮನರ ಮೇಲೆ ಸಿಡಿಮದ್ದುಗಳನ್ನು ಹಾರಿಸಿರವುದರಿಂದ ಅವರು ಬೇಗನೇ ಶರಣಾಗತರಾಗಲಿಕ್ಕಿರುವರು.

ಜನರಲ್ ಫ್ರೆಂಚರಿಂದ ನಡಿಸಲ್ಪಡುವ ಇಂಗ್ಲಿಷರ ಸಣ್ಣ ಸೇನೆಗೆ ಅಂತ್ಯಗಾಣಿಸುವ ಒಂದೇ ಉದ್ದೇಶದಿಂದ ನಿಮ್ಮ ಧೈರ್ಯ ಸಾಹಸಗಳನ್ನು ತೋರಿಸಬೇಕೆಂದು ಜರ್ಮನ ಕೈಸರರು ತನ್ನ ಸೇನಿಕರಿಗೆ ಮಾಡಿದ ಒಂದು ಆಜ್ಞಾಪತ್ರವು ದೊರಕಿರುವುದು.

ಬ್ರಿಟಿಷ್ ವಿಮಾನನಾವೆಗಳು ಜರ್ಮನರ ನೆಲೆಗಳನ್ನು ಗೊತ್ತು ಹಚ್ಚಿ ತೋರಿಸಿ ಕೊಡುವುದರಿಂದ ರಣರಂಗದಲ್ಲಿ ವಿಶೇಷ ಪ್ರಯೋಜನವಾಗಿರುವುದು

ಬೆಲ್ಜಿಯಮ್ ಜರ್ಮನರ ಎಂಟ್‌ವರ್ಪಿಗೆ ಗುಂಡುಹಾರಿಸುತ್ತಲಿರುವರು ಜರ್ಮನರ ಮುಖ್ಯ ಲಕ್ಷ್ಯವು ಡಿವೆಲ್‌ಹೆಮ್ ಕೋಟೆಯ ಕಡೆಗಿರುವುದು

ಜರ್ಮನರ ಮೆಲಿನ್ಸನ್ನು ಪುನಃ ಪ್ರವೇಶಿಸಲು ನೋಡಿದರು ಅಲ್ಲಿ ಎರಡು ತಾಸುಗಳ ಕದನ ನಡೆದು ಜರ್ಮನರು ನಷ್ಟಹೊಂದಿ ಹಿಂವಾದರು

ಬೆಲ್ಜಿಯಮ್ ಸರಕಾರದವರ ಈ ರೀತಿ ಪ್ರಕಟಿಸಿರುವರು — ಜರ್ಮನರು ವೆಲ್ಡೆಮದೆ ಕೋಟೆಗೆ ಗುಂಡ ಹಾರಿಸಿ ಸಾಯಂಕಾಲ ವೆವ್ರೆ ಕೋಟೆಯ ಕಡೆಗೆ ಮರಳಿದರು ಕತ್ತಲೆಯು ಕವಿದಿದ್ದರಿಂದ ಜರ್ಮನರ ಈ ಪ್ರಯತ್ನವು ವಿಫಲವಾಯಿತು ಹಗಲಲ್ಲಿ ಮುಂದರಿದ ಕೆಲವು ತೋಪು ಸೆನೆಗಳ ಕೋಟೆಯ ಅತೀ ಸಮೀಪ ಬಂದು ನಿರ್ನಾಮವಾದವು

ಇಟಲಿ —ಸಮುದ್ರದಲ್ಲಿ ತೇಲುವ ಸಿಡಿಮದ್ದುಗಳ ಉಪದ್ರವಾಗದಂತೆ ಕೂಡಲೇ ಜಾಗ್ರತೆ ತಕ್ಕೊಳ್ಳವೆಂತ ಆಸ್ಟ್ರೀಯಾನ ಸರಕಾರದವರ ಇಟಲಿ ಸರಕಾರದವರಿಗೆ ತಿಳಿಸಿರುವರು

ಜಪಾನ್ —ಕ್ಷಿಂಗ್ಟಾವೊದಲ್ಲಿ ಕದನ ನಡೆಯುತ್ತಿದೆ ಜಪಾನರು ಜರ್ಮನರ ಒಂದು ಡಿಸ್ಟ್ರೋಯರ್ "ಯುದ್ಧನಾವೆಯನ್ನು ಮುಣುಗಿಸಿದರ ಸಿಡಿಮದ್ದನ್ನು ಹೆಕ್ಕಿತೆಗೆಯುತ್ತಿದ್ದ ಜಪಾನರ ಒಂದು ನಾವೆಯು ಸಿಡಿಮದ್ದಿನಿಂದ ಹಾರಿಹೋಯಿತು ಮತ್ತೊಂದು ನಾದುರಸ್ತಿಯಾಗಿರುವುದ ಜಪಾನರಲ್ಲಿ ೨೪ ಮಂದಿ ಪ್ರಾಣಾಪಾಯಹೊಂದಿದರ ಜರ್ಮನರ ಯುದ್ಧ ಹಡಗಗಳು ಜಪಾನರ ನೆಲೆಗಳಿಗೆ ಕಠಿಣವಾಗಿ ಗುಂಡುಹಾರಿಸುತ್ತಲಿವೆ ಎರಡು ಆಫೀಸರರು ಹತರಾದರು

ಪೂರ್ವ ರಣರಂಗ.—ಸುವಲ್ಕ ಮತ್ತು ಲೊಮ್ಜ ಪ್ರಾಂತ್ಯದಿಂದ ಶತ್ರುಗಳು ಹಿಂದೆ ಓಡಿರುವರು ಸೈನೊದ ಪಶ್ಚಿಮ ಕಡೆಯಲ್ಲಿ ಕದನವು ನಡೆಯುತ್ತಿದೆ

ಒಸ್ಸೊವೆಡ್ಜಿನ ಮೇಲ್ಬಾಯ್ದ ಜರ್ಮನರು ಉತ್ತರಕ್ಕೆ ಹಿಮ್ಮೆಟ್ಟಿರುವರು

ಶತ್ರುಗಳು ಪೆಟ್ರೊಕೊಫ್ ಮತ್ತು ಕೆಲ್ಸೆ ಡಿಸ್ಟ್ರಿಕ್ಟುಗಳಲ್ಲಿ ಸೇನೆಯನ್ನು ಒಟ್ಟುಹಾಕಿರುವರು ಆದರೆ ರುಶ್ಯ ಕುದುರೆಪಡೆಯು ಶತ್ರುಗಳ ಚಲನೆಯನ್ನು ಬಹು ಶೂರತನದಿಂದ ಆತಂಕಿಸುತ್ತಿವೆ.

ಕ್ರಾಕೊ ಡಿಸ್ಟ್ರಿಕ್ಟಿನಲ್ಲಿ ಬೇಗನೇ ವಿಶೇಷ ಕದನವು ನಡೆಯುವುದು

ಬಾಲ್ಕಾನ್:—ದರ್ಡನೆಲ್ಸ್ ಜಲಸಂಧಿಯು ಮುಚ್ಚಲ್ಪಟ್ಟಿರುವುದು.

ಅಂಗ್ಲಾಳ:—ಲಂಡನಿನಲ್ಲಿ [illegible] ಭಾರತೀಯ ಎಂಬ್ಯುಲೆನ್ಸ್ ಕೋರ್ಪ್ಸ ಎಂಬ ಯುದ್ಧದಲ್ಲಿ ಘಾಯ ಬಿದ್ದವರನ್ನು ಪರಾಂಬರಿಸುವ ಸೇನೆ [illegible] [illegible]ರು [illegible]

[illegible]

ಪ್ಪುಸು, ಇದೆಂದೂ ಅಸಾಧ್ಯವಲ್ಲ. ತನಗೆ ಪ್ರತ್ಯೇಕ ಒಂದು [illegible] ಕೊಡಲಾಗದಿದ್ದರೆ ದ್ವಿಭಾಷಿಯಾಗಿಯಾದರೂ ತಾನು [illegible] ಬರುವೆನು. ಜರ್ಮನಿಯು ಕೆಲವು ವರ್ಷಗಳಿಂದ ಇಸ್ಲಾಮಿನ ಪ್ರತಿಪಾಲಕನಂತಿದ್ದರೂ ಇಂತಹ ದುರ್ಮಾಗಸ್ಥ ಜರ್ಮನಿಯ ಪಾಲನೆಯನ್ನು ದೇವರು ನಮಗೆ ದೂರ ಮಾಡಲಿ. ಗ್ರೇಟ್ ಬ್ರಿಟನಿಗೆ ಬಿದ್ದ ಅವಶ್ಯಕತೆಯನ್ನು ಹಿಂದೂಸ್ಥಾನದ ಸುಶಿಕ್ಷಿತರ ತನಗೆ ಲಭಿಸಿದ ಒಳ್ಳೇ ಸಂದರ್ಭವೆಂದು ಭಾವಿಸಿ ತಮ್ಮ ರಕ್ತವನ್ನೂ ಸರ್ವ ಆಸ್ತಿಯನ್ನೂ ಸಾಮ್ರಾಜ್ಯದ ಬಗೆ ವೆಚ್ಚಮಾಡಲು ದೃಢಸಂಕಲ್ಪ ಮಾಡಿರುವರು. ಇದರಿಂದ ಹಿಂದೂಸ್ಥಾನದ ವಿಷಯದ ಅಭಿಪ್ರಾಯಗಳು ಮಾಯವಾಗುವದಾದರೆ ಚೆಲ್ಲಿದ ರಕ್ತವು ವ್ಯರ್ಥವಾಗಿ ಹೋಗದು ಎಂದು ಹೇಳಿದರು. [illegible] ಸೇನೆಗೆ ಬಹುಮಾನವಿಟ್ಟ ಆಗಖಾನರವರು [illegible]

~~~~~~

ತಾ 6ನೇ ಒಕ್ಟೋಬರ

ಪಶ್ಚಿಮ ರಣರಂಗ

ರೊಯೆ ಪ್ರಾಂತ್ಯದಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ಅಲ್ಲಿ ಸಂಯುಕ್ತ ಸೇನೆಗಳು ಜರ್ಮನರನ್ನು ಹಿಂದಟ್ಟಿರುವವು. ಇಲ್ಲಿ ಶತ್ರುಗಳಿಗೆ ಬೆಂಬಲಸೇನೆಯು ಕೂಡಿದರೂ ಪ್ರಯೋಜನವಾಗಲಿಲ್ಲ. ಆರ್ಗೊನ್ನೆ ವನ [illegible]ನಲ್ಲಿ ಬದಲಾವಣೆಯಾಗಲಿಲ್ಲ. ಜರ್ಮನ್ ಯುವರಾಜನ ಸೇನೆಯು ಅರಣ್ಯ [illegible]ದಲ್ಲಿ ದಾಳಿಯನ್ನು ಮಾಡಿ ಮುಂದರಿಯಲು ನೋಡಿದರೂ ನಿಷ್ಫಲವಾಗದೆ ವರ್ನೆಸ್ ಉತ್ತರಕ್ಕೆ ಹಿಮ್ಮೆಟ್ಟಿತು. ಮ್ಯೂಸ್ ಮತ್ತು ಮೊಸೆಲ್ಲೆಯಲ್ಲಿ ಸಂಯುಕ್ತ ಸೇನೆಗಳು ನಿಧಾನವಾಗಿ ಮುಂದರಿಯುತ್ತಲಿರುವವು.

ಬೆಲ್ಜಿಯಮ್ —ಜರ್ಮನರ ಕಾಲಾಳು ಸೇನೆಯು ಹಲವು ಸಾರಿ ಎಂಟವರ್ಪಿನ ಮೇಲೆ ಹಲ್ಲೆಮಾಡಿ ಬಂದರೂ ಹಿಮ್ಮೆಟ್ಟಿರುವರು.

ಜರ್ಮನರು ಲೈರೆ ಮತ್ತು ವೆಲ್‌ಹೆಮ್ ಕೋಟೆಗಳ ಮೇಲೆ ಬಿದ್ದು ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿದರು. ಬೆಲ್ಜಿಯನರ ಸೇನೆಗಳಿಂದ ಹೊಡೆದ ಶತ್ರುಗಳಲ್ಲಿ ವಿಶೇಷ ನಷ್ಟವಾಗಿದೆ.

ಜರ್ಮನರ ಲಿಪ್‌ಜಿಗ್ ಕ್ರೂಜರ್ ನಾವೆಯು ಬ್ರಿಟಿಷರ ಎಸ್ಲೆ [illegible] ಹಡಗವನ್ನು ಮುಳುಗಿಸಿರುವುದು.

ಪೂರ್ವ ರಣರಂಗ

ಜರ್ಮನರು ರಶ್ಯನರೊಡನೆ ಒಂದು ಮಹಾ ಕದನವನ್ನು ಮಾಡಲಿಕ್ಕೆ ಸಿದ್ಧವಾಗುತ್ತಲಿರುವರು. [illegible]ದಲ್ಲಿ ರುಶ್ಯರು ನಿರ್ವಾಹವಿಲ್ಲದೆ ಜರ್ಮನರ ಮೇಲೆ ಬಿದ್ದು ಜರ್ಮನರ ಅನೇಕ ದಾರಿಗಳನ್ನೂ [illegible] ಹಿಡಿದು ಕಂದಕಗಳಿಂದ ಜರ್ಮನರನ್ನು ಹೊರಹಾಕಿದರು. [illegible] ಎಲ್ಲಾ ಕಡೆಯಲ್ಲಿಯೂ ಜಯಪ್ರದರಾಗಿ ಮುಂದರಿಯುತ್ತಲಿರುವರು.

ಪೂರ್ವ ಪ್ರುಶ್ಯದಲ್ಲಿ ಕದನವು ನಡಿಯುತ್ತಲಿದೆ. ರುಶ್ಯನರು ಶತ್ರುಗಳ ಕ್ರಾಸ್ನದ [illegible] ಮೇಲ್ಭಾಗವನ್ನು ತಕ್ಕೊಂಡಿರುವರು. ಶತ್ರುಗಳು [illegible] ಮತ್ತು [illegible] ಹಿಂದರಿಯುತ್ತಲಿರುವರು. [illegible] ಜರ್ಮನರಿಗೆ ಬೆಂಬಲಸೇನೆಯು ಬಂದು ಕೂಡಿದ್ದರಿಂದ ಆಗೊಸ್ತೋವ್ ಮತ್ತು ಸುವಾಲ್ಕಿಯ ಸಮೀಪದ ಕಠಿಣ ಕಾಳಗ ನಡೆಯುತ್ತಲಿದೆ. ಇಲ್ಲಿ ಜರ್ಮನರು ಸಣ್ಣ ಕಾಳಗ ಮಾಡಿದರೂ ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿದರು. ರುಶ್ಯನರು ಆಗೊಸ್ತೋವಿಗೆ ಹಿರಂಗಿ ಹಾರಿಸಿ ಶತ್ರುಗಳನ್ನು ಆ ಡಿಸ್ಟ್ರಿಕ್ಟಿನಿಂದ ಓಡಿಸಿರುವರು. ರಶ್ಯನರು ಜರ್ಮನರ ಪ್ರಾಂತ್ಯಗಳಿಗೆ ನುಗ್ಗಿ ಒಸ್ವೆಜ್ ಮತ್ತು ಮಾಲ್ವದಲ್ಲಿಯ ಮೋಟರ್ ವ್ಯವಹಾರವನ್ನು ಹಿಡಿದಿರುವರು.

ಕ್ರಾಕೋವದಲ್ಲಿ ಜರ್ಮನರ ೮೦೦,೦೦೦ ಸೈನಿಕರು ಇದ್ದಾರೆ. ಬವೇರಿಯಾನ್ ಮತ್ತು ಸೆಕ್ಸನ್ ಸೈನಿಕರೇ ಈ ಸೇನೆಯಲ್ಲಿ ಹೆಚ್ಚಿನ ಸಂಖ್ಯೆಯಾಗಿರುವದು.

ರುಶ್ಯನರು ಪ್ರಿಜೆಮೈಸ್ಲ ಕೋಟೆಗಳನ್ನು ತಕ್ಕೊಂಡಿರುವರು. ಉಳಿದ ಕೋಟೆಗಳು ಜರ್ಮನ ಆಸ್ಟ್ರೀಯ ಸೇನೆಯು ಸಹಾಯಕ್ಕೆ ಬರುವ ಮೊದಲೇ ನೆಲಸಮವಾಗುವವು.

[illegible] ವಿಯನ್ನದ ಜನರು ವಿಯೆನ್ನಕ್ಕೆ ಮುತ್ತಿಗೆ ಬೀಳುವುದೆಂಬ ಭಯದಿಂದ ಪಟ್ಟಣವನ್ನು ಬಿಟ್ಟುಹೋಗುತ್ತಿರುವರು.

ರುಶ್ಯ ಮಹಾರಾಜರು ಯುದ್ಧರಂಗಕ್ಕೆ [illegible]

ಜರ್ಮನಿಯಲ್ಲಿ [illegible]

ಹಿಂದೂಸ್ಥಾನ:—ಬಂಗಾಳ ಆಖಾತವು ಸುರಕ್ಷಿತವಾಗಿದ್ದು ರಂಗೂನು, ಮದರಾಸು, ಕೊಲಂಬಕ್ಕೆ ಹಡಗು ಬಿಡುವಷ್ಟಕ್ಕೆ [illegible]ಗುತ್ತದೆಂಬದಾಗಿ ಪ್ರಕಟವಾಗಿದೆ.

~~~~~~

ತಾ 7ನೇ ಒಕ್ಟೋಬರ

ಸಂಯುಕ್ತ ಸೇನೆಗಳ ಎಡಪಾರ್ಶ್ವದಲ್ಲಿ ಕದನವು ಬಲುಮಟ್ಟಿನದಾಗಿ ನಡಿಯುತ್ತಲಿರುವುದು. ಆದರೆ ಯಾವದೊಂದು ಫಲಿತಾಂಶವಾಗಲಿಲ್ಲ. ಸೊಮ್ಮೆಯ ಮೇಲಿನ ತಗ್ಗುಗಳಲ್ಲಿಯೂ ಸೊಮ್ಮೆ ಮತ್ತು ಒಯಿಸ್ ನದಿಯ ನಡುವೆಯೂ ಕದನವು ಅನ್ಯೋನ್ಯವಾಗಿ ನಡಿಯುತ್ತಿದೆ. [illegible]

ಸೊಯಿಸನ್ಸ್ ಪ್ರಾಂತ್ಯದಲ್ಲಿ ಸಂಯುಕ್ತ ಸೇನೆಗಳು ಮುಂದರಿದು ಶತ್ರುಗಳ ಕಂದಕಗಳನ್ನು ಹಿಡಿದಿರುವರು. ರಣರಂಗದ ಇತರ ಎಲ್ಲಾ ಪ್ರಾಂತ್ಯಗಳಲ್ಲಿ ಕದನವು ತಮ್ಮಸೆಯಾಗಿರುವದು. ಮ್ಯೂಸ್ ಮತ್ತು ಮೊಸೆಲ್ಲೆ ನದಿಗಳ ಮಧ್ಯೆ ಸಂಯುಕ್ತ ಸೇನೆಗಳಿಗೆ ಸ್ವಲ್ಪ ಜಯವಾಗಿರುವದು.

ಬ್ರಿಟಿಷ ಸೇನೆಯನ್ನು ಕುರಿತು [illegible] ವರದಿಗಾರನು ಹೇಳುವುದು. ಬ್ರಿಟಿಷರ ಸೇನೆಯು ಉತ್ಕೃಷ್ಟ ಸೇನೆಯು. ಈ ವರೆಗೆ ರಣರಂಗದಲ್ಲಿ [illegible] ಈ ಸೇನೆಯ ಎಲ್ಲಾ ಸೈನಿಕರು ಹೇಳಕೂಡದಷ್ಟು [illegible] ತರ್ಬೀತು ಹೊಂದಿರುವರು. ಅವರ ಸಹನಶಕ್ತಿಯು ಆಶ್ಚರ್ಯಕಾರಕವು.

ಫ್ರಾನ್ಸಿನ ಪ್ರೆಸಿಡೆಂಟರಾದ ಪೊಯಿನ್‌ಕೇರೆಯವರು ರಣರಂಗದಲ್ಲಿರುವ ಸೇನೆಯನ್ನು ನೋಡಲು ಹೋಗಿರುವರು. ಪ್ರೆಸಿಡೆಂಟ ಪೊಯಿನ್‌ಕೇರೆಯವರು ಈ ಮೊದಲೇ ರಣರಂಗಕ್ಕೆ ಹೋಗಬೇಕೆಂದಿದ್ದರೂ ರಣರಂಗದ ಸ್ಥಿತಿಯು ಒಳ್ಳೆಯದಿರಲಿಲ್ಲವಾದುದರಿಂದ [illegible] ಅವರನ್ನು ಹೋಗಬಿಡಲಿಲ್ಲ.

ಫ್ರಾನ್ಸ್ ಸರಕಾರದವರಿಗೆ ಯುದ್ಧದ ಬಗೆ [illegible] ತಕ್ಕೊಳ್ಳುವ ಅವಶ್ಯ ಬೀಳಲಿಲ್ಲ.

[illegible] ಜನರಲರಾದ ಜೋಬರ್ಟರವರು ಫ್ರಾನ್ಸಿಗೆ [illegible] ಬಂದಿರುವರು. ಇವರು ಜನರಲ್ ಸರ್ ಜೊನ್ ಫ್ರೆಂಚರೊಡನೆ ಕೂಡಿ ಶತ್ರುಗಳೊಡನೆ ಕಾದಾಡಬೇಕೆಂದಿರುವರು. ಇಂಗ್ಲಿಷ್ ಜನರಲರಾದ ಸರ್ ಜೊನ್ ಫ್ರೆಂಚರವರೇ ಬಲು [illegible] ಇವರ ಅಭಿಪ್ರಾಯ.

ರುಶ್ಯ ದೇಶದ ಪ್ರಿನ್ಸ್ ಪೀಟರ್ ಆಫ್ ಲಿವ್ನೆನರವರು ಸೆರೆಯಿಂದ ಬಿಡಿಸಲ್ಪಟ್ಟು ಸೊಲ್‌ಹೊಲ್ಮಿಗೆ ಬಂದು ತಲಪಿರುವರು.

ಬ್ರಿಟಿಷ ಸೇನೆಯಲ್ಲಿ ೧೨ ಮಂದಿ ಆಫೀಸರರು ಹತರಾದರು. ಒಬ್ಬರು ಪಡೆದ ಗಾಯದಿಂದ ಮೃತಪಟ್ಟರು. ೩೨ ಆಫೀಸರರು ಗಾಯಪಡೆದಿರುವರು. ಇಬ್ಬರು ಕಾಣೆಯಾಗಿರುವರು. ಇಬ್ಬರು ಗಾಯಪಡೆದು ಸೆರೆಬಿದ್ದಿರುವರು.

ಬೆಲ್ಜಿಯಮ್ —ಬೆಲ್ಜಿಯನರು ಎಂಟವರ್ಪಿನಲ್ಲಿ ೫ ದಿವಸಗಳ ವರೆಗೆ ಜರ್ಮನರನ್ನು ಎದುರಿಸಿ ನೆತ್ತೆ ನದಿಯ ಪೂರ್ವ ಕಡೆಯಿಂದ ನೆತ್ತೆ ನದಿ ಕಡೆಗೆ ಹಿಂದರಿದರು. ನೆತ್ತೆಯಲ್ಲಿ ಬೆಲ್ಜಿಯನರ ನೆಲೆಯು ಬಲವಾಗಿರುವುದು. ಬೆಲ್ಜಿಯನರು ಇಲ್ಲಿ ಕೊನೆಯ ವರೆಗೆ ಕಾದಾಡುವರು.

ಜರ್ಮನರು ಎರಡು ಸಾರಿ ಹಲ್ಲೆಮಾಡಿ ಬಂದು ಹಿಮ್ಮೆಟ್ಟಿರುವರು. [illegible] ವೆಲ್‌ಹೆಮ್ ಕೋಟೆಯು ಇನ್ನೂ ಬೆಲ್ಜಿಯನರ ಕೈಯಲ್ಲಿರುವುದು. ಜರ್ಮನರು ಈ ವರೆಗೆ ನೆತ್ತೆ ನದಿಯನ್ನು ದಾಟಲು ಪ್ರಯತ್ನಿಸಲಿಲ್ಲ. ದಿನವೆಲ್ಲಾ ತೋಪು ಕಾಳಗ ನಡೆಯುತ್ತಿದೆ. ಅಲ್ಲಿಯ ಸ್ಥಿತಿಯು ಬದಲಾಗಲಿಲ್ಲ.

ಜರ್ಮನರ ವಾಯುನಾವೆಯು ಒಂದು ರಕ್ಕು ರಾಜಶಾಸನವನ್ನು ಎಂಟವರ್ಪಿನೊಳಗೆ ಬಿಸಾಡಿರುವುದು. ಆದರಲ್ಲಿ ಜರ್ಮನರು ಈಗ ರುಶ್ಯ ಪ್ರಿನ್ಸರಿಗಾಗಿಯೂ ಬ್ರಿಟಿಷ ದ್ರವ್ಯಕ್ಕಾಗಿಯೂ ಕಾದಾಡುತ್ತಿರುವರು. ಜರ್ಮನಿಯಲ್ಲಿ ಒಬ್ಬ ರುಶ್ಯನಾದರೂ ಇಲ್ಲ. ಜರ್ಮನರ ಅಭ್ಯಂತರವಿಲ್ಲದೆ ಪಾರಿಸಿಗೆ ಮುಂದರಿಸುತ್ತಲಿರುವರು. ಆದುದರಿಂದ ಶರಣಾಗತರಾಗುವುದು ಒಳ್ಳೇದು ಎಂದು ಆದರಲ್ಲಿ ಬರದಿತ್ತು.

ಲೊವೈನ್ ಪಟ್ಟಣವನ್ನು ಸುಟ್ಟು ಹಾಕಲು ಹುಕುಂ ಮಾಡಿದ ಜರ್ಮನ್ ಮೇಜರ್ ಮೆಂಟೆಫಲ್ ಎಂಬವನನ್ನು ಕೆಲಸದಿಂದ ನಿವೃತ್ತಿ ಪಡಿಸಿರುವರು.

ಎಂಟವರ್ಪಿನ ದೇವಾಲಯದ ಮೇಲೆ ಮತ್ತು [illegible]

[illegible]

ಎಂಟವರ್ಪಿನ ಸುತ್ತಲಿನ ಪಟ್ಟಣಗಳಲ್ಲಿರುವ ಬೆಲ್ಜಿಯನರು ಹೊಲ್ಲೆಂಡಿನ ಎಸ್ಕೆನ್ ಪಟ್ಟಣಕ್ಕೆ ಹೋಗುತ್ತಲಿರುವರು.

ಜರ್ಮನರು ಹೊಲ್ಲೆಂಡ ಸರಹದ್ದಿನಲ್ಲಿರುವ ಲನ್‌ಕೆನ್ ಪಟ್ಟಣವನ್ನು ವಶಮಾಡಿಕೊಂಡಿರುವರು.

ಪೂರ್ವ ರಣರಂಗ:—ರುಶ್ಯನರು ಜರ್ಮನರನ್ನು ಒಸ್ವೆಡ್ ಮತ್ತು ಆಗೊಸ್ತೋವೊ ಎಂಬಲ್ಲಿ ಸೋಲಿಸಿ ಮಜ್ಯೂರೆನ್ ಸರೋವರದ ಕಡೆಗೆ ಮುಂದರಿದಿರುವರು.

ಲೊಡ್ಜ್ ಎಂಬಲ್ಲಿ ರುಶ್ಯನರು ಜರ್ಮನರ ಕುದುರೆ ಪಡೆಯನ್ನು ಮುರಿಯಬಡಿದುದರಿಂದ ಕಾಲಾಳು ಸೇನೆಯೂ ಹತವಾಗಿರುವುದು. ಜರ್ಮನರು ಅಗೊಸ್ತೋವೊ ಎಂಬಲ್ಲಿ ಪೂರ್ಣವಾಗಿ ಸೋಲಿಸಲ್ಪಟ್ಟು ಪೂರ್ವ ಪ್ರುಶ್ಯದ ಸರಹದ್ದಿಗೆ ಓಡಿಹೋಗುತ್ತಲಿರುವರು. ರುಶ್ಯನರು ಅವರನ್ನು ಹಿಂದಟ್ಟುತ್ತಿದ್ದಾರೆ.

ರುಶ್ಯನರು ಕಾರ್‌ಪೆಥೆನಿಯವನ್ನು ದಾಟಿ, ನಡ್ಡಗಿ ಕಣಿವೆಗೆ ಹೋಗಿ ಸೇರಿ, ಅಲ್ಲಿದ್ದ ಆಸ್ಟ್ರೀಯನರನ್ನು ಸೋಲಿಸಿ ಫಿರಂಗಿಗಳನ್ನು ವಶಮಾಡಿಕೊಂಡಿರುವರು.

ಪೂರ್ವ ರಣರಂಗವು ಲೊಡ್ಜಿನಿಂದ ವಿಸ್ತುಲದ ವರೆಗೆ ಮುಂಚರಿಸಿರುವುದು. ಗೆಲೀಸಿಯದಿಂದ ಮುಂದರಿಸುವ ರುಶ್ಯರ ಸೇನೆಯು ಕ್ರಾಕೋಗೆ ಹೋಗಿ ಕೂಡುವುದು. ಇಲ್ಲಿ ದೊಡ್ಡ ಕಾಳಗ ನಡೆಯುವುದು.

ರುಶ್ಯನರು ಕಾರ್‌ಪೆಥೇನಿಯದ ದಾರಿಗಳನ್ನು ಹಿಡಿದಿರುವುದರಿಂದ ಜರ್ಮನರಿಗೆ ಪೆಟ್ರೋಲ್ ಹೋಗದ ಹಾಗೆ ತಡೆಯಾಯಿತು. ಈ ಕಾರಣದಿಂದ ಜೆಫಲಿನ್ ವಾಯುನಾವೆಗಳನ್ನು ನಡಿಸುವುದು ಕಷ್ಟಸಾಧ್ಯವಾಗುವುದು.

ಜರ್ಮನರು ಆಸ್ಟ್ರಿಯರೊಡನೆ ಕೂಡಿರುವುದರಿಂದ ಆಸ್ಟ್ರಿಯಾದವರು ತಮ್ಮ ಸೈನಿಕರನ್ನು ಸರ್ವಿಯಕ್ಕೆ ವಿರೋಧವಾಗಿ ಬೊಸ್ನಿಯಕ್ಕೆ ಕಳುಹಿಸುತ್ತಲಿರುವರು.

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ 25,000 ರಕ್ಷಿತ ಧನವಾಗಿರುತ್ತದೆ ರಕ್ಷಿತ ಧನದ ಪೈಕಿ ರೂ 21,685—0—0 ಸರಕಾರದ ರೂ 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು ಈ ವಿಷಯ ಇತರ ವಿಶೇಷ ಮಾಹಿತಿ ಬಗ್ಗೆ ಬೇಂಕಿನ ಸೆಕ್ರೆಟರಿಗಳಿಗೆ ಬರಕೊಳ್ಳಬಹುದು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಇ ಗಿರುವವು ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ಧಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯ ಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ [illegible], ಜನಕವಂಶ ಶರ್ಯಾತಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸಾದವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವವು. ಮತ್ತು ಭಾಗವತಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಒಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—[illegible]—೦

[illegible] ಎಂ. [illegible]
[illegible]

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾವುದೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು [illegible] ಕೊಡು ತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ [illegible] ವಿದ್ಯಾರ್ಥಿ

ಗಳಿಗೂ ಅಷ್ಟೇ ಅತ್ಯಂತ ಸಹಕಾರಿಯಾಗಿರುತ್ತದೆ ಈ ತೈಲವನ್ನು ತೊಡೆದುಕೊಳ್ಳುತ್ತೀರಿ, ಮನಸ್ಸಿನ ಬೇನೆಯು [illegible], [illegible] ಪ್ರಫುಲ್ಲಿತವಾಗುತ್ತದೆ [illegible] ತೊಡೆಯು ತೊಡಗಿದ [illegible] ಬಿದ್ದು ಹೋಗಲಾರವು, ಅವು [illegible] ದಟ್ಟವಾಗಿ ಬೆಳೆದು ಸಮೃದ್ಧವಾಗುವವು [illegible] ವಾದರೋ ಮದುವೆಯೂ ಮೋಹಕವೂ ಆಗಿರುವವು, ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪ ಯೋಗಿಸಿ ನಿಮ್ಮ ಹಣವನ್ನು [illegible] ಹಾಳು ಮಾಡುವುದಕ್ಕಿಂತ ಒಂದೇಯೊಂದುಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋ ಗಿಸಿ ಪರೀಕ್ಷಿಸಿರಿ ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒವ್ ಮೆರಿಟ್" [illegible] ತಾಪತ್ರವೂ, ಇತರ ಸಾವಿರಾರು [illegible] ಮೋತ್ತಮವಾದ ಮಾನಪತ್ರಗಳೂ ದೊರಕಿವೆ

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ [illegible] ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದ [illegible] ಸಾಧನವಾಗಿರುತ್ತದೆ ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೇ ವಿ. ಪಿ. [illegible]

ಸೀಸೆಯೊಂದರ ಕ್ರಯ ರೂ. 1-0-0, ಅ. ವೆ 0-4-0 ಬೇರೆ 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ — ಅನೇಕ ದುರಾಸೇಕರಾದ ವ್ಯಾಪಾರಿಗಳು [illegible] ಅಕರಿಯಿಂದ ತಮಗೆ ಅತ್ಯಲ್ಪ ಸಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕ ತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ನ್ನೇ ಬೇಕೆಂದು ಕೇಳಿರಿ, ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದನ್ನು ಮಹರುಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಬೇಕಿಲ್ಲದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮು ಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗು ವುದು. ಬೇರೆ ಯಾವ ಪರಿಮಳದ್ರವ್ಯದ ಗಂಧವು ಹೇಗೂ ಇರಲಿ ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊ ಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಪ್ರಮಾಣದ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ [illegible] ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ [illegible] ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪೆರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ

ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ ಧಾತು ದೌರ್ಬಲ್ಯವನ್ನೂ ವಾಸಿಮಾಡುತ್ತದೆ. ಕಳೆಗುಂದಿ ಒರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ ಬುದ್ಧಿಯ ಮತ್ತು ಮಿದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ, ಕಲಿಯುವದಕ್ಕೆ ಅಥವಾ ಕಾರ್ಯ [illegible] ವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ [illegible] ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನವೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮಿದುಳನ್ನು ಬೆಳೆಯಿಸಿ ವೃದ್ಧಿಗೊಳಿಸುವ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ದಮೋದರ ದೇಶಕರಿಗೂ ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, [illegible] ಉಸ್ತಾದರಿಗೂ ಸಾಧಾರಣವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ರೀತಿ ಆವಶ್ಯಕವಾಗಿರುತ್ತವೆ

[illegible] ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳ ಗುಣವಾದದ್ದು ನಿಸ್ಸಂಶಯವು. ಇಂದ್ರಿಯಗಳ [illegible] ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ

[illegible] ಸ್ನಾಯುಗಳನ್ನು [illegible], ರೋಗದಿಂದ ಆಳಿದ ದೇಹಭಾಗಗಳನ್ನು ಇವು [illegible] ರೋಗದಿಂದ [illegible] ಹೋದ ಅಥವಾ [illegible] ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನ [illegible] ಈ [illegible] ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವ [illegible] ದಿನದಿಂದಲೇ ಬೋಧೆಯಾಗುತ್ತದೆ ಇವುಗಳನ್ನು ಸೇವಿಸಿದ ದಿನವೇ [illegible] ಚೇತನವು ಮೊಳತು ದೇಹದಲ್ಲಿ ಧೈರ್ಯ, ಬಲ, [illegible] ಸಂಚಾರವಾಗುತ್ತದೆ ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರುತ್ತದೆ "ಜಾಡಸೆ" ಯು ಕ್ರಮವನ್ನು ಅನುಸರಿಸುತ್ತದೆ, ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ, ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ, ಗತಿಯು ದೃಢವಾಗುತ್ತದೆ ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ, ಸ್ಮೃತಿಶಕ್ತಿಯು ಗ್ರಾಹಕವಾಗುತ್ತದೆ, ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರೆದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

ದಿವಾಕರ ಕೃಷ್ಣಾಜಿ ದಾಹರೀ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ. — "ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ, ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ — "ತಾವು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ "

3 ಅಬೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೇಲ್, ಪ್ರನೋಲ್ — "ತಾವು [illegible] ಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. [illegible] ಪುನಃ ರವಾನಿಸಿರಿ."

4 ವಿ. ಆರ್. ಬಾಕ್ರೆ, ಡಿಸ್ಟ್ರಿಕ್ಟ್ ಕೋರ್ಟ ವಕೀಲ, [illegible] — "ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡಿ [illegible] ಗಿ ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು ಸೀಸೆಗಳನ್ನು [illegible]

5 [illegible]

THE ANGLO INDIAN DRUG & CHEMICAL COMPANY, 10 MARKET BOMBAY 2.

[illegible]

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು

ಇದರ ಉಪಯೋಗದಿಂದ —ವಾತ, ಸಂದಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಗಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟದ್ದಾರೆ ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ ಬಾಟ್ಲಿ ಒಂದರ ಕಿಮ್ಮತ್ತು ಆಣೆ 8 ಡಜನ್ 1ಕ್ಕೆ ರೂ 5 0 0 ವಿ ಪಿ ಖರ್ಚು ಪ್ರತ್ಯೇಕ

ಎಚ್ಚರಿಕೆ —ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಛಾಪೆಗಳುಳ್ಳ ಕರಡಿಗೆಯನ್ನೇ ವಿಮರ್ಶಿಸಿ ಪಡಕೊಳ್ಳಿರಿ

ಗಜಕರ್ಣದ ಮುಲಾಮು.

ಮೂರು ಸರ್ತಿ ಹಚ್ಚುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣೀ ಟ್ರೇಡ್‌ಮಾರ್ಕ 0—6—0 3 ಡಬ್ಬಿಗಳಿಗೆ 0—15—0. ವಿ ಪಿ ಪ್ರತ್ಯೇಕ

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ ಒರಿ ಚೋಕಿನ್ನ ಹುಡಿ ಅಲ್ಲ ಡಬ್ಬಿ 1ಕ್ಕೆ 0—2—0 ಡಜನ್ 1ಕ್ಕೆ 1—2—0 ವಿ ಪಿ ಪ್ರತ್ಯೇಕ

ಸುಂದರಿ ಮುಲಾಮು.

ಮುದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು ಡಬ್ಬಿ 1ಕ್ಕೆ ರೂ. 0—8—0

ಮೋಹಿನಿ ತೈಲ.

ಈಗ ಹಲವು ನಮೂನೆಯ ತೈಲಗಳು ಉಪಯೋಗಿಸಿದವರು ಈ ನಮ್ಮ ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟದೆ ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳೆಯುವವು

ಬಾಟ್ಲಿ ಒಂದರ ಕಿಮ್ಮತ್ತು ಆಣೆ 0—12—0

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ದರ ರೂ 1—0—0

ಕೆ. ನಟರಾಜನ್ ಎಡಿಟ್, ಇಂಡಿಯನ್ ಸೋಷಿಯಲ್ ರಿಫ್ಹೊರ್ಮರ್:— ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷದ.

ಡಬ್ಲ್ಯು ಮೆಕ್ಸವೆಲ್, ವೈನಾಡ:— ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತವೆ

ಆರ್. ಆರ್. ಗಂಗೋಲಿ:— ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ

ಡಾಕ್ಟರ್ ದಾಂಡೆಕರ್, ಎಲ್. ಎಮ್. ಎಂಡ್. ಎಸ್:— ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖವಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖವಾಗಿ ಅಮೃತಾಂಜನ ರವಾನ್ನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ—ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಶಿಕ್ಕುವವು,

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ಸ ಎಂಡ್ ಸನ್ಸ್, ದಿ ಊಲನ್ ಮಾರ್ಟ, ಕೊಚ್ಚಿಕಾರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪೊ,

9 ಜಹಂಗೀರ್ ಸ್ಟ್ರೀಟ್,
ಜೋರ್ಜ ಟೌನ್, ಮದ್ರಾಸು.

109 ಫ್ರೇಯರ್ ರೋಡ,
ಮುಂಬಯಿ

Printed & Published by V. S. Kamath at the Mangalore Trading Association's Sharada Press, Mangalore.

Registered No. 408 M.

ಸ್ವದೇಶಾಭಿಮಾನಿ

ಪ್ರತಿ ಶುಕ್ರವಾರವೂ ಪ್ರಕಟಿಸಲ್ಪಡುವುದು.

ಚಂದಾನಿರ್ಣಯ.—ವರುಷ ೧ಕ್ಕೆ ರೂ. 1—4—0. ಟಪ್ಪಾಲು ಹಾಸಲು ಸೇರಿ ರೂ. 2—1—0

ಪುಸ್ತಕ VIII | ಮಂಗಳೂರು ತಾ 16 ನೇ ಒಕ್ಟೋಬರ ಶುಕ್ರವಾರ 1914. | ಸಂಚಿಕೆ 42

ನೋಟೀಸು.

ದಕ್ಷಿಣ ಕನ್ನಡಾ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ

ಓ ಪಿ. ನಂಬ್ರ 114/1914

ಕಮಲಮ್ಮಾ ಮ್ಯಾನರಳು, ಇವಳ ಗಾರ್ಡಿಯನ್ ಗಂಡ ವಾಸುದೇವ ಕೊಡ್ಮತ್ತಾಯಾ } ಅರ್ಜಿದಾರ

ಮತ್ತು

1. ಅಪ್ಪುಯಾನ ವೆಂಕಟ್ರಮಣ ಭಟ್ಟಾ
2. ಕೃಷ್ಣಾ ಮ್ಯಾನರ, ಗಾರ್ಡಿಯನ್ 1ನೇ ರಸ್ಪೋಂಡೆಂಟನು } ರಸ್ಪೋಂಡೆಂಟರು

ಸಂ. 1913ನೇ ಇಸವಿ ಜುಲಾಯಿ ತಿಂಗಳಲ್ಲಿ ಬೆಳ್ತಂಗಡಿ ತಾಲೂಕು ಕಕ್ಕೆ ಗ್ರಾಮದಲ್ಲಿ ಮೃತಪಟ್ಟ ಹೊಸ್ಮೋಡಿ ಸುಬ್ರಾಯ ಭಟ್ಟಗೆ ಹೊರಗಿನಿಂದ ರತಕ್ಕ ಸಾಲಗಳನ್ನು ವಸೂಲು ಮಾಡತಕ್ಕ ಬಗ್ಗೆ ಮೇಲಿನ ಅರ್ಜಿದಾರನು ತನ್ನ ಹೆಸರಲ್ಲಿ ಸರ್ಟಿಫಿಕೇಟು ಸಿಕ್ಕಬೇಕಾಗಿ ಅಪೇಕ್ಷಿಸಿ ಮೇಲ್ಕಂಡ ಕೋರ್ಟಿನಲ್ಲಿ ಮಾಡಿದ ಅರ್ಜಿಯು ತಾ. 17-11-1914ಕ್ಕೆ ತನಿಕೆಗೆ ಇಟ್ಟಿರುತ್ತದೆ. ಸದರಿ ವಿಷಯದಲ್ಲಿ ಆಕ್ಷೇಪ ಇದ್ದವರು ಮೇಲ್ಕಂಡ ತಾರೀಕಿನ ಒಳಗೆ ಅವರವರ ಆಕ್ಷೇಪಗಳನ್ನು ಸದರಿ ಕೋರ್ಟಿನಲ್ಲಿ ಜಾಹೀರು ಮಾಡತಕ್ಕದ್ದು

ಮಂಗಳೂರು.
ತಾ. 12—10—1914.

G Krishna Rau,
Pleader for Petitioner

ವಿಮೇ ಕುರಿತು ವಿಚಾರ

ಭಾರತ ವಿಮೇ ಸಂಘದ ಮುಖ್ಯ ಏಜಂಟರಾದ ಮೆಸ್ಸರ್ಸ್ ಬಿ ಬಾಬುರಾವ್ ಎಂಡ್ ಸನ್‌ರವರಿಗೆ—

ಪ್ರಿಯರೇ,

ಕಳದ ಅಗೋಸ್ತು 31ನೇ ತಾರೀಕಿನಲ್ಲಿ ಮೃತಪಟ್ಟ ನನ್ನ ಹೆಂಡತಿ ರಾದಮ್ಮನ ಪೋಲಿಸಿಯ ಬಾಬ್ತು ನಿಮ್ಮ ಸಂಘದಿಂದ ನನ್ನ ಮಕ್ಕಳಿಗೆ ಬರತಕ್ಕ 1000 ರೂಪಾಯಿಗಳನ್ನು ಅಲ್ಪವಾದರೂ ಖರ್ಚು ತಗಲಗೊಡದೆ ನೀವು ಅತಿ ತ್ವರೆಯಿಂದ ತರಿಸಿ ಕೊಟ್ಟದ್ದಕ್ಕೆ ನಾನು ವ ನನ್ನ ಚಿಕ್ಕ ಮಕ್ಕಳು ನಿಮಗೂ ನಿಮ್ಮ ಸಂಘದವರಿಗೂ ಮನಃಪೂರ್ತಿಯಾಗಿ ವಂದಿಸುವದಲ್ಲದೆ ನಿಮ್ಮ ಸಂಘದ ಶ್ರೇಯೋಭಿವೃದ್ಧಿಯನ್ನು ನಿರಂತರವೂ ಹಾರೈಸುತ್ತಿರುವೆವು.

ಮಂಗಳೂರು,
ತಾ. 9—10—1914.

ಯು. ಗೋಪಾಳನಾಯ್ಕ
ಕ್ಲಾರ್ಕ್, ಮುನ್ಸಿಫ್ ಕೋರ್ಟ್

ದಿ ಯುನಿವರ್ಸಲ್ ಎಸ್ಸ್ಯುರೆನ್ಸ ಕಂಪೆನಿ ಲಿಮಿಟೆಡ್, ಕಲ್ಕತ್ತಾ.

ನಿಮ್ಮೊಳಗೆ ಸದರಿ ಕಂಪೆನಿಯ ಸಬ್ ಏಜಂಟರಾಗಿದ್ದ ಮಣೂರು ಅನಂತ ಹೊಳ್ಳರನ್ನು ಸದರಿ ಕಂಪೆನಿಯ ಏಜನ್ಸಿ ಕೆಲಸದಿಂದ ನಿವೃತ್ತಿ ಪಡಿಸಿರುವದರಿಂದ ಕಂಪೆನಿಗೆ ವಿಮೆದಾರರಿಂದ ಬರತಕ್ಕ ಎಲ್ಲಾ ವಿಧವಾದ ಐವಜುಗಳನ್ನು ವಿಮೆದಾರರು ಇನ್ನುಮುಂದೆ ನೇರಾ ನಮ್ಮ ಬಳಿಗೆ ರವಾನಿಸತಕ್ಕದ್ದು. ಇದಕ್ಕೆ ವಿರೋಧವಾಗಿ ಅವರ ಕೂಡ [illegible] ಯಾ ಕಂಪೆನಿಗೆ ಬಾಧಿಸತಕ್ಕದ್ದಲ್ಲ.

ಯುದ್ಧ ಸಮಾಚಾರವು.

ಯುದ್ಧ ಸಮಾಚಾರವನ್ನು ಸ್ವದೇಶಾಭಿಮಾನಿಯು ಸ್ಪೆಶ್ಯಲ್ ಸಪ್ಲಿಮೆಂಟಾಗಿ ಪ್ರತಿನಿತ್ಯದಲ್ಲಿಯೂ ಪ್ರಕಟಿಸುತ್ತಿರುವೆವು. ಈ ಸಪ್ಲಿಮೆಂಟಗಳನ್ನು ದಿನಂಪ್ರತಿ ಕ್ರಮಪ್ರಕಾರ ಪಡೆಯಲಪೇಕ್ಷಿಸುವ ಪರಸ್ಥಳದವರು ತಿಂಗಳೊಂದಕ್ಕೆ ರೂ 1ರಂತೆ ಮನಿಯಾರ್ಡರ್ ವ ಸ್ಟಾಂಪುಗಳ ಮೂಲಕ ಚಂದಾಹಣ ರವಾನಿಸಿ ಕೊಟ್ಟರೆ ಒಂದು ತಿಂಗಳವರೆಗೆ ಯುದ್ಧ ಸಮಾಚಾರದ ಸಪ್ಲಿಮೆಂಟುಗಳನ್ನು ನಿತ್ಯ ಕಳುಹಿಸಿಕೊಡುವೆವು

ಮ್ಯಾನೇಜರ್
ಸ್ವದೇಶಾಭಿಮಾನಿ,
ರಥಬೀದಿ, ಮಂಗಳೂರು.

"ಸಕ್ಕರೆಯ ಸಾರವು.

ಬಹಳ ಅನುಕೂಲವೂ ಉಪಯೋಗಕರವೂ ಆಗಿರುವುದು.

ಸಕ್ಕರೆಯನ್ನು ಉಪಯೋಗಿಸಕೂಡದಂಥಾ

ಮೂತ್ರ ರೋಗಿಗಳಿಗೆ ಅತ್ಯವಶ್ಯಕವಾದದ್ದು.

ಮೇಲಣ ರೋಗಬಾಧೆಯು ಇಲ್ಲದವರು ಸಹ ಇದನ್ನು ಉಪಯೋಗಿಸಿಕೊಳ್ಳಬಹುದು. ಸಾಧಾರಣ ಒಂದು ಕುಡುತೆ ಕಾಫಿ ವ ಚಾ ಇತ್ಯಾದಿಗಳಿಗೆ ಒಂದು ಕಾಳಿನ ಪ್ರಮಾಣದಲ್ಲಿ ಈ ಸಕ್ಕರೆಯ ಸಾರವನ್ನು ಹಾಕಿದರೆ ಸರಿಯಾಗಿ ಸವಿಯನ್ನುಂಟುಮಾಡುತ್ತದೆ. ಸಕ್ಕರೆಯ ಸಾರ ತುಂಬಿಸಿದ ಸುಂದರವಾದ ಗಾಜಿನ ಕರಡಿಗೆ ಒಂದಕ್ಕೆ ಕ್ರಯ 0—6—0

ಲೆಕ್ಟೋಮಿಟರ್ ಎಂಬ ಹಾಲನ್ನು ಪರೀಕ್ಷಿಸುವ ಉಪಕರಣವು

ಗೃಹಕೃತ್ಯದ ಉಪಯೋಗದ ಬಗ್ಗೆ ಶುದ್ಧವಾದ ಹಾಲು ದೊರಕುವದೇ ಕಷ್ಟಸಾಧ್ಯ. ನೀರನ್ನು ಹಾಲಿಗೆ ಕೂಡಿಸಿ ಮಾರುವ ಅಭ್ಯಾಸವು ಬಹಳವಾಗಿ ರೂಢಿಗೆ ಬಂದಿರುವುದು. ನೀರಿಗೆ ಬೆಲೆಕೊಟ್ಟು ಹಾಲೆಂದು ಕುಡಿಯುವೆವು. ಲೆಕ್ಟೋಮಿಟರ್ ಎಂಬೀ ಉಪಕರಣದಿಂದ ಹಾಲಿಗೆ ನೀರನ್ನು ಕೂಡಿಸಿರುವುದೋ ಎಂಬದನ್ನು ಹಾಲನ್ನು ತೆಗೆದುಕೊಳ್ಳುವಾಗಲೇ ಸುಲಭದಲ್ಲಿ ಯಾರಿಂದಲೂ ಪರೀಕ್ಷಿಸಲಾಗುತ್ತದೆ. ಈ ಉಪಕರಣವನ್ನು ಉಪಯೋಗಿಸುವ ಕ್ರಮವು ಇದರೊಂದಿಗೆ ಸೂಚಿಸೋಣಾಗಿರುತ್ತದೆ.

ಲೆಕ್ಟೋಮಿಟರ್ ಒಂದಕ್ಕೆ ಕ್ರಯ ರೂ 1—0—0.

ಹಲವು ವರುಷಗಳಿಂದ ಬಹಳ ಗುಣಕಾರಿಯೆಂದು ಅನುಭವ ಸಿದ್ಧವಾದ

ಗಜಕರ್ಣದ ಮುಲಾಮು

ಒಂದೆರಡು ಸಲ ಇದನ್ನು ಹಾಗಿಸುವಷ್ಟರಲ್ಲಿ ಈ ಮುಲಾಮಿನ ಯೋಗ್ಯತೆಯು ವ್ಯಕ್ತವಾಗುವದು. ಈ ಮುಲಾಮನ್ನು [illegible] ತೊಳೆದು [illegible] ಉಪಯೋಗಿಸತಕ್ಕದು. ಡಬ್ಬಿಯೊಂದಕ್ಕೆ ಕ್ರಯ ರೂ. 0-6-0 ಮಾತ್ರ.

ಮಂಗಳೂರು [illegible] ಎಸೋಸಿಯೇಶನ್,
[illegible] ಮಂಗಳೂರ

ಬಹುಮಾನ! ಬಹುಮಾನ!! ಬಹುಮಾನ!!!

1—4—0ಯನ್ನು ಮಣಿಯಾರ್ಡರ ಮೂಲಕ ಕಳುಹಿಸುವವರಿಗೆ ಒಂದು ಜಂಟಲ್‌ಮನ್ ಜೇಬುಗಡಿಯಾರ, ಗಾಢನಿದ್ರೆಯಲ್ಲು ಸಹ ಎಚ್ಚರಗೊಳಿಸುವ ಅಲಾರಂ ಟೈಂಪೀಸು, ರೈಲ್ವೆ ಲಿವರ್ ಎಂಬ ಸಾದಾ ಟೈಂಪೀಸು, 18 ಕ್ಯಾರೆಟ್ ಚಿನ್ನದ ಸುಂದರವಾದ ಕೈಉಂಗುರ ಅಲ್ಲದೆ ಶಾಯಿ ಇಲ್ಲದೆ ತಾನಾಗಿ ಬರಿಯುವ 14 ಕ್ಯಾರೆಟ್ ಚಿನ್ನದ ಮುಳ್ಳುಳ್ಳ ಫೌಂಟನ್ ಪೇನು ಇವುಗಳಲ್ಲಿ ಯಾವದಾದರೂ ಇದನ್ನು ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಯಾಗುವದಕ್ಕಾಗಿ ಕೆಲವು ಕಾಲದ ವರೆಗೆ ಮಾತ್ರವೇ ಕೊಡಲ್ಪಡುತ್ತೆ. ಮೇಲೆ ಹೇಳಿದ ಸಾಮಾನುಗಳು ಪ್ರತಿ ಒಂದು ರಖಂನಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆ ಮಣಿಯಾರ್ಡರ್ ಕಳುಹಿಸಿ ವಿ ಪಿ ಮೂಲಕ ಸಾಮಾನುಗಳನ್ನು ಕಳುಹಿಸುವದಿಲ್ಲಾ

ವಿಳಾಸ — ಗೌಡ್ ಅಂಡ್ ಕಂಪೆನಿ,
ತಿರುವಲ್ಲಿಕೇಣಿ, ಮದರಾಸು

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ 1-15-0



ಇದು 18 ಮೊಳ ದಾರಾಳವಾಗಿದೆ ಉಡಲು ಲಾಯಖಾದದ್ದು ಒಣ್ಣ ಹೋಗದು ಸುಂದರವಾದ ಸೆರಗು. ಫೋಟೋ ಪ್ರಕಟಣೆಗಳ ದೆಸೆಯಿಂದ ಈ ಭಾರೀ ಕ್ರಯದ ಸೀರೆಯನ್ನು ಅಸಲು ಬೆಲೆಗೆ ತಗ್ಗಿಸಿ ಮಾರುತ್ತೇವೆ ಜಾಗ್ರತೆ ತರಿಸುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತೆ

ವಿಳಾಸ:— ರಾಮರಾವ್, ಎಸ್. ಎಂ. ಕೋಯಿಲ್ ವೀದಿ,
[139-4] ತಿರುವಲಕ್ಕೇಣಿ, ಮದರಾಸು

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 0—7—0



ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾದರಿ ಅಡ್ಡಿಗೆಯನ್ನು ನೋಡಬೇಕೆಂದು ಬಯಸುವವರಿಗೆ ಮಾದರಿ ಅಡ್ಡಿಗೆಯನ್ನು ಉಚಿತವಾಗಿ ಕಳುಹಿಸುತ್ತೇವೆ

ಇದು ಕೆನಡಿಯನ್ ಚಿನ್ನದಿಂದ ಗಟ್ಟಿ ಗಜ್ಜೆಗಳನ್ನು ತಯಾರಿಸಿ ಸುಂದರವಾಗಿ ತುರ್ಕುಮಣಿಗಳನ್ನು ಇಟ್ಟು ಅಪರಂಜಿ ಮುಲಾಮನ್ನು ಹಾಕಿ ನೋಡುವವರಿಗೆ ಆಶ್ಚರ್ಯವಾಗುವ ಹಾಗೆ ಸ್ವಲ್ಪ ಕ್ರಯವನ್ನಿಟ್ಟು ತಯಾರಿಸಿರುತ್ತೆ ಇದು ಗಾಜಿನ ಮಣಿಗಳು, ನಿಜವಾದ ಗಟ್ಟಿ ಗೆಜ್ಜೆಗಳು, ಸ್ತ್ರೀಯರು ಕೊರಳಲ್ಲಿ ಧರಿಸುವದಕ್ಕೆ ಲಾಯಖ್ಖಾದದ್ದು.

ವಿಳಾಸ — ಎಸ್. ಎನ್ ಮೂರ್ತಿ ಕಂಪೆನಿ,
ತಿರುವಲಕ್ಕೇಣಿ, ಮದರಾಸು

ಸೂರ್ಯೋದಯ ಪುಸ್ತಕ ಭಂಡಾರ.

ನಮ್ಮ ಪುಸ್ತಕ ಶಾಲೆಯಲ್ಲಿ ದೊರಕುವ ಪುಸ್ತಕಗಳು.

ದ್ವಾದಶಸ್ಕಂದ ಭಾಗವತ, ಅವ್ವಲ್ ಗ್ಲೇಜ್‌ಕಾಗದ ಪ್ರತಿ ರೂ ೫ ದ್ವಾದಶಸ್ಕಂದ ಭಾಗವತ ಸಾಧಾರಣ ಕಾಗದ ದುಯ್ಯಂ ಪ್ರತಿ ರೂ ೪ ದಶಪರ್ವ ಭಾರತ ಮೈಸೂರು ಪ್ರತಿ ರೂ ೨. ದಶಪರ್ವ ಭಾರತ ದುಯ್ಯಂ ರೂ ೧—೮—೦ ಭಾರತ ಕಥಾಸಂಗ್ರಹ ೧೮ ಪರ್ವದ್ದು ಆಣೆ ೬ ತೊರವೆ ರಾಮಾಯಣ ಅವ್ವಲ್ ಪ್ರತಿ ರೂ ೨ ತೊರವೆ ರಾಮಾಯಣ ದುಯ್ಯಂ ಪ್ರತಿ ರೂ ೧ ರಾಮಾಯಣ ಕಥಾಸಂಗ್ರಹ ದಶಾವತಾರ ಕಥೆಗಳ ಸಹಿತ ಅವ್ವಲ್ ರೂ. ೧. ಸೋಮೇಶ್ವರ ಶತಕ ಟೀಕು ೦—೨—೬ ಸೋಮೇಶ್ವರಶತಕ ಮೂಲ ೬ ಪೈ ಹರಿಭಕ್ತಿ ಸಾರ ಟೀಕು ೦—೨—೬ ಹರಿಭಕ್ತಿ ಸಾರ ಮೂಲ ೬ ಪೈ. ನಿಜಲಿಂಗಶತಕ ಟೀಕು ೦—೨—೬ ನಿಜಲಿಂಗಶತಕ ಮೂಲ ೬ ಪೈ. ಸಟೀಕ ಸುದತೀ ಶತಕ ಆಣೆ ೨ ಟೀಕು ತಾತ್ಪರ್ಯ ಸಹಿತ ಭಾಸ್ಕರಶತಕ ಆಣೆ ೬. ಬಸವ ಪುರಾಣ ಆಣೆ ೧೨. ಚನ್ನ ಬಸವ ಪುರಾಣ ಅವ್ವಲ್ ಗ್ಲೇಜ್‌ಕಾಗದ ರೂ ೧—೪—೦. ಚನ್ನ ಬಸವ ಪುರಾಣ ದುಯ್ಯಂ ಆಣೆ ೧೨. ದೇವೀ ಮಹಾತ್ಮ್ಯ ಪದ್ಯ ಆಣೆ ೪.

ಇದಲ್ಲದೆ ವೈದ್ಯಗ್ರಂಥಗಳು, ಜೋತಿಷ್ಯ ಗ್ರಂಥಗಳು, ನಾವಿಲ್ ಕಥೆಗಳು, ಹೊಸಹಾಗಿ ಬಂಗಾಳಿಯಿಂದ ಕನ್ನಡಿಸಿದವುಗಳು, ನಾಟಕಗಳು, ವೇದಾಂತ ಗ್ರಂಥಗಳು ವಗೈರೆ ನೂರಾರು ಪುಸ್ತಕಗಳು ಇವೆ. ನೋಡಬಯಸುವವರಿಗೆ ನಮ್ಮ ಪುಸ್ತಕಗಳ ಒಂದು ಕ್ಯಾಟಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ:— ಮ್ಯಾನೇಜರ
ಸೂರ್ಯೋದಯ ಪುಸ್ತಕ ಭಂಡಾರ

ವ್ಯಾಧಿತರೇ!!

ಇತ್ತ ಲಕ್ಷ್ಯ ಕೊಡಿರಿ.

ಯುಕಲಿಪ್ಟಸ್ ತೈಲ —ತಲೆನೋವು, ಕಣ್ಣುಉರಿ, ಕತ್ತಿ, ಕಲ್ಲಿನಿಂದುಂಟಾದ ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಪಿತ್ತ ಉಷ್ಣಭೇದಿ, ಹೊಟ್ಟೆಯಲ್ಲೆ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧ ಬಿಳುಪು, ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಕಾಲ ವಿಷಮಜ್ವರ (ಮಲೇರಿಯ) ವಾಂತಿಭೇದಿ, ಹೆಂಗಸರ ಹೊಟ್ಟೆ ನೋವು ಮೊದಲಾದ ಸರ್ವ ವಿಧವಾದ ರೋಗಗಳಿಗೆ ದಿವ್ಯೌಷಧಿ. ಕ್ರಯ ದೊಡ್ಡ ಸೀಸೆಗೆ ೫ ಆಣೆ. ವ್ಹಿ. ಪಿ. ಬೇರೆ. ಡಜನ್ ಸೀಸೆಗಳನ್ನು ತರಿಸಿಕೊಂಡರೆ ರೂ ೩. ವ್ಹಿ ಪಿ ಬೇರೆ. ಅನುಪಾನ ಪತ್ರ ಸೀಸೆಯೊಂದಿಗೆ

ಇಕ್ಲಿಪ್ಸ್ ಬಾಮ್.—ವಾತ, ಸಂಧಿವಾತ, ಶಿರೋಭಾರ, ಅರ್ಧಾಂಗವಾಯು, ಮೈನೋವು, ಶೀತ, ಕೆಮ್ಮು, ಹಲ್ಲುನೋವು, ಘಾಯ, ಪಕ್ಷವಾತ, ಮೊಡವೆ, ನಾಯಿಕಡಿತ, ಕಜ್ಜಿ, ಹುಳ ಮೇಯುವುದು ಮೊದಲಾದ ಸರ್ವ ವಿಧದ ನೋವುಗಳಿಗೆ ದಿವ್ಯೌಷಧ ಬಾಟ್ಲಿಗಕ್ಕೆ ೮ ಆಣೆ. ವ್ಹಿ. ಪಿ. ಬೇರೆ ಡಜನ್ ಬಾಟ್ಲಿಗಳಿಗೆ ರೂ. ೪-೧೨-೦. ವ್ಹಿ. ಪಿ. ಬೇರೆ

ಸ್ನೇಹಲತಾ ಮಸ್ತಕತಾಪಹಾರಿಣೀ —ತಲೆನೋವು, ಶಿರೋಭಾರ, ತಲೆಸಿಡಿತ ಮೊದಲಾದ ಮೆದುಳು ರೋಗಗಳಿಗೆ ದಿವ್ಯತೈಲ. ಕೇಶವು ಉದ್ದ ಬೆಳೆಯುವುದು. ಸೀಸೆ ೧ಕ್ಕೆ ೧೨ ಆಣೆ ವ್ಹಿ. ಪಿ. ಬೇರೆ. ಡಜನ್ ಬಾಟ್ಲಿಗಳಿಗೆ ರೂ ೮ ವ್ಹಿ ಪಿ. ಬೇರೆ.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಕಂಕನಾಡಿ ಪೋಸ್ಟು, ದ. ಕ

ದಸರಾ ಬಹುಮತಿ ಗಡಿಯಾರ.

15 ಬಹುಮಾನ ಬಹುಮತಿ ಸಹಿತ ರೂ. 3—14—0



ಇದರಲ್ಲಿ ನಮೂದಿಸಿರುವ 7 ರೂಪಾಯಿ ಬೆಲೆಯುಳ್ಳ ಗಡಿಯಾರವನ್ನು ದಸರಾ ಒಳಗೆ ತರಿಸಿಕೊಳ್ಳುವವರಿಗೆ ರೂ. 3—14—0ಗೆ 15 ಬಹುಮಾನಗಳು ಉಚಿತವಾಗಿ ಕೊಡುತ್ತೇವೆ.

1. ಉತ್ತರ ಮುಖಿ, 2. ಪೇನಾಕತ್ತಿ, 3. ಬ್ಲೂಬ್ಲೆಕ್ ಶಾಯಿ ಪೊಟ್ಲೆ, 4. ಹಣದ ಚೀಲ, 5. ಗಡಿಯಾರ ಸರಪಣಿ, 6 ಎಲೆಕ್ಟ್ರಿಕ್ ಭಂಗಾರದ ಶ್ಯಾಮಂತಿಗೆ ಹೂವು, 7 ಇಮಿಟೇಷನ್ ಡೈಮಂಡ್ ಶರಟು ಗುಂಡಿ, 8. ಜರ್ಮನ್ ಬೆಳ್ಳಿಯ ಕುಂಕುಮ ಭರಣಿ, 9. ಡಿಟ್ಟೋ ಸಾದಿನ ಚಿಪ್ಪು, 10. ಡಿಟ್ಟೋ ಕಣ್ಣು ಕಪ್ಪಿನ ಭರಣಿ, 11. ಡಿಟ್ಟೋ ನಶ್ಯದ ಡಬ್ಬಿ, 12. ಇಮಿಟೇಷನ್ ಡೈಮಂಡ ಮೂಗಬಟ್ಟು, 13. ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಗೆ, 14. ಎಲೆಕ್ಟ್ರೋ ಸೀಲು ಉಂಗುರ, 15. ಕತ್ತಿ

ಈ ಕೆಳಗಿನ ಸಾಮಾನುಗಳು ಸಹ ನಮ್ಮಲ್ಲಿ ದೊರೆಯುತ್ತೆ.

ಮಧುರೆ ಚುನ್ನಡ ಸೀರೆ ಒಂದಕ್ಕೆ ರೂ. 2—3—0.



ಮಧುರೆ ಕೆಂಪು ಸೀರೆ ರೂ. 3—0—0
ತಂಜಾವೂರು ಗೆಜ್ಜೆ ಅಡ್ಡಿಗೆ ಆಣೆ 6.
ವಿಳಾಸ:—

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳ, ಶಾಸನಗಳು ವಗೈರೆ ವಿಧಾಯಕವಾಗಿ ಇರುತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆವ್ ಕಂಟ್ರಾಕ್ಟ್" ಅಂದರೆ ಎಷ್ಟಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0; ವಿ. ಪಿ. 1—12—0

ಆಯುರ್ವೇದರತ್ನಂ ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0 0 ಆಗುತ್ತೆ.

ಉತ್ಕೃಷ್ಟವಾದ ಮೂರು ಔಷಧಗಳು

ಗ್ರೇಂಟ್ ಮೆಡಿಕಲ್ ಕೊಲಿಜಿನಲ್ಲಿ ಸೂಲಗಿತ್ತಿತನ ಕಲಿತು ಸರ್ಟಿಫಿಕೇಟ್ ಪಡೆದ **ಕಮಲಾ ಬಾಯಿ, ತುಸಿಲೀ ಬಾಯಿ** ಎಂಬ ಸೂಲಗಿತ್ತಿಯರಿಂದ **ತಯಾರಿಸಲ್ಪಟ್ಟವುಗಳು.**

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 1

(ಆರ್ತವ ಶೂಲೆ ಹೋಗಲಾಡಿಸುವ ಬಗ್ಗೆ)

ಅಬಲಾಸಂಜೀವನಿ ಗುಳಿಗೆಗಳು ಎಲ್ಲಾ ಬಗೆಯ ಆರ್ತವ ಶೂಲೆಯನ್ನು ಹೋಗಲಾಡಿಸುವುದಕ್ಕೆ ಪಕ್ವರೀತಿಯಲ್ಲಿ ಸಮಾಧಾನಕರವಾದ ಪ್ರಯೋಜನವನ್ನು ಕೊಡುವ ಮತ್ತು ಪೂರ್ಣ ನಂಬಿಕೆಗೆ ಯೋಗ್ಯವಾದ ಮಾತ್ರೆಗಳಾಗಿರುವುವು. ಅನೇಕ ಕಾಲದವರೆಗೆ ಪುಷ್ಪವತಿಯಾಗದೆ ಇದ್ದುದು ಕೂಡ ಇವುಗಳಿಂದ ಸರಿಯಾಗುವುದು. ಅಂತಹೌಷಧಿಗಳಿಂದ ಗುಣವಾಗಬಹುದಾದ ಎಲ್ಲಾ ಗರ್ಭಕೋಶದ ಶೂಲೆಗಳು ಇವುಗಳಿಂದ ಗುಣವಾಗಿ, ಗರ್ಭಕೋಶವು ಪೂರ್ವಸ್ಥಿತಿಗೆ ಬರುವುದು. ಒಂದು ಶೀಸೆಯ ಕ್ರಯ ರೂ 1 ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 2

(ಬಿಳೀ ಸ್ರಾವದ ಬಗ್ಗೆ)

ಈ ಬಾಧೆಯಿಂದ ವಿರಹಿತರಾದ ಸ್ತ್ರೀಯರು ಬಹಳ ವಿರಳ. ಈ ಸ್ರಾವದಿಂದ ಹೆಚ್ಚಿನ ನಿರ್ಬಲತೆ, ಹೊಟ್ಟೆನೋವು, ಮಲಬದ್ಧತೆಗಳುಂಟಾಗುವುವು. ಈ ಸ್ರಾವವು ರಕ್ತಸ್ರಾವದಂತೆ ಬಲಹೀನಕರ. ಇದರಿಂದ ಮನಸ್ಸು ಮಂದವಾಗುವುದು, ಹಸಿವೆ ಇಲ್ಲದಿರುವುದು, ಆಗಾಗ್ಗೆ ಕಟಿಭಾಗದಲ್ಲಿ ನೋವು ಉಂಟಾಗುವುದು, ಮುಖವು ಬಾಡಿಹೋಗುವುದು, ಮಲವಿಸರ್ಜನೆ ಸರಿಯಾಗದಿರುವುದು. ಈ ಗುಳಿಗೆಗಳು ಈ ಬಾಧೆಗಳನ್ನೆಲ್ಲಾ ಹೋಗಲಾಡಿಸುವುವು — ಒಂದು ಪೊಟ್ಟಣವನ್ನು ಪರೀಕ್ಷೆಗಾಗಿ ತರಿಸಿದರೆ ಆಶ್ಚರ್ಯಗುಣ ಸಿಕ್ಕುವ ಲಕ್ಷಣವು ಮನಸ್ಸಿಗೆ ವೇದ್ಯವಾದೀತು. ಒಂದು ಶೀಸೆಯ ಕ್ರಯ 1 ರೂಪಾಯಿ. ಅಂಚೆ ಹಾಸಲು 4 ಆಣೆ.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 3.

(ಕೆಂಪು ಸ್ರಾವದ ಬಗ್ಗೆ.)

ದೇಹದಲ್ಲಿ ರಕ್ತಬಲವು ಕಡಿಮೆಯಾಗುವುದರಿಂದ ಉಂಟಾಗುವ ಭಯಂಕರ ಪೀಡೆಗಳಲ್ಲಿ ಇದು ಒಂದು. ಈ ಸ್ರಾವದಿಂದ ಕ್ರಮೇಣ ಗರ್ಭಕೋಶದಲ್ಲಿ ಹುಣ್ಣು ಮೊದಲಾದುವುಗಳು ಉಂಟಾಗಿ, ಗರ್ಭಕೋಶದ ಶೂಲೆ, ನಿರ್ಬಲತೆ ತಲೆದೋರುವುವು. ಈ ಸ್ರಾವವು ಗರ್ಭಕೋಶದಿಂದ ಸ್ರವಿಸುವ ರಕ್ತವೇ ಸರಿ. ಈ ಗುಳಿಗೆಗಳನ್ನು ಕೂಡಲೇ ಸೇವಿಸುವುದಕ್ಕೆ ಅಸಡ್ಡೆ ಮಾಡಿದರೆ, ಈ ಪೀಡೆಯು ಅತಿಶಯಿಸಿ, ಬೇಗನೇ ಗುಣ ಹೊಂದಲಿಕ್ಕಿಲ್ಲ. ಒಂದು ಶೀಸೆಯ ಕ್ರಯ 1 ರೂಪಾಯಿ ಅಂಚೆ ಹಾಸಲು 4 ಆಣೆ.

Dr. Nava Ratna & Sons,
253 Kalbadevi Road,
BOMBAY 2

ಏಜೆಂಟರು— [illegible]

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯ ಅವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

1. ಪರಿಮಳ ಕೇಶ ತೈಲವು — ಸೋಲುತಲೆ, ಡೊಂಕು ಅಥವಾ ಹೊಟ್ಟು ಉದುರುವಿಕೆ ಇವು ಸಂಪೂರ್ಣವಾಗಿ ವಾಸಿಯಾಗುವವಲ್ಲದೆ, ತಲೆಯನ್ನು ಮಿದು ಕನ್ನಡಿಯಂತೆ ಮಾಡಿ ತಲೆ, ಮೀಸೆ, ಹುಬ್ಬುಗಳ ಕೂದಲನ್ನು ಹೇರಳವಾಗಿ ಬೆಳೆಸುವುದು. ಮತ್ತು ಕಣ್ಣು, ಮಿದುಳು ಸಂಬಂಧವಾದ ರೋಗವನ್ನೆಲ್ಲಾ ವಾಸಿಮಾಡುವದು. ಬಹಳ ಮನೋರಂಜಕವಾಗಿ ಪರಿಮಳಿಸುವುದು. ಸೀಸೆ ಒಂದಕ್ಕೆ ೮ ಆಣೆ. ವಿ. ಪಿ. ಚಾರ್ಜು ೬ ಸೀಸೆವರಿಗೂ ೫ ಆಣೆ

2. ನೇತ್ರಬಿಂದು — ಸಮೀಪದೃಷ್ಟಿ, ಕಣ್ಣಿನಲ್ಲಿ ನೀರು ಸುರಿಯುವುದು, ಕಣ್ಣುನೋವು, ಹೂವು ಬರುವುದು, ಉರಿ, ಮುಂತಾದ ನೇತ್ರರೋಗಗಳು ಇದರಿಂದ ಗುಣವಾಗುವವು. ಸೀಸೆ ಒಂದಕ್ಕೆ ೮ ಆಣೆ. ವಿ. ಪಿ. ಚಾರ್ಜು ೬ ಸೀಸೆವರಿಗೂ ೫ ಆಣೆ.

3. ಶ್ರೋತ್ರಬಿಂದು — ಕಿವಿಯು ಎಷ್ಟು ಹೆಚ್ಚಾಗಿ ನೋಯುತ್ತಿದ್ದರೂ ಮತ್ತು ಕೀವು ಸುರಿಯುವುದು, ಕಿವಿಯ ಮಾಂದ್ಯವು, ಕಿವುಡು ಮುಂತಾದ್ದನ್ನು ಜಾಗ್ರತೆಯಲ್ಲಿ ಪರಿಹರಿಸುವುದು. ಬೆಲೆ ಸೀಸೆ ಒಂದಕ್ಕೆ ೮ ಆಣೆ ವಿ. ಪಿ. ಚಾರ್ಜು ೬ ಸೀಸೆವರಿಗೂ ೫ ಆ.

4. ಹುಳಕಡ್ಡಿಗೆ ಔಷಧಿ — ಚರ್ಮರೋಗಕ್ಕೂ. ಚರ್ಮಗತವಾದ ಎಲ್ಲಾ ವ್ಯಾಧಿಗಳಿಗೂ ಅತ್ಯುತ್ತಮವಾದ ಮದ್ದು. ಒಂದು ಸಾರಿ ವಾಸಿಯಾದಮೇಲೆ ಪುನಃ ತಲದೋರುವುದಿಲ್ಲ. ಸೀಸೆ ಒಂದಕ್ಕೆ ೪ ಆಣೆ. ವಿ. ಪಿ. ಚಾರ್ಜು ೬ ಸೀಸೆವರಿಗೂ ೫ ಆ.

5. ವಿರೇಚನೆ ಮಾತ್ರೆಗಳು — ಸ್ವಲ್ಪವೂ ಹೊಟ್ಟೆನೋವು, ಆಯಾಸ ಯಾವದೂ ಉಂಟಾಗದಂತೆ ಸುಖವಾಗಿ ವಿರೇಚನೆಯಾಗುವದು. ಮಲಬಂಧ, ಅಜೀರ್ಣ, ವಾಯು, ಎದೆಯುರಿಯುವುದು, ಪಿತ್ತ ಜ್ವರ, ಇವುಗಳನ್ನು ವಾಸಿಮಾಡುವುದು. ಸೀಸೆ ಒಂದಕ್ಕೆ ೮ ಆಣೆ. ವಿ. ಪಿ. ಚಾರ್ಜು ೬ ಸೀಸೆವರಿಗೂ ೫ ಆಣೆ

6. ಜ್ವರಸಂಹಾರ — ಎಲ್ಲಾ ವಿಧವಾದ ಜ್ವರ, ವಿಷಮ ಶೀತಜ್ವರ, ೨ರ ೩ರ ೪ರ, ಛಳಿ, ಇನ್‌ಫ್ಲುಯೆನ್ಸ್, ಚಳಿಜ್ವರ, ವಾತರೋಗ ಇವುಗಳನ್ನು ಸಂಪೂರ್ಣವಾಗಿ ವಾಸಿಮಾಡುವದು. ಪೆಟ್ಟಿಗೆ ಒಂದಕ್ಕೆ ರೂ ೧. ವಿ. ಪಿ. ಚಾರ್ಜು ೫ ಆಣೆ

7. ಕೂದಲು ಉದುರಿಹೋಗುವದಕ್ಕೆ — ಕೂದಲು ಬೆಳೆದಿರುವ ಸ್ಥಳಕ್ಕೆ ಹಚ್ಚಿದರೆ ಚರ್ಮಕ್ಕೆ ತೊಂದರೆಯಾಗದೆ ೫ ನಿಮಿಷಗಳಲ್ಲಿಯೇ ಉದುರಿಹೋಗುವದು. ಸೀಸೆ ಒಂದಕ್ಕೆ ೪ ಆಣೆ. ವಿ. ಪಿ. ಚಾರ್ಜು ೬ ಸೀಸೆವರಿಗೂ ೫ ಆಣೆ

8. ಸುಗಂಧ ದಂತಚೂರ್ಣ — ಎಲ್ಲಾ ವಿಧವಾದ ಹಲ್ಲುನೋವುಗಳನ್ನು ವಾಸಿಮಾಡಿ, ಆಹಾರವನ್ನು ಜೀರ್ಣಕ್ಕೆ ತರುವುದು. ಸೀಸೆ ಒಂದಕ್ಕೆ ೩ ಆಣೆ. ವಿ. ಪಿ. ಚಾರ್ಜು ೫ ಸೀಸೆಯವರಿಗೂ ೫ ಆಣೆ

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳಿನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು

MY ADDRESS.

P. SUBBAROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯ,
ಆಯುರ್ವೇದ ಔಷಧಶಾಲೆ,
ಶ್ರೀ [illegible] ಪೆರುಮಾಳ್ ದೇವಸ್ಥಾನ,
ಸನ್ನಧಿ, ತಂಜಾವೂರು.

ಬೆನಾರಿಸಿನ ಮಹಾಲುಗಳ ಕೋಠಡಿಯು.

ಬೆನಾರಿಸಿನಿಂದ ನಿಮಗೆ ಯಾವ ಸಾಮಗ್ರಿಗಳು ಬೇಕಾದರೂ, ಪಿ. ಡಿ. ನೀಲಕಾಂತ ಎಂಡ್ ಕೊ. ಬೆನಾರಿಸ್ ಸಿಟಿ ಎಂಬ ವಿಳಾಸಕ್ಕೆ ಬರೆಕೊಂಡಲ್ಲಿ ನಿಮಗೆ ಬೇಕಾದ ಎಲ್ಲಾ ಮಾಹಿತಿಯನ್ನು ತಿಳಕೊಳ್ಳಬಹುದು. ಬೆನಾರಿಸಿನ ಜರಿತಾರಿನ ಶೀರೆ ರೇಶ್ಮೆ ವಸ್ತ್ರ ಇತ್ಯಾದಿಗಳನ್ನು ತಾವೇ ಸ್ವತಹ ತಯ್ಯಾರಿಸಿ ವಿಕ್ರಯಿಸುವ ವ್ಯಾಪಾರಸ್ಥರು ಮೆಸರ್ಸ್ ಪಿ. ಡಿ. ನೀಲಕಾಂತ ಎಂಡ್ ಕೊ ಎಂಬ ಒಂದೇ ಕಂಪೆನಿಯವರಾಗಿರುವರು. ಇಂದಿಗೆ 25 ವರುಷಗಳಿಂದ ನಿಮ್ಮ ಪ್ರಾಂತ್ಯದ ವ್ಯಾಪಾರಸ್ಥರೆಲ್ಲರೂ ನಮ್ಮಿಂದಲೇ ನಿಮ್ಮಲ್ಲಿ ವಿಕರಿಯಾಗುವ ಬೆನಾರಿಸಿನ ಉಡುಪು ತೊಡುಪುಗಳನ್ನು ತರಿಸುತ್ತಿರುವರು. ಬಹಳ ಅಲ್ಪ ಮುನಾಫೆಯನ್ನಿಟ್ಟುಕೊಂಡು ಈ ಸಾಮಗ್ರಿಗಳನ್ನು ನಾವು ಕಳುಹಿಸುತ್ತಿದ್ದೇವೆ. ಚಿಲ್ಲರೆ ಗಿರಾಕಿಗಳಿಗೆ ಸಹ ಇದೇ ರೀತಿ ಒಡವೆಗಳನ್ನು ಕಳುಹಿಸಿಕೊಡುವ ಅಪೂರ್ವವಾದ ಮತ್ತು ಬಹಳ ಲಾಭಕರವಾದ ಸಂದರ್ಭವನ್ನು ಈ ಮೂಲಕ ಕೊಟ್ಟಿರುವೆವು. ಸೀದಾ ನಮಗೆ ಬರೆದು ಒಡವೆಗಳನ್ನು ತರಿಸಿಕೊಳ್ಳುವುದರಿಂದ ನಿಮಗೆ ಸೇಕಡಾ 25ರಂತೆಯಾದರೂ ಮುನಾಫೆಯು ಉಳಿಯುವುದು. ಎಲ್ಲಾ ಒರ್ಡರುಗಳನ್ನು ವಿ ಪಿ ಮೂಲಕ ಕಳುಹಿಸಿಕೊಡುವೆವು. ಸಂದೇಹಪಡಬೇಡಿರಿ. (1) ಜರಿತಾರಿನ ರೇಶ್ಮೆ, ನಾನಾ ತರದ ಬಿಲ್ಲೆಗಳು, ಶೀರೆಗಳು, ರವಕೆ ಕಣಗಳು, ಅಂಗಿ ವಸ್ತ್ರ ಇತ್ಯಾದಿ. (2) ಕಂಚಿನ ಅಥವಾ ಜರ್ಮನ್ ಬೆಳ್ಳಿಯ ಪಾತ್ರ ಇತ್ಯಾದಿ. (3) ಕಾಶ್ಮೀರ ಮತ್ತು ಅಮೃತಸಾರ ಈ ಪಟ್ಟಣಗಳಲ್ಲಿರುವ ನಮ್ಮ ಕಾರ್ಖಾನೆಗಳಿಂದ ತಯ್ಯಾರಿಸಲ್ಪಡುವ ಮರದ ಸಾಮಗ್ರಿಗಳು. (4) ನೀವು ಅಪೇಕ್ಷಿಸುವ ಬೆನಾರಿಸಿನ ಇತರ ಎಲ್ಲಾ ಒಡವೆಗಳು—ಇವುಗಳೆಲ್ಲವುಗಳಿಗೂ ಬರೆಯಬಹುದು.

ನಮ್ಮ ಕೆಟಲಾಗು ಅಪೇಕ್ಷಿಸಿದವರಿಗೆ ಉಚಿತವಾಗಿ ಕಳುಹಿಸಲಾಗುವುದು.

ನಮ್ಮ ವಿಳಾಸ— ಪಿ ಡಿ ನೀಲಕಾಂತ ಎಂಡ್ ಕೊ,
ಬೆನಾರಿಸ್ ಸಿಟಿ.

ಚಂದ್ರಾವಳಿ ವಿಲಾಸಂ

ಮಂಗಳೂರು ಕೆನರಾ ಹೈಸ್ಕೂಲು ಕನ್ನಡ ಪಂಡಿತ ಎಮ್ ತಿಮ್ಮಪ್ಪಯ್ಯನವರಿಂದ ಕನ್ನಡ ಗದ್ಯರೂಪವಾಗಿ ವಿರಚಿತವಾದ ಈ ಗ್ರಂಥವು ಸರಳವಾದ ಪದಗಳಿಂದಲೂ, ಪೈ[illegible]ಗಳಲೂ ಯುಕ್ತವಾಗಿದೆ. ಶ್ರೀಕೃಷ್ಣನು ಚಂದ್ರಾವಳಿಯನ್ನು ಅನುಗ್ರಹಿಸಿದ ಈ ಕಥೆಯು ಸಮಸ್ತರಾದ ವಾಚಕರಿಗೂ, ಎಫ್ ಎ. ಮೊದಲಾದ ಕ್ಲಾಸಿನಲ್ಲಿ ಟೆಕ್ಸ್ಟ್ ಪುಸ್ತಕವಾಗಿ ಇಡಲಿಕ್ಕೂ ತಕ್ಕುದಾಗಿದೆ. ಕ್ರಯ 0—8—0

ವಿಳಾಸ —
ಕೆನರಾ ಹೈಸ್ಕೂಲು ಕನ್ನಡ ಪಂಡಿತ
ಎಮ್ ತಿಮ್ಮಪ್ಪಯ್ಯ,
ಮಂಗಳೂರ

ಶಾಲೆಗಳಿಗೆ ಅಗತ್ಯವಾದ ಪುಸ್ತಕಗಳು.

IIನೇ ಸ್ಟೆಂಡಾರ್ಡ್ ಗಣಿತ	0—3—0
IIIನೇ ,, ,,	0—4—0
IVನೇ ,, ,,	0—6—0
3ನೇ ಪುಸ್ತಕದ ಶಬ್ದಾರ್ಥ ಪ್ರಾಣಿಕೋಟಿ ವನಸ್ಪತಿಕೋಟಿ ಇವುಗಳ ವಿಷಯವಾಗಿ ಟಿಪ್ಪಣಿ ಸಹಿತ)	0—2—6
4ನೇ ಪುಸ್ತಕದ ಶಬ್ದಾರ್ಥ	0—2—6
2ನೇ ದರ್ಜೆಯ ಭೂಗೋಳ ಶಾಸ್ತ್ರವು	0—1—6
3ನೇ ದರ್ಜೆಯ ಭೂಗೋಳ ಶಾಸ್ತ್ರ 1ನೇ ಭಾಗ	0—3—0
3ನೇ ದರ್ಜೆಯ ದಕ್ಷಿಣ ಕನ್ನಡ ಭೂಗೋಳಶಾಸ್ತ್ರ 2ನೇ ಭಾಗ	0—3—0
ಕಿಂಡರ್‌ಗಾರ್ಟನ್ ಕ್ರಮಬೋಧನೆಯು (ಇದರಲ್ಲಿ ವ್ಯಕ್ತಿಗಳೂ, ಕಥೆಗಳೂ, ಅಭಿನಯದ ಹಾಡುಗಳೂ ಇರುತ್ತವೆ	0—1—6
ಗಣಿತಸಾರ ಎಂಬ ಮಗ್ಗಿ ಕೋಷ್ಟಕಗಳ ಪುಸ್ತಕ	0—1—0
ಬಾಲಶಿಕ್ಷೆ	(ಅಚ್ಚಿನಲ್ಲಿದೆ)

ಒಂದನೆಯ ಪುಸ್ತಕ
ಎರಡನೆಯ ,,
ಮೂರನೆಯ ,,
ನಾಲ್ಕನೆಯ ,,
(ತಯ್ಯಾರಿಯಲ್ಲಿವೆ.)

☞ ಮೇಲಿನ ಪುಸ್ತಕಗಳನ್ನು ಈ ಕೆಳಗಿನ ವಿಳಾಸಕ್ಕೆ ಬರೆದಲಿ ಕಳುಹಿಸಲ್ಪಡುವುವು. ವ್ಯಾಪಾರಸ್ಥರಿಗೆ ಒಳ್ಳೆಯ ಕಮಿಶನ್ ಕೊಡಲಾದೀತು.

ವಿ. ಲಕ್ಷ್ಮಣರಾವ್,
ಸ್ಕೂಲ ಮಾಸ್ತರ್, [illegible]

ಅಚ್ಚಾಗುತ್ತಲಿದೆ! ನವೀನಗ್ರಂಥ!! ಪೂರ್ವಸಂಗ್ರಹ!!!

ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ.

ಎಂಬ

"ಭೂತಾಳಪಾಂಡ್ಯನ ಅಳಿಯಕಟ್ಟು"

ಪೂರ್ವಾಭಿಪ್ರಾಯವು ಇರುವ ಹೊಸ ಪುಸ್ತಕ

ಈ ಪುಸ್ತಕದಲ್ಲಿ ಪರಶುರಾಮದೇವರ ಸೃಷ್ಟಿ ಲಾಗಾಯಿತು ಬ್ರಿಟಿಷರ ಆಳಿಕೆ ವರೆಗಿನ ಕನ್ನಡ ಜಿಲ್ಲೆಯ ಎಲ್ಲಾ ರಾಜರ ಚರಿತ್ರೆಗಳೂ, ಅಳಿಯ ಸಂತಾನದ ಕಟ್ಟಿನ ಎಲ್ಲಾ ಮಾನಮರ್ಯಾದೆಗಳೂ, ಜಾತಿ ನೀತಿಗಳೂ, ಶಿಲಾಶಾಸನ, ತಾಂಬ್ರಶಾಸನಗಳ ನಕಲುಗಳೂ ಅಲ್ಲದೆ "ಸಹ್ಯಾದ್ರಿ" "ಗ್ರಾಮ್ಯಪದ್ಧತಿ" "ರಾಜವಂಶಾವಳಿ" ಮೊದಲಾದ ಪೂರ್ವಗ್ರಂಥಗಳ ಸಹಾಯದಿಂದ ಬರೆದ ಹೊಸ ಪುಸ್ತಕ. ಅಪೇಕ್ಷಕರು ಕೂಡಲೆ ತಮ್ಮ ಹೆಸರುಗಳನ್ನು ದಾಖಲು ಮಾಡಿಸಿಕೊಂಡಲ್ಲಿ ಅವರಿಗೆ ಪ್ರತಿ ೧ಕ್ಕೆ [illegible] ಆಣೆ ಕಡಿಮೆಯಲ್ಲಿ ಕೊಡಲಾಗುವದು. [illegible]ಕ್ಕಿಂತ ಹೆಚ್ಚು ಆರ್ಡರುಗಳು ಬಂದಿರುತ್ತವೆ. ಅನೇಕ ಮಹನೀಯರು ಪುಸ್ತಕವನ್ನು [illegible]ಯುತ್ತಾರೆ. ಪುಸ್ತಕದ ಬೆಲೆ ಅಪೇಕ್ಷಕರಿಗೆ ತಿಳಿಸಲಾದೀತು.

ವಿಳಾಸ:—

ಕುಂದಲಮುದ್ರಿ ಶ್ರೀ ರಾಜರಾಜೇಶ್ವರಿ ದೇವಸ್ಥಾನ, [illegible]	ಎನ್ ಎ ಶೀನಪ್ಪ ಹೆಗಡೆ ಅಮುಣಂಜೆ ಗುತ್ತು, ಪೋಸ್ಟು ಗುರುಪುರ ದ. ಕನ್ನಡ.

ಸನ್ 1915 ಇಸವಿಯ

ಪಾಕೆಟ್ ಡೈರಿ.

ಶ್ರೀ ಸೀತಾ ರಾಮನ

ಪಾಕೆಟ್ ಡೈರಿಗಳು.

ಮೊದಮೊದಲೇ ಬರೆದು ತರಿಸಿಕೊಳ್ಳಿರಿ. 1. ಸಣ್ಣ ಸೈಜು ಸಾದಾ ಡೈರಿಗೆ 4 ಆಣೆ. 2. ಸಣ್ಣ ಸೈಜು ಪೆನ್ಸಿಲ್ ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 6 ಆಣೆ, 3. ದೊಡ್ಡ ಸೈಜ ಸಾದಾ ಡೈರಿಗೆ 6 ಆಣೆ. ದೊಡ್ಡ ಸೈಜು ಪೆನ್ಸಿಲು ಇಟ್ಟು ಮುಚ್ಚಳ ಹಾಕಿರುವ ಫ್ಲಾಪ್ ಡೈರಿಗೆ 8 ಆಣೆ. ಟಪ್ಪಾಲು ಖರ್ಚು ಬೇರೆ. ಒಂದೇ ಸಲ 10 ಡೈರಿ ತರಿಸಿಕೊಂಡವರಿಗೆ ಒಂದು ಡೈರಿ ಇನಾಮು. 2 ರೂಪಾಯಿಗಿಂತ ಹೆಚ್ಚು ಡೈರಿ ತರಿಸಿಕೊಳ್ಳುವವರಿಗೆ, ರೂಪಾಯಿಗೆ 2½ ಆಣೆಯಂತೆ ಡಿಸ್ಕೌಂಟು ದೊರೆಯುತ್ತದೆ. ವಿವರಣೆ—(1) ಈ ವರೆಗೆ ನಾವು ನೋಡಿರುವ ಡೈರಿಗಳೆಲ್ಲಕ್ಕಿಂತಲೂ ಅಂದವಾಗಿರುವಂತೆ ಹಸನಾದ ಕಾಗದದಲ್ಲಿ ಪ್ರತಿ [illegible] ರೂಲು ಹಾಕಿಸಿ ಸೊಗಸಾದ ಕ್ಯಾಲಿಕೋ (ಬಟ್ಟೆಯ) ಬೈಂಡು ಮಾಡಿಸಿದೆ. (2) ದೇ[illegible]ರದಲ್ಲಿ ಪ್ರತಿಯೊಬ್ಬರೂ ತಿಳಿಯಬೇಕಾದ ಸಾಧಕಬಾಧಕಗಳನ್ನು ತಕ್ಕಮಟ್ಟಿಗೆ ವಿವರಿಸಿ [illegible] ಪಂಚಾಂಗ, ಕ್ಯಾಲೆಂಡರ್, ರಾಹುಕಾಲ ಗುಳಿಕಕಾಲಗಳು, ಸಂವತ್ಸರ ಫಲಗಳು, ಗ್ರಹಣ, ಜಾತಕರ್ಮ ಮೊದಲುಗೊಂಡು ಷೋಡಶಕರ್ಮಕ್ಕೆ ಬೇಕಾದ ಲಗ್ನಾದಿಗಳು, ಇವೇ ಮುಂತಾದ ವಿಷಯಗಳು ಸುಲಭವಾಗಿ ತಿಳಿಯುವಂತೆ ಬರೆದಿದೆ. (3) ಕೋರ್ಟು ಫೀಸು ಆಕ್ಟು, ಪೋಸ್ಟಾಫೀಸಿನ ಸಂಗತಿ, ಸ್ಟಾಂಪು ಆಕ್ಟು, ಇವುಗಳಲ್ಲಿ ಮುಖ್ಯವಾಗಿ ಬೇಕಾಗುವ ಮತ್ತಾವ ಡೈರಿಯಲ್ಲೂ ಹೇಳದಿರುವಷ್ಟು ಹೊಸ ವಿಷಯಗಳನ್ನು ಸೇರಿಸಿದೆ. (4) ಮದರಾಸು ಮತ್ತು ಸದರ್ನ್ ಮರಾಟಾ ರೈಲ್ವೇಗಳ ಚಾರ್ಜು, ರೈಲು ಹೊರಡುವ ಕಾಲ, ಅಳತೆ, ತೂಕ, ಗವರ್ನಮೆಂಟ್ ರಜಾ ದಿನಗಳು, ಹಿಂದೂ ಸಂವತ್ಸರಗಳಿಗೆ ಸರಿಯಾದ ಇಂಗ್ಲೀಷು ಸಂವತ್ಸರಗಳು, ಸೇಕಡಾ ಹಣದ ಬಡ್ಡಿ, [illegible] ಸಹಾ ಇರುತ್ತದೆ. ದೋಖ ಲೆಕ್ಕ, ಹಾಲಿನ ಲೆಕ್ಕ, ಮುಖ್ಯವಾದ ವಿಷಯ, [illegible] ಭಾಗವನ್ನು ಬಿಟ್ಟಿರುತ್ತದೆ. ಈ ಹೊಸ ಪ್ರಯತ್ನಕ್ಕೆ ದೇಶಾಭಿಮಾನಿಗಳ [illegible]

ನಿಮ್ಮ ಹೆಸರು ವಿಳಾಸಗಳು [illegible]

ನಮ್ಮ ವಿಳಾಸ:—[illegible]

ಸ್ವದೇಶಾಭಿಮಾನಿ.

ಮಂಗಳೂರು, ಶುಕ್ರವಾರ ತಾರೀಕು 16ನೇ ಒಕ್ಟೋಬರ 1914

ಎಂಟ್‌ವರ್ಪ ಕೋಟೆಯು ಬಿದ್ದು ಹೋದುದು

ಬೆಲ್ಜಿಯಮಿನ ಎಂಟ್‌ವರ್ಪ ಕೋಟೆಯು ಬಿದ್ದುಹೋಯಿತು. ಆದರೆ ಇದರಿಂದ ರಣರಂಗದಲ್ಲಿ ಯುದ್ಧ ಪರಿಣಾಮವು ವಿಶೇಷವಾಗಿ ಮಾರ್ಪಡುವಂತಿಲ್ಲ. ಯುದ್ಧ ಮಾಹಿತಿಗಾರರು ಅಭಿಪ್ರಾಯಪಡುವಂತೆ ಯುದ್ಧದಲ್ಲಿ ಜಯಾಪಜಯಗಳು ಇನ್ನು ಮೇಲೆ ಪ್ರಕೃತ ನಡಿಯುತ್ತಿರುವ ಸಂಗ್ರಾಮದಿಂದ ನಿರ್ಧರಿಸತಕ್ಕವುಗಳಾಗಿವೆ. ಇನ್ನು ಮೇಲೆ ನಡಿಯುವ ಸಂಗ್ರಾಮದ ಸಮಾಚಾರದಿಂದ ಫ್ರಂಚ ಮತ್ತು ಬ್ರಿಟಿಷ ದಳಗಳಿಗೆ ಜಯವಾಗುವ ಹೆಚ್ಚಿನ ಸಂಭವಗಳು ತೋರಿಬರುವವು. ಎಂಟ್‌ವರ್ಪ ಕೋಟೆಯನ್ನು ಶತ್ರುಗಳು ಆಕ್ರಮಿಸಿದ್ದರಿಂದ್ಲ ಯುದ್ಧ ಪರಿಣಾಮವು ವಿಶೇಷವಾಗಿ ಮಾರ್ಪಡುವಂತಿಲ್ಲವಾದರೂ, ಇದರಿಂದ ಬೆಲ್ಜಿಯಮ್ ದೇಶದ ದೈನ್ಯಾವಸ್ಥೆಯು ಸಂಪೂರ್ಣವಾಯಿತು. ಬ್ರುಸೆಲ್ಸ್‌ನಿಂದ ಎಂಟ್‌ವರ್ಪಿಗೆ ಬೆಲ್ಜಿಯನ್ನರು ತಮ್ಮ ರಾಜಧಾನಿಯನ್ನು ಬದಲಿಸಿದ್ದರು. ಅಲ್ಲಿಯೂ ಸಹ ಕಲಿಗಳಾದ ಜರ್ಮನರು ಅವರನ್ನು ಇರಗೊಡಲು ಬಿಡಲಿಲ್ಲ. ನಿರಾಶ್ರಿತರಾದ ಬೆಲ್ಜಿಯನರಿಗೆ ಹೀಗೆ ತಮ್ಮ ದೇಶದಲ್ಲಿ ಭದ್ರವಾದ ಒಂದೆಡೆಯಲ್ಲಾದರೂ ಆಶ್ರಯವು ದೊರಕದೆ ಹೋಯಿತು. ಬೆಲ್ಜಿಯಮಿನಲ್ಲಿ ಜರ್ಮನರ ಇನ್ನೂ ಎಂಥಾ ಕ್ರೂರತ್ವಗಳು ನಡೆಯಲಿಕ್ಕಿವೆಯೋ?

ಬೆಲ್ಜಿಯನರು ಎಂಟ್‌ವರ್ಪ ಕೋಟೆಗಳ ರಚನೆಯನ್ನು ಎಷ್ಟು ಭದ್ರವಾಗಿ ಮಾಡಿದ್ದರು, ಮತ್ತು ಇಂಥಾ ಅತಿ ಭದ್ರವಾದ ಕೋಟೆಗಳನ್ನು ಜರ್ಮನರು ಹೇಗೆ ಆಕ್ರಮಿಸಿದರೆಂಬ ವಿವರವನ್ನು ತಿಳಿದರೆ ರಣರಂಗದಲ್ಲಿ ಮಾನವ ವಂಶದ ಸರ್ವ ನಾಶವನ್ನು ಮಾಡಲಾಗುವ ನವೀನ ಯುದ್ಧ ಉಪಕರಣಗಳ ನಿರ್ಮಾಣಗಳನ್ನು ಕೇಳಿ ವಾಚಕರು ಆಶ್ಚರ್ಯಪಡದೆ ಇರಲಾರರು. ೧೮೭೦ರಲ್ಲಿ ಫ್ರೆಂಚ್ ಮತ್ತು ಜರ್ಮನರ ಯುದ್ಧವು ತೀರಿದನಂತರ ಪ್ರಬಲರಾದವರ ನೆರೆಯಲ್ಲಿದ್ದ ತನ್ನ ನಿರ್ಬಲತ್ವವನ್ನು ಬೆಲ್ಜಿಯಮ್ ದೇಶವು ತಿಳಕೊಂಡು ತನ್ನ ರಾಷ್ಟ್ರದ ಹಲವು ಕಡೆಗಳಲ್ಲಿ ದುರ್ಗಗಳನ್ನು ರಚಿಸಿ ದೇಶವನ್ನು ಬಲಪಡಿಸಿಕೊಂಡಿತ್ತು. ಇವುಗಳಲ್ಲಿ ಎಂಟ್‌ವರ್ಪ ಕೋಟೆಯು ಅತಿ ಭದ್ರವಾಗಿತ್ತು. ಈ ಕೋಟೆಯೊಳಗೆ ಎಂಟ್‌ವರ್ಪ ಪಟ್ಟಣದ ಸರ್ವ ಪ್ರಜೆಗಳೂ ಇರಲು ಅವಕಾಶವಿದೆ. ಸುತ್ತಲೂ ಕಂದಕಗಳೂ ೧೫ ಕೋಟೆಗಳೂ ಇರುವವು. ಎಂಟ್‌ವರ್ಪ ಪಟ್ಟಣಕ್ಕೆ ಹೋಗುವ ಪ್ರತಿಯೊಂದು ಮಾರ್ಗವನ್ನು ರಕ್ಷಿಸಲಿಕ್ಕೆ ಒಂದೊಂದು ಕೋಟೆ ಇರುವದು. ಕೋಟೆಯ ಗೋಡೆಗಳ ಮೇಲೆ ಉಕ್ಕಿನ ಗೋಪುರಗಳಿರುವವು. ಈ ಗೋಪುರಗಳಲ್ಲಿ ಫಿರಂಗಿಗಳನ್ನಿಟ್ಟಿರುವರು. ಕೋಟೆಯ ಆವರಣವು ೬೦ ಮೈಲುಗಳ ಉದ್ದವಾಗಿರುವುದು. ವೈರಿಗಳ ಫಿರಂಗಿಗಳಿಂದ ಹಾರಿಸೋಣಾಗುವ ಗುಂಡುಗಳ ಹೊಡೆತವು ಎಷ್ಟು ದೂರದ ವರೆಗೆ ಹೋಗಬಹುದೋ ಅಲ್ಲಿಯ ವರೆಗೂ ಕೋಟೆಯು ವಿಸ್ತರಿಸಿರುವುದು. ಶತ್ರುಗಳನ್ನು ಕೋಟೆಯ ಬಳಿಗೆ ಬರಗೊಡದಂತೆ ನೀರಿನ ಪ್ರವಾಹವನ್ನು ಬಿಡುವ ಯತ್ನವು ಕೋಟೆಯ ಹೊರಭಾಗದಲ್ಲಿದೆ. ಈ ಯತ್ನದಿಂದ ಬೇಕಾದಂತೆ ನೀರು ಕೋಟೆಯ ಸುತ್ತಲೂ ಆಳವಾಗಿ ಹರಿಯುವಂತೆ ಮಾಡಬಹುದು. ಹೊರ ಕೋಟೆಗಳಿಂದ ಒಳಗಿನ ಕೋಟೆಗಳಿಗೆ ಬರಬೇಕಾದರೆ ಹಲವು ಸುರಂಗ ಮಾರ್ಗಗಳಿರುವವು. ಇಳಿಜಾರಾದ ಗೋಡೆಗಳು ಕೋಟೆಗಳ ಸುತ್ತಲೂ ಕಟ್ಟಲ್ಪಟ್ಟಿರುವವು. ಅವುಗಳ ಮುಂದೆ ಉಕ್ಕಿನ ಗೋಡೆಗಳಿವೆ. ಕೋಟೆಗಳಲ್ಲಿ ಒಂದೊಂದಕ್ಕೆ ಮಧ್ಯವಿರುವ ಅಂತರಗಳಲ್ಲಿ ಉಕ್ಕಿನ ಮುಳ್ಳಿನ ಸರಿಗೆಗಳ ಬೇಲಿ ಇರುವುದು. ಈ ಬೇಲಿಯ ಸರಿಗೆಗಳಲ್ಲಿ ವಿದ್ಯುಚ್ಛಕ್ತಿಯು ಹರಿಯುತ್ತಿರುವುದರಿಂದ ಈ ಸರಿಗೆಗಳನ್ನು ಮುಟ್ಟಿದವರು ಕೂಡಲೇ ನಾಶವಾಗುವರು. ಕೋಟೆಗೆ ಮುತ್ತಿಗೆ ಹಾಕಬೇಕಾದರೆ ಒಂದು ಲಕ್ಷ ಸೇನೆಯಾದರೂ ಬೇಕಾಗಿತ್ತು.

ಬೆಲ್ಜಿಯಮ್ ದೇಶದ ಅಧಿಕ ಭಾಗವು ಈ ಮೊದಲೇ ಜರ್ಮನರ ಕೈವಶವಾದುದರಿಂದ ಎಂಟ್‌ವರ್ಪ ಕೋಟೆಗೆ ಮುತ್ತಿಗೆ ಹಾಕುತ್ತಿರುವಾಗ ಬೆಲ್ಜಿಯನರ ಬೆಂಬಲಕ್ಕೆ ಬ್ರಿಟಿಷ ಮತ್ತು ಫ್ರೆಂಚರ [illegible] ಬಾರದಂತೆ ಜರ್ಮನರು [illegible] [illegible]

ಹಾರಿಸಬಲ್ಲ ದೊಡ್ಡ ದೊಡ್ಡ ಫಿರಂಗಿಗಳನ್ನು ಕೋಟೆಯ ಸುತ್ತಿಟ್ಟು ಕೋಟೆಗಳಲ್ಲಿ ಒಂದೊಂದನ್ನು ಕೆಡವುತ್ತ ಬಂದರು. ವಾಯುವಿಮಾನಗಳಲ್ಲಿ ಕೋಟೆಗಳ ಮೇಲಕ್ಕೆ ಹೋಗಿ "ಬೊಂಬು"ಗಳನ್ನು ಎಸೆದರು. ಬೆಲ್ಜಿಯಮಿನ ನೀರಾಶ್ರಯಗಳನ್ನು ಮೊದಲಾಗಿ ತಮ್ಮ ಕೈವಶ ಮಾಡಿಕೊಂಡು ಜಲಪ್ರವಾಹದಿಂದ ಬೆಲ್ಜಿಯನರು ತಮ್ಮನ್ನು ಕೆಡವಿಬಿಡದಂತೆ ಜರ್ಮನರು ಸಾಧಿಸಿದರು. ಬೆಲ್ಜಿಯಮಿನಂಥಾ ಚಿಕ್ಕ ದೇಶದ ಸೇನೆಯು ಅಸಂಖ್ಯಾತ ಜರ್ಮನ ಸೇನಿಕರ ಸಾಧನಗಳಿಗೆ ತಕ್ಕಂತೆ ಎದುರಾಡಲು ಆಗದೆ ಹೋದ್ದರಿಂದ ಎಂಟ್‌ವರ್ಪ ಕೋಟೆಯು ಬಿದ್ದುಹೋಗಲು ಕಾರಣವಾಯಿತು.

ಎಂಟ್‌ವರ್ಪ ಕೋಟೆಯನ್ನು ಒಳನುಗ್ಗಿದ ಸಾಧನೆಯು ಜರ್ಮನಿಗೆ ಸುಲಭದಲ್ಲಿ ಸಾಧ್ಯವಾಗಲಿಲ್ಲ. ಹಲವು ಸಾವಿರ ಜರ್ಮನ್ ಸೇನಿಕರು ಪ್ರತಿನಿತ್ಯದಲ್ಲಿಯೂ ಈ ಸಾಧನೆಯಲ್ಲಿ ತಮ್ಮ ಪ್ರಾಣಗಳನ್ನು ಕಳಕೊಂಡಿರುವರು. ಜರ್ಮನರ ಸೇನೆಯು ಇದರಿಂದ ತನ್ನ ಚೇತನವನ್ನು ಬಹಳವಾಗಿ ಕಳಕೊಂಡಿದೆ. ಈ ಪ್ರಯತ್ನಗಳಿಗೆ ತಕ್ಕ ಪ್ರಯೋಜನವು ರಣರಂಗದಲ್ಲಿ ಜರ್ಮನಿಗೆ ಸಿಕ್ಕುವಂತಿಲ್ಲ. ಬೆಲ್ಜಿಯಮಿನ ಅತಿ ಭದ್ರವಾದ ಕೋಟೆಯು ತನ್ನ ಕೈವಶವಾಯಿತೆಂದು ಜರ್ಮನಿಯು ಸಂತೋಷ ಮದವೇರಿ ಕುಣಿಯುತ್ತಿರಬಹುದು. "ಆದರೆ ಶರಣು ಬಂದವರನ್ನು ರಕ್ಷಿಸುವ ಬಿರುದುಳ್ಳ ಪ್ರಚಂಡ ಇಂಗ್ಲಿಷ ರಾಷ್ಟ್ರವು ಬೆಲ್ಜಿಯನರ ಪಕ್ಷವನ್ನು ವಹಿಸಿರುವದನ್ನು ಜರ್ಮನಿಯು ಮರೆಯಲಾಗದು. ಪ್ರಾಂಗವರು ಜೂಜಿನಲ್ಲಿ ಸೋತಂತೆಯೇ ಸದ್ಯದ ಮಟ್ಟಿಗೆ ಬೆಲ್ಜಿಯಮಿನ ಅವಸ್ಥೆಯಾಗಿದೆ. ಆದರೆ ಇಂಗ್ಲಿಷ ಫ್ರಂಚರ ಪ್ರಚಂಡ ಸಾಮರ್ಥ್ಯದ ಸಂಯುಕ್ತ ಪ್ರವಾಹದ ಮುಂದೆ ಜರ್ಮನಿಯ ಈ ವಿಜಯವೆಂಬ ಉಸುಬಿನ ಬೆಟ್ಟವು ಬಹು ಕಾಲ ತಡೆದು ನಿಲ್ಲಲಾರದೆಂಬುದನ್ನು ಜರ್ಮನರು ಪೂರ್ಣ ಧ್ಯಾನದಲ್ಲಿಡತಕ್ಕದ್ದು."

ಸ್ವರ್ಗಸ್ಥರಾದ ಸರ್ ತಾರಕನಾಥ ಪಾಲಿತರವರು

ಬಂಗಾಳದಲ್ಲಿ ಕಲಾಕೌಶಲ್ಯಗಳ ಉದ್ಧರಣೆಗೆ ಸಹಾಯಕವಾದ ವೈಜ್ಞಾನಿಕ ಶಿಕ್ಷಣಾ ಕಾಲೇಜನ್ನು ಕಲ್ಕತ್ತೆ ಯುನಿವರ್ಸಿಟಿಯವರು ಸ್ಥಾಪಿಸುವಂತೆ ೧೫ ಲಕ್ಷ ರೂಪಾಯಿಗಳನ್ನು ದಾನವಾಗಿ ಕೊಟ್ಟ ಸರ್ ತಾರಕನಾಥ ಪಾಲಿತರವರು ಇತ್ತಲಾಗೆ ಕಲ್ಕತ್ತೆಯಲ್ಲಿ ಸ್ವರ್ಗಸ್ಥರಾದರು. ಇಂದವರ ಸ್ಮರಣೆಯನ್ನು ದೇಶದ ಹಲವು ಪತ್ರಗಳೊಡನೆ ನಾವೂ ಸಹ ಮಾಡುವುದು ಕರ್ತವ್ಯವಾಗಿದೆ. ೧೫ ಲಕ್ಷ ರೂಪಾಯಿಗಳನ್ನು ದಾನವಾಗಿ ಕೊಟ್ಟ ಈ ಬಾಬ್ಯುಶಾಲಿಯು ಮಿಲಿಯಾಧೀಶನಾಗಿರಬಹುದೆಂದು ವಾಚಕರು ಭ್ರಮಿಸಬಹುದು. ಅಥವಾ ಇವರ ಆಸ್ತಿಯನ್ನು ಅನುಭವಿಸಲಿಕ್ಕೆ ಮಕ್ಕಳಿಲ್ಲದ್ದರಿಂದ ಪಾಲಿತರವರು ಈ ರೀತಿ ದಾನಮಾಡಿದರೆಂದು ಊಹಿಸಲೂ ಬಹುದು. ಆದರೆ ಸರ್ ತಾರಕನಾಥರವರು ಮಿಲಿಯಾಧೀಶರೂ ಅಲ್ಲ, ಇವರಿಗೆ ಎಷ್ಟು ಆಸ್ತಿ ಇದ್ದರೂ ಅದಕ್ಕೆ ವಾರೀಸುದಾರರಾಗತಕ್ಕ ಇಬ್ಬರು ಮಗಂದಿರೂ ಒಬ್ಬ ಮಗಳೂ ಇರುವರು. ಬಂಗಾಳದ ಗವರ್ನರ ದೊರೆಗಳವರಾದ ಕಾರ್ಮಿಕೆಲ್ ಪ್ರಭುಗಳು ಅಪ್ಪಣೆ ಕೊಡಿಸಿದಂತೆ ಸರ್ ತಾರಕನಾಥರವರು ತನ್ನ ಸರ್ವಸ್ವವನ್ನು ದೇಶಬಾಂಧವರ ಸಲುವಾಗಿ ದಾನವಾಗಿ ಕೊಟ್ಟಿರುತ್ತಾರೆ.

ಸರ್ ತಾರಕನಾಥರವರು ೧೮೪೫ನೇ ಅಕ್ಟೋಬರ ತಾ ೨೧ರಲ್ಲಿ ಹುಗ್ಲಿ ಜಿಲ್ಲೆಯ ಒಂದು ಹಳ್ಳಿಯಲ್ಲಿ ಜನಿಸಿದರು. ಪಾಲಿತರವರ ತಂದೆಯು ಇವರಂತೆಯೇ ದಾನಶಾಲಿಗಳಾಗಿದ್ದರು. ಇವರೂ ಸಹ ತನ್ನ ಮಕ್ಕಳಿಗೆ ಹೇರಳ ಹಣವನ್ನು ಕಟ್ಟಿಡದೆ ತಾನು ಸಂಪಾದಿಸಿದೆಲ್ಲವನ್ನು ಲೋಕೋಪಕಾರ ಕೆಲಸಗಳಲ್ಲಿ ವಿನಿಯೋಗಿಸಿದ್ದರು. ಸರ್ ತಾರಕರವರ ತನ್ನ ವಿದ್ಯಾಭ್ಯಾಸವನ್ನು ಡೆವಿಡ್‌ಹೇರ್ ಟ್ರೈನಿಂಗ್ ಕೋಲೇಜಿನಲ್ಲಿ ಮುಗಿಸಿದನಂತರ ೧೮೬೭ರಲ್ಲಿ ಬೆರಿಸ್ಟರ್ ಪರೀಕ್ಷೆಯ ಒಗ್ಗೆ ಕಲಿಯಲು ಅಂಗ್ಲಾಂಡಕ್ಕೆ ಹೋದರು. ೧೮೭೧ರಲ್ಲಿ ಅಂಗ್ಲಾಂಡದಿಂದ ಬೆರಿಸ್ಟರರಾಗಿ ಬಂದು ಕಲ್ಕತ್ತೆಯಲ್ಲಿ ನಿಂತು ಬಹಳ ದ್ರವ್ಯಸಂಪಾದನೆಯನ್ನು ಮಾಡಿದರು. ೧೮೯೮ರಲ್ಲಿ ಇವರಿಗೆ ಕಠಿಣ ಸ್ವಭಾವದ ಹೃದ್ರೋಗವು ಪ್ರಾಪ್ತವಾದ್ದರಿಂದ ಇವರು ತಮ್ಮ ವೃತ್ತಿಯನ್ನು ಬಿಡಬೇಕಾಯಿತು.

ಸರ್ ತಾರಕರವರ ಪತ್ನಿಯರಿಗೆ ಪಾಲಿತರವರ ಅವಸಾನ ಕಾಲದಲ್ಲಿ [illegible] ನಿರಲು ಆಗಲಿಲ್ಲ. ಪಾಲಿತರವರ ಪತ್ನಿಯು ತನ್ನ ಕಣ್ಣುಗಳ ಚಿಕಿತ್ಸೆ ಬಗ್ಗೆ [illegible] ಕ್ಕೆ ಹೋಗಿರುತ್ತಾರೆ. ಪಾಲಿತರವರ ಹಿರಿ ಮಗ ಲೋಕೇಂದ್ರನಾಥ [illegible] ಬಹಳ ಸಮಯದ ವರೆಗೆ [illegible] ಮತ್ತು [illegible] [illegible] ಸರ್ ತಾರಕರವರಿಗೆ [illegible] ಮಗನು [illegible] ಇರುವರು.

ಬ್ರಿಟಿಷ ಮತ್ತು ಜರ್ಮನ ಸಾಮ್ರಾಜ್ಯಗಳ ಸಾಂಪತ್ತಿಕ ಸ್ಥಿತಿಭೇದವು.

ಪ್ರಕೃತ ಯುರೋಪು ಖಂಡದ ರಣರಂಗದಲ್ಲಿ ಕಾದಾಡುತ್ತಿರುವ ಈ ಎರಡು ಸಾಮ್ರಾಜ್ಯಗಳ ಸಾಂಪತ್ತಿಕ ಸ್ಥಿತಿಭೇದವನ್ನು ಪರಿಶೋಧಿಸಿ ಆಂಗ್ಲ ಲೇಖಕರೊಬ್ಬರು ಒಂದು ಲೇಖವನ್ನು ಬರೆದು ಪ್ರಕಟಿಸಿರುವರು. ಈ ಪರಿಶೋಧನಾಗಾರರ ಅಭಿಪ್ರಾಯದ ಮೇರೆಗೆ ಉಭಯ ರಾಷ್ಟ್ರಗಳ ಸಾಂಪತ್ತಿಕ ಅಭಿವೃದ್ಧಿಯು ಇವರೊಳಗಣ ಪರಸ್ಪರ ಸಹಕಾರದಿಂದ ಕೈಗೂಡಿದ್ದಾಗಿರುತ್ತದೆ. ಕೈಗಾರಿಕೆಗಳಲ್ಲಿ ಬ್ರಿಟಿಷರು ಅರ್ಧ ಶತಮಾನ ಕಾಲದಷ್ಟು ಜರ್ಮನರಿಗಿಂತ ಮುಂದಿದ್ದುದರಿಂದ ಜರ್ಮನರಿಗೆ ಬ್ರಿಟಿಷರ ಅನುಭವದ ಪ್ರಯೋಜನವು ಧಾರಾಳವಾಗಿ ದೊರೆಯಿತು. ಈ ಎರಡು ರಾಜ್ಯಗಳ ಸಾಂಪತ್ತಿಕ ಸ್ಥಿತಿಯನ್ನು ಸೂಚಿಸಲಿಕ್ಕೆ ಇವುಗಳಲ್ಲಿಯ ವ್ಯಾಪಾರ ಉತ್ಪತ್ತಿಗಳ ಸರಾಸರಿ ಸಂಖ್ಯೆಗಳನ್ನು ಈ ಲೇಖಕರು ಸಂಗ್ರಹಿಸಿ ಬರೆದಿರುತ್ತಾರೆ.

೧೯೧೧ನೇ ಇಸವಿಯಲ್ಲಿ ಬ್ರಿಟಿಷ ದ್ವೀಪಗಳಲ್ಲಿ ಅಗೆದು ತೆಗೆಯಲ್ಪಟ್ಟ ಕಲ್ಲಿದ್ದಲು ೨[illegible]೦೦,೦೦೦ ಟನ್ನುಗಳಾಗಿರುವಾಗ ಜರ್ಮನಿಯಲ್ಲಿ ಕಲ್ಲಿದ್ದಲಿನ ಒಟ್ಟಿನ ಹುಟ್ಟು ೨೩[illegible]೦೦,೦೦೦ ಟನ್ನುಗಳಾಗಿರುವುದು. ೧೮೭೧ರಿಂದ ೧೯೧೧ರ ವರೆಗಿನ ಕಲ್ಲಿದ್ದಲಿನ ಲೆಕ್ಕಗಳನ್ನು ನೋಡಿದ್ದಲ್ಲಿ ಜರ್ಮನರ ಕಲ್ಲಿದ್ದಲಿನ ಉತ್ಪತ್ತಿಯು ಸೇಕಡಾ ೨೧೮ರಂತೆ ಏರುತ್ತಿದೆ ಎಂದೂ ಬ್ರಿಟಿಷರದು ಸೇಕಡಾ ೭೫ರಂತೆ ಹೆಚ್ಚುತ್ತಿದೆಂದೂ ತಿಳಿದುಬರುವುದು. ಇದೇ ರೀತಿ ೧೯೧೦ರಲ್ಲಿ ಜರ್ಮನ ಸಾಮ್ರಾಜ್ಯದಲ್ಲಿ ಉಕ್ಕಿನ ಉತ್ಪತ್ತಿಯು ೧೩,೬೯೮,೬೦೦ ಟನ್ನುಗಳಾಗಿದ್ದಾಗ ಬ್ರಿಟಿಷ ದ್ವೀಪಗಳಲ್ಲಿ ಈ ಉತ್ಪತ್ತಿಯು ೬,೧೦೬,೮೦೦ ಟನ್ನುಗಳಾಗಿತ್ತು. ಕಲ್ಲಿದ್ದಲು ಮತ್ತು ಉಕ್ಕಿನ ಉತ್ಪತ್ತಿಗಳು ಬ್ರಿಟಿಷ ದ್ವೀಪಗಳಲ್ಲಿ ಜರ್ಮನಿಯಲ್ಲಿರುವದಕ್ಕಿಂತ ಕಡಮೆಯಾಗಿದ್ದರೂ, ಹತ್ತಿ ಮತ್ತು ಉಣ್ಣೆಯ ಕೈಗಾರಿಕೆಗಳಲ್ಲಿ ಬ್ರಿಟಿಷ ದ್ವೀಪಗಳೇ ಮೊದಲನೆಯವುಗಳಾಗಿರುವವು. ಬ್ರಿಟಿಷ ದ್ವೀಪಗಳ ಲಂಕಶಾಯರಿನಲ್ಲಿ ಮಾತ್ರ ೧೮೮೦ರಿಂದ ೧೯೦೯ರ ವರೆಗೆ ೧೨,೬೫೦,೦೦೦ ನೂಲುವ ಯಂತ್ರಗಳು ಹೆಚ್ಚಿರುವಾಗ ಜರ್ಮನ್ ಸಾಮ್ರಾಜ್ಯದಲ್ಲೆಲ್ಲಾ ಇವುಗಳು ಹೆಚ್ಚಿದ ಸಂಖ್ಯೆಯು ೫,೦೭೬,೦೦೦ ಆಗಿರುತ್ತದೆ. ಉಣ್ಣೆಯ ಕೈಗಾರಿಕೆಯು ಬ್ರಿಟಿಷ ದ್ವೀಪಗಳಲ್ಲಿ ಮತ್ತಷ್ಟು ಉನ್ನತ ಸ್ಥಿತಿಯಲ್ಲಿದೆ. ೧೯೧೧ರಲ್ಲಿ ಬ್ರಿಟಿಷ ದ್ವೀಪಗಳಿಂದ ಇತರ ದೇಶಗಳಿಗೆ ೬೭,೭೫೬,೦೦೦ ಪವನುಗಳ ಕ್ರಯದ ಉಣ್ಣೆಯ ವಸ್ತ್ರ ಇತ್ಯಾದಿಗಳು ಪರದೇಶಗಳಿಗೆ ಕಳುಹಿಸಲ್ಪಟ್ಟಾಗಿವೆ. ಇದೇ ವರುಷದಲ್ಲಿ ಜರ್ಮನ್ ಸಾಮ್ರಾಜ್ಯದಿಂದ ಹೊರದೇಶಗಳಿಗೆ ಕಳುಹಿಸಲ್ಪಟ್ಟ ಈ ಸರಕಿನ ಒಟ್ಟು ಮೌಲ್ಯವು ೧೬,೫೮೦,೦೦೦ ಪವನುಗಳಿಗೆ ಮಿಕ್ಕಿರದು.

೧೮೯೮ರಿಂದ ೧೯೦೮ರ ವರೆಗೆ ಜರ್ಮನಿಯಲ್ಲಿ ಕಟ್ಟಲ್ಪಟ್ಟ ಹಡಗುಗಳ ಭರಾವಣೆಯ ಸರಾಸರಿಯು ೨೪೦,೮೦೦ ಟನ್ನುಗಳಾಗಿರುವುದು. ಬ್ರಿಟಿಷ ದ್ವೀಪಗಳಲ್ಲಿ ಈ ಸರಾಸರಿಯು ೬೯೮,೦೦೦ ಟನ್ನುಗಳಾಗಿರುವುದು. ೧೯೧೧ರಲ್ಲಿ ಬ್ರಿಟಿಷ ದ್ವೀಪಗಳಲ್ಲಿ ೨,೨೦೬,೦೦೦ ಟನ್ನುಗಳ ಭರಾವಣೆಯ ಹಡಗುಗಳು ಸಿದ್ಧಗೊಳಿಸಲ್ಪಟ್ಟಾಗಿವೆ. ಜರ್ಮನಿಯಲ್ಲಿ ಈ ಕಾಲದಲ್ಲಿಯೇ ಕಟ್ಟಲ್ಪಟ್ಟ ಹಡಗುಗಳ ಭರಾವಣೆಯು ೬೫೮,೮೦೦ ಟನ್ನುಗಳಾಗಿರುವುದು. ಜರ್ಮನ್ ಸಾಮ್ರಾಜ್ಯದಲ್ಲಿ ವ್ಯಾಪಾರ ಹಡಗುಗಳನ್ನು ತಯ್ಯಾರಿಸುವ ಕೈಗಾರಿಕೆಯು ಬ್ರಿಟಿಷ ದ್ವೀಪಗಳಿಗಿಂತ ಬಹಳ ಬಿರುಸಾಗಿ ನಡಿಯುತ್ತದಾದರೂ ಬ್ರಿಟಿಷ ದ್ವೀಪಗಳು ಎಂದಿನಂತೆಯೇ ನೌಕಾಬಲದಲ್ಲಿ ಭೂಲೋಕದ ಎಲ್ಲಾ ರಾಜ್ಯಗಳಿಗಿಂತ ಅತಿ ಶ್ರೇಷ್ಠವಾದವುಗಳಾಗಿವೆ. ಜರ್ಮನ್ ಸಾಮ್ರಾಜ್ಯದಲ್ಲಿ ರೈಲ್ವೆಗಳ ಪ್ರೈವಾಟಗಳ ಉತ್ಪತ್ತಿಯು ಸಾಮ್ರಾಜ್ಯದ ಒಟ್ಟಿನ ಉತ್ಪತ್ತಿಯ ಸೇಕಡಾ ೩೪ರಂತಿದೆ. ಜರ್ಮನಿಯಲ್ಲಿ ರೈಲ್ವೆ ಮಾರ್ಗಗಳು ದೇಶದ ಸಂಪದಭಿವೃದ್ಧಿಗಾಗಿ ಜರ್ಮನಿಯ ಸರಕಾರದವರಿಂದಲೇ ಹಾಕಲ್ಪಟ್ಟಾಗಿರುವವು. ರೈಲ್ವೆ ಇಲಾಖೆಯಿಂದ ದೊರಕುವ ಉತ್ಪತ್ತಿಯು ಖಾಸಗಿ ಕಂಪೆನಿಗಳಿಗೆ ದೊರಕದು. ಹೀಗಿದ್ದದರಿಂದ ೧೮೮೮ರಿಂದ ೧೯೧೦ನೇ ವರುಷಗಳಲ್ಲಿ ರೈಲ್ವೆ ಮಾರ್ಗಗಳ ಮೂಲಕ ದೊರೆತಿರುವ ಉತ್ಪತ್ತಿಯ ಸರಾಸರಿಯು ಜರ್ಮನಿಯಲ್ಲಿ ಸೇಕಡಾ ೧೫೬ರಂತೆ ಹೆಚ್ಚಿರುವಾಗ ಬ್ರಿಟನಿನಲ್ಲಿ ಈ ಸರಾಸರಿಯು ಸೇಕಡಾ ೭೪ರಂತಿರುತ್ತದೆ. ನದಿ ಕಾಲಿವೆಗಳ ಮಾರ್ಗಗಳು ಸಹ ಜರ್ಮನ ಸಾಮ್ರಾಜ್ಯದಲ್ಲಿ ಬ್ರಿಟಿಷ ದ್ವೀಪಗಳಲ್ಲಿರುವದಕ್ಕಿಂತ ಬಹಳ ಏರುವವು.

ಜರ್ಮನಿಯಲ್ಲಿ ಕಲಾಕೌಶಲ್ಯಗಳ ಬೆಳವಣಿಗೆಯು ಅತಿ [illegible]. ಜರ್ಮನ್ ಕೈಗಾರಿಕೆಗಳ ಕಾರ್ಖಾನೆಗಳಿಗೆ [illegible] ದಿಂದ ಅಲ್ಲಿಯ ಬೇಂಕುಗಳು [illegible] ಕೊಡುತ್ತಿರುವ[illegible] [illegible] ವುದು. ಜರ್ಮನ್ ಬೇಂಕುಗಳು ಕೈಗಾರಿಕೆ ಕಾರ್ಖಾನೆಗಳಿಗೆ ಸಹಾಯಕೊಡುವಷ್ಟು ಬ್ರಿಟಿಷ ಬೇಂಕುಗಳು ಕೊಡುವದಿಲ್ಲ. ಆದರೆ ಬ್ರಿಟಿಷ ಬೇಂಕುಗಳಿಂದ ಬ್ರಿಟಿಷ ವ್ಯಾಪಾರವು ಲೋಕದ ಎಲ್ಲಾ ಕಡೆಗಳಲ್ಲಿ ಪ್ರಸರಿಸಿರುವುದು. ಜರ್ಮನ ಬೇಂಕುಗಳು ತಮ್ಮ ಹಣವನ್ನು ತಮ್ಮ ದೇಶದಲ್ಲಿಯೇ ವಿನಿಯೋಗಿಸಿ ಜರ್ಮನ ಸಾಮ್ರಾಜ್ಯದ ಕೈಗಾರಿಕೆಗಳನ್ನು ಉದ್ಧರಿಸಿರುವಾಗ ಬ್ರಿಟಿಷ ಬೇಂಕುಗಳ ಹಣವು ಹೊರದೇಶಗಳ ವ್ಯಾಪಾರದಲ್ಲಿ ವಿಶೇಷವಾಗಿ ವಿನಿಯೋಗಿಸಲ್ಪಟ್ಟಿದೆ. ಬ್ರಿಟಿಷ ಭಂಡವಾಳವು ಹೀಗೆ ವಿನಿಯೋಗಿಸಲ್ಪಟ್ಟಿರುವುದರಿಂದ ಜರ್ಮನ್ ಕೈಗಾರಿಕೆಗಳಿಗೆ ವಿಶೇಷ ಪ್ರೋತ್ಸಾಹವು ದೊರಕಿರುವುದು. ಬ್ರಿಟಿಷರ ಹಣದ ಮೂಲಕ ಹೊರದೇಶಗಳಲ್ಲಿ ಜರ್ಮನ ಸಾಮಾಗ್ರಿಗಳನ್ನು ತರಿಸಿ ವ್ಯಾಪಾರ ನಡಿಸಲು ಸಾಧ್ಯವಾಗಿರುವುದು. ಇದರಿಂದ, ಜರ್ಮನ ಒಡವೆಗಳ ವ್ಯಾಪಾರಕ್ಕೆ ಬ್ರಿಟಿಷರ ಭಂಡವಾಳವು ಇದ್ದದ್ದರಿಂದ, ಜರ್ಮನರಿಗೆ ತಮ್ಮ ಹಣವೆಲ್ಲವನ್ನು ತಮ್ಮ ದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದರಲ್ಲಿ ವಿನಿಯೋಗಿಸಲಿಕ್ಕೆ ಒಳ್ಳೇ ಅವಕಾಶ ದೊರಕಿತು.

ಬ್ರಿಟಿಷ ಮತ್ತು ಜರ್ಮನರ ವಿದೇಶ ವ್ಯಾಪಾರಗಳನ್ನು ಸರಿಹೋಲಿಸುವುದರಿಂದ ಬ್ರಿಟಿಷ ಮತ್ತು ಜರ್ಮನ ದೇಶಗಳ ಸಾಂಪತ್ತಿಕ ಸ್ಥಿತಿಯ ಭೇದವು ಮತ್ತಷ್ಟು ಚೆನ್ನಾಗಿ ವ್ಯಕ್ತವಾಗುವುದು. ಜರ್ಮನಿಗೆ ಹೊರದೇಶಗಳಿಂದ ಬರುವ ಒಟ್ಟಿನ ಸರಕುಗಳಲ್ಲಿ ಸೇಕಡಾ ೧೮ರಷ್ಟು ಬ್ರಿಟಿಷ ಸರಕುಗಳಾಗಿರುವವು. ಬ್ರಿಟಿಷ ಸಾಮ್ರಾಜ್ಯದ ವಿದೇಶ ವ್ಯಾಪಾರದ ಸರಕುಗಳಲ್ಲಿ ಜರ್ಮನಿಯಿಂದ ಬರುವ ಸರಕು ಸೇಕಡಾ ೧೮½ರಂತೆ ಇದೆ. ಜರ್ಮನಿಯಿಂದ ಇತರ ದೇಶಗಳಿಗೆ ಹೋಗುವ ಸರಕುಗಳ ಲೆಕ್ಕಗಳನ್ನು ವಿಂಗಡಿಸಿ ನೋಡಿದ್ದಲ್ಲಿ ಬ್ರಿಟಿಷ ದ್ವೀಪಗಳಿಗೆ ಜರ್ಮನಿಯಿಂದ ಹೋಗುತ್ತಿದ್ದ ಸರಕು ಮತ್ಯಾವ ಪ್ರಾಂತ್ಯಗಳಿಗೂ ಹೋಗುತ್ತಿದ್ದಿಲ್ಲ. ಆದ್ದರಿಂದ ಜರ್ಮನಿಯ ಸರಕುಗಳು ಖರ್ಚಾಗಲಿಕ್ಕೆ ಗಿರಾಕಿಯು ಇವುಗಳಿಗೆ ಮುಖ್ಯವಾಗಿ ಬ್ರಿಟಿಷ ದ್ವೀಪಗಳಲ್ಲಿ ದೊರೆಯಬೇಕು. ಬ್ರಿಟಿಷ ವ್ಯಾಪಾರದ ಸ್ಥಿತಿಯಾದರೋ ಈ ರೀತಿ ಇರದು. ಬ್ರಿಟಿಷ ಸಾಮಾಗ್ರಿಗಳಿಗೆ ಜರ್ಮನ್ ಗಿರಾಕಿಯು ಇಲ್ಲದೆಹೋದರೂ ಬ್ರಿಟನಿಗೆ ಬಹಳ ನಷ್ಟ ಉಂಟಾಗದು. ಯಾಕಂದರೆ, ಬ್ರಿಟಿಷ ದ್ವೀಪಗಳ ರಫ್ತು ವ್ಯಾಪಾರದ ಅಧಿಕಾಂಶವು ಬ್ರಿಟಿಷ ಸಾಮ್ರಾಜ್ಯಕ್ಕೆ ಒಳಪಟ್ಟ ಇತರ ಪ್ರಾಂತ್ಯಗಳಲ್ಲಿಯೂ ಭೂಲೋಕದ ಇನ್ನೂ ಹಲವು ಕಡೆಗಳಲ್ಲಿಯೂ ನಡೆಯುವುದು. ಅದಲ್ಲದೆ ಜರ್ಮನಿಯ ವಿದೇಶ ವ್ಯಾಪಾರವು ಮುಖ್ಯವಾಗಿ ಬ್ರಿಟಿಷ ವಸಾಹತಿಗಳೊಡನೆ ಮತ್ತು ಬ್ರಿಟಿಷ ಸಾಮ್ರಾಜ್ಯದ ಪೌರ್ವಾತ್ಯ ಸೀಮೆಗಳೊಡನೆ ನಡಿಯುವದಿತ್ತು. ಜರ್ಮನಿಯ ಕೈಗಾರಿಕೆ ಕಾರ್ಖಾನೆಗಳಿಗೆ ಬೇಕಾದ ಒಡವೆಗಳು ಬ್ರಿಟಿಷ ಸಾಮ್ರಾಜ್ಯದಿಂದ ಜರ್ಮನಿಗೆ ಹೋಗಬೇಕಾಗಿವೆ. ಜರ್ಮನಿಯ ಆಹಾರ ಸಂಗ್ರಹಗಳು ಸಹ ಬ್ರಿಟಿಷ ಸಾಮ್ರಾಜ್ಯದಿಂದಲೇ ಜರ್ಮನಿಗೆ ದೊರಕಬೇಕು. ಜರ್ಮನಿಯು ಈ ಒಡವೆಗಳಿಗೆ ಬದಲಾಗಿ ತನ್ನ ಕಾರ್ಖಾನೆಗಳಲ್ಲಿ ತಯ್ಯಾರಾದ ಸಾಮಾಗ್ರಿಗಳನ್ನು ಈ ಪ್ರಾಂತ್ಯಗಳಿಗೆ ಕಳುಹಿಸಿಕೊಡುವುದು. ಬ್ರಿಟಿಷ ದ್ವೀಪಗಳಲ್ಲಿ ತಯ್ಯಾರಾಗುವ ವಸ್ತ್ರ ಇತ್ಯಾದಿಗಳೂ ವಸ್ತ್ರ ಕಾರ್ಖಾನೆಯ ಯಂತ್ರಗಳೂ, ಭೂವ್ಯವಸಾಯದ ಉಪಕರಣಗಳೂ ಜರ್ಮನಿಯಲ್ಲಿ ಬೇಕಾಗಿರುವಂಥವು. ಜರ್ಮನಿಯಲ್ಲಿ ನೂತನ ಶೋಧನೆಗಳಿಂದ ಸಿದ್ಧಗೊಳಿಸಲ್ಪಟ್ಟ ವಿದ್ಯುಚ್ಛಕ್ತಿಯ ನಾನಾ ವಿಧಾನಗಳ ಯಂತ್ರಗಳು, ಲೋಹದ ಗಣಿಗಳಲ್ಲಿ ಉಪಯೋಗಿಸತಕ್ಕ ನವೀನ ಉಪಕರಣಗಳು, ಮೊದಲಾದವು ಬ್ರಿಟಿಷ ದ್ವೀಪಗಳಲ್ಲಿ ಬೇಕಾಗಿವೆ.

ಬ್ರಿಟಿಷ ಮತ್ತು ಜರ್ಮನ ನಿವಾಸಿಕರಲ್ಲಿರುವ ಧನದ ಸರಾಸರಿಯನ್ನು ನೋಡಿದರೆ ಜರ್ಮನಿಯು ಕಲಾಕೌಶಲ್ಯಗಳಲ್ಲಿ ವಿಶೇಷವಾದ ಅಭಿವೃದ್ಧಿಯನ್ನು ಹೊಂದಿದ್ದರೂ ಬ್ರಿಟಿಷ ನಿವಾಸಿಕರು ಜರ್ಮನರಿಗಿಂತ ಸಿರಿವಂತರಾಗಿರುವರೆಂತ ತಿಳಿದುಬರುವುದು. ಧನದ ಸರಾಸರಿಯು ಬ್ರಿಟಿಷ ದ್ವೀಪಗಳಲ್ಲಿ ನಿವಾಸಿಕನೊಬ್ಬನಿಗೆ ೩೬೬ ಪವನುಗಳ ಪ್ರಕಾರ ಇರುವುದು. ಜರ್ಮನಿಯಲ್ಲಿ ಈ ಸರಾಸರಿಯು ೨೨೭ ಪವನುಗಳ ಪ್ರಕಾರ ಇದೆ.

ಈ ರೀತಿ ಜರ್ಮನಿಯ ಸಾಂಪತ್ತಿಕ ಸ್ಥಿತಿಯು ಬ್ರಿಟಿಷ ದ್ವೀಪಗಳ ಸಾಂಪತ್ತಿಕ ಸ್ಥಿತಿಯಷ್ಟು ಒಳ್ಳೇದಾಗಿರದು. ಪ್ರಕೃತ ಯುದ್ಧವು ಪ್ರಾರಂಭವಾಗಿರುವುದರಿಂದ ಬ್ರಿಟಿಷ ದ್ವೀಪಗಳಿಗಿಂತ ಜರ್ಮನಿಯ ಸ್ಥಿತಿಯು ಕೆಡುವ ಸಂಭವಗಳಿವೆ. ಯಾಕಂದರೆ ಬ್ರಿಟಿಷ ಸಾಮ್ರಾಜ್ಯದ ಯಾವ ಭಾಗದಲ್ಲಿಯಾದರೂ ಜರ್ಮನರ ವ್ಯಾಪಾರವು ನಡೆಯದು. ಭೂಲೋಕದ ಇತರ ಪ್ರಾಂತ್ಯಗಳಲ್ಲಿ ಸಹ ಬ್ರಿಟಿಷರ ಭಂಡವಾಳದ ಪ್ರಯೋಜನವು [illegible]

ಸೇನಾ ಬಲವು.

ಒಂದು ಬ್ರಿಗೇಡ್ ಅಂದರೆ ಅದು ಕಾಲಾಳು ಸೇನೆ (Infantry) ಕುದುರೆ ಪಡೆ (Cavalry) ಯಾ ತೋಪು ಸೇನೆ (Artillery)ಯಾಗಿರಬಹುದು. ನಮ್ಮ ಸೇನೆಯಲ್ಲಿ ಒಂದು ಕಾಲಾಳು ಸೇನೆಯ ಬ್ರಿಗೇಡಿಗೆ ೧೦೦೦ ಸೈನಿಕರುಳ್ಳ ನಾಲ್ಕು ಬೆಟಲಿಯನ್ ಸೇರುವುದು. ಅಂದರೆ ಒಂದು ಕಾಲಾಳು ಸೇನೆಯ ಬ್ರಿಗೇಡಿಗೆ ೪೦೦೦ ಬಲವಾಯಿತು. ವಿದೇಶ ಸೇನೆಯಲ್ಲಿ ಒಂದು ಬ್ರಿಗೇಡಿಗೆ ೬ ಬೆಟಲಿಯನ್‌ಗಳು ಸೇರಿದ ಎರಡು ರೆಜಿಮೆಂಟ್‌ಗಳು ಇವೆ, ಇದಲ್ಲದೆ ಕಾಲಾಳು ಸೇನೆಯ ಬ್ರಿಗೇಡಿಗೆ ವೈದ್ಯರೂ, ಆಹಾರ ಸಾಮಾಗ್ರಿಗಳನ್ನು ಸಂಗ್ರಹಿಸಿ ಕೊಡುವವರೂ, ಮೆಶ್ಶಿನ್‌ಗನ್ಸ್ ಎಂಬ ತೋಪುಗಳೂ ಸೇರುತ್ತವೆ. ಆದರೆ ಫೀಲ್ಡ್‌ಗನ್ಸ್ ಎಂಬ ತೋಪುಗಳು ಈ ಕಾಲಾಳು ಸೇನೆಯಲ್ಲಿಲ್ಲ.

ನಮ್ಮಲ್ಲಿ ಒಂದು ಕುದುರೆ ಪಡೆಯ ಬ್ರಿಗೇಡಿಗೆ ೩ ರೆಜಿಮೆಂಟ್‌ಗಳೂ ಪ್ರತಿ ಒಂದು ರೆಜಿಮೆಂಟಿಗೆ ೧೫೦ ಸೈನಿಕರಿರುವ (Field Squadrons) ಸವಾರರ ಸೇನೆಯೂ ಸೇರುತ್ತದೆ. ವಿದೇಶದಲ್ಲಿ ಒಂದು ಅಶ್ವಬಲಕ್ಕೆ ೨ ರೆಜಿಮೆಂಟುಗಳೂ ಪ್ರತಿ ಒಂದು ರೆಜಿಮೆಂಟಿಗೆ ೫—೬ ಸವಾರರ ಸೇನೆಯೂ ಇದೆ. ಪ್ರತಿ ಒಂದು ಅಶ್ವಬಲದೊಡನೆ ಮೆಶ್ಶಿನ್‌ಗನ್ ಎಂಬ ತೋಪುಗಳೂ ಮತ್ತು ಒಂದು ಗುರುತು ಕೊಡುವ ಯುದ್ಧ ಸೇನೆಯೂ ಇದೆ.

ತೋಪು ಸೇನೆಯ ಬ್ರಿಗೇಡಿಗೆ ಮೂರು ಬತ್ತೇರಿಗಳು-ಹೊವ್ವೈಜರ್ ಯಾ ಫೀಲ್ಡ್‌ಗನ್ ಎಂಬ ತೋಪುಗಳ ಬತ್ತೇರಿಗಳು ಇವೆ. ಪ್ರ ಒಂದು ಬತ್ತೇರಿಗೆ ೬ ತೋಪುಗಳು ಸುಮಾರು ೨೦೦ ಸೇನಿಕರೂ ಇರುವರು. ಫ್ರಾನ್ಸಿನಲ್ಲಿ ಪ್ರತಿ ಒಂದು ಬತ್ತೇರಿಗೆ ೪ ತೋಪುಗಳು ಇರುವವು.

ಒಂದು ಕಾಲಾಳು ಸೇನೆಯ ಡಿವಿಜನ್ ಅಂದರೆ ಅದರಲ್ಲಿ ಸಣ್ಣ ಸಣ್ಣ ಎಲ್ಲಾ ಸೇನಾಂಗಗಳೂ ಆಯುಧಗಳೂ ಕೂಡಿರುವವು. ಸರ್ವ ಸಾಧಾರಣವಾಗಿ ಈ ಡಿವಿಜನಿನಲ್ಲಿ ೧೨ ಬೆಟಲಿಯನ್ ಸೇನೆಯೂ [illegible] ತೋಪುಗಳೂ ಇಂಜಿನಿಯರುಗಳೂ, ವೈದ್ಯರೂ, ಆಹಾರ ಸಾಮಾಗ್ರಿಗಳೂ, ಗುರುತು ಕೊಡುವ ಸೇನೆಯೂ ಇರುವವು. ಡಿವಿಜನಿನ ಒಡನೆ ಇರುವ ಅಶ್ವಬಲದೊಟ್ಟಿಗೆ ಸಾಧಾರಣವಾಗಿ ಎರಡು ಸವಾರ ಸೇನೆಗಳು ಇರುವವು. ಕೆಲವು ಸಾರಿ ಸವಾರ ಸೇನೆಯ ಸಂಖ್ಯೆಯನ್ನು ಹೆಚ್ಚಿಸುವುದೂ ಇದೆ. ಒಟ್ಟಾರೆ ಒಂದು ಡಿವಿಜನಿನಲ್ಲಿ ೨೦,೦೦೦ ಸೈನಿಕರಿರುವರು.

ಒಂದು ಅಶ್ವಬಲದಲ್ಲಿ ೨—೪ ಬ್ರಿಗೇಡ್ ಸೇನೆಯೂ ಕುದುರೆಗಳು ಎಳೆದುಕೊಂಡು ಹೋಗುವ ೧—೪ ಬತ್ತೇರಿಗಳೂ, ಕುದುರೆ ಏರಿದ ಇಂಜಿನಿಯರರೂ ಇರುವರು. ವಿದೇಶದಲ್ಲಿ ಸಾಧಾರಣವಾಗಿ ಒಂದು ಅಶ್ವಬಲ ಡಿವಿಜನಿನಲ್ಲಿ ೪೫೦೦ ಸೇನಿಕರು ಇರುವರು, ಮತ್ತು ೩೫೦೦ ಖಡ್ಗಗಳೂ, ೧೨ ಫಿರಂಗಿಗಳೂ ೮ ಮೆಶ್ಶಿನ್ ಗನ್ಸ್ ಎಂಬ ತೋಪುಗಳೂ ಇವೆ.

ಒಂದು ಆರ್ಮಿಕೋರ್ಪ್ಸ್‌ನಲ್ಲಿ ೨ ಅಥವಾ ೩ ಡಿವಿಜನ್ ಸೇರುತ್ತವೆ. ಸಾಧಾರಣವಾಗಿ ಇವುಗಳಲ್ಲಿ ಎರಡು ಕಾಳಗ ಮಾಡುತ್ತವೆ. ಒಂದು ಬೆಂಬಲ ಸೇನೆಯಾಗಿ ನಿಲ್ಲುತ್ತದೆ. ಜರ್ಮನ್ ಆರ್ಮಿಕೋರ್ಪ್ಸ್‌ನಲ್ಲಿ ೪೪,೦೦೦ ಸೇನಿಕರ ೨ ಡಿವಿಜನ್‌ಗಳು ಇರುತ್ತವೆ. ಆದಲ್ಲದೆ [illegible]೦೦೦ ರೈಫಲ್‌ಕೋವಿಗಳು, ೪೮ ಮೆಶ್ಶಿನ್‌ಗನ್ಸ್ ಎಂಬ ತೋಪುಗಳು, ೧೨೦೦ ಖಡ್ಗಗಳು, ೧೪೪ ತೋಪುಗಳು ಈ ಡಿವಿಜನಿನಲ್ಲಿ ಇರುತ್ತವೆ. ೩ ಡಿವಿಜನಿನ ಜರ್ಮನ ಆರ್ಮಿಕೋರ್ಪ್ಸಿನಲ್ಲಿ ಒಟ್ಟಿಗೆ ೬೦,೦೦೦ ಸೇನಿಕರಿರುವರು. ಫ್ರೆಂಚ ಮತ್ತು ರುಶ್ಯರ ಆರ್ಮಿಕೋರ್ಪ್ಸಿನ ಮತ್ತು ಜರ್ಮನರ ಆರ್ಮಿಕೋರ್ಪ್ಸಿನ ಬಲವು ಸಾಧಾರಣ ಒಂದೇ ಆಗಿರುವುದು.

ಎರಡು ಯಾ ಹೆಚ್ಚಿಗೆ ಆರ್ಮಿಕೋರ್ಪ್ಸ್‌ಗಳು ಸೇರಿರುವ ಸೇನಾ ಬಲಕ್ಕೆ ಇಂಗ್ಲಿಷಿನಲ್ಲಿ ಆರ್ಮಿ ಎಂದನ್ನುವರು.

ಆಸ್ಟ್ರೀಯ ಸೇನಿಕರಿಗಾದ ಕಟ್ಟಾಜ್ಞೆಯು.

ಆಸ್ಟ್ರೀಯ ಸೈನೀಕರಿಗೆ ಆದ ಒಂದು ಕಟ್ಟಾಜ್ಞೆಯ ಪ್ರತಿಯು ಸರ್ವಿಯಾ ಸೈನೀಕರಿಗೆ ದೊರಕಿರುವುದು. ಇದರಿಂದ ಸರ್ವಿಯಾದವರನ್ನು ಆಸ್ಟ್ರೀಯ ಸೈನೀಕರು ಹ್ಯಾಗೆ ಪೀಡಿಸಿದರೆಂಬುದು ಗೊತ್ತಾಗುವುದು.

ರಣರಂಗದಲ್ಲಿರುವ ನಿವಾಸಿಕರು ಆಸ್ಟ್ರೀಯನರ ಕಡೆಗೆ ಪೂರಾ ವಿರೋಧಭಾವದವರಾಗಿರುವರು. ಇಂತಹ ಜನರ ಕಡೆಗೆ ಯಾವನೊಬ್ಬನೂ ದಯಾಭಾವವನ್ನು ತೋರಿಸದೆ, ಮಾನುಷ್ಯ [illegible] ಅಂಥವರನ್ನು ಕಠಿಣವಾಗಿ ದಂಡಿಸಬೇಕು. ಸರ್ವಿಯ ಪ್ರದೇಶದ [illegible] ಧರಿಸಿದ ಪ್ರತಿ ಒಬ್ಬನನ್ನು ಕೊಲ್ಲಬೇಕು. ಈ ಹುಕುಮನ್ನು [illegible] ಮಾಡುವ ಆಸ್ಟ್ರೀಯ ಸೈನೀಕರನ್ನು ಕಠಿಣವಾಗಿ ದಂಡಿಸಬೇಕು.

ಆಸ್ಟ್ರೀಯ ಸೈನೀಕರು ಸರ್ವಿಯನರ ಪ್ರದೇಶಕ್ಕೆ ಕಾಲಿಟ್ಟ ಕೂಡಲೇ ಆ ಸ್ಥಳದ ಪಾದ್ರಿಗಳನ್ನೂ ಶಾಲಾ ಉಪಾಧ್ಯಾಯರನ್ನೂ ವರ್ಗದಾರರನ್ನೂ ಹಿಡಿದು ಹೊಣೆಯಾಗಿ ಮಾಡಬೇಕು. ಆ ಸ್ಥಳದವರಲ್ಲಿ ಯಾರಾದರೂ ಒಂದೇ ಒಂದು ಗುಂಡು ಹಾರಿಸಿದರೆ ಈ ಹೊಣೆಗಾರರನ್ನು ಕೊಲ್ಲಬೇಕು. ಮನೆಗಳನ್ನು ಜಪ್ತಿಮಾಡಿ ನಿವಾಸಿಕರ ಆಯುಧಗಳನ್ನು ಕಿತ್ತು ಅವರನ್ನು ನಿರಾಯುಧಿಗಳಾಗಿ ಮಾಡಬೇಕು. ಆಯುಧಗಳು ದೊರಕಿದ ಮನೆಗಳನ್ನು ನಾಶಮಾಡಬೇಕು. ಮನೆಯಲ್ಲಿ ಯಾರಾದರೂ ಇಲ್ಲದಿದ್ದರೆ ಇತರರನ್ನು ಕೈದುಮಾಡಬೇಕು. ಓಡಿಹೋದ ನಿವಾಸಿಕರ ಮಾಹಿತಿಯನ್ನು ಇವರು ಕೊಡದಿದ್ದರೆ ಇವರನ್ನು ಗಲ್ಲಿಗೆ ಹಾಕಬೇಕು.

ದಾರಿಯಲ್ಲಿ ಎರಡು ಮೂರು ಜನರು ಗುಂಪು ಕೂಡಿ ನಿಲ್ಲಕೂಡದು. ದೇವಾಲಯಗಳ ಘಂಟೆ ಬಾರಿಸಬಾರದು. ದೇವಾಲಯಗಳಲ್ಲಿ ಪೂಜೆ ಮಾಡಬಾರದು. ಮೈದಾನು ಸ್ಥಳಗಳಲ್ಲಿ ಮಾತ್ರ ದೇವತಾ ಪೂಜೆಮಾಡಬಹುದು. ಆದರೆ ಪ್ರಸಂಗ ಇತ್ಯಾದಿ ಮಾಡಲಿಕ್ಕೆ ಬಿಡಬಾರದು.

ಹಣ್ಣುಗಳಿಗೆ ತಗಲುವ ಚಿಟ್ಟೆಗಳು.

ಇವುಗಳು ಕೆಂಪು ಕೂಡಿದ ಕಂದು ಬಣ್ಣವನ್ನು ಹೊಂದಿರುತ್ತವೆಯಲ್ಲದೆ ಹಳದಿ ಮತ್ತು ಕಪ್ಪು ಚುಕ್ಕೆಗಳನ್ನು ಉಂಟಾಗಿರುತ್ತವೆ. ಹಣ್ಣು ಮತ್ತು ತರಕಾರಿ ತೋಟಗಳಲ್ಲಿ ವಿಶೇಷವಾಗಿ ಇರುತ್ತವೆ. ರೆಕ್ಕೆಗಳನ್ನು ಬಿಚ್ಚಿಕೊಂಡು ಫಲವೃಕ್ಷಗಳ ಮಧ್ಯೆ ಇವುಗಳು ಹಾರಾಡುತ್ತಿರುವುದನ್ನು ಸಾಧಾರಣವಾಗಿ ಪ್ರಾತಃಕಾಲಗಳಲ್ಲಿ ನೋಡಬಹುದು. ಇವುಗಳು ನಿಧಾನವಾಗಿ ಹಾರುವದರಿಂದ ಸುಲಭವಾಗಿ ಹಿಡಿಯಲು ಆಗುತ್ತೆ.

ಹೆಣ್ಣು ಚಿಟ್ಟೆಗಳಿಗೆ ಮೊನೆಯಾಗಿ ಉದ್ದವಾಗಿರುವ ಮೊಟ್ಟೆ ಇಡತಕ್ಕ ಒಂದು ಭಾಗವು ಇರುತ್ತೆ. ಈ ಮೊನೆಯಿಂದ ದೋರ ಕಾಯಿಗಳಲ್ಲಿ ರಂಧ್ರಗಳನ್ನು ಮಾಡಿ ಇವುಗಳಲ್ಲಿ ಉದ್ದುದ್ದವಾದ ಬಿಳೀ ಮೊಟ್ಟೆಗಳನ್ನು ಇಡುತ್ತವೆ. ಈ ರಂಧ್ರಗಳು ಜಾಗ್ರತೆಯಲ್ಲಿಯೇ ಹಣ್ಣುಗಳ ರಸದಿಂದ ಉಂಟಾಗತಕ್ಕ ಮೇಣದಿಂದ ಮುಚ್ಚಲ್ಪಡುವದರಿಂದ ಕಾಯಿಗಳಿಗೆ ಹುಳ ತಗಲಿರುವದು ತಿಳಿಯುವದೇ ಇಲ್ಲ.

ಈ ಮೊಟ್ಟೆಗಳು ನಾಲ್ಕಾರು ದಿನಗಳಲ್ಲಿ ಒಡೆದು ಬಿಳುಪು ಕೂಡಿದ ಹಳದಿ ಬಣ್ಣದ ಹುಳಗಳಾಗುತ್ತವೆ. ಇವುಗಳು ಒಳಗಿನ ತಿರುಳನ್ನು ತಿಂದುಹಾಕುವುದರಿಂದ ಹಣ್ಣುಗಳು ಕೊಳೆತುಹೋಗುತ್ತವೆ. ಹೀಗೆ ಕೊಳೆತ ಹಣ್ಣುಗಳು ಕೆಳಕ್ಕೆ ಉದುರಿ ಇವುಗಳಲ್ಲಿ ಅಡಗಿರುವ ಹುಳಗಳು ನೆಲದಲ್ಲಿ ೨ ಅಂಗುಲ ಆಳದ ತನಕ ವ್ಯಾಪಿಸಿರುತ್ತವೆ. ಭೂಮಿಯಲ್ಲಿರುವಾಗ್ಗೆ ಬೇರೆ ರೂಪವನ್ನು ತಾಳುತ್ತವೆ. ನಂತರ ಚಿಟ್ಟೆಗಳಾಗಿ ಪರಿಣಮಿಸಿ ವೃದ್ಧಿಹೊಂದುತ್ತವೆ. ಆಹಾರವು ಸೊಂಪಾಗಿದ್ದರೆ ಬಹಳ ಜಾಗ್ರತೆ ವೃದ್ಧಿಯಾಗುತ್ತವೆ.

ಈ ಚಿಟ್ಟೆಗಳಲ್ಲಿ ನಾನಾ ತರಹೆಗಳು ಇರುತ್ತವೆ. ಮಾವು, ಪೀಚೆ ಹಣ್ಣು, ಶೀಬೆ ಹಣ್ಣು ಮುಂತಾದ ಹಣ್ಣುಗಳಿಗೂ ಕುಂಬಳಕಾಯಿ, ಸೌತೇಕಾಯಿ ಮುಂತಾದ ತರಕಾರಿಗಳಿಗೂ ತಗಲತಕ್ಕವು ಬಹಳ ಸಾಧಾರಣವಾದವು.

ಸಕಾಲದಲ್ಲಿ ಆಗತಕ್ಕ ಫಲ ಮತ್ತು ತರಕಾರಿಗಳು ಸಾಧಾರಣವಾಗಿ ಚನ್ನಾಗಿರುತ್ತವೆ. ಯಾಕಂದರೆ, ಈ ಕಾಲದಲ್ಲಿ ಚಿಟ್ಟೆಗಳು ಬಹಳ ಕಡಿಮೆಯಾಗಿರುತ್ತವೆ. ಕೊಳೆತ ಹಣ್ಣುಗಳು ಉದುರುವುದರಿಂದಲೂ ಇವುಗಳನ್ನು ಕಂಡಕಂಡ ಹಾಗೆ ಬಿಸಾಡುವುದರಿಂದಲೂ ಹುಳಗಳು ಜಾಸ್ತಿಯಾಗಿ ವ್ಯಾಪಿಸಲು ಅವಕಾಶವಾಗುತ್ತೆ.

ಸಿಪಿ ಜಾಸ್ತಿಯಾಗಿರುವ ಹಣ್ಣುಗಳಿಗೆ ಹುಳ ಬೀಳುವದು ಹೆಚ್ಚು. ಪರಿಹಾರ ಕ್ರಮಗಳು:—ಹುಳುಗಳನ್ನು ನಾಶಪಡಿಸುವದು ಸುಲಭವಲ್ಲ. ಕ್ರಿಮಿ ನಾಶಕ ದ್ರಾವಕಗಳನ್ನುಪಯೋಗಿಸಿ ಪರಿಹರಿಸಲು ಆಗುವದಿಲ್ಲ. ಆದ್ದರಿಂದ ರೋಗ ತಗಲಿದ ಹಣ್ಣುಗಳನ್ನು ಕೊಯಿದು ಸುಡುವದರಿಂದ ರೋಗ ಹರಡುವದನ್ನು ಕಮ್ಮಿಮಾಡಬಹುದು. ಆದ್ದರಿಂದ ಹಣ್ಣು ಬಿಡುವ ಕಾಲದಲ್ಲಿ ಈ ಕೆಲಸವನ್ನು ಮಾಡಬೇಕು. ರೋಗ ತಗಲಿದ ಹಣ್ಣುಗಳು ಜಾಸ್ತಿಯಾಗಿದ್ದರೆ ಸುಮಾರು ೨॥ ಅಡಿ ಆಳವುಳ್ಳ ಗುಂಡಿಯನ್ನು ತೆಗೆದು ಇದರಲ್ಲಿ ಹಾಕಿ ಮಣ್ಣು ಮುಚ್ಚಿ ಚನ್ನಾಗಿ ದಮ್ಮಸ್ಸು ಮಾಡಬೇಕು; ನಂತರ ನೀರು ಹಾಕಬೇಕು. ಅಲ್ಲದೆ ಮರಗಳ ತಳದಲ್ಲಿ ೨-೦ ಅಂಗುಲದಷ್ಟು ಮೇಲ್ಮಣ್ಣನ್ನು ಕೆರದು ಗುಂಡಿಯಲ್ಲಿ ಹಾಕಿ ಮುಚ್ಚಬೇಕು. ಹೀಗೆ ಮಾಡುವುದರಿಂದ ಇವುಗಳ [illegible] ಬಿಳೀ ಹುಳುಗಳು ಚಿಟ್ಟೆಯಾಗಿ ಪರಿಣಮಿಸಲು ಅವಕಾಶವಿರುವುದಿಲ್ಲ. [illegible] ಬಟ್ಟೆ ಸುತ್ತುವುದರಿಂದ ಹಣ್ಣು ಕೆಡುವ ಸಂಭವವು ಕಮ್ಮಿಯಾಗುತ್ತೆ. ಚಿಟ್ಟೆಗಳು [illegible] ಗಿಡಗಳಿಗೂ ಬಳ್ಳಿಗಳಿಗೂ ಆವರಿಸಿರುವಾಗ ಬಲೆಯನ್ನು ಹಾಕಿ ಹಿಡಿಯಬಹುದು.

ಪೀಚೆ ಹಣ್ಣಿಗೆ ತಗಲತಕ್ಕ ಚಿಟ್ಟೆಗಳು ಸಿಂದ್ರೊನೆಲಾ ಎಂಬ ಒಂದು ತರಹ ಎಣ್ಣೆಯ ವಾಸನೆಗೆ ಮುತ್ತುತ್ತವೆ. ಆದ್ದರಿಂದ ಈ [illegible] ನೀರಿನೊಂದಿಗೆ ಬೆರಸಿ ಬಾಯಿ ಅಗಲವಾದ ಒಂದು ದೊಡ್ಡ ಪಾತ್ರೆಯಲ್ಲಿಟ್ಟು [illegible] ಚಿಟ್ಟೆಗಳನ್ನೆಲ್ಲಾ ಹಿಡಿದು ಹಾಕಬಹುದು.

ಪತ್ರವ್ಯವಹಾರ.

ತಾಲೂಕು ಬೋರ್ಡು ಮೆಂಬರರು

ಸ್ವದೇಶಾಭಿಮಾನಿ ಪತ್ರಸಂಪಾದಕರಿಗೆ

ಸ್ವಾಮಿ,

ತಮ್ಮ ಬಾತ್ಮೀದಾರ "ತಾಲೂಕು ಬೋರ್ಡು ಹಳ್ಳಿ ಮೆಂಬರು" ಇದೇ ತಿಂಗಳ ೯ನೇ ತಾರೀಕಿನ ತಮ್ಮ ಸಂಚಿಕೆಯಲ್ಲಿ ಪ್ರಕಟಿಸಿದ ಲೇಖನವನ್ನು ನೋಡಿ ಬೇಸರ ಹುಟ್ಟಿನು.

ತಾಲೂಕು ಬೋರ್ಡು ಮೀಟಿಂಗುಗಳ ನೋಟೀಸು ಜಾರಿ ಸಂಬಂಧವಾಗಿ ತಮ್ಮ ಬಾತ್ಮೀದಾರರಿಗೆ ತೊಂದರೆಯಾಗುತ್ತದೆಂಬದು ನಿಜವಾಗಿರಬಹುದು. ಇಂತಹ ತೊಂದರೆಗೆ ಬೋರ್ಡು ಪ್ರೆಸಿಡೆಂಟರಾಗಲೀ, ಆಫೀಸಿನ ಕ್ಲಾರ್ಕರಾಗಲೀ, ಟಪ್ಪಾಲು ಶಿಪಾಯಿಯಾಗಲೀ, ಅಥವಾ ತಮ್ಮ ಬಾತ್ಮೀದಾರರ ಲೇಖನದಲ್ಲಿ ತೋರುವ ಪ್ರಕಾರ ಅವರ ಸ್ವಂತ ಮನೆಯವರೇ ಅದಕ್ಕೆ ಕಾರಣಭೂತರಾಗಿರಬಹುದು. ನೋಟೀಸಿನ ಮೇಲಿರುವ ಟಪ್ಪಾಲು ಮೊಹರುಗಳನ್ನು ಚೆನ್ನಾಗಿ ಪರಿಶೋಧಿಸಿ ನೋಟೀಸಿನ ವಿಳಂಬಕ್ಕೆ ಕಾರಣ ಯಾರೆಂಬದನ್ನು ಸ್ಪಷ್ಟಮಾಡಿಕೊಂಡು ಅಗತ್ಯತೋರಿದರೆ ಬೋರ್ಡಿನ ಪ್ರೆಸಿಡೆಂಟರಿಗೆ ಅಥವಾ ಟಪ್ಪಾಲು ಅಧಿಕಾರಿಗಳಿಗೆ ಬರೆದುಕೊಳ್ಳಬಹುದಿತ್ತು. ಅಥವಾ ಮೀಟಿಂಗಿನಲ್ಲಿ ಹೇಳಿ ನಿವೃತ್ತಿಯನ್ನು [illegible] ಹೊಂದಬಹುದಿತ್ತು. ಪ್ರತಿ ತಿಂಗಳಲ್ಲಿಯೂ ಮನಸ್ಸಿಗೆ ಬಂತೆ ಮೀಟಿಂಗ [illegible] ದಿನಕ್ಕೇನೇ ಮೀಟಿಂಗು ಮಾಡುವ ಕ್ರಮ [illegible] ತಮ್ಮ ಬಾತ್ಮೀದಾರರು ಕೊಡುವ ಸೂಚನೆ ನ್ಯಾಯವಾದದ್ದು. ಆದರೆ ಈ [illegible] ಪ್ರೆಸಿಡೆಂಟರಿಗೆ [illegible] ಅಥವಾ [illegible] ಅಧಿಕಾರವೇನೆಂಬುದು ತಿಳಿದೆ [illegible] ದೊಡ್ಡದು ಮಾಡಿ [illegible] ಜನರಂತೆ ವರ್ತನವಾ[illegible] ಪತ್ರಿಕೆಯಲ್ಲಿ [illegible] ನಾನು [illegible] ಸರಕಾರದವರು [illegible] ನ್ಯಾಯವಾಗಿ [illegible] ಯೋಗಿಸದೆ ತಮ್ಮ [illegible] ಯೋಗ್ಯತೆಯಿಲ್ಲದ ವಿದ್ಯಾಹೀನ [illegible] ವೋಟರರ [illegible] ತಮ್ಮ ಬಾತ್ಮೀದಾರರು ಪ್ರಕಟಿಸಿದ ಲೇಖನವು ಇಂತಹ [illegible] ತನ್ನ ಅಧಿಕಾರವೇನೆಂಬುದು ಗೊತ್ತಿಲ್ಲದೆ [illegible] ತನ್ನ [illegible] ತಾನೆ ಪ್ರಕಟಿಸಿದಂತೆ ಆಯಿತು [illegible] ತಾಲೂಕು ಬೋರ್ಡು ಮೆಂಬರರು [illegible] ತಮ್ಮ ಹೆಡ್ಡತನ [illegible] ಕೊಳ್ಳುವವರಾಗದಿ[illegible]

ತಾ 13—10—1914 ಇನ್ನೊಬ್ಬ ಮೆಂಬರ

ಸರ್ಟಿಫಿಕೇಟನ್ನು ಕಳಕೊಂಡ ಮಾಸ್ತರರು ಪಡುವ ತೊಂದರೆಗಳು

ಅಯ್ಯಾ,

ಈ ಕೆಳಗೆ ನಾನು ಬರಕೊಳ್ಳುವ ಉಪಾಧ್ಯಾಯರ ಗೋಳನ್ನು ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದಲ್ಲಿ ತುಂಬಾ ಕೃತಜ್ಞನಾಗುವೆನು. ಗ್ರಾಮ ಬೋರ್ಡ ಪಾಠಶಾಲೆಗಳಲ್ಲಿ ನಾಲ್ಕನೇ ದರ್ಜೆ ಕಲಿತು ತೇರ್ಗಡೆ ಹೊಂದಿದರ ಕುರಿತು ಗವರ್ನಮೆಂಟ್ ಸರ್ಟಿಫಿಕೇಟು ಪಡದ ಅನೇಕ ಉಪಾಧ್ಯಾಯರು ತಮಗೆ ಮಾಸ್ತರು ಕೆಲಸವೇ ಸಿಕ್ಕೀತೆಂಬದನ್ನು ಮೊದಲೇ ತಿಳಿಯದವರಾದ್ದರಿಂದ ಸರ್ಟಿಫಿಕೇಟನ್ನು ಹೆಚ್ಚಿನ ಜಾಗ್ರತೆಯಲ್ಲಿಡದೆ ಕಳಕೊಳ್ಳುತ್ತಾರೆ. ಇಂಥಾ ಸರ್ಟಿಫಿಕೇಟನ್ನು ಪುನಃ ಪಡಕೊಳ್ಳಬೇಕೆಂಬ ಇರಾದೆಯುಳ್ಳ ಕೆಲವು ಗ್ರಾಮ ಪಾಠಶಾಲೆಗಳ ಮಾಸ್ತರುಗಳು ಮೇಲೆ, ಮೇಲೆ, ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರವರಿಗೆ ಅರ್ಜಿಗಳನ್ನು ಬರಕೊಂಡಲ್ಲಿ ಇಂಥಾ ಮಾಸ್ತರುಗಳು ಮೂರು ವರ್ಷಗಳ ತನಕ ಬೋರ್ಡು ಶಾಲೆಗಳಲ್ಲಿ ತರಬೇತು ಹೊಂದಿ ಸರ್ಟಿಫಿಕೇಟನ್ನು ಪಡಕೊಳ್ಳಬೇಕಾಗಿ ಹುಕುಂ ಕೊಡುತ್ತಾರೆ. ಇದು ಕೇವಲ ಅಸಾಧ್ಯವಾದ ಸಂಗತಿ ಎಂಬದನ್ನು ಇಲ್ಲಿ ನಾನು ಬರಿಯಬೇಕೆಂತಿಲ್ಲ.

ಶುಮಾರು ಎರಡು ಮೂರು ವರ್ಷಗಳ ಹಿಂದೆ ಶೆಷನಲ್ ಶಾಲೆಯಲ್ಲಿ ಆರು ತಿಂಗಳ ತರ್ಬೇತು ಹೊಂದಿದ್ದಾದರೆ ಬಡ ಮಾಸ್ತರುಗಳಿಗೆ [illegible]

[illegible]

ಯನ್ನು ತೆಗೆದುಹಾಕಿ ಈಗ ಎರಡು ಮೂರು ವರ್ಷಗಳಿಂದ ದುಃಖಪಡುತ್ತಿರುವ ಬಡ ಮಾಸ್ತರುಗಳನ್ನು ಆಧರಿಸುವ ಬಗ್ಗೆ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರವರು ಬಡ ಉಪಾಧ್ಯಾಯರ ಗೋಳನ್ನು ಗಮನಕ್ಕೆ ತಂದು ಪುನಃ ಎಲ್ಲಿಯಾದರೂ ಒಂದು ಕಡೆಯಲ್ಲಿ ಹಿಂದೆ ಇರುತ್ತಿದ್ದ ಶೆಷನಲ್ ಶಾಲೆಯನ್ನು ತೆರದು ಬಡ ಮಾಸ್ತರುಗಳನ್ನು ಕಷ್ಟದಿಂದ ತಪ್ಪಿಸುವರಾಗಿ ಕೋರುವ,

ಸರ್ಟಿಫಿಕೇಟು ಕಳಕೊಂಡ ಬಡಉಪಾಧ್ಯಾಯ

ಅಯ್ಯಾ ಪತ್ರಕರ್ತರೆ,

ಜಟ್ಕಾಬಂಡಿಯಲ್ಲಿ ಎಂಟು ಮಂದಿಗಿಂತಲೂ ಹೆಚ್ಚು ಜನರನ್ನು ಕುಂಡ್ರಿಸಲಾಗದೆಂಬ ಕಾಯಿದೆಯನ್ನು ಆಚರಿಸುವುದಕ್ಕಿಂತಲೂ ಮುರಿಯುವುದರಲ್ಲಿಯೇ ಹೆಚ್ಚು ಗೌರವವನ್ನು ತಾಳುವರು. ಮೊನ್ನೆ ದಿನ ನಾನು ಪುತ್ತೂರಿನಿಂದ ಹೊರಡುವಾಗ ಬಂಡಿಯೊಳಗೆ ಎಂಟು ಮಂದಿ ಸರಿಯಾಗಿದ್ದರು. ಆದರೆ ಗೇಟಿನ ಬಳಿ ಸಾರುತ್ತಲೆ ಸ್ಕೂಲ ಕಾಯನಾದ ಒಬ್ಬ ಪೋಲೀಸ್ ಸಬ್ ಇನ್ಸ್‌ಪೆಕ್ಟರನು ಮತ್ತೊಬ್ಬನೊಂದಿಗೆ ಜಟ್ಕವನ್ನು ಹತ್ತಿದನು. ಜಡ್ಕಾ ಹೊಡೆಯುವವನು, ಮೊದಲೇ ಎಂಟ ಮಂದಿ ಇದ್ದಾರೆಂದು ಹೇಳಿದರೂ ಅವನನ್ನು ಸಮಾಧಾನಪಡಿಸಿ ಕೂತೇಬಿಟ್ಟನು. ಚಡಾವು ಬಂದಾಗ ಒಂದಿಗಾರನ ಹುಡುಗರಾದ ನಮ್ಮನ್ನು ಇಳಿಸಿದನೇ ಹೊರತು ಪೋಲೀಸ್ ಸಬ್ ಇನ್ಸ್‌ಪೆಕ್ಟರನನ್ನು ನಿರ್ಬಂಧಿಸಲಿಲ್ಲ. ಸರಕಾರದವರು ಮಾಡಿದ ಕಾಯಿದೆಯನ್ನು ಮುರಿದಾಗ ತಿಳಿಸಬೇಕಾದ ಸಬ್ ಇನ್ಸ್‌ಪೆಕ್ಟರನು ತಾನೇ ಮುರಿದುದನ್ನು ಅಧಿಕಾರಿಗಳಿಗೆ ತಿಳಿಸುವನೋ ಇಲ್ಲವೋ ಎಂಬುದು ಪ್ರಶ್ನಾಸ್ಪದವಾಗಿದೆ.

ಬಡ ಪ್ರಯಾಣಿಕ

ಲೋಕಲ್ ಬೋರ್ಡು ಆಸ್ಪತ್ರೆಗಳು.

ಪತ್ರಾಧಿಪರೇ,

ವರ್ತಮಾನ ಪತ್ರಗಳಲ್ಲಿ ಔಷದಿಗಳ ವಿಕ್ರಿತಗಳ ಕುರಿತು ತಮ್ಮ ಪತ್ರದ ಹಿಂದಿನ ಒಂದೆರಡು ಸಂಚಿಕೆಗಳಲ್ಲಿ ಕೆಲವು ವಾದ ವಿವಾದಗಳು ಬಂದಿದ್ದವು. ಈ ವಾದ ವಿವಾದಗಳಲ್ಲಿ ಆಸ್ಪತ್ರೆಗಳ ವಿಷಯವು ಸರಿಯಾಗಿ ಚರ್ಚಿಸಲ್ಪಟ್ಟು ಆಸ್ಪತ್ರೆಗಳಿಂದ ಜನರು ಹೆಚ್ಚಾದ ಪ್ರಯೋಜನವನ್ನು ಹೊಂದಬಹುದೆಂತ ನನ್ನ ಕೋರಿಕೆಯಾಗಿತ್ತು. ಆದರೆ ಈ ವಿಷಯವು ಸರಿಯಾಗಿ ಚರ್ಚಿಸಲ್ಪಡದೆ ಬಾಕಿಯಿರುವುದರಿಂದ ನನ್ನ ಅನುಭವಕ್ಕೆ ಬಂದಿರುವ ಒಂದೆರಡು ಸೂಚನೆಗಳನ್ನು ತಮಗೆ ಬರೆದಿರುತ್ತೇನೆ.

ಅದೇನಂದರೆ — ಲೋಕಲ್ ಬೋರ್ಡು ಆಸ್ಪತ್ರೆಗಳಲ್ಲಿ ಆಗಿಂದಾಗ್ಯೆ ನೇಮಕವಾಗುವ ವೈದ್ಯ ಉದ್ಯೋಗಸ್ಥರ ಯೋಗ್ಯತೆಗಳೇನು? ವೈದ್ಯರ ಸಹಾಯವನ್ನು ಅಪೇಕ್ಷಿಸುವ ನರರು ವೈದ್ಯ ಉದ್ಯೋಗಸ್ಥರನ್ನು ರೋಗ ಪರೀಕ್ಷೆ ಮತ್ತು ಚಿಕಿತ್ಸೆ ಬಗ್ಗೆ ಮನೆಗಳಿಗೆ ಕರಕೊಂಡು ಹೋದರೆ ಈ ಉದ್ಯೋಗಸ್ಥರಿಗೆ ಫೀಸು ಕೊಡಬೇಕೋ? ಫೀಸು ಕೊಡಬೇಕಾದರೆ ಅಂಥಾ ಫೀಸುಗಳ ದರ ಹ್ಯಾಗೆ? ಪ್ರಥಮ ಸರ್ತಿಗೆ ಎಷ್ಟು ಫೀಸು ಕೊಡಬೇಕು, ನಂತರದ ಫೀಸಿನ ದರ ಹ್ಯಾಗೆ? ಗರ್ಭಿಣಿಯರು ಪ್ರಸೂತರಾಗುವ ಸಂದರ್ಭದಲ್ಲಿ ಪ್ರಾಣರಕ್ಷಣೆ ಬಗ್ಯೆ ವೈದ್ಯ ಉದ್ಯೋಗಸ್ಥರ ಸಹಾಯವು ಅಗತ್ಯವೆಂತ ತೋರಿದಾಗ ಇಂತಿಷ್ಟೆ ಫೀಸು ಕೊಟ್ಟ ವಿನಹ ತಾನು ಬರಲಾರೆ ಎಂದು ವೈದ್ಯ ಉದ್ಯೋಗಸ್ಥರು ಹೇಳಬಹುದೋ? ಅಥವಾ ಇಶಿಥಾ ಕಷ್ಟಗಳಲ್ಲಿ ಬೇಕಾದ ಸಹಾಯವನ್ನು ಮಾಡಿದ ಬಳಿಕ ಫೀಸನ್ನು ಉದ್ಯೋಗಸ್ಥರು ಕೇಳುವದು ಉಚಿತವಲ್ಲವೋ? ಇಂಥಾ ವೇಳೆಯಲ್ಲಿ ಫೀಸಿನ ದರವನ್ನು ನಿರ್ಣಯಿಸುವ ವಿಧ ಹ್ಯಾಗೆ? ಬಡವರು-ಏನೂ ಆಸ್ತಿಯಿಲ್ಲದ ಬಡವರು—ಇಂಥವರಿಗೆ ಲೋಕಲ್ ಬೋರ್ಡಿನ ಡಾಕ್ತರರನ್ನು ಮನೆಗೆ ಕರಕೊಂಡು ಹೋಗಬೇಕಾದ ಸಂಕಷ್ಟ ಬಂದಲ್ಲಿ ಇಂಥವರಿಂದಲೂ ಸಹ ಫೀಸನ್ನು ವಸೂಲು ಮಾಡಬೇಕೋ?

ಜಖಂ ಆದವರಿಗೆ ಕ್ರಿಮಿನಲ್ ಮೊಕದಮೆಗಳಲ್ಲಿ ಅಗತ್ಯವಿರುವ ಸರ್ಟಿಫಿಕೇಟುಗಳನ್ನು ಡಾಕ್ಟರರಿಂದ ಪಡೆಯಬೇಕಾದರೆ ಈ ಸರ್ಟಿಫಿಕೇಟುಗಳ ಫೀಸಿನ ದರ ಹ್ಯಾಗೆ?

ಜನರ ತಿಳುವಳಿಕೆ ಬಗ್ಯೆ ಈ ಎಲ್ಲಾ ವಿಷಯಗಳಲ್ಲಿ ಜನರಿಗೆ ಅಗತ್ಯವಿರುವ ಅನುಭವವನ್ನು ಲೋಕಲ್ ಬೋರ್ಡುಗಳ ಅಧಿಕಾರಿಗಳು ಪ್ರಕಟಿಸಿದರೆ ಬಹಳ ಉಪಕಾರವಾಗುತ್ತಿತ್ತು. ಮತ್ತು ಡಾಕ್ಟರರುಗಳ ಫೀಸಿನ ದರಗಳ [illegible] ಸರ್ವರಿಗೂ ತಿಳಿಯುವಂತೆ ಆಸ್ಪತ್ರೆಗಳಲ್ಲಿ [illegible] ಅಗತ್ಯವಾಗಿದೆ.

[illegible]

ಯುದ್ಧ ಸಮಾಚಾರವು.

ತಾ. 10ನೇ ಒಕ್ಟೋಬರ.

ಪೂರ್ವ ಪ್ರುಶ್ಯದಲ್ಲಿ ಕದನವು ನಡಿಯುತ್ತಿದೆ. ಜರ್ಮನರಿಗೆ ಬೆಂಬಲಸೇನೆಯು ಬಂದು ಕೂಡಿರುವುದು. ರುಶ್ಯನ್ ಪೋಲೇಂಡಿನಲ್ಲಿ ಜರ್ಮನರು ಕೆಲವು ರುಶ್ಯ ಸೈನೀಕರನ್ನೂ ಫಿರಂಗಿಗಳನ್ನೂ ಹಿಡಿದಿರುವರೆಂಬದಾಗಿ ಜರ್ಮನರು ಹೇಳುವರು.

ಕರ್ಪೆಥೇನಿಯದಲ್ಲಿ ಸಾನ್ಸ್ ನದಿಯ ಮೇಲೆ ರುಶ್ಯರು ಆಸ್ಟ್ರೀಯನರನ್ನು ಸೋಲಿಸಿರುವರು.

ಸರ್ವಿಯರೂ ಮೊಂಟೆನಿಗ್ರೊಯರೂ ಸರ್ಜೆವೋದ ಸುತ್ತಲಿನ ಪ್ರಾಂತ್ಯದಲ್ಲಿದ್ದು ಅಲ್ಲಿಯ ಉತ್ತರ ಕಡೆಯ ರೈಲ್ವೇಯನ್ನು ಹಿಡಿದಿರುವರು.

ರುಶ್ಯರು ಈ ವರೆಗೆ ಕೂಡಿಸಿದ ಸೈನೀಕರ ಸಂಖ್ಯೆಯು ೮ ಮಿಲಿಯವಾಗಿರುವುದು. ಹಿಂದೆ ಎಂದೂ ಇಷ್ಟು ಸೈನೀಕರನ್ನು ಒಟ್ಟುಗೂಡಿಸಿದ್ದಿಲ್ಲ. ರಣರಂಗದಲ್ಲಿ ಹಿಂದೆ ಹೆಚ್ಚಾದರೆ ೩ ಮಿಲಿಯಕ್ಕಿಂತ ಹೆಚ್ಚು ಸೇನೆ ಕೂಡಲಿಲ್ಲ. ರುಶ್ಯರ ದಕ್ಷಿಣ ಕಡೆಯ ಸೇನೆಯು ಸರ್ವಿಯರಿಗೆ ಸಹಾಯಮಾಡಲು ಸರ್ವಿಯಕ್ಕೆ ಕೈನೀಡಿರುವುದು.

ಜಾಪಾನ್:—ಜಪಾನರು ತಮ್ಮ ಒಂದು ಸೇನೆಯನ್ನು ಶತ್ರುಗಳ ಯುದ್ಧನಾವೆಗಳನ್ನು ಬೇಟೆಯಾಡುವ ಬಗ್ಗೆ ಮಾರ್ಶೇಲ್ ದ್ವೀಪಕ್ಕೆ ಕಳುಹಿಸಿರುವರು.

ಕಿಯಾಚೊದಲ್ಲಿ ಜಪಾನರು ಜರ್ಮನರ "ಕೊರೊಮೊರನ್" ಎಂಬ ಕ್ರೂಜರ್ ನಾವೆಯನ್ನು ಮುಣಗಿಸಿರುವರು.

ಅಡ್ರಿಯಾಟಿಕ್ ಕಡಲಿನ ಆಸ್ಟ್ರೋ-ಹಂಗೇರಿ ಸರಹದ್ದಿನಲ್ಲಿ ಸಿಡಿಮದ್ದುಗಳು ಹಾಕಲ್ಪಟ್ಟಿರುವವೆಂತ ಫ್ರೆಂಚ ಸರಕಾರದವರು ಪ್ರಕಟಿಸಿರುವರು.

ಕೆನಡಾ:—ಕೆನಡಾ ದೇಶದವರು ರಣರಂಗಕ್ಕೆ ಇನ್ನೊಂದು ಸೇನೆಯನ್ನು ಕಳುಹಿಸಲು ನಿರ್ಣಯಿಸಿರುವರು.

ತಾ, 11ನೇ ಒಕ್ಟೋಬರ.

ಫ್ರಾನ್ಸ್:— ಪಶ್ಚಿಮ ರಣರಂಗದಲ್ಲಿ ಜರ್ಮನರ ಅಗ್ರಸೇನಾಂಗಗಳು ಕಾದಾಡುತ್ತಲಿವೆ ಎಂತ ಪ್ರಕಟವಾಗಿದೆ. ಬ್ಯಸಿಯ ಉತ್ತರದಲ್ಲಿ ಮತ್ತು ಲೆನ್ಸಿನಲ್ಲಿ ಕಠಿಣ ಕಾಳಗ ನಡೆಯುತ್ತಿರುವುದು. ಯುದ್ಧ ನೆಲೆಗಳಲ್ಲಿ ಸಂಯುಕ್ತ ಸೇನೆಗಳು ಕೆಲವು ಸಾರಿ ಮುಂದರಿದು ಕೆಲವು ಸಾರಿ ಹಿಂದೆ ಬೀಳುತ್ತಿರುವುದು. ಒಟ್ಟಾರೆ ಸಂಯುಕ್ತ ಸೇನೆಗಳಿಗೆನೇ ಇಲ್ಲಿ ಹೆಚ್ಚಿನ ಜಯವಾಗಿರುವುದು. ಫ್ರೆಂಚ ಸೇನಿಕರು ಬಲು ಸಾಹಸದಿಂದಲೂ ಧೈರ್ಯದಿಂದಲೂ ಇಲ್ಲಿ ಕಾದಾಡುತ್ತಿರುವರು.

ಎರಡು ಪಾರ್ಶ್ವಗಳಲ್ಲಿ ಅಲ್ಲದೆ ಇತರ ಎಲ್ಲಾ ಕಡೆಗಳಲ್ಲಿ ಮೇಲ್ವಾಯ್ದು ಬಂದ ಜರ್ಮನರು ಹಿಮ್ಮೆಟ್ಟಿರುವರು. ರಣರಂಗದ ಇತರ ಕಡೆಗಳಲ್ಲಿ ಗೊಂದಲಗಳೇನೂ ಇಲ್ಲ. ಜರ್ಮನರ ಅಶ್ವಪಡೆಯು ಲಿಲ್ಲೆಯ ಉತ್ತರ ಪಾರ್ಶ್ವವನ್ನು ಸೇರಿಕೊಂಡಿತು. ಸಂಯುಕ್ತ ಸೇನೆಗಳು ಅಲ್ಲಿ ಹಿಂದರಿದವು. ಲಿಲ್ಲೆಯು ಈಗ ಕದನಗಳು ನಡಿಯುವ ಕ್ಷೇತ್ರಪ್ರಸ್ಥಾನವಾಗಿರುವುದು.

ಬೆಲ್ಜಿಯಮ್:—ಎಂಟವರ್ಪಿನ ಮೇಲ್ವಾಯುವ ಜರ್ಮನರು ತಮ್ಮ ನೆಲೆಗಳನ್ನು ದಾಟಿ ಮುಂದರಿದಿರುವರು. ಬೆಲ್ಜಿಯನರು ವಿಶೇಷ ಸಾಹಸದಿಂದ ಎದುರಾಡಿದರೂ ಜರ್ಮನರ ಬಲವಾದ ಫಿರಂಗಿಗೆ ಸಾಹಸಿ ಬೆಲ್ಜಿಯನರು ಹಿಂದೆ ಸರಿಯುವ [illegible] ಜರ್ಮನರು [illegible] [illegible]

ಸ್ಟೆಂಡಾಲ್ ಎಂಬಲ್ಲಿಗೆ ಈ ವರೆಗೆ ೧೦,೦೦೦ ಮಂದಿ ಹೋಗಿರುವರು.

ಎಂಟವರ್ಪಿನ ಕೋಟೆಕೊತ್ತಲುಗಳು ತಮ್ಮ ವಶವಾಗಿರುವವೆಂದು ಜರ್ಮನರು ಹೇಳುವರು. ಜರ್ಮನರು ಎಂಟವರ್ಪ ಪಟ್ಟಣಕ್ಕೆ ಗುಂಡು ಹಾರಿಸಲು ತೊಡಗಿರುವರು.

ಪೂರ್ವ ರಣರಂಗ:—ರುಶ್ಯನರ ಬಲವಾದ ಫಿರಂಗಿಗಳು ಪ್ರಿಜೆಮೈಸ್ಲ ಕೋಟೆಗೆ ಗುಂಡು ಹಾರಿಸುತ್ತಲಿರುವವು. ಪಟ್ಟಣದಲ್ಲಿ ಅನೇಕ ಮನೆಗಳು ಸುಡುತ್ತಲಿವೆ. ಕೋಟೆಯನ್ನು ಕಾಪಾಡಲು ಆಸ್ಟ್ರಿಯರು ಮಾಡಿದ ಎಲ್ಲಾ ಪ್ರಯತ್ನಗಳು ವ್ಯರ್ಥವಾಗಿ ಆಸ್ಟ್ರಿಯರು ಹಿಮ್ಮೆಟ್ಟುತ್ತಿರುವರು.

ತಾರೀಕು 13ನೇ ಅಕ್ಟೋಬರ.

ಎಂಟವರ್ಪಿನ ಮುತ್ತಿಗೆ:—ಎಂಟವರ್ಪಿನಲ್ಲಿ ಬೆಲ್ಜಿಯಮಿನ ಆರಕ್ಷಕ ಸೇನೆಯೊಂದಿಗೆ ಇದ್ದು ಜರ್ಮನರೊಡನೆ ಎದುರಾಡಿದರು. ಅವರ ಮುಖ್ಯ ಠಾಣ್ಯವು ಮಾತ್ರ ಪಟ್ಟಣದಲ್ಲಿರಲಿಲ್ಲ. ಬೆಲ್ಜಿಯನ್ ರಾಣಿಯವರು ಎಲ್ಲಿರುವರೆಂದು ಗೊತ್ತಿಲ್ಲ. ಬಹುಶ್ಯಾ ಒಸ್ಟೆಂಡಿಗೆ ಹೋಗಿರಲು ಸಾಕು.

ಸುಮಾರು ಅರ್ಧ ಮಿಲಿಯ ಬೆಲ್ಜಿಯನರು ಹೊಲ್ಲೆಂಡಿನಲ್ಲಿರುವರು. ಎಂಟವರ್ಪಿನ ಒಳಕೋಟೆಗಳಿಗೆ ಜರ್ಮನರು ಗುಂಡು ಹಾರಿಸುತ್ತಲಿರುವರು. ಎಂಟವರ್ಪ ಪಟ್ಟಣವು ಸುಡುತ್ತಲಿದೆ. ರಾತ್ರಿ ಕಾಲ ಇಡೀ ಆಕಾಶವು ಬೆಂಕಿಯ ಜ್ವಾಲೆಯಿಂದ ಕೆಂಬಣ್ಣವಾಗಿತ್ತು. ಎಂಟವರ್ಪ ಪಟ್ಟಣವು ಬಿದ್ದಿರುವದೆಂತ ವಾರ್ತೆ ಬಂದಿರುವುದು.

ಎಂಟವರ್ಪಿನ ಮುಂದೆ ಜರ್ಮನರು ೨೦೦ ಫಿರಂಗಿಗಳನ್ನು ಇಟ್ಟಿರು. ಇವುಗಳು ೨೮, ೩೦, ೪೨ ಸೆಂಟಿಮಿಟರಿನ ಫಿರಂಗಿಗಳಾಗಿದ್ದು ೧೪ ಕಿಲೊಮಿಟರ್ ದೂರ ಹೋಗುವಂಥಾದ್ದಾಗಿದ್ದವು. ಮಧ್ಯ ರಾತ್ರಿ ವರೆಗೆ ದಿಗಂತವು ಶಾಂತವಾಗಿದ್ದರೂ ಅನಂತರ ಫಿರಂಗಿಗಳು ಘರ್ಜಿಸತೊಡಗಿದವು. ಇಲ್ಲಿ ಜರ್ಮನರ ೧೫,೦೦೦ ಸೈನಿಕರಿದ್ದರು. ಡಿಕೆವನ್ ಎಂಬ ಸ್ಥಳದ ಪ್ರಾಂತ್ಯದಲ್ಲಿ ಜರ್ಮನರು ಪಟ್ಟಣವನ್ನು ಪ್ರವೇಶಿಸಿದರೆಂಬ ವಾರ್ತೆ ಇದೆ.

ಜರ್ಮನರು ವಿಲ್ಹೆನ್ ಕೋಟೆಯನ್ನು ಹಿಡಿದ ಕೂಡಲೇ ಪಟ್ಟಣದ ನೀರು ಸರಬರಾಯಿಯನ್ನು ಕೆಡಿಸಿದರು. ಮೊದಲನೇ ಗುಂಡು ಪಟ್ಟಣದೆಡೆಗೆ ಒಡೆದು ಪ್ರದಕ್ಷಿಣ ನಿವಾಸಿಕರ ಎದೆ ಹಾರಿಹೋಯಿತು. ೧೭೦೦ ಮಂದಿಯನ್ನು ಕೊಂಡುಹೋಗಬಹುದಾದ ಒಸ್ಟೆಂಡಿಗೆ ಹೋಗುವ ೨ ಹಡಗಗಳನ್ನು ೨೦೦೦ ಮಂದಿ ಹತ್ತಲು ಪೇಚಾಡಿದರು. ಡಚ್ಚ ಹೊಲೇಂಡಿನ ಬೀದಿಗಳು ಹತಶೇಷರಿಂದ ತುಂಬಿ ಹೋಗಿದೆ. ಆಸನಳಿದ ಸಾವಿರಾರು ಜನರು ಬೀದಿಯ ಒಡಿಯಲ್ಲಿ ಬಿದ್ದಿರುವರು. ಸಾವಿರಾರು ಮಂದಿ ಈ ಮೊದಲೇ ಪಟ್ಟಣವನ್ನು ಬಿಟ್ಟು ಇಂಗ್ಲಾಂಡಿಗೆ ಹೋಗಿರುವರು. ಹತಶೇಷರ ಅನೇಕ ಟ್ರೈನ್ ಬಂಡಿಗಳು ಲಂಡನಿಗೆ ಬಂದು ತಲಪಿರುವದು. ಎಂಟವರ್ಪಿನ ೫೦ ಎಣ್ಣೆಯ ಕೊಳಗಳು ಸುಡುತ್ತಲಿವೆ. ಪಟ್ಟಣವೆಲ್ಲಾ ಜ್ವಾಲೆಯಿಂದ ತುಂಬಿಹೋಗಿದೆ ಎಂತ ಒಬ್ಬ ಬಾತ್ಮಿದಾರರು ತಿಳಿಸುವರು. ವಿಪರೀತ ಪ್ರಾಣ ಹಾನಿಯೂ ಆಗಿರುವುದು. ಪ್ರಖ್ಯಾತ ಕಟ್ಟೋಣಗಳೆಲ್ಲಾ ನೆಲಸಮವಾಗಿರುವವು.

ಜರ್ಮನರು ಈ ರೀತಿ ಪ್ರಕಟಿಸಿರುವರು:—ಎಂಟವರ್ಪ ಕೋಟೆಗಳು ಬಿದ್ದಿರುವವು. ಒಳಗಿನ ಕೆಲವು ಕೋಟೆಗಳೂ ನೆಲಸಮವಾದವು. ಪಟ್ಟಣವು ಜರ್ಮನರ ವಶವಿದೆ. ಸೇನಾಧಿಪತಿಯೂ ಸೇನೆಯೂ ಕೋಟೆಗಳ ಪ್ರಾಂತ್ಯವನ್ನು ಬಿಟ್ಟಿರುವರು. ಕೆಲವು ಕೋಟೆಗಳು ಮಾತ್ರ ಬೆಲ್ಜಿಯನರ ಕೈಯಲ್ಲಿದೆ. ಇದರಿಂದ ಜರ್ಮನರಿಗೆ ಆತಂಕವಿರದು.

ಹೊಲ್ಲೆಂಡಿಗೆ ಹೋಗುವ ಮಾರ್ಗದಲ್ಲಿ ಬೆಲ್ಜಿಯನ ಸೈನಿಕರು [illegible] ಕಾಯುತ್ತಿರುವರು. [illegible]

ಯಿಂದ ತುಂಬಿ ಹೋಗಿರುವುದು. ಎಣ್ಣೆ ಕೊಳದ ಜ್ವಾಲೆಯು ಇನ್ನೂ ಶಾಂತವಾಗಲಿಲ್ಲ.

ಬೆಲ್ಜಿಯನ್ ಸೇನೆಯು ಎಂಟವರ್ಪನ್ನು ಬಿಟ್ಟು ಹೋಗಿರುವದೆಂತ ಬ್ರಿಟಿಷ್ ಯುದ್ಧ ಆಫೀಸಿನವರು ಪ್ರಕಟಸಿರುವರು.

ಎಂಟವರ್ಪಿನ ಎಲ್ಲಾ ಕೋಟೆ ಕೊತ್ತಲುಗಳೂ ಇತರ ಎಲ್ಲಾ ಕೋಟೆಗಳೂ ಜರ್ಮನರ ವಶದಲ್ಲಿರುವುದೆಂತ ಜರ್ಮನರು ಪ್ರಕಟಿಸಿರುವರು.

ಫ್ರಾನ್ಸ್:—ಐನೆ ನದಿಯ ಉತ್ತರದಲ್ಲಿ ಜರ್ಮನರು ವಿಶಾಲ ಪ್ರದೇಶವನ್ನು ಬಿಟ್ಟು ಹೋಗಿರುವರು. ಆ ಸ್ಥಳಗಳನ್ನು ಸಂಯುಕ್ತ ಸೇನೆಗಳು ಸೇರುತ್ತಲಿವೆ. ಜರ್ಮನರ ಖಾಲಿ ಕಂದಕಗಳಲ್ಲಿ ವಿಷಮಜ್ವರದಿಂದ ಸತ್ತು ಬಿದ್ದ ಅನೇಕ ಜರ್ಮನರ ಶವಗಳು ಸಿಕ್ಕಿರುವವು. ಲೆನ್ಸ್, ಎರ್‍ರಾಸ್, ಬ್ರೆ, ರೋಯೆ, ಮತ್ತು ಲಿಸಿಗ್ನೆ, ಪ್ರಾಂತ್ಯದಲ್ಲಿ ಕದನವು ನಡೆಯುತ್ತಲಿದೆ. ವಿಶೇಷ ಕದನಗಳು ನಡೆಯಲಿಲ್ಲ. ಒಸೆಚ್, ಲೊರೈನ್, ಆಲ್ಸೆಸ್, ಪ್ರಾಂತ್ಯದಲ್ಲಿ ಬ್ದದಲಾವಣೆಯಾಗಲಿಲ್ಲ. ರೋಯೆ ಪ್ರಾಂತ್ಯದಲ್ಲಿ ಸಂಯುಕ್ತ ಸೇನೆಗಳು ಜರ್ಮನರ ೧೭೦೦ ಸೈನಿಕರನ್ನು ಸೆರೆಹಿಡಿದಿರುವರು.

ಮೆತ್ಸ್ ಮತ್ತು ಸ್ಟ್ರಾನ್‌ಬರ್ಗ್ ಕೋಟೆಗಳಿಂದ ಜರ್ಮನರಿಗೆ ಬೆಂಬಲ ಸೇನೆಯು ಬಂದು ಕೂಡಿರುವುದು.

ಜರ್ಮನರು ಕೆಲವು ಸಾರಿ ಮೇಲ್ವಾಯ್ದು ಬಂದರೂ ಸಂಯುಕ್ತ ಸೇನೆಗಳು ತಮ್ಮ ನೆಲೆಗಳನ್ನು ಕಾಪಾಡಿಕೊಂಡಿರುವವು.

ಜರ್ಮನರ ಡ್ಯುಸೆಲ್‌ಡೊರ್ಫಿನ ವಾಯುನಾವೆಯ ಮಂದಿರದ ಮೇಲೆ ಬ್ರಿಟಿಷ್ ವಾಯುನಾವೆಯು ಬಿಸಾಡಿದ ಬೊಂಬಿನಿಂದ ಜರ್ಮನರ ವಾಯುನಾವೆಯು ಹಾಳಾಗಿರುವುದು. ಆಫೀಸರರು ಸುರಕ್ಷಿತವಾಗಿ ಹಿಂದೆರಳಿರುವರು ಆದರೆ ವಾಯುನಾವೆಯನ್ನು ಕಳಕೊಂಡಿರುವರು.

ಹಿಂದೂಸ್ಥಾನದಿಂದ ಕಳುಹಿಸಿದ ಸೇನೆಯನ್ನು ಫ್ರಾನ್ಸಿನಲ್ಲಿ ನೋಡಿದ ಒಬ್ಬ ಇಟಲಿಯನ್ ಡ್ಯುಪಿಟಿಯು ಈ ಸೇನೆಯಿಂದ ಫ್ರೆಂಚರಿಗೆ ಬೇಗನೇ ಜಯವಾಗುವುದರಲ್ಲಿ ಅನುಮಾನವಿಲ್ಲವೆಂದು ಹೇಳಿರುವರು.

ಇಟಲಿ:—ಇಟಲಿ ಯುದ್ಧ ಮಂತ್ರಿಯು ರಾಜಿ ಕೊಟ್ಟಿರುವರು. ಇವರ ಉಪಸೆಕ್ರಟರಿಯವರೂ ರಾಜಿ ಕೊಡಲಿಕ್ಕಿದ್ದಾರೆಂಬ ವಾರ್ತೆ ಇದೆ.

ಟರ್ಕಿ:—ಜರ್ಮನರು ಡರ್ಡನೆಲ್ಸ್ ಮತ್ತು ಬೊಸ್ಪರಸ್ ಕೋಟೆಗಳಲ್ಲಿ ೪೨ ಸೆಂಟಿಮಿಟರ್ ಬಲವುಳ್ಳ ಫಿರಂಗಿಗಳಿಂದ ಕೋಟೆಯನ್ನು ಬಲಕಾಯಿಸುತ್ತಿರುವರು.

ಬಾಲ್ಕನ್:—ಮೊಂಟೆನಿಗ್ರೋಯರು ಸರಜೇವೋದ ಹೊರ ಕೋಟೆಗಳ ಸಮೀಪ ಸೇರಿರುವರು.

ಪೆಸಿಫಿಕ್ ಸಾಗರದಲ್ಲಿ ಬ್ರಿಟಿಷರು ಜರ್ಮನರ ಇನ್ನೊಂದು ದ್ವೀಪವನ್ನು ವಶಮಾಡಿಕೊಂಡರು.

ತಾರೀಕು 14ನೇ ಅಕ್ಟೋಬರ.

ಎಂಟವರ್ಪ:—ಬೆಲ್ಜಿಯನ್ ಸರಕಾರದವರು ಕೇಳಿಕೊಂಡ ಮೇರೆಗೆ ಇಂಗ್ಲಿಷರು ಎಂಟವರ್ಪಿಗೆ ಒಂದು ಸಮುದ್ರ ನಾವೆಯನ್ನೂ ಮತ್ತು ಎರಡು ನೌಕಾವಳಿ ಸೇನಾಂಗಗಳನ್ನೂ ಕಳುಹಿಸಿದ್ದರು. ತಾ. ೫ನೇಯ ವರೆಗೆ ನೆಥೆ ನದಿಯ ನೆಲೆಯನ್ನು ಕಾಪಾಡಿಕೊಂಡರು. ಮಂಗಳವಾರ ಸಮುದ್ರ ನಾವೆಗಳಲ್ಲಿದ್ದ ಬೆಲ್ಜಿಯನ ಸೇನೆಯು ಉಪಾಯವಿಲ್ಲದೆ ಸೇನೆಯೆಲ್ಲಾ ಎಂಟವರ್ಪಿನ ಒಳಕೋಟೆಗಳಿಗೆ ಹಿಂದೆ[illegible]ಯಿತು. ಇದರಿಂದ ಪಟ್ಟಣಕ್ಕೆ ಗುಂಡು ಹಾರಿಸಲಿಕ್ಕೂ [illegible]ಗಳನ್ನು ಕೂಡಲಿಕ್ಕೂ ಶತ್ರುಗಳಿಗೆ ಸಾಧ್ಯವಾಯಿತು. [illegible]ಗಳು ಬುಧವಾರ ಮತ್ತು [illegible] ವರೆಗೆ [illegible] ಬ್ರಿಟಿಷ ಸೇನೆಯ [illegible] ಎಂಟವರ್ಪಿಗೆ [illegible] [illegible] ಎಂಬದಾಗಿ ಬ್ರಿಟಿಷ್ [illegible]

ಜರ್ಮನರು ಈ ರೀತಿ ಪ್ರಕಟಿಸಿರುವರು:—ಬ್ರಿಟಿಷ ಮತ್ತು ಬೆಲ್ಜಿಯನರು ಲೊಕೆರೆನ್ ಸಮೀಪ ಬಲವಾಗಿ ಒತ್ತಿ ಜರ್ಮನರ ಸೇನಾ ನೆಲೆಯನ್ನು ಮುರಿಯ ನೋಡಿದರು. ಬೆಲ್ಜಿಯನರು ಇಲ್ಲಿ ಬಲು ಸಾಹಸದಿಂದ ಕಾದಾಡಿದರು. ಆದರೆ ಮೆಲ್ಲನೆ ಹಿಂದರಿಯ ಬೇಕಾಯಿತು. ಈ ಕಾರಣದಿಂದ ಬ್ರಿಟಿಷ್ ಮತ್ತು ಬೆಲ್ಜಿಯನ್ ಸೇನಾಧಿಪತಿಗಳು ಪಟ್ಟಣವನ್ನು ಬಿಟ್ಟುಹೋಗಲು ನಿರ್ಣಯ ಮಾಡಿಕೊಂಡರು.

ಬ್ರಿಟಿಷ ಮತ್ತು ಬೆಲ್ಜಿಯನರು ರಾತ್ರಿಕಾಲ ಬಹುದೂರ ನಡೆದು ಸ್ಟೆಂಟ್ ಗಿಲ್ಲೆಸಿಗೆ ತಲುಪಿ ೩ ನೌಕಾವಳಿ ಸೇನಾಂಗವನ್ನು ಟ್ರೈನಿನಲ್ಲಿ ಹಾಕಿದರು. ಈ ವರೆಗೆ ಎರಡು ಸೇನಾಂಗಗಳು ಒಸ್ಟೆಂಡಿಗೆ ಸುರಕ್ಷಿತವಾಗಿ ತಲುಪಿದವು. ಮತ್ತೊಂದರ ದಾರಿಯನ್ನು ಜರ್ಮನರು ಲೊಕೆರೆನಿನಲ್ಲಿ ಕಡದುಹಾಕಿದ್ದರಿಂದ ೨೦೦೦ ಆಫೀಸರರೂ ಸೈನಿಕರೂ ಹೊಲ್ಲೆಂಡಿಗೆ ಪ್ರವೇಶಿಸಿ ತಟಸ್ಥಭಾವದ ಕಾನೂನಿಗೆ ಸರಿಯಾಗಿ ತಮ್ಮ ಆಯುಧಗಳನ್ನು ಹೊಲ್ಲೆಂಡ್ ಸರಕಾರದವರಿಗೆ ಒಪ್ಪಿಸಿದರು.

ಸುಡುತ್ತಿರುವ ಎಂಟವರ್ಪ ಪಟ್ಟಣದಿಂದ ಸಾವಿರಾರು ನಿವಾಸಿಕರು ಪಶ್ಚಿಮ ಕಡೆಗೆ ಗುಂಪು ಗುಂಪಾಗಿ ಓಡುತ್ತಲಿರುವರು.

ಎಂಟವರ್ಪಿನಲ್ಲಿದ್ದ ಬ್ರಿಟಿಷ್ ಮತ್ತು ಬೆಲ್ಜಿಯಮ್ ಸೇನೆಯು ಅರಸರ ಸಹಿತ ಒಸ್ಟೆಂಡಿಗೆ ತಲುಪಿರುವುದು. ಅರಸರ ತೋಳುಗಳಿಗೆ ಪೆಟ್ಟಾಗಿರುವುದೆಂತ ಹತಶೇಷರು ಹೇಳುವರು. ಬೆಲ್ಜಿಯನ್ ರಾಣಿಯವರು ಲಂಡನಿಗೆ ಹೋಗಿರುವರು.

ಎಂಟವರ್ಪಿನ ಎಣ್ಣೆ ಕೊಳಗಳನ್ನೂ ಧವಸಧಾನ್ಯಗಳ ಕೊಠಡಿಗಳನ್ನೂ ಬೆಲ್ಜಿಯನರೇ ಸುಟ್ಟುಹಾಕಿದರು.

ಬೆಲ್ಜಿಯನ ಸೇನೆಯು ಎಂಟವರ್ಪಿನಿಂದ ತಪ್ಪಿಸಿಕೊಂಡದ್ದರಿಂದ ಮುಂದೆ ಇದರಿಂದ ಸಂಯುಕ್ತ ಸೇನೆಗಳಿಗೆ ಪ್ರಯೋಜನವಾದೀತೆಂದೂ ಹೀಗೆ ಪಟ್ಟಣವನ್ನು ಹಿಡಿದ್ದರಿಂದ ಶತ್ರುಗಳಿಗೆ ಹೆಚ್ಚಿನ ಪ್ರಯೋಜನವಿಲ್ಲವೆಂದೂ ತಿಳಿದು ಬರುತ್ತದೆ. ಬೆಲ್ಜಿಯನ ವೆಸ್ಟರ್ನ ಸಮೀಪವಿರುವ ಕ್ವೇಟ್ಕ್ರೆಂಟ್ ಎಂಬಲ್ಲಿ ಫ್ರೆಂಚ ಮತ್ತು ಇಂಗ್ಲಿಷ ಸೈನಿಕರು ೨೦,೦೦೦ ಜರ್ಮನರನ್ನು ಹಿಂದಟ್ಟಿರುವರೆಂತ ವಾರ್ತೆ ಇದೆ.

ಜರ್ಮನ್ ಸೇನಾಧಿಪತಿಯು ಎಂಟವರ್ಪ ಪಟ್ಟಣದಲ್ಲಿ ಈ ರೀತಿ ಪ್ರಕಟಿಸಿರುವರು:—ನೀವು ವಿರೋಧಭಾವವನ್ನು ತೋರಿಸದಿದ್ದರೆ ನಿಮ್ಮ ಆಸ್ತಿಪಾಸ್ತಿಗಳು ಉಳಿಸಲ್ಪಡುವವು. ವಿರೋಧಭಾವವನ್ನು ತೋರಿಸುವವರು ಯುದ್ಧ ಕಾನೂನು ಪ್ರಕಾರ ಶಿಕ್ಷಿಸಲ್ಪಡುವರು. ಮತ್ತು ಇದರಿಂದ ನಿಮ್ಮ ಚಂದವಾದ ಪಟ್ಟಣವು ನಾಶವಾಗುವದು.

ಎಂಟವರ್ಪಿನಲ್ಲಿ ಅಂದಾಜು ಮಾಡಕೂಡದಷ್ಟು ಬಂದಿಗಳೂ ವಿಶೇಷ ಆಹಾರ ಸಾಮಗ್ರಿಗಳೂ ಜರ್ಮನರಿಗೆ ದೊರೆತಿರುವುದೆಂತ ಜರ್ಮನರು ಪ್ರಕಟಿಸಿರುವರು.

ಬ್ರಿಟಿಷ್ ಮತ್ತು ಬೆಲ್ಜಿಯನ ಸೇನೆಗಳು ಹಾವಾಗಿ ೭ ಕೋಟಿಗಳನ್ನು ನಾಶಮಾಡಿ ಪಟ್ಟಣವನ್ನು ಬಿಟ್ಟು ಹೋದರು.

ಜರ್ಮನರು ವಶಮಾಡಿಕೊಂಡ ಬೆಲ್ಜಿಯಮಿನ ಲೀಜ್, ಬ್ರುಸೆಲ್ಸ್, ನಾಮೂರು. ಲಕ್ಸೆಂಬರ್ಗ, ಮತ್ತು ಹೈನಾಲ್ಟ್ ಪ್ರದೇಶದಲ್ಲಿ ಬರಬಿದ್ದಿರುವುದು.

ಎಂಟವರ್ಪ ಪಟ್ಟಣಕ್ಕೆ ವಿಶೇಷ ಹಾನಿಯಾಗಲಿಲ್ಲ. ಅಲ್ಲಿಯ ಎಣ್ಣೆ ಕೊಳಗಳನ್ನು ಬೆಲ್ಜಿಯನರು ಸುಟ್ಟು ಹಾಕಿದ್ದರಿಂದ ಜರ್ಮನರು ಎಣ್ಣೆ ಇಲ್ಲದೆ ಬಹಳ ತೊಂದರೆಗೊಂಡಿರುವರು.

ಎಂಟವರ್ಪಿನ ಮುತ್ತಿಗೆಯಲ್ಲಿ ಜರ್ಮನರಲ್ಲಿಯೂ ವಿಶೇಷ ನಷ್ಟವಾಗಿರುವುದು. ೪೦ ಗಾಡಿಗಳುಳ್ಳ ೫ ಟ್ರೈನಿನಲ್ಲಿ ಘಾಯ ಒಡೆದ ಜರ್ಮನರನ್ನು ಹಾಕಿ ಬ್ರುಸೆಲ್ಸಿನ ಮಾರ್ಗವಾಗಿ ಕೊಂಡು ಹೋಗಿರುವರೆಂತ ಬ್ರುಸೆಲ್ಸಿನಿಂದ ವಾರ್ತೆ ಬಂದದೆ.

ಫ್ರಾನ್ಸ್:—ಸಂಯುಕ್ತ ಸೇನೆಗಳ ಎಡಪಾರ್ಶ್ವದಲ್ಲಿ ಶತ್ರುಗಳ ೧೪ ಕ್ಷುದುರೆಪಡೆಯು, ಅರ್ಮೆಂಟಿಯರ್ಸ್ ಪ್ರಾಂತ್ಯಕ್ಕೆ ಹಿಮ್ಮೆಟ್ಟಿರುವದು. ಎರ್ರಾಸ್ ಮತ್ತು ಒೃಸೆಯಲ್ಲಿ ಶತ್ರುಗಳು ಮೇಲ್ಮಾಯ್ದು ಬಂದು ಜಯಪ್ರದರಾಗಲಿಲ್ಲ. ಮಧ್ಯ ಮತ್ತು ಉತ್ತರದಲ್ಲಿ ಸಂಯುಕ್ತ ಸೇನೆಗಳು ಸ್ವಲ್ಪ ಜಯ ಹೊಂದಿರುವವು. ಕೆರೊನ್ನೆ ಮತ್ತು ರ್ಹೀಮ್ಸಿನಲ್ಲಿ ರಾತ್ರಿಕಾಲ ಮೇಲ್ಮಾಯ್ದು ಬಂದ ಜರ್ಮನರು ಹಿಮ್ಮೆಟ್ಟಿರುವರು. ರ್ಹೀಮ್ಸ್ ಮತ್ತು ಮ್ಯೂಸ್ ಪ್ರಾಂತ್ಯದಲ್ಲಿ ಬದಲಾವಣೆಯಾಗಲಿಲ್ಲ. ತಾ. ೯ರಲ್ಲು ಸ್ಟೆಂಟ್ ಮಿಕಯಲಿನ ಪೂರ್ವಕ್ಕೆ ಇರುವ ಎಪ್ರೆಮೆಂಟ್ ಪ್ರಾಂತ್ಯವನ್ನು ಜರ್ಮನರು ತಕ್ಕೊಂಡರು. ಸಂಯುಕ್ತ ಸೇನೆಗಳು ಪುನಃ ಅದನ್ನು ಶತ್ರುಗಳಿಂದ ಹಿಂದೆ ತಕ್ಕೊಂಡಿರುವವು. ಲೊರೈನ್ ಮತ್ತು ಒಸ್ಜೆಸಿನಲ್ಲಿ ಬದಲಾವಣೆಯಾಗಲಿಲ್ಲ. ಸೆಸಿಗ್ನೆಯಲ್ಲಿ ಶತ್ರುಗಳ ಧ್ವಜವನ್ನು ಫ್ರೆಂಚರು ಹಿಡಿದಿರುವರು.

ಜನರಲ್ ಜುಪೆಲ್ಲಿಯವರು ಇಟಲಿಯ ಯುದ್ಧ ಮಂತ್ರಿಯಾಗಿ ನೇಮಿಸಲ್ಪಟ್ಟಿರುವರು.

ಜರ್ಮನರ ಎರಡು ವಾಯುನಾವೆಗಳು ೨೦ ಬೊಂಬುಗಳನ್ನು ಪಾರಿಸ್ ನಗರಕ್ಕೆ ಬಿಸಾಡಿರುವವು. ೩ ಮಂದಿ ಹತರಾದರು. ೧೬ ಮಂದಿ ಘಾಯಪೊಡೆದರು. ಫ್ರೆಂಚ ವಾಯುನಾವಿಕರು ಜರ್ಮನರ ವಾಯುನಾವಿಕರನ್ನು ಹಿಂದಟ್ಟುತ್ತಿದ್ದಾರೆ.

ಜರ್ಮನರು ಸುವಾಲ್ಕಿಯನ್ನು ಬಿಟ್ಟುಹೋಗಿರುವರು.

ಮೊಂಟೆನಿಗ್ರೋಯರು ಸರ್‌ಜಾವೋ ಸಮೀಪ ೨೦,೦೦೦ ಆಸ್ಟ್ರಿಯರೊಡನೆ ಕಾದಾಡಿ ಅವರನ್ನು ಹಿಂದಟ್ಟಿದರು. ಮೊದಲನೇ ದಿನದ ಕದನದಲ್ಲಿ ಆಸ್ಟ್ರಿಯನರಲ್ಲಿ ೧೫,೦೦೦ ಮಂದಿ ಪ್ರಾಣಾಪಾಯಹೊಂದಿದರು. ಎರಡನೇ ದಿನ ೫೦೦ ಮಂದಿ ಪ್ರಾಣಾಪಾಯ ಹೊಂದಿದರು.

ವಿದೇಶ ವೃತ್ತಾಂತ.

ಬೆಲ್ಜಿಯಮಿನ ಅರಸರಾದ ಅಲ್ಬರ್ಟರವರು ಜರ್ಮನರ ಕೈಗೆ ಬೀಳುವ ಹಾಗಿದ್ದರೆಂದೂ ದೈವವಶಾತ್ ತಪ್ಪಿಸಲ್ಪಟ್ಟರೆಂದೂ ಅಲ್ಲಿಯ ವರ್ತಮಾನ ಪತ್ರಿಕೆಯಲ್ಲಿ ಪ್ರಕಟವಾಗಿರುವುದು. ಅಲ್ಬರ್ಟ ಅರಸರು ತನ್ನ ಸೇನಾ ನೆಲೆಗಳನ್ನು ಪರಿಶೋಧಿಸಲು ಮೋಟರ್ ಬಂಡಿಯಲ್ಲಿ ಹೊರಟಾಗ ಅವರ ಮೋಟರ್ ಡ್ರೈವರನು ಮೋಟರನ್ನು ಜರ್ಮನ್ ನೆಲೆಗಳಿಗೆ ನಡಿಸಿದನು. ಅರಸರು ಫಕ್ಕನೇ ಇದನ್ನು ತಿಳಿದು ಬಂಡಿಯನ್ನು ನಿಲ್ಲಿಸಲು ಅಪ್ಪಣೆ ಮಾಡಿದರೂ ಡ್ರೈವರನು ನಿಲ್ಲಿಸದೆ ಅತೀ ವೇಗದಿಂದ ಜರ್ಮನ್ ನೆಲೆಗೆ ಬಂಡಿಯನ್ನು ಓಡಿಸಿದನು. ಅರಸರು ಕೂಡಲೇ ಡ್ರೈವರನಿಗೆ ಗುಂಡು ಹೊಡೆದು ಅವನನ್ನು ಕೊಂದು ಬಂಡಿ ನಿಲ್ಲಿಸಿದರು. ಅರಸರನ್ನು ಹಿಡಿದು ತರುವವರಿಗೆ ೧,೦೦೦,೦೦೦ ಫ್ರಾಂಕ್ಸ್ ಉಡಿಗೆರೆ ಕೊಡುವೆವೆಂದು ಜರ್ಮನರಿಂದ ಬರೆಯಲ್ಪಟ್ಟ ಪತ್ರ ಡ್ರೈವರನ ಕಿಸೆಯಲ್ಲಿ ಸಿಕ್ಕಿತು.

ಪೆರೊನ್ನೆಯಲ್ಲಿ ಜರ್ಮನರ ೭೦ ಹೆಂಗಸು ದಾದಿಗಳು ಪಿಸ್ತೂಲು ಹಿಡಕೊಂಡಿರುವುದನ್ನು ಫ್ರೆಂಚರು ಕಂಡಿರುವರು. ಜರ್ಮನರ ಎಂಬುಲೆನ್ಸ್ ಕೊಪ್ಸಿನವರು ಗಾಯಪೊಡೆದ ಜರ್ಮನರನ್ನು ರಣರಂಗದಲ್ಲಿಯೇ ಬಿಟ್ಟು ಓಡಿಹೋಗುತ್ತಿರುವರೆಂತ ಜರ್ಮನ್ ಆಫೀಸರರು ಹೇಳುವರು.

ಜರ್ಮನರು ಈ ವರೆಗೆ ಫ್ರಾನ್ಸ್ ಮತ್ತು ಬೆಲ್ಜಿಯಮಿನ ಮೇಲೆ ಈ ರೀತಿ ಯುದ್ಧ ತೆರಿಗೆಯನ್ನು ಹಾಕಿರುವರು:—ಬ್ರುಸ್ಸೆಲ್ಸ್ ೮,೦೦೦,೦೦೦ ಪವನು, ಲೀಜ್ ೨,೦೦೦,೦೦೦, ಲೊವೈನ್ ೪೦೦೦, ಬರ್ಬಾಂಟ್ ಪ್ರಾವಿನ್ಸ್ ೧೮,೦೦೦,೦೦೦, ಮತ್ತು ೧೦೦,೦೦೦ ಪವನುಗಳ ಚುರುಟು; ರೊಬೆಕ್ಸ್ ಮತ್ತು ಟೊರ್ಕೊಯಿಂಗ್ ೪೦,೦೦೦. ಲಿನ್ಸ್ ೨೮,೦೦೦, ಅರ್ಮೆಂಟಿಯರ್ಸ್ ೨೦,೦೦೦, ಒಟ್ಟಿಗೆ ೨೮,೪೧೨,೦೦೦ ಪವನುಗಳ ತೆರಿಗೆ ಹಾಕಿರುವರು.

ಉತ್ತರ ಹಿಂದೂಸ್ಥಾನ.

ವೈಸರಾಯ ಪ್ರಭುಗಳವರ ಪತ್ನಿಯಾಗಿದ್ದ ಲೇಡಿ ಹಾರ್ಡಿಂಜರ ಜ್ಞಾಪಕಾರ್ಥವಾಗಿ ಡಿಲ್ಲಿಯಲ್ಲಿ ಸ್ಥಾಪಿಸಲ್ಪಟ್ಟ ಮೆಡಿಕಲ್ ಕಾಲೇಜಿಯಲ್ಲಿ ಪ್ರಥಮ ವರ್ಷ ಮೊದಲನೇ ತರಗತಿಯಲ್ಲಿ ಪಾಸಾದ ವಿದ್ಯಾರ್ಥಿನಿಗೆ ಅಲ್ವಾರ್ ಸ್ಟೇಟಿನ ಕೋಶಾಧ್ಯಕ್ಷರಾದ ದಿವಾನ್ ಬಹದ್ದೂರ್ ದಯಕಿಶಾನ್‌ಕೌಳ್ ಸಿ. ಐ. ಇ ತವರು ಒಂದು ಚಿನ್ನದ ಪದಕವನ್ನು ಬಹುಮಾನವಾಗಿ ಕೊಡುವರು.

ಮುಸ್ಸೂರಿಯಲ್ಲಿ ತಾ. ೯ರಲ್ಲು ಕೆಲವು ಸೆಕುಂದಗಳ ವರೆಗೆ ಭೂಮಿಯು ನಡುಗಿತು. ಆದರೆ ಕೇಡಾಗಲಿಲ್ಲ.

ಲಕ್ನೋ ಮತ್ತು ಬೇಂಕ್ ಆಫ್ ಅಪ್ಪರ್-ಇಂಡಿಯಾ ಎಂಬ ಬೇಂಕು ಲೇವಾದೇವಿಯನ್ನು ನಿಲ್ಲಿಸಿರುವದೆಂಬ ವಾರ್ತೆ ಬಂದಿರುವುದು. ಅಲ್ಲಹಾಬಾದಿನಲ್ಲಿರುವ ಈ ಬೇಂಕಿನ ಆಫೀಸು ಮುಚ್ಚಲ್ಪಟ್ಟಿರುವುದು. ಈ ಬೇಂಕಿನ ಹೆಡ್ ಆಫೀಸು ಮೀರಟಿನಲ್ಲಿರುವುದು. ಅದಕ್ಕೆ ಇತರ ೧೦ ಬ್ರಾಂಚಾಫೀಸುಗಳೂ [illegible] ಬ್ರಾಂಚಾಫೀಸುಗಳೂ ಇದ್ದವು. [illegible] ಹಣ ಹಿಂದೆ ತೆಗೆದದ್ದು ಈ ಬೇಂಕನ್ನು ಮುಚ್ಚ ಬಿಡಲು ಕಾರಣವಾಯಿತೆಂತ ತಿಳಿದುಬರುತ್ತದೆ.

'ಕೊಮಗಾಟಮಾರು' ಹಡಗದ ಪ್ರಯಾಣಸ್ಥರಾದ ಪಂಜಾಬಿಗಳು ನಡಿಸಿದ ಲೂಟಿ ತಕರಾರುಗಳನ್ನು ವಿರೋಧಿಸುವರೆ ಸಿಕ್ಖ ಮತ್ತು ಪಂಜಾಬಿಗಳ ಸಭೆಯು ಕಲ್ಕತ್ತದಲ್ಲಿ ಕೂಡಿ ಪ್ರಯಾಣಿಕರು ಮಾಡಿದ ಈ ಅನರ್ಥದಿಂದ ಉಂಟಾದ ವಿಷಾದವನ್ನು ತೋರ್ಪಡಿಸಿರುವರು.

ಲಾಹೋರಿನಲ್ಲಿರುವ ಪಂಜಾಬು ಕೊಒಪರೇಟಿವ್ ಬ್ಯಾಂಕಿನ ಠೇವಣಾತಿದಾರರು ೮, ೧೦ ತಿಂಗಳಿಂದ ತಮ್ಮ ಡಿಪಾಜಿಟ್ಟಿನ ಹಣದಲ್ಲಿ ಸುಮಾರು ೪೬ ಲಕ್ಷ ರೂಪಾಯಿ ವಸೂಲು ಮಾಡಿಕ್ಕೊಂಡದ್ದರಿಂದಲೂ ಇನ್ನೂ ಡಿಪಾಜಿಟ್‌ದಾರರು ತಮ್ಮ ಹಣಗಳನ್ನು ಕೇಳುತ್ತಲೇ ಬಂದಿರುವುದರಿಂದಲೂ ಆ ಬ್ಯಾಂಕು ದಿವಾಳಿಯಾಯಿತು. ಆದರೆ ಮೆನೇಜಿಂಗ್ ಡೈರೆಕ್ಟರರು ಹಿಸೆದಾರರಿಗಾಗಲೀ ಠೇವಣಾತಿದಾರರಿಗಾಗಲೀ ಏನೂ ನಷ್ಟವಾಗದಂತೆ ಪೂರಾ ಹಣವನ್ನು ಪಾವತಿ ಮಾಡುವನೆಂದು ಪ್ರಕಟಿಸಿದ್ದಾರೆ.

ಸತಾರೆಯ ಡಿಸ್ಟ್ರಿಕ್ಟ್ ಜಡ್ಜರ ಕೋರ್ಟಿನಲ್ಲಿ ಮೈನರುಗಳ ಆಸ್ತಿಯನ್ನು ಆ ಕೋರ್ಟಿನ ತರಫು ವಹಿಸಿಕೊಂಡು, ಆ ಕೋರ್ಟಿನ ನೌಕರರಿಂದ ರೂಢಿಸುತ್ತಿದ್ದರು. ಈ ನೌಕರರ ಪೈಕಿ ಅಲೆಕ್ಸಾಂದರ್ ಲೂಯಿಸ್ ಎಂಬ ನಾಜರನೂ ನಾಲ್ವರು ಗುಮಾಸ್ತರೂ ಒಳಸಂಚು ಮಾಡಿ ಮೈನರುಗಳ ಆಸ್ತಿಯಲ್ಲಿ ಬಹಳ ಹಣಗಳನ್ನು ತಿಂದು ಹಾಕಿದನು. ಇದು ರುಜುವಾತಾದ ಕಾರಣ ಸತಾರೆಯ ಸೆಷನ್ಸ್ ಜಡ್ಜರು ಆ ನಾಜರನಿಗೆ ಮೂರು ವರುಷವೂ ಉಳಿದ ನಾಲ್ವರಿಗೂ ತಲಾ ಒಂದೊಂದು ವರುಷವೂ ಕಠಿಣ ಸಜವನ್ನೂ ತಲಾ ೧೦೦೦-೫೦೦ ರೂಪಾಯಿ ಜುಲುಮಾನೆಯನ್ನೂ ವಿಧಿಸಿರುತ್ತಾರೆ. ಇವಲ್ಲದೆ ಇನ್ನೊಂದು ಇಂಥಾ ಮೋಕದಮೆಯು ಅವರ ಮೇಲೆ ತನಖೆಗೆ ಬಾಕಿ ಇದೆ.

ವಿಸಾರಟ್ ಪಟ್ಟಣದಲ್ಲಿರುವ ಅಪ್ಪರ್ ಇಂಡಿಯಾ ಬೇಂಕಿನಿಂದ ಹೋದ ವರುಷ ಜೂನ್ ತಾ. ೨೦ರಲ್ಲಿ ಕಾನ್‌ಪುರದ ಸಿಂಲಾ ಬೇಂಕಿಗೆ ೫೦೦೦ ರೂಪಾಯಿ ಕರೆನ್ಸಿ ನೋಟುಗಳನ್ನು ಭಾಂಗಿ ಮಾಡಿ ಕಳುಹಿಸಿದರು. ಅದು ಕಾಣೆಯಾಗಿ ಹೋಯಿತು. ಈ ಲಾಗಾಯಿತು ಪೋಲಿಸಿನವರು ಪತ್ತೆತರದೂದು ನಡಿಸುತ್ತಾ ಬಂದರು. ಕಳದ ವಾರ ದೆಹಲಿನ ನಗರದಲ್ಲಿ ಸೋಡಾ ವಾಟರ್ ತಯಾರು ಮಾಡುವ ಕರೀಮುದ್ದೀನ್ ಇಲಾಹಿ ಭಕ್ಷ್ ಎಂಬವನ ಬಳಿ ಆ ನೋಟುಗಳ ಪೈಕಿ ಅನೇಕ ಸಿಕ್ಕಿ ವಿಚಾರಣೆ ಮಾಡಿದ್ದಾಗ ಅಪ್ಪರ್ ಇಂಡಿಯಾ ಬೇಂಕಿನ ನೌಕರನಾದ ವಲ್ಲಿ ಮಹಮ್ಮದ್ ಎಂಬವನು ಆ ನೋಟುಗಳನ್ನು ಕೊಟ್ಟು ಹಣ ಪಡೆದನೆಂದು ತಿಳಿಯಿತು. ಈಗ ಅವರಿಬ್ಬರನ್ನೂ ಹಿಡಿದು ತನಖಿ ನಡಿಸುತ್ತಿದ್ದಾರೆ.

ಮುಂಬಾಯಿಯಲ್ಲಿ ಕಳೆದ ವರುಷ ದಿವಾಳಿಯಾದ ಸ್ಪೆಸಿಬೇಂಕ್ ಎಂಬ ದೊಡ್ಡ ಬೇಂಕಿನ ಲಿಕ್ವಿಡೇಟರರು ಬೇಂಕಿನ ಲೆಕ್ಕ ಪುಸ್ತಕಗಳನ್ನೆಲ್ಲಾ ತನಖಿ ನೋಡಿ ಈಗ ಡೈರೆಕ್ಟರರುಗಳ ಮೇಲೆ ೧,೬೬,೭೪೦೦೦ರೂಪಾಯಿಗೆ ಒಂದು ದಾವೆಯನ್ನೂ ೨೩,೩೩,೦೭೭ ರೂಪಾಯಿಗೆ ಮತ್ತೊಂದು ದಾವೆಯನ್ನೂ ತಂದಿದ್ದಾರೆ. ಡೈರೆಕ್ಟರರು ಬೇಂಕಿನ ಕೆಲಸ ನಡಿಸುವುದರಲ್ಲಿ ಅಲಕ್ಷ್ಯಭಾವದಿಂದ ವರ್ತಿಸಿದ್ದರಿಂದ ಮೊದಲನೇ ದಾವಾ ಹಣವು ಅವರಿಂದ ಬ್ಯಾಂಕಿಗೆ ಬರಬೇಕೆಂದೂ, ಬೇಂಕು ನಡಿಯುತ್ತಿರುವಾಗ ಅವರು ಹಿಸೆದಾರರಿಗೆ ಹಂಚಿದ ಮೊಬಲಗು ಅವರಿಂದ ಬೇಂಕಿಗೆ ಸಲ್ಲಬೇಕಾದ ಆ ಬಡ್ಡಿಯೆಲ್ಲಾ ಒಟ್ಟು ಎರಡನೇ ಹಣವೆಂದೂ ಮೋಕದಮ್ಮೆ ಬಂದಿದೆ.

ಕಳದ ಶುಕ್ರವಾರ ಸಿಮ್ಲದಲ್ಲಿ ಭೂಕಂಪವಾಗಿರುವುದು. ಇದಾಗಿ ಒಂದು ತಾಸಿನ ನಂತರ ಲಾಹೋರಿನಲ್ಲಿ ಭೂಕಂಪಿಸಿರುವುದು.

ಮದ್ರಾಸಿನ ಗುಲಾಮ್ ಮಹಮ್ಮದ್ ಎಂಬವರಿಗೆ ಸರಕಾರದವರಿಂದ ಕೊಡಲ್ಪಟ್ಟ ಖಾನ್ ಬಹದ್ದೂರ್ ಎಂಬ ಬಿರುದು ಅವರ ದುರ್ನಡತೆಯ ಕಾರಣದಿಂದ ಇಂಡಿಯಾ ಸರಕಾರದವರು ತೆಗೆದಿಟ್ಟಿರುವರು.

ಕೊಮಗಾಟಮಾರುವಿನಲ್ಲಿದ್ದ [illegible] ಪ್ರಯಾಣಿಕರಲ್ಲಿ [illegible] ಮಂದಿ [illegible] ಇತರ ೬೦ ಮಂದಿ [illegible]

ಬಂದಿ ಮೃತಪಟ್ಟವರನ್ನು ಬಿಟ್ಟು ಉಳಿದವರು ಕೈದುಮಾಡಲ್ಪಟ್ಟಿರುವರು.

ಸಿಮ್ಲದಲ್ಲಿ ಆದ ಭೂಕಂಪದಿಂದ ಎರಡುಮನೆಗಳು ಬಿದ್ದು ಒಬ್ಬನು ಮೃತಪಟ್ಟಿರುವನು.

ಇಂದೋರಿನ ದಿವಾನರಾದ ಸರ್. ಎನ್ ಜಿ. ಚಂದಾವರಕಾರರವರು ದಿವಾನ್ ಪದವಿಗೆ ರಾಜಿನಾಮೆಕೊಟ್ಟು ಮುಂಬಾಯಿಯಲ್ಲಿರುವ ತನ್ನ ಮನೆಗೆ ಬಂದಿರುವರು.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಹ್ಯಾಕೋರ್ಟಿನ ಚೀಫ್ ಜಸ್ಟಿಸರಾದ ಒನರೇಬಲ್ ಸರ್ ಚಾರ್ಲ್ಸ ಆರ್ನೋಲ್ಡ್ ವೈಟರವರು ಇದೇ ತಾ ೧೨ರಿಂದ ಕೆಲಸದಿಂದ ರಿಟಾಯರ್ಡ ಆಗಿರುವರು.

ದಕ್ಷಿಣ ಕನ್ನಡ

ಬಂಗ್ರಮಂಜೇಶ್ವರ:—ಇಲ್ಲಿಯ ಕಡವಿನಲ್ಲಿ ಸುಮಾರು ೨೫ ದಿವಸಗಳಿಂದೀಚೆಗೆ ಆಚೆಈಚೆ ಪಾರಾಗಲಿಕ್ಕೆ ಒಂದು ಒಳ್ಳೆ ದೋಣಿಯು ಇಲ್ಲದ್ದರಿಂದ ಹೆಂಗಸರಾಗಲೀ ಶಾಲಾ ಬಾಲಬಾಲಿಕೆಯರಾಗಲೀ ದಾಟುವದು ಬಹಳ ಕಷ್ಟವಾಗಿರುತ್ತದೆ. ಈ ವಿಷಯದಲ್ಲಿ ಇಲ್ಲಿಯ ನಿವಾಸಿಕರೆಲ್ಲರೂ ತಾಲೂಕು ಪ್ರೆಸಿಡೆಂಟರಿಗೆ ವಿನಂತಿ ಬರಕೊಂಡಿರುತ್ತಾರೆ. ಆದ್ದರಿಂದ ಇನ್ನಾದರೂ ಸದರಿ ಮೇಲು ಉದ್ಯೋಗಸ್ತರು ಈ ಎಲ್ಲಾ ವಿಲೆವಾರಿಗಳಿಗೆ ತಕ್ಕ ನಿಗಾ ಕೊಡುವರಾಗಿ ನಂಬುತ್ತೇವೆ.

ಯುರೋಪ್‌ಖಂಡದಲ್ಲಿ ಈಗ ಒದಗಿದ ಘೋರ ಯುದ್ಧದ ಫಂಡಿಗೆ ನಮ್ಮ ದಯಾಳು ಇಂಗ್ಲೀಷು ರಾಜರಿಗೆ ನಾವು ಕೂಡಾ ಯಥಾನುಶಕ್ತಿ ದ್ರವ್ಯ ಸಹಾಯವನ್ನು ಮಾಡಬೇಕೆಂಬ ಅಭಿಲಾಷೆಯಿಂದ ಇಲ್ಲಿಯ ಮಾನ್ಯ ಗ್ರಹಸ್ತರಾದ ಮ| ರಾ| ರಾ| ಸಾವಕಾರ ವೈಕುಂಟ ಭಕ್ತರವರು ಇಲ್ಲಿಯ ನಿವಾಸಿಕರಿಗೂ ಶ್ರೀ ದೇವಸ್ಥಾನದ ಬಾಕಿ ಮೊಕ್ತೇಸರರಿಗೂ ಕೂಡಾ ಪ್ರೇರೇಪಿಸಿ ಸದರಿ ಯುದ್ಧ ಫಂಡಿಗೆ ರೂ. ೩೨೫ನ್ನು ನಮ್ಮ ಜಿಲ್ಲೆಯ ಕಲೆಕ್ಟರವರ ಮುಖಾಂತರ ರವಾನಿಸಿದ್ದಲ್ಲದೆ ಇನ್ನೂ ರವಾನಿಸುವ ಬಗ್ಗೆ ವಂತಿಗೆ ಎತ್ತುವದರಲ್ಲಿದ್ದಾರೆಂಬದನ್ನು ತಿಳಿಸುವರೆ ಸಂತೋಷ ಪಡುತ್ತೇನೆ

ಪೊಳಲಿ:—ಇಲ್ಲಿ ಇದೇ ತಿಂಗಳ ತಾ. ೮ರಲ್ಲು ಪೊಳಲಿ ಶ್ರೀ ರಾಜರಾಜೇಶ್ವರಿ ದುರ್ಗಾ ಪರಮೇಶ್ವರಿ ದೇವಸ್ಥಾನದ ಪೂರ್ವ ಗೋಪುರದಲ್ಲಿ ಒಂದು ಸಭೆಯು ಸೇರಿತ್ತು. ನಮ್ಮ ಮಹಾರಾಜರಾಗಿರುವ ಬ್ರಿಟಿಷ್ ರಾಜರಿಗೆ ನಡೆಯುವ ಯುದ್ಧದಲ್ಲಿ ಸಂಪೂರ್ಣವಾಗಿ ಜಯ ಸಿಕ್ಕುವದಕ್ಕೋಸ್ಕರ ಪ್ರತಿನಿತ್ಯ ರಾತ್ರಿ ೯ ಗಂಟೆ ವರೆಗೆ ಶ್ರೀ ದೇವಿ ಭಜನೆ ಮಾಡಬೇಕೆಂಬ ನಿರ್ಣಯವಾಯಿತು. ಬ್ರಿಟಿಷ್ ಮಹಾರಾಜರಿಂದ ನಮ್ಮ ದೇಶಕ್ಕೆ ಸಿಕ್ಕಿದ ಮಹಾಶ್ರಾದ ಪ್ರಯೋಜನಗಳನ್ನೂ ಈಗ ಯೂರೋಪ್‌ಖಂಡದಲ್ಲಿ ಪ್ರಾಪ್ತವಾದ ಯುದ್ಧದ ಕಾರಣಗಳನ್ನೂ ಈ ವರೆಗಿನ ಯುದ್ಧ ಸಮಾಚಾರಗಳನ್ನೂ ಅಮುಣಂಜೆ ಗುತ್ತಿನ ರಾ| ಎನ್. ಎ. ಶೀನಪ್ಪ ಹೆಗ್ಗಡೆಯವರು ಸಭೆಯವರಿಗೆ ವಿವರವಾಗಿ ತಿಳಿಸಿದರು. ಮತ್ತು ರಾ| ಬಡ್ಡಬೈಲು ಪರಮೇಶ್ವರಯ್ಯನವರು ಬ್ರಿಟಿಷ ಸಾಮ್ರಾಜ್ಯಕ್ಕೆ ಈ ಯುದ್ಧದಲ್ಲಿ ಜಯ ಸಿಕ್ಕುವ ಕೆಲವು ಕಾರಣಗಳನ್ನು ವಿವರಿಸಿದರು. ಭಜನೆಯು ಆ ರಾತ್ರಿಯೇ ಪ್ರಾರಂಭವಾಗಿ ೧೫೫ ಜನರು ಸೇರಿ ಭಜನೆ ಮಾಡಿ ದೇವಸ್ಥಾನಕ್ಕೆ ಪ್ರದಕ್ಷಿಣೆ ಬಂದು ಮಹಾ ಪೂಜೆಯಾದ ಕೂಡಲೇ ಎಲ್ಲವರೂ ಮಹಾ ರಾಜರಿಗೆ ಜಯವಾಗಲಿ ಎಂಬ ಶಬ್ದದಿಂದ ಪ್ರಾರ್ಥಿಸಿ ಶ್ರೀ ದೇವಿ ಪ್ರಸಾದ ತಕ್ಕೊಂಡು ಅಲ್ಲಿ ಕೂಡಿ ಇದ್ದವರಿಗೆ ಪಾನಕ, ಪಂಚಕಜ್ಜಾಯ, ವಗೈರೆ ಹಂಚಿ, ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಅನಂತರ ಈ ವರೆಗೂ ಭಜನೆಯು ಕ್ರಮದಿಂದ ನಡಕೊಂಡು ಬರುತ್ತದೆ.

ವಿಟ್ಲ:—ಇದೇ ತಿಂಗಳ ತಾ. ೧೦ರಿಂದ ಇಲ್ಲಿಯ ಸಹಾ... [illegible]

ಯುದ್ಧದ ಸಹಾಯಾರ್ಥವಾಗಿ ಇದೇ ಬರುವ ತಾ. ೨೪ನೇ ಶನಿವಾರ ವಿಟ್ಲ ಸಬ್ ರೇಂಜಿನ ಶಾಲಾ ಉಪಾಧ್ಯಾಯರುಗಳ ಒಂದು ಸ್ಪೆಶ್ಯಲ್ ಮೀಟಿಂಗು ಜರಗುವದು.

ಇಲ್ಲಿ ಹುಡುಗಿಯರ ಶಾಲಾ ಕಟ್ಟೋಣದ ಕೆಲಸವು ಪ್ರಾರಂಭವಾಗಿಯದೆ

ಇಲ್ಲಿಯ ಕೆ. ಡಿ ಗುರುವಪ್ಪನನ್ನು ಮಂಜೇಶ್ವರ ಪೋಲಿಸರು ಕೋಳಿಯೂರು ಗ್ರಾಮದಲ್ಲಿ ನಡದ ಕಳವಿನಲ್ಲಿ ಗುಮಾನಿನ ಮೇಲೆ ಕೈದುಮಾಡಿರುತ್ತಾರೆ

ಚೊಕ್ಕಾಡಿಕಟ್ಟೆ:—ಇದೇ ತಾ. ೪ನೇ ಆದಿತ್ಯವಾರ ಮಧ್ಯಾಹ್ನ ೧೨ ಘಂಟೆಗೆ ಅಮರಪಡ್ನೂರ ಮುಡ್ನೂರು ಗ್ರಾಮಸ್ಥರು ಭಜಿಸಿ ಬರುವ ಚೊಕ್ಕಾಡಿ ಸ್ಥಾಪನೆಯಲ್ಲಿ ಸದರಿ ಎರಡು ಗ್ರಾಮಗಳ ದ ಸುಮಾರು ೫೦೦ ಜನರು ಕೂಡಿ ಪೂಜೆ ಮಾಡಿಸಿ ಶ್ರೀಮನ್ಮಹಾರಾಜ ಐದನೇ ಜೋರ್ಜ ಚಕ್ರವರ್ತಿಯವರಿಗೆ ಸಂಭವಿಸಿರುವ ಯುದ್ಧದಲ್ಲಿ ಬೇಗನೇ ಜಯ ವಾಗಲೆಂದು ದೇವರನ್ನು ಪ್ರಾರ್ಥಿಸಿದರು. ನಂತರ ಅಲ್ಲಿ ಕೂಡಿದ ಎಲ್ಲಾ ಜನರು ಅಮರಪಡ್ನೂರು ಬೋರ್ಡ ಎಲಿಮೆಂಟರಿ ಶಾಲೆಗೆ ಬಂದು ಸದರಿ ಶಾಲೆಯಲ್ಲಿ ಶಾರದಾ ಪೂಜೆ ಮಾಡಿ ಅಲ್ಲಿ ಸಹ ಚಕ್ರವರ್ತಿಗಳಿಗೆ ಜಯವಾಗಲೆಂದು ಒಮ್ಮನಸ್ಸಿನಿಂದ ಭಕ್ತಿಪೂರ್ವಕವಾಗಿ ಪ್ರಾರ್ಥಿಸಿ ಬಾಲಕರಿಂದ ಪದ್ಯಗಳನ್ನು ಹೇಳಿಸಿದರು. ಅಲ್ಲಿ ನೆರೆದ ಸಭಿಕರೆಲ್ಲರೂ ಶಾಲಾ ಬಾಲಕರೂ ಉಪಾಧ್ಯಾಯರೂ ಸಮೇತ ಈ ಮೊದಲು ನಡೆದ ಡಿಲ್ಲಿ ದರ್ಬಾರಿನ ಸ್ಮರಣಾರ್ಥವಾಗಿ ಅಮರಪಡ್ನೂರ ಗ್ರಾಮದ ಪಟೇಲರು ರಾ| ರಾ| ಮ... ಕೃಷ್ಣಯ್ಯನವರು ಕಟ್ಟಿಸಿದ ದರ್ಬಾರು ಕಟ್ಟೆಯಲ್ಲಿಯೂ ಜಯ ಪೂಜೆ ಮಾಡಿಸಿ ಶಾಲಾ ಮಕ್ಕಳಿಂದ ಪದ್ಯಗಳನ್ನು ಹೇಳಿಸಿ, ನೆರೆದ ಸಭಿಕರಿಗೆ ಫಲಾಹಾರ ಮತ್ತು ಕಾದ ಸ್ವೀಟ್ಸ್‌ನ್ನೂ ಹಂಚಿ, ತಾಂಬೂಲಾದಿಗಳ ದ ಸತ್ಕರಿಸಿದರು

ಫರಂಗಿಪೇಟೆ:—ಇದೇ ತಿಂಗಳ ತಾ ೮ರಲ್ಲು ಇಲ್ಲಿಯ ಆರ್ಕೋಳ್ (ಕೊಳತ್) ಇಗರ್ಜಿಯ ವರ್ಷಾವಧಿ ಹಬ್ಬವು ಎಂದಿನಂತೆ ಬಹು ವಿಜೃಂಭಣೆಯಿಂದ ಜರಗಿತು.

ಮೇರಮಜಲು ಸೈಂಟ್ ಜೋಸೆಫ್ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿಗಳು ಸುತ್ತಮುತ್ತಲಿನ ಗೃಹಸ್ಥರಿಂದಲೂ, ಹಳೆಯ ವಿದ್ಯಾರ್ಥಿಗಳಿಂದಲೂ ವಂತಿಗೆ ಎತ್ತಿ ಸದರಿ ಶಾಲೆಯಲ್ಲಿ ಇದೇ ತಿಂಗಳ ತಾ. ೧೦ರಲ್ಲು ಇಂಗ್ಲಿಷ್, ಕನ್ನಡ, ಪುಸ್ತಕಗಳ ಒಂದು ಸಂಗ್ರಹವನ್ನು ಏರ್ಪಡಿಸಿರುವರು ಪುಸ್ತಕ ಸಂಗ್ರಹವು ಸುಮಾರು ೪೦೦ ಸಂಚಿಕೆಗಳಿಗೆ ಏರಿರುವದು. ಎಲ್ಲಾ ವಿದ್ಯಾರ್ಥಿಗಳೂ, ಇತರರೂ, ಪುಕ್ಕಟೆಯಾಗಿ ಪುಸ್ತಕಗಳನ್ನು ಓದುವ ಏರ್ಪಾಡನ್ನು ಮಾಡಿರುತ್ತದೆ. ಈ ಪುಸ್ತಕ ಸಂಗ್ರಹವು ವೃದ್ಧಿಯಾಗಿ ಬೇಗನೇ "ಗ್ರಾಮ ಪುಸ್ತಕ ಸಂಗ್ರಹ" ವಾಗಲೆಂದು ಹಾರೈಸುತ್ತೇವೆ.

ಇಲ್ಲಿಗೆ ಸಮೀಪವಾಗಿರುವ ಬೊಂಡಂತಿಲ ಗ್ರಾಮದಲ್ಲಿ ಸದರಿ ಶಾಲೆಯ ಮುಖ್ಯ ಉಪಾಧ್ಯಾಯರು ಕೆಲವು ಮಂದಿ ಗೃಹಸ್ಥರ ಸಹಾಯ. ಹೊಂದಿ ಕಟ್ಟಿಸಿದ ಶಾಲಾ ಹೊಸ ಕಟ್ಟೋಣವು ಕಳೆದ ತಾ ೯ಕ್ಕೆ ಮೇರಮಜಲು ಶಾಲಾ ಹೆಡ್‌ಮಾಸ್ತರ್ ರಾ| ಎ. ರಾಮಚಂದ್ರ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು ಈ ಗ್ರಾಮದಲ್ಲಿ ತಾಲೂಕು ಬೋರ್ಡಿನವರು ಶಾಲೆಯನ್ನು ಇಡುವ ಸಂದರ್ಭದಲ್ಲಿ ಸದರಿ ಕಟ್ಟೋಣವನ್ನು ಬೋರ್ಡಿಗೆ ಬಿಟ್ಟು ಕೊಡುವ ಆಲೋಚನೆ ಮಾಡಿರುತ್ತಾರೆ.

ಪುತ್ತೂರು:—ನಮ್ಮ ಡಿವಿಜನಲ್ ಆಫೀಸರರವರು ಆಕ್ಟೋಬರ ತಾ ೧೯ರಲ್ಲು ಪುತ್ತೂರಿಂದ ಮಾಡನೂರು, ೨೦ ಮಾಡನೂರು; ೨೧ ಮಾಡನೂರಿಂದ ಸುಳ್ಯ, ೨೨ ಮತ್ತು ೨೩ ಸುಳ್ಯ; ೨೪ ಪುತ್ತೂರು, ೨೫ ಪುತ್ತೂರಿನಿಂದ ಮಂಗಳೂರು ೨೬ ಮಂಗಳೂರು; ೨೭ ಪುತ್ತೂರು ಈ ರೀತಿ ಮೊಕ್ಕಾಂಗಳ ಮೇರೆಗೆ ಸರ್ಕೀಟು ಬೆಳಿಸುವರು.

ಗ್ರಾಮ ಉದ್ಯೋಗಸ್ಥರ ವರುಷಾವಧಿ ಪರೀಕ್ಷೆಯು ಬರುವ ನವಂಬರ ತಾ. ೧೬ನೇ ಸೋಮವಾರ ದಿವಸ ಕುಂದಾಪುರ, ಪುತ್ತೂರು ಮತ್ತು ಮಂಗಳೂರಲ್ಲಿ ಆಯಾಯ ಡಿವಿಜನಲ್ ಆಫೀಸರರಿಂದ ನಡೆಸಲ್ಪಡುವದು. [illegible]

ರಾ ರಾ ರಾಮಣ್ಣರೈ ಎಂಬವರನ್ನು ಉಪ್ಪಿನಂಗಡಿ ತಾಲೂಕಿನ ಬಂಟ ಮತಸ್ಥಾಪನೆಗಳ ಕಮಿಟಿ ಮೆಂಬರರಾಗಿ ಮೊಕರೂರು ಮಾಡಿರುವರು.

ಇದೇ ಬರುವ ದಶಂಬರ ತಾ. ೩೧ಕ್ಕೆ ಅಂತ್ಯವಾಗುವ ಲೈಸನ್ಸುಗಳುಳ್ಳ ಈ ಜಿಲ್ಲೆಯ ಕೋವಿ ಲೈಸನ್ಸುದಾರರೆಲ್ಲರು ಬರುವ ಜನವರಿ ೧ನೇ ತಾರೀಕಿನೊಳಗೆ ಅವರಿಗೆ ತಿಳಿದಂತೆ ಲೈಸನ್ಸುಗಳನ್ನು ವಾಪಾಸು ಮಾಡುವರೆ ಅನುಕೂಲವಾಗುವಷ್ಟು ಬೇಗನೇ ತಮ್ಮ ಅರ್ಜಿಗಳೊಡನೆ ತಮ್ಮ ಲೈಸನ್ಸುಗಳನ್ನು ವಾಪತಿಮಾಡಬೇಕೆಂದು ಲೈಸನ್ಸುದಾರರೆಲ್ಲರನ್ನು ಎಚ್ಚರಿಸೋಣಾಗುತ್ತದೆಂದೂ ೧೯೧೫ನೇ ಇಸವಿ ಜನವರಿ ತಾ ೧ಕ್ಕೆ ತಮ್ಮತಮ್ಮ ಊರ್ಜಿತ ಪಡಿಸಿದ ಲೈಸನ್ಸುಗಳನ್ನು ವಾಪಾಸು ಪಡೆಯುವರು. ವಿಳಂಬ ಇಲ್ಲದೆ ಹತ್ತರದ ಪೋಲೀಸು ಸ್ಟೇಶನಿನಲ್ಲಿ ತಮ್ಮ ಕೋವಿಗಳನ್ನು ಒಪ್ಪಿಸತಕ್ಕ ಜನರ ಎಲ್ಲಾ ಅಸಾಮಿಗಳು ಕ್ರಿಮಿನಲ್ ಪ್ರೊಸಿಕ್ಯೂಶನ್ ಗುರಿಯಾಗುವದಲ್ಲದೆ ಅವರ ಲೈಸನ್ಸುಗಳು ಊರ್ಜಿತಪಡಿಸದೆ ಕ್ಯಾನ್ಸಲ್ ಆಗಿಯೂ ಸರಕಾರದವರು ಪ್ರಕಟಿಸಿರುವರು.

ಮಲಿನಾರು ಕೋವಿಗಳು ದಕ್ಷಿಣಕನ್ನಡ ಜಿಲ್ಲಾ ಮಜಿಸ್ಟ್ರೇಟ್ ಡೆಪ್ಯುಟಿ ಕಲೆಕ್ಟರವರಿಂದ ೧೯೧೪ನೇ ಇಸವಿ ನವಂಬರ ತಾ ೨೫ನೇ ಬುಧವಾರ ಅಪರಾಹ್ನ ೧೧ ಗಂಟೆಕ್ಕೆ ಮಂಗಳೂರು ಕಲೆಕ್ಟರವರ ಕಚೇರಿಯಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವದೆಂತಲೂ ಲೈಸನ್ಸುದಾರರು ಮ ಕೋವಿಗಳು ಇಟ್ಟುಕೊಳ್ಳುವುದಕ್ಕೆ ಅಧಿಕಾರ ಹೊಂದಿದವರಿಗೆ ಮಾತ್ರ ಏಲಂ ಮಾಡಿಗೆ ನಿಲ್ಲುವುದಕ್ಕೆ ಬಿಡೋಣಾಗುವದೆಂತಲೂ ಲೈಸನ್ಸನ್ನು ಯಾ ಕೋವಿಗಳನ್ನು ಇಟ್ಟುಕೊಳ್ಳುವುದಕ್ಕೆ ಕೊಡೋಣಾದ ಅಧಿಕಾರ ಪತ್ರವನ್ನು ಹಾಜರುಪಡಿಸಿದರೆ ಆಯುಧಗಳನ್ನು ಕೊಡೋಣಾವದೆಂತಲೂ ಸರಕಾರದವರು ಪ್ರಕಟಣೆಯಾಗಿರುವದು.

೧೯೧೪ನೇ ಇಸವಿ ಅಕ್ಟೋಬರ ತಾ ೧೮ ಲಾಗಾಯಿತು ೬ ತಿಂಗಳ ವರೆಗೆ ಕಾಸರಗೋಡು, ಪುತ್ತೂರು, ಬೆಳ್ತಂಗಡಿ ಹೊಸದುರ್ಗ, ಮಂಜೇಶ್ವರ ಪಟ್ಟಣಗಳಲ್ಲಿ ವಿಷ ಪ್ರಯೋಗದಿಂದ ಕೊಲ್ಲಲ್ಪಟ್ಟು ಆಯಾಯ ಸ್ಥಳಗಳ ಸ್ಥಳೀಕ ವೈದ್ಯ ಉದ್ಯೋಗಸ್ಥರ ಬಳಿಗೆ ತರೋಣಾಗುವ ಪ್ರತಿ ಹೆಣ್ಣುನಾಯಿಗೆ ಒಂದುವರೆ ಆಣೆ; ಗಂಡು ನಾಯಿಗೆ ಒಂದಾಣೆ ಪ್ರಕಾರ ಕೊಡಲಾದೀತೆಂತಲೂ ತಮ್ಮ ನಾಯಿಗಳನ್ನು ಕಾಪಾಡಲಿಕ್ಕೆ ಮನಸ್ಸುಳ್ಳವರು ಅವುಗಳನ್ನು ಕಟ್ಟಿ ಹಾಕುವ ಹಾಗೆ ಯಾ ಕುತ್ತಿಗೆಯಲ್ಲಿ ಚನ್ನಾಗಿ ಕಾಣುವ ಲೋಹದ ಪಟ್ಟೆಯಿದ್ದ ವಿನಹಾ ಹೊರಗೆ ಬಿಡದೆ ಹಾಗೆ ಜಾಗ್ರತೆ ಇಡತಕ್ಕದೆಂದೂ ಬೀದಿಗಳಲ್ಲಿ ಯಾ ಅವುಗಳ ಮಾಲೀಕರ ಮನೆಗಳ ಆವರಣಗಳ ಹೊರಗೆ ಅಲೆದಾಡುವ ಎಲ್ಲಾ ನಾಯಿಗಳನ್ನು ನಾಶಮಾಡೋಣಾದಾವೆಂತಲೂ ಪ್ರಕಟಿಸಿರುವರು.

ಶ್ಯಾನುಭೋಗರನ್ನು ಮ ಶ್ಯಾನುಭೋಗ ಕೆಲಸಕ್ಕೆ ಉಮೇದ್ವಾರರನ್ನು ಸರ್ವೆಯಲ್ಲಿ ತರ್ಬೀತು ಮಾಡುವದಕ್ಕೋಸ್ಕರ ೧೦-೧೧-೧೪ ರಿಂದ ೨೧-೧೨-೧೪ರ ವರೆಗೆ ನೀಲೇಶ್ವರದಲ್ಲಿ ಒಂದು ಶಾಲೆಯೂ ನವಂಬರ ... ರಿಂದ ದಶಂಬರ ... ವರೆಗೆ [illegible]

ಬ್ರಹ್ಮಾವರ ಶಾಲೆಯಲ್ಲಿ ಕುಂದಾಪುರ, ಉಡ್ಪಿ, ಕಾರ್ಕಳ ತಾಲೂಕುಗಳ ಶಾನುಭೋಗರನ್ನೂ ಖಾಸಗಿ ಉಮೆದ್ವಾರರನ್ನು ಕೂಡಾ ತರ್ಬೇತು ಮಾಡಲ್ಪಡುವದೆಂತಲೂ ಖಾಸಗಿ ಉಮೆದ್ವಾರರು ಲೇಂಡ ರಿಕಾರ್ಡ ತಹಶಿಲದಾರರಿಂದ ಗಣಿತದಲ್ಲಿ ಪರೀಕ್ಷಿಸಲ್ಪಟ್ಟು ಸರ್ವೆ ಶಾಲೆಗೆ ಕೂಡಿಸಿಕೊಳ್ಳಲಿಕ್ಕೆ ಯೋಗ್ಯರೆಂತ ತೀರ್ಮಾನಿಸಿದ ಕೂಡಲೆ ತಾಲೂಕು ಖಜಾನೆಯಲ್ಲಿ ರೂಪಾಯಿ ೫ ಕಟ್ಟಿ ರಶೀದಿಯನ್ನು ಲೇಂಡ ರಿಕಾರ್ಡ ತಹಶೀಲದಾರರ ಮುಂದೆ ಹಾಜರು ಮಾಡತಕ್ಕದೆಂದೂ ಪ್ರಕಟವಾಗಿದೆ.

ತಾಲೂಕು ಬೋರ್ಡಿನಿಂದ ಪದಗಿಸಿ ಕೊಟ್ಟ ಉಡಿಯದೆ ಮೂಲೆಯಲ್ಲಿ ಬಿದ್ದ ಮೂರು ದೀಪಗಳು ಅಕ್ಟೋಬರ ತಾ. ೧೦ರ ಲಾಗಾಯಿತು ಪುನಹಾ ಉರಿಯುವದೆ ತೊಡಗಿರುವದು.

ಇದೇ ತಾ. ೧೦ನೇ ವರೆಗೆ ೧೪೮ ಇಂಚು ೪೦ ಸೆಂಟ್ಸ್ ಮಳೆ ಬಿದ್ದಿರುವುದು.

ಇಲ್ಲಿಗೆ ನೇಮಕಪಟ್ಟ ಮುನ್ಸೀಫ ಮ। ರಾ। ರಾ। ಸಿ. ಆರ್. ಕೃಷ್ಣರಾವ್ ಇವರು ಇದೇ ತಾ. ೯ನೇ ಶ್ಯಾಮ ಸಮಯ ಹಾಜರಾಗಿ ಚಾರ್ಜ ವಹಿಸಿಕೊಂಡರು.

ಅಸಿಸ್ಟಾಂಟ ಕಲೆಕ್ಟರ ದೊರೆಗಳವರಾದ ಮಿ। ಸಿ ಡಬ್ಲ್ಯು. ಪ್ರಿಸ್ಟ್ಲಿ ದೊರೆಗಳವರು ಉಮರಸುಳ್ಯ ಮಾಗಣೆಯ ಕಾನಾ ಬಾಣಾ ಇತ್ಯರ್ಥಪಡಿಸುವದೆ ಇದೇ ತಾ. ೧೩ರಲ್ಲು ಇಲ್ಲಿಗೆ ಬಂದಿರುವರು.

ರಸ್ತೆಗಳನ್ನು ತೋರಿಸಿ ಕೊಡುವ ಕೈಕಂಭಗಳನ್ನು ನಟ್ಟು ದೀರ್ಘಕಾಲವಾದಾಗ್ಯೂ ಆ ಕಂಭಗಳಿಗೆ ಊರಿನ ಹೆಸರಿನ ಕೈಗಳನ್ನು ತಾ. ೧೨ರಲ್ಲು ಪ್ರತಿಷ್ಟೆ ಮಾಡಿದವರು.

ಪರಸ್ಪರ ಸಹಾಯ ಸಂಘದಿಂದ ಒದಗಿಸಿದಕೊಟ್ಟ ದೀಪಸ್ತಂಭಗಳನ್ನು ದಿವಾಳಿ ಹಬ್ಬದ ದಿನ ತಾ. ೧೭ರಲ್ಲು ಪ್ರತಿಷ್ಠೆ ಮಾಡುವರು.

~~~~

ಬಂಟವಾಳ. ಹಿಂದಿಣ ಸಂಚಿಕೆಯಲ್ಲಿ ಸೂಚಿಸಿದಂತೆ, ಇದೇ ತಾ. ೧೦ರಲ್ಲಿ ಇಲ್ಲಿಯ ಬೋರ್ಡ ಸೆಕೆಂಡರಿ ಶಾಲೆಯು ಹೂತೋರಣಗಳಿಂದಲೂ, ಬಾವುಟಗಳಿಂದಲೂ ಸಿಂಗರಿಸಲ್ಪಟ್ಟ ಕಟ್ಟಡದಲ್ಲಿ, ಮಾನ್ಯರಾದ ಡಿವಿಜನಲ್ ಆಫೀಸರರವರು ಹಾಜರಿರುತ್ತ, ಯುದ್ಧಫಂಡಿನ ಕುರಿತು ಆಲೋಚಿಸುವದೆ ಸಭೆ ಸೇರಿತು. ಯುದ್ಧವು ಉಂಟಾಗಿ ಇಂದಿನ ವರೆಗೆ ನಡೆದ ಯುದ್ಧದ ವೃತ್ತಾಂತವನ್ನು ಸಂಕ್ಷೇಪವಾಗಿ ತಿಳಿಸಿ, ಈಗ ಫಂಡನ್ನು ಎತ್ತುವದೆ ಕಾರಣವನ್ನೂ ಅದರ ಸಹಜತ್ವವನ್ನೂ ವಿವರಿಸಿ ಆದನಂತರ, ಅಂದು ಕೂಡಿಸಲ್ಪಡುವ ಹಣದ ೩ನೇ ಅಂಶವನ್ನು ಹಿಂದೂದೇಶದಲ್ಲಿಯೇ ಸಂಕಷ್ಟ ನಿವಾರಣೆಗಾಗಿಯೂ, ಮಿಕ್ಕುಳಿದುದನ್ನು ಮದರಾಸು ಹಡಗದ ಫಂಡಿಗೂ ವಿನಿಯೋಗಿಸುವುದಾಗಿ ನಿಶ್ಚಯವಾಯಿತು. ಇದುಮೊದಲೇ ೧೭೦-೮-೦ ರೂಪಾಯಿ ಕೇಳುಹಲ್ಪಟ್ಟಿದಲ್ಲದೆ,—ಸಭೆಯಲ್ಲೇ ರೂಪಾಯಿ ೧೫೦ಂಕ್ಕೆ ಮಿಕ್ಕಿ ವಂತಿಗೆಯಾಗಿ ರೂ ೮೦ಂಕ್ಕೆ ಮಿಾರಿ ತಕ್ಷಣವೇ ವಸೂಲಾಯಿತು.

ಈ ವಾರದಲ್ಲಿ ಮಾನ್ಯರಾದ ಕಲೆಕ್ಟರರು, ಡಿವಿಜನಲ್ ಆಫೀಸರರು, ಪೋಲೀಸು ಸುಪರಿಂಟೆಂಡೆಂಟರು, ಇಂಜಿನಿಯರರು ಮೊದಲಾದ ಮೇಲು ಹುದ್ದೇದಾರರೆಲ್ಲ ಈ ಕಡೆಗೆ ಸರ್ಕೀಟು ಬೇಸಿರುವರು.

[illegible]

ಕಾಪು:—ರಾಜಭಕ್ತಿಯನ್ನು ತೋರ್ಪಡಿಸುವ ಬಗ್ಗೆ ಇಲ್ಲಿಯ ಕನ್ನಡ ಶಾಲೆಯ ಮಕ್ಕಳು ವಂತಿಗೆಯನ್ನು ಕೂಡಿಸಿ ಕಳುಹಿಸಿದ ರೂ. ೨–೪–೦ನ್ನು ತಾಲೂಕು ಖಜಾನೆಗೆ ಕಳುಹಿಸಿರುತ್ತದೆಂತಲೂ ಮಕ್ಕಳು ತೋರ್ಪಡಿಸಿದ ರಾಜಭಕ್ತಿಯು ಶ್ಲಾಘನೀಯವಾದದ ಎಂತಲೂ ಉಡ್ಪಿ ರೇಂಜು ಸ್ಕೂಲುಗಳ ಸ. ಅ. ಇನ್ಸ್‌ಪೆಕ್ಟರವರಿಂದ ಕನ್ನಡಾ ಶಾಲಾ ಹೆಡ್ ಮಾಸ್ತರರಿಗೆ ಹುಕುಂ ಬಂದಿದೆಯಾಗಿ ಕೇಳುತ್ತೇವೆ.

ಕೋರ್ಟಿನಲ್ಲಿ ದಿವಾಳಿ ಅರ್ಜಿ ದಾಖಲು ಮಾಡಿ ತಾನು ದಿವಾಳಿ ಎಂದೆನ್ನಿಸಿಕೊಂಡವರು ಗ್ರಾಮ ಕೋರ್ಟುಗಳಲ್ಲಿ ವ್ಯವಹರಿಸುವದು, ನೋಟು, ದಸ್ತಾವೇಜು, ಮುಚ್ಚಳಿಕೆ ಬರೆದು ಕೊಡುವದು ಸರಿಯೇ. ಅಂಥಾ ದಸ್ತಾವೇಜುಗಳನ್ನು ರಿಜಸ್ತ್ರಿ ಮಾಡಲು ಯೋಗ್ಯತರವಾದದ್ದೋ ಹಾಗೇ ಎಂಬದನ್ನು ದಯವಿಟ್ಟು ವಾಚಕರಲ್ಲಿ ಯಾರಾದರೂ ತಿಳಿಸುತ್ತಿದ್ದರೆ ಆಗುತ್ತಿತ್ತು.

ಇದೇ ತಿಂಗಳ ತಾ. ೭ರಲ್ಲಿ ಇಲ್ಲಿಯ ಹೊಸ ಮಾರಿಗುಡಿಯಲ್ಲಿ ಬಾರ್ಕೂರು ಹೋಬಳಿಯ ಮೊಗೇರರೆಲ್ಲರೂ ಕೂಡಿ ಶ್ರೀದೇವರಿಗೆ ಮಹಾಪೂಜೆಯನಿತ್ತು ಕೂಡಿದ ಸುಮಾರು ೫೦೦ ಜನರ ಪೈಕಿ ಗುರಿಕಾರರೆಲ್ಲರೂ ಐಕ್ಯಮತ್ಯದಿಂದ ಒಳ್ಳೆದಾದ ಕೂಡೆ "ನಮ್ಮ ಜಾತಿಯ ಪತಿ ಒಬ್ಬ ಗಂಡಸೂ ಹೆಂಗಸೂ ಇಂದಿನಿಂದ ಸಾಯುವ ಪರಿಯಂತರ ಸಾರಾಯಿ ವ ಸೇಂದಿಯನ್ನು ಕುಡಿಯ ಬಾರದು. ಯಾರೇ ಆಗಲಿ ಕುಡಿದದು ರುಜುವಾತಾದಲ್ಲಿ ತಿಳಿದುಬಂದ ಪಕ್ಷ ಕುಡಿದವನು ರೂ. ೧೦೦ ಜರುಮಾನೆ ಕೊಡಬೇಕು. ಆ ಪೈಕಿ ಹಿಡಿದು ಕೊಟ್ಟವನಿಗೆ ರೂ. ೨೫ ಇನಾಮು ಕೊಡಲ್ಪಡುವದು" ಎಂದು ನುಡಿದಲ್ಲಿ ಎಲ್ಲರೂ ಎದ್ದು ನಿಂತು ಏಕಕಂಠದಿಂದ ಗಟ್ಟಿಯಾಗಿ "ನಾವೆಲ್ಲರೂ ಮನಃಪೂರ್ವಕವಾಗಿ ಗುರಿಕಾರರು ಹೇಳಿದ ಮಾತಿಗೆ ಒಪ್ಪಿರುತ್ತೇವೆ" ಎಂದು ಪ್ರಮಾಣ ಪೂರ್ವಕವಾಗಿ ನುಡಿದರು. ನಂತರ ಬಾರ್ಕೂರು ಹೋಬಳಿಯವರೆಲ್ಲರೂ ಕೂಡಿ ರಾಜಭಕ್ತಿಯನ್ನು ತೋರ್ಪಡಿಸುವ ಬಗ್ಗೆ ತಮ್ಮಿಂದ ಕೂಡುವಷ್ಟು ಹಣವನ್ನು ಜೇನಸೇಯುದ್ಧದ ಫಂಡಿಗೆ ಕಳುಹಿಸುವ ಏರ್ಪಾಡು ಮಾಡುವದೆ ಆಲೋಚಿಸಿ ರಾಜಗೀತವನ್ನು ಹಾಡಿ ಎಲ್ಲರೂ ಅಗಲುವವರಾದರು.

~~~~

ಮಂಗಳೂರು.

~~~~

ಇಲ್ಲಿಯ ಗ್ರಾಮ ಮುನಸೀಫ್ ಕೋರ್ಟಿನಲ್ಲಿ ವ್ಯವಹರಿಸುತ್ತಿರುವ ವಕೀಲರಿಂದ ಬಡ ಜನರಿಗೆ ಉಂಟಾಗುವ ಉಪಟಳದ ಕುರಿತು ಜಿಲ್ಲಾ ಕಲೆಕ್ಟರ್ ದೊರೆಗಳವರು ಮಿಯರ್ಾದೆವಂತರಾದವರನ್ನೇ ವ್ಯವಹರಿಸಲು ಬಿಡಬೇಕೆಂದು ಗ್ರಾಮ ಮುನ್ಸೀಫರಿಗೆ ಹುಕುಂ ಮಾಡಿರುವರೆಂದು ಕೇಳುತ್ತೇವೆ.

ಇದೇ ತಾ. ೧೫ರಿಂದ ಗ್ರಾಮ ಮುನ್ಸೀಫ ಕೋರ್ಟು ಹಂಪನಕಟ್ಟೆಯಿಂದ ರಥಬೀದಿಯ ಹಳೇ ತಾಲೂಕು ಕಚೇರಿಗೆ ವೈಯ್ಯೋಣಾಗಿರುವುದು.

ಹಿಂದೂ ಕ್ರಿಕೆಟ್ ಸಂಗಡದವರಿಗೂ ಗವರ್ನಮೆಂಟ್ ಕ್ರಿಕೆಟ್ ಸಂಗಡದವರಿಗೂ ನಡೆದ ಪಂದ್ಯಾಟದಲ್ಲಿ ಗವರ್ನಮೆಂಟ್ ಕಾಲೇಜಿನವರು ಗೆದ್ದು ಕೊರನೇಶನ್ ಕಪ್ ಪಡಕೊಂಡಿರುವರು.

ಗೋಳಿಕಟ್ಟೆ ಮತ್ತು ಕೋರ್ಟುವಾರ್ಡಿನ ಕೌನ್ಸಿಲ್ಲರ ಚುನಾವಣೆಯು ನಡೆದು ಗೋಳಿಕಟ್ಟೆವಾರ್ಡಿನಲ್ಲಿ ಮ। ರಾ। ರಾ। ವಿ. ಶ್ರೀನಿವಾಸ ಕಾಮತರವರೂ ಕೋರ್ಟುವಾರ್ಡಿನಲ್ಲಿ ಮಿ। ಪಿ. ಎಫ್. ಎಕ್ಸ್. ಸಲ್ಡಾಂಞಾರವರೂ ಆರಿಸಲ್ಪಟ್ಟಿರುವರು.

ಇದೇ ತಿಂಗಳ ತಾ. ೨೭ರಲ್ಲು ಇಲ್ಲಿಗೆ ಮದರಾಸಿನಿಂದ ಪೋಲಿಸ್ ಡ್ಯೂಪಿಟಿ ಇನ್ಸ್‌ಪೆಕ್ಟರ್ ಜನರಲ್‌ರವರು ಚಿತ್ತೈಸುವರು.

ಇಲ್ಲಿಗೆ ಡ್ಯೂಪಿಟಿ ಪೋಲಿಸ್ ಸುಪರಿಂಟೆಂಡೆಂಟರ ಒಂದು ಹೊಸ ನೇಮಕವು ಆಗಿರುವುದು.

ಸಬ್ ಇನ್ಸ್‌ಪೆಕ್ಟರರಾದ ರಾ। ಬೇಕಲ್ ರಾಮರಾಯರು ಸ್ಪೆಶಲ್ ಡ್ಯೂಟಿಯ ಮೇಲೆ ಇಲ್ಲಿಗೆ ವರ್ಗಾಯಿಸಲ್ಪಟ್ಟಿರುವರು.

[illegible]

ಮಂಗಳೂರಲ್ಲಿ ತಾ. ೧೩ರ ವರೆಗೆ ೧೪೦ ಇಂಚು ೩೩ ಸೆಂಟ್ಸ್ ಮಳೆ ಬಿದ್ದಿರುವುದು. ಸರಾಸರಿ ೧೯೯ ಇಂ ೫೩ ಬೀಳಬೇಕಿತ್ತು.

ಕುಂದಾಪುರ ಡಿವಿಜನಲ್ ಆಫೀಸು:—ಕುಂದಾಪುರ ಡಿವಿಜನಲ್ ಆಫೀಸಿನ ೩ನೇ ಕ್ಲಾರ್ಕ ರಾ। ಎಚ್. ಕೃಷ್ಣರಾಯರವರು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಹೆಚ್ಚಿಗೆ ಎರಡು ತಿಂಗಳ ರಜೆ ಪಡಕೊಂಡಿರುವರು.

ಡಿವಿಜನಲ್ ಆಫೀಸಿನ ೪ನೇ ಕ್ಲಾರ್ಕರಾದ ರಾ। ವೈ. ವೆಂಕಟರಾಯರು ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ೩ ತಿಂಗಳ ಹೆಚ್ಚಿಗೆ ರಜೆ ಪಡಕೊಂಡಿರುವರು.

ಡಿವಿಜನಲ್ ಆಫೀಸರರ ಸರ್ಕೀಟು:—ಒಕ್ಟೋಬರ ತಾ. ೧೪ ಬ್ರಹ್ಮಾವರ, ತಾ. ೧೫–೧೬–೧೭ ಉಡ್ಪಿ, ತಾ. ೧೮ ಕುಂದಾಪುರ, ತಾ. ೧೯–೨೦–೨೧ ಉಡ್ಪಿ, ತಾ. ೨೨–೨೩ ಮಂಗಳೂರಿಗೆ ಪ್ರಯಾಣ, ತಾ. ೨೪–೨೫–೨೬ ಮಂಗಳೂರು, ತಾ. ೨೭ ಗುರುಪುರ, ತಾ. ೨೮–೨೯ ಮೂಡಬಿದ್ರಿ, ತಾ. ೩೦-೩೧ ಬಿಜಾಯ್, ನವಂಬರ ತಾ. ೧ ಗುರುಪುರ, ತಾ. ೨ ಮಂಗಳೂರು.

ಜಿಲ್ಲಾ ಕಲೆಕ್ಟರ ಆಫೀಸು ಮಂಗಳೂರು:—ನವಂಬರ ತಾ. ೯ರಲ್ಲು ತಹಸೀಲದಾರರಾದ ಮಿ। ಪಿ. ಎಮ್. ಫೆರ್ನಾಂದಿಸರು ಕೆಲಸದಿಂದ ನಿವೃತ್ತರಾಗುವುದರಿಂದ ಈ ಕೆಳಗಿನ ನೇಮಕಗಳು ಮಾಡೋಣಾಗಿರುವುವು—ಮ। ರಾ। ರಾ। ಕೆ. ರಾಮವರ್ಮರಾಜರು IIIನೇ ಗ್ರೇಡಿಗೆ ಬತ್ತಿ ಹೊಂದಿ ಕುಂದಾಪುರಕ್ಕೂ ಮ। ರಾ। ರಾ। ಎಮ್. ಅಚ್ಚುತ್ತಯ್ಯ Vನೇ ಗ್ರೇಡಿಗೆ ಬಡ್ತಿ ಹೊಂದಿ ಮಂಗಳೂರಿಗೂ, ಕಲೆಕ್ಟರ ಆಫೀಸಿನ ಇಂಗ್ಲಿಷ್ ಹೆಡ್‌ಕ್ಲಾರ್ಕ ಮ. ಎಮ್. ಎಸ್. ಪ್ಯಾಸರವರು ಮ। ರಾ। ಎಮ್. ಅಚ್ಚುತ್ತಯ್ಯನವರ ಬದಲಿಗೂ, ಮಿ। ಎಮ್. ಸುಲ್ತಾನ ಮ್ಯೊದಿನ್ ಸಾಹೇಬರು ಮಿ। ಎಮ್. ಎಸ್. ಪ್ಯಾಸರ ಬದಲಿಗೆ ನೇಮಿಸಲ್ಪಟ್ಟು ಕಾಯಂ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿಯೂ ನೇಮಿಸಲ್ಪಟ್ಟಿರುವರು. ಇವರು ಈಗ ಇರುವ ಉಡ್ಪಿಯಲ್ಲೇ ಈ ಕೆಲಸದಲ್ಲಿರುವರು.

~~~~

ಜೀನಸು ಧಾರಣೆ. (ರೂಪಾಯಿ)

ಅವ್ವಲ್ ಮಸ್ಕತಿ ಅಕ್ಕಿ	5– 6–0	5–10–0
ದುಯಂ ,, ,,	5– 2–0	5– 5–0
ಸುಗ್ಗಿ ,,	5– 0–0	5– 3–0
ಗಾಡಿ ಸುಗ್ಗಿ ,,	4–12–0	4–14–0
ಗುಡ್ಡು ,,	5– 0–0	5– 2–0
ದುಯಂ ಗುಡ್ಡು ,,	4–12–0	4–14–0
ಅವ್ವಲ್ ಬೆಳ್ತಿಗೆ ,,	5– 4–0	5– 8–0
ಗುಡ್ಡು ಬೆಳ್ತಿಗೆ ,,	5– 0–0	5– 3–0
ರಂಗೂನು ಬೆಳ್ತಿಗೆ ಗೋಣಿ ೧ರ	9– 0–0	9– 4–0
ಗೋಧಿ ಗೋಣಿ ೧ರ		14– 0–0
ಹುರುಳಿ ಗೋಣಿ ೧ರ		8– 8–0
ಕಡಲೆ ಗೋಣಿ ೧ರ		11– 8–0
ತೊಗರಿ ಗೋಣಿ ೧ರ		12– 0–0
ತೊಗರಿ ಬೇಳೆ ಗೋಣಿ ೧ರ	12– 0–0	15– 0–0
ಉದ್ದು ಗೋಣಿ ೧ರ		10–8–0
ಊರು ಬೆಲ್ಲ ಖಂಡಿ ೧ರ		55– 0–0
ಉಪ್ಪು ಗೋಣಿ ೧ರ		4–10–0
ಕೊಬ್ರಿ ಖಂಡಿ ೧ರ	70– 0–0	80– 0–0
ಕೊಬ್ರಿ ಹಿಂಡಿ ಖಂಡಿ ೧ರ		26– 8–0
ಎಳ್ಳಿಂಡಿ ಖಂಡಿ ೧ರ		32– 8–0
ಕೊಬ್ರಿ ಎಣ್ಣೆ ಮುಡ ೧ರ		5–10–0
ಎಳ್ಳೆಣ್ಣೆ ಮುಡ ೧ರ		7– 0–0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ		5– 1–0
ಮೋರಿಸ್ ಸಕ್ಕರೆ ಮುಡ ೧ರ		4– 0–0
ಕಾಫಿ ಖಂಡಿ ೧ರ	175–0–0	200– 0–0
ಬೆಳ್ಳುಳ್ಳಿ ಖಂಡಿ ೧ರ	110–0–0	115– 0–0
[illegible]		17– 0–0
[illegible]		21–12–0
[illegible]		19– 8–0
[illegible]	[illegible]–0–0	37– 8–0
[illegible]		1– 8–0

Canarese Novels Etc.

ಕನ್ನಡ ಪುಸ್ತಕಗಳು.

ಮ| ರಾ| ರಾ| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು

	ರೂ ಆ		ರೂ ಆ
ಬಂಗವಿಜೇತ ಹೊಸ ನಾವಿಲ್	1–4	ಕಮಲಾ ಕಾಂತ ದ್ವಿ. ಮು	0–2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1–4	ಲೀಲೆ [ಸಮಾಜ ಚಿತ್ರ]	0–4
ಕಪಾಲನಂದಿನಿ ಡಿಟೊ 2ನೇ ಭಾಗ	1–8	ಮಾಲತಿ [ಅತಿ ಮನೋಹರ] ದ್ವಿ. ಮು	0–3
ಸೀತಾರಾಮ (ಇತಿಹಾಸ)	1–8	ರಾಧಾರಾಣಿ [ಕಾದಂಬರಿ] ತೃ. ಮು	1–3
ವಿಷವೃಕ್ಷ ದ್ವಿ. ಮು	1–4	ಯುಗುಳಾಂಗುರೀಯ ,,	0–3
ದೇವೀ ಚೌಧುರಾಣಿ-ಡಿಟೊ	1–4	ಭ್ರಾಂತಿವಿಲಾಸ	1–8
ರಾಜಸಿಂಹ (ಇತಿಹಾಸ)	1–0	ಸೊಂಪನುತಿ [ಸ್ತ್ರೀನೀತಿ]	0–2
ಕಪಾಲಕುಂಡಲ	0 13	ದಾಡಿಯ ಹೇಳಿಕೆ [ಸ್ವಾರಸ್ಯಕರ]	1–2
ಮೃಣ್ಮಯಿ-ಡಿಟೊ 2ನೇ ಭಾಗ	1–1	ವೈಜ್ಞಾನಿಕ ಪ್ರಹಸನ [ನಕಲಿ]	0–4
ಕೃಷ್ಣಕಾಂತನ ಉಯಿಲು	1–0	ಚಿರತ್ನನಾಟಕರತ್ನ ಡಿಟೊ	1–7
ಮನೋರಮ [ಪತ್ತೇದಾರಿ ಕಥೆ]	1–0	ಚಿತ್ರವಿಚಿತ್ರಾವಳಿ [Tit Bits]	0–5
ಚಿರಿಮಳ ಡಿಟೊ-ದ್ವಿ. ಮು.	0.10	ಸೀರದೆ [ಹೊಸ ಕಾದಂಬರಿ]	0–8
ಶೋಧನೆ. ಡಿಟೊ	0–8	ಭಾರತಮಹಿಳಾ [ಸ್ತ್ರೀನೀತಿ]	0–9
ಶೋಣಿನೂರು [ಇತಿಹಾಸ]	0.12	ಅಮೃತಪುಲಿನ [ನಾವಿಲ್]	0 11
ಅತ್ತಿಗೆ [ಸಂಸಾರ ಚಿತ್ರ] ದ್ವಿ. ಮು.	0–3	ಇತ್ಯಾದಿ	

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ 1ಕ್ಕೆ 3 ಆಣೆ 12ಕ್ಕೆ 1 ರೂಪಾಯಿ ಬೇಗ ಬರೆಯಿರಿ! ಬೆಲೆ ಕಮ್ಮಿ ಮಾಡಿದೆ

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು

	ರೂ ಆ		ರೂ ಆ
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0–8	ನಿರ್ಭಾಗ್ಯಬಾಲಿಕೈ [ಹೊಸಕಾದಂಬರಿ]	0–6
ಕ. ಕವಿಚರಿತೆ [ಪೂರ್ವಭಾಗ]	3–2	ಅನಂಗಸುಂದರಿ ಡಿಟೊ	0–8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0 10	ತಾರಾ ಸುಂದರಿ ಡಿಟೊ	0–8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0–6	ರಾಧಾಮಾಧವಿ ಡಿಟೊ	0–8
ಕಲಾನಾಥ ಡಿಟೊ	0–8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0–9
ಶೋಧನೆ [ಬಂಗಾಳಿ ನಾವಿಲ್]	0.12	ಪಶುವೈದ್ಯಸಂಗ್ರಹ ಡಿಟೊ ದ್ವಿ. ಮು	0–9
ಯಾಮಿನಿ [ಬಂಗಾಳೀ ನಾವಿಲ್]	0–3	ಧರ್ಮಪದವೆಂಬ ಬುದ್ಧಗೀತೆ	0.12
ಸ್ತ್ರೀಯರವದೆ [ಪತಿವ್ರತಾ ಕಥೆ]	0–8	ಜೈಮಿನಿಭಾರತ [ಸಟೀಕಾ ...]	4–0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0–8	ಹರಿಕಥಾಮೃತಸಾರ ಡಿಟೊ	1–6
ಸನ್ಯಾಸಿ [ಹೊಸ ಕಾದಂಬರಿ]	0–6	ಚಮುರಂಗಬೋಧಿನಿ	0–1
ಮೃತ್ಯು ಪರೀಕ್ಷೆ ಡಿಟೊ	0–2	ಸರ್ವೇವ್ಹಾನ್ಯುಯಲ್	0–5
ಬೃಂದಾವನ ಡಿಟೊ	0–2	ನ್ಯಾಯದರ್ಪಣ [ಲಾ]	1–0
ಸುಮನೋರಮ ಡಿಟೊ	0–2	ವ್ಯವಹಾರ ದೀಪಿಕೆ [ಲಾ]	3–0
ಮಾಲಿನಿ ಡಿಟೊ	0–2	ಶಾಕುಂತಲ ನಾಟಕ ದ್ವಿ. ಮು	0–9
ಪ್ರೇಮಪಿಪಾಸೆ ಡಿಟೊ	0–2	ಶೂರಸೇನಚರಿತ್ರೆ ನಾಟಕ ಡಿಟೊ	1–0
ವಿರಕ್ತಳಾದ ಸೌದಾಮಿನಿ ಡಿಟೊ	0–5	ಚಂಡಕೌಶಿಕ ನಾಟಕ ಡಿಟೊ	0 12
ಚಿತ್ರಕಳಾವತಿ ಡಿಟೊ	0–2	ರಾಮವರ್ಮ ಲೀಲಾವತೀ ನಾಟಕ	0–8
ಚಾತುರ್ಯವತಿ ಡಿಟೊ	0–2	ಪಾಂಚಾಲೀ ಪರಿಣಯ ನಾಟಕ	0 10
ವಸುಮತಿ ಡಿಟೊ	0–2	ಚಂಡೀಮದಮರ್ದನ ನಾಟಕ	0–5
ವಿಲಕ್ಷಣಶಿಕ್ಷಣ ಡಿಟೊ	0–2	ಪ್ರಬೋಧ ಚಂದ್ರೋದಯ ನಾಟಕ	0 10
ಪದ್ಮಿನಿ ಡಿಟೊ	0–2	ಭರ್ತೃಹರಿ ನಿರ್ವೇದ ನಾಟಕ	0–3
ಭಾನುಮತಿ ಡಿಟೊ	0–2	ನಿರುಪಮಾ [ನಾಟಕ]	0.12
ಸತೀರೋಹಿಣಿ ಡಿಟೊ	0–2	ಧ್ರುವವಿಜಯ [ನಾಟಕ]	0–4
ಸಂತಾಪಕ ಡಿಟೊ	0–4	ಸೀತಾಪರಿಣಯ [ನಾಟಕ]	0–4
ಚಂದ್ರಮತಿ [ಸ್ತ್ರೀನೀತಿ]	0–6	ಸೀತಾಸುವರ್ಣಮೃಗ [ನಾಟಕ]	0–12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ

ಲೋಕರಂಜನ್

ಎಂಬ ಈ ಪರಿಮಳವು ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪಾಲು ಖರ್ಚು ಅಲಾಯಿದ.

ವಿಳಾಸ:— [illegible] ಬೆಂಗಳೂರು ಸಿಟಿ.

"ಶ್ರೀ ಬಸವರಾಜೇಂದ್ರವಿಜಯ."

ಪ್ರಸಿದ್ಧವಾದ ಬಸವಪುರಾಣದ ಸಾರಭೂತವಾದ ವಚನಗ್ರಂಥ. ಸುಂದರವಾದ ಮಾತುಗಳು, ಸುಲಭವಾದ ಸರಣಿ, ಭಕ್ತಿರಸ ಪ್ರಧಾನವಾದ ಕಥೆಗಳು, ಶಿವಶರಣರ ಲೀಲೆಗಳು, ವೀರಶೈವಮತದ ತತ್ವಗಳೂ ಸಹ ಅಡಕವಾಗಿರುವುವು. ಮಕ್ಕಳಿಗೂ ಅರ್ಥವಾಗುವಂತಹ ಮೃದುವಾದ ಮಾತುಗಳಿಂದ ಬರೆಯಲ್ಪಟ್ಟಿದೆ. ಅಂಗಾಂಗಿಗಳಾದವರೆಲ್ಲರೂ ಇದನ್ನು ಬಿಡದೆ ಓದಿ ತಮ್ಮ ಮತಧರ್ಮವನ್ನರಿತು ಧನ್ಯರಾಗುವರೆಂದು ನಂಬಿರುತ್ತೇವೆ ಬೆಲೆ ಸಂಚಿ. 0—12—0 ದಪ್ಪ ಕಾಗದ. ಸುಂದರವಾದ ಮುದ್ರಣ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿವೆ.

ದಾರಣೆ ಸುಲಭ! ಆಲಿಗರ್ ಬೀಗಗಳು. ದಾರಣೆ ಸುಲಭ!

ಭದ್ರವಾಗಿಯೂ, ಬಂರವಾಗಿಯೂ ಇರವುದು. ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಜಿನಿಯರ್ ಇಲಾಖೆಗಳಿಗೂ ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ

ನಾಲ್ಕು ಚಕ್ರಗಳಿರುವ ಬೀಗಗಳ

ನಂಬ	1	2	3	4	5
	0–12–0	1–1–0	1–4–0	1–11–0	..

ಆರು ಚಕ್ರಗಳಿರುವ ಬೀಗಗಳ

1–2–0	1–8–0	2–4–0	3–[illegible]–0	3–8–0

ಪಿಲ್ಲರ್ ಬೀಗಗಳು

0–4 [illegible] 0–8 [illegible] 0–10–0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗಿಸುವ ಬೀಗ ಒಕ್ಕೆ 1–13–0

ಶ್ರೀಮಾನ್ ನ ಬರು ಬೀಗಗಳನ್ನು ಬಾಗಿಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ ಬೀರುಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ಒಕ್ಕೆ 1–8–0, 1–12–0

ವಿಳಾಸ — ಎಚ್ ಎನ್ ರಾವ್ ಆಂಡ್ ಬ್ರದರ್ಸ್,
ಚಿಕ್ಕಪೇಟೆ ಬೆಂಗಳೂರು ಸಿಟಿ.

ಅಲ್ಪ ಬೆಲೆಗೆ ಉತ್ತಮ ಪುಸ್ತಕಗಳು.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಷನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ

ಅಪೂರ್ವ ಪುಸ್ತಕಗಳು

ಎಲ್ಲರಲ್ಲಿಯೂ ಇರಬೇಕಾದ್ದು ಜಮಾ ಖರ್ಚಿನ ಪದ್ಧತಿ 12 ಆಣೆ ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿಸುತ್ತದೆ.

ಆಂಗ್ಲಭಾಷಾ ಪ್ರಕಾಶಿಕಾ ಐದು ಭಾಗವು ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ರೂ 1—8—0 ಇದನ್ನು ಗುರುವಿನಂತೆ ಭಾವಿಸಿ

ವೈದ್ಯಸಾರ ಸಂಗ್ರಹ ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ ರೂ 3

ಆರ್ಯಕೀರ್ತಿ	0–10—0	ಶುಕಸಪ್ತತಿ	2—0—0
ಹನುಮದ್ವಿಲಾಸ	0—8—0	ಕುಣಿಗಲು ರಾಮಾಶಾಸ್ತ್ರಿಗಳವರ ಚರಿತ್ರೆ ...	1—0—0
ಶಾಕುಂತಲ ನಾಟಕ	0—8—0	ಸುಮತಿ ಮದನ ಕುಮಾರರ ಚರಿತ್ರೆ I ...	0—8—0
ಸ್ತ್ರೀ ಧರ್ಮನೀತಿ	0—8—0	,, II ...	0—7—0
ಶೋಧನೆ	0—8—0	ಶಿವಗೀತೆ	0—6—0
ಚಂದ್ರಕಳಾ ..	0—4—0	ಪಾಕಶಾಸ್ತ್ರ	0—8—0
ಕಲಾನಾಥ	0—6—0	ಸನಾತನಧರ್ಮ ದೀಪಿಕೆ ...	1—0—0
ಶಿವಾನಂದಲಹರಿ	0—6—0	ಬಾಲರಾಮಾಯಣ ...	0—4—0
ಪ್ರಶ್ನೋತ್ತರ ಲೆಖ್ಖಬೋಧಿನಿ	1—4—0	ಕಥಾಮಂಜರಿ ...	0—6—0
ವಿಷವೃಕ್ಷ	1—4—0		
ದುರ್ಗೇಶ ನಂದಿನಿ ...	1—4—0		
ಮುದ್ರಾಮಂಜೂಷ ...	1—8—0		

ದುಷ್ಪ ಚತುಷ್ಟಯ, ನರಬಲಿ, ನೀಲಾಂಬರಿ ವಿಷಮುಹೂರ್ತ, ಮಾಯಾವಿಯ ಅತ್ಯಾಚಾರ. ಪ್ರತಿಯೊಂದು ಪ್ರತಿಯೂ 2 ಆಣೆ

ವಿಳಾಸ:— ವಿದ್ಯಾಸಾಗರ ಬುಕ್ ಡಿಪೋ,
[illegible] ಬೆಂಗಳೂರು ಸಿಟಿ.

ಕೊಡ್‌ಲಿವರ್ ಎಣ್ಣೆ.

ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಸಿಕ್ಕುವುದು ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶರೀರಕ್ಕೆ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾನೇ ಅವಲಂಬಿಸಿರುತ್ತದೆ. ಅಪ್ಪ ಕೊಡಲೀವರ್ ಎಣ್ಣೆಯೂ ಅದರಿಂದ ಸಿಕ್ಕುವ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗದಿರುವುದರಿಂದ ಅವನ್ನು ಸೇವಿಸುವದರಿಂದ ಅಪಕಾರವು ಅನುಸರಿಸುತ್ತದೆ. ಅವರೆ ಅಂತಹ ಅಪಾಯಗಳಾದರು ಹೇನವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಪೋಟರ್ ಬರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಪಚನ ಸುಲಭವಾದ ವಿಧದಿಂದ ಸೇರಿಸಲ್ಪ ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇದರ ಉತ್ತಮ ಫಲವು ಆಶ್ಚರ್ಯಕರವಾಗಿದೆ. ಕ್ಷಯ ಶ್ವಾಸಕಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಅಗತ್ಯವಿದೆಯೋ ಅಂತಹ ಶ್ವಾಸಕಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲ್ಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಪೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೇ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ದೊರಿಲ್ಲದಿರುವದು ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಬರೆಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0 ಅರ್ಧ ಬಾಟಲಿಗೆ 1—12—0

ದಿ ಊಲನ್ ಮಾರ್ಟ್ ಮಂಗಳೂರು,
ದಕ್ಷಿಣ ಕನ್ನಡಾ.

ಮರೆಯ ಬ್ಯಾಡಿರಿ. ಮರೆಯ ಬ್ಯಾಡಿರಿ

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮಿಷನ್ ದೊರಿಯುವದು.

ಅಪಾಯ ರೋಮನಾಶಕಾರಿ ಈ ಸಾಬೂ ನನ್ನು ರೋಮ ಇರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು

... ನೋವು ಬಾಧೆಗಳಿಲ್ಲವು. ... ಉಪಯೋಗಿಸಿದರೆ ಗೊತ್ತಾಗುವದು ... ಮಾಡಿರಿ

... ಪೆಟ್ಟಿಗೆ ಒಂದಕ್ಕೆ ಕ್ರಯ ಆಣೆ 14

... ಕೊಳ್ಳುವವರಿಗೆ ರೂ. 1-10 ... ಆಣೆ 4 ... ವ್ಯಾಪಾರಿಗಳಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ

ವಿಳಾಸ — ವಿ ಎ ಎಸ್ ಪಾಣಿ ಕಂಪೆನಿ.

ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

V A S. PANI,
No 3, Erulappen Street, Madras.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

... ಡಬ್ಬಿ 1ಕ್ಕೆ 3—0—0

... ಬುಡ್ಡಿ 1ಕ್ಕೆ —0—0

... ಬಾಟ್ಲಿ 1ಕ್ಕೆ 0—12—0

... 1ಕ್ಕೆ 1—0—0

... 4—0—0

... 3—0—0

... 40 ದಿವಸಗಳ ... ಔಷಧಕ್ಕೆ 5—0—0

...

ಎಮ್ ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಡಾಕ್ಟರ್ ನವರತ್ನರ ಪಕ್ಕಾ ಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,
ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಕೆಲವು ದಿವಸಗಳಲ್ಲಿಯೇ ಪ್ರಕಾಶಿತವಾಗುವುದು ತ್ವರೆಮಾಡಿರಿ

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ತಿದ್ದಿ ಬರೆದ ಮತ್ತು ಪರಿವರ್ಧಿತ ಮರಾಠಿ ನಾಟಕವು ಇನ್ನು ಕೆಲವು ದಿವಸಗಳಲ್ಲಿಯೇ ತಯಾರಾಗುವುದು ಈ ನಾಟಕದ ಕಥಾನಕವು ಚಲೋದಾಗಿಯೂ ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕಜನರು ಈ ಸಂದರ್ಭವನ್ನು ಬಿಡಲಾಗದು. ಮುದ್ರಣವು ಅಂದವಾಗಿದೆ! ಬೆಲೆಯು ಬಹಳೇ ಕಡಿಮೆ! ಮಂಗಳೂರಲ್ಲಿಯೇ ಹೆಚ್ಚಿನ ಪ್ರತಿಗಳು ಖರ್ಚಾಗುವ ಸಂಭವವು ಇರುವುದರಿಂದ, ಹೊರ ಊರಿನವರು ತ್ವರೆಮಾಡಿರಿ! ಬೆಲೆ ೧೦ ಆಣೆ. ಟ. ಹಾ. ೧ ಆಣೆ. ಪುಸ್ತಕವು ವಿ. ಪಿ. ಯಾಗಿ ಕಳುಹಿಸಲಾಗದು.

ಕಲ್ಯಾಣಪುರ ಮಂಗೇಶರಾವ್,
ಮಂಗಳೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ ಜವಳಿ ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, ಬೆಳ್ಗಾಂ, ಸೇಲಂ, ನಾರಾಯಣವನಮ್, ನಸ್ರಾತ್‌ಪೇಟೆ, ಆರ್ಣಿ, ಕುಂಭಕೋಣ, ತಿರುಚಿನಾಪಳ್ಳಿ, ಚಿದಂಬರ, ಕೊರ್ನಾಡ, ಮಧುರೆ, ಕೊಯಂಬುತ್ತೂರು, ಡಿಂಡಿಗಲ್, ಧಂಕಟಗಿರಿ, ಪುಲ್ಲಿಂಪೇಟೆ, ಬನಾರೀಸ್, ಪೂನಾ ಮತ್ತು ಕಲ್ಕತ್ತಾ ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ ರೇಷ್ಮೆ, ಜರಿ, ಸಾದಾ ಸೀರೆಗಳು, ವಲ್ಲಿಗಳು, ಧೋತ್ರಗಳು, ಎಲವಸ್ತ್ರಗಳು ವಗೈರೆ ದೊರಕುವವಲ್ಲದೆ ಮದ್ರಾಸು ಮತ್ತು ಮುಂಬಯಿಯಲ್ಲಿ ತಯಾರಾಗುವ ಎಲ್ಲ ವಿಧದ ನಮ್ಮ ವ್ಯಾಪಾರಕ್ಕೆ ಸಮ್ಮಂಧಪಟ್ಟ ವಸ್ತ್ರಗಳೆಲ್ಲವು ನಮ್ಮಲ್ಲಿ ಯೋಗ್ಯವಾದ ಕ್ರಯಕ್ಕೆ ದೊರಕುತ್ತವೆ.

...

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು? ಇಂತಹ ಕೇಶರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾವುದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಅಗತ್ಯದ ಸಹಕಾರಿಯಾಗಿರುತ್ತದೆ.



ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿ[illegible] ಎಂದಿಗೂ ಜಗುಳಿ ಬಿದ್ದು ಹೋಗಲಾರವು, ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು. ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ಕಾಯವನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದ ಬಾರಿ ಈ "ಕಾಮಿನಿಯಾ ತೈಲ"ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒವ್ ಮೆರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.

ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಒಂಡಿಗೇರಿ, [illegible] ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೆ ವಿ. ಪಿ. ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ 1-0-0, ಅ. ವೆ. 0-4-0 ಬೇರೆ, 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ

ಸೂಚನೆ — ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಹೆಸರಿಯಿಂದ ತಮಗೆ ಅಷ್ಟಲ್ಪ ನಫೆಯೇ ದೊರಕುತ್ತದೆಂದು ನೀವು "ಕಾಮಿನಿಯಾ ತೈಲ"ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಒಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ, ಅವರಲ್ಲಿ ಅದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜೆಂಟರಿಂದಲೇ ಕೊಂಡುಕೊಳ್ಳುವಷ್ಟು ದುಜರಬಾನ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಕೊಳ್ಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ.

ಅತೀ ಮನೋಹರವಾದ ಸುರಭಿಯು!

ಒಟ್ಟೋ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು ಚೆನ್ನಾಗಿ, ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಆಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಚೀಲಿಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ಹನಿಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾಟಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೋ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳೆಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೋ ದಿಲ್ ಬಹಾರ್‌ನ [illegible] ರಾಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ ಪರ್ಲ್ಸ" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.



ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ನಾಶಮಾಡುತ್ತದೆ. ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ, ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಶ್ರಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೊಳಿಸಲಾಪ ಪದಾರ್ಥಗಳು ಇರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ದಫ್ತರದಾರರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ತೆರನಾಗಿ ಆವಶ್ಯಕವಾಗಿರುತ್ತವೆ.

ವಾತಕಾಲದಲ್ಲಿ ವಶ [illegible] ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳು ಗುಣಕಾರಿಯೆಂಬುದು ನಿಸ್ಸಂಶಯವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗ[illegible] ಸ್ನಾನವನ್ನು [illegible] ಮಾಡಿ, ರೋಗದಿಂದ ಅಳಿದ ದೇಹಭಾಗ[illegible] ಇವು ಮರಳಿ ಚೇತನಗೊಳ್ಳುವುವು. ರೋಗದಿಂದ ಮುರಿದು ಹೋದ ಅಥವಾ [illegible] ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೊಳಿಸುವುವು. ಈ [illegible] ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವ [illegible] ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ಸರ್ವಾಂಗಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೂಡಿ, ದೇಹದಲ್ಲಿ ಧೈರ್ಯ, ಬಲ, [illegible], ಇವುಗಳು ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ [illegible] ಲಕ್ಷ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ಜಾಡಣಿ"ಯು ಕ್ರಮವನ್ನು ಅನುಸರಿಸುತ್ತದೆ, ಮುಖವು ಶುದ್ಧವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ, ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಭೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ, ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ, ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ, ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ, ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2 0 0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು

ದಿವಾಕರ ಕೃಷ್ಣಾಜಿ ದಾಹರೀ, ರಾ. ಪಾರಸಾವಣೀ, ತಾ, ರಾಮಟೀಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—"ತಾವು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮುಹಮ್ಮದ ಭಾಯಿ ಇಬ್ರಾಹಿಮ್ ಪಾಟೇಲ್, ಪನವೇಲ್—"ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಅವನ್ನು ಪುನಃ ರವಾನಿಸಿರಿ."

4 ವಿ. ಆರ್. ಚಾಕ್ಕೊ, ಡಿಸ್ಟ್ರಿಕ್ಟ್ ಕೋರ್ಟ ವಕೀಲು, ಕೊಟ್ಟಯಮ್, ತ್ರಾವಣಕೋರ್ ರಾಜ್ಯ—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ ತರಿಸಿಕೊಂಡಿದ್ದೆ. ಅವುಗಳನ್ನು [illegible] ನಾನು ಒಳ್ಳೇ ಲಾಭವನ್ನು ಪಡೆದೆನು. ಇನ್ನೆರಡು [illegible]

5 [illegible] ನರಸಿಂಗರಾವ್, [illegible]—"ಪ್ರೊ. ಜೇಮ್ಸರ [illegible] ಗುಣವನ್ನು ಹೊಂದಿರುವದರಿಂದ, [illegible]

THE ANGLO INDIAN DRUG & CHEMICAL COMPANY, 16 MARKET BOMBAY 2.

[illegible] ಏಜಂಟರು: [illegible] ಮಂಗಳೂರು [illegible]

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

ESTABLISHED JULY 1906.

1906ನೇ ಇಸವಿ ಜುಲಾಯಿ ತಿಂಗಳಲಿ ಸ್ಥಾಪಿಸಲ್ಪಟ್ಟಿತು.

Authorised Capital Rs	300,000—0—0
Issued Capital	225,000—0—0
Subscribed Capital ..	217,400—0—0
Paid up Capital .. .	192,400—0—0
Deposits	486,564—4—2
Reserve Fund .. .	27,590—12—0

Besides the uncalled capital of Rs 25,000/ 25% of the net profits are added annually to the Reserve Fund. Rs 21,685/ have been invested in Government Paper of the face value of Rs 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs 50/ and above in multiples of Rs 5/ received for 3, 6, 12 and 24 months @ 4, 4½, 5 and 5½% respectively Terms on application

Short-notice Deposits requiring one week's notice of withdrawal after one month received @ 2½% per annum

Current Deposit Account opened free of charge

Savings Bank Account opened for any sum not less than 4 As and multiples thereof and interest paid @ 4½%.

Loans granted on proper securities and pledges

Sealed Parcels for safe custody received on a moderate charge

Canara Bank Ltd,
Mangalore, 1st October 1934

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	217,400—0—0
ಆಗತ ಮೂಲ ಧನವು ,, ...	192,400—0—0
ರೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	486,564—4—2
ರಕ್ಷಿತ ದನವು	27,590—12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು ಈ ವಿಷಯ ಇತರ ವಿಶೇಷಮಾಹಿತಿ ಬಗ್ಗೆ ಬೇಂಕಿನ ಸೆಕ್ರೆಟರಿಗಳಿಗೆ ಬರಕೊಳ್ಳಬಹುದು

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಹೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ, ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ, ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯ ಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸಾನವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, [illegible]ರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರೆದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಒಂದಕ್ಕೆ ರೂ. ೧—೦—೦ ಟಪ್ಪಾಲು ಖರ್ಚು ೦—೩—೦.

[illegible]

ಮುಳಿಯಿಲ್‌ರವರ ದಿವ್ಯೌಷಧಗಳು.

ಮಸ್ತಕಾಮೃತ ತೈಲ—ಕುಪ್ಪೆ 1ಕ್ಕೆ ಕ್ರಯ 10 ಆಣೆ. ಇದು ಎಲ್ಲಾ ತರದ ಶಿರೋರೋಗ ಇರುವವರಿಗೂ ನಿದ್ದೆ ಇಲ್ಲದವರಿಗೂ ಮೆದುಳಿನ ಬಲಹೀನತೆ ವಗೈರೆಗೂ ಅತ್ಯುತ್ತಮವಾದ ತೈಲ.

……………ಮಸ್ತಕಾಮೃತ ತೈಲವನ್ನು ಕಳೆದ ಐದು ವರುಷಗಳಿಂದ ಉಪಯೋಗಿಸಿಕೊಳ್ಳುತ್ತಿರುವುದರಿಂದ ನನ್ನ ಮುದಿ ಮೆದುಳು ಯೌವ್ವನ ಪ್ರಾಯದಲ್ಲಿರುವುದು. ಈ ದಿವ್ಯ ತೈಲ ಹೊರತಾಗಿ ವಿನಹಾ ನಾನು ಕೆಲಸಮಾಡಲಾರೆನು; ನನ್ನ ನೇತ್ರೇಂದ್ರಿಯಗಳು ವಿಕಸಿಸವು.

ರೆವೆರೆಂಡ್ ಇ. ಸೋನ್ಸ್,
ಮುಲ್ಕಿ.

ತಾ. 15—4—13.

ಮುಳಿಯಿಲ್ಸ್ ಹೇರ್ ಓಯ್ಲ್—ಕ್ರಯ 12 ಆಣೆ. ಕೂದಲಿಗೆ ಅಮೃತದಂತಿರುವ ನಿಮ್ಮ ಕೇಶ ತೈಲಕ್ಕಾಗಿ ನಿಮ್ಮನ್ನು ಬಹಳವಾಗಿ ವಂದಿಸುತ್ತೇನೆ. ಇನ್ನೊಂದು ಕುಪ್ಪಿ ವಿ. ಪಿ. ಮೂಲಕ ರವಾನಿಸಿರಿ.

ಮಿಸಿಸ್. ವೈ. ಕುರಿಯಾನ್,
ಗ್ರೀನ್‌ವಿಲ್ಲಾ, ಕಲ್ಲಿಕೋಟೆ.

ತಾ. 23—5—13.

…………ಮುಳಿಯಿಲ್ಸ್ ಹೇರ್ ಓಯ್ಲ್ ಉಪಯೋಗಿಸಿದಂದಿನಿಂದ ನನ್ನ ತಲೆನೋವು ಗುಣವಾಗಿ ಉದುರುತ್ತಿದ್ದ ಕೇಶವು ಉದುರದೆ ನಿಬಿಡವಾಗಿ ಬೆಳೆದಿರುವವು. ಈ ಎಣ್ಣೆಯನ್ನು ನನ್ನ ಎಲ್ಲಾ ಸ್ನೇಹಿತರಿಗೆ ಶಿಫಾರಸು ಮಾಡುತ್ತಿದ್ದೇನೆ. ಇನ್ನೊಂದು ಡಜನ್ ಕುಪ್ಪಿಗಳನ್ನು ಆದಷ್ಟು ತ್ವರ್ಯದಲ್ಲಿ ರವಾನಿಸಿರಿ.

ಮಿಸ್. ಎಸ್. ಸೋನ್ಸ್,
ಸ್ಕೂಲು ಮಿಸ್ಟ್ರೆಸ್, ಮಂಗಳೂರು.

21ನೇ ಒಕ್ಟೋಬರ 1913.

ಚತುರ್ಥಿ ಜ್ವರ ಮಾತ್ರೆ—ಕ್ರಯ ಡಜನಿಗೆ 12 ಆಣೆ. ಎಲ್ಲಾ ತರದ ಛಳಿ ಜ್ವರಕ್ಕೆ ರಾಮಬಾಣದಂತಿದೆ.

ಚತುರ್ಥಿ ಮಾತ್ರೆಯನ್ನು ತಕ್ಕೊಂಡವರಿಗೆಲ್ಲಾ ಸಂಪೂರ್ಣ ಸೌಖ್ಯವಾಗಿದೆ. ಇದು ಒಳ್ಳೇ ಗುಣಕರವೆಂಬದಾಗಿ ಹೇಳುವರೆ ಅನುಮಾನವಿಲ್ಲ.

ಎ. ಪೊಕ್ಕು ಹೆಗ್ಗಡೆ,
ಕುಕ್ಕುಛೆ, ಕಾರ್ಕಳ.

ತಾ. 13—6—13.

ವಯೊಲೆಟ್ ಹೇರ್ ಓಯ್ಲ್—ಸುವಾಸನೆಯುಳ್ಳ ಈ ತೈಲದ ಪ್ರಯೋಗದಿಂದ ತಲೆವೇದನೆಯು ಗುಣಪಡುವದು. ಕಾಯಂ ವ ಕಠಿಣ ತರದ ತಲೆನೋವಿನಿಂದ ಪೀಡಿತರಾಗಿರುವವರಿಗೆ ನಿಮ್ಮ ವಯೊಲೆಟ್ ಹೇರ್ ಓಯ್ಲಿಗಿಂತ ಅತ್ಯುತ್ತಮ ತೈಲವು ಬೇರೆಯಿಲ್ಲ ಎಂದೆಣಿಸುತ್ತೇನೆ. ಅತಿ ಘೋರವಾದ ತಲೆನೋವಿನಿಂದ ಶ್ರಮೆಪಡುತ್ತಿದ್ದ ನನ್ನ ಹೆಂಡತಿಗೆ ನಿಮ್ಮಿಂದ ತಕ್ಕೊಂಡ 2 ಕುಪ್ಪಿ ಎಣ್ಣೆಯು ಅತಿರೇಕ ಸೌಖ್ಯವನ್ನುಂಟುಮಾಡಿರುತ್ತದೆ. ಅದಿಲ್ಲದೆ ಅವಳು ಇರಲಾರಳು. ಹೆಚ್ಚಿನ ರೋಗಿಗಳ ಪ್ರಯೋಜನಕ್ಕಾಗಿ ದೇವರು ತಮ್ಮ ಈ ಲೋಕೋಪಕಾರಿಯಾದ ಕೆಲಸವನ್ನು ಆಶೀರ್ವದಿಸಲೆಂಬದು ನನ್ನ ಪ್ರಾರ್ಥನೆಯಾಗಿದೆ.

M. JACOBI,
Hd. Clerk, CALICUT.

4—7—13

ವಿಳಾಸ:— **ಮುಳಿಯಿಲ್ ಎಂಡ್ ಸನ್ಸ್**, ಕಾಸರಗೋಡು, ದ. ಕ.

150 ಪುಟಗಳ ಪುಸ್ತಕವು.

ಉಚಿತವು.

ಆರೋಗ್ಯವನ್ನೂ ಶಾಶ್ವತ ಸುಖವನ್ನೂ ಹೊಂದುವದು ಸ್ವಾಭಾವಿಕವಾದ ಕೆಲವು ವಿಧಿಗಳನ್ನು ಅನುಸರಿಸುವದರಿಂದಲೇ ಉಂಟಾಗುವದು. ಈ ಉತ್ತಮವಾದ ಪುಸ್ತಕವು ಆರೋಗ್ಯಮಾರ್ಗವನ್ನುಂಟುಮಾಡಿ ಶರೀರ ಸೌಖ್ಯವನ್ನೂ, ದೃಢಗಾತ್ರವನ್ನೂ, ಆಯುರ್ವೃದ್ಧಿಯನ್ನೂ ಕೊಡುವದು. ಈ ಪುಸ್ತಕವು ಇನಾಮಾಗಿ ಕಳುಹಿಸಲ್ಪಡುವದು, ಇದಕ್ಕೆ ಅಂಚೆ ಹಾಸಲು ಕೂಡಾ ತಾವು ಕೊಡಬೇಕಿಲ್ಲ. ಬೇಕಾದವರು ಶೀಘ್ರವಾಗಿಯೇ ಬರೆಯಬೇಕು.

ವೈದ್ಯಶಾಸ್ತ್ರಿ ಮಣಿಶಂಕರ ಗೋವಿಂದಜೀ,
ಆತಂಕನಿಗ್ರಹ ಔಷಧಾಲಯ, 22, ಬ್ರಾಡ್ವೇ, ಮದ್ರಾಸ

ತಮ್ಮ ಏಜಂಟರು:— 1. ಮೆಸ್ಸರ್ಸ್. ರಫಯೆಲ್ ಎಂಡ್ ಕೊ., ದ್ರಿಬೊಬಿಲ್ಡಿಂಗ್
2. ಜುದಿಲಿ ಕೇಕ್ ಬಜಾರ್, ಬೆಂಗಳೂರು. ಮಂಗಳೂರು

MUSICAL MART
Kavi & Sons,
MANGALORE.

ತ್ವರೆ ಮಾಡಿರಿ! ತ್ವರೆ ಮಾಡಿರಿ!! ತ್ವರೆ ಮಾಡಿರಿ!!!

ಇಂಡಿಯಾ ದೇಶದ ಹವಾಗುಣಕ್ಕನುಸಾರವಾಗಿ, ಒಳ್ಳೇ ಸ್ವರಜ್ಞಾನಿಗಳಾದ ಕಾರಾಗಿರಿಯವರಿಂದ ನಾಜೂಕಾಗಿ ತಯಾರಿಸಲ್ಪಟ್ಟ ಹಾರಮೋನಿಯಮ್‌ಗಳು ನಮ್ಮಲ್ಲಿ ಬಹಳ ಸುಲಭ ಕ್ರಯಕ್ಕೆ ದೊರಕುತ್ತವೆ. ಬೇಂಡಿನ ವ ಇತರ ಗಾಯನ ಸಾಮಗ್ರಿಗಳನ್ನು [illegible] ಕಳುಹಿಸಿಕೊಡುವೆವು. ಹೇಂಡ್ ಹಾರ್ಮೋನಿಯಮ್ [illegible] ರೂ. 25ರಿಂದ 32ರ ವರೆಗೂ [illegible] ರೂ. 30ರಿಂದ ರೂ. 45 [illegible] ರೂ. 70, 75, 106.

[illegible]

ಹೊಸ ಗ್ರಂಥಗಳು

ಬೆಲೆ ಕಡಿಮೆ! ಓದುವದಕ್ಕೆ ಆನಂದ!!

ಮಂಜುಘೋಷಾಶೃಂಗಾರಾದ್ಭುತ ಕಥೆ.

ಇದು ಶೃಂಗಾರ ರಸಭರಿತವಾದ ಕಾದಂಬರಿ ಕಥೆಯು. ಇದರಲ್ಲಿ ಮಂಜುಘೋಷೆಯು ತನಗೆ ಎಂಥ ಸಂಕಟ ಬಂದರೂ ಸಹ ಎದೆಗುಂದದೆ ತನ್ನ ಪತಿಯಾದ ವಸಂತ ಮಾಧವನೊಡನೆ ವಿಮಾನದಲ್ಲಿ ಸಂಚರಿಸಿ, ಆ ಮೇಲೆ ಪತಿಯನ್ನಗಲಿ, ಪುತ್ರನನ್ನಗಲಿ, ಅತಿ ಕಷ್ಟಕ್ಕೆ ಗುರಿಯಾಗಿ, ಜಗನ್ನಿಯಂತನ ಪಾದಾರವಿಂದದಲ್ಲಿ ಭಕ್ತಿಯನ್ನಿಟ್ಟು ವರ್ತಿಸಿದ್ದರಿಂದ ಪರಮೇಶ್ವರನು ಕರುಣಿಸಿ ಪತಿ, ಪುತ್ರ, ಮಾತಾಪಿತೃಗಳ ದರ್ಶನಮಾಡಿಸಿದನು ಎಂಬ ವಿಷಯ ಗರ್ಭಿತವಾದದ್ದಿದ್ದು ಕೇವಲ ತಿಳಿಗನ್ನಡದಿಂದ ಮುದ್ರಿಸಲ್ಪಟ್ಟಿದೆ. ಇದರ ಪ್ರಥಮ ಮುದ್ರಣವು ಮೂರೇ ತಿಂಗಳಲ್ಲಿ ಮುಗಿದುಹೋದುದರಿಂದ ಇದರ ಗುಣವು ಎಷ್ಟರ ಮಟ್ಟಿಗೆ ಇರುವದೆಂಬದು ಓದುವದರಿಗೆ ತಾನೇ ಕಂಡುಬರುವದು ಈಗ ದ್ವಿತೀಯ ಮುದ್ರಣವು ಬೆಲೆಗೆ ಸಿದ್ಧವಾಗಿದೆ. ಕ್ರಯ ೮ ಆಣೆ.

ಹಾತೀಮತಾಯಿ ಕಥೆ.

ಇದು ಕೇವಲ ಪರೋಪಕಾರ ದಿಗ್ದರ್ಶನ ವಿಷಯಕವಾದದ್ದಿದ್ದು ಪ್ರತಿಯೊಬ್ಬನು ಅನುಕರಣೆಯ ಮಾಡಲಿಕ್ಕೆ ಯೋಗ್ಯವಾಗಿದೆ. ಇದರಲ್ಲಿ ಕಥಾ ನಾಯಕನಾದ ಹಾತೀಮನು, ಕಥಾನಾಯಕೀಯಾದ ಹುಸೇನಬಾನು ಎಂಬವಳ ಏಳು ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಹೇಳಿ, ಅವಳನ್ನು ಮುನೀರಷಹನೆಂಬ ರಾಜಪುತ್ರನಿಗೆ ವಿವಾಹಮಾಡಿಸಿದನೆಂಬ ಸಂದರ್ಭವು ವರ್ಣಿಸಲ್ಪಟ್ಟಿದೆ. ಈ ಕಥೆಯು ಹಿಂದೂಸ್ಥಾನಿ, ಮಹಾರಾಷ್ಟ್ರ, ಭಾಷೆಗಳಲ್ಲಿ ಪ್ರಚುರವಾಗಿ ಲಕ್ಷಾವಧಿ ಪ್ರತಿಗಳು ಖರ್ಚಾಗಿ ಹೋದದ್ದನ್ನೂ, ಹೋಗುತ್ತಿರುವದನ್ನೂ ಕಂಡು, ಕನ್ನಡ ಭಾಷೆಯಲ್ಲಿ ಭಾಷಾಂತರ ಮಾಡಿಸಿ, ವಿಕ್ರಯಕ್ಕೆ ಸಿದ್ಧಮಾಡಲ್ಪಟ್ಟಿದೆ. ಕ್ರಯ ೮ ಆಣೆ.

ವಿಷ್ಣುಶರ್ಮ ಪಂಚತಂತ್ರ ಕಥೆಗಳು.

ಈ ಗ್ರಂಥವು ಸಂಸ್ಕೃತ ಭಾಷೆಯಲ್ಲಿ ಸರ್ವಾಂಗ ಸುಂದರವಾಗಿದ್ದು, ಅದರಂತೆಯೇ ತಿಳಿಗನ್ನಡದಲ್ಲಿ ಮಿತ್ರಭೇದ, ಸುಹೃಲ್ಲಾಭ, ಸಂಧಿವಿಗ್ರಹ, ಲಬ್ಧನಾಶ, ಅಸಂಪ್ರೇಕ್ಷ್ಯಕಾರಿತ್ವವೆಂಬ ಐದು ತಂತ್ರಗಳನ್ನು ಒಳಗೊಂಡಿದೆ. ಇದರಲ್ಲಿ ವಿಷ್ಣುಶರ್ಮನಿಂದ ಬೋಧಿತರಾದ ಈರ್ವರು ರಾಜಪುತ್ರರು ಸನ್ಮಾರ್ಗವರ್ತಿಗಳಾದ ಸಂಗತಿಯನ್ನೂ ಅಲ್ಲಲ್ಲಿ ಕಥಾ ಸಂದರ್ಭಾನುಸಾರವಾಗಿ ಹೇಳಿದ ನೀತಿಪರವಾದ ಸಂಸ್ಕೃತ ಶ್ಲೋಕಗಳೂ, ಅವುಗಳ ಟೀಕೆಯು ಸಹಿತವಾಗಿದ್ದು ಸುಬೋಧವಾಗಿರುವ ಉಪಕಥೆಗಳನ್ನೂ ಒಳಗೊಂಡದ್ದಾಗಿದೆ. ಈ ಗ್ರಂಥ ವಾಚನದಿಂದ ಪ್ರತಿಯೊಬ್ಬ ಮನುಷ್ಯನು ಸನ್ಮಾರ್ಗವರ್ತಿಯಾಗುವನೆಂದು ನಾವು ಖಂಡಿತವಾಗಿ ಹೇಳುತ್ತೇವೆ. ಈ ಗ್ರಂಥವು ಕನ್ನಡ ಭಾಷೆಯಲ್ಲಿ ನೂತನವಾಗಿ ಪ್ರಕಟವಾಗಿದೆ. ಕ್ರಯ ೮ ಆಣೆ.

ಮೋಹನಾಂಗಿಯ ಕಥೆ.

ಈ ಕಥೆಯು ವಾಚಕರು, ಓದಿದರೆ ಉಲ್ಲಾಸವನ್ನುಂಟುಮಾಡುತ್ತದೆ. ಮೋಹನಾಂಗಿಯು ತನ್ನ ಪಾತಿವ್ರತ್ಯವನ್ನು ಕಾಪಾಡಿಕೊಳ್ಳುವದರ ದೆಸೆಯಿಂದ, ತನಗೆ ಎಂಥಾ ವಿಪತ್ತು ಬಂದಾಗ್ಯೂ ಭಗವಂತನ ಅನುಗ್ರಹದಿಂದ ಪಾರಾಗಿ ತನ್ನ ಭರ್ತನನ್ನು ಸೇರಿದಳು. ಇದರಿಂದ ಸ್ತ್ರೀಯರಿಗೂ ಪುರುಷರಿಗೂ ಸಹ ನೀತಿಯನ್ನುಂಟುಮಾಡುವುದು. ಕ್ರಯ ೪ ಆಣೆ.

× × ನಮ್ಮ ಬುಕ್ ಡಿಪೋದಲ್ಲಿ ಕನ್ನಡ ವೇದಾಂತ ಗ್ರಂಥಗಳು, ಕಾವ್ಯ ಗ್ರಂಥಗಳು, ಶಿವಪುರಾಣಗಳು, ಚಾತುರ್ಯವಾದ ಕಥೆಗಳು, ಜೋತಿಷ್ಯ ಗ್ರಂಥಗಳು, ವೈದ್ಯಗ್ರಂಥಗಳು, ಯಕ್ಷಗಾನ ಗ್ರಂಥಗಳು, ವೀರಶೈವ ಮತ ಗ್ರಂಥಗಳು, ನಾಟಕಗಳು, ಕನ್ನಡ ಸಂಸ್ಕೃತ ಗ್ರಂಥಗಳು ಇವುಗಳಲ್ಲದೆ ಸ್ಮಾರ್ತ, ವೈಷ್ಣವ, ಬ್ರಾಹ್ಮಣರಿಗೆ ಉಪಯೋಗವಾದ ಗ್ರಂಥಗಳು ಇನ್ನೂ ಇತರ ಮತಸ್ಥರಿಗೆ ಉಪಯೋಗವಾದ ಗ್ರಂಥಗಳು ಇನ್ನು ಅನೇಕ ವಿಧವಾದ ಕನ್ನಡ ಗ್ರಂಥಗಳು ನಮ್ಮಲ್ಲಿ ದೊರೆಯುತ್ತವೆ. ಬೇಕಾದವರು ನಮ್ಮ ಪುಸ್ತಕಗಳ ಕ್ರಯದ ಪಟ್ಟಿ (ಕ್ಯಾಟಲಾಗ್)ಗೆ ಬರೆದರೆ ಉಚಿತವಾಗಿ ಕಳುಹಿಸುವೆವು.

ನಮ್ಮ ವಿಳಾಸ:—

ಶ್ರೀ ಶಿವಲಿಂಗಂಶೆಟ್ಟಿ ಕಂಪೆನಿ,
ಕರ್ನಾಟಕ ಬುಕ್ ಡಿಪೋ ಏಜಂಟ್, [illegible]

ವಿವಾಹ ಮಂಟಪ.

ನಮ್ಮ ಕೇಕು ಬಿಸ್ಕುಟುಗಳಿಲ್ಲದ ಮದುವೆ ಚಪ್ಪರವಿಲ್ಲ. ನಮ್ಮ ಬಿಸ್ಕುಟುಗಳೂ ಕೇಕುಗಳೂ ವಿಲಾಯತಿ ಮಾದರಿಗನುಸಾರವಾಗಿ [illegible] ಸರ್ವರಿಂದಲೂ ಪ್ರೋತ್ಸಾಹವನ್ನು ಪಡೆದಿದೆ. ಕನ್ನಾನೂರು, ಮೈಸೂರು, ನಾಗಪುರ, ವಿಶಾಖಪಟ್ಟಣ, ಲಾಹೋರು ಮೊದಲಾದ [illegible] ಪದಕಗಳನ್ನು ಪಡೆದ ನಮ್ಮ ಬಿಸ್ಕುಟುಗಳನ್ನು [illegible]!

[illegible] ಎಂಡ್ ಸನ್ಸ್,
[illegible]

ಸುಗಂಧ ವಿಲಾಸ.

ಶುಭಶೋಭನಾದಿ ಲಗ್ನ ಮುಹೂರ್ತಗಳಲ್ಲಿ ಅವಶ್ಯವಾಗಿಯೂ ರಸಿಕರಿಗೆ ಬಲು ರಮ್ಯವಾಗಿಯೂ ಆರೋಗ್ಯಾಭಿವೃದ್ಧಿಗೆ ಅಗತ್ಯವಾಗಿಯೂ ಇರುವ ಮೈಸೂರು ಸುಗಂಧ ದ್ರವ್ಯಗಳೂ ಸೆಂಟುಗಳೂ, ನಮ್ಮಲ್ಲಿ ಅತಿ ನಾಜೂಕಿನಿಂದ ತಯಾರಾಗಿ ಮಹನೀಯರ ಉದಾರಾಶ್ರಯವನ್ನು ನಿರೀಕ್ಷಿಸಿಕೊಂಡಿರುವವು.

ದರ್ಬಾರ್ ಬತ್ತಿ	ಸೇರು 1ಕ್ಕೆ		12-0-0	ಅರಗಜ	ತೊಲೆ 1ಕ್ಕೆ		2-0-0
ಅಂಬರ್ ಬತ್ತಿ	,,	,,	6-0-0	B ಅರಗಜ	,,	,,	1-0-0
ಕಸ್ತೂರಿ ಬತ್ತಿ	,,	,,	3-0-0	ಕಸ್ತೂರಿ ಬಿಲ್ಲೆ	,,	,,	2-0-0
ಜವಾಜಿ ಬತ್ತಿ	,,	,,	2-0-0	ಜವಾಜಿ ಬಿಲ್ಲೆ	,,	,,	1-0-0
ಸೃಣಗಿನ ಬತ್ತಿ	,,	,,	1-8-0	ಕೇಸರಿ ಬಿಲ್ಲೆ	,,	,,	0-8-0
ಪನ್ನೀರ್ ಬತ್ತಿ	,,	,,	0-12-0	ತಾಂಬೂಲ ರತ್ನ ಸೀಸೆ 1ಕ್ಕೆ			0-4-0
ಮಸಾಲಾ ಬತ್ತಿ	,,	,,	0-6-0	ದಶಾಂಗ ಡಬ್ಬಿ 1ಕ್ಕೆ			0-4-0

ಮ್ಯಾನೇಜರ್, "ಸುಗಂಧವಿಲಾಸ ಮಂಗಳೂರು

ನಮ್ಮ ಏಜಂಟರು. ಕೆ. ಅಣ್ಣಪ್ಪ ನ್ಯಾಕ, ಬುಕ್‌ಸೆಲ್ಲರ್ ವಿಟ್ಲ. ದಕ್ಷಿಣ ಕನ್ನಡ.

THE BOMBAY LIFE ASSURANCE CO. LTD.

Estabhedlls 1908).

HEAD OFFICE BOMBAY.

3½ PER CENT GOVERNMENT SECURITIES OF THE FACE VALUE OF ONE LAKH OF RUPEES ALREADY DEPOSITED WITH THE GOVERNMENT OF INDIA.

Extract from the Actuary's Report:—

"There can be no doubt that the Policy Contracts are well secured".

Chairman:—The Hon'able Mr. Lalubhai Samaldas, Justice of the Peace, Director of the Bank of India Ltd., The Tata Hydro Electro Co. Ltd., The Tata Mills Co. Ltd., Managing Agent of Messrs. Marsland Price & Co. Ltd., and fellow of the Bombay University.

Actuary:—George King Esq. F. F. A., F. I. A., London.)

Medical Referee:—Dr. R. Row, M. D. D. Sc. London.)

Managing Director:—Framrose R. Joshi, Justice of the Peace, The Honorary Presidency Magistrate & etc.

Wanted Agents on very liberal commission.

Apply for full particulars to—**Kochikar Bros.; Udipi,** Chief Agents for South Canara, Malabar, Travancore and Cochin.

ಮುಂಬಯಿ ಲೈಫ್ ಇನ್ಸುರೆನ್ಸ್ ಕಂಪೆನಿ. ಲಿಮಿಟೆಡ್.

(1908ರಲ್ಲಿ ಸ್ಥಾಪಿಸಲ್ಪಟ್ಟಿತು).

ಪ್ರಧಾನ ಆಫೀಸು: ಮುಂಬಯಿ.

ಒಂದು ಲಕ್ಷ ರೂಪಾಯಿಗಳ ಮೌಲ್ಯದ ಸರಕಾರದ ಭದ್ರತಾಪತ್ರಗಳ ಠೇವಣಾತಿಯು ಸರಕಾರದಲ್ಲಿ ವಿಮೆದಾರರ ಭದ್ರತೆಗಾಗಿ ಇಡೋಣಾಗಿರುವುದು.

"ವಿಮೆದಾರರ ಬಾಧ್ಯತೆಗಳ ಬಗ್ಗೆ ಪೂರ್ಣ ಮತ್ತು ಯೋಗ್ಯವಾದ ಜವಾಬ್ದಾರಿ ಇರುವುದು" ಎಂತ ಲೆಕ್ಕಪರಿಶೋಧಕರು ಯಾ ಎಕ್ಚುವರಿಗಳು ಕಂಪೆನಿ ಲೆಕ್ಕಗಳನ್ನು ಶೋಧಿಸಿ ಹೇಳಿರುವರು.

ಅಧ್ಯಕ್ಷರು:— ಮಾನ್ಯಮಾನಪಟ್ಟ ಲಲ್ಲುಭಾಯಿ ಸಾಮಲದಾಸ್, ಜಸ್ಟೀಸ್ ಆಫ್ ದಿ ಪೀಸ್, ಡಿರೆಕ್ಟರ್ ಇಂಡಿಯಾ ಬ್ಯಾಂಕ್, ಟಾಟಾ ಹೈಡ್ರೋಲಿಕ್ ಮಾರ್ಸ್‌ಲೆಂಡ್ ಪ್ರ್ಯಾಸ್ ಮತ್ತು ಕಂಪೆನಿ, ಮತ್ತು ಮುಂಬಯಿ ಯುನಿವರ್ಸಿಟಿಯ ಫೆಲ್ಲೋಗಳವರು.

ಎಕ್ಚುಯುಯರಿ:—ಮಿ| ಜೋರ್ಜಕಿಂಗ್ ಎಫ್. ಎಫ್. ಎ. ಎಫ್. ಐ. ಎ. (ಲಂಡನ್)

ಮೆಡಿಕಲ್ ರಿಫರಿ:—ಡಾಕ್ಟರ್ ಆರ್. ರಾವ್ ಎಂ. ಡಿ. ಡಿ. ಎಸ್. ಸಿ. (ಲಂಡನ್).

ನಮ್ಮ ವಿಲೆವಾರಿಗಳಿಗೆ ಜಿಲ್ಲಾ ಕಲೆಕ್ಟರ್ ದೊರೆಗಳಿಂದ ಬಂದ ಹುಕುಮನ್ನು ಭಾಷಾಂತರ ಮಾಡಿ ಕೆಳಗೆ ಕೊಟ್ಟಿರುತ್ತೇನೆ. "ಮಂಗಳೂರು ಎಲಿಮೆಂಟರಿ ಶಾಲೆಗಳ ಉಪಾಧ್ಯಾಯರ ಸಂಘದ ಸೆಕ್ರೆಟರಿಯವರಾದ ಮೆ|| ಎಮ್ ಎ ಎಮ್ ಡಿ'ಸೋಜ ರಿಗೆ ತಿಳಿಯಪಡಿಸುವದೇನಂದರೆ:—ಅವರು ಮತ್ತು ಅವರ ಸಹ ಮೆನೇಜರು ಕಳು ಹಿಸಿದ ಮೆಮೊರಿಯಲ್ ಅರ್ಜಿಯನ್ನು ಇದ್ದ ಹಾಗೆ ಗವರ್ನರ್ ದೊರೆಗಳವರಿಗೆ ಕಳು ಹಿಸೋಣಾಗಿಯದೆ. ಅದರಲ್ಲಿ ಹೇಳಿದ ಸಂಗತಿಗಳನ್ನು ತಾವು ಪೂರ್ಣವಾಗಿ ಆಲೋಚಿಸುವೆವೆಂದು ತಿಳಿಸುವರೆ ಸಂತೋಷಪಡುವೆವೆಂತಲೂ, ಹೀಗಿರುವುದರಿಂದ ಅರ್ಜಿದಾರರು ತಮ್ಮ ಆಗಮನದ ಸಮಯ ಮೆಮೊರಿಯಲ್ ಅರ್ಜಿಯನ್ನು ಮೊಕ್ತಾ ಮುಂದಿಡುವ ಅವಶ್ಯವಿರುವುದಿಲ್ಲವೆಂತಲೂ ನಿಮಗೆ ತಿಳಿಸುವರೆ ಗವರ್ನರ್ ದೊರೆ ಗಳವರು ಹುಕುಂ ದಯಪಾಲಿಸಿದ್ದಾರೆ.

M. A. M. D'SOUZA,
Secretary,
EL T ASSOCIATION,
MANGALORE.

ಪತ್ರವ್ಯವಹಾರ

ಅಯ್ಯಾ,

"ರಾಜಾಪ್ರತ್ಯಕ್ಷದೇವತಾ" ಎಂಬ ನಮ್ಮ ಬ್ರಿಟಿಷ್ ಚಕ್ರವರ್ತಿಯರ ಆಳಿಕೆಯಲ್ಲಿ ಆಯಾಯ ಸ್ಥಾನಕ್ಕೆ ರಾಜಪ್ರತಿನಿಧಿಗಳೆನ್ನಿಸಿರುವ ಅಂದರೆ ಗ್ರಾಮ ಉದ್ಯೋಗಸ್ಥ (ಶ್ಯಾನಭಾಗ)ರು ತಮ್ಮ ತಮ್ಮ ಗ್ರಾಮಗಳನ್ನು ಬಿಟ್ಟು ಎಷ್ಟು ತಿಂಗಳು, ಎಷ್ಟು ವಾರ, ಅಥವಾ ಎಷ್ಟು ದಿವಸಗಳು ಇರಬಹುದೆಂಬದು, ಬಲ್ಲ ಶ್ಯಾನಭಾಗರುಗಳಾಗಲೀ ವ ಅವರ ಮೇಲು ಉದ್ಯೋಗಸ್ಥರಾಗಲೀ ಅಥವಾ ತಿಳಿದವರ್ಯಾರೇ ಆಗಲೀ ತಿಳಿಸಿದರೆ ಲೋಕಕ್ಕೆ ದೊಡ್ಡ ಉಪಕಾರವಾಗುತ್ತಿತ್ತು. ಕೆಲವು ವರ್ಷಗಳ ಹಿಂದೆ ಶ್ಯಾನಭಾಗ ಕೆಲಸವೆಂಬದು ಇಂತಿಂಥಾ ಮನೆತನದವುಗಳಿಂತ ಖಂಡಿತವಾಗಿದ್ದು ಆಯಾಯ ಗ್ರಾಮ ಗಳ ಶ್ಯಾನಭಾಗರು ಅಲ್ಲಲ್ಲೇ ವಸ್ತಿಮಾಡಿಕೊಂಡಿರುತ್ತಿದ್ದರು. ಆದರೆ ಈಗಿನ ಹೊಸ [illegible]

ಹಳ್ಳಿಗಳಲ್ಲಿ ನಿಲ್ಲುವ ಮನಸ್ಸೇ ಕಡಿಮೆ. ಮೇಲು ಉದ್ಯೋಗಸ್ಥರು ಗ್ರಾಮಕ್ಕೆ ಬರು ವಾಗ ತೋರಿಸಲಿಕ್ಕೆ ಮಾತ್ರವೊಂದು ಗೃಹವೊತಿದ್ದರಾಯಿತು. ಬಾಕಿ ಸಮಯವೆಲ್ಲಾ ಆ ಮನೆಯಲ್ಲಿ ಶ್ಯಾನಭಾಗರು ಹಾಜರಿಲ್ಲವೆಂಬದಾಗಿ ಬಾಗಿಲಲ್ಲಿರುವ ಬೀಗವು ತಿಳಿಸು ವುದು. ತಿಂಗಳಿಗೊಮ್ಮೆ ಲೆಖ್ಖಗಳನ್ನು ಕಳುಹಿಸಲಿಕ್ಕೆ ಗ್ರಾಮಕ್ಕೆ ಬಂದಾಗ್ಯೆ ಬಡವರ್ಗ ದಾರನು ಬಂದು ನನ್ನ ದರಖಾಸ್ತು ಅರ್ಜಿಯೋ ವ ಕುಡ್ತಲೆ ತಖ್ತೀಲಿ ಅರ್ಜಿಯೋ ಮೊದಲಾದದು ತನಕಿಗೆ ಬಂತೋ ಏನೆಂಬದು ಕೇಳಿದರೆ ಅದು ಇನ್ನೂ ನನ್ನ ಹತ್ತರ ಬರಲಿಲ್ಲಯ್ಯ ಎಂತ ೩ ೬–೧೨ ತಿಂಗಳು ಕಳೆದು, ಕಡೆಗೆ ನೀವು ಹಾಜರಾಗದ್ದರಿಂದ ಅರ್ಜಿ ಕಿತ್ತು ಹಾಕಲ್ಪಟ್ಟಿತೆಂತ ಹುಕುಂ ಸಿಕ್ಕುವದು. ಅಂದವುಗಳನ್ನು ತಿರಿಗಿ ನೆಟ್ಟು ನೀರೆರದು ಜೀವ ಹಿಡಿಸಲಿಕ್ಕೆ ತಕ್ಕ ಖರ್ಚು ಮಾಡಲಿಕ್ಕೆ ಈತನ ಕೈಯಲ್ಲಿಲ್ಲದ್ದರಿಂದ ಸುಮ್ಮನೆ ಇರಬೇಕಾಗುತ್ತದೆ. ಬಲಿಷ್ಟರ ಅರ್ಜಿ ಇತ್ಯಾದಿಗಳು ಬಲವಾಗಿರುವುದರಿಂದ ಮೈಲ್ ಬಂಡಿಯಂತೆ ಆಯಾಯ ಸ್ಥಾನಗಳನ್ನು ದಾಟಿ ಸ್ವಲ್ಪ ಸಮಯದಲ್ಲೇ ತನ್ನ ಕಾರ್ಯವನ್ನು ಮಾಡಿ ಬಿಡುತ್ತೆ ಹೆಚ್ಚಿಗೇನು ಹೇಳಲಿ, ಅಂತೂ ಇಂತು ಕುಂತಿ ಮಕ್ಕಳಿಗೆ ವನವಾಸ ಪತ್ರ ಬಾಹುಲ್ಯಕ್ಕಂಜಿ ಇಲ್ಲಿಗೆ ಮಂಗಳ ನಮಸ್ಕಾರ ಬಾಕಿ ಬಾಕಿ

ತಾ 17–10–1914 ಇತಿ ಬಡ ವರ್ಗದಾರ.

ಸ್ವಾಮಿ ಪತ್ರಕರ್ತರೇ,

ತಮ್ಮ ಅಮೂಲ್ಯವಾದ ಕಳೆದ ಸಂಚಿಕೆಯಲ್ಲಿ ಸೂಚಿಸಿದಂತೆ ಮ|| ರಾ|| ರಾ|| ನೆ ತ್ರಕೆರೆ ಶಂಕರನಾರಾಯಣ ಬಟ್ಟರು ಮತ್ತು ಪಲಿಮಾರು ದೇವರಾಯರು ಇದೇ ಕಳದ ೧ನೆ ತಾರೀಕಿನಿಂದ ದಶಂಬರ ಆಖೈರು ವರೆಗೆ ಮೂರು ತಿಂಗಳಿಗೆ ಮಾತ್ರ ಇಲ್ಲಿಯ ಪರಸ್ಪರ ಸಹಾಯಕ ಸಂಘದ ಅಧ್ಯಕ್ಷರಾಗಿಯೂ ಸೆಕ್ರೆಟರಿಗಳಾಗಿಯೂ ನೇಮಿಸಲ್ಪಟ್ಟ ದ್ದಾರೆ ಇದೇ ರೀತಿ ಮೂರು ಮೂರು ತಿಂಗಳಿಗೆ ಅಧ್ಯಕ್ಷರ ಮತ್ತು ಸೆಕ್ರೆಟರಿಯವರ ನೇಮಕವು ಪರಿವರ್ತಿಸುವದು. ಕಳೆದ ಸಂಚಿಕೆಯಲ್ಲಿ ತಮಗೆ ವರ್ತಮಾನ ಕೊಟ್ಟ ಬಾತ್ಮಿದಾರರು ಅಧ್ಯಕ್ಷರ ನೇಮಕಕ್ಕೆ ಮಾತ್ರ ಸಂತೋಷ ಪಟ್ಟಿರುತ್ತಾರಾದುದರಿಂದ ಸೆಕ್ರೆಟರಿಯವರ ನೇಮಕವು ಇವರಿಗೆ ಪೂರ್ಣ ಅಸಮಾಧಾನವಾಗಿರುತ್ತದೋ ಏನೋ! ಆದರೆ ಇವರಿಬ್ಬರ ನೇಮಕವು ಎಲ್ಲಾ ಮೆಂಬರರಿಗೂ ಸಂತೋಷಕರವೇ

ಕಳೆದ ಮಹಾ ಸಭೆಯಲ್ಲಿ ನಿರ್ಣಯಿಸಿದ ತಿದ್ದುಪಡಿಗಳನ್ನು ಇವರಾದರೂ ಜ್ಯಾ ರಿಗೆ ತರುವರಾಗಿ ನಂಬುತ್ತೇನೆಂತ ಬಾತ್ಮಿದಾರರು ಬರಿಯುತ್ತಾರಲ್ಲ! ಏನು ಆಶ್ಚ ರ್ಯ! ಜ್ಯಾರಿಗೆ ಬಾರದೆ ಇದ್ದರೆ ಆ ತಪ್ಪಿಗೆ ಅಧ್ಯಕ್ಷರನ್ನು ಗುರಿಪಡಿಸುವದು ಹೀಗೆಯೇ ಸರಿ "ಇಲ್ಲಿಯ ಸಂಘವು ಸಾಲ ಪಡಕೊಳ್ಳುವ ಮಿತಿಯು ೫೦೦೦ ಈ ವರೇಗೆ ಸಾಲ ಪಡಕೊಂಡದ್ದು ಐದು ಸಾವಿರಕ್ಕೆ ಬರ್ತಿ ಆಗಿಯದೆ. ಒಂದು ವೇಳೆ ಐದು ಸಾವಿರಕ್ಕೆ ಮಿಕ್ಕಿದೆ ಎಂತಲೂ ಹೇಳಬಹುದು ಸಾಲ ಪಡಕೊಳ್ಳುವ ಮಿತಿಯನ್ನು ೧೦,೦೦೦ಕ್ಕೆ ಏರ್ಪಡಿಸ ಬೇಕಾಗಿ ಮಹಾ ಸಭೆಯಲ್ಲಿ ನಿರ್ಣಯಿಸಿಯದೆ ಹಾಗೆ ಏರ್ಪಡಿಸಬೇಕಾದರೆ ಸಂಘದ ಎಲ್ಲಾ ಮೆಂಬರರ ಸಾಲಮೂಲಗಳ ತಪಶೀಲ್ ಇಲ್ಲದೆ, ಶುಮಾರು ೧೬೦ಕ್ಕಿಂತ ಹೆಚ್ಚು ಮೆಂಬರರಿಂದ ಕೂಡಿರುವ ಈ ಸಂಘವು ಎಷ್ಟರ ಮಟ್ಟಿ ಗೆ ಸಾಲ ಪಡಕೊಳ್ಳುವರೆ ಯೋಗ್ಯವಾದ್ದು? ಮೆಂಬರರ ಸಮುದಾಯ ಯೋಗ್ಯತೆ ಎಷ್ಟರದ್ದು? ೫೦೦೦ಕ್ಕಿಂತ ಹೆಚ್ಚಿಗೆ ಸಾಲ ಪಡಕೊಳ್ಳುವರೆ ಈ ಸಂಘಕ್ಕೆ ಅಧಿಕಾರ ಕೊಡಬಹುದೊ ಎಂಬೀ ವಿಷಯಗಳಿಗೆ ಮೇಲಾಧಿಕಾರಿಗಳು ಪೂರ್ಣ ತಾತ್ಪರ್ಯ ಕೊಡುವ ಬಗೆ ಹೇಗೆ?

ಆದಕಾರಣ ಕಳದ ಸಂಚಿಕೆಯ ತಮ್ಮ ಬಾತ್ಮಿದಾರರು ಪದೇ ಪದೇ ಮಹಾ ಸಭೆಯ ನಿರ್ಣಯಗಳನ್ನು ಜ್ಯಾರಿಗೆ ತರುವದರ ವಿಷಯವಾಗಿ ಮೇಲಾಫಿಸರರಿಗೆ ಎಚ್ಚ ರಿಸುವೆನೆಂಬಂತೆ ತೋರಿಸಿಕೊಳ್ಳುವದರ ಬದಲಾಗಿ ಎಲ್ಲಾ ಮೆಂಬರರಿಗೂ [illegible] ಕೊಟ್ಟು ಚರಸ್ಥಿರ ಆಸ್ತಿಯ ತಪ್ಸೀಲು, ಸಾಲಗಳ ತಪ್ಸೀಲು, ಸಂಘದ ಅಧ್ಯಕ್ಷರಿಗೆ ಒದ ಗಿಸಿ ಕೊಟ್ಟರೆ ತನ್ನಷ್ಟಕ್ಕೆ ಅಂಥಾ ನಿರ್ಣಯಗಳು ಜ್ಯಾರಿಗೆ ಬರುವದು ಮಾತ್ರವಲ್ಲ, ಬಾತ್ಮಿದಾರರಿಗೆ ಇದು ಬಹು ಶ್ಲಾಘನೀಯವಾದ್ದು. ಇದಕ್ಕೆ [illegible] ಮೆಂಬರ ರು ಮೌನವಾಗಿದ್ದು ಅಧ್ಯಕ್ಷರನ್ನು ತಪ್ಪಿಗೆ ಗುರಿ ಪಡಿಸಿದರೆ ಅಧ್ಯಕ್ಷರಾಗಲೀ ಸೆಕ್ರೆಟರಿ ಯವರಾಗಲೀ ಮೇಲಾಫಿಸರರಾಗಲೀ ಮಾಡುವದೇನು?

ಮುಂಚಿನ ಅಧ್ಯಕ್ಷ ಸೆಕ್ರೆಟರಿಗಳಾದರೋ [illegible] ೫೦೦೦ಕ್ಕೆ [illegible] ಆಗುವಂತೆ [illegible]

ಹೆಚ್ಚಿದ ಹಾಗೆಯೇ ಸಂಘದ ಸಾಲದ ಮಿತಿಯು ಹೆಚ್ಚಿಸುವದು ಅಗತ್ಯ. ಇನ್ನೂ ಇನ್ನೂ ಮೆಂಬರರನ್ನು ಸೇರಿಸಿಕೊಳ್ಳುವದಕ್ಕಿಂತಲೂ ಸೇರಿದ ಯೋಗ್ಯ ಮೆಂಬರರಲ್ಲಿ ಹೆಚ್ಚಿಗೆ ಸಾಲುಗಳು ಅಪೇಕ್ಷಿಸುವವರಿಗೆ ಕೊಡುವದು ಉತ್ತಮ. ಯೋಗ್ಯ ಮೆಂಬರರು ಸಂಘಕ್ಕೆ ಸೇರಲು ಅಪೇಕ್ಷಿಸಿ ಅರ್ಜಿ ಕೊಡುತ್ತಾರೆ. ಈಗ ಸಾಲುಗಳು ಬಹು ಕಮ್ಮಿ ಇರುವಾಗ ಇವರು ಆತುರ ಪಡುವದಕ್ಕಿಂತಲೂ ಈ ಮೊದಲೇ ಇವರು ಸೇರಲು ಯಾರು ಆಕ್ಷೇಪಿಸಿದರು? ಇಂಥಾ ಪ್ರಯೋಜನಕರವಾದ ಸಂಘವು ಇಲ್ಲಿ ಏರ್ಪಡಿಸುವಾಗ್ಯೆ ಅದನ್ನು ಇವರು ಹ್ಯಾಗೆ ಹಿಯ್ಯಾಳಿಸಿದರು? ಈಗ ಸಾಲುಗಳ ಅರ್ಜಿಗಳು ಪಂಚಾಯಿತ ಸಭೆಯಲ್ಲಿ ತಿರಸ್ಕರಿಸಲ್ಪಡುವಾಗ್ಯೆ ತನಗಿಂತಲು ಅಲ್ಪರಿಗೆ ಈ ಮೊದಲು ಸಾಲುಗಳು ಕೊಡಲಿಲ್ಲವೊ? ತಾನು ಅವರಿಗಿಂತಲು ಯೋಗ್ಯನಲ್ಲವೊ? ಎಂಬ ತನಗೆ ತಾನೇ ಅಸಹ್ಯಕರವಾದ ಮಾತುಗಳು ಪಂಚಾಯಿತರನ್ನು ಏನು ಮಾಡಬಲ್ಲುದು? ಸಂಘದಲ್ಲಿ ಮಿತಿಮೊರಿ ಮೆಂಬರರು ಇದ್ದರೆ ಈ ವಿಟ್ಲ ಪರಸ್ಪರ ಸಹಾಯಕ ಸಂಘದ ಮುಂದಿನ ಅಭಿವೃದ್ಧಿ ಹೇಳಬೇಕೆಂತಲೇ ಇಲ್ಲ—ಈಗ ಇಡೀ ೧೪ ಸಾಲುಗಳು ಮಾತ್ರ ಉಳಿದಿವೆ.

ಆದುದರಿಂದ ಸ್ವಾಮಿ ಪಂಚಾಯಿತರೇ, ಇನ್ನೂ ಇನ್ನೂ ಹೆಚ್ಚಿಗೆ ಮೆಂಬರರನ್ನು ಸಂಘಕ್ಕೆ ಸೇರಿಸಿಕೊಳ್ಳಬೇಡಿರಿ, ಸಂಘದಲ್ಲಿ ಮೆಂಬರರು ಕಮ್ಮಿ ಇದ್ದದರಿಂದ ನಿಮಗೆ ಯಾವತರದ ಕೊರತೆಯು ಇಲ್ಲಾ, ಹೆಚ್ಚಿಗೆ ಇದ್ದದರಿಂದ ಸಿಫಾರಸೂ ಇಲ್ಲಾ, ಒಂದು ವೇಳೆ ಹೆಚ್ಚಿಗೆ ಮೆಂಬರರು ಅಗತ್ಯವೆಂತ ಕಂಡು ಬಂದರೆ ಪ್ರಥಮ ಸಂಘವು ಸಾಲ ಪಡಕೊಳ್ಳುವ ಮಿತಿ ಏರಿಸಿಕೊಂಡು ನಂತರ ಇನ್ನೂ ಕೂಡುವ ಮೆಂಬರರ ಸ್ಥಿತಿ ಗತಿ ಯೋಗ್ಯತೆ ಚೆನ್ನಾಗಿ ಆಲೋಚಿಸಿರಿ. ಈಗಿನ ಅಧ್ಯಕ್ಷ ಸೆಕ್ರೆಟರಿಗಳ ಉಪಕೃತೆಯಲ್ಲಿ ಆದರೂ ಮೆಂಬರರು ಅವರವರ ಎಸ್ಟೇಟ್ಸನ್ನು ಮತ್ತು ಲ್ಯಾಬಿಲಿಟೀಸ್ ತಂದುಕೊಟ್ಟು ಸಂಘವು ಚಲೋದಾಗಿ ನಡಿಯುವ ಹಾಗೆ ಸದಾ ಕಾಲ ದೇವರಿಗೆ ನನ್ನ ಪ್ರಾರ್ಥನೆಯಾಗಿರುತ್ತದೆ.

ಮೆಂಬರರಲ್ಲೊಬ್ಬ.

~~~~~~~

ವೆನ್‌ಲೋಕ್ ಮತ್ತು ಲೋಕಲ್ ಬೋರ್ಡು ಆಸ್ಪತ್ರೆಗಳಲ್ಲಿ ನಡಿಸಬಹುದಾದ ಕೆಲವು ವಿಚಾರಗಳು.

~~~~~~~

ಅಯ್ಯಾ ಪತ್ರಿಕಾಕರ್ತರೇ,

ಧರ್ಮಾಸ್ಪತ್ರೆಗಳ ಔಷಧಿಗಳ ವಿಕ್ರಯದ ಕುರಿತು "ಹಳೇ ರೋಗಿ" ಮತ್ತು "ಗ್ರಾಮ ನಿವಾಸಿಕ"ರು ಬರೆದ ಲೇಖನಗಳನ್ನು ಓದಿ ನಾನೂ ಒಂದೆರಡು ವಿಚಾರಗಳನ್ನು ತಮ್ಮ ಪತ್ರ ಮೂಲಕ ತಿಳಿಯಬೇಕೆಂದಿರುವೆನು.

ಅದೇನಂದರೆ:—ಲೋಕಲ್‌ಬೋರ್ಡು ಆಸ್ಪತ್ರೆಗಳಲ್ಲಿ ಬಡವರಲ್ಲದ ಒಳರೋಗಿಗಳಿಂದ ದಿವಸಕ್ಕೆ ಒಂದಾಣೆಯಂತೆ ಪರೀಕ್ಷಾರ್ಥವಾಗಿ ವಸೂಲು ಮಾಡಬೇಕೆಂಬ ನಿಯಮವಾಗಿರುವದಲ್ಲಾ? ಈ ನಿಯಮಕ್ಕನುಸಾರವಾಗಿ ಧರ್ಮಾಸ್ಪತ್ರೆಯಲ್ಲಿ ಬಡವರು ಯಾ ದೊಡ್ಡವರು ಎಂಬ ಭೇದಾಭೇದವನ್ನು ತಿಳಿಯುವ ಬಗೆ ಹೇಗೆ? ಈ ಭೇದವನ್ನು ಮಾಡುವುದು ಯಾರು? ದಾಕ್ತಾರರೋ ಯಾ ಆಸ್ಪತ್ರೆಯ ಒಳ ನೌಕರರೋ? ಈಗ ಮಂಗಳೂರು ಪಟ್ಟಣದಲ್ಲಿರುವ ವೆನ್‌ಲೋಕ್ ಆಸ್ಪತ್ರೆಯಲ್ಲಿ ಒಳರೋಗಿಗಳಿಂದ ಹಣ ವಸೂಲು ಮಾಡಲ್ಪಡುತ್ತದೋ? ಮಾಡುವುದಾದರೆ ಎಷ್ಟು? ಯಾರಿಂದ? ಹೀಗೆ ವಸೂಲು ಮಾಡಿ ವರ್ಷ ಒಂದಕ್ಕೆ ಎಷ್ಟು ರೂಪಾಯಿ ಒಟ್ಟಾಗುತ್ತದೆ? ಈ ಆಸ್ಪತ್ರೆಯಲ್ಲಿ ಉಪಚಾರಕರು ಎಷ್ಟು ಮಂದಿ ಇರುವರು? ಒಳರೋಗಿಗಳಿಗೆ ಸರಿಯಾದ ಉಪಚಾರ ನಡಿಯುತ್ತದೋ, ಸರಿಯಾಗಿ ಆಹಾರಪಾನಾದಿಗಳು ಕೊಡಲ್ಪಡುತ್ತದೋ, ಈ ಉಪಚಾರಕರು ಆಸ್ಪತ್ರೆಗೆ ಎಷ್ಟು ಗಂಟೆಗೆ ಬರುತ್ತಾರೆ, ಯಾವ್ಯಾವ ಕೆಲಸ ಮಾಡುತ್ತಾರೆ, ರೋಗಿಗಳಿಗೆ ತಕ್ಕ ಕಾಲಕ್ಕೆ ಔಷಧಿ ಕೊಡುತ್ತಾರೋ, ರೋಗಿಗಳ ಬಗ್ಗೆ ಆಸ್ಪತ್ರೆಗೆ ತರುವ ಹಾಲು ಮಾಂಸ ಇತ್ಯಾದಿಗಳು ಉಪಚಾರಕರಿಂದ ದುರುಪಯೋಗವಾಗುತ್ತದೋ,-ಏನೆಂಬ ವಿಷಯಗಳನ್ನು ನೋಡಿಕೊಳ್ಳಲಿಕ್ಕೆ ಪ್ರತ್ಯೇಕ ಆಫೀಸರರಿದ್ದಾರೋ? ಎಂಬದೊಂದು ವಿಚಾರ.

ಸ್ವಾಮಿ, ಮತ್ತೊಂದು ವಿಚಾರ—ಒಳರೋಗಿಗಳಿಗೆ ಔಷಧಿ ಕೊಡುವ ಬಗ್ಗೆ ಎಷ್ಟು ಔನ್ಸ್ ಗ್ಲಾಸುಗಳಿವೆ? ೫೦ ಒಳರೋಗಿಗಳಿದ್ದು ಅವರ ರೋಗ ನಿಧಾನವು ಬೇರೆ ಬೇರೆಯಾಗಿದ್ದರೂ ಔಷಧಿ ಕೊಡುವುದು ಒಂದೇ ಗ್ಲಾಸಿನಿಂದಲೋ ... ಮಾತ್ರ ಗಳವೆಯೋ? ರೋಗಿಗಳಿಗೆ [illegible] ಪ್ರಕಾರವಿದೆ? [illegible]

ಸಂದರ್ಶನಾಧಿಕಾರಿಗಳು ವ ಗವರ್ನರ ಪ್ರಭುಗಳಂಥಾ ಮಾನ್ಯರ ಸಂದರ್ಶನ ಕಾಲದಲ್ಲಿ ಮಾತ್ರ ಒಳರೋಗಿಗಳ ದುಪ್ಪಟಿ ಹಾಸಿಗೆ ಇತ್ಯಾದಿಗಳು ಶುಚಿಯಾಗಿರುತ್ತವೋ? ಇತರ ಕಾಲದಲ್ಲಿಯೂ ಶುಚಿಯಾಗಿರುತ್ತವೋ? ಆಸ್ಪತ್ರೆಗಳಲ್ಲಿ ಎಷ್ಟು ಮಂಚಗಳಿವೆ? ಒಳರೋಗಿಗಳ ಸರಾಸರಿ ಸಂಖ್ಯೆ ಎಷ್ಟು? ತಗಣೆ, ನುಶಿ ಇತ್ಯಾದಿಗಳ ಕಾಟವಿದೆಯೋ? ಇವುಗಳ ಕಾಟವಿದ್ದರೆ ನಿವಾರಣೆ ಬಗ್ಗೆ ಏನಾದರೂ ಪ್ರಯತ್ನ ನಡಿಸಿದ್ದುಂಟೋ?

ಒಳರೋಗಿಗಳನ್ನು ಹೋಗಿ ನೋಡುವರೆ ರೋಗಿಗಳ ಕುಟುಂಬದವರಿಗೆ ಯಾ ಸ್ನೇಹಿತರಿಗೆ ಅಪ್ಪಣೆ ಇದೆಯೋ? ಇದ್ದರೆ ಎಷ್ಟು ಗಂಟೆಗೆ? ಒಳರೋಗಿಗಳಿಗೆ ಸಂಬಂಧ ಪಡದವರು ಆಸ್ಪತ್ರೆಗೆ ಆಗ್ಗಾಗ್ಗೆ ಹೋಗಬಹುದೋ? ಇಂಥವರಿಗೆ ಪ್ರತ್ಯೇಕ ಅಪ್ಪಣೆ ಇದೆಯೋ? ಆಸ್ಪತ್ರೆಯ ವೈದ್ಯ ಆಫೀಸರರು ಮನೆಗೆ ಹೋಗುವ ಬೆಳಗ್ಗಿನ ಗಂಟೆ ಯಾವದು? ಸಾಯಂಕಾಲ ಎಷ್ಟು ಗಂಟೆಗೆ? ವೈದ್ಯ ಆಫೀಸರರು ಮನೆಗೆ ಹೋದನಂತರ ಒಳರೋಗಿಗಳಿಗೆ ಉಪಚಾರ ನಡಿಯುತ್ತದೋ, ಇಲ್ಲವೋ, ಎಂಬದನ್ನು ನೋಡಿಕೊಳ್ಳುವರೆ ಯಾರಾದರೂ ಆಫೀಸರರಿದ್ದಾರೋ? ವೈದ್ಯ ಆಫೀಸರರು ಮನೆಗೆ ಹೋದನಂತರ ಒಳರೋಗಿಗಳ ಮೇಲ್ತನಿಕೆಯು ಯಾರಿಂದ ನಡಿಯುತ್ತದೆ? ಬರೇ ಉಪಚಾರಕರಿಂದಲೋ ಯಾ ಸೆನಿಟರಿ ಆಫೀಸರರಿಂದಲೋ? ಸೆನಿಟರಿ ಆಫೀಸರರಿಗೂ ರೋಗಿಗಳ ವಾರ್ಡಿಗೂ ಸಂಬಂಧವಿದೆಯೋ? ಇದ್ದರೆ ಯಾವ ಸಂಬಂಧ? ರಾತ್ರಿಕಾಲ ರೋಗಿಗಳ ಪರಾಂಬರಿಕೆ ಬಗ್ಗೆ ಆಸ್ಪತ್ರೆಯಲ್ಲಿ ಎಷ್ಟು ಉಪಚಾರಕರಿರುವರು? ರೋಗಿಗಳಿಗೆ ರಾತ್ರಿಕಾಲ ಬಾಯಾರಿಕೆಯಾದರೆ ಇಲ್ಲವೆ ರೋಗ ಸಂಕಷ್ಟದಿಂದ ಸ್ಮೃತಿ ತಪ್ಪಿದರೆ ನೋಡಿಕೊಳ್ಳಲು ಯಾರಾದರೂ ಇರುವರೋ? ಇದ್ದರೆ ಈ ಉಪಚಾರವು ಸರಿಯಾಗಿ ನಡಿಯುತ್ತದೋ—ಎಂಬದು ಇನ್ನೊಂದು ವಿಚಾರ.

ಒಳರೋಗಿಗಳು ಉಪಚಾರಕರಿಗೆ ಪಾದ ಕಾಣಿಗೆ ಕೊಡಬೇಕೆಂಬ ನಿಯಮವಿದೆಯೋ? ಇದ್ದರೆ ಎಷ್ಟು? ಎಂಥಾದ್ದು? ಒಳರೋಗಿಗಳು ಉಪಚಾರಕರಿಗೆ ಪ್ರತ್ಯೇಕ ರುಸುಂ ಕೊಟ್ಟರೆ ಆಸ್ಪತ್ರೆಯಿಂದ ಬೇಗನೇ ಗುಣವಾಗಿ ಮನೆಗೆ ಹಿಂತಿರುಗುವ ಸಂಭವವಿದೆಯೋ? ಇದು ನನ್ನ ಕಡೆಯ ವಿಚಾರವಾಗಿರುವುದು.

ಸ್ವಾಮಿ, ಪತ್ರಕರ್ತರೇ, ಪತ್ರ ವಿಸ್ತಾರಕ್ಕೆ ಕ್ಷಮಿಸಿ, ನನ್ನ ಬಡ ವಿಚಾರಗಳಿಗೆ ತಕ್ಕ ಉತ್ತರವನ್ನು ಕೊಡುತ್ತಿದ್ದರೆ ಕೃತಜ್ಞನಾಗುತ್ತಿದ್ದೆನು.

"ವಿಚಾರಿ"

~~~~~~~

ಬಾರ್ಬ್‌ಡ್ ವಯರ್ ಯಾನೆ ಮೊಳೆಯ ಸರಿಗೆಗಳು.

ಸ್ವಾಮಿ,

ತಮ್ಮ ಬಾತ್ಮಿದಾರ "ಪಟ್ಟಣಿಗ"ನವರು ಇದೇ ತಿಂಗಳ ೯ನೇ ತಾರೀಕಿನ ಸಂಚಿಕೆಯಲ್ಲಿ ಹಾಕಿದ ಪ್ರಶ್ನೆ ನೋಡಿ ಆಶ್ಚರ್ಯಪಡುತ್ತೇನೆ. ಬಾರ್ಬ್‌ಡ್ ವಯರ್ ಯಾನೆ ಮೊಳೆಯ ಸರಿಗೆಗಳನ್ನು ಬೇಲಿ ಬಗ್ಗೆ ಉಪಯೋಗಿಸಬಾರದಾಗಿ ಸರಕಾರಿ ನಿಬಂಧನೆ ಇರುವುದಾದರೆ ಶಹರಿನ ಮಧ್ಯ ಮೈದಾನಿನಲ್ಲಿ ಸರಕಾರದವರು ಅಂತಹ ಸರಿಗೆಗಳ ಬೇಲಿ ಹಾಕುತ್ತಿದ್ದಿಲ್ಲ. ಪ್ರತಿ ದಿನವೂ ಕಲೆಕ್ಟರ್ ದೊರೆಗಳು ಆಫೀಸಿಗೆ ಹೋಗಿ ಬರುವ ದಾರಿಯ ಬದಿಯಲ್ಲಿ ಪೊಲೀಸು ಆಫೀಸಿಗೆ ಅಂತೂ ಬಹಳ ಸಮೀಪವಾಗಿ ಅಂತಹ ಬೇಲಿ ಹಾಕಿದ್ದು ನೋಡುವಾಗ ಸರಕಾರ ನಿಬಂಧನೆ ಇಲ್ಲವೆಂತ ತಿಳಿದುಕೊಳ್ಳಬೇಕಾಗುತ್ತದೆ. ಕೋರ್ಟು ಗುಡ್ಡೆಯಲ್ಲಿ ಕರಂಗಲಪಾಡಿ ರಸ್ತೆ ಬದಿಯಲ್ಲಿಯೂ ವಿಶೇಷವಾಗಿ ಜನರೂ, ಪಶುಗಳೂ ಹೋಗಿ ಬರುವ ರಸ್ತೆ ಸಮೀಪ, ಗುಡ್ಡದ ಮೇಲೆ ಅಂತೂ ಡಿಸ್ಟ್ರಿಕ್ಟ ಕೋರ್ಟು, ಸಬ್ ಜಡ್ಜರ ಕೋರ್ಟು, ಮತ್ತು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟು ಮೊದಲಾದ ಸಂಸ್ಥೆಗಳಿರುವ ನೆರೆಯಲ್ಲಿ ವಿಶೇಷ ಜಾಗರೂಕರಾದ ಪ್ರಾಜ್ಞ ಜೆಜುಯಿಟರು ಅಂತಹ ಬೇಲಿ ಶಾಲೆಯ ಸುತ್ತಲೂ ಹಾಕುತ್ತಿದ್ದಿಲ್ಲ. ಸರಕಾರಿ ಆಫೀಸರರೂ, ಪೊಲೀಸ ಮತ್ತು ಮುನ್ಸಿಪಲ್ ಉದ್ಯೋಗಸ್ಥರೂ ಈ ಬೇಲಿಗಳನ್ನು ಇದುವರೇಗೂ ನೋಡಿ ಆಕ್ಷೇಪಿಸದೆ ಇದ್ದದ್ದು ನೋಡುವಾಗ ಸರಕಾರಿ ನಿಬಂಧನೆ ಇಲ್ಲವೆಂತಲೇ ತಿಳಕೊಳ್ಳಬೇಕಾಗುತ್ತದೆ. ಮಂಗಳೂರಲ್ಲಿ ರೈಲ್ವೇ ಕಂಪೌಂಡಿಗೂ ಕೆಲವು ಖಾಸಗಿ ಜನರ ಹಿತ್ತಲುಗಳಿಗೂ ಮುಳ್ಳಿನ ಸರಿಗೆಗಳ ಬೇಲಿ ಹಾಕಿದ್ದಾರೆ. ಆದುದರಿಂದ ಬಾರ್ಬ್‌ಡ್ ವಯರಿನ ಬೇಲಿ ಹಾಕ ಕೂಡದೆಂತ ಸರಕಾರ ನಿಬಂಧನೆ ಉಂಟೆಂಬ ಮಾತು ನಾನು ನಂಬತಕ್ಕದಲ್ಲ.

ಮಂಗಳೂರು
೧೫-೧೦-೧೯೧೪.

[illegible]
~~~~~~~

ಯುದ್ಧ ಸಮಾಚಾರವು.

ತಾ. ೧೮ನೇ ಒಕ್ಟೋಬರ.

ಫ್ರಾನ್ಸ್:—ಬ್ರಿಟಿಷ ಸೇನೆಗಳು ಸಂಯುಕ್ತ ಸೇನಾ ನೆಲೆಗಳ ಎಡಪಾರ್ಶ್ವದಲ್ಲಿ ಶತ್ರುಗಳನ್ನು ಎದುರಿಸಿ ಜರ್ಮನರನ್ನು ಸ್ವಲ್ಪ ಹಿಂದೆ ಬೀಳುವ ಹಾಗೆ ಮಾಡಿರುವವು. ಕದನ ನಡೆಯುವ ಪ್ರದೇಶದ ಸ್ಥಿತಿಯು ಬಹು ಕಷ್ಟವಾಗಿರುವುದರಿಂದ ಬೇಗಬೇಗನೇ ಮುಂದರಿಯುವುದು ಕಷ್ಟಸಾಧ್ಯವಾಗಿದೆ.

ಜರ್ಮನರು ಫ್ರಾನ್ಸಿನ ಕರಾವಳಿಯಲ್ಲಿರುವ ಕೆಲ್ಲಿಗೆ ಮುಂದರಿಸುತ್ತಲಿರುವರು. ಅವರು ಬೈಲೆಯ್ಯುಲ್ ಮತ್ತು ಹೆಜೆಬ್ರೊಕ್ ಎಂಬಲ್ಲಿಗೆ ತೋಪು ಹಾರಿಸಿದರು. ಆದರೆ ಹಿಮ್ಮೆಟ್ಟಿ ಲೈಸ್ ನದಿಯನ್ನು ಹಿಂದೆ ದಾಟಿದರು.

ಜರ್ಮನರು ಲಿಲ್ಲೆಯ ಸೇನಾ ನೆಲೆಗಳಿಂದ ಹಿಂದೆ ಅಟ್ಟಲ್ಪಟ್ಟು ಫ್ರಾನ್ಸ್ ಸರಹದ್ದನ್ನು ಬಿಟ್ಟು ಬೆಲ್ಜಿಯಮಿಗೆ ಹೋಗಿರುವರು.

ಲಿಲ್ಲೆ ಮತ್ತು ಕೆಲ್ಲಿಗೆ ಅಗ್ಗಾಡಿಗಳು ಪುನಃ ನಡಿಯುತ್ತಿರುತ್ತವೆ.

ಜರ್ಮನ್ ಸೇನೆಯಲ್ಲಿ ವಿಷಮ ಜ್ವರದ ಸೋಂಕು ತಲೆ ಹಾಕಿರುವುದೆಂದು ಪ್ರಕಟವಾಗಿದೆ.

ಬೆಲ್ಜಿಯನರ ಧೈರ್ಯ ಸಾಹಸಗಳನ್ನು ಆಸ್ಟ್ರೇಲಿಯ ಸರಕಾರದವರು ಮಾನ್ಯ ಮಾಡಿ ಅವರ ಕಷ್ಟ ನಿವಾರಣೆ ಬಗ್ಗೆ ೧೦೦,೦೦೦ ಪವನುಗಳನ್ನು ದಾನ ಮಾಡಿರುವರು.

ಎಂಟವರ್ಪಿನಿಂದ ತಲೆತಪ್ಪಿಸಿಕೊಂಡ ಬೆಲ್ಜಿಯನ್ ಮತ್ತು ಇಂಗ್ಲಿಷರ ಒಟ್ಟು ೩೩,೦೦೦ ಸೈನಿಕರು ಹೊಲ್ಲೆಂಡಿನಲ್ಲಿರುವರು.

ಬೆಲ್ಜಿಯನರಿಗೆ ಸಹಾಯ ಮಾಡುವರೆ ಎಂಟವರ್ಪಿಗೆ ಹೋದ ಇಂಗ್ಲಿಷ ಸೈನಿಕರಲ್ಲಿ ಉಳಿದವರು ಡೋವರಿಗೆ ಹಿಂದೆ ಬಂದು ತಲಪಿರುವರು. ಇವರಲ್ಲಿ ೨೦೦೦ ಸೈನಿಕರು ಘಾಯ ಒಡೆದಿರುವರು. ಒಬ್ಬ ಮೆಜರನೂ ಹತನಾಗಿರುವನು. ೪ ಆಫೀಸರರು ಘಾಯ ಒಡೆದಿರುವರು. ಹಿಂದೆರಳಿದ ಬ್ರಿಟಿಷ ಸೈನಿಕರು ತಮ್ಮೊಡನೆ ದೊಡ್ಡ ಫಿರಂಗಿಗಳು ಇಲ್ಲದಿದ್ದುದರ ಸಲುವಾಗಿ ವಿಷಾದಿಸುವರು. ಹಡಗುಪಡೆಯ ಫಿರಂಗಿಗಳು ತಮಗೆ ಬಂದು ತಲಪುವಾಗ ತಡವಾಯಿತೆಂದೂ ಅದನ್ನು ಹಾರಿಸಲೇ ಇಲ್ಲವೆಂದೂ ಅವರು ಹೇಳುವರು.

ಬಂಗಾಳ ಆಖಾತ ಮತ್ತು ಅರಬಿ ಸಮುದ್ರದಲ್ಲಿ ಹಾವಳಿ ಮಾಡುತ್ತಿದ್ದ ಜರ್ಮನರ "ಎಮ್ಡೆನ್" ಕ್ರೂಜರ್ ನಾವೆಯೊಡನೆ ಇದ್ದ "ಮಾರ್ಕೊಮೇನಿಯ" ಎಂಬ ನಾವೆಯನ್ನು ಬ್ರಿಟಿಷರ "ಯಾರ್ಮೌತ್" ಕ್ರೂಜರ್ ನಾವೆಯು ಮುಣುಗಿಸಿ "ಪೊಂಟೊಪರಸ್" ಎಂಬ ಗ್ರೀಕ ಹಡಗವನ್ನು ಹಿಡಿದಿರುವುದು. ೬೦ ಜರ್ಮನರು ಶೆರೆ ಹಿಡಿಯಲ್ಪಟ್ಟಿರುವರೆಂತ ಪ್ರಕಟವಾಗಿದೆ.

ಜರ್ಮನರ "ಕೊಮೆಟ್" ಎಂಬ ನಾವೆಯನ್ನು ರಾಬೋಲ್ ಎಂಬಲ್ಲಿ ಹಿಡಿದು ಅದರಲ್ಲಿದ್ದ ತಂತೀ ಇಲ್ಲದ ಟೆಲಗ್ರಾಮು ಸ್ಟೇಶನನ್ನು ಪೂರ್ಣವಾಗಿ ಸ್ವಾಧೀನ ಪಡಿಸಿಕೊಂಡಿರುವೆವೆಂತ ಆಸ್ಟ್ರೇಲಿಯ ಸರಕಾರದವರು ತಿಳಿಯಪಡಿಸಿರುವರು.

ಅಂಗ್ಲಾಲೆ:—ಕೆನಡಾ ದೇಶದಿಂದ ಸಾಮ್ರಾಜ್ಯ ಸರಕಾರಕ್ಕೆ ಸಹಾಯವಾಗಿ ಕಳುಹಿಸಲ್ಪಟ್ಟ ಸೇನೆಯು ಇಂಗ್ಲಾಂಡಿನ ಪ್ಲಿಮಾತ್ ಬಂದರಕ್ಕೆ ಬಂದು ಇಳಿದಿರುವದು. ಇಂಗ್ಲಾಂಡಿನ ಜನರು ಬಹು ವಿಜೃಂಭಣೆಯಿಂದ ಅವರನ್ನು ಸ್ವಾಗತ ಮಾಡಿಕೊಂಡರು. ಪ್ಲಿಮಾತಿನಲ್ಲಿ ಇಂಥಾ ಜನ ಸಂದಣಿಯು ಹಿಂದೆ ಎಂದೂ ಕೂಡಲಿಲ್ಲ. ಇಂಥಾ ಸ್ವಾಗತವೂ ಹಿಂದೆ ನಡೆಯಲಿಲ್ಲ.

ವಿಸ್ತುಲದಲ್ಲಿ ನಡೆಯುವ ಕದನಗಳಲ್ಲಿ ವಿಶೇಷ ಬದಲಾವಣೆ ತೋರುವುದಿಲ್ಲ. ಪ್ರಿಜೆಮ್ಯಸ್ಲಿಯ ದಕ್ಷಿಣದಲ್ಲಿ ರುಶ್ಯನರು ಆಸ್ಟ್ರೀಯವರನ್ನು ಸೋಲಿಸಿ ೬ ಆಫೀಸರರನ್ನೂ ೫೦೦ ಸೈನಿಕರನ್ನೂ ಅನೇಕ ತೋಪುಗಳನ್ನೂ ಶೆರೆ ಹಿಡಿದರು.

[illegible] ಎಂಬಲ್ಲಿ ಸರ್ವಿಯನರೂ ಮೊಂಟೆನಿಗ್ರೊಯನರೂ ಆಸ್ಟ್ರೀಯವರನ್ನು ಪೂರ್ಣವಾಗಿ ಸೋಲಿಸಿರುವರು.

ತಾ. 19ನೇ ಒಕ್ಟೋಬರ.

ಫ್ರಾನ್ಸ್:—ಸಂಯುಕ್ತ ಸೇನೆಗಳು [illegible]

[illegible]

ತಮ್ಮ ನೆಲೆಗಳನ್ನು ಕಾಪಾಡಿಕೊಂಡಿರುವರು. ಲಿಲ್ಲೆಯ ಕಡೆಗಿರುವ ಲೆವಂಟಿಲ್ ಫ್ರೆಂಚರ ಸ್ವಾಧೀನವಾಗಿದೆಂತ ಫ್ರೆಂಚ ಸರಕಾರದವರು ಪ್ರಕಟಿಸಿದ್ದಾರೆ.

ಜರ್ಮನರ ಸಮರ ನಾವೆಯು ಉತ್ತರ ಕಡಲಲ್ಲಿ ಬ್ರಿಟಿಷರ "ಥೆಸುಸ್" ಎಂಬ ಕ್ರೂಜರ್ ನಾವೆಯ ಮೇಲ್ಬಾಯಿತು. ಆದರೆ ಗುರಿ ತಪ್ಪಿಹೋಯಿತು. ಅದೇ ಕಾಲದಲ್ಲಿ "ಹೊಕೆ" ಎಂಬ ಬ್ರಿಟಿಷ ಕ್ರೂಜರಿನ ಮೇಲ್ಬಾಯ್ದು ಅದನ್ನು ಮುಣುಗಿಸಿಬಿಟ್ಟಿತು. ಈ ಕ್ರೂಜರಿನಲ್ಲಿ ಹತಶೇಷರಾದ ಮೂರು ಆಫೀಸರರನ್ನೂ ೪೯ ಸೈನಿಕರನ್ನೂ ಒಂದು ದೋಣಿಯು ಅಬರ್ಡೀನಿನಲ್ಲಿ ಇಳಿಸಿರುವುದು.

"ಹೊಕೆ" ಕ್ರೂಜರ್ ನಾವೆಯು ೫ ನಿಮಿಷದೊಳಗೆ ಮುಣುಗಿಹೋದುದರಿಂದ ನಾವಿಕರು ದೋಣಿಗಳಲ್ಲಿ ತಪ್ಪಿಸಿಕೊಂಡರು. ಕೆಲವರು ನಾಶವಾಗಿ ಹೋದರು. ಒಬ್ಬ ಆಫೀಸರನೂ ೨೪ ಸೈನಿಕರೂ ತೆಪ್ಪದಲ್ಲಿ ಪುನಃ ದಡಸೇರಿರುವರು.

ಮೈಸೂರು ಮಹಾರಾಜರವರು ರಣರಂಗಕ್ಕೆ ಹೋದ ಮೈಸೂರಿನ ಸೈನಿಕರಿಗೆ ಈ ರೀತಿ ತಂತೀ ಬಿಟ್ಟಿರುವರು:—ನೀವು ನಮ್ಮ ಪ್ರೀತಿಪಾತ್ರರಾದ ಸಾಮ್ರಾಜರ ಪರವಾಗಿ ಧೈರ್ಯಸ್ಥರಾಗಿ ಕಾದಾಡಿ ಮೈಸೂರಿನ ಯಶಸ್ಸನ್ನು ತಕ್ಕ ಹಾಗೆ ಕಾಪಾಡುವಿರೆಂದು ನಂಬಿದ್ದೇನೆ. ನಾನು ನನ್ನ ಧೈರ್ಯಶಾಲಿಗಳಾದ ಸೇನೆಯ ಅಭಿವೃದ್ಧಿಯನ್ನು ವಿಶೇಷ ಆತುರತೆಯಿಂದ ಹಿಂಬಾಲಿಸುತ್ತಿರುವೆನು. ನಿಮ್ಮ ಹೆಂಡತಿ ಮಕ್ಕಳ ವಿಷಯವಾಗಿ ಜಾಗ್ರತೆ ತಕ್ಕೊಳ್ಳುವದೇ ನನ್ನ ಪ್ರಥಮ ಚಿಂತೆಯಾಗಿರುವುದೆಂಬದನ್ನು ದೃಢ ನಂಬಿರಿ. ನಿಮಗೆ ಮಂಗಲವಾಗಲಿ".

ಆಸ್ಟ್ರಿಯದ ಟ್ರಿಸ್ಟೆ ಪಟ್ಟಣದಲ್ಲಿ ಆಯುಧ ಶಾಲೆಗೆ ಬೆಂಕಿ ಬಿದ್ದುದರಿಂದ ೬ ಡಿಸ್ಟ್ರೋಯರ್ ಯುದ್ಧನಾವೆಗಳು ಸುಟ್ಟುಹೋದವು. ಒಂದು ಕ್ರೂಜರ್ ನಾವೆಯೂ ಸುಟ್ಟುಹೋಯಿತು.

ಜಾಪಾನ್:—ಜಾಪಾನರ ಯುದ್ಧಹಡಗವು ತ್ಸಿಂಗ್‌ಟಾವೊದಲ್ಲಿ ಇಲ್ಟಿಸ್ ಮತ್ತು ಕೈಸರ್ ಎಂಬ ಹೆಸರಿನ ಕೋಟೆಗಳ ಒಂದು ಭಾಗವನ್ನು ಕೆಡವಿರುವದು. ಆಕಾಶನಾವೆಗಳು ಬಾಂಬ್‌ಗಳನ್ನು ಹಾಕುತ್ತಿರುವವು. ಬ್ರಿಟಿಷರಲ್ಲಿ ಒಬ್ಬನು ಮೃತಪಟ್ಟನು. ಇಬ್ಬರು ಮೃತಪಟ್ಟರು. ಜಾಪಾನರಲ್ಲಿ ಪ್ರಾಣಾಪಾಯವಾಗಲಿಲ್ಲ.

ತಾ. 20ನೇ ಒಕ್ಟೋಬರ.

ಬೆಲ್ಜಿಯಮ್:—ಜರ್ಮನರು ಕಳೆದ ಬ್ರಹಸ್ಪತಿವಾರ ಒಸ್ಟೆಂಡನ್ನು ವಶಮಾಡಿಕೊಂಡರೆಂತ ಪ್ರಕಟವಾಗಿದೆ.

ಎಂಟವರ್ಪಿನಲ್ಲಿ ಜರ್ಮನರು ೧೬,೦೧೦ ನೌಕಾವಳಿ ಸೈನಿಕರನ್ನು ಇಟ್ಟು ಬಲಕಾಯಿಸಿರುವರು.

ಘೆಂಟಿನಲ್ಲಿ ೧೦೦,೦೦೦ ಜರ್ಮನರಿರುವರೆಂತ ಹೊಲ್ಲೆಂಡಿನಲ್ಲಿ ಪ್ರಕಟವಾಗಿದೆ.

ಡಚ್ಚ ಕರಾವಳಿಯಲ್ಲಿ ಹಡಗು ಪಡೆಯ ಸಂಗ್ರಾಮ ನಡೆದು ಬ್ರಿಟಿಷರು ಜರ್ಮನರ ನಾಲ್ಕು ಡಿಸ್ಟ್ರೋಯರ್ ಎಂಬ ಯುದ್ಧ ನಾವೆಗಳನ್ನು ಮುಣುಗಿಸಿದರು.

ಫಿನ್‌ಲೇಂಡ್ ಕೊಲ್ಲಿಯ ಸಮೀಪ ಜರ್ಮನ ಸಮರ ನಾವೆಗಳ ಉಪಟಳವನ್ನು ತಗ್ಗಿಸುವ ಬಗ್ಗೆ ರುಶ್ಯನರು ರಿಗ್ಗ ಕೊಲ್ಲಿಯಿಂದ ಆಲೇಂಡ ದ್ವೀಪದ ವರೆಗೆ ವಿಸ್ತರಿಸಿರುವ ಸಮುದ್ರದಲ್ಲಿ ಸಿಡಿಮದ್ದಿನ ಗಣಿಗಳನ್ನು ಹಾಕಿರುವರು.

ಜರ್ಮನರ "ಗಿಯರ್" ಎಂಬ ಕ್ರೂಜರ್ ನಾವೆಯು ದುರುಸ್ತಿ ಬಗ್ಗೆ ಹೊನಲೂಲಿಗೆ ತಲಪಿರುವುದು. ಅದರ ಇಂಜಿನನ್ನು ದುರುಸ್ತಿ ಮಾಡುವರೆ ಕೆಲವು ವಾರ ಹಿಡಿಯುವುದು.

ವಾರ್‌ಶೋದ ಸಮೀಪ ನಡೆದ ಕದನದಲ್ಲಿ ಜರ್ಮನರು ಲೊಡ್ಜಿಗೆ ಹಿಂದೆ ಸರಿದಿರುವರು. ಜರ್ಮನರಲ್ಲಿ ೧೦,೦೦೦ ಮಂದಿ ನಷ್ಟವಾಗಿರುವರು.

ವಾರ್‌ಶೋದಲ್ಲಿ ಜರ್ಮನರು ಪ್ರಥಮತಃ ಹಿಮ್ಮೆಟ್ಟಿ ಬೆಂಬಲ ಸೇನೆಯು ಬಂದು ಸೇರಿದ ನಂತರ ಪುನಃ ಕಾದಾಡಲು ಪ್ರಾರಂಭಿಸಿದರು. ರುಶ್ಯನರ ತೋಪು ಸೇನೆಯು ತಮಗಿಂತ ಐದಷ್ಟು ಹೆಚ್ಚಿಗೆ ಇರುವ [illegible]ರ್ಮನರ ಸೇನೆಯನ್ನು ಎದುರಾಡಿ ನೆಲೆಗಳನ್ನು ಕಾಪಾಡಿಕೊಂಡಿತು.

ರಣರಂಗವು ಈಗ ವಾರ್‌ಶೋದ ಉತ್ತರದಿಂದ ಪ್ರೆಜೆಮಿಸ್ಲ್‌ನ ದಕ್ಷಿಣದ ವರೆಗೆ ೧೬೦ ಮೈಲುಗಳಿಗೆ ವಿಸ್ತರಿಸಿರುವುದು. ಆಸ್ಟ್ರೀಯ ಮತ್ತು ಜರ್ಮನ ಸೇನೆಯು ಪ್ರಿಜ್ಮಿಗೆ [illegible] ಯುವಾಗಿರುವುದು. ರುಶ್ಯರ ಸೇನೆಯು [illegible] ದ್ದಾಗಿದೆ.

[illegible]

[illegible] ಕಳುಹಿಸುತ್ತಿವೆಂದೂ ತಿಳಿದು ಬರುತ್ತದೆ.

ರುಶ್ಯನರು ಜರ್ಮನರ ೨ ಹಡಗುಗಳನ್ನು [illegible]. "ಬ್ಲೇಕ್ ಸಿ" ಕಡಲಲ್ಲಿ ಫಿರಂಗಿಗಳ ಗರ್ಜನೆ ಕೇಳಿಸುತ್ತಿರುವುದು.

ಹಿಂದೂಸ್ಥಾನ:—ಮದ್ರಾಸ್ ಸಂಸ್ಥಾನದ ಆಯಾ ಪ್ರದೇಶಗಳಲ್ಲಿ ಜರ್ಮನರ ವಾಯು ವಿಮಾನವು ಹಾರುತ್ತಿದೆಂಬದಾಗಿ ಹಬ್ಬಿದ ವಾರ್ತೆಯು ಬರೇ ಸುಳ್ಳಾಗಿರುವುದೆಂದು ಮದ್ರಾಸ್ ಸರಕಾರದವರು ಪ್ರಕಟಿಸಿರುವರು.

ತಾ. 22ನೇ ಒಕ್ಟೋಬರ.

ಎಪ್ರಿಸಿನ ದಕ್ಷಿಣದಲ್ಲಿ ಬ್ರಿಟಿಷರ ಸೇನೆಯು ೧೦ ದಿವಸಗಳಿಂದ ಎಡೆಬಿಡದೆ ಕಾದಾಡುತ್ತಿದೆ. ಇಲ್ಲಿ ಬ್ರಿಟಿಷ ಸೇನೆಯು ಜರ್ಮನರ ಬಲವಾದ ಸೇನೆಗಳನ್ನು ಹಿಮ್ಮೆಟ್ಟಿರುವರು. ಜೊಲ್ಲೆಸಿನಲ್ಲಿ ಬ್ರಿಟಿಷ ಸೇನೆಗೆ ಸ್ಥಳ ದೊರಕಿರುವುದು. ಮಧ್ಯದಲ್ಲಿ ಬದಲಾವಣೆಯಾಗಲಿಲ್ಲ. ಸಂಯುಕ್ತ ಸೇನೆಯ ಮುಂದರಿದ ಕಾವಲು ಸೇನೆಯು ಬೊಸ್ಟೊವ್ಸ್ಕಿ—ಬೈರಿಸ್—ಸಲ್ಬೀನ್ ನೆಲೆಯಲ್ಲಿರುವುದು. ಥಾನೆಸನ್ನು ಫ್ರೆಂಚರು ಇನ್ನೂ ಸ್ವಾಧೀನದಲ್ಲಿಟ್ಟುಕೊಂಡಿರುವರು.

ಜರ್ಮನರು ವಶಮಾಡಿಕೊಂಡ ಒಸ್ಟೆಂಡ ಪಟ್ಟಣವನ್ನು ಸಂಯುಕ್ತಸೇನೆಯು ಜರ್ಮನರಿಂದ ಹಿಂದೆ ತಕ್ಕೊಂಡಿರುವದೆಂಬ ವಾರ್ತೆ ಇದೆ ಎಂತ 'ದಿ ಮೊರ್ನಿಂಗ್‌ಪೋಸ್ಟು' ಪತ್ರಿಕೆಯ ಬಾತ್ಮೀದಾರರು ತಿಳಿಸುವರು.

ಭಾರತೀಯ ಸೇನೆಯೂ ರಣರಂಗಕ್ಕೆ ಸುರಕ್ಷಿತವಾಗಿ ತಲಪಿರುವುದೆಂಬ ವಾರ್ತೆ ಬಂದಿರುವುದು.

ನೌಕಾವಳಿ ಸಂಗ್ರಾಮ:—ಕಿಯಾಚೋ ಆಖಾತದಲ್ಲಿ ಜಾಪಾನರ "ಟಕಾಚಿಯೊ" ಎಂಬ ಕ್ರೂಜರ್ ನಾವೆಯು ಸಿಡಿಮದ್ದಿನ ಗಣಿಗೆ ತಾಗಿ ಮುಣುಗಿ ಹೋಯಿತು. ಒಬ್ಬ ಆಫೀಸರನೂ, ಒಬ್ಬ ನೌಸೈನಿಕನೂ ಬದುಕಿರುವರು. ಉಳಿದವರು ನಾಶವಾಗಿ ಹೋದರು. ಈ ಕ್ರೂಜರ್ ನಾವೆಯು ೩,೦೦೦ ಟನ್ ಭರಾವಣಿಯುಳ್ಳದ್ದಾಗಿತ್ತು. ೨೫೪ ಮಂದಿ ಮುಣುಗಿ ಸತ್ತರು.

ಬಾಲ್ಕಾನ್:—ಡೆಲ್ಮೇಶಿಯನ್ ಕರಾವಳಿಯನ್ನು ಸುತ್ತುತ್ತಿದ್ದ ಫ್ರೆಂಚ ನೌಕಾವಳಿಯ ಮೇಲೆ ಆಸ್ಟ್ರೀಯನರ ಸಮರ ನಾವೆಯು ಬಿತ್ತು. ಆದರೆ ಫ್ರೆಂಚರ ಕ್ರೂಜರ್ ನಾವೆಯು ಆಸ್ಟ್ರೀಯನರ ಒಂದು ಸಮರ ನಾವೆಯನ್ನು ಮುಣುಗಿಸಿ, ಕೆಟ್ಟಾರೋಗೆ ಗುಂಡು ಹಾರಿಸಲು ಪ್ರಾರಂಭಿಸಿರುವುದು.

ಆಸ್ಟ್ರಿಯನರ ವಾಯು ನಾವೆಗಳು ಫ್ರೆಂಚ ಯುದ್ಧ ಹಡಗಗಳ ಮೇಲೆ "ಬೊಂಬು" ಬಿಸಾಡಿರುವುದು. ಆದರೆ ಹಡಗಗಳಿಗೆ ಕೆಡಕಾಗಲಿಲ್ಲ.

ದಕ್ಷಿಣ ಆಫ್ರೀಕ:—ವಾಯುವ್ಯ ಕೇಪ್ ಪ್ರಾಂತ್ಯದ ಸ್ಸಿನ ಕರ್ನೆಲ್ ಮೆರಿಟ್ಜ ಎಂಬವನು ಯೂನ್ಯನ್ ಸರಕಾರದವರಿಗೆ ವಿರೋಧವಾಗಿ ದಂಗೆ ಎದ್ದು ಜರ್ಮನರೊಡನೆ ಕೂಡಲು ಸಂಧಾನಮಾಡಿಕೊಂಡನು. ಯೂನ್ಯನ್ [illegible] ಕಾರದವರು ಕರ್ನೆಲ್ ಮೆರಿಟ್ಜನನ ಬದಲಿಗೆ [illegible] ಕರ್ನೆಲರಾಗಿ ನೇಮಿಸಿ ಯುದ್ಧಕಾನೂನನ್ನು [illegible] ಸರಕಾರದವರು ಎಲ್ಲಾ ದಂಗೆಗಾರರನ್ನು [illegible] ರನ್ನೂ ತಕ್ಕ ರೀತಿಯಲ್ಲಿ ದಂಡಿಸುವರು. [illegible] ಟ್ಜನನ ಕೆಳಗಿದ್ದ ಸೈನಿಕರಲ್ಲಿ [illegible] ದವರು [illegible] ಕೈದುಮಾಡಿ [illegible]

[illegible]

ಜನರಲ್ ಬೋಥರವರಿಗೆ ಸರ್ವ ವಿಧದಲ್ಲಿಯೂ ಸಹಾಯ ಮಾಡುವರೆ ಸಿದ್ಧವಿದ್ದೇವೆಂತ ತಿಳಿಸಿರುವರು. ರಾಂಡಿನ ಡಚ್ಚ ಪತ್ರಿಕೆಗಳು ಕರ್ನಲ್ ಮೆರಿಟ್ಜನ ವಿಶ್ವಾಸ ಘಾತುಕ ಕೃತ್ಯವು ಬರೇ ನಾಚಿಕೆಗೆ ಯೋಗ್ಯವೆಂದು ಹೇಳಿ ಯುನ್ಯನ್ ಸರಕಾರಕ್ಕೆ ಸಹಾಯಮಾಡಬೇಕೆಂದು ದಕ್ಷಿಣ ಆಫ್ರೀಕದಲ್ಲಿರುವ ಡಚ್ಚರೆಲ್ಲರನ್ನು ಕೇಳಿಕೊಂಡಿರುವವು. ಕರ್ನಲ್ ಮೆರಿಟ್ಜನ ಕೈಕೆಳಗೆ ೫೦೦ ಸೈನಿಕರು ಮಾತ್ರ ಇದ್ದರು. ಜನರಲ್ ಬೋಥರವರು ಒಂದು ದೊಡ್ಡ ಸೇನೆಯನ್ನು ದಂಗೆಗಾರರಿಗೆ ವಿರೋಧವಾಗಿ ಕಳುಹಿಸಿಕೊಟ್ಟಿರುವರು. ಉತ್ತರ ಒರೆಂಜ್ ಫ್ರೀ ಸ್ಟೇಟಿನಲ್ಲಿರುವ ಕಮೆಂಡರರು ಸಭೆಕೂಡಿ ಕರ್ನಲ್ ಮೆರಿಟ್ಜನ ನೀಚ ವರ್ತನವನ್ನು ಖಂಡಿಸಿ, ಯುನ್ಯನ್ ಸರಕಾರಕ್ಕೆ ತಾವು ಸದಾ ಭಕ್ತಿಯಿಂದಿರುವೆವೆಂತ ತಿಳಿಸಿರುವರು. ಕರ್ನಲ್ ಮೆರಿಟ್ಜನ ವರ್ತನವು ಒರೆಂಜ್ ಫ್ರೀಸ್ಟೇಟಿಗೆ ಅವಮರ್ಯಾದೆಯನ್ನು ತರುವಂಥಾದ್ದಾಗಿದೆಂದು ಅವರು ಸರಕಾರಕ್ಕೆ ತಿಳಿಸಿರುವರು.

ಉತ್ತರ ಹಿಂದೂಸ್ಥಾನ.

ಮುಂಬಾಯಿಯ ಪೆಸ್ಟೋನ್ಜಿ ಕರ್ಸೆಟ್ಜಿ ಬಿಲಿಮೋರ್ ಎಂಬ ಬೇರಿಸ್ಟರರು ಒಂದರೆ ಮೊಕದ್ದಮೆಯಲ್ಲಿ ನ್ಯಾಯ ತಪ್ಪಿ ನಡದರೆಂಬದಾಗಿ ಅವರ ಮೇಲೆ ಮೊಕದ್ದಮೆ ನಡೆದು ಹೈಕೋರ್ಟಿನಲ್ಲಿ ಅವರ ಸನ್ನದನ್ನು ಎರಡು ವರ್ಷಕ್ಕೆ ವಜಾ ಪಡಿಸಿದರು.

ಮುಂಬಾಯಿಯ ಚಾ ಅಂಗಡಿಯ ಕಾಜಿ ಶೇಖ್ ಅಬ್ದುಲ್ಲ ಎಂಬವನು ನಜ್ ಮುದ್ದೀನ್ ಮತ್ತು ಇತರ ೯ ಮಂದಿಗೆ ಚಾದಲ್ಲಿ "ದತ್ತೂರ" ಎಂಬ ವಿಷವನ್ನು ಹಾಕಿ ಕೊಟ್ಟು ಕೊಲ್ಲಬೇಕೆಂದಿದ್ದನೆಂಬದಾಗಿ ಅಪಾದಿಸಲ್ಪಟ್ಟಿದ್ದನು. ಸುಮಾರು ೨೦ ಮಂದಿ ಮಹಮ್ಮದೀಯರಿಗೆ ಇವನು ಚಾದಲ್ಲಿ ದತ್ತೂರವನ್ನು ಹಾಕಿ ಕೊಟ್ಟನು. ಎಲ್ಲರಿಗೂ ಕೂಡ್ಲೇ ವ್ಯಾಧಿ ಹಿಡಿಯಿತು. ನಜಮುದ್ದೀನ್ ಎಂಬವನಿಗೆ ಈ ವಿಷದಿಂದ ಹುಚ್ಚು ಹಿಡಿದಂತಾಗಿ ಸಮುದ್ರಕ್ಕೆ ಹೋಗಿ ಮುಣುಗಿ ಸತ್ತನು ಎಂಬದಾಗಿ ಸರಕಾರದ ಕಡೆಯ ವಾದವಾಗಿರುವುದು. ಅಪಾದಿತನು ಕೆಳಕೋರ್ಟಿನಲ್ಲಿ ಮಾಗೂಲ ಕೊಡಲು ನಿರಾಕರಿಸಿದ್ದರಿಂದ ಸೆಷ್ಷಿಗೆ ಕಮಿಟ್ ಮಾಡಲ್ಪಟ್ಟಿರುವನು.

ಬೇಗನೇ ಜರಗಲಿಕ್ಕಿರುವ ಮುಹಮ್ಮದೀಯರ ಹಬ್ಬದ ದಿವಸ ಮಹಮ್ಮದೀಯರು ಬೀದಿಯಲ್ಲಿ ದನಗಳನ್ನು ಯಜ್ಞಮಾಡಲು ಮೆರವಣಿಗೆ ಕೊಂಡು ಹೋಗುತ್ತಾರೆಂಬದರ ವಿಷಯವಾಗಿ ಲಖನೋ ಡಿಪ್ಯುಟಿ ಪೋಲೀಸ್ ಕಮಿಷನರರು "ಸ್ಟೇಟ್ಸ್‌ಮನ್" ಪತ್ರಿಕೆಗೆ ಈ ರೀತಿ ಬರದಿರುವರು:— "ತಾ. ೧೩ರಲ್ಲಿ ಹಿಂದೂಗಳ ಮತ್ತು ಮಹಮ್ಮದೀಯರ ಮುಂದಾಳುಗಳ ಒಂದು ಸಭೆಯು ಕೂಡಿತ್ತು. ದನಕರುಗಳನ್ನು ದಾರಿಯಲ್ಲಿ ಮೆರವಣಿಗೆ ಕೊಂಡುಹೋಗಕೂಡದೆಂಬದಾಗಿ ಈ ಸಭೆಯಲ್ಲಿ ನಿರ್ಣಯವಾಗಿರುವುದು."

ಇಂಡಿಯಾ ಸರಕಾರವು ಡಿಲ್ಲಿಗೆ ತರಲ್ಪಟ್ಟ ನಂತರ ಬರುವ ಶ್ರೇಷ್ಠ ನ್ಯಾಯಾಧಿಪತ್ಯದಾಯಕ ಸಭೆಯ ಕಾರ್ಯನಿಯಮಕ ಪಟ್ಟಿಯು ತಯಾರಾಗುವುದು.

"ಕೊಮಗಾಟಮಾರು" ಹಡಗದಲ್ಲಿ ಕೆನಡಾದಿಂದ ಹಿಂದೆ ಬಂದ ಪಂಜಾಬಿಗಳು ನಡಿಸಿದ ಉಪಟಳದಲ್ಲಿ ಒಂದು ಕಡೆಯಲ್ಲಿ ಸರಕಾರದ ಆಫೀಸರರಲ್ಲಿ ಕೆಲವರೂ ಮತ್ತೊಂದು ಕಡೆಯಲ್ಲಿ ಪಂಜಾಬಿಗಳಲ್ಲಿ ಕೆಲವರೂ ಜೀವ ನಷ್ಟಪಟ್ಟದ್ದರಿಂದ ವೈಸರಾಯ ಪ್ರಭುಗಳವರು ಬಹಳವಾಗಿ ವಿಷಾದಿಸಿ ಈ ವಿಷಯವಾದ ತಕ್ಕ ವಿಚಾರಣೆ ನಡಸುವರೆ ಕೂಡ್ಲೇ ಒಂದು ಕಮಿಶ್ಯನನ್ನೂ ಏರ್ಪಡಿಸಬೇಕೆಂದು ವೈಸರಾಯ ಪ್ರಭುಗಳವರು ಆಜ್ಞಾಪಿಸಿರುವರು. ಈ ಕಮಿಶ್ಯನಿಗೆ ಒನರೆಬಲ್ ಸರ್ ವಿನ್ಸೆಂಟರವರು ಪ್ರೆಸಿಡೆಂಟರಾಗಿಯೂ, ಬರ್ದವಾನಿನ ಒನರೆಬಲ್ ಮಹಾರಾಜಧಿರಾಜ ಬಿಜೋಯಿಚಂದ್ ಮಹತಾಬರವರು, ಒನರೆಬಲ್ ಫಾಗನ್, (ಪಂಜಾಬು) ಸರ್ದಾರ್ ದಲ್ಜಿತ ಸಿಂಘ ಮತ್ತು ಮೆ| ವಾಲ್ಮ್ಸ್ಲೆ (ಬಂಗಾಳ)ಯವರು ಮೆಂಬರರಾಗಿಯೂ ನೇಮಿಸಲ್ಪಟ್ಟಿರುವರು.

ತಾ. ೧೫ರಲ್ಲಿ ಮುಂಬಾಯಿಂದ ೭೯ ಮೈಲು ದೂರದಲ್ಲಿರುವ ಘಟ್ಟದಲ್ಲಿ ಎರಡು ಗೂಡ್ಸ ಟ್ರೇನುಗಳು [illegible] ತಗಲಿ ಭಾರತೀಯರು ಮೃತರಾದರು, [illegible] ರೆಂಬ ವಾರ್ತೆ ಬಂದಿರುವುದು.

ದಕ್ಷಿಣ ಹಿಂದೂಸ್ಥಾನ.

ಮದ್ರಾಸ್ ಗವರ್ನರ ದೊರೆಗಳವರ ಮಲಬಾರ್ ಡಿಸ್ಟ್ರಿಕ್ಟ್, ತಿರುವಂಕೋಡು, ಕೊಚ್ಚಿ, ದಕ್ಷಿಣಕನ್ನಡಾ ಜಿಲ್ಲೆಗಳ ಸಂದರ್ಶನೆಯು ತಾ. ೧೬ಕ್ಕೆ ಪ್ರಾರಂಭವಾಗಿರುವುದು. ತಾ. ೧೫ರಲ್ಲಿ ಪರಿವಾರ ಸಹಿತ ಮದ್ರಾಸನ್ನು ಬಿಟ್ಟು ತಾ. ೧೬ರಲ್ಲಿ ಪಾಲ್ಘಾಟಿಗೆ ಬಂದು ತಲಪಿದರು. ರೈಲ್ವೇ ಸ್ಟೇಶನಿಂದ ಮೋಟರ್ ಬಂಡಿಯಲ್ಲಿ ಬಾಸಲ್ ಮಿಶ್ಯನ್ ಹಾಯಸ್ಕೂಲಿಗೆ ಹೋಗಿ ಸಭಾಸದನದಲ್ಲಿ ಆಸೀನರಾದ ಬಳಿಕ ಮುನಿಸಿಪಾಲಿಟಿಯವರು ವಿಜ್ಞಾಪನಾ ಪತ್ರವನ್ನು ಓದಿದರು. ಪ್ರಭುಗಳವರು ಕಾಲೋಚಿತ ಉತ್ತರವನ್ನಿತ್ತರು. ಅಲ್ಲಿಂದ ಪ್ರಭುಗಳವರು ಸಬ್ ಜೈಲ್, ಪೋಲೀಸ್ ಸ್ಟೇಶನ್, ತಾಲೂಕು ಮತ್ತು ಇತರ ಆಫೀಸುಗಳನ್ನು ಸಂದರ್ಶಿಸಿ ಸಿವಿಲ್ ಆಸ್ಪತ್ರಿಗೆ ಚಿತ್ತೈಸಿದರು. ನಂತರ ವಿಕ್ಟೋರಿಯ ಕಾಲೇಜು, ಹೊಸ್ಟೆಲ್‌ಗಳನ್ನು ಸಂದರ್ಶಿಸಿದರು. ಸಾಯಂಕಾಲ ಸಬ್ ಕಲೆಕ್ಟರರ ಬಂಗ್ಲೆಯಲ್ಲಿ ಗಾರ್ಡನ್ ಪಾರ್ಟಿಯು ಕೊಡೋಣಾಯಿತು. ತಾ. ೧೭ರಲ್ಲಿ ಕೆಲವು ಶಾಲೆಗಳನ್ನೂ ಸಂದರ್ಶಿಸಿದರು. ಅಲ್ಲಿಂದ ಕೊಲ್ಲೆಂಗೋಡಿಗೆ ತೆರಳಿದರು. ಕೊಲ್ಲೆಂಗೋಡಿನಲ್ಲಿ ರಾಜರೂ, ಅವರ ಸಹೋದರರೂ ಪ್ರಭುಗಳವರನ್ನು ಅರಮನೆಯಲ್ಲಿ ಸ್ವಾಗತ ಮಾಡಿಕೊಂಡರು. ನಂತರ ಪೇನಸ್ಲಾಡ್ ಜನರು ಮತ್ತು ಕೇರಳ ಬ್ರಹ್ಮಸಮಾಜದವರು ವಿಜ್ಞಾಪನಾ ಪತ್ರಿಕೆಗಳನ್ನು ಓದಿದರು. ಅಲ್ಲಿಂದ ಪಾಲ್ಘಾಟಿಗೆ ಹಿಂದೆರಳಿದರು.

ಮದ್ರಾಸಿನಲ್ಲಿ ಈ ವರ್ಷಾಂತ್ಯದಲ್ಲಿ ಕೂಡಲಿಕ್ಕಿರುವ ನೇಶನಲ್ ಕಾಂಗ್ರೆಸ್ ಎಂಬ ರಾಷ್ಟ್ರೀಯ ಸಭೆಗೆ ಮೆ| ಭೂಪೇಂದ್ರನಾಥ ಬಾಸುರವರನ್ನು ಪ್ರೆಸಿಡೆಂಟರಾಗಿ ಆರಿಸಿರುವರು.

ಮೆ| ಭೂಪೇಂದ್ರನಾಥ ಬಾಸುರವರು ಇಂಗ್ಲಾಂಡಿನಿಂದ ತಾ. ೧೭ರಲ್ಲಿ ಮುಂಬಾಯಿಗೆ ಬಂದಿಳಿದರು.

ಬಹುಮಾನಸ್ಥರಾದ ಮೆ| ಗೋಖಲೆಯವರು ಸೀಮೆಯಲ್ಲಿ ತಕ್ಕಷ್ಟು ಆರೋಗ್ಯ ಹೊಂದಿರುವರು. ನವಂಬರ ತಿಂಗಳ ಮಧ್ಯದಲ್ಲಿ ಹಿಂತೆರಳುವರೆಂತ ತಿಳಿದು ಬರುತ್ತದೆ.

ದಕ್ಷಿಣ ಕನ್ನಡ.

ಕಾಪು:—ಇಲ್ಲಿಯ ಬೋರ್ಡು ಕನ್ನಡ ಶಾಲೆಯಲ್ಲಿ ತಾ. ೧೭ನೇ ದಿನ ಉಪಾಧ್ಯಾಯರುಗಳ ಮಹಾ ಸಭೆಯು ನೆರೆದು ಬಂದಿತ್ತು. ಕಾರ್ಕಳ ಸಬ್ ರೇಂಜಿನ ಸುಪರ್‌ವೈಜರಾದ ರಾ| ರಾಮರಾವ್ ಹೆಗ್ಡೆಯವರು ನೆರೆದ ಸಭೆಯ ಅಧ್ಯಕ್ಷರಾಗಿದ್ದರು. ಸಭೆಯಲ್ಲಿ ಮೊಟ್ಟ ಮೊದಲು ಕನ್ನಡ ಶಾಲಾ ಮಕ್ಕಳು ಸ್ವಾಗತ ವ ದೇವಸ್ತುತಿ ಹಾಡುಗಳನ್ನು ಹಾಡಿದರು. ನಂತರ ಸದರಿ ಶಾಲೆಯ IIIನೇ ಮಾಸ್ತರರಾದ ಎಮ್. ಆನಂದರಾಯರು ಉಪಾಧ್ಯಾಯರ ಕರ್ತವ್ಯ, ವರ್ತಮಾನ ಪತ್ರಿಕೆಗಳನ್ನು ತರಿಸುವದರ ಪ್ರಯೋಜನ ವ ಪುಸ್ತಕಾಲಯುಗಳ ಉಪಯೋಗಗಳ ವಿಷಯ ಒಂದು ಉಪನ್ಯಾಸವನ್ನು ಓದಿದರು. ಒಡನೆ ಪಂಚಮಶಾಲಾ ಮಕ್ಕಳ ರಾಜಗೀತ, ದೇವಸ್ತುತಿ ಹಾಡುಗಳನ್ನೂ, ಹಿಂದೂಸ್ಥಾನೀ ಶಾಲಾ ಮಕ್ಕಳ ಕೋಲಾಟ, ವ ಈಗ ನಡಿಯುವ ಮಹಾ ಯುದ್ಧದಲ್ಲಿ ನಮ್ಮ ರಾಜರಿಗೆ ಜಯವಾಗಲಿ ಎಂಬದನ್ನು ಸೂಚಿಸುವ ಹಿಂದೂಸ್ಥಾನೀ ಪದ್ಯ ಹೇಳಿದ್ದನ್ನು ಕೇಳಿ ಸಭಿಕರು ಆನಂದ ಸಾಗರದಲ್ಲಿ ಮುಣುಗಿದರು. ನಂತರ ಕಾಪು ಬೋರ್ಡು ಶಾಲಾ ಹೆಡ್ ಮಾಸ್ತರರು (1) ಯರ್ಮಾಳ ಸೆಕ್ಷನನ್ನು ಕಾಪು, ಯರ್ಮಾಳ, ಪಡಬಿದ್ರೆ ಎಂಬದಾಗಿ ೩ ಫಿರ್ಕಗಳಾಗಿ ವಿಂಗಡಿಸಿ ಪ್ರತಿ ತಿಂಗಳಲ್ಲಿ ಸಭೆ ನೆರೆದು ಬರಬೇಕು. (೨) ಪ್ರತಿ ಒಂದು ಫಿರ್ಕಾದವರು ವರ್ತಮಾನ ಪತ್ರಿಕೆಗಳನ್ನು ತರಿಸುವದು, ಪುಸ್ತಕಾಲಯ ವಸ್ತು ಪ್ರದರ್ಶನಾಲಯಗಳನ್ನು ಸ್ಥಾಪಿಸಲು ಪ್ರಯತ್ನಿಸತಕ್ಕದ್ದು. (೩) ಪ್ರತಿ ಸಭೆಯಲ್ಲಿ ಯಾವದಾದರೊಂದರ ವಿಷಯ ಚರ್ಚೆಗಳು—ಪಾಠಗಳು ಕೊಡುವದು ಮುಂತಾದ್ದು ಇದ್ದು ತಿಳಿಯದ ಸಂಗತಿಗಳನ್ನು ಮಹಾ ಸಭೆಗೆ [illegible]ದುರಿಗೆ ಆಯಾ ಫಿರ್ಕದವರು ತಂದಿಡತಕ್ಕದ್ದು ಎಂದು ಹೇಳಿದ ಈ ಮೂರು ನಿರ್ಣಯಗಳನ್ನು ಯರ್ಮಾಳ ಶಾಲಾ ಹೆಡ್‌ಮಾಸ್ತರರು ಅನುಮೋದಿಸಿದರು. ಅನಂತರ ಅಧ್ಯಕ್ಷರು ಎದ್ದುನಿಂತು "ಕನ್ನಡ, ಪಂಚಮ, ಹಿಂದೂ, ಅಂಡುಮನ್ ಮಕ್ಕಳುಗಳು ಜೊತೆಗೊಂಡು ಸಭಿಕರನ್ನು ಸಂತೋಷಪಡಿಸಿದ ಈ ದಿವಸ ಸುದಿನವಾಗಿ [illegible]

ಹೆಡ್ ಮಾಸ್ತರರು ಸೂಚಿಸಿದಂತೆ ೩ ನಿರ್ಣಯಗಳನ್ನು ನೆರವೇರಿಸುವದಕ್ಕೆ ಉಪಾಧ್ಯಾಯರಿಗೆ ಬಹು ಉಪಕಾರವೆಂದೇ ಹೇಳಬೇಕಾಗಿದೆ." ಎಂದು ತಮ್ಮ ಭಾಷಣವನ್ನು ಮುಗಿಸಿದೊಡನೆ ಶಾಲಾ ಬಾಲಕಿಯರು ನಮ್ಮ ರಾಜರಿಗೆ ಜಯವಾಗಲಿ ಎಂಬ ಪದ್ಯವನ್ನು ಬಲು ಸೊಗಸಾಗಿ ಹಾಡಿದರು.

ಪಡುಬಿದ್ರೆ:—ಇದೇ ಒಕ್ಟೋಬರ ತಾ.೧೧ರಲ್ಲು ಪಡುಬಿದ್ರೆ ಲೋಕಲ್‌ಫಂಡ್ ಬಂಗ್ಲೆಯಲ್ಲಿ ಯುದ್ಧ ಸಂಕಷ್ಟ ನಿವಾರಣಾರ್ಥ ಫಂಡಿನ ಯರ್ಮಾಳ ಫಿರ್ಕ ಉಪಕಮಿಟಿಯವರ ಒಂದು ಸಭೆಯು ಉಡ್ಪಿ ತಾಲೂಕು ತಹಸೀಲ್‌ದಾರರಾದ ಮಹಾರಾಜಶ್ರೀ ಕಾರ್ಕಳ ಶ್ರೀನಿವಾಸರಾವ್ ಅವರ್ಗಳವರ ಅಧ್ಯಕ್ಷತೆಯಲ್ಲಿ ಕೂಡಿ ಬಂತು. ಪ್ರಾರಂಭ ಶಾಲಾ ಮಕ್ಕಳು ಸ್ವಾಗತ ಹಾಡು ವ ನಮ್ಮ ಪ್ರಿಯ ಐದನೇ ಜೋರ್ಜರಿಗೆ ದೀರ್ಘಾಯುಷ್ಯವಾಗುವಂತೆಯೂ ಯುದ್ಧದಲ್ಲಿ ಬ್ರಿಟಿಷರಿಗೆ ಜಯವಾಗುವಂತೆಯೂ ಹೊಗಳಿಕೆ ಸೂಚನೆಯ ಹಾಡನ್ನು ಹಾಡಿದರು. ನಂತರ ಮು| ರಾ| ರಾ| ಎಮ್. ವಿಟ್ಠಳ ಕಾಮತ್, ಬಿ. ಎ. ಬಿ. ಯಲ್, ಇವರು ಸಭೆಯ ಉದ್ದೇಶವನ್ನು ವಿವರಿಸಿದರು. ರಾ| ಬೈಂದೂರು ನಾರಾಯಣರಾವ್ ಅವರ್ಗಳವರು "ಗ್ರಾಮಗಳ ನಿವಾಸಿಕರಾದ ನಾವು ಈಗ ನಡೆಯುವ ಯುದ್ಧಕಾಲದಲ್ಲಿ ನಮ್ಮ ಪ್ರಿಯ ಶ್ರೀಮನ್ಮಹಾರಾಜ ಚಕ್ರವರ್ತಿಯವರಲ್ಲಿ ನಮಗಿರುವ ಮನಃಪೂರ್ವಕವಾದ ವಿಶ್ವಾಸವನ್ನೂ ರಾಜಭಕ್ತಿಯನ್ನೂ ಸಮರ್ಪಿಸುವೆವು" ಎಂಬ ನಿರ್ಣಯವನ್ನು ಸಭಾ ಮುಂದಿಟ್ಟರು. ಸದರಿ ನಿರ್ಣಯವನ್ನು ರಾ| ಶ್ರೀನಿವಾಸ ಶ್ಯಾನುಭಾಗ, ರಾ| ರಾಮಯ್ಯ ಸೆಟ್ಟಿಗಳವರು ಅನುಮೋದಿಸಿದರು. ತದನಂತರ ರಾ| ವಕೀಲ ವೆಂಕಟೇಶ ಪ್ರಭುಗಳು ಈ ಫಿರ್ಕಾಯ ಗ್ರಾಮಗಳ ನಿವಾಸಿಕರು ವೈಸರಾಯ ಪ್ರಭುಗಳು ಏರ್ಪಡಿಸಿದ ಯುದ್ಧದ ಫಂಡಿಗೂ ಮದ್ರಾಸು ಯುದ್ಧದ ಫಂಡಿಗೂ ದ್ರವ್ಯವನ್ನು ಒದಗಿಸಿ ಕೊಡುವದಕ್ಕೆ ಏರ್ಪಾಡುಗಳನ್ನು ಮಾಡಬೇಕೆಂದು ಸಭಿಕರನ್ನು ವಿಜ್ಞಾಪಿಸಿ ಸದರಿ ಫಂಡುಗಳ ಉದ್ದೇಶವನ್ನು ವಿವರಿಸಿದರು. ಕೂಡಲೇ ನೆರೆದ ಸಭೆಯಲ್ಲಿ ಶ್ರೀ ಅದ್ಮಾರು ಶ್ರೀಗಳವರು ಉದಾರವಾಗಿ ಕಳುಹಿಸಿಕೊಟ್ಟ ವಂತಿಗೆ ಹಣ ರೂ. ೧೦೦೫ ವಿನಹಾ ಕೂಡಿ ಬಂದ ಹಣ ಜುಮ್ಲಾ ರೂ. ೮೫೦. ಇದೂ ಅಲ್ಲದೆ ಇನ್ನೂ ಅನೇಕರ ಹಣ ಸಹಾಯವು ನಿರೀಕ್ಷಣೆಯಲ್ಲಿದೆ ಎಂಬದಾಗಿ ಕಮಿಟಿಯವರು ಸೂಚಿಸಿದರು.

ಪಾತ್ತೂರು:—ಡಿಸ್ಟ್ರಿಕ್ಟ್ ಬೋರ್ಡು ಮೆಂಬರರಾದ ಮು| ರಾ| ರಾ| ಬಾಕ್ರಬೈಲು ತಿಮ್ಮಪ್ಪ ಶೆಟ್ಟಿ ತನ್ನ ತಮ್ಮ ರಾ| ಲಕ್ಷ್ಮಣ ಶೆಟ್ರ ಮುಖಾಂತರ ಪಾತ್ತೂರು ಗ್ರಾಮದಲ್ಲಿ ಇದೇ ಕಳದ ತಾ. ೧೫ನೇ ಗುರುವಾರ ದಿವಸ ಯುದ್ಧ ಫಂಡಿನ ಸಲುವಾಗಿ ಆ ಗ್ರಾಮದ ಸಣ್ಣ ಸಣ್ಣ ಪಟ್ಟಾದಾರರ ಒಂದು ಸಭೆಯನ್ನು ಕೂಡಿಸಿದರು. ಆ ಸಭೆಯಲ್ಲಿ ಸಭಿಕರು ನಮ್ಮ ಸಾರ್ವಭೌಮ ಜೋರ್ಜ ಚಕ್ರವರ್ತಿಯರಿಗೆ ಪ್ರಕೃತ ಸಂಭವಿಸಿದ ಯೂರೋಪಿನ ಘೋರ ಯುದ್ಧದಲ್ಲಿ ಪೂರ್ಣ ಜಯವಾಗಲೆಂದು ದೇವರನ್ನು ಕುರಿತು ಪ್ರಾರ್ಥಿಸಿದರು. ಈ ಗ್ರಾಮದ ದೊಡ್ಡದೊಡ್ಡ ಪಟ್ಟಾದಾರರೂ ಕಾಸರಗೋಡಿನಲ್ಲಿ ಆದ ಸಭೆಗೆ ವಂತಿಗೆ ಕೊಟ್ಟದ್ದು ಹೊರತು, ಈ ಸಣ್ಣ ಸಣ್ಣ ಪಟ್ಟಾದಾರರ ಸಭೆಯಲ್ಲಿ ಸುಮಾರು ೧೫೦ ರೂಪಾಯಿ ವಂತಿಗೆ ಹಾಕೋಣಾಯಿತು.

ಪುತ್ತೂರು:—ಪುತ್ತೂರು ತಾಲೂಕು ಬೋರ್ಡಿನ ಆಕ್ಟೋಬರ ತಿಂಗಳ ಮೀಟಿಂಗು ಇದೇ ತಾ. ೩೧ನೇ ಶನಿವಾರ ದಿವಸ ಬೆಳಿಗ್ಯೆ ೮|| ಘಂಟೆಗೆ ಪುತ್ತೂರು ಡಿವಿಜನಲ್ ಆಫೀಸಿನ ಕಟ್ಟೋಣದಲ್ಲಿ ಜರಗುವುದು.

ಈ ಜಿಲ್ಲೆಯಲ್ಲಿ ಲೋಕಲ್‌ಫಂಡು ರಸ್ತೆಗಳ ಮಧ್ಯದಿಂದ ೨೨ ಗಜಗಳ ಒಳಗೆ ಅವುಗಳ ಇಕ್ಕಡೆಯಲ್ಲಿರುವ ರಸ್ತೆ ಅಂಚಿನ ಸ್ಥಳಗಳಲ್ಲಿರುವ ಮರಗಳನ್ನಾಗಲೀ ಅಲ್ಲಿ ಬೆಳದಿರುವ ಇತರ ಪೊದೆ ಮುಂತಾದವುಗಳನ್ನು ಆಗಲಿ ಯಾರೊಬ್ಬರೂ ಕಡಿಯ ಕೂಡದೆಂತಲೂ ಹಾಗೆ [illegible] ದೀತೆಂತಲೂ ಅಂಥಾ ರಸ್ತೆಗಳ ಮೇಲೆ [illegible] [illegible]

ಸ್ಪರ ಸಹಾಯ ಸಂಘದಿಂದ ವ ಸಂಘದ ಮೆಂಬರರಾದ ಬೆಳ್ಳಾರೆ ಸರಸಿಂಹಯ್ಯ ವಗೈರೆಯ ೩೦ ದೀಪಸ್ತಂಭಗಳನ್ನು ಇದೇ ತಾ. ೧೭ ರಲ್ಲಿ ಪ್ರತಿಷ್ಠೆ ಮಾಡಿರುವರು.

ಪರಸ್ಪರ ಸಹಾಯ ಸಂಘದ ಮೆಂಬರರ ಕಡೆಯಿಂದ ವದಗಿಸಿ ತಾ. ೧೭ರಲ್ಲಿ ಪ್ರತಿಷ್ಠೆ ಮಾಡಿದ ದೀಪಸ್ತಂಭಗಳನ್ನು ತಾಲೂಕು ಬೋರ್ಡಿನವರ ಅಧೀನಕ್ಕೆ ಒಪ್ಪಿಸಿ ಕೊಟ್ಟಿರುವರು.

ಇದೇ ತಾ; ೧೭ರಲ್ಲಿ ಇಲ್ಲಿಯ ಪರಸ್ಪರ ಸಹಾಯಕ ಸಂಘದ ಚತುರ್ಥವರ್ಧಂತಿ ಉತ್ಸವವು ಜರಗಿತು.

ಚಂದಾರೆ:—ಇಲ್ಲಿ ನಿನ್ನೆ ಸಾಯಂಕಾಲ ಭಯಂಕರವಾದ ಮಿಂಚು ಮತ್ತು ಸಿಡಿಲು ಸಮೇತ ಗಾಳಿಮಳೆಯು ಸುರಿಯಿತು. ಅಕಸ್ಮಿತವಾಗಿ ಸಿಡಿಲು ಒಂದು ಹಿತ್ತಲಲ್ಲಿ ಬಿದ್ದು ಎರಡು ತೆಂಗಿನ ಮರಗಳು ಮಾತ್ರ ನಾಶವಾದವು. ದೈವಕೃಪೆಯಿಂದ ಬೇರೆ ಅಪಾಯಗಳೇನೂ ಸಂಭವಿಸಲಿಲ್ಲ.

ಎರಡು ವರ್ಷಗಳ ಮೊದಲು ಪಿಲಿಕೋಡು ಎಂಬಲ್ಲಿ ಹೊಸದಾಗಿ ಸ್ಥಾಪಿಸಿದ ಟಪ್ಪಾಲು ಆಫೀಸು ಇತ್ತಲಾಗೆ ಮೂರು ತಿಂಗಳು ಈಚೆಗೆ ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಗೆ ವೈಯ್ಯೋಣಾಗಿದೆ. ಆದರೂ ಟಪ್ಪಾಲ್ ಚೀಲ ಅಚೆ ಈಚೆ ಹೊರಲಿಕ್ಕೆ ನಿಶ್ಚಯಿಸಿದ "ವೈಲ್ ಪಿಯೊನ್" ಈ ವರೆಗೂ ಮೊಕ್ರೂರಿ ಸೆಂಕ್ಷನ್ ಆಗದೆ ಇದ್ದದ್ದು ಬಹಳ ಆಶ್ಚರ್ಯಕರವೇ ಸರಿ. ಇಲಾಖಾ ಮೇಲು ಉದ್ಯೋಗಸ್ಥರು ಇದಕ್ಕೆ ತಕ್ಕ ಸಿಗಾವನ್ನು ತ್ವರ್ಯ ಕೊಡುವರಾಗಿ ಕೋರುತ್ತೇವೆ.

ಇಲ್ಲಿಗೆ ಸೆಂಕ್ಷನ್ ಆದ ಹೊಸ ಬೋರ್ಡು ಶಾಲೆಯನ್ನು ತೆರೆದ ಬಾಬ್ತಿನಲ್ಲಿ ಪ್ರತ್ಯೇಕವಾಗಿ ಇದೇ ಪತ್ರದಲ್ಲಿ ಪ್ರೊಸಿಡಿಂಗ್ಸು ರವಾನಿಸೋಣಾಗಿತ್ತು. ಆದರೆ ಇಷ್ಟು ಕಷ್ಟಪಟ್ಟು ಕಟ್ಟಿಸಿದ ಈ ಶಾಲೆಗೆ "ದೇವರು ಕೊಟ್ಟರೂ ಪೂಜಾರಿ ಬಿಡ" ಎಂಬ ನಾಣ್ಣುಡಿಗನುಸರಿಸಿ ತಕ್ಕ ಯೋಗ್ಯನಾದ ಮುಖ್ಯ ಉಪಾಧ್ಯಾಯನನ್ನು ಸರ್ಕಾರದವರು ಕೊಡದೆ ಇದ್ದುದ್ದು ಬಡ ನಿವಾಸಿಕರಾದ ನಮ್ಮ ಕೇವಲ ನಿರ್ಭಾಗ್ಯವೇ ಸರಿ. ಯಾಕಂದರೆ ಕರ್ನಾಟಕ ಮತ್ತು ಮಲಯಾಳಿ ಗೊತ್ತಿದ್ದ ಉಪಾಧ್ಯಾಯನು ಈ ಶಾಲೆಗೆ ಅಗತ್ಯವೆಂತ ವಿದ್ಯೇ ಇಲಾಖೆಯವರು ಇಲ್ಲಿ ಮೊದಲು ಇದ್ದ ಮಲಯಾಳಿ ಉಪಾಧ್ಯಾಯನನ್ನು ಮುಳಿಯಾರಕ್ಕೂ ಅಲ್ಲಿಯ ಮುಸಲ್ಮಾನ ಉಪಾಧ್ಯಾಯರೊಬ್ಬರನ್ನು ಇಲ್ಲಿಗೂ ವರ್ಗಮಾಡಿದ್ದಾಗಿರುತ್ತದೆಂದು ನಾವು ನೆನಸುತ್ತೇವೆ. ಇವರ ಮನೆಯು ಇಲ್ಲಿಂದ ಸುಮಾರು ೪ ಮೈಲು ದೂರ ಇರುವ ಪಡ್ನೆ ಗ್ರಾಮದಲ್ಲಾಗಿರುತ್ತದೆ. ಆದ್ದರಿಂದ ಶಾಲೆಗೆ ಹತ್ತರ ಮನೆ ಇರುವ ಮತ್ತು ಚೆನ್ನಾಗಿ ಕರ್ನಾಟಕ ಮತ್ತು ಮಲಯಾಳಿ ಗೊತ್ತಿದ್ದ ಒಬ್ಬ ಯೋಗ್ಯ ಮುಖ್ಯ ಉಪಾಧ್ಯಾಯನನ್ನು ಮೇಲು ಉದ್ಯೋಗಸ್ಥರು ಈ ಶಾಲೆಗೆ ರವಾನಿಸಿ ಕೊಟ್ಟರೆ ನಾವು ಬಹಳ ಕೃತಜ್ಞತೆಯುಳ್ಳವರಾಗಿದುವೆವು. ಅಲ್ಲದೆ ಸದರಿ ಶಾಲೆ ಕಟ್ಟಿಸಲಿಕ್ಕೆ ನಾವು ಪಟ್ಟ ಶ್ರಮಕ್ಕೆ ತಕ್ಕ ಒಳ್ಳೇ ಪ್ರತಿಫಲವು ಸಹ ಸಿಕ್ಕಿದಂತೆ ಆಗುವದು.

ನಿಡ್ಲೇಶ್ವರ:—ಯುದ್ಧ ವಂತಿಗೆ ವಂತಿಗೆ ತೆಗೆಯುವ ಉದ್ದೇಶ ... ರೇಂಜ್ ಸಬ್ ಅಸಿಸ್ಟಾಂಟ್ ಇನ್ಸ್ಪೆಕ್ಟರ್ ಮ. ರಾ. ರಾ. ಎಸ್. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ... ಎಲಿಮೆಂಟರಿ ಶಾಲೆಯ ಉಪಾಧ್ಯಾಯರ ಒಂದು ಸಭೆಯು ... ಇಲ್ಲಿ ಜರಗಿತು. ... [illegible]

ತಮ್ಮ ಶಕ್ತ್ಯಾನುಸಾರವಾಗಿ ವಂತಿಗೆ ಹಾಕಲ್ಪಟ್ಟಿತು. ಆ ಪ್ರಕಾರ ಜಮೆಯಾದ ವಂತಿಗೆ ಮೊಬಲಗು ರೂ. ೫೬-೧೩-೦ ಆಗಿರುತ್ತದೆ. ರೂ. ೨೦-೮-೦ ಕೂಡಲೇ ನಗದಾಗಿ ವಸೂಲಾಗಿಯದೆ. ನಂತರ ನಮ್ಮ ಇಂಡಿಯಾ ಚಕ್ರವರ್ತಿಯವರಿಗೆ ಜಯ ಸಿಕ್ಕಲೆಂದು ಪ್ರಾರ್ಥಿಸಿ ರಾಜಗೀತವನ್ನು ಹಾಡಿ ಸಭೆಯನ್ನು ಕೊನೆಗಾಣಿಸಲಾಯಿತು.

ಪೆರಡಾಲ:—ಪೆರಡಾಲ ಉದನೇಶ್ವರ ದೇವಸ್ಥಾನದ ಸನ್ನಿಧಿಯಲ್ಲಿ ಹವ್ಯಕ ದ್ರಾವಿಡ ಬ್ರಾಹ್ಮಣ ಜಾತಿಯ ಮುಂದಾಳುಗಳಾದ ಕೆಲವು ಶ್ರೀಮಂತರಿಂದ ಮಹಾ ಜನ ಸಂಸ್ಕೃತ ಪಾಠಶಾಲೆಯೆಂಬ ಹೆಸರಿನಿಂದ ಸ್ಥಾಪಿಸಲ್ಪಟ್ಟ ಸಂಸ್ಕೃತ ವಿದ್ಯಾಲಯದಲ್ಲಿ ಈ ವರೆಗೆ ಪ್ರತಿ ನವಮಿಯಲ್ಲಿ ಯೂ ಶಾಲಾ ಉಪಾಧ್ಯಾಯರುಗಳಿಂದಲೂ, ಸದ್ವಿದ್ಯಾರ್ಥಿಗಳಿಂದಲೂ ನಡೆದು ಬರುವ ವಿದ್ಯೋದಯ ಸಭೆಯು ಯಥಾ ರೀತಿಯಾಗಿ ಇದೇ ಅಕ್ಟೋಬರ ೨. ೯ನೇ ಶುಕ್ರವಾರ ಸಾಯಂಕಾಲ ಘಂಟೆ ೪. ೪೦ಕ್ಕೆ ಪ್ರಕೃತ ಶಾಲೆಯ ಪ್ರಧಾನಾಧ್ಯಾಪಕರಾದ ಬ್ರ. ಶ್ರೀ. ಕೆ. ಎಸ್. ಪರಮೇಶ್ವರ ಶಾಸ್ತ್ರಿಗಳವರ ಅಧ್ಯಕ್ಷತೆಯಿಂದ ನೆರವೇರಿತು. ಸಭಾಂತ್ಯದಲ್ಲಿ ಅಧ್ಯಕ್ಷರು ಯೂರೋಪ್ ಖಂಡದಲ್ಲಿ ಸಂಭವಿಸಿದ ಭಯಂಕರ ಯುದ್ಧದಲ್ಲಿ ನಮ್ಮ ಚಕ್ರವರ್ತಿಗಳಾದ ಶ್ರೀಮನ್ ಮಹಾರಾಜರಾದ ಜೋರ್ಜ್ ಸಾರ್ವಭೌಮರವರಿಗೆ ಜಯವಾಗುವಂತೆಯೂ ಬ್ರಿಟಿಷ್ ಚಕ್ರಾಧಿಪತ್ಯದ ಮೇಲಿರುವ ತಮ್ಮ ಮಿತ್ರಭಾವವನ್ನು ತೋರ್ಪಡಿಸುವುದಕ್ಕೋಸ್ಕರ ನಮ್ಮ ಭರತ ಖಂಡದಿಂದ ಅನೇಕ ಸೈನ್ಯ ಸಮೇತರಾಗಿ ಹೋಗಿರುವ ಭಾರತೀಯ ಮಹಾರಾಜರುಗಳಿಗೂ ರಾಜಭಕ್ತಿಯನ್ನು ಮೆರೆಯಿಸುವ ಪ್ರಜಾ ಮುಂದಾಳುಗಳಿಗೂ ವಿಜಯ ಲಕ್ಷ್ಮಿಯು ಒಲಿಯುವಂತೆಯೂ ಶ್ರೀ ಭಗವಂತನು ಅನುಗ್ರಹಿಸಲಿಯೆಂಕಲೂ ಭಾಷಣ ಕೊಟ್ಟರು. ಕೂಡಲೇ ಸಭಿಕರು ಎದ್ದು ನಿಂತು ವಿದ್ಯಾಶಾಲೆಯಲ್ಲಿ ವಿಶೇಷ ದಯ ಮತ್ತು ಔದಾರ್ಯವನ್ನು ತೋರಿಸಿರುವ ಸಾರ್ವಭೌಮ ಜೋರ್ಜ ಚಕ್ರವರ್ತಿಗಳಿಗೆ ಜಯವಾಗುವಂತೆ ರಾಜಗೀತವನ್ನು ಹಾಡಿದರು.

ವಿಮೇ ಕುರಿತು ವಿಚಾರ.

ಭಾರತ ವಿಮೇ ಸಂಘದ ಮುಖ್ಯ ಏಜಂಟರಾದ ಮೆಸ್ಸರ್ಸ್ ಪಿ. ಬಾಬುರಾವ್ ಎಂಡ್ ಸನ್ಸ್‌ರವರೀಗೆ—

ಪ್ರಿಯರೇ,

ಕಳದ ಆಗೋಸ್ತು 31ನೇ ತಾರೀಕಿನಲ್ಲಿ ಮೃತಪಟ್ಟ ನನ್ನ ಹೆಂಡತಿ ರಾದಮ್ಮನ ಪೋಲಿಸಿಯ ಬಾಬ್ತು ನಿಮ್ಮ ಸಂಘದಿಂದ ನನ್ನ ಮಕ್ಕಳಿಗೆ ಬರತಕ್ಕ 1000 ರೂಪಾಯಿಗಳನ್ನು ಅಲ್ಪವಾದರೂ ಖರ್ಚು ತಗಲಗೊಡದೆ ನೀವು ಅತಿ ತ್ವರ್ಯದಿಂದ ತರಿಸಿ ಕೊಟ್ಟದ್ದಕ್ಕೆ ನಾನೂ ವ ನನ್ನ ಚಿಕ್ಕ ಮಕ್ಕಳು ನಿಮಗೂ ನಿಮ್ಮ ಸಂಘದವರಿಗೂ ಮನಃ ಪೂರ್ತಿಯಾಗಿ ವಂದಿಸುವದಲ್ಲದೆ, ನಿಮ್ಮ ಸಂಘದ ಶ್ರೇಯೋಭಿವೃದ್ಧಿಯನ್ನು ನಿರಂತರವೂ ಹಾರೈಸುತ್ತಿರುವೆವು.

ಮಂಗಳೂರು, ತಾ. 9 – 10 – 1914. } ಯು. ಗೋಪಾಳನ್ನಾಕ, ಕ್ಲಾರ್ಕ್, ಮುನ್ಸಿಫ್‌ಕೋರ್ಟ್.

ಪ್ರಕಟಣೆ.

ವಿದ್ಯಾವಂತರೂ, ಶ್ರೀಮಂತರೂ ಆದ ಕೆಲವು ಸಾರಸ್ವತ ... ಮತ್ತು ... ಬ್ರಾಹ್ಮಣ ... [illegible]

ವರು ವಿವಾಹವನ್ನು ಅಪೇಕ್ಷಿಸುವ ವಿಧವೆಯರು ಬ್ರಾಹ್ಮಣರಲ್ಲಿ ... ಆಗಬೇಕೆಂಬ ನಿರ್ಬಂಧವಿಲ್ಲ. ಹೆಚ್ಚಿನ ಮಾಹಿತಿಯನ್ನು ತಿಳಿಯಲಪೇಕ್ಷಿಸುವವರು ಮುಖತಃ ವ ಕಾಗದ ಮೂಲಕ ಈ ಕೆಳಗೆ ದಸ್ಕತು ಮಾಡಿದವರಿಂದ ಎಲ್ಲಾ ವಿವರವನ್ನು ತಿಳಕೊಳ್ಳಬಹುದು. ಈ ವಿಷಯ ನಡಿಯುವ ಕಾಗದ ಪತ್ರ ಇತ್ಯಾದಿಗಳೆಲ್ಲವೂ ಗುಪ್ತವಾಗಿ ಇಡೋಣಾಗುವವು.

ಮಂಗಳೂರು. ತಾ. 19 – 10 – 14. } ಕುದ್ಮೂಲ ರಂಗರಾವ್

ಪ್ರಕಟಣೆ.

ದಕ್ಷಿಣಕನ್ನಡಾ ಜಿಲ್ಲೆಯ ಉಡ್ಪಿ ತಾಲೂಕಿನ ಪೆರ್ಡೂರಿನಲ್ಲಿ ಇದೇ ಬರುವ 1915ನೇ ಮಾರ್ಚಿ ತಿಂಗಳ ತಾ. 13ರಿಂದ ಪೆರ್ಡೂರಿನಲ್ಲಿ ನಡಿಯತಕ್ಕ ರಥೋತ್ಸವ ಸಮಯದಲ್ಲಿ ಜಾನುವಾರುಗಳ ಸಂತೆಯು ಜರಗುವುದು.

ಸಂತೆಗಳಿಗೆ ತರೋಣಾಗುವ ಜಾನುವಾರುಗಳ ಮೇಲೆ ಫೀಸು ವಿಧಿಸೋಣಾಗಲಿಕ್ಕಿಲ್ಲ. ಮತ್ತು ಸಂತೆಯು ಕೂಡುವ ಪರಿನ ಮೂರು ಮೊದಿವಸಗಳಲ್ಲಿ ಬಿಡೋಣಾಗ ಒಬದಾದ 1000 ಜಾನುವಾರುಗಳಿಗೆ ಮೇವು ಧರ್ಮಾರ್ಥವಾಗಿ ಕೊಡೋಣಾಗುವುದು. ಪೆರ್ಡೂರಿನಲ್ಲಿ ಈ ಕಾಲದಲ್ಲಿ ನಡಿಯುವ ರಥೋತ್ಸವಕ್ಕೆ ಜನರು ಬಾರದಂತೆ ಯಾವ ನಿರ್ಬಂಧವೂ ಇರದೆಂಬು ಈ ವಿವರವನ್ನು ಜಾನುವಾರುಗಳ ವ್ಯಾಪಾರಸ್ಥರೆಲ್ಲರೂ ಈ ಮೂಲಕ ತಿಳಕೊಳ್ಳಬೇಕಾಗಿದೆ.

ಮೊಕ್ಕಾಂ, ಚರ್ಪತ್ತೂರು. ತಾ. 3 – 10 – 14. } ಎವ್. ಇ. ಕೌಚ್‌ಮೇನ್. ಕಲೆಕ್ಟರ ಮತ್ತು ಪ್ರೆಸಿಡೆಂಟ್ ದಕ್ಷಿಣಕನ್ನಡಾ ಡಿಸ್ಟ್ರಿಕ್ಟ್ ಬೋರ್ಡು.

ಮಂಗಳೂರು.

ಉಪ್ಪಿನಂಗಡಿ ತಾಲೂಕಿಗೆ ಸೇರಿದ ಸುಬ್ರಮಣ್ಯ, ಶಿರಾಡಿ ಗೋಳಿತಟ್ಟು ಎಂಬ ಸ್ಥಳಗಳಲ್ಲಿ ಇದೇ ನವಂಬರ ತಾ. ೧ರಿಂದ ಪರೀಕ್ಷಾರ್ಥವಾಗಿ ಬ್ರೇಂಚ್ ಪೋಸ್ಟಾಫೀಸುಗಳು ತೆರೆಯೋಣಾಗುವವು.

ಎಲಿಮೆಂಟರಿ ಸ್ಕೂಲು ಉಪಾಧ್ಯಾಯರ ಪ್ರೆಕ್ಟಿಕಲ್ ಪರೀಕ್ಷೆಯು ನವಂಬರ ೧೬ನೇ ತಾರೀಕಿಗೆ ಅಲ್ಲ; ನವಂಬರ ೨೬ನೇ ತಾರೀಕಿನಲ್ಲಿ ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಇನ್ಸ್‌ಪೆಕ್ಟರರವರ ಸಮಕ್ಷಮದಲ್ಲಿ ಜರಗುವುದು ಎಂಬ ಹೊಸ ನೋಟೀಸು ಬಂದದೆ.

ಮೈಸೂರಲ್ಲಿ ಜರಗಿದ ಕಳದ ದಸರಾ ವಸ್ತು ಪ್ರದರ್ಶನಕ್ಕೆ ಕಾರ್ಕಳದ ರಾ| ಕೆ. ಕೃಷ್ಣರಾಯರವರು ಕಳುಹಿಸಿ ಕೊಟ್ಟ ಚಿತ್ರ ಕೆಲಸಗಳಿಗೆ ಒಂದು ಚಿನ್ನದ ಪದಕವೂ ಮತ್ತೊಂದು ಬೆಳ್ಳಿಯ ಪದಕವೂ ದೊರಕಿರುವುದು.

ವ್ಯಾಸರಾಯ ಪ್ರಭುಗಳವರ ಯುದ್ಧ ಸಂಕಷ್ಟನಿವಾರಣ ಫಂಡಿಗೆ ವಂತಿಗೆಯನ್ನು ಕೂಡಿಸಲಿಕ್ಕೆ ಮಂಗಳೂರು ಟೀಚರ್ಸ್ ಎಸೋಸಿಯೇಶನಿಗೆ ಸೇರಿದ ಎಲಿಮೆಂಟರಿ ಶಾಲಾ ಉಪಾಧ್ಯಾಯರುಗಳು ಇದೇ ಶನಿವಾರ ತಾ. ೧೦ ಸಾಯಂಕಾಲ ... ಮಂಗಳೂರು ರೇಂಜಿನ ಸಬ್ ಅಸಿಸ್ಟಾಂಟ್ ಇನ್ಸ್‌ಪೆಕ್ಟರರಾದ ಮ. ರಾ. ರಾ. ಪಂಡಿತ ಮಂಗೇಶರಾವ್ ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಕದ್ರಿ ಸ್ಕೌಟ್ಸ್ ... ಸಭೆ ಸೇರಿದರು. ... ಶಾಲೆಯ ವಿದ್ಯಾರ್ಥಿಗಳು ಬ್ರಿಟಿಷ ರಾಜ್ಯಕ್ಕೆ ... ಯವನ್ನು ... ಒಂದು ಗೀತವನ್ನು ಅಂದವಾಗಿ ... ಬ್ರಿಟಿಷ ರಾಜ್ಯಕ್ಕೆ ... [illegible]

ಮತ್ತಷ್ಟು ಹಚ್ಚಿಸಿದರು. ಭಾಷಣವು ಅಂತ್ಯವಾದ ನಂತರ ಮಂಗಳೂರು ಎಲಿಮೆಂಟರಿ ಶಾಲೆಗಳ ಅಧ್ಯಾಪಕರಲ್ಲಿರುವ ರಾಜಭಕ್ತಿರಸವನ್ನು ವ್ಯಾಸರಾಯ ಪ್ರಭುಗಳವರಿಗೆ ತಂತಿ ಮೂಲಕ ತಿಳಿಸಬೇಕು, ಸಂಘದ ಮೆಂಬರುಗಳಿಂದ ವ್ಯಾಸರಾಯ ಪ್ರಭುಗಳು ಏರ್ಪಡಿಸಿದ ಯುದ್ಧ ಸಂಕಷ್ಟ ನಿವಾರಣೆ ಫಂಡಿಗೆ ವಂತಿಗೆಯನ್ನು ತೆಗೆದುಕೊಳ್ಳಬೇಕು ಎಂಬಿತ್ಯಾದಿ ನಿರ್ಣಯಗಳಾಗಿ ವಂತಿಗೆ ಪಟ್ಟಿಯನ್ನು ತೆರೆದ್ದಲ್ಲಿ ರೂ. ೩೭—೧೨—೦ ವಂತಿಗೆ ಪಟ್ಟಿಯಲ್ಲಿ ಹಾಕೋಣಾಯಿತು.

ಕಳೆದ ಸಂಚಿಕೆಯಲ್ಲಿ ತಿಳಿಸಿದಂತೆ ರಾವ್ ಸಾಹೇಬ್ ಪಿ. ವರ್ಗೀಸರವರು ಇದೇ ತಾ. ೧೯ರಲ್ಲು ಇಲ್ಲಿಯ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸೆನಿಟರಿ ಆಫೀಸರರ ಚಾರ್ಜು ತಕ್ಕೊಂಡಿರುವರು.

ಇಲ್ಲಿಯ ರೋಮನ್ ಕೆಥೋಲಿಕ ಜೆಸುವಿತ ಮಿಶ್ಶನಿನ ವಿಕಾರ್ ಜೆನರಲರಾದ ಬಹುಮಾನ್ಯ ಫಾದರ್ ಜೆ. ಬಿ. ರೊಸ್ಸಿ. ಎಸ್. ಜೆ. ಯವರು ಕಳೆದ ಸೋಮವಾರ ಸಂಜೆಗೆ ವಿಧಿವಶರಾದರು. ಅವರ ಉತ್ತರ ಕ್ರಿಯೆಯು ಬಹು ವಿಜೃಂಭಣೆಯಿಂದ ಮಂಗಳವಾರ ನಡೆಯಿತು.

ಒಕ್ಟೋಬರ ತಿಂಗಳಲ್ಲಿ ಸೆಶ್ಶನ್ ಮೊಕದ್ದಮೆಗಳ ತನಕಿಯು ತಾ. ೭ಕ್ಕೆ ಪ್ರಾರಂಭವಾಯಿತು. ಮೊದಲಾಗಿ ಹೊಸದುರ್ಗ ಸ್ಪೇಶಲ್ ಸಬ್ ಮೇಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಮೊಕದ್ದಮೆಯು ತನಕಿಗೆ ಪ್ರಾರಂಭಿಸಲ್ಪಟ್ಟಿತು. ಕಣ್ಣ ಎಂಬವನು ತನ್ನ ತಾಯಿಯನ್ನು ಕೊಂದನೆಂಬದಾಗಿ ಆಪಾದಿಸಲ್ಪಟ್ಟಿದ್ದನು. ಮೃತಳ ಮೈಯಲ್ಲಿ ೧೩ ಘಾಯಗಳಿದ್ದವು. ಅವಳ ತಲೆ ಬುರುಡೆಯು ಪುಡಿ ಪುಡಿಯಾಗಿತ್ತು. ಆಪಾದಿತನು ತಲೆ ನೆಟ್ಟಗಿಲ್ಲದವನಂತೆ ತೋರುವನೆಂಬದಾಗಿ ಎಸ್ಸೆಸ್ಸರುಗಳು ಹೇಳಿದ್ದರಿಂದ ಅವನನ್ನು ಕೆಲವು ಕಾಲ ಪರಿಶೋಧನೆ ಮಾಡಬೇಕೆಂದು ಜಡ್ಜರು ಕಣ್ಣಾನ್ನೂರ ಸೆಂಟ್ರಲ್ ಜೈಲಿನ ಸಿವಿಲ್ ಸರ್ಜನರನ್ನು ಕೇಳಿಕೊಂಡಿದ್ದರು. ಸರ್ಜನ್ ಡಾಕ್ಟರ್ ಸಿ. ಬಿ. ರಾಮರಾವ್‌ರವರು ಸಪ್ಟಂಬರ ತಾ. ೧೯ರಿಂದ ಅವನನ್ನು ತನ್ನ ಪರಿಶೋಧನೆಯಲ್ಲಿಟ್ಟು, ಅವನಿಗೆ ತಲೆ ನೆಟ್ಟಗಿಲ್ಲವೆಂದು ಹೇಳಿದ್ದರಿಂದ ಸರಕಾರದ ಹುಕುಂ ಸಿಕ್ಕುವ ವರೆಗೆ ಜಡ್ಜರು ಅವನನ್ನು ರಿಮಾಂಡಿನಲ್ಲಿಡಲು ಹುಕುಂ ಮಾಡಿದರು.

ಎರಡನೇದಾಗಿ ಮಂಗಳೂರು ಟೌನ್ ಮೇಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಮೊಕದ್ದಮೆಯು ತನಕಿಯಾಯಿತು. ಈ ಮೊಕದ್ದಮೆಯಲ್ಲಿ ಜಪ್ಪಿನಲ್ಲಿ ಪೀಟರ್ ಪೆಸ್ಸ ಎಂಬವನು ಇದೇ ಕಳೆದ ಆಗೋಸ್ತು ತಾ. ೯ರಲ್ಲು ತನ್ನ ಹೆಂಡತಿ ಮರಿಯ ಎಂಬವಳನ್ನು ಕೊಂದನೆಂಬದಾಗಿ ಆಪಾದಿಸಲ್ಪಟ್ಟಿದ್ದನು. ಹೆಂಡತಿಯು ದುರ್ನಡತೆಯನ್ನು ನೋಡಿ ತಾಳಲಾರದೆ ಕತ್ತಿನಿಂದ ಕಡಿದು ಅವಳನ್ನು ಕೊಂದನೆಂಬದಾಗಿ ಆಪಾದಿತನು ಒಪ್ಪಿಕೆ ಮಾಡಿದನು. ಜಡ್ಜರು ಆಪಾದಿತನಿಗೆ ಜೀವಾಂತ ಬಂಕೋಲಿ ಶಿಕ್ಷೆಯನ್ನು ವಿಧಿಸಿದರು.

ಕುಂದಾಪುರ ಸಬ್ ಮೇಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಮೊಕದ್ದಮೆಯು ತನಕಿಯಾಯಿತು. ಈ ಮೊಕದ್ದಮೆ ಪಳ್ಳಿ ಶೀನ ಪುರಾಣಿಕ ಮತ್ತು ಇತರ ೫ ಮಂದಿ ಜುಲಾಯಿ ತಾ. ೭ರಲ್ಲು ಕುಂದಾಪುರ ತಾಲೂಕಿಗೆ ಸೇರಿದ ಸೌಕೂರು ದೇವಸ್ಥಾನಕ್ಕೆ ಕನ್ನ ಹಾಕಿ ಸುಮಾರು ೧೩,೦೦೦ ರೂಪಾಯಿಗಿಂತಲೂ ಹೆಚ್ಚಿಗೆ ಕ್ರಯ ಬಾಳುವ ವಿಗ್ರಹ ಚಿನ್ನಾಭರಣಗಳನ್ನು ಕಳವು ಮಾಡಿದ್ದರೆಂಬದಾಗಿ ಇ. ಪಿ. ಕೋಡಿನ ೪೫೭ ಮತ್ತು ೩೮೦ನೇ ಪ್ರಕರಣದ ಮೇಲೆ ಆಪಾದಿಸಲ್ಪಟ್ಟಿದ್ದರು. ೬ ಮಂದಿ ಆಪಾದಿತರಲ್ಲಿ ೨ ಮಂದಿಗೆ ವಿರೋಧವಾಗಿ ಸಾಕ್ಷಿ ಹೇಳಿದ ಸಾಕ್ಷಿಗಾರನೊಬ್ಬನು ಗೈರ್ಹಾಜರು ಆದ್ದರಿಂದ ಈ ಇಬ್ಬರ ಮೇಲಿನ ಮೊಕದ್ದಮೆಯ ತನಕಿಯು ನವಂಬರ ತಿಂಗಳಿಗೆ ಇಡೋಣಾಗಿ ಉಳಿದ ೪ ಆಪಾದಿತರ ಮೇಲಿನ ತನಕಿ ನಡೆಯಿತು. ಈ ೪ ಮಂದಿಯು ತಪ್ಪಿತಸ್ಥರಲ್ಲವೆಂಬದಾಗಿ ಜೂರಿಯರು ಅಭಿಪ್ರಾಯಪಟ್ಟದ್ದರಿಂದ ಜಡ್ಜರು ೪ ಮಂದಿಯನ್ನೂ ಖುಲಾಸು ಪಡಿಸಿದರು.

ಸಬ್ ಮೇಜಿಸ್ಟ್ರೇಟರಿಂದ ಕಮಿಟ್ ಮಾಡಲ್ಪಟ್ಟ ಸೆಶ್ಶನ್ ಮೊಕದ್ದಮೆಯ ತನಕಿಯು ಈಗ ನಡಿಯುತ್ತಿದೆ.

ಲೇಂಡ್ ರಿಕೋರ್ಡ್ಸ ಇನ್ಸ್‌ಪೆಕ್ಟರ ರಾ। ಬಿ. ಗಣಪತಿರಾಯರು ರಜೆಯ ಮೇಲಿರುವುದರಿಂದ ಉಡುಪಿ ತಾಲೂಕು ಆಫೀಸಿನ ಹೆಡ್ ಕ್ಲಾರ್ಕ ರಾ। ಎಚ್. ರಾಮರಾಯರು II ಗ್ರೇಡ್ ರಿಲೀಫ್ ಇನ್ಸ್‌ಪೆಕ್ಟರರಾಗಿ ನೇಮಿಸಲ್ಪಟ್ಟಿದ್ದಾರೆ. ಅವರು [illegible] ಲೇಂಡ್ ರಿಕೋರ್ಡ್ಸ ಇನ್ಸ್‌ಪೆಕ್ಟರ [illegible]

ಮಂಜೇಶ್ವರದಲ್ಲಿಯ ಪಂಚಮರ ಶಾಲೆಯ ಪಂಚಮ ಉಪಾಧ್ಯಾಯ ಮತ್ತು ಆತನ ಸಂಬಂಧಿಕನೊಬ್ಬನ ಮೇಲೆ ಅಲ್ಲಿಯ III ಕ್ಲಾಸ್ ಮೇಜಿಸ್ಟ್ರೇಟರಲ್ಲಿ ಕುಡಿಕತನದ ನ್ಯೂಸೆನ್ಸ್ ಮೊಕದ್ದಮೆಯು ದಾಖಲಾಗಿರುವುದು.

ಒಂದು ಕಡೆಯಿಂದ ಪಂಚಮರ ದೀನದೆಶೆಯ ವೃತ್ತಾಂತವು ಈ ರೀತಿ ಕೇಳಬರುವಾಗ ನಮ್ಮ ಜಿಲ್ಲೆಯ ಇನ್ನೊಂದು ಕಡೆಯಿಂದ ಕೇಳಸುತ್ತಿರುವ ಅವರ ಉದ್ಧರಣೆಯ ಸಮಾಚಾರವು ಮತ್ತೊಂದು ಬಗೆಯಲ್ಲಿರುವುದು. ೧೯೧೧ರಲ್ಲಿ ಎಣೂರು ಅತ್ತಕಡೆ ಫಾದರ್ ಕೋರ್ಟಿಯವರು ೭೪ ಜನ ಪಂಚಮರನ್ನು ಕ್ರೈಸ್ತಮತಕ್ಕೆ ಸೇರಿಸಿದರು. ೧೯೧೩ರಲ್ಲಿ ಈ ಸಂಖ್ಯೆಯು ೨೫೫ಕ್ಕೂ ೧೯೧೪ರಲ್ಲಿ ೫೦೦ಕ್ಕೂ ಈಗ ೭೩೦ಕ್ಕೂ ಹೆಚ್ಚಿರುವುದೆಂತ ತಿಳಿಯುತ್ತದೆ.

ಇಲ್ಲಿಯ ಕರಂಗಲಪಾಡಿ ಮಠಾರಗಳಲ್ಲಿ ಕಳ್ಳರ ಸುಳಿದಾಟಕ್ಕೆ ಶಾಶ್ವತವಾದ ನೆಲೆಯು ದೊರೆತಿರುವುದೆಂತ ಕಾಣುತ್ತದೆ. ಈ ಮಠಾರಗಳಲ್ಲಿರುವ ರಾ। ಪಿ. ಶ್ರೀನಿವಾಸ ಕಾಮತ್‌ರವರ ಮನೆಗೆ ಕಳೆದ ದಿವಾಳಿ ಹಬ್ಬದ ದಿನಗಳಲ್ಲಿ ರವಿವಾರ ರಾತ್ರಿ ಕಳ್ಳರು ಕನ್ನ ಹಾಕಿ ಪ್ರವೇಶಿಸಿದರು. ಇಷ್ಟರಲ್ಲಿಯೇ ಮನೆಯವರಿಗೆ ಎಚ್ಚರವಾದ್ದರಿಂದ ಕಳ್ಳರು ಏನೊಂದನ್ನು ಒಯ್ಯಲಾರದೆ ಕತ್ತಲೆಯಲ್ಲಿ ಓಡಿ ಹೋದರು.

ಸುರತ್ಕಲ್ಲಿನಲ್ಲಿರುವ ರೋಮನ ಕೆಥೋಲಿಕ ಪಾದ್ರಿ ಸಾಹೇಬರ ಮೇಲೆ ಬಬ್ಬು ಎಂಬ ಪಂಚಮನು ತಂದ ಫಿರ್ಯಾದು ಇಲ್ಲಿಯ ಡಿವಿಜನ್ ಡಿಪ್ಯುಟಿ ಕಲೆಕ್ಟರವರಿಂದ ತಳ್ಳಿ ಹಾಕಲ್ಪಟ್ಟಿತು. ಈ ಫಿರ್ಯಾದಿಯ ಸಾರಾಂಶವೇನಂದರೆ:—ಬಬ್ಬು ತಾಯಿಯ ತಂಗಿ ಅಸ್ವಸ್ಥಳಿದ್ದ ಐತೆ ಎಂಬವಳಿಗೆ ಕ್ರೈಸ್ತ ಮತಕ್ಕೆ ಸೇರಿದರೆ ರೂ. ೫೦ ಕೊಡುತ್ತೇನೆಂತ ಹೇಳಿ ಪಾದ್ರಿ ಸಾಹೇಬರು ಇವಳನ್ನೂ ಇವಳ ಮಕ್ಕಳನ್ನೂ ಕರಕೊಂಡು ಹೋಗಿ ಒಂದು ಜೋಪಡಿಯಲ್ಲಿಟ್ಟರು. ಐತೆಯು ಮೃತಳಾದಳು. ಇವಳ ಮಕ್ಕಳು ತಮ್ಮ ದೊಡ್ಡ ತಾಯಿಯ ಹತ್ತಿರ ಹೋಗುವವೆಂದು ಕೂಗುತ್ತಿರುವದರಿಂದ ಈ ಮಕ್ಕಳನ್ನು ಪಾದ್ರಿ ಸಾಹೇಬರು ಬಿಟ್ಟುಕೊಡುವಂತೆ ಅಪ್ಪಣೆಯಾಗಬೇಕೆಂದು ಫಿರ್ಯಾದು ಬರಕೊಳ್ಳಲಾಗಿತ್ತು.

ಈ ಮಕ್ಕಳ ಸ್ವಾಧೀನತೆ ಬಗ್ಗೆ ಡಿಸ್ಟ್ರಿಕ್ಟ್ ಜಡ್ಜರಲ್ಲಿ ಬಬ್ಬು ಅರ್ಜಿ ಮಾಡುವನಾಗಿ ತಿಳಿಯುತ್ತೇವೆ.

ಉತ್ತರ ಕನ್ನಡಾ ಜಿಲ್ಲೆಯ ಹೊನ್ನಾವರಿನಲ್ಲಿರುವ ಈ ಜಿಲ್ಲೆಯವರು ಇದೇ ಕಳೆದ ತಾ. ೧೨ರಲ್ಲು ಹೊನ್ನಾವರದಲ್ಲಿ ಸಭೆ ಕೂಡಿದ ವೃತ್ತಾಂತವು ಪ್ರಕಟನೆ ಬಗ್ಗೆ ಬಂದಿರುವುದು. ಮ। ರಾ। ಮಾಜಿ ಮನಮೋಹನದಾಸರಾದ ಟಿಪ್ಪೂರು ರಾವ ರಾಯರು ಸಭಾಧ್ಯಕ್ಷರಾಗಿದ್ದರು. ರಾ। ಮಾಧವ ಅನಂತ ಶೆಣೈ, ಬಿ. ಎ. ಎಲ್. ಎಲ್. ಬಿ. ಪಿ. ಎಸ್. ಕಾಮತ್ ಪ್ಲೀಡರ್, ರಾ। ಎಚ್ ರಾಘವೇಂದ್ರ ರಾವ್ ಸಬ್ ಅಸಿಸ್ಟೆಂಟ್ ಸರ್ಜನ್, ರಾ। ಸೀತಾರಾಮಯ್ಯ, ರಾ। ವಿಟ್ಠಲರಾವ್, ಬಿ. ಎ. ರಾ। ಎಸ್. ಸಂಜೀವರಾವ್ ಬಿ. ಎ. ಎಲ್. ಟಿ. ರಾ। ಜನಾರ್ದನ ಮಾಮುಮಲ್ಯ, ಬಿ. ಎ. ಮೆ। ಡಿ. ವಾಟ್ಸ. ಮ. ಎಲ್. ರೊಬರ್ಟ್ಸ್. ರಾ। ಎ. ಎಮ್. ಬಸ್ರೂರ್ ಮೊದಲಾದವರು ಸಭೆಯಲ್ಲಿ ಹಾಜರಿದ್ದರು. ರಾ। ಮಾಧವ ಅನಂತ ಶೆಣೈಯವರು ಸಭಾ ಉದ್ದೇಶವನ್ನು ಕುರಿತು ಮಾತಾಡಿದ ನಂತರ ಸಭಾಕಾರ್ಯಗಳು ಪ್ರಾರಂಭವಾದವು. ಈಗಿನ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಕೆಲವು ವರುಷಗಳ ಹಿಂದೆ ಕನಡಾ ಜಿಲ್ಲೆಯೆಂಬ ಒಂದೇ ಜಿಲ್ಲೆಯಾಗಿದ್ದು ಹೊನ್ನಾವರ ಪಟ್ಟಣವು ಇದರ ಮುಖ್ಯ ಪಟ್ಟಣವಾಗಿತ್ತು. ಇಂಥಾ ಪಟ್ಟಣದಲ್ಲಿ ಪ್ರಕೃತ ಸಭೆ ಕೂಡಿದ ದಕ್ಷಿಣಕನ್ನಡ ಜಿಲ್ಲೆಯವರಾದ ನಾವು ಬರುವ ನವಂಬರ ತಿಂಗಳಲ್ಲಿ ದಕ್ಷಿಣಕನ್ನಡ ಜಿಲ್ಲೆಗೆ ಚಿತ್ತೈಸುವ ಮದರಾಸು ಗವರ್ನರ ದೊರೆಗಳವರಿಗೆ ಈ ಮೂಲಕ ಅಭಿವಂದನೆಗಳನ್ನು ಮಾಡಿರುವೆವೆಂಬ ನಿರ್ಣಯವು ಈ ಸಭೆಯಲ್ಲಿ ಪ್ರಥಮ ಮಂಜೂರಾಯಿತು. ಎರಡು ಜಿಲ್ಲೆಯವರೂ ಸರಕಾರದ ಉದ್ಯೋಗಸ್ಥರೂ ಇತರರೂ ಪರಸ್ಪರ ಕ್ಷೇಮಾಭಿವೃದ್ಧಿ ಸಾಧನೆಗಳಲ್ಲಿ ತಾವು ಈ ಮೊದಲು ಒಂದೇ ಜಿಲ್ಲೆಯವರಾಗಿದ್ದೇವೆಂಬ ಭಾವನೆಯಿಂದ ಒಟ್ಟುಕೂಡಿ ಮಾಡುವುದು ಅಗತ್ಯವೆಂಬ ನಿರ್ಣಯವೂ ಸಹ ಇದೇ ಸಭೆಯಲ್ಲಿ ಮಾಡೋಣಾಯಿತು. ಪ್ರಕೃತ ಸಂಭವಿಸಿರುವ ಯುದ್ಧದಲ್ಲಿ ನಮ್ಮ ಸಾಮ್ರಾಜ್ಯದ ಸರಕಾರದವರಿಗೆ ಜಯವನ್ನಪೇಕ್ಷಿಸಿ ಸಭೆಯು ಅಗಲಿತು.

ಮಂಗಳೂರು ಮ್ಯುನಿಸಿಪಾಲಿಟಿಯಲ್ಲಿ ಕಳೆದ ವಾರ [illegible]

ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿ, ಲಿಮಿಟೆಡ್, ಇದರ ಜನರಲ್ ಮೀಟಿಂಗ್ ಇದೇ ತಾ. ೨೬ನೇ ಸೋಮವಾರ "ಮನೋಹಾರ ವಿಲಾಸ" ರಾ। ನೆಲ್ಲಿಕಾಯಿ ವೆಂಕಟಪ್ಪಯ್ಯರವರ ಬಂಗ್ಲೆಯಲ್ಲಿ ಕೂಡುವುದು. ಈ ಕಂಪೆನಿಯವರು ಸದ್ಯ ಪುತ್ತೂರಿನ ವರೆಗೆ ಮೋಟರ್ ಬಸ್ ಲೈನ್ ತೆರೆಯುವರೆ ಆಲೋಚಿಸಿ, ಒಂದು ಮೋಟರ್ ಬಸ್ಸಿಗೆ ಆರ್ಡರು ಕೊಟ್ಟಿರುವರೆಂತಲೂ ಈ ಮೋಟರ್ ಬಸ್ಸ್ ಇದೇ ತಿಂಗಳ ತಾ. ೩೧ಕ್ಕೆ ಸಿದ್ಧವಾಗುವುದೆಂತ ಮದ್ರಾಸಿನಿಂದ ತಂತೀ ಬಂದಿರುವದೆಂಬದಾಗಿಯೂ ತಿಳಿಯುತ್ತೇವೆ.

ಮಂಗಳೂರು ವಿದ್ಯಾರ್ಥಿ ಸಭೆಯ ದ್ವಿತೀಯ ವಾರ್ಷಿಕ ಸಮಾರಂಭವು ಇದೇ ತಾ. ೨೫ನೇ ಆದಿತ್ಯವಾರ ಇಲ್ಲಿಯ ಡಿಸ್ಟ್ರಿಕ್ಟ್ ಮುನ್ಸಿಫರಾದ ಮ। ರಾ। ರಾ। ಎಸ್. ವೆಂಕಟಸುಬ್ಬರಾವ್ ಅವರ್ಗಳ್ ಬಿ. ಎ. ಬಿ. ಎಲ್‌ರವರ ಅಧ್ಯಕ್ಷತೆಯಲ್ಲಿ ಜರಗುವುದು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

O. P. ನಂಬ್ರ $\frac{80}{14}$.

ದುಗ್ಗಪ್ಪ ಶೆಟ್ಟಿ—ಅರ್ಜಿದಾರ

ರುಕ್ಮಿಣಿ ಹೆಂಗಸು— ಎದ್ರಿ

ತಾ. 8—7—1912ರಲ್ಲು ಅಮಾಸೆ ಬೈಲು ಗ್ರಾಮದಲ್ಲಿ ಮೃತಪಟ್ಟ ನರಸಿಂಹಯ್ಯಗೆ ಬರತಕ್ಕ ಸಾಲಗಳ ಪೈಕಿ ಕೆಲವನ್ನು ಆತನ ಹೆಂಡತಿಯಾದ ಎದ್ರಿಳಿಂದ ಟ್ರಿನ್ಸಫರ ಪಡದ ಮೇರೆಗೆ ತನಗೆ ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರನು ಸದರಿ ಕೋರ್ಟಿಗೆ ಕೊಟ್ಟ ಅರ್ಜಿಯು ತಾ. ೧೬—೧೧—೧೪ಕ್ಕೆ ತನಕಿಗೆ ಇಟ್ಟಿರುವದರಿಂದ ಆಕ್ಷೇಪ ಇದ್ದವರು ಸದರಿ ಕೋರ್ಟಿಗೆ ಹ್ಯಾಜೀರು ಮಾಡತಕ್ಕದ್ದು.

ತಾ. 21—10—14. K. NARASIMHA KAMATH.
Pleader for Petetioner.

ಜೀನಸು ಧಾರಣೆ. (ರಖಂ)

ಅವ್ವಲ್ ಮಸ್ಕತಿ ಅಕ್ಕಿ	.	5— 6—0	5—10—0
ದುಯಂ ,, ,,	.	5— 2—0	5— 5—0
ಸುಗ್ಗಿ ,,	.	5— 0—0	5— 3—0
ಗಾಡಿ ಸುಗ್ಗಿ ,,	.	4—11—0	4—12—0
ಗುಡ್ಡು ,,	.	5— 0—0	5— 2—0
ದುಯಂ ಗುಡ್ಡು ,,	.	4—11—0	4—12—6
ಅವ್ವಲ್ ಬೆಳ್ತಿಗೆ ,,	.	5— 4—0	5— 8—0
ಗುಡ್ಡು ಬೆಳ್ತಿಗೆ ,,	.	4—14—0	5— 0—0
ರಂಗೂನು ಬೆಳ್ತಿಗೆ ಗೋಣಿ ೧ರ		9— 0—0	9— 4—0
ಗೋದಿ ಗೋಣಿ ೧ರ			14— 0—0
ಹುರುಳಿ ಗೋಣಿ ೧ರ			8— 8—0
ಕಡಲೆ ಗೋಣಿ ೧ರ.			11— 8—0
ತೊಗರಿ ಗೋಣಿ ೧ರ			12— 0—0
ತೊಗರಿ ಬೇಳೆ ಗೋಣಿ ೧ರ.		12— 0—0	15— 0—0
ಉದ್ದು ಗೋಣಿ ೧ರ			10—8—0
ಊರು ಬೆಲ್ಲ ಖಂಡಿ ೧ರ			55— 0—0
ಉಪ್ಪು ಗೋಣಿ ೧ರ			4— 8—0
ಕೊಬ್ಬ್ರಿ ಖಂಡಿ ೧ರ	.	70— 0—0	80— 0—0
ಕೊಬ್ಬ್ರಿ ಹಿಂಡಿ ಖಂಡಿ ೧ರ			26— 8—0
ಎಳ್ಹಿಂಡಿ ಖಂಡಿ ೧ರ			32— 8—0
ಕೊಬ್ಬ್ರಿ ಎಣ್ಣೆ ಮಣ ೧ರ			5—10—0
ಎಳ್ಳೆಣ್ಣೆ ಮಣ ೧ರ			7— 0—0
ಚಿಮಣಿ ಎಣ್ಣೆ ಪೆಟ್ಟಿಗೆ ೧ರ			5— 1—0
ಮೋರಿಸ್ ಸಕ್ಕರೆ ಮಣ ೧ರ			4— 0—0
ಕಾಫಿ ಖಂಡಿ ೧ರ.		175—0—0	200— 0—0
[illegible] ಖಂಡಿ ೧ರ.		110—0—0	115— 0—0
[illegible] ಮಣ ೧ರ			17— 0—0
[illegible] ,,			21—12—0
[illegible] ೧ರ			19— 8—0
[illegible]		[illegible]—0—0	[illegible]— 8—0
[illegible]			1— 8—0

ನ್ಯಾಯದರ್ಪಣ.

ಹೊಸ ಪುಸ್ತಕ

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ದರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು ಇವುಗಳನ್ನು ಕುರಿತು ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಬಾಷೆಯಲ್ಲಿಯೇ [illegible]ವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರು [illegible] "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಒಪ್ಪಂದಕ್ಕೆ ತಪ್ಪಿ ನಡೆಯೋಣ ದ್ರೋಹ, ಲಿಮಿಟೇಷನ್ ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್ ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, [illegible] ಸಿಕ್ಯಾಜನರಿಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧವಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ [illegible] ಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಉಪಕವಾಗಿ ಇರುತ್ತೆ. ಬೆಲೆ 1—8—0. ವಿ. ಪಿ 1—12—0

ಲಾಯರ್ ಯಂ ಯಸ್ ನಂಜಪ್ಪನವರು,

ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜ್ ಸೇರಿ 15—0—0 ಆಗುತ್ತೆ

ಉತ್ಕೃಷ್ಟವಾದ ಮೂರು ಔಷಧಗಳು

ಗ್ರಾಂಟ್ ಮೆಡಿಕಲ್ ಕೋಲೇಜಿನಲ್ಲಿ ಸೂಲಗಿತ್ತಿತನ ಕಲಿತ ಸರ್ಟಿಫಿಕೇಟ್ ಪಡೆದ ಕಮಲಾ ಬಾಯಿ, ತುಳಸೀ ಬಾಯಿ ಎಂಬ ಸೂಲಗಿತ್ತಿಯರಿಂದ ತಯಾರಿಸಲ್ಪಟ್ಟವುಗಳ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 1

(ಆರ್ತವ ಶೂಲ ಹೋಗಲಾಡಿಸವ [illegible])

ಅಬಲಾಸಂಜೀವನಿ ಗುಳಿಗೆಗಳ [illegible] ಹೋಗಲಾಡಿಸುವುದಕ್ಕೆ ಏಕಾಂತಿಯಲ್ಲಿ ಸಮಾಧಾನಕರವಾದ ಪ್ರಯೋಜನವನ್ನು ಕೊಡುವ ಮತ್ತು ಪೂರ್ಣ ನಂಬಿಕೆ [illegible] ಗಿರುವುವು ಅನೇಕ ಕಾಲದವರೆಗೆ ಪುಷ್ಪವತಿ [illegible] ಕೂಡ ಇವುಗಳಿಂದ ಸರಿಯಾಗುವುದು [illegible] ಎಲ್ಲಾ ಗರ್ಭಕೋಶದ ಶೂಲೆಗಳು ಇವುಗಳ [illegible] ಗರ್ಭಕೋಶವು ಪೂರ್ವಸ್ಥಿತಿಗೆ ಬರುವುದು [illegible] 1 [illegible] ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 2

(ಬಿಳೀ ಸ್ರಾವದ ಬಗ್ಗೆ)

ಈ ಬಾಧೆಯಿಂದ ಪೀಡಿತರಾದ ಸ್ತ್ರೀಯರು ಬಹಳ ವಿರಳ ಈ ಸ್ರಾವದಿಂದ [illegible] ನಿರ್ಬಲತೆ, ಹೊಟ್ಟೆನೋವು, ಮಲಬದ್ಧತೆಗಳುಂಟಾಗುವುವು ಈ ಸ್ರಾವವು ರಕ್ತಸ್ರಾವದಂತೆ ಬಲಹೀನಕರ ಇದರಿಂದ ಮನಸ್ಸು ಮಂದವಾಗುವುದು, ಹಸಿವೆ ಇಲ್ಲದಿರವುದು [illegible] ಕಟಿಪ್ರದೇಶದಲ್ಲಿ ನೋವು ಉಂಟಾಗುವುದು, ಮುಖವು ಬಾಡಿಹೋಗವುದು, ಮಲವಿಸರ್ಜನೆ ಸರಿಯಾಗದಿರವುದು ಈ ಗುಳಿಗೆಗಳು ಈ ಬಾಧೆಗಳನ್ನೆಲ್ಲಾ ಹೋಗಲಾಡಿಸುವುವು — ಒಂದೇ ಪೊಟ್ಟಣವನ್ನು ಪರೀಕ್ಷೆ ಬಗ್ಗಾಗಿ ತರಿಸಿದರೆ ತ್ವರ್ಯಗುಣ ಸಿಕ್ಕುವ ಲಕ್ಷಣವು ಮನಸ್ಸಿಗೆ ವೇದ್ಯವಾದೀತು ಒಂದು ಸೀಸೆಯ ಕ್ರಯ 1 ರೂಪ್ಯಾ. ಅಂಚೆ ಹಾಸಲು 4 ಆಣೆ

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 3

(ಕೆಂಪು ಸ್ರಾವದ ಬಗ್ಗೆ.)

ದೇಹದಲ್ಲಿ ರಕ್ತಬಲವು ಕಡಿಮೆಯಾಗುವುದರಿಂದ ಉಂಟಾಗುವ ಭಯಂಕರ ಪೀಡೆಗಳಲ್ಲಿ ಇದು ಒಂದು. ಈ ಸ್ರಾವದಿಂದ ಕ್ರಮೇಣ ಗರ್ಭಕೋಶದಲ್ಲಿ ಹುಣ್ಣು ಮೊದಲಾದವುಗಳು ಉಂಟಾಗಿ, ಗರ್ಭಕೋಶದ ಶೂಲೆ, ನಿರ್ಬಲತೆ ತಲೆದೋರುವುವು ಈ ಸ್ರಾವವು ಗರ್ಭಕೋಶದಿಂದ ಸ್ರವಿಸುವ ರಕ್ತವೇ ಸರಿ. ಈ ಗುಳಿಗೆಗಳನ್ನು ಕೂಡಲೇ ಸೇವಿಸುವುದಕ್ಕೆ ಅಸಡ್ಡೆ ಮಾಡಿದರೆ, ಈ ಪೀಡೆಯು ಅತಿಶಯಿಸಿ ಬೇಗನೇ ಗುಣ ಹೊಂದಲಿಕ್ಕಿಲ್ಲ. ಒಂದು ಸೀಸೆಯ ಕ್ರಯ 1 ರೂಪ್ಯಾ ಅಂಚೆ ಹಾಸಲು 4 ಆಣೆ.

Dr. Nava Ratna & Sons,
253 Kalbadevi Road,
BOMBAY.

ಏಜಂಟರು:— [illegible]

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿರಿ.

ಪಿ. ಸುಬ್ಬರಾಯರವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

1 ಸ್ಖಲಿತರಕ್ಷಣಿ— [illegible]ದಿಂದಲೂ, ಉಷ್ಣದಿಂದಲೂ ಬಾಲ್ಯಾವಸ್ಥೆಗಳಲ್ಲಿ ನಡೆದಂತಾ ಅತಿ ಸ್ತ್ರೀಸಂಭೋಗಗಳಿಂದಲೂ, ನಿದ್ರೆಯಲ್ಲಿಯೂ ಸ್ವಪ್ನದಲ್ಲಿಯೂ ಸ್ಖಲಿತವಾದ ಇಂದ್ರಿಯವನ್ನು ನಿಲ್ಲಿಸಿ ದೇಹದೃಢವನ್ನು ತರವುದು ಸೀಸೆ 1ಕ್ಕೆ ೮ ಆಣೆ ವಿ ಪಿ ಚಾರ್ಜು ೬ ಸೀಸೆವರಿಗೂ ೫ ಆಣೆ

2 ಅತ್ಯುತ್ತಮವಾದ ಕಸ್ತೂರಿ ಕಾಶ್ಮೀರದಿಂದ ತರಸಿರುವದು ಅತ್ಯುತ್ತಮವಾದದ್ದು ಮತ್ತು ಒಂದೇ ದಮ್ಮು ಇರತಕ್ಕದ್ದು ತೊಲ 1ಕ್ಕೆ ರೂ ೪೮ ಚಿಲ್ಲರೆಯಾಗಿ 1 ರೂಪಾಯಿಗೂ ದೊರಕುತ್ತದೆ ವಿ ಪಿ ಅಲಾಹಿದ

3 ಚೇಳಿನ ಔಷಧಿ ಚೇಳು ಕಚ್ಚಿದ ಸ್ಥಳಕ್ಕೆ ಕೂಡಲೆ ಕೆಲವು ತೊಟ್ಟುಗಳನ್ನು ಬಿಟ್ಟ ತಕ್ಷಣವೇ ಉರಿಯು ನಿಲ್ಲುವುದು ಪ್ರತಿ ಕುಟುಂಬದಲ್ಲಿಯೂ ಅವಶ್ಯಕವಾಗಿರಬೇಕಾದದ್ದು ಸೀಸೆ 1ಕ್ಕೆ ೮ ಆಣೆ ವಿ ಪಿ ಚಾರ್ಜು ೬ ಸೀಸೆ ವರಿಗೂ ೫ ಆಣೆ [illegible] ಸೀಸೆ [illegible] ಬೆಲೆ ರೂ. 1—೮—0 ವಿ ಪಿ ಚಾರ್ಜು [illegible]

4 ಮೇಹ [illegible] ಇದರ [illegible] ಹಚ್ಚಿ [illegible] ಮೇಲೆ ಹಾಕಿದರೆ, ಮೇಹದಿಂದುಂಟಾಗುವ ಕಂದಮಾಲೆ ತೊಡೆಬಾಳೆ, ಗಡ್ಡೆಗಳು, ಕುಸುಮರೋಗ ವ್ರಣಗಳು, ಆಸನ ಪವುತ್ರಗಳು ಲಿಂಗವ್ರಣ, ಮೋಸಿ ವ್ರಣ, ಮುಂತಾದ ಸಕಲ ವ್ರಣಗಳು ಮತ್ತು [illegible] ಹುಳವನ್ನು ಕೊಂದು ಹುಣ್ಣನ್ನು ಆರಿಸಿ ಚರ್ಮದ ಮೇಲಿನ ಹುರುಕನ್ನು ಸರಿಮಾಡಿ ಚೆನ್ನಾಗಿ ಬೆಳೆಯುವಂತೆ ಮಾಡುವದು ಸೀಸೆ 1ಕ್ಕೆ ೮ ಆಣೆ ವಿ ಪಿ ಚಾರ್ಜು ೬ ಸೀಸೆವರಿಗೂ ೫ ಆಣೆ

5 ಮಧುರಧ್ವನಿ ಮಾತ್ರೆ— ಧ್ವನಿಯಲ್ಲಿರುವ ನ್ಯೂನತೆಗಳನ್ನು ಸರಿಮಾಡಿ, ಮನೋಹರವಾದ ಧ್ವನಿಯನ್ನುಂಟುಮಾಡಿ ಸ್ಫುಟವಾಗಿ ಮಾತನಾಡುವದಕ್ಕೆ ವಿಶೇಷ ಅನುಕೂಲಪಡಿಸಿಕೊಡುವದು ಮುಖ್ಯವಾಗಿ ಸಂಗೀತಗಾರರು, ಉಪನ್ಯಾಸಕರು ಮೊದಲಾದವರಿಗೆ ಬಹಳ ಸಹಕಾರಿಯು ಇದರ ಸೇವನೆಯಿಂದ ಭಾರವಾದ ಧ್ವನಿಯು ಸರಿಯಾಗುವದು ಹಾಡಿದರೆ ಕಿವಿಗಿಂಪಾಗುವಂತೆ ಧ್ವನಿಯು ಹೊರಡುವದು ಸೀಸೆ 1ಕ್ಕೆ ೮ ಆಣೆ ವಿ ಪಿ ಚಾರ್ಜು ೬ ಸೀಸೆ ವರಿಗೂ ೫ ಆಣೆ

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಿಳುನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.

P. SUBBAROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯ,
ಆಯುರ್ವೇದ ಔಷಧಶಾಲ,
[illegible]

ಬಹುಮಾನ! ಬಹುಮಾನ!! ಬಹುಮಾನ!!!

1—4—0ಯನ್ನು ಮಣಿಯಾರ್ಡರ ಮೂಲಕ ಕಳುಹಿಸುವವರಿಗೆ ಒಂದು ಜಂಟಲ್ ಮೆನ್ ಜೇಬುಗಡಿಯಾರ, ಗಾಢನಿದ್ರೆಯಲ್ಲು ಸಹ ಎಚ್ಚರಗೊಳಿಸುವ ಅಲಾರಂ ಟೈಂಪೀಸು, ರೈಲ್ವೆ ಲಿವರ್ ಎಂಬ ಸಾದಾ ಟೈಂಪೀಸು, 18 ಕ್ಯಾರೆಟ್ ಚಿನ್ನದ ಸುಂದರವಾದ ಕೈಉಂಗುರ ಅಲ್ಲದೆ ಶ್ಯಾಯಿ ಇಲ್ಲದೆ ತಾನಾಗಿ ಬರಿಯುವ 14 ಕ್ಯಾರೆಟ್ ಚಿನ್ನದ ಮುಳ್ಳುಳ್ಳ ಫೌಂಟನ್ ಪೇನು ಇವುಗಳಲ್ಲಿ ಯಾವದಾದರೂ ಇದನ್ನು ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಯಾಗುವದಕ್ಕಾಗಿ ಕೆಲವು ಕಾಲದ ವರೆಗೆ ಮಾತ್ರವೇ ಕೊಡಲ್ಪಡುತ್ತ. ಮೇಲೆ ಹೇಳಿದ ಸಾಮಾನುಗಳು ಪ್ರತಿ ಒಂದು ರಖಮಿನಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆ ಮಣಿಯಾರ್ಡರ್ ಕಳುಹಿಸಿ. ವಿ. ಪಿ. ಮೂಲಕ ಸಾಮಾನುಗಳನ್ನು ಕಳುಹಿಸುವದಿಲ್ಲಾ.

ವಿಳಾಸ:— ಗೌಡ್ ಅಂಡ್ ಕಂಪೆನಿ,

ತಿರುವಲ್ಲಿಕೇಣಿ, ಮದರಾಸು.

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಖಮ್ ರೂ. 1-15-0.



ಇದು 18 ಮೊಳ ಧಾರಾಳವಾಗಿದೆ. ಉಡಲು ಲಾಯಖಾದದ್ದು. ಬಣ್ಣ ಹೋಗದು. ಸುಂದರವಾದ ಸೆರಗು. ಪೋಷ್ಟ್ ಪ್ರಕಟಣೆಗಳ ದೆಸೆಯಿಂದ ಈ ಭಾರೀ ಕ್ರಯದ ಸೀರೆಯನ್ನು ಅಸಲು ಬೆಲೆಗೆ ತಗ್ಗಿಸಿ ಮಾರುತ್ತೇವೆ. ಜಾಗ್ರತೆ ತರಿಸುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತೆ.

ವಿಳಾಸ:— ರಾಮರಾವ್, ಎಸ್. ಎಂ. ಕೋಯಿಲ್ ಬೀದಿ.

[139-4] ತಿರುವಲಕ್ಕೇಣಿ, ಮದರಾಸು.

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 0—7—0.

ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವದಕ್ಕಾಗಿ ಮಾದರಿ ಅಡ್ಡಿಗೆಯನ್ನು ನೋಡಬೇಕೆಂದು ಬರಿಯುವವರಿಗೆ ಮಾದರಿ ಅಡ್ಡಿಗೆಯನ್ನು ಉಚಿತವಾಗಿ ಕಳುಹಿಸುತ್ತೇವೆ.



ಇದು ಕೆನಡಿಯನ್ ಚಿನ್ನದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ಕೆತ್ತನೆಗಳನ್ನು ಇಟ್ಟು ಅವರಂಜಿಯ ಮಿಣಾಮನ್ನು ಹಾಕಿ ನೋಡುವವರಿಗೆ ಆಶ್ಚರ್ಯವಾಗುವ ಹಾಗೆ ಸ್ವಲ್ಪ ಕ್ರಯವನ್ನಿಟ್ಟು ತಯಾರಿಸಿದ್ದೇವೆ. ಇದು ನಾಜೂಕಿನ ಮಣಿಗಳು, ನಿಜವಾದ ಗಟ್ಟಿ ಗೆಜ್ಜೆಗಳು, ಸ್ತ್ರೀಯರು ಕೊರಳಲ್ಲಿ ಧರಿಸುವುದಕ್ಕೆ ಲಾಯಕ್ಕಾದದ್ದು.

ವಿಳಾಸ:— ಎಸ್. ಎನ್. ಮೂರ್ತಿ ಕಂಪೆನಿ,

ತಿರುವಲಕ್ಕೇಣಿ, ಮದರಾಸು.

ಸೂರ್ಯೋದಯ ಪುಸ್ತಕ ಭಂಡಾರ.

ನಮ್ಮ ಪುಸ್ತಕ ಶಾಲೆಯಲ್ಲಿ ದೊರಕುವ ಪುಸ್ತಕಗಳು.

ದ್ವಾದಶಸ್ಕಂದ ಭಾಗವತ, ಅವ್ವಲ್ ಗ್ಲೇಜ್ ಕಾಗದದ ಪ್ರತಿ ರೂ. ೫. ದ್ವಾದಶಸ್ಕಂದ ಭಾಗವತ ಸಾಧಾರಣ ಕಾಗದ ದುಯ್ಯಂ ಪ್ರತಿ ರೂ. ೪. ದಶಪರ್ವ ಭಾರತ ಮೈಸೂರು ಪ್ರತಿ ರೂ. ೨. ದಶಪರ್ವ ಭಾರತ ದುಯ್ಯಂ ರೂ. ೧—೮—೦. ಭಾರತ ಕಥಾಸಂಗ್ರಹ ೧೮ ಪರ್ವದ್ದು ಆಣೆ ೬. ತೊರವೆ ರಾಮಾಯಣ ಅವ್ವಲ್ ಪ್ರತಿ ರೂ. ೨ ತೊರವೆ ರಾಮಾಯಣ ದುಯ್ಯಂ ಪ್ರತಿ ರೂ. ೧. ರಾಮಾಯಣ ಕಥಾಸಂಗ್ರಹ ದಶಾವತಾರ ಕಥೆಗಳ ಸಹಿತ ಅವ್ವಲ್ ರೂ. ೧. ಸೋಮೇಶ್ವರ ಶತಕ ಟೀಕು ೦—೨—೬. ಸೋಮೇಶ್ವರಶತಕ ಮೂಲ ೬ ಪೈ. ಹರಿಭಕ್ತಿಸಾರ ಟೀಕು ೦—೨—೬. ಹರಿಭಕ್ತಿಸಾರ ಮೂಲ ೬ ಪೈ. ನಿಜಲಿಂಗಶತಕ ಟೀಕು ೦—೨—೬. ನಿಜಲಿಂಗಶತಕ ಮೂಲ ೬ ಪೈ. ಸಟೀಕ ಸುದತೀ ಶತಕ ಆಣೆ ೨. ಟೀಕು ತಾತ್ಪರ್ಯ ಸಹಿತ ಭಾಸ್ಕರಶತಕ ಆಣೆ ೬, ಬಸವ ಪುರಾಣ ಆಣೆ ೧೨. ಚನ್ನ ಬಸವ ಪುರಾಣ ಅವ್ವಲ್ ಗ್ಲೇಜ್ ಕಾಗದ ರೂ. ೧—೪—೦. ಚನ್ನ ಬಸವ ಪುರಾಣ ದುಯ್ಯಂ ಆಣೆ ೧೨. ದೇವೀ ಮಹಾತ್ಮ್ಯ ಪದ್ಯ ಆಣೆ ೪.

ಇದಲ್ಲದೆ ವೈದ್ಯಗ್ರಂಥಗಳು, ಜೋತಿಷ್ಯ ಗ್ರಂಥಗಳು, ನಾವಿಲ್ ಕಥೆಗಳು, ಹೊಸದಾಗಿ ಬಂಗಾಳಿಯಿಂದ ಕನ್ನಡಿಸಿದವುಗಳು, ನಾಟಕಗಳು, ವೇದಾಂತ ಗ್ರಂಥಗಳು ವಗೈರೆ ನೂರಾರು ಪುಸ್ತಕಗಳು ಇವೆ. ನೋಡಲಪೇಕ್ಷಿಸುವವರಿಗೆ ನಮ್ಮ ಪುಸ್ತಕಗಳ ಒಂದು ಕ್ಯಾಟಲಾಗನ್ನು ಮುಫತ್ತಾಗಿ ರವಾನಿಸುವೆವು.

ಪ್ರೊಪ್ರೈಟರ್

ಸೂರ್ಯೋದಯ ಪುಸ್ತಕ ಭಂಡಾರ

ವ್ಯಾಧಿತರೇ!!

ಇತ್ತ ಲಕ್ಷ್ಯ ಕೊಡಿರಿ.

ಯೂಕಲಿಪ್ಟಸ್ ತೈಲ.—ತಲೆನೋವು, ಕಣ್ಣುಉರಿ, ಕತ್ತಿ, ಕಲ್ಲಿನಿಂದುಂಟಾದ ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧ ಬಿಳುಪು, ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧವಾದ ಚಳಿಜ್ವರ (ಮಲೇರಿಯ) ವಾಂತಿಭೇದಿ, ಹೆಂಗಸರ ಹೊಟ್ಟೆನೋವು ಮೊದಲಾದ ಸರ್ವ ವಿಧವಾದ ರೋಗಗಳಿಗೆ ದಿವ್ಯೌಷಧಿ. ಕ್ರಯ ದೊಡ್ಡ ಸೀಸೆಗೆ ೫ ಆಣೆ. ವ್ಹಿ. ಪಿ. ಬೇರೆ. ಡಜನ್ ಸೀಸೆಗಳನ್ನು ತರಿಸಿಕೊಂಡರೆ ರೂ. ೩. ವ್ಹಿ. ಪಿ. ಬೇರೆ. ಅನುಪಾನ ಪತ್ರ ಸೀಸೆಯೊಂದಿಗೆ.

ಇಕ್ಲಿಪ್ಸ್ ಬಾಮ್:—ವಾತ, ಸಂಧಿವಾತ, ಶಿರೋಭಾರ, ಅರ್ಧಾಂಗವಾಯು, ಎದೆನೋವು, ಶೀತ, ಕೆಮ್ಮು, ಹಲ್ಲುನೋವು, ಘಾಯ, ಪಕ್ಷವಾತ, ಮೊಡವೆ, ನಾಯಿಕಡಿತ, ಕಜ್ಜಿ, ಹುಳ ಮೇಯುವುದು ಮೊದಲಾದ ಸರ್ವ ವಿಧದ ನೋವುಗಳಿಗೆ ದಿವ್ಯೌಷಧ. ಬಾಟ್ಲಿ ಗಕ್ಕೆ ೮ ಆಣೆ. ವ್ಹಿ. ಪಿ. ಬೇರೆ. ಡಜನ್ ಬಾಟ್ಲಿಗಳಿಗೆ ರೂ. ೪-೧೨-೦. ವ್ಹಿ. ಪಿ. ಬೇರೆ.

ಸ್ನೇಹಲತಾ ಮಸ್ತಕತಾಪಹಾರಿಣೀ:—ತಲೆನೋವು, ಶಿರೋಭಾರ, ತಲೆಸಿಡಿತ ಮೊದಲಾದ ಮೆದುಳು ರೋಗಗಳಿಗೆ ದಿವ್ಯ ತೈಲ. ಕೇಶವು ಉದ್ದವಾಗಿ ಬೆಳೆಯುವುದು. ಸೀಸೆ ಗಕ್ಕೆ ೧೨ ಆಣೆ. ವ್ಹಿ. ಪಿ. ಬೇರೆ. ಡಜನ್ ಬಾಟ್ಲಿಗಳಿಗೆ ರೂ. ೮. ವ್ಹಿ. ಪಿ. ಬೇರೆ.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.

ಕಂಕನಾಡಿ ಪೋಸ್ಟು, ದ. ಕ.

ದಸರಾ ಬಹುಮತಿ ಗಡಿಯಾರ.

15 ಸಾಮಾನು ಬಹುಮತಿ ಸಹಿತ ರೂ. 3—14—0.



ಇದರಲ್ಲಿ ನಮೂದಿಸಿರುವ 7 ರೂಪಾಯಿ ಬೆಲೆಯುಳ್ಳ ಗಡಿಯಾರವನ್ನು ದಸರಾ ಒಳಗೆ ತರಿಸಿಕೊಳ್ಳುವವರಿಗೆ ರೂ. 3—14—0ಗೆ 15 ಬಹುಮಾನಗಳು ಉಚಿತವಾಗಿ ಕೊಡುತ್ತೇವೆ.

1. ಉತ್ತರ ಮುಖಿ. 2. ಪೇನಾಕತ್ತಿ, 3. ಬ್ಲೂಬ್ಲೆಕ್ ಶಾಯಿ ಪೊಟ್ಟಿ, 4. ಹಣದ ಚೀಲ, 5. ಗಡಿಯಾರ ಸರಪಣಿ, 6. ಎಲೆಕ್ಟ್ರಿಕ್ ಭಂಗಾರದ ಶ್ಯಾಮಂತಿಗೆ ಹೂವು, 7. ಇಮಿಟೇಷನ್ ಡೈಮಂಡ್ ಶರಟು ಗುಂಡಿ, 8. ಜರ್ಮನ್ ಬೆಳ್ಳಿಯ ಕುಂಕುಮ ಭರಣಿ, 9. ಡಿಟೋ ಸಾದಿನ ಚಿಮ್ಮು, 10. ಡಿಟೋ ಕಣ್ಣು ಕಪ್ಪಿನ ಭರಣಿ, 11. ಡಿಟೋ ನಶ್ಯದ ಡಬ್ಬಿ, 12. ಇಮಿಟೇಷನ್ ಡೈಮಂಡ ಮೂಗುಬಟ್ಟು, 13. ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಗೆ, 14. ಎಲೆಕ್ಟ್ರೋ ಸೀಲು ಉಂಗುರ, 15. ಕತ್ರಿ.

ಈ ಕೆಳಗಿನ ಸಾಮಾನುಗಳು ಸಹ ನಮ್ಮಲ್ಲಿ ದೊರೆಯುತ್ತೆ.

ಮಧುರೆ ಚುನ್ನಡ ಸೀರೆ ಒಂದಕ್ಕೆ ರೂ. 2—3—0.

ಮಧುರೆ ಕೆಂಪು ಸೀರೆ ರೂ. 3—0—0.

ತಂಜಾವೂರು ಗೆಜ್ಜೆ ಅಡ್ಡಿಗೆ ಆಣೆ 6.

ವಿಳಾಸ:— ಕೆ. ರಾಧಾಕೃಷ್ಣ,

18 ... ಕಾರು ಸ್ಟ್ರೀಟು,

... ಮದರಾಸು.

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು.

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿರುತ್ತದೆ. ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತು ಆಣೆ 8. ಡಜನ್ 1ಕ್ಕೆ ರೂ. 5-0-0. ವಿ. ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ.

ಗಜಕರ್ಣದ ಮುಲಾಮು.

ಮೂರು **ಸರ್ತಿ ಹಾಗಿಸುವದರೊಳಗೆ** ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ, ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್‌ಮಾರ್ಕ. 0—6—0. 3 ಡಬ್ಬಿಗಳಿಗೆ 0—15—0. ವಿ. ಪಿ. ಪ್ರತ್ಯೇಕ.

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ.

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲು ನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ ಹಲವು ನಮುನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—6. ಡಜನ್ 1ಕ್ಕೆ 1—2—0. ವಿ. ಪಿ. ಪ್ರತ್ಯೇಕ.

ಸುಂದರಿ ಮುಲಾಮು.

ಮುದಣಗಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ. 0—8—0.

ಮೋಹಿನಿ ತೈಲ

ಈಗ ಹಲವು ನಮೂನೆಯ ತೈಲಗಳು **ಉಪಯೋಗಿಸಿದವರು ಈ ನಮ್ಮ** ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು **ಸಾರಿ ಉಪಯೋಗಿಸಿ ನೋಡಿರಿ.** ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ. ಇದು ಗಿಡಮೂಲಿಕೆಗಳಿಂದಲೂ, **ಬದಾಮಿನ** ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ **ಕೂದಲುಗಳು ಉದ್ದವಾಗಿಯೂ,** ನಯವಾಗಿಯೂ, ಕಪ್ಪಾಗಿಯೂ ಬೆಳಿಯುವವು.

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ದರ ರೂ. 1—0—0.

ಕೆ. ನಟರಾಜನ್ ಎಡಿಟ್, ಇಂಡಿಯನ್ ಸೋಸಿಯಲ್ ರಿಫೋರ್ಮರ್:— ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸವೆಲ್, ಮ್ಯೆಸೂರು:— ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತವೆ.

ಆರ್. ಆರ್. ಗಂಗೋಲಿ:— ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ದಾಂಡೆಕರ್, ಎಲ್. ಎಮ್. ಎಂಡ್. ಎಸ್:— ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೋ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, **ಬೇಕಾದವರು** ನಮ್ಮ ಮುಂಬಯಿ ಆಫೀಸಿಗೇನೇ ಬರಿಯಬೇಕು. ಮದ್ರಾಸು ಆಫೀಸಿನವರು **ರಖ**ಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ — ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ತಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಶಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ, ಕೊಚ್ಚಿಕಾರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪೋ,

9 ಜಹಂಗೀರ್ ಸ್ಟ್ರೀಟ್, ಜೋರ್ಜ ಟೌನ್, ಮದ್ರಾಸು.

109 ಫ್ರೇಯರ ರೋಡ, ಮುಂಬಯಿ.

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯುಗ್ಜಬೀಶನ್‌ಗಳಲ್ಲಿ ಸುಮಾರು 95 ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರಶಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ ತೂಕದ ಸೇರ 1ಕ್ಕೆ ರೂ 12-0-0, 5-0-0 3-0-0, 2—8—0, 1—4—0 1—0—0

ಅರಗಜ ಮತ್ತು ಪಿಲ್ಲಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0 **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0 **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0-4-0, ಇವಲ್ಲದೆ ಇನ್ನು **ಅನೇಕ ತರಹ ಸೆಂಟ್ಸುಗಳು**, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳ, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನಗಳು ಸಹ ಇರುತ್ತವೆ ಮತ್ತು ವರ್ಷಕ್ಕೆ ಒಡಾ ವರ್ಕಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್ ಉಪಾಧ್ಯಾಯ,

ಸುಗಂಧಕಾರಿ, ಮೈಸೂರು.

ಕರ್ಣಾಟಕ ಔಷಧಾಲಯ

ಇವರ ಸಿದ್ಧೌಷಧಗಳು.

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

ಧಾತುಪೌಷ್ಟಿಕ ವಜ್ರಾಂಗಪಾಕ

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು, ರಕ್ತದೂಷಿತರೋಗ, ಮಂದವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ, ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತು ಪೌಷ್ಟಿಕ, ರಕ್ತವೋದಕ ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ, ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ ೪೦ ತೊಲೆಗೆ ಕ್ರಯ ರೂ ೩—೮—೦, ಒಮ್ಮೆಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦. ಟಪ್ಪಾಲು ಖರ್ಚು ಬೇರೆ

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗ ನಾಶಕ ಗುಳಿಗ ೪೦ಕ್ಕೆ ಉತ್ತಮ ಗುಣ ಕ್ರಯ ರೂ ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೨೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೆಲೆ ೬ ಬಾಟ್ಲ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರಿಲಾ ಬಾಟ್ಲಿ ೧ಕ್ಕೆ ಕ್ರಯ ರೂ ೧ ಟಪ್ಪಾಲು ಖರ್ಚು ಬೇರೆ

ಇನ್ನು ಅನೇಕ ಔಷಧಗಳ ನಮ್ಮ ಕಂಪೆನಿಯಲ್ಲಿ ಶಿಗುತ್ತವೆ ಅನುಪಾನ ಪತ್ರಿಕೆ ಒಂಗಿರು ಸಂಗಡ ಕಳುಹಿಸುವೆವು

ನಮ್ಮ ವಿಳಾಸ — ವಿ. ಎಸ್ ಪೋದಕ,
ಕರ್ಣಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ.

ಯುನಿವರ್ಸಲ್ ಎಸ್ಯುರನ್ಸ್ ಕೊ, ಲಿಮಿಟೆಡ್.

ಹೆಡ್ ಆಪೀಸು —191, ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಶ್ಯೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬುದನ್ನು ನೀವು ಯೋಚಿಸಿ ನಿರಿಯಾ?

ಇನ್ಶ್ಯೂರನ್ಸ್ ಪ್ರಜ್ಞಾಸಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ದನ ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ

		ಮೊದಲನೇ ವರ್ಷ.	2ನೇ ವರ್ಷ.
ಹೊಸಕೇ (ಜೀವ)	ರೂ	13,329—0—0	22,549—0—0
(ವಿವಾಹ)		25,670—0—0	38,933—0—0
ಜುಮ್ಲಾ ಕೇಸುಗಳು		38,999—0—0	61,482—0—0
ವಸೂಲಾದ ಪ್ರೀಮಿಯಮ್	,,	1,36,685—0—0	5,34,683—0—0
ಬಾದ್ಯತೆ ಹಕ್ಕುಗಳು	,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	,,	10,000—0—0	50,000—0—0
(ಜನರಲ್) ರಕ್ಷಿತ ಧನ	,	37,220—0—0	23,778—3—2
ಲಾಭವು ಶೇಕಡಾ ೯ರ ತೆ ಹಂಚಿ ಕೊಡಲ್ಪಟ್ಟಿದೆ			ಶೇಕಡಾ ೯ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1 ಅದು 1912ನೇ ಲೈಫ್ ಎಸ್ಯೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿಯನ್ನಿಟ್ಟಿರುವುದು 2 ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು. 3 ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4. ರೂ 3,00,000ಗಿಂತಲೂ ಹೆಚ್ಚಿಗೆ ಭಾಧ್ಯತೆಗಳನ್ನು ಕೊಟ್ಟಿದೆ 5 ಫಂಡು 2,00,000 ರೂಪಾಯಿಗೆ ಹೆಚ್ಚಿದೆ 6 ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ 7 ಮನೇಜ್‌ಮೆಂಟಿನ ಖರ್ಚು ಬಹಳ ಕಡಿಮೆಯಾಗಿದೆ 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ 9. ಡೈರೆಕ್ಟರು — ಯಥಾರ್ಥ ಮತ್ತು ಸುಗುಣವಂತರಾದ ಯುನಿವರ್ಸಿಟಿ ಗೃಹಸ್ಥರು 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

"ಬಂಗಾಳಿ" — 14ನೇ ಜನವರಿ 1914 — ಕಂಪೆನಿಯ 2ನೇ ವಾರ್ಷಿಕ ವರದಿಯು ನಮ್ಮ ಕೂಡ ಇದೆ. ನಾವು ಅದನ್ನು ಓದಿನೋಡಿ ಅದು 61,482 ರೂಪಾಯಿಗಳ ಕೇಸುಗಳನ್ನು ಹೊಂದಿಯದೆ ಎಂಬುದನ್ನು ತಿಳಕೊಂಡೆವು. ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ ಮಾಡಿತು. ಸುಮಾರು 3 ಲಕ್ಷ [illegible] ಧನವಿದೆ. [illegible]

ದಿ ಕೆನರಾ ಸ್ಯಾಕಲ್ ಮಾರ್ಟ, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸದಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರಖಾನೆಯಲ್ಲಿ ಪ್ರಸಿದ್ಧವಾದ ಎಸ್ ಎ ಸಿಂಗರ್ ಹಂಬರ್, ರಜವಿ ಸವರ್ನ ಅಲ್ಲದೆ ಸುಲಭ ದರದ ಬೆನ್ಸನ್, ರೋಯಲ್, ಮಿನರ್ವಾ, ಸ್ಟಾರ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ ಎಸ್ ಎ ಬ್ರೆಂಪ್ಟನ್, ಬ್ರೂಕ್ಸ್, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೂಪ್ ಪಾಮರ್, ಕೇಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರ್ಕಾಟಕ್ಕೆ ಸಿದ್ಧವಿರುತ್ತವೆ ಸೀದಾ ವಿಲಾಯತಿಯಿಂದ ತರಿಸುವವರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

ಚೀನಾದೇಶದ ಈ ಮಹನೀಯಳ ಅಗಾಧವಾದ ದೇಶಭಕ್ತಿಯನ್ನು ಭಾರತೀಯ ಸ್ತ್ರೀಸಮಾಜವೆಲ್ಲವು ತಿಳಿಯುವಂತೆ ಲೋಕಮಾನ್ಯರಾದ ಲಾಲಾ ಲಜಪತರೈಗಳವರು ಅಂಗ್ಲಾಳದಲ್ಲಿ ಇವಳೊಡನೆ ನಡೆಸಿದ ಸಂಭಾಷಣೆಯ ವೃತ್ತಾಂತವನ್ನು ಬರೆದು ಪ್ರಕಟಿಸಿರುತ್ತಾರೆ. ದೇಶೀಯ ಕ್ರೈಸ್ತ ಭಗಿನಿಯರೂ ಅಂಗ್ಲ ಶಿಕ್ಷಣ ಪಡಿಯುತ್ತಿರುವ ಭಾರತೀಯ ಇತರ ಯುವತಿಗಳೂ ಉಡುಪು ತೊಡುಪುಗಳಲ್ಲಿಯೂ ನಡೆನುಡಿಗಳಲ್ಲಿಯೂ ಪಾಶ್ಚಾತ್ಯರನ್ನು ಅನುಕರಿಸುತ್ತಿರುವವರೂ ಈ ವೃತ್ತಾಂತದಿಂದ ವ್ಯಕ್ತವಾಗುವ ಬುದ್ಧಿವಾದವು ಏನೆಂಬುದನ್ನು ತಿಳಕೊಳ್ಳುವದು ಅಗತ್ಯ.

ಲಂಡನ ನಗರದ ಕೋಲೇಜುಗಳಲ್ಲೊಂದರಲ್ಲಿ ಈ ಚೀನಾದೇಶದ ಸ್ತ್ರೀಯು ಶಿಕ್ಷಣಹೊಂದುತ್ತಿರುವಳು. [illegible]

[illegible] ಬಗ್ಗೆ ಬಂದಿರುವೆನೆಂಬ ಉತ್ತರವ [illegible] ಲಜಪತರೈಗಳವರು ಪುನಹ ಕೇಳಿದರು. "ದೇಶ ಸೇವೆಯ ಬಗ್ಗೆ ಶಿಕ್ಷಣವನ್ನು ಪಡಿಯುತ್ತಿರುವೆನು. ಪ್ರಕೃತ ನನ್ನ ದೇಶವು ವಿಶೇಷ ಅನುಸಂಕಷ್ಟದಲ್ಲಿರುವುದು. ಅದನ್ನು ಈ ಸ್ಥಿತಿಯಿಂದ ಉದ್ಧರಿಸಲಿಕ್ಕೂ ದೇಶದ ಸ್ವತಂತ್ರವನ್ನು ಕಾಪಾಡಿಕೊಳ್ಳಲಿಕ್ಕೂ ಚೀನಾ ದೇಶದ ಸರ್ವ ಭಗಿನಿ ಭ್ರಾತೃಗಳ ಉತ್ಸಾಹಭರಿತ ಸೇವೆಯು ಅಗತ್ಯವಾಗಿರುವುದು. ದೇಶೋದ್ಧರಣೆಯ ಘನವಾದ ಉದಾತ್ತ ಆದರ್ಶಗಳುಳ್ಳವರು ನಮ್ಮಲ್ಲಿ ಕಡಮೆ. ನನ್ನ ಭಗಿನಿಯರ ಸೇವೆ ಬಗ್ಯೆ ನನ್ನ ಜೀವಿತವನ್ನರ್ಪಿಸಲು ಉದ್ದೇಶಿಸಿರುವೆನು"—ಎಂದು ಆ ದೇಶವತ್ಸಲೆಯು ಲಜಪತರೈಗಳವರಿಗೆ ತಿಳಿಸಿದಳು.

ತಾನು ಕ್ರೈಸ್ತಮತವನ್ನವಲಂಬಿಸಿದ ಕಾರಣಗಳನ್ನು ಈಕೆಯು ಲಜಪತರೈಗಳವರಿಗೆ ಹೇಳಿದ ವೃತ್ತಾಂತದಲ್ಲಿ ಕೆಲವು ವಿಶೇಷ ವಿಚಾರಗಳಿರುವವು. ಹೆತ್ತ ತಂದೆತಾಯಿಗಳು ಬುದ್ಧ ಮತಾನುಯಾಯಿಗಳಾಗಿದ್ದರೂ ಈಕೆಯು ಕ್ರೈಸ್ತಮತವನ್ನವಲಂಬಿಸಿರುವಳು. ಚೀನಾ ದೇಶದ ಸ್ತ್ರೀಯರಲ್ಲಿ ಹಲವರು ಕ್ರೈಸ್ತಮತಕ್ಕೆ ಕೂಡಿರುವರು. ಹೀಗೆ ಕ್ರೈಸ್ತಮತವನ್ನವಲಂಬಿಸಿದವರಲ್ಲಿ ದೇಶಭಕ್ತಿಯು ಪೂರ್ಣವಾಗಿ ಅಳಿದುಹೋಗುವುದೆಂತ ತಾನು ಅಭಿಪ್ರಾಯಪಡುತ್ತೇನೆ. ಆದ್ದರಿಂದ ಹೀಗೆ ದಾರಿ ತಪ್ಪಿಹೋಗುವ ಸಹೋದರಿಯರನೇಕರನ್ನು ಸೆಟ್ಟನೆಯ ಮಾರ್ಗಕ್ಕೆ ತಂದು ಇವರಲ್ಲಿ ದೇಶಾಭಿಮಾನವೂ ಜನಾಂಗದ ಐಕ್ಯಭಾವನೆಯೂ ನೆಲಿಸುವಂತೆ ಪ್ರೇರೇಪಿಸುವವರು ಬೇಕಾಗಿರುವರು. ಇಂಥವರ ಬಗ್ಯೆ ತಾನೂ ಕ್ರೈಸ್ತಮತವನ್ನು ಸೇರಿರುವೆನೆಂದು ಈ ಸ್ತ್ರೀಯು ಹೇಳಿದ ಉತ್ತರವು ಸರ್ವರಿಂದಲೂ ಪರ್ಯಾಲೋಚಿಸತಕ್ಕದ್ದಾಗಿದೆ. ಕ್ರೈಸ್ತಮತಕ್ಕೆ ಸೇರಲು ತನಗೆ ಕಂಡ ಇನ್ನೆರಡು ಕಾರಣಗಳನ್ನು ಈ ದೇಶವತ್ಸಲೆಯು ವ್ಯಕ್ತಗೊಳಿಸಿರುವಳು. ಇನ್ನು ಕೆಲವು ಸಮಯದ ವರೆಗೆ ಕ್ರೈಸ್ತಮತದ ಪ್ರಸರಣೆಯು ಚೀನಾದೇಶದಲ್ಲಿ ಹಬ್ಬುವ ಸಂಭವವು ಇರುವುದರಿಂದ ಕ್ರೈಸ್ತರಾದವರು ದೇಶಾಭಿಮಾನ ಹೀನರಾಗಿ ಹೋಗದಂತೆ ಪ್ರಯತ್ನ ಪಡುವ ಹಾಗೆ ತಾನು ಕ್ರೈಸ್ತ ಮತವನ್ನವಲಂಬಿಸಲು ಕಾರಣವಾಯಿತು. ಕ್ರೈಸ್ತ ಮಿಶ್ಯನ್ ಶಾಲೆಯಲ್ಲಿ ಕಲಿಯುತ್ತಿದ್ದಾಗ ಕ್ರೈಸ್ತ ಮತದ ಸರಿಯಾದ ಮಾಹಿತಿಯು ಪ್ರಾಪ್ತವಾದ್ದರಿಂದಲೂ ಬೌದ್ಧ ಮತ್ತು ಕನ್ಪುಸಿಯುಸ್ ಮತಾನುಯಾಯಿಗಳು ಬಹಳ ಕ್ಷೀಣವಾದ ಸ್ಥಿತಿಯಲ್ಲಿದ್ದು ಇಂಥವರಿಂದ ತಕ್ಕದಾದ ಮತಶಿಕ್ಷಣವು ದೊರಿಯದೆಹೋದ್ದರಿಂದಲೂ ಈಕೆಯು ಮತಾಂತರಗೊಳ್ಳಲು ಕಾರಣವಾಯಿತೆಂದು ತೋರಿ ಬರುತ್ತದೆ. ಸದ್ವರ್ತನೆ ಸದಾಚಾರಗಳು ಸ್ತ್ರೀಪುರುಷರಲ್ಲಿ ನಿರಂತರವಾಗಿ ನೆಲಸಿರಬೇಕಾದರೆ ದೇವರಲ್ಲಿ ಭಕ್ತಿ, ಶ್ರದ್ಧೆ, ವಿಶ್ವಾಸಗಳು ಅಗತ್ಯ. ಇವು ಕ್ರೈಸ್ತ ಮತದ ಮೂಲಕ ಈಕೆಗೆ ಪ್ರಾಪ್ತವಾದ್ದರಿಂದ ಈ ಯುವತಿಯು ಅನ್ಯಮತವನ್ನು ಸೇರಿಬಿಟ್ಟಳೆಂಬುದು ಸಹ ಇವಳು ಹೇಳಿದ ವೃತ್ತಾಂತದಿಂದ ಸ್ಪಷ್ಟವಾಗುತ್ತದೆ. ಸ್ವಧರ್ಮವು ಏನೆಂತ ನೋಡಿಕೊಳ್ಳದೆ ಮಿಶನರಿ ಶಾಲೆಗಳಿಗೆ ತಮ್ಮ ಹುಡುಗ ಹುಡುಗಿಯರನ್ನು ಕಳುಹಿಸಿಕೊಡುವ ಹೆತ್ತವರು ಚೀನಾ ದೇಶದ ಈ ಬಾಲೆಯು ಪರಮತವನ್ನನುಸರಿಸಿದ ಕಾರಣಗಳನ್ನು ಚೆನ್ನಾಗಿ ತಿಳಿದುಕೊಳ್ಳಲಿ. ಅಂಗ್ಲಾಳದಲ್ಲಿರುವ ತನಕ ಅಂಗ್ಲ ಸ್ತ್ರೀಯರಂತೆಯೇ ಉಡುಪುಗಳನ್ನು ಧರಿಸಿಕೊಳ್ಳುವೆನು. ಸ್ವದೇಶವನ್ನು ಸೇರಿದ ನಂತರ ಈ ಉಡುಪುಗಳನ್ನು ಪೂರ್ಣವಾಗಿ ತ್ಯಜಿಸಿ ಬಿಟ್ಟು ಸ್ವದೇಶದ ಇತರ ಸ್ತ್ರೀಯರಂತೆಯೇ ಉಟ್ಟುಕೊಳ್ಳುವೆನು. ಏಕಂದರೆ ಉಡುಪು ತೊಡುಪುಗಳಲ್ಲಿ ವಿದೇಶಸ್ಥರ ನಕಲಿ ಮಾಡುವುದು ಜನಾಂಗದ ಸ್ವತಂತ್ರ ಭಾವನೆಗೂ, ಐಕ್ಯಕ್ಕೂ, ಮೇಲ್ಮೆಗೂ ಹಾನಿಕರವಾಗಿರುತ್ತದೆ. ಚೀನಾ ದೇಶದ ದೇಶವತ್ಸಲೆಯ ಈ ವಚನಗಳನ್ನು ಮುಖ್ಯವಾಗಿ ಈ ಪ್ರಾಂತ್ಯಗಳಲ್ಲಿ ಆಗಿಂದಾಗ್ಯ ಸ್ಮರಿಸಿಕೊಳ್ಳುವುದು ಅಗತ್ಯ.

ಸಂಸಾರ ಸಾಗರ.

"ಘೋರ ತರದ ಸಂಸಾರವು ದುಃಖದ ವಾರಿಧಿ ಇದರೊಳಗೇನುಂಟು" ಎಂಬುದಾಗಿ ಈ ಲೋಕದ ದುಃಖ ಪರಂಪರೆಯನ್ನು ಕುರಿತು ಕವಿಯು ಹೇಳಿದ ಮಾತುಗಳು ಜೀವನ ಸಮರದಲ್ಲಿ ಪ್ರವೃತ್ತರಾದ ಜನರ ಕಿವಿಯಲ್ಲಿ ಆಗ್ಗಾಗ್ಯೆ ಧ್ವನಿಸುತ್ತಿರುವವು. ಕರುಣಾನಿಧಿಯೂ, ನಿತ್ಯಾನಂದನೂ, ನಿಷ್ಕಳಂಕನೂ ಆದ ಪರಮೇಶ್ವರನ ಈ ಜಗತ್ತಿನಲ್ಲಿ ಆತನ ಲಕ್ಷಣಗಳಿಗೆ ವಿರೋಧವಾದ ಪಾಪ ದುಃಖಗಳು ಯಾಕೆ ಇರಬೇಕು ಎಂಬ ಪ್ರಶ್ನೆಯು ವಿಚಾರ ಶೀಲರ ಮನಸ್ಸಿಗೆ ಬಾರದಿರದು. ಈ ಪ್ರಶ್ನೆಗೆ ಉತ್ತರವಾಗಿ ಕ್ರಿಸ್ತ ಮುಂತಾದ ಕೆಲವು ಧರ್ಮಶಾಸ್ತ್ರಕಾರರು ದೇವರಿಗೆ ಪ್ರತಿಕೂಲವಾಗಿ ವರ್ತಿಸುವ ಸೈತಾನನೆಂಬ ಒಂದು ಶಕ್ತಿಯು ಇದೆ ಎಂತಲೂ ಅದರ ಪ್ರಭಾವದಿಂದ ಇಲ್ಲಿ ಪಾಪ ದುಃಖಗಳು ಪಸರಿವೆ ಎಂತಲೂ ನಿರ್ಣಯಿಸಿರುವರು. [illegible] ದಾನಂದ ಪರಿವ್ಯಾಪ್ತವಾದ ಜಗತ್ತಿನಲ್ಲಿ ಅನ್ಯ ಪುರುಷನಿಗೆ ಎಡೆ ಇಲ್ಲವೆಂದು ನಾವು ಸುಲಭದಲ್ಲಿ ಗ್ರಹಿಸಬಹುದು.

ಸಂಸಾರದ ಸಂಕಷ್ಟಗಳ ಕಾರಣವು ನಮ್ಮಿಂದ [illegible] ದರೂ ಅವುಗಳ ಸ್ವರೂಪವನ್ನು ನಾವು [illegible] ವ್ಯಸನಗಳು ಪರಿಹಾರವಾಗುವವು. [illegible]

ವಿಶ್ವದ ಸಚರಾಚರ ವಸ್ತುಗಳು ನಿಯಮ ಬದ್ಧವಾಗಿರುವವು. ಮನುಷ್ಯನು ಪರಮೇಶ್ವರನ ನಿಯಮಗಳಿಗೆ ಸರಿಯಾಗಿ ಎಷ್ಟರ ಮಟ್ಟಿಗೆ ನಡಿಯುವನೋ ಅಷ್ಟರ ಮಟ್ಟಿಗೆ ಪಾಪರಹಿತನಾಗುವನು. ಸದಾ ಕಾಲವೂ ಸಕಲ ವಿಷಯಗಳಲ್ಲಿಯೂ ಆ ನಿಯಮಗಳನ್ನುಲ್ಲಂಘಿಸದೆ ಧರ್ಮಮಾರ್ಗದಲ್ಲೇ ವರ್ತಿಸುವವನು ಪರಾತ್ಪರನಂತೆ ದೋಷರಹಿತನೂ, ಆನಂದಭರಿತನೂ ಆಗುವನು. ಆದರೆ ಅಂತಹ ಪದವಿಯು ಒಮ್ಮೆಗೆ ದೊರೆಯದು. ಮಗುವು ಬೀಳುತ್ತಾ ಏಳುತ್ತಾ ನಡೆಯ ಕಲಿಯುವಂತೆ ಮನುಷ್ಯನು ಪತಿತನಾಗಿಯೇ ಪಾವನನಾಗಬೇಕು. ಪಾಪ ಕೃತ್ಯಗಳ ಅನುಭವದಿಂದ ಪುಣ್ಯ ಮಾರ್ಗವನ್ನು ಕಂಡುಕೊಳ್ಳುವನು. ದುಃಖವನ್ನು ಅನುಭವಿಸಿ ಸುಖದ ಪತ್ತೆ ತಿಳಿಯುವನು. ಆದ್ದರಿಂದ ಪಾಪ ದುಃಖಗಳು ನಿತ್ಯಾನಂದ ಮೋಕ್ಷಗಳಿಗೆ ಸೋಪಾನಗಳಾಗಿವೆ. ಶಿಖರವು ಸೋಪಾನವಲ್ಲ; ಆದರೆ ಸೋಪಾನಗಳಿಂದಲ್ಲದೆ ಶಿಖರವನ್ನೇರಲಾರೆವು. ಹ್ಯಾಗೆ ಮಗುವು ಜಾರುವದು ಬೀಳುವದು ನಿತ್ಯವಾಗಿರದೆ ಅದಕ್ಕೆ ನಡಕೆ ಕಲಿಸಲಿಕ್ಕೆ ಮೂಲಕವಾಗಿರುವದೋ ಹಾಗೆಯೇ ಪಾಪ ದುಃಖಗಳು ಲೋಕದಲ್ಲಿ ಮನುಷ್ಯನಿಗೆ ಧರ್ಮಮಾರ್ಗವನ್ನು ಬೋಧಿಸುವ ಕೈಕಂಭಗಳಲ್ಲದೆ ನಿತ್ಯವಾದ ತತ್ವಗಳಲ್ಲ.

ಆದ್ದರಿಂದ ಈ ಜಗತ್ತು ಯಾವ ಅನಂತದಿಂದ ಉದ್ಭವಿಸಿತೋ ಅದೇ ಅನಂತದ ಕಡೆಗೆ ಪ್ರವಹಿಸುವದು. ಅದರಲ್ಲಿರುವ ಪಾಪ ದುಃಖಗಳು ಕ್ಷಣಕ್ಷಣೇ ತೊಳದು ಹೋಗಿ ಸಂಸಾರ ವಾಹಿನಿಯು ನಿರ್ಮಲವಾಗುತ್ತಿರುವದು. ಅಗಸನಲ್ಲಿ ಕೊಳಕು ವಸ್ತ್ರಗಳು ಬರುತ್ತಿದ್ದಷ್ಟಕ್ಕೆ ಬಟ್ಟೆಗಳು ಮಡಿಯಾಗಿ ಹೋಗುತ್ತಾ ಇವೆ. ಹಾಗೆ ಈ ಪ್ರಪಂಚದ ವ್ಯಾಪಾರವು ನಡೆಯುವದು.

ಇದರಿಂದ ಸರ್ವರೂ ಕಾಲಕ್ರಮದಲ್ಲಿ ಪರಿಪೂರ್ಣತೆಯನ್ನು ಹೊಂದತಕ್ಕವರು ಎಂದು ವ್ಯಕ್ತವಾಗುವದು. ಆ ಕಾರಣ ನಾವು ಲೋಕದಲ್ಲಿ ಅಧರ್ಮ ಅನ್ಯಾಯಗಳನ್ನೂ ದುಃಖ ಸಂಕಟಗಳನ್ನೂ ಕಂಡು ಪ್ರಪಂಚವು ಪಾಪಮಯ ಅಥವಾ ದುಃಖಸಾಗರವೆಂದು ಸೃಷ್ಟಿ ವಿಶ್ವ ಪರಾಮೃಷ್ಟಿಯೂ ವಿರಕ್ತರೂ ಆಗಬಾರದು. ಅಲ್ಲದಿದ್ದರೆ ನಾವು [illegible] ವಿಷಯಗಳನ್ನು ನಿತ್ಯವೆಂದು ಭಾವಿಸಿದಂತಾಗುವದು. ಆದರೆ ಅಂಥಾ ಪಾಪಿಷ್ಟರೊಡನೆ ದಯಾಭಾವದಿಂದ ವರ್ತಿಸಬೇಕು. ಯಾಕೆಂದರೆ ಓಂದೆ ವಿವರಿಸಿದಂತೆ ಎಲ್ಲರೂ ಮೋಕ್ಷಶಿಖರವನ್ನು ಏರಲು ಸಂಸಾರವೆಂಬ ಏಣಿಯನ್ನು ಏರಿರುವರು. ಅದರಲ್ಲಿ ಮೇಲು ಮೆಟ್ಟಿನವನು ಕೀಳು ಮೆಟ್ಟಿನವನನ್ನು ಕಂಡು ಹೀಯಾಳಿಸಲೂ ದುಃಖಿಸಲೂ ಕಾರಣವಿಲ್ಲ. ಅದೇ ಮೆಟ್ಟಿನಲ್ಲಿ ತಾನೂ ಇದ್ದನಲ್ಲ.

ಈ ಮೆಟ್ಟಿಲುಗಳನ್ನು ಏರಲಿಕ್ಕೆ ಒಂದೇ ಜನ್ಮ ಸಾಲದು. ಅದಕ್ಕಾಗಿ ಪುನರ್ಜನ್ಮವಿದೆಯೆಂದು ಸಿದ್ಧವಾಗುವದು. ಪುನರ್ಜನ್ಮದ ಕುರಿತು ಬ್ರಹ್ಮವಿದ್ಯಾನ ಸಂಘದವರು ಇದರ ಹೊರತು ಬೇರೆ ಪ್ರಮಾಣಗಳನ್ನು ಕೊಟ್ಟಿರುವರು.

ಮಗುವು ಎಡವಿದರೂ ತಪವಿದರೂ ಅದನ್ನು ಮನಸ್ಸಿಗೆ ತಾರದೆ ತನ್ನ ಶರೀರವನ್ನು ಸಮ ತೂಕವಿಟ್ಟು ನಿಲ್ಲುವದನ್ನೂ ನಡೆಯುವದನ್ನೂ ಹ್ಯಾಗೆ ಅಭ್ಯಾಸಿಸುವದೋ ಹಾಗೆಯೇ ನಿತ್ಯ ಧರ್ಮವೊಂದರಲ್ಲಿಯೇ ಸ್ಥಿರದೃಷ್ಟಿಯಿಟ್ಟು ಅದಿ ಇಡಬೇಕಲ್ಲದೆ ನಾವು ಮಾಡಿರಬಹುದಾದ ತಪ್ಪುಗಳಿಂದ ಎದೆಗುಂದಿ ಉತ್ಸಾಹಗೆಟ್ಟು ಪಾಪದಲ್ಲಿ ಮಗ್ನರಾಗಬಾರದು.

ಹಾಗಾದರೆ ನಮ್ಮ ಧರ್ಮ ಯಾವದು? ಮಾನವ ಕುಟುಂಬವು ದೈವ ಸಂಕಲ್ಪದಿಂದ ನಿತ್ಯ ಸುಖದ ಕಡೆಗೆ ನಡಿಯುವದೆಂದು ಹೇಳಿತಷ್ಟೆ. ನಾವು ಅಹಂಭಾವವನ್ನು ಮರೆತು ಮನುಷ್ಯ ವರ್ಗದ ನಿತ್ಯ ಸುಖ (ನಶ್ವರ "ಸುಖ"ವಲ್ಲ)ಕ್ಕೆ ಅನುಕೂಲವಾದ ಪಥವನ್ನನುಸರಿಸುವದೇ ನಮ್ಮ ಧರ್ಮ. ಆಗ ನಮ್ಮ ಚಿತ್ತವು ಈಶ್ವರ ಚಿತ್ತಕ್ಕೆ ಅನುಕೂಲವಾಗಿ ವರ್ತಿಸುವದು. ಆದ್ದರಿಂದ ನಮ್ಮ ಕಾರ್ಯವು ಈಶ್ವರನ ಕಾರ್ಯವಾಗುವದು. ಈಶ್ವರ ಸಂಕಲ್ಪ ಬಲದಿಂದ ನೆರವೇರುವದು. ನಮ್ಮ ಕೃತ್ಯಗಳು ಎಂದು ಈಶ್ವರೇಚ್ಛೆಯನ್ನನುಸರಿಸುವವೋ ಆಗ್ಯೆ ಪಾಪವು ನಮ್ಮನ್ನು ತಟ್ಟದು. ಈಶ್ವರ ಸೇವೆಯಲ್ಲಿ ನಮಗೆ ಬರುವ ಕಷ್ಟ ಸುಖವಾಗುವದು. ಯಾವದೊಂದು ವಿಷಯ ಸುಖವನ್ನು ಸಾಧಿಸುವ ಮನುಷ್ಯನು ತನ್ನ ಅಭೀಷ್ಟಸಿದ್ಧಿಗಾಗಿ ಅನೇಕ ಸಂಕಷ್ಟಗಳನ್ನು ಮನದಲ್ಲಿ ಕೊರಗದೆ ತಾಳುವನು. ತನ್ನ ಲಕ್ಷ್ಯದಲ್ಲಿದ್ದ ವಿಷಯ ಪ್ರಭಾವದಿಂದ ಅವು ಅವನಿಗೆ ಸುಖವಾಗಿಯೇ ಪರಿಣಮಿಸುವವು. ಸದ್ಧರ್ಮನಿರತನಾದವನಿಗೆ ಆತನ ಶ್ರದ್ಧಾ ವಿಶೇಷದಿಂದ ಸುಧನ್ವನಿಗೆ ತಪ್ತತೈಲದಂತೆ ದುಃಖವೇ ಸುಖವಾಗುವದು. ಯಾಕೆಂದರೆ ನಿತ್ಯ ಸುಖದ ಮರ್ಮವು ಸಾಮಾನ್ಯರು ಸಂಕಷ್ಟವೆಂದೆಣಿಸುವದರಿಂದ ತಪ್ಪಿಸಿಕೊಳ್ಳುವದಲ್ಲ; ಅದನ್ನು ಸುಖವಾಗಿ ಪರಿವರ್ತಿಸುವದರಲ್ಲಿದೆ. ಆದ್ದರಿಂದ ಧರ್ಮಶರಣನು [illegible] ಪಾಪ ದುಃಖಗಳಿಂದ ತಪ್ಪುವ. [illegible] ದಾಟಿದವನು.

ಗವರ್ನರ ದೊರೆಗಳವರ ಸಂದರ್ಶನೆಯ ಕಾರ್ಯಕ್ರಮಗಳ ವಿವರ.

ಮದ್ರಾಸ್ ಗವರ್ನರ ಪ್ರಭುಗಳವರು ಇದೇ ಬರುವ ನವಂಬರ ೩ನೇ ತಾರೀಕು ಮಧ್ಯಾಹ್ನ ನಾಲ್ಕು ಗಂಟೆಗೆ ಮಂಗಳೂರು ರೈಲ್ವೆ ಸ್ಟೇಶನಿಗೆ ಬಂದು ತಲಪುವರು. ಮಂಗಳೂರು ಮುನ್ಸಿಪಾಲಿಟಿಯ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನ ಬಹುಮಾನ ಪತ್ರಗಳು ಅರ್ಪಿಸಲಾಗುವವು. ಪ್ರಭುಗಳವರು ಉತ್ತರವನ್ನು ದಯಪಾಲಿಸುವರು. ಕಡೆಗೆ ಸೆಂಟ್‌ಜೋನ್ ಎಂಬ್ಯುಲೆನ್ಸ್ ಕೋರ್‌ನ್ನು ಸಂದರ್ಶನೆ ಮಾಡುವರು.

ನವಂಬರ ತಾ. 4:—ಪ್ರಭುಗಳವರು ಪ್ರಾತಃಕಾಲ ೭ ಘಂಟೆ ೩೫ ನಿಮಿಷಕ್ಕೆ ಮೋಟರ್ ಬಂಡಿಯಲ್ಲಿ ಕಂಕನಾಡಿ ಫಾದರ್‌ಮುಲ್ಲರರ ಕುಷ್ಟ ರೋಗಿಗಳ ಭಿತ್ತಿಯನ್ನೂ ಆಸ್ಪತ್ರೆಯನ್ನೂ ಸಂದರ್ಶಿಸಿ, ೮-೨೦ ಗಂಟೆಗೆ ಬಪ್ಪು ಹಂಚು ಕಾರ್ಖಾನೆಯನ್ನು ಸಂದರ್ಶಿಸುವರು. ಮಧ್ಯಾಹ್ನ ೧೨ ಘಂಟೆಗೆ ಕಲೆಕ್ಟರರ ಬಂಗ್ಲೆಯಲ್ಲಿ ರೆವಿನ್ಯೂ ಆಫೀಸರರ ಕನ್ಫರೆನ್ಸ್ ಕೂಡುವುದು. ಸಾಯಂಕಾಲ ೫-೩೦ ಗಂಟೆಗೆ ಮೆ॥ ಪ್ಯೈಸರಿಂದ ಬಡವರಿಗೆ ಅನ್ನದಾನ ಮಾಡಲಾಗುವುದು. ಪ್ರಭುಗಳು ಇದನ್ನು ನೋಡಿಕೊಂಡು, ಸಾಯಂಕಾಲ ೬ ಗಂಟೆಗೆ ಗವರ್ನಮೆಂಟ್ ಕಾಲೇಜಿಯ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚಿ, ೬-೩೦ ಗಂಟೆಗೆ ಕೊಸ್ಮೊಪೊಲಿಟನ್ ಕ್ಲಬ್ಬನ್ನು ಸಂದರ್ಶಿಸಿ ಕಲೆಕ್ಟರರ ಬಂಗ್ಲೆಗೆ ಹಿಂದೆರಳುವರು.

ನವಂಬರ ತಾ. 5:—ಬೆಳಿಗ್ಗೆ ೭-೩೦ ಗಂಟೆಗೆ ಪ್ರಭುಗಳು ಉರ್ವದಲ್ಲಿ ಪಟ್ಟಣ ವಿಸ್ತಾರ ಮಾಡುವ ಕೆಲಸ ಪ್ರಾರಂಭದ ಪ್ರತಿಷ್ಟೆ ಗೈಯ್ಯುವರು. ೮-೧೫ ಗಂಟೆಗೆ ಸೆಂಟ್ ಎಲೋಸಿಯಸ್ ಕಾಲೇಜನ್ನು ಸಂದರ್ಶಿಸುವರು. ೧೧-೩೦ ಗಂಟೆಗೆ ದಕ್ಷಿಣಕನ್ನಡ ಜಿಲ್ಲೆಯ ಪಂಚಮ ಪ್ರತಿನಿಧಿಗಳ ಭೇಟಿಯನ್ನೂ, ೧೨. ೩೦ ಗಂಟೆಗೆ ರೋಮನ್ ಕೆಥೋಲಿಕ ಸಮುದಾಯದ ಪ್ರತಿನಿಧಿಗಳ ಬೇಟಿಯನ್ನೂ ತಕ್ಕೊಳ್ಳುವರು. ಅದೇ ಸಾಯಂಕಾಲ ೫. ೩೦ಕ್ಕೆ ಕಲೆಕ್ಟರರ ಬಂಗ್ಲೆಯಲ್ಲಿ "ಗಾರ್ಡನ್‌ಪಾರ್ಟಿ" ಆಥಿತ್ಯ ಉಪಚಾರವು ನಡೆಯುವುದು.

ನವಂಬರ ತಾ. 6:—ಬೆಳಿಗ್ಗೆ ೭. ೩೦ ಗಂಟೆಗೆ ವೆನ್‌ಲಕ್ ಆಸ್ಪತ್ರೆಯನ್ನು ಸಂದರ್ಶಿಸಿ ಅಲ್ಲಿಂದ ಬಂದರ್ ಮಾರ್ಗವಾಗಿ ಪೇಟೆಯನ್ನು ತಿರುಗಾಡಿ ೮. ೩೦ ಘಂಟೆಗೆ ಬಾಸೆಲ್ ಮಿಶ್ಯನಿನ ಮೆಕಾನಿಕಲ್ ಕಾರ್ಖಾನೆಯನ್ನೂ ಛಾಪಖಾನೆಯನ್ನೂ ಸಂದರ್ಶಿಸುವರು. ಮಧ್ಯಾಹ್ನ ೧೨ ಗಂಟೆಗೆ ಕಲೆಕ್ಟರ ಬಂಗ್ಲೆಯಲ್ಲಿ ವಿದ್ಯಾಖಾತೆಯ ಆಫೀಸರರ ಕನ್ಫರೆನ್ಸ್ ಜರಗುವುದು. ೨. ೩೦ ಮತ್ತು ೪. ೩೦ ಘಂಟೆಯ ವರೆಗೆ ಭೇಟಿ ತಕ್ಕೊಳ್ಳುವರು. ಸಾಯಂಕಾಲ ಗಂಟೆ ೫. ೩೦—೬. ೩೦ರ ವರೇಗೆ ನೂತನ ವ್ಯವಸಾಯ ಕ್ರಮಗಳನ್ನು ನೋಡುವುದಕ್ಕೆ ಹೋಗುವರು.

ನವಂಬರ ತಾ. 7:—ಬೆಳಿಗ್ಯೆ ಗಂಟೆ ೭-೩೦ಕ್ಕೆ ಮಂಗಳೂರಿನಿಂದ ಹೊರಟು ಗುರುಪುರ ಮಾರ್ಗವಾಗಿ ಮೂಡಬಿದ್ರೆಗೆ ೮-೪೫ ಗಂಟೆಗೆ ತಲಪುವರು. ಸಾಯಂಕಾಲ ೫-೩೦ರಿಂದ ೭ ಗಂಟೆಯ ಮಧ್ಯೆ ಮೂಡಬಿದ್ರೆ ದೇವಸ್ಥಾನಕ್ಕೆ ಚಿತ್ತೈಸುವರು.

ನವಂಬರ ತಾ8:— ಮೂಡಬಿದ್ರಿಯಿಂದ ಬೆಳಿಗ್ಗೆ ಕಾರ್ಕಳಕ್ಕೆ ಹೋಗಿ ಮೂಡಬಿದ್ರೆಗೆ ಹಿಂತಿರುಗಿ ಅಲ್ಲಿಂದ ಸಾಯಂಕಾಲ ವೇಣೂರಿಗೆ ಹೋಗಿ ಅದೇ ದಿನ ಮೂಡಬಿದ್ರೆಗೆ ಹಿಂದೆ ಬರುವರು.

ನವಂಬರ ತಾ9 —ಮೋಟರ್ ಗಾಡಿಯಲ್ಲಿ ಮಲ್ಪೆಗೆ ಹೋಗಿ, ಉಡ್ಪಿಯ ನಿವಾಸಿಕರಿಂದ ಬಹುಮಾನ ಪತ್ರವನ್ನು ಸ್ವೀಕರಿಸಿ ಅಂದೇ ಮೂಡಬಿದ್ರೆಗೆ ಹಿಂತಿರುಗುವರು.

ನವಂಬರ ತಾ. 10:—ಮೂಡಬಿದ್ರೆಯಿಂದ ಬಂಟ್ವಾಳ ಮಾರ್ಗವಾಗಿ ಮಂಗಳೂರಿಗೆ ಹಿಂತಿರುಗಿ ಅಂದೇ ಬೆಳಿಗ್ಗೆ ೯-೩೦ಕ್ಕೆ ತಲಪಿ ೧೦ ಗಂಟೆಗೆ ಸ್ಪೆಶ್ಯಲ್ ಟ್ರೈನಿನಲ್ಲಿ ಮದ್ರಾಸಿಗೆ ತೆರಳುವರು.

ದೊಡ್ಡ ಹುಚ್ಚನು.

ಪ್ರಾಚೀನ ಕಾಲದಲ್ಲಿ ಪ್ರತಿ ಅರಮನೆಯಲ್ಲಿಯೂ ಅರಸನನ್ನು ವಿನೋದ ಪಡಿಸುವುದಕ್ಕೆ ಒಬ್ಬ ಹಾಸ್ಯ ಮಾಡುವ ಆರೆಮರುಳನು ಇರುತ್ತಿದ್ದನು. ಅದಾನೊಂದು ದಿನ ಅರಸನು ಊಟ ತೀರಿಸಿದ ನಂತರ ತನ್ನ ಹಾಸ್ಯಗಾರನನ್ನು [illegible] ಮಾಡಹೇಳಿದ್ದಲ್ಲಿ ಹಾಸ್ಯಗಾರನು [illegible]

ತದನಂತರ ಹುಚ್ಚುತನದಲ್ಲಿ ನನಗಿಂತಲೂ ದೊಡ್ಡವನಾಗಿ [illegible] ಇದನ್ನು ಕೊಡು" ಅಂದನು. ಕಾಲಕ್ರಮದಲ್ಲಿ ಅರಸನು ವ್ಯಾಧಿ ಪೀಡಿತನಾಗಿ ಆತನ ಅಂತ್ಯಕಾಲ ಸಮೀಪಿಸುವಾಗ ಹುಚ್ಚನು ಆತನ ಭೇಟಿಗೆ ಹೋದ್ದಲ್ಲಿ ಉಭಯತರೊಳಗೂ ಸಂಭಾಷಣೆ ನಡೆಯಿತು.

ಹುಚ್ಚ—ಸ್ವಾಮಿಾ, ತಾವು ಹೇಗಿದ್ದೀರಿ?

ಅರಸನು—ಏನೂ ಗುಣವಿಲ್ಲ, ಅಂತ್ಯಕಾಲ ಸಮೀಪಿಸಿಯದೆ.

ಹುಚ್ಚ—ಹಾಗಂದರೆ ಏನು ಸ್ವಾಮಿಾ?

ಅರಸನು—ನನ್ನ ಪ್ರಾಣ ಪರಲೋಕಕ್ಕೆ ಹೋಗುವುದು.

ಹುಚ್ಚ—ಹೋದರೆ ತಾವು ಎಂದು ವಾಪಾಸು ಬರುವಿರಿ? ಒಂದು ತಿಂಗಳಲ್ಲಿಯೋ—ಆರು ತಿಂಗಳಲ್ಲಿಯೋ—ಒಂದು ವರುಷದಲ್ಲಿಯೋ—ಯಾವಾಗ ವಾಪಾಸು ಬರುವಿರಿ?

ಅರಸನು—ಹೋದನಂತರ ಎಂದೂ ಪುನಃ ಬರುವ ಸಂಭವವಿಲ್ಲ.

ಹುಚ್ಚ—ಸ್ವಾಮಿಾ, ಇಲ್ಲಿ ತಾವು ಸುಖದಗೋಸ್ಕರ ಬಹಳ ತರದ ಏರ್ಪಾಡು ಮಾಡಿದ್ದೀರಿ, ನಗಾಡುವಗೋಸ್ಕರ ಹಾಸ್ಯಗಾರನನ್ನು ಸಹ ವದಗಿಸಿ ಕೊಂಡಿರಿ. ಅಲ್ಲಿಯ ಸುಖದ ಬಗ್ಗೆ ಏನು ಏರ್ಪಾಡು ಮಾಡಿದ್ದೀರಿ?

ಅರಸನು—ಏನೂ ಇಲ್ಲ. ಆಸ್ತಿ, ಹಣ, ನವರತ್ನಗಳಿಂದ ಖಚಿತವಾದ ಆಭರಣಗಳೂ, ಮಾನ, ಅಧಿಕಾರ, ಇವೆಲ್ಲವನ್ನೂ ಬಿಟ್ಟು ಹೋಗುತ್ತೇನೆ. ಇವೆಲ್ಲ ನನ್ನ ಸ್ವಇಚ್ಛೆಯಿಂದ ನಾನು ಬಿಟ್ಟು ಹೋಗುವುದಿಲ್ಲ. ನನಗೆ ವ್ಯಥೆ ಕಾಣುತ್ತದೆ. ಆದರೆ ಯಮನ ದೂತರು ನನ್ನನ್ನು ಎಳೆಯುವಾಗ ನಾನು ಹೋಗಲೇ ಬೇಕು.

ಹುಚ್ಚ—ಆಹಃ, "ಕೊಂಚಕಾಲದ ಬಗ್ಯೆ ಇಷ್ಟೆಲ್ಲ ಏರ್ಪಾಡು ಮಾಡಿ, ಶಾಶ್ವತ ಕಾಲದ ಬಗ್ಗೆ ಏನೂ ಏರ್ಪಾಡು ಮಾಡದೆ ಇದ್ದದ್ದನ್ನೂ ಸಹ ಬಿಟ್ಟು ಹೋಗುವವನು ಅತೀ ದೊಡ್ಡ ಹುಚ್ಚನು, ಇಕೊಳ್ಳಿ! ಈ ಕೋಲು ತಮಗೆ" ಎಂತ ಹೇಳಿ ಹಾಸ್ಯಗಾರನು ಅರಸನ ಭೇಟಿಯನ್ನು ತೀರಿಸಿ ಮನೆಗೆ ಹೋದನು.

ನಾನೊಬ್ಬ ಹುಚ್ಚ.

———:o:———

ಬಿದರಿನಿಂದ ಕಾಗದಕ್ಕಾಗಿ ಪಿಷ್ಟವನ್ನು ತಯಾರು ಮಾಡಲು ಸೌಕರ್ಯ.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ ಬಿದರಿನಿಂದ ಕಾಗದಕ್ಕಾಗಿ ಪಿಷ್ಟವನ್ನು ತಯಾರು ಮಾಡಲು ಇರುವ ಸೌಕರ್ಯಗಳು ಕೆಲವು ವರ್ಷಗಳ ಹಿಂದೆಯೇ ನಿರ್ಧರಿಸಲ್ಪಟ್ಟಿತ್ತು. ಆದರೆ "ವಂಶಪಿಷ್ಟ"ವನ್ನು ಮಾಡುವದಕ್ಕೆ ಇದ್ದ ತೊಡಕುಗಳನ್ನು ಈಚೆಗೆ ವಿಶೇಷ ಪ್ರಯತ್ನಗಳಿಂದ ಹೋಗಲಾಡಿಸಿ, ಈ ಪದಾರ್ಥವನ್ನು ಮಾರಾಟಕ್ಕೆ ಅನುಕೂಲವಾಗುವಷ್ಟು ಫಾಯಿದೆಯಿಂದ ಮಾಡಬಹುದಾಗಿ ನಿರ್ಧರಿಸಲ್ಪಟ್ಟಿರುವುದು.

ನಮ್ಮ ಮೈಸೂರು ಸೀಮೆಯ ಶಿವಮೊಗ್ಗಾ ಮತ್ತು ಕಡೂರು ಡಿಸ್ಟ್ರಿಕ್ಟುಗಳ ಕಾಡುಗಳಲ್ಲಿ ಹೆಬ್ಬಿದರು, ಕಿರುಗಳು ಮತ್ತು ಗಾರ್ಬೆಬಿದರು ಎಂಬ ಮೂರು ಜಾತಿಯ ಬಿದರುಗಳು ದೊರೆಯುವವು.

ಹೆಬ್ಬಿದರಿನಲ್ಲಿ ಶೇಕಡಾ ೪೪ರಂತೆಯೂ, ಕಿರುಗಳುವಿನಲ್ಲಿ ಶೇಕಡಾ ೩೪ರಂತೆಯೂ "ವಂಶಪಿಷ್ಟ"ವು ದೊರೆಯುವುದು. ಗಾರ್ಬೆಬಿದರನ್ನು ಪರೀಕ್ಷಿಸಿ ಅದರಲ್ಲಿ ದೊರೆಯುವ ಪಿಷ್ಟ ಶೇಕಡೆಯನ್ನು ನಿರ್ಧರಿಸದಿದ್ದಾಗ್ಯೂ, ಅದೇ ಜಾತಿಯ ಬಿದರು ಇತರ ಕಡೆಯಲ್ಲಿ ಪರೀಕ್ಷಿಸಲ್ಪಟ್ಟಿರುವುದಲ್ಲದೆ, ಕಾಗದ ಮಾಡುವುದಕ್ಕೆ ಸಹ ಉಪಯೋಗಿಸಲ್ಪಟ್ಟಿರುವುದು.

ಹೆಬ್ಬಿದರು ಅನೇಕ ಕಡೆಯಲ್ಲಿ ಕಚ್ಚಿಹಾದುಹೋಗಿರುವುದಲ್ಲದೆ, ಇತರ ಸ್ಥಳಗಳಲ್ಲಿ ಸ್ವಲ್ಪ ದಿವಸಗಳಲ್ಲಿಯೇ ಕಚ್ಚಿಹಾಯುವ ಸಂಭವವಿರುವುದರಿಂದ ಪ್ರಕೃತಕ್ಕೆ ಒದಗಲಾರದು.

ಇನ್ನು ಕೆಲವು ವರ್ಷಗಳ ವರೆಗೆ "ವಂಶಪಿಷ್ಟ" ವ್ಯವಸಾಯಕ್ಕೆ ಕಿರಿಗಳುವೇ ಆಧಾರ. ಗಾರ್ಬೆಬಿದರು ಸ್ವಲ್ಪಮಟ್ಟಿಗೆ ಮಾತ್ರ ಸಹಾಯಕಾರಿಯಾಗುವುದು.

ನೀರಿನ ವಸತಿಯೂ, ಕಾರ್ಖಾನೆ [illegible] ಪದಾರ್ಥಗಳನ್ನು ತಂದುಕೊಳ್ಳುವ ಮತ್ತು ತಯಾರಾದ ಪಿಷ್ಟವನ್ನು [illegible] ಅನುಕೂಲಗಳೂ ಇರುವುದರಿಂದ ಶಿವಮೊಗ್ಗಾ [illegible]

[illegible]

ಬೇಕಾಗುವುದು.

೨೦೦ ಬಿದಿರುಗಳು ೧ ಟನ್ ತೂಗುವುದರಿಂದ, ೧ ಟನ್ ಪಿಷ್ಟಕ್ಕೆ ೩॥ ಟನ್ ಅಂದರೆ ೭೦೦ ಕಿರುಗಳುಗಳು ಬೇಕಾಗುವವು. ಆದುದರಿಂದ ೧೦,೪೦೦ ಟನ್‌ಗಳ ಪಿಷ್ಟಕ್ಕೆ ವರ್ಷ ಒಂದಕ್ಕೆ ೩೬,೦೦೦ ಟನ್ ಅಥವಾ ೭೨,೦೦,೦೦೦ ಕಿರುಗಳುಗಳು ಬೇಕಾಗುವವು; ಹಾಲಿ ಇತರ ಉಪಯೋಗಗಳಿಗೆ ಬೇಕಾದಷ್ಟು ಕಳೆದು ಮೇಲ್ಕಂಡ ಕಾಡುಗಳಲ್ಲಿ ಸಾಲಿಯಾನ ೫೭,೦,೫೦೦೦ ಅಂದರೆ ೨೮,೫೨೫ ಟನ್ ಬಿದಿರುಗಳು ಸಂದೇಹವಿಲ್ಲದೆ ದೊರೆಯುವುದು. ಒಂದು ಟನ್ ಅಂದರೆ ೨೦೦ ಕಿರುಗಳುಗಳನ್ನು ಕಡಿದು ಕಾರ್ಖಾನೆಗೆ ಒದಗಿಸಲು ಸರಾಸರಿ ೯-೪-೦ ರೂಪಾಯಿಗಳು ಬೇಕಾಗುವುದು.

ಈ ವ್ಯವಸಾಯಕ್ಕೆ ಅವಶ್ಯಕವಾಗುವ ಯಂತ್ರಗಳಿಗೂ ಮತ್ತು ಕಟ್ಟಡಗಳಿಗೂ ಸಹ ೭,೫೦,೦೦೦ ರೂಪಾಯಿಗಳು ಬೇಕಾಗುವವು.

ಒಂದು ಟನ್ ಪಿಷ್ಟವನ್ನು ಮಾಡಲು ಈ ಕೆಳಗೆ ಕಂಡಂತೆ ಖರ್ಚು ತಗಲುವುದು:—

ಕಿರುಗಳು (ಹಾಸಲು ಸಹಿತ) ರೂ. ೪೫—೧೦—೦; ಸೌದೆ ರೂ. ೨೨-೦-೦; ರಸಾಯನ ಸಾಮಾಗ್ರಿಯುಗಳು ರೂ. ೩೧—೦—೦; ಮೇಲ್ವಿಚಾರಣೆ ಖರ್ಚು ರೂ. ೭—೦—೦; ಉತಾರ್ ಬೆಲೆ (Depreciation) ರೂ. ೬—೫—೦; ತೆರಿಗೆ ವಗ್ಯೆರೆ ರೂ. ೩—೯—೦. ಜುಮ್ಲಾ ರೂ. ೧೫—೮—೦.

ಈ ಪಿಷ್ಟವನ್ನು ಹಸನುಮಾಡುವುದಕ್ಕೆ (Bleaching) ಟನ್ ೧ಕ್ಕೆ ರೂಪಾಯಿ ೩೨—೮—೦ ಹೆಚ್ಚು ಖರ್ಚು ತಗಲುವುದು.

ಯೂರೋಪುಖಂಡದಿಂದ ಬರುವ ಪಿಷ್ಟದ ಬೆಲೆಗೆ ಹೋಲಿಸಿದರೆ, ಈ ಸಾಧಾರಣ (Unbleached) ವಂಶಪಿಷ್ಟವನ್ನು ಮದರಾಸಿನಲ್ಲಿ ಟನ್ ೧ಕ್ಕೆ ೧೩೭—೦—೦ ರೂಪಾಯಿಗಳಂತೆ ಮಾರಬಹುದು. ಶಿವಮೊಗ್ಗೆಯಿಂದ ಮದರಾಸಿಗೆ ರೈಲು ಚಾರ್ಜಿಗಾಗಿ ರೂ. ೧೫—೮—೦ಯನ್ನು ಮತ್ತು ಪ್ಯೋಟಾಪ್ಯೋಟ ವಗ್ಯೆರೆ ಖರ್ಚಿಗೆ ರೂಪಾಯಿ ೭—೦—೦ಗಳನ್ನೂ ವಜಾಮಾಡಿದಾಗ್ಯೂ ಟನ್ ಒಂದಕ್ಕೆ ರೂ. ೨೦—೦—೦ಗಳು ಲಾಭ ದೊರೆಯುವುದು.

ವರುಷ ಒಂದಕ್ಕೆ ೧೦,೮೦೦ ಟನ್‌ಗಳ ಪಿಷ್ಟವು ತಯಾರಾಗುವುದರಿಂದ, ಟನ್ ಒಂದಕ್ಕೆ ೨೦—೦—೦ ರೂಪಾಯಿಗಳಂತೆ ಒಟ್ಟು ೨,೦೮,೦೦೦—೦—೦ ರೂಪಾಯಿಗಳು ಫಾಯಿದೆ ದೊರೆಯುವುದು.

ಕಾರ್ಖಾನೆಯ ಯಂತ್ರ ಮತ್ತು ಕಟ್ಟಡ ಮೊದಲಾದವುಗಳಿಗೂ ಮತ್ತು ಕಾರ್ಖಾನೆಯ ದಿನವಹಿ ಕೆಲಸದ ಖರ್ಚಿಗೂ ಸಹ ಬೇಕಾದ ಬಂಡವಾಳವು ೧೨,೪೦,೦೦೦ ರೂಪಾಯಿಗಳಾಗುವುವು. ಆದುದರಿಂದ ಮೇಲ್ಕಂಡ ಫಾಯಿದೆ ಮೊಬಲಗು ಏನ್ ಬಂಡವಾಳಕ್ಕೆ ಖರ್ಚು ವಗ್ಯೆರೆ ಜಾತಾ ಶೇಕಡಾ ೧೭ರಂತೆ ನಫೆಯನ್ನು ಸಾಲಿಯಾನ ಕೊಡುವುದು.

ಹಾಲಿ ನಮ್ಮ ಹಿಂದೂ ದೇಶದಲ್ಲಿರುವ ಕಾಗದದ ಕಾರ್ಖಾನೆಗಳಿಗೆ ಬಹುಮಟ್ಟಿಗೆ ವಿದೇಶದಿಂದ ಬರುವ ಪಿಷ್ಟವೇ ಆಧಾರವಾಗಿರುವುದರಿಂದ ನಮ್ಮಲ್ಲಿ ತಯಾರಾಗಬಹುದಾದ ಪಿಷ್ಟಕ್ಕೆ ನಮ್ಮ ದೇಶದಲ್ಲಿಯೇ ಉಪಯೋಗವಿರುವುದಲ್ಲದೆ, ವಿದೇಶದ ಪಿಷ್ಟವನ್ನು ಆಶ್ರಯಿಸಿಕೊಂಡಿರುವ ಚೀನಾ ಮತ್ತು ಜಪಾನ್ ದೇಶಗಳಲ್ಲಿಯೂ ನಮ್ಮ ಪಿಷ್ಟವನ್ನು (Pulp) ಫಾಯಿದೆಯಿಂದ ಮಾರಾಟಮಾಡಬಹುದು.

ನಮ್ಮ ದೇಶೀಯರಲ್ಲಿ ಧನಿಕರೂ ಸಾಹಸಿಗಳೂ ಆಗಿರುವವರು ತಮ್ಮ ದ್ರವ್ಯವನ್ನು ನಿರ್ಭಯವಾಗಿ ಲಾಭಕರವಾದ ಈ ವ್ಯವಸಾಯದಲ್ಲಿ (Industry) ಉಪಯೋಗಿಸಲು ಇದು ಉತ್ಕೃಷ್ಟವಾದ ಸಮಯವಾಗಿರುವುದು.

ಕೆ. ಕೆ.

ಪತ್ರವ್ಯವಹಾರ.

ಅಯ್ಯಾ ಪತ್ರಕರ್ತರೇ,

ಸುಬ್ರಮಣ್ಯ, [illegible] ಗ್ರಾಮಗಳಲ್ಲಿ ಬರುವ [illegible]

[illegible]

ಇವುಗಳ ಮೂಲಕ ಪ್ರತಿ ಹಳ್ಳಿಪಳ್ಳಿಯವರೂ ವರ್ತಮಾನ ಪತ್ರ ಇತ್ಯಾದಿಗಳನ್ನು ತಕ್ಕ ಕಾಲದಲ್ಲಿ ಓದಿಕೊಂಡು, ಲೋಕ ಮಾಹಿತಿಯನ್ನು ಪಡೆದು, ಅಭಿವೃದ್ಧಿಯನ್ನು ಹೊಂದಬೇಕು ಎಂಬ ಸರಕಾರದ ಅಭಿಲಾಷೆಯು ಈ ಬ್ರೇಂಚು ಪೋಸ್ಟಾಫೀಸುಗಳಿಂದ ನೆರವೇರುತ್ತದೋ? ತಿಂಗಳಿಗೊಂದೆರಡಾವರ್ತಿ ಪ್ರತಿಹಳ್ಳಿಪಳ್ಳಿಗಳಿಗೆ ಸಂಚರಿಸುತ್ತಿರುವ ನಾನು ನನಗೆ ಕಂಡು ಬಂದ ಅನುಭವದ ಪ್ರಕಾರ ಬ್ರೇಂಚು ಪೋಸ್ಟಾಫೀಸುಗಳು ಸರಿಯಾದ ಕೆಲಸವನ್ನು ಮಾಡುವುದಿಲ್ಲವೆಂದೇ ಹೇಳಬೇಕಾಗಿದೆ. ಕೆಲವು ಬ್ರೇಂಚ್ ಪೋಸ್ಟಾಫೀಸುಗಳಲ್ಲಿ ಮೈಲ್ ಪಿಯೋನರಿಲ್ಲ; ಕೆಲವದರಲ್ಲಿ ಇದ್ದರೂ ಅವರು ನಿಯಮದ ಪ್ರಕಾರ ವಾರಕ್ಕೆ ಒಂದು ಸಾರಿಯಾದರೂ ಸರಿಯಾದ ಬಟ್ವಾಡೆ ಮಾಡುವದಿಲ್ಲ, ಕೆಲವು ಗ್ರಾಮಗಳಲ್ಲಿ ತಿಂಗಳಿಗೆ ಒಂದಾವರ್ತಿ ಯಾದರೂ ಟಪ್ಪಾಲು ದೊರಕುವುದಿಲ್ಲ. ಕೆಲವು ಗ್ರಾಮಗಳ ಪೋಸ್ಟು ಪಿಯೋನರು ವರ್ತಮಾನ ಪತ್ರ ಇತ್ಯಾದಿಗಳನ್ನು ವೈಯ್ಯುವ ಪೇಚಾಟವನ್ನು ತಪ್ಪಿಸುವ ಬದಲಿಗೆ ಸಿಕ್ಕಿದವರ ಕೂಡ ಪತ್ರಗಳನ್ನು ಕೊಟ್ಟು ತಮ್ಮ ಪುಸ್ತಕಕ್ಕೆ ದಸ್ಕತುಗಳನ್ನು ಹಾಕಿಸಿಕೊಳ್ಳುವರೆಂಬ ಮಾತು ಕೇಳ್ಪಸಿಗುತ್ತದೆ. ಕೆಲವರು ತಾವೇ ಸ್ವಉಪಯೋಗ ಮಾಡುವರಂತೆ. ಇತ್ತಲಾಗ್ಗೆ ನಾನು ಒಂದು ಹಳ್ಳಿಯಲ್ಲಿರುವಾಗ ಕೇಳಿದ ಇಬ್ಬರೊಳಗಾದ ಸಂಭಾಷಣೆಯಿಂದ ಇದು ಖಾತ್ರಿಯಾಗದಿರದು:—

೧:—"ಸ್ವಾಮಿ, ನಾನು ಈ ವಾರ ಪತ್ರಗಳನ್ನು ಓದಲಿಲ್ಲ; ತಾವು ಪತ್ರಗಳನ್ನು ತರಿಸಿಕೊಳ್ಳುವದಿಲ್ಲೇನು?" ೨:—"ನಮಗೆ ಪತ್ರ ತರಿಸಿಕೊಳ್ಳುವ ವಾಡಿಕೆಯೇ ಇಲ್ಲ; ನಮ್ಮ ಗ್ರಾಮದ ಪೋಸ್ಟುಮಾಸ್ತರರು ನಮ್ಮ ಛಂದಸಾಲೆಯ ಪಾಲುಗಾರರಾಗಿರುವಾಗ ದುಡ್ಡು ಖರ್ಚುಮಾಡಿ ಪತ್ರ ತರಿಸುವ ಆವಶ್ಯವೇನು? ಈ ಆಫೀಸಿಗೆ ಬಂದ ಸತ್ಯದೀಪಿಕೆಯನ್ನೂ ಸ್ವದೇಶಾಭಿಮಾನಿಯನ್ನೂ ಪ್ರಥಮತಃ ನಾವು ತೆರೆದು ಓದಿ, ನಂತರ ವಿಳಾಸದವರಿಗೆ ಕೊಡುವೆವು."

ಪತ್ರಕರ್ತರೇ, ಮೇಲಿನ ಈ ಸಂಭಾಷಣೆಯಂಥಾ ಹಲವು ಉದಾಹರಣೆಗಳನ್ನು ತಮಗೆ ಕೊಡಬಲ್ಲೆನಾದರೂ ಸದ್ಯ ಇಷ್ಟರಲ್ಲಿಯೇ ಸಾಕು ಮಾಡುತ್ತೇನೆ. ಬ್ರೇಂಚ್ ಪೋಸ್ಟಾಫೀಸುಗಳಲ್ಲಿ ಇಂತಹ ಕೃತ್ಯಗಳು ನಡೆಯಲು ಕಾರಣ ಯಾವುದು ಎಂಬುದನ್ನು ಆಲೋಚಿಸಲು ಇದೂ ಪ್ರಕೃತ ಪ್ರಸಕ್ತವಾಗಿರುವುದು. ಈ ಬ್ರೇಂಚ್ ಪೋಸ್ಟಾಫೀಸುಗಳಲ್ಲಿ ಇರುವ ಪೋಸ್ಟು ಮಾಸ್ಟರರೇ ಅನೇಕಾವರ್ತಿ ಕಾಗದ ಬಟ್ವಾಡೆ ಮಾಡಬೇಕಾಗುತ್ತದೆ. ಇವರಿಗೆ ಸಿಕ್ಕುವ ಸಂಬಳ ಕೇವಲ ಕೊಂಚ, ಅವರು ಇದರೊಡನೆ ಬೇರೆ ವೃತ್ತಿಯನ್ನು ಮಾಡಲೇ ಬೇಕು. ತದ್ರೀತಿ ಹಳ್ಳಿ ಬಟ್ವಾಡೆ ಪೇದೆಯರೂ ನಿರಕ್ಷರ ಕುಕ್ಷಿಗಳಾದ ಉಂಡಾಡಿಗಳಾಗಿರುವರು. ಕರ್ತವ್ಯ ದಕ್ಷತೆಯು ಅರಿವು ಇಲ್ಲದ ಇಂಥವರೊಡನೆ ಈ ಕೆಲಸವನ್ನು ಕೊಟ್ಟರೆ ಕೆಲಸವು ಸರಿಯಾಗಿ ಸಾಗುವ ಬಗೆ ಹೇಗೆ? ಅದಲ್ಲದೆ ಇವರು ಗ್ರಾಮದ ದೊಡ್ಡವರನ್ನು ಮೆಚ್ಚಿಸಬೇಕಾಗಿಯೇ ಬದುಕಬೇಕು. ದೊಡ್ಡವರು ಆಫೀಸಿಗೆ ಬಂದ ಕೂಡಲೇ ಅವರನ್ನು ಮೆಚ್ಚಿಸುವದಕ್ಕೋಸ್ಕರ ಇತರರಿಗೆ ಬಂದ ವರ್ತಮಾನ ಪತ್ರಗಳನ್ನು ತೆರದು ಓದಕೊಡುವುದೂ ಇದೆ. ಹಳ್ಳಿ ಪೋಸ್ಟಾಫೀಸುಗಳಲ್ಲಿ ಇಂಥಾ ಕಷ್ಟಗಳಿರುವುದೆಂಬುದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಇಲಾಖಾ ಇನ್ಸ್‌ಪೆಕ್ಟರರು ಗ್ರಾಮ ಗ್ರಾಮ ಸಂಚರಿಸಿದರೆ ಈ ಅನುಭವವು ಚೆನ್ನಾಗಿ ವ್ಯಕ್ತವಾಗುವದು.

ಈಗ ಸ್ಥಾಪಿಸಲಿಕ್ಕಿರುವ ಸಿರಾಡಿ, ಸುಬ್ರಮಣ್ಯ, ಗೋಳಿತಟ್ಟು, ಮೊದಲಾದ ಗ್ರಾಮಗಳ ಪೋಸ್ಟಾಫೀಸುಗಳಿಗೂ ಇತರ ಗ್ರಾಮಗಳ ಆಫೀಸಿನ ಸೋಂಕು ತಗಲದಂತೆ ಮೇಲಾಫೀಸರರು ಈಗಲೇ ತಕ್ಕ ಮುಂಜಾಗ್ರತೆ ತಕ್ಕೊಳ್ಳಬೇಕೆಂಬದಾಗಿಯೂ ಇತರ ಗ್ರಾಮಗಳ ಪೋಸ್ಟಾಫೀಸುಗಳಲ್ಲಿ ಕೂಡಾ ಕಾಗದ ಪತ್ರಾದಿಗಳು ಸರಿಯಾಗಿ ತಕ್ಕ ಕಾಲಕ್ಕೆ ಬಟ್ವಾಡೆಯಾಗುವಂತೆ ಏರ್ಪಾಡು ಮಾಡಬೇಕಾಗಿಯೂ ಮೇಲಾಫೀಸರರಿಗೆ ವಿನಂತಿಸಿ, ಸದಾ॰ ಪತ್ರ ಸಂಪಾದಕರಿಗೆ ಬೀಳ್ಕೊಳ್ಳುವ,

ವಿಚಾರಿ.

~~~~~~

ಅಯ್ಯಾ,

ಈ ನನ್ನ ಲೇಖನವನ್ನು ತಮ್ಮ ಪತ್ರದಲ್ಲಿ ಪ್ರಕಟಿಸುವುದಕ್ಕೆ ಸ್ವಲ್ಪ ಎಡೆಕೊಡಬೇಕಾಗಿ ಪ್ರಾರ್ಥಿಸುತ್ತೇನೆ.

ವಿಕ್ಟೋರಿಯಾ ಮಹಾರಾಣಿಯವರ ಕಾಲದಲ್ಲಿ ಅವರ ಜುಬಿಲಿ ಸ್ಮರಣಾರ್ಥವಾಗಿ ನಮ್ಮ ಜಿಲ್ಲೆಯ ಮಹಾನುಭಾವರು ವಂತಿಗೆ ಕೂಡಿಸಿ "ಜುಬಿಲಿ ಸ್ಕೊಲರ್‌ಶಿಪ್ ಫಂಡ್" ಎಂಬ ಫಂಡನ್ನು ಸ್ಥಾಪಿಸಿ, ಅದರಿಂದ ಹುಟ್ಟುವ ಬಡ್ಡಿಯಿಂದ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುತ್ತಾ ಬರುತ್ತಿರುವರಲ್ಲವೇ! ಈ ವರುಷ ಬ್ರಾಹ್ಮಣರಿಗೆ, ಬ್ರಾಹ್ಮಣರಲ್ಲದ ಇತರ ಜಾತಿಯವರಿಗೆ, ಕ್ರೈಸ್ತರಿಗೆ ಹೀಗೆ ೩ ವೇತನಗಳು ಇರುವ[illegible] ಉಮೇದ್ವಾರರು ಪರೀಕ್ಷೆಗೆ ತಮ್ಮ [illegible] ನೋಟೀಸು ಪತ್ರಗಳಲ್ಲಿ ಪ್ರಕಟವಾಗಿತ್ತು. [illegible] ವೇತನ ಉಮೇದ್ವಾರನಾಗಿ [illegible]

ಪ್ರಥಮ ಸ್ಥಾನವನ್ನು ಹೊಂದಿದುದರಿಂದ ವೇತನವು ನನಗೆ ಸಿಕ್ಕುವುದೆಂದು ತಿಳಿದು ಬಂತು. ನಮ್ಮ ಜಾತಿಯ ಒಬ್ಬರು ಕೆಲವು ವರುಷಗಳ ಮೊದಲು ಈ ವೇತನವನ್ನು ಪಡೆದಿದ್ದುದರಿಂದ ಇದನ್ನು ತನಗೆ ಕೊಡಿಸಬೇಕೆಂತ ಇನ್ನೊಬ್ಬ ಉಮೇದ್ವಾರನು ಮನವಿ ಮಾಡಿದನಂತೆ. ಆ ಮೇರೆಗೆ ಪ್ರೆಸಿಡೆಂಟರು ಅದನ್ನು ಮೂರನೆಯವರೊಬ್ಬರಿಗೆ ಕೊಡಿಸಿದುವರಾಗಿ ಕೇಳುತ್ತೇನೆ. ಇದಕ್ಕೆ ಸಂಬಂಧಪಟ್ಟ ಕ್ರಮಗಳ ಪಟ್ಟಿಯನ್ನು ಪೂರ್ಣವಾಗಿ ಓದಿ ನೋಡಿದರೂ ವೇತನವು ಒಂದೇ ಜಾತಿಯ ಇಬ್ಬರಿಗೆ ಕೊಡಿಸಕೂಡದೆಂಬ ನಿಯಮವು ಕಾಣಿಸುವುದಿಲ್ಲ. ಹಾಗಿದ್ದರೂ ಪ್ರಕಟಿಸುವಾಗಲೇ ಆ ರೀತಿ ಸೂಚಿಸಿದ್ದರೆ ನಾನು ಶ್ರಮಪಡುವ ಅಗತ್ಯವಿದ್ದಿಲ್ಲ. ಆದುದರಿಂದ ಜಿಲ್ಲೆಯ ಎಲ್ಲಾ ಜ್ಞಾತಿಮತದವರಿಗೆ ಸಂಬಂಧಪಟ್ಟ ಈ ಫಂಡಿನ ಆಡಳಿತೆಯ ಮೆಂಬರರ ಅವಗಾಹನೆ ಬಗ್ಗೆ ಇದನ್ನು ತರಲಪೇಕ್ಷಿಸುತ್ತೇನೆ. ಅವರು ಈ ವಿಷಯ ಪುನಹ ವಿಮರ್ಶಿಸುವರೆಂದು ನಂಬಿದ್ದೇನೆ.

ಇತಿ

ಕಾಸರಗೋಡು, ತಾ. 29 – 10 – 14. ಬಿ. ಸೀತಾರಾಮರಾವ್

~~~~~~

ಭಿಕ್ಷೆಬೇಡುವದರ ಹೊರತು ಜನರು ಅವಲಂಬಿಸಿರುವ ಇನ್ನೂ ಕೆಲವು ವೃತ್ತಿಗಳು.

~~~~~~

ಪತ್ರಾಧಿಪರೇ,

ಸ್ವದೇಶಾಭಿಮಾನಿಯ ಕಳೆದ ಸಂಚಿಕೆಯಲ್ಲಿ "೪೦,೧೫,೮೦೭ ಜನ ಭಾರತೀಯರ ವೃತ್ತಿ" ಎಂಬ ಅಗ್ರಲೇಖನವನ್ನು ಓದಿ ನೋಡಿದೆನು. ಖಾನೇಶುಮಾರಿ ಲೆಕ್ಕಕ್ಕೆ ಸರಿಯಾಗಿ ಸಿಕ್ಕಲು ಅಸಾಧ್ಯವಾದ ಇನ್ನು ಕೆಲವು ವೃತ್ತಿಗಳೂ ಅವನ್ನು ಅನುಸರಿಸುವ ಜನ ಸಂಖ್ಯೆಯೂ ಇರುವದು. ಈ ಜನ ಸಂಖ್ಯೆಯನ್ನು ಆ ನಾಲ್ವತ್ತು ಲಕ್ಷಕ್ಕೆ ಕೂಡಿಸಲಾಗಿ ೪೦ ಲಕ್ಷವು ೮೦ ಲಕ್ಷವಾಗಲು ಸಾಕು. ಇಂಥಾ ಕೆಲವು ವೃತ್ತಿಗಳ ಉದಾಹರಣೆಗಳನ್ನು ನಮ್ಮ ಜಿಲ್ಲೆಯಿಂದಲೇ ಕೂಡಿಸಿಕೊಂಡು ಕೊಡಬಹುದು. ನಮ್ಮ ಜಿಲ್ಲೆಯ ಉಡುಪಿ ಕ್ಷೇತ್ರದಲ್ಲಿ ನಿತ್ಯ ಸಹಸ್ರಭೋಜನವಿರುತ್ತದೆ. ಒಂದು ಸಾವಿರ ಜನರು ಇಲ್ಲಿ ಉಂಡು ತಿರುಗುವ ಏರ್ಪಾಡಿರುತ್ತದೆ. ಇವರಲ್ಲಿ ಹಲವರ ವೃತ್ತಿ "ಮನೆವಾರ್ತೆ ಕಸಬು" ಇನ್ನು ಕೆಲವರು "ಜಮಿನಾನುದಾರರು" ಮತ್ತು ಕೆಲವರು "ವೈದಿಕರು." ಮಂಗಳೂರಿಂದ ಉಡುಪಿಗೆ ಹೋಗುವ ಹಾದಿಯಲ್ಲಿ ಗೌಡ ಸಾರಸ್ವತರ ದೊಡ್ಡದೊಂದು ದೇವಸ್ಥಾನವಿರುತ್ತದೆ. 'ದರ್ಶನ'ವೆಂಬ ಅಪರೂಪ ಸಾಧನೆಯು ಅಲ್ಲಿಯ ವೆಂಕಟ್ರಮಣ ದೇವಸ್ಥಾನದಲ್ಲಿ ನಡಿಯುವದರಿಂದ ಹಣವು ರಾಶಿರಾಶಿಯಾಗಿ ಬಂದು ಬೀಳುವದು. ಶ್ರಮವಿಲ್ಲದೆ ಹೀಗೆ ಬಂದು ಬೀಳುವ ಹಣ ಅಲ್ಲಿಯ ಹಲವು ಜನ ಗೌಡ ಸಾರಸ್ವತರಿಗೆ ಇತ್ತಲಾಗೆ ಶುಮಾರು ಒಂದು ಶತಮಾನದಿಂದ ಕಾಯಂ ವೃತ್ತಿಯನ್ನು ಕಲ್ಪಿಸಿಕೊಟ್ಟಿರುವುದು. ಈ ವೃತ್ತಿಯ ಹೆಸರನ್ನು ವಿವರಿಸಿ ಬರೆಯುವದು ಅಸಾಧ್ಯ. ಈ ಜಿಲ್ಲೆಯ ಮುಖ್ಯ ಮುಖ್ಯ ದೇವಸ್ಥಾನಗಳ ಹಣದಿಂದ ಈ ವೃತ್ತಿಯನ್ನು ಮನೆತನದ ಹಕ್ಕಿನಿಂದ ಮಾಡಿ ಬರುವ ಸಾವಿರಾರು ಜನರ ವೃತ್ತಿಯು ಖಾನೆಶುಮಾರಿ ಲೆಕ್ಕ ಪುಸ್ತಕಗಳಲ್ಲಿ ಎಂದೂ ಕಾಣಸಿಕ್ಕದು. ದೇವಸ್ಥಾನಗಳನಂತರ ಸಾಧಾರಣ ಇದೇ ಸ್ವಭಾವದ ವೃತ್ತಿಯನ್ನು ಕೊಡುವ ಮಠಗಳಿವೆ. ಸಂಸ್ಕೃತ ಭಾಷಾ ಮಾಹಿತಿಯನ್ನು ಆಚಾರ ವಿಚಾರಗಳಿಗೆ ಬೇಕಾದ ತಿಳಿವನ್ನು, ಧರ್ಮರಕ್ಷಣೆಯನ್ನು, ಧರ್ಮ ಸಂಸ್ಥಾಪನೆಯನ್ನು ಮಾಡಲು ಅಗತ್ಯವಿರುವ ಧರ್ಮಜ್ಞಾನವನ್ನು—ಇವೆಲ್ಲವನ್ನು ಸಂಗ್ರಹಿಸಲು ಬೇಕಾದ ಶಿಕ್ಷಣ ಅಭ್ಯಾಸವು ಇಹಲೋಕದಲ್ಲಿ ಸಲ್ಲದೆಂದು ಮದಾಂಧರಾದ ಕೆಲವು ಯತಿಗಳು, ಮಠದ ಹುಟ್ಟುವಳಿಯು ಇಂಥವರ ದುರಾಚಾರಗಳಿಗೆ ಸಾಲದಂತೆ ಮಾಡುವ ಆಚಾರ್ಯರು, ಪಾರುಪತ್ಯಗಾರರು ಮಠದ ಆಭರಣಗಳನ್ನು ಮತ್ತು ಇತರ ಸೊತ್ತುಗಳನ್ನು ಅಂತರಂಗದಲ್ಲಿ ಮಾರಿಸಿಕೊಡುವ ಗೂಢಾಚಾರರು—ಇಂಥಾ ವೃತ್ತಿಯ ಜನಸಂಖ್ಯೆ ಖಾನೆಶುಮಾರಿ ಲೆಕ್ಕದಲ್ಲಿರದು. ಜಮೀನುದಾರರು ವರ್ಗದಾರರು, ಸಾಹುಕಾರರು ಎಂಬುವ ವೃತ್ತಿಗಳನ್ನು ಖಾನೆಶುಮಾರಿ ಲೆಕ್ಕದಲ್ಲಿ ಹೇಳಿ ತಮ್ಮ ಸಂಪನ್ನ ಬಲದಿಂದ ಯೋಗ್ಯವಾದ ಯಾವ ವೃತ್ತಿಯನ್ನು ಮಾಡದೆ ಪರಪೀಡಿತರಾಗಿ ಜೀವಿಸುವ ಇನ್ನೊಂದು ವರ್ಗವು ಸಹ ಇರುವದು. ಇಂಥವರ ಲೆಕ್ಕವನ್ನು ಸರಿಯಾಗಿ ಮಾಡಿ ನೋಡಿದಲ್ಲಿ ಅನಾಥಾಲಯಗಳನ್ನೂ, ಶಿಕ್ಷಣಾಲಯಗಳನ್ನೂ ಸ್ಥಾಪಿಸುವದರಲ್ಲಿ ಉಪಯೋಗಿಸಲ್ಪಡಬೇಕಾದ ಶಕ್ತಿಯೂ ದ್ರವ್ಯವೂ ಅನ್ಯಥಾ ದುರುಪಯೋಗಿಸಲ್ಪಡುವದೆಂತ ತೋರಿಬರುವುದು.

ಇಂಥಾ ಶಕ್ತಿಯೂ ದ್ರವ್ಯವೂ ದುರುಪಯೋಗವಾಗದಂತೆ ನಡಿಸಬೇಕಾದ ಸಾಧನೆಯು ಯಾವದು?

[illegible]–10–1914. "[illegible]"
~~~~~~

ಯುದ್ಧ ಸಮಾಚಾರವು.

ತಾ. 23ನೇ ಒಕ್ಟೋಬರ.

ಬೆಲ್ಜಿಯಮ್:—ಬೆಲ್ಜಿಯನ ಸೇನೆಯು ಯೈಸರ್ ನದಿಯ ಸಮಿಪಾವ ತಮ್ಮ ನೆಲೆಗಳನ್ನು ಕಾಪಾಡಿಕೊಂಡಿರುವದು. ಇತರ ಕದನಗಳು ಎಪ್ರೆ ಪ್ರಾಂತ್ಯದಲ್ಲಿ ನಡೆಯುತ್ತಿದೆ. ಶತ್ರುಗಳು ಅರ್ಮೆಂಟಿಯರ್ಸ್, ಫ್ರೊಮ್ಲೆಸ್ ಮತ್ತು ಲಾಬಸ್ಸೆಯ ಮಾರ್ಗವಾಗಿ ಲಿಲ್ಲೆಗೆ ಮುಂದರಿಸಲು ಪ್ರಯತ್ನಿಸುತ್ತಿರುವರು. ಫ್ರೆಂಚ ಬ್ರಿಟಿಷ ಸೇನೆಗಳನ್ನು ಮ್ಯೂಸ್ ನದಿಯಿಂದ ಅಟ್ಟಿಬಿಡಲು ಶತ್ರುಗಳು ಮಾಡಿದ ಪ್ರಯತ್ನವೂ ವ್ಯರ್ಥವಾಗಿರುವುದು. ಒಟ್ಟಾರೆ ಫ್ರೆಂಚ ಬ್ರಿಟಿಷ ಸೇನೆಗಳಿಗೆ ಜಯವಾಗುತ್ತಾ ಇದೆ.

ಜರ್ಮನ್ ಕೈಸರರು ತನ್ನನ್ನು ಬೆಲ್ಜಿಯನ್ ಅರಸರೆಂಬದಾಗಿ ಕರೆಯಿಸಿಕೊಳ್ಳುವುದಾದರೆ ತಟಸ್ಥ ರಾಜ್ಯಗಳು ಅದನ್ನು ಮಂಜೂರು ಮಾಡುವವೋ ಎಂದು ತಟಸ್ಥ ರಾಜ್ಯಗಳನ್ನು ಕೇಳುತ್ತಿದ್ದಾರೆಂತ ವಾರ್ತೆ ಬಂದದೆ.

ಎಂಟವರ್ಪನ್ನು ಬಿಟ್ಟು ಹೋದ ಬೆಲ್ಜಿಯನ್ ನಿವಾಸಿಕರು ಪಟ್ಟಣಕ್ಕೆ ಹಿಂತಿರುಗುವ ಹಾಗೆ ಜರ್ಮನರು ಪ್ರೇರೇಪಿಸುತ್ತಿರುವರು. ಹಿಂದೆ ಮಾಡಿದಂತೆ ಬೆಲ್ಜಿಯನ್ ಯುವಕರನ್ನು ಜರ್ಮನಿಗೆ ಕಳುಹಿಸಿಕೊಡುವದಿಲ್ಲವೆಂದೂ ಸಾಧಾರಣ ಜನರ ಉಡುಪು ಹಾಕಿಕೊಂಡ ಬೆಲ್ಜಿಯನ್ ಸೈನೀಕರನ್ನು ಕೂಡಾ ನಿವಾಸಿಕರಂತೆಯೇ ನಡಿಸುವೆವೆಂದೂ ಜರ್ಮನರು ಪ್ರಕಟಿಸಿರುವುದರಿಂದ ಪಟ್ಟಣ ಬಿಟ್ಟು ಹೋದ ಜನರು ಪಟ್ಟಣಕ್ಕೆ ಬಂದು ಸೇರುತ್ತಿರುವರು.

ಮುಂಬಾಯಿ ಗವರ್ನರರಾದ ವಿಲ್ಲಿಂಗ್ಡನ್ ಪ್ರಭುಗಳವರ ಮಗನು ಕಳದ ತಾ. ೧೯ರಲ್ಲು ರಣರಂಗದಲ್ಲಿ ಗಾಯಪೊಡೆದು ಜರ್ಮನರಿಗೆ ಶೆರೆಬಿದ್ದು ಈಗ ಕೆಸೆಲ್ ಸಮಿಪದ ಆಸ್ಪತ್ರಿಯಲ್ಲಿ ಶೈತೋಪಚಾರಹೊಂದುತ್ತಲಿದ್ದಾರೆಂತ ವಿಲ್ಲಿಂಗ್ಡನ್ ಪ್ರಭುಗಳವರಿಗೆ ತಂತೀ ಬಂದಿರುವುದು.

ವಿಸ್ತುಲದಲ್ಲಿ ರುಶ್ಯನರು ಜರ್ಮನರನ್ನು ಪೂರ್ಣವಾಗಿ ಹಿಂದೆ ಅಟ್ಟಿರುವರು. ಜರ್ಮನರ ನೂರಾರು ಬಂದಿಗಳನ್ನು ವಾರ್‌ಶೋಗೆ ತಂದಿರುವರು. ಮಧ್ಯದಲ್ಲಿ ನಡಿಯುವ ಕದನಗಳಲ್ಲಿ ಹೆಚ್ಚಿನವು ಫಿರಂಗಿ ಕದನಗಳಾಗಿವೆ.

ಯೆಸೆವ್ರೊಪ್ ಎಂಬಲ್ಲಿ ಜರ್ಮನರು ನದಿಯನ್ನು ದಾಟಲಿಕ್ಕಿದ್ದಾರೆಂದು ರುಶ್ಯನರ ಸೇನಾಧಿಪತಿಗೆ ತಿಳಿದು ಬಂದುದರಿಂದ ಅವನು ನದಿಗೆ ಸುಮಾರು ೧೫ ಮೈಲು ದೂರದಲ್ಲಿ ಕೆಲವು ಫಿರಂಗಿಗಳನ್ನಿಟ್ಟು ರುಶ್ಯನರ ರಣರಂಗವು ಅಲ್ಲಿರುವುದೆಂತ ಜರ್ಮನರು ನಂಬುವ ಹಾಗೆ ಮಾಡಿ ಇತ್ತಕಡೆ ನದಿಯ ಸಮಿಪದ ದಟ್ಟವಾದ ಅಡವಿಯಲ್ಲಿ ೧೬ ಫಿರಂಗಿಗಳನ್ನು ಅಡಗಿಸಿಟ್ಟನು. ಜರ್ಮನರು ಇದನ್ನು ತಿಳಿಯದೆ ನದಿಯನ್ನು ತೆಪ್ಪಗಳಲ್ಲಿ ದಾಟಿದರು. ರುಶ್ಯನರ ಎರಡು ಸೇನಾಂಗಗಳು ಕೂಡ್ಲೆ ತೆಪ್ಪಗಳಲ್ಲಿ ನದಿಯನ್ನು ದಾಟುತ್ತಿದ್ದ ಪ್ರತಿ ಒಬ್ಬ ಜರ್ಮನರ ಮೇಲೆ ಫಿರಂಗಿಗಳನ್ನು ಹಾರಿಸಿ ನದಿಯನ್ನು ದಾಟುತ್ತಿದ್ದ ಪ್ರತಿ ಒಬ್ಬ ಜರ್ಮನರನ್ನು ಕೊಂದರು. ಒಟ್ಟಿಗೆ ೨೦೦೦ ಜರ್ಮನರು ಪ್ರಾಣಾಪಾಯ ಹೊಂದಿದರು.

ರುಶ್ಯನರು ಲೆಂಬರ್ಗಿಗೆ ೪೫ ಮೈಲು ದೂರದಲ್ಲಿ ಶೋರ ಮತ್ತು ಸ್ಟ್ರಿ ಎಂಬಲ್ಲಿ ಆಸ್ಟ್ರಿಯನರೊಡನೆ ಕಾದಾಡುತ್ತಿರುವರು. ಪ್ರೈಜೆಮ್ಸ್ಲೆಯಲ್ಲಿ ರುಶ್ಯನರು ಆಸ್ಟ್ರಿಯ[illegible] ಗುಂಪು ಗುಂಪು ಸೇನೆಯನ್ನು ಸೆರೆಹಿಡಿಯುತ್ತಿದ್ದಾರೆ. [illegible]ಸ್ಟ್ರಿಯನರ ಒಂದು ಬಟಲಿಯನ್ ಸೇನೆಯು ರುಶ್ಯನರ[illegible]ಶರಣಾಗತವಾಗಿರುವುದು.

[illegible]

ಎಮ್ಡೆನ್ ನಾವೆಯ ವಾರ್ತೆಯು ಪುನಃ ಮಿನಿಕೊಯ ದ್ವೀಪದ ೧೨೦ ಮೈಲು ಪೂರ್ವದಲ್ಲಿ ಕೇಳಸಿಕ್ಕಿರುವುದು. ಇಲ್ಲಿ ಎಮ್ಡೆನ್ ಕ್ರೂಜರ್ ನಾವೆಯು ೫ ಹಡಗಗಳನ್ನು ಮುಣುಗಿಸಿರುವುದು. ಬೆನ್‌ಮೊಹರ್ (೬೧೧೦ ಟನ್) ಟ್ರೊಯಿಲಸ್ (೪೮೨೪ ಟನ್) ಎಕ್ಸ್‌ಫೊರ್ಡ್ (೩೮೦೪ ಟನ್) ಬರೆಸ್ಕ್ (೩೬೯೦ ಟನ್) ಸೆಂಟ್ ಎಗಬರ್ಟ್ (೬೫೫೬ ಟನ್) ಭರಾವಣೆಯುಳ್ಳದ್ದು. ಈ ಹಡಗಗಳು ಶೀಮೆಗೆ ಹೋಗುವಂಥಾದ್ದಾಗಿದ್ದವು. ಕ್ಲೆನ್ ಗ್ರೇಂಟ್ (೩೫೦೫ ಟನ್) ಚಿಲ್ಕಾನ (೫೧೫೭ ಟನ್) ಇವು ತೆಸ್ಕಾನಿಯಕ್ಕೆ ಹೋಗುವಂಥಾವುಗಳು. ಸರಕಾರದ ಎಕ್ಸ್‌ಪೊರ್ಡ್ ಮತ್ತು ಬರ್‌ಸೆಕ್ ಕಲ್ಲಿದ್ದಲು ತುಂಬಿದ ನಾವೆಗಳನ್ನು ಎಮ್ಡೆನ್ ನಾವೆಯು ತಕ್ಕೊಂಡಿರುವುದು. ಎಗ್‌ಬರ್ಟನ್ನು ೬ ಗಂಟೆ ಸಾಯಂಕಾಲಕ್ಕೆ ಹೋಗಬಿಟ್ಟಿರುವದು. ಉಳಿದ ಹಡಗಗಳನ್ನು ಮುಣುಗಿಸಿರುವುದು. ಎಮ್ಡೆನ್ ನಾವೆಯು ಎಗ್‌ಬರ್ಟ್ ನಾವೆಯನ್ನು ರಾತ್ರಿ ೮ ಗಂಟೆಯ ವರೆಗೆ ಕೊಚ್ಚಿಯ ಕಡೆಗೆ ಸಾಗ ಕಳುಹಿಸಿ ನಂತರ ಹಿಂತಿರುಗಿತು. ಈ ನಾವೆಯಲ್ಲಿ ೩೨೫ ನಾವಿಕರೂ ೨೨ ಪ್ರಯಾಣಿಕರೂ ತಾ. ೨೦ರಲ್ಲು ಕೊಚ್ಚಿಗೆ ಬಂದು ತಲಪಿದರು. ಕೆಲವು ಚೀನಿಯರನ್ನೂ ಇಬ್ಬರು ಯೂರೋಪಿಯನರನ್ನೂ ಎಮ್ಡೆನ್ ನಾವೆಯು ತಕ್ಕೊಂಡಿರುವುದು. ಉಳಿದವರನ್ನು ಎಗ್‌ಬರ್ಟ್ ನಾವೆಯಲ್ಲಿ ಹಾಕಿ ಕಳುಹಿಸಿರುವುದು.

ಮುಣುಗಿಸಲ್ಪಟ್ಟ ಕ್ಲೆನ್ ಗ್ರೇಂಟ್ ಎಂಬ ಹಡಗದ ನಾವಿಕರ ಪೈಕಿ ೧೬ ಯೂರೋಪಿಯನರಿದ್ದರು. ಇದರಲ್ಲಿ ಸಿಲೋನಿಗೆ ಹೋಗುವ ಸರಕೂ ಮುಖ್ಯವಾಗಿ ಮದರಾಸು ಗವರ್ನರರಾದ ಪೆಂಟಲೇಂಡ ಪ್ರಭುಗಳವರ ಸುಮಾರು ೨೦೦೦ ಪವನುಗಳ ಕ್ರಯಬಾಳುವ ವಿಶೇಷ ಮೌಲ್ಯದ ಪುಸ್ತಕಗಳೂ ಇತರ ಸಾಮಾನುಗಳೂ ಇದ್ದವು. ವಿಸ್ಕಿ ತುಂಬಿದ ಸಾವಿರ ಪೆಟ್ಟಿಗೆಯೂ ಈ ಹಡಗದಲ್ಲಿತ್ತು. ಟ್ರೊಯಿಲಸ್ ನಾವೆಯಲ್ಲಿ ೬೨೦ ಟನ್ ಚಾ ಇತ್ತು.

ಜಾಪಾನ್:—ಜಪಾನರು ಮರಿಯನ್ನೆ, ಮಾರ್ಶಲ್ ಮತ್ತು ಕಾರೊಲ್ಯಾನ್ ಆರ್ಚಿಪೆಲಾಗೋ ದ್ವೀಪಗಳನ್ನು ಸ್ವಾಧೀನ ಮಾಡಿಕೊಂಡಿರುವರು.

ದಕ್ಷಿಣ ಆಫ್ರೀಕ—ದಕ್ಷಿಣ ಆಫ್ರೀಕದಲ್ಲಿ ಯುನ್ಯನ್ ಸರಕಾರಕ್ಕೆ ವಿರೋಧವಾಗಿ ದಂಗೆ ಎದ್ದ ಕರ್ನಲ್ ಮೆರಿಟ್ಜನ ಸೇನೆಯಲ್ಲಿ ಮೂರು ಆಫೀಸರರೂ ೩೦ ಸೈನೀಕರೂ ಶೆರೆ ಹಿಡಿಯಲ್ಪಟ್ಟಿದ್ದಾರೆ. ೪ ಆಫೀಸರರೂ ೪೦ ಸೈನೀಕರೂ ಶರಣಾಗತರಾಗಿರುವರು.

ಈಗ ಮೆರಿಟ್ಜನು ಜರ್ಮನರೊಡನೆಯೂ ಜಗಳವಾಡಿರುವನು ಎಂಬ ವಾರ್ತೆ ಇದೆ.

~~~~~~

ತಾ. 24ನೇ ಒಕ್ಟೋಬರ.

ತಾ. ೨೧ರಲ್ಲು ಜರ್ಮನರು ರಣರಂಗದ ಪ್ರತೀ ಒಂದು ಕಡೆಯಲ್ಲಿ ಕಾಳಗಮಾಡಿದರು. ಜರ್ಮನರು ಉತ್ತರದಲ್ಲಿ ಬೆಲ್ಜಿಯನರ ಸೇನೆಯಿದ್ದಲ್ಲಿ ಕಾದಾಡಿದರು. ಎರ್‍ರಾಸಿನ ಉತ್ತರದಲ್ಲಿ, ವೆರೊನ್ನ ಮತ್ತು ಆಲ್ಬರ್ಟ್ ಎಂಬೀ ಸ್ಥಳಗಳ ಮಧ್ಯೆ, ಲಾಬಾಸ್ಸೆ ಎಂಬಲ್ಲಿ ಮತ್ತು ಮ್ಯೂಸ್ ನದಿಯ ಮತ್ತು ಟಂಪಿಯನ್ ಪ್ರಾಂತ್ಯದಲ್ಲಿ ಕಾಳಗ ಮಾಡಿ ಪ್ರತೀ ಒಂದು ಕಡೆಯಲ್ಲಿಯೂ ಹಿಮ್ಮೆಟ್ಟಿಲ್ಪವರು.

ನ್ಯೂಪೋರ್ಟ್, ಡಿಕ್ಸ್ ಮ್ಯೂಡ್ ಮತ್ತು ಲಾಬಾಸ್ಸೆಯಲ್ಲಿ ಜರ್ಮರು ಮೇಲ್ಮಾಯ್ದು ಬಂದರು. ಆದರೆ ಬ್ರಿಟಿಷ ಫ್ರೆಂಚ ಸೇನೆಗಳು ವಿಶೇಷ ಆಸಕ್ತಿಯಿಂದ ಜರ್ಮನರನ್ನು ಅಟ್ಟಿಬಿಟ್ಟರು.

ಉತ್ತರ ಫ್ರಾನ್ಸಿನಲ್ಲಿ ಜರ್ಮನರ ಹೊಸ ಯುದ್ಧ ಕ್ರಮ[illegible]ರದಿಂದ ಸಂಯುಕ್ತ ಸೇನೆಯು ಮುಂದಿನ ಮತ್ತೆ ಮುಂದ[illegible] [illegible]

[illegible] ಮುನೆಗಳನ್ನು ಬಿಟ್ಟು ಹೋಗುವ ವರೆಗೆ ಬ್ರಿಟಿಷ [illegible] ಹತ್ತಿರ ಸರಿದು ಸನೀಮ ಕಾಳಗ ಮಾಡುವುದು [illegible] ಆದರೆ ಬ್ರಿಟಿಷ ಕಾಲಾಳು ಸೈನಿಕರು ಬಹು ಪ್ರಯತ್ನದಿಂದ [illegible] ಸದಲ್ಲಿ ಜಯಪ್ರದರಾಗಿ ಶತ್ರುಗಳನ್ನು ಓಡಿಸಿದರು. ಶತ್ರುಗಳಿಗೆ ಮೊಟರ್ ಬಂಡಿಗಳಿಗೆ ಹೋಗಿ ಸೇರುವುದಕ್ಕೆ ಸಹಾ ಸಮಯ ದೊರೆಯಲಿಲ್ಲ. ಈಗ ಸಂಯುಕ್ತ ಸೇನೆಗಳು ಶತ್ರುಗಳು ಸ್ವಾಧೀನ [illegible] ಕೊಂಡ ಗ್ರಾಮಗಳಿಗೆ ಗುಂಡು ಹಾರಿಸುತ್ತಿದ್ದಾರೆ.

ಸಂಯುಕ್ತ ಕುದುರೆ ಪಡೆಯ ಸೇನೆಗಳು ತಾವು ಮಾಡಬಹುದಾದ್ದಕ್ಕಿಂತಲೂ ಹೆಚ್ಚಿನ ಕೆಲಸವನ್ನು ಮಾಡಿ ಎಡಪಾರ್ಶ್ವದಲಿ ಮೇಲ್ಮಾಯ್ದು ಬರುತ್ತಿದ್ದ ಜರ್ಮನರನ್ನು ಓಡಿಸಿರುವವು ಎಂತ ಪ್ರಕಟವಾಗಿದೆ.

ಸಂಯುಕ್ತ ಸೇನೆಗಳು ಮುಂದರಿಯುತ್ತಿರುವುದರಿಂದ ಅವರನ್ನು ತಡೆಯುವುದಕ್ಕಾಗಿ ಜರ್ಮನರು ಸಿಕ್ಕಿದವರನ್ನೆಲ್ಲಾ ಬೆಲ್ಜಿಯಮಿಗೆ ಕಳುಹಿಸುತ್ತಿದ್ದಾರೆ. ಬೆಲ್ಜಿಯಮಿನ ಕೆಲವು ಪಟ್ಟಣಗಳು ಜರ್ಮನ ಸೈನಿಕರಿಂದಲೇ ತುಂಬಿ ಹೋಗಿರುವವು.

ಎಂಟವರ್ಪಿಗೆ ಹೋಗಿದ್ದ ಜರ್ಮನ ನೌಸೇನೆಯು ಜರ್ಮನರ ಕೀಲ್ ಬಂದರದಲ್ಲಿರುವ ಯುದ್ಧ ಹಡಗಕ್ಕೆ ಹಿಂದೆರಳಿರುವುದು.

ಬೆಲ್ಜಿಯನ್ ಕರಾವಳಿಯಲ್ಲಿ ಬ್ರಿಟಿಷ ಯುದ್ಧ ಹಡಗಗಳು ಜರ್ಮನರೊಡನೆ ಕಾದಾಡುತ್ತಿವೆಂದೂ ಜರ್ಮನರ ಎರಡು ಸಮರ ನಾವೆಗಳನ್ನು ಓಡಿಸಿರುವರೆಂದೂ ತಿಳಿದುಬರುತ್ತದೆ. ಬ್ರಿಟಿಷರ ಯುದ್ಧಹಡಗಗಳು ಬೆಲ್ಜಿಯನ್ ಕರಾವಳಿಯಲ್ಲಿದ್ದ ವಿಶೇಷ ಕೆಲಸವನ್ನು ಮಾಡಿರುವವು. ರಾತ್ರಿಕಾಲ ಕಂದಕಗಳನ್ನು ಅಗಿಯುತ್ತಿದ್ದ ಶತ್ರುಗಳನ್ನು ಹಡಗಗಳ ದೀಪದಿಂದ ನೋಡಿ ಬೆಳಿಗ್ಯೆ ಅದೇ ಸ್ಥಳಕ್ಕೆ ಗುಂಡು ಹಾರಿಸಿದ್ದರಿಂದ ಶತ್ರುಗಳಲ್ಲಿ ೧೬೦೦ ಮಂದಿ ಪ್ರಾಣಾಪಾಯ ಹೊಂದಿದರು. ೬ ಬತ್ತೇರಿಗಳು ನಾಶವಾದವು. ಜರ್ಮನರ ಒಂದು ಜೆಪಲೀನ ವಾಯುನಾವೆಯನ್ನೂ ಮತ್ತೊಂದು ವಾಯುನಾವೆಯನ್ನೂ ಗುಂಡುಹಾರಿಸಿ ಕೆಡಪಿದರು. ಸೋಮವಾರ ಶತ್ರುಗಳ ಸಮರನಾವೆಗಳು ಬ್ರಿಟಿಷ ಯುದ್ಧನಾವೆಗಳ ಮೇಲ್ಮಾಯ್ದರೂ ಪ್ರಯೋಜನವಾಗಲಿಲ್ಲ.

ಸಂಯುಕ್ತ ಸೇನೆಗಳು ಬ್ರೂಗೆಸ್ ಮತ್ತು ಒಸ್ಟೆಂಡನ್ನು ಪುನಃ ಜರ್ಮನರಿಂದ ಪಡಕೊಂಡರು ಎಂಬ ವಾರ್ತೆಯು ಆಧಾರವಿಲ್ಲದಾದರೂ ಜರ್ಮನರು ಅಲ್ಲಿ ನಿಶ್ಕಷ್ಟ ಸ್ಥಿತಿಯಲ್ಲಿರುವರೆಂಬದು ಸಜವಾಗಿರುವುದು.

ಎಪ್ರೆ ಕಾಲಿವೆಯಲ್ಲಿ ಫ್ರೆಂಚರ ನಾಸೈನೀಕರು ಜರ್ಮನರ ಮೇಲೆ ದಿನವೆಲ್ಲಾ ಗುಂಡುಹಾರಿಸಿದರು. ರಾತ್ರಿಕಾಲ ಜರ್ಮನರ ಕಂದಕಗಳನ್ನು ನುಗ್ಗಿ ಸನೀನು ಕಾಳಗ ಮಾಡಿ ಅರ್ಧ ಘಂಟೆಯೊಳಗೆ ಹಿಂದರಿದರು. ಜರ್ಮನರ ಕಂದಕಗಳು ಸತ್ತ ಮತ್ತು ಘಾಯಪೊಡೆದ ಸೈನೀಕರಿಂದ ತುಂಬಿಹೋಗಿದೆ ೪೦೦ ಜರ್ಮನರು ಶೆರೆಹಿಡಿಯಲ್ಪಟ್ಟರು. ಫ್ರೆಂಚರಲ್ಲಿ ೧೦ ಮಂದಿ ಹತರಾದರು, ೧೦೦ ಮಂದಿ ಘಾಯಪೊಡೆದರು.

ತುರ್ಕಿ:— ತುರ್ಕರ "ಗೊಬೆನ್" ಮತ್ತು "ಬ್ರೆಸ್‌ಲೋ" ಯುದ್ಧನಾವೆಗಳಲ್ಲಿರುವ ಜರ್ಮನ್ ನಾವಿಕರನ್ನು ತೆಗೆಯಬೇಕೆಂದು ಬ್ರಿಟಿಷರ ಪ್ರತಿನಿಧಿಗಳು ತುರ್ಕೀ ಸರಕಾರವನ್ನು ಕೇಳಿಕೊಂಡರು. ಆದರೆ ತುರ್ಕಿಯು ಇದಕ್ಕೆ ಒಪ್ಪಲಿಲ್ಲ.

ಜಾಪಾನ್:—ಸಿಂಗ್‌ಟಾವೊದಿಂದ ಜರ್ಮನರ [illegible] ಡಿಸ್ಟ್ರೋಯರ್ ನಾವೆಯು ಕತ್ತಲೆಯಲ್ಲಿ ತಪ್ಪಿಸಿಕೊಂಡು [illegible] ಕಿಯೊಚೋಗೆ ೬೦ ಮೈಲು ದೂರದಲ್ಲಿ ಕರೆಗೆ [illegible]

ಜಪಾನರು ಕೆರೊಲಿನ್ ಆರ್ಚಿಪೆಲಾಗೋ [illegible] ರಲ್ಲು ಸ್ವಾಧೀನ ಮಾಡಿಕೊಂಡು ಅಲ್ಲಿ [illegible] ಒಂದು [illegible] ಗವನ್ನು ಮುಣುಗಿಸಿ [illegible] ವರು.

[illegible]
~~~~~~

ಎಮ್ಡೆನ್ ನಾವೆಯು ಈ ವರೆಗೆ ೧೫ ವ್ಯಾಪಾರದ ಹಡಗುಗಳನ್ನು ಮುಳುಗಿಸಿತೆಂತಲೂ ಇದರಿಂದ ಉಂಟಾದ ನಷ್ಟವು ೨ ಮಿಲಿಯ ಪವನುಗಳಾಗುವುದೆಂದೂ ಪ್ರಕಟವಾಗಿದೆ.

ರಣರಂಗದಲ್ಲಿರುವ ಬ್ರಿಟಿಷ ಸೈನಿಕರಿಗೆ ಯುದ್ಧ ಪ್ರಾರಂಭವಾದ ಮೊದಲಿನ ವಾರದಿಂದ ೧೦ ವಾರಗಳ ವರೆಗೆ ವಾರಕ್ಕೆ ೫॥ ಮಿಲಿಯ ಪವನಿನಂತೆ ಖರ್ಚಾಯಿತು. ಈಗ ಹೆಚ್ಚಿನ ಬೆಂಬಲ ಸೇನೆಯು ಕೂಡಿದ್ದರಿಂದ ಕಳೆದ ವಾರ ೮॥ ಮಿಲಿಯ ಪವನುಗಳ ಖರ್ಚಾಗಿರುವುದು.

ಪೂರ್ವ ರಣರಂಗ:—ವಾರ್ಸೋ ಪ್ರಾಂತ್ಯದಲ್ಲಿ ಜರ್ಮನರು ಹಿಮ್ಮೆಟ್ಟುತ್ತಿರುವರು. ಪಿಲಿಕಿಯ ನದಿಯ ಸಮೀಪ ಜರ್ಮನರು ಘಾಯ ಒಡೆದವರನ್ನೂ ತಮ್ಮ ಕೋಟೆ ಕೊತ್ತಲುಗಳ ನೆಲೆಗಳನ್ನೂ ಬಿಟ್ಟು ಓಡುತ್ತಿರುವರು.

~~~~~

ತಾ. 26ನೇ ಒಕ್ಟೋಬರ.

ಭಾರತೀಯರ ಸೈನಿಕರು ಶತ್ರುಗಳನ್ನು ಕಲಿತರು. ಈ ಸಮಯ ಭಾರತೀಯ ಸೈನಿಕರು ಕವಾತಿನಲ್ಲಿದ್ದರೂ ಶತ್ರುಗಳೊಡನೆ ಎದುರಾಡಲು ಹಿಂಜರಿಯಲಿಲ್ಲ. ಭಾರತೀಯ ಸೈನಿಕರ ಸುತ್ತಲೂ ದೊಡ್ಡ ಗುಂಡುಗಳು ಬಂದು ಬಿದ್ದರೂ ಅವರಲ್ಲಿ ಒಂದೇ ಒಂದು ಕಣ್ಣು ರೆಪ್ಪೆಯಾದರೂ ಅಲುಗಾಡಲಿಲ್ಲ. ಜರ್ಮನರಿಗೆ ಸಮೀಪದಲ್ಲಿ ಹೋಗಿ ಕಾದಾಡಲು ಆ ದಿನ ಅನಾನುಕೂಲವಾದ್ದರಿಂದ ಭಾರತೀಯ ಸೈನಿಕರು ಆ ದಿನ ವಿಷಾದಪಡುವ ಹಾಗಾಯಿತು.

ಜೋರ್ಜ ಸಾರ್ವಭೌಮರವರು ಭಾರತೀಯ ಸೈನಿಕರ ಪರವಾಗಿ ಒಂದು ಮೋಟರ್ ಎಂಬುಲೆನ್ಸ್ ಕೋರ್ಪ್ಸ ಎಂಬ ಘಾಯ ಪೊಡೆದವರನ್ನು ಚಿಕಿತ್ಸೆ ಮಾಡುವ ಸೇನೆಯನ್ನು ಕೊಟ್ಟಿರುವರು.

ಎಂಟವರ್ಪನ್ನು ಬಿಟ್ಟುಹೋದ ಬೆಲ್ಜಿಯನರ ಹಿಂದೆರಳುವ ಹಾಗೆ ಜರ್ಮನರು ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾಗಿರುವುದು.

ಬ್ರಿಟಿಷರ ನೌಕಾವಳಿಯು ಬೆಲ್ಜಿಯನ್ ಕರಾವಳಿಯಲ್ಲಿ ಜರ್ಮನರಿಗೆ ವಿಶೇಷ ನಷ್ಟವನ್ನು ಮಾಡಿದ್ದರಿಂದ ಜರ್ಮನರ ಮುಂದರಿಯುವಿಕೆಗೆ ತಡೆಕಟ್ಟಿದಂತಾಗಿರುವುದು. ಜರ್ಮನರು ಬ್ರಿಟಿಷರ ಯುದ್ಧನಾವೆಗಳಿಗೆ ಹೊಡೆಯುವದಕ್ಕೆ ಭಾರವಾದ ದೊಡ್ಡ ಫಿರಂಗಿಗಳನ್ನು ತರಿಸಿರುವರು. ರಣರಂಗದಲ್ಲಿರುವ ಎಲ್ಲಾ ಗ್ರಾಮಗಳು ಹಾಳಾಗಿ ಹೋಗಿರುವವು.

ಬ್ರುಸೆಲ್ಸಿನಲ್ಲಿ ಹಿಂದೆ ವಾಸವಾಗುತ್ತಿದ್ದ ಜರ್ಮನರು ಬ್ರುಸೆಲ್ಸ್ ಜರ್ಮನರಿಗೆ ವಶವಾದನಂತರ ಬ್ರುಸ್ಸೆಲ್ಸಿಗೆ ಹಿಂತಿರುಗಿದ್ದರು. ಪುನಃ ಅವರು ಪಟ್ಟಣವನ್ನು ಬಿಟ್ಟುಹೋಗಬೇಕಾಗಿ ಜರ್ಮನ್ ಸೇನಾಧಿಪತಿಯು ಅಪ್ಪಣೆ ಕೊಟ್ಟಿರುವನು.

ಜರ್ಮನರು ಸಂಯುಕ್ತ ಸೇನಾ ಎಡಪಾರ್ಶ್ವದಲ್ಲಿ ಡಿಕ್ಸ್‌ಮೂಡು, ವಾರಂಟೆನ್, ಅರ್ಮೆಂಟಿಯರ್ಸ್, ರೆಡಿಂಗೆವ್ ಮತ್ತು ಲಾಬಸ್ಸೆ ಎಂಬ ಸ್ಥಳಗಳಲ್ಲಿ ಸಂಯುಕ್ತ ಸೇನೆಯು ಮೇಲ್ಬಾಯ್ದು ಬಂದು ಹಿಮ್ಮೆಟ್ಟಿದರು. ರಣರಂಗದ ಇತರ ಕಡೆಯಲ್ಲಿಯೂ ಜರ್ಮನರು ಹಿಂದೆ ಸರಿದಿರುವರು. ಅಲ್ಸೆರ್ಸ ಪ್ರಸ್ಥಭೂಮಿಯ ಪೂರ್ವ ಮತ್ತು ಕೆರೊನ್ನೆಯ ಪಶ್ಚಿಮದಲ್ಲಿರುವ ಕ್ರಿಕೋರ್ಟಿನಲ್ಲಿಯೂ ಸೊಸ್ಸೊನ್ ಪ್ರಾಂತ್ಯದಲ್ಲಿಯೂ ಸೈಂಟ್ ಮಿಚ್ಚೆಲ್ ಪ್ರಾಂತ್ಯದಲ್ಲಿಯೂ ಮೇಲ್ಬಾಯಿದ ಜರ್ಮನರು ಹಿಂದೆ ಓಡಿರುವರು.

ಸಂಯುಕ್ತ ಸೇನೆಯು ಅರ್ಗೋನ್ನೆಯಲ್ಲಿಯೂ ಕುಸ ಮುಂದರಿದಿರುವುದು.

ಬೆಲ್ಜಿಯನ್ ಕರಾವಳಿಯಲ್ಲಿ ಬ್ರಿಟಿಷ ಯುದ್ಧ ಹಡಗ ಫಿರಂಗಿಗಳು ಹೋಗುವ ದೂರದ ವರೆಗೆ ಜರ್ಮನರು ತಮ್ಮ ನೆಲೆಗಳನ್ನು ಪುನಃ ಮಾಡಿಕೊಳ್ಳಲಾರರು ಎಂದು ಪ್ರಕಟವಾಗಿದೆ.

ಲಿಲ್ಲಿಯನ್ನು ಸಂಯುಕ್ತ ಸೇನೆಗಳು ಬೇಗನೇ ಜರ್ಮನರಿಂದ ಹಿಂದ ತೆಗೆದುಕೊಳ್ಳುವವು. ಸಂಯುಕ್ತ ಸೇನೆಗಳ ನೆಲೆಯು ಲಿಲ್ಲೆಗೆ ೮ ಮೈಲು ಪಶ್ಚಿಮದಲ್ಲಿ ಮಾತ್ರವಿದೆ. ಸಂಯುಕ್ತ ಸೇನೆಗಳು ದಿನೇ ದಿನೇ ಮುಂದರಿದು ಅಭಿವೃದ್ಧಿಯನ್ನು ಹೊಂದುತ್ತಲಿವೆಂದು ಎಲ್ಲಾ ಬಾತ್ಮಿದಾರರು ಹೇಳುವರು.

ಸಮುದ್ರ ಮತ್ತು ಲಾಬಸ್ಸೆಯ ಮಧ್ಯ [illegible] ಪ್ರಾರಂಭವಾಗಿರುವುದು. ಜರ್ಮನರು [illegible] ರುವರಾದರೂ ಬೆಲ್ಜಿಯನ್, ಫ್ರೆಂಚ ಮತ್ತು ಬ್ರಿಟಿಷ [illegible] ಹಿಂದೆ ದೂಡಲು [illegible]

ಬ್ಯಾಸ್ಸೆ ಪ್ರಾಂತ್ಯದಲ್ಲಿಯೂ ಜರ್ಮನರು ಕಠಿಣವಾಗಿ ಮೇಲ್ಬಾಯಿದರೂ ಎಲ್ಲಿಯೂ ಜಯಪ್ರದರಾಗಲಿಲ್ಲ. ಸಂಯುಕ್ತ ಸೇನೆಯು ಅರ್ಗೋನೆಯಲ್ಲಿಯೂ ಮುಂದರಿದಿರುವುದು

ಪೂರ್ವ ರಣರಂಗ: — ಜರ್ಮನರು ವಾರ್ಸೋ ಪ್ರಾಂತ್ಯದಿಂದ ಹಿಮ್ಮೆಟ್ಟುತ್ತಿದ್ದಾರೆ. ಇವನ್ಗೊರೊಡ್ ಮತ್ತು ನ್ಯೂ ಅಲೆಕ್ಸಾಂಡ್ರಿಯ ರಸ್ತೆಗಳಿಂದಲೂ ಆಸ್ಟ್ರಿಯನರೂ ಜರ್ಮನರೂ ಹಿಂದೆ ಓಡುತ್ತಿರುವರು. ಇವನ್ಗೊರೊಡಿನ ಕೋಟೆಗಳಿಗೆ ಶತ್ರುಗಳ ಫಿರಂಗಿಗಳಿಂದ ಹೆಚ್ಚಿನ ಬಾಧಕವಾಗಲಿಲ್ಲ.

ಗೆಲೀಸಿಯದಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ರುಷ್ಯರು ಪ್ರೈಜ್‌ಮ್ಯಸ್ಲಿನಿಂದ ವಿಸ್ಚುಲದ ವರೆಗೆ ಮುಂದರಿಯುತ್ತಿರುವಾಗ ಶತ್ರುಗಳ ೨೦೦೦ ಸೈನಿಕರನ್ನು ಸೆರೆಹಿಡಿದರು. ಪ್ರೈಜ್‌ಮ್ಯಸ್ಲಿನ ದಕ್ಷಿಣದಲ್ಲಿ ರುಷ್ಯರಿಗೆ ಜಯವಾಗುತ್ತಿದೆ. ಪ್ರೈಜೆಮ್ಯಸ್ಲಿನ ದಕ್ಷಿಣದಲ್ಲಿ ೧೦ ದಿವಸಗಳಿಂದ ಕದನ ನಡೆಯುತ್ತಿದೆ. ಆಸ್ಟ್ರಿಯನರಲ್ಲಿ ವಿಶೇಷ ನಷ್ಟವಾಗಿರುವುದು. ಆಸ್ಟ್ರಿಯ ಮತ್ತು ಜರ್ಮನರಲ್ಲಿ ಸೆರೆಬಿದ್ದವರು ಎಷ್ಟೋ ಹೆದರಿದವರಾಗಿರುವರು.

ಒಕ್ಟೋಬರ ತಾ. ೧೫ರೊಳಗೆ ವಾರ್ಸೋವನ್ನು ವಶಮಾಡಿಕೊಂಡು ಪಟ್ಟಣವನ್ನು ಪ್ರವೇಶಿಸಬೇಕೆಂದು ಕೈಸರರು ಸನ್ನಾಹ ಮಾಡಿದ್ದರು. ಕೈಸರರು ವಾರ್ಸೋವನ್ನು ಪ್ರವೇಶಿಸುವುದಕ್ಕಾಗಿ ಸ್ಕಾಲ ಎಂಬಲ್ಲಿ ಕಾಯುತ್ತಿದ್ದರು. ಆದರೆ ಇವರ ಆಲೋಚನೆಯು ವ್ಯರ್ಥವಾಯಿತು. ಈಗ ಜರ್ಮನರು ವಾರ್ಸೋದಿಂದ ಎಡೆಬಿಡದೆ ಓಡಿಹೋಗುತ್ತಿದ್ದಾರೆ. ಆಗೋಸ್ತು ತಿಂಗಳಲ್ಲಿ ಪಾರಿಸನ್ನು ಪ್ರವೇಶಿಸಬೇಕು ಎಂಬ ಕೈಸರರ ನಿರ್ಣಯವೂ ವ್ಯರ್ಥವಾಯಿತು. ನಂತರ ನಾನ್ಸಿಯನ್ನು ಪ್ರವೇಶಿಸ ಮಾಡಿದ ಪ್ರಯತ್ನವೂ ವ್ಯರ್ಥವಾಯಿತು. ಮೂರನೇದಾಗಿ ವಾರ್ಸೋವನ್ನು ಪ್ರವೇಶಿಸಲು ಮಾಡಿದ ಪ್ರಯತ್ನವೂ ನಿಷ್ಫಲವಾಯಿತು. ಜರ್ಮನರು ವಾರ್ಸೋ ಪ್ರಾಂತ್ಯದಿಂದ ಹಿಂಪಟ್ಟುವದರಲ್ಲೇ ಇದ್ದಾರೆ. ರುಷ್ಯನರು ಅವರನ್ನ ಹಿಂದಟ್ಟುತ್ತಿರುವರು. ರುಷ್ಯನರು ಶತ್ರುಗಳೊಡನೆ ೨೫೦ ಮೈಲು ವಿಸ್ತೀರ್ಣದಲ್ಲಿ ಕದನ ಮಾಡಬೇಕಾಗಿರುವುದು.

ಸರಜಾವೋ ಪಟ್ಟಣವು ಒಂದೆರಡು ದಿವಸಗಳಲ್ಲಿ ಮೊಂಟಿನಿಗ್ರೋ ಮತ್ತು ಸರ್ವಿಯರ ವಶವಾಗುವುದರಲ್ಲಿ ಅನುಮಾನವಿರದು. ಮುಖ್ಯ ಕೋಟೆಗಳೆಲ್ಲಾ ಸರ್ವಿಯ ಮೊಂಟಿನಿಗ್ರೋಯರ ಸ್ವಾಧೀನವಾಗಿರುವುದು. ಆಸ್ಟ್ರಿಯನರ ಕೈಯಲ್ಲಿ ಒಳಕೋಟೆಗಳು ಮಾತ್ರ ಉಳಿದಿರುವವು. ಇದು ಸಂಗ್ರಾಮ ಮುತ್ತಿಗೆ ಪ್ರಾರಂಭವಾದನಂತರ ತಯಾರಿಸಿದ ಹಂಗಾಮಿ ಕೋಟೆಗಳಾಗಿರುವವು.

ಹಿಂದೂಸ್ಥಾನದಿಂದ ರಣರಂಗಕ್ಕೆ ಹೊರಟ ಎಲ್ಲಾ ಭಾರತೀಯ ಸೈನಿಕರು ಫ್ರಾನ್ಸಿಗೆ ಸುರಕ್ಷಿತವಾಗಿ ತಲಪಿರುವರು. ಪ್ರಯಾಣದಲ್ಲಿ ಭಾರತೀಯ ಸೈನಿಕರಲ್ಲಿ ಒಬ್ಬನಿಗಾದರೂ ಪ್ರಾಣಾಪಾಯವಾಗಲಿಲ್ಲ. ಕುದುರೆಗಳಲ್ಲಿ ಕೆಲವು ಮಾತ್ರ ಪ್ರಾಣಾಪಾಯ ಹೊಂದಿದವು ಎಂತ ಪ್ರಕಟವಾಗಿದೆ.

~~~~~

ತಾ. 27ನೇ ಒಕ್ಟೋಬರ.

ಫ್ರಾನ್ಸಿನ ಎರ್ರಾಸ್, ಲಾಬಾಸ್ಸೆ ಮತ್ತು ಅರ್ಮೆಂಟೈಯರ್ಸ್‌ನಲ್ಲಿ ಕಠಿಣ ಕಾಳಗ ನಡಿಯುತ್ತಿರುವುದು. ವಿಶೇಷ ಬದಲಾವಣೆಯಾಗಲಿಲ್ಲ. ಲಾಬಾಸ್ಸೆಯ ಸುತ್ತಲಿನ ಕೆಲವು ನೆಲೆಗಳನ್ನು ಸಂಯುಕ್ತಸೇನೆಗಳು ಕಳಕೊಂಡರೂ ಅರ್ಮೆಂಟಿಯರ್ಸಿನ ಪೂರ್ವದಲ್ಲಿ ಕೆಲವು ಸ್ಥಳಗಳನ್ನು ಪಡಕೊಂಡಿರುವರು. ಐನೆಯ ಉತ್ತರದಲ್ಲಿ ಸಂಯುಕ್ತ ಸೇನಾ ತೋಪುಗಳು ಜರ್ಮನರ ಮೂರು ಬತ್ತೇರಿಗಳನ್ನು ನಾಶಪಡಿಸಿರುವವು.

ಜರ್ಮನರ ಮುಂದರಿದ ಸೇನೆಗೆ ಆಹಾರದ ಕೊರತೆ ಬಂದಿರುವುದು. ಬ್ರಿಟಿಷ ಸೈನಿಕರಿಗೆ ಒಳ್ಳೇ ಆಹಾರವಿರುವುದು. ಜರ್ಮನರಲ್ಲಿ ಹೆಚ್ಚಿನವರು ಹಿಂದೆ ಎರಡೇ ತಿಂಗಳು ಕೆಲಸಮಾಡಿದವರಾಗಿರುವರು. ಹೀಗಿದ್ದರೂ ಶತ್ರುಗಳ ಸೈನಿಕರು ರಣರಂಗದಲ್ಲಿ ಚೆನ್ನಾಗಿ ಕಾದಾಡುತ್ತಿರುವರು.

ಲಿಲ್ಲೆ ಮತ್ತು ಡನ್‌ಕರ್ಕಿನ ನಡುವೆ ನಡೆಯುವ ಕದನವೇ ಈ ಯುದ್ಧದಲ್ಲಿ ಕಠಿಣ ಕಾಳಗವಾಗಿರುವುದು. ಜರ್ಮನರ ಸೋಲು ಮತ್ತು ಗೆಲುವು ಇಲ್ಲಿಯ ಕದನದಲ್ಲಿ ಹೊಂದಿಕೊಂಡಿದೆ. ಕಳೆದ ಎರಡು ದಿವಸಗಳಲ್ಲಿ ಶತ್ರುಗಳಲ್ಲಿ ವಿಶೇಷ ನಷ್ಟವಾಗಿರುವುದು. [illegible]

ರುವವು. ಘಾಯ ಒಡೆದ ೪೦೦೦ ಜರ್ಮನರನ್ನು ಬ್ರುಗೆಸಿಗೆ ಕೊಂಡು ಹೋಗಿರುವರು. ಇವರಲ್ಲಿ ಹೆಚ್ಚಿನವರು ಬ್ರಿಟಿಷರ ನೌಕಾವಳಿ ಗುಂಡುಗಳಿಂದ ಗಾಯ ಒಡೆದವರಾಗಿರುವರು.

ಸಂಯುಕ್ತ ಸೇನೆಗಳ ನೆಲೆಯು ಒಸ್ಟೆಂಡಿಗೆ ಸಮೀಪದ ವರೆಗೆ ವಿಸ್ತರಿಸಿರುವುದು. ತನ್ಮಧ್ಯೆ ಬ್ರಿಟಿಷ ಕುದುರೆ ಪಡೆಯು ಥೌರ್ ಎಂಬಲ್ಲಿಗೆ ಮುಂದರಿಯುತ್ತಿರುವುದು.

ಥೈಮ್ ಕೋರ್ಟು ಎಂಬಲ್ಲಿ ಫ್ರೆಂಚರು ವಿಶಾಲವಾದ ಸ್ಥಳವನ್ನು ಪಡಕೊಂಡಿರುವರು. ಇಲ್ಲಿ ನಡೆದ ಕದನದಲ್ಲಿ ಜರ್ಮನರಲ್ಲಿ ಬಹಳ ಮಂದಿ ಮಡಿದು ಹೋದ್ದರಿಂದ ಅವರನ್ನು ಹೂಳಿಡುವರೆ ತತ್ಕಾಲಿಕ ಯುದ್ಧ ನಿಲ್ಲಿಸಬೇಕೆಂದು ಜರ್ಮನರು ಫ್ರೆಂಚರನ್ನು ವಿಜ್ಞಾಪಿಸಿಕೊಂಡರು. ಆದರೆ ಫ್ರೆಂಚರು ನಿರಾಕರಿಸಿ, ಕದನವನ್ನು ಮುಂದರಿಸಿದರು ಎಂತ ಪ್ರಕಟವಾಗಿದೆ.

ಬೆಲ್ಜಿಯನರು ಕೆಲವು ಸ್ಥಳಗಳಲ್ಲಿ ಜರ್ಮನರೊಡನೆ ಕಾದಾಡಿ ಅವರನ್ನು ಹಿಂದಟ್ಟಿರುವರು.

ಅರ್ಮೆಂಟಿಯರ್ಸ್ ಮತ್ತು ಲಿಲ್ಲೆಯಲ್ಲಿ ಸಂಯುಕ್ತ ಸೇನೆಗಳು ಮುಂದರಿದಿರುವವು. ಕೆಲವು ದಿವಸದ ವರೆಗೆ ಜರ್ಮನರು ದಿವಾರಾತ್ರಿ ಮೇಲ್ಬಾಯ್ದು ಬಂದರೂ ಹಿಮ್ಮೆಟ್ಟಿದರು. ಬೆಲ್ಜಿಯನರೊಡನೆ ಬ್ರಿಟಿಷ ಯುದ್ಧ ಹಡಗಗಳು ಸೇರಿ ನಿಯೊಪೋರ್ಟಿನಲ್ಲಿ ಮೇಲ್ಬಾಯ್ದು ಬಂದ ಜರ್ಮನರನ್ನು ಹಿಂದಟ್ಟಿರುವರು. ಜರ್ಮನರಲ್ಲಿ ವಿಶೇಷ ನಷ್ಟವಾಗಿರುವುದು. ಒಸ್ಟೆಂಡಿನಲ್ಲಿರುವ ಜರ್ಮನ ಬತ್ತೇರಿಗಳಿಗೂ ಬ್ರಿಟಿಷರು ಗುಂಡು ಹಾರಿಸಿರುವರು. ಬೆಲ್ಜಿಯನ್ ಕರಾವಳಿಯಲ್ಲಿ ನಡೆದ ಕದನದಲ್ಲಿ ಶತ್ರುಗಳಲ್ಲಿ ೧೦೦೦ ಮಂದಿ ಹತರಾಗಿರುವರು. ಬ್ರಿಟಿಷ್ ನೌಕಾವಳಿಯ ೬ ಅಂಗುಲ ಬಾಯಿಯ ಫಿರಂಗಿಗಳಿಂದ ಜರ್ಮನರ ಬತ್ತೇರಿಗಳೂ ಕೆಲವು ಸೇನಾ ನೆಲೆಗಳೂ ಪೂರ್ಣ ಹಾಳಾಗಿರುವುದು. ಜರ್ಮನರ ಕಂದಕಗಳೆಲಾ ನಿಷ್ಪ್ರಯೋಜಕವಾಗಿ ಹೋದವು. ಬ್ರಿಟಿಷರ ಯುದ್ಧ ಹಡಗಗಳನ್ನು ನಾಶ ಮಾಡಲು ಯತ್ನಿಸಿದ ಜರ್ಮನರ ವಾಯು ನಾವೆಗಳ ಕೆಲಸವೂ ನಿರರ್ಥಕವಾಯಿತು.

ಜರ್ಮನರ ೯ ಕ್ರೂಜರ್ ಯುದ್ಧ ನಾವೆಗಳು ಮಹಾಸಾಗರದಲ್ಲಿವೆ, ಸಂಯುಕ್ತ ಬಲದ ೭೦ ಯುದ್ಧ ನಾವೆಗಳು ಅವುಗಳನ್ನು ಹುಡುಕುತ್ತಿವೆ, ಬ್ರಿಟಿಷರ ಬಹು ವೇಗವಾಗಿ ಹೋಗುವ ಕ್ರೂಜರುಗಳೂ ಇವುಗಳಲ್ಲಿ ಸೇರಿವೆ. ಸಾಗರಗಳು ಬಹು ವಿಶಾಲವಾಗಿರುವುದರಿಂದ ಶತ್ರುಗಳ ನಾವೆಗಳನ್ನು ಹುಡುಕಿ ನಾಶಮಾಡುವುದಕ್ಕೆ ಕಾಲವೂ ತಾಳ್ಮೆಯೂ ಬೇಕಾಗಿರುವುದು. ಬ್ರಿಟಿಷರ ೪೦೦೦ ಹಡಗಗಳಲ್ಲಿ ಶತ್ರುಗಳು ಈ ವರೆಗೆ ೨೭ ಹಡಗಗಳನ್ನು ಮಾತ್ರ ಮುಳುಗಿಸಿದರು. ಈ ಹಡಗಗಳ ೯ ಸಾವಿರ ಪ್ರಯಾಣದಲ್ಲಿ ೧೦೦ಂಕ್ಕೆ ೫ರಂತೆ ಮಾತ್ರ ತಡೆಯಾಯಿತು. ಆದುದರಿಂದ ಧೂರುವದಕ್ಕೆ ಕಾರಣವಿಲ್ಲವೆಂಬದಾಗಿ ಸರಕಾರದವರು ಪ್ರಕಟಿಸಿರುವರು.

ಅತ್ಲಾಂಟಿಕ ಸಾಗರದಲ್ಲಿ ಜರ್ಮನರ ಒಂದು ಕ್ರೂಜರ್ ನಾವೆಯು ಬ್ರಿಟಿಷರ ೧೭ ವ್ಯಾಪಾರದ ಹಡಗಗಳನ್ನು ಮುಳುಗಿಸಿರುವದು ಎಂಬದಾಗಿಯೂ ಮುಳುಗಿಹೋದ ಹಡಗಗಳ ನಾವಿಕರು "ಕ್ರೆಫೆಲ್ಡ್" ಎಂಬ ಹಡಗದಲ್ಲಿ ಲಾಸ್ ಪಾಲ್ಮಸಿಗೆ ಬಂದು ತಲಪಿರುವರೆಂದೂ ವಾರ್ತೆ ಬಂದಿರುವುದು. ಈ ಹಡಗಗಳ ಒಟ್ಟು ಭರಾವಣೆಯು ೬೦ ಸಾವಿರ ಟನ್‌ಗಳಾಗಿರುವುದು.

ನ್ಯೂ ಫೌಂಡುಲೇಂಡಿನ ಸಹಾಯ ಸೇನೆಯು ಇಂಗ್ಲಾಂಡಿಗೆ ತಲಪಿರುವುದು.

ರುಷ್ಯರ ಸೇನೆಯು ವಿಸ್ಚುಲ ನದಿಯನ್ನು ದಾಟಿರುವುದು ಆಸ್ಟ್ರಿಯನರೂ ಜರ್ಮನರೂ ಹಿಮ್ಮೆಟ್ಟುತ್ತಿರುವರು. ಇವನ್ಗೊರೊಡಿನಲ್ಲಿ ಜರ್ಮನರು ಕಂದಕಗಳಲ್ಲಿ ಬಿಟ್ಟುಹೋದ ವಿಶೇಷ ಯುದ್ಧ ಸಾಹಿತ್ಯಗಳು ರುಷ್ಯನರಿಗೆ ಸಿಕ್ಕಿರುವವು.

ವಿಸ್ಚುಲ ನದಿಯ ದಡದಲ್ಲಿರುವ [illegible] ಮತ್ತು [illegible] ನದಿಯ ದಡದಲ್ಲಿರುವ [illegible] ಎಂಬಲ್ಲಿ ಆಸ್ಟ್ರಿಯನರು ರುಷ್ಯರೊಡನೆ ಜೀವದ ಮರುಕ ಇಲ್ಲದೆ ಕಾದಾಡುತ್ತಿರುವರು.

[illegible] ಫ್ರೆಂಚರ ಎರಡು ಯುದ್ಧ ಹಡಗಗಳು [illegible] ಮತ್ತು [illegible] ಬಂದರಗಳಿಗೆ ಗುಂಡು ಹಾರಿಸುತ್ತಲಿವೆ.

[illegible]

ತಾ. 28ನೇ ಒಕ್ಟೋಬರ.

ಸಮುದ್ರ ಕರಾವಳಿಯಿಂದ ಎರ್‍ರಾಸಿನ ದಕ್ಷಿಣದ ವರೆಗೆ ಜರ್ಮನರು ಬಹು ಕಠಿಣವಾಗಿ ಮೇಲ್ಬಾಯ್ದು ಬಂದರೂ ಪ್ರತಿ ಒಂದು ಕಡೆಯಲ್ಲಿ ಹಿಮ್ಮೆಟ್ಟಿರುವರು. ಅರ್ಗೋನ್ನೆಯಲ್ಲಿ ಸಂಯುಕ್ತ ಸೇನೆಯು ವಾರ್ನೆಸಿನಿಂದ ಏನೆಗೆ ಹೋಗುವ ದಾರಿಯಲ್ಲಿರುವ ಸಿಲಕೋರ್ಟ್ಸ ಎಂಬ ಗ್ರಾಮವನ್ನು ಸ್ವಾಧೀನಮಾಡಿಕೊಂಡಿರುವದು.

ಫ್ರೆಂಚರ ಅರ್ಧ ಮಿಲಿಯ ಹೊಸ ಸೈನಿಕರು ತಯಾರಾಗಿರುವರು.

ಲಿಲ್ಲೆಯ ಪಶ್ಚಿಮದಲ್ಲಿ ೨೦೦೦ ಬ್ರಿಟಿಷರನ್ನೂ ಕೆಲವು ಮೆಶಿನ್ ಗನ್ ಎಂಬ ಫಿರಂಗಿಗಳನ್ನೂ ಜರ್ಮನರು ಶೆರೆ ಹಿಡಿದಿರುವರೆಂಬದಾಗಿ ಜರ್ಮನರು ಪ್ರಕಟಿಸಿದ್ದಾರೆ.

ಮ್ಯೂಸ್ ನದಿಯ ಪ್ರಾಂತ್ಯದಲ್ಲಿರುವ ಗುಡ್ಡಗಳಲ್ಲಿ ಇಟ್ಟಿರುವ ಫ್ರೆಂಚರ ದೊಡ್ಡ ಫಿರಂಗಿಗಳು ಪುನಃ ಜರ್ಮನರ ಮೂರು ಬತ್ತೇರಿಗಳನ್ನು ನಾಶಪಡಿಸಿರುವವು.

ಫ್ರೆಂಚರ ಒಂದು ಡಿಸ್ಟ್ರೋಯರ್ ನಾವೆಗೆ ಒಸ್ಟೆಂಡಿನಿಂದ ಜರ್ಮನರು ಗುಂಡು ಹಾರಿಸಿದರು. ಫ್ರೆಂಚರ ಡಿಸ್ಟ್ರೋಯರ್ ನಾವೆಯು ಹಿಂದೆ ೬ ಗುಂಡು ಹಾರಿಸಿತು. ಇದು ಒಂದು ಹೊಟೇಲಿಗೆ ಬಿದ್ದು ಅಲ್ಲಿ ಊಟಮಾಡುತ್ತಿದ್ದ ಒಬ್ಬ ಜರ್ಮನ್ ಆಫೀಸರನು ಹತನಾದನು. ಇತರ ೩ ಸೈನಿಕರು ಘಾಯಪೊಡೆದರು.

ಒಸ್ಟೆಂಡಿನಿಂದ ನ್ಯೂಪೋರ್ಟಿನ ನಡುವೆ ಕಠಿಣ ಕಾಳಗ ನಡೆಯುತ್ತಿರುವುದು. ಬೆಲ್ಜಿಯನರು ಬಹು ಶೂರತನದಿಂದ ಯ್ಸರ್ ಕಾಲುವೆಯನ್ನು ಕಾಪಾಡುತ್ತಿರುವರು. ಎಂಟವರ್ಪಿನಿಂದ ಜರ್ಮನರ ಗುಂಪು ಗುಂಪು ಸೇನೆಯು ಶರೌಟು ಮತ್ತು ವೆಸ್ಟೆಂಡಿಗೆ ಬರುತ್ತಿದೆ. ಕಾಳಗವು ಬಹು ಕಠಿಣವಾಗಿರುವುದು. ಘಾಯಪೊಡೆದ ಜರ್ಮನರನ್ನು ತುಂಬಿಸಿದ ದೊಡ್ಡ ದೊಡ್ಡ ಅಗ್ಗಾಡಿಗಳು ಬ್ರುಗೆಸಿಗೆ ಬರುತ್ತಿದೆ. ಡಾಕ್ಟರರೂ, ಶೈತ್ಯೋಪಚಾರ ನಡಿಸುವ ಸಾಹಿತ್ಯಗಳೂ ಸಾಲದೆ ಹೋಗಿರುವವು. ನ್ಯೂಯೊಪೋರ್ಟ ಮತ್ತು ಒಸ್ಟೆಂಡಿನ ಮಧ್ಯೆ ಇರುವ ಒಂದೇ ರಣರಂಗದಲ್ಲಿ ೧೫೦೦ ಜರ್ಮನರನ್ನು ಸುಟ್ಟುಹಾಕಿದರು. ಜರ್ಮನರಿಗೆ ಶೆರೆ ಬಿದ್ದ ಕೆಲವು ಬೆಲ್ಜಿಯನರು ಬ್ರುಗೆಸಿಗೆ ತಲಪಿರುವರು.

ಬೆಲ್ಜಿಯಮಿನಲ್ಲಿರುವ ಜರ್ಮನರು ಅವರ ದಾರಿಯ ಸಂಬಂಧ ಬಹು ಭಯ ಪಟ್ಟಿರುವರು. ಒಸ್ಟೆಂಡಿನಿಂದ ಹಿಂದೆ ಸರಿಯುವ ಸಂದರ್ಭ ಬಿದ್ದರೆ ಕೂಡ್ಲೇ ಅವರನ್ನು ವೈಯ್ಯುವರೆ ೨೦೦ ಬಂಡಿಗಳು ಸಿದ್ಧವಾಗಿರುವವು. ಬ್ರುಗೆಸನಲ್ಲಿದ್ದ ಘಾಯ ಒಡೆದ ಜರ್ಮನರನ್ನು ಘೆಂಟಿಗೆ ಸಾಗಿಸಿರುವರು. ಬ್ರುಗೆಸ್ ಮತ್ತು ಘೆಂಟಿಗೆ ಮಧ್ಯೆ ಇರುವ ವ್ಯವಹಾರವನ್ನು ಬೆಲ್ಜಿಯನರು ಮುರಿದು ಬಿಡುವ ಪ್ರಯತ್ನದಲ್ಲಿದ್ದಾರೆಂತ ತಿಳಿದು ಬರುತ್ತದೆ.

ತಾ. ೨೪ರಲ್ಲಿ ಜರ್ಮನರ ಬಲವಾದ ಸೇನೆಯು ಕಠಿಣ ಕಾಳಗ ಮಾಡಿ ಯ್ಸರ್ ನದಿಯನ್ನು ದಾಟಿರುವುದು. ಸಂಯುಕ್ತ ಸೇನೆಗಳಿಗೆ ಎಪ್ರೆಯ ಪೂರ್ವದಲ್ಲಿ ಬೆಂಬಲ ಸೇನೆಯು ಬಂದು ಕೂಡಿತು, ಆದರೆ ಜರ್ಮನರು ಮುಂದರಿದು ೫೦೦ ಬ್ರಿಟಿಷರನ್ನು ಶೆರೆ ಹಿಡಿದರು. ಜರ್ಮನರು ಇನ್ನೂ ರೌಲರ್ಸನ್ನು ಸ್ವಾಧೀನ ಮಾಡಿಕೊಳ್ಳುವ ಕೆಲಸದಲ್ಲಿ ನಿರತರಾಗಿರುವರೆಂತ ಜರ್ಮನರು ಪ್ರಕಟಿಸಿರುವರು.

ನ್ಯೂಪೋರ್ಟಿನಲ್ಲಿ ಬ್ರಿಟಿಷರ ಕ್ರೂಜರ್ ನಾವೆಯು ಜರ್ಮನರ ಕಂದಕಗಳಿಗೆ ಗುಂಡು ಹಾರಿಸುತ್ತಿರುವಾಗ ಜರ್ಮನರ ಜನರಲ್ ವನ್‌ಟ್ರಿಫ್ ಮತ್ತು ಅವನ ಪರಿವಾರದವರೆಲ್ಲರೂ ಫಿರಂಗಿ ಗುಂಡುಗಳಿಗೆ ಆಹುತಿಯಾಗಿ ಹತರಾದರು.

ಬ್ರಿಟಿಷರ (ಬೇಡರ್) ಎಂಬ ಡಿಸ್ಟ್ರೋಯರ್ ಯುದ್ಧ ನಾವೆಯು ಜರ್ಮನರ ಒಂದು ಸಮರ ನಾವೆಯನ್ನು ಮುಳುಗಿಸಿರುವುದು.

ಭಾರತೀಯ ಸೈನಿಕರು ಫ್ರೆಂಚರ ದುರ್ಗಗಳಿರುವ ಒಂದು ಪಟ್ಟಣದಲ್ಲಿ ಇರುವರು. [illegible]

[illegible]

ಲಾಹೋರ್ ಮತ್ತು ಮೀರತಿನ ಭಾರತೀಯ ಡಿವಿಜನ್ ಸೇನೆಗೆ ಸರ್ ಜೇಮ್ಸ್ ವಿಲ್‌ಕೊಕ್ಸರು ಸೇನಾಧಿಪತಿಯಾಗಿರುವರು.

ನ್ಯೂಪೋರ್ಟ ಮತ್ತು ಲೈಸ್ ನದಿಯ ಸಮೀಪ ಕಠಿಣ ಕಾಳಗ ನಡೆಯುತ್ತಿದೆ. ನ್ಯೂಪೋರ್ಟ ಮತ್ತು ಡಿಕ್ಸ್‌ಮೂಡಿನ ಮಧ್ಯೆ ಜರ್ಮನರು ಯ್ಸರ್ ನದಿಯನ್ನು ದಾಟಿದರು. ಲಿಲ್ಲೆಯ ದಕ್ಷಿಣ ಮತ್ತು ಪಶ್ಚಿಮದಲ್ಲಿ ಜರ್ಮನರು ಬಲವಾಗಿ ಮೇಲ್ಬಾಯ್ದು ಬಂದರೂ ಹಿಮ್ಮೆಟ್ಟಿದರು. ಓಯಿಸೆ ಮತ್ತು ಅರ್ಗೋನ್ನೆಯಲ್ಲಿ ಬದಲಾವಣೆಯಾಗಲಿಲ್ಲ. ಸ್ವೊಸ್ಟ್ಯೂನ್ ಮತ್ತು ಕೆರೊನ್ನೆ ಪ್ರಾಂತ್ಯದಲ್ಲಿ ಸಂಯುಕ್ತ ಸೇನೆಗಳು ಸ್ವಲ್ಪ ಮುಂದರಿದಿರುವವು.

ಮ್ಯೂಸಿನ ಶಿಖರದಲ್ಲಿ ಫಿರಂಗಿ ಕಾಳಗ ನಡೆದಿರುವುದು. ಫ್ರೆಂಚರ ದೊಡ್ಡ ಫಿರಂಗಿಗಳು ಥಿಯಾನ್‌ಕೋರ್ಟಿನ ದಾರಿಯನ್ನು ಸ್ವಾಧೀನ ಮಾಡಿಕೊಂಡಿರುವವು. ಇದು ಸೆಂಟ್ ಮಿಚ್ಚೆಲಿಗೆ ಹೋಗುವ ಜರ್ಮನರ ಮುಖ್ಯ ದಾರಿಯಾಗಿರುವುದು.

ಅರ್ಗೋನ್ನೆಯಲ್ಲಿ ಜರ್ಮನರ ಒಂದು ಕಾಲಾಳು ರೆಜಿಮೆಂಟ್ ಸೇನೆಯನ್ನು ಫ್ರೆಂಚರು ಮುರಿಯಬಡಿದರು.

ಜರ್ಮನರ ವಾಯುನಾವಿಕರು ವಾರ್‌ಶೋ ಪಟ್ಟಣದ ಮೇಲೆ ಬೊಂಬು ಬಿಸಾಡಿದರು. ಇದರಿಂದ ೧೬೮ ಮಂದಿ ಘಾಯಪೊಡೆದರು. ಘಾಯಪೊಡೆದವರಲ್ಲಿ ಹೆಚ್ಚಿನವರು ಮಕ್ಕಳು. ೯ ಮಂದಿ ಮಾತ್ರ ಸೈನಿಕರು.

ಪಿಲಿಟ್ಜ ನದಿಯ ಉತ್ತರದಲ್ಲಿರುವ ಜರ್ಮನರು ಸ್ಕರ್ನೆವಿಡದ ವರೆಗೆ ಹಿಂದೆ ಸರಿದಿರುವರು. ೨೫ ಮೈಲು ವಿಸ್ತೀರ್ಣದಲ್ಲಿ ಕಠಿಣ ಕಾಳಗ ನಡೆಯುತ್ತಿದೆ. ಆಸ್ಟ್ರಿಯನರು ವಿಸ್ಟುಲವನ್ನು ಸ್ವಾಧೀನಮಾಡಿಕೊಳ್ಳಲು ಬಹು ಪ್ರಯತ್ನಪಡುತ್ತಿರುವರು. ಆದರೆ ರುಶ್ಯನರು ವಿಸ್ಟುಲ ನದಿಯನ್ನು ದಾಟುತ್ತಲಿರುವರು.

ದಕ್ಷಿಣದಲ್ಲಿ ಜರ್ಮನರು ತಮ್ಮ ನೆಲೆಗಳನ್ನು ಇನ್ನೂ ಕಾಪಾಡಿಕೊಂಡಿರುವರು. ಆದರೆ ಆಸ್ಟ್ರಿಯನರು ಸಾನ್ ನದಿಯ ಹಿಂದಕ್ಕೆ ಸರಿದಿರುವರು. ಪ್ರ್ಸೆಮ್ಸಿಲಿನ ಉತ್ತರ ಮತ್ತು ದಕ್ಷಿಣದಲ್ಲಿ ಕದನವು ನಡೆಯುತ್ತಿದೆ. ಇಲ್ಲಿರುವ ಆಸ್ಟ್ರಿಯನರು ಕಳೆದ ತಿಂಗಳಲ್ಲಿ ಹಿಂದಕ್ಕೆ ಸರಿದವರಾಗಿರುವರು. ಆದರೆ ಈಗ ಜರ್ಮನ ಆಫೀಸರನು ಈ ಸೇನೆಯನ್ನು ನಡಿಸುತ್ತಿರುವನು.

ತಾ. 29ನೇ ಒಕ್ಟೋಬರ.

ಜರ್ಮನರಿಗೆ ವಿಶೇಷ ಬೆಂಬಲಸೇನೆಯು ಬಂದು ಕೂಡಿರುವದಾದರೂ ಸಂಯುಕ್ತ ಸೇನೆಗಳ ಸ್ಥಿತಿಯು ತೃಪ್ತಿಕರವಾಗಿಯೇ ಇರುವುದು. ಶತ್ರುಗಳಿಗೆ ಲಬಸ್ಸೆಯಲ್ಲಿ ಸ್ವಲ್ಪ ಜಯವಾಗಿರುವುದರಿಂದ ಇಲ್ಲಿಯ ಕದನವು ಪುನಃ ಕೆಲವು ದಿವಸಗಳ ವರೆಗೆ ನಡೆಯಬಹುದು. ಹ್ಯಾಗೂ ಒಂದು ಪಕ್ಷದೊಳಗೆ ಸಂಯುಕ್ತ ಸೇನೆಗಳಿಗೆ ಇಲ್ಲಿ ಪೂರಾ ಜಯವಾಗುವದೆಂದು ನಂಬಲು ಕಾರಣವಿದೆ.

ಫ್ರಾನ್ಸಿನ ಉತ್ತರ ಪ್ರದೇಶದಲ್ಲಿ ಮತ್ತು ಬೆಲ್ಜಿಯಮಿನಲ್ಲಿ ಸಂಯುಕ್ತಸೇನೆಯ ಒಂದು ಡಿವಿಜನ್ ಸೇನೆಯು ಜರ್ಮನರೊಡನೆ ಎದುರಾಡಿದ ಸ್ಥಳದಲ್ಲಿ ಜರ್ಮನರ ೧೫೦೦ ಶವಗಳು ಬಿದ್ದಿದ್ದವು. ಸಂಯುಕ್ತಸೇನೆಯು ಜರ್ಮನರ ಮೇಲ್ಬಾಯ್ದು ಒಂದೇ ಸಾರಿ ೬೦೦ ಮಂದಿಯನ್ನು ಶೆರೆ ಹಿಡಿದಿರುವರು.

ಯ್ಸರ್ ನದಿಯನ್ನು ದಾಟಿದ ಜರ್ಮನರು ಮುಂದರಿಯಲಿಲ್ಲ. ಸಂಯುಕ್ತ ಸೇನಾ ನೆಲೆಯು ಈಗ ಎಪ್ರೆಯಿಂದ ರೌಲರ್ಸ ವರೆಗೂ ಅರ್ಮೆಂಟಿಯರ್ಸ ಮತ್ತು ಲಿಲ್ಲೆಯ ವರೆಗೂ ಲಬಸ್ಸೆ ಮತ್ತು ಲೆನ್ಸಿನ ವರೆಗೂ ವಿಸ್ತರಿಸಿರುವುದು. ಈಗ ಕಳೆದ ಕೆಲವು ದಿವಸಗಳ ಯುದ್ಧದಲ್ಲಿ ಶತ್ರುಗಳು ವಿಶೇಷ ನಷ್ಟ ಹೊಂದಿರುವಂತೆ ತೋರಿ ಬರುತ್ತದೆ.

ಜರ್ಮನರ ವಾಯು ನಾವಿಕನು ವೆರ್ಡನಿನ ಮೇಲೆ ಕೆಲವು ಬೊಂಬುಗಳನ್ನು ಬಿಸಾಡಿರುವನು. ಒಂದು ಬೊಂಬಿನಿಂದ ಮನೆಯ ಮಾಡು ನಾಶವಾಯಿತು. ಮತ್ತೊಂದು [illegible]ಯಲ್ಲ. ಆರೆ ಬೊಂಬುಗಳು ಮ್ಯೂಸ್ ನದಿಗೆ ಬಿದ್ದಿರುವವು.

[illegible]

ಜರ್ಮನರ ಕಂದಕಗಳನ್ನು ತೀರಿಂದ ತುಂಬಿಸಿದರು. ಇಲ್ಲಿ ಬೆಲ್ಜಿಯನರು ೧೫೦೦ ಜರ್ಮನರನ್ನು ಹಿಡಿದರು.

ಫ್ರೆಂಚರ ಒಬ್ಬ ವಿಮಾನಗಾಮಿಯು ಏಮಿಯೆನ್ಸಿನಲ್ಲಿ ಜರ್ಮನರ ವಾಯು ನಾವೆಯನ್ನು ಹಿಂದಟ್ಟಿ ಕೆಳಗೆ ದೊಬ್ಬಿರುವನು.

ಶತ್ರುಗಳು ನ್ಯೂಯೊಪೋರ್ಟನ್ನು ಬಿಟ್ಟು ವೆಸ್ಟೆಂಡಿಗೆ ಹೋಗಿರುವರು. ಶತ್ರುಗಳಲ್ಲಿ ೪೦೦೦ ಮಂದಿ ಹತರಾದರು.

ಬಂಗಾಳ ಸೈನಿಕರ ಪ್ರತಾಪವು.

ಅಬರ್ಡೀನಿಗೆ ಬಂದು ತಲಪಿದ, ತೋಪು ಸೇನೆಯ ಕೆಳ ದಳವಾಯಿಯೊಬ್ಬನು ಬಂಗಾಳ ಸೈನಿಕರ ಪ್ರತಾಪವನ್ನು ಕುರಿತು ಈ ರೀತಿ ಹೇಳಿರುವನು:—ಶತ್ರುಗಳು ನಮ್ಮ ನೆಲೆಗಳಲ್ಲೆಲ್ಲಾ ಒತ್ತಿ ಬಂದು, ಶತ್ರುಗಳ ತೋಪು ಸಹಿತವಾದ ಕಾಲಾಳು ಬ್ರಿಗೇಡ್ ಸೇನೆಯು ಫಕ್ಕನೆ ನಮ್ಮ ಮೇಲೆ ಬಿತ್ತು. ಇಲ್ಲಿ ನಮ್ಮ ಸೈನಿಕರು ಬಹಳ ದಣಿದುಹೋದರೆಂತ ನಾನು ಭಾವಿಸಿದೆನು. ಜರ್ಮನರು ನಮ್ಮ ಕಂದಕಗಳ ಅರ್ಧ ದಾರಿಯ ವರೆಗೆ ಬಂದಿದ್ದರು. ಕೂಡಲೇ ಹಿಂದಿನ ದಿವಸವೇ ತಲಪಿದ್ದ ಭಾರತೀಯರು ಬೆಂಬಲ ಸೇನೆಯಾಗಿ ಕರಲ್ಪಟ್ಟು ಎದುರಾಡಲು ಹುಕುಂ ಪಡೆದರು. ಹುಕುಂ ಆದ ಕೂಡಲೇ ಅವರು ಮುಂದೆ ಹಾರಿ, ನಮ್ಮ ತೋಪುಗಳ ಗುಂಡುಗಳು ಹೋಗುವ ದಾರಿಯನ್ನು ತಪ್ಪಿಸುವ ಬಗ್ಗೆ ಸ್ವಲ್ಪ ಸುತ್ತು ದಾರಿಯನ್ನು ಹಿಡಿದು, ಕರ್ಕಶವಾದ ಆರ್ಭಟಮಾಡಿಕೊಂಡು, ಜರ್ಮನರ ಮೇಲೆ ಸುಳಿಗಾಳಿಯಂತೆ ಬಿದ್ದರು. ಅವರು ನೆಟ್ಟಗೆ ಜರ್ಮನರ ಮೇಲ್ಬಾಯ್ದು ಎದುರು ಸಿಕ್ಕಿದ ಪ್ರತಿ ಒಂದು ಜರ್ಮನನನ್ನು ನೆಲಕ್ಕೆ ಅಪ್ಪಳಿಸಿಬಿಟ್ಟರು. ಜರ್ಮನ ಸೈನಿಕರು ಜೀವ ಕೈಯಲ್ಲಿ ಹಿಡಕೊಂಡು ಓಡಿದರು. ಭಾರತೀಯ ಸೈನಿಕರು ಅವರನ್ನು ಒಂದ ಮೈಲುಗಳ ವರೆಗೆ ಹಿಂದಟ್ಟಿಕೊಂಡು ಹೋದರು. ಭಾರತೀಯರು ತಮ್ಮ ಈ ಕೆಲಸವನ್ನು ತೀರಿಸಿ ಹಿಂದೆ ಬಂದಾಗ ನಮ್ಮ ನೆಲೆಗಳಲ್ಲೆಲ್ಲಾ ಸಂತೋಷ ಸೂಚಕವಾದ ಆರ್ಭಟಮಾಡಲಾಯಿತು.

ವಾರ್‌ಶೋ ಪಟ್ಟಣವು ಬಿದ್ದಿರುವುದೆಂಬದಾಗಿ ಸೂಚಿಸುವ ಪ್ರಕಟಣೆಯನ್ನು ಜರ್ಮನರು ತೊರದಿಸಿರುವರು.

ರುಶ್ಯನರು ಕಳೆದ ಶುಕ್ರವಾರ, ಶನಿವಾರ ಮತ್ತು ಆದಿತ್ಯವಾರ ಜರ್ಮನರೊಡನೆ ಸನಿನ ಕಾಳಗಮಾಡಿ ಮೂರು ಪಟ್ಟಣವನ್ನು ಸ್ವಾಧೀನ ಮಾಡಿಕೊಂಡಿರುವರು. ಇದರಿಂದ ರೊಕೆಸ್, ಸ್ಕರ್ನಿವ್ಯಾಕ ಮತ್ತು ರೈಲ್ಕ ನದಿಗಳ ನೆಲೆಗಳನ್ನು ಹಿಡಿದುಕೊಳ್ಳಲು ಸಾಧ್ಯವಾಗುವದು.

ರಾಡೊಮ್ ಕಡೆಗೆ ಜರ್ಮನರೊಡನೆ ಹಿಂದೆ ಸರಿಯುತ್ತಿದ್ದ ಆಸ್ಟ್ರಿಯನರಿಗೆ ಬೆಂಬಲ ಸೇನೆಯು ಬಂದು ಕೂಡಿದ್ದರಿಂದ ಅವರು ಪುನಃ ಎದುರಾಡಲು ನಿರ್ಣಯಿಸಿರುವರು. ಈಗ ಸಾನ್ ನದಿಯ ಮತ್ತು ಪ್ರ್ಸೆಜ್‌ಮ್ಸಿಲಿನ ದಕ್ಷಿಣಕ್ಕೆ ಕಠಿಣ ಕಾಳಗ ನಡೆಯುತ್ತಿದೆ.

ಪ್ರ್ಸೆಜ್‌ಮ್ಸಿಲಿನ ದಕ್ಷಿಣದಲ್ಲಿ ರುಶ್ಯನರನ್ನು ಓಡಿಸಬೇಕೆಂದು ಪ್ರಯತ್ನಿಸಿದ ಆಸ್ಟ್ರಿಯ ಸೇನೆಯು ವಿಶೇಷ ನಷ್ಟಹೊಂದಿ ಹಿಮ್ಮೆಟ್ಟಿರುವದು.

ರುಶ್ಯನರ ಎದುರಾಟವನ್ನು ನಿಲ್ಲಿಸುವುದಕ್ಕೆ ಸೊಕೊಸ್ಟೋಫ್ ಎಂಬಲ್ಲಿಯ ರುಶ್ಯನರ ನೆಲೆಯನ್ನು ತೆಗೆದುಕೊಳ್ಳುವದಕ್ಕೆ ಪ್ರಯತ್ನಿಸಿದ ಜರ್ಮನರ ಸೇನೆಯು ಹಿಂದೆ ಅಟ್ಟಲ್ಪಟ್ಟಿರುವದು. ಶತ್ರುಗಳು ಲೊಡ್ಜ ಪಟ್ಟಣವನ್ನು ಬಿಟ್ಟು ಹೋಗಿರುವರು.

ದಕ್ಷಿಣ ಆಫ್ರಿಕ:—ವಿಶ್ವಾಸ ಘಾತುಕಿಯಾದ ಬೂವರ ಕರ್ನಲ್ ಮೆರಿಟ್ಜನು ತನ್ನ ಸೇನೆಯೊಡನೆ ಕೈಮೊಯೆಸಿನ ಮೇಲ್ಬಾಯ್ದನು. ಯೂನ್ಯನ್ ಸರಕಾರದ ಸೇನೆಯು ಅವನನ್ನು [illegible]ವಾಗಿ ಸೋಲಿಸಿರುವದು. ಮೆರಿಟ್ಜನು ಘಾಯ ಒಡೆದು ಜರ್ಮನ್ ಪ್ರದೇಶಕ್ಕೆ ಓಡಿಹೋಗಿ ಅವರ ಮರೆಹೊಕ್ಕಿರುವನು. ಯೂನ್ಯನ್ ಸರಕಾರದ ಸೇನೆಯು ಬಹು [illegible] ಹೋರಾಡಿರುವುದು. ಈ ಸೇನೆಯಲ್ಲಿ ಹೆಚ್ಚಿನ ಪ್ರಾಣಹಾನಿಯಾಗಲಿಲ್ಲ.

ಕಾನ್ಸ್ಟಾಂಟಿನೋಪಲ್:—ರುಶ್ಯನರು ಜಯ ಹೊಂದುತ್ತಿರುವದರಿಂದಲೂ ಸಂಯುಕ್ತ [illegible] ಮುಂದರಿಯುತ್ತಿರುವುದರಿಂದಲೂ [illegible]

[illegible]

ಉತ್ತರ ಹಿಂದೂಸ್ಥಾನ.

ಹೂಗ್ಲಿ ಜಿಲ್ಲೆಯಲ್ಲಿ ಒಂದು ದರೋಡೆಯು ನಡೆದಿರುವುದು. ಆಯುಧಪಾಣಿಗಳಾದ ೧೨ ಮಂದಿ ವಾಹಿಯ ಗ್ರಾಮದ ಲಕ್ಷ್ಮೀನಾರಾಯಣ ಮೊಂಡಾಲ ಎಂಬವರ ಮನೆಗೆ ನುಗ್ಗಿ ಲಕ್ಷ್ಮೀನಾರಾಯಣನ ಹೆಂಡತಿಗೆ ಹೊಡೆದು ಸುಮಾರು ೪೦೦ ರೂಪಾಯಿಯ ಆಭರಣಗಳನ್ನು ಹಿಡಕೊಂಡು ಹೋದರು. ಲಕ್ಷ್ಮೀನಾರಾಯಣನು ಅವರನ್ನು ಎದುರಿಸಿದ್ದರಿಂದ ಅವರು ಹಿಂತಿರುಗಿ ಲಕ್ಷ್ಮೀನಾರಾಯಣನಿಗೆ ಹೊಡೆದರು. ಸ್ಥಳಿಕ ಪೋಲಿಸಿನವರು ೪ ಮಂದಿಯನ್ನು ಕೈದು ಮಾಡಿರುವರು.

ಕರಾಚಿಯಲ್ಲಿ ಕೂಡಿದ ಮಧುಪಾನ ನಿವಾರಣಾ ಸಹಾಯಕ ಸಂಘದ ಕನ್ಫರೆನ್ಸ್ ಸಭೆಯಲ್ಲಿ ಈ ಕೆಳಗಿನ ನಿರ್ಣಯಗಳಾಗಿರುವವು:—ಸಿಂಧಿನ ಶಾಲೆಗಳ ಪಾಠ ಪುಸ್ತಕಗಳಲ್ಲಿ ಮಧುಪಾನ ವಿಸರ್ಜನೆ ಸಂಬಂಧವಾದ ಪಾಠಗಳನ್ನು ಸೇರಿಸುವ ಹಾಗೆ ಸರಕಾರದವರನ್ನು ಕೇಳಿಕೊಳ್ಳಬೇಕು. ಮಧುಪಾನದಿಂದುಂಟಾಗುವ ಕೆಡಕುಗಳನ್ನು ಪ್ರದರ್ಶಿಸುವ ಬಗ್ಗೆ ಸರಕಾರದವರು ಪ್ರತಿ ಒಂದು ಶಾಲೆಗೆ ಮೆಜಿಕ್ ಲಾಂಥರನ್ನು ಒದಗಿಸಿಕೊಡಬೇಕು. ವಿವಾಹ ಕಾಲದಲ್ಲಿ ಮದ್ಯ ತಕ್ಕೊಳ್ಳದ ಹಾಗೆ ಕಟ್ಟು ಮಾಡಬೇಕು. ಮಧುಪಾನ ತಕ್ಕೊಳ್ಳುವವರಿಂದಾಗುವ ಕೆಡಕನ್ನು ಕುರಿತು ಭಾಷಣಗಳ ಮೂಲಕ ವಿವರಿಸಬೇಕು ಎಂಬಿತ್ಯಾದಿ ನಿರ್ಣಯಗಳಾದವು.

ದಕ್ಷಿಣ ಹಿಂದೂಸ್ಥಾನ.

ನೀಲಗಿರಿಯಲ್ಲಿ ವಿಶೇಷ ಮಳೆಗರೆಯುತ್ತಿದೆ. ಇದರಿಂದ ಹಿಲ್‌ಗ್ರೋವ್ ಮತ್ತು ರನ್ನಿಮಿಡೆ ಸ್ಟೇಷನುಗಳ ಮಧ್ಯೆ ಇರುವ ರೈಲ್ವೆ ಲ್ಯಾನು ಹಾಳಾಗಿರುವುದು. ಒಂದೇ ದಿವಸ ೫.೭೨ ಇಂಚು ಮಳೆ ಬಿದ್ದು ೪ ಕಡೆಗಳಲ್ಲಿ ರೈಲ್ವೆ ಲ್ಯಾನುಗಳಿಗಿರುವುದೆಂತ ತಿಳಿದು ಬರುತ್ತದೆ.

ಮದ್ರಾಸ್ ಗವರ್ನರ ಪ್ರಭುಗಳು ತಾ. ೨೪ರಲ್ಲು ಕುಮಾರಿ ಭೂಶಿರವನ್ನು ಸಂದರ್ಶಿಸಿದರು.

ಸರ್ ಜೋನ್ ವಾಲ್ಲಿಸರು ಮದ್ರಾಸ್ ಹ್ಯಾಕೋರ್ಟಿನ ಚೀಫ್ ಜಸ್ಟಿಸರಾಗಿ ನೇಮಿಸಲ್ಪಟ್ಟಿರುವರು.

ಮದ್ರಾಸಿನಲ್ಲಿ ವಾಂತಿಭೇದಿಯು ಹಬ್ಬಿರುವದು. ಇದೇ ತಾ. ೧೪ರಿಂದ ೨೪ರ ವರೆಗೆ ೩೦೩ ಮಂದಿಗೆ ಈ ರೋಗವು ಸೋಂಕಿತು.

ದಕ್ಷಿಣ ಕನ್ನಡ.

ಪೊಳಲಿ:—ಇಲ್ಲಿ ಇದೇ ತಾ. ೨೩ನೇ ಶುಕ್ರವಾರ ದಿವಸ ಬೆಳಿಗ್ಗೆ ಪೊಳಲಿ ಶ್ರೀ ರಾಜರಾಜೇಶ್ವರಿ ಮಾರ್ಗದರ್ಶನ್ನರಿ ದೇವಸ್ಥಾನದ ಕುಶಲ ಮಂದಿರದ ಕಟ್ಟೋಣದಲ್ಲಿ ಊರಿನವರ ಅಪೇಕ್ಷೆ ಮೇರೆಗೆ ಸಣ್ಣ ಮಕ್ಕಳ ಉದ್ದಿಷ್ಟ ಒಂದು ಶಾಲೆಯು ತೆರೆಯಲಾಯಿತು. ಆಗಲೇ ಹೊಸತಾಗಿ ೧೫ ಹುಡುಗರು ಹಾಜರಿದ್ದರು, ಆಗ ಶ್ರೀ ದೇವಿಯನ್ನು ಅಮ್ಮುಂಜೆ ಶಾಲಾ ವಿದ್ಯಾರ್ಥಿಗಳು ಪದ್ಯಗಳಿಂದ ಪ್ರಾರ್ಥಿಸಿ ಅನಂತರ ಶಾಲಾ ಪ್ರವೇಶ ಮಾಡಿ ಶಾಲೆಯ ಪ್ರಯೋಜನವನ್ನು ಮು॥ ರಾ॥ ಎನ್. ಎ. ಶೀನಪ್ಪ ಹೆಗ್ಗಡೆಯವರು ಸಭೆಯವರಿಗೆ ತಿಳಿಸಿ ಇಲ್ಲಿ ಒಂದು ಪೋಸ್ಟಾಫೀಸನ್ನು ಸದ್ಯಕ್ಕೆ ಖಾಸಗಿಯಾಗಿ ತೆರೆಯಬೇಕೆಂತ ವಿಲೆವಾರಿ ಮಾಡಲಾಯಿತು. ನಂತರ ಸದರಿ ವಿದ್ಯಾರ್ಥಿಗಳು ನಮ್ಮ ರಾಜರಿಗೆ ಜಯವಾಗಲಿ ಎಂಬ ಪದ್ಯವನ್ನು ಹಾಡಿದರು. ಆ ಮೇಲೆ ಈ ಶಾಲೆಯನ್ನು ಅಮ್ಮುಂಜೆ ಶಾಲೆಗೆ ಬ್ರೇಂಚಾಗಿ ಸೇರಿಸಬೇಕೆಂತ ನಿಶ್ಚೈಸಿ ಅಲ್ಲಿಂದಲೇ ಒಬ್ಬ ಉಪಾಧ್ಯಾಯರನ್ನು ಇಲ್ಲಿ ಇಡುವದೆಂತ ವಿಲೆವಾರಿ ಮಾಡಲಾಯಿತು.

ವಿಟ್ಲ:—ಮದ್ರಾಸು ಗವರ್ನರ ಪ್ರಭುಗಳವರ ಯುದ್ಧ ಸಹಾಯಾರ್ಥ ಫಂಡಿಗೆ ವಂತಿಗೆಯನ್ನು ಕೂಡಿಸುವರೆ ವಿಟ್ಲ ಸಬ್ ರೇಂಜಿಗೆ ಸೇರಿದ ಉಪಾಧ್ಯಾಯರುಗಳು ಇದೇ ಶನಿವಾರ ತಾ. ೨೪ ಮಧ್ಯಾಹ್ನ ೧ ಘಂಟೆಗೆ ವಿಟ್ಲ ಸಬ್ ರೇಂಜ್ ಶಾಲೆಗಳ ಸುಪರ್ ವೈಸರವರ ಅಧ್ಯಕ್ಷತೆಯಲ್ಲಿ ವಿಟ್ಲ ಬೋರ್ಡು ಶಾಲೆಯಲ್ಲಿ ಸಭೆ ಕೂಡಿದರು. ಅಧ್ಯಕ್ಷರು ಬ್ರಿಟಿಷ ರಾಜ್ಯ ಭಾರದಿಂದ ಜನರಿಗೆ ಉಂಟಾಗುವ ಪ್ರಯೋಜನದ ಕುರಿತು ಭಾಷಣ ಮಾಡಿದ ತರುವಾಯ ಯುದ್ಧ ಫಂಡಿಗೆ ವಂತಿಗೆಯನ್ನು ತೆಗೆದುಕೊಳ್ಳಬೇಕಾಗಿ ನಿರ್ಣಯವಾಯಿತು. ವಂತಿಗೆ ಪಟ್ಟಿಯನ್ನು ತೆರದಲ್ಲಿ ರೂ. ೭೩—೮—೦ ಕೂಡಲೇ ಸಭೆಯಲ್ಲಿ ವಸೂಲಿಯಾಯಿತು. ಸದರಿ ವಂತಿಗೆಯ ಹಣವನ್ನು ಕಾಸರಗೋಡು ಉಪಾಧ್ಯಾಯರ ಸೆಂಟ್ರಲ್ ಕಮಿಟಿಯ ಸೆಕ್ರೆಟರಿಗಳವರ ಮುಖಾಂತರ ವಿಲೆವಾರಿ ಮಾಡುವರೆ [illegible] ವಂತಿಗೆಯ ಮೊಬಲಗನ್ನು ಅಧ್ಯಕ್ಷರ ಸ್ವಾಧೀನ [illegible] ಯಿತು.

ಕಾಫು:—ಹಳ್ಳಿಹಳ್ಳಿಗಳಲ್ಲಿ ಕುಡಿಕರ ಸಂಖ್ಯೆಯೂ, ಗಂಡಸರ ಸಂಖ್ಯೆಯೂ ಕಡಿಮೆಯಾಗುತ್ತಾ ಬಂದ ವರ್ತಮಾನಗಳು ಆಗಿಂದಾಗ್ಯೆ ತಮ್ಮ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಕಾಣುತ್ತಲಿವೆ. ಆದರೆ ಈಗ ಊರಲ್ಲಿ ವ ಮೊಗೇರರ ಪಟ್ಲ ಪಟ್ಲಗಳಲ್ಲಿ ಕಾಫಿ ಹೊಟೇಲುಗಳ ಸಂಖ್ಯೆಯು ದಿನೇ ದಿನೇ ವೃದ್ಧಿಸುತ್ತಾ ಬರುತ್ತಿರುವುದನ್ನು ನೋಡಿ ತುಂಬಾ ಆಶ್ಚರ್ಯ ಪಡಬೇಕಾಗತ್ತದೆ. ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಒಮ್ಮೆ "ಮಾಜಿ ಗುಲಾಮರು ಕಾಫಿ ಹೊಟೇಲುಗಳೂ ಸೇಂದಿ ಅಂಗಡಿಗಳೂ" ಎಂಬದರ ವಿಷಯವಾಗಿ ಬರೆದ ಬಾತಮಿಯನ್ನು ಜನರು ಪದೇ ಪದೇ ಓದುತ್ತಿರುವುದು ವಿಹಿತವಾದ್ದದಲ್ಲವೇ!

ಪಡುಬಿದ್ರೆಯಲ್ಲಿ ಸರಕಾರದ ಬಂಗ್ಲೆಯ ವಠಾರದೊಳಗಿರುವ ಬಾವಿಯಲ್ಲಿ ಯಾರೋ ದುಷ್ಟರು ಒಬ್ಬ ಕ್ಷೌರಿಕನನ್ನು ಕೊಂದು ಹಾಕಿದ ಶವವು ಕಾಣಲಿಕ್ಕೆ ಸಿಕ್ಕಿ ಪೋಲೀಸು ತನಿಖೆಯು ನಡೆಯುತ್ತಲಿದೆ.

ಇಲ್ಲಿಯ ಸರಕಾರಿ ಬಂಗ್ಲೆಯಲ್ಲಿ ಕೆಲವು ಮಾನ್ಯ ಗೃಹಸ್ಥರೇ ಮುಂತಾದವರು ಜುಗಾರಾಟವೆಂಬ ಪಿಶಾಚನ ಬಲೆಯಲ್ಲಿ ಸಿಲುಕಿಕೊಂಡು ರಾತ್ರಿ ಸಮಯ ಆಟ ಆಡುತ್ತಿರುವರೆಂಬದಾಗಿ ಗುಜುಗುಜು ವಾರ್ತೆ ಇದೆ. ಈ ವಿಷಯ ಪೋಲೀಸಿನವರು ಆಗಿಂದಾಗ್ಯೆ ತಕ್ಕ ಜಾಗ್ರತೆ ತೆಗೆದುಕೊಳ್ಳುವದು ವಿಹಿತವಾಗಿದೆ.

ಯುದ್ಧ ಸಂಕಷ್ಟ ನಿವಾರಣಾರ್ಥ ಫಂಡಿಗೆ ಯಮಾರ್ಗಳ ಸೆಕ್ಷನಿನ ಉಪಾಧ್ಯಾಯರುಗಳು ತೆತ್ತ ಜುಮ್ಲಾ ಹಣ ರೂ. ೬೭—೨—೨ ಆಗಿರುತ್ತದೆ. ಈ ಹಣವನ್ನು ತಾಲೂಕಿನ ಖಜಾನೆಗೆ ಇಸ್ತಾಲು ಮಾಡಿ ರಶೀದಿಯನ್ನು ಅರ್ಜಿಯೊಂದಿಗೆ ಇಟ್ಟು ಮೇಲಾಫೀಸರರ ಮೂಲಕ ತಾಲೂಕು ಬೋರ್ಡು ಪ್ರೆಸಿಡೆಂಟರವರಿಗೆ ಕಳುಹಿಸುವರೆ ನಿರ್ಣಯವಾಗಿರುತ್ತದೆ.

ಮಂಗಳೂರು.

ಮೈಸರಾಯಿ ಪ್ರಭುಗಳವರ ಇಂಪೀರಿಯಲ್ ರಿಲೀಫ್ ಫಂಡಿಗೆ ಮತ್ತು ಮದ್ರಾಸ್ ಯುದ್ಧ ಫಂಡಿಗೆ ಮಂಗಳೂರಲ್ಲಿ ಈ ವರೆಗೆ ರೂ. ೫,೨೧೯—೯—೪ಷ್ಟು ಕೂಡಿರುವುದು. ಈ ರೂ. ೫೨೧೯-೯—೪ರಿಂದ ರೂ. ೮೬೦ ಕ್ರಯ ಬಾಳುವ ಕಾಫಿಯನ್ನು ಮದ್ರಾಸ್ ಯುದ್ಧ ಸಹಾಯ ಫಂಡಿಗೆ ಕೊಡುವ ಬಗ್ಗೆ ಮದ್ರಾಸಿನಲ್ಲಿರುವ ಎಕ್ಸ್‌ಕ್ಯೂಟಿವ್ ಇಂಜಿನಿಯರರವರಿಗೆ ಕಳುಹಿಸಿಕೊಟ್ಟಿರುವುದು. ರೂ. ೩೦ ಪ್ರಿನ್ಸ್ ಆಫ್ ವೇಲ್ಸರ ಫಂಡಿಗೆ ಕಳುಹಿಸೋಣಾಗುವದು. ರೂ. ೧—೭—೦ ಕಾಫಿಯನ್ನು ಕಳುಹಿಸಿಕೊಡುವ ಬಗ್ಗೆ ಖರ್ಚಾಗಿರುವುದು; ಉಳಿದ ರೂ. ೨೫೩೭—೨—೪ ಇಂಪೀರಿಯಲ್ ರಿಲೀಫ್ ಫಂಡಿಗೂ ರೂ. ೧೭೯೧—೦—೦ ಮದ್ರಾಸ್ ಫಂಡಿಗೂ ಕೊಡೋಣಾಗುವದು. ವಂತಿಗೆ ಕೊಟ್ಟವರ ಹೆಸರುಗಳೂ ಮೊಬಲಗುಗಳೂ ಈ ಸಂಚಿಕೆಯ ಕಡೆಯಲ್ಲಿ ಪ್ರಕಟಿಸಿರುವೆವು.

ಇದೇ ಬರುವ ನವಂಬರ ತಿಂಗಳ ತಾರೀಕು ೮ರಲ್ಲು ಇಲ್ಲಿಯ ಗವರ್ನಮೆಂಟ್ ಕಾಲೇಜಿನ "ಕಾಲೇಜ್ ಡೆ" ಆಚರಿಸೋಣಾಗುವುದು.

ಮದ್ರಾಸ್ ಸಂಸ್ಥಾನದ ಆಯಾ ಕಡೆಗಳಲ್ಲಿ ವಾಯು ನಾವೆಗಳು ಹಾರುತ್ತಿವೆಂಬದಾಗಿ ಅಲ್ಲಲ್ಲಿ ಹಬ್ಬಿರುವ ವಾರ್ತೆಯು ಆಧಾರವಿಲ್ಲದೆಂಬದಾಗಿ ಮದ್ರಾಸ್ ಸರಕಾರದವರು ಪ್ರಕಟಿಸಿರುವರು.

ಈಚೆಗೆ ಲಂಡನಿಗೆ ಹೋದ ಮು॥ ರಾ॥ ಗಣಪತಿ ಮಲ್ಯ ಎಲ್. ಎಮ್. ಎಸ್‌ರವರು ಲಂಡನಿಗೆ ತಲಪಿ ಒಂದೇ ತಿಂಗಳಲ್ಲಿ ಎನ್. ಎಮ್. ಆರ್. ಸಿ. ಎಸ್. ಮತ್ತು ಎಲ್. ಆರ್. ಸಿ. ಪಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರೆಂಬ ವಾರ್ತೆ ಬಂದಿರುವುದು. ಮು॥ ರಾ॥ ಮಲ್ಯರವರು ಅಂಗವಿಚ್ಛೇದನತಂತ್ರ (Anatomy)ದಲ್ಲಿ ಬರೆದ ಪರೀಕ್ಷಾ ಪತ್ರಗಳು ಬಹು ಅತಿಶಯವಾಗಿತ್ತೆಂಬದಾಗಿ ಡಾಕ್ಟರ್ ಕೆಮರೂನರವರು ಹೊಗಳಿರುವರು. ಮು॥ ರಾ॥ ಮಲ್ಯರವರು ಲಂಡನಿನ ಬಹು ಕೀರ್ತಿಗೊಂಡ ಸೆಂಟ್‌ಬರ್ತಲೋಮಿಯೋ ಆಸ್ಪತ್ರಿಯಲ್ಲಿ ಈಗ ಸೇರಿರುವರು.

ದಕ್ಷಿಣ ಕನ್ನಡಾ ಜಿಲ್ಲಾ ಕಲೆಕ್ಟರ ಆಫೀಸು:—ಕಲೆಕ್ಟರ ಆಫೀಸಿನ ೧೬ನೇ ಎಕೌಂಟೆಂಟರಾಗಿರುವ ಮೆ॥ ಎಸ್. ಆರ್. ವಿನೋದನರು ಒಂದು ತಿಂಗಳ ಪ್ರಿವಿಲೆಜ್ ರಜೆ ಪಡಕೊಂಡಿರುವದರಿಂದ ಇವರ ಬದಲಿಗೆ ಮೆ॥ ಪಿ. ಟೌರೋರವರು ನೇಮಿಸಲ್ಪಟ್ಟಿರುವರು.

ಇಲ್ಲಿಯ ಸ್ಟೇಶನರಿ ಸಬ್ ಮೇಜಿಸ್ಟ್ರೇಟರಾಗಿರುವ ಮೆ॥ ಎಮ್. ಷ್ಯಾಸ್ ಬಿ. ಎರವರಿಗೆ ೧೭ ದಿವಸಗಳ ಪ್ರಿವಿಲೆಜ್ ರಜೆ ಕೊಡಲ್ಪಟ್ಟಿರುವುದು.

ಮೈಸರಾಯ ಪ್ರಭುಗಳವರು ಸ್ಥಾಪಿಸಿದ ರಿಲೀಫ್‌ಫಂಡಿಗೆ ಮತ್ತು ಮದ್ರಾಸ್ ಯುದ್ಧ ಫಂಡಿಗೆ ವಂತಿಗೆ ಕೊಟ್ಟವರ ಹೆಸರುಗಳೂ ಮೊಬಲಗುಗಳೂ:—ಮೆ॥ ಸಿ. ಎಚ್. ಮೋರ್ಗನ್ ದೊರೆಗಳು ರು. ೩೦೦, [illegible]

ಟಿ. ಭವಾನಿರಾವ್ ರೂ. ೨೦೦; ಮೆ॥ ಎಮ್. ಇ. ಕೋಚ್‌ಮೆನ್ ದೊರೆಗಳು ರೂ. ೧೫೦; ರಾವ್‌ಬಹದ್ದೂರ್ ಎಸ್. ಸುಬ್ಬರಾವ್ ರೂ. ೧೨೫; ಮು॥ ರಾ॥ ಎಮ್. ಕೃಷ್ಣನಾಯ್ಕ ಎಂಡ್ ಸನ್ಸ್ ರೂ. ೧೦೧; ಮದ್ರಾಸ್ ಬೇಂಕಿನವರು ಮೆ॥ ಎ. ಗ್ರಿಹಮ್ಸ್ ದೊರೆಗಳ ಮೂಲಕ ರೂ. ೧೦೦; ಮೆ. ಎಚ್. ಹಾರ್ಟ್ ದೊರೆಗಳು ರೂ. ೧೦೦; ಮು. ರಾ॥ ಎನ್. ವೆಂಕಟರಾವ್ ರೂ. ೧೦೦, ಗವರ್ನಮೆಂಟ್ ಕಾಲೇಜ ಉಪಾಧ್ಯಾಯರೂ ವಿದ್ಯಾರ್ಥಿಗಳೂ ರೂ. ೯೮—೧೧—೪; ಮು॥ ರಾ॥ ಸುಜೀರ ರಾಮಚಂದ್ರನಾಯ್ಕ, ಕಸ್ತೂರಿ ನಾಗೇಶಪ್ಪೆ, ಬಿ. ವೆಂಕಟರಾವ್, ಜಿ. ಹನುಮಂತ ಕಿಣಿ ಮತ್ತು ರಾಮರಾಯರು ರೂ. ೭೫; ಮು॥ ರಾ॥ ನಗರಕಾರ್ ಎಂಡ್ ಸನ್ಸ್ ರೂ. ೭೫; ಮು॥ ರಾ॥ ಪಿ. ರಾಮಕೃಷ್ಣಯ್ಯ ರೂ. ೭೦; ಮಂಗಳೂರ ಬಿಶೋಪರವರು ರೂ. ೬೦; ಮು॥ ರಾ॥ ನರಸಿಂಹಮೂರ್ತಿ ಭಂಡಾರಿ ರೂ. ೫೧;

ಮುಂದರಿಯುವುದು.

ಪ್ರಕಟಣೆ.

ವಿದ್ಯಾವಂತರೂ, ಸ್ಥಿತಿವಂತರೂ ಆದ ಕೆಲವು ಸಾರಸ್ವತ, ದೇಶಸ್ಥ ಮತ್ತು ಕರ್ಣಾಟಕ ಬ್ರಾಹ್ಮಣ ತರುಣರು ಬಾಲ ವಿಧವೆಯರನ್ನು ವಿವಾಹಮಾಡಿಕೊಳ್ಳಲು ಸಿದ್ಧವಿರುವರು. ವಿವಾಹವನ್ನು ಅಪೇಕ್ಷಿಸುವ ವಿಧವೆಯರು ಬ್ರಾಹ್ಮಣರಲ್ಲಿ ಫಲಾನಾ ವಿಧವೆಯರೇ ಆಗಬೇಕೆಂಬ ನಿರ್ಬಂಧವಿಲ್ಲ. ಹೆಚ್ಚಿನ ಮಾಹಿತಿಯನ್ನು ತಿಳಿಯಲಪೇಕ್ಷಿಸುವವರು ಮುಖತಃ ವ ಕಾಗದ ಮೂಲಕ ಈ ಕೆಳಗೆ ದಸ್ಕತು ಮಾಡಿದವರಿಂದ ಎಲ್ಲಾ ವಿವರವನ್ನು ತಿಳಕೊಳ್ಳಬಹುದು. ಈ ವಿಷಯ ನಡಿಯುವ ಕಾಗದ ಪತ್ರ ಇತ್ಯಾದಿಗಳೆಲ್ಲವೂ ಗುಪ್ತವಾಗಿ ಇಡೋಣಾಗುವವು.

ಮಂಗಳೂರು,
ತಾ. 19—10—1914. } ಕುದ್ಮೂಲ ರಂಗರಾವ್.

HOUSE TO RENT.

ಬಲ್ಮಠ ಹೊಸ ರಸ್ತೆಯಲ್ಲಿ ಡಾಕ್ಟರ ಪೀಟರ್ಸ್ಸರವರ ಬಾಬ್ತು ಮನೆಯು ಬಾಡಿಗೆಗೆ ಕೊಡಲಾಗುವದು. ಬಾಡಿಗೆ ತಿಂಗಳೊಂದಕ್ಕೆ ರೂ. ೧೦ ಮಾತ್ರ. ಮನೆಯು ಮಾರ್ಗದ ಬದಿಯಲ್ಲಿರುವದಲ್ಲದೆ, ಬಾವಿ ವಗೈರೆ ಮನೆಯ ಸಮೀಪವೇ ಇರುವದರಿಂದ ಬಹಳ ಅನುಕೂಲತೆಯುಳ್ಳದ್ದಾಗಿರುತ್ತದೆ.

ಜೀನಸು ಧಾರಣೆ. (ರಖಂ)

ಅವ್ವಲ್ ಮಸ್ಕತಿ ಅಕ್ಕಿ	.	5—6—0	5—11—0
ದುಯಂ ,, ,,	.	5—3—0	5—6—0
ಸುಗ್ಗಿ ,,	.	5—0—0	5—3—0
ಗಾಡಿ ಸುಗ್ಗಿ ,,	,	4—11—0	4—12—0
ಗುಡ್ಡು ,,	.	5—0—0	5—2—0
ದುಯಂ ಗುಡ್ಡು ,,	.	4—11—0	4—12—6
ಅವ್ವಲ್ ಬೆಳ್ತಿಗೆ ,,	.	5—8—0	5—10—0
ಗುಡ್ಡು ಬೆಳ್ತಿಗೆ ,,	.	4—12—0	5—0—0
ರಂಗೂನು ಬೆಳ್ತಿಗೆ ಗೋಣಿ ೧ರ		9—0—0	9—6—0
ಗೋದಿ ಗೋಣಿ ೧ರ			14—4—0
ಹುರುಳಿ ಗೋಣಿ ೧ರ			8—10—0
ಕಡಲೆ ಗೋಣಿ ೧ರ			11—0—0
ತೊಗರಿ ಗೋಣಿ ೧ರ			12—0—0
ತೊಗರಿ ಬೇಳೆ ಗೋಣಿ ೧ರ		12—0—0	15—0—0
ಉದ್ದು ಗೋಣಿ ೧ರ			10—8—0
ಊರು ಬೆಲ್ಲ ಖಂಡಿ ೧ರ			55—0—0
ಉಪ್ಪು ಗೋಣಿ ೧ರ			4—4—0
[illegible] ಖಂಡಿ ೧ರ		70—0—0	80—0—0
[illegible]			24—8—0
[illegible]			32—8—0

ನ್ಯಾಯದರ್ಪಣ.

ಹೊಸ ಪುಸ್ತಕ.

ಇಂಡಿಯಾ ದೇಶದ ಸಮಸ್ತ ಹಿಂದೂ ಜನರ ಸಾಮಾನ್ಯ ಧರ್ಮಗಳು, ಅವುಗಳನ್ನು ಅತಿಕ್ರಮಿಸಿ ನಡೆಯುವವರಿಗೆ ಉಂಟಾಗತಕ್ಕ ಫಲಗಳು, ಇವುಗಳನ್ನು ಕುರಿತು, ಗವರ್ನಮೆಂಟಿನವರಿಂದ ಅನೇಕ ಆಕ್ಟುಗಳು, ರೆಗ್ಯುಲೇಷನ್‌ಗಳು, ಶಾಸನಗಳು ವಗೈರೆ ವಿಧಾಯಕವಾಗಿ ಇರುತ್ತೆ. ಇವುಗಳೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಅಪಾರವಾಗಿ ಇರುತ್ತವೆ. ಇವುಗಳಲ್ಲಿ, "ಕಂಟ್ರಾಕ್ಟ್" ಅಂದರೆ ಕರಾರುಗಳು, "ಬ್ರೀಚ್ ಆಫ್ ಕಂಟ್ರಾಕ್ಟ್" ಅಂದರೆ ಎಷ್ಟಂದಕ್ಕೆ ತಪ್ಪಿ ನಡೆಯೋಣ, ದ್ರೋಹ, ಲಿಮಿಟೇಷನ್, ಛಾಪಾ ಕಾಗದ, ರಿಜಿಸ್ಟ್ರೇಷನ್, ಸಿವಿಲ್ ಪ್ರೊಸಿಡ್ಯೂರ್, ಕ್ರಿಮಿನಲ್ ಪ್ರೊಸಿಡ್ಯೂರ್, ಪೀನಲ್ ಕೋಡ್, ಹಿಂದೂ ಲಾ, ಮುಂತಾದ ಧರ್ಮಶಾಸ್ತ್ರಗಳಿಂದ, ಮನುಷ್ಯರ ನಿತ್ಯಾಚರಣೆಗೆ ಅವಶ್ಯಕವಾದ ಲೌಕಿಕ ವ್ಯವಹಾರ ಧರ್ಮಗಳ ಮುಖ್ಯ ಸಂಗತಿಗಳನ್ನೆಲ್ಲಾ ಆರಿಸಿ ಈ ಸಣ್ಣ ಪುಸ್ತಕವನ್ನು ರಚಿಸಿರುತ್ತೆ ಮತ್ತು ವಾಡಿಕೆಯಲ್ಲಿ ಇರತಕ್ಕ ನಾನಾ ವಿಧಗಳಾದ ದಸ್ತೈವಜುಗಳ ಅನೇಕ ನಮೂನೆಗಳು ಮತ್ತು ಕ್ರಿಮಿನಲ್ ರಿವಿನ್ಯು ಗ್ರಾಮ ಮುನಸೀಫ್ ಕೋರ್ಟುಗಳ ಮುಂದಿನ ದಾವಾ ವಗೈರೆ ಅರ್ಜಿಗಳ ಮಾದರಿಗಳು ಅಡಕವಾಗಿ ಇರುತ್ತೆ. ಬೆಲೆ 1—8—0. ವಿ. ಪಿ. 1—12—0.

ಲಾಯರ್ ಯಂ ಯಸ್. ನಂಜಪ್ಪನವರು,
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು.

11 ಪುಸ್ತಕಗಳನ್ನು ಒಟ್ಟಾಗಿ ತರಿಸಿಕೊಂಡರೆ ಪೋಸ್ಟೇಜು ಸೇರಿ 15-0-0 ಆಗುತ್ತೆ.

ಉತ್ಕೃಷ್ಟವಾದ ಮೂರು ಔಷಧಗಳು.

ಗ್ರೇಂಟ್ ಮೆಡಿಕಲ್ ಕೊಲೆಜಿನಲ್ಲಿ ಸೂಲಗಿತ್ತಿತನ ಕಲಿತು ಸರ್ಟಿಫಿಕೇಟ್ ಪಡೆದ ಕಮಲಾ ಬಾಯಿ, ತುಸಿಲೀ ಬಾಯಿ ಎಂಬ ಸೂಲಗಿತ್ತಿಯರಿಂದ ತಯಾರಿಸಲ್ಪಟ್ಟವುಗಳು.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 1.

(ಆರ್ತವ ಶೂಲೆ ಹೋಗಲಾಡಿಸುವ ಬಗ್ಗೆ.)

ಅಬಲಾಸಂಜೀವನಿ ಗುಳಿಗೆಗಳು ಎಲ್ಲಾ ಬಗೆಯ ಆರ್ತವ ಶೂಲೆಯನ್ನು ಹೋಗಲಾಡಿಸುವುದಕ್ಕೆ ಏಕರೀತಿಯಲ್ಲಿ ಸಮಾಧಾನಕರವಾದ ಪ್ರಯೋಜನವನ್ನು ಕೊಡುವ ಮತ್ತು ಪೂರ್ಣ ನಂಬಿಕೆಗೆ ಯೋಗ್ಯವಾದ ಮಾತ್ರೆಗಳಾಗಿರುವವು. ಅನೇಕ ಕಾಲದವರೆಗೆ ಪುಷ್ಪವತಿಯಾಗದೆ ಇದ್ದುದು ಕೂಡ ಇವುಗಳಿಂದ ಸರಿಯಾಗುವುದು. ಅಂತರೌಷಧಿಗಳಿಂದ ಗುಣವಾಗಬಹುದಾದ ಎಲ್ಲಾ ಗರ್ಭಕೋಶದ ಶೂಲೆಗಳು ಇವುಗಳಿಂದ ಗುಣವಾಗಿ, ಗರ್ಭಕೋಶವು ಪೂರ್ವಸ್ಥಿತಿಗೆ ಬರುವುದು. ಒಂದು ಶೀಸೆಯ ಕ್ರಯ ರೂ. 1. ಅಂಚೆ ಹಾಸಲು 4 ಆಣೆ.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ. 2

(ಬಿಳೀ ಸ್ರಾವದ ಬಗ್ಗೆ.)

ಈ ಬಾಧೆಯಿಂದ ಸ್ತ್ರೀಯರು ವಿರಹಿತರಾದ ಬಹಳ ವಿರಳ. ಈ ಸ್ರಾವದಿಂದ ಹೆಚ್ಚಿನ ನಿರ್ಬಲತೆ, ಹೊಟ್ಟೆನೋವು, ಮಲಬದ್ಧತೆಗಳುಂಟಾಗುವವು. ಈ ಸ್ರಾವವು ರಕ್ತಸ್ರಾವದಂತೆ ಬಲಹೀನಕರ. ಇದರಿಂದ ಮನಸ್ಸು ಮಂದವಾಗುವುದು, ಹಸಿವೆ ಇಲ್ಲದಿರುವುದು, ಆಗಾಗ್ಗೆ ಕಟಿಭಾಗದಲ್ಲಿ ನೋವು ಉಂಟಾಗುವುದು, ಮುಖವು ಬಾಡಿಹೋಗುವುದು, ಮಲವಿಸರ್ಜನೆ ಸರಿಯಾಗದಿರುವುದು. ಈ ಗುಳಿಗೆಗಳು ಈ ಬಾಧೆಗಳನ್ನೆಲ್ಲಾ ಹೋಗಲಾಡಿಸುವುವು.—ಒಂದೇ ಪೊಟ್ಟಣವನ್ನು ಪರೀಕ್ಷೆ ಬಗ್ಗಾಗಿ ತರಿಸಿದರೆ ತ್ವರಿತಗುಣ ಸಿಕ್ಕುವ ಲಕ್ಷಣವು ಮನಸ್ಸಿಗೆ ವೇದ್ಯವಾದೀತು. ಒಂದು ಶೀಸೆಯ ಕ್ರಯ 1 ರೂಪ್ಯಾ. ಅಂಚೆ ಹಾಸಲು 4 ಆಣೆ.

ಅಬಲಾ ಸಂಜೀವನಿ ಗುಳಿಗೆಗಳು ನಂಬ್ರ 3.

(ಕೆಂಪು ಸ್ರಾವದ ಬಗ್ಗೆ.)

ದೇಹದಲ್ಲಿ ರಕ್ತಬಲವು ಕಡಿಮೆಯಾಗುವುದರಿಂದ ಉಂಟಾಗುವ ಭಯಂಕರ ಪೀಡೆಗಳಲ್ಲಿ ಇದು ಒಂದು. ಈ ಸ್ರಾವದಿಂದ ಕ್ರಮೇಣ ಗರ್ಭಕೋಶದಲ್ಲಿ ಹುಣ್ಣು ಮೊದಲಾದುವುಗಳು ಉಂಟಾಗಿ, ಗರ್ಭಕೋಶದ ಶೂಲೆ, ನಿರ್ಬಲತೆ ತಲೆದೋರುವುವು. ಈ ಸ್ರಾವವು ಗರ್ಭಕೋಶದಿಂದ ಸ್ರವಿಸುವ ರಕ್ತವೇ ಸರಿ. ಈ ಗುಳಿಗೆಗಳನ್ನು ಕೂಡಲೇ ಸೇವಿಸುವುದಕ್ಕೆ ಅಸಡ್ಡೆ ಮಾಡಿದರೆ, ಈ ಪೀಡೆಯು ಅತಿಶಯಿಸಿ, ಬೇಗನೇ ಗುಣ ಹೊಂದಲಿಕ್ಕಿಲ್ಲ. ಒಂದು ಶೀಸೆಯ ಕ್ರಯ 1 ರೂಪ್ಯಾ. [illegible] 4 ಆಣೆ.

Dr. Nava Ratna & Sons,
253 Kalbadevi Road,
BOMBAY.

ಏಜಂಟರು:— ಡಿ. ಉಲನ್ [illegible],
ಕೊಡಿಯಾಲ್‌ಬೈಲ್, ಮಂಗಳೂರು [illegible]

☞ ಇದನ್ನು ದಯವಿಟ್ಟು ನಿಮ್ಮ ಸ್ನೇಹಿತರುಗಳಲ್ಲಿ ಪ್ರಚುರಪಡಿಸಿ.

ಪಿ. ಸುಬ್ಬರಾಯರವರ

ಲೋಕ ಪ್ರಸಿದ್ಧವಾದ ಆಯುರ್ವೇದ

ಔಷಧಗಳು.

ಸ್ನಾನಕ್ಕೆ ಸುವಾಸನಾ ಪುಡಿ — ಸುವಾಸನೆಯುಳ್ಳ ಈ ಪುಡಿಯನ್ನು ಸ್ನಾನಕಾಲದಲ್ಲಿ ಪ್ರಾಯದ ಗಂಡಸರೂ, ಹೆಂಗಸರೂ, ಮುದುಕರೂ, ಸಣ್ಣ ಮಕ್ಕಳೂ ಉಪಯೋಗಿಸುವದಕ್ಕೆ ಅನುಕೂಲವಾಗಿರುವದು. ಚರ್ಮಗತವಾದ ಕೊಳೆಯನ್ನೂ ದೇಹದ ದುರ್ಗಂಧವನ್ನೂ ಹೋಗಲಾಡಿಸಿ ಚರ್ಮವನ್ನು ಮೃದುಮಾಡಿ, ಮಿಂಚುವಂತೆ ಹೊಳಪುಹುಟ್ಟಿ, ತಂಪನ್ನುಂಟುಮಾಡುವದು. ಅದಲ್ಲದೆ ದೇಹದಲ್ಲಿ ಸರ್ವದಾ ಸುಗಂಧವಿರುವಂತೆ ಮಾಡುವದು. ಪ್ರತಿಯೊಬ್ಬರೂ ಉಪಯೋಗಿಸಲಿಕ್ಕೆ ಯೋಗ್ಯವಾಗಿದೆ. ಪೆಟ್ಟಿಗೆ ೧ಕ್ಕೆ ೮ ಆಣೆ. ವಿ. ಪಿ. ಚಾರ್ಜು ೩ ಪೆಟ್ಟಿಗೆಗಳವರಿಗೂ ೫ ಆಣೆ.

ಸಂಜೀವನ ಮಾತ್ರೆಗಳು—ಮಕ್ಕಳಿಗೆ ಜ್ವರ, ನರಗಳ ಸೆಳೆತ, ನಿದ್ರೆಬಾರದಿರುವದು, ಅಧಿಕವಾಗಿ ಹೊಸುವದು, ಛಳಿ, ಕೆಮ್ಮಲು, ತಲೆನೋವು, ನೆಗಡಿ, ಇನ್ನೂ ಮಕ್ಕಳಿಗೆ ಬರುವ ಅಜೀರ್ಣ ಸಂಬಂಧ ವಾತರೋಗಗಳಿಗೆ ಒಳ್ಳೇ ಮದ್ದಾಗಿರುವದು. ಇದನ್ನು ದೊಡ್ಡವರು ಸಹ ಉಪಯೋಗಿಸಬಹುದು. ಸೀಸೆ ೧ಕ್ಕೆ ೧೦ ಆಣೆ. ೧ ಮೊದಲು ೬ ಸೀಸೆವರಿಗೆ ವಿ. ಪಿ. ಚಾರ್ಜು ೫ ಆಣೆ ಪ್ರತ್ಯೇಕವು.

ಮಹಾಗೋರೋಜನ ಮಾತ್ರೆ — ಎಲ್ಲಾ ವಿಧವಾದ ಜ್ವರಗಳಿಗೂ, ವಿಷಮ ಶೀತಜ್ವರ, ಎರಡರ ಜ್ವರ, ಪ್ರತಿದಿನಜ್ವರ, ಇವುಗಳಿಗೆ ಅದ್ವಿತೀಯವಾದ ಔಷಧವು. ಮಲನಾಡು ಜ್ವರ, ಹೊಟ್ಟೆಯಲ್ಲಿ ಗಡ್ಡೆ ಆಗಿದ್ದರೆ, ಮಕ್ಕಳಿಗೆ ಬರುವ ಜ್ವರ, ಆಮಶಂಕೆ, ಅತಿಸಾರ, ನರಗಳ ಎಳೆತ, ನಿದ್ರೆಬಾರದಿರೋಣ, ಹೆಚ್ಚಾಗಿ ಹೊಸುವದು, ಛಳಿ, ಕೆಮ್ಮಲು, ತಲೆನೋವು, ಮಕ್ಕಳಿಗೂ ದೊಡ್ಡವರಿಗೂ ಅಜೀರ್ಣ ಇವುಗಳನ್ನು ಪರಿಹಾರ ಮಾಡುವುದು. ಸೀಸೆ ೧ಕ್ಕೆ ೧೦ ಆಣೆ. ವಿ. ಪಿ. ೯ ಸೀಸೆ ವರಿಗೂ ೫ ಆಣೆ.

ಚರ್ಮರೋಗಕ್ಕೆ ಔಷಧಿ — ಮಕ್ಕಳಿಗೆ ಬರುವ ಕರಪಾನು, ತುರಿ, ಹುರುಕಾಲು, ಗಜ್ಜಿ, ಮತ್ತು ದೊಡ್ಡವರಿಗೆ ಗಜ್ಜಿ ಸಂಬಂಧವಾದ ವ್ಯಾಧಿಗಳು, ಸುಂಡು, ತಲೆಯಲ್ಲಿಯೂ ಇತರ ಕಡೆಗಳಲ್ಲಿಯೂ ನೋವನ್ನೂ ಅನಂತರ ಉರಿಯನ್ನೂ ಉಂಟುಮಾಡುವ ಎಲ್ಲಾ ಹುಣ್ಣುಗಳಿಗೆ, ಹೊರಗೆ ಹಚ್ಚುವದರಿಂದಲೇ ಬಹು ಶೀಘ್ರತೆಯಾಗಿ ವಾಸಿಯಾಗುವವು. ಬೆಲೆ ಸೀಸೆ ೧ಕ್ಕೆ ೮ ಆಣೆ. ವಿ. ಪಿ. ೩ ಸೀಸೆವರಿಗೂ ೫ ಆಣೆ.

ಕೇಶ ಸುವಾಸಿನಿ — ಈ ತೈಲವು ಪೂರ್ವ ಪಶ್ಚಿಮ ದೇಶಗಳ ಅಮೂಲ್ಯ ಸುವಾಸನಾದ್ರವ್ಯ ಯುಕ್ತವಾಗಿ ತುಂಬಾ ಪರಿಮಳ ಕೊಡುವಂಥಾದ್ದಾಗಿರುತ್ತದೆ. ಇದರಿಂದ ಕೂದಲು, ಮೀಸೆಗಳು, ಕಣ್ಣುರೆಪ್ಪೆಗಳು ಸಮೃದ್ಧಿಯಿಂದ ಬೆಳೆಯುತ್ತವೆ. ತಲೆಗೂ, ಮೆದುಳಿಗೂ, ಕಣ್ಣುಗಳಿಗೂ ತಂಪುಕೊಡುತ್ತದೆ. ಬೋಳುತಲೆ, ಸುಂಡು ಮುಂತಾದ್ದನ್ನು ವಾಸಿಮಾಡುತ್ತದೆ. ವಿಲಾಯತಿಯ ಪರಿಮಳ ವಸ್ತುಗಳಮೇಲೆ ಪ್ರೀತಿ ಇರುವವರಿಗೆ ಅಚ್ಚುಮೆಚ್ಚಿನದಾಗಿರುತ್ತದೆ. ಬೆಲೆ ಸೀಸೆ ೧ಕ್ಕೆ ರೂ. ೧. ವಿ. ಪಿ. ಚಾರ್ಜು ೩ ಸೀಸೆವರಿಗೂ ೫ ಆಣೆ.

☞ ಈ ಪ್ರಾಂತ್ಯ ಕನ್ನಡ, ತೆಲುಗು, ಮಲೆಯಾಳ ಈ ಭಾಷೆಗಳು ತಿಳಿಯುವದಿಲ್ಲವಾದುದರಿಂದ ಪೋಷಕರು ದಯವಿಟ್ಟು ಆರ್ಡರುಗಳನ್ನು ಮತ್ತು ಪತ್ರವ್ಯವಹಾರಗಳನ್ನು ಇಂಗ್ಲೀಷಿನಲ್ಲಾಗಲೀ, ತಮಳುನಲ್ಲಾಗಲೀ ಸ್ಫುಟವಾಗಿ ತಿಳಿಯುವಂತೆ ಬರಿಯಬೇಕು.

MY ADDRESS.
P. SUBBAROY,
Ayurvedic Pharmacy,
Sri Perumalkoil,
SANNATHY, TANJORE.

ನಮ್ಮ ವಿಳಾಸ:—
ಪಿ. ಸುಬ್ಬರಾಯಿ,
ಆಯುರ್ವೇದ ಔಷಧಶಾಲ,
ಶ್ರೀ [illegible] ದೇವಸ್ಥಾನ,
ಸನ್ನದಿ, ತಂಜಾವೂರು.

ಬಹುಮಾನ! ಬಹುಮಾನ!! ಬಹುಮಾನ!!!

1—4—0ಯನ್ನು ಮಣಿಯಾರ್ಡರ ಮೂಲಕ ಕಳುಹಿಸುವವರಿಗೆ ಒಂದು ಹಂಟರ್ ಮನ್ ಜೇಬುಗಡಿಯಾರ, ಗಾಢನಿದ್ರೆಯಲ್ಲು ಸಹ ನಿಮ್ಮ ನ್ನೆಬ್ಬಿಸುವ ಅಲಾರಂ ಟೈಂಪೀಸು, ರೈಲ್ವೆ ಲಿವರ್ ಎಂಬ ಸಾದಾ ಟೈಂಪೀಸು, 18 ಕ್ಯಾರೆಟ್ ಚಿನ್ನದ ಸುಂದರವಾದ ಕೈ ಉಂಗುರ ಅಲ್ಲದೆ ಶಾಯಿ ಇಲ್ಲದೆ ತಾನಾಗಿ ಬರೆಯುವ 14 ಕ್ಯಾರೆಟ್ ಚಿನ್ನದ ಮುಳ್ಳುಳ್ಳ ಫೌಂಟನ್ ಪೇನು ಇವುಗಳಲ್ಲಿ ಯಾವದಾದರೂ ಇದನ್ನು ನಮ್ಮ ಕಂಪೆನಿ ಹೆಸರು ಪ್ರಖ್ಯಾತಿಯಾಗುವದಕ್ಕಾಗಿ ಕೆಲವು ಕಾಲದ ವರೆಗೆ ಮಾತ್ರವೇ ಕೊಡಲ್ಪಡುತ್ತೆ. ಮೇಲೆ ಹೇಳಿದ ಸಾಮಾನುಗಳು ಪ್ರತಿ ಒಂದು ರಖಂನಲ್ಲಿ ಸ್ವಲ್ಪವೇ ಇರುವದರಿಂದ ಜಾಗ್ರತೆ ಮಣಿಯಾರ್ಡರ್ ಕಳುಹಿಸಿ. ವಿ. ಪಿ. ಮೂಲಕ ಸಾಮಾನುಗಳನ್ನು ಕಳುಹಿಸುವದಿಲ್ಲಾ.

ವಿಳಾಸ:— ಗೌಡ್ ಆಂಡ್ ಕಂಪೆನಿ,
ತಿರುವಲ್ಲಕೇಣಿ, ಮದರಾಸು.

ಮಧುರೆ ಚುನ್ನಡಿ ಅಂಚಿನ ಸೀರೆ ಅವ್ವಲ್ ರಖಂ ರೂ 1-15-0.

ಇದು 18 ಮೊಳ ಧಾರಾಳವಾಗಿದೆ. ಉಡಲು ಲಾಯಖಾದದ್ದು. ಬಣ್ಣ ಹೋಗದು. ಸುಂದರವಾದ ಸೆರಗು. ಪೋಟೀ ಪ್ರಕಟಣೆಗಳ ದೆಸೆಯಿಂದ ಈ ಭಾರೀ ಕ್ರಯದ ಸೀರೆಯನ್ನು ಅಸಲು ಬೆಲೆಗೆ ತಗ್ಗಿಸಿ ಮಾರುತ್ತೇವೆ. ಜಾಗ್ರತೆ ತರಿಸುವವರಿಗೆ ಮಾತ್ರ ಈ ಕ್ರಯಕ್ಕೆ ದೊರೆಯುತ್ತೆ.

ವಿಳಾಸ:— ರಾಮರಾವ್, ಎಸ್. ಎಂ. ಕೋಯಿಲ್ ಬೀದಿ,
[139-4] ತಿರುವಲಕ್ಕೇಣಿ, ಮದರಾಸು.

ತಂಜಾವೂರು ಗೆಜ್ಜೆ ಅಡ್ಡಿಗೆ ಕ್ರಯ 0—7—0

ನಮ್ಮಲ್ಲಿ ಜನಗಳಿಗೆ ನಂಬಿಕೆ ಹುಟ್ಟುವುದಕ್ಕಾಗಿ ಮಾದರಿ ಅಡ್ಡಿಗೆಯನ್ನು ನೋಡಬೇಕೆಂದು ಬರೆಯುವವರಿಗೆ ಮಾದರಿ ಅಡ್ಡಿಗೆಯನ್ನು ಉಚಿತವಾಗಿ ಕಳುಹಿಸುತ್ತೇವೆ.



ಇದು ಕೆನಡಿಯನ್ ಚಿನ್ನದಿಂದ ಗಟ್ಟಿ ಗೆಜ್ಜೆಗಳನ್ನು ತಯಾರಿಸಿ ಸುಂದರವಾಗಿ ತುತುರಿಪುಗಳನ್ನು ಇಟ್ಟು ಅಪರಂಜಿಯ ಮುಲಾಮನ್ನು ಹಾಕಿ ನೋಡುವವರಿಗೆ ಆಶ್ಚರ್ಯವಾಗುವ ಹಾಗೆ ಸ್ವಲ್ಪ ಕ್ರಯವನ್ನಿಟ್ಟು ತಯಾರಿಸಿರುತ್ತೆ. ಇದು ಗಾಜಿನ ಮಣಿಗಳಲ್ಲ, ನಿಜವಾದ ಗಟ್ಟಿ ಗೆಜ್ಜೆಗಳು, ಸ್ತ್ರೀಯರು ಕೊರಳಲ್ಲಿ ಧರಿಸುವುದಕ್ಕೆ ಲಾಯಕ್ಕಾದದ್ದು.

ವಿಳಾಸ:— ಎಸ್. ಎನ್. ಮೂರ್ತಿ ಕಂಪೆನಿ,
ತಿರುವಲಕ್ಕೇಣಿ, ಮದರಾಸು.

ಸೂರ್ಯೋದಯ ಪುಸ್ತಕ ಭಂಡಾರ.

ನಮ್ಮ ಪುಸ್ತಕ ಶಾಲೆಯಲ್ಲಿ ದೊರಕುವ ಪುಸ್ತಕಗಳು.

ದ್ವಾದಶಸ್ಕಂದ ಭಾಗವತ, ಅವ್ವಲ್ ಗ್ಲೇಜ್‌ಕಾಗದದ ಪ್ರತಿ ರೂ. ೫. ದ್ವಾದಶಸ್ಕಂದ ಭಾಗವತ ಸಾಧಾರಣ ಕಾಗದ ಮಯ್ಯಂ ಪ್ರತಿ ರೂ. ೪. ದಶಪರ್ವ ಭಾರತ ಮೈಸೂರು ಪ್ರತಿ ರೂ. ೨. ದಶಪರ್ವ ಭಾರತ ಮಯ್ಯಂ ರೂ. ೧—೮—೦. ಭಾರತ ಕಥಾಸಂಗ್ರಹ ೧೮ ಪರ್ವದ್ದು ಆಣೆ ೬. ತೊರವೆ ರಾಮಾಯಣ ಅವ್ವಲ್ ಪ್ರತಿ ರೂ. ೨ ತೊರವೆ ರಾಮಾಯಣ ಮಯ್ಯಂ ಪ್ರತಿ ರೂ. ೧. ರಾಮಾಯಣ ಕಥಾಸಂಗ್ರಹ ದಶಾವತಾರ ಕಥೆಗಳ ಸಹಿತ ಅವ್ವಲ್ ರೂ. ೧. ಸೋಮೇಶ್ವರ ಶತಕ ಟೀಕು ೦—೨—೬. ಸೋಮೇಶ್ವರಶತಕ ಮೂಲ ೬ ಪೈ. ಹರಿಭಕ್ತಿಸಾರ ಟೀಕು ೦—೨—೬. ಹರಿಭಕ್ತಿಸಾರ ಮೂಲ ೬ ಪೈ. ನಿಜಲಿಂಗಶತಕ ಟೀಕು ೦—೨—೬. ನಿಜಲಿಂಗಶತಕ ಮೂಲ ೬ ಪೈ. ಸಟೀಕ ಸುದತೀ ಶತಕ ಆಣೆ ೨. ಟೀಕು ತಾತ್ಪರ್ಯ ಸಹಿತ ಭಾಸ್ಕರಶತಕ ಆಣೆ ೬. ಬಸವ ಪುರಾಣ ಆಣೆ ೧೨. ಚನ್ನ ಬಸವ ಪುರಾಣ ಅವ್ವಲ್ ಗ್ಲೇಜ್‌ಕಾಗದ ರೂ. ೧—೪—೦. ಚನ್ನ ಬಸವ ಪುರಾಣ ಮಯ್ಯಂ ಆಣೆ ೧೨. ದೇವೀ ಮಹಾತ್ಮ್ಯೆ ಪದ್ಯ ಆಣೆ ೪.

ಇದಲ್ಲದೆ ವೈದ್ಯಗ್ರಂಥಗಳು, ಜೋತಿಷ್ಯ ಗ್ರಂಥಗಳು, ನಾವಿಲ್ ಕಥೆಗಳು, ಹೊಸದಾಗಿ ಬಂಗಾಳಿಯಿಂದ ಕನ್ನಡಿಸಿದವುಗಳು, ನಾಟಕಗಳು, ವೇದಾಂತ ಗ್ರಂಥಗಳು ವಗೈರೆ ನೂರಾರು ಪುಸ್ತಕಗಳು ಇವೆ. ನೋಡಲಪೇಕ್ಷಿಸುವವರಿಗೆ ನಮ್ಮ ಪುಸ್ತಕಗಳ ಒಂದು ಕಾಟಲಾಗನ್ನು ಮುಫತ್ತಾಗಿ ರವಾನಿಸುವೆವು.

ವಿಳಾಸ:— ಮ್ಯಾನೇಜರ್
ಸೂರ್ಯೋದಯ ಪುಸ್ತಕ ಭಂಡಾರ,

ವ್ಯಾಧಿತರೇ!!

ಇತ್ತ ಲಕ್ಷ್ಯ ಕೊಡಿರಿ.

ಯುಕಲಿಪ್ಟಸ್ ತೈಲ.—ತಲೆನೋವು, ಕಣ್ಣುಉರಿ, ಕತ್ತಿ, ಕಲ್ಲಿನಿಂದುಂಟಾದ ಗಾಯ, ಸಕಲ ವಿಧವಾದ ವಾಯುರೋಗ, ಕೆಮ್ಮು, ಉಬ್ಬಸ, ಶೀತಭೇದಿ, ಉಷ್ಣಭೇದಿ, ಹೊಟ್ಟೆಯಲ್ಲಿ ಗಡ್ಡೆ, ಸ್ತ್ರೀಯರ ವ್ಯಾಧಿಯ ಸಂಬಂಧ ಬಿಳುಪು, ಮೊದಲಾದ ಮೇಹರೋಗಗಳು, ಕಿವಿಯಲ್ಲಿ ಕೀವು ಬರುವುದು, ಸಕಲ ವಿಧವಾದ ಚಳಿಜ್ವರ (ಮಲೇರಿಯ) ವಾಂತಿಭೇದಿ, ಹೆಂಗಸರ ಹೊಟ್ಟೆನೋವು ಮೊದಲಾದ ಸರ್ವ ವಿಧವಾದ ರೋಗಗಳಿಗೆ ದಿವ್ಯೌಷಧಿ. ಕ್ರಯ ಔನ್ಸ್ ಸೀಸೆಗೆ ೫ ಆಣೆ. ವ್ಹಿ. ಪಿ. ಬೇರೆ. ಡಜನ್ ಸೀಸೆಗಳನ್ನು ತರಿಸಿಕೊಂಡರೆ ರೂ. ೩. ವ್ಹಿ. ಪಿ. ಬೇರೆ. ಅನುಪಾನ ಪತ್ರ ಸೀಸೆಯೊಂದಿಗೆ.

ಇಕ್ಲಿಪ್ಸ್ ಬಾಮ್:—ವಾತ, ಸಂಧಿವಾತ, ಶಿರೋಭಾರ, ಅರ್ಧಾಂಗವಾಯು, ಎದೆನೋವು, ಶೀತ, ಕೆಮ್ಮು, ಹಲ್ಲುನೋವು, ಘಾಯ, ಪಕ್ಷವಾತ, ಸೊಣಸೆ, ನಾಯಿಕಡಿತ, ಕಜ್ಜಿ, ಹುಳ ಮೇಯುವುದು ಮೊದಲಾದ ಸರ್ವ ವಿಧದ ನೋವುಗಳಿಗೆ ದಿವ್ಯೌಷಧ. ಬಾಟ್ಲಿ ೧ಕ್ಕೆ ೮ ಆಣೆ. ವ್ಹಿ. ಪಿ. ಬೇರೆ. ಡಜನ್ ಬಾಟ್ಲಿಗಳಿಗೆ ರೂ. ೪-೧೨-೦. ವ್ಹಿ. ಪಿ. ಬೇರೆ.

ಸ್ನೇಹಲತಾ ಮಸ್ತಕತಾಪಹಾರಿಣೀ:—ತಲೆನೋವು, ಶಿರೋಭಾರ, ತಲೆಸಿಡಿತ ಮೊದಲಾದ ಮೆದುಳು ರೋಗಗಳಿಗೆ ದಿವ್ಯ ತೈಲ. ಕೇಶವು ಅಭಿವೃದ್ಧಿ ಹೊಂದುವುದು. ಸೀಸೆ ೧ಕ್ಕೆ ೧೨ ಆಣೆ. ವ್ಹಿ. ಪಿ. ಬೇರೆ. ಡಜನ್ ಬಾಟ್ಲಿಗಳಿಗೆ ರೂ. ೮. ವ್ಹಿ. ಪಿ. ಬೇರೆ.

ವಿಳಾಸ:— ದಿ ಇಕ್ಲಿಪ್ಸ್ ಏಜನ್ಸಿ.
ಕಂಕನಾಡಿ ಪೋಸ್ಟು, ದ. ಕ.

ದಸರಾ ಬಹುಮತಿ ಗಡಿಯಾರ.

15 ಸಾಮಾನು ಬಹುಮತಿ ಸಹಿತ ರೂ. 3—14—0.

ಇದರಲ್ಲಿ ನಮೂದಿಸಿರುವ 7 ರೂಪಾಯಿ ಬೆಲೆವುಳ್ಳ ಗಡಿಯಾರವನ್ನು ದಸರಾ ಒಳಗೆ ತರಿಸಿಕೊಳ್ಳುವವರಿಗೆ ರೂ. 3—14—0ಗೆ 15 ಬಹುಮಾನಗಳು ಉಚಿತವಾಗಿ ಕೊಡುತ್ತೇವೆ.

1. ಉತ್ತರ ಮುಖಿ, 2. ಪೇನಾಕತ್ತಿ, 3. ಬ್ಲೂಬ್ಲೆಕ್ ಶಾಯಿ ಪೊಟ್ಲಿ, 4. ಹಣದ ಚೀಲ, 5. ಗಡಿಯಾರ ಸರಪಣಿ, 6. ಎಲೆಕ್ಟ್ರಿಕ್ ಬಂಗಾರದ ಶ್ಯಾಮಂತಿಗೆ ಹೂವು, 7. ಇಮಿಟೇಷನ್ ಡೈಮಂಡ್ ಶರಟು ಗುಂಡಿ, 8. ಜರ್ಮನ್ ಬೆಳ್ಳಿಯ ಕುಂಕುಮ ಭರಣಿ, 9. ಡಿಟ್ಟೋ ಸಾದಿನ ಚಿಪ್ಪು, 10. ಡಿಟ್ಟೋ ಕಣ್ಣುಕಪ್ಪಿನ ಭರಣಿ, 11. ಡಿಟ್ಟೋ ನಶ್ಯದ ಡಬ್ಬಿ, 12. ಇಮಿಟೇಷನ್ ಡೈಮಂಡ ಮೂಗುಬಟ್ಟು, 13. ಇಮಿಟೇಷನ್ ತಂಜಾವೂರು ಗೆಜ್ಜೆ ಅಡ್ಡಿಗೆ, 14. ಎಲೆಕ್ಟ್ರೋ ಸೀಲು ಉಂಗುರ, 15. ಕತ್ತಿ.

ಈ ಕೆಳಗಿನ ಸಾಮಾನುಗಳು ಸಹ ನಮ್ಮಲ್ಲಿ ದೊರೆಯು

ಮಧುರೆ ಚುನ್ನಡ ಸೀರೆ ಒಂದಕ್ಕೆ ರೂ. 2—[illegible]

ಮಧುರೆ ಕೆಂಪು ಸೀರೆ ರೂ. 3—0—[illegible]
ತಂಜಾವೂರು ಗೆಜ್ಜೆ ಅಡ್ಡಿಗೆ [illegible] 6.
ವಿಳಾಸ:—
[illegible]. ರಾಧಾಕೃಷ್ಣ,
2/18 ಕಾರು ಸ್ಟ್ರೀಟು,
[illegible]
ಮದರಾಸು.

ಅಮೃತಾಂಜನ

ಜಗತ್ಪ್ರಸಿದ್ಧವಾದ ಬೇನೆಹಾರಿ ಮುಲಾಮು.

ಇದರ ಉಪಯೋಗದಿಂದ:—ವಾತ, ಸಂಧಿವಾತ, ತಲೆನೋವು, ಶಿರೋಭಾರ, ಅರ್ಧಾಂಗ ವಾಯು, ಉಳುಕು, ಎದೆ ನೋವು, ಸೊಂಟದ ನೋವು, ಶೀತ, ಕೆಮ್ಮು, ದಂತಶೂಲೆ, ಮೂಲವ್ಯಾಧಿ, ಚೇಳು ಕಡಿತ, ಆನೆಗಾಲು, ಸುಟ್ಟ ಘಾಯ, ಮೊದಲಾದ ಎಲ್ಲಾ ತರದ ನೋವುಗಳ ಮೇಲೆ ದಿವ್ಯ ಔಷಧವಾಗಿ ರುತ್ತದೆ. ಸಾವಿರಾರು ಡಾಕ್ಟರರೂ, ಇದಕ್ಕೆ ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಪ್ರತಿ ತಿಂಗಳಲ್ಲೂ 25,000 ಬಾಟ್ಲಿಗಳು ಮಾರಲ್ಪಡುತ್ತವೆ. ಬಾಟ್ಲಿ ಒಂದರ ಕಿಮ್ಮತು ಆಣೆ 8. ಡಜನ್ 1ಕ್ಕೆ ರೂ. 5-0-0. ವಿ. ಪಿ. ಖರ್ಚು ಪ್ರತ್ಯೇಕ.

ಎಚ್ಚರಿಕೆ:—ಅಮೃತಾಂಜನವನ್ನು ಪಡಕೊಳ್ಳುವಾಗ ಸುಂದರವಾದ ಮತ್ತು ಹಲವು ಭಾಷೆಗಳುಳ್ಳ ಕರಡಿಗೆ ಸಮೇತ ಪಡಕೊಳ್ಳಿರಿ.

ಗಜಕರ್ಣದ ಮುಲಾಮು.

ಮೂರು ಸರ್ತಿ ಹಾಗಿಸುವದರೊಳಗೆ ಗಜಕರ್ಣ ನಾಶವಾಗಿ ಹೋಗುವದು. ಇದರಿಂದ ಉರಿಯು ಬರುವದಿಲ್ಲ. ಚರ್ಮವು ಕಪ್ಪಾಗುವದಿಲ್ಲ. ಇದುವರೆಗೆ ಒಂದು ಮಿಲಿಯ ಡಬ್ಬಿಗಳು ಮಾರಲ್ಪಟ್ಟವು. ರಾಜಾರಾಣಿ ಟ್ರೇಡ್‌ಮಾರ್ಕ್. 0—6—0. 3 ಡಬ್ಬಿಗಳಿಗೆ 0—15—0. ವಿ. ಪಿ. ಪ್ರತ್ಯೇಕ.

ದಂತಮಂಜನ.

ರಾಜಾರಾಣಿ ಟ್ರೇಡ್‌ಮಾರ್ಕ್.

ಈ ಮಂಜನದಿಂದ ಹಲ್ಲುಗಳನ್ನು ದಿನಾಗಲೂ ತಿಕ್ಕುವದರಿಂದ ಹಲ್ಲುನೋವು, ಹಲ್ಲುಗಳಿಂದ ಬರುವ ರಕ್ತ, ಹಲ್ಲುಗಳ ವಾಸನೆ, ಮುಂತಾದವುಗಳೆಲ್ಲಾ ನಿಲ್ಲುತ್ತದೆ. ಇದರಲ್ಲಿ ಹಲವು ನಮೂನೆಯ ಔಷಧಗಳಿವೆ. ಬರೀ ಚೋಕಿನ ಹುಡಿ ಅಲ್ಲ. ಡಬ್ಬಿ 1ಕ್ಕೆ 0—2—6. ಡಜನ್ 1ಕ್ಕೆ 1—2—0. ವಿ. ಪಿ. ಪ್ರತ್ಯೇಕ.

ಸುಂದರಿ ಮುಲಾಮು.

ಮುದ್ದಣಕಳನ್ನು ನಾಶಪಡಿಸಿ ಮುಖವನ್ನು ಸುಂದರಗೊಳಿಸುವದು. ಡಬ್ಬಿ 1ಕ್ಕೆ ರೂ. 0—8—0.

ಮೋಹಿನಿ ತೈಲ

ಈಗ ಹಲವು ನಮೂನೆಯ ತೈಲಗಳು **ಉಪಯೋಗಿಸುವವರು ಈ ನಮ್ಮ** ಸುಗಂಧಮಯವಾದ ಮೋಹಿನಿ ತೈಲವನ್ನು ಒಂದು ಸಾರಿ ಉಪಯೋಗಿಸಿ ನೋಡಿರಿ. ಇದರಲ್ಲಿ ಹ್ವೈಟ್ ಒಯಿಲ್ ಇಲ್ಲಾ. ಇದು ಗಿಡಮೂಲಿಕೆಗಳಿಂದಲೂ, ಬದಾಮಿನ ಎಣ್ಣೆಯಿಂದಲೂ ತಯಾರಿಸಲ್ಪಟ್ಟಿದೆ. ಇದರಿಂದ ಕೂದಲುಗಳು ಉದ್ದವಾಗಿಯೂ, ನಯವಾಗಿಯೂ, ಕಪ್ಪಾಗಿಯೂ ಬೆಳಿಯುವವು.

ಬಾಟ್ಲಿ ಒಂದರ ಕಿಮ್ಮತು ಆಣೆ 0—12—0.

ವಜ್ರಗುಟಿಕ.

ಧಾತುಪುಷ್ಟಿ, ಧಾತುವೃದ್ಧಿ, ಶಕ್ತಿವರ್ಧಕ. 20 ಗುಳಿಗೆಗಳ ಡಬ್ಬಿ ಒಂದರ ದರ ರೂ. 1—0—0.

ಕೆ. ನಟರಾಜನ್ ಎಡಿಟ್, ಇಂಡಿಯನ್ ಸೋಸಿಯಲ್ ರಿಫ಼ೊರ್ಮರ್:— ಅಮೃತಾಂಜನ ಎಲ್ಲಾ ಔಷಧಗಳಿಗಿಂತಲೂ ಬಹಳ ಉತ್ತಮವಾದ ಔಷಧ.

ಡಬ್ಲ್ಯು ಮೆಕ್ಸವೆಲ್, ಮೈಸೂರು:— ಅಮೃತಾಂಜನದಿಂದ ಎಂಥಾ ಕಠಿಣವಾದ ವಾತ ನೋವಾದರೂ ನಿಲ್ಲುತ್ತವೆ.

ಆರ್. ಆರ್. ಗಂಗೋಲಿ:— ಅಮೃತಾಂಜನ ವಾತ, ತಲೆ ನೋವುಗಳ ಮೇಲೆ ದಿವ್ಯ ಔಷಧ.

ಡಾಕ್ಟರ್ ದಾಂಡೇಕರ್, ಎಲ್. ಎಮ್. ಎಂಡ್. ಎಸ್:— ಅಮೃತಾಂಜನ ಎಲ್ಲಾ ನೋವುಗಳ ಮೇಲೆ ದಿವ್ಯ ಔಷಧ.

ನಮ್ಮ ಔಷಧಗಳನ್ನು ಪಡಕೊಳ್ಳುವಾಗ ಅಮೃತಾಂಜನ ಡಿಪೊ ಮುಂಬಯಿ ಎಂಬ ಹೆಸರನ್ನು ಓದಿನೋಡಿ ಪಡಕೊಳ್ಳಿರಿ.

ಅಮೃತಾಂಜನ ರಖಮಾಗಿಯೂ, ಚಿಲ್ಲರೆಯಾಗಿಯೂ, ಬೇಕಾದವರು ನಮ್ಮ ಮುಂಬಯಿ ಆಫೀಸಿಗೆನೇ ಬರಿಯಬೇಕು. ಮದ್ರಾಸು ಆಫೀಸಿನವರು ರಖಮಾಗಿ ಅಮೃತಾಂಜನ ರವಾನಿಸಿ ಕೊಡುವ ಏರ್ಪಾಡು ಮಾಡಲಿಲ್ಲ.

ಮಂಗಳೂರಲ್ಲಿ — ಎಲ್ಲಾ ಔಷಧಗಳು ಈ ಕೆಳಗಿನ ಕಂಪೆನಿಗಳಲ್ಲಿ ಸಿಕ್ಕುವವು.

ಮಂಗಳೂರು ಟ್ರೇಡಿಂಗ್ ಎಸೋಸಿಯೇಶನ್, ಪರ್ಲ್ ಎಂಡ್ ಸನ್ಸ್, ದಿ ಊಲನ್ ಮಾರ್ಟ್, ಕೊಚ್ಚಿಕಾರ ಬ್ರದರ್ಸ್ ಉಡುಪಿ.

ಅಮೃತಾಂಜನ ಡಿಪೊ.

9 ಜಹಂಗೀರ್ ಸ್ಟ್ರೀಟ್,	**109 ಫ್ರೇಯರ್ ರೋಡ,**
ಜೋರ್ಜ ಟೌನ್, ಮದ್ರಾಸು.	**ಮುಂಬಯಿ.**

ಮೈಸೂರು ಊದಬತ್ತಿಗಳು.

ಇಂಡಿಯಾ ದೇಶದಲ್ಲಿ ನಡದಿರುವ ಯಗ್ಜಬೀಶನ್‌ಗಳಲ್ಲಿ ಸುಮಾರು ಸರ್ಟಿಫಿಕೇಟುಗಳನ್ನು 32 ಮೆಡಲುಗಳನ್ನು ಹೊಂದಿರುವ ನಮ್ಮ ಸುಗಂಧ ದ್ರವ್ಯಗಳನ್ನು ಶುಭಕಾರ್ಯಗಳಲ್ಲಿಯೂ ಆರೋಗ್ಯ ಜನಕಸಮಯದಲ್ಲಿಯೂ ರತಿಕರ ಉಲ್ಲಾಸ ಸಮಯದಲ್ಲಿಯೂ ಸಹ ಅತ್ಯವಶ್ಯಕವಾದ್ದರಿಂದ ಪ್ರತಿ ಒಬ್ಬರು ಈ ಕೆಳಗೆ ಇರುವ ಸುಗಂಧ ದ್ರವ್ಯಗಳನ್ನು ತರಿಸಿ ಆನಂದ ಹೊಂದುವದಲ್ಲದೆ ಸ್ವದೇಶ ವ್ಯಾಪಾರಕ್ಕೂ ಪ್ರೋತ್ಸಾಹಿಸುವರೆಂದು ನಂಬಿರುತ್ತೇನೆ.

ಊದಬತ್ತಿಗಳು 24 ರೂ. ತೂಕದ ಶೇರು 1ಕ್ಕೆ ರೂ. 12-0-0, 5-0-0, 3-0-0, 2—8—0, 1—4—0, 1—0—0.

ಅರಗಜ ಮತ್ತು ಬಿಲ್ಲೆಗಳು ತೊಲಾ 1ಕ್ಕೆ 2—0—0, 1—0—0, 0—12—0, 0—6—0.

ರಾಯಲ್ ಸುಗಂಧಿ ಶೀಸೆ 1ಕ್ಕೆ 0—8—0. **ಬಾಲಗ್ರಹ** ಧೂಪ ಟಿನ್ 1ಕ್ಕೆ 0—8—0. **ಕಸ್ತೂರಿ ಮಾತ್ರೆ** ಶೀಸೆ 1ಕ್ಕೆ 0—4—0, ಇದಲ್ಲದೆ ಇನ್ನು **ಅನೇಕ ತರಹ ಸೆಂಟ್ಸು**ಗಳು, ಯಸೆನ್ಸ್‌ಗಳು, ಸುಗಂಧ ದ್ರವ್ಯಗಳು, ಬೆಳ್ಳಿಯಿಂದ ತಯಾರಿಸಿದ ಸಣ್ಣ ಸಣ್ಣ ವಿಗ್ರಹಗಳು, ಬಣ್ಣದ ಸಾಮಾನುಗಳು ಸಹ ಇರುತ್ತವೆ. ಮತ್ತು ವರ್ಷಕ್ಕೆ ಎರಡಾವರ್ತಿಗೆ ಕಡಿಮೆಯಿಲ್ಲದೆ

ಬಹುಮಾನ ಹಂಚಲ್ಪಡುತ್ತೆ.

ಟಿ. ಎಲ್. ಉಪಾಧ್ಯಾಯ,

ಸುಗಂಧಕಾರಿ, ಮೈಸೂರು.

ದಿ ಕೆನರಾ ಸ್ಯಾಕಲ್ ಮಾರ್ಟ್, ಉಡುಪಿ.



1. ಮೇಲಣ ಹೆಸರಿನಲ್ಲಿ ಉಡುಪಿಯಲ್ಲಿ ಹೊಸಥಾಗಿ ಒಂದು ಕಾರಖಾನೆಯು ತೆರೆಯಲ್ಪಟ್ಟಿದೆ. ಸದರಿ ಕಾರ್ಖಾನೆಯಲ್ಲಿ ಪ್ರಸಿದ್ಧವಾದ ಬಿ. ಎಸ್. ಎ. ಸಿಂಗರ್ ಹಂಬರ್, ರಜವಿಟ್‌ವರ್ತ ಅಲ್ಲದೆ ಸುಲಭ ದರದ ಬೆಸ್ಸನ್, ರೊಯಲ್, ಮಿನೋರ್ವಾ, ಸ್ಪಾರ್ಕ್ಲಿ ಇತ್ಯಾದಿ ಸ್ಯಾಕಲುಗಳು ಅದಕ್ಕೆ ಬೇಕಾಗುವ ಬಿ. ಎಸ್. ಎ. ಬ್ರೆಂಪ್ಟನ್, ಬ್ರೂಕ್ಸ್, ಲೂಕಸ್, ವೆರ್ರಿ ಮುಂತಾದ ಉಪಕರಣಗಳೂ, ಡನ್‌ಲೊಪ್ ಪಾಮರ್, ಕೆಂಬ್ರಿಜ್, ಇಂಗ್ಲೀಷ ಟಾಯರ್ಸ್ ಮತ್ತು ಟ್ಯೂಬುಗಳೂ ಸಹಾ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಸೀದಾ ವಿಲಾಯತಿಯಿಂದ ತರಿಸುವದರಿಂದ ಗಿರಾಕಿಗಳಿಗೆ ಹೆಚ್ಚಿನ ಲಾಭವೂ ವ್ಯಾಪಾರಸ್ಥರಿಗೆ ಒಳ್ಳೇ ಕಮಿಶನ್ ಸಹಾ ದೊರೆಯುವದು.

2. ನಮ್ಮ ದರಕ್ಕೂ ಬೇರೆಯವರ ದರಕ್ಕೂ ಸರಿಹೋಲಿಸಿ ನೋಡಿದ್ದಲ್ಲಿ ಖಾತ್ರಿಯಾದೀತು.

3. ಸ್ಯಾಕಲ್ ಕಲಿಯಲಪೇಕ್ಷೆ ಉಳ್ಳವರಿಗೆ ಮೂರೇ ದಿವಸಗಳಲ್ಲಿ ಪೂರ್ಣ ಟ್ರೈನ್ ಮಾಡಿ ಬಿಡಲಾದೀತು.

4. ನಾದುರುಸ್ತಿಯಾಗಿರುವ ಸ್ಯಾಕಲುಗಳನ್ನು ಕಡಿಮೆ ಚಾರ್ಜಿನಿಂದ ತೃಪ್ತಿಕರವಾಗಿ ದುರುಸ್ತಿ ಮಾಡಿಕೊಡಲಾದೀತು.

5. ಸ್ಯಾಕಲುಗಳನ್ನು ಬಾಡಿಗೆಗೆ ಕೊಡತಕ್ಕ ಏರ್ಪಾಟೂ ಮಾಡಿಯದೆ.

ಹೆಚ್ಚಿನ ಮಾಹಿತಿಗೂ ಬೇಕಾಗುವ ಸಾಮಾನುಗಳಿಗೂ ಕೆಳಗಿನ ವಿಳಾಸಕ್ಕೆ ಬರದುಕೊಳ್ಳಿರಿ

K. K. Shanbhog, Proprietor
THE CANARA CYCLE MART,
Udipi, S. Canara.

ಕರ್ನಾಟಕ ಔಷಧಾಲಯ

ಇವರ ಸಿದ್ಧೌಷಧಗಳು.

ಒಮ್ಮೆ ತರಿಸಿಕೊಂಡು ಅನುಭವ ತೆಗೆದುಕೊಳ್ಳಿರಿ.

ಧಾತುಪೌಷ್ಟಿಕ ವಜ್ರಾಂಗಪಾಕ.)

ಈ ಪಾಕವನ್ನು ವೃದ್ಧರೂ ಬಾಲಕರೂ ಸ್ತ್ರೀಪುರುಷರೂ ಕೂಡಾ ತೆಗೆದುಕೊಳ್ಳಬಹುದು. ಇದರಿಂದ ನಪುಂಸಕತ್ವ, ಧಾತುವಿಕಾರ, ಸ್ವಪ್ನಾವಸ್ಥೆ, ಅಜೀರ್ಣ, ದಮ್ಮು, ರಕ್ತದೂಷಿತರೋಗ, ಮೆಂದುವಿಕಾರ, ನರಗಳ ಅಶಕ್ತತೆ, ನಿದ್ರಾಭಂಗ, ಅಂಗನಿಸ್ತೇಜತ್ವ, ಮಲದಲ್ಲಿ ಧಾತುಹೋಗುವದು, ಕಟಿಶೂಲೆ, ಶ್ರಮವಿಲ್ಲದೆ ಮೈಬೆವರುವದು, ತಲೆ ತಿರುಗುವದು, ಜನನೇಂದ್ರಿಯ ಶಿಥಿಲತೆ, ಕೈಕಾಲುಗಳ ಹರತ, ಮೂಲವ್ಯಾಧಿ ಇವು ಗುಣವಾಗಿ ಧಾತುಪೌಷ್ಟಿಕ, ರಕ್ತಶೋಧಕ, ಚಿತ್ತೋತ್ಸಾಹಕ, ಮತ್ತು ಗರ್ಮಿ ಮೂಲಕ ಉಂಟಾದ ರೋಗಗಳು ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ಹೆಚ್ಚುತ್ತದೆ. ಉತ್ತಮ ಗುಣಕ್ಕೆ ೪೦ ತೊಲೆಯಿಂದ ೮೦ ತೊಲೆಯವರೆಗೆ. ೪೦ ತೊಲೆಗೆ ಕ್ರಯ ರೂ. ೩—೮—೦, ಒಮ್ಮೇಲೆ ೮೦ ತೊಲೆ ತರಿಸಿಕೊಂಡರೆ ಕ್ರಯ ರೂ. ೬—೦—೦. ಟಪ್ಪಾಲು ಖರ್ಚು ಬೇರೆ.

(೧) ಗಜಕರ್ಣದ ಮಲಮು ಡಬ್ಬಿ ೧ಕ್ಕೆ ಕ್ರಯ ಆಣೆ ೬, (೨) ಗರ್ಮಿ ರೋಗ ನಾಶಕ ಗುಳಿಗೆ ೪೨ಕ್ಕೆ ಉತ್ತಮ ಗುಣ ಕ್ರಯ ರೂ. ೩, (೩) ತಾಂಬೂಲಮೋಹಿನಿ ಕಸ್ತೂರಿ ಮಾತ್ರೆ ೨೫೦ರ ಬಾಟ್ಲಿ ಒಂದಕ್ಕೆ ಕ್ರಯ ಆಣೆ ೪, ಒಮ್ಮೇಲೆ ೬ ಬಾಟ್ಲಿ ತರಿಸಿಕೊಂಡರೆ ೧ ಬಾಟ್ಲಿ ಮುಫತ್ತು, (೪) ರಕ್ತಶುದ್ಧಿಯ ಮೇಲೆ ರಾಮಬಾಣ, ಇಂಡಿಯನ್ ಸಾರಸಾಪರೇಲಾ ಬಾಟ್ಲಿ ೧ಕ್ಕೆ ಕ್ರಯ ರೂ. ೧. ಟಪ್ಪಾಲು ಖರ್ಚು ಬೇರೆ.

ಇನ್ನು ಅನೇಕ ಔಷಧಗಳು ನಮ್ಮ ಕಂಪೆನಿಯಲ್ಲಿ ಸಿಗುತ್ತವೆ. ಅನುಪಾನ ಪತ್ರಿಕೆ ಬಂಗಿಯ ಸಂಗಡ ಕಳುಹಿಸುವೆವು.

ನಮ್ಮ ವಿಳಾಸ:— **ವಿ. ಎಸ್. ಮೋಡಕ,**
ಕರ್ನಾಟಕ ಔಷಧಾಲಯ,
ಮುಕ್ಕಾಂ ಶಿರ್ಶಿ, ಪೋಸ್ಟ್ ಶಿರ್ಶಿ, ಜಿಲ್ಲಾ ಕಾನಡಾ.

ಯುನಿವರ್ಸಲ್ ಎಸ್ಸುರೆನ್ಸ್ ಕೊ, ಲಿಮಿಟೆಡ್.

ಹೆಡ್ ಆಫೀಸು:—191, ಬೌ ಬಜಾರ, ಕಲ್ಕತ್ತಾ.

ಸಹಾಯ! ಉಪಶಾಂತಿ!! ಸಹತಾಪ!!!

ಒಂದು ಇನ್ಶ್ಯೂರೆನ್ಸ್ ಕಂಪೆನಿಯ ಸ್ಥಿರತೆಗೆ ಯಾವ ವ್ಯವಸ್ಥಾಪನೆಗಳು ಬೇಕೆಂಬದನ್ನು ನೀವು ಅರಿತಿರುವಿರೋ?

ಇನ್ಶ್ಯೂರೆನ್ಸ್ ವೈಜ್ಞಾನಿಕರು ಹೇಳುವುದೇನಂದರೆ—ಹೊಸ ಕೇಸುಗಳು, "ಪ್ರಿಮಿಯಮ್ ವರಮಾನ, ಮತ್ತು ರಕ್ಷಿತ ಧನ. ಯುನಿವರ್ಸಲಿನಲ್ಲಿ ಈ ಮೂರರ ಪೈಕಿ ಏನಾದರೂ ಅವಶ್ಯವಿದೆಯೋ ಎಂಬದನ್ನು ವಿವೇಚಿಸಿ ನೋಡಿರಿ.

			ಮೊದಲನೇ ವರ್ಷ.	2ನೇ ವರ್ಷ.
ಹೊಸಕೇಸ್ (ಜೀವ)	...	ರೂ.	13,329—0—0	22,549—0—0
,, (ವಿವಾಹ)	...	,,	25,670—0—0	38,933—0—0
ಜುಮ್ಲಾ ಕೇಸುಗಳು	...	,,	38,999—0—0	61,482—0—0
ವಸೂಲಾದ ಪ್ರೀಮಿಯಮ್	...	,,	1,36,685—0—0	5,34,683—0—0
ಬಾಧ್ಯತೆ ಹಕ್ಕುಗಳು	..	,,	32,074—0—0	2,49,460—0—0
(ಸ್ಪೆಶ್ಯಲ್) ರಕ್ಷಿತ ಧನ	...	,,	10,000—0—0	50,000—0—0
(ಜನರಲ್) ರಕ್ಷಿತ ಧನ	...	,,	37,220—0—0	23,778—3—2

ಲಾಭವು ಶೇಕಡಾ ೯ರಂತೆ ಹಂಚಿ ಕೊಡಲ್ಪಟ್ಟಿದೆ. ಶೇಕಡಾ ೯ರಂತೆ ಲಾಭ ಹಂಚಿ ಕೊಟ್ಟಿದೆ.

ಯುನಿವರ್ಸಲಿನಲ್ಲಿ ಸೇರುವುದು ಯಾಕೆ?

ಯಾಕಂದರೆ—

1. ಅದು 1912ನೇ ಲ್ಯಾಪ್ ಎಸ್ಸೂರೆನ್ಸ್ ಆಕ್ಟಿನ ಪ್ರಕಾರ ಸರಕಾರ ಭದ್ರತೆಯಲ್ಲಿ ಠೇವಣಿ ಇಟ್ಟಿರುವುದು. 2. ಈಗ ಪಟ್ಟಿಯಲ್ಲಿ ವಂತಿಗೆದಾರರ ಸಂಖ್ಯೆ 15,00,00 ಆಗಿರುವುದು. 3. ಬಾಧ್ಯತೆಯನ್ನು ಕೂಡಲೇ ಕೊಟ್ಟು ತೀರಿಸುವುದು. 4. ರೂ. 3,00,000ಗಿಂತಲೂ ಹೆಚ್ಚಿಗೆ ಬಾಧ್ಯತೆಗಳನ್ನು ಕೊಟ್ಟಿದೆ. 5. ಫಂಡು 2,00,000 ರೂಪಾಯಿಗೆ ಹೆಚ್ಚಿದೆ. 6. ಸರಕಾರ ಭದ್ರತೆಯಲ್ಲಿ 50,000 ರೂಪಾಯಿ ಇದೆ. 7. ಮೆನೇಜ್‌ಮೆಂಟಿನ ಖರ್ಚು ಬಹಳ ಕಡಿಮೆಯಾಗಿದೆ. 8. ಕೆಲಸವು ದಿನೇ ದಿನೇ ಹೆಚ್ಚಾಗುತ್ತಿದೆ. 9. ಡೈರೆಕ್ಟರು—ಯಥಾರ್ಥ ಮತ್ತು ಗುಣವಂತರಾದ [illegible] ಗೃಹಸ್ಥರು. 10. ಕೊಟ್ಟ ಪ್ರೀಮಿಯಮಿಗಿಂತಲೂ ದುಬಾರಿ ಬೋನಸ್ ಕೊಡುವುದು ಇವರಲ್ಲಿ ಮಾತ್ರವೇ.

ಪತ್ರಗಳ ಧ್ವನಿ.

"ಬಂಗಾಲಿ"—14ನೇ ಜನವರಿ 1914—ಕಂಪನಿಯ 2ನೇ ವಾರ್ಷಿಕ ವರದಿಯು ನಮ್ಮ ಕೈಗೆ ಬಂದಿದೆ. ನಾವು ಅದನ್ನು ಓದಿನೋಡಿ ಅದು 61,482 ರೂ.ಗಳ [illegible] ಕೇಸುಗಳನ್ನು [illegible] ಎಂಬದನ್ನು ತಿಳಿಕೊಂಡೆವು. ಹಿಂದಿನ ವರ್ಷ 39,000 ಕೇಸುಗಳನ್ನು ಮಾತ್ರವೇ [illegible] 3 ಲಕ್ಷ ಬಾಧ್ಯತೆ ಹಣವನ್ನು ಕಂಪೆನಿಯು ಕೊಟ್ಟಿರುವುದು. [illegible] ಇದರ ಸಾಮರ್ಥ್ಯವನ್ನು [illegible] ಮೆನೇಜ್‌ಮೆಂಟಿನಲ್ಲಿ [illegible]

ನಮ್ಮ ಕಂಪೆನಿಯ [illegible]

[illegible]

ವಿಳಾಸ— [illegible]

[illegible]

Canarese Novels Etc.

ಕನ್ನಡ ಪುಸ್ತಕಗಳು.

ಮ| ರಾ| ರಾ| ಬಿ. ವೆಂಕಟಾಚಾರ್ಯರವರಿಂದ ರಚಿಸಲ್ಪಟ್ಟವು.

	ರೂ. ಆ.		ರೂ. ಆ.
ಬಂಗವಿಜೇತ ಹೊಸ ನಾವಿಲ್	1–4	ಕಮಲಾ ಕಾಂತ ದ್ವಿ. ಮು.	0–2
ದುರ್ಗೇಶನಂದಿನಿ ಸರ್ವೋತ್ಕೃಷ್ಟನಾವಿಲ್	1–4	ಲೀಲೆ [ಸಮಾಜ ಚಿತ್ರ]	0–4
ಕಪಾಲಕುಂಡಲಿ ಡಿಟೊ 2ನೇ ಭಾಗ	1–8	ಮಾಲತಿ [ಅತಿ ಮನೋಹರ] ದ್ವಿ. ಮು.	0–3
ಸೀತಾರಾಮ (ಇತಿಹಾಸ)	1–8	ರಾಧಾರಾಣಿ [ಕಾದಂಬರಿ] ತೃ. ಮು.	0–3
ವಿಷವೃಕ್ಷ ದ್ವಿ. ಮು.	1–4	ಯುಗುಳಾಂಗುರೀಯ ,,	0–3
ದೇವೀ ಚೌಧುರಾಣಿ ಡಿಟೊ	1–4	ಭ್ರಾಂತಿವಿಲಾಸ ,,	0–8
ರಾಜಸಿಂಹ (ಇತಿಹಾಸ)	1–5	ನೊಂದಸುಡಿ [ಸ್ತ್ರೀನೀತಿ]	0–2
ಕಪಾಲಕುಂಡಲ	0.13	ದಾಡಿಯ ಹೇಳಿಕೆ [ಸ್ವಾರಸ್ಯಕರ]	0–2
ಮೃಣ್ಮಯಿ ಡಿಟೊ 2ನೇ ಭಾಗ	1–1	ವೈದ್ಯಾನಿಕ ಪ್ರಹಸನ [ನಕಲಿ]	0–4
ಕೃಷ್ಣಕಾಂತನ ಉಯಿಲು	1–0	ಚಿರತ್ನನಾಟಕರತ್ನ ಡಿಟೊ	0–7
ಮನೋರಮ [ಪತ್ತೇದಾರಿ ಕಥೆ]	1–0	ಚಿತ್ರವಿಚಿತ್ರಾವಳಿ [Tit-Bits]	0–8
ಪರಿಮಳ ಡಿಟೊ ದ್ವಿ. ಮು.	0.10	ನೀರದೆ [ಹೊಸ ಕಾದಂಬರಿ]	0–8
ಸಾಧನೆ. ಡಿಟೊ	0–8	ಭಾರತಮಹಿಳಾ [ಸ್ತ್ರೀನೀತಿ]	0–8
ಕೊಹಿನೂರು [ಇತಿಹಾಸ]	0.12	ಅಮೃತಪುಳಿನ [ನಾವಿಲ್]	0.11
ಅತ್ತಿಗೆ [ಸಂಸಾರ ಚಿತ್ರ] ತೃ. ಮು.	0–3	ಇತ್ಯಾದಿ.	

ಶ್ರೀ ಮಾರುತೀ ಚಿತ್ರಪಟ.

ಶ್ರೀ ವಾಯುಸ್ತುತಿಯುಕ್ತ ಆಂಜನೇಯ ಮೂರ್ತಿ. ಶಾಸ್ತ್ರೋಕ್ತವಾಗಿ ಚಿತ್ರಿಸಲ್ಪಟ್ಟು ಚಿತ್ರಯುಕ್ತವಾಗಿ ಅಚ್ಚಾಗಿರುತ್ತೆ. ಮೂರ್ತಿ ಬಹು ಸುಂದರ! ಮನೋರಂಜಕ ಬಣ್ಣ!! ಪೂಜಾರ್ಹವಾಗಿದೆ!!! ಬೆಲೆ1ಕ್ಕೆ 3 ಆಣೆ 12ಕ್ಕೆ 1 ಉಚಿತ. ಬೇಗ ಬರಿಯಿರಿ! ಬೆಲೆ ಕಮ್ಮಿ ಮಾಡಿದೆ.

ಕಾದಂಬರಿಗಳು — ಉಪಯುಕ್ತ ಪುಸ್ತಕಗಳು.

	ರೂ. ಆ.		ರೂ. ಆ.
ಕಾದಂಬರೀ ಕಥೆ [ಪೂರ್ತಿ] ದ್ವಿ. ಮು.	0–8	ನಿರ್ಭಾಗ್ಯಚಾಣಕ್ಯ [ಹೊಸಕಾದಂಬರಿ]	0–6
ಕ. ಕವಿಚರಿತೆ [ಪೂರ್ವಭಾಗ]	3–2	ಅನಂಗಸುಂದರಿ ಡಿಟೊ	0–8
ಕೃಶಾನು ವಿಶ್ವಾವಸು ಸಂವಾದ [ಗದ್ಯ]	0.10	ತಾರಾ ಸುಂದರಿ ಡಿಟೊ	0–8
ಚಂದ್ರಕಳಾ [ಸ್ವಾರಸ್ಯವಾದ ಕಥೆ]	0–6	ರಾಧಾಮಾಧವಿ ಡಿಟೊ	0–8
ಕಲಾನಾಥ ಡಿಟೊ	0–8	ಸ್ತ್ರೀಧರ್ಮನೀತಿ [ಅತ್ಯುಪಯುಕ್ತ]	0–9
ಶೋಭನೆ [ಬಂಗಾಳಿ ನಾವಿಲ್]	0.12	ಪಶುವೈದ್ಯಸಂಗ್ರಹ ಡಿಟೊ ದ್ವಿ. ಮು.	0–9
ಯಾಮಿನಿ [ಬಂಗಾಳೀ ನಾವಿಲ್]	0–3	ಧರ್ಮಪದವೆಂಬ ಬುದ್ಧಗೀತೆ	0.12
ಪ್ರಿಯಂವದ [ಪತಿವ್ರತಾ ಕಥೆ]	0–8	ಜೈಮಿನಿಭಾರತ [ಸಟೀಕಾತಾತ್ಪರ್ಯ]	4–0
ವೇಷಧಾರಿಣಿಯಾದ ಸನ್ಯಾಸಿನಿ ಡಿಟೊ	0–8	ಹರಿಕಥಾಮೃತಸಾರ ಡಿಟೊ	1–6
ಸನ್ಯಾಸಿ [ಹೊಸ ಕಾದಂಬರಿ]	0–6	ಚದುರಂಗಬೋಧಿನಿ	0–3
ಮೃತ್ಯು ಪರೀಕ್ಷೆ ಡಿಟೊ	0–2	ಸರ್ವೇಮ್ಯಾನ್ಯುಯಲ್	0–5
ಬೃಂದಾವನ ಡಿಟೊ	0–2	ನ್ಯಾಯದರ್ಪಣ [ಲಾ]	1–0
ಸುಮನೋರಮ ಡಿಟೊ	0–2	ವ್ಯವಹಾರ ದೀಪಿಕೆ [ಲಾ]	3–0
ಮಾಲಿನಿ ಡಿಟೊ	0–2	ಶಾಕುಂತಲ ನಾಟಕ ದ್ವಿ. ಮು.	0–9
ಪ್ರೇಮಪಿಪಾಸ ಡಿಟೊ	0–2	ಶೂರಸೇನಚರಿತ್ರೆ ನಾಟಕ ಡಿಟೊ	1–0
ವಿರಕ್ತಳಾದ ಸೌದಾಮಿನಿ ಡಿಟೊ	0–5	ಚಂಡಕೌಶಿಕ ನಾಟಕ ಡಿಟೊ	0.12
ಚಿತ್ರಕಳಾವತಿ ಡಿಟೊ	0–2	ರಾಮವರ್ಮ ಲೀಲಾವತೀ ನಾಟಕ	0–8
ಚಾತುರ್ಯವತಿ ಡಿಟೊ	0–2	ಪಾಂಚಾಲೀ ಪರಿಣಯ ನಾಟಕ	0.10
ವಸುಮತಿ ಡಿಟೊ	0–2	ಚಂಡೀಮದಮರ್ದನ ನಾಟಕ	0–5
ವಿಲಕ್ಷಣಶಿಕ್ಷೆ ಡಿಟೊ	0–2	ಪ್ರಬೋಧ ಚಂದ್ರೋದಯ ನಾಟಕ	0.10
ಪದ್ಮಿನಿ ಡಿಟೊ	0–2	ಭರ್ತೃಹರಿ ನಿರ್ವೇದ ನಾಟಕ	0–3
ಭಾನುಮತಿ ಡಿಟೊ	0–2	ನಿರುಪಮಾ [ನಾಟಕ]	0.12
ಸತೀರೋಹಿಣಿ ಡಿಟೊ	0–2	ಧ್ರುವವಿಜಯ [ನಾಟಕ]	0–4
ಸಂತಾಪಕ ಡಿಟೊ	0–4	ಸೀತಾಪರಿಣಯ [ನಾಟಕ]	0–4
ಚಂದ್ರಮತಿ [ಸ್ತ್ರೀನೀತಿ]	0–6	ಸೀತಾಸುವರ್ಣಮೃಗ [ನಾಟಕ]	0–12

ಎಂ. ಎಸ್. ರಾವ್, ಬುಕ್ ಸೆಲರ್, ಶಂಕರಪುರ, ಬೆಂಗಳೂರು ಸಿಟಿ.

ಲೋಕರಂಜನ್

ಎಂಬ ಈ ಪರಿಮಳದ ಲೋಕವನ್ನೇ ಮೆಚ್ಚಿಸುವುದು. ಇದಕ್ಕೆ ಸಮಾನವಾದುದು ಯಾವುದೂ ಇಲ್ಲವೆಂಬುದು ಅನುಭವದಿಂದ ತಿಳಿಯುವುದು. ದೊಡ್ಡ ಸೀಸೆ 1ಕ್ಕೆ 14 ಆಣೆ, ಸಣ್ಣದು 8 ಆಣೆ. ಟಪ್ಪಾಲು ಖರ್ಚು ಅಲಾಯಿದ.

ವಿಳಾಸ:—

[illegible] ಬೆಂಗಳೂರು ಸಿಟಿ.

[illegible]

"ಶ್ರೀ ಬಸವರಾಜೇಂದ್ರ ವಿಜಯ."

ಪ್ರಸಿದ್ಧವಾದ ಬಸವಪುರಾಣದ ಸಾರಭೂತವಾದ ವಚನಗ್ರಂಥ. ಸುಂದರವಾದ ಮಾತುಗಳು, ಸುಲಭವಾದ ಸರಣಿ, ಭಕ್ತಿರಸ ಪ್ರಧಾನವಾದ ಕಥೆಗಳು, ಶಿವಶರಣರ ಲೀಲೆಗಳು, ವೀರಶೈವಮತದ ತತ್ವಗಳೂ ಸಹ ಅಡಕವಾಗಿರುವುವು. ಮಕ್ಕಳಿಗೂ ಅರ್ಥವಾಗುವಂತಹ ಮೃದುವಾದ ಮಾತುಗಳಿಂದ ಬರೆಯಲ್ಪಟ್ಟಿದೆ. ಲಿಂಗಾಂಗಿಗಳಾದವರೆಲ್ಲರೂ ಇದನ್ನು ಬಿಡದೆ ಆಚರಿಸಿ ತಮ್ಮ ಮತಧರ್ಮವನ್ನರಿತು ಧನ್ಯರಾಗುವರೆಂದು ನಂಬಿರುತ್ತೇವೆ. ಬೆಲೆ ಸುಲಭ. 0—12—0. ದಪ್ಪ ಕಾಗದ. ಸುಂದರವಾದ ಮುದ್ರಣ. ಸ್ವಲ್ಪ ಪ್ರತಿಗಳು ಮಾತ್ರ ಉಳಿದಿವೆ.

ದಾರಣೆ ಸುಲಭ! **ಅಲಿಗರ್ ಬೀಗಗಳು.** ದಾರಣೆ ಸುಲಭ!

ಭದ್ರವಾಗಿಯೂ, ಭಾರವಾಗಿಯೂ ಇರುವುದು. ಒಂದರ ಬೀಗದಕ್ಕೆ ಮತ್ತೊಂದಕ್ಕೆ ಆಗುವದಿಲ್ಲ. ನೋಡುವುದಕ್ಕೆ ಅಂದವಾಗಿಯೂ ಇರುವುದು. ಇದೇ ಮಾದರಿ ಬೀಗಗಳನ್ನು ಇಂಜಿನೀಯರ್ ಇಲಾಖೆಗಳಿಗೂ, ಬ್ಯಾಂಕುಗಳಿಗೂ, ಸರಕಾರಿ ಆಫೀಸುಗಳಿಗೂ ಸಪ್ಲೈಮಾಡಿದೆ.

ನಾಲ್ಕು ಚಕ್ರಗಳಿರುವ ಬೀಗಗಳು.

ನಂಬ್ರ	1	2	3	4	5
	0–12–0	0–15–0	1–4–0	1–10–0	.....

ಆರು ಚಕ್ರಗಳಿರುವ ಬೀಗಗಳು.

1–2–0 1–8–0 2–4–0 3–0–0 3–8–0

ಪಿಲ್ಲರ್ ಬೀಗಗಳು.

0–4–0 0–5–0 0–6–0 0–8–0 0–10–0

ಟ್ರಂಕುಗಳಿಗೆ ಹಾಕುವ ಕೊಂಡಿ ಬಗ್ಗಿಸಿರುವ ಬೀಗ ಒಕ್ಕೆ 0–13–0

೩, ೪, ೫ನೇ ನಂಬರು ಬೀಗಗಳನ್ನು ಬಾಗಲುಗಳಿಗೂ ಕಬ್ಬಿಣದ ಪೆಟ್ಟಿಗೆಗಳಿಗೂ ಉಪಯೋಗಿಸಬಹುದು. ಏಜೆಂಟರುಗಳಿಗೆ ಕಮಿಷನ್ ದೊರೆಯುತ್ತೆ. ಹಾಸಲು ಪ್ರತ್ಯೇಕ.

ಮರದ ಪೆಟ್ಟಿಗೆಗಳಿಗೂ, ಮೇಜುಗಳಿಗೂ, ಬೀರೂಗಳಿಗೂ ಹಾಕುವ ೪ ಚಕ್ರಗಳಿರುವ ಬೀಗಗಳು ಒಕ್ಕೆ 1–8–0, 1–12–0.

ವಿಳಾಸ:— ಎಚ್. ಎಸ್. ರಾವ್ ಅಂಡ್ ಬ್ರದರ್ಸ್,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಅಲ್ಪ ಬೆಲೆಗೆ ಉತ್ತಮ ಪುಸ್ತಕಗಳು.

ನಮ್ಮಲ್ಲಿ ವಿಶೇಷವಾಗಿ ಸರಕಾರಿ ಸ್ಕೂಲು ಪುಸ್ತಕ, ಸಂಸ್ಕೃತ, ಕನ್ನಡ, ತೆಲುಗು, ವೈದ್ಯ, ವೇದಾಂತ, ಜ್ಯೋತಿಷ್ಯ ಗ್ರಂಥಗಳೂ, ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವ ಕಥೆಪುಸ್ತಕಗಳೂ, ಹುಡುಗರಿಗೆ ಉಪಯುಕ್ತವಾದ ಸ್ಟೇಶನರಿ ಸಾಮಾನುಗಳೂ ಬಹಳ ಸುಲಭ ಕ್ರಯಕ್ಕೆ ದೊರೆಯುತ್ತವೆ.

ಅಪೂರ್ವ ಪುಸ್ತಕಗಳು.

ಎಲ್ಲರಲ್ಲಿಯೂ ಇರಬೇಕಾದ್ದು. ಜಮಾ ಖರ್ಚಿನ ಪದ್ಧತಿ 12 ಆಣೆ. ಮಂಡಿ, ಚಿಲ್ಲರೆ ಅಂಗಡಿ, ಜವಳಿ ಅಂಗಡಿ, ಮನೆ ಮುಂತಾದ ಎಲ್ಲಾ ವಿಧವಾದ ಲೆಖ್ಖಗಳನ್ನು ಸುಲಭವಾಗಿ ತಿಳಿಸುತ್ತದೆ.

ಆಂಗ್ಲಭಾಷಾ ಪ್ರಕಾಶಿಕಾ. ಐದು ಭಾಗವು ಒಟ್ಟಿಗೆ ಸೇರಿರುವ ದೊಡ್ಡ ಪುಸ್ತಕ ರೂ. 1—8—0. ಇದನ್ನು ಗುರುವಿನಂತೆ ಭಾವಿಸಿ.

ವೈದ್ಯಸಾರ ಸಂಗ್ರಹ. ಇದು ಅನೇಕ ವೈದ್ಯ ಗ್ರಂಥಗಳಿಂದ ಸಂಗ್ರಹಿಸಿ ಘನ ಪಂಡಿತರಿಂದ ಮರ್ಯಾದಿಸಲ್ಪಟ್ಟಿರುತ್ತೆ. ರೂ. 3.

ಆರ್ಯಕೀರ್ತಿ ...	0–10—0	ಶುಕಸಪ್ತತಿ ...	2—0—0
ಹನುಮದ್ವಿಲಾಸ ...	0—8—0	ಕುಣಿಗಲು ರಾಮಾಶಾಸ್ತ್ರಿಗಳವರ ಚರಿತ್ರೆ ...	1—0—0
ಶಾಕುಂತಲ ನಾಟಕ ...	0—8—0	ಸುಮತಿ ಮದನ ಕುಮಾರರ	
ಸ್ತ್ರೀ ಧರ್ಮನೀತಿ ...	0—8—0	ಚರಿತ್ರೆ I ...	0—8—0
ಶೋಭನೆ ...	0—8—0	,, II ...	0—7—0
ಚಂದ್ರಕಳಾ ...	0—4—0	ಶಿವಗೀತೆ ...	0—6—0
ಕಲಾನಾಥ ...	0—6—0	ಪಾಕಶಾಸ್ತ್ರ...	0—8—0
ಶಿವಾನಂದಲಹರಿ ...	0—6—0	ಸನಾತನಧರ್ಮ ದೀಪಿಕೆ ...	1—0—0
ಪ್ರಶ್ನೋತ್ತರ ಲೆಖ್ಖಬೋಧಿನಿ	1—4—0	ಬಾಲರಾಮಾಯಣ ...	0—4—0
ವಿಷವೃಕ್ಷ ...	1—4—0	ಕಥಾಮಂಜರಿ ...	0—6—0
ದುರ್ಗೇಶ ನಂದಿನಿ ...	1—4—0		
ಮುದ್ರಾಮಂಜೂಷ ...	1—8—0		

ದುಷ್ಟ ಚತುಷ್ಟಯ, ನಳಚರಿತೆ, [illegible], ಮಾಯಾವಿಯ ಅತ್ಯಾಚಾರ. ಪ್ರತಿಯೊಂದು ಪ್ರತಿಯೂ 8 ಆಣೆ.

ವಿಳಾಸ:— [illegible]

[illegible]

ಕೊಡ್‌ಲಿವರ್ ಎಣ್ಣೆ.



ಈ ಎಣ್ಣೆಯು ಕೊಡ್ ಎಂಬುದೊಂದು ಉತ್ಕೃಷ್ಟ ಜಾತಿಯ ಮತ್ಸ್ಯದ ಯಕೃತ್ತಿಂದ ಹಕ್ಕಿದುದು. ಇದರಿಂದ ದೊರಕತಕ್ಕ ಲಾಭವಾದರೋ ಇದರ ಲಿಯ ಎಷ್ಟನೆಯ ಅಂಶವು ಶರೀರಕ ಕ್ರಮದೊಡನೆ ಸೇರಿಕೊಳ್ಳುವುದೋ ಅದನ್ನು ತಾವೇ ಅವಲಂಬಿಸಿರುತ್ತದೆ. ಆದ್ದ ಕೊಡಲೀವರ್ ಎಣ್ಣೆಯೂ ಆದರಿಂದ ಹಕ್ಕಿದ ಬೇರೆ ಔಷಧಗಳು ಹೊಲಸಾಗಿಯೂ ಕುತ್ಸಿತವಾಗಿಯೂ ಇರುವದರಿಂದ ಅವನ್ನು ಜನರು ಸೇವಿಸಲಾರರು ಮತ್ತು ಅವು ಸರಿಯಾಗಿ ಜೀರ್ಣವಾಗವಾದುದರಿಂದ ಅವನ್ನು ಸೇವಿಸುವವರಿಂದ ಅತಿಸಾರವು ಅನುಸರಿಸುತ್ತದೆ. ಆವರೆ ಅಂತಹ ಅಪಾಯಗಳಾದರು ಹೇವವಾದರೂ ಉಂಟಾಗದಂತೆ ಸೇವಿಸಲು ಯೋಗ್ಯವಾದ ಮಿಶ್ರಣವು ಫೋಟರ್ ಬಿರಿಯ ಕೊಡಲೀವರ್ ಮಿಶ್ರಣವೇ ಸರಿ. ಈ ಮಿಶ್ರಣದಲ್ಲಿ ಕೊಡಲೀವರ್ ಎಣ್ಣೆಯು ಸಚನ ಸುಲಭವಾದ ವಿಧದಿಂದ ಸೇರಿದ್ದು ಇದಕ್ಕೆ ಅರುಚಿಯಾಗಲಿ ಗಂಧವಾಗಲಿ ಇರುವದಿಲ್ಲ. ಇವರ ಉತ್ತರ ಫಲವು ಆಶ್ಚರ್ಯಕರವಾಗಿದೆ. ಶ್ವಾಸಖಾಸ ಕ್ಷಯ ಯಾವ ಸರ್ವ ರೋಗಗಳಲ್ಲಿ ಕೊಡಲೀವರ್ ಎಣ್ಣೆಯನ್ನು ಸೇವಿಸುವದು ಆಗತ್ಯವಿದೆಯೋ ಅಂತಹ ಶ್ವಾಸಖಾಸ ಕ್ಷಯಾದಿರೋಗಗಳಲ್ಲಿಯೂ ಇತರ ರೋಗಗಳಲಿಯಾದರೂ ಇದನ್ನು ಸೇವಿಸಬಹುದು. ಆದ್ದರಿಂದ ಕೊಡಲೀವರ್ ಎಣ್ಣೆಯು ನಿಮಗೆ ಎಂದೆಂದಿಗೆ ಬೇಕಾಗುವುದೋ ಆಗ್ಗೆ ಫೋಟರ್ ಬರಿಯ ಕೊಡಲೀವರ್ ಮಿಶ್ರಣವನ್ನೆ ಕೇಳಿಕೊಳ್ಳಿರಿ. ಈ ಮಿಶ್ರಣವು ಸುರಸವಾಗಿರುತ್ತದೆ. ಇದು ಎಲ್ಲಾ ಕಡೆಗಳಲಿ ದೊರಲ್ಪಡುವದು. ಮತ್ತು ಕನ್ನಡ ಬಲ್ಲವರೆಲ್ಲರು ಈ ಕೆಳಗೆ ಕಾಣಿಸಿರುವ ವಿಳಾಸಕ್ಕೆ ಬರೆದು ತರಿಸಿಕೊಳ್ಳಬಹುದು. ಬಾಟ್ಲಿ 1ಕ್ಕೆ 3—4—0. ಅರ್ಧ ಬಾಟ್ಲಿಗೆ 1—12—0.

ದಿ. ಊಲನ್ ಮಾರ್ಟ್. ಮಂಗಳೂರು,

ದಕ್ಷಿಣ ಕನ್ನಡಾ.

ಶ್ರೀ ಭವಾನಿಶಂಕರ ಆಯುರ್ವೇದಿಕ್ ಡಿಸ್ಪೆನ್ಸರಿ,

ಬ್ರಹ್ಮಾವರ, ದಕ್ಷಿಣಕನ್ನಡ ಜಿಲ್ಲಾ.

೧. ಕುಟುಂಬಜೀವನಿ—ಎಲ್ಲಾ ರೋಗಗಳನ್ನು ತ್ವರೆಯಾಗಿ ಗುಣಪಡಿಸುವದು 16 ಔಷಧಗಳ ಸಂಗ್ರಹದ ಪೆಟ್ಟಿಗೆ 1ಕ್ಕೆ 8—0—0.

೨. ಶತಮೂಲಿಕಾ ಅಮರಸಂಜೀವನಿ—ಈ ಟೊನಿಕ್ ದ್ರಾವಕವು ಸಕ್ರಾಣಗಳಿಗೆ ಚೈತನ್ಯ ಉಂಟುಮಾಡಿ ಅಮರತ್ವವನ್ನು ಕೊಡುತ್ತದೆ. ಬಾಟ್ಲ 1ಕ್ಕೆ 1—0—0.

೩. ಬಾಲಸಂಜೀವನಿ—ಮಧುರ ಟೊನಿಕ್ ಅಶಕ್ತ ಬಾಲಕರಿಗೆ ಸರಕ್ತರಾಗಿ ಪಾಡಿ ವರ್ಧಮಾನ ಚಂದ್ರನಂತೆ ಬೆಳಗಿಸುತ್ತದೆ. ಬಾಟ್ಲ 1ಕ್ಕೆ 0—12—0.

೪. ವಸಂತ ಕುಸುಮಾಕರ.—ಈ ಸುವಾಸಿಕ ತೈಲ್ಯವು ಕೇಶ ವೃದ್ಧಿಮಾಡಿ ಶಿರೋರೋಗ ನೇತ್ರರೋಗಗಳನ್ನು ಶಮನಮಾಡಿ ಮೆದುಳನ್ನು ತಂಪು ಮಾಡಿ ಜ್ಞಾನಶಕ್ತಿ ಹೆಚ್ಚಿಸಿ, ಬುದ್ಧಿ ಭ್ರಮಣವನ್ನು ಗುಣಮಾಡುತ್ತದೆ. ಬಾಟ್ಲ 1ಕ್ಕೆ 1—0—0

೫. ಸುದರ್ಶನಮಾಲಿನಿ—ಈ ಸಿದ್ಧೌಷಧವು ಮೇಹವ್ರಣ ಇತ್ಯಾದಿ ಎಲ್ಲಾ ದುಸ್ಸಾಧ್ಯ ವ್ರಣಗಳನ್ನು 7-8 ದಿವಸಗಳಲ್ಲಿ ಪೂರ್ಣ ಗುಣಪಡಿಸುವದು. ಕ್ರಯ 4—0—0.

೬. ಗರುಡಪ್ಪ್ರವಿ—ಇದು ಸರ್ಪ ಹುಚ್ಚುನಾಯಿ, ಚೇಳ, ಇಲಿ ಇತ್ಯಾದಿ ಸರ್ವ ಕಠಿಣ ವಿಷಗಳಿಗೆ ಸಂಜೀವನವಾಗಿರುತ್ತದೆ. ಅನುಭವಸಿದ್ಧ 2—0—0.

೭. ಆನಂದವನವಿಲಾಸ—ಇದು ಡ್ಯಾಬಿಟಿಸ ಎಂಬ ಬಹುಮೂತ್ರ ರೋಗವನ್ನು 48 ದಿವಸಗಳಲ್ಲಿ ಪೂರ್ಣ ಗುಣಪಡಿಸುತ್ತದೆ. ಪೂರ್ಣ ಔಷಧಕ್ಕೆ 5—0—0.

ನಮ್ಮ ಡಿಸ್ಪೆನ್ಸರಿಯಲ್ಲಿ ಸಿದ್ಧ ಕಲ್ಲಾ ಭೈರಾಗಿ ಪ್ರಯೋಗಗಳಿಂದ ತಯಾರಿಸಿದ ಪೌಡರ ಮಾತ್ರೆಗಳು, ಲೇಹ ಚೂರ್ಣಗಳು, ತೈಲ್ಯ ಘೃತಗಳು, ಆಸವಾರಿಷ್ಟಗಳೂ ತುಂಬಾ ಇರುತ್ತವೆ. ಕ್ರಯವಿಲ್ಲದ ನಮ್ಮ ಕೆಟಲಗನ್ನು ತರಿಸಿಕೊಳ್ಳಿರಿ. ಏಜಂಟರು ಬೇಕು. ಹೆಚ್ಚು ಡಿಸ್‌ಕೌಂಟ್ ಸಿಕ್ಕುವದು.

ಎಮ್. ವಿ. ಶಂಕರ್, ಉಗ್ರಾಣಕಾರ್, ಮೆನೇಜರ್.

ಕೆಲವು ದಿವಸಗಳಲ್ಲಿಯೇ ಪ್ರಕಾಶಿತವಾಗುವುದು. ತ್ವರೆಮಾಡಿರಿ!!

ಸಂಗೀತ ಶ್ರೀ ದತ್ತಜನ್ಮ

ಅಥವಾ

ಪಾತಿವ್ರತ್ಯ ವಿಜಯ.

ಎಂಬ ತಿದ್ದಿ ಬರೆದ ಮತ್ತು ಪರಿವರ್ಧಿತ ಮರಾಠಿ ನಾಟಕವು ಇನ್ನು ಕೆಲವು ದಿವಸಗಳಲ್ಲಿಯೇ ತಯಾರಾಗುವುದು. ಈ ನಾಟಕದ ಕಥಾನಕವು ಚಲೋದಾಗಿಯೂ, ಹಾಡುಗಳು ಹೊಸತಾಗಿಯೂ, ರಸಭರಿತವಾಗಿಯೂ ಇರುವುದರಿಂದ ರಸಿಕಜನರು ಈ ಸಂದರ್ಭವನ್ನು ಬಿಡಲಾಗದು. ಮುದ್ರಣವು ಅಂದವಾಗಿದೆ! ಬೆಲೆಯು ಬಹಳೇ ಕಡಿಮೆ! ಮಂಗಳೂರಲ್ಲಿಯೇ ಹೆಚ್ಚಿನ ಪ್ರತಿಗಳು ಖರ್ಚಾಗುವ ಸಂಭವವು ಇರುವುದರಿಂದ; ಹೊರ ಊರಿನವರು [illegible]!! ಬೆಲೆ [illegible] ಪುಸ್ತಕವು ವಿ. ಪಿ. [illegible]

[illegible]

ಮರೆಯ ಬ್ಯಾಡಿರಿ. ಮರೆಯ ಬ್ಯಾಡಿರಿ.

ದರ್ಬಾರ್ ಸಾಬೂನು.

ಏಜಂಟುಗಳು ಬೇಕಾಗಿದೆ!

ಒಳ್ಳೇ ಕಮಿಶನ್ ದೊರಿಯುವದು.

ಅಪಾಯ ರೋಮಸಂಹಾರಿ. ಈ ಸಾಬೂನನ್ನು ರೋಮವಿರುವ ಸ್ಥಳದಲ್ಲಿ ಹಚ್ಚಿದರೆ 5 ನಿಮಿಷಗಳೊಳಗಾಗಿ ರೋಮವು ಮಾಯವಾಗುವದು.

ಉರಿ, ಸೆಕೆ ಮುಂತಾದ ಬಾಧೆಗಳಿಲ್ಲವು. ಒಂದು ಸಾರಿ ಉಪಯೋಗಿಸಿದರೆ ಗೊತ್ತಾಗುವದು. ಮರೆಯ ಬ್ಯಾಡಿರಿ.

3 ಸಾಬೂನುಗಳಿರುವ ಪೆಟ್ಟಿಗೆ ಒಂದಕ್ಕೆ ಕ್ರಯ ಆಣೆ 14.

2 ಪೆಟ್ಟಿಗೆ ಒಂದೇ ಸಾರಿ ತೆಗೆದುಕೊಳ್ಳುವವರಿಗೆ ರೂ 1-10-0 ಅಂಚೇ ಹಾಸಲು ಆ. 4.

ವರ್ತಕರಿಗೆ ಅನುಕೂಲವಾಗಿ ಕೊಡಲ್ಪಡುತ್ತದೆ.

ವಿಳಾಸ:— ವಿ ಎ. ಎಸ್. ಪಾಣಿ ಕಂಪೆನಿ.

ನಂಬ್ರ 3 ಇರುಳಪ್ಪನ್ ಬೀದಿ, ಮದರಾಸು.

V. A. S. PANI,
No. 3, Erulappen Street, Madras.

ಡಾಕ್ಟರ್ ನವರತ್ನರ ಕೇಶಕಲಾಪ.

ಕೂದಲನ್ನು ಕಪ್ಪು ಮಾಡುವ ಈ ತೈಲವು ಇತರ ತೈಲಗಳಿಗಿಂತ ಅತ್ಯುತ್ತಮವಾದದ್ದಾಗಿದೆ. 5 ನಿಮಿಷದೊಳಗೆ ಕೂದಲು ಕಪ್ಪಾಗಿ ಮೃದುವಾಗುತ್ತದೆ. ಇದಕ್ಕೆ ಸಮಾನವಾಗಿ ಎದುರು ಬರುವಂಥಾ ಇತರ ತೈಲಗಳಿಲ್ಲ. ಪ್ರಯೋಗಿಸಲು ಸುಲಭವಾಗಿದೆ. ಪರಿಮಳ, ಕೆಡದ ಬಣ್ಣ, ಬಹಳ ಅಗ್ಗ. ಕಪ್ ಮತ್ತು ಬ್ರಸ್ ಕೂಡಿದ ಪೆಟ್ಟಿಗೆ ಒಂದಕ್ಕೆ ರೂ. 1. ಟಪ್ಪಾಲು ಚಾರ್ಜು 0—4—0.

Dr. Navaratna & Sons,
Kalbadevi Road, BOMBAY.

ಏಜಂಟರು:—ದಿ. ಊಲನ್ ಮಾರ್ಟ್,

ಮಾಧವ ಬಿಲ್ಡಿಂಗ್, ಹಂಪನಕಟ್ಟೆ, ಮಂಗಳೂರು.

ಬೆಲೆಗೆ ತಕ್ಕಂಥಾ ಒಡವೆಗಳನ್ನು ಗಿರಾಕಿಗಳಿಗೆ ವಿಕ್ರಯಿಸಿ ಅವರಿಗೆ ಬೇಕಾದುದೆಲ್ಲವುಗಳ ಚಿಂತನೆಯಿಂದ ವ್ಯಾಪಾರದಲ್ಲಿ ಲಭಿಸುವ

ಅನುಭವವೇ ಗಿರಾಕಿಗಳಿಗೆ ಲಾಭಕರ!

1902ನೇ ಇಸವಿಯಿಂದ ಸ್ಥಾಪಿಸಲ್ಪಟ್ಟು ಕಳೆದ 10 ವರುಷಗಳ ಅನುಭವದಿಂದ ಜವಳಿ ವ್ಯಾಪಾರವನ್ನು ನಡಿಸುತ್ತಿರುವ ನಮ್ಮ [illegible] ಅಂಗಡಿಗಳಲ್ಲಿ ಹುಬ್ಬಳ್ಳಿ, ಗದಗ ಎಲ್ಕಾಲ್, [illegible] ವನಮ್, ವನ್ನಾರ್‌ಪೇಟೆ, ಆರ್ಣಿ, ಕುಂಭಕೋಣ, [illegible], ಚಿದಂಬರ, ಕೊರ್ನಾಡ, ಮಧುರೆ, [illegible], ದಿಂಡಿಗಲ್, [illegible] ಟಗಿರಿ, ಪುಲ್ಲಿಂಪೇಟೆ, ಬನಾರೀಸ್, [illegible] ಮತ್ತು [illegible] ಈ ಎಲ್ಲಾ ಪ್ರಾಂತ್ಯಗಳಲಿ ತಯ್ಯಾರಿಸಲ್ಪಟ್ಟಿರುವ [illegible] ವಲ್ಲಿಗಳು, ಧೋತ್ರಗಳು, [illegible] ದ್ರಾಸು ಮತ್ತು [illegible] ವ್ಯಾಪಾರಕ್ಕೆ [illegible]

[illegible]

ಸ್ತ್ರೀಯರ ಭೂಷಣವು!!!

ಮೃದುವಾದ, ಗುಂಗುರು ಗುಂಗುರಾಗಿರುವ, ನೀಲಿಮೆಯಿಂದ ನಿಬಿಡವಾದ ಕೇಶದಾಮವನ್ನು ಯಾವ ನಾರಿಯು ತಾನೇ ವಾಂಛಿಸಲೊಲ್ಲಳು ? ಇಂತಹ ಕೇಶ ರಾಶಿಯನ್ನು ಸ್ತ್ರೀಯರಿಗೆ ಒದಗಿಸಿ ಕೊಡಲಾಪ ಉಪಕರಣವಾದರೋ

ಕಾಮಿನಿಯಾ ತೈಲವೇ!

(ರಿಜಿಸ್ಟರ್ಡ್)

ಈ ತೈಲವು ಸ್ತ್ರೀಯರಿಗೆ ಅವರ ಸೌಭಾಗ್ಯಾಲಂಕಾರವನ್ನು ಹೇಗೆ ಕೊಡುತ್ತಿದೆಯೋ, ಹಾಗೆಯೇ ಮಾನಸಿಕ ಪರಿಶ್ರಮವನ್ನು ಪಡುವ ಪುರುಷರಿಗೂ ವಿದ್ಯಾರ್ಥಿಗಳಿಗೂ ಅಷ್ಟೇ ಆಗತ್ಯದ ಸಹಕಾರಿಯಾಗಿರುತ್ತದೆ. ಈ ತೈಲವನ್ನು ತೊಡೆದುಕೊಳ್ಳುತ್ತಲೇ, ಮಸ್ತಿಷ್ಕದ ಬೇನೆಯು ತಣ್ಣಗಾಗಿ, ಮನಸ್ಸು ಉಲ್ಲಾಸದಿಂದ ಪ್ರಫುಲ್ಲಿತವಾಗುತ್ತದೆ. ಕೂದಲುಗಳು ಇದನ್ನು ತೊಡೆಯ ತೊಡಗಿದ ಬಳಿಕ ಎಂದಿಗೂ ಉದುರಿ ಬಿದ್ದು ಹೋಗಲಾರವು; ಆದರೆ ಅವು ದಟ್ಟವಾಗಿ ಬೆಳೆದು ಸಮೃದ್ಧವಾಗುವವು. ಇದರ ಸುಗಂಧವಾದರೋ ಮಧುರವೂ ಮೋಹಕವೂ ಆಗಿರುವುದು. ಕೀಳುತರದ ಎಣ್ಣೆಗಳನ್ನು ಕೊಂಡುಕೊಂಡು ಉಪಯೋಗಿಸಿ ನಿಮ್ಮ ಹಣವನ್ನೂ ತಲೆಯನ್ನೂ ಹಾಳು ಮಾಡುವುದಕ್ಕಿಂತ ಒಂದೇಯೊಂದು ಬಾರಿ ಈ "ಕಾಮಿನಿಯಾ ತೈಲ" ವನ್ನು ಉಪಯೋಗಿಸಿ ಪರೀಕ್ಷಿಸಿರಿ. ಈ ಎಣ್ಣೆಯ ಶ್ರೇಷ್ಠತೆಯ ದೆಸೆಯಿಂದ ಮೈಸೂರು ಪ್ರದರ್ಶನದಲ್ಲಿ ಚಿನ್ನದ ಪದಕವೂ, ಅಲ್ಲಹಾಬಾದಿನ ಪ್ರದರ್ಶನದಲ್ಲಿ "ಸರ್ಟಿಫಿಕೇಟ್ ಒಫ್ ಮೇರಿಟ್" ಅಥವಾ ಯೋಗ್ಯತಾಪತ್ರವೂ, ಇತರ ಸಾವಿರಾರು ಗೃಹಸ್ಥರ ಉತ್ತಮೋತ್ತಮವಾದ ಮಾನಪತ್ರಗಳೂ ದೊರಕಿವೆ.



ಅವುಗಳಲ್ಲಿ ಒಂದನ್ನೇ ನೋಡಿರಿ! ನೇಗಿನಹಾಳಕರ ಒಂಧುಗಳು, ಬಿಸನಗರ, ಬೆಳಗಾಂವ—ತಾವು ಕೆಲ ತಿಂಗಳ ಹಿಂದೆ ಕಳುಹಿಸಿದ "ಕಾಮಿನಿಯಾ" ತೈಲವು ಕೂದಲುಗಳನ್ನು ಬೆಳೆಯಿಸುವುದಕ್ಕೆ ಸರ್ವೋತ್ಕೃಷ್ಟವಾದೊಂದು ಸಾಧನವಾಗಿರುತ್ತದೆ. ಆದ್ದರಿಂದ ಇನ್ನೊಂದು ಸೀಸೆಯನ್ನು ಕೂಡಲೆ ವಿ. ಪಿ. ದ್ವಾರಾ ರವಾನಿಸುವುದು.

ಸೀಸೆಯೊಂದರ ಕ್ರಯ ರೂ. 1-0-0, ಅ. ವೆ. 0-4-0 ಬೇರೆ; 3 ಸೀಸೆಗಳ ಕ್ರಯ ರೂ. 2-10-0, ಅ. ವೆ. 0-7-0 ಬೇರೆ.

ಸೂಚನೆ — ಅನೇಕ ದುರ್ವಿನೀತರಾದ ವ್ಯಾಪಾರಿಗಳು ಒಳ್ಳೆಯ ಮತ್ತು ಪ್ರಸಿದ್ಧ ವಸ್ತುಗಳ ಮಾರಾಟದಿಂದ ತಮಗೆ ಅತ್ಯಲ್ಪ ನಫೆಯೇ ದೊರಕುತ್ತದೆಂದು, ನೀವು "ಕಾಮಿನಿಯಾ ತೈಲ" ವನ್ನು ಕೇಳಿದರೆ, "ಇದು ಅದಕ್ಕಿಂತ ಉತ್ತಮವೂ ಅಗ್ಗವೂ ಇದೆ" ಎಂದು ಅವರಿಗೆ ಬಹಳ ಲಾಭ ದೊರಕತಕ್ಕ ಕೀಳುತರದ ಬೇರೆ ತೈಲವನ್ನು ನಿಮಗೆ ಕೊಟ್ಟು ವಂಚಿಸುವರು. ಅಂಥಾ ಸಂದರ್ಭದಲ್ಲಿ ಮೋಸ ಹೋಗದಂತೆ "ಕಾಮಿನಿಯಾ ಓಯಿಲ್" ತಾನೇ ಬೇಕೆಂದು ಕೇಳಿರಿ; ಅವರಲ್ಲಿ ಇದು ಇಲ್ಲವೆಂದರೆ ನಮ್ಮಿಂದ ಅಥವಾ ನಮ್ಮ ಏಜಂಟರಿಂದಲೇ ಕೊಂಡುಕೊಳ್ಳುವದನ್ನು ಮುಕರುಟಾಸ್ ಮಾಡಿದರೆ ನೀವು ವಂಚಕರ ಬಲೆಯಲ್ಲಿ ಸಿಲುಕಿಬೀಳದೆ ಖರೆಯಾದ ಉತ್ತಮ ವಸ್ತುವನ್ನೇ ಪಡೆಯುವಿರಿ

ಅತೀ ಮನೋಹರವಾದ ಸುರಭಿಯು!

ಒಟ್ಟೊ ದಿಲ್ ಬಹಾರ್!!

ಈ ಸುಗಂಧದ ದ್ರವವು ಮಧುರ-ಕೋಮಲ-ಚಿರಸ್ಥಾಯಿ ಮತ್ತು ಅತ್ಯುತ್ತಮವು. ಚೆನ್ನಾಗಿ ಪರೀಕ್ಷಿಸಿ ಆಯ್ದು ತೆಗೆದ ಸೌಗಂಧಿಕ ಕುಸುಮಗಳಿಂದ ಸಿದ್ಧವಾದುದು. ಇದರಲ್ಲಿ ಮದಿರೆಯ (ಅಲ್ಕೊಹೋಲ್) ಸಂಪರ್ಕವಿಲ್ಲವು. ಒಂದೇ ಒಂದು ಸಲ ನಿಮ್ಮ ಕೈಬಟ್ಟೆಯಲ್ಲಿ ಅಥವಾ ಅಂಗಿಯಲ್ಲಿ ಈ ದ್ರವದ ಕೆಲವು ತಟಕುಗಳನ್ನು ಚಿಮುಕಿಸಿದರೆ, ನಿಮ್ಮ ಸುತ್ತಲು ನೈಸರ್ಗಿಕವಾದೊಂದು ಪುಷ್ಪವಾದಿಕೆಯು ಅರಳಿದಂತಾಗುವುದು. ಬೇರೆ ಯಾವ ಪರಿಮಳ ದ್ರವ್ಯದ ಗಂಧವು ಹೇಗೂ ಇರಲಿ. ಈ ಒಟ್ಟೊ-ದಿಲ್ ಬಹಾರಿನ ಗಂಧವು ಅವೆಲ್ಲವುಗಳನ್ನು ಮೀರಿ, ಮನಸ್ಸನ್ನು ತನ್ನ ಶಕ್ತಿಯಿಂದ ಸೆಳಕೊಳ್ಳುವುದು. ಇಂದೇ ಒಂದು ಸೀಸೆಯನ್ನು ತರಿಸಿಕೊಳ್ಳಿರಿ.

ಸಣ್ಣ ಸೀಸೆಯ ಬೆಲೆ ರೂ. 0-8-0. ಒಂದು ಡ್ರಾಮಿನ (ಮೀಡಿಯಂ) ಸೀಸೆ 1ಕ್ಕೆ 0-12-0. ಅರ್ಧ ಔನ್ಸಿನ ದೊಡ್ಡ ಸೀಸೆಯ ಬೆಲೆ ರೂ. 2-0-0 ಅಂಚೆಯ ವೆಚ್ಚ ಬೇರೆ 0-4-0. ಒಟ್ಟೊ ದಿಲ್ ಬಹಾರ್ ಪರಿಮಳದ ಕಾರ್ಡುಗಳು ಡಜನ್ ಒಂದಕ್ಕೆ 0-12-0.

ಅಮೇರಿಕದ ವಿಶಿಷ್ಟತೆ.

ಪ್ರೊಫೆಸರ್ ಜೇಮ್ಸರವರ "ಇಲೆಕ್ಟ್ರೋ ಟೋನಿಕ್ ಪರ್ಲ್ಸ್" ಅಥವಾ ವಿದ್ಯುಚ್ಛಕ್ತಿಯ ವಾಜೀಕರಣ ಮೌಕ್ತಿಕಗಳು.

ಇವು ಶಕ್ತಿಹೀನತೆಯಿಂದ ಉಂಟಾಗುವ ರೋಗಗಳನ್ನು, ನಿದ್ರಾನಾಶವನ್ನೂ, ಪಕ್ಷವಾತಗಳನ್ನೂ, ವಾತೋನ್ಮಾದವನ್ನೂ, ಅಪಸ್ಮಾರವನ್ನೂ, ಧಾತುದೌರ್ಬಲ್ಯವನ್ನೂ ನಾಶಮಾಡುತ್ತವೆ; ಕಳೆಗುಂದಿ ಬರುವ ಸ್ಮೃತಿಶಕ್ತಿಯನ್ನು ಉದ್ದೀಪಿಸುತ್ತವೆ. ಬುದ್ಧಿಯ ಮತ್ತು ಮೆದುಳಿನ ಮೂಢತೆಯನ್ನು ಹೋಗಲಾಡಿಸುತ್ತವೆ; ಕಲಿಯುವದಕ್ಕೆ ಅಥವಾ ಕಾರ್ಯಗೈಯುವದಕ್ಕೆ ಬಿಡಲೊಲ್ಲದ ಅಶಕ್ತಿಯನ್ನು ಶಕ್ತಿರೂಪವಾಗಿ ಪರಿಣಮಿಸುವಂತೆ ಮಾಡುತ್ತವೆ. ಸರ್ವಾಂಗದಲ್ಲಿ ತೋರಿಬರುವ ಕ್ಲಾಮವೂ, ಅಕಾಲ ಕಾಲದಲ್ಲಿ ಸಂಭವಿಸುವ ಗ್ಲಾನಿಯೂ ಅತಿಶ್ರಮದಿಂದ ಮತ್ತು ದುರ್ವೃತ್ತಿಯಿಂದ ಉಂಟಾಗುವ ಕ್ಷೀಣಚೇತನೆಯೂ ಈ ಮುತ್ತುಗಳನ್ನು ಸೇವಿಸುವದರಿಂದ ಅಡಗಿ ಹೋಗುತ್ತವೆ. ಇವುಗಳಲ್ಲಿ ವೀರ್ಯದಾಯಿಗಳಾದ ಮತ್ತು ಮೆದುಳನ್ನು ಬೆಳೆಯಿಸಿ ವೃದ್ಧಿಗೈಯಲಾಪ ಪದಾರ್ಥಗಳಿರುವದರ ದೆಸೆಯಿಂದ ಇವು ವಿದ್ಯಾವ್ಯಾಸಂಗಗಳಿಗೂ, ಧರ್ಮೋಪದೇಶಕರಿಗೂ, ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಕೀಲರಿಗೂ, ಗುಮಾಸ್ತರಿಗೂ, ಉಸ್ತಾದರಿಗೂ, ಪ್ರಾಯಿಕವಾಗಿ ಸಕಲ ಕಾರ್ಯಗಳಲ್ಲಿ ನಿರತರಾಗಿರುವ ಎಲ್ಲರಿಗೂ ಅಗತ್ಯವಾಗಿವೆ. ಶಾರೀರಿಕ ಪ್ರವೃತ್ತಿಯವರಿಗೆ ಮತ್ತು ಮಾನಸಿಕ ಪ್ರವೃತ್ತಿಯವರಿಗೆ ಒಂದೇ ರೀತಿಯಾಗಿ ಆವಶ್ಯಕವಾಗಿರುತ್ತವೆ.



ವಾತಕಾಲದಲ್ಲಿ ಮತ್ತು ಮುಪ್ಪಿನಿಂದ ಉಂಟಾಗುವ ವೀರ್ಯಹೀನತೆಯಲ್ಲಿ ಈ ಮೌಕ್ತಿಕಗಳು ಗುಣವಾದರೋ ನಿಸ್ಸಂದೇಹವು. ಇಂದ್ರಿಯಗಳ ಸುಖವೂ ಇವುಗಳ ಸೇವನೆಯಿಂದ ಕೂಡಲೇ ಲಭಿಸುತ್ತವೆ.

ರೋಗನಿರ್ನಾಶದ ಸ್ವಭಾವವನ್ನು ಗಮನಿಸಿ. ರೋಗದಿಂದ ಅಳಿದ ದೇಹಭಾಗಗಳನ್ನು ಇವು ಮರಳಿ ರಚನೆಗೈಯುತ್ತವೆ. ರೋಗದಿಂದ ಮುರಿದು ಹೋದ ಅಥವಾ ನಿಸ್ತೇಜವಾದ ಅವಯವಗಳಿಗೆ ಇವು ಪುನಃ ಧಾತುಪುಷ್ಟಿಯನ್ನಿತ್ತು ಸಚೇತನಗೈಯುತ್ತವೆ. ಈ ಗುಳಿಗೆಗಳ ಅದ್ಭುತಕರವಾದ ಸುಫಲವು ಇವುಗಳನ್ನು ಸೇವಿಸುವದಕ್ಕೆ ತೊಡಗಿದ ದಿನದಿಂದಲೇ ಬೋಧೆಯಾಗುತ್ತದೆ. ಇವುಗಳನ್ನು ಸೇವಿಸಿದ ದಿನವೇ ನರಗಳಲ್ಲಿಯೂ ಬುದ್ಧಿಶಕ್ತಿಯಲ್ಲಿಯೂ ಚೇತನವು ಮೊಳೆತು ದೇಹದಲ್ಲಿ ಧೈರ್ಯ, ಬಲ, ಸುಖ, ಇವುಗಳ ಸಂಚಾರವಾಗುತ್ತದೆ. ಜೀರ್ಣಶಕ್ತಿಯು ಉದ್ದೀಪಿತವಾಗಿ ಹಸಿವು ಆಶ್ಚರ್ಯಕರವಾಗಿ ಆರೋಗ್ಯಕಾಲದಲ್ಲಿ ತೋರಿಬರುವದಕ್ಕಿಂತ ಹೆಚ್ಚಾಗಿ ತೋರಿಬರುತ್ತದೆ. "ನಾಡಿಯು" ಕ್ರಮವನ್ನು ಅನುಸರಿಸುತ್ತದೆ; ಮುಖವು ಶುಭ್ರವಾಗಿ ರಕ್ತಚಲನದ ಕುರುಹುಗಳನ್ನು ಸರಿಯಾಗಿ ತೋರ್ಪಡಿಸುತ್ತದೆ; ಕಣ್ಣುಗಳು ಉಜ್ವಲವಾಗಿ ದೃಷ್ಟಿಯು ಪ್ರಥೆಯನ್ನು ಹೊಂದಿ ಸೂಕ್ಷ್ಮವಾಗುತ್ತದೆ; ಗತಿಯು ದೃಢವಾಗುತ್ತದೆ. ಶೀಲವು ಪ್ರಸನ್ನವಾಗುತ್ತದೆ; ಬುದ್ಧಿಯು ವಿಶೇಷವಾಗಿ ಅನಲಸವಾಗುತ್ತದೆ; ಸ್ಮೃತಿಶಕ್ತಿಯು ಗ್ರಾಹಿಯಾಗುತ್ತದೆ; ಮತ್ತು ದೇಹದ ಪುಷ್ಟಿಯು ವೃದ್ಧಿಯಾಗಿ ಶಕ್ತಿಯು ದಿನೇ ದಿನೇ ಮುಂಚಿನಂತೆಯೇ ತುಂಬಿಬರುತ್ತದೆ.

25 ಗುಳಿಗೆಗಳ ಸೀಸೆ 1ಕ್ಕೆ ಬೆಲೆ ರೂ. 1-4-0. 40 ಗುಳಿಗೆಗಳಿರುವ ಸೀಸೆ 1ಕ್ಕೆ ರೂ. 2-0-0 ಟಪ್ಪಾಲ್ ಖರ್ಚು ಸೀಸೆ ಒಂದಕ್ಕೆ ಆಣೆ 4.

ನಾವು ಕೇಳಿಕೊಳ್ಳದೆ ನಮಗೆ ಹಲವು ಮಹನೀಯರು ಬರದ ಪ್ರಮಾಣಪತ್ರಗಳಿಂದ ಕೆಲವನ್ನು ಇಲ್ಲಿ ಕೊಡುವೆವು.

ದಿವಾಕರ ಕೃಷ್ಣಾಜಿ ದಾಹರೀ, ರಾ. ಪಾರಸಾವನೀ, ತಾ, ರಾಮಟೇಕ, ಜಿ. ನಾಗಪುರ.—"ತಾವು ನಮಗೆ ಕೆಲವು ಸಮಯದ ಹಿಂದೆ ಕಳುಹಿಸಿದ "ಶಕ್ತಿವರ್ಧಕ" ಗುಟಿಕೆಗಳಿಂದ ನಮಗೆ ಉತ್ತಮವಾದ ಆರೋಗ್ಯಲಾಭವು ದೊರಕಿರುತ್ತದೆ; ಅವುಗಳ ಇನ್ನೊಂದು ಬಾಟಲಿಯನ್ನು ಕಳುಹಿಸಿಕೊಡಿರಿ.

2 ತುಕಾರಾಮ ಸಖಾರಾಮ, ಕೇಶಿಯರ್, ಬಂಗಾಲ ನಾಗಪುರ ರೈಲ್ವೆ, ಗೋರಖಪುರ—"ತಾವು ತಮ್ಮಿಂದ ಪ್ರೊ. ಜೇಮ್ಸರ "ವಿದ್ಯುತ್ ಶಕ್ತಿವರ್ಧಕ" ಗುಟಿಕೆಗಳ ಮೂರು ಕುಪ್ಪಿಗಳನ್ನು ತರಿಸಿಕೊಂಡಿದ್ದೆನು. ಅವುಗಳಿಂದ ನಾನು ಪುಷ್ಕಳವಾದ ಸೌಖ್ಯಲಾಭ ಹೊಂದಿರುವೆನು. ಆದ್ದರಿಂದ ಇನ್ನು ಮೂರು ಕುಪ್ಪಿಗಳನ್ನು ಕಳುಹಿಸಿಕೊಡಿರಿ."

3 ಅಮೀರ್ ವಲ್ಲದ ಮಹಮ್ಮದ ಭಾಯಿ ಇಬ್ರಾಹಿಮ್ ಪಾಟೆಲ್, ಪನವೇಲ್—"ತಾವು ಕಳುಹಿಸಿದ ಪ್ರೊ. ಜೇಮ್ಸರ ಗುಟಿಕೆಗಳಿಂದ ನನಗೆ ಆಶ್ಚರ್ಯಕಾರಕವಾದ ಗುಣವು ದೊರಕಿದೆ. ಇನ್ನು ಪುನಃ ರವಾನಿಸಿರಿ."

4 ವಿ. ಆರ್. [illegible], ಡಿಸ್ಟ್ರಿಕ್ಟ ಕೋರ್ಟ ವಕೀಲ, [illegible]—"ಪ್ರೊ. ಜೇಮ್ಸರ ಗುಟಿಕೆಗಳ ಸೀಸೆಯೊಂದನ್ನು ತಮ್ಮಿಂದ [illegible] ನಾನು ಒಳ್ಳೇ ಲಾಭವನ್ನು ಪಡೆದೆನು. [illegible]

5 [illegible]—ಪ್ರೊ. ಜೇಮ್ಸರ ಗುಟಿಕೆಗಳಿಂದ [illegible] ಗುಣವನ್ನು ಹೊಂದಿರುವದರಿಂದ, [illegible]

THE ANGLO INDIAN DRUG & CHEMICAL COMPANY, 16 [illegible] BOMBAY 2.

[illegible] ದಿ ಆಂಗ್ಲೋ ಇಂಡಿಯನ್ ಡ್ರಗ್ ಎಂಡ್ ಕೆಮಿಕಲ್ [illegible]

ESTABLISHED JULY 1906.

THE CANARA BANK, LIMITED, MANGALORE.

ಕೆನರಾ ಬ್ಯಾಂಕ್ ಲಿಮಿಟೆಡ್, ಮಂಗಳೂರು.

1906ನೇ ಇಸವಿ ಜುಲಾಯಿ ತಿಂಗಳಲಿ ಸ್ಥಾಪಿಸಲ್ಪಟ್ಟಿತು.

Authorised Capital Rs.	300,000—0—0
Issued Capital	225,000—0—0
Subscribed Capital	217,400—0—0
Paid up Capital	192,400—0—0
Deposits	486,564—4—2
Reserve Fund	27,590—12—0

Besides the uncalled capital of Rs. 25,000/- 25% of the net profits are added annually to the Reserve Fund. Rs. 21,685/- have been invested in Government Paper of the face value of Rs. 22,500/-

Dividends of not less than 6% paid during the past years and a bonus of 1% to 2% paid in addition during the last three years.

Fixed Deposits of Rs. 50/- and above in multiples of Rs. 5/ received for 3, 6, 12 and 24 months @ 4, 4½, 5 and 5½% respectively. Terms on application.

Short-notice Deposits requiring one weeks notice of withdrawal after one month received @ 2½% per annum.

Current Deposit Account opened free of charge.

Savings Bank Account opened for any sum not less than 4 As. and multiples thereof and interest paid @ 4½%.

Loans granted on proper securities and pledges.

Sealed Parcels for safe custody received on a moderate charge.

Canara Bank Ltd.,
Mangalore, 1st October 1914.

ನಿಯಮಿತ ಮೂಲ ಧನವು ರೂಪಾಯಿ	300,000—0—0
ಹುಟ್ಟಿಬಂದ ಮೂಲ ಧನವು ,, ...	225,000—0—0
ಪ್ರತಿಜ್ಞಾತ ಮೂಲ ಧನವು ,, ...	217,400—0—0
ಆಗತ ಮೂಲ ಧನವು ,, ...	192,400—0—0
ಠೇವಣಾತಿಯಾಗಿ ಕೊಡೋಣಾದ ಮೊಬಲಗುಗಳು ...	486,564—4—2
ರಕ್ಷಿತ ಧನವು	27,590—12—0

ರಕ್ಷಿತ ಧನಕ್ಕೆ ಪ್ರತಿ ವರುಷದಲ್ಲಿಯೂ ಉಳಿಯುವ ಮುನಾಫೆಯ ಸೇಕಡಾ 25ಕ್ಕೆ ಸರಿಯಾದ ಮೊಬಲಗು ಕೂಡಿಸಲ್ಪಡವುದಲ್ಲದೆ ಹಿಸೆ ಮೌಲ್ಯಗಳಿಂದ ಕೇಳಲ್ಪಡದಿರುವ ರೂ. 25,000 ರಕ್ಷಿತ ಧನವಾಗಿರುತ್ತದೆ. ರಕ್ಷಿತ ಧನದ ಪೈಕಿ ರೂ. 21,685—0—0 ಸರಕಾರದ ರೂ. 22,500ರದ ಭದ್ರತಾಪತ್ರಗಳಲ್ಲಿ ಠೇವಣಾತಿಯಾಗಿಡಲ್ಪಟ್ಟಿರುವುದು.

ಕಳೆದ ವರುಷಗಳಲ್ಲಿ ಶೇಕಡಾ 6ಕ್ಕೆ ಕಮ್ಮಿಯಾಗದಂತೆ ಲಾಭವು ಪಾಲುಮಾಲಿಕರಿಗೆ ಕೊಡಲ್ಪಟ್ಟಿರುವುದಲ್ಲದೆ ಕಡೆ ಮೂರು ವರುಷಗಳಲ್ಲಿ ಸೇಕಡಾ 1ರಿಂದ 2ರ ವರೆಗಿನ 'ಬೋನಸ್' ಎಂಬ ಲಾಭೋಚಿತವು ಸಹ ಕೊಡಲ್ಪಟ್ಟಿರುತ್ತದೆ.

ಕಾಯಂ ಠೇವಣಾತಿಗಳು ತಿಂಗಳು 3, 6, 12, ಮತ್ತು 24ರ ಅವಧಿಗಳಿಗೆ ಕ್ರಮವಾಗಿ 4, 4½, 5 ಮತ್ತು 5½ ಬಡ್ಡಿ ಪ್ರಕಾರ ರೂ. 50 ಯಾ 50ಕ್ಕೆ ಮಿಕ್ಕಿದ ಮೊಬಲಗುಗಳು ಪಡಕೊಳ್ಳಲಾದಾವು. ಈ ವಿಷಯ ಇತರ ವಿಶೇಷಮಾಹಿತಿ ಬಗ್ಗೆ ಬೇಂಕಿನ ಸೆಕ್ರಿಟರಿಗಳಿಗೆ ಬರಕೊಳ್ಳಬಹುದು.

ಒಂದು ತಿಂಗಳ ನಂತರ ಹಿಂದಕ್ಕೆ ಪಡಕೊಳ್ಳಬೇಕಾದರೆ ಒಂದು ವಾರಕ್ಕೆ ಮುಂಚಿತವಾಗಿ ಸೂಚಿಸಲ್ಪಡಬೇಕಾದ ಅಲ್ಪ ಕಾಲ ಸೂಚನೀಯ ಠೇವಣಾತಿಗಳು ಸೇಕಡಾ 2½ ದರದಲ್ಲಿ ಪಡಕೊಳ್ಳಲಾದಾವು.

"ಕರೆಂಟ್ ಎಕೌಂಟ್" ಎಂಬ ಚಾಲ್ತಿ ಠೇವಣಾತಿಗಳು ಠೇವಣೆದಾರರ ಅನುಕೂಲತೆಗಾಗಿ ಬೇಂಕಿನ ಪರವಾಗಿ ಏನೂ ಖರ್ಚಿಲ್ಲದೆ ಇಡೋಣಾಗುವವು.

ಸೇವಿಂಗ್ಸ್ ಬೇಂಕಿನಲ್ಲಿ 4 ಆಣೆಗೆ ಕಡಿಮೆಯಾಗದ ಹಣವನ್ನು ಠೇವಣಾತಿ ಇಡೋಣಾದೀತು. ಈ ಠೇವಣಾತಿಗಳಿಗೆ ಸೇಕಡಾ 4½ರ ದರ ಬಡ್ಡಿಯು ಕೊಡೋಣಾಗುವುದು.

ಯೋಗ್ಯ ಜವಾಬ್ದಾರಿಯ ಮೇಲೆ ಮತ್ತು ಈಡಿನ ಮೇಲೆ ಸಾಲಗಳು ಕೊಡೋಣಾಗುತ್ತವೆ.

ಮೊಹರು ಹಾಕಲ್ಪಟ್ಟ ಡಬ್ಬಿ ಪೆಟ್ಟಿಗೆ ಮೊದಲಾದವುಗಳನ್ನು ಭದ್ರ ರಕ್ಷಣೆಗಾಗಿ ಸಾಧಾರಣ ದರದಲ್ಲಿ ಪಡಕೊಳ್ಳಲಾದಾವು.

P. Gopal Naik,
Secretary.

ಸಚಿತ್ರ ಭಾಗವತ ಕಥಾಸಂಗ್ರಹ

ಎಲ್ಲರಿಗೂ ಓದಲು ಅನುಕೂಲವಾಗಿರಬೇಕೆಂದು ಬೆಲೆಯನ್ನು ಕಮ್ಮಿ ಮಾಡಿದೆ.

ಈ ಗ್ರಂಥದಲ್ಲಿ ಶ್ರೀ ಭಾಗವತದ ಹನ್ನೆರಡು ಸ್ಕಂಧಗಳೊಳಗಿನ ಎಲ್ಲಾ ವಿಷಯಗಳು ಅಡಗಿರುವುವು. ಎಲ್ಲರಿಗೂ ಚೆನ್ನಾಗಿ ತಿಳಿಯುವಂತೆ ಸುಲಭ ಶೈಲಿಯಿಂದ ಬರೆದಿದೆ. ಅಲ್ಲದೆ ಮುಖ್ಯವಾಗಿ ಭಾಗವತದಿಂದ ತಿಳಿಯಬಹುದಾದ ಭಕ್ತಿ, ಜ್ಞಾನ, ವೈರಾಗ್ಯ, ಧರ್ಮ, ಕರ್ಮ, ನೀತಿ ಮೊದಲಾದವುಗಳೂ, ನಾರದೋಪಾಖ್ಯಾನ, ಪರೀಕ್ಷಿತ್ಪ್ರಾಯೋಪವೇಶ, ಶ್ರೀಶುಕಪರೀಕ್ಷಿತ್ಸಂವಾದ, ಅವತಾರ ಕ್ರಮ ಸೃಷ್ಟಿ, ಪ್ರಾಕೃತಿಕಸೃಷ್ಟಿ, ಹಿರಣ್ಯಾಕ್ಷವಧೆ, ಬ್ರಹ್ಮಸ್ವಾಯಂಭುವ ಮನುಸೃಷ್ಟಿಗಳೂ, ಶತರೂಪಾಸೃಷ್ಟಿ, ಕರ್ದಮವಂಶವು, ಕಪಿಲಾವತಾರ, ಕಪಿಲದೇವಹೂತಿ ಸಂವಾದ, ನವಪ್ರಜೇಶರ ವಂಶಚರಿತ್ರೆ, ಪಾತಾಳ ನರಕಾದಿಸ್ಥಿತಿಗಳೂ, ದಕ್ಷಜನ್ಮ ಆತನ ಸಂತತಿ, ಹಿರಣ್ಯಾಕ್ಷಹಿರಣ್ಯಕಶಿಪು ಸಂಹಾರಗಳೂ, ಗಜೇಂದ್ರಮೋಕ್ಷ, ಶ್ರೀಹರಿಯಮತ್ಸ್ಯಾದಿ ಅವತಾರಗಳೂ, ಸಮುದ್ರಮಥನ, ದೇವಾಸುರಯುದ್ಧ, ರಾಜವಂಶವರ್ಣನ, ಸೂರ್ಯವಂಶಚರಿತ್ರೆ ನಿಮಿರಾಯನ ಶರೀರತ್ಯಾಗ, ಜನಕವಂಶ ಶರ್ಯಾತಿಚರಿತ್ರೆ, ಕಕುತ್ಸ್ಥನ ವೃತ್ತಾಂತ, ಪರಶುರಾಮ ಚರಿತ್ರೆ, ಭರತ ಶಂತನೂ ಚರಿತ್ರೆಗಳೂ, ಯದುವಂಶದಲ್ಲಿ ಶ್ರೀ ಕೃಷ್ಣಭಗವದವತಾರವು, ಕೃಷ್ಣನು ಪೂತನಾದಿಗಳನ್ನು ಸಂಹರಿಸಿದ್ದು, ಕೃಷ್ಣನಿಗೆ ಇಂದ್ರನು ಪಟ್ಟಗಟ್ಟಿದ್ದು, ಗೋಪಸ್ತ್ರೀಯರ ವಸ್ತ್ರಗಳನ್ನು ಶ್ರೀ ಕೃಷ್ಣನು ಅಪಹರಿಸಿದ್ದು, ಗೋಪಸ್ತ್ರೀಯರೊಡನೇ ಶ್ರೀ ಕೃಷ್ಣನು ಕ್ರೀಡಿಸಿದ್ದು, ಶ್ರೀಕೃಷ್ಣನ ರಾಸಕ್ರೀಡೆ, ಜಲಕ್ರೀಡೆ, ರಾಮಕೃಷ್ಣರ ಪ್ರಸಾದವು, ರುಕ್ಮಿಣಿಸತ್ಯಭಾಮ ವಿವಾಹಮಹೋತ್ಸವ, ದ್ವಾರಕಾನಗರವಾಸವು, ಬಾಣಾಸುರಾದಿಗಳನ್ನು ಶ್ರೀ ಕೃಷ್ಣನು ಜಯಿಸಿದ್ದು, ನಾರದರು ಕೃಷ್ಣನು ಹದಿನಾರುಸಾವಿರ ಗೋಪಿಕಾಗೃಹಗಳಲ್ಲಿ ಏಕಕಾಲದಲಿದ್ದುದನ್ನು ನೋಡಿದ್ದು, ಕೃಷ್ಣನು ಪಾಂಡವರನಿಮಿತ್ತವಾಗಿ ಭೂಭಾರವನ್ನಿಳುಹಿದ್ದು, ಉದ್ಧವ ಕೃಷ್ಣರ ಸಂವಾದವೂ, ಶ್ರೀ ಕೃಷ್ಣ ಪರಮಾತ್ಮನು ತನ್ನ ಲೋಕವಾದ ವೈಕುಂಠಕ್ಕೆ ತೆರಳಿದ್ದು, ಕಲಿಯುಗದಲ್ಲಿ ಹುಟ್ಟುವ ರಾಜರುಗಳು, ಪರಿಕ್ಷಿದ್ರಾಯನು ಮುಕ್ತನಾದದ್ದು, ಮಾರ್ಕಂಡೇಯನ ಕಥೆಯೂ, ಇತ್ಯಾದಿ ವಿಷಯಗಳು ಇನ್ನು ಅನೇಕ ವಿಷಯಗಳ ಸಾರಾಂಶವೂ ಇದರಲ್ಲಿ, ಕನ್ನಡಿಯಲ್ಲಿ ಕಾಣುವಂತೆ ಸುಲಭವಾಗಿ ಕಾಣಬರುವುವು. ಮತ್ತು ಭಾಗವತಕ್ಕೆ ಕಥಾನಾಯಕನಾದ ಶ್ರೀಕೃಷ್ಣ, ಗೋಪಿಕಾಸ್ತ್ರೀಯರೇ ಮೊದಲಾಗಿ ಆಯಾ ಸ್ಕಂಧಗಳಲ್ಲಿ, ಉಕ್ತವಾಗಿರುವ ದೇವತೆಗಳು, ಮುನಿಗಳು, ರಾಜರುಗಳು, ಇವರ ಭಾವಚಿತ್ರ ಪ್ರತಿಮೆಗಳನ್ನು ಅಲ್ಲಲ್ಲಿ ತೋರಿಸಿದೆ. ದೊಡ್ಡ ಅಕ್ಷರಗಳಿಂದ, ದಪ್ಪವಾದ ಕಾಗದದಲ್ಲಿ, ಅಂದವಾಗಿ ಅಚ್ಚು ಹಾಕಿಸಿ ಉತ್ತಮವಾದ ಬೈಂಡು ಮಾಡಿದೆ. ಇದು ಪಂಡಿತರಿಗೂ, ಇತರ ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ, ಪುರುಷರಿಗೂ, ಮಕ್ಕಳಿಗೂ ಸಹ, ಓದುವುದಕ್ಕೆ ಹೃದಯಾನಂದಕರವಾಗಿರುತ್ತದೆ. ಹೀಗೆ ಸಮಸ್ತರಿಗೂ ಉಪಯೋಗವಾಗಿರುವುದರಿಂದ ಈ ಗ್ರಂಥವು ಪ್ರತಿಯೊಬ್ಬರಲ್ಲಿಯೂ ಮುಖ್ಯವಾಗಿರಬೇಕಾದದ್ದಾಗಿದೆ. ಬೇಕಾದವರು ಬರದು ತರಿಸಿಕೊಳ್ಳಬಹುದು.

ಇದರ ಬೆಲೆ ಪ್ರತಿ ಒಕ್ಕೆ ರೂ. ೧—೦—೦ ಟಪ್ಪಾಲು ಹಾಸಲು ೦—೪—೦.

[illegible]

ಕನ್ನಡ ಅಚ್ಚಿನ ಪುಸ್ತಕಗಳು.

ಉಡುಪಿ ಶ್ರೀಕೃಷ್ಣ ಚರಿತ್ರೆ

ದಂಡಾಕಾರ, ಮೂರು ಸಂಧಿಗಳಿಂದ ಕೂಡಿರುವದು. ಪ್ರಥಮ ಸಂಧಿಯಲ್ಲಿ ಶ್ರೀ ಮಧ್ವಾಚಾರ್ಯರು ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠೆ ಮಾಡಿದ ವಿಷಯವೂ, ಎಂಟು ಜನ ಯತಿಗಳ ವಿಷಯವೂ, ಪ್ರತಿನಿತ್ಯ ನಡಿಯತಕ್ಕ ವಿಧಾನಗಳೂ, ಎರಡನೆಯ ಸಂಧಿಯಲ್ಲಿ ಮಕರಸಂಕ್ರಾಂತಿ ಉತ್ಸವ ವರ್ಣನೆಯೂ, ಮೂರನೇ ಸಂಧಿಯಲ್ಲಿ ವರುಷದ ಇತರ ದಿವಸಗಳಲ್ಲಿ ನಡಿಯತಕ್ಕ ಉತ್ಸವಾದಿಗಳೂ ವರ್ಣಿತವಾಗಿವೆ. ಬೆಲೆ 3 ಆಣೆ.

ಋ. ತ್ರೈಕಾಲಿಕ ಸಂಧ್ಯಾವಂದನ 3 ಆಣೆ, ಯ. ತ್ರೈಕಾಲಿಕ ಸಂಧ್ಯಾವಂದನ 4 ಆಣೆ, ಆಶ್ವಲಾಯನ ಸಂಧ್ಯಾವಂದನ (ಮಂತ್ರಾರ್ಥಯುದವರಿಗೆ) 3ಆಣೆ; ಯಜುರ್ವೇದ ಸಂಧ್ಯಾವಂದನ (ಮಂತ್ರಾರ್ಥಯುದವರಿಗೆ) 2 ಆಣೆ; ಋ. ಬ್ರಹ್ಮಯಜ್ಞ ವೈಶ್ವದೇವ ಉಪಾಸನ 3 ಆಣೆ; ಪ್ರಾತರಾಹ್ನಿಕ ಪದ್ಧತಿ 3 ಆಣೆ; ದೇವಪೂಜಾ ಪದ್ಧತಿ 3 ಆಣೆ; ವಾಯುಸ್ತುತಿ 2 ಆಣೆ; ದ್ವಾದಶಸ್ತೋತ್ರ 2 ಆಣೆ; ವಿಷ್ಣುಸಹಸ್ರನಾಮ ಕೃಷ್ಣಾಷ್ಟೋತ್ತರ ವೆಂಕಟೇಶಸ್ತೋತ್ರಂ 2 ಆಣೆ; ವಿ. ಸಹಸ್ರಕೃಷ್ಣಾಷ್ಟೋತ್ತರನಾಮಾವಳಿ 0-2-6; ಅಭಿಷೇಕ ಸೂಕ್ತಗಳು 0-2-0; ಶ್ರೀಸೂಕ್ತ ಪುರುಷಸೂಕ್ತ 0-1-0; ಸುಂದರ ಕಾಂಡ ಕಥಾಸಾರಸಂಗ್ರಹ ವಗೈರೆ 0-2-0; ಗಜೇಂದ್ರ ಮೋಕ್ಷ 0-1-6; ಗೋಪಿಕಾಗೀತೆ ವಗೈರೆ 0-1-0; ಪಾಂಡವಗೀತೆ ವಗೈರೆ 0-1-6; ಅಣುಭಾಷ್ಯ ವಗೈರೆ 0-0-9; ರಾಘವೇಂದ್ರಸ್ತೋತ್ರ ವಾದಿರಾಜ ಕವಚ 0-2-0; ಪುರಂದರದಾಸರ ಕೀರ್ತನೆಗಳು 0-6-0; ಉದಯರಾಗ 0-4-0; ಹರಿಭಕ್ತಿಸಾರ 0-1-0; ಸ್ವಪ್ನಪದ ಮಧ್ವನಾಮ 0-1-6; ಲಕ್ಷ್ಮೀ ಶೋಭನ ಹಾಡು 0-2-0, ತುಲಸಿಸಂಕೀರ್ತನೆಗಳು 0-2-0. ಇವೇ ಮೊದಲಾದ ಪುಸ್ತಕಗಳು ದೊರಕುತ್ತವೆ.

ಪಾವಂಜೆ ಗುರುರಾವ್,
ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ,
ಉಡುಪಿ, ದ. ಕ

S. U. N. & CO.,

BENARES CITY, U. P.

ದೊಡ್ಡ ಕಂಪೆನಿ! • ಸೊಗಸಾದ ಸರಕುಗಳು!!

ಈ ನಮ್ಮ ಕಂಪೆನಿಯಲ್ಲಿ ನೆಯಿದು ತಯಾರಿಸುವ ಉತ್ತಮವಾದ ಬನಾರಸ್ ರೇಶ್ಮೆ ಜರೀ ಶೀರೆಗಳು ಕಣ, ಪೇಟಾ, ಕಾಶ್ಮೀರ್ ಶಾಲು, ದುಪ್ಪಟ, ಮುಗಟ, ಜಗನ್ನಾಥ ಜಾಗಂಟೆಗಳು, ರುದ್ರಾಕ್ಷಿಗಳು ಮುಂತಾದ ಅಮೂಲ್ಯವಾದ ಸರಕುಗಳ ಕ್ಯಾಟಲಾಗುಗಳನ್ನು ಅಪೇಕ್ಷಿಸುವವರಿಗೆ 100 ಪುಟಗಳುಳ್ಳ ಕ್ಯಾಟಲಾಗ್ 1ನ್ನು ಮತ್ತು 3 ವಿಶ್ವೇಶ್ವರ ಪಟಗಳನ್ನು ಇನಾಮಾಗಿ ಕಳುಹಿಸಲಾದೀತು

ತಮ್ಮ ವಿಳಾಸ:— ಯುಸ್.ಯು.ಯನ್. ಮತ್ತು ಕಂಪೆನಿ, ಕಾಶಿ.

ದ. ಕ

ಸ್ತೂರಿ ತೊಲೆಗಕ್ಕೆ ರೂ. 30. ನಂಬ್ರ 2 ತೊಲೆಗಕ್ಕೆ ರೂ. 25. ಸನ್ ಬ್ರೆಂಡ್ ಕೇಸರಿ ತೊಲೆಗಕ್ಕೆ ರೂ. 1—6—0. ಕಾಶ್ಮೀರ ಕೇಸರಿ ತೊಲೆಗಕ್ಕೆ ರೂ. 1—4—0. ಅತ್ಯುತ್ತಮವಾದ ಸಿಂಗಾಪುರದ ಪಚ್ಚೆ ಕರ್ಪೂರ ತೊಲೆಗಕ್ಕೆ ರೂ. 2. ಸಿಂಹರವರ ಸುಗಂಧ ಕಾಯಿಗಳು ಟಿನ್ ಒಂದಕ್ಕೆ ಆಣೆ 8. [illegible]



ಪಿ. ಎನ್. ಸಿಂಹಂ ಮತ್ತು ಕಂಪೆನಿ,
ಆದಿಯಪ್ಪನಾಯಕ ರಸ್ತೆ,
ಮದರಾಸು.

ಉತ್ತಮ ಗ್ರಂಥ ಸಂಗ್ರಹಕ್ಕಿದುವೆ ಒಳ್ಳೆಯ ಸಮಯ!!!

ಕನ್ನಡ ನುಡಿಯ ಸವಿನುಡಿ. ಮಾಸಪತ್ರಿಕೆ

ಮಾಹಿತಿಯ ಸಂಚಿಕೆಯು ಮಾಘತ್ತು!!!

ವಾರ್ಷಿಕ ಚಂದಾ:—ಮುಂಗಡ ರೂ. ೨—೪—೦.

ದೀಪಾವಳಿಯ ಬಹುಮಾನ!'!

ಒಂದೇ ಒಂದು ತಿಂಗಳ ಪಾಯಿದೆ!!! ಬಳಿಕ ಬಹುಮಾನವಿಲ್ಲ!!!

ಚಂದಾಹಣವನ್ನು ಮನಿಯಾರ್ಡರು ವ ವಿ. ಪಿ. ಮೂಲಕ ಕೊಡತಕ್ಕದ್ದು.

ಕನ್ನಡ ಕಥೆಗಳ ಕಥಾಸರಿತ್ಸಾಗರ. ಹೊಳೆಗಳ ಕಡಲು

ಕ್ರಯ ಒಂದು ರೂಪಾಯಿ ಹನ್ನೆರಡಾಣೆ.

ಪಾರ್ವತೀ ದೇವಿಯ ಪ್ರಾರ್ಥನೆಯಂತೆ ಪರಮೇಶ್ವರನ ಪ್ರೋಕ್ತವಾದ ಅಮಾಧ್ಯ ಅದ್ಭುತ ಕಥಾ ಸಂದರ್ಭಗರ್ಭಿತವಾದುದು. • ಕೆಲವು ಪ್ರತಿಗಳಿವೆ. (ಪೂರ್ವಭಾಗ) ಪುಟಗಳು ೫೪೦, ಗಟ್ಟಿ ಅಪ್ಪ, ಅಚ್ಚು ಚಂದ, ತಳತಳಿಸುವ ದಪ್ಪ ಕಾಗದ.

ಒಂದೇ ಒಂದು ತಿಂಗಳೊಳಗಾಗಿ ಎರಡು ರೂಪಾಯಿ ಎಂಟಾಣೆಯನ್ನು ಕೊಡುವ ಕೊರವೂರವರಿಗೆ ಪಟ್ಟಿಗೆ ಈ ಉತ್ತಮ ಗ್ರಂಥವು ಉಚಿತ!!! ಒಂದು ವರುಷ "ಸವಿನುಡಿ"ಯೂ ಉಚಿತವೆ!!!

ಅವಧಿ ಮೀರಿದ ಬಳಿಕ ಬಹುಮಾನ ದೊರೆಯದು.

ಬೇಗ ಬರೆಯಿರಿ! ಬೇಗ ಬರೆಯಿರಿ!!' ಬೇಗ ಬರೆಯಿರಿ!!!

ವಿಳಾಸ:—— ಸಂಪಾದಕ "ಸವಿನುಡಿ"
ಚಿಕ್ಕಪೇಟೆ—ಬೆಂಗಳೂರು ಸಿಟಿ.

TRY STEVEN & SONS'

Gold and Silver Medalists'

BISCIUTS

Can be had from your Grocer

OR

direct from STEVEN & SONS,
MANGALORE.

ಚಿನ್ನ ಮತ್ತು ಬೆಳ್ಳಿಯ ಪದಕಗಳನ್ನು ಬಹುಮಾನವಾಗಿ ಪಡೆದ

ಸ್ಟೀವನ ಎಂಡ್ ಸನ್ಸರ

ಬಿಸ್ಕುಟುಗಳನ್ನು

ಒಮ್ಮೆ ತರಿಸಿ ನೋಡಿರಿ!

ಎಲ್ಲಾ ಕಡೆಗಳಲ್ಲಿಯೂ ಮಾರಾಟಕ್ಕೆ ದೊರೆಯುತ್ತವೆ.

ವಿಳಾಸ— [illegible] ಮಂಗಳೂರು

ಕ್ಷಯ ಸಂಹಾರಿ

ಎಂಬ ಕ್ಷಯರೋಗ ಚಿಕಿತ್ಸೆಯು

ಪುಪ್ಪುಸಕ್ಷಯಕ್ಕೂ ಇತರ ಶ್ವಾಸಕೋಶ ಸಂಬಂಧವಾದ ಬೇನೆಗಳಿಗೂ ಇದು ಮಲಬಾರಿನಲ್ಲಿಯ ಶ್ರೇಷ್ಠವಾದ ಔಷಧವಾಗಿದೆ.

ಗಿಡಮೂಲಿಕೆಗಳಿಂದಲೇ ತಯಾರಿಸಿದ ಈ ಔಷಧವನ್ನು ಸೇವಿಸುವುದರಿಂದ ಕೆಮ್ಮು ತಕ್ಷಣವೇ ನಿಲ್ಲುವುದು, ಉಸುರುಕಟ್ಟುವದು ಕಡಿಮೆಯಾಗುವದು, ಶ್ವಾಸೋಚ್ಛ್ವಾಸ ದ್ವಾರಗಳ ಬೇನೆಯು ಅಡಗಿ ಹೋಗುವದು. ಕ್ಷಯ ರೋಗವು ಯಾವ ಮಜಲಿನಲ್ಲಿಯೂ ನಿವಾರಣೆಯಾಗುವದು.

48 ಸಾರಿ ತಕ್ಕೊಳ್ಳುವ ಔಷಧವಿರುವ ಒಂದು ಬಾಟ್ಲಿ ಔಷಧಕ್ಕೆ ರೂಪಾಯಿ 4—8—0.

ಕ್ಷಯಸಂಹಾರಿಯು ವಿಷಯ ಮಿರಾಜ್ ಡಾಕ್ಟರರು ಈ ರೀತಿ ಬರೆಯುವರು:—ಕಲ್ಲಿಕೋಟೆಯ ಯು. ಬಿ. ದತ್ತ್ ಮತ್ತು ಕಂಪೆನಿಯವರಿಂದ ತಯಾರಿಸಲ್ಪಟ್ಟ ಕ್ಷಯಸಂಹಾರಿಯನ್ನು ನಾನು ಹಲವು ಮಂದಿ ಕ್ಷಯರೋಗಿಗಳಿಗೆ ಪ್ರಯೋಗಿಸಿದಲ್ಲಿ ಅದು ರೋಗಿಗಳಿಗೆ ಬಹಳ ಗುಣಕಾರಿಯಾಗಿ ಕಂಡುಬಂದಿತ್ತಲ್ಲದೆ ಅದರ ಪ್ರಯೋಗವು ಕಠಿಣವಾದ ಕ್ಷಯ ರೋಗಗಳಲ್ಲಿ ಸಹಾ ನಿಜವಾಗಿ ಕೃತಕೃತ್ಯವಾದದ್ದೇ ಸೈ.

ದಿನೇ ದಿನೇ ಇದರ ಪ್ರಯೋಗವು ಹೆಚ್ಚಾಗಬೇಕೆಂಬದೇ ನನ್ನ ಬಯಕೆಯಲ್ಲದೆ ಎಲ್ಲಿ ನಾನು ಕ್ಷಯರೋಗಿಗಳನ್ನು ಕಾಣುವೆನೋ ಅಲ್ಲಿ ಅವರಿಗೆ ಇದೇ ಕ್ಷಯಸಂಹಾರಿಯನ್ನು ಪ್ರಯೋಗಿಸಲು ಹೇಳುವೆನು. ಕ್ಷಯರೋಗ ನಿವಾರಣೆಗೆ ಅತ್ಯುತ್ತಮವಾದ ಔಷಧವು ಇದೊಂದೇ. (*Sd.*) ಸಿ. ಡಿ. ಅಂಡ್ರೂಸ್ ಎಮ್. ಎಮ್. ಎಸ್. ಸರ್ಜನ್, ಮಿರಾಜ್ ಆಸ್ಪತ್ರಿ.

ವಿಳಾಸ:— ಯು. ಬಿ. ದತ್ತ್ ಮತ್ತು ಕಂಪೆನಿ,
ವನೌಷಧಿ ಕಾರಕರು, ಕಲ್ಲಿಕೋಟೆ

Estd. 1888. ಸ್ಥಾಪಿತ 1888.

K. B. RELE & CO'S,—BOMBAY

ಕೆ. ಬಿ. ರೇಳೆ ಕಂಪನಿಕೃತ

ಗಜಕರ್ಣ.

ತದ್ದು, ಇಸಬು, ಇವುಗಳ ಮೇಲೆ ಮಲಮು.

ಎಷ್ಟೋ ಹಳತ, ಕರೆ ಮತ್ತು ಹಟವಾರಿ ಗಜಕರ್ಣವು ಈ ಮಲಮಿನ ಒಂದೆರಡು ಸಾರಿ ಹಚ್ಚೋಣದಿಂದಲೇ ನಷ್ಟವಾಗುತ್ತವೆ. ೨೦-೨೫ ವರ್ಷಗಳ ಹಳತ, ವ್ಯಮನೆ ಮಾಡಿಕೊಂಡಿದಂಥ ಗಜಕರ್ಣವಿದ್ದರೂ ಇದರಿಂದ ನಾಶಹೊಂದುವದು ನಿಶ್ಚಯವೇ. ದೊಡ್ಡ ಬಾಟ್ಲಿ ಗಕ್ಕೆ ೪ ಆಣೆ. ಟಪ್ಪಾಲು ಖರ್ಚು ೮ ಬಾಟ್ಲಿಗಳ ವರೆಗೆ ನಾಲ್ಕೇ ಆಣೆ.

ವಿಶೇಷ ಸೂಚನೆ—ದೇರೆ ಅನೇಕ ಮದ್ದುಗಳ ಸಲುವಾಗಿ ತಮ್ಮ ವಿಳಾಸ ಬರೆದು ತಿಳಿಸಿದ್ದಲ್ಲಿ ನಮ್ಮ ಕ್ಯಾಟಲಾಗನ್ನು ಕಳುಹಿಸಿಕೊಡುವೆವು.

ಸಾರ್ಸಾಪರಿಲ್ಲೆಯು.

ಇದರಲ್ಲಿ ಪಾರಜವಿಲ್ಲಾ!

ಈ ಸಾರ್ಸಾಪರಿಲ್ಲೆಯಿಂದ ರಕ್ತವು ಶುದ್ಧವಾಗಿ, ಅದರೆಲ್ಲಾ ದೋಷಗಳನ್ನು ನಷ್ಟವಾಗುತ್ತವೆ. ಬಹಳ ದಿವಸದಿಂದ ಮೈಯಲ್ಲಿ ಸೇರಿಕೊಂಡಿದ್ದಂಥ (Syphilis) ಉಪದಂಶ (ಗರಮಿ) ಯಿಂದ ಮೈಮೇಲೆ ಉಬ್ಬುವ ಚಟ್ಟೆಗಳೂ, ಚಕುಮುಗಳೂ, ಬಾಯಿಗೆ ಮತ್ತು ಅಂಗಳಿಗೆ ತೂತು ಬೀಳೋಣ, ಪಿನಸವೆಂಬ ಮೂಗಿನ ರೋಗ, ಗಂಟಲೊಳಗೆ ವ್ರಣ ಬೀಳೋಣ, ಮೈಯ ಸಂದು ನೋವೋಣ, ಕೈಕಾಲು ಒಡೆಯೋಣ, ಪ್ರಮೇಹ (ಪರಮೆ) ದಿಂದ ಕೈಕಾಲುಗಳ ಸಂದುಗಳು ನೋವೋಣ, ತಲೆ ಕೈಕಾಲುಗಳುರಿಯೋಣ, ಕೈ ಮೇಲೆ ಕರೆ ಕಲೆ ಬೀಳೋಣ, ಮುಂತಾದ್ದೆಲ್ಲ ಕೆಟ್ಟ ವ್ಯಾಧಿಗಳು ನಷ್ಟವಾಗುತ್ತವೆ. ರಕ್ತಶುದ್ಧಿಯಾಗುವದಕ್ಕೆ ನಿಶ್ಚಯಕರ ಉಪಾಯವೆಂದರೆ ಇದೇ ಸಾರ್ಸಾಪರಿಲ್ಲೆಯು. ಕ್ರಯ ಬಾಟ್ಲಿ ಗಕ್ಕೆ [illegible] —೪—೦. ಅಂಚೆ ವೆಚ್ಚ ೪ ಆಣೆ.

ವರ್ತಕರಿಗೆ ಹಾಗು ಹೆಚ್ಚು ಪ್ರಮಾಣದಿಂದ ತಕ್ಕೊಳ್ಳುವವರಿಗೆ ಭರಪೂರ ಕಮಿಷನ್.

ಕೆ. ಬಿ. ರೇಳೆ ಸನ್ಸ್ ಕಂಪನಿ, ಗಿರಗಾಂವ ನಂ. ೪ ಮುಂಬಯಿ.

ಅನುಭವಸಿದ್ಧವಾದ ವನೌಷಧಗಳು.

೧. **ಕುಂತಲಾನಂದ ತೈಲವು.** ಕೇಶವರ್ಧಕವೂ ಶಿರೋರೋಗ ನಾಶಕವೂ ಸುವಾಸಿಕವೂ ಶೀತಳವೂ ಆಗಿದ್ದು ಪ್ರದರ್ಶನಗಳಲ್ಲಿ ಹಾಲ್ಕು ಬಿರುದಿನ ಬಿಲ್ಲೆಗಳನ್ನೂ ಅನೇಕಾನೇಕ ಸರ್ಟಿಫಿಕೇಟುಗಳನ್ನೂ ಪಡೆದಿದೆ. ಬಾಟ್ಲಿಗೆ ೧ರೂ. ೩ ಬಾಟ್ಲಿಗೆ ೨ ರೂ. ೧೦ ಆಣೆ.

೨. ಪ್ರಮೇಹರಿಪು ಬಿಂದು. ಉರಿಯನ್ನೂ ಕೀವನ್ನೂ ಕೂಡಲೇ ನಿಲ್ಲಿಸಿ ಪಥ್ಯವಿಲ್ಲದೆ ಖಚಿತವಾಗಿ ಗುಣ ಕೊಡುವದು. ಬಾಟ್ಲಿಗೆ ೨-೮-೦.

೩. **ಪಂಚಕೇಸರಿ ಪಾಕ.** ಎಲ್ಲ ಪ್ರದರಗಳನ್ನೂ ಮುಟ್ಟು ಕಟ್ಟಳೆಯ ದೋಷಗಳನ್ನೂ ಬಂಜೆತನವನ್ನೂ ತಪ್ಪದೆ ಗುಣಪಡಿಸುವದು. ರಾತಲಿಗೆ ೨ ರೂ.

೪. **ಸೂರಣಾವ ಲೇಹ.** ರಕ್ತ ಅಥವಾ ಮೊಳಕೆಯ ಮೂಲವ್ಯಾಧಿಯ ಕೀಲಿ ಅತ್ಯುತ್ತಮವು. ಪೌಷ್ಟಿಕವಾಗಿದೆ. ರಾತಲಿಗೆ ೨ ರೂ.

೫. **ಪ್ಲೀಹೋದರಾರಿ ಚೂರ್ಣ.** ಒಂದು ತಿಂಗಳೊಳಗಾಗಿ ಅಪಾಯವಿಲ್ಲದೆ ದಾರುಣವಾದ ಜ್ವರದ ಗೆಡ್ಡೆಯನ್ನೂ ತತ್ಸಂಬಂಧವಾದ ಇತರ ವಿಕಾರಗಳನ್ನೂ ಗುಣಪಡಿಸುವದು. ತಿಂಗಳ ಔಷಧಕ್ಕೆ ಒಟ್ಟು ೩ ರೂ. ೮ ಆಣೆ.

೬. **ಜಗನ್ಮೋಹನ ದಂತಮಂಜನ.** ದಂತ ಸಂಬಂಧವಾದ ಸರ್ವ ಬಾಧೆಗಳನ್ನು ಪರಿಹರಿಸತಕ್ಕ ವಿಲಾಯತೀ ಮಂಜನದಷ್ಟೇ ಸೊಗಸಾದ ಹಲ್ಲು ಪುಡಿ. ಅನೇಕ ವನೌಷಧಗಳಿಂದ ತಯಾರಿಸಿಯದೆ. ೧೦ ತೊಲೆಗೆ ೧೦ ಆಣೆ.

೭. **ಸರಳಭೇದಿ ಮಾತ್ರೆ.** ಆಯಾಸವನ್ನುಂಟುಮಾಡದ ಸುಖ ವಿರೇಚಕವು. ತೊಲೆಗೆ ೨ ರೂ.

ತಮ್ಮ ವಿಳಾಸ:—**ಬಿ ಎಮ್. ನಾಥ್ ಮತ್ತು ಕಂಪೆನಿ,**

ವೆಪರಿ ಪೋಸ್ಟು ಮದರಾಸು.

೮. **ಮಹಾಜ್ವರಾಂಕುಶ ಮಾತ್ರೆ.** [illegible] ಎಲ ಜ್ವರಗಳನ್ನು ತಪ್ಪದೆ ಗೆಲ್ಲುವದು. ಅರ್ಧ **ತೊಲೆಗೆ ೨ ರೂ.**

೯. **ವಾಸಾವ ಲೇಹ.** ಕೆಮ್ಮು, ಗುಲ್ಮ, ಶ್ವಾಸ, ಕಫ, [illegible] ರಾಮಬಾಣವು. ರಾತಲಿಗೆ ೨ ರೂ.

೧೦. **ಶಾಲ್ಮಲೀ ಪಾಕ.** ಸ್ವಪ್ನಾವಸ್ಥೆ, ಮೂತ್ರಬಿಳಿ, [illegible] ವ್ಯಸನಗಳ ಮೂಲಕವಾಗಿ ಪ್ರಾಪ್ತವಾದ ನಿರ್ಬಲತೆ ಮುಂತಾದವುಗಳನ್ನು ಹೋಗಲಾಡಿಸಿ ಶಕ್ತಿ, ಕಾಂತಿ, ಬುದ್ಧಿಬಲಗಳನ್ನು ಕೊಡುವದು. **ರಾತಲಿಗೆ ೩ ರೂ.**

೧೧. **ವಾತಮುರಾರಿ ಬಾಮ್.** ತಲೆನೋವು, ಎದೆನೋವು, ಸೊಂಟನೋವು, ಉಳುಕು, ಬೀಗು, ವಾತಬಾಧೆಗಳನ್ನು ಕೂಡಲೆ ಗೆಲ್ಲುವದು. **ಬಾಟ್ಲಿಗೆ** ೮ ಆಣೆ. ೩ ಬಾಟ್ಲಿಗೆ ೧ ರೂ. ೬ ಆಣೆ.

೧೨. **ಗಜಕರ್ಣ ಕೇಸರಿ ಮುಲಾಮು.** ಹುಳುಕಡ್ಡಿ, ತುರಿಗಜ್ಜಿ ಮುಂತಾದ ಚರ್ಮವ್ಯಾಧಿಗಳನ್ನು ಒಂದೆರಡು ಲೇಪನದೊಳಗಾಗಿ ಗೆಲುವದು. **ಉರಿಯು** ವದಿಲ್ಲ ಸುವಾಸಿಕವಾಗಿದೆ. ಕರಡಿಗೆಗೆ ೪ ಆಣೆ.

೧೩. **ಸವ್ವೀರಾಂಜನ (ಸುರುಮಾ).** ಎಲ್ಲ ನೇತ್ರರೋಗಗಳನ್ನು ಪರಿಹರಿಸಿ ದೃಷ್ಟಿಗೆ ಪಟುತ್ವವನ್ನುಂಟುಮಾಡುವದು. **ತೊಲೆಗೆ ೧ ರೂ.**

೧೪. **ಪ್ರಜ್ಞಾ ಸಾರಸ್ವತ ಚೂರ್ಣ.** ಉನ್ಮಾದ, ಅಪಸ್ಮಾರ, ಉಗ್ಗುವಾತು, ಬುದ್ಧಿಮಾಂದ್ಯಗಳನ್ನು ಪರಿಹರಿಸುವದು. ಸ್ಮರಣ ಶಕ್ತಿಯನ್ನು ಬೆಳೆಯಿಸುವದು. ನಾಲಿಗೆಗೆ ಪಟುತ್ವವನ್ನು ಕೊಡುವದು. ಕಂಠಸ್ವರವನ್ನು ಮಧುರವಾಗಿರಿಸುವದು. ವಿದ್ಯಾರ್ಥಿಗಳಿಗೆ ಅತ್ಯುತ್ತಮವು. ೧೦ ತೊಲೆಗೆ ೨ ರೂ. ೮ ಆಣೆ.

☞ ಮೇಲಿನ ಬೆಲೆಗಳಲ್ಲಿ ಅಂಚೆಯ ಹಾಸಲು ಸೇರಿಸಿಲ್ಲ. ನಮ್ಮಲ್ಲಿ ಶಾಸ್ತ್ರೀಯ ವಿಧದ ಎಲ ಔಷಧಗಳು ಯೋಗ್ಯ ಬೆಲೆಗೆ ದೊರೆಯುವವು. ನಮ್ಮ ದೊಡ್ಡ ಪಟ್ಟಿಯ ಕೆಟಲಾಗು ನೋಡಿರಿ. ರೋಗ ಲಕ್ಷಣಗಳನ್ನು ಬರೆದು ಕಳುಹಿಸುವವರ ರೋಗ ನಿರ್ಣಯ ಮಾಡಿ ಔಷಧ ಯೋಜನೆಯನ್ನೂ ಮಾಡುವೆವು. ನಮ್ಮೊಡನೆ ಕನ್ನಡದಿಂದಲೂ ಇಂಗ್ಲಿಷಿನಿಂದಲೂ ಪತ್ರವ್ಯವಹಾರ ನಡೆಯಿಸಬಹುದು.

B. M. Nath & Co., *Ayurvedic Chemists,*

Vepery Post, MADRAS

ಬನ್ನಿರಿ! ನೋಡಿರಿ!! ತಿಳಿಯಿರಿ!!

ತಿರುಚಿನಾಪಳ್ಳಿಯ ನಾನಾ ನಮೂನೆಯ ಚುರುಟುಗಳೂ, **ಉತ್ತಮವಾದ ನೀಲಗಿರಿಯ ಚಾ,** ನಮ್ಮಲ್ಲಿ ಬಂದಿರುತ್ತವೆ. ಒಂದಾವರ್ತಿ **ಉಪಯೋಗಿಸಿದರೆ** ಎಂದಿಗೂ ಬಿಡಲಾರರು.

ಬಲ್ಹಾರ ಮಿಶ್ಯನ್ ಚೇಕುಗಳೂ, ಬೇರೆ ಅನೇಕ ತರದ ಸ್ವದೇಶಿ ಚೇಕ ಮುಂತಾದ ವಸ್ತ್ರಗಳೂ, ಸಾಡಿಗಳೂ, ಮಿಶ್ಯನ್ ಶೋಪಿನ ಕೊಡೆಗಳೂ, ರೇಶ್ಮೆ ವಸ್ತ್ರಗಳೂ; ಪೆಬ್ಲ ಎಂಬ ಗುರುತು ಕಲ್ಲುಕನ್ನಡಿಯಿಂದ ಮಾಡಲ್ಪಟ್ಟ ದೃಷ್ಟಿಚಕ್ರಗಳೂ; ಇನ್ನು ಅನೇಕ ವಿಧ ವಿಧ ಹತ್ತಿ ಮತ್ತು ರೇಶ್ಮೆಯ ವಸ್ತ್ರಗಳೂ; ಜರಿ ಶೀರೆಗಳೂ, ದೋತ್ರಗಳೂ, ರುಮಾಲುಗಳೂ, ರವಕೆ ಕಣಗಳೂ ಕನಾನ್ನೂರು ಶೀರೆಗಳೂ, ಚೇಕುಗಳೂ, ಮತ್ತು ಯಂತ್ರದಿಂದ ಹುರಿದು ತಯಾರಿಸಲ್ಪಟ್ಟ ಅಮೂಲ್ಯವಾದ ಮೂಲ ಬಾಬಾ ಬುಡನ್‌ಗಿರಿ ಕಾಫಿ ಪುಡಿಯು ಸಹ ಕಮ್ಮಿ [illegible]ದಲ್ಲಿ ನಮ್ಮಲ್ಲಿ ದೊರಕುತ್ತವೆ.

[illegible]

[illegible]

ಡೋಂಗರೆ
ಇವರ
ಬಾಲಾಮೃತ

ತಕ್ಕೊಳ್ಳುವದರಿಂದ ಬಾಲಕರು ಸಶಕ್ತರಾಗುತ್ತಾರೆ. ಇದು ಸವಿ ಇರುವದರಿಂದ ಹುಡುಗರು ಪ್ರೀತಿಯಿಂದ ತಕ್ಕೊಳ್ಳುತ್ತಾರೆ. ನಮಗೆ ಸಿಕ್ಕ ಎಷ್ಟೋ ಸರ್ಟಿಫಿಕೇಟುಗಳಲ್ಲಿ ಕೆಳಗೆಕೊಟ್ಟದು ಒಂದಿರುವದು.

ಕರೀಮ ಮಹಮ್ಮದ ಎಮ್. ಎ ಎಲ್. ಎಲ್. ಬಿ. ಹೆಡ್ ಮಾಸ್ತರ ಹ್ಯಾಸ್ಕೂಲು ಜುನಾಗಡ ಇವರು ಬರೆದದ್ದು:

ಬಾಲಾಮೃತವನ್ನು ನಾನು ಉಪಯೋಗಿಸಿದೆನು. ಅದು [illegible] ಮಕ್ಕಳಿಗೆ ಬಹು ಗುಣವುಳ್ಳದೆಂದು ನನಗೆ [illegible] ಬಾಲಾಮೃತವು ಹೆಸರಿನಂತೆ ಅಮೃತವೇ ಇರುವದು.

[illegible] 0—12—[illegible] 0—4—0

K. T. Dongre & Co., [illegible]

[illegible]

ಲೋಕಪ್ರಸಿದ್ಧವಾದ ಪಂಜಾ ಸಾಲಾಮಿಸ್ರಿ ಮುರಬ್ಬಾ.

ದುರಭ್ಯಾಸಗಳಿಂದ ಧಾತುವನ್ನು ನಷ್ಟಪಡಿಸಿಕೊಂಡು ದುಃಖಿಸುವುದನ್ನು ಬಿಟ್ಟು ಲೋಕೋಪಕಾರಾರ್ಥವಾಗಿ ತಯಾರುಮಾಡಿರುವ "ಪಂಜಾ ಸಾಲಾಮಿಸ್ರೀ ಮುರಬ್ಬಾವನ್ನು" ಸೇವಿಸಿರಿ! ಸೇವಿಸಿರಿ!!

ಈ ಸಾಲಾಮಿಸ್ರೀ ಎಂಬದು ಒಂದು ಗಿಡದ ಹಣ್ಣಾಗಿರುತ್ತದೆ. ಕಾಬೂಲು ಕಾಂದಹಾರ್ ದೇಶಗಳಲ್ಲಿ ಇದು ಬಹಳವಾಗಿ ಬೆಳೆಯುತ್ತದೆ. ಅಲ್ಲಿನ ಜನರು ಸಾಲಾಮಿಸ್ರೀಯ ಹಣ್ಣನ್ನು ಬಹಳವಾಗಿ ತಿನ್ನುವರು. ಶಕ್ತಿಯಲ್ಲಿ ಕಾಬೂಲ್ ಕಾಂದಹಾರ್ ದೇಶದ ಒಬ್ಬ ಮನುಷ್ಯಗೆ ನಮ್ಮ ದೇಶದ ನಾಲ್ಕು ಜನಗಳು ಎಂದಿಗೂ ಸಮಾನವಾಗಲಾರರು. ಅನೇಕರು ಉರುಳುಗಡ್ಡೆ, ಶಾಮಗಡ್ಡೆ ಇವುಗಳನ್ನು ಪಕ್ವ ಮಾಡಿಟ್ಟುಕೊಂಡು ಸಾಲಾಮಿಸ್ರೀ ಎಂದು ಹೇಳಿ ಮೋಸಪಡಿಸುವರು. ಈ ಮುರಬ್ಬಾವನ್ನು ಪರೀಕ್ಷಿಸಿ ನೋಡಿದ್ದಲ್ಲಿ ಇದು ಪಂಜಾ ಸಾಲಾಮಿಸ್ರಿಯೇ ಅಥವಾ ಬೇರೆ ತರಹಾದ್ದೇ ಎಂಬುವುದು ತಿಳಿದು ಬರುತ್ತೆ.

ಈ ಮುರಬ್ಬಾವನ್ನು ಪ್ರತಿಯೊಬ್ಬರು ಸೇವಿಸುವ ಹಾಗೆ ಕ್ರಮದಿಂದ ಯುಕ್ತಿ ತಯಾರು ಮಾಡಲ್ಪಟ್ಟದ್ದು.

ಪಂಜಾ ಸಾಲಾಮಿಸ್ರಿ ಮುರಬ್ಬಾವು— ನೀರಿನಂತಿರುವ ಧಾತುವನ್ನು ಗಟ್ಟಿಪಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದೊಂದಿಗೆ ಧಾತುವು ಹೋಗುವುದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೂತ್ರದಲ್ಲಿ ಉರಿಯುವದನ್ನು ನಿಲ್ಲಿಸುವುದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕ್ಷಣಕ್ಷಣಕ್ಕೂ ಮೂತ್ರವಾಗುವದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ನಿದ್ರೆಯಲ್ಲಿ ಧಾತುವು ಹೋಗುವದನ್ನು ನಿಲ್ಲಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮೆದುಳಿಗೆ ಬಲವನ್ನು ಕೊಡುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ರಕ್ತವನ್ನು ವೃದ್ಧಿಪಡಿಸಿ ಧಾತುವನ್ನು ಶೇಖರಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಕೈ, ಕಾಲು, ತಲೆ, ಸೊಂಟದ ನೋವುಗಳನ್ನು ಹೋಗಲಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಹಸಿವನ್ನು ಹೆಚ್ಚಿಸಿ ರಕ್ತವನ್ನು ಶೇಖರಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಮಲವಿಸರ್ಜನೆಯನ್ನು ಕಾಲಕಾಲಕ್ಕೆ ಮಾಡಿಸುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ಉತ್ಸಾಹವು, ಬುದ್ಧಿ ಕುಶಲತೆಯು, ಶರೀರಕಾಂತಿಯು ಕೊಡುವದು.
ಪಂಜಾ ಸಾಲಾಮಿಸ್ರಿ ಮುರಬ್ಬಾವು— ತಾಂಬ್ರ ಮುತ್ತು ಭಂಗಾರ ಭಸ್ಮಕಿಂತಲು ಉತ್ತಮವಾದದ್ದು.

ಒಂದು ಡಬ್ಬಿ ಮುರಬ್ಬಾವನ್ನು 15 ದಿನಗಳು ಉಪಯೋಗಿಸುವದರಿಂದ ಪೂರ್ಣ ಗುಣಕಾಣುತ್ತೆ. 2—3 ಡಬ್ಬಿ ಮುರಬ್ಬಾವನ್ನು ಉಪಯೋಗಿಸುವದರಿಂದ ಶಾಶ್ವತವಾದ ಆರೋಗ್ಯ ಗುಣಕಾಣುತ್ತೆ.

ಈ ಮುರಬ್ಬಾವು "ಪಂಜಾ ಸಾಲಾಮಿಸ್ರಿ" ಅಲ್ಲವೆಂದು ವ್ಯಕ್ತಪಡಿಸುವವರಿಗೆ

500 ರೂಪಾಯಿಗಳು ಬಹುಮಾನ ಕೊಡುವೆವು.

ಹಾಗೆ ವ್ಯಕ್ತಪಡಿಸಿಯೂ ಬಹುಮಾನ ಹಣವನ್ನು ನಾನು ಕೊಡದೆ ನಿರಾಕರಿಸುವುದಾದರೆ ಸರಕಾರದ ಮೂಲಕ ನನ್ನಿಂದ ಪಡೆಯಬಹುದು.

15 ತೊಲೆ ಮುರಬ್ಬಾವಿನ ಡಬ್ಬಿ 1ಕ್ಕೆ ರೂ. 2. ಅನುಪಾನ ಪತ್ರಿಕೆ ಔಷಧದ ಸಂಗಡ ಇರುತ್ತೆ. ಟಪ್ಪಾಲು ಖರ್ಚು 1 ಡಬ್ಬಿಯಿಂದ 3 ಡಬ್ಬಿಯವರೆಗೆ ಆಣೆ 6.

ಏಜಂಟರು:— ಡಿ ಸಯ್ಯದ್ ಉಸ್ಮಾನ್ ಎಂಡ್ ಕೊ.
ದೊಡ್ಡಪೇಟೆ, ಬೆಂಗಳೂರು ಸಿಟಿ.

ಡಿ. ಮನ್ನಾಲಾಲ್, ಡಿಲ್ಲೀ ವೈದ್ಯರು,
5 ಹಾಜಿಸಾಹೇಬ್ ಮಹಡಿ ಅವೆನ್ಯು ರೋಡ್, ಬೆಂಗಳೂರು ಸಿಟಿ.

ಕೃಷ್ಣವಿಲಾಸ ಟ್ರೇಡಿಂಗ್ ಕಂಪೆನಿ,

ಮಾನ್ಯ ಗೃಹಸ್ಥರೇ, ಗಿರಗಾಂ, ಮುಂಬಯಿ.

ತಮ್ಮ ಕಡೆಯ ಹಲವು ಮಂದಿ ಗೃಹಸ್ಥರು ವರ್ತಮಾನ ಪತ್ರಗಳಲ್ಲಿ ಕೊಟ್ಟಿರುವ "ಪ್ರಸಿದ್ಧ ಪತ್ರಿಕೆ"ಗಳು ಹೊಗಳಿ ವಿವರಿಸುವ ಸಾಮಾನುಗಳನ್ನು ಇಲ್ಲಿಗೆ ಬರೆದು ತರಿಸಿಕೊಳ್ಳುತ್ತಿರುವಲ್ಲಿ ಆ ವಸ್ತುಗಳು ಪ್ರಸಿದ್ಧ ಪತ್ರಿಕೆಗಳಲ್ಲಿ ಬರೆದಿರುವಂತೆ ಚನ್ನಾಗಿರುವುದರ ಬದಲಿಗೆ ಬಹಳ ಹಲಕೇ ಸಾಮಾನುಗಳಿದ್ದು ಅವುಗಳಿಗೆ ಕೊಟ್ಟ ಹಣ ವ್ಯರ್ಥವು ಮಾಡಿದಂತೆ ಆಯಿತಲ್ಲಾ ಎಂದು ವ್ಯಸನಪಡುತ್ತಿರುವದು ನಮ್ಮ ತಿಳುವಳಿಕೆಗೆ ಬಂದದೆ. ನಾವು ಹಲವು ವರ್ಷಗಳಿಂದ ಪರವೂರ ಗೃಹಸ್ಥರಿಗೆ ಇಲ್ಲಿಂದ ಅತ್ಯುತ್ಕೃಷ್ಟವಾದ ವಸ್ತುಗಳನ್ನು ಪೇಟೆಯಿಂದ ಬಹಳ ಚೌಕಶೀಯಿಂದ ಕಮಿಮೆ ಖರೀದಿಗೆ ಕೊಂಡುಕೊಂಡು ರವಾನಿಸುತ್ತಿರುವುದು ಸಮಸ್ತರಿಗೂ ಗೊತ್ತೇ ಇದ್ದ ವಿಷಯವಾಗಿದೆ. ಆದದರಿಂದ ಎಲ್ಲಾ ಗೃಹಸ್ಥರು ತಮಗೆ ಮುಂಬಯಿಯಿಂದ ಏನೇ ವಸ್ತುಗಳು ಬೇಕಿದ್ದರೂ ನಮಗೆ ಬರೆದಲ್ಲಿ ನಾವು ಅವುಗಳನ್ನು ಪೇಟೆಯಿಂದ ಕಡಿಮೆ ಕಿಮ್ಮತ್ತಿಗೆ ತಕ್ಕೊಂಡು ವಿ. ಪಿ. ಟಪ್ಪಾಲು ಮೂಲಕ ಕಳುಹುವೆವು. ಈ ಸಂಗತಿಯನ್ನು ತಮ್ಮ ಮಿತ್ರಬಾಂಧವರೊಡನೆ ಪ್ರಚಾರಪಡಿಸಬೇಕಾಗಿ ನಾವು ನಮ್ಮ ಎಲ್ಲಾ ಗೃಹಸ್ಥರನ್ನು ಬೇಡುವೆವು.

ವಾಚುಗಳು. ನಮ್ಮಲ್ಲಿ ವೆಸ್ಟೆಂಡ್, ಫೇವರ್ ಲೂಬಾ, ಬರ್ನ್ ಮೊದಲಾದ ಕಂಪನಿಯ ವಾಚು ಮತ್ತು ಗಡಿಯಾರಗಳು ಆಯಾಯ ಕಂಪನಿಯಲ್ಲಿ ಮಾರಾಟ ಮಾಡುವದಕ್ಕಿಂತ ಕಡಿಮೆ ಬೆಲೆಗೆ ದೊರೆಯುತ್ತವೆ.

ರೂಪಾಯಿ ಹತ್ತು ಯಾ ಹೆಚ್ಚಿನ ಬೆಲೆಯ ಸಾಮಾನುಗಳಿಗೆ ಬರೆಯುವವರು ರೂಪಾಯಿ ಒಂದನ್ನು ಮುಂಗಡವಾಗಿ ಕಳುಹಿಸಬೇಕು. ಇದನ್ನು ಬಾಕಿ ಹಣದಿಂದ ಕಳೆಯುವೆವು.

Krishnavilasa Trading Company.

ಸನ್ 1915 ಇಸವಿಯ

ಪಾಕೆಟ್ ಡ್ರೈರಿ

ಶ್ರೀ ಸೀತಾ ರಾಘವ

ಪಾಕೆಟ ಡೈರಿಗಳ

ಬಿಕರಿಗೆ ಸಿದ್ಧವಾಗಿವೆ.

ಶಾಯಿ ಇಳಿಯದ ಉತ್ತಮವಾದ ಕಾಗದ, ಮುದ್ರ[illegible], ಅನೇಕ ಹೊಸ ಸಂಗತಿಗಳಿವೆ.

ನಂಬ್ರ ೧. ಸಣ್ಣ ಸೈಜು ಸಾದಾ 0—4—0.
,, ೨. ಪೆನ್ಸಿಲ್ ಮುಚ್ಚಳವುಳ್ಳದ್ದು 0—6—0.
,, ೩. ದೊಡ್ಡ ಸೈಜು ಸಾದಾ 0—6—0.
,, ೪. ಪೆನ್ಸಿಲ್ ಮುಚ್ಚಳವುಳ್ಳದ್ದು 0—8—0.

ಒಂದೇ ವಿಳಾಸಕ್ಕೆ ೧೦ ಡೈರಿಗಳನ್ನು ಒಟ್ಟಿಗೆ [illegible]

[illegible]